Under Article 188 of the Mysore Service Regulations Mr P S Achyuta Rao, Civil Surgeon, Shimoga, is granted privilege leave of absence for three months, with effect from the 8th February 1897 or such other date as he may avail himself of it

2 Mr G L Lutchmanaswamy, Assistant Surgeon, Hassan, is temporarily transferred to Shimoga, for medical charge of that district, during the absence of Mr P S Achyuta Rao on leave or until further orders

3 Mr A R Vaidyanatha Sastri, Assistant Surgeon, Mysore, is temporarily transferred to Hassan, for medical charge of that district, during the absence of Mr G L Lutchmanaswamy's employment on other duty or until further orders

No 8078—*L F 197 93, dated 18th January 96*

Under Article 172 of the Mysore Service Regulations, Mr T I Leonard, President of the Municipal Commission for the town of Bangalore, is granted casual leave of absence for ten days with effect from Monday the 18th instant, and under Sec 14 of the Bangalore City Municipal Regulations of 1871, the Government of Mysore are pleased to direct that the duties of the President shall, during his absence on leave, be carried on by Mr J Cameron, Municipal Commissioner of No VI, Lal Bagh division

No 8166—*G F 1-94, dated 19th January 97*

Mr V R Thyagaraja Iyer M A is promoted from the 4th to the 3rd Grade of Assistant Commissioners, Schedule B with effect from the 21st December 1896

No. 8169—*Mis 1552, dated 19th January* 97

Mr A Subramanya Iyer, B A, Probationary Assistant Commissioner, doing duty as Additional Munsiff of Bangalore, is appointed Assistant Commissioner, 4th Grade, Schedule B, with effect from the 6th January 1897

No. 8172—*Mis 1555 dated 19th January* 97

Mr M. Shama Rao, M A, Probationary Assistant Commissioner, is appointed Assistant Commissioner, 4th Grade, Schedule B, with effect from the 6th January 1897

No 8194—*J. 941, dated, 20th January* 1897

The leave without allowances granted to Mr D Devaraj Arus, Superintendent of Police Bangalore district, in Government Notification No 5398—J. 620, dated 10th November 1896, is extended by two months

2 Mr O Dunning, Superintendent of Police, will continue to be in charge of the Bangalore District Police during the absence of the former on leave, or until further orders

No 8197—*J 944, dated, 20th January* 1897

Under Article 172 and 173 of the Mysore Service Regulations, Mr S Vaidyanatha Iyer, City Magistrate, Bangalore, is granted casual leave for one week with effect from such date as he may avail himself of the same



ಆನೆಗಳ ಹರಾಜ್.

ನೋಟೀಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಸುವದೇನೆಂದರೆ—

ಮೈಸೂರು ಖೆಡ್ಡಾ ಇಲಾಖೆಯಿಂದ ಈಚೆಗೆ ಹಿಡಿಯಲ್ಪಟ್ಟ ಗಂಡು ಹೆಣ್ಣು ಮತ್ತು ಮರಿಗಳು ಸೇರಿ ನಾನಾ ತರಹ ಆಕೃತಿಗಳುಳ್ಳ ಉತ್ತಮವಾದ ೧೦೦ ಆನೆಗಳಿಗೆ ಮೇಲ್ಪಟ್ಟು, ಮೈಸೂರು ಡಿಸ್ಟ್ರಿಕ್ಟ್ ಗುಂಡಲ್‌ಪೇಟೆಯ ಬಳಿ ಹರಾಜಿಗೆ ಸಿದ್ಧವಾಗಿರುತ್ತದೆ. ಗುಂಡಲ್ ಪೇಟೆಯು ಕಾಲದಾರಿಯಲ್ಲಿ ನಂಜನಗೂಡು ರೈಲ್ವೆ ಸ್ಟೇಷನ್ನಿಂದ ೨೩ ಮೈಲಿಗಳ ಫಾಸಲೆಯೂ, ಮಲೆಬಾರ್ ಸರಹದ್ದಿನಿಂದ ೧೩ ಮೈಲಿಗಳ ಫಾಸಲೆಯೂ ಇರುತ್ತದೆ.

ಇತರ ಉಪಸೀಲುಗಳನ್ನು ತಿಳಿಯಬೇಕೆನ್ನುವ ಅಪೇಕ್ಷೆಯುಳ್ಳವರು ಇದರಡಿ ರುಜು ಮಾಡಿರುವವರಿಗೆ ಬರೆದು ತಿಳಿದುಕೊಳ್ಳಬಹುದು.

K SHAMIENGAR,
Superintendent of Kheddahs,
MYSORE

ಮೈಸೂರು
೧೫ನೇ ಜನವರಿ ೧೮೯೭

ಕರ್ಣಾಟಕ ಪ್ರಕಾಶಿಕಾ.

೧೮೯೭ನೇ ಇಸವಿ ಜನವರಿ ತಾ|| ೨೫ನೇ ಸೋಮವಾರ

ಮಹಾಮಾರಿರೋಗೋಪದ್ರವವು.

ಮುಂಬೈಯಲ್ಲಿ ವ್ಯಾಪಿಸಿರುವ ಪ್ಲೇಗ್ ಎಂಬ ಮಹಾಮಾರಿರೋಗೋಪದ್ರವವು ದಿನೇದಿನೆ ವೃದ್ಧಿಯಾಗುತಲಿದೆಯೇ ಹೊರತು ಸ್ವಲ್ಪವಾದರೂ ಶಾಂತತೆಯಂ ಹೊಂದಲಿಲ್ಲವು. ಹಿಂದಿನ ನೂರುಮಂದಿ ಸದರೀ ರೋಗದ ದೆಸೆಯಿಂದ ಮೃತಪಟ್ಟರು. ಈಚೆಗೆ ಅದರಿಂದ ಮೃತಿ ಹೊಂದತಕ್ಕವರ ಸಂಖ್ಯೆಯು ಅತ್ಯಧಿಕವಾಗಿರುತ್ತದೆ. ಡಾಕ್ಟರುಗಳು ಸದರೀ ರೋಗವನ್ನು ಶಾಂತಪಡಿಸಬೇಕಾದ ವಿಷಯದಲ್ಲಿ ತಮ್ಮ ಬುದ್ಧಿಶಕ್ತಿಯನ್ನೆಲ್ಲ ನಿರ್ವಂಚನೆಯಾಗಿ ಉಪಯೋಗಿಸುತಲಿದ್ದಾರೆ. ಆದಾಗ್ಯೂ ಇದುವರೆಗೆ ಅವರ ಪ್ರಯತ್ನಗಳು ಫಲಕಾರಿಯಾಗಲಿಲ್ಲವು. ಈ ರೋಗದ ಮೂಲಕ ಉಂಟಾಗುತಲಿರುವ ಪ್ರಾಣಹಾನಿಗಳಿಂದ ಸದರೀ ಷಹರ್ ನಿವಾಸಿಗಳು ಬಹಳ ಭೀತರಾಗಿರುತ್ತಾರೆ. ಅನೇಕ ಲಕ್ಷ ಪ್ರಜೆಗಳು ತಮ್ಮ ವಾಸಗೃಹಗಳಂ ಬಿಟ್ಟು ತಂಡೋಪತಂಡವಾಗಿ ಆಸಪಾಸ್ ಗ್ರಾಮಗಳಿಗೂ ದೂರ ದೇಶಗಳಿಗೂ ಹೊರಟು ಹೋಗಿಯೂ ಹೋಗುತಲೂ ಇರುತ್ತಾರೆ. ಸಾಮಾನ್ಯವಾಗಿ ಅಲ್ಲಿನ ವ್ಯಾಪಾರವು ಬಾಧಿತವಾಗಿ ಹೋಗಿರುವದಲ್ಲದೆ ಕೆಲವು ವಿಷಯಗಳಲ್ಲಿ ಪ್ರಾಯಶಃ ಬಂದಾಗಿ ಹೋಗಿವೆ. ಕೆಲಸಗಾರರ ಗೈರ್ಹಾಜರೀ ಮೂಲಕ ಕೆಲವು ಯಂತ್ರದ ಕಾರ್ಖಾನೆಗಳು ಮುಚ್ಚಲ್ಪಡಬೇಕಾಯಿತು. ಹೋಟಲುಗಳಲ್ಲಿ ಭೋಜನಕ್ಕೆ ಬರತಕ್ಕವರಿಲ್ಲದೆ ಮುಚ್ಚಲ್ಪಟ್ಟವೆ. ಬಾಜಾರುಗಳೆಲ್ಲವು ಬಂದಾದವು. ಒಡೆಮಂದಿ ಸರ್ಕಾರ್ ನೌಕರರೂ ಪೊಲೀಸ್ ಶಿಬ್ಬಂದಿ ಜನರೂ ಹೇಳದೇನೆ ಪರಸ್ಥಳಗಳಿಗೆ ಹೊರಟುಹೋಗಿಬಿಟ್ಟರು. ಈ ಗಾಬರಿಯನ್ನು ತಪ್ಪಿಸಬೇಕಾದ ವಿಷಯದಲ್ಲಿ ಗವರ್ನಮೆಂಟಿನವರು ಸಾಧ್ಯವಾದ ಪ್ರಯತ್ನಗಳನ್ನೆಲ್ಲ ಮಾಡಿದರು, ಪರಂತು ಪ್ರಯೋಜನಕಾರಿಯಾಗಲಿಲ್ಲವು. ಇನ್ನು ಜನರು ಗುಂಪುಗುಂಪಾಗಿ ಹೊರಟುಹೋಗುತಲಿದ್ದಾರೆ. ಈ ಕ್ರೂರ ರೋಗವು ಶಾಂತವಾಗದೆ ಈಗಿನಂತೆಯೇ ಇರುವ ಪಕ್ಷದಲ್ಲಿ ಮುಂಬೈ ಷಹರ್‌ನೊಳು ಒಬ್ಬ ಪ್ರಾಣಿಯಾದರೂ ನಿಲ್ಲಲಾರದೆ ಅದು ನಾಮಮಾತ್ರಾವಶಿಷ್ಟವಾಗುವದೆಂದು ಹೆದರಬೇಕಾದ ಕಾಲವು ಪ್ರಾಪ್ತವಾಗಿದೆ. ಈ ರೋಗವು ಪ್ರಾಪ್ತವಾಗುವದಕ್ಕೆ ಕಾರಣವೇನಿರಬಹುದೆಂದು ವಿಚಾರ ಮಾಡಲಾಗಿ, ಸದರೀ ಷಹರ್‌ನಲ್ಲುಂಟಾಗಿರುವ ಕಸ್ಮಲ ಬಾಹುಳ್ಯ, ಮನೆಗಳು ಕಟ್ಟಲ್ಪಟ್ಟಿರುವ ತಪ್ಪಾದರೀತಿ, ಇವು ಮೊದಲಾದವೇ ರೋಗವ್ಯಾಪಕತೆಗೆ ಮುಖ್ಯಕಾರಣಗಳೆಂದು ವ್ಯಕ್ತವಾಯಿತು. ಈ ರೋಗವು ತಲೆದೋರಿರುವ ಪ್ರದೇಶಗಳಲ್ಲಿ ಕೊಠಡಿಗಳು ಬಹಳ ಸಣ್ಣವಾಗಿಯೂ, ತಗ್ಗಾಗಿಯೂ ಗಾಳಿ ಮತ್ತು ಸೂರ್ಯರಶ್ಮಿಯು ಪ್ರವೇಶಕ್ಕೆ ಬಾಗಿಲುಗಳು ವಿನಾ ಕಿಟಕಿಗಳು ಮೊದಲಾದ ಇತರ ಮಾರ್ಗಗಳು ಸುತರಾಂ ಇಲ್ಲದೆಯೂ ಇರುತ್ತವೆ. ಪ್ರಸಕ್ತ ರೋಗದ ದೆಸೆಯಿಂದ ಯಾವ ಮನೆಯಲ್ಲಿ ಪ್ರಾಣಹಾನಿಯುಂಟಾಗುತ್ತಿದೆಯೋ ಸದರೀ ಮನೆಯಲ್ಲಿನ ಉಳಿದ ಜನರನ್ನು ಪ್ರತ್ಯೇಕಿಸಿ ರೋಗದ ಇಡಿಸಬೇಕೆಂದು ಡಾಕ್ಟರುಗಳು ಅಭಿಪ್ರಾಯಪಟ್ಟಿರುತ್ತಾರೆ. ಆರೀತಿ ಮಾಡುವ ಪಕ್ಷದಲ್ಲಿ ಅನೇಕರ ಪ್ರಾಣಗಳು ಉಳಿಯಬಹುದೆಂದು ಕಾಣುತ್ತದೆ. ಅದರ ಮೇಲೆ ರೋಗ ಬಾಧಿತಗಳಾದ ಪ್ರದೇಶಗಳನ್ನೆಲ್ಲ ಚೆನ್ನಾಗಿ ಪರಿಶೋಧಿಸಿ, ರೋಗಬೀಜದೂಷಿತವಾಗಿರುವ ಅಂಶಗಳನ್ನೆಲ್ಲ ನಿರ್ಮೂಲಿಸಿ ದಹನಮಾಡಿಸಿದರೆ ಪರಸ್ಥಳಗಳಿಗೆ ಹೊರಟುಹೋಗಿರುವ ಜನರು ತಮ್ಮತಮ್ಮ ವಾಸಗೃಹಗಳಿಗೆ ವಾಪಸು ಬಂದುಸೇರುವದಕ್ಕೆ ಅವಕಾಶವುಂಟಾಗುವುದು. ಆರೋಗ್ಯದ ಕಾರಣವನ್ನು ಚೆನ್ನಾಗಿ ಪರಿಶೋಧನೆ ಮಾಡಿ ರಿಪೋರ್ಟ್ ಮಾಡತಕ್ಕ ಬಗ್ಗೆ ಇಂಡ್ಯಾ ಗವರ್ನಮೆಂಟಿನಿಂದ ನಿಯಮಿಸಲಾಗಿ ಮುಂಬೈಗೆ ಬಂದಿರುವ ಡಾಕ್ಟರ್ ಹೈಗ್‌ಸಾರ್ಜ ಸಾಹೇಬರವರು ಪ್ರಸಕ್ತರೋಗವು ಮೊದಲು ಉದ್ಭವಿಸಿದ ಪ್ರದೇಶಗಳಂ ಖುದ್ದು ನೋಡಿ, ಅಲ್ಲಿನ ಅಪರಿಶುದ್ಧತೆಯನ್ನೂ ಕಶ್ಮಲಗಳನ್ನೂ ಕುರಿತು ಘೋರವಾಗಿ ಈಗ ಪ್ರಾಪ್ತವಾದುದಕ್ಕಿಂತಲೂ ಅಧಿಕವಾಗಿ ಪ್ರಾಣಹಾನಿಗಳುಂಟಾಗದೆ ಇರುವದು ಆಶ್ಚರ್ಯಕರವಾದುದೆಂದು ಅಭಿಪ್ರಾಯಪಟ್ಟರು. ಅವರು ತಿಳಿಸಿದ ಅಭಿಪ್ರಾಯವು ಸರಿಯಾದದ್ದೇ, ಆದರೆ ಈ ರೀತಿಯ ಮನೆಗಳನ್ನು ಯೇನು ಮಾಡಬೇಕೋ ತಿಳಿಯಲಿಲ್ಲವು. ರೋಗವು ಶಾಂತವಾಗಿಯೇ ಜನಗಳು ಅದರಲ್ಲಿ ವಾಸಮಾಡಬೇಕು. ಅವುಗಳಲ್ಲಿ ಆವಶ್ಯಕಗಳಾದ ಬದಲಾವಣೆಗಳು ಮಾಡದೆ ಹೋದರೆ ಯಾವ ಕಾಲದಲ್ಲಾದರು ಮರಳಿ ರೋಗವು ತಲೆದೋರಬಹುದು. ೧೬೬೫ನೇ ಇಸವಿಯಲ್ಲಿ ಲಂಡನ್ ಪಟ್ಟಣದೊಳು ಈ ರೋಗವು ಕಾಣಿಸಿದ ಕಾಲದಲ್ಲಿ ಅನೇಕ ಸಹಸ್ರ ಪ್ರಜೆಗಳು ಪ್ರಾಣಗಳಂ ಕಳೆದುಕೊಂಡರು. ಈಗ ಮುಂಬೈಯಲ್ಲಿ ಯಾವ ಕಾರಣದಿಂದ ಪ್ರಾಣಹಾನಿಯುಂಟಾಗುತ್ತಿದೆಯೋ ಅದೇ ಕಾರಣದಿಂದಲೇ ಅಲ್ಲಿಯೂ ಉಂಟಾಯಿತು, ಅಂದರೆ ಷಹರಿನ ಅಪರಿಶುದ್ಧತೆಯಿಂದಲೆ ರೋಗವು ಕಂಠವಾದ ಮೇಲೆ ಅದು ವ್ಯಾಪಿಸಿದ್ದ ಪ್ರದೇಶಗಳಲ್ಲಿ ಬೆಂಕಿ ಬಿದ್ದು ಅಲ್ಲಿನ ಮನೆಗಳೆಲ್ಲ ಸುಟ್ಟು ಹೋದವು. ಅದರ ತರುವಾಯ ಸದರೀ ಷಹರ್‌ನಲ್ಲಿ ರೋಗವು ಯಾವಾಗಲು ಕಾಣಿಸಲಿಲ್ಲವು. ಆದರೆ ಮುಂಬೈನಲ್ಲಿ ರೋಗವು ವ್ಯಾಪಿಸಿರುವ ಪ್ರದೇಶಗಳನ್ನು ಸುಟ್ಟುಹಾಕುವದಕ್ಕಾಗುವದಿಲ್ಲವು. ಅವುಗಳ ಬೆಲೆ ಅಮಿತವಾಗಿರುವುದು. ಅದೂ ಅಲ್ಲದೆ ಬೆಂಕಿ ಹಚ್ಚಿದರೆ ಪಟ್ಟಣವೆಲ್ಲ ಸುಟ್ಟು ಹೋಗಬಹುದು. ರೋಗವು ಇತರ ಪ್ರದೇಶಗಳಿಗೆ ವ್ಯಾಪಿಸದೆ ಇರುವದೆಂದು ಯೋಚಿಸಿದರೆ ಅದೂ ಅಸಂಭವವಲ್ಲವು. ಎಷ್ಟು ನೋಡಿದಾಗ್ಯೂ ಕಶ್ಮಲಪೂರಿತವಾಗಿದೆ. ಅಂತ ಪ್ರದೇಶಗಳಲ್ಲಿ ರೋಗವು ತಲೆಹಾಕುವಲ್ಲಿ ಸರ್ವನಾಶಕ್ಕೆ ಕಾರಣವಾಗುವುದು. ಆದುದರಿಂದ ದೊಡ್ಡ ಷಹರುಗಳ ಅಧಿಕಾರಿಗಳು ಎಚ್ಚೆತ್ತು ಈಗನಿಂದಲೇ ಆವಶ್ಯಕಗಳಾದ ಏರ್ಪಾಟುಗಳಂ ಮಾಡಿ ಕ್ರೂರವಾದ ಪ್ರಸಕ್ತ ರೋಗಕ್ಕೆ ಅವಕಾಶವನ್ನಿಯ್ಯದಿರುವುದು ಅವರ ಕರ್ತವ್ಯವಾಗಿರುತದೆ.

ಕಾಲಗತಿ.

ದೈವಸಂಕಲ್ಪವನ್ನರಿಯುವುದು ಬಹಳ ಪ್ರಯಾಸವಾದುದು. ಅದು ಮುಂದೆ ಹ್ಯಾಗೆ ಪರಿಣಮಿಸುವುದೋ ಅದಂ ಊಹಿಸಲಸಾಧ್ಯವಾಗಿರುತ್ತದೆ. ಪ್ರಕೃತ ಕಾಲದ ಸ್ಥಿತಿಯಂ ನೋಡುವಲ್ಲಿ ಪ್ರಬಲೋತ್ಪಾತ ಹೇತುವಾಗಿ ಕಂಡುಬರುತ್ತಿದೆ. ಸರ್ವತ್ರ ಪ್ರಜೆಗಳ ಸ್ಥಿತಿಯು ಚಿಂತಾಸ್ಪದವಾಗಿದೆ. ಈ ಭರತಖಂಡದಲ್ಲಿನ ಜನರ ದುರ್ದಶೆಯು ಬಹಳ ಚಿಂತನೀಯವಾದುದಾಗಿದೆ. ಇಂಡ್ಯಾದೇಶದಲ್ಲಿ ದುರ್ಭಿಕ್ಷವಿದ್ದು ಅಂದರೆ, ಮುಂಬೈ ಪ್ರೆಸಿಡೆನ್ಸಿಯಲ್ಲಿ ಹಿಂದೆ ಯಾವಾಗಲೂ ಕೇಳಿ ಅನುಭವಿಸದಿರುವಂತ ಭಯಂಕರವಾದ ಅದ್ಭುತರೋ

ಗ ಪ್ರೊಂದು ಸಾಂಕ್ರಾಮಿಕ ರೂಪವಾಗಿ ತಲೆದೋರಿ, ಅದರಿಂದೆಯೇ ಅಸಂಖ್ಯಾತ ಪ್ರಜೆಗಳು ಇದುವರೆಗೆ ನಷ್ಟರಾಗಿ ಹೋದರು. ಇನ್ನೂ ದಿನಂಪ್ರತಿ ಅಮಿತವಾಗಿ ಮೃತಪಡುತಲಿದ್ದಾರೆ. ಅನೇಕರಿಗೆ ಸದರೀ ರೋಗ ಭೀತಿಯೆಂಬುದು ಸ್ವನಿವಾಸವನ್ನೂ ದೇಶತ್ಯಾಗವನ್ನೂ ಉಂಟು ಮಾಡತಕ್ಕದ್ದಾಗಿ ಪರಿಣಮಿಸಿದೆ. ಉತ್ತರ ದಿಗ್ಭಾಗದಲ್ಲಿ ಅಂದರೆ, ಕಲ್ಕತ್ತಾ, ವಾಯುವ್ಯದೇಶ, ಮಧ್ಯದೇಶ ಭಾಗಗಳಲ್ಲಿ ಅತಿ ದುಸ್ಸಹವಾದ ಕ್ಷಾಮವೂ, ಕಲ್ಕತ್ತೆಯಲ್ಲಿ, ಶೀತ-ಜ್ವರರೋಗವೂ ವ್ಯಾಪಿಸಿ ಬಹು ವಿಧವಾಗಿ ಜನರು ಸಂಕಟಪಡುತಲಿರುವಂತೆ ತಿಳಿಯಬರುತಿದೆ. ಈಸ್ಟಿಂಡಿಯಾ ರೈಲ್ವೆ ಯಲ್ಲಿಯ ಯೂರೋಪಿಯನ್ ಮತ್ತು ನೇಟಿವ್ ನೌಕರರ್ಗಳೊಳಗೆ ಇದುವರೆಗೆ ಸುಮಾರ್ ೫೦ ಮಂದಿಗೆ ಸದರೀ ಜ್ವರವು ತಗಲಿ, ಅಲ್ಲಿನ ರೈಲ್ವೇ ಉದ್ಯೋಗಸ್ಥರೆಲ್ಲರೂ ಸ್ಥಾನಾಂತರಗಳಿಗೆ ತೆರಳಿ ಹೋದರು. ಪ್ರಜೆಗಳ ರಿಕ್ತತೆಯೂ ಸಂಕಟವೂ ದಿನೇದಿನೇ ವೃದ್ಧಿಯಾಗುತಾ ಬಹಳ ವಿಷಮಾವಸ್ಥೆಯನ್ನುಂಟುಮಾಡುತಿವೆ. ಕ್ಷಾಮನಿವಾರಕ ಕಾಮಗಾರಿಗಳಲ್ಲಿ ಜೀವನಾಧಾರವಿಲ್ಲದೆ ಬಿಟ್ಟುಬಿಡತಕ್ಕ ಅನೇಕ ಲಕ್ಷ ಜನರು ಕೂಲಿ ಮಾಡಿ ಅನ್ನ ಪಡೆವ ಅತಿ ಪ್ರಯಾಸದಿಂದ ಕಾಲಯಾಪನೆ ಮಾಡುತಲಿರುವಂತವರಾಗಿದ್ದಾರೆ. ಕೆಲವು ಕಡೆಗಳಲ್ಲಿ "ಪ್ರಾಣಾಪೇಕ್ಷೀ ವಿಪರೀತ್ಯಜ್ಯ ಮಾನವೋಪ್ಯಪೇಕ್ಷತೇ" ಎಂಬ ಲೋಕೋಕ್ತಿಯಂತೆ ಮಾನರಕ್ಷಣೆಯೇ ಶ್ರೇಯಸ್ಕರವೆಂದೆಣಿಸಿ ಗೌರವದೊಡನೆ ಬದುಕಿ ಅತಿದಾರುಣವಾದ ದುರ್ದಶೆಯನ್ನನುಭವಿಸುತಲಿರುವಂತ ಹಾನಿತರನೇಕರು ಜಾತ್ಯಾಭಿಮಾನದಿಂದ ಸ್ವಯಂಕೂಲಿ ದವಸಕ್ಕೆ ಉಪವಾಸವಿದ್ದು ಕಟ್ಟಕಡೆಯವರೆಗೆ ಬಳಿಕ ತಾವು ಸಲಹಿಸುವರೆಂದು ತಿಳಿಯಲಿಕ್ಕೆ ಅವಕಾಶವಿಲ್ಲದಂತೆ ಮುಸುಕುಗಳಂ ಹಾಕಿಕೊಂಡು ರಾತ್ರಿ ಭಿಕ್ಷಾಟನಕ್ಕೆ ಹೊರಟು ಹೋಗುತ್ತಾರೆ. ಇನ್ನೂ ಅನೇಕ ಕಡೆಗಳಲ್ಲಿ ಅಗ್ನಿಬಾಧೆಯೂ ತೆನೆಮಳೆಯೆ ಪ್ರಾಣದ ಹಾನಿಗಳೂ ಉಂಟಾಗುತಲಿವೆ. ಮುಖ್ಯವಾಗಿ ಎತ್ತನೋಡಿದರೂ ದೇಶಕ್ಷೋಭೆಯು ಅಧಿಕವಾಗಿರುವದರಿಂದ ಇದೆಂ ಮಹದುತ್ಪಾತ ಹೇತುವೆಂದು ಭಾವಿಸಬೇಕಾಗಿದೆ. ಇದಕ್ಕೆ ತಕ್ಕಂತೆಯೇ ಈ ಪ್ರಪಂಚದಲ್ಲಿ ಕ್ರಮವಾಗಿ ವ್ಯವಹರಿಸಲ್ಪಡುತಲಿರುವ ಯುಗಚತುಷ್ಟಯದಲ್ಲಿ ಕಡೆಯದಾದ ಕಲಿಯುಗವು ನಾಲ್ಕು ಲಕ್ಷ ಮೂವತ್ತೆರಡು ಸಾವಿರ ವರ್ಷಗಳ ಪರಿಮಿತವಾದುದಾಗಿಯೂ, ಹಾಗೆ ಚತುಷ್ಟಯವು ಪೂರ್ತಿಯಾಗಿಯೂ ಬರುತಿದೆ ಅದರಲ್ಲಿನ ಪ್ರಥಮ ಪಾದದಲ್ಲಿ ಐದುಸಾವಿರ ಸಂವತ್ಸರಗಳು ಸಲಿಸಿದ್ದು ಶ್ರೀಕೃಷ್ಣನು ಜನಿಸಿದ್ದ ಪೂರ್ವದಲ್ಲಿ ೩೦೦೦ ವರುಷಗಳ ಹಿಂದೆ ಕಲಿಸಿದ್ದರು. ದ್ದಾಪರವಾಗಿ, ಬರುವ ಏಪ್ರಿಲ್ ೧ನೇ ತಾರೀಖಿನೊಡನೆ ೫೦೦೦ ವರುಷಗಳು ಪೂರೈಸುವವು. ಬರುವ ವಿಕಾರಿನಾಮ ಸಂವತ್ಸರಕ್ಕೆ ಅಂದರೆ, ೧೮೯೭ನೇ ಏಪ್ರಿಲ್ ಮೊದಲು ೧೮೯೮ನೇ ಏಪ್ರಿಲ್ ವರೆಗಿನ ಮಧ್ಯಕಾಲದಲ್ಲಿ ಇದುವರೆವಿನ ವರುಷಗಳು ಪೂರೈಸುವದರಿಂದ ಆ ಕಾಲದಲ್ಲಿ ಅನೇಕ ಉತ್ಪಾತಗಳು ತಲೆದೋರುವವೆಂಬ ನ ವಿಷಯವು ಪ್ರಸಿದ್ಧವಾಗಿದೆ. ಶ್ರೀವಿಷ್ಣು ಪುರಾಣ ಭಾಗವತಾದಿ ಪುರಾಣ ಗ್ರಂಥಗಳಲ್ಲಿ ವರ್ಣಸಾಂಕರ್ಯಾದಿ ದೋಷಗಳೂ ಹಿಂಸಾಕೃತಾದಿಪಾಪಗಳೂ ಹೆಚ್ಚಿ ಜನರು ದುರಾತ್ಮರಾಗಿ ಅಧರ್ಮಪ್ರವರ್ತಕರಾಗಿರುವರೆಂದು ಬರೆಯಲ್ಪಟ್ಟಿರುತಿದೆ, ಈ ಯುಗಾಧಿಷ್ಠಾನವೆ ಪತಿಯು ಧರ್ಮದೇವತೆಯು ಪ್ರಥ್ವಿಯಾತ ಕಲಿಪುರುಷನಿಂದಲೂ ಅತಿ ಕಲುಷನಾದ ಪತನ ಪ್ರಾಭವದಲ್ಲಿ ಪ್ರಜೆಗಳ ಬುದ್ಧಿ, ಯುಕ್ತಿ, ಪ್ರಜ್ಞಾದಿಗಳೆಲ್ಲವೂ ದುರ್ವಿಷಯಾಸಕ್ತವಾಗಿ ಅಪ್ರಗಳಲ್ಲಿ ವಿನಿಯೋಗಿಸಲ್ಪಡುವವೆಂತಲೂ ತಿಳಿಸಲ್ಪಟ್ಟಿರುತಿವೆ. ಶ್ರೀಕೃಷ್ಣನಿರ್ಯಾಣಕಾಲದಲ್ಲಿ ಕಲಿಪ್ರವೇಶವಾಗಿರಲಿಲ್ಲವು ಆತನು ಪ್ರದುರ್ಭಾವವಂ ತಿಳಿದು ಶ್ರೀಕೃಷ್ಣನು ಭೂಲೋಕವಂ ಬಿಟ್ಟು ತೆರಳಿದಂತೆ ವ್ಯಕ್ತವಾಗುತಿದೆ. ಪಾಂಡವರು, ಕೃಷ್ಣನಿರ್ಯಾಣಾನಂತರ ತಮ್ಮ ಪೌತ್ರನಾದ ಪರೀಕ್ಷಿನ್ಮಹಾರಾಜನಿಗೆ ಪಟ್ಟಾಭಿಷೇಕವಂ ಮಾಡಿ ಮಹಾ ಪ್ರಸ್ಥಾನಕ್ಕೆ ಹೊರಟು ಹೋದರು. ರಾಜ್ಯಾಭಿಷಿಕ್ತನಾದ ಕೂಡಲೆ ಪರೀಕ್ಷಿತ್ತು ಭೂ ಪ್ರದಕ್ಷಿಣ ಪೂರ್ವಕ ದಿಗ್ವಿಜಯವಂ ಮಾಡಿಕೊಂಡು ರಾಜಧಾನಿಗೆ ಹಿಂತಿರುಗಿ ಬರುವಾಗ್ಯೆ, ಸರಸ್ವತೀ ನದೀತೀರದಲ್ಲಿ ರಾಜಲಕ್ಷಣಗಳುಳ್ಳ ಒಬ್ಬ ಶೂದ್ರನು ಗೋವಧೆಯಂ ಮಾಡಿ ಒಂದು ವೃಷಭದ ಮೂರು ಕಾಲ್ಗಳನ್ನು ಕಡಿದು ನಾಲ್ಕನೆಯುದಂ ಛೇದಿಸಲಿಕ್ಕುಪಕ್ರಮಿಸುವಲ್ಲಿ ಆತನಂ ನೋಡಿ ಬಹಳ ಕುಪಿತನಾಗಿ, ಅಂತಾ ನೀಚಕೃತ್ಯವಂ ಮಾಡಿದ ನೀಚನಂ ನೋಡಿ ಎಲೋ ದುರಾತ್ಮನೆ! ನೀನ್ಯಾರು? ನಿನ್ನನ್ನೀಗ ವಧಿಸುವೆನು ಎಂದು ನುಡಿದನು.

ಪರೀಕ್ಷಿನ್ಮಹಾರಾಜನು ಆ ಗೋ ವೃಷಭಗಳ ವೃತ್ತಾಂತಗಳಂ ತಿಳಿಯಲಪೇಕ್ಷಿಸಲು, ತಮ್ಮಿಂದ ದುಃಖವನ್ನನುಭವಿಸುವ ಪ್ರಾಣಿಗಳು ಲೋಕದಲ್ಲಿಲ್ಲವೆಂತಲೂ, ಪರರಿಂದ ಪ್ರಾಪ್ತವಾದ ದುಃಖಕ್ಕಾಗಿ ಧರ್ಮಪರರಾಗಿದ್ದವರು ಅಧರ್ಮಗಳಂ ಮಾಡಿದರೆಂದು ಹೇಳಿ ಇದರಂಕುರಿತು ವಿಚಾರಿಸಲಾಗದೆಂತಲೂ, ನಿರ್ದೋಷಿಸಕೂಡದ ಭಗವನ್ಮಹಿಮೆಯಿಂದ ಸಕಲವೂ ಜರುಗುತಿದೆಯೆಂತಲೂ ಹೇಳಿತು. ಆಗ ಪರೀಕ್ಷಿತ್ತು ಆ ವೃಷಭವಂ ಧರ್ಮದೇವತೆಯೆಂದರಿತು ಕೃತಯುಗದಲ್ಲಿ ತಪಶ್ಶೌಚ ದಯಾ ಸತ್ಯಗಳೆಂಬ ಪಾದ ಚತುಷ್ಟಯಗಳಿಂದ ನಡೆಯುತಲಿದ್ದನಂತಲೂ, ತ್ರೇತಾಯುಗದಲ್ಲಿ ಮೊದಲನೆಯದು ನಷ್ಟವಾಗಿ ಮಿಕ್ಕ ಮೂರು ಪಾದಗಳಿಂದ ನಡೆಯುತಲಿದ್ದಂತೆಯೂ, ದ್ವಾಪರದಲ್ಲಿ ಎರಡು ಚರಣಗಳು ನಷ್ಟವಾಗಿ ಉಳಿದ ಎರಡು ಪಾದಗಳಿಂದ ನಡೆಯುತಲಿದ್ದಂತೆಯೂ, ಕಲಿಯುಗದಲ್ಲಿ ಮೂರು ಪಾದಗಳು ನಷ್ಟವಾಗಿ, ಆದರೆ ಧರ್ಮದೇವತೆಯು ಒಂದೇ ಕಾಲಿನಿಂದ ಸಂಚರಿಸುವನೆಂತಲೂ ತಿಳಿಸಿದನು. ಮುಖ್ಯವಾಗಿ ಧರ್ಮವೆಂಬುದು ಕಾಲುಕಾಲು ಹೀನಗೊಂಡು ಅನುಸರಿಸಲ್ಪಡುವವೆಂದು ಹೇಳಿ, ಕ್ರೂರನಾದ ಕಲಿಪುರುಷನಂ ಸಂಹರಿಸಿ, ನಿಮ್ಮನ್ನು ನಾಲ್ಕು ಪಾದಗಳಿಂದ ನಡೆಯಿಸುವೆನೆಂದು ತ್ರಾಸಿ ಧೇನುರೂಪವಾದ ಭೂದೇವತೆಯನ್ನೂ ವೃಷಭರೂಪವಾದ ಧರ್ಮದೇವತೆಯನ್ನೂ ಸಮಾಧಾನ ಪಡಿಸಿ ಶುದ್ರವೇಷನಾದ ಕಲಿಪುರುಷನನ್ನು ಸಂಹಾರಮಾಡಲುಪಕ್ರಮಿಸಲು, ರಾಜಲಕ್ಷಣ ಯುಕ್ತನಾದ ಪೇಟೆ ಕಂಡ ಶೂದ್ರನು ನಿಜರೂಪವಂ ತಾಳಿ, ಭಯಾಕ್ರಾಂತನಾಗಿ ಪರೀಕ್ಷಿನ್ಮಹಾರಾಜನಿಗೆ ಶರಣಾಗತನಾಗಿ ತನ್ನನ್ನು ವಧಿಸದೆ ಸಲಹಬೇಕೆಂದು ಪ್ರಾರ್ಥಿಸಿದನು. ಆಗ ದಯಾಶಾಲಿಯಾದ ಮಹಾರಾಜನು ಕರುಣಿಸಿ ಆತನಂ ಪ್ರಾಣದೊಡನೆ ಕಳುಹಿಸಿದಂತೆ ಒಂದು ಇತಿಹಾಸವಿದೆ. ಮುಖ್ಯವಾಗಿ ಪ್ರಜಾ ಸಂಖ್ಯೆಯು ಹೆಚ್ಚಿ ದುರಾಚಾರವು ಅಧಿಕವಾಗಿರುವದರಿಂದ ಪ್ರಜೆಗಳ ಕ್ಷಯಕ್ಕೆ ನೇಮಕವಾದ ಉತ್ಪಾತಗಳು ಪ್ರಸಕ್ತವಾಗಿರುವಂತೆ ಎಣಿಸಬೇಕಾಗಿದೆ, ಈ ದೈವಿಕದೊಡನೆ ಬಹುತರವಾಗಿ ರಾಜಕವು ಪ್ರಸ್ತವಾಗಿ ಪರರಾಜರ ದಂಡು ದಾಳಿಗಳ ಉಪದ್ರವವು ಹೆಚ್ಚಾಗಬೇಕಾದುದು ಸಹಜವಾದುದರೂ ಶ್ರೀಮನ್ಮಹಾರಾಜ್ಞೀ ವಿಕ್ಟೋರ್ಯಾ ಚಕ್ರವರ್ತಿನೀಯವರ ದೀರ್ಘಕಾಲಿಕವಾದ ನಿರುಪದ್ರವ ಪ್ರಭುತ್ವದೊಳು ತಾದೃಶ ಬಾಧೆಯೊಂದು ತಪ್ಪಿರುವದಕ್ಕಾಗಿ ನಾವು ಸಂತೋಷಿಸಬೇಕಾಗಿದ್ದಾಗ್ಯೂ ಮಿಕ್ಕ ವಿಷಯಗಳಲ್ಲಿ ಕಾಲವು ನಮಗೆ ಬಹಳ ಪ್ರತಿಕೂಲವಾಗಿರುವದಕ್ಕಾಗಿ ಚಿಂತಿಸಬೇಕಾಗಿರುತಿದೆ.

Occasional Notes.
ನೈಮಿತ್ತಿಕ ವಿಷಯನ್ಯಾಸ.

ದುರ್ಭಿಕ್ಷ ಪೀಡಿತರಾದವರ ಸಹಾಯಾರ್ಥ ಕಲ್ಕತ್ತೆಯಲ್ಲಿ ಸ್ಥಾಪಿಸಲ್ಪಟ್ಟಿರುವ ಫಂಡಿಗೆ ಇದುವರೆಗೆ ಸುಮಾರು ನಾಲ್ಕು ಲಕ್ಷ ರೂಪಾಯಿಗಳವರೆಗೆ ಜಮಾ ಆಗಿವೆಯೆಂದು ತಂತಿ ವರ್ತಮಾನ ಬಂದಿರುತಿದೆ.

ಸ್ವಾಮಿ ವಿವೇಕಾನಂದಯವರು ಈಗ ಇಂಗ್ಲಾಂಡಿನಿಂದ ಸಿಲೋನ್ ದ್ವೀಪಕ್ಕೆ ಬಂದಿರುತ್ತಾರೆಯಾಗಿ ಅವರ ಜನ್ಮ ಭೂಮಿಯಾದ ಇಂಡ್ಯ ದೇಶಕ್ಕೆ ದಯಮಾಡಬೇಕೆಂದು ಮದರಾಸ್ ಕಮಿಟಿಯವರು ಅವರಿಗೆ ತಂತಿ ವರ್ತಮಾನ ಕೊಟ್ಟು ಬರುವದಾಗಿ ಅವರಿಂದ ಜವಾಬ ತರಿಸಿಕೊಂಡಿರುತ್ತಾರೆ

ಮುಂಬೈಯಲ್ಲಿ ವ್ಯಾಪಿಸಿರುವ ರೋಗದ ಭೀತಿಯಿಂದ ಅನೇಕಲಕ್ಷ ಪ್ರಜೆಗಳು ತಮ್ಮ ಸರ್ವಸ್ವವಂ ತ್ಯಜಿಸಿ, ಸಂಸಾರ ಸಮೇತರಾಗಿ ದೇಶಾಂತರಗಳಿಗೆ ಹೊರಟು ಹೋಗುತಲಿರುವದರಿಂದ ಕಛೇರಿಗಾರರ ಗೈರ್ಹಾಜರೀ ಮೂಲಕ ಅಲ್ಲಿನ ಕೋರ್ಟುಗಳಲ್ಲಿ ಸುತರಾಂ ಕೆಲಸವಿಲ್ಲದೆ ಹೋಗಿರುತಿವೆ. ಮುಂಬೈ ಯೂನಿವರ್ಸಿಟಿ ಪರೀಕ್ಷೆಯು ಸಹ ಈಸಲ ನಿಲ್ಲಿಸಲ್ಪಡುವುದು.

ಮುಂಬೈ ರೋಗವು ಈಗ ಡೆಲ್ಹಿ ಬ್ಬೋರಿಯಲ್ಲಿ ಸಹ ಒಬ್ಬಾತನಿಗೆ ತಗಲಿ ಮೃತಪಟ್ಟನು, ಪರಂತು, ಸದರೀ ರೋಗ ಪೀಡಿತನಾದವನು ಈಚೆಗಷ್ಟೇ ಮುಂಬೈಯಿಂದ ಅಲ್ಲಿಗೆ ಬಂದಿದ್ದಂತೆ ಕಾಣುತಿದೆ ಆದಾಗ್ಯೂ ಮುಂದಾಗಿಯೇ ಸದರೀ ರೋಗ ವ್ಯಾಪಕತೆಗೆ ಅವಕಾಶ ವಿಲ್ಲದಂತೆ ಉಚಿತ ಪ್ರಯತ್ನಗಳಂ ಮಾಡದೆ ಉಪೇಕ್ಷಿಸಿದರೆ ಅದು ತಲೆಹಾಕುವದು ಅತಿಶಯವಲ್ಲವು.

ಈಗ ಬೆಳಗಾಂನಲ್ಲಿ ವಾಂತಿ ಭೇದಿ ರೋಗವು ವ್ಯಾಪಿಸಿರುತವೆ. ಈಗ ಮುಂಬೈಯಿಂದ ಪ್ರತಿಯೊಂದು ರೈಲಿನ ಗಾಡಿಯಲ್ಲೂ ಅನೇಕರು ಅಲ್ಲಿಗೆ ಬರುತ ಜನಬಾಹುಳ್ಯವುಂಟಾಗುತಲಿರುವುದು ಮಾತ್ರವಲ್ಲದೆ ಮುಂಬೈ ರೋಗವು ಸಹ ತಗಲಿ ಯಿದೆ ಯೆಂಬ ವರ್ತಮಾನ ಹುಟ್ಟಿರುತಿದೆ. ಒಂದು ರೋಗದವ್ಯಾಪಕತೆ ಅನುಕೂಲ್ಯವುಂಟಾಗಿರುವಲ್ಲಿ ಮತ್ತೊಂದು ರೋಗಕ್ಕೆ ಅವಕಾಶ ವುಂಟಾಗುವದು ಅಸಹಜವಲ್ಲವಾಗಿ ಅಲ್ಲಿನ ಜನಗಳು ಬಹಳ ಭೀತರಾಗಿರುವಂತೆ ಒಬ್ಬ ವೃತ್ತಾಂತಲೇಖಕರು ಬರೆದಿರುತ್ತಾರೆ.

ಮುಂಬೈಯಲ್ಲಿ ಈಗ ವ್ಯಾಪಿಸಿರುವ ರೋಗದ ಭೀತಿಯಿಂದ ಅಲ್ಲಿಂದ ಇನ್ನು ಜನರು ಪರಸ್ಥಳಗಳಿಗೆ ಹೊರಟು ಹೋಗುವರಿದ್ದಾರೆ ಅದಲ್ಲದೆ ಕಾರ್ಖಾನೆಗಳಲ್ಲಿ ಕೆಲಸ ಮಾಡತಕ್ಕವರು ಗುಂಪುಗುಂಪಾಗಿ ಹೊರಟು ಹೋಗುತಲಿದ್ದಾರೆ. ಮಿಂಟಿನ ಕಾರ್ಖಾನೆಗಳು, ವ್ಯಾಪಾರ ಕೋಠಿಗಳು, ಗವರ್ನಮೆಂಟು ಆಫೀಸುಗಳಲ್ಲಿಯೂ ನೌಕರ ಮಾನೇಜರನೇಕರು ಗೈರ್ಹಾಜರಾಗುತ್ತಾರೆ ಗವರ್ನಮೆಂಟು ನೌಕರರು ಯಾರಾದರು ತಮ್ಮ ಮೇಲಾಧಿಕಾರಿಗೆ ತಿಳಿಸದೆ ಮುಂಬೈಯಿಂದ ಹೊರಟು ಹೋದರೆ ಅಂತವರು ನೌಕರಿಯಿಂದ ವಜಾ ಮಾಡಲ್ಪಡುವದಲ್ಲದೆ ಮರಳಿ ಕೆಲಸಕ್ಕೆ ಸೇರಿಸಲ್ಪಡಲಾರರೆಂದು ಗವರ್ನಮೆಂಟು ಚೀಫ್ ಸೆಕ್ರೆಟರಿಯವರು ನೋಟೀಸ್ ಕೊಟ್ಟಿರುತ್ತಾರೆ. ಪೋಲೀಸ್ ಕಾನ್ಸ್ಟೇಬಲ್‌ಗಳು ನೋಟೀಸ್ ಕೊಡದೇನೆ ಮುಂಬೈಯಿಂದ ಹೊರಟು ಹೋಗುತಲಿದ್ದಾರೆ.

ತಂಜಾವೂರು ಜಿಲ್ಲಾ ತಿರುವೆಯಾರು ಎಂಬ ಗ್ರಾಮದಲ್ಲಿ ಪಕ್ಕಾ ಕಳ್ಳನೊಬ್ಬನು ಒಬ್ಬ ಹೆಂಗಸಿನ ಕೊರಳಲ್ಲಿದ್ದ ಒಂದು ಆಭರಣವನ್ನು ಕತ್ತರಿಸಲಿಕ್ಕೆ ಸುವಲ್ಲಿ ಪೋಲೀಸ್‌ನವರು ನೋಡಿ ಅವನನ್ನು ದಸ್ತಗಿರಿ ಮಾಡಿ ಶೋಧಿಸಲಾಗಿ ಅವನಲ್ಲಿ ಯಾವದೂ ಸಿಕ್ಕಲಿಲ್ಲವು ತರುವಾಯ ಪೋಲೀಸ್ ಇನ್ಸ್ಪೆಕ್ಟರು ಅವನನ್ನು ಒಳ್ಳೆಯ ಮಾತುಗಳಿಂದ ಪ್ರಸನ್ನಗೊಳಿಸಿ ಕೇಳಲು ಅವನು ಆ ಮಾತುಗಳಿಗೆ ಮರುಳಾಗಿ, ಕೆಳಗೆ ಕುಳಿತುಕೊಂಡು ಅರ್ಧ ಘಂಟೆಯಕಾಲ ಶ್ವಾಸ ಹಿಡಿದು ತಿಣುಕಲು ಅವನ ಆಸನದ್ವಾರದಿಂದ ೩೭ ಕೆಂಪುಗಳುಳ್ಳ ಒಂದು ಪದಕವು ಹೊರಗೆ ಬಂತು. ತರುವಾಯ ಸದರೀ ಕಳ್ಳನನ್ನು ಆಸಿಪತ್ರೆಗೆ ಕರೆದುಕೊಂಡು ಹೋಗಿ ಮಲಗಿಸಿ ಆತನನ್ನು ಶೋಧಿಸಲಾಗಿ ೧೬ ನೀಲ ಮಣಿಗಳೂ, ೧೬ ಬಂಗಾರದ ಗುಂಡುಗಳೂ ಇದ್ದ ಚೇರಿಯೊಂದು ಸರವು ಸಿಕ್ಕಿತೆಂದು ಮದರಾಸ್ ಆಂಧ್ರಪ್ರಕಾಶಿಕಾ ಪತ್ರಿಕೆಯ ಮೂಲಕ ತಿಳಿಯುತ್ತೇವೆ.

ಈಗ ಮುಂಬೈ ಷಹರ್‌ನಲ್ಲಿ ವ್ಯಾಪಿಸಿ ಅಪರಿಮಿತವಾಗಿ ಪ್ರಾಣಹಾನಿಯನ್ನುಂಟುಮಾಡುತಲಿರುವ ಬ್ಯೂಬೋನಿಕ್ ಪ್ಲೇಗ್ ಎಂಬ ಸಾಂಕ್ರಾಮಿಕ ರೋಗವು ಅಲ್ಲಿಂದ ಅನ್ಯತ್ರ ಸಹ ತಲೆಹಾಕಿದಂತೆ ತಿಳಿದು ಬಹಳ ವಿಷಾದಿಸುತ್ತೇವೆ. ಈ ತಿಂಗಳ ೭ನೇ ತಾರೀಖ್ ಮೊದಲು ೯ನೇ ತಾರೀಖ್‌ವರೆಗೆ ಸತಾರೆಯಲ್ಲಿ ಮೂವತ್ನಾಲ್ಕು ಮಂದಿಗೆ ಸದರೀ ಕ್ರೂರರೋಗವು ತಗಲಿ ಅವರಲ್ಲಿ ಮೂವತ್ತು ಮಂದಿ ಮೃತಪಟ್ಟಂತೆಯೂ, ಅದೇ ಕಾಲದೊಳು ಪುನೆಯಲ್ಲಿ ಮೂವತ್ತೊರು ಮಂದಿಗೆ ತಗಲಿ ಇಪ್ಪತ್ತಾರು ಮಂದಿ ಮೃತಪಟ್ಟಂತೆಯೂ, ಠಾಣೆ ಡಿಸ್ಟ್ರಿಕ್ಟಿನಲ್ಲಿ ಎಪ್ಪತ್ತೊಂಬು ಮಂದಿಗೆ ತಗಲಿದಂತೆ ಲೆಕ್ಕ ಮಾಡಲ್ಪಟ್ಟಂತೆಯೂ, ಅಹಮದ್‌ನಗರ, ಸೂರತ್, ನಾಸಿಕ, ಬಡೋದೆ, ಸೋಲಾಪುರ, ಕ್ಯಾಂಬೆ, ಕೈರಾ ಮತ್ತು ಕಾಠೇವಾಡಿಯಲ್ಲಿ ಕೆಲವರಿಗೆ ತಗಲಿ ಮೃತಪಟ್ಟಂತೆಯೂ ತಿಳಿಯಬರುತಿದೆ.

ಕ್ಷಾಮನಿವಾರಕ ಕಾಮಗಾರಿಗಳ ಬಗ್ಗೆ ಆಯಾ ಸ್ಥಳಿಕ ಗವರ್ನಮೆಂಟಿನವರು ದಿನವೊಂದಕ್ಕೆ ಸುಮಾರು ಎರಡು ಲಕ್ಷ ರೂಪಾಯಿಗಳವರೆಗೆ ಖರ್ಚ ಮಾಡುತಲಿದ್ದಾರೆ ಗವರ್ನಮೆಂಟಿನಿಂದಲೂ ಕಮಿಟಿಯವರ ಮೂಲಕವಾಗಿಯೂ ಸುಮಾರು ಇಪ್ಪತ್ತು ಲಕ್ಷ ಮಂದಿ ಕ್ಷಾಮಪೀಡಿತರು ಜೀವಿಸುತಲಿದ್ದಾರೆ. ಮುಖ್ಯವಾಗಿ ವಾಯುವ್ಯದೇಶ, ಬಂಗಾಳೆ, ಅಯೋಧ್ಯೆ, ಈ ಪ್ರಾಂತಗಳಲ್ಲಿ ದುರ್ಭಿಕ್ಷ ಪೀಡಿತರಾದವರ ಸಂಖ್ಯೆಯು ಹೆಚ್ಚಾಗಲಿದೆ. ಈಗ ಮದರಾಸ್ ಪ್ರೆಸಿಡೆನ್ಸಿಗೆ ಸೇರಿದ ಷಹರಗಳಲ್ಲಿ ೨೩,೦೦೦, ಮುಂಬೈ ಪ್ರೆಸಿಡೆನ್ಸಿಗೆ ಸೇರಿದ ಷಹರಗಳಲ್ಲಿ ೧,೬೪,೦೦೦, ಬಂಗಾಳದೇಶದೊಳು ೧,೩೭,೦೦೦, ವಾಯುವ್ಯದೇಶ ಮತ್ತು ಅಯೋಧ್ಯೆಯೊಳು ೬,೭೦,೦೦೦, ಪಂಜಾಬ ದೇಶದಲ್ಲಿ ೬೦,೦೦೦ ಮಧ್ಯಂಪ್ರಾಂತ್ಯಗಳಲ್ಲಿ ೧,೨೪,೦೦೦, ಬರ್ಮಾದೇಶದೊಳು ೩೦,೦೦೦, ಮಧ್ಯ ಇಂಡಿಯಾದೇಶದಲ್ಲಿ ೩೫, ರಜಪುತಾನಾ ದೇಶದಲ್ಲಿ ೩೭,೦೦೦, ಈ ರೀತಿ ಕಾಮಗಾರಿಗಳ ಮೂಲಕ ಜೀವಿಸುತಲಿದ್ದಾರೆ. ಇದರ ಒಟ್ಟು ಸಂಖ್ಯೆಯಲ್ಲಿ ಸುಮಾರು ೧,೨೦,೦೦೦, ಮಂದಿ ಧರ್ಮಾರ್ಥ ಸ್ಥಾಪಿಸಲ್ಪಟ್ಟಿರುವ ಅನ್ನ ಸತ್ರಗಳಲ್ಲಿ ಜೀವಿಸುತಲಿದ್ದಾರೆ

LOCAL AND PROVINCIAL NEWS.
ಸ್ವದೇಶಸಂಪತ್ತು ತಾಲ್ಲೂಕುಜಾತೀಯ ವೃತ್ತಾಂತಗಳು.

ಕಳೆದ ಶುಕ್ರವಾರದವಿಸ ಬೆಳಗ್ಗೆ ಈ ಸಂಸ್ಥಾನದ ದಿವಾನರಾದ ಸರ್ ಕೆ. ಶೇಷಾದ್ರಿ ಅಯ್ಯರ್, ಕೆ. ಸಿ. ಎಸ್. ಐ. ಯವರು ಮದರಾಸಿನಿಂದ ಇಲ್ಲಿಗೆ ವಾಪಸ್ ಬಂದರು.

ಇಲ್ಲಿನ ಮಿಲಿಟರಿ ಸ್ಟೇಷನ್ನಲ್ಲಿ ಈಗ ಟೈಫಾಯಿಡ್ ಫೀವರ್ ಎಂಬ ವಿಷಮಶೀತಜ್ವರವು ವ್ಯಾಪಿಸಿರುವಂತೆಯೂ, ಅದರಿಂದ ಒಬ್ಬ ದೊಡ್ಡ ಮಿಲಿಟರಿ ಆಫೀಸರು ಮೃತಪಟ್ಟಂತೆಯೂ ತಿಳಿಯಲಾಯಿತು.

ಕಳೆದ ಶನಿವಾರದದಿನ ಮಧ್ಯಾಹ್ನ ಹನ್ನೊಂದೂವರೆ ಘಂಟೆಗೆ ಶ್ರೀಮನ್ಮಹಾರಾಣೀ ರೀಜೆಂಟರವರು ಶ್ರೀಮನ್ಮಹಾರಾಜ ರಾಜಾಸಾಹೇಬರೊಡಲಾದವರೊಡನೆ ಸ್ಪೆಷಲ್ ಟ್ರೇನಿನಲ್ಲಿ ರಾಜಧಾನಿಗೆ ದಯಮಾಡಿದರು. ಆ ಕಾಲದಲ್ಲಿ ಮಾಮೂಲಿ ಮರ್ಯಾದೆಗಳೆಲ್ಲವು ನಡೆದವು.

ಇಲ್ಲಿನ ಸಿವಿಲ್ ಸ್ಟೇಷನ್ ನಿವಾಸಿಯಾದ ಮೆ॥ ಬಿ. ನಂಜುಂಡಶೆಟ್ಟಿಯೆಂಬುವರು ಈ ಊರಲ್ಲಿ ಅಲಂಕಾರ ಯುಕ್ತವಾದ ನೀರಿನನಲ್ಲಿಯೊಂದನ್ನು ಕಟ್ಟಿಸುವದಕ್ಕಾಗಿ ಎಂಟುಸಾವಿರ ರೂಪಾಯಿಗಳು ಕೊಡುವುದಾಗಿ ತಿಳಿಸಿ, ಅದನ್ನು ಗವರ್ನಮೆಂಟಿನವರು ಸಂತೋಷಪೂರ್ವಕ ಅಂಗೀಕರಿಸಿರುವದಾಗಿ ಕೇಳುತ್ತೇವೆ.

ಗತಿಸಿದ ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರ್ ಬಹದ್ದೂರವರು ಕುದುರೆಯ ಮೇಲೆ ಕುಳಿತಿರುವಂತಹ ಒಂದು ಪ್ರತಿಮೆಯಂ ತಯಾರುಮಾಡುವದಕ್ಕಾಗಿ ಈಗವರ್ನಮೆಂಟಿನವರು ಆರುಸಾವಿರ ಪೌಂಡುಗಳು ಮಂಜೂರ್ಮಾಡಿ, ಲಂಡನ್ ಪಟ್ಟಣದಲ್ಲಿರುವ ಪ್ರಸಿದ್ಧ ಶಿಲ್ಪಿಯಾದ ಮೆ॥ ಆನ್ಸ್ಲೋ ಫೋರ್ಡ್ ಎಂಬುವರಿಗೆ ಸದರೀ ಕಾರ್ಯವಂ ಒಪ್ಪಿಸಿ, ಈಗ ಸದ್ಯಕ್ಕೆ ಒಂದುಸಾವಿರ ಪೌಂಡುಗಳು ಅವರಿಗೆ ಕಳುಹಿಸಿರುವಂತೆ ತಿಳಿಯಬರುತಿದೆ.

ಶ್ರೀರಂಗಪಟ್ಟಣ ತಾಲ್ಲೂಕು ಫ್ರೆಂಚ್‌ರಾಕ್ಸ್ ಬಳಿ ಅನೇಕ ಗ್ರಾಮಗಳಲ್ಲಿ ವಾಂತಿಭೇದಿ ರೋಗ ತಲೆದೋರಿ ಅಮಿತವಾಗಿ ಪ್ರಾಣಹಾನಿಗಳನ್ನುಂಟು ಮಾಡುತಲಿರುವಂತೆಯೂ, ಸದರೀ ರೋಗವು ಈಗ ಮಂಡ್ಯದವರೆಗೆ ವ್ಯಾಪಿಸಿರುವಂತೆಯೂ ಕೇಳುತ್ತೇವೆ. ಮುಂದಿನ ಬೇಸಿಗೆಯೊಳಗಾಗಿ ಅದರ ವ್ಯಾಪಕತೆಯು ವೃದ್ಧಿಯಾಗಬಹುದೆಂದು ಹೆದರುತ್ತೇವೆ ಪ್ರಜಾ ಸಂಕಟಕ್ಕೆ ಒಂದೊಂದು ದೇಶದೊಳೊಂದೊಂದು ವಿಧವಾದ ಕಾರಣ ವುಂಟಾಗುತಿದೆ. ದೈವಾಜ್ಞೆಯನ್ನರಿಯಲು ಯಾರಿಗೆತಾನೆ ಸಾಧ್ಯವು.

ಕಾಲಸ್ಥಿತಿ ವಿಷಯದಲ್ಲಿ ಅಧಿಕಾಂಶ ಯಾವದೂ ಇಲ್ಲವು. ಎಲ್ಲವು ಹಿಂದಿನವಾರದಲ್ಲಿ ತಿಳಿಸಿದಂತೆಯೇ ಇವೆ. ದಿನೇ ದಿನೆ ಚಳಿ ಕಡಮೆಯಾಗುತಲೂ ಬಿಸಿಲು ಜೋರುಕಾಗುತಲೂ ಇದೆ. ಬಿಸಿಲು ಹೆಚ್ಚಿದಂತೆಲ್ಲ ನೊಣ್ಣೆ ಮತ್ತು ತಗಣಿ ಉಪಟಳ ಹೆಚ್ಚುವುದು ಕಾಲಧರ್ಮವಾಗಿರುತಿದೆ ಇದುವರೆಗೆ ದೈವಾಜ್ಞೆಯಿಂದ ಪ್ರಬಲಗಳಾದ ರೋಗಗಳ್ಯಾವದೂ ಕಂಡುಬರಲಿಲ್ಲವು. ಮುಂದಿನವಿಷಯವನ್ನು ಹೇಳಲಸಾಧ್ಯವು. ಪದಾರ್ಥಗಳ ಧಾರಣೆಗಳು ಒಂದೇವಿಧವಾಗಿಯೇ ಇವೆ, ಜನಾರೋಗ್ಯವು ಸಾಮಾನ್ಯವಾಗಿದೆ.

ಹಿರೋಡೆಯೊಳು ಈ ತಿಂಗಳಲ್ಲಿ ಪ್ರಾಪ್ತವಾದ ವಾಂತಿ ಭೇದಿ ಉಪದ್ರವದಲ್ಲಿ ಅನೇಕ ಜನರು ನಷ್ಟವಾದರು. ಈ ವಾರದಲ್ಲಿ ಇಲ್ಲಿಗೆ ಬಂದಿರುವ ತರುಮಕೂಡ್ಲು ನರಸೀಪುರದ ಡ್ರಸ್ಸರ್ ಮಗ ಮಿ॥ ರಾ॥ ವೆಂಕಟಾಚಲಂ ಶೆಟ್ಟಿ ಉರುಫ್ ದೊಡಸಾಮಿ ಶೆಟ್ಟಿಯವರು ಈ ಉಪದ್ರವವನ್ನು ತಮ್ಮ ಕಣ್ಣಿನಿಂದ ನೋಡಲಾರದೆ ತಮ್ಮ ಕೈಯಿಂದ ತಯಾರ್ಮಾಡಿರುವ ಔಷಧವನ್ನು ಉಪಯೋಗಿಸಿ ಅನೇಕ ಜನಗಳನ್ನು ವಾಸಿಮಾಡುತ್ತಾ ಇದ್ದಾರೆ. ಬಹು ಜನಗಳು ಇವರನ್ನು ಕೊಂಡಾಡುತ್ತಿದ್ದಾರೆಂದು ಅಲ್ಲಿನ ಒಬ್ಬ ಬಾತ್ಮೀದಾರರು ಬರೆದಿರುವರು :—ಸ್ವ ಪ.

ಬಹುಕಾಲದ ಮೊದಲು ಗಲಾಟೆಯಲ್ಲಿ ಬಿದ್ದಿದ್ದ ಈ ಸಂಸ್ಥಾನದ ಲೆಕ್ಕಗಳು ಇಂಡ್ಯ ಗವರ್ನಮೆಂಟಿನವರ ಹುಕುಮಿನ ಮೇರೆ ಅವರಿಂದ ಕಳುಹಿಸಲ್ಪಟ್ಟ ಆಡಿಟರ್ ಜನರಲವರಿಂದ ಇಲ್ಲಿನ ಕಂಟ್ರೋಲರವರ ಆಫೀಸಿನಲ್ಲಿ ತನಿಖೀಮಾಡಲ್ಪಟ್ಟು ಅದರಲ್ಲಿನ ಗುಣದೋಷಗಳೆಲ್ಲವು ಗವರ್ನಮೆಂಟಿಗೆ ರಿಪೋರ್ಟಾಗಿರುತಿದೆಯಷ್ಟೆ. ಈ ದ್ವತೆ ಅರಮನೆ ಇಲಾಖಾ ಕಂಟ್ರೋಲರ ಆಫೀಸ್ ಲೆಕ್ಕಗಳಂ ಸಹ ಮೇಲ್ಕಂಡ ಆಡಿಟರ್ ಜನರಲವರಿಂದಲೇ ತನಿಖೀ ಮಾಡಿಸಬೇಕೆಂದು ಶ್ರೀಮನ್ಮಹಾರಾಣೀ ರೀಜೆಂಟರವರು ಕೋರಿದರಾಗಿ ಸದರೀ ಕಾರ್ಯವು, ಮುಂದಿನ ತಿಂಗಳಲ್ಲಿ ಅರಮನೆಯೊಳು ನಡೆಯುವದಾಗಿರುವ ವಿವಾಹದ ಮಹೋತ್ಸವವು ತೀರಿದ ಮೇಲೆ ಪ್ರಾರಂಭಿಸಲ್ಪಡುವದೆಂದು ಕೇಳುತ್ತೇವೆ.

ಈಗ ಮುಂಬೈಯಲ್ಲಿ ಪ್ಲೇಗ್ ಎಂಬ ಮಹಾ ಮಾರಿರೋಗದ ಭಯದಿಂದ ಅಲ್ಲಿನ ಪಾರ್ಸಿ, ಮಾರ್ವಾಡಿ, ಮತ್ತು ಇತರ ಜನರನೇಕರು ಇಲ್ಲಿನ ಮಿಲಿಟರಿ ಸ್ಟೇಷನಿಗೂ ಪೇಟೆಯವರಿಗೂ ಬಂದು ಸೇರಿಯೂ ಇನ್ನು ಬರುತಲೂ ಇರುತ್ತಾರೆ. ಮುಂಬೈ ಜನರು ರೋಗಪೀಡಿತವಾದ ಪಟ್ಟಣವನ್ನು ಬಿಟ್ಟು ಪರಸ್ಥಳಗಳಿಗೆ ಹೋಗಿ ತಮ್ಮ ಪ್ರಾಣಗಳನ್ನು ಕಾಪಾಡಿಕೊಳ್ಳಬೇಕಾದುದು ಅವರ ಕರ್ತವ್ಯವೆಂಬುದರಲ್ಲಿ ಸಂದೇಹವಿಲ್ಲವು. ಮತ್ತು ಆಯಾ ನಗರ ನಿವಾಸಿಗಳು ತಮ್ಮ ಕ್ಷೇಮವಂ ನೋಡಿಕೊಳ್ಳಬೇಕಾದುದು ಅವರ ಕರ್ತವ್ಯವಾಗಿರುವದರಿಂದ ರೋಗ ಪೀಡಿತಗಳಾದ ಪ್ರದೇಶಗಳಿಂದ ಬರತಕ್ಕ ಜನರು ಈ ನಗರವ ಪ್ರವೇಶಿಸುವದಕ್ಕೆ ಪೂರ್ವವೇ ಅವರು ಪ್ರತ್ಯೇಕವಾಗಿ ಇಡಿಸಿ, ಡಾಕ್ಟರಿಗಳ ಮೂಲಕ ಅಜಮಾಯಿಷಿ ಮಾಡಿಸಿ, ಅವರಲ್ಲಿ ರೋಗ ನಿಮಿತ್ತಕಗಳಾದ ಕಾರಣಗಳು ಯಾವವೂ ಇಲ್ಲವೆಂದು ಖಚಿತವಾಗಿ ತಿಳಿಯಬಂದಮೇಲೆ ಅವರು ಊರೊಳಗೆ ಬಿಡುವಂತೆ ಹುಕುಂ ಮಾಡಬೇಕಾದುದು ಸ್ಥಳಾಧಿಕಾರಿಗಳ ಕರ್ತವ್ಯವಾಗಿರುತದೆ. ಈ ವಿಷಯದೊಳು ಇಲ್ಲಿನ ಉಭಯ ಸರ್ಕಾರದವರೂ ಆವಶ್ಯಕಗಳಾದ ಯೇರ್ಪಾಡುಗಳಂ ಕೂಡಲೇ ಮಾಡಿಸುವರೆಂದು ನಂಬುತ್ತೇವೆ.

ಬೆಂಗಳೂರು ಪೇಟೆಯ ಜಿನಿಸಿ ನಿರಖ್ ಪಟ್ಟಿ

			ರೂ.
ಅವ್ವಲ್ ರಾಗಿ ಖಂಡಿ ೧ಕ್ಕೆ		...	೩೭-೩೪
ದುಯ್ಯಂ ರಾಗಿ	,,	...	೩೦-೩೧
ಅವ್ವಲ್ ಅಕ್ಕಿ ಪಲ್ಲಾ ೧ಕ್ಕೆ		...	೧೩
ದುಯ್ಯಂ ,,	,,	...	೧೭||
ಹೆಸರು	,,	...	೧೦
ಉದ್ದು	,,	...	೧೨
ಧಾರ್ವಾಡದ ಗೋಧಿ	,,	...	೧೩||
ಜೋಳ	,,	...	೬
ಕಡ್ಲೆ	,,	...	೧೧||
ಕಾರಾಮಣಿ	,,	...	೮||
ಹರಳು ೨೫ ಸೇರಿನ ಮಂಡಿ ೧ಕ್ಕೆ		...	೭೪
ಹುಚ್ಚೆಳ್ಳು	,,	...	೭೦
ಹರಳೆಣ್ಣೆ ಮಣ ೧ಕ್ಕೆ		...	೪|=
ಕಳ್ಳೆಕಾಯಿ ಎಣ್ಣೆ ಮಣ ೧ಕ್ಕೆ		...	೪||
ಒಳ್ಳೆ ಎಣ್ಣೆ	,,	...	೫||
ಮೆಣಸು	,,	...	೪|
ಧನಿಯ	,,	...	೭|=
ಹುಣಿಸೇಹಣ್ಣು	,,	...	೭-೭
ತುಪ್ಪ	,,	...	೧೧
ಬೆಲ್ಲ	,,	...	೧||
ಮೆಣಸಿನಕಾಯಿ ಮಣ ೮ಕ್ಕೆ		...	೭೩-೭೮
ಪುರಿ ರೂ|| ೧ಕ್ಕೆ ಸೇರು		...	೧೪||

THE MYSORE GAZETTE.
ಮೈಸೂರು ಗೆಜೆಟ್.

ಗುರುವಾರ, ತಾ|| ೨೧ನೇ ಜನವರಿ ೧೮೯೭.
ಮೈಸೂರ್ ಗವರ್ನಮೆಂಟಿನವರಿಂದ ಕೊಡೋಣಾದ
ಅಸ್ತಹುಕುಂನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾ|| ೧೬ನೇ ಜನವರಿ ೧೮೯೭.

ನಂ|| ೮೦೩೭-ಎಂ. ಎಫ್ ೫೮೪-೯೭—ಮೈಸೂರ ಸರ್ವಿಸ ರೆಗ್ಯುಲೇಷನ್‌ಗಳ ೧೮೮ನೇ ಆರ್ಟಿಕಲ್ ಅನುಸರಿಸಿ, ಶಿವಮೊಗ್ಗ ಸಿವಿಲ್ ಸರ್ಜನರಾದ ಮೆ|| ಪಿ. ಎಸ್. ಅಚ್ಯುತರಾಯರವರು, ೯೭ನೇ ಇಸವಿ ಫೆಬ್ರವರಿ ೮ನೇ ತಾರೀಖ್ ಮೊದಲು ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

೨. ಹಾಸನದ ಅಸಿಸ್ಟೆಂಟ್ ಸರ್ಜನರಾದ ಮೆ|| ಜೆ. ಎಲ್. ಲಕ್ಷ್ಮಣಸ್ವಾಮಿಯವರು, ಮೆ|| ಪಿ ಎಸ್. ಅಚ್ಯುತರಾಯರವರು ರಜಾ ಮೇಲೆ ಗೈರ್ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವವರೆಗೆ ಸದರೀ ಡಿಸ್ಟ್ರಿಕ್ಟ್ ಮೆಡಿಕಲ್ ಚಾರ್ಜಿನಲ್ಲಿರತಕ್ಕ ಬಗ್ಗೆ ಹಂಗಾಮಿಯಾಗಿ ಅಲ್ಲಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ.

೩. ಮೈಸೂರಲ್ಲಿರುವ ಅಸಿಸ್ಟೆಂಟ್ ಸರ್ಜನ್ ಮೆ|| ಎ. ಆರ್. ವೈದ್ಯನಾಥ ಶಾಸ್ತ್ರಿಯವರು, ಮೆ|| ಜೆ. ಎಲ್ ಲಕ್ಷ್ಮಣಸ್ವಾಮಿಯವರು ಬೇರೆ ಕೆಲಸದಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ಹಾಸನ ಡಿಸ್ಟ್ರಿಕ್ಟ್ ಮೆಡಿಕಲ್ ಚಾರ್ಜಿನಲ್ಲಿರತಕ್ಕ ಬಗ್ಗೆ ಹಂಗಾಮಿಯಾಗಿ ಸದರೀ ಡಿಸ್ಟ್ರಿಕ್ಟಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ.

ತಾ|| ೧೮ನೇ ಜನವರಿ ೧೮೯೭.

ನಂ|| ೮೦೭೮-ಎಲ್. ಎಫ್ ೧೯೬-೯೬—ಮೈಸೂರ್ ಸರ್ವಿಸ ರೆಗ್ಯುಲೇಷನ್‌ಗಳ ೧೩೨ನೇ ಆರ್ಟಿಕಲ್ ಅನುಸರಿಸಿ, ಬೆಂಗಳೂರು ಸಿಟಿ ಮ್ಯುನಿಸಿಪಲ್ ಕಮಿಷನಿನ ಪ್ರೆಸಿಡೆಂಟರಾದ ಮೆ|| ಟಿ. ಟಿ. ಲೆನಾರ್ಡ್‌ರವರು ಈ ತಿಂಗಳ ೧೮ನೇ ತಾರೀಖ್ ಮೊದಲು ಹತ್ತು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ. ಮತ್ತು ೧೮೯೧ನೇ ಇಸವಿಯ ಮ್ಯುನಿಸಿಪಲ್ ರೆಗ್ಯುಲೇಷನ್‌ಗಳ ೨ನೇ ಸೆಕ್ಷನ್ ಅನುಸರಿಸಿ, ಅವರ ಗೈರ್ಹಾಜರೀ ಕಾಲದಲ್ಲಿ ಪ್ರೆಸಿಡೆಂಟರ ಕೆಲಸಗಳನ್ನು, ೬ನೇ ಲಾಲ್‌ಬಾಗ್ ಡಿವಿಜನ್ ಮ್ಯುನಿಸಿಪಲ್ ಕಮಿಷನರಾದ ಮೆ|| ಜೆ. ಕ್ಯಾಮೆರಾನ್‌ರವರು ನಡೆಸುತ ಬರುವಂತೆ ಮೈಸೂರ ಗವರ್ನಮೆಂಟಿನವರು ಹುಕುಂ ಮಾಡುತ್ತಾರೆ.

ತಾ|| ೧೯ನೇ ಜನವರಿ ೧೮೯೭.

ನಂ|| ೮೧೬೬—ಜಿ ಎಫ್. ೧೯೪—ಮೆ|| ಪಿ ಆರ್. ತ್ಯಾಗರಾಜಯ್ಯರ್, ಎಂ. ಎ ಯವರು, ೧೮೯೬ನೇ ಇಸವಿ ಡಿಸಂಬರ್ ೨ನೇ ತಾರೀಖ್ ಮೊದಲು, ಬಿ ಷೆಡ್ಯೂಲ್ ಅಸಿಸ್ಟೆಂಟ್ ಕಮಿಷನರುಗಳ ೬ನೇ ಗ್ರೇಡಿನಿಂದ ೫ನೇ ಗ್ರೇಡಿಗೆ ಬಡ್ತಿ ಮಾಡಲ್ಪಟ್ಟಿರುತ್ತಾರೆ.

ನಂ|| ೮೧೬೯-ಎಂ. ೧೫೩೦—ಬೆಂಗಳೂರು ಅಡಿಷನಲ್ ಮುನ್ಸಿಫರಾಗಿ ಕೆಲಸ ನೋಡುತಲಿರುವ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮೆ|| ಎ ಸುಬ್ರಹ್ಮಣ್ಯ ಅಯ್ಯರ್, ಬಿ. ಎ. ಯವರು, ೧೮೯೭ನೇ ಇಸವಿ ಜನವರಿ ೬ನೇ ತಾರೀಖ್ ಮೊದಲು, ಬಿ ಷೆಡ್ಯೂಲ್ ೬ನೇ ಗ್ರೇಡ್ ಅಸಿಸ್ಟೆಂಟ್ ಕಮಿಷನರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ|| ೮೧೭೨-ಎಂ ೧೫೩೫.—ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮೆ|| ಎಂ ಹನುಮಂತಪ್ಪ, ಎಂ. ಎ ಯವರು, ೧೮೯೭ನೇ ಇಸವಿ ಜನವರಿ ೬ನೇ ತಾರೀಖ್ ಮೊದಲು, ಬಿ ಷೆಡ್ಯೂಲ್ ೬ನೇ ಗ್ರೇಡ್ ಅಸಿಸ್ಟೆಂಟ್ ಕಮಿಷನರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾ|| ೨೦ನೇ ಜನವರಿ ೧೮೯೭.

ನಂ|| ೮೧೯೪-ಜೆ ೯೩೧.—ಬೆಂಗಳೂರು ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟರಾದ ಮೆ|| ಡಿ. ದೇವರಾಜ ಅರಸಿನವರಿಗೆ, ೧೮೯೬ನೇ ಇಸವಿ ನವಂಬರ ೧೦ನೇ ತಾರೀಖು ಮುಖ್ಯ ೫೭೮೮ ಜೆ. ೬೭ನೇ ನಂಬರ ಗವರ್ನಮೆಂಟ್ ಇಸ್ತಿಹಾರ್‌ನಾಮೆಯ ಮೂಲಕ ಬಗರ ತಲಬ್ ಕೊಡಲ್ಪಟ್ಟ ರಜಾ ಮೂರು ತಿಂಗಳಿಗೆ ಜಾಸ್ತಿ ಮಾಡಲ್ಪಟ್ಟಿರುತದೆ.

೨. ಪೊಲೀಸ್ ಸೂಪರಿಂಟೆಂಡೆಂಟರಾದ ಮೆ|| ಜೆ. ಡನ್ನಿಂಗ್ ಯವರು, ಮೆ|| ಡಿ ದೇವರಾಜ ಅರಸಿನವರು ರಜಾ ಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ಈಗಿನಂತೆಯೇ ಬೆಂಗಳೂರು ಡಿಸ್ಟ್ರಿಕ್ಟ್ ಪೊಲೀಸ್ ಛಾರ್ಜಿನಲ್ಲಿರತಕ್ಕದ್ದು.

ತಾರೀಖ್ ೨೦ನೇ ಜನವರಿ ೧೮೯೭.

ನಂ|| ೮೧೯೭—ಜೆ. ೯೩೪—ಮೈಸೂರು ಸರ್ವಿಸ ರೆಗ್ಯುಲೇಷನ್‌ಗಳ ೧೭೨ ಮತ್ತು ೧೭೩ನೇ ಆರ್ಟಿಕಲ್‌ಗಳನ್ನನುಸರಿಸಿ, ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರಾದ ಮೆ|| ಎಸ್. ವೈದ್ಯನಾಥ ಅಯ್ಯರವರು ಅವರುಪಯೋಗಿಸಿಕೊಳ್ಳಬಹುದಾದ ತಾರೀಖ್ ಮೊದಲು ಒಂದುವಾರದ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

SUMMARY OF NEWS.
ವೃತ್ತಾಂತ ಸಂಗ್ರಹವು.

ರಷ್ಯಾದ ಝಾರ್ ಸಾಹೇಬರು ಹಿಂದುಸ್ಥಾನಕ್ಕೆ ಧಾನ್ಯವನ್ನು ಬೆಲೆ ಇಲ್ಲದೆ ತಂದು ಮುಟ್ಟಿಸುವದಕ್ಕೆ ಹುಕುಂ ಮಾಡಿದ್ದಾರೆ.

ಮದರಾಸಿನಲ್ಲಿರುವ ರಾಜಾ ಸರ್ ಸವಲೈ ರಾಮಸ್ವಾಮಿ ಮೊದಲಿಯಾರ್ಯವರು ಈ ತಿಂಗಳ ಆದಿಭಾಗದಲ್ಲಿ ಸಾವಿರಾರು ಜನ ಬಡಬಗ್ಗರಿಗೆ ಬಟ್ಟೆಬರೆಗಳನ್ನು ಧರ್ಮಾರ್ಥವಾಗಿ ಕೊಡಿಸಿದರು.

ಮದರಾಸ್ ರೈಲ್ವೆ ಗಾಡಿಗಳಲ್ಲಿ ಪಿಂಟ್ಸ್ ಎಂಬ ಒಂದು ವಿಧವಾದ ಬೆಳಕಿನ ದೀಪ ಹಚ್ಚುವದಕ್ಕೆ ಸರ್ಕಾರದವರು ಅಪ್ಪಣೆ ಕೊಟ್ಟು ೨,೫೦,೦೦೦ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ.

ಇಟಲಿಯ ಸರ್ಕಾರದವರು ಅಬಿಸೀನಿಯಾದ ಬಾದಷಹರೊಡನೆ ಹೋರಾಡಿ ಸೋತು, ಆ ದೇಶದಲ್ಲಿ ತಮ್ಮ ಅಧಿಕಾರಕ್ಕೆ ಸೇರಿದ ಪ್ರದೇಶಗಳನ್ನು ಬಿಟ್ಟುಕೊಟ್ಟು ಆ ಬಾದಷಹನ ಸ್ವಾತಂತ್ರ್ಯವನ್ನು ಒಪ್ಪಿಕೊಂಡರು.

ಪ್ಯಾರಿಸಿನಲ್ಲಿ ತುಂಬ ಜನರು ಡಿವಾರ್ ಸಾಹೇಬರವರ ಮನೆಗೆ ಜಾಹೀರನಾಮೆ ಹಚ್ಚಿದ್ದಾರೆ. ಅದರೊಳಗಿನ ಅಭಿಪ್ರಾಯವೇನೆಂದರೆ—ಐದು ಲಕ್ಷ ಫ್ರಾಂಕುಗಳನ್ನು ಬೇಗನೆ ಇಡದಿದ್ದರೆ ತಮ್ಮ ಮತ್ತು ತಮ್ಮ ಮಕ್ಕಳ ತಲೆ ಹೋಯಿತುಬಿಡಿ! ನಿಜವಾಗಿ ತುಂಟರು, ಖರೆ!

ಉತ್ತರ ಅಮೇರಿಕಕ್ಕೆ ಸೇರಿದ ಸ್ಯಾನ್ ಫ್ರಾನ್ಸಿಸ್ಕೋ ಪಟ್ಟಣದಿಂದ ಕಳೆದವಾರ ೧೮,೦೦೦ ಟನ್ನಿನ ಗೋಧಿಯು ಹಡಗುಗಳಲ್ಲಿ ಭರ್ತಿಯಾಗಿ ಕಲ್ಕತ್ತಾ ಪಟ್ಟಣಕ್ಕೆ ಬಂದಿರುತ್ತದೆ. ಇದಲ್ಲದೆ ಇನ್ನೂ ಇತರ ಕಡೆಗಳಿಂದಲೂ ಬೇಕಾದಷ್ಟು ಧಾನ್ಯವೂ ಹಿಂದುಸ್ಥಾನಕ್ಕೆ ಬರುವದರಲ್ಲಿದೆ.

ಕ್ಯೂಬಾ ದ್ವೀಪನಿವಾಸಿಗಳು ಸ್ಪೇನ ಅರಸನಿಗೆ ಮೇಲೆದ್ದು ಯುದ್ಧ ಮಾಡುತ್ತಾರೆಂದು ಮೊದಲು ತಿಳಿಸಿದ್ದೇವಷ್ಟೆ. ಮಾಮುಲಿಯವರ ಪಕ್ಷದ ದಳವಾಯಿಯು ಇತ್ತಲಾಗಿ ಮಾಡಿದ ಡಿನಾಮೈಟ್ ಎಂಬ ಮದ್ದು ತುಂಬಿಸಿ ಹೊಡೆಯುವ ಫಿರಂಗಿಯನ್ನು ಒಮ್ಮೆ ಯುದ್ಧದಲ್ಲಿ ಪ್ರಯೋಗಿಸಿದನು. ಆ ಫಿರಂಗಿಯ ಒಂದೇ ಹೊಡೆತದಿಂದ ಸ್ಪೇನ ಸಿಪಾಯರಲ್ಲಿ ೩೦೦ ಮಂದಿಗಳ ಶರೀರಗಳು ಚೂರು ಚೂರು ಆದದ್ದಲ್ಲದೆ ೧,೩೦೦ ಮಂದಿಗೆ ಗಾಯಗಳಾದವು. ಈ ಅಲ್ಪವಾದ ಯುದ್ಧದಲ್ಲಿ ಒಂದು ಹೊಡೆತದಿಂದ ಇಷ್ಟು ಹಾನಿಯಾದರೆ ಭಾರಿ ಯುದ್ಧದಲ್ಲಿ ಇಂಥ ತೋಪುಗಳನ್ನು ತಂದು ಹೊಡೆದರೆ ಎಷ್ಟು ಹಾನಿಯಾದೀತೋ?

NOTICE.

VIDYASARA SANGRAHA.
A TREATISE ON THE PRINCIPLES OF
HINDU MEDICINE.
Price, includig Postage Rs. 5–0–0

ವೈದ್ಯಸಾರಸಂಗ್ರಹ.
ಇದು ಚರಕ, ಸುಶ್ರುತ, ಸಂಸ್ಕೃತ, ವಾಗ್ಭಟಾದ್ಯನೇಕ ಪೂರ್ವಗ್ರಂಥಗಳ ಸಂಗ್ರಹ ರೂಪವಾಗಿರುತದೆ.
ಇದರ ಕ್ರಯ — ಪ್ಯಾಕಿಂಗ ಮತ್ತು ಅಂಚೆ ಹಾಸಲ
ರೇಜಿಸ್ಟರ ಪ್ರತಿ ೧ಕ್ಕೆ ೫—೦—೦

BANGALORE CITY MUNICIPALITY.
ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.
ನೋಟೀಸ್.

ತಾರೀಖ್ ೨೦ನೇ ಜನವರಿ ೧೮೯೭

ಸನ್ ೧೮೯೭ನೇ ಇಸವಿ ಜನವರಿ ೨೮ನೇ ತಾರೀಖ್ ಗುರುವಾರದ ದಿನ ಬೆಳಗ್ಗೆ ೮ ಘಂಟೆಗೆ ಬೆಂಗಳೂರು ಸಿಟಿ ಮ್ಯುನಿಸಿಪಲ್ ಕಮಿಷನರುಗಳು, ಕೋಟೆಯೊಳಗಿರುವ ತಮ್ಮ ಆಫೀಸಿನಲ್ಲಿ ಸಾಮಾನ್ಯ ಸಭೆ ಸೇರುವಾಗ ಇದರಡಿ ತಿಳಿಸಲ್ಪಡುವ ಕೆಲಸಗಳು ನಡೆಸಲ್ಪಡುವವು:—

೧. ಸನ್ ೧೮೯೬ನೇ ಇಸವಿ ಡಿಸಂಬರ್ ತಿಂಗಳ ನಗದು ಜಮಾಖರ್ಚು ಲೆಕ್ಕ, ಮರಣಲೆಕ್ಕ, ಮನೆಗಳಿಗೆ ಹೋಗಿ ಚಿಕಿತ್ಸೆ ಮಾಡುವ ಮೆಡಿಕಲ್ ಆಫೀಸರರ ಲೆಕ್ಕ, ತಗಾದೆ, ವಸೂಲಿ, ಮತ್ತು ಬಾಕಿ ಪಟ್ಟಿ, ಕಾಮಗಾರಿಗಳ ಅಭಿವೃದ್ಧಿಯನ್ನು ಕುರಿತ ರಿಪೋರ್ಟ್, ಶ್ರೀನಿವಾಸ ಮಂದಿರದ ವೈದ್ಯರಿಗೆ ಹೋಗಿದ್ದವರನ್ನು ಕುರಿತ ಯಾದಿ, ಸಿಟಿ ಮ್ಯುನಿಸಿಪಲ್ ಇಂಗ್ಲಿಷ ಮತ್ತು ಕನ್ನಡ ಸ್ಕೂಲ್‌ಗಳ ಲೆಕ್ಕಗಳು, ಸೂಲಗಿತ್ತಿಯರು ಚಿಕಿತ್ಸೆ ಮಾಡಿದವರ ಲೆಕ್ಕ, ದನಗಳನ್ನು ಕುರಿತ ರಿಪೋರ್ಟಿನ ಸಂಗ್ರಹ, ಪ್ರಸವಾಸ್ಪತ್ರೆಯ ಲೆಕ್ಕ, ಮತ್ತು ದಳವಾಡಾ ಲೆಕ್ಕ.

೨. ಬೆಂಗಳೂರು ನಾರ್ಥರ್ನ್ ಎಕ್ಸ್‌ಟೆನ್ಷನ್ ನಿವಾಸಿಗಳು, ಮೈಸೂರು ದಿವಾನರವರಾದ ಸರ್ ಕೆ. ಶೇಷಾದ್ರಿ ಅಯ್ಯರ್ ಕೆ. ಸಿ. ಎಸ್. ಐ. ಯವರ ಗೌರವಾರ್ಥ, ಸದರೀ ನಾರ್ಥರ್ನ್ ಎಕ್ಸ್‌ಟೆನ್ಷನಿಗೆ ಶೇಷಾದ್ರಿಪುರಂ ಎಂಬದಾಗಿ ಹೆಸರಿಡಬೇಕೆಂದು ಬರೆದುಕೊಂಡ ಅರ್ಜಿ.

೩. ಬೆಂಗಳೂರು ಸಿಟಿಯಲ್ಲಿ ಮನೆಗಳಿಗೆ ಹೋಗಿ ಚಿಕಿತ್ಸೆ ಮಾಡುವ ಮೆಡಿಕಲ್ ತಪೇದಾರಿ ನೌಕರರ ಮೊಬಲಗು ರಕಂ, ಬಾಕಿ, ಬಗೈರೆ ಮೊದಲಾದವುಗಳಂ ಮಾಡುವ ಅಧಿಕಾರವು ಗವರ್ನಮೆಂಟ್ ಪ್ರಿನ್ಸಿಪಲ್ ಮೆಡಿಕಲ್ ಆಫೀಸರಿಗೆ ಸೇರಬೇಕಾಗಿರಬೇಕೆಂದು ಶಿಫಾರಸ ಮಾಡಿ ಸೀನಿಯರ್ ಸರ್ಜನರವರು ಸನ್ ೧೮೯೬ನೇ ಇಸವಿ ಜನವರಿ ೨೦ನೇ ತಾರೀಖಿನಲ್ಲಿ ಬರೆದ ೧೩೩೯ನೇ ನಂಬರ ಚೀಟಿನ ನಕಲು ಮುಲಾಹಿಜೆಗೆ, ೧೮೯೭ನೇ ಇಸವಿ ಜನವರಿ ೫ನೇ ಮುಕ್ಕಾಮಿನಲ್ಲಿ ಗವರ್ನಮೆಂಟಿನವರು ಮಾಡಿ ಕಳುಹಿಸಿಕೊಟ್ಟ ೭೩೮೯–೧೨ / L. F. ೧೮೪–೯೬ ನೇ ನಂಬರಿ ಪ್ರೊಸೀಡಿಂಗ್ಸ್.

೪. ಪ್ರಜೆಗಳ ಉಪಯೋಗಾರ್ಥ, ಕೆಲವು ಷರತ್ತುಗಳ ಮೇಲೆ, ಅವರವರ ಖರ್ಚಿನಲ್ಲಿ ಒಂದು ಮುಚ್ಚುವೃತ್ತ ನಳಿಗಳನ್ನು ಇಡುವ ವಿಷಯದಲ್ಲಿ ಚೀಫ್ ಇಂಜನಿಯರವರೊಡನೆ ನಡೆಸಿದ ಕಾಗದಗಳ ಮೇಲ್ಷರಾ ಸಹ, ಸ್ಯಾನಿಟರಿ ಇಂಜನಿಯರವರು ೧೮೯೭ನೇ ಇಸವಿ ಜನವರಿ ೧೬–೧೯ನೇ ತಾರೀಖಿನಲ್ಲಿ ಬರೆದು ಕಳುಹಿಸಿದ ೧೩೭–೪೧ನೇ ನಂಬರ ಲೆಟರ.

ನಿಶ್ಚಿಸಲ್ಪಟ್ಟ ವಿಷಯಗಳು.

೧. ಬೆಂಗಳೂರು ಸಿಟಿಗೆ ಈಗ ಇರುವ ಸ್ಯಾನಿಟರಿ ಇನ್ಸ್‌ಪೆಕ್ಟರಿಗೆ ಸನದು ಯಾವದೂ ಇಲ್ಲದೆ ಇರುವದರಿಂದ ಅವರಿಗೆ ಬದಲು ಸರ್ಟಿಫಿಕೇಟ್ ಪಡೆದಿರುವ ಸ್ಯಾನಿಟರಿ ಇನ್ಸ್‌ಪೆಕ್ಟರೊಬ್ಬರನ್ನು ಮೊಕರರ್ಮಾಡಬೇಕಾದ್ದು ಆವಶ್ಯಕವೆಂದು ಸೂಚಿಸಿ ಸೀನಿಯರ್ ಸರ್ಜನರವರು ೧೮೯೬ನೇ ಇಸವಿ ಡಿಸಂಬರ್ ೨೮ನೇ ತಾರೀಖಿನಲ್ಲಿ ಬರೆದ ೧೯೯೧ನೇ ನಂಬರ ಲೆಟರ.

T. T. LEONARD,
President,
City Municipal Commission

ಈ ಕಂಪೆನಿಯು ಸನ್ ೧೮೭೬ನೇ ಇಸವಿಯಲ್ಲಿ ಸ್ಥಾಪಿತವಾಯಿತು.
ಜನ್ಮದ ಲಾಭವು.

ವಜ್ರಾಂಗ ಬಿಜೋರವು.

ಬಲಾರೋಗ್ಯ ಪುಷ್ಟಿಗಳನ್ನು ಬೆಳೆಸತಕ್ಕ ಉತ್ತೇಜಕವು.

ಅತ್ಯುತ್ಕೃಷ್ಟಕರವಾದ ಬಳ್ಳಿಗಳಿಂದ ತಯಾರಿಸಿದ ಈ ಉತ್ತೇಜಕವು ಹಿಂದೂಸ್ಥಾನದ ಅನೇಕ ವನಸ್ಪತಿಗಳ ಸಾರಗಳ ಪುಟಗಳನ್ನು ಕೊಟ್ಟು, ತುಪ್ಪದೊಳಗೆ ಮಾಗಿಸಿ, ಒಳ್ಳೇ ಪೆಟ್ಟಿನ ತರಗತಿಯ ಸಕ್ಕರೆಯ ಪಾಕದಲ್ಲಿ ಸಿದ್ಧ ಮಾಡಿರುತ್ತೇವೆ. ಈ ಉತ್ತೇಜಕವು ಮಹಾ ಪುಷ್ಟಿಕರವಾದದ್ದು, ಒಳ್ಳೇ ರುಚಿಯುಳ್ಳದ್ದು. ಇದರ ಸೇವನೆಯಿಂದ ಕಫ, ವಾತ, ಪಿತ್ತ ಈ ತ್ರಿದೋಷಗಳಿಂದುಂಟಾಗತಕ್ಕ ಯಾವತ್ತು ಬಗೆಯ ವ್ಯಾಧಿಗಳೂ ಹೋಗುತ್ತವೆ. ೬೦ ವರ್ಷಗಳ ಪ್ರಾಯವುಳ್ಳ ಮುದುಕರ ಕಾಮವಿಕಾರವಾದರೂ ಹದಿಯರೆಯ ಗಂಡಸರಂತೆ ಉತ್ಪಾದಿತವಾಗುತ್ತದೆ. ಜನನೇಂದ್ರಿಯದಲ್ಲಿ ಬಲ ಹುಟ್ಟಿ ನಪುಂಸಕತ್ವವು ಇಲ್ಲದಂತಾಗುತ್ತದೆ. ಲಘ್ವಿಯ ಮುಂಚೆ ಅಥವಾ ಹಿಂದೆ ಹರಿದುಹೋಗುವ ಧಾತು ನಿಲ್ಲುತ್ತದೆ. ಸ್ವಪ್ನಾವಸ್ಥೆಯಾಗುವದಿಲ್ಲ. ವೀರ್ಯವು ಬೆಳೆದು ಮೈ ಬಣ್ಣವು ಸುಧಾರಿಸುತ್ತದೆ. ಹರವು ಹಾಗೂ ಉಷ್ಣಸಂಬಂಧ ರೋಗಗಳಿಲ್ಲದಂತಾಗಿ ಧಾತು ಪುಷ್ಟವಾಗುತ್ತದೆ. ಮೂರು ಹೊತ್ತಿಂದರೂ ಅನ್ನ ಪಚನವಾಗಿ ಒಳ್ಳೇ ಹಸಿವೆಯಾಗುತ್ತದೆ. ಹೋಗುವದೆಂಬ ತಲೆ ಸೂದರೆ ಸ್ವಚ್ಛ ಸೌಂದರ್ಯಗುತ್ತದೆ. ಕೆಮ್ಮು, ಉದರ, ದಮ್ಮು ಈ ರೋಗಗಳು ನಾಶ ಹೊಂದುತ್ತವೆ. ಹೊಸ ಬೇನೆ ಇದ್ದಲ್ಲಿ ೧೧ ದಿವಸಗಳ ವರೆಗೆ ನಡೆಯುವ ಒಂದೇ ಡಬ್ಬಿಯಿಂದ ಗುಣವುಂಟಾಗುತ್ತದೆ. ಮತ್ತು ಹಳೆಯದಲ್ಲಿ ೪೦ ದಿನಗಳ ಮೇಲೆ ಗುಣ ಬಂದೀತು. ೧೧ ದಿವಸಗಳ ವರಿಗೆ ನಡೆಯತಕ್ಕ ೧ ಡಬ್ಬಿಗೆ ೧ ೮—೦ ರೂ|| ಒಂದೇಸಾರ್ತಿಗೆ ೪ ಡಬ್ಬಿಗಳು ತೆಗೆದುಕೊಳ್ಳತಕ್ಕವರಿಗೆ ಒಂದು ಡಬ್ಬಿಯು ಉಚಿತವಾಗಿ ಸಿಕ್ಕೀತು. ಈ ಉತ್ತೇಜಕದಿಂದ ಹೆಂಗಸರು ಸತೇಜರಾಗುತ್ತಾರೆ. ಕರಗಿನ ಹಾಗೂ ಬಾಣಂತಿ ಬೇನೆಗಳು ವಾಸಿಯಾಗುತ್ತವೆ. ಎಲ್ಲರನ್ನೂ ಸರಿಯಾಗಿ ಬೇರೆ ಇಲ್ಲದವನನ್ನಾಗಿಮಾಡಿ ಬಲಾರೋಗ್ಯ ಪುಷ್ಟಿಗಳನ್ನು ಬೆಳೆಸುತ್ತದೆ. ಸಾಹೇಬ್ ಜನರಲ್ಲಿ ಬಹಳ ಡಬ್ಬಿಗಳು ಖರ್ಚಾಗುತ್ತವೆ. ಈ ಔಷಧವು ಈ ಕಂಪೆನಿಯ ಹೊರ್ತು ಬೇರೆ ಸ್ಥಳದಲ್ಲಿ ಆಗುವದಿಲ್ಲ. ಯಾವತ್ತು ದೇಶಗಳಲ್ಲಿಯೂ ವೈದ್ಯಶಾಲೆಗಳಿಗಾಗಿ ಕಳುಹಿಸಲ್ಪಡುತ್ತದೆ. ಬರೆದು ಬಂದು ಕೂಡಲೆ ಈ ಔಷಧಿಯು ಬೇಕಾದವರಿಗೆ ಈ ಡಬ್ಬಿಗಳು ಕಳುಹಿಸಿಕೊಟ್ಟೇವು. ಅಂಚೆಯ ಹಾಗೂ ವ್ಯಾಲ್ಯೂ ಪೆಯಬಲ್ ವೆಚ್ಚ ಬೇರೆ ಕೊಡಬೇಕು (ಉಚಿತ ಡಬ್ಬಿ ಸಹ ೪ ಡಬ್ಬಿಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬಾದಲ್ಲಿ ಎಲ್ಲಾ ಬಿಜೋರದ ಪಾಕ ರವಾನಿಸುವೆವು, ಹೀಗೆ ಕಳುಹಿಸಿದರೆ ಟಪಾಲ್ ಖರ್ಚು ಕಡಮೆ ಬೀಳುವದು.)

ಮೇಲ್ವಿಳಾಸ—ಪಿ. ಎಲ್. ಎ. ಬ್ರದರ್ಸ್ ಮತ್ತು ಕಂಪೆನಿ,
ಫಸ್ಟ್ ಇಂಗ್ಲಿಷ್ ಬ್ರ್ಯಾಂಚ್ ಆಫೀಸ್, ಡಿಸ್ಟ್ರಿಕ್ಟ್ ಬೆಳಗಾಂವ.
ಪೋಸ್ಟ್—ಬೆಳಗಾಂವ. Post Belgaum.

Bangalore:—Printed and Published at the Karnataka Press, No. 40, Hospital Road, City,—1897.

THE

Karnataka Prakasika.

ಪ್ರಕಟನೆಯ ದಿವಾಣ { ಮೊದಲನೆಸಾರಕ್ಕೆ ಪಙ್ತಿ ಒಂದಕ್ಕೆ 0 2 0 / ಎರಡನೆಯ ದಫೆ ಪಙ್ತಿ ಒಂದಕ್ಕೆ 0 1 0 }

[ಕ್ರಿಸ್ತ ಸರಾ-ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟ್ ಸಲ ಪ್ರಕಟಿಸಿದಾಗ್ಯೂ ಪಙ್ತಿ ಒಂದಕ್ಕೆ ೦ ಆಣೆ ಯಂತೆಯೇ ಲಕ್ಕ ಮಾಡಲ್ಪಡುವದು]

ಕರ್ನಾಟಕ ಪ್ರಕಾಶಿಕಾ.

Published Every Monday Morning

ಚಂದಾದಾರರಿಗೆ—ಸ್ಥಳದವರಿಗೆ: ಸಾಲ 1 ಕ್ಕೆ . 3 0 0; 6 ತಿಂಗಳಿಗೆ . 2 0 0; 3 ತಿಂಗಳಿಗೆ .. 1 4 0

ಪರಸ್ಥಳದವರಿಗೆ, ಪೋಸ್ಟೇಜ್ ಸಹ: ಸಾಲ 1 ಕ್ಕೆ .. 4 0 0; 6 ತಿಂಗಳಿಗೆ 2 8 0; 3 ತಿಂಗಳಿಗೆ . 1 8 0

ಗ್ರಾಮಾನುವಿವಿಧದ್ರವ್ಯವ್ಯಾಪಕನಗರಾರ್ಥ ಕರ್ಣಾಟಕಪ್ರಕಾಶಿಕಾ ... ॥

Vol. XXIV. BANGALORE:—MONDAY, FEBRUARY 1, 1897 No. 5.

ADVERTISEMENTS



SALE OF ELEPHANTS

NOTICE

MORE than 100 valuable Elephants of all sizes, comprising males, females, and calves, newly captured by Mysore Government Kheddah Department, are ready for sale at Gundlupett, Mysore District.

Gundlupet is 23 miles by road from Nanjangud Railway Station and 13 miles from Malabar frontier.

For particulars apply to the undersigned

K SHAMIENGAR,
Superintendent of Kheddahs.
MYSORE

Mysore,
15th January 1897

Select Telegrams.

London, 23rd January—The Lord Mayor has decided to remit a hundred thousand pounds of the Famine Fund to Calcutta immediately, and to appeal to Colonial Governors and Mayors to subscribe.

London, 24th January—The Indian Famine Fund was opened at Glasgow on Wednesday last, and has already reached £20 000

London 25th January The Indian Famine Fund has reached £140 000 which includes a hundred guineas each from the Mysore Mining Company and the Champion Reef Company. The Stock Exchange so far has subscribed £15,750 The Cotton Spinners Association has subscribed £2 000, Lord Iveagh the Bombay Baroda and the Great Indian Peninsular Railway and the Mercers Company have each subscribed £1000

THE

Karnataka Prakasika.

MONDAY, FEBRUARY 1, 1897

FAMINE EXPENSES

THE Famine Fund has now reached a large figure and it is still rising. It is believed that half a million of pounds will be collected for the sufferers in this land by the famine. The money is coming in from all parts of the empire, from Canada—from Australia, from the Cape and the West Indies. The hearts of the people have been touched by the famine in this land, and they have determined to help, and substantially, the poor people who may come under its influence. The money sent out, together with what the Government may spend, will tide over the famine, but it is to be feared that many will die in spite of whatever may be done for them. But when the famine is over, when matters, so far as the crops are concerned, have returned to their normal condition, there will be great poverty among the people and great impoverishment of the country at large. The people who have suffered will not be able to add much to the finances of the State for some time to come, and many of them will have to be assisted before they can contribute anything. It is plain to be seen that there must be great changes in the collection of the revenue after the famine is over. There must be reductions, and very material ones, or else there will be a break down. There must be reductions of some amount and many of them, and it will be for the authorities to say where these are to be made. Made they must be, and as soon as the famine is over—before that, if possible. We may point out one or two directions in which money may be saved. There is the army, for instance, which is too large. Mr Caine is of opinion that ten British regiments might be dispensed with, and we think he is right. This would effect a good saving, and it is to be hoped that the Government will turn its attention in this direction, and insist on a reduction being made. Then the Native army might also be cut down, and to a great extent. The country is now covered with railways, and thus troops could be sent with ease from one part of the land to another. This was not the case in former years when there were no railways, and when the troops had to march on foot. We believe that after the famine is over the people at home will insist on a reduction being made in the number of the army in order that the finances may be relieved. Many of those do not now understand what a drain the army is upon the people, but when they do they will insist on something being done to mend matters. In the next place many of the salaries are too high and could with much propriety be cut down. These are higher than the country can afford to pay, and a change should be brought about. The salaries in India, it is believed, are higher than in any other country in the world, and it cannot with truth be said that it is the richest. Very far from this. It is to be feared it must be set down among the poorest, and the famine now in our midst will make it still poorer. In the next place there are many useless establishments that might well be improved off the face of the country. These are not required, they cost money, and so they should be taken out of the way. It is strange that such useless institutions should be allowed to cumber the earth, and the sooner they are relegated to destruction the better will it be for all the tax paying people of India. There are many other ways in which a saving might be effected, and it is to be hoped that the authorities will not miss an opportunity to effect a saving. There will to a certainty be a terrible deficit, and this must be made up some how, and it is for the authorities to show how it can be done.

MONEY REQUIRED

THE Sheriff of Madras has called for a meeting on Thursday next in order to collect money for the famine fund. Calcutta was the first place to move, and this was only right, as the place is the capital of the country, and the Viceroy lives there. A large sum has already been collected and we feel certain that the movement will spread all over the country, and it is to be hoped that the amount realised will be such as will redound to the credit of the land and the people. We do not wish it to be said that we allowed the English to collect money for the famine stricken while we stood still. The people of this land must show that they are in sympathy with the sufferers, and are determined to help them. But we should like to see a meeting held in Bangalore—in fact two, one in the City and the other in the Civil and Military Station. It will be remembered that when we had famine in our midst twenty years ago the people in the other parts of India, as well as those at home sent money for the relief of the sufferers in Mysore, consequently the people here ought to feel it a duty to contribute to the fund now being raised for the benefit of the distressed in other parts. Unfortunately the Dewan and the Resident are both absent from the place, but as soon as they return we trust they will intimate measures so that money may be collected to help those who are in the same condition that many were in twenty years ago in this province. We hope soon to hear that a meeting has been called, or more than one, and that a good sum of money has been collected. It will be a great disgrace to the place should it fail to come forward and give a helping hand at this trying time.

News and Notes

RAJA JANG Bahadur Khan, C I E, of Nanpara has offered a contribution of Rs 20 000 to the Famine Relief Fund.

WE are glad to learn that the Mahajana Sabha has sent a telegram to the Viceroy supporting the nomination by the Government of a Vakil as Advocate General.

The total subscriptions to the Famine Fund up to last Wednesday night has amounted to Rs 3,13 [illegible] of which 3 02 409 is contributed towards the General Fund, and Rs 11 515 to the Provincial Fund, while Rs [illegible] is earmarked for Bengal.

THE sum actually collected to the Famine Fund at Calcutta up to the 25th ultimo is 260 000 besides 113 000 still not paid but promised. Other subscriptions are also flowing in. Rajah Sir Savalai Mudaliar, of Madras has sent Rs 1 000 towards the General Fund.

A preliminary meeting was held at Calcutta on the 25th ultimo to make the necessary arrangements for according a suitable reception to Swami Vivekananda at Calcutta. An influential Reception Committee has been formed with H H the Maharajah of Durbhanga as President.

THE Famine Executive Committee met, and it was resolved to send telegrams to Mayors of New York and other Towns of America, Australia, New Zealand, & The Governor-General of Canada and the Governors of Hongkong, Singapore, Cape Town have also been telegraphed for raising public subscriptions.

IN pursuance of a largely signed Requisition the Sheriff of Madras has convened a Public Meeting of the Inhabitants of Madras at the Banqueting Hall, on Thursday, the 4th instant, at 5 P M, for the purpose of taking steps to start a Branch of the Indian Famine Relief Fund in the Madras Presidency.

IT is a remarkable circumstance that in St Petersburg a concert has been held, under the patronage of the Tsar, on behalf of the famine stricken people of India, and that large quantities of Russian grain from the State depot will be sent to that country. The "White Tsar" is evidently preparing the way for his propaganda in Asia.

WE are glad to learn that Government has accorded its sanction to Mr N Vythinatha Iyer's resolution in favour of failed B A candidates, recently passed by the Senate. There has been much unnecessary and acrimonious discussion over this subject, and it will be a matter of general satisfaction that no heed has been paid to the suggestion, that the Government should veto the resolution of the Senate, by the violent exercise of an obsolete power.

THE *Daily Chronicle* of the 4th instant, has a trenchant article regarding the misappropriation of the Famine Insurance Fund. Our contemporary concludes an article full of quotations from both Sir John Strachey and Lord Lytton on the origin of the fund, thus:—"One thing is certain. Vast sums are being daily expended on relief works—and we shall be curious to see when the accounts are published how far the misapplication of the Famine Fund in past years may have intensified the heavy financial strain of the present crisis."

IT is said that the Resident at Hyderabad has informed the Minister that he has a sum of a lakh and sixty-five thousand rupees ready to hand over to the Nizam in addition to the last year's surplus out of the revenues of Berar. So far so good. But is there no means of obtaining a guarantee from the Nizam's Government that the surplus will be spent for the benefit of the people of Berar who paid the revenues and will not be squandered away for the pleasure of the Nizam himself or for the benefit of his favourites?

A plaint has been filed in the High Court by four of the Madras Race Stewards (1) Colonel G M J Moore C I E, President (2) Henry Irwin, Esq C I E, (3) E B, Powell Esq and (4) I Campbell Esq, against the *Madras Mail* in respect to a letter entitled "The Madras Club" and signed Maurasee which was published in the correspondence columns on the 27th November last and among the Editors and Proprietors of the journal for the sum of Rs 5,000 each by way of damages for defamation. The *Mail* has repudiated the nature of the letter being in any way defamatory, either directly or implied by and have taken the necessary steps to defend the suit.—*Hindu*

FOR original journalism one must go to Northern India. Some months back, we remember having read an appeal from an editor of a newspaper belonging to that part of the country, to the subscribers to his paper, requesting them to suggest subjects on which he should write his leaders—the subject chosen by a majority being given preference over those selected by a minority. Another hailing from the same direction, has improved upon his predecessor. He requests his subscribers to send him their votes on post cards as to what policy he should adopt in regard to the Indian National Congress.

DR K E DADACHANJI, who was inoculated the other day against the plague by Dr Haffkine with the prophylactic plague lymph, in describing the sensation he experienced, said that the lymph was injected hypodermically on both sides of the waist. About 4 hours after the injection he was attacked with fever,

which increased to 101°. He had also shivering, head-ache, and other symptoms of the plague, but in a milder form The parts inoculated became inflamed, and glandular swelling appeared which, however, subsided in 24 hours. Dr. Dadachanji intends to have himself inoculated with the lymph for the second time, after which he will have some plague germs introduced into his system in order to ascertain how far the efficacy of the lymph acts as a plague preventive.

A complaint was filed on the 14th instant, in the Court of the District Magistrate of Ajmere, on behalf of Rao Bahadoor Babu Kanta Chandra Mukerjee, C.I.E., Prime Minister and Chief Member of the State Council of Jeypur, against Bakshi Lachman Dass, the Manager and Proprietor of the *Rajputana-Malwa Times*, a weekly newspaper published at Ajmere. The petition set forth that Bakshi Lachman Dass called on the Prime Minister on the 24th February last and gave him to understand that unless he received a gratification from the Minister, revelations very damaging to the credit of the Jeypur administration would appear in the paper. The complainant rejected these overtures and ordered accused out of the house and subsequently a number of defamatory articles appeared.

The *Hitavadi* defamation case has ended in the conviction of the accused, who has been sentenced to nine months' imprisonment We do not believe that there will be anywhere a disposition to regard the sentence as undeservedly severe The malignant persistency with which the Brahmo community, more especially the women of that community, were vilified and slandered even after the prosecution was started, is entirely unworthy of respectable journalism, and if not adequately punished, it would make journalism a danger to society than an instrument of good. Though the *Hitavadi* is edited by a graduate of the Calcutta University, who in his own personal habits and tastes is anything but orthodox, it upholds in its columns the views of the most stupidly orthodox people on most social and political questions and panders to their prejudices in the hope of their support; and in Bengal nobody can be orthodox without heaping slanderous abuse on women.

A correspondent states that a meeting of learned shastris was held in the Babulnath Temple, last week, to consider the best means of abating the pestilence on the principles contained in the ancient Hindu Shastras, when the famous shastri of Nepaul, Nilamber Ovajee and other eminent shastries attended. Bhat Valjee Jivraj requested the Shastries to state what, according to their learning, was the best means suggested in the shastras for the mitigation of the calamity which has overtaken Bombay, remarking that he was willing to bear any expenses necessary for the performance of expiatory and other Hindu ceremonies. Shastri Nilamber thereupon undertook to worship for three days together the goddess Kalika, on the strict principles of the shastras, in the Sonapore burning ground, and in all other Hindu burning or burial grounds in Bombay. Luxman Shastri Raunde consented to co-operate in the ceremonies. The prayers are to last four days, and the shastris undertook to go through them thoroughly and conscientiously If the plague abated through the medium of these ceremonies, the meeting resolved to make a grand offering to the goddess of the Babulnath temple.

Local and Provincial.

The Dewan.—Is expected back in Bangalore in a short time.

The Camp of Exercise.—The troops that went out to the Camp have all returned to the Station.

The Weather.—Is very hot and dry in the middle of the day though it is cold at night The health of the place is fairly good.

Typhoid Fever.—There is a good deal of this just now in the Civil and Military Station, and one death has occurred from it.

The C. and M. Station.—The Municipal authorities are doing their best to make the place clean so that the plague may not put in an appearance.

The following are the numbers of successful candidates from the Mysore Province at the F. A Examination held in December last :—

Bangalore.—457, 460*, 462, 464, 465, 468, 475, 477, 479, 481, 488, 489, 490, 496, 512, 516*, 518, 522, 523, 526, 531, 534, 535, 536, 537*, 539, 542, 543*, 547, 552, 555

Mysore.—1076, 1078*, 1084 1085, 1086 1087, 1089*, 1091, 1095, 1096, 1097, 1098 1099, 1100, 1103, 1104*, 1105, 1109, 1110, 1112*, 1114, 1116, 1117*, 1118, 1120, 1123

The Mysore Gazette.

Bangalore, Thursday, 21st January 1897

Notifications by the Government of Mysore

GENERAL AND REVENUE.

No. 8221—Mis F 3 93, dated 20th Jan 97.

Mr J A Coelho, Sub-Assistant Surgeon, is transferred from the Local Fund Dispensary, Koppa, to the Civil Hospital, Chickmagalur

No 8251—J 930, dated, 21st January 1897

Under Article 173 and 203 (*b*) of the Mysore Service Regulations, Mr. M. A. Narayana Iyengar, B A, B L, Munsiff of Yedahalli, is granted casual leave on half pay for twelve days with effect from 21st January 1897 or from such other date as he may avail himself of the same.

No. 8482—Mis F 403 92, dated 26th Jan 97

Under Article 172 of the Mysore Service Regulations, Mr. B D. Raghavendra Rao, L M & S, Assistant Surgeon is granted casual leave of absence for fifteen days with effect from such date as he may avail himself of it

No. 8520—*J 975, dated, 26th January* 1897

Under Article 188 of the Mysore Service Regulations, Mr. R. B Plumer, Assistant Commissioner in charge of the Police, Shimoga district, is granted privilege leave of absence for two and a half months, with effect from the 2nd February 1897 or from such other date as he may avail himself of the same.

Hema Hanumantaiya, Amildar of the Tirthahalli, is appointed to act as Assistant Superintendent of Police, 2nd Class, and is posted to the Shimoga district, for employment during the absence of Mr. R B Plumer on leave or until further orders

No. 8458—J. 986, dated 27th January 97

Mr. J. W. Best, Barrister-at-Law, Chief Judge of Mysore, will, at his own request, be relieved of his duties as *ex officio* Inspector General of Prisons in Mysore, and Surgeon Lt Col P. H. Benson, M D, C M. & M R C S Senior Surgeon and *ex officio* Sanitary Commissioner with the Government of Mysore, is appointed *ex officio* Inspector General of Prisons in Mysore

No 8562—*Ed F 24 96, dated 27th January* 97

During the employment of Mr. D. Subbiya, B A., in the Palace or until further orders, the following *sub protem* promotions are ordered in the Inspecting Branch of the Educational Service, with effect from 1st November 96 —

1. Mr M Srinivasa Rao, B, A, from Deputy Inspector, 2nd Grade, to Deputy Inspector, 1st Grade
2. Mr. M Ramaswamiya, B A, from Deputy Inspector, 3rd Grade, to Deputy Inspector, 2nd Grade

No. 8566—Ed F 24 96, dated, 27th Jan. 97

Mr K Rangappa, Deputy Inspector of Schools, Chitaldrug district, is transferred to the Kolar district, *vice* Mr. D Subbiya on other duty

No. 8569—*Ed F. 24 96, dated 27th January* 97

Mr. M. Veerabhadraiya, B A, Assistant Master, Chitaldrug High School, is appointed Deputy Inspector of Schools, 3rd Grade, *sub protem*, and is posted to the Chitaldrug district (*vice* Mr. K. Rangappa transferred to the Kolar district)

No. 6463—*Ft F. 27 95, dated 22nd Jan* 97

Mr. H. Srinivasa Row, *sub protem* Sub-Assistant Conservator of Forests, attached for duty to the Mysore district, will continue in that district until further orders.

2 Mr M. Srinivasa Rao, Acting Extra Assistant Conservator of Forests, attached for duty to the Shimoga district, will continue in that district until further orders.

No. 6581—*R. 2216, dated, 26th January* 1897.

Narayan Rao, Head quarter Inspector of Police, Shimoga district, is appointed to act as Amildar and 3rd class Magistrate of the Tirthahalli taluk during the employment of Hema Hanumantaiya on other duty or until further orders.

* The asterisks indicate first classes.



ಆನೆಗಳ ಹರಾಜ್.

ನೋಟಿಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಸುವ ದೇನೆಂದರೆ—

ಮೈಸೂರು ಖೆಡ್ಡಾ ಇಲಾಖೆಯಿಂದ ಈಚೆಗೆ ಹಿಡಿಯಲ್ಪಟ್ಟ ಗಂಡು ಹೆಣ್ಣು ಮತ್ತು ಮರಿಗಳು ಸೇರಿ ನಾನಾ ತರಹೆ ಆಕೃತಿಗಳುಳ್ಳ ಉತ್ತಮವಾದ ೧೦೦ ಆನೆಗಳಿಗೆ ಮೇಲ್ಪಟ್ಟು, ಮೈಸೂರು ಡಿಸ್ಟ್ರಿಕ್ಟ್ ಗುಂಡಲ್‌ಪೇಟೆಯ ಬಳಿ ಹರಾಜಿಗೆ ಸಿದ್ಧವಾಗಿರುತಿದೆ. ಗುಂಡಲ್ ಪೇಟೆಯು ಕಾಕಿದಾರಿಯಲ್ಲಿ ನಂಜನಗೂಡು ರೆಯಿಲ್‌ವೆ ಸ್ಟೇಷನ್ನಿಂದ ೧೫ ಮೈಲಿಗಳ ಫಾಸಲೆಯೂ, ಮಲೆಬಾರ್ ಸರಹದ್ದಿನಿಂದ ೧೩ ಮೈಲಿಗಳ ಫಾಸಲೆಯೂ ಇರುತಿದೆ.

ಇತರ ತಪಸೀಲ್‌ಗಳನ್ನು ತಿಳಿದುಕೊಳ್ಳಲು ಅಪೇಕ್ಷೆಯುಳ್ಳವರು ಇದರದಿ ರುಜು ಮಾಡಿರುವವರಿಗೆ ಬರೆದು ತಿಳಿದುಕೊಳ್ಳಬಹುದು.

K. SHAMIENGAR,
Superintendent of Kheddahs,
MYSORE

ಮೈಸೂರು
೧೫ನೇ ಜನವರಿ, ೧೮೯೭.

ಕರ್ಣಾಟಕ ಪ್ರಕಾಶಿಕಾ.

೧೮೯೭ನೇ ಇಸವಿ ಫೆಬ್ರುವರಿ ೧ನೇ ಸೋಮವಾರ.

ಇಂಡ್ಯದೇಶದ ತಾತ್ಕಾಲಿಕ ಸ್ಥಿತಿ.

ಈಗ್ಗೆ ನಾಲ್ಕೈದು ತಿಂಗಳ ಕಾಲದಿಂದಲೂ ಇಂಡ್ಯ ದೇಶದ ಮತ್ತು ಯೂರೋಪ್ ಖಂಡದ ವೃತ್ತಾಂತ ಪತ್ರಿಕೆಗಳ ಲೇಖನಕ್ಕೂ ಬ್ರಿಟಿಷ್ ಸರ್ಕಾರದವರ ಚಿಂತೆ ಮತ್ತು ಗಮನಕ್ಕೂ ವಿಷಯವಾಗಿರುವುದು ಪ್ಲೇಗೊಂದು, ಮೊದಲು ಮುಂಬೈಯಲ್ಲಿ ತಲೆದೋರಿ ಅಲ್ಲಿ ಸುಮಾರು ಹತ್ತುಸಾವಿರ ಪ್ರಜೆಗಳಿಗೆ ಪ್ರಾಣಹಾನಿಯನ್ನುಂಟುಮಾಡಿ ಅಲ್ಲಿಂದ ಕ್ರಮಕ್ರಮವಾಗಿ ಇತರ ದೊಡ್ಡ ಷಹರ್‌ಗಳಿಗೂ ವ್ಯಾಪಿಸುತಲಿರುವ ಬ್ಯೂಬೋನಿಕ್‌ಪ್ಲೇಗ್ ಎಂಬ ಮಹಾಮಾರಿಕೋಪದ್ರವವೊಂದು. ಈ ಭೀಕರದ ಜತೆಗೆ ಕೆಲವು ಪ್ರದೇಶಗಳೊಳು ಸಿಡುಬುರೋಗ ಸಹ ವ್ಯಾಪಿಸುತಲಿರುವಂತೆ ತಿಳಿಯಬರುತಿದೆ ಉಚಿತ ಕಾಲದಲ್ಲಿ ವರ್ಷಾಭಾವದಿಂದ ಬೆಳೆಗಳಿಡುವದಕ್ಕೆ ಅವಕಾಶತಪ್ಪಿ ಹೋಗುವಣದರಿಂದ ದುರ್ಭಿಕ್ಷ ಪ್ರಾಪ್ತವಾಗುವುದು ಸ್ವಾಭಾವಿಕವಾದುದು. ಒಂದು ಕಾಲದಲ್ಲಿ ಒಂದು ದೇಶದೊಳುಂಟಾಗುವ ದುರ್ಭಿಕ್ಷದಮೂಲಕ ಕಷ್ಟವನ್ನನುಭವಿಸುತಲಿರುವ ಅಲ್ಲಿನ ಪ್ರಜೆಗಳ ಸಹಾಯಾರ್ಥ ಆಹಾರ ಪದಾರ್ಥಗಳ ಸಮೃದ್ಧಿಯುಳ್ಳ ಅನ್ಯದೇಶಗಳಿಂದ ಧಾನ್ಯಗಳು ಕಳುಹಿಸಬೇಕಾಗಿರುವದರಿಂದ ಸರ್ವತ್ರ ಧಾನ್ಯಗಳ ದಾರಣೆಗಳು ಹೆಚ್ಚುವಣವೂ ಸ್ವಾಭಾವಿಕವಾದುದು. ಈ ಇಂಡ್ಯ ದೇಶದಲ್ಲೂ ವಿಶೇಷತಃ ಇಂಗ್ಲಾಂಡ್ ಮೊದಲಾದ ಅನ್ಯದೇಶಗಳಲ್ಲೂ ಚಂದಾ ಮೂಲಕ ವಸೂಲಾಗಿಯೂ ಇನ್ನು ವಸೂಲಾಗುತಲೂ ಇರುವ ದ್ರವ್ಯದಿಂದಲೂ, ಗವರ್ನ್‌ಮೆಂಟಿನವರು ನಾನಾಪ್ರಕಾರದಿಂ ಖರ್ಚು ಮಾಡುತಲಿರುವ ದ್ರವ್ಯದ ಮೂಲಕವಾಗಿಯೂ ಕ್ಷಾಮಪೀಡಿತರಾದವರಂ ಈ ಕಾಲದಲ್ಲಿ ಕಾಪಾಡುವುದು ಸಾಧ್ಯವಾಗಿದ್ದಾಗ್ಯೂ ಮೇಲೆ ತಿಳಿಸಿದ ಮಹಾಮಾರಿಕೋಪದ್ರವದಕಾರಣವಂ ಕಂಡು ಹಿಡಿದು ತನ್ನಿವೃತ್ತ್ಯುಪಾಯವಂ ಯೋಚಿಸುವುದು ಪ್ರಸಿದ್ಧರಾದ ಡಾಕ್ಟರ್‌ಗಳಿಗೆ ಸಹ ಅಸಾಧ್ಯಪ್ರಕ್ರಿಯೆಯಾಗಿ ಯೇರ್ಪಟ್ಟದೆ ಡಾಕ್ಟರ್‌ಗಳ ಅಭಿಪ್ರಾಯಗಳೂ ಭಿನ್ನಗಳಾಗಿರುವಂತೆಯೇ ಕಾಣುತಿವೆ. ಯಾವ ಪ್ರತಿಕ್ರಿಯೆಯೂ ಇದುವರೆಗೆ ಫಲಕಾರಿಯಾದಂತೆ ತೋರಲಿಲ್ಲವು. ಸದರೀ ಮಾರಿಕೋಪದ್ರವನು ತಗಲಿದವರಲ್ಲಿ ಸೇಕಡ ಎಪ್ಪತ್ತೈದು ಮಂದಿಗೆ ಮೇಲ್ಪಟ್ಟೇ ಮೃತಪಡುತಲಿದಾರೆ. ಈ ರೋಗದ ಭಯವು ಇಂಡ್ಯ ದೇಶದಲ್ಲಿ ಮಾತ್ರವಲ್ಲದೆ ಯೂರೋಪ್ ಖಂಡದಲ್ಲಿ ಸಹ ಉಂಟಾಗಿ, ಈ ದೇಶದಿಂದ ಜಹಜುಗಳಲ್ಲಿ ಆಯಾ ದೇಶಕ್ಕೆ ಹೋಗುವ ಸರಕುಗಳನ್ನೂ ಜನರನ್ನೂ ಊರಹೊರಗೆ ಬಹುದೂರದಲ್ಲಿ ತಡೆಹಾಕಿಸಿ ಸಮರ್ಥರಾದ ಡಾಕ್ಟರ್‌ಗಳ ಮೂಲಕ ಚೆನ್ನಾಗಿ ಪರಿಶೀಲನೆ ಮಾಡಿ ರೋಗ ನಿಮಿತ್ತಕಗಳಾದ ಅಂಶಗಳು ಯಾವದೂ ಜಹಜಿನಲ್ಲಿರುವ ಸರಕುಗಳಲ್ಲಾಗಲಿ ಜನರಲ್ಲಾಗಲಿ ಸುತರಾಂ ಇಲ್ಲವೆಂದು ಡಾಕ್ಟರ್‌ಗಳು ಖಂಡಿತವಾದ ಅಭಿಪ್ರಾಯವಂ ಕೊಟ್ಟಮೇಲೆಯೇ ತಮ್ಮ ದೇಶದೊಳಗೆ ಅವಂ ಬಿಡತಕ್ಕದ್ದೆಂದು ಆಯಾ ಸಂಸ್ಥಾನಾಧಿಪತಿಗಳು ಹುಕುಂ ಮಾಡಿರುವದರಿಂದ ವ್ಯಾಪಾರವು ಬಹಳ ಮಟ್ಟಿಗೆ ಬಂದಾಗಿ ಮುಂಬೈಯಿಂದ ಆ ಪ್ರಾಂತದ ಪ್ರಜೆಗಳು ರೋಗದ ಭಯದಿಂದ ದೇಶಾಂತರಗಳಿಗೆ ಹೋಗಿಯೂ ಹೋಗುತಲೂ ಇದಾರೆ. ಪ್ರಜೆಗಳ ಮಾನಪ್ರಾಣ ಧನಗಳ ರಕ್ಷಣೆಯ ವಿಷಯದಲ್ಲಿ ಸರ್ಕಾರದವರು ತಮ್ಮ ಬುದ್ಧಿಶಕ್ತಿಗಳಂ ವಿನಾ ಬಹುವಿಧ ಯೇರ್ಪಾಡುಗಳಂ ಮಾಡುತಲಿದಾರೆ. ಆದಾಗ್ಯೂ ಪ್ರಸಕ್ತ ರೋಗವು ಇದ ವರೆಗೆ ಸ್ವಲ್ಪವಾದರು ಕಮನವಾದಂತೆ ತೋರಲಿಲ್ಲವು ಗ್ರೀಷ್ಮ ಋತುವು ಸನ್ನಿಹಿತವಾಗುತಲಿರುವದರಿಂದ ಆಕಾಲದಲ್ಲಿ ಸ್ವಾಭಾವಿಕವಾಗಿ ಉಂಟಾಗುವ ವಾಂತಿ ಭೇದಿ ಮತ್ತು ಸಿಡುಬು ರೋಗಗಳು ವ್ಯಾಪಿಸಿ ಎಲ್ಲಿ ಅವೂ ಒಂದು ಕಡೆ ಜನ ಕ್ಷಯವನ್ನುಂಟು ಮಾಡುವುದೋ ಯೆಂದು ಹೆದರಬೇಕಾಗಿರುತದೆ. ಇದುವರೆಗೇನೇ ಅನೇಕ ಪ್ರದೇಶಗಳೊಳು ಸದರೀ ರೋಗವು ತಲೆದೋರಿರುವಂತೆ ಆಗಾಗ್ಗೆ ಸರ್ಕಾರದವರು ಪ್ರಜೆಗಳ ಯೆಚ್ಚರಿಕೆಗಾಗಿ ಪ್ರಕಟಿಸುವ ನೋಟೀಸುಗಳ ಮೂಲಕವಾಗ ತಿಳಿಯಬರುವದರಿಂದ ಈ ಸಂವತ್ಸರದಲ್ಲಿ ಪ್ರಜಾನಾಶಕ್ಕೆ ಕಾರಣಗಳು ಬಹುವಾಗಿರುವಂತೆ ನಂಬಬೇಕಾಗಿದೆ.

ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆ.

೧೮೯೦ನೇ ಇಸವಿಯೊಳು, ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆ ಎಂಬ ಅಂಕಿತದೊಡನೆ ಒಂದು ಪರೀಕ್ಷೆಯು ಯೇರ್ಪಾಡಾಗಿ ಸದರೀ ಸಂವತ್ಸರದಲ್ಲೂ, ೧೮೯೫ನೇ ಇಸವಿಯಲ್ಲೂ ನಡೆದ ಎರಡು ಪರೀಕ್ಷೆಗಳಲ್ಲೂ ಅನ್ಯದೇಶಿಯರೇ ಮೊದಲು ಎರಡನೆಯವರಾಗಿ ತೇರ್ಗಡೆಯಂ ಹೊಂದಿ ಪ್ರಾರಂಭದಲ್ಲಿ ಅವರಿಗೆ ನಿಷ್ಕೃಷ್ಟವಾಗಿದ್ದ ಅಧಿಕಾರಗಳಂ ಕೈಗೊಂಡು ಅದು ಮೊದಲು ಪರಡುವರ್ಷಗಳಿಗೊಂದಾವರ್ತಿ ಬಡ್ತಿಯಂ ಹೊಂದುತ ಬರುತಲಿರುವುದು ಪ್ರಸಿದ್ಧ ವಿಷಯವಾಗಿದೆಯಷ್ಟೆ. ೧೮೯೫ನೆಯ ಇಸವಿ ಡಿಸೆಂಬರ್ ತಿಂಗಳಲ್ಲಿ ಪ್ರಾಪ್ತವಾದ ಶ್ರೀಮನ್ಮಹಾರಾಜಾ ಚಾಮರಾಜೇಂದ್ರ ಒಡೆಯರ್ ಬಹದೂರವರ ಅಕಾಲಿಕ ಮರಣದ ದೆಸೆಯಿಂದ, ೧೮೯೬ನೇ ಇಸವಿಯಲ್ಲಿ ಮೂರನೆತಡವೆ ನಡೆಯಬೇಕಾದ ಸದರೀ ಪರೀಕ್ಷೆಯು ನಿಂತು ಹೋಗಿತ್ತು. ಈಚೆಗೆ ಮೂರು ನಾಲ್ಕು ತಿಂಗಳ ಹಿಂದೆ ಸದರೀ ಪರೀಕ್ಷೆಯನ್ನು ಕುರಿತು ಜಿಜ್ಞಾಸೆಯುಂಟಾಗಿ ನಡೆದವಿಚಾರದೊಳು ಸಂಸ್ಥಾನದ ಕೌನ್ಸಿಲ್ ಮೆಂಬರ್‌ಗಳಲ್ಲಿ ಇಬ್ಬರು ಬಲವತ್ತರವಾದ ಕಾರಣಗಳಂ ನಮೂದಿಸಿ ಸದರೀ ಪರೀಕ್ಷೆಯು ಮೈಸೂರು ದೇಶೀಯರಿಗೆ ಮಾತ್ರ ಉದ್ದಿಷ್ಟವಾಗಿರತಕ್ಕದ್ದೆಂದು ಅಭಿಪ್ರಾಯ ಕೊಡಲು ಉಳಿದ ಇಬ್ಬರು ಮೆಂಬರ್‌ಗಳೂ ಪ್ರೆಸಿಡೆಂಟರಾದ ದಿವಾನರೂ ಏಕೀಭವಿಸಿ ಪ್ರಸಕ್ತ ಪರೀಕ್ಷೆಯು ಸ್ವದೇಶಾನ್ಯದೇಶಿಯ್ಯರಿಬ್ಬರಿಗೂ ಉದ್ದಿಷ್ಟವಾಗಿರಬೇಕೆಂದು ಅಭಿಪ್ರಾಯ ಕೊಟ್ಟರಾಗಿ ಅಧಿಕ ಸಂಖ್ಯೆಯುಳ್ಳ ಮೆಂಬರ್‌ಗಳ ನಿರ್ಣಯಕ್ಕೆ ಅನುಸಾರವಾಗಿ ಜಾರಿಯೊಳು ತರಲ್ಪಡಬೇಕೆಂದು ಯೇರ್ಪಟ್ಟಿತು. ಸದರೀ ಪರೀಕ್ಷೆಯೊಳು ತೇರ್ಗಡೆಯಂ ಹೊಂದತಕ್ಕವರ ಪಟ್ಟಿಯಲ್ಲಿ ಪ್ರಥಮದ್ವಿತೀಯ್ಯ ಸ್ಥಾನಗಳಂ ಪಡೆಯತಕ್ಕವರಿಗೆ ಮಾತ್ರವೇ ಉದ್ಯೋಗಗಳು ಕೊಡಲ್ಪಡಬೇಕೆಂದು ನಿಷ್ಕೃಷ್ಟವಾಗಿ ತದ್ವತ್ ಹಿಂದಿನ ಎರಡು ಸಂದರ್ಭಗಳಲ್ಲೂ ಆಚರಣೆಯೊಳು ತರಲ್ಪಟ್ಟಿದ್ದಾಗ್ಯೂ, ಮುಂದಿನ ಪರೀಕ್ಷೆಯಲ್ಲಿ ಮೈಸೂರು ದೇಶೀಯ್ಯರು ಯಾರಾದರು ಮೂರನೆಯವರಾಗಿ ತೇರ್ಗಡೆಯಂ ಹೊಂದಿದ್ದಾಗ್ಯೂ ಅವರಿಗೆ ಸಹ ಮೊದಲು ಎರಡನೆಯವರಿಗೆ ಸಮಾನವಾಗಿ ಅಧಿಕಾರ ಕೊ-

ಪ್ರಡತಕ್ಕದ್ದೆಂದು ಗವರ್ನಮೆಂಟಿನವರು ನಿರ್ಣಯಿಸಿರುವದಲ್ಲದೆ, ಈತರವ ಪರೀಕ್ಷೆಯ ಫಲಿತಾಂಶವಂ ನೋಡಿಕೊಂಡು, ಮುಂದೆಯೂ ಪ್ರತ್ಯೇಕ ಪರೀಕ್ಷೆಯನ್ನು ಯೆರಡು ಸಂವತ್ಸರಗಳಿಗೊಂದಾವರ್ತಿ ನಡೆಸುತ ಬರತಕ್ಕದ್ದೆ ಅಥವಾ ಮನ್ನಾ ಮಾಡತಕ್ಕದ್ದೆ ಎಂಬ ಅಂಶವಂ ಕುರಿತು ಯೋಚಿಸಿ ನಿರ್ಧರಿಸತಕ್ಕದ್ದೆಂಬ ವ್ಯವಸ್ಥೆ ಮಾಡಿರುವಂತೆ ತಿಳಿಯಬರುತದೆ. ಈ ಪರೀಕ್ಷೆಯು ಇದುವರಿಗಿನಂತೆ ಮುಂದಿನ ಜೂಲೈ ತಿಂಗಳಲ್ಲಿ ನಡೆಯಲಾರದೆಂತಲೂ, ಪರಂತು ಸೆಪ್ಟಂಬರಿ ಅಥವಾ ಅಕ್ಟೋಬರ ತಿಂಗಳಲ್ಲಿ ನಡೆಯುವದೆ ತಲೂ ಕೇಳುತ್ತೇವೆ. ಈ ಪರೀಕ್ಷೆಯನ್ನು ಕುರಿತ ನೂತನ ನಿಬಂಧನೆಗಳಾಗಲಿ ಫಲನಿಯ್ಯಗಳಾದ ಗ್ರಂಥಗಳ ಹೆಸರುಗಳಾಗಲಿ ಇದುವರೆಗೆ ಹೊರಗಾಗಲಿಲ್ಲವು ಅಧಮಪಕ್ಷ ನಾಲ್ಕೈದು ತಿಂಗಳ ಕಾಲಕ್ಕೆ ಮುಂಚೆಯಾಗಿಯಾದರು ಪರೀಕ್ಷಾಗ್ರಂಥಗಳು ಪ್ರಕಟಿಸಲ್ಪಟ್ಟರೆ ಅದಕ್ಕಾಗಿ ಓದತಕ್ಕವರಿಗೆ ಸ್ವಲ್ಪ ಅನುಕೂಲವಾಗಿರುವದು ಈ ವಿಷಯಕ್ಕೆ ಗವರ್ನಮೆಂಟಿನವರು ಮುಖ್ಯವಧಾನವಂ ಕೊಡುವರೆಂದು ನಂಬುತ್ತೇವೆ

Occasional Notes.
ನೈಮಿತ್ತಿಕ ವಿಷಯನ್ಯಾಸ.

ಹಿಂದ್ಯದೇಶದ ಕ್ಷಾಮದ ಫಂಡಿಗೆ ಇಂಗ್ಲಂಡ್ ರಾಜ್ಯದಲ್ಲಿ ಕಳೆದ ತಿಂಗಳ ೨೫ನೇ ತಾರೀಖ್ ವರೆಗೆ ಚಂದಾ ಮೂಲಕ ೧,೮೦,೦೦೦ ಪೌಂಡುಗಳು ಜಮಾ ಆಗಿರುತಿವೆ.

ಇಂಡ್ಯದೇಶದ ಕ್ಷಾಮನಿವಾರಕಫಂಡಿಗೆ ರಾಜಾ ಜಂಗ್ ಬಹದೂರ್ಖಾನ್ ಸಿ. ಐ. ಇ, ಯವರು ೬೦,೦೦೦ ರೂಪಾಯಿಗಳು ಕೊಡುವದಾಗಿ ತಿಳಿಸಿರುತ್ತಾರೆ.

ಇಂಡ್ಯಾದೇಶದಲ್ಲಿನ ಕ್ಷಾಮಪೀಡಿತರಾದವರ ಸಹಾಯಾರ್ಥ ಕಲ್ಕತ್ತೆಯೊಳು ಸ್ಥಾಪಿಸಲ್ಪಟ್ಟಿರುವ ಫಂಡಿಗೆ ಸ್ಕಾಟ್ಲೆಂಡ್ ದೇಶದ ಗ್ಲ್ಯಾಸ್ಗೋ ಪಟ್ಟಣದೊಳು ಚಂದಾ ಮೂಲಕ ೬೦,೦೦೦ ಪೌಂಡುಗಳು ಜಮಾ ಆಗಿರುವಂತೆ ತಂತಿ ವರ್ತಮಾನ ಬಂದಿರುತದೆ

ಕಲ್ಕತ್ತಾ ಷಹರಿನಲ್ಲಿನ ಕಕ್ಕಸಗಳನ್ನೆಲ್ಲ ತೆಗೆಯಿಸಿ, ಅದರಲ್ಲಿ ಸಾಂಕ್ರಾಮಿಕ ರೋಗಗಳ ಪ್ರವೇಶಕ್ಕೆ ಅವಕಾಶವಿಲ್ಲದಂತೆ ಪರಿಶುದ್ಧವಾಗಿ ಮಾಡಿಡುವದಕ್ಕಾಗಿ ಅಲ್ಲಿನ ಮ್ಯುನಿಸಿಪಲ್ ಕಮಿಷನರ್‌ಗಳು ಈಚೆಗೆ ಸಭೆ ಸೇರಿ ಆಲೋಚಿಸಿ ೩೦,೦೦೦ ರೂಪಾಯಿಗಳು ಮಂಜೂರ್ಮಾಡಿದರು.

ದಕ್ಷಿಣ ಆರ್ಕಾಟ ಡಿಸ್ಟ್ರಿಕ್ಟಿನ ಸಬ್ ಕಲೆಕ್ಟರವರು ಮ್ಯುನಿಸಿಪಲ್ ಕಂದಾಯ ವಸೂಲೀಬಗ್ಗೆ ಆ ಡಿಸ್ಟ್ರಿಕ್ಟಿಗೆ ಸೇರಿದ ತಿರುವಣ್ಣಾಮಲಿಗೆ ಹೋಗಿದ್ದ ಕಾಲದಲ್ಲಿ ಅಲ್ಲಿನವರು ಕೆಲವರು ಸೇರಿ ಸದರೀ ಅಧಿಕಾರಿಯನ್ನು ಚೆನ್ನಾಗಿ ಪ್ರಹರಿಸಿ ಕಳುಹಿಸಿದರೆಂದು ಅಲ್ಲಿನ ವೃತ್ತಾಂತ ಲೇಖಕರೊಬ್ಬರು ಮದರಾಸ್ ಪತ್ರಿಕೆಯೊಂದಕ್ಕೆ ಬರೆದಿರುತ್ತಾರೆ.

ಇಂಡ್ಯಾ ದೇಶದೊಳು ಈಗ ವ್ಯಾಪಿಸಿರುವ ಮಹಾ ಮಾರಿಕೋಪದ್ರವಕ್ಕೆ ಕಾರಣವನ್ನು ಕಂಡ ಹಿಡಿದು ಅದಕ್ಕೆ ಪ್ರತಿಕ್ರಿಯೆಯಂ ಯೋಚಿಸುವದಕ್ಕಾಗಿ ಆಸ್ಟ್ರಿಯಾ ಸಂಸ್ಥಾನದ ರಾಜಧಾನಿಯಾದ ವ್ಹಿಯೆನಾ ಪಟ್ಟಣದಲ್ಲಿ ಯೂರೋಪುಖಂಡದಲ್ಲಿನ ದೊಡ್ಡ ಸಂಸ್ಥಾನಾದಿ ಪತಿಗಳ ಪ್ರತಿನಿಧಿಗಳು ತ್ವರೆಯಲ್ಲಿ ಸಭೆ ಸೇರುವವರಾಗಿರುತ್ತಾರೆ

ವಿವೇಕಾನಂದ ಸ್ವಾಮಿಗಳವರು ಕಲ್ಕತ್ತೆಗೆ ಹೋಗುವ ಕಾಲದಲ್ಲಿ ಅವರನ್ನು ಉಚಿತ ರೀತಿಯಿಂದ ಬರಮಾಡಿಕೊಳ್ಳುವದಕ್ಕೆ ಆವಶ್ಯಕಗಳಾದ ಯೇರ್ಪಾಡುಗಳಂ ಕುರಿತು ಆಲೋಚಿಸುವದಕ್ಕಾಗಿ ಅಲ್ಲಿನ ದೊಡ್ಡ ಮನುಷ್ಯರನೇಕರು ಈಚೆಗೆ ಸಭೆ ಸೇರಿ ಒಂದು ಕಮಿಟಿಯನ್ನೇರ್ಪಡಿಸಲು ಘನವಂತರಾದ ದರ್ಬಂಗಾ ಮಹಾರಾಜರವರು ಅದರ ಅಗ್ರಾಸನಾಧಿಪತ್ಯವನ್ನಂಗೀಕರಿಸಿದರು.

ಮುಂಬೈ ಪ್ರೆಸಿಡೆನ್ಸಿ ಕ್ಷಾಮನಿವಾರಕ ಫಂಡಿಗೆ ಕಳೆದ ತಿಂಗಳ ೨೦ನೇ ತಾರೀಖ್ ವರೆಗೆ ಚಂದಾ ಮೂಲಕ ಸುಮಾರು ೪೦ ಸಾವಿರ ರೂಪಾಯಿಗಳು ವಸೂಲಾದವು. ಸದರೀ ಪ್ರೆಸಿಡೆನ್ಸಿಯ ಗವರ್ನರ್ ಸಾಹೇಬರವರು ಮೊದಲಾಗಿ ಬಹುಮಂದಿ ಯೂರೋಪಿಯನ್ ಅಧಿಕಾರಿಗಳೂ, ನೇಟಿವ್ ಮತ್ತು ಯೂರೋಪಿಯನ್ ವ್ಯಾಪಾರಿ ದಾರರೂ ಉದಾರವಾಗಿ ಚಂದಾ ಮಾಡಿರುತ್ತಾರೆ. ಇನ್ನು ವಸೂಲಾಗುತ್ತಲೇ ಇದೆ.

ಇಂಡ್ಯದೇಶದ ಕ್ಷಾಮಕ್ಕಾಗಿ ಇದುವರೆಗೆ ಕಲಿಕತ್ತೆಯಲ್ಲಿ ಚಂದಾ ಆಗಿರುವುದು ೩ ೭೭,೦೦೦ ರೂಪಾಯಿಗಳು, ಇದು ಅಲ್ಲದೆ ೧,೦೩ ೦೦೦ ರೂಪಾಯಿಗಳು ಕೊಡುವದಾಗಿ ವಾಗ್ದಾನ ಮಾಡಿರುತ್ತಾರೆ, ಆದರೆ ಇನ್ನು ಕೊಡಲಿಲ್ಲವು. ಇತರಮಾರ್ಗಗಳಿಂದಲೂ ಚಂದಾ ವಸೂಲಾಗಿ ಬರುತಲಿವೆ. ಕಲ್ಕತ್ತೆ ಫಂಡಿಗೆ ಮದರಾಸಿನಲ್ಲಿರುವ ರಾಜಾ ಸರ್ ಸವಳೆ ರಾಮಸ್ವಾಮಿ ಮುದಲಿಯಾರ್ರವರು ೩,೦೦೦ ರೂಪಾಯಿಗಳು ಕಳುಹಿಸಿರುತ್ತಾರೆ.

ರಷ್ಯಾದೇಶದ ರಾಜಧಾನಿಯಾದ ಸೇಂಟಪೀಟರ್ಸಬರ್ಗ್ ಎಂಬ ಪಟ್ಟಣದಲ್ಲಿ ಅಲ್ಲಿನ ಚಕ್ರವರ್ತಿಯವರ ಪ್ರೋತ್ಸಾಹದಲ್ಲಿ ಈಚೆಗೆ ಒಂದು ಸಭೆ ಸೇರಿ ಇಂಡ್ಯ ರಾಜ್ಯದೊಳು ಈಗ ವ್ಯಾಪ್ತವಾಗಿರುವ ದುರ್ಭಿಕ್ಷವನ್ನು ಕುರಿತು ವಿಚಾರನಡೆದು, ಸದರೀ ಸಂಸ್ಥಾನದ ಕೋರಿಗಳಿಂದ ಆ ದೇಶದ ಧಾನ್ಯಗಳು ಇಂಡ್ಯ ದೇಶಕ್ಕೆ ರವಾನಿಸಲ್ಪಡತಕ್ಕದೆಂದು ನಿರ್ಣಯವಾಗಿ ಅದೇರೀತಿ ಶೀಘ್ರದಲ್ಲಿ ಕಳುಹಿಸಲ್ಪಡುವದಾಗಿದೆ ಯೆಂದು ತಿಳಿದು ಸಂತೋಷಿಸುತ್ತೇವೆ.

ಇಂಗ್ಲ್ಯಾಂಡ ರಾಜ್ಯದಲ್ಲಿ ಇಂಡ್ಯ ದೇಶದ ಕ್ಷಾಮಕ್ಕಾಗಿ ಚಂದಾ ಮೂಲಕ ವಸೂಲಾದ ಮೊಬಲಗಿನಲ್ಲಿ ಕೂಡಲೆ ೧,೦೦,೦೦೦ ಪೌಂಡುಗಳು ಕಲ್ಕತ್ತೆಗೆ ರವಾನಿಸಬೇಕೆಂದು ಲಂಡನ್ ಪಟ್ಟಣದ ಲಾರ್ಡ್ ಮೇಯರ್ ಸಾಹೇಬರವರು ನಿಷ್ಕರ್ಷಿಸಿರುವಂತೆ ತಂತಿ ವರ್ತಮಾನ ಬಂದಿರುವದು ಮಾತ್ರವಲ್ಲದೆ ಸದರೀ ಅಧಿಕಾರಿಯು ಚಂದಾ ಮಾಡುವಂತೆ ಇಂಗ್ಲಂಡ್ ಪ್ರಭುತ್ವಕ್ಕೆ ಸೇರಿದ ಇತರ ರಾಜ್ಯಗಳ ಗವರ್ನರುಗಳಿಗೂ ಮೇಯರ್ರುಗಳಿಗೂ ಬರೆಯಬೇಕೆಂದು ಯೋಚಿಸಿರುವಂತೆಯೂ ತಿಳಿಯಬರುತಿದೆ.

ಕಲ್ಕತ್ತೆಯ ಕ್ಷಾಮನಿವಾರಕ ಫಂಡಿನ ಎಗ್ಜಿಕ್ಯೂಟಿವ್ ಕಮಿಟಿಯವರು ಈಚೆಗೆ ಮೀಟಿಂಗ್ ಸೇರಿ, ಅಮೆರಿಕಾ ಖಂಡದ ನ್ಯೂಯಾರ್ಕ್ ಮೊದಲಾದ ದೊಡ್ಡ ಪಟ್ಟಣಗಳ, ಆಸ್ಟ್ರೇಲಿಯಾ ಮತ್ತು ನ್ಯೂಜೀಲೆಂಡ್ ಮೊದಲಾದ ದೇಶಗಳ ಮೇಯರ್‌ಗಳಿಗೆ ಚಂದಾ ವಸೂಲುಮಾಡುವಂತೆ ತಂತಿ ವರ್ತಮಾನ ಕೊಡತಕ್ಕದ್ದೆಂದು ನಿಷ್ಕರ್ಷಿಸಿದ್ದು ಮಾತ್ರವಲ್ಲದೆ, ಕನೆಡಾದೇಶದ ಗವರ್ನರಜನರಲವರಿಗೂ, ಹಾಂಕಾಂಗ್, ಸಿಂಗಪೂರ ಮತ್ತು ಕೇಪಟೌನ್ ಗವರ್ನರುಗಳಿಗೂ ಚಂದಾ ಮೂಲಕ ಸಹಾಯ ಮಾಡಬೇಕೆಂದು ತಂತಿ ವರ್ತಮಾನ ಕೊಟ್ಟಿರುತ್ತಾರೆ.

ಈಗಿನ ಕ್ಷಾಮ ನಿವಾರಣಾರ್ಥ ಕಲ್ಕತ್ತೆಯೊಳು ಸ್ಥಾಪಿಸಲ್ಪಟ್ಟಿರುವ ಫಂಡಿಗೆ ಸೇರಿದಂತೆ ಮದರಾಸಿನಲ್ಲೊಂದು ಕ್ಷಾಮನಿವಾರಕ ಫಂಡನ್ನೇರ್ಪಡಿಸಬೇಕಾದ ಕಾರ್ಯವಂ ಕುರಿತು ಯೋಚಿಸುವದಕ್ಕಾಗಿ ಅಲ್ಲಿನ ಮಹಾಜನರ ಸಭೆಯೊಂದಂ ಸೇರಿಸಬೇಕೆಂದು ಅಲ್ಲಿನ ದೊಡ್ಡ ಮನುಷ್ಯರನೇಕರು ಸೇರಿ ಲೇಖನ ರೂಪವಾಗಿ ತಿಳಿಸಿದ ಅಭಿಪ್ರಾಯವನ್ನನುಸರಿಸಿ ಮದರಾಸ್ ಷರೀಪ್‌ರವರು, ಈ ತಿಂಗಳ ೪ನೇ ತಾರೀಖ್ ಬೃಹಸ್ಪತಿವಾರದದಿನ ಸಾಯಂಕಾಲ ೫ ಘಂಟೆಗೆ ಬ್ಯಾಂಕ್ವೆಟಿಂಗ್ ಹಾಲಿನಲ್ಲಿ ಮದರಾಸ್ ಷಹರ್ ನಿವಾಸಿಗಳು ಸಭೆ ಸೇರಬೇಕೆಂದು ಪ್ರಕಟಿಸಿರುತ್ತಾರೆ. ಈ ಸಭೆಯಲ್ಲಿ ಮದರಾಸ್ ಗವರ್ನರ್ ಸಾಹೇಬರವರು ಅಗ್ರಾಸನವಂ ವಹಿಸುವರು.

ಕಳೆದ ತಿಂಗಳ ೨೮ನೇ ತಾರೀಖಿನ ಸಾಯಂಕಾಲ, ಮದರಾಸಿನ ಹೈಕೋರ್ಟಿಗೆ ಕೇವಲ ಸಮೀಪದಲ್ಲಿರುವ ದೊಡ್ಡ ದೀಪಸ್ತಂಭದ ಬಳಿ ಮದರಾಸ್ ಆರ್ಟಿಲರಿ ವಾಲಂಟಿಯರ್ ಫೌಜಿನವರು ತೋಪುಗಳು ಸುಡುವ ಸಾಧನೆ ಮಾಡುತ್ತಿರುವಲ್ಲಿ ಅದರ ಶಬ್ದದ ವೇಗದಿಂದ ಹೈಕೋರ್ಟ್ ಕಟ್ಟಡದ ಗೋಡೆಗಳಲ್ಲಿ ಬಿರುಕುಗಳು ಬಿಟ್ಟು ಬಿಟ್ಟು ಕೋರ್ಟಿನಲ್ಲಿದ್ದ ಜನರೆಲ್ಲರು ಗಾಬರಿಗೊಂಡು ಹೊರಗೆ ಬಂದುಬಿಟ್ಟರೆಂದು ಮದರಾಸ್ ಪತ್ರಿಕೆಯೊಂದು ತಿಳಿಸುತಿದೆ. ಗವರ್ನಮೆಂಟ್ ಮರಮ್ಮತ್ ಇಲಾಖೆಯವರ ಮೂಲಕ ಕಟ್ಟಲ್ಪಡುವ ಕಟ್ಟಡಗಳ ದಾರ್ಢ್ಯವು ಪ್ರಸಿದ್ಧವಾಗಿ ಯೆಲ್ಲರಿಗೂ ತಿಳಿದ ವಿಷಯವಾಗಿರುವದರಿಂದ ಅದನ್ನು ಕುರಿತ ವಿಚಾರವು ಈ ಸಂದರ್ಭದಲ್ಲಿ ಅನಾವಶ್ಯಕವಾದುದೆಂದು ಯೆಣಿಸುತ್ತೇವೆ.

ಕಲ್ಕತ್ತೆಯಲ್ಲಿ ಪ್ರಕಟಿಸಲ್ಪಡುತಲಿರುವ ಹಿತವಾದಿ ಎಂಬ ಪತ್ರಿಕೆಯಲ್ಲಿ ಬ್ರಹ್ಮ ಸಮಾಜಕ್ಕೆ ಸೇರಿದವರ ಹೆಂಗುಸರ ಧೂಷಣ ತಿರಸ್ಕಾರರೂಪವಾದ ಲೇಖನಗಳು ಆಗಿಂದಾಗ್ಗೆ ಪ್ರಕಟಿಸಲ್ಪಡುತ ಬಂದುದರಿಂದ ಸದರೀ ಸಮಾಜಕ್ಕೆ ಸೇರಿದವರು ಮೇಲೆ ತಿಳಿಸಲ್ಪಟ್ಟ ಪತ್ರಿಕೆಯ ಪ್ರೊಪ್ರೈಟರ್ ಮತ್ತು ಎಡಿಟರವರ್ಮೇಲೆ ಕಲ್ಕತ್ತಾ ಹೈಕೋರ್ಟಿನಲ್ಲಿ ಮಾನನಷ್ಟದಬಗ್ಗೆ ದಾವಾ ಮಾಡಿ ನಡೆದವಿಚಾರಣೆಯಲ್ಲಿ ಜೂರಿಗಳು ಒಂದೆರಡು ಬಾಬ್‌ಗಳಲ್ಲಿ ವಿನಾ ಉಳಿದ ಹದಿನಾರು ಬಾಬ್‌ಗಳಲ್ಲಿ ಪ್ರತಿವಾದಿಯಮೇಲೆ ತಕ್ಸೀರ್ ಹೊರಿಸಿ ಐಕಮತ್ಯವಾಗಿ ಕೊಟ್ಟ ಅಭಿಪ್ರಾಯವನ್ನನುಸರಿಸಿ ಮೆ॥ ಜಸ್ಟಿಸ್ ಜೆಂಕಿನ್ಸ್ ಸಾಹೇಬರವರು ಕಳೆದ ತಿಂಗಳ ೨೭ನೇ ತಾರೀಖ್‌ನಲ್ಲಿ ಅಪರಾಧಿಗೆ ಒಂಭತ್ತುತಿಂಗಳ ಸಾಧಾರಣ ಸಜಾ ವಿಧಿಸಿದರು.

ಮದರಾಸ್ ಗವರ್ನಮೆಂಟ್ ಅಡ್ವೋಕೇಟ್ ಜನರಲವರಾದ ಆನರೆಬಲ್ ಮಿ॥ಸ್ಪ್ರಿಂಗ್ ಬ್ರಾನ್ಸನ್ ಸಾಹೇಬರವರು ಕಾಹಿಲೇ ರಜಾ ಪಡೆಕೊಂಡದರಿಂದ ಅವರ ಸ್ಥಾನದಲ್ಲಿ ಅಲ್ಲಿನ ಹೈಕೋರ್ಟ್ ವಕೀಲರಾದ ಆನರೆಬಲ್ ವಿ ॥ ಭಾಷ್ಯಮಯ್ಯಂಗಾರ್ರವರನ್ನು ಸದರೀ ಗವರ್ನಮೆಂಟಿನವರು ಮೊಕರರ್ಮಾಡಿದರು. ಅದರಮೇಲೆ ಸದರೀ ಕೋರ್ಟ್ ಬ್ಯಾರಿಸ್ಟರ್‌ಗಳೆಲ್ಲರುಸೇರಿ, ಅಡ್ವೋಕೇಟ್ ಜನರಲ್ ಅಧಿಕಾರವು ಯಾವಾಗ್ಗೂ ಬ್ಯಾರಿಸ್ಟರ್‌ಗಳಿಗೇನೆ ಕೊಡಲ್ಪಡುವುದು ವಾಡಿಕೆಯಾಗಿದ್ದಾಗ್ಗ್ಯೂ ಈಗ ಒಬ್ಬ ನೇಟಿವ್ ವಕೀಲರಿಗೆ ಕೊಟ್ಟದ್ದು ಅಕ್ರಮವೆಂದು ಇಂಡ್ಯ ಗವರ್ನಮೆಂಟಿಗೆ ತಂತಿಮೂಲಕ ತಿಳಿಸಿರುತ್ತಾರೆ. ಉಭಯ ಪಕ್ಷದವರ ತರಫೆನಲ್ಲೂ ಅವರವರ ಕಕ್ಷಿಗೆ ಪೋಷಕಗಳಾಗಿರುವ ಕಾರ್ಯಕಾರಣಗಳಂ ನಮೂದಿಸಿ ಇಂಡ್ಯ ಗವರ್ನಮೆಂಟಿಗೆ ಅರ್ಜಿಗಳು ಹೋಗಿರುತವೆ. ಈ ವಿಷಯವು ಹ್ಯಾಗೆ ವ್ಯವಸ್ಥೆಯಂ ಹೊಂದುವುದೋ ಮುಂದೆ ತಿಳಿಯಬೇಕಾದುದಾಗಿದೆ.

ಈಗ ಮುಂಬೈಯಲ್ಲಿ ಸಾಂಕ್ರಾಮಿಕವಾಗಿ ವ್ಯಾಪಿಸಿರುವ ಮಹಾ ಮಾರಿಕೋಪದ್ರವವನ್ನು ಶಾಂತ ಪಡಿಸುವದಕ್ಕೆ ಪುರಾತನಗಳಾದ ಹಿಂದೂ ಶಾಸ್ತ್ರಗಳಲ್ಲಿ ಯಾವ ಪ್ರತಿಕ್ರಿಯೆಗಳು ತಿಳಿಸಲ್ಪಟ್ಟಿವೆಯೊ ಅವುಗಳನ್ನು ಕಂಡು ಹಿಡದು ತದನುಸಾರವಾಗಿ ನಡೆಸಬೇಕಾದ ವಿಷಯವಂ ಕುರಿತು ಆಲೋಚಿಸಿ ನಿರ್ಧರಿಸತಕ್ಕಬಗ್ಗೆ ಆಚೇವಾರದೊಳು ಅಲ್ಲಿನ ಬಾಬುಲಿನಾಥ ದೇವಸ್ಥಾನದಲ್ಲಿ ಹಿಂದೂ ಪಂಡಿತವರ್ಯರ ಸಭೆಯೊಂದು ನಡೆದು, ಅದಕ್ಕೆ ನೇಪಾಳ ಮೊದಲಾದ ದೂರದೇಶಗಳಲ್ಲಿರುವ ಪಂಡಿತಶ್ರೇಷ್ಠರನೇಕರು ಬಂದಿದ್ದರು. ಭಟ್ಟವಾಲ್ಜಿ ಎಂಬ ಪಂಡಿತರು ಸಭಾಸದರಾದ ಪಂಡಿತರನ್ನಧಿಕರಿಸಿ, ಈಗ ಮುಂಬೈಯಲ್ಲಿ ವ್ಯಾಪಿಸಿರುವ ರೋಗನಿವೃತ್ತಿಗೆ ಹಿಂದೂಶಾಸ್ತ್ರಗಳಲ್ಲಿ ಉತ್ತಮಗಳಾದ ಪ್ರತಿಕ್ರಿಯೆಗಳು ಯಾವವು ಹೇಳಲ್ಪಟ್ಟಿರುತವೆಯೊ ಅವಂ ತಿಳಿಸಬೇಕೆಂದು ಕೋರಿ, ರೋಗ ಶಾಂತಿಯಬಗ್ಗೆ ಹಿಡಿಯಬಹುದಾದ ಖರ್ಚುಗಳನ್ನು ತಾವು ವಹಿಸಿಕೊಳ್ಳುವದಾಗಿ ತಿಳಿಸಲು, ನೇಪಾಳ ದೇಶದ ನೀಲಾಂಬರ ಶಾಸ್ತ್ರಿಗಳವರು ಮೂರುದಿನಗಳಕಾಲ ಅನಿಚ್ಛಿನ್ನವಾಗಿ ಸೋನಾಪುರದ ಸ್ಮಶಾನದಲ್ಲೂ ಮುಂಬೈಯಲ್ಲಿರುವ ಇತರ ಎಲ್ಲಾ ಹಿಂದೂ ಸ್ಮಶಾನಗಳಲ್ಲೂ ಶಾಸ್ತ್ರಾನುಸಾರ ತಾವು ಕಾಳಿಕಾದೇವಿಯ ಪೂಜೆಯಂಮಾಡುವದಾಗಿ ಒಪ್ಪಿಕೊಂಡರು ಈರೀತಿ ಶಾಸ್ತ್ರೀಯ್ಯವಾಗಿಯೂ ಅಂತರವಾದ ಭಕ್ತಿಪೂರ್ವಕವಾಗಿಯೂ ಮಾಡುವ ಪ್ರಾರ್ಥನೆಯ ಮೂಲಕ ದೇವಿಯು ಸಂತೃಪ್ತಳಾಗಿ ರೋಗವು ಶಮನವಾದರೆ ಬಾಬುಲಿನಾಥದೇವಸ್ಥಾನದಲ್ಲಿರುವ ದೇವಿಯವರಿಗೆ ಒಂದು ಪ್ರಬಲೋತ್ಸವವಂ ಮಾಡತಕ್ಕದ್ದೆಂದು ಸಭಾಸದರು ನಿರ್ಣಯಿಸಿದಂತೆ ಅಲ್ಲಿನ ವೃತ್ತಾಂತ ಲೇಖಕರೊಬ್ಬರು ಇಂಗ್ಲೀಷಿನೊಂದು ಪತ್ರಿಕೆಗೆ ಬರೆದಿರುತ್ತಾರೆ. ರೋಗನಿವೃತ್ತಿಗೆ ಔಷಧದಂತೆ ದೇವತಾ ಸೇವೆಯೂ ಅವಶ್ಯಕರಣೀಯ್ಯವೆಂದು ಶಾಸ್ತ್ರದಲ್ಲಿ ತಿಳಿಸಲ್ಪಟ್ಟಿರುವದರಿಂದ ಶ್ರದ್ಧಾಳುಗಳಾದ ಹಿಂದುಗಳು ದೇವತಾ ಸೇವೆಯಂ ಮಾಡುವದು ಆವಶ್ಯಕವೆ.

LOCAL AND PROVINCIAL NEWS.
ಒಳದೇಶಮತ್ತುತಾಲ್ಲೂಕುಜಾತಿವೃತ್ತಾಂತಗಳು.

ಇದೆಷ್ಟರೊಳಗಾಗಿ ಮೈಸೂರು ಸರ್ಕಾರದವರು ಕೋಲಾರ, ಶಿವಮೊಗ್ಗೆಗಳಲ್ಲಿ ಒಂದೊಂದು ನಾರ್ಮಲ್ ಸ್ಕೂಲನ್ನು ಸ್ಥಾಪಿಸುವರು.

ಶ್ರೀ ಶೃಂಗೇರಿ ಸ್ವಾಮಿಯವರು ಆರೋಗ್ಯಸ್ಥಿತಿಯಲ್ಲಿದಾರೆ ಅವರಿಗೆ ದೇಹಾಲಸ್ಯವೇನೂ ಇಲ್ಲವೆಂದು ಒಬ್ಬ ಬಾತ್ಮೀದಾರರು ಬರೆದಿರುವರು.

ನಮ್ಮ ಮೊದಲನೇ ರಾಜಪುತ್ರಿಯರನ್ನು ಮೈಸೂರಿನ ಅರಸಿನವರಿಗೆ ಕೊಟ್ಟು ಫೆಬ್ರವರಿ ತಿಂಗಳಲ್ಲಿ ವಿವಾಹನಡೆಯುವಂತೆ ಗೊತ್ತಾಯಿತು. ಲಗ್ನಪತ್ರಿಕೆಗಳು ಈಗ ಪ್ರಿಂಟಾಗುತಲಿವೆ. ಮುಂದಿನ ವಾರದಲ್ಲಿ ಎಲ್ಲಾ ಕಡೆಗೂ ಹೊರಡುವವು-ವ್ಯ. ಪ.

ಇಲ್ಲಿನ ಆಕ್ಟ್ರಾಯ್ ಇಲಾಖಾ ಸೂಪರಿಂಟೆಂಡೆಂಟರಾಗಿದ್ದ ಮಿ॥ ಸಾಮಿದಾಸ್‌ಪಿಳ್ಳೆಯವರು ಮ್ಯುನಿಸಿಪಲ್ ಕಂದಾಯ ಕಲೆಕ್ಟರಾಗಿ ನಿಯಮಿಸಲ್ಪಟ್ಟ ಆಕ್ಟ್ರಾಯ್ ಇಲಾಖೆಗೆ ಬೇರೆಯೊಬ್ಬರು ಮ್ಯಾನೇಜರು ಮೊಕರರಾಗಿ ಅವರು ಕೂಡಲೆ ಸದರೀ ಇಲಾಖಾ ಚಾರ್ಜಂ ವಹಿಸುವರೆಂದು ಕೇಳುತ್ತೇವೆ.

ಈಚೆಗೆ ಯೆರಡು ಮೂರು ತಿಂಗಳ ಹಿಂದೆ ಈ ಪೂರಲ್ಲಿ ಉಪ್ಪಿನ ಶಿವವೀರಪ್ಪ ನೆಂಬವನನ್ನು ಖೂನ್ ಮಾಡಬೇಕೆಂಬ ಉದ್ದೇಶದೊಡನೆ ಅವನನ್ನು ಕಾಲು ಕಡಿದ ಮೊಕದ್ದಮೆಯಲ್ಲಿ ಅಪರಾಧಿಯಾದ ಅಡಿವಪ್ಪ ನೆಂಬವನಿಗೆ ಸುಪೀರಿಯರ್ ಡಿವಿಜನ್ ಸೆಷನ್ಸ್ ಜಡ್ಜಿಯವರು ಯಾವಜ್ಜೀವ ದ್ವೀಪಾಂತರ ವಾಸ ಮಾಡುವ ದಂಡನೆಯಂ ವಿಧಿಸಿದರೆಂದು ಕೇಳುತ್ತೇವೆ.

ಈ ಗವರ್ನಮೆಂಟ್ ಚೀಫ್ ಸೆಕ್ರೆಟರಿಯಾಗಿದ್ದ ಮಿ॥ ಟಿ. ಆನಂದರಾಯರವರು ನೇತ್ರರೋಗಾಧಿಯಿಂದ ಈಗ್ಗೆ ಯೆರಡು ವರ್ಷಗಳ ಮೊದಲು ಫರ್ಲೋ ರಜಾಮೇಲಿದ್ದರಷ್ಟೆ. ಅವರಿಗೆ ಈಗ ಉದ್ಯೋಗ ನಿವೃತ್ತಿಯಾಗಿ ಕಳೆದ ತಿಂಗಳ ೨೬ನೇ ತಾರೀಖಿನಲ್ಲಿ ಗತಿಸಿದ ಮಿ॥ ವಿಜಯೇಂದ್ರ ರಾಯರವರು ನೋಡುತಲಿದ್ದ ಸ್ಟ್ಯಾಟಿಸ್ಟಿಕಲ್ ಇಲಾಖಾ ಚಾರ್ಜಂ ವಹಿಸಿದರೆಂದುತಿಳಿಯಬರುತಿದೆ.

ಕಳೆದ ತಿಂಗಳ ೧೪ನೇ ತಾರೀಖ್‌ನಲ್ಲಿ ಮದರಾಸ್ ಯೂನಿವರ್ಸಿಟಿ ಬಿ. ಎ ಪರೀಕ್ಷೆಗೆ ಪ್ರಾರಂಭವಾಗಿ ಕಳೆದ ಶನಿವಾರದದಿನ ಪೂರ್ತಿಯಾಯಿತು. ಈಪರೀಕ್ಷೆಯ ಬಗ್ಗೆ ಈ ದೇಶದಿಂದಲೂ ಬಹುಮಂದಿ ಉಮೇದ್ವಾರರು ಮದರಾಸಿಗೆ ಹೋಗಿದ್ದು ವಾಪಸ್ ಬಂದರು. ಪ್ರಶ್ನಪತ್ರಗಳು ಕೆಲವುಭಾಗದಲ್ಲಿ ಕಠಿಣವಾಗಿಯೂ ಇನ್ನು ಕೆಲವು ಭಾಗದಲ್ಲಿ ಸುಲಭವಾಗಿಯೂ ಇದ್ದಂತ ತಿಳಿಯಬರುತಿದೆ.

ನಂಜನಗೂಡು, ಮೈಸೂರು, ಫ್ರೆಂಚ್‌ರಾಕ್ಸ್, ಈ ಪ್ರದೇಶಗಳಲ್ಲಿ ವಾಂತಿ ಭೇದಿ ರೋಗವು ವ್ಯಾಪಿಸಿ ಆಗಿಂದಾಗ್ಗೆ ಪ್ರಾಣಹಾನಿಗಳುಂಟಾಗುತಲಿರುವಂತೆ ಆ ಪ್ರಾಂತದ ವೃತ್ತಾಂತಲೇಖಕರೊಬ್ಬರು ಬರೆದಿರುತ್ತಾರೆ. ಈ ತಿಂಗಳ ಮಧ್ಯಭಾಗದಲ್ಲಿ ರಾಜಧಾನಿಯೊಳು ನಡೆಯುವದಾಗಿರುವ ರಾಜಪುತ್ರಿಯವರ ವಿವಾಹೋತ್ಸವಾರ್ಥ ಆಹೂತರಾಗಿಯೂ ಅನಾಹೂತರಾಗಿಯೂ ಅಲ್ಲಿ ಅನೇಕ ಸಹಸ್ರ ಜನರು ಸೇರಬಹುದಾದುದರಿಂದ ಆ ಕಾಲದಲ್ಲಿ ರೋಗ ವ್ಯಾಪಕತೆಗೆ ಸುತರಾಂ ಅವಕಾಶವಿಲ್ಲದಂತೆ ಸ್ಥಳಾಧಿಕಾರಿಗಳು ಆವಶ್ಯಕಗಳಾದ ಯೇರ್ಪಾಡುಗಳಂ ಮಾಡುವರೆಂದು ನಂಬುತ್ತೇವೆ.

ಈಚೆಗೆ ಕೆಲವು ದಿನಗಳ ಹಿಂದೆ ಮುಂಬೈ ಪ್ರಾಂತದಿಂದ ಮಾರ್ವಾಡಿ ಜಾತಿಯ ಮೆಹತಾದ ಮೂವತ್ತು ವರ್ಷಗಳ ವಯಸ್ಸುಳ್ಳವನೊಬ್ಬನು ತನ್ನ ರಖಾಪ್‌ದಾರಳೊಡನೆ ಈ ಪೂರಿಗೆ ಬಂದು ಇಲ್ಲಿನ ಶ್ರೀನಿವಾಸಯ್ಯನವರ ಸತ್ರದ ಮುಂದುಗಡೆ ಇರುವ ಲಿಂಗಣ್ಣನವರ ಧರ್ಮ ಸತ್ರದಲ್ಲಿ ಇಳಿಕೊಂಡು ವ್ಯಾಪಾರಮಾಡುತಲಿದ್ದನು. ಹೀಗಿ

ರುವಲ್ಲಿ ಕಳೆದ ಶನಿವಾರ(ದಿನ)ರಾತ್ರಿ ಸುಮಾರು ಮೂರು ಘಂಟೆಯ ಸಮಯದಲ್ಲಿ ಯಾರೋ ಕೆಲವರು ಸೇರಿ ಸದರೀ ಮಾರ್ವಾಡಿಯವನನ್ನು ಹಗ್ಗದಿಂದ ಕೈಕಾಲುಗಳನ್ನು ಬಿಗಿದು, ಅವನ ಬಾಯಿಗೆ ಬಟ್ಟೆ ತುರಿಕಿ ಅವನನ್ನು ಯೆತ್ತಿಕೊಂಡು ಹೋಗಿ ಧರ್ಮಾಂಬುಧಿ ಕೆರೆಯಲ್ಲಿ ಹಾಕುವದಕ್ಕೆ ಪ್ರಯತ್ನಪಡುವಲ್ಲಿ ಕೆರೆಯ ಕಾವಲುಗಾರನು ನೋಡಿ ಕೂಗಿಕೊಳ್ಳಲು, ಸದರೀ ಪುಂಡು ಜನರು ಅವನನ್ನು ಮ್ಯುನಿಸಿಪಲ್ ಗಾರ್ಡನ್ನಲ್ಲಿ ಹಾಕಿಬಿಟ್ಟು ಪರಾರಿಯಾದರು. ತರುವಾಯ ಪೋಲೀಸಿನವರಿಗೆ ತಿಳಿದು ಅವರು ಹೋಗಿ ನೋಡಿ, ಸದರೀ ಮಾರ್ವಾಡಿಯವನ ಬಾಯಿಗೆ ತುರಿಕಿದ್ದ ಬಟ್ಟೆಯನ್ನು ತೆಗೆದು ಹಾಕಿ ಬಾಯಲ್ಲಿ ನೀರು ಬಿಟ್ಟು ಉಪಚಾರ ಮಾಡಿದ ಮೇಲೆ ಅವನಿಗೆ ಸ್ವಲ್ಪ ಪ್ರಜ್ಞೆ ಬಂದು ಆಸ್ಪತ್ರೆಗೆ ಸಾಗಿಸಿಕೊಂಡು ಹೋದರು. ಈ ವಿಷಯವನ್ನು ಕುರಿತು ಮುಂದೆ ನಡೆಸಲ್ಪಡುವ ಕ್ರಮಗಳನ್ನು ಕ್ರಮೇಣ ತಿಳಿಸುವೆವು.

ಬೆಂಗಳೂರು ಪೇಟೆಯ ಜಿನಿಸಿ ನಿರಖ್ ಪಟ್ಟಿ.

			ರೂ.
ಅವ್ವಲ್ ರಾಗಿ ಖಂಡಿ ೧ಕ್ಕೆ		...	೪೬-೫೪
ದುಯಂ ರಾಗಿ	,,	..	೩೦ ೪೧
ಅವ್ವಲ್ ಅಕ್ಕಿ ಪಲ್ಲ ೧ಕ್ಕೆ		...	೧೪
ದುಯಂ ,,	,,	...	೧೨||
ಹೆಸರು	,,	...	೯||
ಉದ್ದು	,,	..	೧೦||
ಧಾರ್ವಾಡದ ಗೋಧಿ	,,	.	೧೨||
ಜೋಳ	,,	...	೫|
ಕಡ್ಲೆ	,,	..	೧೧
ಕಾರಾಮಣಿ	,,	...	೪||
ಹರಳು ೨೫೦ ಸೇರಿನ ಖಂಡಿ ೧ಕ್ಕೆ		...	೨೦
ಹುಚ್ಚೆಳ್ಳು	,,	..	೨೦
ಹರಳೆಣ್ಣೆ ಮಣ ೧ಕ್ಕೆ		...	೪=
ಕಳ್ಳೆಕಾಯಿ ಎಣ್ಣೆ ಮಣ ೧ಕ್ಕೆ		...	೪||
ಎಳ್ಳೆಣ್ಣೆ	,,	...	೫||
ಮೆಣಸು	,,	...	೪
ಧನಿಯ	,,	...	೧||
ಹುಳಿಹಣ್ಣು	,,	...	೭-೭
ಉಪ್ಪು	,,	.	೧೧
ಬೆಲ್ಲ	,,	.	೧|=
ಮೆಣಸಿನಕಾಯಿ ಮಣ ೪ಕ್ಕೆ		..	೩೦
ಹುರಿ	ರೂ|| ೧ಕ್ಕೆ ಸೇರು	...	೧೫||

THE MYSORE GAZETTE.

ಮೈಸೂರು ಗೆಜೆಟು.

ಗುರುವಾರ, ತಾ|| ೨೮ನೇ ಜನವರಿ ೧೮೯೭.

ಮೈಸೂರ್ ಗವರ್ನಮೆಂಟಿನವರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಜನರಲ್ ಮತ್ತು ರೆವಿನ್ಯು.

ತಾ|| ೨೧ನೇ ಜನವರಿ ೧೮೯೭

ನಂ|| ೪೨೦೧ ಮಿಸ್. ಎಫ್ ೨೬೦-೯೨—ಸಬ್ ಅಸಿಸ್ಟೆಂಟ್ ಸರ್ಜನ್ ಮೆ|| ಜೆ. ಎ. ಕೊಮಲ್ಲೊಯವರು ಕೊಪ್ಪದ ಲೋಕಲ್‌ಫಂಡ್ ಡಿಸ್ಪೆನ್ಸರಿಯಿಂದ ಚಿಕ್ಕಮಗಳೂರು ಸಿವಿಲ್ ಹಾಸ್ಪಿಟಲಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ.

ತಾ|| ೨೧ನೇ ಜನವರಿ ೧೮೯೭.

ನಂ|| ೪೨೫೧-ಜಿ. ೯೫೦—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೭೪ ಮತ್ತು ೨೦೪ನೇ ಆರ್ಟಿಕಲ್‌ಗಳನ್ನನುಸರಿಸಿ, ಎಡತಳ್ಳಿ ಮುನ್ಸಿಫ್ ಮೆ|| ಎಂ. ಎ ನಾರಣಯ್ಯಂಗಾರ್, ಬಿ. ಎ ಬಿ. ಎಲ್ ಯವರು ೧೮೯೭ನೇ ಇಸವಿ ಜನವರಿ ೨೪ನೇ ತಾರೀಖ್ ಮೊದಲು ಅಥವಾ ಅವರದನ್ನು ಉಪಯೋಗಿಸಿಕೊಳ್ಳಬಹುದಾದ ತಾರೀಖಿನಿಂದ ಮೊದಲು, ಅರ್ಧ ತಲಬಿನ ಮೇಲೆ ಹನ್ನೆರಡು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ತಾ|| ೨೬ನೇ ಜನವರಿ ೧೮೯೭.

ನಂ|| ೪೪೪೧—ಮಿಸ್. ಎಫ್ ೪೦೩-೯೨—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೬೨ನೇ ಆರ್ಟಿಕಲ್ ಅನುಸರಿಸಿ, ಅಸಿಸ್ಟೆಂಟ್ ಸರ್ಜನ್ ಮೆ|| ಬಿ. ಡಿ ರಾಘವೇಂದ್ರರಾವ್, ಎಲ್. ಎಂ. ಎಸ್ ಯವರು ಅವರುಪಯೋಗಿಸಿಕೊಳ್ಳಬಹುದಾದ ತಾರೀಖ್ ಮೊದಲು ಹದಿನೈದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ತಾ|| ೨೬ನೇ ಜನವರಿ ೧೮೯೭

ನಂ|| ೪೫೭೦ ಜಿ ೯೬೫.—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೮೪ನೇ ಆರ್ಟಿಕಲ್ ಅನುಸರಿಸಿ, ಶಿವಮೊಗ್ಗ ಡಿಸ್ಟ್ರಿಕ್ಟ್ ಪೋಲೀಸ್ ಇನ್‌ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ್ ಮೆ|| ಆರ್ ಬಿ. ಕೃಷ್ಣಮ್ಮರವರು ೧೮೯೭ನೇ ಇಸವಿ ಫೆಬ್ರವರಿ ೨ನೇ ತಾರೀಖ್ ಮೊದಲು ಅಥವಾ ಅವರದನ್ನುಪಯೋಗಿಸಿಕೊಳ್ಳಬಹುದಾದ ತಾರೀಖ್ ಮೊದಲು, ಎರಡೂವರೆ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ. ಮೆ|| ಆರ್. ಬಿ. ಕೃಷ್ಣಮ್ಮರವರು ರಜಾಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ, ತೀರ್ಥಹಳ್ಳಿ ಅಮಲ್ದಾರ್ ಪೇಷಾ ಹನುಮಂತಯ್ಯನವರು ೨ನೇ ತರಗತಿ ಪೋಲೀಸ್ ಸೂಪರಿಂಟೆಂಡೆಂಟರಾಗಿ ನೇಮಕ ಮಾಡಲ್ಪಟ್ಟು ಕೆಲಸ ನೋಡತಕ್ಕ ಬಗ್ಗೆ ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ ನಿಯಮಿಸಲ್ಪಟ್ಟಿರುತ್ತಾರೆ.

ತಾ|| ೨೭ನೇ ಜನವರಿ ೧೮೯೭

ನಂ|| ೪೫೪೪-ಜಿ ೯೪೭—ಮೈಸೂರು ಚೀಫ್‌ಜಡ್ಜಿಯವರಾದ ಮೆ|| ಜೆ ಡಬ್ಲ್ಯು ದಸ್ತ, ಬ್ಯಾರಿಸ್ಟರ್ ಅಟ್ ಲಾ ಯವರು ಅವರ ಅಪೇಕ್ಷಾನುಸಾರವಾಗಿ, ಮೈಸೂರು ದೇಶದ ಜೆಯಿಲ್‌ಖಾನೆಗಳ ಯೆಕ್ಸ್ ಆಫಿಷಿಯೊ ಇನ್ಸ್‌ಪೆಕ್ಟರ್ ಜನರಲ್ ಅಧಿಕಾರದಿಂದ ವಿಮುಕ್ತಿ ಮಾಡಲ್ಪಟ್ಟು, ಮೈಸೂರು ಗವರ್ನಮೆಂಟ್ ಸೀನಿಯರ್ ಸರ್ಜನ್ ಮತ್ತು ಸಾನಿಟರಿ ಕಮಿಷನರವರಾದ ಲೆಫ್ಟಿನೆಂಟ್ ಕರ್ನಲ್ ಪಿ ಎಚ್. ಬೆನ್ಸನ್, ಎಂ ಬಿ., ಸಿ ಎಂ ಮತ್ತು ಎಂ. ಆರ್. ಸಿ ಎಸ್. ಯವರು ಮೈಸೂರು ದೇಶದ ಜೆಯಿಲ್‌ಖಾನೆಗಳ ಯೆಕ್ಸ್ ಆಫಿಷಿಯೊ ಇನ್ಸ್‌ಪೆಕ್ಟರ್ ಜನರಲ್‌ರಾಗಿ ನೇಮಕ ಮಾಡಲ್ಪಟ್ಟಿರುತ್ತಾರೆ.

ತಾ|| ೨೭ನೇ ಜನವರಿ ೧೮೯೭.

ನಂ|| ೪೫೬೨-ಎಜ್ಯುಕೇಷನಲ್-ಎಫ್ ೨೪-೯೭—ಮೆ|| ಡಿ ಸುಬ್ಬಯ್ಯನವರು ಅರಮನೆಯಲ್ಲಿ ಕೆಲಸ ನೋಡುತ್ತಿರುವಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ೧೮೯೬ನೇ ಇಸವಿ ನವಂಬರ್ ಗುರ್ಕ್ರೀ ತಾರೀಖ್ ಮೊದಲು ವಿದ್ಯಾಭ್ಯಾಸ ಇಲಾಖಾ ಇನ್ಸ್‌ಪೆಕ್ಟರ್‌ಗಳಲ್ಲಿ ಇದರಡಿ ಬರುವ ಸಬ್‌ಸ್ಟಿಟ್ಯೂಟ್ ಬದ್ಲಿಗಳು ಹುಕುಂ ಮಾಡಲ್ಪಟ್ಟಿರುತವೆ.—

೧ ಮೆ|| ಎಂ ಶ್ರೀನಿವಾಸರಾವ್ ಬಿ ಎ ಯವರು ಡೆಪ್ಯುಟಿ ಇನ್ಸ್‌ಪೆಕ್ಟರ್ ೨ನೇ ಗ್ರೇಡಿನಿಂದ ೧ನೇ ಗ್ರೇಡಿಗೆ

೨. ಮೆ|| ಎಂ. ರಾಮಸ್ವಾಮಯ್ಯ, ಬಿ. ಎ ಯವರು ಡೆಪ್ಯುಟಿ ಇನ್ಸ್‌ಪೆಕ್ಟರ್ ೩ನೇ ಗ್ರೇಡಿನಿಂದ ೨ನೇ ಗ್ರೇಡಿಗೆ.

ನಂ|| ೪೫೬೩ ಎಜ್ಯುಕೇಷನಲ್. ಎಫ್. ೨೪-೯೬ ಚಿತ್ರದುರ್ಗ ಡಿಸ್ಟ್ರಿಕ್ಟ್ ಸ್ಕೂಲ್‌ಗಳ ಡೆಪ್ಯುಟಿ ಇನ್ಸ್‌ಪೆಕ್ಟರ್ ಮೈ. ಕೆ ರಂಗಪ್ಪನವರು, ಮೆ|| ಡಿ. ಸುಬ್ಬಯ್ಯನವರಿಗೆ ಬದಲು ಕೋಲಾರ ಡಿಸ್ಟ್ರಿಕ್ಟಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ.

ತಾ|| ೨೭ನೇ ಜನವರಿ ೧೮೯೭

ನಂ|| ೪೫೬೪-ಎಜ್ಯುಕೇಷನಲ್ ಎಫ್. ೨೪-೯೬-ಚಿತ್ರದುರ್ಗದ ಹೈಸ್ಕೂಲ್ ಅಸಿಸ್ಟೆಂಟ್ ಮಾಸ್ಟರ್ ಮೆ|| ಎಂ ವೀರಭದ್ರಯ್ಯನವರು ಸಬ್ ಪ್ರೋಟೆಂ ಡಬ್ಲ್ಯು ಸ್ಕೂಲ್‌ಗಳ ೩ನೇ ಗ್ರೇಡ್ ಸಬ್ ಇನ್ಸ್‌ಪೆಕ್ಟರಾಗಿ ನೇಮಕ ಮಾಡಲ್ಪಟ್ಟು, ಕೋಲಾರಿಗೆ ವರ್ಗ ಮಾಡಲ್ಪಟ್ಟಿರುವ ಮೈ. ಕೆ ರಂಗಪ್ಪನವರಿಗೆ ಬದಲು ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ನಿಯಮಿಸಲ್ಪಟ್ಟಿರುತ್ತಾರೆ.

ತಾ|| ೨೮ನೇ ಜನವರಿ ೧೮೯೭

ನಂ|| ೬೪೬೪-ಎಫ್‌ಟಿ ಎಫ್. ೨೬-೯೫—ಮೈಸೂರು ಡಿಸ್ಟ್ರಿಕ್ಟಿನಲ್ಲಿ ಸಬ್‌ಪ್ರೋಟೆಂ ಸಬ್ ಅಸಿಸ್ಟೆಂಟ್ ಕನ್ಸರ್ವೇಟರಾಗಿ ಕೆಲಸ ನೋಡುತಲಿರುವ ಮೆ ಎನ್ ಶ್ರೀನಿವಾಸರಾಯರವರು ಮತ್ತೊಂದು ಹುಕುಂ ಕೊಡಲ್ಪಡುವತನಕ ಅದೇ ಡಿಸ್ಟ್ರಿಕ್ಟಿನಲ್ಲಿ ಕೆಲಸ ನೋಡುತಲಿರತಕ್ಕದ್ದು

೨. ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಕೆಲಸ ನೋಡುತಲಿರುವ ಫಾರೆಸ್ಟುಗಳ ಆಕ್ಟಿಂಗ್ ಎಕಸ್ಟ್ರಾ ಅಸಿಸ್ಟೆಂಟ್ ಕನ್ಸರ್ವೇಟರಾದ ಮೆ||ಎಂ ಶ್ರೀನಿವಾಸರಾಯರವರು ಮತ್ತೊಂದು ಹುಕುಂ ಕೊಡಲ್ಪಡುವ ತನಕ ಅದೇ ಡಿಸ್ಟ್ರಿಕ್ಟಿನಲ್ಲಿ ಕೆಲಸ ನೋಡುತಲಿರತಕ್ಕದ್ದು

ತಾರೀಖ್ ೨೬ನೇ ಜನವರಿ ೧೮೯೭.

ನಂ|| ೬೫೪೮-ಆರ್ ೨೦೭—ಶಿವಮೊಗ್ಗ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ ಪೋಲೀಸ್ ಇನ್ಸ್‌ಪೆಕ್ಟರಾದ ನಾರಾಯಣರಾಯರವರು, ಪೇಷಾ ಹನುಮಂತಯ್ಯನವರು ಬೇರೇ ಕೆಲಸದ ಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ, ತೀರ್ಥಹಳ್ಳಿ ಅಮಲ್ದಾರ್ ವ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುವಂತೆ ನೇಮಕ ಮಾಡಲ್ಪಟ್ಟಿರುತ್ತಾರೆ.

SUMMARY OF NEWS.

ವೃತ್ತಾಂತ ಸಂಗ್ರಹವು.

ಮದರಾಸ್ ರೈಲ್ವೆ ಕಂಪೆನಿಯವರು ತಮ್ಮ ಇಲಾಖೆಯಲ್ಲಿ ಅಲ್ಪ ಸಂಬಳದವರಿಗೆಲ್ಲ ಕ್ಷಾಮದ ನಿಮಿತ್ತವಾಗಿ ಸ್ವಲ್ಪ ಹೆಚ್ಚು ಪತ್ತೆ ಕೊಡಬೇಕೆಂದು ತೀರ್ಮಾನಿಸಿ, ಅದಕ್ಕೆ ಮದರಾಸ್ ಸರ್ಕಾರದವರ ಅಪ್ಪಣೆಯನ್ನು ಕೇಳುವರು.

ಮುಂಬೈಯಿಂದ ವರ್ತಕರು ಸುಮಾರು ೩೦೦ ಸಂಸಾರದಷ್ಟು ಜನರು ಅಲ್ಲಿನ ಉಪದ್ರವಕ್ಕೆ ಹೆದರಿಕೊಂಡು, ತಮ್ಮ ಆಸ್ತಿಯನ್ನೆಲ್ಲಾ ಮದರಾಸಿಗೆ ತಂದು ಅಲ್ಲಿಯೇ ನಿಂತು ವ್ಯಾಪಾರ ನಡೆಸುತ್ತಿದ್ದಾರೆಂದು ಪೋಲೀಸಿನವರು ಮ್ಯುನಿಸಿಪಾಲಿಟಿಗೆ ರಿಪೋರ್ಟು ಮಾಡಿದಾರೆ.

ಜೊಹಾನ್ಸ್‌ಬರ್ಗಿನಲ್ಲಿ ಕಳೆದ ವಾರ ಆಕಾಶ ಬುಟ್ಟಿಯ ಸಹಾಯದಿಂದ ಸಂಚರಿಸುವದಕ್ಕೆ ಪ್ರಖ್ಯಾತಿ ಪಡೆದಿರುವ ಮೆ|| ವಾರ್ಟಾಸಲ್ ಎಂಬಾತನು ತನ್ನ ಸಾಮರ್ಥ್ಯವನ್ನು ತೋರಿಸಿದನು. ಆಗ್ಗೆ ಅಲ್ಲಿನ ಬ್ರಿಟಿಷ್ ರೆಸಿಡೆಂಟರೂ, ಸರದಾರರೂ, ಸರ್ಕಾರಿ ಮುಖ್ಯಾಧಿಕಾರಿಗಳೂ, ಇತರ ದೊಡ್ಡಮನುಷ್ಯರೂ. ವರ್ತಕರೂ ಆ ನೋಟವನ್ನು ನೋಡುವದಕ್ಕೆ ಸೇರಿದ್ದರು, ಮೆ|| ವಾರ್ಟಾಸಲ್ ಸಾಹೇಬನು ತನ್ನ ಆಕಾಶಬುಟ್ಟಿಯ ಸಹಾಯದಿಂದ ಗಗನಕ್ಕೆ ಹಾರಿ ಭೂಮಿಯಿಂದ ೫,೦೦೦ ಅಡಿ ಎತ್ತರವಾಗಿ ಆಕಾಶದಲ್ಲಿ ಸ್ವಲ್ಪ ಹೊತ್ತು ಇದ್ದು, ತಾನು ಹಾರಿದ ಸ್ಥಳಕ್ಕೆ ಸ್ವಲ್ಪ ದೂರದಲ್ಲಿ ಭೂಮಿಗೆ ಇಳಿದುಬಂದು ನೋಟಗಾರರಿಗೆಲ್ಲ ಸಂತೋಷವನ್ನು ಉಂಟು ಮಾಡಿದನು.

ಮುಂಬೈ ರೋಗವು ಕಡಮೆಯಾಗಲಿಲ್ಲವು. ಅಲ್ಲಿ ಹಡಗು ತುಂಬಿಬಂದು ನಿಂತ ಸಾಮಾನುಗಳನ್ನು ಇಳಿದ ಮೇಲೆ ಇಳಿಸಿಕೊಳ್ಳುವವರಿಲ್ಲ. ಊರೊಳಗಿನ ತಮ್ಮತಮ್ಮ ಅಂಗಡಿಗಳಿಗೆ ಬರುವದಕ್ಕೆ ವ್ಯಾಪಾರಸ್ಥರಿಲ್ಲ, ವಿಲಾಯತಿಗೆ ಸಾಮಾನು ಕಳುಹಿಸಲಿಕ್ಕೆ ಅಪ್ಪಣೆ ಕೊಟ್ಟ ವರ್ತಕರು "ಕಳುಹಿಸಕೂಡದೆಂದು" ಆಗಲೆ ತಾರು ಕಳುಹಿಸಿದರು, ಮುಂಬೈ ಬಿಸಿಯು ಮದರಾಸ್ ಕಲ್ಕತ್ತೆಯಲ್ಲಿನ ಉದ್ಯಮಿಸಿದರೆ ಇಂಗ್ಲಾಂಡಿನಲ್ಲಿ ಅರ್ಧಕ್ಕಿಂತ ಹೆಚ್ಚು ಗಿರಣಿಗಳು ಬಂದು ಮಾಡಲ್ಪಡುವವೆಂದು ಲಂಡನ್ ಪತ್ರಿಕೆಯವರು ಉಸುರುಬಿಡುತ್ತಿವಾರೆ. ಪೂರ್ವ ದಕ್ಷಿಣದಿಕ್ಕಿನ ಎರಡು ರಾಜಧಾನಿಗಳನ್ನೂ ಸ್ವಚ್ಛತೆಯಲ್ಲಿ ಇಡಲಿಕ್ಕೆ ಆರಕ್ಷಣೆ ಕಳೆಯಕೂಡದೆಂದು ಪೈಸ್‌ರಾಯ್ ಯವರು ಹುಕುಂ ಮಾಡಿದ್ದಾರೆ.

ರಾಷ್ಟ್ರೀಯ ಸಭೆಯ ಕೆಲಸಕ್ಕೆ ಆರಂಭವು—ಇದೇ ವರ್ಷದ ಕಡೆಯ ಅಂದರೆ ಡಿಸಂಬರ್ ತಿಂಗಳ ಅಂತ್ಯಭಾಗದಲ್ಲಿ ಈವರ್ಷದ ರಾಷ್ಟ್ರೀಯ ಸಭೆಯು ಅಮರಾವತಿಯಲ್ಲಿ ನಡೆಯುವಂತೆ ಕಲ್ಕತ್ತೆಯ ಸಭೆಯಲ್ಲಿ ಗೊತ್ತು ಮಾಡಲ್ಪಟ್ಟ ಸಂಗತಿಯನ್ನು ವಾಚಕರಿಗೆ ತಿಳಿಸಿರುತ್ತೇವೆ. ಆಪ್ರಕಾರ ಅಲ್ಲಿ ಆ ಸಭೆಯ ಕೆಲಸವು ಎಲ್ಲಾಪೂರ್ವಕವಾಗಿ ನಡೆಯುವಂತೆ ಚಂದಾಯ ಕೂಡಿಸುವ ವಿಷಯದಲ್ಲೂ, ಕಾರ್ಯಕರ್ತರ ಸಂಘ ಏರ್ಪಡಿಸಲೂ, ಇನ್ನೂ ಕೆಲವು ಕಡೆ ಪ್ರಾಂತದ ಜನರ ಮೂರು ಸಭೆಗಳಾದವು, ಸಭೆಯ ಬಗ್ಗೆ ವರ್ಕಿಂಗ್ ಕಮಿಟಿಯು ನೇಮಿಸಲ್ಪಟ್ಟು ಈವರೆಗೆ ೪,೪೬೫ ರೂಪಾಯಿ ವರ್ಗಣಿ ಕೂಡಿಸಲ್ಪಟ್ಟಿತು. ಅವರ ಇಷ್ಟು ತ್ವರೆಯ ಉತ್ಸಾಹದ ಮೇಲಿಂದಲೂ, ಸಾರ್ವಜನಿಕ ಕೆಲಸ ಮಾಡಲು ಹೆಚ್ಚು ದಕ್ಷರಾಗಿರುವಂತೆ ಹಬ್ಬಿದ ಅವರ ಕೀರ್ತಿಯ ಮೇಲಿಂದಲೂ, ವರ್ಹಾಡಪ್ರಾಂತದ ರಾಷ್ಟ್ರೀಯ ಸಭೆಯು ಅಪ್ರತಿಮವಾದೀತೆಂದು ಹೇಳಲಿಕ್ಕೆ ಸಂಶಯ ಬೇಡ.

ಉದಕ ಮಂಡಲದಲ್ಲಿ ಪೀತಾಂಬರೈಯ್ಯರ್ ಎಂಬಾತನು ಅಲ್ಲಿನ ಯೂರೋಪಿಯನ್ ಮತ್ತು, ನೇಟಿವ್ ದೊಡ್ಡಮನುಷ್ಯರಿಗೆಲ್ಲ ತನ್ನ ಯಕ್ಷಿಣೀ ವಿದ್ಯೆಯನ್ನು ತೋರಿಸಿ, ಎಲ್ಲರಲ್ಲಿಯೂ ಆಶ್ಚರ್ಯವನ್ನು ಉಂಟುಮಾಡಿದನು. ಅವನ ಮಾಡಿದ ಸಾಹಸಗಳೆಲ್ಲ ಆಶ್ಚರ್ಯಕರವಾಗಿದ್ದರೂ ಅವುಗಳಲ್ಲಿ ಅತ್ಯಂತ ವಿಚಿತ್ರವಾದದ್ದನ್ನು ಮಾತ್ರ ಇಲ್ಲಿ ವಿವರಿಸುವೆವು ಅವನು ತನ್ನ ಶಿಷ್ಯನಾದ ಒಬ್ಬ ಹುಡುಗನ ಬಾಯಿಗೆ ೨೦—೩೦ ಗಜಗಳಷ್ಟು ಧಾರವಿದ್ದ ಬಾರು ಉಂಡೆಯನ್ನು ಹಾಕಿ, ಅವನು ಅದನ್ನು ನುಂಗಿದ ತರುವಾಯ, ಆದೇ ಹುಡುಗನ ಬಲಿಭಾಗದಿಂದ ಆ ದಾರವನ್ನು ಎಳೆದಾಗ ಉದ್ದಕ್ಕೆ ಎಳೆದನು ಪಕ್ಕದಲ್ಲಿ ಆ ಹುಡುಗನಿಗೆ ಒಂದು ರಂಧ್ರ ಕಂಡಿತು. ದಾರ ಎಳೆದವಾಗೆಲ್ಲ ಉನ್ಮಕಲ್ಲ ಆ ರಂಧ್ರದಿಂದ ರಕ್ತವು ಹರಿಯುತ್ತಿತ್ತು. ಕಡೆಯಲ್ಲಿ ಆ ಹುಡುಗನಿಗೆ ಸ್ವಲ್ಪವೂ ನೋವಾಗಲಿಲ್ಲ. ಮತ್ತು ಕೂಡಲೆ ಆಗಾಯ ಮುಚ್ಚಿಕೊಂಡಿತು, ಅಲ್ಲಿ ಘಾಯವಾದ ಗುರುತೂ ಕಾಣಿಸಲಿಲ್ಲವು.

ವಿವೇಕಾನಂದ ಸ್ವಾಮಿಗಳವರು ಕಳೆದ ತಿಂಗಳ ಮಧ್ಯಭಾಗದಲ್ಲಿ ಸಿಲೋನ್ ದ್ವೀಪಕ್ಕೆ ಬರುವರೆಂದು ಹಿಂದಿನ ವಾರದ ಪತ್ರಿಕೆಯ ಮೂಲಕ ತಿಳಿಸಿದ್ದೆವಷ್ಟೆ. ಸದರೀ ಪರಮಹಂಸರು ನಿಶ್ಚಯಿಸಿದ್ದವಾಗಿದ್ದ ಕಾಲಕ್ಕೆ ಸರಿಯಾಗಿ ಅಲ್ಲಿಗೆ ಬಂದು ಸೇರಿದರು ಈ ತಿಂಗಳ ೨೪ನೇ ತಾರೀಖಿನಲ್ಲಿ ಸದರೀ ಸ್ವಾಮಿಗಳವರು ಜಾಫ್ನಾ ಪಟ್ಟಣದ ಪ್ರಜೆಗಳ ಪ್ರಾರ್ಥನೆಯ ಮೇಲೆ ಅಲ್ಲಿಗೆ ದಯಮಾಡಿದರು ಅಲ್ಲಿನ ಹಿಂದೂ ದೊಡ್ಡಮನುಷ್ಯರನೇಕರು ಸೇರಿ ಪಟ್ಟಣಕ್ಕೆ ಹತ್ತು ಮೈಲುಗಳ ದೂರದವರೆಗೆ ಮುಂದಕ್ಕೆ ಹೋಗಿ ಸ್ವಾಮಿಗಳವರನ್ನು ಉಚಿತ ಮರ್ಯಾದೆಯೊಡನೆ ಊರಿಗೆ ಕರೆದುಕೊಂಡುಬಂದರು. ಅದೇದಿನ ರಾತ್ರಿ ಊರಿಗೆ ಎರಡು ಮೈಲುಗಳ ದೂರದಲ್ಲಿರುವ ಹಿಂದೂ ಕಾಲೇಜಿಗೆ ಉತ್ಸವ ಪೂರ್ವಕ ಕರೆದುಕೊಂಡು ಹೋದರು. ಅದಕ್ಕಾಗಿ ಮಾರ್ಗಗಳೆಲ್ಲವು ತೋರಣ ಕದಳೀಸ್ತಂಭಗಳಿಂದಲೂ ಸಾಲುದೀಪಗಳಿಂದಲೂ ಅಲಂಕರಿಸಲ್ಪಟ್ಟಿದ್ದವು. ಸ್ವಾಮಿಗಳವರ ಮೆರವಣಿಗೆಯೊಡನೆ ಸುಮಾರು ಹದಿನೈದು ಸಾವಿರ ಮಂದಿ ಜನರುಗಳು ಹೋದರು. ಕಾಲೇಜ್ ಬಳಿ ಹಾಕಿದ್ದ ಚಪ್ಪರದಲ್ಲಿ ಕಟ್ಟಲ್ಪಟ್ಟಿದ್ದ ಉನ್ನತಾಸನದಲ್ಲಿ ಸ್ವಾಮಿಗಳವರನ್ನು ಕುಳ್ಳಿರಿಸಿ ಪುಷ್ಪ ಪ್ರದಾನಂ ಮಾಡಿ ಸ್ವಾಗತ ಪೂರ್ವಕ ಒಂದು ವಿಜ್ಞಾಪನಾ ಪತ್ರಿಕೆಯ ನ್ನೊಪ್ಪಿಸಿದರು. ಅನಂತರ ಸ್ವಾಮಿಗಳವರು ಆತಿಸಂಭ್ರಮದ ವಾದವಾಕ್ಯರಿಂದ ಪ್ರತ್ಯುತ್ತರ ಕೊಟ್ಟ ಮೇಲೆ ಜನರು ಅಲ್ಲಿಂದ ರಾಮನಾಥಕ್ಕೆ ಪ್ರಯಾಣಮಾಡಿದರು.

NOTICE.

VIDYASARA SANGRAHA.

A TREATISE ON THE PRINCIPLES OF HINDU MEDICINE

Price, including Postage Rs. 5-0-0

ವೈದ್ಯಸಾರಸಂಗ್ರಹ.

ಇದು ಚರಕ, ಬಾಹಟ, ಸುಶ್ರುತ, ಶಾರ್ಙ್ಗಧರಾದ್ಯನೇಕ ಪೂರ್ವಗ್ರಂಥಗಳ ಸಂಗ್ರಹ ರೂಪವಾಗಿರುತದೆ.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಹಾಸಲ್ ಸಹಿತ ಪ್ರತಿ ೧ಕ್ಕೆ ೫—೦—೦

ಬೇಕಾದವರು ಬೆಂಗಳೂರು ಕರ್ನಾಟಕ ಪ್ರೆಸ್ ಪ್ರೊಪ್ರೈಟರವರಿಗೆ ಬರೆದು ತರಿಸಿಕೊಳ್ಳಬಹುದು.

ಈ ಕಂಪೆನಿಯು ಸನ್ ೧೮೯೩ನೇ ಇಸವಿಯಲ್ಲಿ ಸ್ಥಾಪಿತವಾಯಿತು

ಜನ್ಮದ ಲಾಭವು.

ಸುಪ್ರಸಿದ್ಧ

ವಜ್ರಾಂಗ ಖಜೂರವು.

ಬಲಾರೋಗ್ಯ ಪುಷ್ಟಿಗಳನ್ನು ಬೆಳೆಸತಕ್ಕ ಉತ್ತಮ ಔಷಧಿಯು.

ಅತ್ಯಾಶ್ಚರ್ಯಕರವಾದ ವಿಧಗಳಿಂದ ತಯಾರಿಸಿದ ಈ ಉತ್ತಮ ಗುಳಿಗೆಗಳು ಕೊಂಕಣಪ್ರಾಂತದ ಅನೇಕ ವನಸ್ಪತಿಗಳ ಸಾರಗಳ ಪುಟಗಳನ್ನು ಕೊಟ್ಟು, ತುಪ್ಪದೊಳಗೆ ಮಾಗಿಸಿ, ಒಳ್ಳೇ ಜೇನಿನ ತರಹದಿಯ ಸಕ್ಕರೆಯ ಪಾಕದಲ್ಲಿ ಸಿದ್ಧ ಮಾಡಿರುತ್ತೇವೆ ಈ ಉತ್ತಮೌಷಧಗಳು ಮಹೌಷಧಗಳಾಗಿದ್ದು, ಒಳ್ಳೇ ರುಚಿಯುಳ್ಳವುಗಳು. ಇವುಗಳ ಸೇವನೆಯಿಂದ ಕಫ, ವಾತ, ಪಿತ್ತ ಈ ತ್ರಿದೋಷಗಳಿಂದಾಗತಕ್ಕ ಯಾವತ್ತು ಬಗೆಯ ವ್ಯಾಧಿಗಳು ಹೋಗುತ್ತವೆ. ೬೦ ವರ್ಷಗಳ ವಯಸ್ಸಿನ ಮುದುಕರ ಶರೀರವಾದರೂ ಹರೆಯದ ಗಂಡಸರಂತೆ ಪ್ರಜ್ವಲಿತವಾಗುತ್ತದೆ ಜನನೇಂದ್ರಿಯದಲ್ಲಿ ಬಲ ಹುಟ್ಟಿ ನಪುಂಸಕತ್ವವು ಇಲ್ಲದಾಗುತ್ತದೆ ಲಘ್ವಿಯ ಮುಂಚೆ ಅಥವಾ ಹಿಂದೆ ಪರಿದುಹೋಗುವ ಧಾತು ನಿಲ್ಲುತ್ತದೆ ಸ್ವಪ್ನಾವಸ್ಥೆಯಾಗುವದಿಲ್ಲ ವೀರ್ಯವು ಬೆಳೆದು ಚೆನ್ನಾಗಿ ಗಟ್ಟಿಯಾಗುತ್ತದೆ ಪರಮಾ ಹಾಗೂ ಉಷ್ಣಸಂಬಂಧಿಕ ರೋಗಗಳ ಕಸರ ಇಲ್ಲದಾಗಿ ಧಾತು ಪುಷ್ಟವಾಗುತ್ತದೆ. ಮೂರು ಹೊತ್ತಿಂದರೂ ಅನ್ನ ಪಚನವಾಗಿ ಒಳ್ಳೇ ಹಸಿವೆಯಾಗುತ್ತದೆ. ಹೋಗುವದೊಂದೆ ತಡ ಕೂಡಲೇ ಸ್ಪಷ್ಟ ಶೌಚವಾಗುತ್ತದೆ ಕ್ಷಯ, ಉದರ, ದಮ್ಮು ಈ ರೋಗಗಳು ನಾಶ ಹೊಂದುತ್ತವೆ. ಹೊಸ ರೋಗ ಇದ್ದಲ್ಲಿ ೧೧ ದಿವಸಗಳ ವರೆಗೆ ಸಾಲುವ ಒಂದೇ ದಬ್ಬಿಯಿಂದ ಗುಣಹೊಂದುತ್ತದೆ. ಮತ್ತು ಹಳೆಯದಲ್ಲಿ ೪೦ ದಿನಗಳ ಮೇಲೆ ಗುಣ ಬಂದೀತು ೧೧ ದಿನಗಳ ವರಿಗೆ ಸಾಲತಕ್ಕ ೧ ದಬ್ಬಿಗೆ ೧-೮-೦ ರೂ|| ಒಂದೇಸಾರ್ತಿಗೆ ೪ ದಬ್ಬಿಗಳು ತೆಗೆದುಕೊಳ್ಳತಕ್ಕವರಿಗೆ ಒಂದು ದಬ್ಬಿಯು ಉಚಿತವಾಗಿ ಸಿಕ್ಕೀತು. ಈ ಉತ್ತಮೌಷಧಿಯಿಂದ ಹೆಂಗಸರು ಸತೇಜರಾಗುತ್ತಾರೆ. ಕರಗಿನ ಹಾಗೂ ಬಾಣಂತಿ ಬೇನೆಗಳು ವಾಸಿಯಾಗುತ್ತವೆ. ಎಲ್ಲರನ್ನೂ ಸರಿಯಾಗಿ ಬೇನೆ ಇಲ್ಲದವರನ್ನಾಗಿಮಾಡಿ ಬಲಾರೋಗ್ಯ ಪುಷ್ಟಿಗಳನ್ನು ಬೆಳೆಸುತ್ತವೆ. ಸಾಹೇಬ್ ಜನರಲ್ಲಿ ಇಂಥ ದಬ್ಬಿಗಳು ಖರ್ಚಾಗುತ್ತವೆ ಈ ಔಷಧವು ಈ ಕಂಪೆನಿಯಹೊರ್ತು ಬೇರೆ ಸ್ಥಳದಲ್ಲಿ ಆಗುವದಿಲ್ಲ ಯಾವತ್ತು ದೇಶಗಳಲ್ಲಿಯೂ ವೈದ್ಯಶಾಲೆಗಳಿಗಾಗಿ ಕಳುಹಿಸಲ್ಪಡುತ್ತದೆ. ಖರೆದು ಬಂದು ಕೂಡಲೆ ಈ ಕಂಪೆನಿಯು ಬೇಕಾದವರಿಗೆ ಈ ದಬ್ಬಿಗಳು ಕಳುಹಿಸಿಕೊಟ್ಟೀತು. ಅಂಚೆಯ ದಾಗಹಾ ವ್ಯಾಲ್ಯೂ ಪೆಯಬಲ್ ಮಾಡ್ದು ಬೇರೆ ಕೊಡಬೇಕು (ಉಚಿತ ದಬ್ಬಿ ಸಹ ೪ ದಬ್ಬಿಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬಾದಲ್ಲಿ ಎಲ್ಲಾ ಖರ್ಚಿನ ಹಾಕಿ ರವಾನಿಸುವೆವು, ಹೀಗೆ ಕಳುಹಿಸಿದರೆ ಟಪ್ಪಾಲ್ ಖರ್ಚು ಕಡಮೆ ಬೀಳುವದು.)

ಮೇಲ್ವಿಳಾಸ—ಪಿ. ಎಲ್. ಎ. ಬ್ರದರ್ಸ್ ಮತ್ತು ಕಂಪೆನಿ,

ಸ್ನಸ್ಥ ಇಂಗ್ಲಿಷ್ ಬಜ್ಯಾರ್ ಆಫೀಸ್, ಡಿಸ್ಟ್ರಿಕ್ಟ್ ಬೆಳಗಾಂವ.

ಪೋಸ್ಟ್—ಬೆಳಗಾಂವ. Post BELGAUM.

BANGALORE.—Printed and Published at the KARNATAKA PRESS, No. 40, HOSPITAL ROAD, CITY,—1897.

THE

Karnataka Prakasika.

ಪ್ರಕಟನೆಯ ದರ { ಮೊದಲನೆಯದಕ್ಕೆ ಪಙ್ಕ್ತಿ ಒಂದಕ್ಕೆ 0 2 0 / ಎರಡನೆಯ ವಳ ಪಙ್ಕ್ತಿ ಒಂದಕ್ಕೆ 0 1 0
[ಕ್ರಿ.ಶ. ಪರಾ-ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟು ಸಲ ಪ್ರಕಟನೆ ಪ್ರಾಯಿಸುವವೋ ಪಙ್ಕ್ತಿ ಒಂದಕ್ಕೆ ... ಲೆಕ್ಕ ಮಾಡಲ್ಪಡುವುದು]

ಕರ್ಣಾಟಕ ಪ್ರಕಾಶಿಕಾ.

Published Every Monday Morning

ಚಂದಾದಾರರಿಗೆ,—ಸ್ಥಳದವರಿಗೆ | ಗ್ರಾಮಸ್ಥರಿಗೆ, ಪೋಸ್ಟೇಜ್ ಸಹ.
ಸಾಲ 1 ಕ್ಕೆ ... 3 0 0	ಸಾಲ 1 ಕ್ಕೆ ... 4 0 0
6 ತಿಂಗಳಿಗೆ ... 2 0 0	6 ತಿಂಗಳಿಗೆ ... 2 8 0
3 ತಿಂಗಳಿಗೆ ... 1 1 0	3 ತಿಂಗಳಿಗೆ ... 1 8 0

ಪ್ರಕಾಮವಿವಿಧಪ್ರವೃತ್ತ್ಯಪಗತಮಾರ್ಗ್ಗ ಕರ್ಣಾಟಕಪ್ರಕಾಶನಪರಾ ... ||

VOL. XXIV. BANGALORE:—MONDAY, FEBRUARY 8, 1897 No. 6.

Select Telegrams.

London, 30th January.—In the House of Commons last night, the Hon'ble Sir John Brodrick moved the authorisation of a loan of £5,398,000 for barracks, camps, and rifle ranges, fortifying Portchester, Lough Swilly, Falmouth and Scilly, and connecting London with forts, also to purchase sixty square miles round Salisbury plain for military manœuvres. The motion was adopted.

Berlin, 31st January.—Count Muravieff has arrived here and has had interviews with Prince Hohenlohe and Baron Marschall.

London, 1st Feb.—The situation in Crete has become more serious. There is an alarming migration of Mahomedans into Heraklion and the Christians in the vicinity have occupied strategic positions, and are prepared to oppose the influx.

London, 3rd February.—France has protested to the Khedive against the British advancing the cost of the Soudan expedition, the previous consent of the *Caisse de la dette* being requisite.

London, 4th February.—The House of Commons, last night, passed the second reading of the Women's Franchise Bill by 228 against 157.

Russia has joined France in objecting to the British advancing the cost of the Soudan expedition without the consent of Caisse debt.

At the meeting of the Indian Expenses Commission yesterday, Lord Northbrook gave evidence. His lordship said that he was of opinion that India was unfairly treated in the matter of the charges for the Abyssinian War, the Egyptian War of 1882 and the despatch of troops to Soudan in 1885, and that redress ought now to be made to the Indian Government, who should in future decide whether direct or substantial Indian interests were involved.

THE

Karnataka Prakasika.

MONDAY, FEBRUARY 8, 1897.

INDIANS IN SOUTH AFRICA.

OUR readers have no doubt heard of the ill-treatment the Indians have met with in South Africa, more especially in Natal. A good number of people from this country have gone to Natal to settle, some under an agreement as coolies, others as traders and artisans. The people of the Colony declare that no more must come there, and that the landing of independent Indians is much to be deprecated. They will allow coolies to come, but not others, and even coolies must not leave India in large numbers. The people have made up their minds to ill-treat the Indians, and they are doing it whenever they have an occasion. A short time ago a ship arrived at Durban, the capital of the Colony, with a number of Indian emigrants on board, but for sometime they were not allowed to land. It was only after the law officers promised to bring in a Bill on the subject that the Indians were allowed to go on shore. It may be remembered that Mr. Gandhi, who was lately in India giving an account of the bad treatment of his brethren in Natal, was one of the passengers. When the mob were allowed to land he was mobbed, and had to be conducted to his house by the police. This was very disgraceful on the part of the people of Durban, and reflects infinite discredit on them. The people of India are British subjects, the same as the people of Natal, consequently they have a perfect right to settle in any part of the empire they think proper. The men of Natal ought to be made to understand this. A reference was made to the Secretary of State for the Colonies, but he says that he cannot interfere. His reply to the gentlemen who waited on him was anything but satisfactory. Mr. Chamberlain intimated that as the Colonies were virtually independent—so far as their home affairs are concerned—he cannot take the matter up. This is very unsatisfactory, and something must be done to remedy matters. Mr. Chamberlain was pretty well right when he said that the Colonists could do what they liked so far as home affairs were concerned. The fault was committed when this liberty was given to them years ago. A clause ought to have been inserted in each constitution given, to the effect that any subject of Her Majesty was at liberty to settle in the Colony to which that constitution was given. If they would not accept this condition the boon should have been withheld. Now it will be difficult to bring about the change required, but it will have to be done. The feeling of the English people will not allow their fellow subjects to be maltreated for ever. They will say that a stop must be put to it, and they will see that such is done. The Colonists complain that the Indians do not spend all their money where they reside, but send a good portion of it to their friends whom they have left behind. This is only what might be expected; this is only what other people do under the same circumstances. The British who come to India send money home, and we fail to see why the Indians who settle in South Africa should not follow their example. Let the former set an example to the latter; let them spend all the money they earn in the country and then a complaint might well be made that the settlers in Natal did not spend all they gained in the country where they earned it. It is acknowledged that the Indians have done much to increase the wealth of the Colony, the greater part of the trade is in their hands. The way these people are treated at the present time is a disgrace not only to the Colonists but also to the people and the Government of England, and a stop should be put to this at once.

THE PLAGUE IN BOMBAY.

THE plague has now assumed large dimensions in Bombay, and the death rate does not appear to decrease, rather is it on the rise. Although a large number of people have left the place the number of deaths is greater than it was some weeks ago. Precautions have been taken, but those are not sufficient to arrest the terrible disease. In one day there were ninety-seven deaths, an alarming number, and if the plague continues much longer the population of the capital of the western Presidency will be considerably reduced. It is also sad to note that the plague is spreading to other places. It has reached Kurrachee, as we mentioned last week, and a number of deaths have occurred in Poona. The authorities in Calcutta are taking strong precautions to keep it out of that place, and it is to be hoped they will succeed. In fact, every town in the country is making preparations against the disease though some of these are not the best that could be devised. In the Civil and Military Station the rats are to be killed as some think they breed the plague. This may be the case, but we scarcely think it is. We think the drains have more to do with the matter, and if these were made clean there would be less fear of the disease entering a place. One good regulation has been made. The people who come from Bombay or any other plague stricken place will not be allowed to enter the City or the Civil and Military Station till it has been clearly ascertained that they are free from the disease. It is to be hoped that the precautions taken will be sufficient to keep the plague out of Bangalore.

News and Notes

A cyclone has practically demolished the town of Nevertire in New South Wales. Men were blown long distances, and the casualties are numerous.

Professor Gokhale, Secretary of the Deccan Sabha, goes to England early in March to give evidence before Lord Welby's Commission on famine especially.

THE Shah will set out for Europe in the spring and will in the first instance go to St. Petersburg by way of Baku, Patoum and Odessa, and then visit the chief cities in Europe.

ONE hundred and ninety eight candidates have passed the B. L. Examination in Calcutta. Some of our local lawyers got frightened even if a sixth of this number came out successful here.

IT is said that the revenue of the "Daily Telegraph" from advertisements has grown from 7s 6d (at which figure it stood on the day when the paper was acquired from its original owner) to upwards of £500 a day.

THE descendants of the Great Mogul at Delhi receive a pension of Rs 4 a month from the Sirkar, and in these famine times it is impossible to keep body and soul together on this pittance the present head of the family—Shahzada Mirza Suraya Jah—has sent a representation to the Local Government praying for an increase to the allowance.

WE are pleased to learn that the Hon'ble Mr. Sankaran Nair, Mr. K. Narrain Rao, High Court Vakils and Mr. Venkatasamy Naidu of Messrs Binny and Co., have been enrolled as members of the Madras Artillery Volunteers. Much credit is due to the Hon'ble Mr. G. L. Chambers who strongly supported their admission.

IN the memorandum from Home Department No. 81—111, dated the 22nd January 1897 it was stated that the Ports of Bombay and Karachi will be closed to pilgrim traffic from the 1st February, and that the Port of Calcutta will remain open to pilgrim traffic. The Port of Madras will likewise be open to the arrival and departure of pilgrim ships.

THE establishment of a Municipality in the town of Chingleput against the wishes of its inhabitants and regardless of their inability to pay the taxes, is bearing fruit. We understand that from the 27th December last the merchants and shopkeepers have closed their shops, and all trade is suspended. People have not been able to purchase the necessaries of life for the last four days, and nothing has hitherto persuaded the bazaarmen to open their shops.

THE cradle in which the Grand Duchess Olga, daughter of the Emperor of Russia, sleeps every night, is a gift of the Dowager Empress of Russia, and is described by Russian newspapers as the costliest object which the fancy of a fairy tale writer might conceive. The little bed is inlaid with mother of pearl and precious gems. Above the pillow of the cradle, a golden crown, richly studded with brilliant jewels is suspended, held up by two figures of angels and wrought in solid gold. The cradle costs an enormous sum of money.

A VERY sad case of the death of a whole family through the famine is given in *Native Opinion*. The father seeing no way of getting food for his starving wife and children, determined to sell his wife, and asked a farmer to buy her. The farmer, after hearing his sad story said, "I will not buy your wife, but I will give you five rupees to get food with." Of this money, the man spent a rupee on food and another rupee on opium, and returning to his house gave a meal to his family and then dosed them all with opium. This soon became known, and they were taken to the hospital, but nothing could be done to save them and they all died. Many similar cases are said to have occurred.

ON the slopes of the Himalayas, the native women have a most curious plan of disposing of their babies and keeping them quiet during the greater part of the day. Before the mothers set out for the fields in the morning they wrap their babies in swaddling bands, leaving nothing but their little faces exposed. Then the babies are taken and laid under a ledge of rock from which water is falling, and by means of a bamboo the water is made to drip gently on each baby's forehead. The effect of the dripping water is most soothing, and soon the little ones are all asleep and remain motionless till taken up by their mothers on their return from their work, when they are carried off to be unwrapped, dried, and fed.

IN a recently-published work, Mr Leslie Stephen, the famous living English philosopher and man of letters, writes as follows:—"A religion really to affect the vulgar must be a superstition; to satisfy the thoughtful, it must be a philosophy." These are wise words, and the phenomenon of religion in India testify to their wisdom. The religion of the scholar and the sage can never be the same as the religion of the masses of the people. The attempt to achieve a Procrustean uniformity in religion is foredoomed to failure. In India religion is essentially many sided. It has a philosophical side for the thinker and the scholar, and a popular side for the masses of the people. Here lies the strength of Hinduism.

Hindu society in Benares and elsewhere is being very much exercised by the report of a charge of attempt to commit rape brought against Swami Krishnanand, a revered and well-known Hindoo Sanyasi residing in that city. The case will be shortly called on for hearing in the Court of the Magistrate of Benares, the accused being in the meantime enlarged on a bail of Rs 10,000. The complainant is a Bengalee girl aged about 10

years. Swami Krishnanand is also a Bengalee; his name before he adopted the present one was Krishna Prasanno Sen, and he was for sometime a clerk in one of the Railway offices at Jamalpore. Having given up service and renounced the world, he took up the life of a Hindoo missionary. He has lectured in almost every principal town of Northern India and being gifted with a certain kind of eloquence, his lectures have always created much enthusiasm among the orthodox Hindus. He is also the author of several pamphlets and books on religious subjects and his commentary of the *Gita* has won for him the admiration of all readers of that marvellous book. Latterly he resided principally in Benares and assumed the title of Swami. It is no wonder that such a man should cause profound sensation in Hindu society.—*The Behar Times*

Local and Provincial.

CHOLERA.—We are sorry to hear that this disease has broken out at Mysore. It is to be feared this will interfere with the wedding festivities.

WILD ANIMALS.—A lumpsum provision will be made in the current year's budget for the purchase of rare wild animals for the Lal Bagh.

ENGINEERING CLASSES.—We learn that the Government contemplate opening Engineering Classes in connection with the Industrial School at Mysore.

THE RESIDENT.—Will return to Bangalore about the 27th of this month. He will remain at Mysore for some days on his way back from Coorg to attend the wedding of the First Princess.

SANCTION.—We hear that the Agent of the S. M. Railway Company has obtained the sanction of the Government to about five lakhs of rupees for lighting the whole of the Railway carriages with gas.

A SENSATIONAL CASE.—One Narainamurti has lodged a complaint of assault against his mother-in-law and two other relations of hers. The case comes for hearing for the second time on the 9th instant before Mr. M. Shama Rau, M. A., Assistant Commissioner. It has created some sensation, because the wife of the complainant happens to be a talented young girl by name Sitamma who was formerly a student of the Maharani's Girl School, Mysore; and the present case is the result of certain disputes between the parties as regards the consummation of marriage between the complainant and his wife.—M. H.

SCHOLARSHIPS TO LEARN ACCOUNT KEEPING.—The Mysore Government is contemplating to send three young men, probably graduates, to learn Account Keeping, to the Account Departments of Madras, Bombay, and Calcutta. The young men will be given a scholarship of from Rs 100 to Rs 150. They will be selected from among those who are already in the Service of the State. Their term of apprenticeship is to be for a year. After their return they will be employed in the Account Department, Mysore, with a starting pay of Rs 250 to raise to Rs 500. This is a step in the right direction. We hope the Government of India will approve of the recommendation of the Government of Mysore in this matter, and we further hope that in the selection of young men the Government will favour indigenous talent, and will not throw open these appointments to foreigners in the service.

MR. KRISHNASWAMI NAICK.—This young man, a Poligar stipendiary, who has gone to England to compete for the Bar, we are sorry to learn, is dangerously ill in London. He is a scholarship student of the Mysore Government. We learn that a fellow student of Mr. Krishnaswami, who is also a stipendiary, wrote to Mr. Subbaroya Iyer, the Comptroller of Mysore, that Mr. Krishnaswami was dangerously ill, and that Messrs. Coutts & Co., London, should be advised to give passage money to Mr. Krishnaswami to enable him to leave for India. The Comptroller we learn has complied with the request. Mr. Krishnaswami will be here soon. We wish him a speedy recovery.—E. M.

EXAMINATION RESULTS

The following are the successful numbers in the Matriculation Examination held in December last.

BANGALORE.—930, 932, 936, 937, 938, 942, 943*, 944, 947, 948, 949, 954, 956, 959, 965, 968, 981*, 991, 992, 995, 997, 1005, 1010, 1011*, 1012, 1018, 1019*, 1024, 1025, 1027, 1029, 1032, 1037, 1041*, 1044, 1051, 1055, 1056, 1063, 1064, 1067, 1068, 1070*, 1071, 1073, 1074, 1079, 1080, 1082, 1083*, 1088, 1090, 1091, 1092, 1093, 1094, 1103, 1108, 1109*, 1113, 1114, 1121*, 1134*, 1143, 1151, 1154*, 1157, 1159, 1165, 1168, 1169, 1170, 1179, 1181, 1184, 1186, 1189, 1191*, 1193*, 1195*, 1196, 1197, 1198*, 1200, 1202, 1206*, 1207, 1227, 1232, 1241, 1246, 1254, 1259, 1261, 1264, 1264

HASSAN.—2163, 2165*, 2166, 2172

MYSORE.—3168, 3171, 3173, 3174, 3176, 3181, 3183, 3186, 3188, 3190, 3191, 3191, 3195, 3197, 3199, 3201, 3208, 3209, 3215, 3217, 3218, 3226, 3229*, 3230, 3231, 3232*, 3235, 3239, 3240, 3243, 3244, 3248, 3250, 3251, 3254, 3255, 3267, 3268, 3269, 3270

SHIMOGA.—3879, 3880, 3884, 3889, 3890, 3891, 3895, 3896, 3897, 3898*, 3900

* The numbers marked are first class

The Mysore Gazette

Bangalore Thursday, 4th February 1897

NOTIFICATIONS BY THE GOVERNMENT OF MYSORE

GENERAL AND REVENUE

No 8535—*Mis 1035, dated 27th Jan. 97*

Mr. T. Ananda Row, B. A., who returned to duty from leave on the forenoon of the 2nd January 1897 will be employed in the direction and compilation of Agricultural and other Statistics in Mysore.

No 8621—*J 993, dated 28th January 1897*

Under Section 12 of the Code of Criminal Procedure, N. Gopaliengar, Amildar of the Dodballapur taluk, Bangalore district, is appointed a Magistrate of the 2nd Class.

No 8623—J 995, dated 28th January 97

Under Section 12 of the Code of Criminal Procedure, C. Rajagopalacharlu, Amildar of the Nelamangala taluk, Bangalore district, is appointed a Magistrate of the 2nd Class.

No 8625—*J 997, dated, 28th January 1897*

Under Section 12 of the Code of Criminal Procedure, M. A. Tirumalachar, Amildar of the Magadi taluk, Bangalore district, is appointed a Magistrate of the 2nd Class.

No. 8709—*J 1027, dated 2nd February 97*

The following appointments and transfer of Special Sub-Registrars are ordered:—

1. K. Doraswami Iyengar, B. A., 3rd Grade Sub-Registrar from Magadi to Hoskote.
2. H. Dasappayyachar, B. A., Probationary Sub-Registrar, attached to the Inspector General's office to be 3rd Grade Sub-Registrar of Dodballapur.
3. M. T. Sampatkumara Char, B. A., to be 3rd Grade Sub-Registrar of Magadi vice K. Doraswami Iyengar, B. A. transferred to Hoskote.
4. A. Tiruvengadam Mudaliar, record-keeper, Inspector General's office, to be 3rd Grade Sub-Registrar of Kolar.
5. Mysore Raghavendra Row, 2nd Assistant, Government Central Observatory to be 3rd Grade Sub-Registrar of Hunsur.

No 6573—*Ft. F 31 96, dated 23rd Jan. 97*

Mr. G. E. Ricketts, Assistant Conservator of Forests, is posted for special duty in the Hassan District.

No 6651—*R. F 29 96, dated 26th January 97*

Under Article 188 of the Mysore Service Regulations, Mr. J. R. Burrow, Chief Assistant to the Comptroller, Mysore Government, is granted privilege leave of absence for one month with effect from the 4th January 1897.

No 6662—Ft. F 62 95, dated 2nd Feb. 97

Under Article 188 of the Mysore Service Regulations Mr. M. G. Rama Row, Officiating Assistant Conservator of Forests, Kakankote range, Mysore district, is granted privilege leave of absence for one month and fifteen days in extension of the fifteen days privilege leave sanctioned in Government Notification No. 5609—Ft. F 62 95 dated 19th December 1896.

PUBLIC WORKS

No 101—578, dated 29th January 1897

Sub-Assistant Engineer Mr. S. N. Doggappayya, attached to the Mysore Division, has been granted privilege leave of absence for twenty-six days from the 23rd December 1896.

ಕರ್ಣಾಟಕ ಪ್ರಕಾಶಿಕಾ.

೧೮೯೭ನೇ ಇಸವಿ ಫೆಬ್ರುವರಿ ತಾ|| ೮ನೇ ಸೋಮವಾರ.

ಪಶುಪ್ರಾಣಾಪಹಾರಕ ಕ್ರಿಮಿಗಳು.

ಮುಂಬೈ ರಾಜಧಾನಿಯಲ್ಲೂ, ಅದಕ್ಕೆ ಸೇರಿದ ಆಸ್‌ಪಾಸ್ ಪ್ರಾಂತಗಳಲ್ಲೂ ಮಹಾಮಾರೀ ಜಾಡ್ಯವು ಪ್ರಬಲಿಸಿ ಅದರಿಂದ ಇದುವರೆಗೆ ಹತ್ತು ಸಾವಿರ ಜನಗಳ ತನಕ ನಷ್ಟರಾದರಲ್ಲದೆ ಅನೇಕರು ಪ್ರಾಣಭೀತಿಯಿಂದಲೆ ಅನ್ಯದೇಶಗಳಿಗೆ ಹೊರಟು ಹೋಗುತಲಿದ್ದಾರೆ. ಈಗ ಮುಂಬೈ ಶಹರ್ ನಿವಾಸಿಗಳಿಗೆ ಪ್ರಾಪ್ತವಾಗಿರುವ ದುರ್ದಶೆಯು ಬಹಳ ಶೋಚನೀಯವಾಗಿದೆ. ಇವರಿಗೆ ವ್ಯಾಧಿಯನ್ನು ಪ್ರತ್ಯುಪದ್ರವವಾಯಿತು. ಪರಸ್ಥಳಗಳು ಅನಾಶ್ರಿತಗಳಾದವು. ಪ್ರಾಣರಕ್ಷಣಾರ್ಥ ಯೆಲ್ಲಿಗಾದರು ಹೋಗುವದಕ್ಕೆ ಸಹ ಅವಕಾಶವು ಕಡಮೆ ಮಾಡಲ್ಪಟ್ಟು ಅಲ್ಲಿಯಲ್ಲಿ ಬಿಗಾದ ಪಟ್ಟಿಗೆ ನಿರ್ಬಂಧಗಳುಂಟು ಮಾಡಲ್ಪಡುತಲಿವೆ. ಐದಕ್ಕನುಗುಣವಾಗಿ ಪ್ಲಾಗುದೇವತೆಯು ತನ್ನ ಸರ್ದಾಯ ಪ್ರಕಾರ ಪ್ರಸನ್ನಳಾಗಿರುವದರಿಂದ ಕನ್ನಡಿಲಿಯ ಪ್ರಜೆಗಳೆಂದು ಕಡೆ ಪ್ರಾಣಗಳುಕಳೆದುಕೊಳ್ಳುತಲಿದ್ದಾರೆ. ಸುಗ್ರಾಮ್ಯೇನ ಜನರ ದುರ್ದಶೆ ಈ ರೀತಿಯಾಗಿರುವಾಗ್ಯ, ಇನ್ನು ಪಶುಗಳಿಗೆ ಒದಗಿದ ಸಾಂಕ್ರಾಮಿಕ ಮರಣಕಾಲವು ಪ್ರಸ್ತಾವಿಸುವಂತೆ ಕಾಣುತದೆ. ಫ್ರಾನ್ಸ್ ಮತ್ತು ಅವರ ಆಸ್ಪಾಸ್ ಪ್ರದೇಶಗಳಲ್ಲಿ ಹಿಂದುವಿದ ಪಶುಗಳನ್ನು ಕ್ವಾರೆನ್‌ಟೈನ್‌ ವ್ಯವಸ್ಥೆಯಂತೆ ದೇಶವಿಡುವ ಯಾವನಿದವಾಗಿಯೋ ಈ ದೇಶಕ್ಕೆ ಬಂದು ಪ್ರಬಲಿಸಿ ಅದು ಪಶುಗಳನ್ನು ನಾಶ ಮಾಡುತಲಿರುವಂತೆ ತಿಳಿಯಬರುತಿದೆ. ಈಗ ಪಶುಗಳು ಮೇಲೆ ಕಂಡ ಸ್ಥಳಗಳಲ್ಲಿ ಸೇಕಡ ಯೆಂಬತ್ತರ ಪ್ರಕಾರ ಸಾಯುತಲಿರುವಂತೆ ವ್ಯಕ್ತವಾಗುತಿದೆ. ಹೀಗೆಯೇ ದಾಮಾಷಿಯ ಪ್ರಕಾರ ನಷ್ಟ ಸಂಖ್ಯೆಯು ಹೆಚ್ಚುಬಹುದೆಂಬ ಭೀತಿಯು ಜನರಿಗೆ ಅಧಿಕವಾಗಿದೆ. ವರ್ಷಾಭಾವದಿಂದ ಪಶುಗಳಿಗೆ ಮೇವೂ ನೀರೂ ದುರ್ಲಭಗಳಾಗಿ ಅವು ಮನುಷ್ಯರಂತೆ ಒಂದು ಕಡೆ ಮಹಾದುರ್ದಶೆಯನ್ನನುಭವಿಸುತಲಿರುವಲ್ಲಿ ಅವುಗಳ ಪ್ರಾಣಾಪಹರಣಕ್ಕೆ ಮೇಲೆ ಕಂಡ ರಕ್ತಶೋಷಕವಾದ ಹುಳುವು ಮಹಾಮಾರಿಯಂತೇರ್ಪಟ್ಟಿರುತಿದೆ. ಪಶು ನಷ್ಟವು ಹೆಚ್ಚುವುದೆಲ್ಲ ಮುಂದೆ ಹಾಲು, ಮೊಸರು ತುಪ್ಪ ಈ ಮೂರು ಪ್ರಧಾನ ಪದಾರ್ಥಗಳು ದೊರೆಯುವದಾವು ಬಹಳ ಪ್ರಯಾಸಕರವಾಗಿರುವುದು. ಪ್ರಸಕ್ತ ಕ್ರಿಮಿಗಳಲ್ಲಿ ಸ್ತ್ರೀಜಾತಿ ಹುಳುವು ಅತಿಶೀಘ್ರ ಕಾಲದಲ್ಲಿ ದೊಡ್ಡದಾಗಿ ಒಂದೊಂದು ೨,೦೦೦ ಮೊಟ್ಟೆಗಳಿಟ್ಟು ಅವು ಒಂದು ತಿಂಗಳ ಕಾಲದೊಳಗಾಗಿ ಒಡೆದು ಹುಳಗಳಾಗಿ ಬೆಳೆದು ಮಿಡತೆಗಳ ತಂಡದಂತೆ ಗುಂಪು ಗುಂಪಾಗಿ ದನಗಳ ಮುಂದೆಯಲ್ಲಿ ಪ್ರವೇಶಿಸಿ ಬಹಳ ಆಶ್ಚರ್ಯಕರವಾದ ರೀತಿಯಲ್ಲಿ ಜಲಗದಂತೆ ರಕ್ತಪಾನವು ಮಾಡಿ ಕಡೆಗೆ ಅವುಗಳ ಪ್ರಾಣಗಳಂ ಅಪಹರಿಸುತಿವೆ. ಇದಕ್ಕೆ ಇದುವರೆಗೆ ಯಾವವಿಧ ಚಿಕಿತ್ಸೆಯೂ ವ್ಯಕ್ತವಾಗದೆ ಚಿಂತೆಯು ಅಧಿಕವಾಗಿರುವಂತ ತಿಳಿಯಬರುತಿದೆ. ಮುಂದೆ ಇದರ ಪರ್ಯವಸಾನವನ್ನರಿಯಬೇಕಾಗಿರುತಿದೆ.

ಮಹಾಮಾರಿಕೋಶದ್ರವವು.

ಈ ಇಂಡ್ಯ ದೇಶೀಯರ ಪ್ರಾಣಹಾನಿಗೆ ಮುಖ್ಯಕಾರಣವಾಗಿ ಕುದಿರಿರುವ ಮಹಾಮಾರೀ ಜಾಡ್ಯದ ಪ್ರಾಬಲ್ಯವನ್ನೂ, ತತ್ಪ್ರಯುಕ್ತವಾದ ಪ್ರಜಾ ಕ್ಷೋಭೆಯನ್ನೂ, ಅದು ಅಪ್ರತೀಕಾರವಾಗಿ ಪರಿಣಮಿಸಿರುವದನ್ನೂ ವೃತ್ತಾಂತ ಪತ್ರಿಕೆಗಳ ಮೂಲಕ ಅರಿತು ಯೂರೋಪ್ ಮೊದಲಾದ ಅನ್ಯದೇಶೀಯರು ಭೀತರಾಗಿ ತಮ್ಮ ದೇಶಕ್ಕೆ ಸದರೀ ಸಾಂಕ್ರಾಮಿಕೋಪದ್ರವವು ಯೆಲ್ಲಿ ಪರಂಪರೆಯಾಗಿ ವ್ಯಾಪಿಸಿ ತಮಗೆ ಪ್ರಾಣಹಾನಿಯನ್ನುಂಟುಮಾಡುವುದೋ ಎಂಬ ಶಂಕೆಯೊಡನೆ ಆಯಾ ರಾಜ್ಯಗಳಿಗೆ ಇಂಡ್ಯ ದೇಶದಿಂದ ಸಮುದ್ರ ಮಾರ್ಗವಾಗಿ ರವಾನೆಗುವ ಪದಾರ್ಥಗಳನ್ನು ನಿಲ್ಲಿಸಿ ವ್ಯಾಪಾರವನ್ನು ಸದ್ಯಃ ಮಿತಪಡಿಸಬೇಕೆಂದು ನಿಷ್ಕರ್ಷಿಸಿರುವಂತೆ ತಿಳಿಯಬರುತಿದೆ. ಈ ತೀರ್ಮಾನವು ಪರ್ಶಿಯಾ ಸಂಘದಲ್ಲಿ ವಿಶೇಷ ಅಸಮಾಧಾನವನ್ನುಂಟುಮಾಡಿರುತಿದೆ. ಈ ವಿಷಯವಂ ಕುರಿತು ಮುಂಬೈಯಲ್ಲಿರುವ ಚೇಂಬರ್ ಆಫ್ ಕಾಮರ್ಸ್ ಯೆಂಬ ವರ್ತಕ ಸಂಘದವರು ಅಲ್ಲಿನ ಯೂರೋಪಿಯನ್ ಕಾನ್ಸಲ್‌ಗಳಿಗೆ ಅರ್ಜಿ ಬರೆದುಕೊಂಡದಕ್ಕೆ ಅವರಿಗೆ ತಿಳಿಸಲ್ಪಟ್ಟಿರುವದೇನೆಂದರೆ—ಫ್ರಾನ್ಸ್ ದೇಶಕ್ಕೆ ಗೋಣಿ ಚೀಲಗಳು, ಹಳೆಬಟ್ಟೆಗಳು, ತುಪ್ಪಟಗಳು, ಎಲುಬುಗಳು, ಚರ್ಮಗಳು ವಗೈರೆ ಪದಾರ್ಥಗಳ ರಫ್ತು ತಡೆ ಮಾಡಲ್ಪಟ್ಟಿರುತಿದೆ. ಪರಂತು ಅಂಳೆ ಮುತ್ತು ದಿನ್ನಗಳ ರಫ್ತಿನ ವಿಷಯದಲ್ಲಿ ಸದ್ಯಃ ಯಾವವಿಧ ನಿರ್ಬಂಧವೂ ಉಂಟುಮಾಡಲ್ಪಟ್ಟಿರುವದಿಲ್ಲವು. ಇಟಲಿ ಸರ್ಕಾರದವರು ಸಹ ಜವಸ್ಟ್ ತುಪ್ಪಟ, ಕುದುರೆ ಕೂದಲು, ಕೊಂಬುಗಳು ವಗೈರೆ ಪದಾರ್ಥಗಳ ಆಮದನ್ನು ಬಂದುಮಾಡಿರುತ್ತಾರೆ. ಆರಳೆಯೂ ತೆಗೆದುಕೊಳ್ಳಲ್ಪಡುತಲಿದೆ. ಡಚ್ ಸರ್ಕಾರದವರು ಸದ್ಯಃ ಮುಂಬೈ ಪ್ರಾಂತದಿಂದ ಹೋಗುವಂಥವರಿಗೆ, ಕ್ವಾರೆಂಟೈನ್ ಬಂದರೆ ಸಾಂಕ್ರಾಮಿಕ ರೋಗ ಪೀಡಿತರಾದವರಿಗೋಸ್ಕರ ಪ್ರತ್ಯೇಕ ಚಿಕಿತ್ಸಾ ಸ್ಥಾನವಂ ಕಲ್ಪಿಸಲಿಲ್ಲವು. ಡಚ್ ಕಾನ್ಸಲಿರವರು ಯಾವ ನಿಷೇಧ ಪದಾರ್ಥಗಳನ್ನು ತಿಳಿಸಲ್ಪಟ್ಟಿಲ್ಲವು. ಅಲ್ಲಿನವರು ಕಾಯುತ್ತಾರೆ ಜರ್ಮನಿ, ಜರ್ಮನಿ, ಆಸ್ಟ್ರಿಯಾ ಈ ಸಂಸ್ಥಾನದವರು ಪದಾರ್ಥಗಳ ಆಮದು ರಫ್ತುಗಳ ವಿಷಯದಲ್ಲಿ ಇನ್ನೂ ನಿಬಂಧನೆ ಮಾಡಲಿಲ್ಲವು. ಬೆಲ್ಜಿಯಂ ಸರ್ಕಾರದವರು ಮೇಲೆ ತಿಳಿಸಲ್ಪಟ್ಟ ಪದಾರ್ಥಗಳನ್ನು ತಡೆ ಮಾಡಿರುತ್ತಾರೆ. ಮಾಲ್ಟಾ, ಆಸ್ಟ್ರೇಲಿಯಾ, ಕಾಮಿರಾನ್ ನೇಟಾಲ ಈ ಪ್ರದೇಶಗಳಲ್ಲಿ ಬರುವ ಜನರನ್ನು ಜಿಜಮಾಯಿಸಿ ಬಗ್ಗೆ ಪ್ರತ್ಯೇಕಸ್ಥಾನಗಳನ್ನೇರ್ಪಡಿಸಿ ಉಚಿತವಾದ ಏರ್ಪಾಡುಗಳಂ ಮಾಡಿರುತ್ತಾರೆ. ಮುಖ್ಯವಾಗಿ ಅನ್ಯದೇಶೀಯರೆಲ್ಲರು ಆತ್ಮರಕ್ಷಣಾರ್ಥ ಸಾಧ್ಯಗಳಾದ ಅನೇಕೋಪಾಯಗಳಂ ಮಾಡಿ ಜಾಗರೂಕರಾಗಿದಾರೆ.

ಪಂಜಾಬ್ ದೇಶದ ನ್ಯಾಯವಿಧಾಯಕಸಭಾನಿರ್ಮಾಣವು.

ಕಳೆದ ಹನ್ನೆರಡುಸಂವತ್ಸರಗಳ ಕಾಲದಮೊದಲು ಪ್ರತಿಸಂವತ್ಸರದಲ್ಲೂ ನೇರತಕ್ಕ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸಭೆಯವರಿಂದ ವಿಚಾರಪೂರ್ವಕ ನಿರ್ಧರಿಸಲ್ಪಟ್ಟ ಅನೇಕ ವಿಷಯಗಳಲ್ಲಿ ಪಂಜಾಬ ದೇಶಕ್ಕೆ ಪ್ರತ್ಯೇಕ ನ್ಯಾಯ ವಿಧಾಯಕ ಸಭಾ ನಿರ್ಮಾಣವು ಒಂದೆನಿಸಿ ಅದರ ಆವಶ್ಯಕತೆಯಂ ಕುರಿತು ಪ್ರಮುಖರಾದವರನೇಕರು ವಿಶೇಷತಃ ಇದುವರೆಗೆ ವಿಚಾರಮಾಡಿ ತೀರ್ಮಾನಿಸಿರುವದು ಪ್ರಸಿದ್ಧ ವಿಷಯವಷ್ಟೆ. ಇದರ ಉಪಯುಕ್ತತೆಯಂ ಕುರಿತಾಗಲಿ, ಪದೇ ಪದೆ ಸಭೆಯವರು ಮಾಡಿದ ಪ್ರಾರ್ಥನೆಯನ್ನಾಗಲಿ ಇಂಡ್ಯ ಗವರ್ನಮೆಂಟಿನವರಾದವರು, ಅಥವಾ ಸ್ಟೇಟ್ ಸೆಕ್ರೆಟರಿಯವರಾದರು ಇದುವರೆಗೆ ಪರಿಭಾವಿಸದೆ ಇದ್ದರೂ ಸದರೀ ವಿಷಯದೊಳು ಪ್ರತಿನಿಧಿಗಳ ಪ್ರಾರ್ಥನೆಯು ಪ್ರಬಲವಾದುದರಿಂದ ಅದಂ ಗವರ್ನಮೆಂಟಿನವರು ನಿರ್ವಾಹವಿಲ್ಲದೆ ಗೌರವಿಸಬೇಕಾದವರಾದರು. ಇಂಡ್ಯಗವರ್ನಮೆಂಟಿನ ಹೋಂ ಇಲಾಖಾ ಸೆಕ್ರೆಟರಿಯವರು ಪಂಜಾಬ್ ಗವರ್ನಮೆಂಟಿನ ಚೀಫ್ ಸೆಕ್ರೆಟರಿಯವರಿಗೆ ಇದರಡಿ ಕಂಡ ಒಂದು ಲೆಟರ್ ಬರೆದಿರುತ್ತಾರಾಗಿ ಅದು ಸಕಲ ಜನಗಳ ತಿಳುವಳಿಕೆಯಬಗ್ಗೆ ಛಾಪಿ ಪ್ರಕಟಿಸಲ್ಪಟ್ಟಿರುತಿದೇನೆಂದರೆ—

"ಸ್ಟೇಟ್ ಸೆಕ್ರೆಟರಿಯವರು, ಇಂಡ್ಯ ಗವರ್ನಮೆಂಟಿನವರೊಡನೆ ಪರ್ಯಾಲೋಚಿಸಿ, ಪಂಜಾಬ್ ಗವರ್ನಮೆಂಟಿಗೆ ಸ್ಥಾನೀಯ ನ್ಯಾಯವಿಧಾಯಕ ಸಭೆಯನ್ನು, ತತ್ಸಂಬಂಧವಾದ ಕಾನೂನಿನಲ್ಲಿ ವಿಧಾಯಕವಾಗಿರುವಂತೆ, ಸ್ಥಾಪಿಸತಕ್ಕದ್ದೆಂದು ಆಜ್ಞಾಪಿಸಿರುತ್ತಾರಲ್ಲದೆ, ಸದರೀ ಏರ್ಪಾಡು ಯಾವ ಲಾಗಾಯಿತು ವ್ಯವಹರಣೆಯಲ್ಲಿ ತರಲ್ಪಡತಕ್ಕದ್ದೆಂದು, ಆ ಕಾರಣವನ್ನು ಯುಕ್ತಾನುಸಾರ ನಿಷ್ಕರ್ಷಿಸುವ ಸ್ವಾತಂತ್ರ್ಯವನ್ನು ಇಂಡ್ಯ ಗವರ್ನಮೆಂಟಿನವರಿಗೊಪ್ಪಿಸಿರುತ್ತಾರೆ—೧೮೯೨ನೇ ಇಸವಿಯ ಇಂಡಿಯನ್ ಕೌನ್ಸಿಲ್ ಆಕ್ಟಿನಲ್ಲಿ ವಿಧಿಸಲ್ಪಟ್ಟಿರುವ ಪ್ರಕಾರ ನ್ಯಾಯವಿಧಾಯಕ ಸಭೆಯ ಮೆಂಬರ್‌ಗಳು ಪ್ರಾರಂಭದಲ್ಲಿ ಗವರ್ನಮೆಂಟಿನವರು ಜುನಾವಣೆಯಮೇಲೆ ನಿಯಮಿಸಲ್ಪಡಬೇಕೆಂತಲೂ,

೧೮೯೨ನೇ ಇಸವಿಯ ಸದರೀ ತಿದ್ದುವಡಿ ಆಕ್ಟಿನ ದೆಸೆಯಿಂದ ಉಂಟು ಮಾಡಲ್ಪಟ್ಟಿರುವ ಮೆಂಬರ್‌ಗಳ ಜಾಸ್ತೀ ಅಧಿಕಾರಗಳು, ಮುಂದಿನ ಅವರ ಅನುಭವವು ವ್ಯಕ್ತವಾಗುವತನಕ ಕೌನ್ಸಿಲ್ ಮೆಂಬರ್‌ಗಳಿಗೆ ಕೊಡಲ್ಪಡತಕ್ಕದ್ದಲ್ಲವೆಂತಲೂ, ಘನತೆಯಂ ಹೊಂದಿರುವ ಸ್ಟೇಟ್ ಸೆಕ್ರೆಟೆರಿಯವರು ತೀರ್ಮಾನಿಸಿರುತ್ತಾರೆ

ಮಂತ್ರಾಲೋಚಕ ಸಮಾಜದೊಳಗಣ ಗವರ್ನರ್ ಜನರಲ್ ಸಾಹೇಬರವರು, ನ್ಯಾಯ ನಿಬಂಧನೆಗಳನ್ನು ಮಾಡತಕ್ಕ ವಿಷಯದಲ್ಲಿ ತಮಗೆ ಸಹಾಯಕರಾಗಿ ಎಷ್ಟುಜನ ಕೌನ್ಸಿಲರ್‌ಗಳನ್ನು ಏರ್ಪಡಿಸಿಕೊಳ್ಳಬೇಕೋ ಆ ಅಂಶವಂ ಕುರಿತು ಆಲೋಚಿಸಿ ತಿಳಿಯಪಡಿಸಬೇಕೆಂಬದಾಗಿ ಲೆಫ್ಟಿನೆಂಟ್ ಗವರ್ನರವರನ್ನು ಅಪೇಕ್ಷಿಸುತ್ತಾರೆ ಕೌನ್ಸಿಲ್ ಆಕ್ಟಿನ ೮ರನೇ ಸೆಕ್ಷನಿನಲ್ಲಿ ನಿಧಿಸಲ್ಪಟ್ಟಿರುವ ಪ್ರಕಾರ ಪ್ರಥಮತಃ ಘೋಯಿಷ್ ಮಾಡಲ್ಪಡಬೇಕಾದ ಇಸ್ತಿಹಾರ್ ನಾಮೆಯಲ್ಲಿ ಕೌನ್ಸಿಲರ್‌ಗಳ ಸಂಖ್ಯೆಯೂ ಅವರ ಮೊಹರ ರಾಶಿಯೂ ನಮೂದಿಸಲ್ಪಡಬೇಕಾಗಿರುವದರಿಂದ ಆಬಗ್ಯೆ ಕೌನ್ಸಿಲರ್‌ಗಳ ಸಂಖ್ಯೆಯನ್ನು ಸಾಧ್ಯವಾದಷ್ಟು ಜಾಗ್ರತೆಯಲ್ಲಿ ಘನವನ್ನೈದಿದ ಲೆಫ್ಟಿನೆಂಟ್ ಗವರ್ನರವರು ತಮ್ಮ ಅಭಿಪ್ರಾಯದೊಡನೆ ತಿಳಿಸಬೇಕೆಂದು ಸಹ ಕೋರಲ್ಪಟ್ಟಿರುತ್ತಾರೆ ಅವೇವ್ಯೆಯ ಚೀಫ್ ಕಮಿಷನರರವರ ಆಳಿಕೆಗೊಳಗಾದ ಪ್ರದೇಶಗಳು ಸೇರಿ, ವಾಯುವ್ಯ ಸೀಮೆಗಳ ಲೆಫ್ಟಿನೆಂಟ್ ಗವರ್ನರವರ ಅಧಿಕಾರಕ್ಕೊಳಪಟ್ಟಿರುವಂತೆ ಒಂದು ದೇಶ ವಿಭಾಗವಂ ಮಾಡಿ, ಅದಕ್ಕೆ ನ್ಯಾಯ ನಿಬಂಧನೆಗಳನ್ನು ಮಾಡುವಬಗ್ಯೆ ೧೮೬೧ನೇ ಇಸವಿಯ ಆಕ್ಟಿನ ನಿಯಮಗಳನ್ನನುಸರಿಸಿ ಏರ್ಪಟ್ಟ ನ್ಯಾಯವಿಧಾಯಕ ಸಭೆಯ ವ್ಯವಸ್ಥಾಪನೆಯಂ ಕುರಿತ ಪ್ರಸಿದ್ಧ ಪತ್ರಿಕೆಯಲ್ಲಿ ಒಂಭತ್ತು ಜನ ಕೌನ್ಸಿಲರ್‌ಗಳು ನಿಯಮಿತರಾಗಿರುವಂತೆ ನಮೂದಿಸಲ್ಪಟ್ಟಿರುತದೆ ಲೆಫ್ಟಿನೆಂಟ್ ಗವರ್ನರವರ ಏತದ್ವಿಷಯಕವಾದ ಅಭಿಪ್ರಾಯವನ್ನರಿತು ಆಲೋಚಿಸುವದಕ್ಕೊಳಪಡಿಸಿ, ಮಂತ್ರಾಲೋಚಕ ಸಮಾಜದೊಳಗಣ ಗವರ್ನರ್ ಜನರಲ್ ಸಾಹೇಬರವರು, ಮೇಲೆ ನಮೂದಾದ ಸಂಖ್ಯೆಯು ಪಂಜಾಬ್ ದೇಶಕ್ಕೆ ಸಹ ಅನುಗುಣವಾಗಿ ಕಂಡುಬರುವಂತೆ ಆಜ್ಞಾಪಿಸಿರುತ್ತಾರೆ.

ಪ್ರಸಿದ್ಧ ಪತ್ರಿಕೆಯು ಘೋಯಿಷ್ ಮಾಡಲ್ಪಟ್ಟ ತರುವಾಯ ಮೇಲೆ ಕಂಡ ಆಕ್ಟಿನ ೩೭ನೇ ಸೆಕ್ಷನ್ ಅನುಸರಿಸಿ ಸಭಾ ಕಾರ್ಯ ನಿರ್ವಹಣೆಯಬಗ್ಗೆ ನಿರ್ಧಾಯಕವಾದ ಒಂದು ಮುಸವಿದಾ ಕಾನೂನನ್ನು ತಮ್ಮ ಮಂಜೂರಾತಿಯಬಗ್ಗೆ ಕಳುಹಿಸಿಕೊಡಬೇಕೆಂತಲೂ, ಅದೇ ಆಕ್ಟಿನ ೨೫ನೇ ಸೆಕ್ಷನ್ ಪ್ರಕಾರ ಕೌನ್ಸಿಲರ್‌ಗಳ [illegible]ದನ್ನು ತಿಳಿಸಬೇಕೆಂತಲೂ ಲೆಫ್ಟಿನೆಂಟ್ ಗವರ್ನರವರು ಮರಳಿ ಅಪೇಕ್ಷಿಸಲ್ಪಡುವರೆಂಬದು."

ಇದೊಂದು ವಿಷಯವು ಈಗ ಜನಗಳ ಅಪೇಕ್ಷೆಯಂತೆ ಈಡೇರಿದ ಹಾಗಾಯಿತು. ಕಾಂಗ್ರೆಸ್ ಸಭೆಯ ಪ್ರಯೋಜನಾಂಶಗಳಲ್ಲಿ ಇದು ಪರಿಗಣನೀಯವಾದುದೆಂದು ಭಾವಿಸುವೆವು. ಪ್ರಸಕ್ತ ಸಭಾ ಪ್ರತ್ಯರ್ಥಿಗಳು ಆದರ ಉದ್ದೇಶ ಪ್ರಯತ್ನಗಳನ್ನೆಷ್ಟುವಿಧದಿಂ ಪಳಿದಾಗ್ಯೂ ಸತ್ಪ್ರಯತ್ನಗಳು ಎಂದಿಗಾದರು ಸಫಲವಾಗುವವೇ ಹೊರ್ತು ನಿಷ್ಫಲಗಳಾಗಲಾರವು. ಇಂಡ್ಯ ಗವರ್ನಮೆಂಟಿನವರಾಗಲಿ, ಮಹಾರಾಣೀ ಸರ್ಕಾರದವರಾಗಲಿ, ಕಾಂಗ್ರೆಸ್ ಸಭೆಯವರನ್ನು ಗೌರವಿಸಿ ಪ್ರೋತ್ಸಾಹ ಗೊಳಿಸುವ ತಾತ್ಪರ್ಯವಿಲ್ಲದವರಂತೆ ತಮ್ಮ ಅಪ್ರೀತಿಯಂ ಶಬ್ದತಃ ಬಹುಮುಖೇನ ತೋರ್ಪಡಿಸಿದಾಗ್ಯೂ ತಮ್ಮ ಪ್ರಭುತ್ವವು ಪ್ರಜಾಭಿಮತಾನುಗುಣವಾದುದೆಂಬ ಪ್ರಶಸ್ತಿಯಂ ಕಾಪಾಡಿಕೊಳ್ಳಬೇಕೆಂಬ ಆತ್ಮಪ್ರತಿಷ್ಠೆಯು ಅವರಂ ಬಾಧಿಸದೆ ಹೋಗಲಿಲ್ಲವು ಇದಲ್ಲದೆ ಪ್ರಜೆಗಳ ಕೋರಿಕೆಗಳನ್ನೆಲ್ಲ ಏಕಕಾಲಾವಚ್ಛೇದೇನ ಪೂರ್ತಿಗೈಯುವದರಿಂದ ಅವರು ಅವಿಧೇಯರಾಗುವರೆಂಬ ಭೀತಿಯೊಂದುಕಡೆ ಗವರ್ನಮೆಂಟಿನವರನ್ನು ಪೀಡಿಸಬಹುದು. ಪ್ರಜೆಗಳ ಪ್ರಾರ್ಥನೆಗಳನ್ನೆಲ್ಲವಂ ಈಡೇರಿಸುತ ಬಂದರೆ ಗವರ್ನಮೆಂಟಿನ ಗೌರವವು ತಪ್ಪಿಹೋಗಿ ಬೇಲನೋಪಕರಣದಂತೆ ಭಾವಿಸಲ್ಪಡುವದೆಂಬ ಅಭಿಮಾನವು ಅವರ ಉದಾರ ಪ್ರವೃತ್ತಿಯಂ ತಡೆಗೈಯಬಹುದು. ಪರಂತು ಮುಗ್ಧನಾದ ಬಾಲಕನು ಬಾಧ್ಯವಸ್ತುವಂ ಕೋರಿ ರೋದನವಂ ಮಾಡುತ ತನ್ನ ಜನನಿಯನ್ನಡಬಿಡದೆ ಬಾಧಿಸಿದಾಗ್ಯೂ, ಆಕೆಗೆ ತನ್ನ ಪುತ್ರನಲ್ಲಿ ಅಂತರನಾದ ಪ್ರೇಮಾನುರಾಗವು ನೆಲೆಗೊಂಡಿದಾಗ್ಯೂ, ಅಪೇಕ್ಷಿತ ವಸ್ತುವನ್ನು ಕೇಳದ ಕೂಡಲೆ ಆಕೆಯು ಯಾವರೀತಿಯಲ್ಲಿ ಕೊಡದೆ ಗದರಿಸಿ ತಿರಸ್ಕರಿಸಿ ಅನಂತರ ತನಯನ ರೋದನವು ಪ್ರಬಲಿಸಿದ ಕೂಡಲೆ ತದುಪಶಮನಾರ್ಥ ಅವನ ಕೋರಿಕೆಯನ್ನೀಡೇರಿಸಿ ಸಮಾಧಾನಗೊಳಿಸುವಳೋ ತದ್ವತ್ ಮಾತೃಸ್ವರೂಪಿಗಳಾದ ಗವರ್ನಮೆಂಟಿನವರು ನಮ್ಮ ಪ್ರಾರ್ಥನೆಗಳನ್ನೆಲ್ಲ ಏಕಕಾಲದಲ್ಲಿ ನೆರವೇರಿಸಿ ಸಂತೃಪ್ತಿ ಪಡಿಸುವರೆಂದು ನಾವು ನಿರೀಕ್ಷಿಸುವುದು ಅನುಚಿತವು. ಅಸ್ಖಲಿತಗಳಾದ ನಮ್ಮ ಪ್ರಯತ್ನಗಳೇ ನಮ್ಮ ಅಭಿಮತಗಳಂ ಪೂರ್ತಿಗೈಯುವವು. ಸತ್ಕೃತ್ಯಯತ್ನದಿಂದ ನುತ್ಸಾಹಿಗಳಾಗಿ ಪ್ರಸಕ್ತ ಕಾಂಗ್ರೆಸ್ ಸಭೆಯನ್ನು ಕೆಲವು ಸಂವತ್ಸರಗಳ ಹಿಂದೆಯೇ ನಿಲ್ಲಿಸಿದ್ದರೆ ಅನುಭಾವ್ಯಗಳಾದ ಪ್ರಯೋಜನಗಳು ನಮಗೆ ಲಭಿಸಿರಲಾರವಷ್ಟೆ. ಮುಖ್ಯವಾಗಿ ಗವರ್ನಮೆಂಟಿನವರು ಪ್ರಜಾಭಿಪ್ರಾಯಗಳನ್ನು ಗೌರವಿಸಿ ತದನುಸಾರವಾಗಿ ಪ್ರಭುತ್ವವಂ ಮಾಡದಿದ್ದರೆ ತಮ್ಮ ಪ್ರಭುತ್ವ, ಪ್ರಾಶಸ್ತ್ಯವಂ ಹೊಂದಲಾರದೆಂಬ ಅಂಶವು ಅವರಿಗೆ ತಿಳಿಯದ ವಿಷಯವಲ್ಲವು ಕಾಂಗ್ರೆಸ್ ಸಭೆಯವರ ಪ್ರಾರ್ಥನೆಗಳೆಲ್ಲವು ಕ್ರಮೇಣ ಸಫಲಗಳಾಗಿ ಸದರೀ ಸಭೆಯೇ ಗವರ್ನಮೆಂಟಿನವರ ಸಂಪೂರ್ಣ ನಂಬಿಕೆ, ವಿಶ್ವಾಸ ಗೌರವಗಳಿಗೆ ವಿಷಯವಾಗುವಂತ ಕಾಲವು ದೂರವಾಗಿರಲಾರದಾಗಿ ಭಗವದನುಗ್ರಹದಿಂದ ನಮ್ಮ ಉತ್ತರ ಕಾಲೀನರಾದರು ಅದಂ ನೋಡಿ ಅನುಭವಿಸಿ ಆನಂದಿಸದೆ ಹೋಗಲಾರರೆಂದು ದೃಢವಾಗಿ ನಂಬುತ್ತೇವೆ

Occasional Notes,
ನೈಮಿತ್ತಿಕ ವಿಷಯನ್ಯಾಸ.

ವಾಯುವ್ಯ ದೇಶದೊಳು ಕ್ಷಾಮನಿವಾರಕ ಕಾಮಗಾರಿಗಳಲ್ಲೂ ಧರ್ಮಾರ್ಥ ಸ್ಥಾಪಿಸಲ್ಪಟ್ಟಿರುವ ಅನ್ನಶಾಲೆಗಳಲ್ಲೂ ಸುಮಾರು ಹದಿನೈದು ಲಕ್ಷ ಪ್ರಜೆಗಳು ಜೀವಿಸುತಲಿದಾರೆ.

ಕಲ್ಕತ್ತಯೊಳು ಸ್ಥಾಪಿಸಲ್ಪಟ್ಟಿರುವ ಕ್ಷಾಮದ ಫಂಡಿಗಾಗಿ ಇದುವರೆಗೆ ಸುಮಾರು ಹನ್ನೊಂದು ಲಕ್ಷ ರೂಪಾಯಿಗಳು ಜಮಾ ಆಗಿದೆ ಕ್ಷಾಮವು ವೃದ್ಧಿಯಾದಂತೆಲ್ಲ ತನ್ನಿವಾರಕದ್ರವ್ಯವು ವೃದ್ಧಿಯಾಗಬೇಕಾದುದು ಆವಶ್ಯಕವಾದುದು.

ಮದರಾಸ ಹೈಕೋರ್ಟ್ ವಕೀಲರಾದ ಆನರೆಬಲ್ ಮೆ॥ ವಿ. ಭಾಷ್ಯಮಯ್ಯಂಗಾರ್ಯರವರು ಅಡ್ವೋಕೇಟ್ ಜನರಲ್ ಕೆಲಸವನ್ನು ಬದಲೀ ನೋಡುವಂತೆ ಮೊಕರರ್ ಮಾಡಲ್ಪಟ್ಟಿರುವದಾಗಿ ಕಳೆದ ವಾರದ ಮದರಾಸ್ ಗವರ್ನಮೆಂಟ್ ಗೆಜೆಟಿನಲ್ಲಿ ಘೋಯಿಷ್ ಮಾಡಲ್ಪಟ್ಟಿರುತದೆ.

ಇಂಡ್ಯ ದೇಶದಲ್ಲಿ ದುರ್ಭಿಕ್ಷ ಪೀಡಿತರಾಗಿರುವ ಜನರ ಸಹಾಯಾರ್ಥ ಸ್ಥಾಪಿಸಲ್ಪಟ್ಟಿರುವ ಫಂಡಿಗೆ ಘನವಂತರಾದ ವಿಜಯನಗರದ ಮಹಾರಾಜರವರು ೨೫,೦೦೦ ರೂಪಾಯಿಗಳು ಚಂದಾ ಮಾಡಿರುವಂತೆ ತಿಳಿಸಿರುತ್ತಾರೆ. ಘನವಂತರಾದ ಮದರಾಸ್ ಗವರ್ನರ್ ಸಾಹೇಬರವರು ೨,೦೦೦ ರೂಪಾಯಿಗಳು ಚಂದಾ ಮಾಡಿರುತ್ತಾರೆ.

ಈ ಸಲ ಕಲ್ಕತ್ತೆಯಲ್ಲಿ ನಡೆದ ಬಿ. ಎಲ್ ಪರೀಕ್ಷೆಯಲ್ಲಿ ನೂರತೊಂಭತ್ತೆಂಟು ಮಂದಿ ತೇರ್ಗಡೆಯಂ ಹೊಂದಿರುತ್ತಾರೆ. ಸದರೀ ಸಂಖ್ಯೆಯಲ್ಲಿ ಆರರಲ್ಲೊಂದು ಭಾಗದಷ್ಟು ಮಂದಿ ಮದರಾಸ್ ಬಿ. ಎಲ್. ಪರೀಕ್ಷೆಯಲ್ಲಿ ತೇರ್ಗಡೆಯಂ ಹೊಂದಿದ್ದಾಗ್ಯೂ ಸಹ ಮದರಾಸ್ ಲಾಯರಿಗಳು ಬಹಳ ಗಾಬರಿಪಡುವರೆಂದು ಅಲ್ಲಿನ ಪತ್ರಿಕೆಯೊಂದು ತಿಳಿಸುತಿದೆ.

ಹಿಂದಿನ ವಾರಗಳಲ್ಲಿ ತಿಳಿಸಿದ್ದಂತೆ ವಿವೇಕಾನಂದ ಸ್ವಾಮಿಗಳವರು ಸಿಂಹಳ ದ್ವೀಪದಿಂದ ಹೊರಟು ರಾಮನಾಥಪುರ, ಮದುರೆ, ಕುಂಭಕೋಣಮಾರ್ಗವಾಗಿ ಈತಿಂಗಳ ೬ನೇತಾರೀಖ್ ಶನಿವಾರದದಿನ ಬೆಳಗ್ಗೆ ಸುಮಾರು ೮ ಘಂಟೆಗೆ ದಕ್ಷಿಣ ಇಂಡಿಯಾ ರೈಲ್ವೆ ಮಾರ್ಗವಾಗಿ ಮದರಾಸಿಗೆ ದಯಮಾಡಿದರು. ಈ ಯೋಗಿವರ್ಯರ ಆಗಮನೋದ್ದೇಶದಿಂದ ರೈಲ್ವೆ ಸ್ಟೇಷನನ್ನು ಅತಿ ಮನೋಹರವಾಗಿ ಅಲಂಕರಿಸಿ ಮದರಾಸ್ ನಿವಾಸಿಗಳಾದ ದೊಡ್ಡ ಮನುಷ್ಯರನೇಕರು ಸ್ಟೇಷನ್ ಪ್ಲಾಟ್‌ಫಾರಂನಲ್ಲಿ ಕಾದಿದ್ದು ಸ್ವಾಮಿಗಳವರನ್ನು ವಿಶೇಷ ಮರ್ಯಾದಾಪೂರ್ವಕ ಬರಮಾಡಿಕೊಂಡು ಅಲ್ಲಿಂದ ಗಾಡಿಯಲ್ಲಿ ಬಿಜಮಾಡಿಸಿ ಉತ್ಸವದೊಡನೆ ಸಮುದ್ರತೀರದಲ್ಲಿ ಅವರ ವಾಸಕ್ಕಾಗಿ ನಿಷ್ಕಲ್ಪಿತವಾಗಿದ್ದ ಕ್ಯಾಸಿಲ್ ಕೆರ್ನನ್ ಎಂಬ ಭವನಕ್ಕೆ ಕರೆದುಕೊಂಡು ಹೋದರು. ಮುಂದೆ ಸದರೀ ಸ್ವಾಮಿಗಳವರು ಮದರಾಸನಲ್ಲಿ ಮತವಿಷಯಕವಾಗಿ ಮಾಡಬಹುದಾದ ಉಪನ್ಯಾಸಗಳ ಸಾರಾಂಶವ ಕ್ರಮೇಣ ಪ್ರಕಟಿಸುವೆವು. ಈ ಸ್ವಾಮಿಗಳವರು ಈ ದೇಶಕ್ಕೂ ಬರುವವರಾಗಿರುವದರಿಂದ ಇಲ್ಲಿನವರಿಗೂ ಅವರ ದರ್ಶನ ಸಂಭಾಷಣೆಗಳುಂಟಾಗುವವರಲ್ಲಿ ಸಂಶಯವಿಲ್ಲವು.

ಈಗಿನ ಕ್ಷಾಮದ ಮೂಲಕ ಅನೇಕ ಕುಟುಂಬಗಳೇ ನಾಶವಾಗುತಿದೆ ಎಂಬದಕ್ಕೆ ನಿದರ್ಶನರೂಪವಾಗಿ ಉತ್ತರ ದೇಶದ ಒಂದು ವೃತ್ತಾಂತ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುವ ಒಂದು ವಿಷಯವನ್ನಿದರಡಿ ಪ್ರಕಟಿಸುತ್ತೇವೇನೆಂದರೆ:— ಉತ್ತರ ದೇಶದೊಳು ಒಂದೂರಲ್ಲಿ ಒಬ್ಬಾತನು ತನ್ನ ಹೆಂಡತಿ ಮಕ್ಕಳನ್ನು ಕಾಪಾಡುವದಕ್ಕೆ ಸುತರಾಂ ಮಾರ್ಗವು ಕಾಣಲಾರದೆ, ಕಡೆಗೆ ತನ್ನ ಹೆಂಡತಿಯನ್ನು ಯಾರಿಗಾದರು ಮಾರಿಬಿಡಬೇಕೆಂದು ನಿಶ್ಚಯಿಸಿ, ಒಬ್ಬ ರೈತನಬಳಿಗೆ ಹೋಗಿ ನನ್ನ ಹೆಂಡತಿಯನ್ನು ಮಾರಿಬಿಡುತ್ತೇನೆ, ನೀನು ಕ್ರಯ ಕೊಟ್ಟು ತೆಗದುಕೊಳ್ಳಬೇಕೆಂದು ಕೇಳಲಾಗಿ, ನಾನು ಕೊಂಡುಕೊಳ್ಳಲಾರೆ, ಪರಂತು ನಾನು ಅಯಿದು ರೂಪಾಯಿಗಳು ಕೊಡುತ್ತೇನೆ, ಬೇಕಾದುದನ್ನು ಕೊಂಡುಕೊಂಡು ಬಂದು ಊಟ ಮಾಡಿರೆಂದು ಹೇಳಿ ಅದೇಪ್ರಕಾರ ಕೊಟ್ಟನು. ಸದರೀ ಮನುಷ್ಯನು ರೈತನು ಕೊಟ್ಟ ರೂಪಾಯಿಗಳನ್ನು ತೆಗದುಕೊಂಡು ಹೋಗಿ ಅದರಲ್ಲಿ ಒಂದು ರೂಪಾಯಿ ಖರ್ಚು ಮಾಡಿ ಊಟ ಮಾಡಿಕೊಂಡು ಇನ್ನೊಂದು ರೂಪಾಯಿಗೆ ಅಫೀಂ ತಂದು ಹೆಂಡತಿ ಮಕ್ಕಳೆಲ್ಲರಿಗೂ ತಿನ್ನುವದಕ್ಕೆ ಪೂರಾ ಕೊಟ್ಟು, ತಾನೂ ತಿಂದು ಬಿಡಲು, ಈ ವಿಷಯವು ಕೂಡಲೆ ಹೊರಗಾಗಿ ಅವರನ್ನೆಲ್ಲ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಮಾಡಿದರು, ಪರಂತು ಅನುಕೂಲವದದೆ ಎಲ್ಲರು ಮೃತಪಟ್ಟರು, ಎಂಬದು.

LOCAL AND PROVINCIAL NEWS.
ಒಳದೇಶಮತ್ತು ತಾಲ್ಲೂಕುಜಾತಿ ವೃತ್ತಾಂತಗಳು.

ಅರಮನೆಯಲ್ಲಿ ನಡೆಯುವ ವಿವಾಹ ಮಹೋತ್ಸವದ ಖರ್ಚಿಗಾಗಿ ಮಹಾರಾಣಿ ರೀಜಂಟರವರು ಅರಮನೆಯ ಖಜಾನೆಯಿಂದ ೩ ಲಕ್ಷ ರೂಪಾಯಿಗಳನ್ನೂ ಸರ್ಕಾರದವರು ೨ಲಕ್ಷ ರೂಪಾಯಿಗಳನ್ನೂ ಸ್ಯಾಂಗ್ಷನ್ ಮಾಡಿರುವದಾಗಿ ಕೇಳುತ್ತೇವೆ.

ರಾಜಕನ್ಯೆಯ ವಿವಾಹ ಕಾಲದಲ್ಲಿ ರಾಜಧಾನಿಯನ್ನು ಚೊಕ್ಕಟವಾಗಿಟ್ಟು ಕೊಳ್ಳುವದಕ್ಕೂ ಚಪ್ಪರಗಳನ್ನು ಹಾಕಿಸಿ ದೀಪೋತ್ಸವವನ್ನು ಮಾಡುವದಕ್ಕೂ ಮ್ಯುನಿಸಿಪಾಲಿಟಿಯವರು ೨,೫೦೦ ರೂಪಾಯಿಗಳು ಖರ್ಚು ಮಾಡತಕ್ಕದ್ದೆಂದು ತೀರ್ಮಾನಿಸಿದ್ದಾರೆ.

ಈ ಸಂಸ್ಥಾನಕ್ಕೆ ಇನ್ನು ೩೦ ಜನ ಆಸ್ಪತ್ರೆ ಅಸಿಸ್ಟೆಂಟುಗಳು ಬೇಕಾಗಿದೆ ಎಂದು ಸರ್ಕಾರದವರು ಗೊತ್ತುಮಾಡಿ ಪ್ರತಿ ವರ್ಷವೂ ೧೦ ಮಂದಿ ಯೌವನಸ್ಥರಿಗೆ ವೇತನವನ್ನು ಕೊಟ್ಟು ಮದರಾಸಿಗೆ ಕಳುಹಿಸಬೇಕೆಂಬದಾಗಿ ತೀರ್ಮಾನಿಸಿರುತ್ತಾರೆ.

ಶ್ರೀಮನ್ಮಹಾರಾಜರವರ ಜ್ಯೇಷ್ಠ ಪುತ್ರಿಯವರಾದ ಜಯಲಕ್ಷ್ಮಮ್ಮಣ್ಣಿಯವರನ್ನು ಮ॥ ರಾ॥ ಶ್ರೀ ಎಂ. ಕಾಂತರಾಜ ಅರಸಿನವರಿಗೆ ಕನ್ಯಾದಾನ ಮಾಡಿ ನಡೆಯುವ ವಿವಾಹ ಮಹೋತ್ಸವದ ಗೌರವಾರ್ಥ ೧೮೯೭ನೇ ಇಸವಿ ಫೆಬ್ರವರಿ ೧೯ನೇ ತಾರೀಖ್ ಶುಕ್ರವಾರ, ೨೦ನೇ ತಾರೀಖ್ ಶನಿವಾರ, ಈ ಯೆರಡು ದಿನಗಳಲ್ಲೂ ಈ ದೇಶದ ವಿಶಿಷ್ಟ ಸರ್ಕಾರ್ ಆಫೀಸ್‌ಗಳು, ಕೋರ್ಟುಗಳು ಮತ್ತು ಪಾಠಶಾಲೆಗಳು ಮುಚ್ಚಲ್ಪಡುವವೆಂದು ಕಳೆದ ಶುಕ್ರವಾರದದಿನ ಮೈಸೂರು ಗಜೆಟ್ ವಿಶೇಷ ಪತ್ರಿಕೆಯ ಮೂಲಕ ಪ್ರಕಟಿಸಲ್ಪಟ್ಟಿರುತದೆ.

ಮೈಸೂರು ರಾಜಧಾನಿಯಲ್ಲಿ ಬೇರೆ ಬೇರೆ ವಂಗಡದ ಪ್ರಜೆಗಳಿಗೆಲ್ಲ ಅರಮನೆಯಲ್ಲಿ ನಡೆಯುವ ಲಗ್ನದ ದಿವಸ ಅನ್ನವಸ್ತ್ರಗಳನ್ನು ಕೊಡುವಂತೆ ಸರ್ಕಾರದವರು ನಮ್ಮ ಡೆಪ್ಯುಟಿಕಮಿಷನರಿಗೆ ೧೩,೦೦೦ ರೂಪಾಯಿ ಕಳುಹಿಸಿದ್ದಾರೆ. ಡೆಪ್ಯುಟಿ ಕಮಿಷನರು ಬೇರೆಬೇರೆ ಜಾತಿಯ ಮುಖಂಡರನ್ನು ಕರೆಯಿಸಿ ಹೋದವಾರದಲ್ಲೂ ನಿನ್ನೆಯೂ ಮೀಟಿಂಗ್ ಮಾಡಿ ಆಯಾ ಜಾತಿಯವರಿಗೆ ಭೋಜನಮಾಡಿಸುವದಕ್ಕೆ ಬೇಕಾದಷ್ಟು ಹಣವನ್ನು ಹಂಚಿಕೊಟ್ಟರು. ಮತ್ತು ಆ ವಾರದಲ್ಲಿ ಪಟ್ಟಣದಲ್ಲಿ ಗಸ್ತು ತಿರುಗಿ ಪ್ರಜೆಗಳ ಆರೋಗ್ಯವನ್ನು ಕಾಪಾಡುವದಕ್ಕಾಗಿ ಮ್ಯುನಿಸಿಪಾಲಿಟಿಯ ನೌಕರರು ಸಾಕಾಗುವದಿಲ್ಲವೆಂದು ಯೋಚಿಸಿ ಡೆಪ್ಯುಟಿಕಮಿಷನರವರು ಹೊಸದಾಗಿ ರೆವಿನ್ಯೂ ಪ್ರೊಬೇಷನರುಗಳಾಗಿರುವ ಮೆ॥ ಎಂ. ಜಿ. ಕೃಷ್ಣಸ್ವಾಮಿರಾಯರನ್ನೂ ಮೆ॥ ಬಿ. ಎಸ್. ರಾಮೋಜಿ ರಾಯರನ್ನೂ ಪ್ರೆಸಿಡೆಂಟರಿಗೆ ಸಹಾಯ ಮಾಡಬೇಕೆಂದು ತೀರ್ಮಾನಿಸಿರುತ್ತಾರೆ.

ಮೈಸೂರು ಗವರ್ನಮೆಂಟಿನವರು ಅಕೌಂಟು ಇಡುವ ಪದ್ಧತಿಯನ್ನು ಕಲಿತುಕೊಳ್ಳುವದಕ್ಕೋಸ್ಕರ ಮದರಾಸ್, ಬೊಂಬಾಯಿ, ಕಲ್ಕತ್ತಾದ ಅಕೌಂಟು ಡಿಪಾರ್ಟುಮೆಂಟುಗಳಿಗೆ ಇಲ್ಲಿಂದ ಮೂರು ಜನಗಳನ್ನು ೧೦೦ರಿಂದ ೧೫೦ರ ವರೆಗೆ ಸ್ಕಾಲರಷಿಪ್ ಕೊಟ್ಟು ಕಳುಹಿಸಬೇಕೆಂದಿರುತ್ತಾರಂತೆ. ಇವರು ಬಹುಶಃ ಗ್ರಾಡ್ಯುಯೇಟರಾಗಿಯೂ ಸರ್ಕಾರದ ನೌಕರರಾಗಿಯೂ ಇರುವವರೇ ಆಗಿರಬೇಕು. ಇವರಿಗೆ ಆ ಸ್ಥಳಗಳಲ್ಲಿ ಒಂದು ವರುಷವಿರಬೇಕು, ಬಂದ ಮೇಲೆ ಇಲ್ಲಿನ ಅಕೌಂಟು ಡಿಪಾರ್ಟುಮೆಂಟಿನಲ್ಲಿ ೨೫೦ರಿಂದ ಶುರುವಾಗಿ ೫೦೦ ರೂಪಾಯಿವರಿಗೆ ಏರುವ ಕೆಲಸವನ್ನು ಕೊಡುತ್ತಾರೆ ಇದು ಸರಿಯಾದ ಮಾರ್ಗವೇ ಹೌದು. ನಮ್ಮ ಸರ್ಕಾರದ ಈ ಸೂಚನೆಯನ್ನು ಇಂಡಿಯಾ ಸರ್ಕಾರದವರು ಮಂಜೂರು ಮಾಡ್ಯಾರೆಂತಲೂ, ಜನಗಳನ್ನು ಆರಿಸುವದರಲ್ಲಿ ಪರದೇಶಿಗಳನ್ನೇ ಆರಿಸದೆ ದೇಶೀಯರ ಯೋಗ್ಯತೆಯನ್ನೂ ನೋಡುವರೆಂದು ನಂಬುತ್ತೇವೆ:—ವೃ. ಬೋ.

ಬೆಂಗಳೂರು ಪೇಟೆಯ ಜಿನಿಸಿ ನಿರಖ್‌ಪಟ್ಟಿ.

			ರೂ.
ಅವ್ವಲ್ ರಾಗಿ ಖಂಡಿ ೧ಕ್ಕೆ		...	೩೨-೩೪
ದುಯಂ ರಾಗಿ	"	.	೩೦-೩೧
ಅವ್ವಲ್ ಅಕ್ಕಿ ಪಲ್ಲ ೧ಕ್ಕೆ		...	೧೪
ದುಯಂ "	"	...	೧೨॥
ಹೆಸರು	"	...	೯॥
ಉದ್ದು	"	...	೧೦॥
ಭಾರ್ವೆಜದ ಗೋಧಿ	"	...	೧೨॥
ಜೋಳ	"	...	೫।
ಕಡ್ಲೆ	"	..	೧೦।-೧೦॥
ಕಾರಾಮಣಿ	"	...	೮।
ಹರಳು ೨೫೦ ಸೇರಿನ ಖಂಡಿ ೧ಕ್ಕೆ		...	೨೨-೨೪
ಹುಚ್ಚೆಳ್ಳು	"	...	೨೦
ಹರಳೆಣ್ಣೆ ಮಣ ೧ಕ್ಕೆ		...	೪।=
ಕಳ್ಳೆಕಾಯಿ ಎಣ್ಣೆ ಮಣ ೧ಕ್ಕೆ		...	೪।
ಒಳ್ಳೆ ಎಣ್ಣೆ	"	...	೫॥-೬
ಮೆಣಸು	"	...	೭।
ಧನಿಯಾ	"	...	೧॥।-೨
ಹುಣಿಸೇಹಣ್ಣು	"	...	೬-೮
ತುಪ್ಪ	"	...	೧೭
ಬೆಲ್ಲ	"	...	೧।
ಮೆಣಸಿನಕಾಯಿ ಮಣ ೧ಕ್ಕೆ		...	೩೨
ಹುರಿ ಲೊ॥ ೧ಕ್ಕೆ ಸೇರು		...	೧೫.।

THE MYSORE GAZETTE.
ಮೈಸೂರು ಗೆಜೆಟ್.

ಗುರುವಾರ, ತಾ॥ ೪ನೇ ಫೆಬ್ರವರಿ ೧೮೯೭.

ಮೈಸೂರ್ ಗವರ್ನಮೆಂಟಿನವರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾ॥ ೨೫ನೇ ಜನವರಿ ೧೮೯೭.

ನಂ॥ ೮೫೫೫-ಮಿಸ್. ೧೭೩೫,—೧೮೯೭ನೇ ಜನವರಿ ೨೫ನೇ ತಾರೀಖಿನಲ್ಲಿ ರಜಾದಿಂದ ಕೆಲಸಕ್ಕೆ ಹಾಜರಾದ ಮೆ॥ ಟಿ. ಆನಂದರಾವ್ ಬಿ ಎ.ಯವರು ಅಗ್ರಿಕಲ್ಚ್ಯುರಲ್ ಮತ್ತು ಸ್ಟ್ಯಾಟಿಸ್ಟಿಕ್ ಕೆಲಸದ ಮೇಲೆ ನಿಯಮಿಸಲ್ಪಟ್ಟಿರುತ್ತಾರೆ.

ತಾ|| ೨೯ನೇ ಜನವರಿ ೧೮೯೭.

ನಂ|| ೪೬೦—ಜಿ ೯೯೩—ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ ೧೨ನೇ ಸೆಕ್ಷನ್ ಅನುಸರಿಸಿ, ಬೆಂಗಳೂರು ಡಿಸ್ಟ್ರಿಕ್ಟು ದೊಡ್ಡಬಳ್ಳಾಪುರದ ತಾಲ್ಲೂಕಿನ ಅಮಲ್ದಾರ್ ಎಸ್. ಗೋಪಾಲಯ್ಯಂಗಾರು ಎರಡನೇ ಕ್ಲಾಸ ಮಾಜಿಸ್ಟ್ರೇಟಾಗಿ ನೇಮಕಮಾಡಲ್ಪಟ್ಟಿರುತ್ತಾರೆ.

ನಂ|| ೪೬೨—ಜಿ ೯೯೩—ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ ೧೨ನೇ ಸೆಕ್ಷನ್ ಅನುಸರಿಸಿ, ಬೆಂಗಳೂರು ಡಿಸ್ಟ್ರಿಕ್ಟು ನೆಲಮಂಗಲ ತಾಲ್ಲೂಕು ಅಮಲ್ದಾರ್ ಸಿ. ರಾಜಗೋಪಾಲಾಚಾರ್ಲು ಯವರು ಎರಡನೇ ಕ್ಲಾಸ ಮಾಜಿಸ್ಟ್ರೇಟಾಗಿ ನೇಮಕಮಾಡಲ್ಪಟ್ಟಿರುತ್ತಾರೆ.

ನಂ|| ೪೬೩—ಜಿ. ೯೯೭—ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ ೧೨ನೇ ಸೆಕ್ಷನ್ ಅನುಸರಿಸಿ, ಬೆಂಗಳೂರು ಡಿಸ್ಟ್ರಿಕ್ಟು ಮಾಗಡಿ ತಾಲ್ಲೂಕು ಅಮಲ್ದಾರ್ ಎಂ. ಏ. ತಿರುಮಲಾಚಾರ್ಯ ಎರಡನೇ ಕ್ಲಾಸ ಮಾಜಿಸ್ಟ್ರೇಟಾಗಿ ನೇಮಕಮಾಡಲ್ಪಟ್ಟಿರುತ್ತಾರೆ.

ತಾ|| ೨ನೇ ಫಿಬ್ರವರಿ ೧೮೯೭.

ನಂ|| ೪೭೬—ಜಿ ೧೦೨೭—ಈ ಕೆಳಗೆ ಕಂಡ ಸ್ಪೆಷಲ್ ಸಬ್ ರಿಜಿಸ್ಟ್ರರುಗಳ ವರ್ಗಾವರ್ಗಿಗಳು ಮತ್ತು ನೇಮಕಗಳು ಹುಕುಂ ಮಾಡಲ್ಪಟ್ಟಿರುತ್ತವೆ.

೩ನೇ ಗ್ರೇಡ್ ಸಬ್ ರಿಜಿಸ್ಟ್ರಾರಾದ ಕೆ. ದೊರಸ್ವಾಮಿಯ್ಯಂಗಾರ್, ಬಿ. ಎ. ಯವರು ಮಾಗಡಿಯಿಂದ ಹೊಸಕೋಟೆಗೆ.

ಇನ್ಸ್‌ಪೆಕ್ಟರ್ ಜನರಲ್ ಆಫೀಸಿನಲ್ಲಿ ಪ್ರೊಬೇಷನರ್ ಸಬ್ ರಿಜಿಸ್ಟ್ರಾರಾಗಿದ್ದ ಹೆಚ್. ಕೃಷ್ಣಮಾಚಾರ್, ಬಿ. ಎ. ಯವರು ದೊಡ್ಡಬಳ್ಳಾಪುರದ ೩ನೇ ಗ್ರೇಡ್ ಸಬ್ ರಿಜಿಸ್ಟ್ರಾರಾಗಿ ನೇಮಕರು.

ಹೊಸಕೋಟೆಗೆ ವರ್ಗ ಮಾಡಲ್ಪಟ್ಟ ಕೆ. ದೊರಸ್ವಾಮಿಯ್ಯಂಗಾರ್, ಬಿ. ಎ. ಯವರಿಗೆ ಬದಲಾಗಿ, ಎಂ. ಟಿ. ಸಂಪತ್ಕುಮಾರಾಚಾರ್, ಬಿ. ಎ. ಯವರು ಮಾಗಡಿ ೩ನೇ ಗ್ರೇಡ್ ಸಬ್ ರಿಜಿಸ್ಟ್ರಾರಾಗಿ ನೇಮಕರು.

ಇನ್ಸ್‌ಪೆಕ್ಟರ್ ಜನರಲ್ ಆಫೀಸ ರೆಕಾರ್ಡ್ ಕೀಪರಾದ ಎ. ತಿರುವೇಂಗಡಂ ಮುದಲಿಯಾರ್ರವರು ಕೋಲಾರದ ೩ನೇ ಗ್ರೇಡ್ ಸಬ್‌ರಿಜಿಸ್ಟ್ರಾರಾಗಿ ನೇಮಕರು.

ಗವರ್ನಮೆಂಟ್ ಸೆಂಟ್ರಲ್ ಅಬ್ಸರ್ವೆಟರಿ ೨ನೇ ಅಸಿಸ್ಟೆಂಟ್ ಮೈಸೂರು ರಾಘವೇಂದ್ರರಾಯರು ಹುಣಸೂರು ೩ನೇ ಗ್ರೇಡ್ ಸಬ್‌ರಿಜಿಸ್ಟ್ರಾರಾಗಿ ನೇಮಕರು.

ತಾರೀಖ್ ೨೩ನೇ ಜನವರಿ ೧೮೯೭.

ನಂ|| ೬೫೩—ಫೊ. ೩೧೯೭—ಫಾರೆಸ್ಟ್ ಅಸಿಸ್ಟೆಂಟ್ ಕನ್ಸರ್ವೇಟರಾದ ಮ|| ಜೆ. ಇ. ರಿಕೆಟ್ಸ್ ಯವರು, ಸ್ಪೆಷಲ್ ಡ್ಯೂಟಿಯಾಗಿ ಹಾಸನ ಡಿಸ್ಟ್ರಿಕ್ಟಿಗೆ ನಿಯಮಿಸಲ್ಪಟ್ಟಿರುತ್ತಾರೆ.

ತಾ|| ೨೭ನೇ ಜನವರಿ ೧೮೯೭.

ನಂ|| ೬೫೪—ಆರ್. ಎಫ್. ೩೯೭—ಮೈಸೂರು ಸರ್ವಿಸ ರೆಗ್ಯುಲೇಷನ್‌ಗಳ ೧೭೨ನೇ ಆರ್ಟಿಕಲ್ ಅನುಸರಿಸಿ ಕಡೂರ್ ಡಿಸ್ಟ್ರಿಕ್ಟು ಎಕಸ್ಟ್ರಾ ಅಸಿಸ್ಟೆಂಟ್ ಕಮಿಷನರ ಮ|| ಬಿ. ರಾಮಸ್ವಾಮಯ್ಯಂಗಾರ್ರವರಿಗೆ ಅವರುಪಯೋಗಿಸಿಕೊಳ್ಳಬಹುದಾದ ತಾರೀಖ್ ಲಾಗಾಯಿತು ಹದಿನೈದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತದೆ.

ತಾ|| ೨೫ನೇ ಜನವರಿ ೧೮೯೭.

ನಂ|| ೬೫೮—ಆರ್. ಎಲ್. ೨೯೯೭—ಮೈಸೂರು ಸರ್ವಿಸ ರೆಗ್ಯುಲೇಷನ್‌ಗಳ ೧೯೯ನೇ ಆರ್ಟಿಕಲ್ ಅನುಸರಿಸಿ, ಮೈಸೂರು ಗವರ್ನ್‌ಮೆಂಟ್ ಕಂಟ್ರೋಲರವರ ಚೀಫ್ ಅಸಿಸ್ಟೆಂಟರಾದ ಮ|| ಜೆ. ಆರ್. ಬ್ಯಾರೋ ಯವರಿಗೆ ೯೭ನೇ ಇಸವಿ ಜನವರಿ ೮ನೇ ತಾರೀಖ್ ಲಾಗಾಯಿತು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ತಾ|| ೨ನೇ ಫೆಬ್ರವರಿ ೧೮೯೭.

ನಂ|| ೬೪೬೦—ಫೊ. ೬೦೯೩—ಮೈಸೂರು ಸರ್ವಿಸ ರೆಗ್ಯುಲೇಷನ್‌ಗಳ ೧೯೨ನೇ ಆರ್ಟಿಕಲ್ ಅನುಸರಿಸಿ, ಮೈಸೂರ ಡಿಸ್ಟ್ರಿಕ್ಟು ಕಾಕನಕೋಟೆ ರೇಂಜ್ ಫಾರೆಸ್ಟ್ ಆಫಿಷಿಯೇಟಿಂಗ್ ಅಸಿಸ್ಟೆಂಟ್ ಕನ್ಸರ್ವೇಟರಾದ ಮ|| ಎಂ. ಜಿ. ರಾಮರಾಯರವರಿಗೆ ೯೬ನೇ ಇಸವಿ ಡಿಸಂಬರ್ ೧೯ನೇ ತಾರೀಖಿನ ೩೬೦೯, ಎಸ್. ಟಿ. ಎಸ್. ೬೦೯೭ನೇ ನಂಬರಿನ ಗವರ್ನ್‌ಮೆಂಟ್ ನೋಟಿಫಿಕೇಷನ್ನಲ್ಲಿ ಸ್ಯಾಂಕ್ಷನ್ ಮಾಡಿದ್ದ ರಜಕ್ಕೆ ಜಾಸ್ತಿಯಾಗಿ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

EXTRACT.

ದುಷ್ಕಾಲ ನಿವಾರಣಾರ್ಥ ರಿಲೀಫ್ ಕಾಮಗಾರಿಗಳಮೂಲಕ ಉಪರಕ್ಷಣ ಮಾಡುತಲಿರುವವರ ತಪ್ಸೀಲ್.

ಪಂಜಾಬ್:—ಇಲ್ಲಿನ ೧೦ ಡಿಸ್ಟ್ರಿಕ್ಟುಗಳಲ್ಲಿ ಪ್ರಜೆಗಳು ಕ್ಷಾಮಪೀಡಿತರಾಗಿದ್ದಾರೆ. ಇದಕ್ಕಾಗಿ ಸರ್ಕಾರದವರು ೬೩ ಕಡೆ ರಿಲೀಫ್ ಕಾಮಗಾರಿಗಳನ್ನು ಏರ್ಪಡಿಸಿರುವರು. ೩೪೬೧೦ ಜನ ಪ್ರಜೆಗಳು ಆ ಕಾಮಗಾರಿಗಳಲ್ಲಿ ಕೆಲಸ ಮಾಡಿ ಹೊಟ್ಟೆ ಹೊರಕೊಳ್ಳುತ್ತಿದ್ದಾರೆ.

ವಾಯುವ್ಯ ಪ್ರಾಂತಗಳು ಮತ್ತು ಅಯೋಧ್ಯ:—ಈ ಭಾಗದಲ್ಲಿ ೩೬ ಡಿಸ್ಟ್ರಿಕ್ಟುಗಳಲ್ಲಿ ವ್ಯಾಪ್ತವಾಗಿರುವ ಕ್ಷಾಮವನ್ನು ನಿವಾರಣೆ ಮಾಡುವದಕ್ಕೆ ಸರ್ಕಾರದವರು ೨೮೯ ಕಡೆ ರಿಲೀಫ್ ಕಾಮಗಾರಿಗಳನ್ನು ಏರ್ಪಡಿಸಿರುತ್ತಾರಲ್ಲದೆ ೧೧೭ ಕಡೆ ಅನಾಥಾಲಯಗಳನ್ನು ಸ್ಥಾಪಿಸಿರುವರು. ಇವುಗಳ ಸಹಾಯದಿಂದ ದಿನವಹಿ ೪೯೩೯೪೭ ಜನ ಪ್ರಜೆಗಳು ಅನ್ನಾಹಾರಾದಿಗಳನ್ನು ಪಡೆದು ಜೀವಿಸುತ್ತಿದ್ದಾರೆ.

ಬಂಗಾಳಾಪ್ರಾಂತ:—ಈ ಭಾಗಕ್ಕೆ ಸೇರಿದ ೬ ಡಿಸ್ಟ್ರಿಕ್ಟುಗಳಲ್ಲಿ ಕ್ಷಾಮವು ಬಹು ಭಯಂಕರವಾಗಿ ವ್ಯಾಪ್ತವಾಗಿರುತ್ತೆ. ಇದಕ್ಕಾಗಿ ಇಂಡಿಯಾ ಗವರ್ನ್‌ಮೆಂಟಿನವರು ೯೩ ರಿಲೀಫ್ ಕಾಮಗಾರಿಗಳನ್ನೂ, ೪ ಅನಾಥಾಲಯಗಳನ್ನೂ ಸ್ಥಾಪಿಸಿರುತ್ತಾರೆ. ದಿನ ಒಂದಕ್ಕೆ ೧೪೪೫೩೦ ಜನಗಳು ಆ ಕಾಮಗಾರಿಗಳಲ್ಲಿ ಜೀವಿಸುತ್ತಿರುವರು.

ಬಿರಾರು ದೇಶ:—ಈ ದೇಶದಲ್ಲಿ ಮೂರು ಡಿಸ್ಟ್ರಿಕ್ಟುಗಳಲ್ಲಿ ೩೫ ರಿಲೀಫ್ ಕಾಮಗಾರಿಗಳನ್ನು ಏರ್ಪಡಿಸಿ ಅವುಗಳ ದಿನಕ್ಕೆ ೩೦೩೯೩ ಪ್ರಜೆಗಳಿಗೆ ಕೂಲಿ ಕೊಟ್ಟು ಸಾಕುತ್ತಿದ್ದಾರೆ.

ಮದರಾಸ್:—ಈ ಪ್ರಾಂತದಲ್ಲಿ ನಾಲ್ಕು ಡಿಸ್ಟ್ರಿಕ್ಟುಗಳಲ್ಲಿ ನಿರಕ್ಷಾಮವು ಬಂದಿದೆ. ಸರ್ಕಾರದವರು ೨೧ ಕಡೆ ರಿಲೀಫ್ ಕಾಮಗಾರಿಗಳನ್ನು, ೧೭ ಸ್ಥಳಗಳಲ್ಲಿ ಸುಮ್ಮನೆ ಜನರಿಗೆ ಅನ್ನದಾನ ಮಾಡುವಂಥಾ ಅನಾಥಶಾಲೆಗಳನ್ನೂ ಸ್ಥಾಪಿಸಿದ್ದಾರೆ. ಇವುಗಳ ಸಹಾಯದಿಂದ ದಿನವಹಿ ಸ್ವಲ್ಪ ಹೆಚ್ಚು ಕಡಿಮೆ ೨೭ ಸಹಸ್ರ ಪ್ರಜೆಗಳು ಜೀವಿಸುತ್ತಿರುವರು.

ಬೊಂಬಾಯಿ:—ಈ ಅಧಿಕಾರಕ್ಕೆ ಸೇರಿದ ೭ ಡಿಸ್ಟ್ರಿಕ್ಟುಗಳಲ್ಲಿ ಪ್ರಜೆಗಳು ಬಹಳ ಕಷ್ಟವನ್ನು ಅನುಭವಿಸುತ್ತಿರುವರು. ಸರ್ಕಾರದವರು ೧೦೪ ಕಡೆ ರಿಲೀಫ್ ಕಾಮಗಾರಿಗಳನ್ನು ಸ್ಥಾಪಿಸಿ ೨೪೯೩೧೦ ಪ್ರಜೆಗಳನ್ನು ಸಾಕುತ್ತಿದ್ದಾರೆ.

ಮಧ್ಯಪ್ರಾಂತಗಳು:—ಈ ಭಾಗದಲ್ಲಿ ಕ್ಷಾಮದ ಬಿರುಸು ಬಹು ಭಯಂಕರವಾದದ್ದಾಗಿದೆ. ೧೩ ಡಿಸ್ಟ್ರಿಕ್ಟುಗಳ ಪ್ರಜೆಗಳಿಗೆ ಕೆಲಸವಿಲ್ಲವೈ ತಿನ್ನುವದಕ್ಕೆ ಗತಿಯಿಲ್ಲದೆ ನಾನಾ ಸಂಕಟಗಳನ್ನು ಅನುಭವಿಸುತ್ತಿರುವರು. ಸರ್ಕಾರದವರು ೬೭ ರಿಲೀಫ್ ಕಾಮಗಾರಿಗಳನ್ನು ಸ್ಥಾಪನೆ ಮಾಡಿದ್ದಾರೆ. ಇವುಗಳಲ್ಲಿ ದಿನವಹಿ ೧೯೩೯೪೩ ಪ್ರಜೆಗಳು ಆಹಾರ ಪದಾರ್ಥಗಳನ್ನು ಗಳಿಸುತ್ತಿದ್ದಾರೆ. ಇದಲ್ಲದೆ ೩೧ ಕಡೆ ಸ್ಥಾಪಿಸಲ್ಪಟ್ಟಿರುವ ಅನಾಥಾಲಯಗಳಲ್ಲಿ ಸುಮಾರು ೧೦-೧೧ ಸಹಸ್ರ ಪ್ರಜೆಗಳು ಸರ್ಕಾರದವರಿಂದ ಸಾಕಲ್ಪಡುತ್ತಿರುವರು.

ಸನ್ ೧೮೯೭ನೇ ವರ್ಷದಲ್ಲಿ ಸಂಭವಿಸುವ ಮುಖ್ಯವಾದ ಸಂಗತಿಗಳಬಗ್ಗೆ ಝಾಡಕೀಲ ಸಾಹೇಬರವರ ಭವಿಷ್ಯತ್ತು

ಈ ನಿಜವೆ ರು ಪ್ರಸಿದ್ಧ ಜೋಯಿಸರಾಗಿದ್ದು, ನಕ್ಷತ್ರವಿದ್ಯಾ ಗಣಿತದ ಮೂಲಕ ಮುಂದೆ ನಡೆಯುವ ಅನೇಕ ಸಂಗತಿಗಳನ್ನು ಮುಂಚಿತವಾಗಿ ಭವಿಷ್ಯವನ್ನು ಹೇಳುವದರಲ್ಲಿ ನಿಪುಣರಾಗಿರುತ್ತಾರೆ. ಇವರು ಸೂರ್ಯನು ಮಕರ ರಾಶಿಯನ್ನು ಪ್ರವೇಶ ಮಾಡುವಾಗ್ಯೆ ಬುಧನು ಉಚ್ಚನಾಗಿದ್ದು ಚಂದ್ರನ ಸಮೀಪವಾಗಿಯೂ, ಮಂಗಳನೊಡನೆಯೂ ಅಷ್ಟಮ ಸ್ಥಾನದಲ್ಲಿರುವ ಕಾರಣ ಎಲ್ಲಕಡೆಗೂ ದೊಡ್ಡ ಒಳಸಂಚಿಕೆಗಳಾಗುವವು. ರಾಜದರ್ಬಾರದಲ್ಲಿ ಖಟಪಟಿಗಳು ನಡೆಯುವವು. ಪರದೇಶದ ರಾಜರೊಡನೆ ಯುದ್ಧಪ್ರಸಂಗದ ಚಿಹ್ನ ಉಂಟಾಯಿತು. ಯಾವನೊಬ್ಬ ಬಲಾಢ್ಯ ಶತ್ರುವು ಇಂಗ್ಲಾಂಡಿನ ಮೇಲೆ ಏರಿಬರುವನು. ಪ್ರತಿಸ್ಪರ್ಧಿಯು ಯುಕ್ತಿ ಬಲವಾಗಿ ಇಂಗ್ಲಾಂಡವು ಯುದ್ಧಕ್ಕೆ ನಿಲ್ಲಬೇಕಾಗುವದು. ಪೂರ್ವ ಪಶ್ಚಿಮ ದಿಕ್ಕುಗಳಲ್ಲಿಯೂ, ದಕ್ಷಿಣ ಆಫ್ರಿಕದಲ್ಲಿಯೂ ಬರುವ ಬಗೆಗಳಲ್ಲಿ ಇಂಗ್ಲಾಂಡಿನ ಮಾರ್ಗವು ಜಯದಿಂದ ಯುಕ್ತವಾಗುವದು. ಯುದ್ಧ ನಿವಾರಣೆಗಾಗಿ ನಾನಾ ಯುಕ್ತಿ ಪ್ರಯುಕ್ತಿಗಳನ್ನು ಉಪಯೋಗಿಸುವ ಪ್ರಸಂಗ ಬರುವದು.

೮ನೆ ಮತ್ತು ಯುರೋಪಿನವರು ೧೧ನೇ ಮಾಸದಲ್ಲಿದ್ದದ್ದರಿಂದ ಪಾರ್ಲಿಮೆಂಟಿನಲ್ಲಿ ಅನಾನುಕೂಲವಾಗಿ ಬಹು ಜನ ಸಭಾ ಸದರು ತಣ್ಣಗಾಗುವರು.

ಶನಿಯು ಸೆಂಟ್‌ಪೀಟರ್ಸ್‌ಬರ್ಗಿನ ಉತ್ತರವಿಸ್ತಾರ ಮಧ್ಯ ರೇಖೆಯ ಮೇಲೆ ಸಂಚರಿಸುತ್ತಿರುವ ಕಾರಣ ರಷ್ಯಾ ಜನರು ತಮ್ಮಲ್ಲಿ ಸುಧಾರಣೆಗಳಾಗಬೇಕೆಂದೂ, ಸ್ವತಂತ್ರತೆ ದೊರೆಯಬೇಕೆಂದೂ ತಮ್ಮ ತಮ್ಮೊಳಗೆ ದಂಗೆ ಎಬ್ಬಿಸುವರು. ರಾಜನು ಪ್ರಜೆಗಳಿಗೆ ಯೋಗ್ಯ ಹಕ್ಕುಗಳನ್ನು ಕೊಡುವ ಸಂಭವವುಂಟು. ನಿಹಿಲಿಸ್ಟ್ ಜನರ ತಂತ್ರಗಳಿಗಾಗಿ ರಾಜನು ಎಚ್ಚರಿಕೆಯಿಂದಿರಬೇಕಲ್ಲದೆ ತನ್ನ ಪ್ರಕೃತಿಯನ್ನಾದರೂ ಜಪ್ಪಿಸಿಕೊಂಡಿರಲಿಕ್ಕೆ ಬೇಕು.

ಕಲ್ಕತ್ತೆಯಲ್ಲಿ ಇನ್ನಿ, ಯುನೇನಿಸರು ೪ನೇ ಭಾವದ ಮೇಲೆ ನೆಯು ಪ್ರದೇಶದಲ್ಲಿರುವ ಕಾರಣ ಹಿಂದುಸ್ಥಾನದೊಳಗಿನ ಕೆಲವು ಪ್ರಖ್ಯಾತಿ ಜನ ಸಾಯುವರು. ಕೆಲವರು ನೀರಿನಲ್ಲಿ ಮುಳುಗಿ, ಕೆಲವರು ಬೆಂಕಿಯಿಂದ ಸುಟ್ಟುಕೊಂಡು ಸಾಯುವರು.

ರವಿ, ಬುಧರು ೯ನೇ ಭಾವದಲ್ಲಿದ್ದದರಿಂದ ವಿದ್ಯಾಭಿವೃದ್ಧಿಯುಂಟಾಗುವದು. ಆದರೆ ಬುಧನು ಚಂದ್ರನ ಸಮ್ಮುಖದಲ್ಲಿದ್ದ ಕಾರಣ ಧರ್ಮ ಸಂಬಂಧದಲ್ಲಿ ಅನೇಕ ಗಳುಂಟಾಗುವವು. ಇದರಿಂದ ಕೊಲೆ ಸುಲಿಗೆಗಳುಂಟಾಗಿ ದೊಡ್ಡ ದಂಗೆಯಾಗುವದು.

ತಾರೀಖು ೧ನೇ ಫೆಬ್ರವರಿಯ ದಿವಸ ಕಂಕಣಾಕೃತಿ ಸೂರ್ಯಗ್ರಹಣವಾಗುವದು. ಇದು ಯೂರೋಪಿನಲ್ಲಿ ಕಾಣಲು ಮಿಲ್ಲ. ದಕ್ಷಿಣ ಅಮೆರಿಕದ ವೆನಿಜುಲಾ ರಾಜಧಾನಿಯ ಕ್ಯಾರಕ್ಯಾಸ್ ಪಟ್ಟಣದಲ್ಲಿ ರಾತ್ರಿ ಉದಯಿಸುವ ಚಂದ್ರನು ಸಾಯಂಕಾಲದ ಆಕಾಶ ಹೊತ್ತಿರುವಾಗಲೇ ಕಾಣುವನು. ಮತ್ತು ಸೂರ್ಯಗ್ರಹಣವು ಕೊಲಂಬಿಯಾದಲ್ಲಿಯೂ, ವೆನಿಜುವೆಲದಲ್ಲಿಯೂ ಇರುವದರಿಂದ ವೆನಿಜುಲಾದಲ್ಲಿ ಭಯಂಕರವಾದ ಭೂಕಂಪದ ಧಕ್ಕೆ ಬಡಿಯುವದು. ಮಹಾ ದುರ್ಭಿಕ್ಷವಾಗುವದು. ಲೂಟಿ ದರೋಡೆಗಳೂ, ರೋಗದ ಬಾಧೆಯೂ ಉಂಟಾಗುವದು. ತಾರೀಖು ೨೦ನೇ ಮಾರ್ಚಿಯ ದಿವಸ ಸೂರ್ಯನು ಮೇಷ ರಾಶಿಗೆ ಬರುವನು. ಆಗಲಿಕ್ಕೆ ಬರ್ಲಿನ್, ವಿಯೆನ್ನಾ, ಅರ್ಥೆನ್ಸ್ ಶಹರುಗಳಲ್ಲಿ ಮಂಗಳನು ಬಲಿಷ್ಠನಾಗುವನು. ಇದರಿಂದ ಜರ್ಮನಿ, ಆಸ್ಟ್ರಿಯಾ, ಹಂಗೇರಿ ದೇಶಗಳಲ್ಲಿ ಶಾಂತತೆಯು ಭಂಗವಾಗಿ ಶತ್ರುಗಳು ಗಿಬಿಯಲ್ಪಡುವರು. ಆಸ್ಟ್ರಿಯಾ ಜನರು ದೊಡ್ಡವರ ಮೇಲೆ ಸಾಗಿ ಹೋಗುವರು. ಗ್ರೀಸ್ ದೇಶವು ಸುಮ್ಮನೆ ಕೂಡ್ರದೆ ತುರ್ಕಸ್ಥಾನದ ಕೆಲವು ಪ್ರಾಂತಗಳನ್ನು ತನ್ನ ಸ್ವಾಧೀನ ಮಾಡಿಕೊಳ್ಳುವದು. ಕಾನ್‌ಸ್ಟಾಂಟಿನೋಪಲ್ ಶಹರದಲ್ಲಿ ಮಂಗಳನು ಬಲಿಷ್ಠನಾಗಿರುವದರಿಂದ ತುರ್ಕಸ್ಥಾನದಲ್ಲಿ ದೊಡ್ಡದಾದ ದಂಗೆಗಳು ಆಗುವವು. ತುರ್ಕಸ್ಥಾನದ ಪೂರ್ವ ಭಾಗಕ್ಕೆ ವಿಶೇಷ ಉಪದ್ರವವಾಗುವದು. ಹಿಂದುಸ್ಥಾನದಲ್ಲಿ ಧರ್ಮ ಸಂಬಂಧವಾದ ಕಲಹಗಳಾಗುವ ಬಯವುಂಟು. ಈ ಸಮಯದಲ್ಲಿ ಹಿಂದೂಲೋಕರ ಪ್ರತಿಷ್ಠೆಯು ನ್ನು ಹೆಚ್ಚುವದು.

ಶುಕ್ರನು ಮಧ್ಯ ರೇಷೆಯಲ್ಲಿ ಬಲಿಷ್ಠನಾಗಿಯೂ, ಗುರುವು ೨ನೇ ಭಾವದಲ್ಲಿಯೂ ಇರುವ ಕಾರಣ ಹಿಂದುಸ್ಥಾನದ ವ್ಯಾಪಾರ ವ್ಯವಹಾರದಲ್ಲಿ ವೃದ್ಧಿಯುಂಟಾಗುವದು. ಮೇಷ ಲಗ್ನದಲ್ಲಿ ಗುರುವು ಮಿಥುನ ಭಾವದಲ್ಲಿ ಪ್ರವೇಶ ಮಾಡುವದರಿಂದ ಈ ಹೊತ್ತು ಹಿಂದುಸ್ಥಾನಕ್ಕೆ ಶುಭವಾಗುವದು ದರ್ಶನೀಯವಾಗುವುದು.

ಬೊಂಬಾಯಿಯಿಂದ ಕಲ್ಕತ್ತೆಗೆ ಮತ್ತು ಯಾರ್ಕಿನಲ್ಲಿ ಗ್ರಹಣಗಳಿಂದ ಮಂಗಳನು ಉಚ್ಚನಾಗಿರುವದರಿಂದ ಕರ ಹೆಚ್ಚುವರು ಲಕ್ಕರ್ ಬೆಳೆಯುವದು, ಮತ್ತು ಲಕ್ಷಾಯಿಯೂ ಆಗಬಹುದು. ಜರ್ಮನ್ ರಾಜನು ತನ್ನ ದಕ್ಷಿಣ ಆಫ್ರಿಕಾದಲ್ಲಿ ತೊಡಗುವನು. ಶಿವನೆಂದು ಜಯವನ್ನು ಕೊಂಡು ಸಹ ಹಾಕಿದರೂ ಹಾಕಬಹುದು.

ತಾರೀಖು ೨೧ನೇ ಜೂನ್ ದಿವಸ ಸೂರ್ಯನು ಕರ್ಕಟಕರಾಶಿಗೆ ಬರುವನು. ಆಗ್ಯೆ ಕಲ್ಕತ್ತೆಯ ಸಮೀಪ ಗುರುವು ಇರುವದರಿಂದ ಹಿಂದುಸ್ಥಾನದ ರಾಜ್ಯಾಡಳಿತ ಭಾಗದಲ್ಲಿ ಸುಧಾರಣೆಯಾಗುವದು. ಶುಕ್ರನು ೯ನೇ ಭಾವದಲ್ಲಿದ್ದುದರಿಂದ ದೇಶೀ ಉದ್ಯೋಗ, ಶಿಕ್ಷಣ, ಗಾಯನ, ಕಲಾಕೌಶಲ್ಯ ಮೊದಲಾದವುಗಳು ವೃದ್ಧಿಯಾಗುವ ಲಕ್ಷಣವಿದೆ.

ತಾರೀಖು ೨೨ನೇ ಸೆಪ್ಟೆಂಬರಕ್ಕೆ ಸೂರ್ಯನು ತುಲಾರಾಶಿಯಲ್ಲಿರುವಾಗ ಮಹಾ ಅಗ್ನಿ, ಇಂಗ್ಲಾಂಡಿನಲ್ಲಿ ಜನರ ಪ್ರಕೃತಿಗೆ ವಿಕೃತಿ ಮಾಡುವವು. ಜ್ವರದ ಪಿಡಗು ಹೆಚ್ಚುವದು. ಹಾಳೆಯು ರಾಷ್ಟ್ರ ಸಂಬಂಧ ಬೆಂಕಿಯಿಂದ ಲಗ್ನ, ಹಿಂದುಸ್ಥಾನದ ಸಮೀಪದ ಸಮ ನಿಮಿಷದಲ್ಲಿ ಇಂಗ್ಲಿಷ್ ಜನರ ಅಸ್ವಸ್ಥರಾಗುವರು. ಇಂಗ್ಲಾಂಡಿನಲ್ಲಿ ಬಾಲಕರಿಗೂ ಹುಡುಗರಿಗೂ ಘಾತಕ ಪ್ರಸಂಗ ಬರುವದು. ಸ್ತ್ರೀಯರು ಸತಿದೇವಿಯ ಸಾಯುವರು.

ಕಲ್ಕತ್ತೆಯ ಕಡೆಗೆ ಮಂಗಳನು ೮ನೇ ಭಾವದಲ್ಲಿದ್ದ ಕಾರಣ ಬ್ರಹ್ಮ ದೇಶದಲ್ಲಿ ಅಶಾಂತತೆಯಾಗುವದು. ರೈಲ್ವೆ ಮತ್ತು ಹಾಲ್ ಸಂಬಂಧದಿಂದ ಗೈರಸೋಯಿಯಾಗುವದು. ಯಾಕ್ಸ ಟಿಡ್ ಕೈಸ್ಟನ ರಾಜ ಸಭೆಯಲ್ಲಿ ಬಹಳ ನಡವಳಿ ಯುಕ್ತವಾದ ವಿವಾದವಾಗುವದು. ಅಮೆರಿಕಾ ಸ್ಥಳಗಳಲ್ಲಿ ದೃಢ ಒಗ್ಗಟ್ಟು ಮುರಿದು ಹೋಗುವದು. ಮತ್ತು ಈ ವರ್ಷದ ಸ್ವರೂಪವನ್ನು ಹೊಂದು ಶೋಧಿಸತಕ್ಕವುದು.

ಕನ್ನೆಕ್ಷರ್, ಯುರೋಪಿನ ಗ್ರಹಗಳ ಯೋಗದಿಂದ ಬಹಳ ಚಮತ್ಕಾರವಾಗುವದು. ಇಂಥ ಚಮತ್ಕಾರವು ೧೮೩೭ ನೇ ವರ್ಷದಲ್ಲಿ ಆದಂತೆ ಆಗಿ ೧೮೩೭ರಲ್ಲಿ ಇಂಗ್ಲಾಂಡಿನ ಮೊದಲನೇ ಎಡ್ವರ್ಡ್ ರಾಜನು ಸ್ಕಾಟ್ಲಂಡಿನ ಎಕಸ್ ರಾಜನ ಮೇಲೆ ದಂಡೆತ್ತಿ ಯುದ್ಧ ಮಾಡಿದ್ದನು. ಆಗ್ಯೆ ಲತಾಯಿಯು ಸಿದ್ಧವೆಂದಾಗ ಎಲ್ಲಿಯೂ ಅಲ್ಲಿಂದಲೇ ಆಗಿ ಹೋಗಿತ್ತು. ಅದರಂತೆ ಈ ವರ್ಷದಲ್ಲಿಯೂ ಗ್ರಹಗಳ ಯೋಗ ಬರುವದರಿಂದ ಇತಿಹಾಸದಲ್ಲಿ ಈ ಕಾಲದ ಸ್ಮರಣೆ ಚಿರಸ್ಥಾಯಿಯಾಗಿ ಉಳಿಯುವದು. ೧೮೦೨ರಲ್ಲಿ ಇದೇ ಸ್ಥಿತಿ ಬಂದಿತ್ತು. ಎರಡೇ ತಿಂಗಳ ಅಂತರ ವಿದ್ದಲ್ಲಿಂದ ತಪ್ಪಿಸಿಕೊಂಡು ಆತನು ಓಡಿಹೋಗಿದ್ದ. ಆಗ್ಯೆ ಇಂಗ್ಲಾಂಡವು ಸಮುದ್ರದಲ್ಲಿ ತನ್ನ ಶ್ರೇಷ್ಠತ್ವವನ್ನು ತೋರಿಸಿತ್ತು. ನಂತರ ಈ ವಿಧ ಗ್ರಹಗಳ ಸಾಮಾನ್ಯವು ತಾರೀಖು ೧೭ ಮಾರ್ಚ ೧೮೦೧ರಲ್ಲಿ ಬಂದಿತ್ತು. ಆಗಲೂ ಫ್ರಾನ್ಸಿನ ಪ್ರಜಾ ಸತ್ತಾತ್ಮಕ ರಾಜ್ಯದ ಒಡೆಯನು ನೆಪೋಲಿಯನ್ ಸತ್ತಾಧಿಕಾರಿಯಾದನು. ಇಷ್ಟಾದ ಕೆಲವು ದಿವಸಗಳಲ್ಲಿಯೇ ಕ್ರಿಮಿಯಾದ ಯುದ್ಧವಾಯಿತು. ಈ ವರ್ಷದ ಯೋಗದಮೇಲಿಂದ ಸೂಕ್ಷ್ಮವಾದ ಇಂಗ್ಲಾಂಡಿಗೆ ನಷ್ಟವು ಬರುವ ಬಯವಿಲ್ಲ ಎಂದು ಭಾವಿಸಿ ಈ ಯಿಂದ ನಿಲ್ಲಿಸಲಾಗಿದೆ.

ಕರ್ನಾಟಕ ಪ್ರಕಾಶಿಕೆ ಚಂದ್ರನು ಬಿಂಬ ವಿದ್ಯಾ ಮಂಗಳನು ಕಳೆ ಭಾವದಲ್ಲಿರುವದರಿಂದ ದಕ್ಷಿಣ ಸ್ಥಾನದ ಚಾವುಹಗಿಗೆ ಸ್ವಲ್ಪ ಅಲ್ಪ ಪ್ರಸಂಗವದೆ.

NOTICE.

VIDYASARA SANGRAHA.

A TREATISE ON THE PRINCIPLES OF

HINDU MEDICINE

Price, including Postage Rs. 5-0-0

ವೈದ್ಯಸಾರಸಂಗ್ರಹ.

ಇದು ಚರಕ, ವಾಗ್ಭಟ, ಸುಶ್ರುತ, ವೈದ್ಯನಿಘಂಟ್ವಾದ್ಯನೇಕ ಪೂರ್ವಗ್ರಂಥಗಳ ಸಂಗ್ರಹ ರೂಪವಾಗಿರುತ್ತದೆ

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಹಾಸಲ್ ಸೇರಿಸಿ ಪ್ರತಿ ೧ಕ್ಕೆ ೫—೦—೦

ಬೇಕಾದವರು ಬೆಂಗಳೂರು ಕರ್ನಾಟಕ ಪ್ರೆಸ ಪ್ರೊಪ್ರೈಟರವರಿಗೆ ಬರೆದು ತರಿಸಿಕೊಳ್ಳಬಹುದು

ಈ ಕಂಪೆನಿಯು ಸನ್ ೧೮೫೩ನೇ ಇಸವಿಯಲ್ಲಿ ಸ್ಥಾಪಿಸಲಾಯಿತು.

ಜನ್ಮದ ಲಾಭವು.

ವಜ್ರಾಂಗ ಖರ್ಜೂರವು.

ಬಲಾರೋಗ್ಯ ಪುಷ್ಟಿಗಳನ್ನು ಬೆಳೆಸತಕ್ಕ ಉತ್ಪತ್ತಿಯು.

ಅತ್ಯಂತ ಶ್ರೇಷ್ಠತರವಾದ ಖರ್ಜೂರಿಂದ ತೆಗೆಯಲ್ಪಟ್ಟ ರಸ ಉತ್ಪತ್ತಿಗಳು ಹಿಂದುಸ್ಥಾನದ ಅನೇಕ ವನಸ್ಪತಿಗಳ ಸಾರಗಳ ಸತ್ವಗಳನ್ನು ಕೂಡಿಸಿ, ತುಪ್ಪದೊಳಗೆ ಮುಗಿಸಿ, ಒಳ್ಳೇ ಜೇನಿನ ತರಹ ಸಕ್ಕರೆಯ ಪಾಕದಲ್ಲಿ ಸಿದ್ಧ ಮಾಡಿದ ಶ್ರೇಷ್ಠ ಈ ಉತ್ಪತ್ತಿಗಳು ಮಹಾ ಔಷಧಗಳಾಗಿದ್ದು, ಒಳ್ಳೇ ರುಚಿಯುಳ್ಳವಾಗಿ ಇವುಗಳ ಸೇವನೆಯಿಂದ ಕಫ, ವಾತ, ಪಿತ್ತ ಈ ತ್ರಿದೋಷಗಳುಂಟಾಗಿ ಬೀಳುತ್ತಿದ್ದ ಬಹಳ ವ್ಯಾಧಿಗಳೂ ಹೋಗುತ್ತವೆ. ೪೦ ವರ್ಷಗಳ ಪ್ರಾಯದವರಾದ ಮನುಷ್ಯರ ಶಕ್ತಿ ಕ್ಷೀಣವಾದರೂ ಸರಿ ಯೌವನದ ಸಂಗದ ಸರಾಸತ್ವ ಪ್ರಾಪ್ತವಾಗುತ್ತದೆ. ಜನರಿಗೆ ಅಪ್ರಿಯವಾದ ಬಲ ಕುಂಟಾಗಿ ನಪುಂಸಕತ್ವವು ಇಲ್ಲದಂತಾಗುತ್ತದೆ. ಲಘ್ವಿಯು ಮುಂಚೆ ಅಥವಾ ಹಿಂದೆ ಜರಿದುಹೋಗುವ ಧಾತು ನಿಲ್ಲುತ್ತದೆ. ಸ್ವಪ್ನದೋಷವಾಗುವದಿಲ್ಲ. ವೀರ್ಯವು ಬೆಳೆದು ಮೈ ಬಣ್ಣವು ಸುಧಾರಿಸುತ್ತದೆ. ಪರಮ ಹಾಗೂ ಉಷ್ಣ ಸಂಬಂಧಿ ರೋಗಗಳಿಗೆ ಇಲ್ಲದಂತಾಗಿ ಧಾತು ಪುಷ್ಟವಾಗುತ್ತದೆ. ಮೂರು ಹೊತ್ತಿನಲ್ಲಿಯೂ ಅನ್ನ ಪಚನವಾಗಿ ಒಳ್ಳೇ ಹಸಿವೆಯಾಗುತ್ತದೆ. ಹೋಗುವದರೊಂದಿಗೆ ಕೂಡಲೇ ಸ್ಪಷ್ಟ ಸೌಖ್ಯವಾಗುತ್ತದೆ. ಕ್ಷಯ, ಉದರ, ದಮ್ಮು ಈ ರೋಗಗಳು ನಾಶ ಹೊಂದುತ್ತವೆ. ಯೋಗ್ಯೇನೆ ಇದ್ದಲ್ಲಿ ೧೧ ದಿವಸಗಳ ವರೆಗೆ ನಾಲ್ಕುವ ಒಂದೇ ಡಬ್ಬಿಯಿಂದ ಗುಣವುಂಟಾಗುತ್ತದೆ. ಮತ್ತು ಹಳೆದಾದ್ದಲ್ಲಿ ೪೦ ದಿನಗಳ ಮೇಲೆ ಗುಣ ಬಂದೀತು. ೧೧ ದಿನಗಳ ವರೆಗೆ ನಾಲಕ್ಕೆ ೧ ಡಬ್ಬಿಗೆ ೧-೮-೦ ರೂ|| ಒಂದೇಸಾರಿ ೪ ಡಬ್ಬಿಗಳು ತೆಗೆದುಕೊಳ್ಳತಕ್ಕವರಿಗೆ ಒಂದು ಡಬ್ಬಿಯು ಉಚಿತವಾಗಿ ಸಿಕ್ಕೀತು. ಈ ಉತ್ಪತ್ತಿಯಿಂದ ಹೆಂಗಸರು ಸತೇಜರಾಗುತ್ತಾರೆ. ಗರ್ಭಿಣಿಯರಿಗೂ ಬಾಣಂತಿ ರೋಗಗಳು ವಾಸಿಯಾಗುತ್ತವೆ. ಎಲ್ಲವನ್ನೂ ಸರಿಯಾಗಿ ಬೇರೆ ಇಲ್ಲದವರನ್ನೂ ಪ್ರಮೇಹ ಬಲಾರೋಗ್ಯ ಪುಷ್ಟಿಗಳನ್ನು ಬೆಳೆಸುತ್ತವೆ. ಸಾಹೇಬ್ ಜನರಲ್ಲಿ ಬಹಳ ಡಬ್ಬಿಗಳು ಖರ್ಚಾಗುತ್ತವೆ. ಈ ಔಷಧವು ಈ ಕಂಪೆನಿಯಹೊರ್ತು ಬೇರೆ ಸ್ಥಳಗಳಲ್ಲಿ ಆಗುವದಿಲ್ಲ. ಯಾವತ್ತು ದೇಶಗಳಲ್ಲಿಯೂ ವೈದ್ಯಶಾಲೆಗಳಿಗಾಗಿ ಕಳುಹಿಸಲ್ಪಡುತ್ತದೆ. ಬರೆದು ಬಂದು ಕೂಡಲೆ ಈ ಕಂಪೆನಿಯು ಬೇಕಾದವರಿಗೆ ಈ ಡಬ್ಬಿಗಳು ಕಳುಹಿಸಿಕೊಟ್ಟೀತು. ಅಂಚೆಯ ಹಾಸಲು ವ್ಯಾಲ್ಯೂ ಪೇಯಬಲ್ ವೆಚ್ಚ ಬೇರೆ ಕೊಡಬೇಕು. (ಉಚಿತ ಡಬ್ಬಿ ಸಹ ೮ ಡಬ್ಬಿಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬಾದಲ್ಲಿ ಎಲ್ಲಾ ಖರ್ಜೂರದ ಜಾತಿ ರವಾನಿಸುವೆವು, ಹೀಗೆ ಕಳುಹಿಸಿದರೆ ಟಪ್ಪಾಲ್ ಖರ್ಚು ಕಡಮೆ ಬೀಳುವದು.)

ಮೇಲ್ವಿಳಾಸ—ಪಿ. ಎಲ್. ಎ. ಬ್ರದರ್ಸ್ ಮತ್ತು ಕಂಪೆನಿ,

ಫಸ್ಟ ಇಂಗ್ಲಿಷ್ ಬ್ರ್ಯಾಂಚ್ ಆಫೀಸ್, ಡಿಸ್ಟ್ರಿಕ್ಟ್ ಬೆಳಗಾಂವ.

ಪೋಸ್ಟ—ಬೆಳಗಾಂವ, Post BELGAUM.

BANGALORE:—Printed and Published at the KARNATAKA PRESS, No. 40, HOSPITAL ROAD, CITY.—1897.

THE Karnataka Prakasika.

ಪ್ರಕಟನೆಯ ದರ { ಮೊದಲನೆಯಾವರ್ತಿ ಪಙ್ಕ್ತಿ ಒಂದಕ್ಕೆ 0 2 0
{ ಎರಡನೆಯಾವರ್ತಿ ಪಙ್ಕ್ತಿ ಒಂದಕ್ಕೆ 0 1 0
[ಪ್ರತಿ ಸಲ-ಎರಡುವರ್ತಿಗಿಂತ ಜಾಸ್ತಿಯಾಗಿ ಎಷ್ಟು ತಡವೆಯಾದರೂ ಹಾಕುವದಾದರೆ ಪಙ್ಕ್ತಿ ಒಂದಕ್ಕೆ ೦ ಆಣೆ ಯಂತೆಯೇ ಲೆಕ್ಕ ಮಾಡಲ್ಪಡುವದು.]

ಕರ್ಣಾಟಕ ಪ್ರಕಾಶಿಕಾ.

Published Every Monday Morning

ಚಂದಾದರಗಳು.—ಸ್ಥಳದವರಿಗೆ, | ಪರಸ್ಥಳದವರಿಗೆ, ಪೋಸ್ಟೇಜ್ ಸಹ
ಸಾಲ್ 1 ಕ್ಕೆ 3 0 0 | ಸಾಲ್ 1 ಕ್ಕೆ ... 4 0 0
6 ತಿಂಗಳಿಗೆ, ... 2 0 0 | 6 ತಿಂಗಳಿಗೆ .. 2 8 0
3 ತಿಂಗಳಿಗೆ, ... 1 4 0 | 3 ತಿಂಗಳಿಗೆ ... 1 6 0

ಪ್ರಕಾಶನವಿವಿಧಪ್ರವೃತ್ತ್ಯಾದಿಗವಾರ್ತ ಕರ್ಣಾಟಕಪ್ರಕಾಶನಪರಾಭಿಧಾಪ್ರಥಿತಸಾಹಿತ್ಯೇಕ್ಷಿತಾ || ನೃಗಾಂಕಟಿತವಾಸರನಿಶಿತವಮುದ್ರಾ ಸಜ್ಜನಸ್ಸರ್ವಜನಸಂತೋಷಿತಾ ದಿನೇದಿನಸಂಪದಂ ||

VOL. XXIV. BANGALORE:—MONDAY, FEBRUARY 15, 1897 No. 7.

ADVERTISEMENTS

Southern Mahratta Railway

District Traffic Superintendent's Office,

Bangalore City, 7th February 1897

NOTICE

It is hereby notified to the public that the consignment of a waggon load of Tanning Bark consisting of 16 bundles booked under Invoice No 28 and Railway Receipt No 96, dated 17th April 1896 ex Ronnsandra to Bangalore City will be sold by Public Auction under Section 56 of the Indian Railway Act after 15 days from date.

D. H. LINDSAY,
Dt. Traffic Superintendent

Select Telegrams.

London, 6th February—In the House of Commons last night Sir Michael Hicks Beach moved a vote of £798,802 for the purpose of refunding to Egypt the cost of the Soudan expedition and for building a Railway from Wadyhalfa to Abuhamed

Sir Michael stated that when the powers of the Mixed Court came to be considered next year, the question would arise whether the Court was to be allowed to usurp authority entrusted by the Powers to the Caisse de la Dette. Egypt, he added, pays interest at the rate of 2¾ per cent upon the loan, and will repay the capital by convenient instalments

The necessity of making the advance was, he said, likely to prolong and not to shorten our occupation of Egypt The main cause of prolonging our occupation much longer than was anticipated is the refusal on the part of France to allow Great Britain a free hand Britain regards the advance in the Nile Valley as necessary, and won't be worried out of its policy by hindrances such as the refusal of money for the expedition

Sir Michael said that it was proposed in the coming season to advance to Abuhamed, and afterwards probably beyond, but it was necessary first to consolidate the Khedive's rule in the territory already won, and secondly to acquire important strategic positions which would be valuable in future

Mr John Morley strongly criticised Sir M Hicks-Beach's statement which, he said, was a direct and imprudent challenge to France and Russia

Sir W V Harcourt spoke in the same strain

The Hon'ble G Curzon denied that Sir Hicks Beach's statement was either provocative or irritating to France

On a division the vote was carried by 169 against 57 votes.

Cairo, 6th February—The Egyptian Government have replied to France and Russia that they are legally entitled to accept a loan from the British Government for the cost of the Soudan expedition and that their international obligations are nowise infringed thereby

Paris, 6th February—The French Press is greatly excited over the statement made in the House of Commons by Sir M Hicks-Beach respecting Egypt, and regard it as an open defiance of France and Russia.

Mr Hanotaux has promised to make a statement on Monday, on the subject

St Petersburg, 7th February—The Russian Press is greatly irritated at Sir Michael Hicks Beach's statement in the House of Commons and demands prompt and vigorous action with France before the British hold on Egypt becomes irrevocable

Paris 8th February—The *Figaro* expects that a British Protectorate will be established over Egypt before the year is out

M Lanessan, in an article in the *Rappel* advises a *rapprochement* with Germany to settle the Egyptian question

London, 8th Feb—The Indian Famine Relief Fund has now reached £238 000

The increase is chiefly due to subscriptions from the large towns The Mercers Company has given £1,000 and Canada has raised £8 000

THE
Karnataka Prakasika.

MONDAY, FEBRUARY 15, 1897

THE HYDERABAD STATE

THE condition of Hyderabad is anything but what it ought to be, and very little, if any, improvement is visible. The affairs of the State have lately been brought very prominently before the public at large The Peshi Secretary, by name Sirvar Jung, has been ordered by the Nizam to quit the country He had grossly abused the power committed to him He had usurped the power that did not belong to him to such a degree that he virtually became the ruler of the province. His object was to gain as much power as possible, and at the same time to collect a large sum of money He put all his relatives and friends into posts, and obtained munsubs for his children even though they might be infants This man at last became reckless, and he had to be sent away For four years he had been the scourge of Hyderabad, a scourge nearly as bad as famine or pestilence No man was safe from his vengeance No man knew when the wrath of this official would fall upon him He ruined many people during the time he held power, and all are delighted that he has left the place—never to return But though this man is gone there are plenty of evils left behind. There is great corruption among the officials, and the delay in business is something fearful In fact, it is not too much to say that each officer of Government does pretty much what he likes If the corruption becomes too glaring the official is dismissed though if he is powerful enough or has powerful friends, he may regain his post, or be put into a better one In the next place justice is very badly administered There is great injustice in many parts of the country, and some of the magistrates, are suspected of being heavily bribed Even the High Court of the province delivers very remarkable judgments sometimes. A case in a court in Hyderabad may drag on for years, unless the litigants have influence enough to compel the judge to be expeditious, or money enough to bribe him to do the work in a reasonable time It sometimes happens that when a case has been decided the Government steps in, and prevents the decree from being executed. This was frequently done while Sarvar Jung was in power, and the same thing is sure to happen again The whole judicial system of the State requires reorganisation, and till this has been done there will at times be great injustice committed. But some of the courts are entirely independent of the Nizam, that is to say, the nobles have their own courts, and in some of them capital punishment is allowed We may be certain that these courts are not more pure than those of the Nizam, and when the latter are organised the former should be abolished, and all should be under the control of the sovereign This leads to a still deeper matter A large portion of the country is under the charge of the nobles. They are the rulers in their territories, they do what they like The Nizam cannot check them, or not to any great extent These districts pay little or nothing to the upkeep of the State, so that the burden falls all the heavier on the parts governed directly by the Nizam There is, in fact, in Hyderabad a regular feudal system and the nobles maintain their own armies and keep order without any regard to the wishes of the sovereign. This should be changed. Such a system is neither good for the Nizam nor for the people under the rule of the nobles. The estates the latter rule over should be like the Zemindaries in British territory. There should be more control exercised over them than there is at present Till what we have called the feudal system is abolished the state of Hyderabad can never be properly administered It is computed that the revenue obtained from the independent, or semi-independent, districts in Hyderabad amount to Rs 29,59,955. This is a large sum to be collected by men over whom the sovereign has little or no control The burden, as we have said, falls all the heavier on the other parts of the country. Then in the capital are all sorts of people, adventurers from all lands, and the intrigues carried on are something fearful in number and extent In the next place the finances are fearfully mismanaged It is believed that only one-third of the money collected from the people is brought into the treasury. The rest is stolen by those who collect it, or it is intercepted in some way before it reaches the treasury The financial affairs of the state are in a wretched condition, and several Viceroys have pointed this out They advised the Nizam to put the finances of his country in a thoroughly healthy condition, but up to this time nothing has been done The state is burdened with a heavy debt, which is increasing year by year. It is thought by some that there must be a collapse sooner or later if something is not done before long The credit of the Government is very low at present, and may go still lower if the financial affairs of the state are not put into better hands than is now the case. Then education is low, the schools are few, and ignorance prevails to a great extent The fact is the whole condition of the state is bad, and a thorough overhauling is required. The rulers of the province might do worse than look at Mysore, and take a few hints from the way things are managed here There are faults committed in the province, but fewer than all committed in Hyderabad.

News and Notes.

THE Government of India has issued orders authorising all Treasury Officers to grant to all-comers, Remittance Transfer Receipts on Calcutta for all subscriptions intended for the Indian Famine Charitable Relief Fund.

THE Plague threatens seriously to interfere with the leave of Medical Officers in India during the approaching summer Furlough has already been stopped, while officers who have already been granted leave but have not yet left India are warned not to leave their stations Some officers who have proceeded on leave are also likely to be recalled.

Stringent precautions are taken to prevent the importation of the plague from Bombay All Railway passengers from Bombay will be taken to segregation camp at Chinsurah, 24 miles from Calcutta where they will be examined by the Civil Surgeon If found not suffering from the plague they are to be sent to Calcutta by train via Naihati under police escort At Sealdah they will be pointed out to the Calcutta Police

AT the last meeting of the Finance Committee of the twelfth Congress, five and twenty thousand rupees have been voted to the British Committee The money will be sent on Wednesday next by Mr W C Bonnerjee on behalf of the people of Bengal

After meeting all bills and paying all debts, about 5,000 rupees will still remain with the Committee The accounts will be ready a fortnight hence

A batch of refugees from Poona side were examined in the usual way at Perambore on Saturday last at 4 P M, when one of the party was found to be suffering from the plague The man was at once marched off to the quarantine shed The rest of the party are also under observation It speaks well of the arrangements made at Perambore, but extra vigilance will no doubt be required in view of the continued exodus of people from the Western Presidency

A REPORTER to the *Westminster Gazette* has been interviewing the Lord Mayor on the subject of the Indian Famine Fund, "Cheques," remarked the Lord Mayor, "are coming in faster than we can acknowledge They kept Mr. Soulsby (his Secretary) busy until eleven o'clock last night, and I have to conduct my correspondence myself as best I can" And the *Gazette* reporter gives the following account of what he himself saw as he conversed with the Lord Mayor—'Cheques, postal orders, even stamps were being heaped upon the table, while every few minutes a fresh caller was ushered in, his purse in his hand '

MR Gladstone, the Grand Old Man of Politics, has many admirers, yet few are aware that even his senior in years of political services is still to be found amongst the Members of the House of Commons in the person of Mr Villiers, the *Doyen* of the House who has sat uninterruptedly for Wolverhampton for sixty-one years This Father of the House of Commons entered his ninety sixth year on Sunday, and is probably the most wonderful public man of the century One would have thought that at his patriarchal age he would

naturally have sought rest and retirement from the worries of a political life, but no, sessions in and sessions out he is to be found in his place in the House taking the keenest interest in debates, and is still *au courant* with everything of consequence that takes place in the social world. Age has naturally bowed his figure, and his hearing is now somewhat dull, but his intellect is as alert and conversation as cheery and keen as ever. He is the beau ideal of—"The good old English gentleman, one of the olden time. He was a Member of the House when Her Majesty came to the Throne in her teens, and bids fair to celebrate this century in January 1901 This is indeed "Record Year." On the 10th instant, the London journals congratulated a Mrs. Gray of Rochester on attaining her 103rd birthday; this fine old Englishwoman having been born January 10th 1794. The ancient old lady is still enjoying good health and in the happy possession of all her faculties.

Local and Provincial.

THE RESIDENT.—Arrived in Mercara on the 12th instant. He is expected in Mysore on the 23rd of this month.

THE CONVOCATION.—It is believed that Mr J. Cook, M. A., principal, Central College, Bangalore, will deliver the Convocation address

THE ROYAL MARRIAGE.—Many of the Mysore officials have left Bangalore for Mysore to be present at the marriage of the first Princess on the 19th of this month.

THE PLAGUE.—It has been ordered that passengers by all trains shall be examined before they come into the Station, and not only those who come from Bombay.

THE WEATHER.—We have at times rather strong winds without sun during the middle of the day. For a day or two the sky was cloudy, but no rain fell. The health of the place is fair.

EXTENSION OF THE NANJANGUD BRIDGE.—We learn that the Mysore Government has sanctioned the extension of the Kapila bridge near Nanjangud on which the Railway line passes, at a cost of Rs. 30,000

A RUMOUR.—It is rumoured that owing to the indisposition of Mr. Mackworth Young C. S. I., our late Resident that Lieut-Colonel Donald Robertson, our British Resident, will leave for the Punjab shortly to take up the Lieutenant Governorship *pro tem.*—E. M.

NEWS FROM THE CENTRAL COLLEGE.—We learn that the Government of Mysore intends abolishing the Mathematical Branch of the B. A. classes, and transferring it to the Maharajah's College, Mysore Mr. Narayana Iyengar, Professor of Mathematics, will also be transferred to Mysore. The Government, it is said, is contemplating to institute Biology or Geology. If these subjects are instituted new Professors will have to be appointed.—E. M.

THE BRIGUE RIVER ANICUT.—A small river known as the Brigue passes through Heggadadevanakote and Nanjangud talooks. Mr. Iyaswamy Iyer, Assistant Engineer of the Nanjangud Sub Division, has, we understand, submitted a plan and an estimate for constructing an anicut across this river and for opening a channel. This project seems to cost about a lakh of rupees and it is likely to irrigate about two thousand acres of land. We hope the Government will sanction the scheme under the circumstances.—M. H.

THE MYSORE CIVIL SERVICE EXAMINATION RULES.—The rules for the Mysore Civil Service Examination have been published in the last issue of the *Mysore Gazette*. Six appointments have been thrown open, two for the 1st two successful competitors, two more for successful domiciled Mysoreans who come next in order of merit and two others for nomination. The age limit to those that are in service and to those that are practising as lawyers has been fixed at thirty and to all the others at twenty five.

A DANCING GIRL CONVICTED.—One Rajamani, a dancing girl of this place, her paramour and her father were tried before the Sessions Judge of Mysore during the last Sessions and were convicted, the dancing girl being sentenced to six month's imprisonment and the other two to that of three months each. The offence against the father was that he disposed off his younger daughter to Rajamani, his other daughter, knowing that the former would be used for the purpose of prostitution. The other two accused have been found guilty of the abetment of this offence.—M.H.

THE MAHARANI'S GIRLS' SCHOOL, MYSORE.—We are exceedingly glad to find that the three girls, namely, Rukminamma, Srirangamma, and Subbamma of the Maharani's Girls' School have come out successful in the recent Matriculation Examination of the Madras University. This happy result is the first of its kind in the history of this institution, and what makes the result all the more important is that the school sent for the first time only three girls and that all the three have passed. We tender our hearty congratulation to the lady Superintendent and other teachers, the managers of the school and the successful candidates for this brilliant achievement.—M.H.

The Mysore Gazette.

Bangalore, Thursday, 11th February 1897

NOTIFICATIONS BY THE GOVERNMENT OF MYSORE

GENERAL AND REVENUE

No 8817—*J. 1030, dated, 4th February* 1897

Under Section 12 of the Code of Criminal Procedure, Mr M Shama Rao, M. A. Assistant Commissioner, Mysore district, is appointed a Magistrate of the 2nd Class.

No 8865—*Ed* 295, *dated 4th Feb* 1897.

Under Article 188 of the Mysore Service Regulations Mr M. Srinivasa Row, Deputy Inspector of Schools, Shimoga district, is granted privilege leave of absence for three months, with effect from 10th February 1897 or such other date as he may avail himself of the same.

2. T Srinivasa Row, Head Master, Anglo-Vernacular School, Shimoga, is appointed to act as Deputy Inspector of Schools, Shimoga district, during the absence on leave of Mr. M Srinivasa Row, or until further orders.

No 8971—*L F* 234-96, *dated, 8th Feb* 97

Under Section 13 of the Bangalore Municipal Regulations of 1871, Government are pleased to appoint, tentatively for one year, Simidoss Pillai, Octroi Superintendent, as Collector of Municipal taxes in the Bangalore City Municipality

No 8990—*G P* 4-94, *dated 8th February* 97.

Mr K Chandy, B. A., Probationary Assistant Commissioner is appointed an Assistant Commissioner of the 4th Class, Schedule B, with effect from the 12th November 1896, without prejudice to his duties as Acting Assistant Secretary to Government attached to the Office of the Inspector General of Police

No. 9013—*J* 1044, *dated 9th February* 97

During the absence of Mr T J. Vanderlowen, on leave or until further orders, the following acting promotions of Munsiffs are sanctioned with effect from 3rd September 1896:—

Mr. C Subba Rao, from the 2nd to the 1st Class.

Mr. J. Holt, from the 3rd to the 2nd Class.

No 9016—*J* 1044, *dated, 9th February* 1897.

During the absence of Mr. T Narahari Rao, District and Sessions Judge, on leave or until further orders, the following acting promotions of Munsiffs are sanctioned with effect from 9th October 1896

Mr B Venkatachar, from the 2nd to the 1st Class

Mr. T. R. Jayarama Iyer, from the 3rd to the 2nd Class

No. 6971—*Ft*, *F.* 92-95, *dated 2nd Feb* 97

Under Article 172 of the Mysore Service Regulations, Mr. Y Sitaramaiya, Assistant Conservator of Forests on Special Duty, Kadur district, is granted casual leave of absence for ten days, with effect from 1st February 1897 or such other date as he may avail himself of the same.

ಕರ್ಣಾಟಕ ಪ್ರಕಾಶಿಕಾ.

೧೮೯೭ನೇ ಇಸವಿ ಫೆಬ್ರುವರಿ ತಾ|| ೧೫ನೇ ಸೋಮವಾರ.

ರೋಗನಿರೋಧಕೋಪಾಯಗಳು.

ಈಗ್ಗೆ ಸುಮಾರು ನಾಲ್ಕೈದು ತಿಂಗಳ ಕಾಲದಮೊದಲು ಗವರ್ನಮೆಂಟಿನ ಮತ್ತು ವೃತ್ತಾಂತಪತ್ರಿಕಾ ಲೇಖಕರ ವಿಚಾರಕ್ಕೆ ಮುಖ್ಯ ವಿಷಯವಾಗಿ ಏರ್ಪಟ್ಟಿರುವ ಮಹಾ ಮಾರಿಕೋಪದ್ರವದ ವ್ಯಾಪಕತೆಯನ್ನು ಈ ದೇಶದೊಳು ತಡೆಮಾಡಬೇಕಾದ ವಿಷಯದಲ್ಲಿ ಮೈಸೂರು ಸರ್ಕಾರದವರು ಖಂಡಿತವಾದ ಒಂದು ಹುಕುಮನ್ನು ಸಾದರ್ಮಾಡಿ, ಡಿಸ್ಟ್ರಿಕ್ಟ್ ಜಾತಿ ಡೆಪ್ಯುಟಿ ಕಮಿಷನರ್‌ಗಳೂ, ಬೆಂಗಳೂರು ಮತ್ತು ಮೈಸೂರು ಮ್ಯುನಿಸಿಪಾಲಿಟಿಗಳ ಪ್ರೆಸಿಡೆಂಟರುಗಳೂ ಮೇಲಿನ ಹುಕುಮಿನಲ್ಲಿ ಕಂಡ ಅಂಶಗಳಿಗೆ ಮುಖ್ಯಪ್ರಧಾನವಂ ಕೊಡಬೇಕೆಂದು ಹುಕುಂ ಮಾಡಿರುತ್ತಾರೆ. ಕಳೆದ ಜನವರಿ ತಿಂಗಳಲ್ಲಿ ಶೇಷಿದ ಕಮಿಟಿಯವರಿಂದ ತಿಳಿಸಲ್ಪಟ್ಟ ಸೂಚನೆಗಳನ್ನು ಜಾರಿಯಲ್ಲಿತರಬೇಕಾದುದು ಮಾತ್ರವಲ್ಲದೆ, ಸಿಟಿ ಮ್ಯುನಿಸಿಪಾಲಿಟಿಯವರು ಪೇಟೆಯ ಪ್ರತಿಮನೆಯಲ್ಲಿನ ಮತ್ತು ಹೊರಗಡೆ ಕಟ್ಟಲ್ಪಟ್ಟಿರುವ ಮೋರಿಗಳನ್ನು ಪ್ರತಿ ದಿನವೂ ಚೆಕ್ ಮಾಡಿಸಿ ಅಸ್ಥಳಗಳಲ್ಲಿ ಒಣಗಿದ ಸುಣ್ಣ ಹಾಕುವಂತೆ ಏರ್ಪಾಡು ಮಾಡಬೇಕು. ಪುನೆ, ಮುಂಬೈ ವಗೈರೆ ರೋಗ ಪೀಡಿತಗಳಾದ ಪ್ರದೇಶಗಳಿಂದ ರೈಲ್ ಮಾರ್ಗವಾಗಿ ಬರುವಂತ ಜನರನ್ನು ಹರಿಹರ, ಬೀರೂರು, ಕಡೂರು, ಅರಸೀಕೆರೆ, ತುಮಕೂರು, ಬೆಂಗಳೂರು, ಗೋರೀಬಿದನೂರು, ಬವರಿಂಗ್‌ಪೇಟೆ, ಮೈಸೂರು ಪಹರೆ ಇವುಗಳಲ್ಲಿ ಪರೀಕ್ಷಿಸಿ, ಅವರೊಳು ಯಾರಲ್ಲಾದರು ರೋಗ ಚಿನ್ಹೆಗಳ್ಯಾವವಾದರು ಕಂಡುಬಂದರೆ, ಅಂತವರನ್ನು ಮೆಡಿಕಲ್ ಆಫಿಸರ ವಿಚಾರಣೆಗೆ ಒಳಪಡಿಸತಕ್ಕದ್ದು. ರೋಗ ಪೀಡಿತರಲ್ಲದವರನ್ನು ಅವರವರ ವಾಸಸ್ಥಾನಗಳಲ್ಲಿರುವಂತೆ ಅವಕಾಶಕೊಟ್ಟು ಹದಿನೈದು ದಿನಗಳವರೆಗೆ ಪೋಲೀಸಿನವರು ಅವರಮೇಲೆ ನಿಗೇ ಇಟ್ಟಿರತಕ್ಕದ್ದು. ಸದರೀ ರೋಗದ ಭಯವು ಇರುವವರೆಗೆ ಬೆಂಗಳೂರು ಷಹರಿನ ಪ್ರೇಮಾಫ್ ಸೀನಿಯರ್ ಸರ್ಜನರವರು, ಸಿವಿಲ್ ವ ಮಿಲಿಟರಿ ಸ್ಟೇಷನ್ ಅಧಿಕಾರಿಗಳೊಡನೆ ಆಲೋಚಿಸಿ ಪೂರ್ವಭಾವಿಯಾಗಿ ಆವಶ್ಯಕಗಳಾದ ಯೋಜನೆಗಳಂ ಜಾರಿಯೊಳು ತರತಕ್ಕದ್ದು. ಸೀನಿಯರ್ ಸರ್ಜನ್, ಪೋಲೀಸ್ ಇನ್ಸ್ಪೆಕ್ಟರ್ ಜನರಲವರು, ಮತ್ತು ಡೆಪ್ಯುಟಿ ಕಮಿಷನರ್‌ಗಳು ತಮ್ಮ ತಾಬೇದಾರಿ ನೌಕರರಿಗೆ ಆವಶ್ಯಕಗಳಾದ ಹುಕುಂಗಳನ್ನು ಕೊಡತಕ್ಕದ್ದು. ರೋಗಪೀಡಿತರಾದವರ ವಸತಿಗೆ ಝೋಪಡಿಗಳನ್ನು ಕಟ್ಟಿಸುವದಕ್ಕೂ, ಅವರ ಆಹಾರ ವಗೈರೆಗಾಗಿಯೂ ಹಿಡಿಯಬಹುದಾದ ಖರ್ಚುಗಳಿಗೆ ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯ ವಶಕ್ಕೆ ೫೦೦ ರೂಪಾಯಿಗಳು, ಬೆಂಗಳೂರು ಮತ್ತು ಮೈಸೂರು ಡೆಪ್ಯುಟಿ ಕಮಿಷನರ್‌ಗಳೊಬ್ಬೊಬ್ಬರ ವಶಕ್ಕೆ ೨೦೦ ರೂಪಾಯಿಗಳು, ಕೋಲಾರ, ತುಮಕೂರು, ಚಿತ್ರದುರ್ಗ, ಕಡೂರು ಮತ್ತು ಹಾಸನ ಡೆಪ್ಯುಟಿ ಕಮಿಷನರ್‌ಗಳ ವಶಕ್ಕೆ ಫೀ ಇಸಂ ೪೦೦ ರೂಪಾಯಿಗಳು ಕೊಡಲ್ಪಟ್ಟಿದೆ. ಸಾನಿಟರಿ ಕಮಿಷನರವರು ಪೋಲೀಸ್ ಮತ್ತು ಎಗ್ಜಿಕ್ಯುಟಿವ್ ಆಫಿಸರ್‌ಗಳಿಗೆ, ಈ ವಿಷಯಗಳನ್ನೆಲ್ಲ ಸಂಗ್ರಹವಾಗಿ ಇಂಗ್ಲಿಷ್ ಮತ್ತು ಕನ್ನಡ ಭಾಷೆಯಲ್ಲಿ ತಿಳಿಸತಕ್ಕದ್ದು ಎಂಬುದು.

ಮೈಸೂರ್ ಗವರ್ನಮೆಂಟ್ ಸೀನಿಯರ್ ಸರ್ಜಿಯನ್ ಮತ್ತು ಸಾನಿಟರಿ ಕಮಿಷನರಾದ ಲೆಫ್ಟಿನೆಂಟ್ ಕರ್ನಲ್ ಬೆರ್ನ್ಸ್ ಸಾಹೇಬರವರು ಮೇಲಿನ ಹುಕುಮನ್ನನುಸರಿಸಿ, ಗವರ್ನಮೆಂಟ್ ಮಂಜೂರಾತಿಯೊಡನೆ ಇದರಡಿ ತಿಳಿಸಲ್ಪಡುವಂತೆ ಒಂದು ಹುಕುಂ ಸಾದರ್ಮಾಡಿರುತ್ತಾರೆ:—

"ಇದರಿಂದ ತಿಳಿಯಪಡಿಸುವದೇನೆಂದರೆ:—ಬೊಂಬಾಯಿ ಮುಂತಾದ ಪ್ರದೇಶಗಳಲ್ಲಿ ವ್ಯಾಪಿಸಿರುವ "ಪ್ಲೇಗ್ ಸಂಬಂಧವಾದ" ಅಂಟು ಜಾಡ್ಯದ ವಿಷಯವಾಗಿ, ಮೈಸೂರು ಸೀಮೆಯ ಸೀನಿಯರ್ ಸರ್ಜಿಯನ್ ಮತ್ತು ಸ್ಯಾನಿಟರಿ ಕಮಿಷನರು ಏರ್ಪಡಿಸಿರುವ ಮತ್ತು ಗವರ್ನಮೆಂಟಿನಿಂದ ಮಂಜೂರಾಗಿರುವ ಈ ಕೆಳಗಿನ ನಿಬಂಧನೆಗಳನ್ನು ಎಲ್ಲರ ತಿಳುವಳಿಕೆಗಾಗಿ ಘೋಷಿಸಮಾಡಿಸುತ್ತೆ.

ಮೇಲೆ ಹೇಳಿದ ಅಂಟು ಜಾಡ್ಯದಿಂದ ಪೀಡಿತರಾದ ಜನಗಳು ಈ ದೇಶಕ್ಕೆ ಬಂದರೆ ಅವರುಗಳನ್ನು ಕಂಡು ಹಿಡಿದು ಇತರ ಜನಗಳೊಂದಿಗೆ ಸೇರದಂತೆ ಪ್ರತ್ಯೇಕಿಸಿ ಚಿಕಿತ್ಸೆಯಲ್ಲಿರುವ ಹಾಗೆ ಮಾಡಲು, ಪೋಲೀಸ್ ಆಫಿಸರುಗಳು, ಸ್ಟೇಷನ್ ಮಾಸ್ಟರುಗಳು ಮತ್ತು ಇತರ ನೌಕರರುಗಳ ತಿಳುವಳಿಕೆಗೋಸ್ಕರ ಏರ್ಪಡಿಸಿರುವ ನಿಬಂಧನೆಗಳು:—

೧. ಮೇಲೆ ಕಂಡ ರೋಗವು ತಗಲಿರುವದನ್ನು ನಿಶ್ಚಯಿಸುವದಕ್ಕಾಗಿ, ಕಾಹಿಲೆ ಇರುವವರನ್ನು ಕುರಿತು ಈ ಕೆಳಗೆ ನಮೂದಿಸಿರುವ ಪ್ರಶ್ನೆಗಳನ್ನು ಮಾಡಬೇಕು.

ಸದರೀ ರೋಗವು ವ್ಯಾಪಿಸಿರುವ ಯಾವ ಪ್ರದೇಶದಿಂದಲಾದರೂ ನೀವು ಬಂದಿದ್ದೀರಾ?

ನಿಮಗೆ ಏಕಾಏಕಿ ಕಾಹಿಲೆ ಬಂತೊ?

ನೀವು ಸ್ವಲ್ಪ ಕಾಲದಿಂದ ಮಾತ್ರ ಕಾಹಿಲೆಯಾಗಿದ್ದೀರೊ?

ನಿಮಗೆ ಮೈನಡುಗಿ ಜ್ವರ ಬಂತೊ?

ನಿಮಗೆ ತಲೆನೋವು ಇದೆಯೊ?

ನಿಮಗೆ ಹೊಟ್ಟೆಯಲ್ಲಿ ತೊಳಸುತ್ತಲಿದೆಯೊ ಅಥವಾ ವಾಂತಿಯಾಗುತ್ತಲಿದೆಯೊ?"

ಸದರೀ ರೋಗದಿಂದ ಪೀಡಿತನಾಗಿರುವ ಮನುಷ್ಯನು ಈ ಪ್ರಶ್ನೆಗಳಿಗೆಲ್ಲ "ಅಹುದು" ಎಂದು ಉತ್ತರ ಕೊಡುವನು.

ಆ ವೇಳೆ ಅವನ ಮೈಮುಟ್ಟಿ ನೋಡಬೇಕು, ಅದು ಕಾಯುತ್ತಿರುತ್ತದೆ; ನಂತರ ಅವನ ಕಂಕುಳ ಮತ್ತು ತೊಡೆ ಸಂದುಗಳನ್ನು ಮುಟ್ಟಿ ನೋಡಬೇಕು; ಈ ವ್ಯಕ್ತಿ ಎಲ್ಲಿಯಾದರೂ ಉಬ್ಬಿಕೊಂಡು ನೋವು ಇದ್ದರೆ ಅದು ಸದರೀ ರೋಗದ ಚಿನ್ಹೆ ಎಂದು ತಿಳಿಯಬೇಕು ಮತ್ತು ಅವನ ಮುಖವನ್ನು ನೋಡಿದರೆ ಕಾಹಿಲೆಯುಳ್ಳವನಂತೆಯೂ ಮತ್ತು ಬಹಳ ವ್ಯಾಕುಲ ಇರುವಂತೆಯೂ ಕಾಣಬರುವದು ಕೆಲವು ವೇಳೆ ಕಣ್ಣುಗಳು ರಕ್ತವರ್ಣವಾಗಿ ಕೆಂಪಾಗಿರುವವು."

ತಾತ್ಕಾಲಿಕ ಸ್ಥಿತಿಯಲ್ಲಿ ಸದರೀ ರೋಗಪೀಡಿತರಾದವರು ಯಾರಾದರು ಕಂಡುಬಂದರೆ ಸರ್ಕಾರದವರು ಅವರನ್ನು ಕೂಡಲೆ ಬಂದೋಬಸ್ತು ಮಾಡಿ ಪ್ರತ್ಯೇಕವಾದ ಒಂದು ಸ್ಥಳದಲ್ಲಿರಿಸಿ ನಾನಾವಿಧ ನಿರ್ಬಂಧಗಳಿಗೆ ಗುರಿಮಾಡುತ್ತಾರೆಂಬುದು ಪ್ರಸಿದ್ಧವಾಗಿ ಮೆಲ್ಲರಿಗೂ ತಿಳಿದ ವಿಷಯವಾಗಿರುವಲ್ಲಿ ಮೇಲೆ ತಿಳಿಸಲ್ಪಟ್ಟಿರುವ ಪ್ರಶ್ನೆಗಳಂ ಅವರನ್ನು ಕೇಳಿದರೆ ಅವರು ಕೂಡಲೆ ಒಪ್ಪಿಕೊಳ್ಳುವರೆಂದು ಡಾಕ್ಟರ್ ಬೆರ್ನ್ಸ್ ಸಾಹೇಬರವರು ಪಡುವ ಅಭಿಪ್ರಾಯವು ಕೇವಲ ಭ್ರಾಂತಿಜನ್ಯವಾದುದೆಂದು ಹೇಳುವದರಲ್ಲಿ ನಮ್ಮ ಬುದ್ಧಿಗೆ ಯಾವಬಾಧಕವೂ ತೋರಲಿಲ್ಲವು. ಇಂತ ಸಲಹೆಯನ್ನು ಮಂಜೂರ್ಮಾಡಿದ ಗವರ್ನಮೆಂಟಿನವರ ವಿವೇಚನೆಯನ್ನು ಯೇನೆಂದು ಹೇಳಬೇಕೊ ನಾವರಿಯೆವು.

Occasional Notes.
ನೈಮಿತ್ತಿಕ ವಿಷಯನ್ಯಾಸ.

ಚೀನಾ ದೇಶದೊಳು ಟೋಪಿಯಂ ತೆಗದು ಸಲಾಂ ಮಾಡುವುದು ಅಗೌರವ ಪಡಿಸಿದ್ದಾಗಿ ಭಾವಿಸಲ್ಪಡುತಿದೆ. ಈ ದೇಶೀಯರು ಯೆಲ್ಲ ಭಾಗದಲ್ಲೂ ಒಂದು ವಿಜಾತೀಯವಾದ ಸ್ವಭಾವವುಳ್ಳವರು.

ಕಲ್ಕತ್ತೆಯೊಳು ದೇವೀ ರೋಗವು ಮರಳಿ ಹದಿನೆಂಟು ಮಂದಿಗೆ ತಗಲಿ ಅವರಲ್ಲಿ ಒಬ್ಬನು ಮೃತಪಟ್ಟಿರುತ್ತಾನೆ. ಕ್ಷಾಮದ ಜತೆಗೆ ಈ ಕೆಟ್ಟರೋಗವೂ ವ್ಯಾಪಿಸದಬಗ್ಗೆ ಬಹಳ ವಿಷಾದಿಸುತ್ತೇವೆ.

ದಕ್ಷಿಣ ಇಂಡಿಯಾ ದೇಶದಲ್ಲಿ ಸ್ಥಾಪಿಸಲ್ಪಟ್ಟ ಕ್ಷಾಮದ ಫಂಡಿಗೆ, ೧೮೭೭ನೇ ಇಸವಿಯ ಕ್ಷಾಮದ ಫಂಡಿನಲ್ಲಿ ಖರ್ಚು ಜಾತಾ ಉಳಿದಿದ್ದ ೧೧,೦೦೦ ರೂಪಾಯಿಗಳು ಸೇರಿ, ಇದುವರೆಗೆ ಒಟ್ಟು ಸುಮಾರು ೭೦,೦೦೦ ರೂಪಾಯಿಗಳು ಜಮಾ ಆಗಿರುವಂತೆ ಮದರಾಸ್ ಪತ್ರಿಕೆಯೊಂದು ತಿಳಸುತಿದೆ.

ಕಲ್ಕತ್ತೆಯಲ್ಲಿ ಸ್ಥಾಪಿಸಲ್ಪಟ್ಟಿರುವ ಕ್ಷಾಮನಿಮಿತ್ತಕವಾದ ಧರ್ಮ ಫಂಡಿಗೆ ಚಂದಾ ಮಾಡಲು ಇಷ್ಟವುಳ್ಳವರು ಯಾರು ಬಂದು ಕೇಳಿದಾಗ್ಯೂ ಅಂತವರಿಗೆ ಕಲ್ಕತ್ತೆಗೆ ರಿಮಿಟೆನ್ಸ್ ಟ್ರಾನ್ಸ್ಫರ್ ರಿಸೀಟ್ ಎಂಬ ಹುಂಡಿ ಕೊಡತಕ್ಕದ್ದೆಂದು ಇಂಡ್ಯ ಗವರ್ನಮೆಂಟಿನವರು ವಿಶಷ್ಟ ಟ್ರಜರೀ ಆಫಿಸರ್‌ಗಳಿಗೂ ಒಟ್ಟು ಹುಕುಂಕೊಟ್ಟಿರುತ್ತಾರೆ.

ಈ ತಿಂಗಳ ೧ನೇ ತಾರೀಖಿಗೆ ಖೈದಾದ ವಾರದೊಳು, ಬಂಗಾಳೇ ದೇಶದಲ್ಲಿ ಸ್ಥಾಪಿಸಲ್ಪಟ್ಟಿರುವ ಕ್ಷಾಮ ನಿವಾರಕ ಕಾಮಗಾರಿಗಳಲ್ಲಿ ಕೆಲಸ ಮಾಡುವದರಮೂಲಕ ಜೀವಿಸುತಲಿರುವ ಜನರ ಸಂಖ್ಯೆಯು ೬,೬೩,೦೦೦ರಿಂದ ೬,೮೭,೦೦೦

ಕ್ಕೆ ಇಳಿದುಹೋಯಿತು. ಪರಂತು ಧರ್ಮಾರ್ಥವಾಗಿ ಸ್ಥಾಪಿಸಲ್ಪಟ್ಟಿರುವ ಅನ್ನ ಶಾಲೆಗೆ ಸೇರಿದ ಜನರಸಂಖ್ಯೆಯು ೧೫,೦೦೦ ರಿಂದ ೧೨೦,೦೦೦ ಕ್ಕೆ ಹೆಚ್ಚಿತು.

ಈಗ ಇಂಡ್ಯ ದೇಶದೊಳು ವ್ಯಾಪ್ತವಾಗಿರುವ ಕ್ಷಾಮ ಮತ್ತು ಸಾಂಕ್ರಾಮಿಕವಾಗಿರುವ ಪ್ಲೇಗ್ ಎಂಬ ಮಹಾ ಮಾರಿಕೋಪದ್ರವದ ದೆಸೆಯಿಂದ ಮೆಡಿಕಲ್ ಇಲಾಖಾ ಆಫಿಸರುಗಳಿಗೆ ಕೆಲಸಗಳು ಅಧಿಕವಾಗಿರುವದರಿಂದ ಇಂಡ್ಯ ದೇಶದಿಂದ ಅವರು ರಜಾಮೇಲೆ ಹೊರಗೆ ಹೋಗುವದಕ್ಕೆ ಅವಕಾಶ ಕೊಡಲ್ಪಡುವದಿಲ್ಲವು. ಇದುವರೆಗೇನೆ ರಜಾಮೇಲೆ ಹೊರಟು ಹೋಗಿರುವಂತವರನ್ನು ಸಹ ವಾಪಸ್ ಕರೆಯಿಸುವ ಆಲೋಚನೆಯುಂಟಾಗಿದೆ.

ಬ್ಯೂಬೋನಿಕ್ ಪ್ಲೇಗ್ ಎಂಬ ಸಾಂಕ್ರಾಮಿಕ ರೋಗವು ಮುಂಬೈಯಿಂದ ಪಶ್ಚಿಮ ಸಮುದ್ರ ತೀರದಲ್ಲಿರುವ ಕರಾಚಿ ಎಂಬ ಪಟ್ಟಣಕ್ಕೆ ವ್ಯಾಪಿಸಿ ಪ್ರಾಣಹಾನಿಯನ್ನುಂಟುಮಾಡಲು ಅಲ್ಲಿನ ಪ್ರಜೆಗಳು ಬಹಳ ಭೀತರಾಗಿ ಕಳೆದ ವಾರದೊಳು ೫೦,೦೦೦ ಮಂದಿ ಪರಸ್ಥಳಗಳಿಗೆ ಹೋಗಿಯೂ ಇನ್ನು ಹೋಗುತಲೂ ಇರುವಂತೆಯೂ, ಅಲ್ಲಿನ ವ್ಯಾಪಾರಗಳೆಲ್ಲವು ಬಂದಾಗಿಹೋಗಿ ಬಹಳ ಕಳವಳ ಉಂಟಾಗಿರುವಂತೆಯೂ ಆ ಪ್ರಾಂತದ ಪತ್ರಿಕೆಯೊಂದರ ಮೂಲಕ ತಿಳಿದುಬರುತಿದೆ

ಮದರಾಸ್ ಹಿಂದೂ ಪತ್ರಿಕೆಯ ಎಡಿಟರ ಮೇಲೆ, ಬಳ್ಳಾರಿ ಪಟ್ಟಣ ನಿವಾಸಿಯಾದ ಮ॥ ವೇದವ್ಯಾಸರಾಯರೆಂಬವರು ತಂದಿದ್ದ ಮಾನನಷ್ಟ ಮೊಕದ್ದಮೆಯು ಬಳ್ಳಾರಿ ಡಿಸ್ಟ್ರಿಕ್ಟ್ ಹೆಡ್ ಅಸಿಸ್ಟೆಂಟ್ ಮ್ಯಾಜಿಸ್ಟ್ರೇಟರ ಕೋರ್ಟ್‌ನಲ್ಲಿ ದರ್ಯಾಪ್ತಿ ಯಾಗುತಲಿತ್ತಷ್ಟೆ. ಅದರಲ್ಲಿ ಎಡಿಟರಮೇಲೆ ತಕ್ಸೀರ್ ಸಾಬೀತಾಗಿ ಅವರಿಗೆ ಒಂದುಸಾವಿರ ರೂಪಾಯಿಗಳು ಜುಲ್ಮಾನೆ ವಿಧಿಸಲ್ಪಟ್ಟಂತೆಯೂ, ಅದರಮೇಲೆ ಎಡಿಟರವರು ಅಪೀಲ್ ಮಾಡುವದಾಗಿರುವಂತೆಯೂ ತಿಳಿದು ಬರುತಿದೆ.

ಇಂಡ್ಯದೇಶದಲ್ಲಿನ ಕ್ಷಾಮ ಪೀಡಿತರಾದವರ ಸಹಾಯಾರ್ಥ ಲಂಡನ್ ಪಟ್ಟಣದ ಲಾರ್ಡ್ ಮೇಯರವರಿಂದ ಸ್ಥಾಪಿಸಲ್ಪಟ್ಟಿರುವ ದರ್ಮಫಂಡಿಗೆ ಈ ತಿಂಗಳ ೪ನೇ ತಾರೀಖ್ ವರೆಗೆ ೨೩೪,೦೦೦ ಪೌಂಡುಗಳು ಜಮಾ ಬಂದಿರುವಂತೆ ತಂತಿ ವರ್ತಮಾನ ಬಂದಿರುತಿದೆ. ಪ್ರತಿ ದಿನದಲ್ಲೂ ಸ್ಥಳ ಪರಸ್ಥಳಗಳಿಂದ ಸದರೀ ಫಂಡಿಗಾಗಿ ಬರತಕ್ಕ ಚೆಕ್ಕುಗಳು, ಹುಂಡಿಗಳು, ನೋಟುಗಳು, ಬಿಲ್‌ಗಳು ಮೊದಲಾದವುಗಳನ್ನು ಬರಮಾಡಿಕೊಂಡು ಲೆಕ್ಕಕ್ಕೆ ಜಮಾ ಬರೆದುಕೊಳ್ಳುವದಕ್ಕೆ ಅವಕಾಶ ಸಾಲದಷ್ಟು ಅಧಿಕವಾಗಿ, ಸದರೀ ಮೇಯರವರ ಸೆಕ್ರೆಟರಿಯು ಮೇಜಿನಮೇಲೆ ತುಂಬಿ ಹೋಗುವದಾಗಿ ಸದರೀ ತಂತಿ ವರ್ತಮಾನದಲ್ಲಿ ತಿಳಿಸಲ್ಪಟ್ಟಿರುತಿದೆ

ಮುಂಬೈಯಿಂದ ಮಹಾಮಾರೀ ರೋಗವು ಕಲ್ಕತ್ತೆಯೊಳು ವ್ಯಾಪಿಸುವದಕ್ಕೆ ಸುತರಾಂ ಅವಕಾಶವಿಲ್ಲದಂತೆ ಪೂರ್ವಭಾವಿಯಾಗಿ ಉಚಿತವಾದ ಏರ್ಪಾಡುಗಳು ನಡೆಸಲ್ಪಡುತಲಿವೆ. ಮುಂಬೈಯಿಂದ ರೈಲ್ ಮಾರ್ಗವಾಗಿ ಕಲ್ಕತ್ತೆಗೆ ಹೋಗುವ ಪ್ರಯಾಣಸ್ಥರನ್ನು ಅಲ್ಲಿಗೆ ಇಪ್ಪತ್ತುನಾಲ್ಕು ಮೈಲಿಗಳ ಫಾಸಲೆಯಲ್ಲಿ ಪ್ರತ್ಯೇಕವಾಗಿರುವ ಒಂದು ಪ್ರದೇಶಕ್ಕೆ ಕರೆದುಕೊಂಡು ಹೋಗಿ ಸಿವಿಲ್ ಸರ್ಜಯನ್ನರಿಂದ ಅವರನ್ನೆಲ್ಲ ಅಜಮಾಯಿಷಿಮಾಡಿಸಿ ಅವರಲ್ಲಿ ಮಾರಿಕೋಪದ್ರವದ ಚಿನ್ಹೆಗಳು ಯಾವವೂ ಇಲ್ಲವೆಂದು ಕಂಡುಬಂದರೆ ಅಂತವರನ್ನು ಮರಳಿ ರೈಲ್‌ಗಾಡಿಯಲ್ಲಿ ಪೋಲೀಸ ಪಹರೆಯೊಡನೆ ಕಲ್ಕತ್ತೆಗೆ ವಾಪಸ್ ಕಳುಹಿಸುತ್ತಾರೆ.

ಮಕ್ಕಾವಿಗೆ ಹೋಗುವ ಮುಸಲ್ಮಾನ ಯಾತ್ರಾರ್ಥಿಗಳು ಮುಂಬೈ ದಡದಲ್ಲಿ ಹಡಗು ಹತ್ತುವದಕ್ಕೆ ಅಲ್ಲಿ ಈಗ ವ್ಯಾಪಿಸಿ ಅನೇಕ ಸಹಸ್ರ ಪ್ರಜೆಗಳಿಗೆ ಪ್ರಾಣಹಾನಿಗಳನ್ನುಂಟುಮಾಡಿಯೂ ಮಾಡುತಲೂ ಇರುವ ಮಹಾ ಮಾರಿಕೋಪದ್ರವವು ಸದರೀ ಯಾತ್ರಾರ್ಥಿಗಳ ಮೂಲಕ ಇತರ ದೇಶಗಳಿಗೂ ವ್ಯಾಪಿಸಬಹುದೆಂಬ ಭೀತಿಯಿಂದ ಸದರೀ ಜನರು ಮುಂಬೈ ದಡದಲ್ಲಿ ಹಡಗು ಹತ್ತಕೂಡದೆಂದು ನಿರ್ಬಂಧ ಉಂಟುಮಾಡಿದ್ದರಿಂದ ಅವರು ಮದರಾಸ್ ರೇವಿನಲ್ಲಿ ಹಡಗು ಹತ್ತುವದಕ್ಕಾಗಿ ಅಲ್ಲಿಗೆ ಹೋಗಲು ಪ್ರಯತ್ನಪಟ್ಟದ್ದು ಅಲ್ಲಿನ ಗವರ್ನಮೆಂಟಿಗೆ ತಿಳಿದು ಅವರೂ ಸದರೀ ಜನರನ್ನು ನಿರ್ಬಂಧಪಡಿಸಬೇಕೆಂದು ಇಂಡ್ಯಗವರ್ನಮೆಂಟಿನವರನ್ನು ಕೇಳಿಕೊಂಡರು, ಅದಕ್ಕೆ ಅವರೊಪ್ಪದೆ ಅಲ್ಲಿ ಹಡಗು ಹತ್ತಬಹುದೆಂದುಹುಕುಂ ಕೊಟ್ಟರಾಗಿ ಅಲ್ಲಿನ ಮಹಾಜನರು ಆಬಗ್ಗೆ ಕೋಪಗೊಂಡು ಒಂದು ಪ್ರಬಲ ಸಭಾಜನಸೇರಿ ಯೋಚಿಸಿ, ಇಂಡ್ಯ ಗವರ್ನಮೆಂಟಿನವರು ಕೊಟ್ಟ ಹುಕುಂ ಬಹುವಿಧದಲ್ಲಿ ಅಕ್ರಮವಾದುದೆಂದು ನಿರೂಪಿಸಿ, ಅದನ್ನು ಕೂಡಲೆ ರದ್ದು ಮಾಡಬೇಕೆಂದು ಪ್ರಾರ್ಥಿಸಿ ಇಂಡಿಯ ಸ್ಟೇಟ್ ಸೆಕ್ರೆಟರಿಯವರಿಗೆ ತಂತಿ ವರ್ತಮಾನ ಕೊಟ್ಟಿರುತ್ತಾರೆ.

LOCAL AND PROVINCIAL NEWS.
ಒಳದೇಶಮತ್ತುತಾಲ್ಲೂಕಪ್ರಾಂತ್ಯವೃತ್ತಾಂತಗಳು.

ಸಕಲೇಶಪುರದಲ್ಲಿ ಮುಖ್ಯವಾಗಿ ಆಪ್ರಾಂತದ ಕಾಫೀ ಪ್ಲಾಂಟರುಗಳ ಪ್ರಯೋಜನಾರ್ಥ ಸರ್ಕಾರದವರು ಒಂದು ವ್ಯವಸಾಯದ ಬ್ಯಾಂಕನ್ನು ಸ್ಥಾಪಿಸಿ ಅದರ ಮೂಲಧನಕ್ಕೆ ೮ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ.

ಹವಾ—ಚಳಿ ಕಡಮೆಯಾಗಿ ಬಿಸಿಲು ದಿನೇ ದಿನೆ ಚುರುಕಾಗುತಲಿದೆ. ಆಹಾರ ಪದಾರ್ಥಗಳ ಧಾರಣೆಗಳು ಹೆಚ್ಚುತಲಿವೆ. ನಲ್ಲಿ ನೀರಿನ ದೆಸೆಯಿಂದ ಸದ್ಯಃ ಜಲಸಮೃದ್ಧಿಯುಂಟು. ಧರ್ಮಾಂಬುಧಿ ಕೆರೆಯಲ್ಲಿ ಇನ್ನು ಸ್ವಲ್ಪ ನೀರಿದೆ. ಜನಾರೋಗ್ಯವು ಸಾಮಾನ್ಯವಾಗಿದೆ. ಇತರ ವಿಷಯಗಳಲ್ಲಿ ಅಧಿಕಾಂಶ ಯಾವದೂ ಇಲ್ಲವು.

ಕಳೆದ ಸಪ್ತಮಿ ಮಂಗಳವಾರದ ದಿನ ಶ್ರೀಮನ್ಮಹಾರಾಜರವರ ಪಟ್ಟಾಭಿಷೇಕೋತ್ಸವವು ರಾಜಧಾನಿಯಲ್ಲಿ ನಡೆಯಿತು. ಬೆಳಗ್ಗೆ ೨೧ ತೋಫುಗಳನ್ನು ಹಾರಿಸಲ್ಪಟ್ಟವು. ಸಾಯಂಕಾಲ ಅಂಬಾವಿಲಾಸದಲ್ಲಿ ಮಹಾರಾಜರು ದರ್ಬಾರುಮಾಡಿದರು. ದಿವಾನರು, ಕೌನ್ಸಿಲ್ ಮೆಂಬರುಗಳು ಮುಂತಾದ ದೊಡ್ಡಮನುಷ್ಯರೆಲ್ಲರು ಅರಮನೆಗೆ ಹೋಗಿದ್ದರು.

ರಾಜಧಾನಿಯಲ್ಲಿ ನಾಳೆ ಏಪ್ರಿಲ್ ಪ್ರಾರಂಭದಿಂದ ಸೀಮೆ ಯೆಣ್ಣೆಯ ಪ್ರತಿ ಟಿನ್ನಿಗೂ ಮ್ಯುನಿಸಿಪಾಲಿಟಿಯವರು ೨ ಆಣೆಯಂತೆ ಸುಂಕವನ್ನು ವಸೂಲ್ಮಾಡುವದಕ್ಕೆ ಸರ್ಕಾರದವರು ಅಪ್ಪಣೆ ಕೊಟ್ಟಿರುತ್ತಾರೆ. ಮತ್ತು ಇಲ್ಲಿನ ಮನೆಗಳು ಮತ್ತು ಅಂಗಡಿಗಳ ಕಂದಾಯವನ್ನು ಪುನಃ ಬದಲಾಯಿಸಿ ಹೆಚ್ಚಿಸುವದಕ್ಕೂ ಮ್ಯುನಿಸಿಪಾಲಿಟಿಗೆ ಅಧಿಕಾರ ಕೊಡಲ್ಪಟ್ಟಿದೆ.

ವಿವೇಕಾನಂದ ಸ್ವಾಮಿಗಳವರು ಮದರಾಸ್ ನಿಂದ ಈ ದೇಶಕ್ಕೆ ಬಂದು ಹೋಗುವರೆಂದು ನಿರೀಕ್ಷಿಸಲ್ಪಟ್ಟಿದೆಯಷ್ಟೆ. ಬರುವ ತಿಂಗಳ ಆದಿಭಾಗದಲ್ಲಿ ನಡೆಯುವ ಅವರ ಗುರುಗಳವರ ಆರಾಧನೆಯ ಬಗ್ಗೆ ಶೀಘ್ರದಲ್ಲಿ ಅವರು ಕಲ್ಕತ್ತಾ ಪ್ರಾಂತಕ್ಕೆ ಹೋಗಬೇಕಾಗಿರುವದರಿಂದ ಸದರೀ ಸ್ವಾಮಿಗಳವರು ಇಲ್ಲಿಗೆ ಬರುವ ಪ್ರಯತ್ನವು ಬಿಟ್ಟದ್ದಾಗಿ ಒಂದು ಪ್ರವಾದ ಉಂಟಾಗಿರುವಂತೆ ಒಳದೇಶದ ಪತ್ರಿಕೆ ತಿಳಿಸುತಿದೆ.

ಕಳೆದ ಶುಕ್ರವಾರದ ದಿನ ಸಾಯಂಕಾಲ ಈ ವೂರು ಬಳ್ಳಾಪುರ ಪೇಟೆಯಲ್ಲಿ ಬಹಳ ವೇಗದೊಡನೆ ಹೋಗುತಲಿದ್ದ ಒಂದು ಟಾಂಗಾಗಾಡಿಯ ಕೆಳಗೆ ಆರೇಳು ವರ್ಷಗಳ ವಯಸ್ಸುಳ್ಳ ಹೆಣ್ಣುಮಗು ಸಿಕ್ಕಿ ಗಾಡಿಯ ಚಕ್ರಗಳು ಮೇಲೆ ಹೊರಟು ಹೋಗಲು ಸದರೀ ಹುಡಿಗೆಗೆ ಪ್ರಾಣಾಪಾಯಕರವಾದ ಜಖಂಗಳಾಗಿ ಆಸ್ಪತ್ರೆಗೆ ಯೆತ್ತಿಕೊಂಡು ಹೋದಕೂಡಲೆ ಅಲ್ಲಿ ಮೃತಪಟ್ಟಿತೆಂದು ತಿಳಿಯಲಾದೆವು. ಟಾಂಗಾಗಾಡಿಯವನು ದಸ್ತಗಿರಿಯಿಂದ ದರ್ಯಾಪ್ತಿಗೆ ಗುರಿಮಾಡಲ್ಪಟ್ಟಿರುತಾನೆ

ಮೈಸೂರು ಮಹಾರಾಣೀಯವರ ಬಾಲಿಕಾಪಾಠಶಾಲೆಯಿಂದ ರುಕ್ಮಿಣಿಯಮ್ಮ, ಶ್ರೀರಂಗಮ್ಮ, ಸುಬ್ಬಮ್ಮ ಎಂಬೀಮೂವರು ಬಾಲಿಕಾಮಣಿಗಳು ಈಸಲ ಮದರಾಸ್ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಹಣಕಟ್ಟಿ ಮೂವರು ತೇರ್ಗಡೆ ಹೊಂದಿರುತ್ತಾರೆ. ದಕ್ಷಿಣ ಹಿಂದುಸ್ಥಾನದಲ್ಲೆಲ್ಲ ಬ್ರಾಹ್ಮಣಯುವತಿಯರು ಇಂಗ್ಲಿಷಿನಲ್ಲಿ ಈ ಪರೀಕ್ಷೆ ಕೊಟ್ಟದ್ದು ಇದೇ ಮೊದಲಾದ್ದರಿಂದ ನಮ್ಮ ಮಹಾರಾಣೀಯವರ ಬಾಲಿಕಾ ಪಾಠಶಾಲೆಗೆ ಬಂದಿರುವ ಕೀರ್ತಿಯು ವಿಶೇಷವಾದದ್ದೇ ಸರಿ.

ಕಳೆದ ಬೃಹಸ್ಪತಿವಾರದ ದಿನ ಸಾಯಂಕಾಲ ಅಯಿದುವರೆ ಘಂಟೆಗೆ ಡಾಕ್ಟರ ಬ್ಯಾರೋಸ್ ಎಂಬ ಪ್ರಧಾನ ಮಿಷನೆರಿಯೊಬ್ಬರು ಇಲ್ಲಿನ ಲಂಡನ್‌ಮಿಷನ್‌ಸ್ಕೂಲಿನಲ್ಲಿ ಕ್ರಿಶ್ಚಿಯನ್ ಮತದ ಶ್ರೇಷ್ಟತ್ವವಂ ಕುರಿತು ಉಪನ್ಯಾಸ ಮಾಡಿದರು. ಅದಂ ಕೇಳುವದಕ್ಕಾಗಿ ಬಹುಮಂದಿ ನೇಟಿವ್ ದೊಡ್ಡಮನುಷ್ಯರು ಹೋಗಿದ್ದರು. ಸ್ವಮತಪ್ರೋತ್ಸಾಹಕವಾಗಿ ಅವರು ಮಾಡಿದ ಉಪನ್ಯಾಸವು ಅನ್ಯಮತಾವಲಂಬಿಗಳಾದವರಿಗೆ ವಿಶೇಷ ಶ್ಲಾಘನೀಯವಾಗಿ ತೋರದೆ ಹೋದಾಗ್ಯೂ ಅವರ ವಾಗ್ಝರಿಯಂ ಕೇಳಿ ಎಲ್ಲರು ಸಂತೋಷಭರಿತರಾಗಿ ಹಿಂದಿರುಗಿ ಬಂದರು.

ಈಚೆಗೆ ನಡೆದ ಕ್ರಿಮಿನಲ್ ಸೆಷನ್ಸಿನಲ್ಲಿ ಮೈಸೂರಲ್ಲಿರುವ ರಾಜಾಸಾನಿ ಎಂಬ ವೇಶ್ಯಾಸ್ತ್ರೀಗೆ ಸೆಷನ್ ಜಡ್ಜಿಯವರ ೬ ತಿಂಗಳ ಸಜಾವನ್ನು ವಿಧಿಸಿದರು. ಅಪರಾಧಿಯು ತನ್ನ ಹತ್ತಿರ ಒಬ್ಬ ಹುಡುಗಿಯನ್ನು ಇಟ್ಟುಕೊಂಡು ಸೂಳೆಯ ಕಸಬಿಗೆ ತಯಾರುಮಾಡುತಿದ್ದಳೆಂದು ಕೋರ್ಟಿನಲ್ಲಿ ರುಜುವಾಯಿತು. ಆದ್ದರಿಂದ ಅವಳಿಗೂ ಅವಳನ್ನು ಇಟ್ಟುಕೊಂಡಿದ್ದವನಿಗೂ ಅವಳ ತಂದೆಗೂ ಶಿಕ್ಷೆಯಾಯಿತು. ಇವರಿಬ್ಬರಿಗೂ ಮೂರು ಮೂರು ತಿಂಗಳ ಸಜಾ ಆಗಿದೆ. ಈಗ ಅಪೀಲ್ ಮಾಡುತಾರಂತೆ.

ಈ ತಿಂಗಳ ೪ನೇ ತಾರೀಖಿನಲ್ಲಿ ಮದರಾಸ್ ನೊಳು ನಡೆದ ಅಥ್ಲೆಟಿಕ್ ಸ್ಪೋರ್ಟ್ಸ್ ಎಂಬ ಶಾರೀರಕ ಶಕ್ತಿಪ್ರದರ್ಶನರೂಪವಾದ ಆಟದಲ್ಲೊಂದಾದ ಟೆನಿಸ್ ಎಂಬ ಚೆಂಡಾಟದಲ್ಲಿ ಬೆಂಗಳೂರು ಸೆಂಟ್ರಲ್ ಕಾಲೇಜ್ ವಿದ್ಯಾರ್ಥಿಗಳಾದ ಡಿ. ಶ್ರೀನಿವಾಸರಾವ್ ಮತ್ತು ಶೇಷಾದ್ರಿ ಅಯ್ಯಂಗಾರೆಂಬವರು ಗೆದ್ದು ಅದಕ್ಕಾಗಿ ಇಡಲ್ಪಟ್ಟಿದ್ದ ಬಹುಮಾನಗಳಂ ಪಡೆದರೆಂದು ಕೇಳಿ ಬಹಳ ಸಂತೋಷಿಸುತ್ತೇವೆ. ಇದರಂತೆಯೇ ಸೆಂಟ್ರಲ್ ಕಾಲೇಜಿಗೆ ಸೇರಿದ ಇನ್ನೊಬ್ಬ ಬಾಲಕನು ಕಸರತ ಆಟದಲ್ಲಿ ಜಯವಂ ಹೊಂದಿ ಇನಾಂ ಪಡೆದನೆಂದು ಕೇಳಿ ಸಂತೋಷಿಸುತ್ತೇವೆ.

ಉಕ್ಕಲಗೆರೆ ಜೋಡಿದಾರ್ ಶ್ರೀನಿವಾಸ ರಾಘವಾಚಾರ್ರಿಗೆ ಮೈಸೂರು ಸೆಷನ್ ಕೋರ್ಟಿನಲ್ಲಿ ೫ ವರುಷ ಕಠಿಣಸಜಾ ಶಿಕ್ಷೆಯೂ, ೧,೦೦೦ ರೂಪಾಯಿ ಜುಲ್ಮಾನೆಯೂ ಆಗಿತ್ತು. ಮತ್ತು ಬನ್ನೂರು ಶಾನುಭೋಗ ತಿಮ್ಮಣ್ಣಯ್ಯನವರಿಗೂ ಅದೇ ಕೋರ್ಟಿನಲ್ಲಿ ೮ ವರುಷ ಕಠಿಣಸಜಾ ೨೦೦ ರೂಪಾಯಿ ಜುಲ್ಮಾನೆ ಆಗಿತ್ತು. ಇವರಿಬ್ಬರೂ ಈಚೆಗೆ ಬೆಂಗಳೂರು ಚೀಫ್ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡಿದ್ದರು. ಅಲ್ಲಿ ಮೊಕದ್ದಮೆ ವಿಚಾರಣೆ ಆದದ್ದರಲ್ಲಿ ಇವರ ಮೇಲೆ ಅಪರಾಧ ಸಾಬೀತಾಗುವದಿಲ್ಲವೆಂದು ಗೊತ್ತಾದದ್ದರಿಂದ ಇವರಿಬ್ಬರಿಗೂ ಆಗಿದ್ದ ಶಿಕ್ಷೆಯನ್ನು ವಜಾ ಮಾಡಿ ಅವರನ್ನು ಖುಲಾಸೆ ಮಾಡಿಬಿಟ್ಟರು. ಮೈಸೂರು ಸೆಷನ್ ಜಡ್ಜಿಯವರು ಅದೇ ಜೋಡಿದಾರ್ರಿಗೆ ಇನ್ನೊಂದು ಮೊಕದ್ದಮೆಯಲ್ಲಿ ಸಜಾ ಶಿಕ್ಷೆಯನ್ನು ವಿಧಿಸಿದರು. ಈ ಮೊಕದ್ದಮೆಯೂ ಚೀಫ್ ಕೋರ್ಟಿನಲ್ಲಿ ಅಪೀಲ್ ಆಗಿದೆ ಎಂತಲೂ ನಾಳೆ ಮಾರ್ಚಿ ೫ನೇ ತಾರೀಖಿನ ದಿನ ವಿಚಾರಣೆ ಆಗುವದೆಂತಲೂ ಕೇಳುತ್ತೇವೆ.

ಇಲ್ಲಿ ಬ್ರಿಟಿಷ್ ರೆಸಿಡೆಂಟರಾಗಿದ್ದ ಮ॥ ಮೆಕ್‌ವರ್ತ್‌ಯಂಗ್ ಸಾಹೇಬರವರು ಪಂಜಾಬ್‌ದೇಶದ ಲೆಫ್ಟಿನೆಂಟ್ ಗವರ್ನರಾಗಿ ನೇಮಕಮಾಡಲ್ಪಟ್ಟು ಸದರೀ ಅಧಿಕಾರವ ಕೈಗೊಳ್ಳುವದಕ್ಕೆ ಪೂರ್ವ ಒಂದುತಡವೆ ಸ್ವದೇಶಕ್ಕೆ ಹೋಗಿ ಬರಬೇಕೆಂದು ಯೋಚಿಸಿ ಮೂರು ತಿಂಗಳ ರಜಾಮೇಲೆ ಇಂಗ್ಲಾಂಡಿಗೆ ಹೋಗಿರುತ್ತಾರೆಯಷ್ಟೆ. ಈಗ ಸದರೀ ಅಧಿಕಾರಿಯ ದೇಹಸ್ಥಿತಿ ಬಹಳ ಚಿಂತನೀಯವಾಗಿರುವಂತೆಯೂ, ಅವರು ಮರಳಿ ಇಂಡ್ಯದೇಶಕ್ಕೆ ಬಂದು ತಮ್ಮ ನೂತನಾಧಿಕಾರದಲ್ಲಿ ಪ್ರವೇಶಿಸುವರೆಂಬ ವಿಷಯ ಸಂಶಯಾಸ್ಪದವಾದುದೆಂತಲೂ, ಈಚೆಗೆ ತಿಳಿದುಬರುವದು ಮಾತ್ರವಲ್ಲದೆ ಅವರ ಕೆಲಸವನ್ನು ಬದಲೀ ನೋಡುವದಕ್ಕಾಗಿ ಈಗ ಇಲ್ಲಿ ಆಕ್ಟಿಂಗ್ ಬ್ರಿಟಿಷ್ ರೆಸಿಡೆಂಟರಾಗಿರುವ ಕರ್ನಲ್ ಡೊನಾಲ್ಡ್ ರಾಬರ್ಟ್ಸನ್ ಸಾಹೇಬರವರು ಶೀಘ್ರದಲ್ಲಿ ಪಂಜಾಬದೇಶಕ್ಕೆ ಹೊರಟು ಹೋಗುವರೆಂದು ಈಚೆಗೆ ಒಂದು ಪ್ರವಾದ ಉಂಟಾಗಿದೆ. ಇದರ ಯಾಥಾರ್ಥ್ಯವು ಮುಂದೆ ತಿಳಿಯಬರಬೇಕು.

ಇದರಡಿ ತಿಳಿಸಲ್ಪಡುವ ನಂಬರುಗಳುಳ್ಳವರು ಕಳೆದ ನವಂಬರ್ ತಿಂಗಳಲ್ಲಿ ನಡೆದ ಮೈಸೂರು ರೆವಿನ್ಯೂಪರೀಕ್ಷೆಯಲ್ಲಿ ತೇರ್ಗಡೆಯಂ ಹೊಂದಿರುತ್ತಾರೆ:—

೧ನೇ ತರಗತಿ.

152, 90, 436, 447, 351, 407, 160, 251, 490, 153, 300, 59, 296, 340, 263, 181, 176, 197, 516, 36, 271, 363, 453, 563, 443, 97, 114, 344, 518, 363, 481, 26, 92, 139, 151, 186, 103, 301, 479, 536, 381, 221, 410, 516, 19, 64, 210, 289, 477, 137, 364, 406, 161, 565, 286, 317, 191, 154, 205, 521, 190, 462, 61, 316, 417, 429, 488, 299, 290, 358, 329, 336, 121, 439, 546, 128, 167, 268, 382, 562, 218, 232, 355, 370, 393, 158, 199, 222, 449, 291, 461, 487, 52 ( ) 87, 284, 325, 503, 110, 125, 503, 9, 65, 193, 262, 84, 425, 2, 296, 484, 426, 473, 180, 184, 411, 397,

೨ನೇ ತರಗತಿ.

238, 373, 4, 377(ಅ) 70, 244, 288, 10, 228 (ಬ) 302, 28, 29, 120, 308, 400, 250, 866, 458, 24 420, 512, 337, 480, 13, 40, 310, 353, 388, 243, 438, 307, 314, 564, 143, 355, 427.

ಬೆಂಗಳೂರು ಪೇಟೆಯ ಜಿನಿಸು ನಿರಖ್ ಪಟ್ಟಿ.

			ರೂ,
ಅವ್ವಲ್ ರಾಗಿ ಖಂಡಿ ೧ಕ್ಕೆ		...	೪೦ ೪೨
ದಾಯಂ ರಾಗಿ	"	.	೪೦-೪೫
ಅವ್ವಲ್ ಅಕ್ಕಿ ಪಲ್ಲ ೧ಕ್ಕೆ		...	೧೪
ದಾಯಂ "	"	...	೧೨॥
ಹೆಸರು	"	..	೧೦॥
ಉದ್ದು	"	..	೧೦॥
ಧಾನ್ಯಪದ ಗೋಧಿ	"	.	೧೨॥
ಜೋಳ	"	...	೫॥
ಕಡ್ಲೆ	"	..	೧೧
ಕಾರಾಮಣಿ	"	...	೪॥
ಹರಳು ೨೫೦ ಸೇರಿನ ಖಂಡಿ ೧ಕ್ಕೆ		...	೨೨-೨೫
ಹುಚ್ಚೆಳ್ಳು	"	...	೨೨-೨೪
ಹರಳೆಣ್ಣೆ ಮಣ ೧ಕ್ಕೆ		..	೩।
ಕಳ್ಳೆಕಾಯಿ ಎಣ್ಣೆ ಮಣ ೧ಕ್ಕೆ		...	೪॥
ಒಳ್ಳೆ ಎಣ್ಣೆ	"	...	೫।।।
ಮೆಣಸು	"	...	೫।
ಧನಿಯಾ	"	...	೧।।।
ಹುಳಿಹಣ್ಣು	"	...	೩-೪
ತುಪ್ಪ	"	..	೧೨
ಬೆಲ್ಲ	"		೧।
ಮೆಣಸಿನಕಾಯಿ ಮಣ ೪ಕ್ಕೆ		..	೩೨
ಹಾಲು ೮॥ ೧ಕ್ಕೆ ಸೇರು		...	೧೬

THE MYSORE GAZETTE.
ಮೈಸೂರು ಗೆಜೆಟ.

ಗುರುವಾರ, ತಾ॥ ೧೧ನೇ ಫೆಬ್ರವರಿ ೧೮೯೭.

ಮೈಸೂರ ಗವರ್ನಮೆಂಟಿನವರಿಂದ ಹೊರಡಿಸಿದ ಇಸ್ತಿಹಾರನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾ॥ ೬ನೇ ಫೆಬ್ರವರಿ ೧೮೯೭.

ನಂ॥ ೪೪೧೭-ಜಿ. ೧೪೨೦,—ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್ ೨ನೇ ಸೆಕ್ಷನ್ ಅನುಸಾರ, ಮೈಸೂರು ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮ॥ ಎಂ. ಕಾಮರಾವ್ ಎಂ. ಎ ಯವರು ೨ನೇ ಕ್ಲಾಸ ಮ್ಯಾಜಿಸ್ಟ್ರೇಟರಾಗಿ ನೇಮಕಮಾಡಲ್ಪಟ್ಟಿರುತ್ತಾರೆ

ತಾ॥ ೬ನೇ ಫೆಬ್ರವರಿ ೧೮೯೭.

ನಂ॥ ೪೪೩೫-ಎಜ್ಯುಕೇಷನಲ್ ೨೧೫,—ಶಿವಮೊಗ್ಗ ಡಿಸ್ಟ್ರಿಕ್ಟ್ ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರ್ ಮ॥ ಎಂ. ಶ್ರೀನಿವಾಸರಾಯರವರು ೧೮೯೭ನೇ ಇಸವಿ ಫೆಬ್ರವರಿ ೧೦ನೇ ತಾರೀಖ್ ಮೊದಲು ಅಥವಾ ಅವರುಪಯೋಗಿಸಿಕೊಳ್ಳಬಹುದಾದ ತಾರೀಖ್ ಮೊದಲು ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

C Sreshadri Iyengar, from the 3rd Class to 2nd Class, *acting* (*seconded*)

Badami Krishna Rao, from the 4th Class to 3rd Class, *acting* (*vice* C Sheshadri Iyengar otherwise employed)

No 100—R, dated, Camp Mysore, 13th Feb 97

The services of Mir Mir Nizamudin Ali Khan, Acting Extra Assistant Commissioner, Chitaldrug district, are temporarily placed at the disposal of the Excise Commissioner for employment on special duty in the Excise Department

No 138—R, dated Camp Mysore 16th Feb 97

C V Krishnaswami Rao, B A, Revenue Probationer, is appointed acting Amildar, 4th Class, *sub pro tem*, *vice* Parmavelu Sitaramaiya appointed Acting Extra Assistant Commissioner, and is posted to the Tarikere taluk with the powers of a Magistrate of the 3rd Class (To join forthwith)

No 112—R, dated Camp Mysore, 16th Feb 97

Mr Rama Hanumanthaiya, Acting Assistant Superintendent of Police, Shimoga is appointed to act as Extra Assistant Commissioner, Chitaldrug district (for treasury charge) *vice* Mr Cheogini Krishna Row, located at Davangere)

2 Nanjig Soob Row, Amildar of Tarikere, is appointed to act as Assistant Superintendent of Police, Shimoga district, during the absence of Mr R B Plumer on leave or until further orders (to join forthwith handing over charge to the Taluk Sheristadar)

ಕರ್ಣಾಟಕ ಪ್ರಕಾಶಿಕಾ.

೧೮೯೭ನೇ ಇಸವಿ ಫೆಬ್ರವರಿ ತಾ|| ೨೨ನೇ ಸೋಮವಾರ.

[illegible]

ವಿವಾಹಮಹೋತ್ಸವಕ್ರಮ ಪ್ರದರ್ಶನಪತ್ರಿಕಾ.

ಶ್ರೀಮನ್ ಮಹಾರಾಜ ಪುತ್ರಿಯವರ ವಿವಾಹೋತ್ಸವ ವಿಶೇಷಾಂಶಗಳು ಇವರಿಂದ ಪ್ರಕಟಿಸಿರುವ ಪ್ರಸಿದ್ಧ ಪತ್ರಿಕೆಯಿಂದ ವ್ಯಕ್ತವಾಗುತಿದೆ ಹ್ಯಾಗೆಂದರೆ —

೧೮೯೭ನೆಯ ಫೆಬ್ರವರಿ (ಮನ್ಮಥನಾಮಸಂ|| ಮಾಘಮಾಸ)

೧೬ನೆಯ ಮಂಗಳವಾರ (ಶುಕ್ಲ ೧೫)—ಈ ಶುಭದಿವಸ ಪ್ರಾತಃಕಾಲದಲ್ಲಿ ಎಣ್ಣೆಸ್ನಾನ ಮಂಗಳಸ್ನಾನ ಬಳಿಕ ಹಗಲು ೮ ಘಂಟೆಯ ಮೇಲೆ ೧೧ ಘಂಟೆಯೊಳಗೆ ಶುಕ್ಲ ಬುಧ, ಚಂದ್ರಕಾಲ ಹೋರೆಗಳಲ್ಲಿ ದೇವರುಗಳಿಗೆ ವಿವಾಹ ಕಟ್ಟು ಸುಮಂಗಲೀಪೂಜೆ, ದಂಪತಿ ಪೂಜೆಗಳು ಜರಗಿದವು. ಈ ರಾತ್ರಿ ೭ ಘಂಟೆಯ ಮೇಲೆ ೭|| ಘಂಟೆಯೊಳಗೆ ಗಾಯಕ ಲಗ್ನದಲ್ಲಿ ತೀರ್ಥಪ್ರಾಪ್ತಿಸಿಕೊಂಡನಂತರ ಫಲದಾನ, ಆರತಿ, ಹರಸೇವೆ ಸಹ ಜರಗಿದವು.

೧೭ನೆಯ ಬುಧವಾರ (೧೬) ಹಗಲು ೧|| ಘಂಟೆಯ ಮೇಲೆ ವಿಕಾಸವನೋದ್ಯಮ, ಕಲಶ ಬಳಿ ಅಂಕುರ ಸ್ತಂಭ ಮುಹೂರ್ತ, ಈ ಕ್ರಮಕ್ಕೆ ಸ್ವಾಮಿಗಳು ೪ ಬೀದಿಗಳಲ್ಲಿ ಪಲ್ಲಕ್ಕಿ ಮೊದಲಾದ ಮರ್ಯಾದೆಗಳೊಡನೆ ಮೆರವಣಿಗೆಯೂ ನಿತ್ಯ ಕಳಸ ಮನೋಹರಕ್ಕೆ ಅಂಬಾವಿಲಾಸದಲ್ಲಿ ಆರ್ತಾಕ್ಷತೆ ಜರಗಿತು. ಅನಂತರ ಒಳಮಲ್ಲಾರದ ಪಾಜಿ, ಗೋಧಿಕ ಸ್ನಾನ, ಬಂದರೆ ಬಂದುಪತ್ರದಾನ ಸಹ ಜರಗಿತು. ಈ ರಾತ್ರಿ ೭ ಘಂಟೆಯ ಮೇಲೆ ರಾಕ್ಷಸ ಹೋರೆಯಲ್ಲಿ ಮದವಣಿಗರಿಗೆ ಕಟ್ಟಳೆ ಸಹ ಅಕ್ಷತೆ ಜರಗಿತು.

೧೮ನೆಯ ಗುರುವಾರ (ಬಹುಳ ೧)—ಈ ಶುಭದಿವಸ ಪ್ರಾತಃಕಾಲದಲ್ಲಿ ಎಣ್ಣೆಸ್ನಾನ, ಮಂಗಳಸ್ನಾನ, ಶ್ರೀಪರಕಾಲಸ್ವಾಮಿಗಳವರ ಪಾದಪೂಜೆ ಸಹ ಜರಗಿದವು. ಹಗಲು ೯ ಘಂಟೆಯ ಮೇಲೆ ಲಕ್ಷ್ಮೀನಾರಾಯಣಹೋಮ, ಕಂಕಣಧಾರಣೆಯೂ ಆಗಿ ಅಷ್ಟವರ್ಗಗಳಿಂದ ಸಮೇತ ವಿವಾಹಮಂಟಪಕ್ಕೆ ಚಿತ್ತೈಸಿ, ಸ್ವಸ್ತಿವಾಚನ, ಪುಣ್ಯಾಹ, ನಾಂದೀ, ಗೃಹಯಜ್ಞ ಮೊದಲಾದವುಗಳು ಜರಗಿದವು. ಈ ಕಾಲದಲ್ಲಿ ವರನ ಮನೆಯಲ್ಲೂ ಮೇಲ್ಕಂಡವುಗಳಿಗೆ ಎಣ್ಣೆಸ್ನಾನ ಮೊದಲಾದವುಗಳು ಜರಗಿದವು. ಈ ದಿವಸ ರಾತ್ರಿ ೯ ಘಂಟೆಯೊಳಗೆ ಉಪಶಾಂತಿ ಮುತ್ತೈದೆ ಆರ್ತಾಕ್ಷತೆ ಸಹ ಜರಗಿದನಂತರ ೯ ಘಂಟೆಗೆ ಕರೆಯಿಸಿದ ನವಾಬು ಪಲ್ಲಕ್ಕಿ ಮೊದಲಾದ ಮರ್ಯಾದೆಗಳೊಡನೆ ದೇವರನ್ನು ಬಿಜಯಮಾಡಿಸಿಕೊಂಡು ಬಂದಿರು.

೧೯ನೆಯ ಶುಕ್ರವಾರ(೨)—ಈ ಶುಭದಿವಸ ವರನ ಮನೆಯಲ್ಲಿ ಹಗಲು ೭|| ಘಂಟೆಯೊಳಗೆ ಶುಕ್ಲ ಬುಧ ಹೋರೆಗಳಲ್ಲಿ ಉಪನಯನವು ಜರಗಿತು. ಸಮಾವರ್ತನೆಯಾದನಂತರ ಕಾಶೀಯಾತ್ರೆಯು ಜರಗಿತು. ಕಾಶೀಯಾತ್ರೆಯು ಮರವಣಿಗೆ ಸಕಲ ಪಲ್ಲಕ್ಕಿ ಮೊದಲಾದ ಮರ್ಯಾದೆಗಳೊಡನೆ ಕೋಟೆ ತೊಟ್ಟಿಯಿಂದ ಹೊರಟು ಅರಮನೆಯ ಮುಂದೆ ಬಂದಾಗ ಫಲಪ್ರಾಪ್ತಿಸಲ್ಪಟ್ಟಿತು. ಈ ದಿವಸ ಹಗಲು ೧೨ ಘಂಟೆಯೊಳಗೆ ಮದವಣಿಗರನ್ನು ಮೆರವಣಿಗೆಯಿಂದ ಕರೆತಂದರು. ಅನಂತರ ೧೬|| ಘಳಿಗೆಯ ಮೇಲೆ ೧೮| ಘಳಿಗೆಯೊಳಗೆ, ಅಂದರೆ ೧ ಘಂಟೆಯ ಮೇಲೆ ೧|| ಘಂಟೆಯೊಳಗೆ ವಿಧುವಲಗ್ನದಸುದಿನದಲ್ಲಿ ಧಾರಾ ಮುಹೂರ್ತವು ಜರಗಿತು. ಈ ಕಾಲದಲ್ಲಿ ವಾಗ್ದಾನ, ವರಪೂಜೆ, ಮಧುಪರ್ಕ, ಕನ್ಯಾನಿರೀಕ್ಷಣೆ, ಮಹಾಸಂಕಲ್ಪ, ಕನ್ಯಾದಾನ, ಅಕ್ಷತಾರೋಪಣೆ, ಮಾಂಗಲ್ಯಧಾರಣೆ, ಗೌರೀಪೂಜೆ, ಪಾಣಿಗ್ರಹಣ, ಪ್ರಧಾನಹೋಮ, ಅಶ್ಮಾರೋಹಣ, ಸಪ್ತಪದಿ ಇವೆ ಮೊದಲಾದವುಗಳು ಜರಗಿದವು. ಈ ರಾತ್ರಿ ಔಪಾಸನ ಪ್ರಾರಂಭ, ಧ್ರುವಾರುಂಧತೀ ದರ್ಶನ ಆರ್ತಾಕ್ಷತೆ ಸಹ ಜರಗಿದವು.

೨೦ನೆಯ ಶನಿವಾರ ಮೊದಲು ೨೪ರವರೆಗೆ ಪ್ರತಿದಿವಸವೂ ಪ್ರಾತಃಕಾಲದಲ್ಲಿ ಔಪಾಸನವೂ ಸಾಯಂಕಾಲದಲ್ಲಿ ಆರ್ತಾಕ್ಷತೆಯೂ ನಡೆಯುತದೆ.

೨೩ನೆಯ ಮಂಗಳವಾರ (೬)—ಹಗಲು ೯ ಘಂಟೆಯೊಳಗೆ ನಾಗಬಲಿನಾಮಹೋತ್ಸವ, ಓಕಳಿ, ಪುಣ್ಯಾಹ, ಪಂಚಾಮೃತವನ್ನಾಷೆ, ಆರ್ತಾಕ್ಷತೆ ಮೊದಲಾದವುಗಳು ಜರಗುತ್ತವೆ. ಆರೋಗಣೆ ಬೆಳಸಿಕೊಂಡು ದಂಪತಿಗಳು ೨ ಘಂಟೆಗೆ ಚಿತ್ತೈಸಿ ಸ್ತಂಭಮಂಟಪ ಪೂಜೆಗಳನ್ನು ಮಾಡಿಕೊಂಡು ದೇವರ ಮನೆಗೆ ಚಿತ್ತೈಸಿದನಂತರ ಕಂಕಣವಿಸರ್ಜನೆ ಫಲದಾನ ಆರತಿ ಸಹ ಜರಗುವವು. ಈ ರಾತ್ರಿ ೭|| ಘಂಟೆಯೊಳಗೆ ದೇವರನ್ನು ಕರೆಗೆ ಬಿಜಮಾಡಿಸುವರು. ಆರ್ತಾಕ್ಷತೆಯೂ ಜರಗುವುದು.

೨೪ನೆಯ ಬುಧವಾರ (೯)—ರಾತ್ರಿ, ೯ ಘಂಟೆಗೆ ಪಟ್ಟಣದಲ್ಲಿ ಮೆರವಣಿಗೆಯು ಜರಗುವುದು.

ಮಹಾರಾಜ ಪುತ್ರಿಯವರ ವಿವಾಹ ಮಹೋತ್ಸವಾಂಗವಾಗಿ ಕಳೆದ ಶುಕ್ರವಾರದದಿನ ರಾಜಧಾನಿಯಲ್ಲಿ ಶ್ರೀಮತೆಸ್ಥರಿಗೂ ವಿವಿಧ ಭಕ್ಷ್ಯಭೋಜ್ಯಗಳೊಡನೆ ಸಂತರ್ಪಣೆಯು ಜರಗಿತು. ಅದಮಾಪಕ್ಷ ಒಂದು ರೂಪಾಯಿಗೆ ಕಡಮೆ ಇಲ್ಲದಂತೆ ಭೂರಿ ದಕ್ಷಿಣೆ ಕೊಡಲ್ಪಟ್ಟಿತು. ಗವರ್ಣಮೆಂಟ ಉದ್ಯೋಗಸ್ಥರಿಗೂ ಪ್ರಧಾನರಲ್ಲಿ ಅಧಿಕಾರಿಗಳ ಪಾಲ್ಲಭ್ಯ ನೆಲ್ಲವರಿಗೂ ಕಾಲುಸವರನ್ ಕೊಡಲ್ಪಟ್ಟಿತು. ಇತರರಿಗೆ ಮೇಲೆ ಕಂಡಂತೆ ಒಂದು ರೂಪಾಯಿ ಕೊಡಲ್ಪಟ್ಟಿತು.

ಪ್ರಕೃತ ವಿವಾಹಕ್ಕೆ ಅನ್ಯದೇಶ ಸಂಸ್ಥಾನಾಧಿಪತಿಗಳಿಗೆ ಆಹ್ವಾನ ಪತ್ರಿಕೆಗಳು ಕಳುಹಿಸಲ್ಪಟ್ಟದ್ದನು ಅವನ್ನನುಸರಿಸಿ ಬರೋಡೆ, ಜೋಧಪುರ, ಕಾಶಿ ಈ ರಾಜ್ಯಗಳ ಮಹಾರಾಜ ಪ್ರತಿನಿಧಿಗಳು ವಿವಾಹಾರ್ಥ ಬಂದಿರುವಂತೆ ಕೇಳುತ್ತೇವೆ. ಈ ವಿಶೇಷೋತ್ಸವ ಸಂದರ್ಶನ ಕುತೂಹಲಿಗಳಾಗಿ ಬಹುಜನ ಅನ್ಯದೇಶಗಳಿಂದ ಬಂದಿರುತ್ತಾರೆ. ಇದಲ್ಲದೆ ಅನ್ಯ ದೇಶಗಳಿಂದ ಬಹುಜನ ಸಂಗೀತ ವಿದ್ವಾಂಸರೂ, ನರ್ತಕೀಯರೂ ಏತದರ್ಥ ಐದುಪಲ್ಯೋಗ ಕರೆಯಿಸಲ್ಪಟ್ಟಿರುತ್ತಾರೆ. ಈ ವಿವಾಹದಲ್ಲಿ ಮೈಸೂರು ರಾಜವಂಶದೊಳು ಇದುವರೆಗೆ ಇಲ್ಲದಂತ ಕೆಲವು ನವೀನಾಚಾರಗಳು ಕಾಲ ದೇಶ ಪ್ರವೃತ್ತಿ[illegible] ಗುಣವಾಗಿ [illegible] ರಪ್ಪಿಟ್ಟಂತೆ ಸಹ ತಿಳಿಯಲಾದವು.

[illegible]

ಗತ ಸಂವತ್ಸರದಲ್ಲಿ ಶ್ರೀಮನ್ ಮಹಾರಾಜ ಪುತ್ರೀಯವರ ವಿವಾಹಕ ಶುಭ[illegible] ಮಾದ ಆಹ್ವಾನ ಪತ್ರಿಕೆಗಳಂ ಕಳುಹಿಸುವದರಲ್ಲಿ ಅನಾವಶ್ಯಕ ಪಕ್ಷಪಾತಗಳೂ, ಉಪೇಕ್ಷೆಗಳೂ ವ್ಯಕ್ತಪಡಿಸಲ್ಪಟ್ಟಂತೆಯೂ, ತನ್ಮೂಲಕ ಅನೇಕರು ಅಸಂತೃಪ್ತರಾಗಿದ್ದಂತೆಯೂ, ವೃತ್ತಾಂತ ಪತ್ರಿಕೋಪನ್ಯಾಸಗಳಗೊಂದು ಮುಖ್ಯವಿಷಯವಾಗಿ ಏರ್ಪಟ್ಟಿತ್ತಷ್ಟೆ. ತಾದೃಶಾಕ್ಷೇಪಣೆಗಳಿಗೆ ಸಾಧ್ಯವಾದ ಮಟ್ಟಿಗೆ ಅವಕಾಶವನ್ನೀಯದಿರಬೇಕೆಂಬ ಉದ್ದೇಶದಿಂದಲೆ ಶ್ರೀಮನ್ಮಹಾರಾಣೀ ರೀಜಂಟರವರು ಲಗ್ನಪತ್ರಿಕೆಗಳನ್ನು ದಾರಾಳವಾಗಿ ಕಳುಹಿಸುವಂತೆ ಆಜ್ಞಾಪಿಸಿರುತ್ತಾರೆ. ತದನುಸಾರವೇ ಕಳುಹಿಸಲ್ಪಟ್ಟವು ಹೀಗಿದ್ದರೂ ಅಸಂತೃಪ್ತಿ ಎಂಬುದು ಅಲ್ಲಿಯಲ್ಲಿ ಅಂಕುರಿಸಿ ವಿಕಾಸವನ್ನೈದಲುಪಕ್ರಮಿಸಿರುವಂತೆ ತಿಳಿಯಬರುತಿದೆ. ಲಗ್ನಪತ್ರಿಕೆಗಳು ಕಳುಹಿಸಲ್ಪಟ್ಟರೂ ಅವು ಕೇವಲ ಮರ್ಯಾದಾರ್ಥ ಪ್ರೇಷಿತವೆಂದು ಭಾವಿಸಲ್ಪಡತಕ್ಕದ್ದೆ [illegible] ಲಗ್ನಮಹೋದ್ದೇಶದೊಡನೆ ಕಳುಹಿಸಲ್ಪಟ್ಟದ್ದಲ್ಲವಾದ ಕಾರಣ ಅವರವರು ತಮ್ಮ ತಮ್ಮ ಸ್ಥಾನಗಳನ್ನಗಲಿ ಹೊರಗೆ ಹೋಗಕೂಡದೆಂದು ಅಮಲ್ದಾರರುಗಳಿಗೆ ಡಿಸ್ಟ್ರಿಕ್ಟ ಡೆಪ್ಯುಟಿ ಕಮಿಷನರುಗಳಿಂದ ಪ್ರತ್ಯೇಕ ಡೆಮಿ ಅಫಿಷಿಯಲ್ ಲೆಟರುಗಳು ಲಗ್ನ ಪತ್ರಿಕೆಗಳ ಜೊತೆಯಲ್ಲಿ ಕಳುಹಿಸಲ್ಪಟ್ಟಿರುವುವೆಂತಲೂ, ಅಸಿಸ್ಟೆಂಟ ಕಮಿಷನರುಗಳನ್ನು ಸಹ ಕೇವಲ ಆಪ್ತ್ಯಕರಾದವರೇ ಹೋಗಬೇಕೆಂದು ತೀರ್ಮಾನಿಸಲ್ಪಟ್ಟಿರುವದೆಂತಲೂ, ಅದನ್ನನುಸರಿಸಿ ಪುಣ್ಯಾತ್ಮರು ತಮ್ಮ ನೈಸರ್ಗಿಕ ಉದಾರ ಭಾವವನ್ನು ಕಾರ್ಯತಃ ತೋರ್ಪಡಿಸಿದಾರೆಂತಲೂ ತಿಳಿಯಲಾದವು. ಇದಲ್ಲದೆ ಅಧಿಕಾರ ತಾರತಮ್ಯಗಳೂ ವ್ಯಕ್ತಿಭೇದಗಳೂ, ಯೋಗ್ಯತಾ ಪಕ್ಷಪಾತತೆಯೂ ಉಪಲಾಳನಾರ್ಹಗಳಾಗಬೇಕಾದ ಕಡೆಗಳಲ್ಲಿಲ್ಲ ಉದಾಸೀನ ಮಾಡಲ್ಪಟ್ಟಂತೆ ಅಲ್ಲಿಯಲ್ಲಿ ಪ್ರಸ್ತಾವಿಸಿಕೊಳ್ಳತಕ್ಕವರ ವಾಕ್ಪಾರುಷ್ಯವು ನಮಗೆ ಮಿತಿಯಿಲ್ಲದ ಅನಮಾದಾನವನ್ನುಂಟುಮಾಡಿದೆ.

[illegible]

ಮೈಸೂರ್ ಗವರ್ನಮೆಂಟಿನ ಅಧಿಪತ್ಯಕ್ಕೊಳಗಾದ ಪುತ್ತ ಗೌರವಾನ್ವಿತವಾದ ಉದ್ಯೋಗದಲ್ಲಿರುವ ಪ್ರಾಮಾಣಿಕರಾದ ಪಿಬ್ಬ ದೊಡ್ಡವನು

ಷ್ಯರಿಗೆ ವಿಭಕ್ತತ ದೋಷದಿಂದ ಪಡೆವದೆ ಕಳತ್ರವಿಯೋಗಗಳೂ ಶಕ್ತ್ಯಯುಕ್ತರಾದ ಸಂಸ್ಕೃತಿಕ್ಲೇಶವೂ ಉಂಟಾಗುತಲಿದ್ದರೂ, ದೈವಸಂಕಲ್ಪಕ್ಕೇ ಪ್ರತಿಕ್ರಿಯೆಯುಂ ಮಾಡುವದರ ಮೂಲಕ ದೈವಸಂಕಲ್ಪಕ್ಕೂ ಪುರುಷ ಪ್ರಯತ್ನಕ್ಕೂ ಉಂಟಾಗಿರುವ ಬಲಾಬಲವನ್ನು ನಿರ್ಧರಿಸಬೇಕೆಂಬ ದೃಢಸಂಕಲ್ಪವುಳ್ಳವರಾಗಿ ಕಳತ್ರ ನಷ್ಟವನ್ನು ಕೂಡಲೇ ಅನ್ಯತರವಾದ ಪರಿಣಯಗಳ ಮೂಲಕ ಸಾಧ್ಯವಾದಮಟ್ಟಿಗೆ ಪೂರೈಸುವ ಪ್ರಚಂಡ ಮನೋಧೈರ್ಯವುಳ್ಳವರಾಗಿರುವದು ನೋಡಿ ಬಹಳ ಸಂತೋಷಪಡುತ್ತೇವೆ. ಈ ಬೊರ್ಡ್ಡ ಮನುಷ್ಯರಿಗೆ ಪ್ರಾಥಮ್ಯ ಭಾರ್ಯೆಯಲ್ಲಿ ಜನಿಸಿದ ಪ್ರಬುದ್ಧರಾದ ಪುತ್ರ ಪೌತ್ರರೂ ಅನೇಕರಿರುತಲಿದಾರೆ. ವಾರ್ಧಕ್ಯದಶೆಯಲ್ಲಿಯೂ ಬಾಲಕರಾಗಿಯೂ ಇರುವ ಸುತರ ರಕ್ಷಣಾಭಾರವು ಅವರಿಗೆ ನಿಯತವಾಗಿ ಏರ್ಪಟ್ಟಿದೆ. ಹೀಗಿದ್ದಾಗ್ಯೂ ವಿವಿಧೋಪಭೋಗಾಸಕ್ತರಾದ ಸದರೀ ದೊಡ್ಡ ಮನುಷ್ಯರು ದಾರ್ಢ್ಯಯುಕ್ತವಾದ ಶರೀರ ದಾರ್ಢ್ಯವನ್ನು ಭವಿಷ್ಯತ್ತಿನಲ್ಲಿನ ಪರಿಣಾಮ ಸುಖವನ್ನು ಗುರಿಯಾಗಿಟ್ಟು ಕಾಮಿಸುವ ನಮ್ಮ ಬುದ್ಧಿನಿಗೆ ಕಾಣದಾಗದ ಸತ್ಪ್ರವೃತ್ತಿಗಳನ್ನು ಸಾಧ್ಯವಾದಷ್ಟು ಗುಣವಾಗಿ ಈಚೆಗೆ ಮಾಡಿಕೊಂಡರೆಂಬ ಅಂಶವನ್ನು ಕೇಳಿ ಸಂತೋಷಿಸುತ್ತೇವೆ ಇಲ್ಲನಮ್ಮ ಸಂತೋಷ ನಿವೇದಿಸಬೇಕಾದದ್ದೆ.— ನ್ಯಾಯವಿಮರ್ಶಕತಾ ಶಕ್ತಿಯುಕ್ತರಾದ ಮೇಲಕಂಡ ದೊಡ್ಡ ಮನುಷ್ಯರಿಗೆ ಇದೀಗ ವಯಸ್ಸಿನಲ್ಲಿ ಬಾಲವೃತಿಯಾಗದಿರುವ ೧೮ ವರುಷ ವಯಸ್ಸಿನ ಅನಿವಾಹಿತೆಯಾದ ಕನ್ನೆಯು ದೊರೆತದಕ್ಕಾಗಿಯೂ, ವಿವಾಹ ಸಂಬಂಧವಾದ ರೆಗ್ಯುಲೇಷನಿಗೆ ವಿರುದ್ಧವಾಗಿ ವರ್ತಿಸುವವರು ಶಿಕ್ಷಿಸುವ ಅಧಿಕಾರವುಳ್ಳ ಸರಕಾರದವರು ಅದಕ್ಕೆ ವಿಷಯದಲ್ಲಿ ಉಪಯೋಗಿಸದೆ ಸುಮ್ಮನೆ ಇದ್ದು ಕಾಲದಲ್ಲಿನ ವಿವಾಹಬಂಧಕಳಾದ ಕೆಲಸಗಳನ್ನಿಟ್ಟುಕೊಂಡು ಕಾಪಾಡುತಲಿದ್ದ ಕನ್ಯಾದಾನ ಮಾಡಿದ ಆಕೆಯ ಮಾತಾಪಿತೃಗಳ ಔದಾರ್ಯ ವಾತ್ಸಲ್ಯಕ್ಕಾಗಿಯೂ ಸಂತೋಷಿಸುತ್ತೇವೆ.

ಮಾರೀ ಕಣಿವೆಯ ಕಟ್ಟೆಯನ್ನು ಕಟ್ಟಿಸಬೇಕೆಂಬ ಉದ್ದೇಶದಿಂದ ಮೈಸೂರ್ ಗವರ್ನಮೆಂಟಿನವರು ಈಗ್ಯೆ ಕೆಲವು ಸಂವತ್ಸರಗಳ ಮೊದಲು ಅಜಮಾಯಿಷಿ ನಡಿಸಿ ರಿಪೋರ್ಟ್ ಮಾಡುವ ಬಗ್ಗೆ ಅನೇಕ ಮಂದಿ ಇಂಜನಿಯರುಗಳನ್ನು ಕಳುಹಿಸಿ ಅವರ ಪ್ರೋಜೆಕ್ಟುದಾರಿ ಖರ್ಚುಗಳ ಬಗ್ಗೆ ಅನೇಕ ನಕ್ಷೆ ರೂಪಾಯಿಗಳನ್ನು ದುಂದಾಗಿ ವಂಜಾಮಾಡುತಲಿದ್ದರಷ್ಟೆ. ಹೀಗಿರುವಲ್ಲಿ ಅಸಿಸ್ಟೆಂಟ್ ಚೀಫ್ ಇಂಜನಿಯರಾದ ಮಿ॥ ವ್ಯಾಟ್ಸ್ ಸಾಹೇಬರವರು ಸಹ ಸದರೀ ಪ್ರದೇಶಕ್ಕೆ ಹೋಗಿ ಅಲ್ಲಿನ ಸ್ಥಳ ಸನ್ನಿವೇಶಗಳನ್ನು ಪರೀಕ್ಷಿಸಿದರು. ಸ್ಯಾನಿಟರಿ ಎಕ್ಸಿಕ್ಯೂಟಿವ್ ಇಂಜನಿಯರ್ ಮಿ॥ ರಾಘವುಲು ನಾಯುಡರವರು ಸದರೀ ಸ್ಥಳಕ್ಕೆ ಹೋಗಿ ಅದರ ನಕ್ಷೆಯನ್ನು ತಯಾರುಮಾಡಿ ಖರ್ಚು ಅಂದಾಜು ಪಟ್ಟಿ ಸಹ ಗವರ್ನಮೆಂಟಿಗೆ ತಮ್ಮ ಅಭಿಪ್ರಾಯವನ್ನು ತಿಳಿಯಪಡಿಸಿದರು. ಸದರೀ ನಕ್ಷೆಯನ್ನೂ ಅಂದಾಜು ಮೊಬಲಗನ್ನೂ ಅದರ ಸಾಧ್ಯಾಸಾಧ್ಯಾಂಶಗಳನ್ನೂ ಪ್ರಬಲರಾದ ಇಂಜನಿಯರುಗಳು ಕೆಲವರು ನೋಡಿ ಆಲೋಚಿಸಿ ಇಷ್ಟು ದೊಡ್ಡ ಪ್ರಯತ್ನವು ಕದಾಚಿತ್ ಸಾಧ್ಯವಾದರೂ ವಿಶೇಷ ಅರ್ಥವಿನಿಯೋಗವು ಬೇಕಾಗಿರುವದರಿಂದ ಸದ್ಯಃ ಆ ಪ್ರಯತ್ನವನ್ನು ನಿಲ್ಲಿಸುವದು ಒಳ್ಳೇದೆಂದು ತಾತ್ಪರ್ಯವಿಟ್ಟರು. ಗವರ್ನಮೆಂಟಿನವರಿಗೆ ಪ್ರಕೃತ ದಿವಾನರವರಿಗೆ ಅದನ್ನು ಹ್ಯಾಗಾದರೂ ಪೂರೈಸಬೇಕೆಂಬ ಸಂಕಲ್ಪವೂ ವಿಶೇಷ ಹಂಬಲವೂ ಇರುವದರಿಂದ ಸೂಪರಿಂಟೆಂಡಿಂಗ್ ಇಂಜನಿಯರ್ ಮಿಸ್ಟರ್ ಸ್ಟಾರ್ಡ್ಲಿ ವರ್ಡಿಯವರನ್ನು ಮಾರಿ ಕಣಿವೆಗೆ ಕಳುಹಿಸಿ ಅಲ್ಲಿನ ಸ್ಥಿತಿಯನ್ನು ಚೆನ್ನಾಗಿ ಅಜಮಾಯಿಷಿ ಮಾಡಿ ರಿಪೋರ್ಟ್ ಮಾಡಬೇಕೆಂಬದಾಗಿ ಹುಕುಂ ಮಾಡಿದರು. ಅದನ್ನನುಸರಿಸಿ ಕಳೆದ ಮಂಗಳವಾರದಿವಸ ಸದರೀ ಇಂಜನಿಯರವರು ಮಾರೀ ಕಣಿವೆಯ ಪ್ರಾಂತಕ್ಕೆ ಹೊರಟು ಹೋದರೆಂದು ತಿಳಿಯಬರುತ್ತದೆ.

LOCAL AND PROVINCIAL NEWS.

ಸ್ಥಳೀಯವರ್ತಮಾನಗಳು ಮತ್ತು ಪ್ರಾಂತವರ್ತಮಾನಗಳು.

ಈ ತಿಂಗಳ ೧೮ನೇ ತಾರೀಖಿನ ಸಾಯಂಕಾಲ ಹೊನ್ನಾಳಿಯಲ್ಲಿ ಭೂಮಿ ಗುಡುಗಿ ಜನರೆಲ್ಲರು ಬಹಳ ಭಯಪಟ್ಟರು. ಲೋಕವೆಲ್ಲ ಹಾಳಾಗುವದೆಂದು ಭಾವಿಸುತ್ತಾರೆ. ಇದು ದೇವರಶಕ್ತಿಯಲ್ಲ ದೇಡೇರೆಯಲ್ಲವೆಂದು ಕೆಲವರು ಹೇಳುತ್ತಾರೆಂದು ಅಲ್ಲಿನ ಬಾತ್ಮೀದಾರರು ಬರೆದಿರುವರು

ಈಸಂಸ್ಥಾನದ ಮಿಲಿಟರಿ ಸೆಕ್ರೆಟರಿಯಾಗಿದ್ದ ಕರ್ನಲ್ ಮ್ಯಾಕೆಂಟ್ಯೈರ್ ಸಾಹೇಬರು ಮೊನ್ನೇ ಸೋಮವಾರ ಮಹಾರಾಣಿಯವರ ಭೇಟಿಮಾಡಿಕೊಂಡು ಆ ರಾತ್ರಿಯೇ ಲಂಡನಿಗೆ ಪ್ರಯಾಣವಾದರು. ಅವರು ದೇಹಾರೋಗ್ಯಕ್ಕಾಗಿ ೬ ತಿಂಗಳ ಫರ್ಲೋರಜಾ ಪಡೆದಿರುವರು. ಅವರು ವಾಪಸು ಬರುವವರಿಗೆ ಅವರ ಕೆಲಸವನ್ನು ಕರ್ನಲ್ ಡೇಶಂಪೇ ಅರಸರವರು ಬದಲಿನೋಡುವರು.

ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷನ್ನಿನಲ್ಲಿ ನೀರಿನ ನಲ್ಲಿಗಳು ಅಲ್ಲಲ್ಲಿ ಇರುತಲಿದಾಗ್ಯೂ ಪಟ್ಟ ಲಯಾ ಜಾತಿ ಜನಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿಡದದೆ ಇರುವದರಿಂದ ಇಟ್ಟಿರುವ ನಲ್ಲಿಗಳಲ್ಲಿ ನೀರಿಗೆ ಬರುವ ಉತ್ತಮ ಜಾತಿಯವರಿಗೂ, ಕೀಳು ಜಾತಿಯವರಿಗೂ ಪ್ರತಿದಿನ ಮಾರಾಮಾರಿಗಳಾಗುತ ಬಹಳ ಗದ್ದಲವಾಗುತಲಿರುವದರಿಂದ ಅಲ್ಲಿನ ಅಧಿಕಾರಿಗಳು ಈ ವಿಷಯದಲ್ಲಿ ಉಚಿತವಾದ ಏರ್ಪಾಡು ಮಾಡುವರೆಂದು ನಂಬಿದೇವೆ.

ಡಾಕ್ಟರ್ ಕಿಂಗ್ ಯೆಂಬವರು ಆರೋಗ್ಯವಿಷಯಕವಾಗಿ ಈಚೆಗೆ ರಚಿಸಿದ ಒಂದು ಸಣ್ಣ ಗ್ರಂಥದ ೫೦೦ ಪ್ರತಿಗಳನ್ನು ಮೈಸೂರ್ ಗವರ್ನಮೆಂಟಿನವರು ತೆಗದು ಪ್ರತಿಡಿಸ್ಟ್ರಿಕ್ಟ ಡೆಪ್ಯುಟಿ ಕಮಿಷನರಿಗೆ ಕಳುಹಿಸಿ ಅದರಲ್ಲಿ ಆರೋಗ್ಯ ಪಾರಿಶುದ್ಧ್ಯಾಭಿವೃದ್ಧಿ ವಿಷಯದೊಳು ತಿಳಿಸಲ್ಪಟ್ಟಿರುವ ಕ್ರಮಗಳಂತೆ ತಾಲೂಕಿನ ನಲ್ಲಿ ಜಾರಿಯಲ್ಲಿ ತರಲಿಕ್ಕೆ ಪ್ರಯತ್ನಪಡಬೇಕೆಂದು ಹುಕುಂ ಮಾಡಿ ಆ ಬಗ್ಗೆ ೫೦೦ ರೂಪಾಯಿಗಳು ಮಂಜೂರ್ಮಾಡಿರುತ್ತಾರೆಂದು ಕೇಳುತ್ತೇವೆ.

ಮೈಸೂರ್ ಶೀಮೆಯಲ್ಲಿ ಸಾಂಕ್ರಾಮಿಕ ರೋಗಗಳು ವ್ಯಾಪಿಸುವ ಸಂಭವ ಉಂಟಾಗುವಕಾಲದಲ್ಲಿ ಅನುಸರಿಸಲ್ಪಡುವ ಬಗ್ಗೆ ಮೈಸೂರ್ ಗವರ್ನಮೆಂಟಿನವರು ಒಂದು ಕಾನೂನನ್ನು ಮಾಡಿ ಇಂಡ್ಯಾ ಗವರ್ನಮೆಂಟಿನವರ ಅಭಿಮತದ ಮೇಲೆ ಗತವಾರದ ಮೈಸೂರ್ ಗೆಜೆಟಿನಲ್ಲಿ ೯೭ನೆ ಇಸವಿಯ ೨ನೇನಂಬರ್ ರೆಗ್ಯುಲೇಷನಾಗಿ ಪ್ರಕಟಿಸಿರುತ್ತಾರೆ. ಈ ರೆಗ್ಯುಲೇಷನು ಈ ತಿಂಗಳ ೧೧ನೇ ತಾರೀಖ್ ಮೊದಲು ಮೈಸೂರ್ ಶೀಮೆಯಲ್ಲಿ ಸರ್ವತ್ರ ಜಾರಿಯಲ್ಲಿ ತರಲ್ಪಟ್ಟಿರುತ್ತದೆ. ಇದರ ನಿಬಂಧನೆಗಳನ್ನು ಮುಂದೆ ತಿಳಸುವೆವು

ಮೈಸೂರ್ ಶೀಮೆಯ ವಿದ್ಯಾಭ್ಯಾಸದ ಇಲಾಖಾ ಇನ್ಸ್ಪೆಕ್ಟರ್ ಜನರಲ್ಲರವರ ಆಫೀಸ್ ಮ್ಯಾನೇಜರಾದ ಮಿ॥ ರಾ ಚೆನ್ನಪಟ್ಟಣದ ವಾಸುದೇವಯ್ಯನವರಿಂದ ವಿರಚಿತವಾದ "ಆರ್ಯ ಕೀರ್ತಿ" ಎಂಬ ಅಂಕಿತವುಳ್ಳ ಕರ್ಣಾಟಕ ವಾಕ್ಯಗ್ರಂಥದ ಒಂದು ಪ್ರತಿಯು ಪ್ರೀತಿ ಗೌರವ ಪುರಸ್ಸರವಾಗಿ ಗ್ರಂಥಕರ್ತರಿಂದ ನಮಗೆ ಈ ವಾರದೊಳು ಕಳುಹಿಸಲ್ಪಡಲು ಅದಂ ನಾವು ಕೇವಲ ಆದರದೊಡನೆ ಅಂಗೀಕರಿಸಿದೆವು. ಪ್ರಸಕ್ತ ಗ್ರಂಥವು ವಂಗಭಾಷೆಯಿಂದ ಭಾಷಾಂತರ ಮಾಡಲ್ಪಟ್ಟದ್ದಾಗಿರುತ್ತದೆ. ಏತದ್ಗ್ರಂಥ ವಿಷಯಕವಾದ ಸ್ವಾಭಿಪ್ರಾಯವಂ ಮುಂದಿನವಾರದ ಪತ್ರಿಕೆಯಲ್ಲಿ ಪ್ರಕಟಿಸುವೆವು.

ಶ್ರೀಮನ್ಮಹಾರಾಣೀ ರೀಜೆಂಟರವರ ಜ್ಯೇಷ್ಠಪುತ್ರಿಯಾದ ಸಾ॥ ಜಯಲಕ್ಷ್ಮಮ್ಮಣ್ಣಿಯವರ ವಿವಾಹ ಮಹೋತ್ಸವಕ್ಕಾಗಿ ೨ ದಿವಸಗಳ ರಜಾ ಸಕಲ ಇಲಾಖೆಗಳಿಗೂ ಕೊಡಲ್ಪಟ್ಟರುವಲ್ಲಿ ಕಂಟ್ರೋಲರವರ ಆಫೀಸಿಗೆ ಮಾತ್ರ ರಜಾ ಕೊಡದೆ ಹೋಗಿರುವದು ನೋಡಿದರೆ ಬಹಳ ಆಶ್ಚರ್ಯವಾಗಿರುತ್ತದೆ. ಕಂಟ್ರೋಲರವರು ರಜಾ ಕೊಟ್ಟ ಉದ್ದೇಶವೇನೆ ಸಹ ಗೌರವವಿದದೆ ತಮ್ಮ ತಾಬೇದಾರ್ರು ವಿಷಯದಲ್ಲಿ ಇಷ್ಟು ಕಾಠಿಣ್ಯವನ್ನು ತೋರಿಸಿದ್ದು ಉಚಿತವಾಗಿ ತೋರದಿಲ್ಲ. ಸರಕಾರದ ಕೆಲಸವನ್ನು ಇಷ್ಟು ನಿಯತವಾಗಿ ನಡಿಸತಕ್ಕದ್ದು ಅವರ ಉದ್ದೇಶವಾಗಿದ್ದಲ್ಲಿ ತಾವೂ ಮೈಸೂರಿಗೆ ಹೋಗದೆ ಇಲ್ಲಿಯೇ ನಿಂತು ಕಚ್ಚೇರಿ ಕೆಲಸಗಳನ್ನು ನೋಡುತಿದ್ದರೆ ಅವರನ್ನು ಯಾರೂ ಆಕ್ಷೇಪಿಸುತಿರಲಿಲ್ಲವು.

ಈಗ ಮೈಸೂರಲ್ಲಿ ಜರಗುತಲಿರುವ ಮಹಾರಾಜಪುತ್ರಿಯವರ ವಿವಾಹ ಗೌರವಾರ್ಥ ಈ ಸಂಸ್ಥಾನದಲ್ಲಿರುವ ವಿಶಿಷ್ಟ ಸರ್ಕಾರ್ ಇಲಾಖೆಗಳಿಗೆ ಕಳೆದ ಶುಕ್ರವಾರ ಶನಿವಾರಗಳೆರಡು ದಿನಗಳು ರಜಾ ಕೊಡಲ್ಪಟ್ಟಿತ್ತಷ್ಟೆ. ಹೀಗಿದ್ದರೂ ಕೆಲವರು ಆಫೀಸರ್‌ಗಳಿಗೆ ತಾವತ್ಪರ್ಯಂತಕಾಲ ನಿರೀಕ್ಷಣೆಯುಂ ಮಾಡುವಷ್ಟರ ಸಹನೆಯುಂ ಬಾರದಂತೆ ಕಾಣಿಸಲಿಲ್ಲವು. ಮಧ್ಯಗಿರಿ ಮುನ್ಸಫರವರು ರಜಾ ಉಪಕ್ರಮಿಸಲಿಕ್ಕೆ ಪೂರ್ವವೇ ಕೋರ್ಟನ್ನು ಮುಚ್ಚಿಸಿಬಿಟ್ಟು ಹೊರಟು ಹೋದಂತೆಯೂ, ಆ ಅಂಶ ಡಿಸ್ಟ್ರಿಕ್ಟ ಜಡ್ಜಿಯವರಿಗೆ ತಿಳದು ಹಾಗೆ ಮನಸ್ವೀ ಹೊರಟುಹೋದುದಕ್ಕಾಗಿ ಮುನ್ಸಫರ ಸಮಾಧಾನವಂ ಕೇಳಿರುವಂತೆಯೂ ಕೇಳುತ್ತೇವೆ. ಪರಂತು ಇದರ ಯಾಥಾರ್ಥ್ಯವನ್ನು ಮುಂದೆ ನಿರ್ಧರವಾಗಬೇಕಾಗಿರುತ್ತದೆ.

ಈ ಸಂಸ್ಥಾನದಲ್ಲಿ ಅಧಿಕಾರಿಗಳ ತಾರತಮ್ಯಾನುಗುಣವಾಗಿ ವೇತನಗಳೂ ಕಾರ್ಯಸ್ವಭಾವಗಳೂ ಅವುಗಳ ಆವಶ್ಯಕತಾನಾವಶ್ಯಕತೆಯೂ ಏರ್ಪಡುತಲಿರುವಣವು ಜಗತ್ಪ್ರಸಿದ್ಧ ವಿಷಯವಷ್ಟೆ. ಈಸಿದ್ಧಾಂತದ ಮೇಲೆ ಕಡೂರ್ ಡಿಸ್ಟ್ರಿಕ್ಟ್ ಡೆಪ್ಯುಟಿಕಮಿಷನರ್ ಮಿ॥ ವೀರಯ್ಯವರ ಸಂಬಳ ಮಾಹೆಯಾನಾ ೧,೫೦೦ ರೂಪಾಯಿಗಳಂತೆ ನಿಷ್ಕರ್ಷೆ ಮಾಡಿ ಏತಂನಿಮಿತ್ತವೇ ಅವರಿಗಾಗಿಯೇ ಒಂದು ಪ್ರತ್ಯೇಕ ಗ್ರೇಡು ಏರ್ಪಡಿಸಲ್ಪಟ್ಟಂತೆ ಕೇಳುತ್ತೇವೆ ಅಲ್ಲಿನ ಫಸ್ಟ್ ಗ್ರೇಡ್ ಡೆಪ್ಯುಟಿಕಮಿಷನರ ಸಂಬಳ ಇದುವರಿಗೆ ೧,೨೦೦ ರೂಪಾಯಿಗಳಿದ್ದವು. ಈಗ ಸದರೀ ಕೆಲಸಕ್ಕೆ ಅನ್ಯದೇಶದಿಂದ ಬಂದಿರುವ ಕಾರಣದಿಂದಲೂ, ತತ್ರಾಪಿ ಯೂರೋಪಿಯನ್ ಆಫೀಸರರಾಗಿರುವದರಿಂದಲೂ ಸ್ವಲ್ಪವೇತನವು ಅಲ್ಪವಾಗಿ ತೋರುವದಾದುದರಿಂದ ಭಿನ್ನಾಂತರಗಳು ಪ್ರಾಮಾಣಿಕಕ್ಕೆ ತರಲ್ಪಟ್ಟಂತೆ ಕಾಣುತ್ತದೆ.

ಲನೆ ಬಂಗಡಿಗಳಿಗಾಗಿ ಪ್ರತ್ಯೇಕ ಒಬ್ಬ ಆಫೀಸರನ್ನೂ ಭಾರೀ ಶಿಬ್ಬಂದಿಯನ್ನೂ ಇಟ್ಟಿರುವದರಿಂದ ಗವರ್ನಮೆಂಟಿಗೆ ನಷ್ಟವೇ ಹೊರ್ತು ನಿರೀಕ್ಷಿತ ಫಲಪ್ರಾಪ್ತಿ ಇಲ್ಲವೆಂಬ ನೈರಾಶ್ಯದೊಡನೆ ಮೈಸೂರ್ ಗವರ್ನಮೆಂಟಿನವರು ಸದರೀ ಇಲಾಖೆಯನ್ನೇ ವಜಾ ಮಾಡಬೇಕೆಂಬ ಸಂಕಲ್ಪವುಳ್ಳವರಾಗಿ, ಆಅಂಶವನ್ನು ಪ್ರಸ್ತಾವತ್ವೇನ ಪ್ರಜಾ ಪ್ರತಿನಿಧಿಗಳ ಸಮಾಜದಲ್ಲಿ ಸಹ ಸೂಚಿಸಿದ್ದರು. ಪರಂತು ಆಪ್ರಕಾರ ಪ್ರಯತ್ನವು ಮತ್ತೊಂದಾವರ್ತಿ ಮಾಡಿ ನೋಡಬೇಕೆಂಬ ಚಾಪಲ್ಯದೊಡನೆ ಪ್ರಯೋಗವಿಧಿಯಾಗಿ ಇನ್ನೊಂದು ಸಂವತ್ಸರಕಾಲ ಮಾತ್ರವೇ ಆ ಇಲಾಖೆಯಂ ನೆರಿಗೊಳಿಸಿದರು. ಈಗ ಕೆಡ್ಡಾ ಸ್ಯೂಪರಿಂಟೆಂಡೆಂಟರವರ ಸ್ವಾಭಾವಿಕವಾದ ಜಾಗರೂಕತೆಯಿಂದಲೂ ಇದಕ್ಕಾಗಿ ಈಗ ಮಾಡಲ್ಪಡುತಲಿರುವ ವಿಶೇಷ ತರದೂದುಗಳಿಂದಲೂ ಇದುವರೆಗೆ ಎರಡು ದಫಾ ಹಿಡಿಯಲ್ಪಟ್ಟ ಆನೆಗಳಲ್ಲದೆ ಮೂರನೆಯ ದಫಾ ಸಹ ೬೦ ಆನೆಗಳನ್ನು ಹಿಡಿಸಿದರೆಂತಲೂ ಇದರಿಂದ ಗವರ್ನಮೆಂಟಿಗೆ ವಿಶೇಷ ಕಿಫಾಯತು ಆಗಬಹುದೆಂತಲೂ ಕೇಳುತ್ತೇವೆ. ಮುಖ್ಯವಾಗಿ ಮಾಡಲ್ಪಟ್ಟ ಪುರುಷಪ್ರಯತ್ನವು ನಿಷ್ಫಲವಾಗದೆ ಸಫಲವಾದಬಗ್ಗೆ ಸ್ಯೂಪರಿಂಟೆಂಡೆಂಟರವರಿಗೆ ನಾವು ಶುಭವಾದನವಂ ಮಾಡುವೆವು.

ನಮ್ಮ ಶಿವನೆಗ್ಗ ಬಾತ್ಮೀದಾರರು ಆ ಪ್ರಾಂತ ನವೀನ ವಿಶಾಯತಿಯನ್ನು ಕುರಿತು ಬರೆಯುತ್ತಾರೆ ಏನದರೆ:—

ಬೀದರಿಂದ ಬೇಕಿಪುರದ ಮಧ್ಯೆ ಇರುವ ಕಣಿವೆಯಲ್ಲಿ ಸುಮಾರು ೨೦೦-೩೦೦ ಜನ ಬಳ್ಳಾರಿ ದೇಶದ ಕೊರಚರು ಬಂದು ಸೇರಿದಾರೆ. ಹಗಲು ಪ್ರಯಾಣಿಕರನ್ನು ತೊಂದರೆಪಡಿಸಿ ಸುಲಿಗೆ ಕಿತ್ತುಕೊಳ್ಳುತಲಿದಾರೆ ಅಸಿಸ್ಟೆಂಟ್ ಇಂಜನಿಯರ್ ಹೀರಾಸಿಂಗ್, ಮತ್ತು ಡಾಕ್ಟರ್ ಅಚ್ಯುತರಾಯರು, ಜನಾಬುರವರ ಬಗ್ಗೆ ಹೋಗಿದ್ದ ನೌಕರರು ಇವರುಗಳನ್ನೆಲ್ಲ ಹಿಡಿದು ಹೊಡೆದು ಬಟ್ಟೆಗಳನ್ನೆಲ್ಲ ಕಸುಗೊಂಡರು. ಇದಕ್ಕಾಗಿ ಒಬ್ಬ ಸಮಾರ್ ಪೋಲೀಸ್ ಜಮೇದಾರನಿಗೆ ಅಲ್ಲಿಯಲ್ಲಿಟ್ಟದಾರೆ ಈ ತಿಂಗಳ ೧೨ನೇ ತಾರೀಖಿನಲ್ಲಿ ಬಾಬ್ ಇಲಾಖಾ ಜನಗಳಿಗೆ ಕಸಬಾ ಶೇಕದಾರರ ಮೂಲಕ ೫೦ ರೂಪಾಯಿಗಳ ಜನಿಸಿ ಕಳುಹಿಸಿತ್ತು. ಈ ಪ್ರಾಂತಿಗೆ ೪ ನೇ ಮೈಲಿಯಲ್ಲಿ ಶೇಕದಾರರನ್ನು ಹೊಡೆದು ಜಿನಿಸಿಯನ್ನೆಲ್ಲ ಸಾಗಿಸಿಕೊಂಡುಹೋದರು. ಈ ಪ್ರಾಂತದಲ್ಲಿ ಸರ್ಕಾರದವರಭಯ ಇಲ್ಲವೇ ಇಲ್ಲವು. ಡೆಪ್ಯುಟಿ ಕಮಿಷನರವರು ಪ್ರಾಂತದಲ್ಲಿಲ್ಲವು. ಪೋಲೀಸ್ ಸೂಪರಿಂಟೆಂಡೆಂಟ್ ಹೇವಾ ಹನುಮಂತಯ್ಯನವರು ದಿಗಲಿನಿಂದ ಮನೆಬಿಟ್ಟು ಹೊರಡುವದಿಲ್ಲವು ಈ ಸಮಯದಲ್ಲಿ ಪೋಲೀಸ್‌ನವರು ಪರಾರಿ. ಅನೇಕಜನ ಪೋಲೀಸ್‌ನವರನ್ನು ಹೊಡೆದು ಮರಗಳಿಗೆ ಕಟ್ಟಹಾಕಿ ಹೊರಟು ಹೋದರು ಇದಕ್ಕೆ ತಕ್ಕಹಾಗೆ ಈ ಪ್ರಾಂತದಲ್ಲಿ ನಡೆದ ಪ್ರಾಣದೇವರ ರಥೋತ್ಸವದಲ್ಲಿ ರಥದಮೇಲೆ ದೇವರನ್ನು ಕೂಡಿಸಲು ಪ್ರಯತ್ನಪಟ್ಟಾಗ ವಾಹಕರ ಅಜಾಗ್ರತೆಯಿಂದ ಪ್ರಾಣದೇವರ ಉತ್ಸವ ಮೂರ್ತಿ ಕೆಳಗೆ ಬಿದ್ದು ಪುನಃ ಸಂಪ್ರೋಕ್ಷಣೆ ಮಾಡಿ ೧೨ ಗಂಟೇಮೇಲೆ ರಥಾರೋಹಣವಾಯಿತು. ಈಪ್ರಾಂತದಲ್ಲಿ ಈ ವರ್ಷ ಬಹಳ ಗಾಬರಿಯಾಗಿದೆ. ದೇವರೇ ಸಂರಕ್ಷಣೆ ಮಾಡಬೇಕು. ಸಣ್ಣಸಣ್ಣ ಗ್ರಾಮಗಳಲ್ಲಿ ಲೂಟಿ ಬರುವದಾಗಿ ವರ್ತಮಾನ ಕೊಟ್ಟು ಆರೀತಿ ಹೋಗಿ ಕೃತ್ಯ ನಡೆಸುತಲಿದಾರೆ ಸಂಸ್ಥಾನದ ಪ್ರಭುಗಳೆಲ್ಲರು ಮೈಸೂರಲ್ಲಿ ನಡೆಯುವ ಲಗ್ನಕ್ಕಾಗಿ ಹೋಗಿರುವದರಿಂದ ಇಲ್ಲಿ ನಡೆಯುವ ಉಪದ್ರವ ಲಗ್ನಕ್ಕೆ ಯಾರುತಾನೆ ಬರುವರು.

THE MYSORE GAZETTE.

ಮೈಸೂರು ಗೆಜೆಟ.

ಗುರುವಾರ, ತಾ॥ ೧೮ನೇ ಫೆಬ್ರವರಿ ೧೮೯೭.

ಮೈಸೂರ್ ಗವರ್ನಮೆಂಟಿನವರಿಂದ ಕೊಡಲ್ಪಡುವ ಇಸ್ತಿಹಾರನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾ॥ ೧೦ನೇ ಫೆಬ್ರವರಿ ೧೮೯೭.

ನಂ॥ ೬೧೪೪ ರೆ. ೨೫೧೦—ಪುರವಮೇಲು ಸೀತಾರಾಮಯ್ಯನವರು ಬಂಗಾರದ ತರೀಕ ಎಕಸ್ಟ್ರಾ ಅಸಿಸ್ಟೆಂಟ್ ಕಮಿಷನರಾಗಿರುವವರಿಗೂ ಈಕೆಳಗೆ ಕಂಡ ಅಮಲದಾರರುಗಳು ಖಾಯಮಿಯಾಗಿ ಭಡ್ತಿಗಳು ಮಾಡಲ್ಪಟ್ಟಿರುತ್ತಾರೆ.

ಪಿ ಪಾರ್ಥಸಾರಥ್ಯಯ್ಯಂಗಾರ್ ೩ನೇ ಕ್ಲಾಸಿನಿಂದ ೨ನೇ ಕ್ಲಾಸಿಗೆ

ಪಿ ಎನ್, ಗೋಪಾಲರಾವ್, ೪ನೇಕ್ಲಾಸಿನಿಂದ ೩ನೇಕ್ಲಾಸಿಗೆ.

ತಾ॥ ೧೦ನೇ ಫೆಬ್ರವರಿ ೧೮೯೭

ನಂ॥ ೬೧೯೨—ರೆ. ೨೫೧೬—ಈ ಕೆಳಗೆ ಕಂಡ ಅಮಲದಾರರುಗಳ ಭಡ್ತಿಗಳು ೧೯ನೇ ಇಸವಿ ಅಕ್ಟೋಬರ್ ೨೪ನೇ ತಾರೀಖ್ ಲಾಗಾಯಿತು ಮಂಜೂರ್ಮಾಡಲ್ಪಟ್ಟಿರುತ್ತವೆ

ಮೃತಪಟ್ಟ ಬಿ.ಟ್ಕೋ ನಾಗೇಶರಾಯರಿಗೆ ಬದಲಾಗಿ ಪಿ ಸೀತಾರಾಮಯ್ಯನವರು ೨ನೇ ಕ್ಲಾಸ್ ಆಕ್ಟಿಂಗಿನಿಂದ ೨ನೇ ಕ್ಲಾಸಿನಲ್ಲಿ ಕಾಯಂ

ಸಿ ಶೇಷಾದ್ರಯ್ಯಂಗಾರ್, ೩ನೇ ಕ್ಲಾಸಿನಿಂದ ೨ನೇಕ್ಲಾಸಿಗೆ ಆಕ್ಟಿಂಗ್

ಸಿ. ಶೇಷಾದ್ರಯ್ಯಂಗಾರ್ರವರು, ಬೇರೇ ಕೆಲಸದಮೇಲಿರುವವರಿಗೆ ಬದಲಾಗಿ ಕೃಷ್ಣರಾಯರು, ೪ನೇ ಕ್ಲಾಸಿನಿಂದ ೩ನೆ ಕ್ಲಾಸಿಗೆ ಆಕ್ಟಿಂಗ್.

ಮೊಕ್ಕಾಂ ಮೈಸೂರ್, ತಾ॥ ೧೫ನೇ ಫೆಬ್ರವರಿ ೧೮೯೭

ನಂ॥ ೧೦೦—ರೆ ಚಿತ್ರದುರ್ಗ ಡಿಸ್ಟ್ರಿಕ್ಟ್ ಆಕ್ಟಿಂಗ ಎಕಸ್ಟ್ರಾ ಅಸಿಸ್ಟೆಂಟ್ ಕಮಿಷನರಾದ ಮಿ॥ ವಿನಾಯಕರಾವ್ ಅಸ್ಸಿಸ್ಟೆಂಟವರ ನೌಕರಿಯು, ಎಕ್ಸೈಜ್ ಇಲಾಖೆಯಲ್ಲಿ ವಿಶೇಷ ಕೆಲಸಗಳಿಗೋಸ್ಕರ ಉಪಯೋಗಿಸಿಕೊಳ್ಳುವದಕ್ಕಾಗಿ ಎಕ್ಸೈಜ್ ಕಮಿಷನರವರ ಡಿಸ್ಪೋಸಲಿಗೆ ಕೊಡಲ್ಪಟ್ಟಿರುತ್ತದೆ.

ಮೊಕ್ಕಾಂ ಮೈಸೂರ್, ತಾ॥ ೧೬ನೇ ಫೆಬ್ರವರಿ ೧೮೯೭

ನಂ. ೧೩೪—ರೆ—ರೆವಿನ್ಯೂ ಕಮಿಷನರ್ ಸಿ ವಿ. ಕೃಷ್ಣಸ್ವಾಮಿರಾವ್ ಬಿ ಎ. ಯವರು, ಆಕ್ಟಿಂಗ್ ಎಕಸ್ಟ್ರಾ ಅಸಿಸ್ಟೆಂಟ್ ಕಮಿಷನರಾಗಿ ನಿಯಮಿಸಲ್ಪಟ್ಟ ಪುರವಮೇಲು ಸೀತಾರಾಮಯ್ಯನವರಿಗೆ ಬದಲಾಗಿ ೪ನೇಕ್ಲಾಸ ಅಮಲದಾರ್ರಾಗಿ ನಿಯಮಿಸಲ್ಪಟ್ಟು ೩ನೇ ಕ್ಲಾಸ ಮ್ಯಾಜಿಸ್ಟ್ರೇಟ್ ಅಧಿಕಾರಗಳೊಡನೆ ತರೀಕೆರೆ ತಾಲ್ಲೂಕಿಗೆ ನಿಯಮಿಸಲ್ಪಟ್ಟಿರುತ್ತಾರೆ. ಇವರು ಕೆಲಸದಮೇಲೆ ಹೋಗಿ ಕೂಡಲೇ ಹಾಜರಾಗತಕ್ಕದ್ದು.

ಮೊಕ್ಕಾಂ ಮೈಸೂರ್, ತಾ॥ ೧೬ನೇ ಫೆಬ್ರವರಿ ೧೮೯೭.

ನಂ॥೧೪೭೭—ರೆ—ಶಿವಮೊಗ್ಗ ಡಿಸ್ಟ್ರಿಕ್ಟ್ ಪೋಲೀಸ ಆಕ್ಟಿಂಗ ಅಸಿಸ್ಟೆಂಟ್ ಸ್ಯೂಪರಿಂಟೆಂಡೆಂಟ್ ಮಿ॥ ಹೇವಾ ಹನುಮಂತಯ್ಯನವರು, ದಾವಣಗೆರೆಯಲ್ಲಿ ಹಾಲಿ ಕೆಲಸ ನೋಡುತಲಿರುವ ಮಿ॥ ಬೆಂಚೆರಿ ಕೃಷ್ಣರಾಯರಿಗೆ ಬದಲಾಗಿ ಚಿತ್ರದುರ್ಗ ಡಿಸ್ಟ್ರಿಕ್ಟ ಖಜಾನೆ ಚಾರ್ಜಿನಲ್ಲಿರತಕ್ಕಬಗ್ಗೆ ಎಕಸ್ಟ್ರಾ ಅಸಿಸ್ಟೆಂಟ್ ಕಮಿಷನರಾಗಿ ಆಕ್ಟಿಂಗ ಹಾಗೆ ನಿಯಮಿಸಲ್ಪಟ್ಟಿರುತ್ತಾರೆ.

ಮಿ॥ಆರ್ ಎ ಕೃಷ್ಣಸ್ವಾಮಿ ಸಾಹೇಬರವರು ರಜಾದ ಮೇಲೆ ಗೈರ್ಹಾಜರಾಗಿರುವಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವವರಿಗೆ ತಾಲೀಕ ಅಮಲ್ದಾರ್ ನಾಗಿಗ ಸುಬ್ಬರಾವರವರು ಶಿವಮೊಗ್ಗ ಡಿಸ್ಟ್ರಿಕ್ಟ ಪೋಲೀಸ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಕೆಲಸವನ್ನು ಆಕ್ಟಿಂಗ್ ಹಾಗೆ ನೋಡುವಂತೆ ಹುಕುಂ

SUMMARY OF NEWS.
ವೃತ್ತಾಂತ ಸಂಗ್ರಹವು.

ಇಂಡ್ಯ ದೇಶದ ಕ್ಷಾಮನಿವಾರಕ ಫಂಡಿಗೆ ರಾಜಾ ಜಂಗ್ ಬಹದ್ದೂರ್ ಖಾನ್ ಸಿ. ಐ. ಇ. ಯವರು ೫೦,೦೦೦ ರೂಪಾಯಿಗಳು ಕೊಡುವದಾಗಿ ತಿಳಿಸಿರುತ್ತಾರೆ

ಅಮೇರಿಕಾದಿಂದ ಮುಂಬೈಗೆ ೧,೩೯,೬೩೧ ಬುಷಲ್ ಧಾನ್ಯವೂ, ೧೩,೯೩೧ ಬೇಲ ಗೋಧಿಯೂ ಬಂದಿದೆ. ಇನ್ನು ಇದರಷ್ಟು ಧಾನ್ಯವು ಸ್ವಲ್ಪ ದಿವಸದೊಳಗೆ ಬರತಕ್ಕದ್ದದೆ ಇದರಿಂದ ತುಸುವಾದ್ರೂ ಕಾಳು ಅಗ್ಗವಾದೀತೇನು?

ಲಂಡನ್ನಲ್ಲಿರುವ ಸರ್ದಾರ್ ಮೂರಾರಾ ರೈಸ್ಕಿಸು ಬೋರ್ಡಿನವರು, ತಮ್ಮ ಹೆಸರಿಗೆ ಬಂದಿರುವ ಹೊಸ ದೀಪ ಹಚ್ಚುವ ನೂತನವಾದ ಏರ್ಪಾಡು ಮಾಡುವದರ ಸಲುವಾಗಿ ೫ ಲಕ್ಷ ರೂಪಾಯಿಗಳು ಮಂಜೂರ್ ಮಾಡಿರುತ್ತಾರೆ

ಕಲ್ಕತ್ತಾ ಮತ್ತು ಹುಬ್ಬಳ್ಳಿಯಲ್ಲಿ ಯಾರಾದರೂ ಪ್ರಯಾಣಿಕರು ಮುಂಬೈ ಕಡೆಯಿಂದ ಬರುತ್ತಾರೇನೆಂದು ಪರೀಕ್ಷೆ ಮಾಡುವಂತೆ ಸರ್ಕಾರದವರು ಹುಕುಂ ಕೊಟ್ಟಿರುತ್ತಾರೆ

ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳ ನೇಟಿವ್ ಪೊಲಿಟಿಕಲ್ ಏಜಂಟರಾದ ರಾ॥ ಸಾ॥ ಮಾಂಜರೇಕರರವರು ಕಟ್ಟಕಡೆಗೆ ಬರತರ್ಫ ಮಾಡಲ್ಪಟ್ಟರು. ಇವರ ಜಾಗೆಯು ತಮಗೆ ಸಿಕ್ಕಬೇಕೆಂದು ಈ ಊರಿನ ಇಬ್ಬರು ಅರ್ಜಿ ಬರೆದಿರುತ್ತಾರೆ.

ಕೊಚ್ಚಿಯಲ್ಲಿ ಹೊಸ್ಸೆ ಸೋಮವಾರ ಭಯಂಕರವಾದ ಬೆಂಕಿಯು ಹುಟ್ಟಿ ಕಲವು ಮನೆಗಳನ್ನು ಸುಡುವದಾದಿತು. ಇದರಿಂದ ಸುಮಾರು ೫೦,೦೦೦ ರೂಪಾಯಿನ ಸಾಮಾನು ನಷ್ಟವಾಯಿತೆಂದು ಗೊತ್ತುಮಾಡಿರುವರು ಆದರೆ ಪ್ರಾಣ ನಷ್ಟವೇನೂ ಆಗಲಿಲ್ಲ

ಹಳ್ಳಿಗಳಲ್ಲಿ ಯಾರಾದರೂ ಮುಂಬೈ ರೋಗದಿಂದ ಸತ್ತರೆ ಗ್ರಾಮಸ್ಥರು ತಹಸೀಲದಾರ ಮಾಮಲೇದಾರರಿಗೆ ತಿಳಿಸಬೇಕು. ಅವರು ತಂತಿಮೂಲಕ ಕಲೆಕ್ಟರ್ ಸಾಹೇಬರವರಿಗೆ ತಿಳಿಸಬೇಕು ಇವರು ಅದೇ ತಾರೀಖನ್ನು ಮುಂಬೈ ಸರ್ಕಾರಕ್ಕೆ ಕಳುಹಿಸಬೇಕೆಂದು ಸರ್ಕಾರದ ಠರಾವು ಆಗಿರುತ್ತದೆ.

ಜಬ್ಬಲ್‌ಪುರದಬಳಿ ಹೋದವಾರದಲ್ಲಿ ಬಹುಬಲವಾದ ಮಳೆ ಸುರಿಯಿತು. ಅನೇಕ ಭಾರಿ ಮರಗಳು ಮುರಿದುಬಿದ್ದವು ಹೊಲಗಳಲ್ಲಿ ಬೆಳೆದಾಗಿದ್ದ ತೆನೆಗಳೆಲ್ಲಾ ಕೊಚ್ಚಿಹೋಯಿತು. ಮತ್ತು ಒಬ್ಬ ಹೆಂಗಸೂ ಒಂದು ಮಗುವೂ ಮಳೆಯಲ್ಲಿ ಸಿಕ್ಕಿ ಸತ್ತುಹೋದರು. ಈ ಆನೆಕಲ್ಲು ಮಳೆಯಿಂದ ಸುತ್ತಲೂ ಐದುಮೈಲ್ ಫಾಸಲೆಯಲ್ಲಿ ಆಗಿದ್ದ ಪೈರುಬೆಳೆಯೂ ನಷ್ಟವಾಗಿ ಹೋಯಿತು

ಗದಗಿನಲ್ಲಿ ಸಾಹುಕಾರರಾದ ರಾ॥ ರಾ॥ ಹೊಳಯಪ್ಪ ಅಣ್ಣಾ ಬಳ್ಳಾರಿ ಇವರು ದುಷ್ಕಾಲದಿಂದ ಪೀಡಿತನಾದ ಪ್ರತ್ಯೇಕ ಮನುಷ್ಯನಿಗೆ ಕಾಲುಸೇರು ಜೋಳದ ನುಚ್ಚನ್ನೂ ಒಂದು ದುಡ್ಡನ್ನೂ ಕೊಡುವದಲ್ಲದೆ ದನಗಳ ಸಂರಕ್ಷಣದ ಬಗ್ಗೆ ಅವರವರ ದನಗಳ ಮಾನದಿಂದ ಅರ್ಧರೂಪಾಯಿಯಿಂದ ೧ ರೂಪಾಯಿಯವರೆಗೆ ಕೊಡುತ್ತಿರುತ್ತಾರೆಂಬದನ್ನು ಕೇಳಿ ಪರಮ ಸಂತೋಷವಾಗುತ್ತದೆ

ಕಳೆದವಾರ ಬೊಂಬಾಯಿ ಪಟ್ಟಣದಲ್ಲಿ ಬ್ಯುಬೋನಿಕ್ ಎಂಬ ಉಪದ್ರವವು ಕರ್ಬಡಕ್ಕೆ ತಗಲಿದ್ದರಲ್ಲಿ ೫೯೫ ಜನ ಸತ್ತರು. ಮತ್ತು ಆ ವಾರದಲ್ಲಿ ಎಲ್ಲಾ ಕಾರಣಗಳಿಂದಲೂ ೧೩೦೯ ಮಂದಿ ತೀರಿಹೋಗಿರುತ್ತಾರೆ ಸರ್ಕಾರದವರು ಸುಮಾರು ೩೦೦—೪೦೦ ಮನೆಗಳನ್ನು ಸುಟ್ಟುಹಾಕಿದರು. ಇದುವರೆಗೆ ಸ್ವಲ್ಪ ಹೆಚ್ಚುಕಡಮೆ ೩೦,೦೦೦ ಪ್ರಜೆಗಳು ಆ ಪಟ್ಟಣವನ್ನು ಬಿಟ್ಟು ಇತರ ಕಡೆಗಳಲ್ಲಿ ವಾಸಮಾಡುತ್ತಿದ್ದಾರೆ.

ಬುದ್ಧನ ವಿಗ್ರಹವನ್ನು ಗಯಾ ಪಟ್ಟಣದಲ್ಲಿ ಹಿಂದೂ ದೇವಾಲಯದ ಬಳಿಯಲ್ಲೇ ಪ್ರತಿಷ್ಠೆ ಮಾಡಬೇಕೆಂದು ಒಂಗಾಳ್ಯ ಸರ್ಕಾರದವರು ಅಪ್ಪಣೆ ಕೊಟ್ಟಪ್ರಕಾರ ಅದನ್ನು ಅಲ್ಲೇ ಪ್ರತಿಷ್ಠೆ ಮಾಡಿದರು. ಇದರಿಂದ ಆ ಪಟ್ಟಣದಲ್ಲಿ ಹಿಂದುಗಳಿಗೂ ಬೌದ್ಧಮತಸ್ಥರಿಗೂ ಮನಸ್ತಾಪಗಳುಂಟಾಗಿರುತ್ತವೆ. ಈಗ ಆ ವಿಗ್ರಹವನ್ನು ಕಿತ್ತು ದೂರವಾದ ಸ್ಥಳದಲ್ಲಿ ಪ್ರತಿಷ್ಠೆ ಮಾಡದಿದ್ದರೆ ಮತ ಕಲಹಗಳಿಗೆ ಆಸ್ಪದವಿರುವದಿಲ್ಲವೆಂದು ಕೆಲವರು ಸರ್ಕಾರಕ್ಕೆ ತಿಳಿಸಿರುತ್ತಾರೆ

ಬರ್ಮ್ಮಾದಲ್ಲಿ ರೈಲ್‌ಗಾಡಿಯು ಕಾಡಿನಲ್ಲಿ ಹೋಗುತ್ತಿದ್ದಾಗ ಒಬ್ಬ ಕಳ್ಳನು ಗಾಡಿಯೊಳಕ್ಕೆ ಹಾರಿ ಪ್ರಯಾಣ ಮಾಡುತ್ತಿದ್ದ ಇಬ್ಬರು ನೇಟಿವ್ ಹೆಂಗಸರನ್ನು ಹೆದರಿಸಿ ಅವರ ಹತ್ತಿರವಿದ್ದ ಸಾವಿರಾರು ರೂಪಾಯಿಗಳನ್ನು ಕಿತ್ತುಕೊಂಡು ಗಾಡಿಯಿಂದ ಧುಮುಕಿ ಬಿಟ್ಟನು. ಮುಂದಿನ ಸ್ಟೇಷನ್ನಲ್ಲಿ ಈ ವರ್ತಮಾನ ಜಾಹೀರಾಯಿತು. ಪೋಲೀಸಿನವರು ದಾರಿಯಲ್ಲಿ ಜ್ಞಾನತಪ್ಪಿ ಬಿದ್ದಿದ್ದ ಆ ಕಳ್ಳನನ್ನು ಹಿಡಿದುಕೊಂಡು ಹೋಗಿ ಅವನಿಗೆ ಎಂಟುವರ್ಷ ಸಜಾ ಮಾಡಿಸಿದರು.

ನೋಟೀಸ್,

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕಮಿಷನರ್

ರೇಟ್ಸ್ ಮತ್ತು ತೆರಿಗೆಗಳ ವಸೂಲಾತಿ.

ಇದರಿಂದ ಸಮಸ್ತಜನರಿಗೂ ತಿಳಿಯಪಡಿಸುವದೇನೆಂದರೆ.—

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯ ರೇಟ್ಸ್ ಯಾ ದರ ಮತ್ತು ತೆರಿಗೆಗಳ ವಸೂಲಿಗೆ ಕಲೆಕ್ಷನ್ ಆಫೀಸರವರು ಪ್ರತ್ಯಕ್ಷವಾಗಿ ಉಪಸ್ಥಿತರಿರುತ್ತಾರೆಯಾಗಿ ಬೆಂಗಳೂರು ಸಿಟಿ ಮ್ಯುನಿಸಿಪಲ್ ರೆಗ್ಯುಲೆಷನಿನ ೩೨, ೩೩, ೩೭ ನೇ ಸೆಕ್ಷನ್‌ಗಳಿಗೆ ನಿಗಾ ಕೊಡಬೇಕು ಸದರೀ ಸೆಕ್ಷನ್‌ಗಳು ತಿಳುವಳಿಕೆಬಗ್ಗೆ 1897 ನೇ ಇಸವಿ ಫೆಬ್ರವರಿ ಮಾಹೆ 4ನೇ ಮಸ್ಕ್ಯುರಿನ ಗೆಜೆಟ್ಟಿನಲ್ಲಿಯೂ, ಮತ್ತು ಅದೇ ತಿಂಗಳಲ್ಲಿ ತದನಂತರ ಪ್ರಕಟಿಸಲ್ಪಡುವ ಗೆಜೆಟ್ಟುಗಳಲ್ಲಿಯೂ ಪ್ರಕಟ ಮಾಡಲ್ಪಡುತ್ತವೆ ಬಿಲ್ಲು ತೋರಿಸಿದ ಕೂಡಲೇ ಅದರಲ್ಲಿ ಕಂಡ ಹಣವನ್ನು ಪಾವತೀ ಮಾಡದಿರುವ ಪಕ್ಷಕ್ಕೆ ಸದರೀ ಹಣವನ್ನು ೧೫ ದಿನಗಳೊಳಗಾಗಿ ಕಲೆಕ್ಷನ್ ಆಫೀಸರವರಲ್ಲಿ ಕಳುಹಿಸಿಕೊಡತಕ್ಕದ್ದು. ಹಾಗೆ ಕಳುಹಿಸಲು ತಪ್ಪಿಹೋದ ಪ್ರತಿ ಪ್ರೊಪ್ರೈಟರು ನಗಾಪೆ ನೋಟಿಸು ಮತ್ತು ಜಪ್ತಿ ವಾರಂಟುಗಳು ಸಹ ಜಾರೀ ಮಾಡಿಸಿಕೊಳ್ಳಲು ಮತ್ತು ಇವುಗಳ ಮೂಲಕ ಉಂಟಾಗುವ ಹೆಚ್ಚು ಖರ್ಚುಗಳಿಗೂ ಗುರಿಯಾಗುತ್ತಾರೆ.

T. T. LEONARD,
President,
City Municipal Commission

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಇಲಿಗಳು ಮೊದಲಾದವುಗಳನ್ನು ಕೊಂದಾಗಲಿ, ಜೀವದೊಂದಿಗಾಗಲಿ ಕೋಟೆಯೊಳಗಣ ಸಿಟಿ ಮ್ಯುನಿಸಿಪಲ್ ಆಫೀಸಿನಲ್ಲಿ ಹಗಲು ೧೨ ಘಂಟೆಯ ಮೇಲೆ ಸಾಯಂಕಾಲ ೫ ಘಂಟೆಯೊಳಗಾಗಿ ಹಾಜರ್ಮಾಡಿದವರಿಗೆ ಇದರಡಿ ತಿಳಿಸಲ್ಪಡುವಂತೆ ಇನಾಂಗಳು ಕೊಡಲ್ಪಡುವವು:—

ಹೆಗ್ಗಣಗಳು	ಡಜನ್	೧ಕ್ಕೆ	೪	ಆಣೆ
ಇಲಿಗಳು	,,	,,	೩	,,
ಸುಂಡಿಲಿಗಳು	,,	,,	೨	,,

ಸಿಟಿ ಮ್ಯುನಿಸಿಪಲ್ ಆಫೀಸ್
ಬೆಂಗಳೂರು.
೧೧ನೇ ಫೆಬ್ರವರಿ ೧೮೯೭

T. T. LEONARD,
President,
Muni Commission,
Bangalore City

NOTICE.

VIDYASARA SANGRAHA.

A TREATISE ON THE PRINCIPLES OF

HINDU MEDICINE

Price, including Postage Rs. 5-0-0

ವೈದ್ಯಸಾರಸಂಗ್ರಹ.

ಇದು ಚರಕ, ಸುಶ್ರುತ, ವಾಗ್ಭಟ, ಮಾಧವನಿದಾನ, ವೈದ್ಯನಿಘಂಟು ಪೂರ್ವಗ್ರಂಥಗಳ ಸಂಗ್ರಹ ರೂಪವಾಗಿರುತ್ತದೆ.
ಇದರ ಕ್ರಯ — ಪ್ಯಾಕಿಂಗ್ ಮತ್ತು ಅಂಚೆ ಹಾಸಲ್ ಮೇಲೀಲ್ ಪ್ರತಿ ೧ಕ್ಕೆ ೫—೦—೦
ಜೇಕ್ ರವರು ಬೆಂಗಳೂರು ಕರ್ನಾಟಕ ಪ್ರೆಸ್ ಪ್ರೊಪ್ರೈಟರವರಿಗೆ ಬರೆದು ತರಿಸಿಕೊಳ್ಳಬಹುದು

BANGALORE CITY MUNICIPALITY.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ನೋಟೀಸ್.

ತಾರೀಖ್ ೧೫ನೇ ಫೆಬ್ರವರಿ ೧೮೯೭.

೧೮೯೭ನೇ ಇಸವಿ ಫೆಬ್ರವರಿ ೨೫ನೇ ತಾರೀಖ್ ಗುರುವಾರದ ದಿನ ಬೆಳಗ್ಗೆ ೮ ಘಂಟೆಗೆ ಬೆಂಗಳೂರು ಸಿಟಿ ಮ್ಯುನಿಸಿಪಲ್ ಕಮಿಷನರುಗಳು, ಕೋಟೆಯೊಳಗಿರುವ ತಮ್ಮ ಆಫೀಸಿನಲ್ಲಿ ಸಾಮಾನ್ಯ ಸಭೆಸೇರುವಾಗ ಇದರಡಿ ತಿಳಿಸಲ್ಪಡುವ ಕೆಲಸಗಳು ನಡಸಲ್ಪಡುವವು.—

೧ ೧೮೯೭ನೇ ಇಸವಿ ಜನವರಿ ತಿಂಗಳ ನಗದು ಜಮಾಖರ್ಚು ಲೆಕ್ಕ, ಮರಣಲೆಕ್ಕ, ಮನೆಗಳಿಗೆ ಹೋಗಿ ಚಿಕಿತ್ಸೆಮಾಡುವ ಮೆಡಿಕಲ್ ಆಫೀಸರರ ಲೆಕ್ಕ, ತಗಾದೆ, ವಸೂಲಿ ಮತ್ತು ಬಾಕಿ ಪಟ್ಟಿ, ಕಾಮಗಾರಿಗಳ ಅಭಿವೃದ್ಧಿಯನ್ನು ಕುರಿತ ರಿಪೋರ್ಟ್, ಶ್ರೀನಿವಾಸ ಮಂದಿರದ ಲೈಬ್ರರಿಗೆ ಹೋಗಿದ್ದವರನ್ನು ಕುರಿತ ಯಾದಿ, ಸಿಟಿ ಮ್ಯುನಿಸಿಪಲ್ ಇಂಗ್ಲಿಷ್ ಮತ್ತು ಕನ್ನಡ ಸ್ಕೂಲುಗಳ ಲೆಕ್ಕಗಳು, ಸೂಲಗಿತ್ತಿಯರು ಚಿಕಿತ್ಸೆ ಮಾಡಿದವರ ಲೆಕ್ಕ, ದೀಪಗಳನ್ನು ಕುರಿತ ರಿಪೋರ್ಟಿನ ಸಂಗ್ರಹ, ಪ್ರಸೂತಿಶಾಲೆಯ ಲೆಕ್ಕ, ಅನಾಥಶಾಲೆಯ ಲೆಕ್ಕ, ಮತ್ತು ದವಾಖಾನೆ ಲೆಕ್ಕ.

೨ ಬೆಂಗಳೂರು ಷಹರ್ ಮತ್ತು ಅದರ ಬಡಾವಣೆಗಳು ಸೇರಿ ಈಚೆಗೆ ನಿರ್ದಿಷ್ಟವಾದ ಮ್ಯುನಿಸಿಪಲ್ ಸರಹದ್ದಿನ ವಿವರವನ್ನು ತೋರಿಸುವ ನಕ್ಷೆ, ಮತ್ತು ಮೊಸವಿದಾ ನೋಟಿಫಿಕೇಷನುಗಳ ವಿಷಯದಲ್ಲಿ ಬೋರ್ಡಿನವರು ಮಾಡಿದ ತೀರ್ಮಾನವನ್ನು ಕಳುಹಿಸಿಕೊಡತಕ್ಕದ್ದೆಂದು ಬಂದ ೧೮೯೭ನೇ ಇಸವಿ ಜನವರಿ [illegible]ನೇ ತಾರೀಖಿನ [illegible] ಎಲ್ ಎಫ್ [illegible]ನೇ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸ್

೩ ಪ್ರಸಮಸ್ಯೆಗೆ ಸೇರಿದ ಮೆಟ್ರನ್ ಮತ್ತು ಸೂಲಗಿತ್ತಿಯಾದ ಮಿಸ್ಟ್ರೆಸ್ [illegible] ಎಂಬವರಿಗೆ [illegible] ಕೊಡಬೇಕಾದ ವಿಷಯದಲ್ಲಿ ಬೋರ್ಡಿನವರು ಶಿಫಾರಸ್ಸು ಮಾಡಬೇಕೆಂದು ಬಂದ ೧೮೯೭ನೇ ಇಸವಿ ಜನವರಿ [illegible]ನೇ ತಾರೀಖಿನ [illegible] ಎಲ್ ಎಫ್. [illegible]ನೇ ನಂಬರುಳ್ಳ ಗವರ್ನಮೆಂಟ್ ಪ್ರೊಸೀಡಿಂಗ್ಸ್

೪ ಬೋರ್ಡಿನವರ ಮಂಜೂರಾತಿಗೆ ಒಳಪಟ್ಟು ಮ್ಯುನಿಸಿಪಲ್ ಇಂಗ್ಲಿಷ್ ಸ್ಕೂಲಿನಲ್ಲಿ ಫೀ ಹಣ [illegible] ರೂಪಾಯಿಗಳ ತಲಬಿನ ಮೇಲೆ ಜಾಸ್ತಿಯಾಗಿ ಇಬ್ಬರು ಟೀಚರುಗಳನ್ನು ಇಡುವ ವಿಷಯದಲ್ಲಿ ಮಂಜೂರಾಗಿ ಬಂದ ೧೮೯೭ನೇ ಇಸವಿ ಜನವರಿ [illegible]ನೇ ತಾರೀಖಿನ [illegible] ಎಲ್ ಎಫ್ [illegible]ನೇ ನಂಬರುಳ್ಳ ಗವರ್ನಮೆಂಟ್ ಪ್ರೊಸೀಡಿಂಗ್ಸ್

೫ ಮುನಿಸಿಪಲ್ ಫಂಡಿನಿಂದ ಮ್ಯುನಿಸಿಪಾಲಿಟಿಗೆ ಈಗ ಕೊಡಲ್ಪಡುತ್ತಲಿರುವ ೪೦೦ ರೂಪಾಯಿಗಳ ಬೈಕಿ ಅನ್ನಸತ್ರ ವಿನಾ ೧೫೦ರ ಬದಲು ವಿದ್ಯಾರ್ಥಿಗಳಿಗೆ ಅನ್ನ ಹಾಕುವ ವಿಷಯದಲ್ಲಿ ಪ್ರತ್ಯೇಕ ಏರ್ಪಾಡು ಮಾಡಬೇಕೆಂದು ಸೂಚಿಸಿ ಮುಜರಾಯಿ ಸೂಪರಿಂಟೆಂಡೆಂಟ್ ಮತ್ತು ಬೆಂಗಳೂರು ಸಂಸ್ಕೃತ ಕಾಲೇಜ್ ಪ್ರೆಸಿಡೆಂಟರು ಬರೆದ ೧೮೯೭ನೇ ಫೆಬ್ರವರಿ [illegible]ನೇ ತಾರೀಖುಳ್ಳ [illegible]ನೇ ನಂಬರ್ ಚೀಟಿ.

೬ ಜನುಭೋಗ ನಂಜಪ್ಪನನ್ನು ಮಾಹೆಯಾನಾ ೧೦ ರೂಪಾಯಿಗಳ ತಲಬಿನ ಮೇಲೆ ೧೮೯೬ನೇ ಇಸವಿ ಜೂಲೈ ೧ನೇ ತಾರೀಖ್ ಖಾಲಿಯಾಗಿಯಿರುವ ಮ್ಯುನಿಸಿಪಲ್ ಕಚೇರಿಯಲ್ಲಿ ನೌಕರಿಗೆ ಇಟ್ಟುಕೊಳ್ಳಬೇಕೆಂದು ಕೊಡಲ್ಪಟ್ಟ ಸಲಹೆಯ ಮೇಲೆ ಬೋರ್ಡಿನವರು ಮಾಡಿರುವ ತೀರ್ಮಾನವನ್ನು ಕಳುಹಿಸತಕ್ಕದ್ದೆಂಬದಾಗಿ ಬಂದ ೧೮೯೭ನೇ ಇಸವಿ ಫೆಬ್ರವರಿ [illegible]ನೇ ತಾರೀಖುಳ್ಳ [illegible] ಎಲ್ ಎಫ್ [illegible]ನೇ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸ್

೭ ಬೆಂಗಳೂರು ಷಹರ್ ಮ್ಯುನಿಸಿಪಲ್ ಗಾರ್ಡನ್ನಲ್ಲಿ ನೇಟಿವ್ ಓಲಗವನ್ನು ಮಾಮೂಲಿನಂತೆ ನಡಿಸಿಕೊಡಬೇಕೆಂದು ಸ್ಥಾನಿಕ ಷಹರ್ ನಿವಾಸಿಗಳ ಪರ ಕೆ. ವೆಂಕಟಸುಬ್ಬಯ್ಯ ಮೊದಲಾದವರು ಬರೆದುಕೊಂಡ ಅರ್ಜಿಯನ್ನು ಕಳುಹಿಸಿ ಅದರ ಮೇಲೆ ಬೋರ್ಡಿನವರ ಅಭಿಪ್ರಾಯವನ್ನು ಕೇಳಬೇಕೆಂದು ಗವರ್ನಮೆಂಟಿನಿಂದ ಬಂದ ೧೮೯೭ನೇ ಇಸವಿ ಫೆಬ್ರವರಿ [illegible]ನೇ ತಾರೀಖಿನ [illegible] ಎಲ್ ಎಫ್ [illegible]ನೇ ನಂಬರ್ ಅಫಿಷಿಯಲ್ ಮೆಮೊರಾಂಡಂ

೮ ೧೮೯೭ನೇ ಇಸವಿಯ ಜನವರಿ ಮಾಸದ ಬಜೆಟ್ ಅಂದಾಜ್ ಲೆಕ್ಕ.

೯ ಷುಲ್ಕ ಗುಡಿಸುವರ ಪರ ನ್ಯಾಯಸ್ಥರಾಗಿ ಬಜೆಟ್ಟಿನಲ್ಲಿ ಮಂಜೂರುಗಿರುವ ಮೊಬಲಗಿಗಿಂತ ಜಾಸ್ತಿಯಾಗಿ ಖರ್ಚಾಗಿದ್ದಿರುವ [illegible] ಪ್ರೆಸಿಡೆಂಟರು ಬರೆದ ೧೮೯೭ನೇ ಇಸವಿ ಫೆಬ್ರವರಿ [illegible]ನೇ ತಾರೀಖಿನ ಯಾದಿ.

೧೦ ಬ್ಯುಬೋನಿಕ್ ಪ್ಲೇಗ್ ಎಂಬ ಮಹಾ ಮಾರಿಕೋರ ವ್ಯಾಧಿಯ ನಿವಾರಣೆಗಾಗಿ ತಕ್ಕ ಏರ್ಪಾಡು ಮಾಡುವದಕ್ಕೆ ಬೇಕಾಗುವ ಹಣಕ್ಕಾಗಿ ಬರೆದುಕೊಂಡ ವಿಷಯದಲ್ಲಿ ಬೋರ್ಡಿನವರಲ್ಲಿ ಸಿಲ್ಕು ಉಳಿಯುವ ಹಣವನ್ನು ಆವಶ್ಯಕಬಿದ್ದಲ್ಲಿ ಉಪಯೋಗಿಸಿಕೊಳ್ಳಬಹುದೆಂದು ೧೮೯೭ನೇ ಇಸವಿ ಫೆಬ್ರವರಿ [illegible]ನೇ ತಾರೀಖಿನಲ್ಲಿ ಮೈಸೂರು ಸರಕಾರದಿಂದ ಬಂದ [illegible]ನೇ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸ್

೧೧ ಬೆಂಗಳೂರು ಷಹರ್ ಮ್ಯುನಿಸಿಪಲ್ ರೆಗ್ಯುಲೇಷನ್ ೧೮೯೭ನೇ ಸೆಕ್ಷನ್ ಅನುಸಾರ ಮ್ಯುನಿಸಿಪಾಲಿಟಿಯ ಮಾರ್ಕೆಟ್ ತೆರಿಗೆಯನ್ನು ಹಾಕಬೇಕೆಂದು ಪ್ರೆಸಿಡೆಂಟರು ಮಾಡಿದ ಸಲಹೆ

೧೨ ಮುನಿಸಿಪಲ್ ಕಾರಕೂನರು ತಮ್ಮ ಕೆಲಸದಿಂದ ಪೆನ್ಷನ್ ಮೇಲೆ ನಿವೃತ್ತರಾಗುವದಕ್ಕೆ ಮುಂಚೆ ತಮಗೆ ೩ ತಿಂಗಳ ಪ್ರಿವಿಲೆಜ್ ರಜಾ ಕೊಡಿಸಬೇಕೆಂದು ಬರೆದುಕೊಂಡ ಅರ್ಜಿ

೧೩ ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ ಮ್ಯುನಿಸಿಪಾಲಿಟಿಯಲ್ಲಿ ಜಾರಿಯಲ್ಲಿರುವ ಮನೆಗಳ ಮಾಲೀಕರ ವಿಷಯಕವಾದ ನಿಬಂಧನೆಗಳನ್ನು ಷಹರಿನಲ್ಲಿಯೂ ಜಾರೀ ತರತಕ್ಕ ವಿಷಯ

೧೪ ಬೆಂಗಳೂರು ಷಹರ್ ಮಾರ್ಕೆಟ್ ವಿಷಯದಲ್ಲಿ ಇದುವರೆಗೂ ತೆಗೆದುಕೊಂಡ ಜವಾಬು ಮತ್ತು ಮುಂದೆ ತೆಗೆದುಕೊಳ್ಳಬೇಕಾಗಿರುವ ಜವಾಬನ್ನು ಕುರಿತ ಕೆಲವು ಸಂಗತಿಗಳನ್ನು ತಿಳಿಸಬೇಕೆಂದು ೧೮೯೭ನೇ ಇಸವಿ ಜನವರಿ [illegible] ಮತ್ತು [illegible]ನೇ ತಾರೀಖುಗಳುಳ್ಳ [illegible] ಎಲ್ ಎಫ್ [illegible] ಮತ್ತು [illegible] ಎಲ್ ಎಫ್ [illegible]ನೇ ನಂಬರುಗಳುಳ್ಳ ಗವರ್ನಮೆಂಟ್ ಪ್ರೊಸೀಡಿಂಗ್ಸ್ ಮತ್ತು ಕಾಗದ

೧೫ ಕಪ್ಪನಿಪ್ಸಲ್ಲಿ ಮಾಹೆಯಾನಾ ೫೦ ರೂಪಾಯಿಗಳ ತಲಬಿನಲ್ಲಿ ಒಬ್ಬ ವರ್ನಾಕ್ಯುಲರ್ ಹೆಡ್ಮಾಸ್ಟರರನ್ನು ಇಡಬೇಕಾಗಿರುವವರ ಆವಶ್ಯಕತೆಯನ್ನು ಕುರಿತು ಪ್ರೆಸಿಡೆಂಟರು ಬರೆದ ಮೆಮೊ

T. T. LEONARD,
President,
City Municipal Commission

ಈ ಕಂಪನಿಯು ೧೮೮೩ನೇ ಇಸವಿಯಲ್ಲಿ ಸ್ಥಾಪಿತವಾಯಿತು

ಜನ್ಮದ ಲಾಭವು.

ವಜ್ರಾಂಗ ಖಜೂರವು.

ಬಲಾರೋಗ್ಯ, ಪುಷ್ಟಿಗಳನ್ನು ಬೆಳೆಸತಕ್ಕ ಉತ್ಪತ್ತಿಯು.

ಅತ್ಯುತ್ಕೃಷ್ಟಕರವಾದ ಬಳ್ಳಿಗಳಿಂದ ತೆಗೆದಿರುವ ಈ ಉತ್ಪತ್ತಿಗಳು ಕೊಂಕಣಪ್ರಾಂತದ ಅನೇಕ ವನಸ್ಪತಿಗಳ ಬೇರುಗಳ ಪುಡಿಗಳನ್ನು ಕೊಟ್ಟು, ತುಪ್ಪದೊಳಗೆ ಹಾಗಿಸಿ, ಒಳ್ಳೇ ಜೇನಿನ ತರಗತಿಯ ಸಕ್ಕರೆಯ ಪಾಕದಲ್ಲಿ ಸಿದ್ಧ ಮಾಡಿರುತ್ತೇವೆ ಈ ಉತ್ಪತ್ತಿಗಳು ಮಹಾ ಔಷಧಗಳಿದ್ದು, ಒಳ್ಳೇ ರುಚಿಯುಳ್ಳವಾಗಿ ಇವುಗಳ ಸೇವನೆಯಿಂದ ಕಫ, ವಾತ, ಪಿತ್ತ ಈ ತ್ರಿದೋಷಗಳಿಂದುಂಟಾಗತಕ್ಕ ಯಾವತ್ತು ಬಗೆಯ ವ್ಯಾಧಿಗಳೂ ಹೋಗುತ್ತವೆ ೬೦ ವರ್ಷಗಳ ಪ್ರಾಯದಲ್ಲಿ ನ ಮುದುಕರ ಕಾಮವಿಕಾರವಾದರೂ ತಕ್ಕ ತರೆಯಿಂದ ಸದಾ ಸಂತೃಪ್ತಿ ಜ್ವಾಲಿತವಾಗುತ್ತದೆ. ಜನನೇಂದ್ರಿಯದ ಬಲ ಉಂಟಾಗಿ ನಪುಂಸಕತ್ವವು ಇಲ್ಲದಂತಾಗುತ್ತದೆ ಲ ಪ್ರಿಯ ಮುಂಚೆ ಅಥವಾ ಹಿಂಚೆ ಸರಿದುಹೋಗುವ ಧಾತು ಸಿಲ್ಲುತ್ತದೆ ಸ್ವಪ್ನಾವಸ್ಥೆಯಾಗುವದಿಲ್ಲ ವೀರ್ಯವು ಬೆಳೆದು ವೈವರ್ಣ್ಯವು ಸುಧಾರಿಸುತ್ತದೆ ಪರಮ ಹಾಗೂ ಉಷ್ಣ ಸಂಬಂಧ ರೋಗಗಳು ಇಲ್ಲದಂತಾಗಿ ಧಾತು ಪುಷ್ಟವಾಗುತ್ತದೆ ಮೂರು ಹೊತ್ತಿಂದರೂ ಅನ್ನ ಪಚನವಾಗಿ ಒಳ್ಳೇ ಹಸಿವೆಯಾಗುತ್ತದೆ ಹೋಗುವಡೆಯಿಂದ ತಲೆ ಕೂಡಲೇ ಸ್ವಚ್ಛ ಶೌಚವಾಗುತ್ತದೆ ಕೆಮ್ಮು, ಉಬ್ಬಸ, ದಮ್ಮು ಈ ರೋಗಗಳು ನಾಶ ಹೊಂದುತ್ತವೆ ಹೊಸ ರೋಗ ಇದ್ದಲ್ಲಿ ೧೧ ದಿವಸಗಳ ವರೆಗೆ ಸಾಲುವ ಒಂದೇ ದಬ್ಬಿಯಿಂದ ಗುಣವುಂಟಾಗುತ್ತದೆ. ಮತ್ತು ಹಳೆಯದಲ್ಲಿ ೩ ದಿನಗಳ ಮೇಲೆ ಗುಣ ಬಂದೀತು ೧೧ ದಿನಗಳ ವರೆಗೆ ಸಾಲತಕ್ಕ ೧ ದಬ್ಬಿಗೆ ೧-೮-೦ ರೂ॥ ಹಿಂದೆ ವ್ಯಾಳ್ಯಕ್ಕೆ ೩ ದಬ್ಬಿಗಳು ತೆಗೆದುಕೊಳ್ಳತಕ್ಕವರಿಗೆ ೭ ದು ಡಬ್ಬಿಯು ಉಚಿತವಾಗಿ ಸಿಕ್ಕೀತು. ಈ ಉತ್ಪತ್ತಿಯಿಂದ ಹೆಂಗಸರು ಸತೇಜರಾಗುತ್ತಾರೆ. ಕರಗಿನ ಹಾಗೂ ಬಾಣಂತಿ ರೋಗಗಳು ವಾಸಿಯಾಗುತ್ತವೆ ಎಲ್ಲರನ್ನೂ ಸರಿಯಾಗಿ ರೋಗ ಇಲ್ಲದವರನ್ನೂ ಗಿಡಮೂಲಿ ಬಲಾರೋಗ್ಯ ಪುಷ್ಟಿಗಳನ್ನು ಬೆಳೆಸುತ್ತವೆ. ಸಾಹೇಬ್ ಜನರಲ್ಲಿ ಬಹಳ ದಬ್ಬಿಗಳು ಖರ್ಚಾಗುತ್ತವೆ ಈ ಔಷಧವು ಈ ಕಂಪೆನಿಯಹೊರ್ತು ಬೇರೆ ಸ್ಥಳದಲ್ಲಿ ಆಗುವದಿಲ್ಲ ಯಾವತ್ತು ದೇಶಗಳಲ್ಲಿಯೂ ವೈದ್ಯಕಾರರಿಗೆ ಕಳುಹಿಸಲ್ಪಡುತ್ತದೆ. ಬರೆದು ಬಂದು ಕೂಡಲೆ ಈ ಕಂಪೆನಿಯು ಬೇಕಾದವರಿಗೆ ಈ ದಬ್ಬಿಗಳು ಕಳುಹಿಸಿಕೊಟ್ಟೀತು. ಅಂಚೆಯ ಹಾಗೂ ವ್ಯಾಲ್ಯ ಪೇಯಬಲ್ ವೆಚ್ಚ ಬೇರೆ ಕೊಡಬೇಕು (ಉಚಿತ ದಬ್ಬಿ ಸಹ ೪ ದಬ್ಬಿಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬಿಯಲ್ಲಿ ಎಲ್ಲಾ ಖಜೂರದ ಜಾತಿ ರವಾನಿಸುವೆವು, ಹೀಗೆ ಕಳುಹಿಸಿದರೆ ಟಪ್ಪಾಲ್ ಖರ್ಚು ಕಡಮೆ ಬೀಳುವದು)

ಮೇಲ್ವಿಳಾಸ—ಪಿ. ಎಚ್ ಎ. ಬ್ರದರ್ಸ್ ಮತ್ತು ಕಂಪೆನಿ,

ಫಸ್ಟ್ ಇಂಗ್ಲಿಷ್ ಬ್ರ್ಯಾಂಚ್ ಆಫೀಸ್, ಡಿಸ್ಟ್ರಿಕ್ಟ್ ಬೆಳಗಾಂವ.

ಪೋಸ್ಟ್—ಬೆಳಗಾಂವ. Post BELGAUM.

BANGALORE —Printed and Published at the KARNATAKA PRESS, No 40, HOSPITAL ROAD, CITY,—1897.

THE

Karnataka Prakasika.

ಪ್ರಕಟನೆಯ ರವಾಜ್ { ಮೊದಲನೆಯದಕ್ಕೆ ಪಙ್ಕ್ತಿ ಒಂದಕ್ಕೆ 0 2 0 / ಎರಡನೆಯ ಬಾರಿ ಪಙ್ಕ್ತಿ ಒಂದಕ್ಕೆ 0 1 0
[illegible]

ಕರ್ನಾಟಕ ಪ್ರಕಾಶಿಕಾ.

Published Every Monday Morning

ಚಂದಾದರಗಳು,—ಸ್ಥಳದವರಿಗೆ,		ಪರಸ್ಥಳದವರಿಗೆ, ಪೋಸ್ಟೇಜ್ ಸಹ.	
ಸಂ.ಲ 1 ಕ್ಕೆ	... 3 0 0	ಸಂ.ಲ 1 ಕ್ಕೆ	... 4 0 0
6 ತಿಂಗಳಿಗೆ,	... 2 0 0	6 ತಿಂಗಳಿಗೆ	.. 2 8 0
3 ತಿಂಗಳಿಗೆ,	... 1 4 0	3 ತಿಂಗಳಿಗೆ	... 1 8 0

[illegible]

VOL. XXIV. BANGALORE:—MONDAY, MARCH 1, 1897. No. 9.

Select Telegrams

London, 20th February.—The Greek troops have assumed the offensive in Crete, and have captured Fort Vukolies capturing 250 Turks. The remainder of the garrison retreated to Canea.

A British man of war prevented two Greek steamers from landing provisions and munitions on the Northern Coast of Crete. One hundred European marines have occupied Selinos.

Lord Salisbury has intimated to the Powers that before taking action against Greece he desires to learn the views of the others regarding the future Government in Crete.

His Lordship recommends autonomy for Crete, similar to that in Samos. Italy agrees with Lord Salisbury's views.

The mobilisation of the Turkish forces is not regarded seriously, as both the Turkish men-of-war and troops are equally wanting in equipment.

Great Britain is anxious to find means of compelling Greece to leave Crete without undue coercion, believing that Greece is not equal to the task she has imposed upon herself.

Germany refuses to negotiate regarding future Government for Crete, except on two conditions, that there shall be no Greek annexation, and that Greece shall evacuate Crete.

London, 21st Feb.—Austria alone has accepted the Emperor William's proposal to blockade the Piræus.

Reports from the representatives of the Porte at Berlin and Vienna authorise the marching of Turkish forces into Thessaly, which step Russia declares she would not interfere.

France and Italy agree with England's decision, in the matter of the blockade of the Piræus.

Athens 21st Feb.—An immense demonstration took place here to day. The King made a stirring address from the balcony of the palace.

Sixty German marines have been landed at Canea. There is great excitement in Albania, where the Turkish and Greek forces are collecting on the frontier.

London, 22nd February, Morning.—The Powers yesterday bombarded the insurgent camp at Canea, owing to the insurgents continuing their hostilities after being ordered to desist. Seventy shells altogether were fired, whereupon the Greek flag was hauled down.

A British man-of-War fired the first shot in the bombardment of the insurgent camp at Canea. The cannonade lasted twenty five minutes.

The German cruiser which took part fired Melinite shells.

The insurgents took to flight.

London, 23rd February.—The Cretans at Selinos and similarly at Candano fired upon the British, Italian, and Russian Consuls, who were coming to mediate.

Both sides at Selinos have massacred their prisoners.

The Consuls have returned to Canea.

It is reported in Paris that the Powers have agreed to granting autonomy to Crete without the blockade of the Piræus.

A scene took place in the House of Commons last night, when Mr. Curzon, in reply to a question, confirmed the bombardment of the insurgents' camp at Canea by the Powers.

The announcement was received with loud cheers from the Unionists, whilst the Opposition howled and hooted.

Mr. Labouchere, with the whole of the Opposition supporting him, moved an adjournment of the House to discuss the question.

Mr. Balfour defended the bombardment, and said that the unanimous action of the Powers was essential to prevent a European war. Sir W. Harcourt protested against using British shells against Cretan Greeks.

The motion, on a division, was defeated by a majority of 178 votes.

Paris 23rd February.—In a debate in the Chamber of Deputies regarding Crete, M. Hanotaux stated that Great Britain had suggested forcing the Dardanelles and seizing the Sultan, but the Powers refused to agree to this. Great Britain then agreed to the proposal made by France that the Ambassadors at Constantinople should collaborate for reforms, and that Crete should never return to direct Turkish administration, but that it was necessary to check Greece in order to avert a European war.

THE

Karnataka Prakasika.

MONDAY, MARCH 1, 1897.

EUROPEAN COMPLICATIONS

THE affairs of Europe at the present time are in almost complicated, unsatisfactory condition. On every side there is confusion, and confusion of the worst kind. The great difficulty is the Turkish empire. What is to be done with it? It cannot remain much longer as it is. It must be taken in hand, but how, when and by whom no one can say. The powers of Europe are all thinking intensely about the problem to be solved, but they cannot see their way to solve it. That the rule of Turkey is bad there cannot be the shadow of a doubt. It is not only bad, but feeble into the bargain. It cannot restrain its subjects from violence even if it had the will to do so. Every thing connected with the Government is corrupt and rotten. Oppression is rampant, cruelty is the order of the day. The Mahomedan population—the ruling people—are decreasing rapidly, while the Christians are increasing in numbers and wealth. But so bad is the rule of the Sultan that the Mahomedans are almost as much dissatisfied with his rule as the Christians. We are told that the knowledge of this fact has made the Sultan very sad. He sees that he cannot depend upon any section of the community, all are ready to turn against him. All are oppressed, and all want a change. This must come about but it is impossible to say when. Each nation has its own opinion of what should be done, and some of them would prefer to see injustice done in Turkey rather than allow any plans but their own to be carried out. In the meantime the Turkish authorities do just what they think proper. The Sultan oppresses his people, and massacres some of them. This will continue till a complete change has been brought about. But at the present time the great interest centres round Crete. This island has long been in a state of rebellion against the Turks. Sometimes the feeling against the rulers would only smoulder, but whenever there was an opportunity it would blaze forth, and the result has been continual fights with the Turkish soldiers. For more than a year past there has been war in Crete, and at last the Greeks determined to take possession of the island. This was just what the people—the Christians at least—wanted and when some of the troops landed they were received with open arms. Greece was the only power that knew her mind, and she most certainly should have had her own way. But this did not suit the other powers; they had other views, they had other plans, so they would not allow the people and Government of Greece to have their own way. The insurgents attacked Canea, the chief town of the island, and they would not desist when the powers told them to do so. The result was that their camp was bombarded, and then they put a stop to the attack and hauled down the Greek flag. The circumstance is very regrettable because the insurgents were fighting for freedom, and it seemed a pity to stop them in their course. But it was believed that if the fighting was allowed to continue there might be a European war and the nations of Europe will do anything to avoid this. How the matter will terminate nobody can foretell but it would not be surprising if a great war broke out in spite of the precautions the powers may take.

WANT OF CARE

WE are given to understand that a good deal of dissatisfaction was felt at the late wedding in Mysore at the way invitations were sent out. The same complaint was made when the second Princess was married. It is well known that the Maharani-Regent was desirous that all her subjects and all her guests should be treated with the greatest respect, that all attention should be paid to them, and that they should go away with a kindly feeling of everything they met with. It is a great pity that Her Highness' wishes were not carried out as they ought to have been. Some who most certainly ought to have been invited were not asked to be present. They were completely ignored, and the reason why ought to be given. Then many who had no claim whatever to the distinction were asked to go to Mysore to see the wedding. This was degrading to the royal family of Mysore, and whoever was responsible for the mistake ought to be severely censured. It is very strange that the officials should make such terrible blunders when such a function as a royal wedding takes place, but such is the case. A little care would obviate all this, and would prevent much heart burning and dissatisfaction. There should be a list prepared of all those who are eligible to attend a function of the kind, and when one comes off the invitations should be sent out according to it. Had this been done the murmurs we now hear would not have been heard, and there would not have been any complaint about bad treatment. The whole thing is due to a want of care, and a want of forethought on the part of those whose duty it is to make arrangements, and it is to be hoped that on the next occasion such complaints will be conspicuous by their absence.

News and Notes.

Small pox has taken an epidemic form in Howrah.

It is expected the Famine Fund will reach at least a crore.

The Medical Board are about to recommend quarantine of railway passengers from infected districts.

THE Bengal Government is of opinion that the distress in the Province is not likely now to be so heavy as was at first anticipated.

The Hon'ble Mr. Ananda Charlu is going to introduce an Endowment Bill into the Supreme Council. The draft has been already prepared.

The Sheriff of Calcutta will perhaps be the last of the remunerated Sheriffs, the appointment being proposed to be made an honorary one in future.

THE pipe smoked by the new Shah of Persia on State occasions is set with diamonds rubies and emeralds of the costliest kind, and is said to be worth as much as £100,000.

WE are glad to learn that His Highness the Rajah of Pudukotta has signified his intention, through his Dewan, of permanently maintaining two beds at the Victoria Caste and Gosha Hospital.

THE Calcutta University provides that schools which have not passed 20 per cent of the candidates sent up, are to be warned, and that if a school failed to pass 20 per cent. for three years, its recognition should be withdrawn.

THE *Asian* states that a man has invented a bicycle which is driven by the weight of the rider, which, according to the inventor, has only to be adjusted at a certain angle to pull the machine along. The only thing about it is that it will not go up-hill.

To mitigate the effects of the present famine and, as far as possible, prevent future famines, Mr. Hyndman thinks the Secretary of State should stop the pumps that drain the filthy pools of Indian beggary to swell the already swollen ocean of English wealth.

Swami Vivekananda was received in Calcutta on Friday morning with right royal honours. 20,000 men attended the station. His carriage was drawn by the people. The excitement has now abated and his Madras speeches are being criticised by the local press. The Theosophists are in a rage.

SIR ROPER LETHBRIDGE in his address at the Calcutta University Institute made the following reference among others to the famine:—"I have just been travelling with the object of studying these phenomena throughout nearly the whole of those vast regions of India that are now lying under the dread shadow of the wings of the Angel of Death. In many places I have looked on scenes, the like of which, I pray God, I may never see again; and almost every where I have been confronted with the signs of even greater sufferings in the near future.

THE *Statesman* fiercely denounces the resolution of the Viceroy to pass the summer of this year as usual on the heights of Simla. In 1874 on a similar occasion, Lord Roberts has recorded in his Memoirs, Lord Northbrook spen-

the summer at Calcutta The example is one which the Supreme as well as Provincial Governments will do well to follow this year The situation is without a parallel for its acuteness and severity in recent history It is simply heartless and it is a betrayal of the trust reposed in them by the Sovereign for the rulers of India to turn their backs on the starving plains and betake themselves to the hills just at this time

---

THE Government of Bombay, it is believed, have telegraphed to the Secretary of State recommending that the British representative at the Plague Conference in Venice should be instructed to make the following proposals, (1) That all vessels from Bombay proceeding to Continental ports should be detained at Aden, a sufficient time to enable a thorough and stringent examination to be made by British medical officers to ascertain that no case of plague is on board or had occurred during the passage from Bombay to Aden, (2) That a similar detention should take place at Port Said, where medical officers of the International Sanitary Board should make a similarly strict examination By these means the longest possible period of incubation will necessarily have expired before the vessel arrives at her port of destination and the long quarantine now enforced will become unnecessary

Local and Provincial.

THE RESIDENT —Returned to Bangalore on Thursday morning from his tour in Mysore and Coorg

---

TRANSFER —We learn that Mr H Visvesvariah (of Mysore) is transferred from Surat to Poona and is posted to do famine duty

---

THE WEATHER —Is very dry again. For some days the sky was overcast, but now *it is quite clear again, and the signs of rain* that were visible have now passed away

---

HARMSTONS' CIRCUS —Opens in Bangalore to-morrow night on the Parade Ground C. and M Station. It is a very large affair and is sure to be well patronised

---

REMOVED FROM SERVICE —We regret to hear that the services of Mr Tivari, Municipal Executive Engineer of the city of Bangalore, have been dispensed with owing to, it is said, his inefficiency —M. H

THE PLAGUE —There have been several alarms about people having the plague but on investigation it was discovered that the fear was groundless We are thankful to say that Bangalore has escaped the dreaded disease so far The number of deaths in Bombay is decreasing

---

AN INTELLECTUAL FEAT —It is not often that one hears of a native youth going up for two degree examinations in the same year yet this is about to be practically demonstrated in Bombay For, one Camaji Navroji Cama has applied to the University of Bombay for permission to appear at the M A and B A. examinations of 1897 simultaneously Mr J. T Hathornthwaite, M A has supported the application Of course, in case Cama passes the B A, then he can go up for the M A, but this is an instance of perseverance, and perhaps of overstraining of one's intellect Nevertheless, the Parsi community would be proud of the youth if he succeeds in his ambition —D P

The following Notification issued by the Government of India is re published for the information and guidance of all concerned —

Government of India, Home Department, Notification, dated the 20th February 1897

The question of the suspension of the pilgrimage to the Hedjaz having been under the consideration of the Government of India and Her Majesty's Government, Her Majesty's Government have now come to the conclusion that in consequence of the strong opinions of all European Governments including Turkey regarding the danger of Plague being communicated to Europe, it is impossible to meet their demands by any measure short of the suspension of the pilgrimage for the time being The Governor General in Council is therefore pleased under Section 2 sub section 1 of the Epidemic Diseases Act 1897, to order that the pilgrimage to the Hedjaz shall be altogether suspended for the current season

The Mysore Gazette

Bangalore, Thursday, 11th February 1897
NOTIFICATIONS BY THE GOVERNMENT OF MYSORE

GENERAL AND REVENUE

No 9597—J 1105 *dated, 18th February* 1897

Government are pleased to direct that in para 35 of the Lock up Rules, the words "specially selected Sub Registrar" be inserted after the words "Deputy Amildar" and before the words "or the Sheristadar"

No 180, dated Camp Mysore, 20th Feb 1897

Intimation has been received from the Government of India that Her Majesty's Secretary of State for India has telegraphed that should the Bubonic plague appear in the Hedjaz, pilgrims cannot be allowed to enter Egypt until it has disappeared, and that pauper pilgrims cannot be allowed to enter Egypt

No 9671—J 1115, *dated 22nd February* 97

Under Section 37 of the Code of Criminal Procedure Mr N Venkata Rao, Assistant Commissioner and a Magistrate of the 1st Class, Mysore district, is invested with the following power specified in the 4th Schedule as an additional power which Government may confer on a Magistrate of the said class —

Power to hear appeals from convictions by Magistrates of the 2nd and 3rd Class Sec 407

No 9627—J 1110 *dated 22nd February* 97

Mr P F Bowring, Assistant Commissioner and 2nd Class Magistrate Manjarabad Hassan district, is invested with power to try cases falling under the Breach of Contract Act XIII of 1859

No 9702—J 1120, *dated 23rd Feb* 97

Messrs B Basavaradhya and C Subba Rao Munsiffs, whose transfers to Tumkur and Seringapatam, respectively, have been held in abeyance, will join those stations at the end of the ensuing Annual Recess

No 7428—R F 103 96 dated, 16th Feb 1897

Under Article 172 of the Mysore Service Regulations, M Ranganatha Rao, Deputy Amildar of Harihar sub taluk, Chitaldrug district, is granted casual leave of absence for seven days, with effect from such date as he may avail himself of the same

2 The Amildar of the Davangere taluk will in addition to his own duties hold charge of the Harihar sub taluk during the absence of M Ranganatha Rao, on leave or until further orders

No 233, *dated, Camp Mysore 24th Feb* 1897

Under Articles 188 of the Mysore Service Regulations Mr L Rice, Director of Archæological Researches in Mysore, is granted privilege leave of absence for fifteen days, with effect from the 27th February 1897 or from such other date as he may avail himself of the same

PLUCKY LITTLE PIGEON

One day a wonderful bird tapped at the window of Mrs Nansen's home at Christiania Instantly the window was opened and the wife of the famous Arctic explorer in another movement covered the little messenger with kisses and caresses The carrier pigeon had been away from the cottage thirty long months, but it had not forgotten the way home It brought a note from Nansen stating all was going well with him and his expedition in the polar regions

Nansen had fastened a message to a carrier pigeon and turned the bird loose The frail courier darted out into the blizzardly air It flew like an arrow over a thousand miles of frozen waste, and then sped forward over another thousand miles of ocean and plains and forests, and one morning entered the window of the waiting mistress, and delivered the message which she had been awaiting so anxiously

We boast of human pluck, sagacity, and endurance, but this living little carrier pigeon, in its homeward flight, after an absence of thirty months, accomplished a feat so wonderful that we can only give ourselves up to the amazement and admiration which must overwhelm everyone when the marvellous story is told Mrs Nansen's pigeon is one of the wonders of the world —*The Toronto World*

ಕರ್ಣಾಟಕ ಪ್ರಕಾಶಿಕಾ.

ಬೆಂಗಳೂರು ೧೮೯೭ ನೇ ಮಾರ್ಚಿ ತಾ|| ೧ ನೇ ಸೋಮವಾರ.

ರಾಜಕನ್ಯಾ ಪರಿಣಯವನ್ನು ಕುರಿತು.

ಶ್ರೀಮನ್ಮಹಾರಾಜ ಜ್ಯೇಷ್ಠ ಪುತ್ರಿಯವರಾದ ಸೌ|| ಜಯಲಕ್ಷ್ಮಮ್ಮಣ್ಣಿಯವರ ವಿವಾಹ ಮಹೋತ್ಸವದ ವೈಭವವು ಸ್ವತಃ ದರ್ಶಿಸಿ ಆನಂದಿಸಿದಂತವರಿಗೆ ನಮ್ಮ ಲೇಖನವು ವಿಶೇಷ ಸಂತೃಪ್ತಿಕರವಾಗಿರದೆ ಹೋದಾಗ್ಯೂ ವಿವಾಹಾಂಗವಾಗಿ ಜರಿಗಿಸಲ್ಪಟ್ಟ ಯಾವದುಕವನ್ನು ಅವಕಾಶಾನುಗುಣವಾಗಿ ಇದರಡಿ ಪ್ರಕಟಿಸುವೆವು, ಹೇಗೆಂದರೆ.—

ಪ್ರಸಕ್ತ ವಿವಾಹಾರ್ಥ ಅರಮನೆಯಲ್ಲಿ ನಿರಚಿತವಾಗಿದ್ದ ಪರಿಣಯ ಮಂಟಪವು ಬಹುವಿಧಾಲಂಕಾರಗಳಿಂದ ಅತಿ ರಮಣೀಯವಾಗಿಯೂ, ವಿಚಿತ್ರತರವಾಗಿಯೂ, ನೇತ್ರಾನಂದಕರವಾಗಿಯೂ, ಪ್ರಕೃತ ವಿಷಯ ಸಂದರ್ಭ ಗೌರವಾನುಗುಣವಾಗಿಯೂ ಅಲಂಕರಿಸಲ್ಪಟ್ಟಿತ್ತು. ಮುಖ್ಯವಾಗಿ ಸದರೀ ಮಂಟಪ ದರ್ಶನ ಮಾತ್ರದಿಂ ವೀಕ್ಷಕರ ಹೃದಯದೊಳುದ್ಭವಿಸತಕ್ಕ ಮನೋಭಾವವು ಲೇಖ ಪ್ರಕಟಿತ ವ್ಯವೇ ಹೊರತು ಅದು ಶಬ್ದದಿಂ ಸವರಿಸಲಸಾಧ್ಯವಾಗಿರುತದೆ. ಗತ ವಾರದಲ್ಲಿ ಪ್ರಕಟಿಸಿದ್ದ ವಿವಾಹ ಪತ್ರಿಕೆಯಲ್ಲಿ ತಿಳಿಸಲ್ಪಟ್ಟಿದ್ದ ಕ್ರಮವನ್ನನುಸರಿಸಿ ಸಕಲವೂ ಜರಿಗಿಸಲ್ಪಟ್ಟವು ಆಚೇ ಗುರುವಾರದಹಿನ ಮಹಾರಾಜ ಕುಮಾರಿಯರು ಮಂಗಳಸ್ನಾನಾನಂತರ ಕುಲಗುರುಗಳ ಪಾದಪೂಜೆಯಂ ಮಾಡಿ ದೀಕ್ಷಾವಸ್ತ್ರಗಳಂ ಧರಿಸಿ ಕಂಕಣ ಬದ್ಧರಾಗಿ ವಿವಾಹ ಮಂಟಪಕ್ಕೆ ದಯಮಾಡಿದ ಬಳಕ ಅಲ್ಲಿ ನಡೆಯಬೇಕಾಗಿದ್ದ ಸಭಾಪೂಜೆ, ಮಾತೃಕಾಪೂಜೆ, ಮೊದಲಾದವೆಲ್ಲವು ಜರುಗಿದವು ಈ ದುರ್ಮುಖಿ ಸಂವತ್ಸರ ಮಾಘಶುದ್ಧ ಬಿದಿಗೆ ಶುಕ್ರವಾರದ ದಿನ ಮಹಾರಾಜಶ್ರೀ ಕಾಂತರಾಜೇ ಅರಸಿನವರಿಗೆ ಉಪನಯನೋತ್ಸವವು ಸಹ ಜರುಗುವಂತೆ ನಿಷ್ಕಲಷ್ಟವಾಗಿದ್ದ ಪ್ರಕಾರ ಆ ದಿನ V ಘಂಟೆ ವೇಳೆಗಾಗಿ ಕರಿಕಲ್ ತೊಟ್ಟಿಯಲ್ಲಿ ಯಥಾ ಸಂಪ್ರದಾಯ ಉಪನಯನೋತ್ಸವವು ಜರಿಗಿತು ಅನಂತರ ಮಹಾಕಾಂತರಾಜೇ ಅರಸರವರು ಕರಿಕಲ್ ತೊಟ್ಟಿಯಿಂದ ಸಕಲ ಮರ್ಯಾದೆಗಳೊಡನೆ ಕಾಶಿಯಾತ್ರೆ ಹೊರಟು, ಅರಮನೆಯ ಮುಂಭಾಗಕ್ಕೆ ದಯಮಾಡುವಲ್ಲಿ ಶ್ರೀಮನ್ಮಹಾರಾಣಿಯವರಿಂದಾಜ್ಞಪ್ತರಾಗಿ, ಮಹಾರಾಜಶ್ರೀ ಬಕ್ಷಿ ಬಸಪ್ಪಾಜಿ ಅರಸರವರು ಫಲವನ್ನರ್ಪಿಸಿದರು. ಅನಂತರ ಕೋಟೆಯ ನಾಲ್ಕು ಬೀದಿಗಳಲ್ಲಿಯೂ ಪ್ರದಕ್ಷಿಣವಾಗಿ ತೆರಳಿ ಬಿಡದಿಗೆ ದಯಮಾಡಿದರು. ಮಧ್ಯಾಹ್ನ ಒಂದು ಘಂಟೆಗೆ ಸರಿಯಾಗಿ ಅನರ್ಘ್ಯಾಭರಣ ವಸ್ತ್ರಗಂಧಮಾಲ್ಯಾಲಂಕೃತರಾದ ಮ|| ಕಾಂತರಾಜೇ ಅರಸರವರನ್ನು ಸಕಲ ರಾಜಮರ್ಯಾದೆಗಳೊಡನೆ ವಿವಾಹ ಮಂಟಪಕ್ಕೆ ಕರೆದುಕೊಂಡು ಬಂದು ತತ್ಕಾಲದಲ್ಲಿ ನಡೆಸಬೇಕಾದ ಶುಭಕಾರ್ಯಗಳೆಲ್ಲ ಜರಿಗಿಸಲ್ಪಟ್ಟವು. ತರುವಾಯ ವಿವಾಹ ಮಂಟಪದಲ್ಲಿ ವಾಗ್ದಾನ ಕಚೇಪೂಜೆ, ಮಧುಪರ್ಕ, ಕನ್ಯಾ ನಿರೀಕ್ಷಣೆ, ಮಹಾಸಂಕಲ್ಪ, ಕನ್ಯಾದಾನ, ಮಾಂಗಲ್ಯಧಾರಣೆ, ಗೌರೀಪೂಜೆ, ಪಾಣಿಗ್ರಹಣ, ಲಾಜಹೋಮ, ಸಪ್ತಪದಿ ಮುಂತಾದ ಕ್ರಿಯಾ ಕಲಾಪಗಳೆಲ್ಲವು ಮಂತ್ರಕ್ರಿಯಾ ಲೋಪವಿಗಳಿಲ್ಲದಂತೆ ನೆರವೇರಿದವು. ಮ|| ರಾ|| ಬಸಪ್ಪಾಜಿ ಅರಸರವರು ಕನ್ಯಾದಾನವಂಮಾಡಿದರು ಆರಾತ್ರಿ ಔಪಾಸನ, ಪ್ರವೇಶಹೋಮ, ಅರುಂಧತಿ ದರ್ಶನ, ಮೊದಲಾದವು ನಡೆದವು. ಶನಿ ಭಾನು ಸೋಮವಾರಗಳಲ್ಲಿ ಪ್ರಾತಸ್ಸಾಯಂಕಾಲ ವೇಳೆಗಳಲ್ಲಿ ವಧೂವರರಿಗೆ ಆರ್ತ್ಯಕ್ಷತೆಗಳು ನಡೆಸಲ್ಪಡುತಲಿದ್ದವು ಮಂಗಳವಾರದ ದಿನ ಬೆಳಗ್ಗೆ ನಾಕಬಲಿ, ವಸಂತಮಾಧವ ಪೂಜೆ, ಕಂಕಣ ವಿಸರ್ಜನೆ, ಕುಲದೇವತೆಯ ಸ್ವಸ್ಥಾನ ಪ್ರತಿಷ್ಠೆ, ಇವುಗಳು ಅನ್ಯೂನವಾಗಿ ನಡೆದವು ವಿವಾಹಾರಭ್ಯ ಪ್ರತಿದಿನವಲ್ಲೂ ಆಯಾಸಂದರ್ಭಗಳಲ್ಲಿ ಶ್ರೀಮನ್ಮಹಾರಾಣಿಯವರಿಂದಾಜ್ಞಪ್ತರಾದ ಸಂಸ್ಥಾನದ ವಿಶಿಷ್ಟಾಧಿಕಾರಿಗಳೂ, ವಿದ್ವಾಂಸರೂ, ರಾಜ ಬಂಧುಗಳೂ, ಉತ್ಸವ ಸಂದರ್ಶನಾರ್ಥ ವಿದೇಶಗಳಿಂದಾಹೂತರಾಗಿದ್ದವರು ಅಂತ ಉತ್ಸವಕಾಲದಲ್ಲಿ ರಾಜಸಭಾ ಪ್ರವೇಶಯೋಗ್ಯಗಳಾದ ವಸ್ತ್ರ ಭೂಷಣಾದಿಗಳಿಂದಲಂಕೃತರಾಗಿ ಮಂಟಪ ಶೋಭಾಯಮಾನರಾಗಿದ್ದರು. ಈಗ ವಿವಾಹಿತರಾದ ನೂತನ ವಧೂವರರಿಗೆ ಅರ್ಪಿಸುವದಕ್ಕಾಗಿ ಕೊಲ್ಹಾಪುರ, ಜೋಧಪುರ, ಬರೋಡೆ, ಪುದುಕೋಟೆ ವಗೈರೆ ಸಂಸ್ಥಾನಾಧಿಪತಿಗಳು ತಮ್ಮ ಕಡೆ ಪ್ರತಿನಿಧಿಗಳ ಮೂಲಕ ರಾಜಾರ್ಹಗಳಾದ ವಸ್ತ್ರಾಭರಣಗಳನ್ನು ಕಳುಹಿಸಿದ್ದವೆಲ್ಲವು ಶನಿವಾರದ ದಿನ ರಾತ್ರೆ ವಧೂವರರಿಗೆ ಆರ್ತ್ಯಕ್ಷತೆಯ ಕಾಲದಲ್ಲಿ ಯಥಾಯೋಗ್ಯವಾಗಿ ಒಪ್ಪಿಸಲ್ಪಟ್ಟವು. ಇದಲ್ಲದೆ ಶ್ರೀ ಶೃಂಗೇರಿ, ಶ್ರೀ ಪರಕಾಲ ಮಠಾಧಿಪತಿಗಳೂ, ಮ|| ದೇಶೀ ಅರಸರವರು, ದಿವಾನರವರು, ಮ|| ಬಸಪ್ಪಾಜಿ ಅರಸರವರು, ಮ|| ದಳವಾಯಿ ದೇವರಾಜೆ ಅರಸರವರು ಮುಂತಾದ ಸಕಲ ರಾಜ ಬಂಧುಗಳೂ ವಧೂವರರಿಗೆ ಭಾರೀ ಉಡುಗರೆಗಳನ್ನೊಪ್ಪಿಸಿದರು. ಇವುಗಳ ಪೈಕಿ ಜೋಧಪುರದ ಮಹಾರಾಜರವರು ಕಳುಹಿಸಿದ್ದ ಖಿಲ್ಲತ್ತು ಬಹಳ ಅನರ್ಘ್ಯವಾದುದೆಂದು ಕೇಳ್ಪಟ್ಟೆವು. ಇದಲ್ಲದೆ ಮೇಲೆಕಂಡ ಸಂಸ್ಥಾನಾಧಿಪತಿಗಳು ರೀಜೆಂಟರವರಿಗೆ ಪ್ರತ್ಯೇಕ ಲೇಖನಗಳನ್ನು ಬರೆದಿದ್ದವು ಕ್ರಮವಾಗಿ ಅವರಿಗೆ ಅರ್ಪಿಸಲ್ಪಟ್ಟವು ಸದರೀ ಲೇಖನಗಳಲ್ಲಿ ಮುಖ್ಯವಾಗಿ ತಿಳಿಸಲ್ಪಟ್ಟಿದ್ದ ಅಂಶವೇನದರೆ —ಇದೇ ರೀತಿಯಾದ ಶುಭಕರ ಮಂಗಳ ಪರಂಪರಾಭಿವೃದ್ಧಿಯು ಪೈರಾಸಿನವರ ರಾಜವಂಶಕ್ಕುಂಟಾಗುತಿರಬೇಕೆಂದು ಉನ್ಮಸ್ತಕ ಹರ್ಷಭರಿತರಾಗಿ ತಾವು ಕೋರುವುದೆಯೂ, ಇಂತಾ ವಿಶೇಷ ಸಂದರ್ಭಗಳಲ್ಲಿ ತಮ್ಮ ಆತನ ಪ್ರತ್ಯೇಕವಾಗಿ ಉಭಯರ ಪರಸ್ಪರ ಸ್ನೇಹ ಸಂಬಂಧವು ಅಭಿವೃದ್ಧಿಯ ಸ್ಥಿತಿಗಾಗುತಲಿರಬೇಕೆಂದು ತಾವು ಬಯಸುವಂತೆಯೂ ಒತಿಯ ಲ್ಪಟ್ಟಿತ್ತು. ಭಾನುವಾರ ಬೆಳಗ್ಗೆ ವಧೂವರರ ಫೋಟೋಗ್ರಫ್ ತೆಗೆಯಲ್ಪಟ್ಟಿತು. ಶನಿವಾರದದಿನ ಪುರುಷರಿಗೆ ಕರಿಕಲ್ ತೊಟ್ಟಿಯಲ್ಲೂ, ಸ್ತ್ರೀಯರಿಗೆ ವರಾಹಸ್ವಾಮಿ ದೇವಸ್ಥಾನದಲ್ಲೂ ೨೦ ಸಾವಿರ ರೂಪಾಯಿಗಳ ಧನಕ ಭೂರಿದಕ್ಷಿಣೆ ಕೊಡಲ್ಪಟ್ಟಿತು. ವಿವಾಹದ ಮಹೋತ್ಸವದ ದಿನ ಸಕಲ ಮತಸ್ಥರಿಗೂ ಭಕ್ಷ್ಯಭೋಜ್ಯಗಳೊಡನೆ ಸಂತರ್ಪಣೆಯು ನಡೆಯಿತು. ತದ್ವತ್ ಮಹಾರಾಜರವರ ಸುಸ್ಥಿತಿಗಾಗಿ ಪಾಠಶಾಲೆಯಲ್ಲಿ ಚಿರಂತರಾಗಿ ಬಂದಿದ್ದವರಿಗೂ ಸರ್ಕಾರಿ ಉದ್ಯೋಗಸ್ಥರಿಗೂ ಔತಣಗಳು ನಡೆಯುತಲಿದ್ದವೆ. ಸೋಮವಾರ ರಾತ್ರಿ ರೆಸಿಡೆನ್ಸಿ ಬಂಗ್ಲೆಯಲ್ಲಿ ಮಹಾರಾಣೀ ರೀಜೆಂಟರವರು ಯೂರೋಪಿಯನ್ ಸರದಾರರುಗಳಿಗೆಲ್ಲ ಜಿಯಾಫತ್ ಮಾಡಿಸಿದರು. ಆಕಾಲದಲ್ಲಿ ಸುಮಾರ್ ನೂರುಮಂದಿಗಿಂತ ಮೇಲ್ಪಟ್ಟ ಯೂರೋಪಿಯನ್ ದೊಡ್ಡ ಮನುಷ್ಯರು ಬಂದಿದ್ದರು ಭೋಜನಾನಂತರ ದಿವಾನರವರು ಶ್ರೀಮನ್ಮಹಾರಾಜ್ಞೀ ಚಕ್ರವರ್ತಿನೀಯವರೂ ಬಳಕ ರೀಜೆಂಟರವರ ತರುವಾಯ ಶ್ರೀಮನ್ಮಹಾರಾಜರವರೂ ಮತ್ತು ನೂತನ ದಂಪತಿಗಳ ಆಯುರಾರೋಗ್ಯೈಶ್ವರ್ಯಾಭಿವೃದ್ಧಿಯಂ ಕೋರಿ ತತ್ಸೂಚಕವಾಗಿ ಎಲ್ಲರೂ ಮದ ಪಾನವಂಮಾಡಬೇಕೆಂದು ಪ್ರಾರ್ಥಿಸಿದರು. ದಿವಾನರ ಪ್ರಾರ್ಥನೆಯುಕೇವಲ ಆದರಗೌರವದಿಂದಂಗೀಕರಿಸಲ್ಪಟ್ಟ ಮೇಲೆ ಕಂಡವರ ಕ್ಷೇಮಾಭಿವೃದ್ಧಿಯಂ ಬಯಸಿ ಮದುಪಾನವಂ ಮಾಡುವ ಸಂದರ್ಭದಲ್ಲಿ ರೆಸಿಡೆಂಟರವರು ಅಪ್ಪಣೆ ಕೊಟ್ಟದ್ದೇನೆಂದರೆ ಶ್ರೀಮನ್ಮಹಾರಾಣೀ ರೀಜೆಂಟರವರಿಗೆ ಘನತರವಾದ್ಯವುಕೃತಪದವಿಯನ್ನು ಇಂಡಿಯಾ ಗವರ್ನಮೆಂಟಿನವರು ದಯಪಾಲಿಸಿದಾಗ ಆಕೆಯವರ ವಿಷಯದಲ್ಲಿ ಯಾವ ವಿಧವಾದ ಭಾವವನ್ನು ಅವರು ಪಡೆದಿದ್ದರೋ ಯದ್ವಿದನ ವ ಪ್ರಯೋಜನಾಂಶಗಳನ್ನು ನಿರೀಕ್ಷಿಸಿದ್ದರೋ ಯದೂಪವಾದ ಶುಭಪರಂಪರೆಗಳಂ ಬಯಸಿದರೋ ತಾದೃಶ ಪ್ರಯೋಜನ ನಿರೀಕ್ಷಣೆ ಶುಭ ಪರಂಪರೆಗಳು ರೀಜೆಂಟರವರ ಅಲ್ಪಕಾಲಿಕ ಪ್ರಭುತ್ವದಲ್ಲಿಯೇ ಸಮಗ್ರವಾಗಿ ಸಫಲಗಳಾದವೆಂಬದಕ್ಕೆ ಅಭಿವ್ಯಕ್ತಗಳಾದ ಅನೇಕ ಶುಭ ಲಕ್ಷಣಗಳಂ ಕಂಡು ತಾವು ಬಹಳ ಸಂತೋಷಿಸುವಂತೆಯೂ, ಮಹಾರಾಣೀಯವರು ತಮ್ಮ ಕರ್ತವ್ಯವನ್ನು ತೃಪ್ತಿಕರವಾಗಿ ನೆರವೇರಿಸುತಲಿರಾರಲ್ಲದೆ ಶ್ರೀಮನ್ಮಹಾರಾಜರವರು ಮೈಸೂರು ರಾಜವಂಶದ ಪ್ರತಿಷ್ಠಾಪಕರಾಗಿಯೂ, ನಿರುಪಮಯಶಃಪುಂಜಿತರಾಗಿಯೂ, ಪ್ರಾಪ್ತವಯಸ್ಕರಾಗಿ ಈರಾಜ್ಯಧುರವಂ ತಾವು

ಸ್ವತಃ ಶ್ರೀಗೊಳ್ಳುವ ಕಾಲದಲ್ಲಿ ಪ್ರಜಾರಂಜಕರಾಗಿ ಪ್ರಭುತ್ವವನ್ನು ನಡಿಸಲಿಕ್ಕೆ ಅವಶ್ಯಕಗಳಾದ ಮೇಧಾಶ್ರುಬುದ್ಧಿ ವಿವೇಕಾದಿ ಶುಭಲಕ್ಷಣಗಳುಳ್ಳವರಾಗಿಯೂ ಇರುವರೆಂಬುದಕ್ಕೆ ತಕ್ಕ ಲಾಂಛನಗಳು ಈಗಲೆ ಅವರಲ್ಲಿ ಅಭಿವ್ಯಕ್ತವಾಗಿರುವಂತೆಯೂ, ಈ ಸಂಸ್ಥಾನದ ಕೀರ್ತಿ ಪ್ರತಿಷ್ಠೆಗಳಗೂ, ಐಶ್ವರ್ಯಾಭಿವೃದ್ಧಿಗೂ ಕಾರಣ ಭೂತವಾದ ಪ್ರಕೃತ ದಿವಾನರವರ ಮತ್ತು ಅವರ ಕೌನ್ಸಿಲರ್‌ಗಳ ಯೋಗ್ಯತೆಯು ಕೇವಲ ಉಪಲಾಳನಾರ್ಹವಾದುದೆಂಬುದಾಗಿಯೂ ತಿಳಿಸಿದರು. ಭೋಜನಾನಂತರ ರೆಸಿಡೆನ್ಸಿ ಬಂಗ್ಲೆಯ ಮುಂಭಾಗದಲ್ಲಿ ಬಾಣಬಿರುಸು ವಿನೋದವು ನಡೆಯಿತು. ಈ ಉತ್ಸವಕ್ಕೋಸ್ಕರವಾಗಿ ರಾಜಧಾನಿಯಲ್ಲಿ ಪುರಜನರೂ ಅನ್ಯದೇಶಗಳಿಂದ ಬಂದವ್ವವರೂ ಸೇರಿ ಅನೇಕ ಸಹಸ್ರ ಪ್ರಜೆಗಳು ನೆರೆದಿದ್ದರು. ಇವರು ಆಯಾ ಸಮಯಗಳಲ್ಲಿ ನೂತನ ವಧೂವರರ ದರ್ಶನದಿಂದಲೂ ಪಡೆದಿದ್ದ ಉತ್ಸಾಹವನ್ನು ನೋಡಿದರೆ ಅವರಿಗೆ ಮೈಸೂರು ರಾಜವಂಶದಲ್ಲಿರುವ ಅಂತರವಾದ ಭಕ್ತಿಗೌರವಗಳೂ ವ್ಯಕ್ತವಾಗದಿರಲಿಲ್ಲವು.

೨೫ ನೆ ತಾರೀಖು ಬುಧವಾರದದಿನ ರಾತ್ರಿ ಶ್ರೀಮನ್ಮಹಾರಾಜರವರು ೯ ಘಂಟೆಗೆ ದೀಪತಿಯರಿಂ ಸ್ವರ್ಣಮಯವಾದ ಅಂಬಾರಿಯಲ್ಲಿ ಕುಳ್ಳಿರಿಸಿ, ಅರಮನೆಯ ಪರಿಧವನಿಗಳೊಡನೆ ಈ ಪರೇಡ್ ರಾಜಮಾರ್ಗಗಳಲ್ಲಿ ಅತಿ ವಿಜೃಂಭಣೆಯಿಂದ ಮೆರವಣಿಗೆ ಮಾಡಿಸಿಕೊಂಡು ರಾತ್ರಿ ೩ ಘಂಟೆಗೆ ಅರಮನೆಯನ್ನು ಸೇರಿದರು. ಏತದರ್ಥ ಕೋಟೆಯ ಮೊದಲು, ಈ ಉತ್ಸವಕ್ಕೆ ಉಪ್ಪಿಷ್ಟವಾಗಿದ್ದ ಮಾರ್ಗಗಳೆಲ್ಲವೂ ತೋರಣ ಕದಳೀ ಸ್ತಂಭಗಳಿಂದಲೂ, ನಾನಾವಿಧ ರಂಗುಗಳುಳ್ಳ ದೀಪಾವಳಿಯಿಂದಲೂ ಅಲಂಕೃತವಾಗಿ ಕಣ್ಗೊಳಿಸುತಲಿದ್ದವು. ಈ ಶುಭಾರ್ಥ ಆಹ್ವಾನ ಪತ್ರಿಕೆಗಳ ಮೂಲಕ ಆರಿಮುಸಲ್ಪಟ್ಟು ಬಂದ ಸ್ಥಳ ಪರಸ್ಥಳವವರಿಗೆಲ್ಲ ಅವರವರ ಗೌರವಾನುಗುಣವಾಗಿ ಸನ್ಮಾನಗಳು, ಅಂದರೆ ಕಾಲ್‌ಜೋಡಿ ಪಲ್ಲಿ ಬರುವೂ ನಗಳು ನಡೆದೂ ಎನ್ನು ಪ್ರತಿದಿನದಲ್ಲೂ ನಡೆಯುತಲೂ ಇವೆ. ಇದು ಪೂರ್ತಿಯಾಗುವದಕ್ಕೆ ಇನ್ನು ಒಂದುವಾರ ಕಾಲ ಹಿಡಿಯಬಹುದೆಂದು ಕಾಣುತಿದೆ. ಶ್ರೀಮನ್ಮಹಾರಾಣೀ ರೀಜಂಟರವರಿಗೆ ತಮ್ಮ ಜ್ಯೇಷ್ಠಪುತ್ರಿಯವರ ಪರಿಣಯ ವಿಷಯದಲ್ಲುಂಟಾಗಿದ್ದ ದೀರ್ಘಕಾಲಿಕವಾದ ಚಿಂತೆಯು ನಿವೃತ್ತಿಸಿ ಆಕೆಯವರ ಮನೋಭೀಷ್ಟವು ಶ್ರೀಮನ್ನಾರಾಯಣನು ಈಡೇರಿಸಿದ ಬಗ್ಗೆ ಆತನ ಸನ್ನಿಧಿಯಲ್ಲಿ ಮಹಾರಾಣೀಯವರ ಪ್ರಜೆಗಳಾದ ನಾವೆಲ್ಲರು ವಂದನವನ್ನರ್ಪಿಸಿ, ನೂತನ ವಧೂವರರಿಗೆ ಆಯುರಾರೋಗ್ಯೈಶ್ವರ್ಯಾಭಿವೃದ್ಧಿಯನ್ನುಂಟುಮಾಡಬೇಕೆಂದು ಪ್ರಾರ್ಥಿಸುತ್ತೇವೆ.

LOCAL AND PROVINCIAL NEWS.

ಸ್ಥಳದೇಶಸಮಾಚಾರಗಳು.

ಬೆಂಗಳೂರು ಪರೇಡ್ ಆಸ್ಪತ್ರೆಯಲ್ಲಿ ಕೆಲಸ ಮಾಡುತಲಿದ್ದ ಅಸ್ಪಿಟಲ್ ಅಸಿಸ್ಟೆಂಟ್ ಎಮ್. ತನಾಯಗಂ ಪಿಳ್ಳೆ ಎಂಬವರು ಅವರ ದುರ್ನಡತೆಗಾಗಿ ಡಿಸ್ಮಿಸ್ ಮಾಡಲ್ಪಟ್ಟಂತೆ ಕೇಳುತ್ತೇವೆ.

ಸರ್ಕಾರದವರು ಬೆಂಗಳೂರು ಸಿಟಿ ಮ್ಯೂನಿಸಿಪಾಲಿಟಿಗೆ ಮ|| ಆರ್. ಶ್ರೀನಿವಾಸಾಚಾರ್ಯರನ್ನು ನೇಮಿಸಿ ಮ|| ರೆನ್ನರ್ಸ್ ನಾಯಿಡುರವರನ್ನು ಮೈಸೂರಿಗೆ ವರ್ಗ ಮಾಡುತ್ತಾರೆಂದು ವರ್ತಮಾನ ಇದೆ.

ಈಗ ಬೆಂಗಳೂರು ಸಿಟಿ ಮ್ಯುನಿಸಿಪಲ್ ಇಂಜನಿಯರ್ ಕೆಲಸವನ್ನು ನೋಡುತಲಿರುವ ಪಿ. ತಿ ವಾರಿ.ವರ ಜಾಗರೂಕತೆಯೂ, ಕೆಲಸದ ಅನುಭವವೂ ಪ್ರಕೃತ ಪದವಿಗೆ ಅಭಿವೃದ್ಧಿ ಸ್ಥಿತಿಗೆ ಅನುಗುಣವಾಗಿಲ್ಲದ್ದರಿಂದ ಸದರೀ ಯವರನ್ನು ಕೆಲಸದಿಂದ ನಿವೃತ್ತಿ ಮಾಡಲ್ಪಟ್ಟರೆಂದು ಕೇಳುತ್ತೇವೆ.

ಬೆಂಗಳೂರು ಡಿವಿಜನ್ ಎಗ್ಜಿಕ್ಯುಟಿವ್ ಇಂಜನಿಯರಾಗಿದ್ದ ಮೆ. ವ್ಹಿ. ಶ್ರೀನಿವಾಸಾಯರವರಿಗೆ ಬದಲಾಗಿ ನಿಯಮಿತರಾದ ಮ|| ಬಿ. ವೆಂಕಟಾಚಾರ್ಯರವರು ಗತಗುರುವಾರದ ದಿನ ಶಿವಮೊಗ್ಗಾ ಡಿಸ್ಟ್ರಿಕ್ಟಿನಿಂದ ಈ ಪ್ರಾಂತಿಗೆ ಬಂದು ಅದೇ ದಿನವೇ ತಮ್ಮ ಕೆಲಸದ ಚಾರ್ಜನ್ನು ತೆಗೆದುಕೊಂಡರೆಂದು ಕೇಳುತ್ತೇವೆ.

ಶ್ರೀಮನ್ಮಹಾರಾಜಪುತ್ರಿಯವರ ವಿವಾಹಾರ್ಥ ಮೈಸೂರಿಗೆ ಹೋಗಿದ್ದ ಆಫೀಸರುಗಳೆಲ್ಲರು ರೀಜಂಟರವರಿಂದನುಜ್ಞೆಯಂ ಪಡೆದು ಗತಶುಕ್ರವಾರ ಶನಿವಾರಗಳ ದಿನ ತಮ್ಮ ತಮ್ಮ ಸ್ಥಾನಗಳಿಗೆ ವಾಪಸ್ ಹೊರಟು ಹೋದರು. ದಿವಾನರ ಸವಾರಿ ಇಲ್ಲಿಗೆ ಬರುವದಕ್ಕೆ ಇನ್ನು ಕೆಲವು ವಾರಗಳ ಕಾಲ ಹಿಡಿಯುವದೆಂದು ಕೇಳುತ್ತೇವೆ.

ಕಳೆದ ಬುಧವಾರದದಿನ ರಾತ್ರಿ ಇಲ್ಲಿನ ಸಿವಿಲ್ ಮಿಲಿಟರಿ ಸ್ಟೇಷನ್ ಪ್ರೈಕಿ ಬಳೇಪೇಟೆಯಲ್ಲಿ ಚಾಂದ್ನಿ ಚೌಕ್ ಎಂಬ ಬೀದಿಯಲ್ಲಿ ಕಳ್ಳರು ಒಬ್ಬ ಸಾಹುಕಾರನ ಮನೆ ನಗ್ಗಿ ಮುನ್ನೂರು ೩,೦೦೦ ರೂಪಾಯಿ ಬಾಳುವಷ್ಟು ಒಡವೆಗಳನ್ನು ಚೋರಿ ಮಾಡಿಕೊಂಡು ಹೋದಂತೆಯೂ ಪೋಲೀಸಿನವರು ಪತ್ತೆಯ ತರದೂದಿನಲ್ಲಿರುವಂತೆಯೂ ತಿಳಿಯಬರುತ್ತೆ.

ಈಗ್ಗೆ ಕೆಲವು ದಿವಸಗಳ ಹಿಂದೆ ಕಡೂರು ಡಿಸ್ಟ್ರಿಕ್ಟಿನಲ್ಲಿ ನಡೆದ ಒಂದು ಭಾರೀ ದರೋಡೆಯ ಪತ್ತೆ ಬಗ್ಗೆ ಹೋಗಿದ್ದ ಆ ಡಿಸ್ಟ್ರಿಕ್ಟ್ ಆಕ್ಟಿಂಗ್ ಪೊಲೀಸ್ ಸೂಪರಿಂಟೆಂಡೆಂಟರಾದ ಎಚ್. ಕೃಷ್ಣರಾಯರೆಂಬವರು ಕಳ್ಳರಕೈಗೆ ಸಿಕ್ಕಿ ಬಹಳ ಜಖಂ ಪಟ್ಟು ಈಗ ಅಲ್ಲಿನ ಆಸ್ಪತ್ರೆಯಲ್ಲಿ ಚಿಕಿತ್ಸೆಯೊಳಗಿರುವಂತೆ ಕೇಳಲು ವಿಷಾದಿಸುತ್ತೇವೆ.

ಇಲ್ಲಿನ ಲಾರ್ಡ್ ಬಿಷಪ್ ಪೈಸ್ಕಾರ್ ಬ್ರಿನಿಸ್ ಪೆಂರಾನ ರೆವರೆಂಡ್ ಮೆ. ವಾಲ್ಟರ್ ನಾಸಿಬರವರು ಶೀಘ್ರದಲ್ಲಿ ಇಂಗ್ಲೆಂಡಿಗೆ ಪ್ರಯಾಣವನ್ನು ಬೆಳಸಿಗಿರುವದರಿಂದ ಅವರು ಹೊರಡುವ ಸಮಯದಲ್ಲಿ ಅವರಿಗೊಂದು ಶ್ರೇಯಸ್ಸಾರ್ಥನಾರೂಪವಾದ ವಿಜ್ಞಾಪನಾಪತ್ರಿಕೆಯನ್ನೊಪ್ಪಿಸಬೇಕೆಂಬ ಸಂಕಲ್ಪದೊಡನೆ ಸದರೀ ಮೈನಿಸ್ಟ್ರಿನ ಉಪಾಧ್ಯಾಯರೂ ವಿದ್ಯಾರ್ಥಿಗಳೂ ಅದಕ್ಕೆ ಬೇಕಾದ ಏರ್ಪಾಡುಗಳಂ ಮಾಡುತಲಿರುವಂತೆ ಕೇಳುತ್ತೇವೆ.

ಶಿವಮೊಗ್ಗಾ ಡಿಸ್ಟ್ರಿಕ್ಟ್ ತೀರ್ಥಹಳ್ಳಿ ತಾಲ್ಲೂಕು ಕಸಬಾದಲ್ಲಿ ಈಗ್ಗೆ ಒಂದು ವಾರದ ಹಿಂದೆ ಒಂದುದಿನ ಸಾಯಂಕಾಲ ಭಾರೀ ಧಕಾಯತಿ ನಡೆದು ಅಲ್ಲಿನ ಸರ್ಕಾರದ ಖಜಾನೆಯಿಂದ ೧೯,೦೦೦ ರೂಪಾಯಿಗಳು ದೋಚಲ್ಪಟ್ಟಂತೆ ತಿಳಿಯಬರುತ್ತೆ. ಈ ಸಂದರ್ಭದಲ್ಲಿ ಇಲ್ಲಿ ಪಹರೆ ಇದ್ದ ಸಿಪಾಯಿಗಳ ಪೈಕಿ ೫ ಜನ ಖೂನಿ ಮಾಡಲ್ಪಟ್ಟಂತೆಯೂ, ಆ ತಾಲ್ಲೂಕಿನ ಅಮಲ್ದಾರ [illegible] ರಾ|| ನಾರಾಯಣರಾಯರಿಗೆ ಸಹ [illegible] ವಾಗಿರುವಂತೆಯೂ ವರ್ತಮಾನವಿರುತ್ತೆ. ಆದರೆ ಈ ಭಾಗದಲ್ಲಿ ನಮ್ಮ ವಾರ್ತಾವಿಧಾಯಕರಿಂದ ಅಲ್ಲಿನ ವರ್ತಮಾನದ ನಿಜಸ್ಥಿತಿ ತಿಳಿಯ ಬಂದ ಕೂಡಲೆ ವಿಸ್ತಾರವಾಗಿ ತಿಳಿಸುವೆವು.

ಈ ಸಂಸ್ಥಾನದಲ್ಲಿ ಅಸಿಸ್ಟೆಂಟ್ ಕಮಿಷನರ್‌ಗಳ ಸಂಖ್ಯೆಯು ಹೆಚ್ಚಾಯಿತೆಂದೂ, ಪರೀಕ್ಷೆಯ ದೆಸೆಯಿಂದಲೂ, ಮೊಕದ್ದಮೆಗಳಿಂದಲೂ, ದಿನದಿನ ಹೆಚ್ಚುತಲಿರುವವನದರಿಂದ ಅವರಿಗೆ ತಕ್ಕ ಕೆಲಸಗಳನ್ನು ನಿಯಮಿಸುವದು ಪ್ರಯಾಸವಾಗಿ ಏರ್ಪಟ್ಟಿದೆ. ಒಂದೊಂದು ತಾಲ್ಲೂಕಿನ ವಿಚಾರಣೆಗೊಳ್ಪಟ್ಟ ಇನ್ನು ಪ್ರಕಾರ ಅಸಿಸ್ಟೆಂಟರನ್ನು ನಿಯಮಿಸುವುದಾಗ್ಯೂ ನೌಕರಿ ವಿಳೇ ಮಾಡಬೇಕಾದ ಬಗ್ಗೆ ಅನೇಕರು ಊಳಿದಿರುತ್ತಾರೆ. ಇದನ್ನು ಪರಿಭಾವಿಸಿ ಹಾಲೀ ಇರುವ ಸಬ್ ಡಿವಿಜನ್‌ಗಳಲ್ಲದೆ ಇನ್ನೂ ಮೂರು ಸಬ್‌ಡಿವಿಜನ್‌ಗಳನ್ನೇರ್ಪಡಿಸಿ ಸಬ್‌ಡಿವಿಜನ್ ಆಫೀಸರುಗಳನ್ನು ನೇಮಿಸಿ ಮೊಕದ್ದಮೆಯ ಆಲೋಚನೆಯು ಗವರ್ನಮೆಂಟಿನವರಿಗುಂಟಾಗಿರುವಂತೆ ಒಳದೇಶದ ಈವಿನಿಂಗ್ ಮೇಲ್ ಪತ್ರಿಕೆ ತಿಳಿಸುತಿದೆ.

ಗತಿಸಿದ "ದೇಶಾಭಿಮಾನಿ" ಎಂಬ ಪತ್ರಿಕೆಯ ಎಡಿಟರಾಗಿದ್ದ ಬಿ. ಸಿ. ಶ್ರೀನಿವಾಸ್ಯೆಯಂಗಾರುವರ ಮೇಲೆ ಕೋರ್ಟಿನಲ್ಲಿರುವ ಒಬ್ಬ ವಕೀಲರು ಮಾನನಷ್ಟ ಮೊಕದ್ದಮೆ ತಂದದ್ದನ್ನು ವಿಚಾರಣೆಗೆ ಕೋಲಾರದ ಬಗ್ಗಾರತ ಗಡೆಯ ಮ್ಯಾಜಿಸ್ಟ್ರೇಟರಿಂದ ಮೇ|| ಡ್ಯೂ ರೈಡಿ ಸಾಹೇಬರಿಗೆ ರಿಫರ್ ಮಾಡಿದ್ದರಷ್ಟೆ. ಈ ಮೊಕದ್ದಮೆಯ ವಿಚಾರಣೆಯು ಈಗ್ಗೆ ಸ್ವಲ್ಪ ದಿವಸಗಳ ಹಿಂದೆ ನಡೆದು ಮೊಕದ್ದಮೆಯು ಸದರೀ ಎಡಿಟರವರ ಮೇಲೆ ರುಜುವಾತ್ ಆಗುವ ಸಂದರ್ಭಕ್ಕೆ ಬಂದ ಕಾರಣ ಮ್ಯಾಜಿಸ್ಟ್ರೇಟರವರು ಈ ಮೊಕದ್ದಮೆಯಲ್ಲಿ ರಾಜೀ ಮಾಡಿಕೊಳ್ಳುವಣ ಉತ್ತಮವೆಂದು ಹೇಳಿ ಇದಕ್ಕಾಗಿ ಸದರೀ ಶ್ರೀನಿವಾಸಯ್ಯಂಗಾರ್ರಿಗೆ ೫ನೆ ದಿವಸ ವಾಯಿದೆ ಕೊಟ್ಟಿರುವದಾಗಿ ವರ್ತಮಾನ ಕೇಳುತ್ತೇವೆ.

ಕೆಲವು ದಿನಗಳ ಹಿಂದೆ ಶಿವಮೊಗ್ಗೆಯ ಬಜ್ಜಾರ ಒಬ್ಬ ಲಂಬಾಣಿಯ ಹೆಂಗಸು ತನ್ನ ಚಿಕ್ಕಮಗುವಿನೊಡನೆ ದನವನ್ನು ಮೇಯಿಸುತ್ತಿರುವಾಗ ತನ್ನ ತಾಯಿಯನ್ನು ಹುಡುಕಿಕೊಂಡು ಹೋಗುತ್ತಿರುವಾಗ ಒಂದು ಹುಲಿಯ ಮರಿಯು ಗವಿಯಿಂದ ಹೊರಗೆ ಬಂತು. ಅದೂ ಆ ನಾಯಿಯೂ ಕಚ್ಚಾಡುವದಕ್ಕೆ ಪ್ರಾರಂಭಿಸಿದವು ಈ ಹೆಂಗಸು ಈ ಯುದ್ಧವನ್ನು ನೋಡುತ್ತಿರುವಾಗ ಹುಲಿಯು ತನ್ನ ಮರಿಯನ್ನು ಹುಡುಕುತ್ತಾ ಬಂದು ಇವಳ ಮೇಲೆ ಬಿತ್ತು. ಆ ಮೇಲೆ ಇವರಿಬ್ಬರಿಗೆ ಪರಸ್ಪರ ಜೀವದ ಆಸೆಯಿಂದ ಹೊಡೆದಾಟವಾಯಿತು. ಹುಲಿಗಾ ಬದುಕಿಕೊಂಡಿತು. ಆ ಹೆಂಗಸು ಎರಡು ದಿವಸಗಳ ಮೇಲೆ ಸತ್ತಳು. ಇದೇ ಹುಲಿಯು ಮತ್ತೊಬ್ಬ ಒಂಭತ್ತು ವರ್ಷದ ಲಂಬಾಣಿ ಹುಡುಗನನ್ನು ಕೊಂದಿತಂತೆ.

ಈಗ ಹಿಂದುಸ್ಥಾನದಲ್ಲಿ ಪ್ರಾಪ್ತವಾಗಿರುವ ಕ್ಷಾಮವನ್ನು ನಿವಾರಣೆ ಮಾಡುವದಕ್ಕೆ ಬಂಗಾಳದಲ್ಲಿ ಒಂದು ಫಂಡು ಏರ್ಪಾಡಾಗಿರುವದು ಸರಿಯಷ್ಟೆ. ಈ ಫಂಡಿಗೆ ಮೈಸೂರು ಸಂಸ್ಥಾನದ ಪ್ರಜೆಗಳೂ ಚಂದಾಕೊಟ್ಟು ಸಹಾಯ ಮಾಡಬೇಕೆಂಬ ಉದ್ದೇಶದಿಂದ ಕಳೆದತಿಂಗಳ ೨೮ನೇ ತಾರೀಖು ಬುಧವಾರದದಿನ ಬೆಳಗ್ಗೆ ಮೈಸೂರು ಟೌನ್‌ಹಾಲಿನಲ್ಲಿ ಒಂದುಭಾರಿ ಸಭೆ ಸೇರಿತ್ತು. ದಿವಾನರವರೇ ಪ್ರೆಸಿಡೆಂಟರಾಗಿದ್ದರು. ರೆಸಿಡೆಂಟ್‌ರವರು ಈ ಸಭೆಯನ್ನಲಂಕರಿಸಿದ್ದರು. ಮಹಾರಾಣೀ ರೀಜಂಟರವರು ಪತ್ತು ಸಾವಿರ ರೂಪಾಯಿಗಳನ್ನು ಕೊಡುವದಾಗಿ ವಾಗ್ದಾನ ಮಾಡಿದರು. ಇತರರೆಲ್ಲರೂ ಸೇರಿ ಹತ್ತುಸಾವಿರಕ್ಕಿಂತಲೂ ಹೆಚ್ಚಾಗಿಯೇ ಚಂದಾ ಹಾಕಿದರು.

ಮಲನಾಡು ಪ್ರಾಂತದಲ್ಲಿನ ಜನರು ಮೋಸಕರವಾಗಿ ಪರಂಟ್ ಭಟ್ಟಿ ಇಳಿಸುವದು ಹೊರಗಾಗದೆಯೂ, ಕದ್ದು ಚಿಕ್ಕಿ ಅಂಕಷ್ಟವನ್ನು ಕಂಡುಹಿಡಿದು ಅಪರಾಧಿಗಳನ್ನು ಶಿಕ್ಷಿಸುವದು ಪ್ರಯಾಸಕರವಾಗಿಯೂ ಇರುವುದು. ಇಂತ ಮೊಕದ್ದಮೆಗಳನ್ನು ಪತ್ತೆ ಮಾಡ ಪ್ರವು ಎಕ್ಸೈಜ್ ಇಲಾಖಾ ಉದ್ಯೋಗಸ್ಥರಿಗೆ ಪ್ರಯಾಸವಾಗಿರುತಿದೆ. ಈ ನೌಕರನ್ಮನೇರಿಗೆ ಸಲ್ಲತಕ್ಕ ಸ್ವಲ್ಪ ತಲಬನ್ನು ಪರ್ಯಾಲೋಚಿಸಿದರೆ ಅವರಿಗೆ ಜಾಸ್ತಿ ಮೆಹನತಾನಾ ಕೊಟ್ಟರೆ ಅದು ದುಬಾರಿಯೆಂದು ಹೇಳಲಾಗದು. ಇಂತಾ ಸಂದರ್ಭಗಳಲ್ಲಿ ಆಳ್ವಾಸವಾಗಿ ಭಟ್ಟಿ ಇಳಿಸುವವರನ್ನು ಪತ್ತೇಮಾಡಿ ಅಪರಾಧಿಗಳನ್ನು ದಂಡನೆಗೊಳಪಡಿಸುವಂತ ಎಕ್ಸೈಜ್ ಇಲಾಖಾ ಆಫೀಸರ್‌ಗಳಿಗೆ ಪ್ರತ್ಯೇಕ ಇನಾಂಗಳು ಮುನಾಸಬ ಕೊಡತಕ್ಕದ್ದಾಗಿ ಡೆಪ್ಯುಟಿಸಾ ಕಮಿಷನರ್‌ರವರ ಡಿ. ನಾರಾಯಣಸಾಮಿ ಮುದಲಿಯಾರ್‌ರವರು ಈಚೆಗೆ ಒಂದು ಮೊಕದ್ದಮೆಯು ಪತ್ತೇಮಾಡಿದ್ದಕ್ಕಾಗಿ ೪೦ ರೂಪಾಯಿ ಇನಾಂ ಕೊಡಲ್ಪಟ್ಟಂತೆ ತಿಳಿಯಬರುತಿದೆ.

ಮುಸಲ್ಮಾನರಿಗೆ ಯಾತ್ರಾಸ್ಥಾನವಾಗಿರುವ ಮಕ್ಕಾಗೆ ಯಾತ್ರಾರ್ಥಿಗಳಾಗಿ ಹೋಗುವವರ ವಿಷಯದಲ್ಲಿ ಗವರ್ನಮೆಂಟಿನವರಿಂದುಂಟು ಮಾಡಲ್ಪಟ್ಟಿರುವ ಕೆಲವು ನಿರ್ಬಂಧಗಳನ್ನು ಕಂಡು ಇಲ್ಲಿನ ಸಿವಿಲ್ ಮಿಲಿಟರಿ ಸ್ಟೇಷನ್ನಿನಲ್ಲಿರುವ ಕೆಲವರು ಮುಸಲ್ಮಾನರು ಸದರೀ ಅಂತರವಂ ಕುರಿತು ಅಲ್ಲಿನ ಎರಡನೇ ಮ್ಯಾಜಿಸ್ಟ್ರೇಟರಾದ ಖಾನ್ ಬಹದೂರ್ ಅಬ್ದುಲ್ ರಹಿಮಾನ್ ಸಾಹೇಬರೊಡನೆ ಕಲೆತು ಮಾತನಾಡಿದಕ್ಕೆ ಅವರು ಈಗ ಪ್ರಾಪ್ತವಾಗಿರುವ ಮಹಾಮಾರಿಕೋಪದ ಪ್ಲೇಗು ಕ್ಷಾಮಭೀತಿಯೂ ಅಲ್ಲಲ್ಲಿ ಅಧಿಕವಾಗಿ ಇರುವರೆಗೆ ಅನೇಕ ಸಭ್ಯಪ್ರಜೆಗಳು ಮಡಿದು ಹೋದದಲ್ಲದೆ ಅನೇಕರು ಹಿಂದೆಯೇತಿಯಿಂದ ದೇಶಾಂತರಗಳಿಗೆ ಹೋದರೆಂತಲೂ, ಅನೇಕಜನ ಪ್ರಜೆಗಳು ಕ್ಷಾಮ ಪೀಡಿತರಾಗಿ ಕಷ್ಟಪಡುತಲಿರುವಂತೆಯೂ ತಿಳಿಸಿ ಅವರನ್ನು ಸಮಾಧಾನಪಡಿಸಿದ್ದರ ಮೇಲೆ ಎಲ್ಲರೂ ಅದಂ ಒಪ್ಪಿಕೊಂಡು ತೃಪ್ತರಾಗಿ ಹೊರಟುಹೋದರು. ಮೇಲೆಕಂಡ ಕಾರಣಗಳನ್ನು ಸಮಾಧಾನಿಸಿ ಸ್ವಮತೀಯರು ಒಡಂಬಡಿಸಿದ್ದರಿಂದಲೆ ಸದರೀ ಮುಸಲ್ಮಾನರಿಗೆ ಯಾತ್ರಾರ್ಥ ಪ್ರಜ್ಞಾನವು ಹುಟ್ಟಿ ಒಪ್ಪಿಕೊಂಡರೇ ಹೊರತು ಆನೇ ಅಂಶಗಳನ್ನು ಹಿಂದೂವಾದವರು ಹೇಳಿದ್ದರೆ ಅವರದಂ ನಂಬಿಯೂ ಇರಲಾರರು. ಮತ್ತು ಅದನ್ನಂಗೀಕರಿಸಿ ತೃಪ್ತರಾಗಿ ಹೋಗುವುದು ಸಹ ಅನುಮಾನಾಸ್ಪದವು.

ಈವಾರದಲ್ಲಿ ಇಂಗ್ಲಾಂಡಿನಿಂದ ಇಂಡ್ಯಾದೇಶಕ್ಕೆ ಹೊರಟ ಕ್ಯಾಲೆಡೋನಿಯಾ ಎಂಬ ಹೊಗೇಜಹಜಿನಲ್ಲಿ ಪ್ರಯಾಣಮಾಡಿಗಿರುವಂಥ ಪ್ರಯಾಣಿಕರ ಹೆಸರುಗಳನ್ನೋದಿ ನೋಡಲಾಗಿ ಇಲ್ಲಿನ ರೆಸಿಡೆಂಟರಾಗಿದ್ದು ಪಂಜಾಬುದೇಶದ ಲೆಫ್ಟಿನೆಂಟ್ ಗವರ್ನರಾಗಿ ನಿಯಮಿಸಲ್ಪಟ್ಟಿರುವ ಮೆ|| ಮ್ಯಾಕ್ ವರ್ತ್ ಯಂಗ್ ಸಿ. ಎಸ್. ಐ. ಯವರೂ, ಅವರ ಭಾರ್ಯೆಯವರೂ ಈಗಿನ ರೆಸಿಡೆಂಟರಾದ ಲೆಫ್ಟಿನೆಂಟ್ ಕರ್ನಲ್ ಡೋನಾಲ್ಡ್ ರಾಬರ್ಟ್‌ಸನ್ ಯವರ ಭಾರ್ಯೆಯವರೂ, ಇಂಡ್ಯಾದೇಶಕ್ಕೆ ಪ್ರಯಾಣಮಾಡಿರುವಂತೆ ಸ್ಪಷ್ಟವಾಯಿತು. ಮೆ|| ಮ್ಯಾಕ್ ವರ್ತ್ ಯಂಗ್ ಯವರಿಗೆ ಕೇವಲ ಶರೀರಾಸ್ವಸ್ಥವಾಗಿದ್ದು ಅದರಮೇಲೆ ಇಂಡ್ಯಾದೇಶಕ್ಕೆ ಮರಳಿ ಬಂದು ತಮ್ಮ ಕೆಲಸದ ಚಾರ್ಜನ್ನು ತೆಗೆದುಕೊಳ್ಳುವ ಸಂಭವಕಾಣಿಸಲಿಲ್ಲವೆಂಬುದಾಗಿ ಕೆಲವು ಇಂಗ್ಲಿಷ್‌ಪತ್ರಿಕೆಗಳು ಸೂಚಿಸಿದ್ದವು. ಆದರೆ ಮೇಲೆ ಕಂಡ ಅಂಶದಿಂದ ಸದರೀ ಸಾಹೇಬರವರಿಗೆ ಸಂಪೂರ್ಣ ಆರೋಗ್ಯ ಉಂಟಾಗಿ ಬಹಳ ಜವಾಬ್ದಾರಿಯುಳ್ಳಂಥ ತತ್ಕಾಲ ಪ್ರಕೃತಸ್ಥಿತಿಯಲ್ಲಿ ಕ್ಷಾಮ ಪೀಡಿತರಾಗಿ ಕ್ರಮಪಡುತಲಿರುವ ಅನೇಕಲಕ್ಷ ಪ್ರಜೆಗಳ ದುರವಸ್ಥೆಯನ್ನು ನೋಡಿ ಸಂಕಟ ಪಡಬೇಕಾಗಿರುವಂಥ ಲೆಫ್ಟಿನೆಂಟ್ ಗವರ್ನರವರ ಕೆಲಸದ ಚಾರ್ಜನ್ನು ವಹಿಸಿ ನಿರ್ವಹಿಸುವ ಧೈರ್ಯ ಶರೀರದಾರ್ಢ್ಯ ಉಂಟಾಗಿರಬಹುದೆಂದೂ ಹಿಸಬಹುದಾಗಿದೆ. ಈಗಿನ ರೆಸಿಡೆಂಟರವರು ತಮ್ಮ ಕುಟುಂಬವನ್ನು ಕರೆದುಕೊಂಡು ಬರುವದಕ್ಕಾಗಿ ಇಂಗ್ಲೆಂಡಿಗೆ ಹೋಗುವ ಸಂಭವವು ತೋರಿ ಬರುತಿದೆ.

THE MYSORE GAZETTE.

ಮೈಸೂರು ಗೆಜೆಟ್.

ಗುರುವಾರ, ತಾ|| ೨೫ನೇ ಫೆಬ್ರವರಿ ೧೮೯೭.

ಮೈಸೂರು ಗವರ್ನಮೆಂಟಿನವರಿಂದ ಹೊರಡಿಸಲ್ಪಟ್ಟ ಇಸ್ತಿಹಾರನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾ|| ೨೨ನೇ ಫೆಬ್ರವರಿ ೧೮೯೭.

ನಂ|| [illegible] —ಮೈಸೂರು ಸಿಟಿ ಮುನ್ಸಿಫರಾದ ಮಿಸ್ಟರ್ ಬಿ. ಆನಂದರಾಯ ಮತ್ತು ಸಿ. ಸುಬ್ಬರಾಯರು ಈ ವರುಷಕ್ಕೆ ತುಮಕೂರು ವ ಶ್ರೀರಂಗಪಟ್ಟಣಕ್ಕೆ ಆಗತಕ್ಕ ವರ್ಗಾವರ್ಗಿಗಳು ಈ ವರ್ಷದ ಫೆಬ್ರವರಿ ರಜಾ ಮುಗಿದ ನಂತರ ಜಾರಿಯಲ್ಲಿ ತರಲ್ಪಡುವವು. ಅವರುಗಳು ಸದರೀ ರಜಾ ತರುವಾಯ ಅವರವರಿಗೆ ಶಿಸ್ತುವಾಗಿರುವ ಸ್ಥಳಗಳಿಗೆ ಹೋಗಿ ಸೇರತಕ್ಕದ್ದು.

ಪೋರ್ಟ್‌ಫೋಲಿಯೋ ಮೈಸೂರು, ತಾ|| ೨೨ನೇ ಫೆಬ್ರವರಿ ೧೮೯೭.

ಕ್ಯಾಂಪ್ ನಂ|| ೧೯೦ — ಹೊಸ ಜಾತಿಗಳಲ್ಲಿ "ವಾಳಿಸಂದಾಯವಾದ" ಅಂಟುಜಾಡ್ಯಗಳ ಸಂಭವಿಸಿದರೆ, ಯಾತ್ರಿಕರುಗಳು ಅಜ್ಮೀರ್ ದೇವನನ್ನು ಸದರೀ ಜಾತ್ರೆಯು ಮುಗಿಯುತ್ತ ಆಗುವವರೆಗೆ ವ್ಯಾಪಿಸದಾಗಲು ವಿಷ್ಟುತರಾದೆಯಂದುಮನ್ನು ಮತ್ತು ಒಡನ ಯಾತ್ರಿಕರುಗಳು ಇವಷ್ಟ ದೇಶಾಂತ ವಿದಗಳು ಏರ್ಪಡಿಸಲಾರದುದನ್ನು ಶ್ರೀಮನ್ಮಹಾರಾಜಾಜ್ಞೆಯವರ ಇಂಡ್ಯಾ ದೇಶ ಸ್ಟೇಟ್ ಸೆಕ್ರೆಟರಿಯವರು ತಂತೀ ವರ್ತಮಾನ ಕೊಟ್ಟಿರುವದರಿ ಇಂಡ್ಯಾ ಗವರ್ನಮೆಂಟಿನವರಿಂದ ಸವಾಚಾರವು ತಲ್ಪಿರುತ್ತೆ.

ತಾ|| ೨೫ನೇ ಫೆಬ್ರವರಿ ೧೮೯೭.

ನಂ|| [illegible] —ಆರ್. ಎಫ್. [illegible] —ಮೈಸೂರು ಸರ್ವೀಸ್ ರೆಗ್ಯುಲೇಷನ್‌ಗಳ ೨೫೬ನೇ ಆರ್ಟಿಕಲ್ ಅನುಸಾರ, ಚಿತ್ರದುರ್ಗ ಡಿಸ್ಟ್ರಿಕ್ಟ್ ಹಿರಿಯ ಸಬ್‌ತಾಲ್ಲೂಕ್ ಡೆಪ್ಯುಟಿ ಅಮಲ್ದಾರ್ ಎಂ. ರಘುನಾಥರಾಯರವರಿಗೆ, ಅವರು ಈಚೆಗೆ ಸಿಕ್ಕೊಳ್ಳುವ ಪ್ರಿವಿಲೇಜ್ ಮೊದಲು ಮೊಗಸುವದಕ್ಕೆ ಪರ್ಸನಲ್ ರಜಾ ಕೊಡಲ್ಪಟ್ಟಿರುತಿದೆ. ದಿವಾನರ ತಸ್ತೀಕ ಡೆ ಮದರೇಷರರು ಎಂ. ರಘುನಾಥರಾಯರವರು ರಜಾ ಮೇಲೆ ಗೈರುಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ತಮ್ಮ ಸ್ವಂತ ಕೆಲಸಗಳೊಡನೆ ಹಿರಿಯ ಸಬ್‌ತಾಲ್ಲೂಕಿನ ಆಕ್ಟಿಂಗ್ ಡೆಪ್ಯುಟಿಯಾಗಿರತಕ್ಕದ್ದು.

ಪೋರ್ಟ್‌ಫೋಲಿಯೋ ಮೈಸೂರು, ತಾ|| ೨೫ನೇ ಫೆಬ್ರವರಿ ೧೮೯೭.

ನಂ|| ೬೯೪೮ —ಮೈಸೂರು ಸರ್ವೀಸ್ ರೆಗ್ಯುಲೇಷನ್‌ಗಳ ೨೫೬ನೇ ಆರ್ಟಿಕಲ್ ಅನುಸಾರ, ಆರೋಗ್ಯರಕ್ಷಣ ಇಲಾಖಾ ಪ್ರೈವೇಟ್ ಸೆಕ್ರೆಟರಿ ಮ|| ಎಸ್. ಕೃಷ್ಣಸ್ವಾಮಿಯವರಿಗೆ ೧೮೯೭ನೇ ಜನವರಿ ಫೆಬ್ರವರಿ ೨೦ನೇ ತಾರೀಖು ಮೊದಲುಗೊಂಡು ಆ ಧರ್ಮ ಅವರು ತಾವಾಗಿಯೇ ಹಿಂತೆಗೆಯುವ ತನಕ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ.

ಮೈಸೂರು ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್ಸುಗಳು

ರೆಗ್ಯುಲೇಷನ್ ಒಂದು.

(೧೮೯೭ನೇ ಇಸವಿ ಫೆಬ್ರವರಿ ೧೧ನೇ ತಾರೀಖಿನಲ್ಲಿ ಮಂಜೂರ್ಮಾಡಲ್ಪಟ್ಟದ್ದು)

ಅಪಾಯಕರವಾದ ಅಂಟುರೋಗದ ಉತ್ಪತ್ತಿ ಯಾ ವ್ಯಾಪನೆಯನ್ನು ತಪ್ಪಿಸುವುದಕ್ಕೆ ತಕ್ಕ ನಿಯಮಗಳನ್ನು ವಿಧಿಸುವ ಕಾನೂನು

ಪೀಠಿಕೆ. ಮೈಸೂರು ದೇಶದಲ್ಲಿ ಅಪಾಯಕರವಾದ ಅಂಟುರೋಗದ ಉತ್ಪತ್ತಿ ಯಾ ವ್ಯಾಪನೆಯನ್ನು ತಪ್ಪಿಸುವದಕ್ಕೆ ತಕ್ಕ ನಿಯಮಗಳನ್ನು ವಿಧಿಸುವದು ಯುಕ್ತವಾಗಿರುವದರಿಂದ, ಶ್ರೀಮನ್ಮಹಾರಾಣೀ ರೀಜೆಂಟರವರು ಈ ಮುಂದೆ ವಿಧಿಸುವದೇನೆಂದರೆ —

೧ (i) ಈ ಕಾನೂನು ೧೮೯೭ನೇ ಇಸವಿ "ಎಪಿಡೆಮಿಕ್ ಡಿಸೀಜಸ್ ರೆಗ್ಯುಲೇಷನ್" ಎಂದು ಕರೆಯಲ್ಪಡಬಹುದು — ಹೆಸರು

(ii) ಇದು ಮೈಸೂರು ಸೀಮೆಗೆಲ್ಲ ವ್ಯಾಪಿಸುತ್ತದೆ, ಮತ್ತು — ವ್ಯಾಪ್ತಿ

(iii) ಇದು ಕೂಡಲೇ ಜಾರಿಯಲ್ಲಿ ಬರತಕ್ಕದ್ದು — ಜಾರಿ

೨ (i) ಮೈಸೂರು ದೇಶಕ್ಕೆ ಅಥವಾ ಅದರ ಒಂದು ಭಾಗಕ್ಕೆ ಯಾವದಾದರೂ ಒಂದು ಅಪಾಯಕರವಾದ ಅಂಟುರೋಗವು ಬಂದಿದೆ, ಅಥವಾ ಬರುವ ಶಂಕೆಯಿದೆ ಎಂದು ಮೈಸೂರು ಸರ್ಕಾರದವರಿಗೆ ಸಮಾಧಾನವಾಗಿ ಯಾವಕಾಲದಲ್ಲಾದರೂ ತಿಳಿಬಂದಾಗ, ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನುಗಳಲ್ಲಿನ ಸಾಧಾರಣನಿಯಮಗಳು, ಅಂಥ ರೋಗದ ಉತ್ಪತ್ತಿ ಯಾ ವ್ಯಾಪನೆಯನ್ನು ತಪ್ಪಿಸುವದಕ್ಕೆ ಸಾಲದೆಂದು ತೋರಿದಲ್ಲಿ, ಸದರೀ ಸರ್ಕಾರದವರು, ಅದಕ್ಕೆ ಆವಶ್ಯಕವೆಂದು ತಾವು ಎಣಿಸುವಂಥ ಅಮಲ್ ನಡಿಸಬಹುದು, ಮತ್ತು ಸಮಸ್ತಜನಗಳಿಂದ ಅಥವಾ ಯಾವನಾದರೂ ಒಬ್ಬ ಮನುಷ್ಯನಿಂದ ಅಥವ ಸಮುದಾಯದಿಂದ ಅನುಸರಿಸಲ್ಪಡಲು, ಅದಕ್ಕೆ ಆವಶ್ಯಕವಾಗಿ ತೋರುವ ತಾತ್ಕಾಲಿಕ ಕಾನೂನುಗಳನ್ನು ಇಸ್ತಿಹಾರ ಮೂಲಕ ವಿಧಿಯಿಸಬಹುದಲ್ಲದೆ, ತಗಲಿದ ಯಾವದಾದರೂ ಖರ್ಚು (ನಷ್ಟಪ್ರತಿಫಲವೇನಾದರೂ ಇದ್ದಲ್ಲಿ, ಅದೂ ಸಹ) ಯಾವರೀತಿಯಲ್ಲಿ ಮತ್ತು ಯಾರಿಂದ ವಹಿಸಲ್ಪಡತಕ್ಕದ್ದೆಂಬುವದನ್ನೂ ಕೂಡ ನಿರ್ಣಯಿಸಬಹುದು.

(ii) ಮೈಸೂರು ಸರ್ಕಾರದವರು, ಅಂಥ ರೋಗದ ಉತ್ಪತ್ತಿ ಯಾ ವ್ಯಾಪನೆಯನ್ನು ತಪ್ಪಿಸುವದಕ್ಕೆ ಆವಶ್ಯಕವೆಂದು ತಾನು ಎಣಿಸುವ ಅಮಲುಗಳನ್ನು ನಡಿಸುವದಕ್ಕೆ ಯಾವ ಪುರುಷನಿಗಾದರೂ ಆಜ್ಞಾಪಿಸಬಹುದು, ಅಥವಾ ಅಧಿಕಾರ ಕೊಡಬಹುದು.

(iii) ಮೇಲೆ ಹೇಳಲ್ಪಟ್ಟ ನಿಯಮಗಳ ಸಾಮಾನ್ಯ ಸ್ವಭಾವಕ್ಕೆ ವಿರೋಧವಿಲ್ಲದಂತೆ, ವಿಶೇಷವಾಗಿ ಮೈಸೂರು ಸರ್ಕಾರದವರು, ರೈಲುರಸ್ತೆ ಮೂಲಕ ಅಥವಾ ಇತರ ವಿಧದಲ್ಲಿ ಪ್ರಯಾಣ ಮಾಡುವ ಜನಗಳ ಪರೀಕ್ಷೆಯನ್ನು ಆಜ್ಞಾಪಿಸಬಹುದು, ಪರೀಕ್ಷೆ ಮಾಡುವ ಅಧಿಕಾರಿಯಿಂದ ಅಂಥ ರೋಗ ಸೋಕಿದವರೆಂದು ಊಹಿಸಲ್ಪಡುವ ಜನಗಳನ್ನು ಆಸ್ಪತ್ರೆಗಳಲ್ಲಿ, ಅಥವಾ ಹಂಗಾಮಿ ವಾಸಸ್ಥಳಗಳಲ್ಲಿ ಯಾ ಇತರ ವಿಧವಾಗಿ ಪ್ರತ್ಯೇಕಿಸಿ ಇಡುವದಕ್ಕೂ ಅಮಲು ನಡಿಸಬಹುದು ಮತ್ತು ಕಾನೂನುಗಳನ್ನು ವಿಧಾಯಿಸಬಹುದು.

೩ ಈ ಕಾನೂನು ಅನುಸರಿಸಿ ಮಾಡಲ್ಪಟ್ಟ ಯಾವ ಕಾನೂನು ಯಾ ಹುಕುಮನ್ನಾಗಲೀ ಉಲ್ಲಂಘಿಸುವ ಮನುಷ್ಯನು, ಇಂಡಿಯನ್ ಪೀನಲ್ ಕೋಡಿನ ೧೮೮ನೇ ಸೆಕ್ಷನ್ ಮೇರೆಗೆ ಶಿಕ್ಷಿಸಲ್ಪಡಬಹುದಾದ ತಪ್ಪನ್ನು ಮಾಡಿದಂತೆ ಎಣಿಸಲ್ಪಡುವನು.

೪ ಈ ಕಾನೂನು ಅನುಸರಿಸಿ ಮಾಡಲ್ಪಟ್ಟದ್ದಕ್ಕಾಗಿ, ಅಥವಾ ಸದುದ್ದೇಶದಿಂದ ಮಾಡಲುದ್ದೇಶಿಸಲ್ಪಟ್ಟದ್ದಕ್ಕಾಗಿ, ಯಾವ ಮನುಷ್ಯನಮೇಲೂ, ದಾವಾ ಅಥವಾ ಇತರ ನ್ಯಾಯವ್ಯವಹರಣೆಯು ಮಾಡಲ್ಪಡಕೂಡದು.

SUMMARY OF NEWS.

ವೃತ್ತಾಂತ ಸಂಗ್ರಹವು.

ನಮ್ಮ ಮೈಸೂರಿನ ಲಕ್ಷ್ಮಿ ಎಲ್ಗಿನ್ ದೊರೆಯವರ ಪತ್ನೀಯವರು ಕಳೆದ ೧೯ನೇ ತಾರೀಖ್ ಸಾಯಂಕಾಲ ಗಂಡುಮಗುವನ್ನು ಪ್ರಸವಿಸಿದರೆಂತಲೂ, ಮಗುವೂ ಬಾಣಂತಿಯೂ ಆರೋಗ್ಯವಾಗಿದ್ದಾರೆಂತಲೂ ತಿಳಿಸಲು ಹರ್ಷಿಸುತ್ತೇವೆ.

ರಂಗೂನ್ ಪಟ್ಟಣದಲ್ಲಿ ಭತ್ತವನ್ನು ಅಕ್ಕಿ ಮಾಡುವ ಭಾರಿ ಕಾರ್ಖಾನೆಗಳಿರುತ್ತವೆ. ಅವುಗಳಲ್ಲೊಂದು ಬೆಂಕಿಯಿಂದ ಹೋದ ವಾರ ಸುಟ್ಟುಹೋಯಿತು. ಸುಮಾರು ಮನೆಗಳೂ ಕೆಲವು ದೇವಸ್ಥಾನಗಳೂ ದೋಣಿಗಳೂ ಒಂದು ದೊಡ್ಡ ಸೇತುವೆಯೂ ಸುಟ್ಟುಹೋದವು. ಸುಮಾರು ೪–೫ ಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿ ನಷ್ಟವಾಯಿತಂತೆ.

ಒರಿಸ್ಸಾ ದೇಶದಲ್ಲೊಂದು ಭಾರೀಪಟ್ಟಣದ ಮೂಲಕ ಅಲ್ಲಿ ಸರ್ಕಾರದವರು ಪ್ರಜೆಗಳ ಆದಾಯದ ಮೇಲೆ ಇನ್‌ಕಂಟ್ಯಾಕ್ಸ್ ಎಂಬ ಹೊಸ ತೆರಿಗೆಯನ್ನು ಹಾಕಿದರು. ಪ್ರಜೆಗಳೆಲ್ಲ ಈ ಹುಕುಮಿಗೆ ಪ್ರತಿಭಟಿಸಿ ಒಂದು ಸಭೆಯನ್ನು ಮಾಡಿ ತಮ್ಮ ಪಟ್ಟಣದಲ್ಲಿ ಈ ವಿಧವಾದ ಕಂದಾಯವನ್ನು ಇನ್ನೂ ಕೆಲವುಕಾಲ ಹಾಕಕೂಡದೆಂದು ತೀರ್ಮಾನಿಸಿ ತಮ್ಮ ಅಭಿಪ್ರಾಯವನ್ನು ಸರ್ಕಾರದವರಿಗೆ ತಿಳಿಯಪಡಿಸಿರುತ್ತಾರೆ.

ಸಭಾ ಸಂಸ್ಥಾನಾಧಿಪತಿಗಳವರು ತಮ್ಮ ರಾಜ್ಯದಲ್ಲಿ ವಿತಂತು ವಿವಾಹವನ್ನು ಪ್ರಚಾರದೊಳಗೆ ತರಬೇಕೆಂಬ ಸಂಕಲ್ಪವುಳ್ಳವರಾಗಿ ವಿತಂತುಗಳ ಸಂಖ್ಯೆಯನ್ನು ಕಂಡುಹಿಡಿಯತಕ್ಕದ್ದಕ್ಕೆ ಬೇಕಾಗುವ ಲೆಕ್ಕವನ್ನು ತಯಾರಿಸುವಂತೆ ಹುಕುಂ ಮಾಡಿರುತ್ತಾರೆಂತಲೂ, ಸ್ತ್ರೀ ಪುನರ್ವಿವಾಹ ವಿಷಯದಲ್ಲಿ ಕಾರ್ಯತತ್ಪರರಾದ ಜನಗಳಿಗೆ ಪ್ರೋತ್ಸಾಹಕರವಾಗಿ ನಡಿಸತಕ್ಕವರಿಗೆ ಸಂಸ್ಥಾನದಿಂದ ಬೇಕಾದ ಸಹಾಯಗಳು ಕಲ್ಪಿಸಲ್ಪಡುವವೆಂದು ಪ್ರಕಟಿಸಿರಂತಲೂ ತಿಳಿಯಬರುತ್ತದೆ.

ಕಾಶೀನಗರ ಪಟ್ಟಣಕ್ಕೆ ಒಳ್ಳೆ ಕುಡಿಯುವ ನೀರನ್ನು ತಂದು ಒದಗಿಸುವದಕ್ಕಾಗಿ ೩ ಲಕ್ಷ ರೂಪಾಯಿ ಖರ್ಚಾಗುತ್ತದೆಂದು ಸರ್ಕಾರದವರು ಅಂದಾಜ್ ಮಾಡಿದರು. ಈ ಪೈಕಿ ಅಲ್ಲಿನ ಒಬ್ಬ ದೊಡ್ಡ ಮನುಷ್ಯರು ೬೫,೦೦೦ ರೂಪಾಯನ್ನು ಧರ್ಮಾರ್ಥವಾಗಿ ಕೊಡುತ್ತೇನೆಂದು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಸರ್ಕಾರದವರು ಉಳಿದ ಹಣವನ್ನು ಅನಾಮತ್ತಾಗಿಯೂ ಉನ್ನತಿಯನ್ನು ಸಾಲವಾಗಿಯೂ ಕೊಡುವದಕ್ಕೆ ಒಪ್ಪಿಕೊಂಡರು. ಕಾಮಗಾರಿಗಳು ಆಗಲೇ ಪ್ರಾರಂಭವಾಗಿವೆ ಎಂದು ತಿಳಿದುಬಂದಿದೆ.

ತಿರುವಳ್ಳೂರು ಶ್ರೀ ಅಹೋಬಿಲ ಸ್ವಾಮಿಗಳವರು ತಮ್ಮ ಮಠಕ್ಕೆ ಸೇರಿದ ಹತ್ತು ಸಾವಿರ ರೂಪಾಯಿಗಳ ಕ್ರಯವುಳ್ಳ ಬಂಗಾರದ ತೊಟ್ಟಿಲನ್ನು ಕಾರುವಾರಿನ ರೂಪಾಯಿಗಳಿಗೆ ಒತ್ತೆ ಬೇರೆ ಪ್ರಾಂತದಲ್ಲಿ ಮಾರಿ ಆ ಧನವನ್ನು ಸ್ವಂತಕ್ಕೆ ಉಪಯೋಗಿಸಿಕೊಂಡರೆಂದು ಈಚೆಗೆ ಅವರಮೇಲೆ ಸೇಲಂ ಡಿಸ್ಟ್ರಿಕ್ಟ್ ಸಬ್‌ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಚೋರಿ ಮತ್ತು ದುರುಪಯೋಗ ನಡಿಸಿಕೊಂಡರೆಂಬ ತಪ್ಪಿಗಾಗಿ ಫಿರ್ಯಾದು ಮಾಡಲ್ಪಟ್ಟು ಕಡೆಗೆ ಮೊಕದ್ದಮೆಯು ಮ್ಯಾಜಿಸ್ಟ್ರೇಟರಿಂದ ತಳ್ಳಿಹಾಕಲ್ಪಟ್ಟಿತು. ಫಿರ್ಯಾದಿಗಳು ಪುನರ್ವಿಮರ್ಶೆಗಾಗಿ ಡಿಸ್ಟ್ರಿಕ್ಟ್ ಜಡ್ಜಿಯವರಿಗೆ ಮರಳಿ ಅರ್ಜಿ ಕೊಟ್ಟಿರುತ್ತಾರೆಂದು ತಿಳಿಯಬರುತ್ತದೆ.

ಕ್ಷಾಮನಿವಾರಕ ಸಂಘಕ್ಕೆ ಕಳೆದ ತಿಂಗಳ ೨೦ನೇ ತಾರೀಖಿನವರೆಗೆ ೩೯ ಲಕ್ಷ ೩೩ ಸಾವಿರ ರೂಪಾಯಿಗಳು ಚಂದಾ ಮಾಡಲ್ಪಟ್ಟು ವಸೂಲಾಗಿರುತ್ತದೆ. ಈ ಸಾಯ್ಯ ನೈತ್ಯ ಕೋಟಿ ರೂಪಾಯಿಗಳ ತನಕ ಅಂದಾಜ್ ಮಾಡಲ್ಪಟ್ಟಿರುತ್ತದೆ. ಅಷ್ಟು ಮಟ್ಟಿಗೆ ವಸೂಲಾಗುವದೆಂಬುದಕ್ಕೆ ಸಂದೇಹವಿಲ್ಲ ಎಂದು ಹೇಳುತ್ತಾರೆ. ಈಗ ಇಂಡಿಯಾ ದೇಶದಲ್ಲಿ ಸರ್ವತ್ರ ೫೩ ಲಕ್ಷ ೫೩ ಸಾವಿರ ಜನರು ಕ್ಷಾಮ ನಿವಾರಕ ಕಾಮಗಾರಿಗಳನ್ನು ನಡಸಿ ದೊರೆಯುವ ಕೂಲಿಯಿಂದ ಜೀವಿಸುತ್ತಲಿದ್ದಾರೆ. ೫ ಲಕ್ಷ ೫೫ ಸಾವಿರ ಜನರು ಕೆಲಸ ಮಾಡುವದಕ್ಕೆ ಅಶಕ್ತರಾಗಿ ಧರ್ಮಾರ್ಥ ರಕ್ಷಿಸಲ್ಪಡುತಲಿದ್ದಾರೆ.

ಹೆಸರು	ರಿಲೀಫ್ ಕಾಮಗಾರಿ ಮಾಡುವವರು	ಧರ್ಮಾರ್ಥ ರಕ್ಷಿಸಲ್ಪಡುವವರು
ಮದರಾಸ	13,000	11,000
ಮುಂಬೈ	3,12,000	16,000
ಬಂಗಾಳ	9,00,000	1,04,000
ವಾಯವ್ಯ ದೇಶ	12,50,000	2,79,000
ಪಂಜಾಬ್	78,000	30,000
ಮಧ್ಯರಾಷ್ಟ್ರಗಳು	20,38,000	68,000
ಬರ್ಮಾದೇಶ	23,000	3,000
ಬೀರಾರ್	5,000	
ಮಧ್ಯ ಇಂಡಿಯಾ	90,000	4,000
ರಜಪುತ್ರಸಂಸ್ಥಾನಗಳು	19,000	9,000

EXTRACT

ರಷ್ಯಾದೇಶದ ಈಗಿನ ಚಕ್ರವರ್ತಿ ಕಳೆದ ೧೮೯೬ನೇ ಇಸವಿಯಲ್ಲಿ ಸಿಂಹಾಸನಕ್ಕೆ ಬಂದು ಇಲ್ಲಿಂದ ಪೆಸಿಫಿಕ್ ಮಹಾಸಾಗರದ ಉತ್ತರ ಭಾಗವಾದ ಸೈಬೀರಿಯಾದ ಒಂದು ರೈಲ್ವೆರಸ್ತೆ ಹಾಕುವದಕ್ಕೆ ವ್ಲಾಡಿವೋಸ್ಟಾಕ್ ಪಟ್ಟಣದಲ್ಲಿ ಅಸ್ತಿವಾರವನ್ನು ಹಾಕಿಸಿದರು. ಈ ರೈಲ್ವೆರಸ್ತೆಯು ೫,೦೦೦ ಮೈಲಿ ದೂರವಾಗುತ್ತೆ. ಬರುವ ೧೯೦೨ನೇ ಇಸವಿಯಲ್ಲಿ ಕಾಮಗಾರಿಯಲ್ಲ ಪೂರೈಸಿ ರೈಲನ್ನು ಬಿಡುತ್ತಾರೆಂದು ವರ್ತಮಾನವಿದೆ. ಈ ರೈಲು ರಸ್ತೆಯು ಸರ್ವಕ್ಕೆ ಕಾಲಿನಲ್ಲಿ ಇದಾದ್ದರಿಂದ ಮುಂದಕ್ಕೆ ಇದರಿಂದ ರಷ್ಯಾ ಚಕ್ರವರ್ತಿಗಳಿಗೆ ನಾನಾ ವಿಧಗಳಲ್ಲಿ ಸಹಾಯಕಾರಿಯಾಗಿ ಪರಿಣಮಿಸುವದು. ಇದಕ್ಕೆ ರಷ್ಯಾ ಸರ್ಕಾರದವರೇ ಹಣ ಕೊಟ್ಟು ರಸ್ತೆ ಹಾಕಿಸುತ್ತಿದ್ದಾರೆ. ಒಟ್ಟು ಸುಮಾರು ೫೦ ಕೋಟಿ ರೂಪಾಯಿ ಖರ್ಚಾಗಬಹುದೆಂದು ಊಹಿಸಲ್ಪಟ್ಟಿದೆ. ಇಷ್ಟು ವಿಸ್ತಾರವಾದ ರೈಲುರಸ್ತೆಯು ಪ್ರಪಂಚದ ಇನ್ಯಾವ ಕಡೆಯಲ್ಲೂ ಇಲ್ಲ. ಘಂಟೆಗೆ ೨೦ ಮೈಲಿನಂತೆ ರಾತ್ರಿ ಹಗಲು ಪ್ರಯಾಣಮಾಡಿದರೆ ರಷ್ಯ ರಾಜಧಾನಿಯಿಂದ ವ್ಲಾಡಿವೋಸ್ಟಾಕ್ ಪಟ್ಟಣಕ್ಕೆ ಹತ್ತು ಹಗಲು ರಾತ್ರಿಗಳಲ್ಲಿ ತಲಪಬಹುದು. ಈ ರಸ್ತೆಯನ್ನು ೫ ಭಾಗಗಳಾಗಿ ವಿಂಗಡಿಸಿಕೊಂಡು ಕೆಲವು ಗುಂಪಿನವರು ಅತ್ಯಾತುರವಾಗಿ ಕೆಲಸ ಮಾಡುತಿದ್ದಾರೆ. ಕಳೆದ ೧೮೯೬ನೇ ಇಸವಿಯಿಂದ ರಷ್ಯಾದೇಶದ ಪ್ರಜೆಗಳು ಗುಂಪು ಗುಂಪಾಗಿ ಸಂಸಾರ ಸಮೇತ ತಮ್ಮ ಮನೆ ಮಠಗಳನ್ನು ಬಿಟ್ಟು ಈ ರೈಲುರಸ್ತೆ ಹಾಕಲ್ಪಡುತಲಿರುವ ಪ್ರದೇಶಗಳಲ್ಲಿ ಬಂದು ನಿಂತು ವ್ಯವಸಾಯಾದಿಗಳನ್ನು ಮಾಡುತಲೂ ರಸ್ತೆ ಕಾಮಗಾರಿಯನ್ನು ನಡಿಸುತಲೂ ಇರುವರು. ಇವರ ಸಂಖ್ಯೆಯು ಈಗ ೫ ಲಕ್ಷವೆಂದು ಗೊತ್ತಾಗಿದೆ. ಹೀಗೆ ಸೈಬೀರಿಯಾಕ್ಕೆ ಹೋಗಿ ನಿಲ್ಲುವಂತವರಿಗೆಲ್ಲ ಸರ್ಕಾರದವರು ೧೦೦ ಮೈಲಿಗೆ ೪ ಆಣೆಯಂತೆ ರೈಲ್ ಚಾರ್ಜನ್ನು ಕಡಮೆ ಮಾಡಿರುತ್ತಾರೆ. ಅವರು ಬಂದು ಈ ಕಾಡಿನಲ್ಲಿ ನಿಂತು ವಾಸವಾಗುತ್ತೇವೆಂದು ಹೇಳಿದರೆ ಅಂತವರಿಗೆ ಸರ್ಕಾರದವರು ಪ್ರತಿಯೊಬ್ಬನಿಗೂ ೪೦ ಎಕರೆ ಜಮೀನನ್ನು ಬಿಟ್ಟುಕೊಡುವರು. ಆದರೆ ಈ ಜಮೀನು ಸರ್ಕಾರದ್ದೆಂತಲೂ ಅದನ್ನು ಮಾಲೀಕನು ಅನ್ಯಾಕ್ರಾಂತ ಮಾಡಕೂಡದೆಂತಲೂ ಒಪ್ಪಿಸಿ ಕೊಟ್ಟಿರುತ್ತಾರೆ. ಕೆಲವು ಕಡೆಗಳಲ್ಲಿ ಬೇಕಾದವರಿಗೆ ಜಮೀನನ್ನು ಸುಲಭ ಖರೀದಿಗೆ ಮಾರುತಲೂ ಅವರು ನಿಂತು ವ್ಯವಸಾಯಾದಿಗಳನ್ನು ಮಾಡಿಕೊಳ್ಳುವದಕ್ಕೆ ಅನುಕೂಲವಾಗುವಂತೆ ಸಲೀಸಾಗಿ ಸಾಲ ಕೊಡುತಲೂ ಬರುತ್ತಾರೆ. ಇದರಿಂದ ಈ ರೈಲುರಸ್ತೆಯು ಮುಂದೆ ರಷ್ಯಾದವರಿಗೆ ಬಹು ಪ್ರಯೋಜನಕರವಾಗುತ್ತೆನ್ನುವದಕ್ಕೆ ಸಂಶಯವಿಲ್ಲ. ಇದಲ್ಲದೆ ಈ ದೇಶಕ್ಕೆ ರಸ್ತೆಯಿಂದ ಸೀರಿಯಾ ಕಡೆ ಚೀನಾ ಮುಂತಾದ ಪಟ್ಟಣಗಳಿಗೆ ರೈಲು ಶಾಖೆಗಳನ್ನು ಹಾಕುತ್ತಿರುವರು. ಇವೆಲ್ಲ ಪೂರೈಸಿದ ಮೇಲೆ ೮ ಸಾವಿರ ಮೈಲು ಆಗುತ್ತಾ ದೀರ್ಘವಾದ ರಸ್ತೆಯಾಗಿ ನೆಲೆಗೊಳ್ಳುವದು. ಆಗ ಅವರು ಇತರ ರಾಜ್ಯಗಳನ್ನು ಸ್ವಾಧೀನ ಮಾಡಿಕೊಳ್ಳಲು ಅನುಕೂಲವಾಗುವದೆಂತಲೂ ಚೀನಾ, ಜಪಾನ್ ಮುಂತಾದ ರಾಜ್ಯದವರು ಇನ್ನುಮೇಲೆ ಸಹಾಯ ಮಾಡಿದಲ್ಲಿ ರಷ್ಯಾ ಚಕ್ರವರ್ತಿಯವರು ಈ ಖಂಡದಲ್ಲೆಲ್ಲ ಸರ್ವಾಧಿಪತ್ಯ ಹೊಂದುವರೆಂತಲೂ ಅನೇಕರು ಹೇಳುತ್ತಾರೆ.

ನೋಟೀಸ್

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕಮಿಷನರ್

ರೇಟ್ಸ್ ಮತ್ತು ತೆರಿಗೆಗಳ ವಸೂಲಾತಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ —

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯ ರೇಟ್ಸ್ ಯಾ ದರ ಮತ್ತು ತೆರಿಗೆಗಳ ವಸೂಲಿಗೆ ಕಲೆಕ್ಷನ್ ಅಧಿಕಾರವು ಶ್ರೀಮಾನ್ ಪಟ್ಟೀಯವರು ಉನ್ನತಿ ವಿಸುತ್ತಾರೆ. ಆಗಿ ಬೆಂಗಳೂರು ಸಿಟಿ ಮ್ಯುನಿಸಿಪಲ್ ರೆಗ್ಯುಲೇಷನಿನ 82, 83, 87 ನೇ ಸೆಕ್ಷನ್‌ಗಳಿಗೆ ನಿಗಾ ಕೊಡಬೇಕು. ಸದರೀ ಸೆಕ್ಷನ್‌ಗಳು ತಿಳುವಳಿಕೆಗಾಗಿ 1897 ನೇ ಇಸವಿ ಫೆಬ್ರವರಿ ಮಾಹೆ 4ನೇ ಮರ್ಕ್ಯುರಿ ನ ಗೆಜೆಟ್ ನ್ಯಾಯಾ, ನ ತ್ತ ಅದೇ ತಿಂಗಳಲ್ಲಿ ತದನಂತರ ಪ್ರಕಟಿಸಲ್ಪಡುವ ಗೆಜೆಟುಗಳಲ್ಲಿಯೂ ಪ್ರಕಟಿಸಲ್ಪಡುತ್ತವೆ. ಬಿಲ್ಲು ತೋರಿಸಿದ ಕೂಡಲೇ ಅದರಲ್ಲಿ ಕಂಡ ಮೊಬಲಗು ಬಾಕಿ ಮಾಡದಿರುವ ಪಕ್ಷಕ್ಕೆ ಸದರೀ ಮೊಬಲಗನ್ನು ಏಳು ದಿನಗಳೊಳಗಾಗಿ ಕಲೆಕ್ಷನ್ ಆಫೀಸರವರಲ್ಲಿ ಕಳುಹಿಸಿಕೊಡತಕ್ಕದ್ದು. ಹಾಗೆ ಕಳುಹಿಸಲು ತಪ್ಪಿಹೋದ ಪ್ರತಿ ಪ್ರಬ್ಬರೂ ತಗಾದೆ ನೋಟಿಸು ಮತ್ತು ಜಪ್ತಿ ವಾರಂಟುಗಳು ಸಹ ಜಾರಿಮಾಡಿಸಿಕೊಳ್ಳಲು ಮತ್ತು ಇವುಗಳ ಮೂಲಕ ಉಂಟಾಗುವ ಹೆಚ್ಚು ಖರ್ಚುಗಳಿಗೂ ಗುರಿಯಾಗುತ್ತಾರೆ.

T. J. LEONARD,
President,
City Municipal Commission

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ

ಇಲಿಗಳು ಮೊದಲಾದವುಗಳನ್ನು ಕೊಂದಾಗಲಿ, ಜೀವದೊಂದಿಗಾಗಲಿ ಕೆ ೧೨ಟೆಯೊಳಗಿರುವ ಸಿಟಿ ಮ್ಯುನಿಸಿಪಲ್ ಆಫೀಸಿನಲ್ಲಿ ಹಗಲು ೧೦ ಘಂಟೆಯ ಮೇಲೆ ಸಾಯಂಕಾಲ ೫ ಘಂಟೆಯ ಒಳಗಾಗಿ ಹಾಜರ್ಮಾಡುವವರಿಗೆ ಇದರಡಿ ತಿಳಿಸಲ್ಪಡುವಂತೆ ಇನಾಂಗಳು ಕೊಡಲ್ಪಡುವವೆ —

ಹೆಗ್ಗಣಗಳು ಡಜನ್ ಒಕ್ಕೆ ೮ ಆಣೆ

ಇಲಿಗಳು ,, ,, ೩ ,,

ಸುಂಡಿಲಿಗಳು ,, ,, ೨ ,,

ಸಿಟಿ ಮ್ಯುನಿಸಿಪಲ್ ಆಫೀಸ್ ಬೆಂಗಳೂರು ೧೯ನೇ ಫೆಬ್ರವರಿ ೧೮೯೭. } T. J. LEONARD, *President Muni. Commission Bangalore City*

NOTICE.

VIDYASARA SANGRAHA.

A TREATISE ON THE PRINCIPLES OF

HINDU MEDICINE

Price, including Postage Rs 5–0–0

ವೈದ್ಯಸಾರಸಂಗ್ರಹ

ಇದು ಆರಳ, ಟೀಕಾ, ಸಂಸ್ಕೃತ ಬಹುಗ್ರಂಥ ವ್ಯಾಸಂಗ ಪೂರ್ವಗ್ರಂಥಗಳ ಸಂಗ್ರಹ ರೂಪವಾಗಿರುತ್ತದೆ

ಇದರ ಕ್ರಯ — ಪ್ಯಾಕಿಂಗ್ ಮತ್ತು ಅಂಚೆ ಹಾಸಲ್ ಸೇರಿಸಿ ಪ್ರತಿ ಒಕ್ಕೆ ೫—೦—೦

ಬೇಕಾದವರು ಬೆಂಗಳೂರು ಕರ್ನಾಟಕ ಪ್ರೆಸ್ ಪ್ರೊಪ್ರೈಟರವರಿಗೆ ಬರೆದು ತರಿಸಿಕೊಳ್ಳಬಹುದು

ಈ ಕಂಪನಿಯು ೧೮೯೭ನೇ ಇಸವಿಯಲ್ಲಿ ಸ್ಥಾಪಿತವಾಯಿತು

ಜನ್ಮದ ಲಾಭವು.

ಮಹಾರಂಗ ಬಜಾರವು.

ಬಲಾರೋಗ್ಯ ಪುಷ್ಟಿಗಳನ್ನು ಬೆಳೆಸತಕ್ಕ ಉತ್ಪತ್ತಿಯು

ಅತ್ಯಾಶ್ಚರ್ಯಕರವಾದ ಬಳ್ಳಿಗಳಿಂದ ತಯಾರಿಸಿದ ಈ ಉತ್ಪತ್ತಿಗಳು ಕೊಂಕಣದೇಶಾಂತರದ ಅನೇಕ ವನಸ್ಪತಿಗಳ ಬೀಜಗಳ ಪುಡಿಗಳನ್ನು ಕೊಟ್ಟು ದೇಶದೊಳಗೆ ಮಾರಿ, ಒಳ್ಳೇ ಜೇನ್ನಿನ ತರಗತಿಯ ಸಕ್ಕರೆಯ ಪಾಕದಲ್ಲಿ ಸಿದ್ಧಮಾಡಿರುತ್ತೇವೆ. ಈ ಉತ್ಪತ್ತಿಗಳು ಮಹಾ ರುಚಿಗಳಾಗಿದ್ದು, ಒಳ್ಳೇ ರುಚಿಯುಳ್ಳವಾಗಿವೆ. ಇವುಗಳ ಸೇವನೆಯಿಂದ ಕಫ, ವಾತ, ಪಿತ್ತ ಈ ತ್ರಿದೋಷಗಳು ಬರತಕ್ಕ ಯಾವತ್ತು ಬಗೆಯ ವ್ಯಾಧಿಗಳೂ ಹೋಗುತ್ತವೆ. ೬೦ ವರ್ಷಗಳ ವೃದ್ಧಾಪ್ಯದ ಮುದುಕರ ಶರೀರವು ಕಾಂತಿಯುಳ್ಳವರಾದರೂ ಹರೆಯದ ಗಂಡಸರಂತೆ ಪ್ರಜ್ವಲಿತವಾಗುತ್ತಾರೆ. ಜನನೇಂದ್ರಿಯದಲ್ಲಿ ಬಲ ಹುಟ್ಟಿ ನಪುಂಸಕತ್ವವು ಇಲ್ಲದಂತಾಗುತ್ತದೆ. ಲಘ್ವಿಯ ಮುಂದೆ ಅಥವಾ ಹಿಂದೆ ಸರಿದುಹೋಗುವ ಧಾತು ನಿಲ್ಲುತ್ತದೆ. ಸ್ವಪ್ನಾವಸ್ಥೆಯಾಗುವದಿಲ್ಲ. ವೀರ್ಯವು ಬೆಳೆದು ಮೈ ಬಣ್ಣವು ಸುಧಾರಿಸುತ್ತದೆ. ಪರಮ ಹಾನಿ ಉಷ್ಣಸಂಬಂಧಿ ಬೇನೆಗಳಿಲ್ಲದಂತಾಗಿ ಧಾತು ಪುಷ್ಟವಾಗುತ್ತದೆ. ಮೂರು ಜೊತ್ತುಂಡರೂ ಅನ್ನ ಪಚನವಾಗಿ ಒಳ್ಳೇ ಹಸಿವೆಯಾಗುತ್ತದೆ. ಹೋಗುವದರಿಂದ ತಡ ಕೊಡಲೇ ಸ್ವಚ್ಛ ಸೌಖ್ಯವಾಗುತ್ತದೆ. ಕ್ಷಯ, ಉದರ, ದಮ್ಮು ಈ ರೋಗಗಳು ನಾಶ ಹೊಂದುತ್ತವೆ. ಹೊಸ ಬೇನೆ ಇದ್ದಲ್ಲಿ ೧೧ ದಿವಸಗಳ ವರೆಗೆ ಸಾಲುವ ಒಂದೇ ಡಬ್ಬಿಯಿಂದ ಗುಣವುಂಟಾಗುತ್ತದೆ. ಮತ್ತು ಹಳೆಯದ್ದಲ್ಲಿ ೪೦ ದಿನಗಳ ಮೇಲೆ ಗುಣ ಬಂದೀತು. ೧೧ ದಿನಗಳ ವರೆಗೆ ಸಾಲತಕ್ಕ ೧ ಡಬ್ಬಿಗೆ ೧–೪–೦ ರೂ‖ ಒಂದೇ ವ್ಯಕ್ತಿಗೆ ೪ ಡಬ್ಬಿಗಳು ತೆಗೆದುಕೊಳ್ಳತಕ್ಕವರಿಗೆ ಒಂದು ಡಬ್ಬಿಯು ಉಚಿತವಾಗಿ ಸಿಕ್ಕೀತು. ಈ ಉತ್ಪತ್ತಿಯಿಂದ ಹೆಂಗಸರು ಸತೇಜರಾಗುತ್ತಾರೆ. ಕರಗಿನ ಹಾಗೂ ಏಕಾಂತ ಬೇನೆಗಳು ವಾಸಿಯಾಗುತ್ತವೆ. ಎಲ್ಲರನ್ನು ಸರಿಯಾಗಿ ಬೇನೆ ಇಲ್ಲದವರನ್ನಾಗಿ ಮಾಡಿ ಬಲಾರೋಗ್ಯ ಪುಷ್ಟಿಗಳನ್ನು ಬೆಳೆಸುತ್ತವೆ. ಸಾಹೇಬ್ ಜನರಲ್ಲಿ ಬಹಳ ಡಬ್ಬಿಗಳು ಖರ್ಚಾಗುತ್ತವೆ. ಈ ಔಷಧವು ಈ ಕಂಪೆನಿಯ ಹೊರ್ತು ಬೇರೆ ಸ್ಥಳದಲ್ಲಿ ಸಿಗುವದಿಲ್ಲ. ಯಾವತ್ತು ದೇಶಗಳಲ್ಲಿಯೂ ವೈದ್ಯಶಾಲೆಗಳಿಗಾಗಿ ಕಳುಹಿಸಲ್ಪಡುತ್ತದೆ. ಬರೆದು ಬಂದ ಕೂಡಲೆ ಈ ಕಂಪೆನಿಯು ಬೇಕಾದವರಿಗೆ ಈ ಡಬ್ಬಿಗಳು ಕಳುಹಿಸಿಕೊಟ್ಟೀತು. ಅಂಚೆಯ ಹಾಗೂ ವ್ಯಾಲ್ಯೂ ಪೇಯಬಲ್ ವೆಚ್ಚ ಬೇರೆ ಕೊಡಬೇಕು. (ಉಚಿತ ಡಬ್ಬಿ ಸಹ ೪ ಡಬ್ಬಿಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬಿಯಾದಲ್ಲಿ ಎಲ್ಲಾ ಖರ್ಚಿನ ಹಾನಿ ರವಾನಿಸುವೆವು, ಹೀಗೆ ಕಳುಹಿಸಿದರೆ ಪಾರ್ಸೆಲ್ ಖರ್ಚು ಕಡಮೆ ಬೀಳುವದು)

ಮೇಲ್ವಿಳಾಸ—ಪಿ ಎಲ್ ಎ ಬ್ರದರ್ಸ್ ಮತ್ತು ಕಂಪೆನಿ,

ಫಸ್ಟ್ ಇಂಗ್ಲಿಷ್ ಬ್ರ್ಯಾಂಚ್ ಆಫೀಸ್, ಡಿಸ್ಟ್ರಿಕ್ಟ್ ಬೆಳಗಾಂವ

ಪೋಸ್ಟ್—ಬೆಳಗಾಂವ. Post BELGAUM.

BANGALORE —Printed and Published at the KARNATAKA PRESS, No 40, HOSPITAL ROAD, CITY,—1897

THE

Karnataka Prakasika.

ಪ್ರತಿಕೆಯ ಬಿಡಿ { ಮೊದಲನೆಯದಕ್ಕೆ ಪ್ರತಿ ಒಂದಕ್ಕೆ 0 2 0 | ಎರಡನೆಯ ದರ್ಜೆ ಪ್ರತಿ ಒಂದಕ್ಕೆ 0 1 0
[ಇಸ್ತಿಹಾರು ಎಂದಾವರ್ತಿಗಿಂತ ಜಾಸ್ತಿಯಾಗಿ ಪ್ರಕಟಿಸುವ ಬಗ್ಗೆ ಒಂದಕ್ಕೆ ೧ ಆಣೆ ಯಂತೆಯೇ ಲೆಕ್ಕ ಮಾಡಲ್ಪಡುವದು]

ಕರ್ನಾಟಕ ಪ್ರಕಾಶಿಕಾ.

Published Every Monday Morning

ಚಂದಾದರಗಳು —ಸ್ಥಳದವರಿಗೆ, | ಪರಸ್ಥಳದವರಿಗೆ, ಪೋಸ್ಟೇಜ್ ಸಹ
ಸಾಲ್ 1 ಕ್ಕೆ ... 3 0 0	ಸಾಲ್ 1 ಕ್ಕೆ ... 4 0 0
6 ತಿಂಗಳಿಗೆ, ... 2 0 0	6 ತಿಂಗಳಿಗೆ ... 2 8 0
3 ತಿಂಗಳಿಗೆ, ... 1 4 0	3 ತಿಂಗಳಿಗೆ ... 1 8 0

ಗ್ರಹಾಮಯವಿವಿಧಪ್ರವೃತ್ತ್ಯುದಗಮಾರ್ಥ ಕರ್ನಾಟಕಪ್ರಕಾಶನದಾಬಿಧಪತ್ರಿಕಾ ... ಸಜ್ಜನಸ್ತುತ್ಯ ... ಸಂಮತಾಮ್ ॥

Vol. XXIV. BANGALORE:—MONDAY, MARCH 8, 1897. No. 10.

ADVERTISEMENTS.

NOTICE

Fresh sealed tenders will be received by the undersigned for the supply of Bombay Wheat Bran to the Remount Depot, Hosur, from 1st April 1897 to 31st March 1898, at 12 noon on Saturday the 13th March 1897.

Remount Depot }
Hosur } T. WANN Captain,
3rd March 1897 } for Supdt, Remount Depot

Select Telegrams.

London, 28th February Morning.—By order of the Czar, a special night was given at the opera house at St. Petersburg to-night in aid of the Indian famine.

London, 2nd March.—The Indian Famine Relief Fund totals £1,360,000.

London, 1st March.—Mr Curzon, replying to a question in the House of Commons said that the British Consul at Seoul reports that Russian officers are drilling Corean troops but that this was hardly inconsistent with the pledge given by Russia.

London, 1st March.—Another hitch has taken place regarding the wording of the joint collective Note of the Powers to Greece, which has, therefore not been delivered yet.

Latest advices from Crete state that the insurgents have captured the fort and village of Candanos, with three thousand Turks, including three hundred Turkish Regulars.

The Greek Consul at Canea has gone to Selino to intercede for the Turks who are there, and also for the prisoners at Candano.

Lord Roberts, in giving his evidence before the Welby Commission, said he was convinced there was no preponderance of the Military element in the Viceregal Council. His Lordship also said that the English Government should pay both the ordinary and the extraordinary expenses of troops borrowed from India for Imperial purposes. He considered that the Indian Army was remarkably efficient, but was in need of more British Officers.

London, 1st March.—The Powers have presented a collective note at Constantinople and a similar one at Athens declaring Crete to be an autonomous State under the suzerainty of the Sultan, and also demanding that the Greek forces shall evacuate Crete within six days.

Lord Salisbury, replying to a question in the House of Lords said that the Powers had agreed to the British proposals except the one regarding the withdrawal of the Turkish troops from Crete.

Mr Curzon, replying to a question in the House of Commons, said that union with Greece was impossible in the face of the present attitude of the Powers. The Turkish gendarmes at Canea have mutinied and shot their Colonel. Foreign marines were called out to quell the disturbance, and they opened fire on the mutineers, who then submitted.

London, 3rd March.—Sir Denis Fitzpatrick has been appointed Member of the Council of the Secretary of State for India.

London, 4th March.—The rejection by Greece of the demands made in the collective note of the Powers is regarded as certain at the European capitals.

One hundred members of the House of Commons, including Sir Charles Dilke and Mr Herbert Gladstone, have telegraphed to the King of Greece lauding His Majesty's services in the cause of civilisation in Crete.

London, 5th March.—It is reported currently that the Porte has decided to give an evasive reply to the Collective Note of the Powers.

Two Greek warships have left the Piraeus with sealed orders.

It is stated that the Greek Squadron will eventually act on the Macedonian coast.

THE

Karnataka Prakasika.

MONDAY MARCH 8, 1897.

THE FLIGHT TO THE HILLS.

The famine is still very widely spread and very severe. Some hundreds of thousands are on relief works, while thousands more are being supported gratuitously. This must go on for months, till, in fact, the rains commence, and the people are able to go back to their fields and cultivate them. It is to be hoped the rains will be plentiful, for should they be scanty again this year the result will be fearful. We are glad that the people of England and also of India have risen to the occasion, have collected money for the famine stricken in large sums, and that a portion of it is being distributed. Were it not for this the situation would be far more acute than it is. The famine stretches over so wide an area that it is difficult to bring it under supervision. The authorities concerned are doing their best in this respect, and probably they will succeed. The experience gained in the famine of twenty years ago will help them—or ought to do so—to tide over the present difficulty. Those on the spot are doing their duty to the best of their ability, but we are sorry to say that the Government of India is failing in its duty. We are given to understand that the Viceroy and his staff will proceed to Simla at the usual time, that is at the end of this month. Everything has been arranged, and as soon as the Budget statement has been made the exodus will commence. The Viceroy and all the other officials will leave Calcutta, and all the business of the State will be carried on at Simla far away from the scene of the famine, far away from that part of the country where people are suffering so severely. We think it would be far better if the Viceroy and those about him were to remain on the plains instead of proceeding to the hills. The people would appreciate their denial, and moreover they could perform their duty better at Calcutta than they can possibly do hundreds of miles away. The work will be performed in a far worse manner, and the example set will be a very bad one. If the Viceroy goes to the hills others will be likely to follow his example, and he cannot prevent them. They can plead that as the head has gone away they may follow his example. The moral effect of the step contemplated by the Viceroy will be very detrimental to the well being of the country. When there was a famine in 1874 the Viceroy, Lord Northbrook, remained at the capital, and did not proceed to Simla. Why cannot Lord Elgin follow his example? He most certainly ought to do so. He sees the work to be done, he knows the misery that exists, and the best way to mitigate this is not to go far away from the place where it exists. We trust that Lord Elgin will even now change his mind, and stay at the capital instead of proceeding to the hills. His term of office has been fruitful of a good many blunders, but the greatest will be the one he is contemplating, that is if he carries out the idea of proceeding to Simla at the end of this month. We disapprove of the exodus to the hills on all occasions. It is objectionable in every way, but more especially is this the case in a year like the present when famine is abroad in the land.

THE FIRE AT THE PALACE, MYSORE.

This was a very sad occurrence, one long to be remembered in the province. It seems as if the old adage—"troubles never come singly" holds good of the house of Mysore. Two years ago the people had the misfortune to lose the Maharajah, as it were, in a moment. Now the palace of his ancestors has been partially destroyed by fire. What makes the matter worse is that this calamity took place at a time of rejoicing when there ought to have been nothing but festivity all about. The wedding was not quite over when the fire took place. One thing, however, we may be thankful for, and that is that the fire did not break out earlier, for then the loss of life might have been very great. We believe there have been some deaths, but few as compared with what might have been the case if the catastrophe had happened a week earlier. The worst of it is that the fire has cast a gloom not only over the City of Mysore, but also over the whole province, and the superstitious will be certain to prognosticate all sorts of evils. They will look upon the event as a bad omen, and will look out for all sorts of trouble. We have yet to learn how the fire originated, and why an attempt was not made earlier to bring it under control. But we shall know all this in time. We shall discover what amount of loss the fire caused. It is to be feared that much that has been lost can never be replaced. These are works of art—rare paintings for which the palace was famous. The furniture destroyed can be replaced. Money will purchase what is required. But money cannot replace the works of art that the fire destroyed on the 22th of last month. We suppose the work of renovation will shortly be taken in hand, and the palace outwardly may look better than it did before the fire, but it will not be the same. Many of its old associations will be gone. It will not remind the Mysore of the past, though the building may be more modernised, and be more convenient than the old palace. It only remains to us to express our sincere condolences to the Maharani Regent and the young Maharaja on account of the loss they have sustained, and trust they may be able to bear up under the sorrow that oppresses them.

News and Notes.

Famine Fund subscriptions amount to Rs 50,15,908.

The authorities of French Chandernagore have ruled that dead bodies should be disposed of two hours after death.

Among the crowned heads who are visiting England this year to take part in the festivities in honour of the Queen-Empress, is the King of Siam.

A Second book has been compiled by order of the Amir, Abdur Raman Khan, and is being published in the Kabul press. The name of the new book is Targibul Jehad (Inducement for a holy war).

The Maharanee Surnomyee of Kassimbazar has shown another instance of liberality by subscribing Rs 221,000, towards laying filtered water to her town. The work was taken in hand at once, Government supplying an Engineer free of cost.

The *Theosophist* received to day has fairly good summary of Dr Barrows' visit to Madras, but we have searched in vain from cover to cover for even a casual mention of Swami Vivekananda's doings in our midst. The Editor evidently thought it best to leave the Swami severely alone.

Dr Weir, Health Officer of Bombay, it appears, has given it as his opinion that the bubonic plague is being stamped out, and that the outbreak is over although local recrudescences may occur. Dr Weir is convinced that the spread of the disease is not influenced by human communication, and therefore holds that all measures for the examination of passengers will prove futile. The latter view will not readily command itself to general acceptance.

Mr Dadabhai Naoroji speaking at the Socialistic Demonstration, said that he found no fault with the English people, except that they had laid down rules and principles and did not see them carried out. If their servants had betrayed their trust, the misery they caused must lie at the door of the English people. To the merchants and officials who exploited the country and carried away millions yearly India seemed very rich, but to the people who had been ground and ground without cessation for 150 years she seemed very poor.

Mr John Burns made an earnest appeal at Battersea the other day on behalf of the famine stricken in India. "It was the duty of the English people," he said, "if Government were not sufficient and administration did not suffice, to supplement the shortcomings of either or both by that generosity which would send to the Indian peasant the physical aid without which he would surely die. Professor Max Muller he said, has said of India, "If I am to look over the whole world to find which country is most richly endowed with all the wealth and power and beauty which nature can bestow, in some parts a very paradise upon earth, I should point to India. If I were asked under what sky the human race has most fully developed some of its most choicest gifts, has most deeply pondered over all the greatest problems of life, and has found solutions for some of them, I should point to India."

The Vivekananda welcome meeting was held at Sovabazar Rajbati Natmandir on the 28th ultimo at four P. M. The audience was very large. Among others there were Raja Rajendra Narain Deb, Mr Justice Chandar Madhub Ghose, Raja Peary Mohun Mookerjee, Raja Binaykrishna, and the Hon'ble Gurupersad Sen. The Maharaja of Durbhanga was unavoidably absent. Raja Binaykrishna took the chair. He read the address after a few suitable remarks. The Swami rose amid loud applause. The Swami said he was glad to be again among his countrymen. He asked

them to take him as the same Calcutta boy that he was before he went Referring to the Chicago Parliament of Religions he said it gave him the opportunity for commencing his American career It only made an opening for him The Parliament was originally meant as a heathen show It subsequently turned out to be a Christian show The American people treated him very kindly The Swami was very grateful to them More substantial work was done in England The English people had a rough exterior but a fine heart within. Englishmen had given many things to India. The Swami would urge his countrymen to give something in return to them, viz the treasure they had inherited from their ancestors The meeting then dispersed with the usual thanks to the chair.

Local and Provincial.

The Resident —Proceeded to Mysore on Tuesday last and returned to Bangalore on Thursday.

Harmston's Circus —Is now performing on maidans in the Civil and Military Station, and drawing large houses

The Sappers —Who went to the capital to quench the fire, returned on Wednesday last, leaving eight men there

The Residency Surgeon —Dr Dobson has been sent to Rajputana, and Dr Ross will continue to act for sometime longer

The Weather —Is very hot, and the signs of rain that we had a short time ago have all disappeared At times there is a strong wind blowing

A representative —We are glad to learn from Mysore that Lieutenant Colonel Desaraj Urs will represent the Mysore State at the Queen's Jubilee in June next

Courts and Offices —Have settled down to work again after the many holidays they have had The servants of Government must be glad to be at work again

Cash Chests —We learn that four big cash chests were sent to the capital, on the 3rd instant by the goods train of the S M R, by local English Firm, as per orders of the Dewan of Mysore

Postponement —It is said that the Maharani Regent and the young Maharajah of Mysore, who were to have gone to Ooty yesterday had to give up the idea on account of the fire at the capital

Colonel Robertson —Has been confirmed in the appointment of Resident of Mysore and Chief Commissioner of Coorg in the place of Mr Mackworth Young made Lieutenant Governor of the Punjab.

The Mysore Civil Service Examination of 1897 promises to be a grand thing Over one hundred candidates are to appear this year, and it is said that most of the newfledged graduates are already preparing for the examination

M A DEGREE EXAMINATION 1897

5 Bernard, K 7 Nilakanta Aiyar 15 Ganapati Aiyar 20 Subramanya Aiyar. 30. Venkatasubba Aiyar have passed.

M L. DEGREE EXAMINATION 1897

Nil

A Strong Rumour —Is current to the effect that Mr Subbaroya Iyer, the Comptroller of Mysore, will be made the Palace Engineer and Palace Comptroller soon, and that Mr Srikanteswara Iyer, Assistant Comptroller, will be made the Comptroller. We give the rumour for what it is worth —E M.

On Thursday night (25th ultimo) says a Mysore paper, the Mahomedan guests of Her Highness were sumptuously entertained at dinner at the Jaganmohan Palace Guests began to arrive at 7 P. M, and the dinner and amusements were kept up till after 10 P. M, Khan Bahadur Abdul Rahman Sahib, Councillor, and Khan Bahadur Mahomed Ali Sahib, retired Deputy Commissioner, also took active parts in the enjoyment of the evening The guests in all numbered 600.

T Ramachendra Row, Amildar of the Sagar taluk, is granted privilege leave of absence for one month from such date as he may avail himself of it, not later than the 5th of March

Chinnappaya Pille, Deputy Amildar of the Kumsi sub taluk, is appointed to act as *Amildar and 3rd Class Magistrate* of the Sagar taluk during the absence of T Ramachendra Row on leave or until further orders

Narasimalu Naidu, Sheristadar of the Channagiri taluk, is appointed to act as Deputy Amildar and 3rd Class Magistrate *of the Kumsi sub-taluk during the employ* ment of Chinnappaya Pille on other duty or until further orders

Extracts.

THE SPEED OF BIRDS

The speed of pigeons and of birds in general has been much discussed in recent times by different zoologists Many authors are inclined to give too high figures Thus according to Spallanzani, the speed of the martin is fixed at 290ft per second, and that of the pigeon (estimated from a flight of four from Paris to Buda Pesth) at 155 feet per second But these figures appear to be erroneous An interesting experiment reported by *Ciel et Terre* has just been made at Antwerp by Mr A *Verschaven on the subject of the speed of* swallows Having succeeded in capturing one of those birds, he marked it and gave it in charge of a train that started for Compiegne on the 16th of May with 250 baskets of carrier pigeons belonging to the Federation Colombophile The swallow was set free on the 17th of May at 7 o clock in the morning along with the pigeons, and quick as a flash took a northerly direction, while the pigeons were still describing numerous spirals in search of their direction At twenty-three minutes past eight the bird made its appearance in Antwerp and hastened to seek its nest The first pigeons did not enter their cote till half past eleven *The swallow* had made the 140 miles trip in one hour and eight minutes, say, at a speed of 120 miles an hour or about 190 feet a second Such speed, nearly 200 feet a second, gives us an idea of the rapidity with which swallows are capable of accomplishing their migrations To reach Belgium from the north of Africa, for example, it would take them scarcely half a day

TAILED MEN.

Tailed men have again turned up Six years ago in the course of a visit to the Indo Chinese region, between 11 deg. and 12 deg lat and 104 deg. and 106 deg long M Paul d'Enjoy captured an individual of the Moi race, who had climbed a large tree to gather honey. In descending, he applied the sole of *his feet to the bark, in fact,* he climbed like a monkey To the surprise of the author and his Annamite companions, their prisoner had a caudal appendage, He conversed with them, swaggered in his savage pride, and showed that he was more wily than a Mongolian, which, as the author adds is, however a very difficult matter M d'Enjoy saw the *common* dwelling of the tribe to which this man belonged, but the other people had fled, it consisted of a long, narrow, tunnel like hut made *of dry leaves* Several polished stones, bamboo pipes, copper bracelets, and bead necklaces were found inside, these had doubtless been obtained from the Annamites of the frontier The Moi used barbed arrows, which are anointed with a black syrupy violent poison The tail is not their only peculiarity All the Mois whom M d'Enjoy has seen in the settlements have very accentuated ankle-bones looking like the spurs of a cock All the neighbouring nations treat them as brutes, and *destroy these remarkable* people, who, the author believes to have occupied primitively the whole Indo Chinese Peninsula The Moi skulls described by MM Verneau and Zaborowski were certainly by no means those of pure natives They were taken from graves, but the settled Moi burn their dead and place the ashes in bamboo pots, or in rattan baskets, considering their spirits as protective divinities As this somewhat sensational account has been published by our esteemed contemporary "L Anthropologie (Tome vii, No 5) we must treat it with respect, and we hope it will not be long before these tailed men are carefully described by a trained scientific observer —*Nature*

ಕರ್ಣಾಟಕ ಪ್ರಕಾಶಿಕಾ.

೧೮೯೭ನೇ ಇಸವಿ ಮಾರ್ಚಿ ತಾ|| ೮ನೇ ಸೋಮವಾರ.

ಮೈಸೂರು ಅರಮನೆಯಲ್ಲಿ ಅಗ್ನಿಪ್ರವೇಶ.

ಕಳೆದ ತಿಂಗಳ ೧೯ನೇ ತಾರೀಖ್ ಶುಕ್ರವಾರದದಿನ ನಡೆದ ಶ್ರೀಮನ್ಮಹಾರಾಜಾ ಚಾಮರಾಜೇಂದ್ರ ಒಡೆಯರವರ ಜ್ಯೇಷ್ಠಪುತ್ರಿಯವರ ವಿವಾಹ ಮಹೋತ್ಸವದ ವಿಭವಗಳಂ ಹಿಂದಿನ ಯೆರಡು ವಾರಗಳ ಪತ್ರಿಕೆಗಳಲ್ಲಿ ಪ್ರಕಟಿಸಿರುತ್ತೇವೆಯಷ್ಟೆ. ನವರೀ ಶುಭಕ್ಕೆ ಅಂಗಭೂತಗಳಾಗಿರುವ ಕಾರ್ಯಗಳೆಲ್ಲವೂ ಪ್ರಾರ್ತಿಯನ್ನೈದುವದರೊಳಗಾಗಿ, ಶ್ರೀಮನ್ಮಹಾರಾಜ್ಞೀ ರೀಜಂಟರವರಿಗೂ, ಅವರಲ್ಲಿ ಅಂತರವಾದ ಭಕ್ತಿಗೌರವಗಳುಳ್ಳ ಅವರ ಪ್ರಜೆಗಳಿಗೂ ಕೇವಲ ಹೃದಯವ್ಯಥಾಕಾರಿಯಾಗಿಯೂ, ಪ್ರಬಲನಷ್ಟಹೇತುವಾಗಿಯೂ ಪ್ರಸ್ತವಾದ ಒಂದು ವಿಪತ್ತನ್ನು ಈ ಪತ್ರಿಕಾ ಮೂಲಕ ಪ್ರಚುರಪಡಿಸಬೇಕಾದ ದುರ್ದಿನಕ್ಕೆ ನಾವು ಪಾತ್ರರಾದ ಬಗ್ಗೆ ಬಹಳ ಚಿಂತಿಸುತ್ತೇವೆ.

ಕಳೆದ ತಿಂಗಳ ೨೪ನೇ ತಾರೀಖ್ ಆದಿತ್ಯವಾರದದಿನ ಬೆಳಗ್ಗೆ ಸುಮಾರು ೯|| ಘಂಟೆಯ ಸಮಯದಲ್ಲಿ ಅರಮನೆಯ ಆನೆಬಾಗಿಲ ಒಳಗಡೆ ಬಾಲ ಬಾನೆಯ ಮುಂದುಗಡೆ ನಿರ್ಮಿತವಾಗಿ, ವಿವಾಹಾಲಂಕಾರಗಳಿಂ ಶೋಭಿತವಾಗಿ ಕಣ್ಗೊಳಿಸುತಲಿದ್ದ ವಿಶಾಲತರ ಚೀನುವಾದ ಚಪ್ಪರಕ್ಕೆ ಯಾವಕಾರಣದಿಂದಲೊ ಬೆಂಕಿ ತಗಲಿ ಗಗನವ್ಯಾಪಿಯಾಗಿ ಹೊಗೆಹೊರಡುಉರಿಯುವದಕ್ಕೆ ಪ್ರಾರಂಭವಾಯಿತೆಂಬ ವರ್ತಮಾನವು ಕೆಲವು ನಿಮಿಷಗಳ ಕಾಲದೊಳಗಾಗಿ ಪಟ್ಟಣವೆಲ್ಲ ವ್ಯಾಪಿಸಿ, ಅನೇಕ ಸಹಸ್ರ ಪ್ರಜೆಗಳು ಅರಮನೆಯ ಮುಂದುಗಡೆ ಗುಂಪುಗೂಡಿ ಕಣ್ಣೀರು ಸುರಿಯುತ ತಮಗೆ ಹುಕುಂ ಕೊಟ್ಟರೆ ತಾವು ಒಳಗೆ ನುಗ್ಗಿ ತಮಗೆ ಸಾಧ್ಯಗಳಾದ ಸರ್ವ ಪ್ರಯತ್ನಗಳಿಂದಲು ಬೆಂಕಿಯನ್ನು ಆರಿಸಿಬಿಡುವದಾಗಿ ಅಲ್ಲಿನ ಅಧಿಕಾರಿಗಳಿಂ ಯೆಷ್ಟುವಿಧದಿಂ ಪ್ರಾರ್ಥಿಸಿದಾಗ್ಯೂ ಅವರ ಪ್ರಾರ್ಥನೆಯು ಲಾಲಿಸಲ್ಪಡದೆ ಹೋಯಿತೆಂತಲೂ, ದಿವಾನರವರೂ ಅರಮನೆಯ ಅಧಿಕಾರಿಗಳೂ ಜವಾಹಿರ್‌ಗಳನ್ನೂ ಶ್ರೀಮನ್ಮಹಾರಾಜರು ಮೊದಲಾದವರನ್ನೂ ಬೇರೆ ಸ್ಥಳಗಳಿಗೆ ಕಳುಹಿಸಿಕೊಡುವದರಲ್ಲಿ ವಿಶೇಷ ಅಕ್ಕರೆಯುಳ್ಳವರಾಗಿದ್ದರೇ ಹೊರತು ಬೆಂಕಿಯನ್ನು ಕೂಡಲೆ ಆರಿಸಬೇಕಾದ ವಿಷಯದಲ್ಲಿ ಉಚಿತ ಪ್ರಯತ್ನಗಳಂ ಮಾಡದೆ ಹೋದರೆಂತಲೂ ಅಲ್ಲಿನ ಪತ್ರಿಕೆಗಳು ಕೆಲವು ಅಪೇಕ್ಷಿಸುತಲಿವೆ ಶ್ರೀಮನ್ಮಹಾರಾಣೀಯವರ ಮತ್ತು ಅವರ ಪುತ್ರಪುತ್ರಿಯರ ಕ್ಷೇಮ ಚಿಂತನವು ಅವರ ಲೋಪ್ಯವರ್ಗಕ್ಕೆ ಸೇರಿದ ಪ್ರತಿಮನಷ್ಯನಿಗೂ ಪ್ರಥಮ ಕರ್ತವ್ಯವಾಗಿರುವದರಿಂದ ಮೊದಲು ಶ್ರೀಮನ್ಮಹಾರಾಜರವರನ್ನೂ ಅವರ ಮಾತೃಶ್ರೀ ಮೊದಲಾದವರನ್ನೂ ಅರಮನೆಯಿಂದ ಬೇರೆ ಸ್ಥಳಗಳಿಗೆ ಕಳುಹಿಸಿದ್ದು ಶ್ಲಾಘನೀಯಾವಹಕಾರ್ಯವೆ, ಪರಂತು ತತ್ಕಾಲ ಬೆಂಕಿಯನ್ನು ಆರಿಸಬೇಕಾದ ವಿಷಯದಲ್ಲೂ ತಕ್ಕ ಏರ್ಪಾಡುಗಳಂ ಉಚಿತ ಕಾಲದಲ್ಲಿ ಮಾಡದೆಹೋದುದರಿಂದಲೇ ಇಷ್ಟು ಅನರ್ಥ ಹೇತುವಾಯಿತೆಂದು ಮೈಸೂರಿಂದ ನಮಗೆ ಬಂದ ಕಾಗದಗಳೆಲ್ಲವು ಏಕಕಂಠ್ಯವಾಗಿ ತಿಳಿಸುತಿವೆ ಇದರಿಂದ ಅಗ್ನಿಯು ನಿರ್ನಿರೋಧವಾಗಿ ಅತಿವೇಗದಿಂದನೆ ನಾಲ್ಕು ಕಡೆಯಲ್ಲೂ ವ್ಯಾಪಿಸಿ ಬಾಲಾಬಾನೆ, ಅಂಬಾವಿಲಾಸ, ರಾಗಮಹಲ್ ಕೊಠಡಿ, ದರ್ಬಾವಿಲಾಸ, ಸೀತಾವಿಲಾಸ, ಸರಸ್ವತೀಭಂಡಾರ ಮೊದಲಾದವು ನಾಮಮಾತ್ರಾವಶಿಷ್ಟವಾದವೆಂದು ತಿಳಿದು ನಮ್ಮ ಹೃದಯವು ಬಹಳ ಸಂತಪಿಸುತಲಿದೆ. ಕಾಲಾತೀತವಾಗಿ ಮಾಡಲ್ಪಡುವ ಪ್ರಯತ್ನದ ಫಲವು ಪ್ರಸಿದ್ಧವಾಗಿಯೂ ಅನುಭವಸಿದ್ಧವಾಗಿಯೂ ಇರುವದರಿಂದ ಆವಿಷಯದಲ್ಲಿ ವಿಶೇಷ ವಿಚಾರವು ಇಲ್ಲಿ ಅನಾವಶ್ಯಕವಾದುದೆಂದು ಭಾವಿಸುತ್ತೇವೆ. ಇಂತ ಅಪತ್ಕಾಲಗಳಲ್ಲಿ ಅತ್ಯಂತೋಪಯುಕ್ತವಾಗಿರುವಂತೆ ನಿರ್ಮಿಸಲ್ಪಟ್ಟಿರುವ ಬೆಂಕಿಯನ್ನಾರಿಸುವ ಜಲ ಯಂತ್ರವು ಅರಮನೆಯಲ್ಲಾಗಲಿ ಅಲ್ಲಿನ ಮ್ಯೂನಿಸಿಪಲ್ ಆಫೀಸಿನಲ್ಲಾಗಲಿ ಒಂದು ಇಲ್ಲದೆ ಹೋದುದು ಪ್ರಬಲ ಲೋಪವೆಂದು ಹೇಳಬೇಕಾಗಿರುತಿದೆ. ಈ ಕಾಲದಲ್ಲಿ ಕೋಟೆಯೊಳಗಣ ಕಾರಂಜಿಗಳಲ್ಲಿ ನೀರು ಸಹ ಬಂದಾಗಿದ್ದುದು ಮತ್ತೂ ದುಃಖಕರವಾದುದು. ಅರಮನೆಯೊಳು ಹಾಜರಿರಬಹುದಾದ ಸಾವಿರಾರು ಜನರನ್ನು ಬಿಟ್ಟು ಗಡಿಗೆಗಳಲ್ಲಿ ನೀರು ತರಿಸಿ ಹುಯಿಸಿದ್ದಾಗ್ಯೂ ಇಷ್ಟು ನಾಶಕ್ಕೆ ಅವಕಾಶ ವುಂಟಾಗಿರಲಾರದೆಂದು ಸ್ಥಳದ ಪ್ರತ್ಯಕ್ಷಿಕ ಪತ್ರಿಕೆಗಳೂ, ಸಾಮಾನ್ಯವಾಗಿ ಅಲ್ಲಿನ ಪ್ರಜೆಗಳೂ ತಿಳಿಸುವ ಅಭಿಪ್ರಾಯದಲ್ಲಿ ಔಚಿತ್ಯ ತೋರದೆ ಹೋಗಲಿಲ್ಲವು. ಅರಮನೆಯ ಅಧಿಕಾರಿಗಳು ಕಾಲಾತೀತವಾಗಿ ತಾವು ಮಾಡಿದ ಪ್ರಯತ್ನಗಳು ಫಲಕಾರಿಯಾಗಲಾರವೆಂದರಿತು ಬೆಂಕಿಯನ್ನಾರಿಸುವ ಯಂತ್ರಗಳನ್ನೂ ಸ್ಯಾಪರ್ಸ್ ಜನಗಳನ್ನೂ ಸ್ಪೆಷಲ್ ಟ್ರೈನಿನಲ್ಲಿ ಕೂಡಲೆ ಕಳುಹಿಸಿಕೊಡಬೇಕೆಂದು ಬೆಂಗಳೂರಿಗೆ ತಂತಿ ವರ್ತಮಾನಕೊಟ್ಟು ಇಲ್ಲಿಂದ ಜಲಯಂತ್ರಗಳೂ ನೂರಾರುಮಂದಿ ಸ್ಯಾಪರ್ಸ್ ಜನಗಳೂ ರಾತ್ರಿ ೧ ಘಂಟೆಯ ಸುಮಾರಿಗೆ ಮೈಸೂರಿಗೆ ಹೋಗಿ ಸೇರಿ ಅಲ್ಲಿನ ಜನರನ್ನೂ ಸೇರಿಸಿಕೊಂಡು ಯಂತ್ರಗಳ ಬಲದಿಂದ ನೀರು ಹಾಯಿಸಿ ಬೆಂಕಿಯನ್ನಾರಿಸಿದ ಮೇಲೆಯೇ ಅಲ್ಲಿನವರಿಗುಂಟಾಗಿದ್ದ ಭೀತಿಯು ಸ್ವಲ್ಪ ಶಾಂತವಾಯಿತು ಬೆಂಕಿಯನ್ನು ಆರಿಸುವದಕ್ಕಾಗಿ ಪ್ರವರ್ತಿಸಿದ ಜನರಲ್ಲಿ ಕೆಲವರಿಗೆ ಪ್ರಾಣಹಾನಿ ಸಹ ಉಂಟಾಯಿತೆಂತಲೂ, ಪರಂತು ಮೃತಪಟ್ಟವರ ಸಂಖ್ಯೆಯು ಅದ್ಯಾಪಿ ಗೊತ್ತಾಗಲಿಲ್ಲವೆಂತಲೂ ತಿಳಿಯಬರುತಿವೆ ಹಗಲುಹೊತ್ತು ವಿವಾಹ ಮಂಟಪಕ್ಕೆ ಬೆಂಕಿ ತಗಲುವದಕ್ಕೆ ಉಂಟಾದ ಕಾರಣವು ಅದ್ಯಾಪಿ ಹೊರಗಾಗಲಿಲ್ಲವು ಈ ವಿಷಯದಲ್ಲಿ ತಕ್ಕ ಅಧಿಕಾರಿಗಳ ಮೂಲಕ ಖುದಿತವಾದ ವಿಚಾರಣೆಯಂ ಮಾಡತಕ್ಕದ್ದೆಂದು ಶ್ರೀಮನ್ಮಹಾರಾಣೀ ರೀಜಂಟರವರು ಹುಕುಂ ಮಾಡಬೇಕಾದುದು ಅವಶ್ಯಕರ್ತವ್ಯವೆಂದು ಭಾವಿಸುತ್ತೇವೆ ಈಗ ಅರಮನೆಯ ಕಾರ್ಯನಿರ್ವಹಣಾಧಿಕಾರವು ಸುತರಾಂ ತೃಪ್ತಿಕರವಾಗಿಲ್ಲವೆಂದು ಜನಗಳು ತಿಳಿಸುವ ಅಭಿಪ್ರಾಯವು ನಿರಾಧಾರವಾದುದೆಂದು ಹೇಳುವದಕ್ಕಾಗುವದಿಲ್ಲವು, ಮತ್ತು ಅದಕ್ಕೆ ನಿದರ್ಶನಗಳು ಇಲ್ಲದೆ ಹೋಗಲಿಲ್ಲವು. ಅತೀತ ವಿಷಯವಂ ಕುರಿತು ಚಿಂತಿಸಿ ಪ್ರಯೋಜನವಿಲ್ಲವು. ಶ್ರೀಮನ್ಮಹಾರಾಣೀ ರೀಜಂಟರವರು ಅರಮನೆಯ ಕಾರ್ಯನಿರ್ವಹಣಕ್ಕೆ ಸಂಪೂರ್ಣ ಪಾತ್ರತೆಯುಳ್ಳ ಜನರಂ ಚುನಾಯಿಸಿ ನಿಯಮಿಸುವದರ ಮೂಲಕ ಮುಂದೆ ಇಂತ ವಿಪತ್ತುಗಳಿಗೆ ಅವಕಾಶವಿಲ್ಲವಂತೆ ಮಾಡುವರೆಂದು ನಂಬುತ್ತೇವೆ.

ಮೈಸೂರು ಷಹರಿನಲ್ಲಿ ಪ್ರಕಟಿಸಲ್ಪಡುವ ವೃತ್ತಾಂತ ಪತ್ರಿಕೆಯಲ್ಲಿ ಮೇಲಿನ ವಿಷಯವಂ ಕುರಿತು ವಿಸ್ತಾರವಾಗಿ ತಿಳಿಸಲ್ಪಟ್ಟಿರುವದರಿಂದ ಅದಂ ಸಂಗ್ರಹಿಸಿ ಈ ಪತ್ರಿಕೆಯ ಮತ್ತೊಂದು ಭಾಗದಲ್ಲಿ ಪ್ರಕಟಿಸಿರುತ್ತೇವೆ.

ಕಮ್ಮರ್ ಬಂಡ್

ಕಳೆದ ತಿಂಗಳ ೨೮ನೇ ತಾರೀಖಿನ ರಾತ್ರಿ ಮೈಸೂರೊಳು ಈಚೆಗೆ ವಿವಾಹಿತರಾದ ದಂಪತಿಗಳಿಗೆ ಮೆರವಣಿಗೆ ಉತ್ಸವವು ನಡೆಯುತ್ತಿರುವಲ್ಲಿ ಬಹುಜನ ದೊಡ್ಡಮನುಷ್ಯರೂ, ಅಧಿಕಾರಿಗಳೂ ಮುಂದುಗಡೆ ಹೋಗುತಲಿದ್ದರು. ಆ ಕಾಲದೊಳು ಮೆ|| ನಂಜುಂಡರಾಜ ಅರಸಿನವರು ಸಾಬಕ್ ಡಬ ಸರ್ ಬಕ್ಷಿಯವರಾದ ಮೆ|| ಎಂ. ನರಸಿಂಹಯ್ಯಂಗಾರ್ ರಾಯಬಹದೂರವರ ಬಳಿಗೆಹೋಗಿ ನಡುವನ್ನು ಕಟ್ಟಬೇಕೆಂದು ಹೇಳಲು ಮೆ|| ನರಸಿಂಹಯ್ಯಂಗಾರ್ರವರಿಗೂ ಮೆ|| ನಂಜುಂಡರಾಜ ಅರಸಿನವರಿಗೂ ಸ್ವಲ್ಪ ವಾಕ್ಕಲಹವುಂಟಾಗಿ, ಕಡೆಗೆ ಮೆ|| ಅರಸಿನವರು ಮಹಾರಾಣೀ ರೀಜಂಟರವರಿಗೆ ನಡೆದ ಸಂಗತಿಯನ್ನು ರಿಪ್ಪೋರ್ಟ್ ಮಾಡಿ, ಮೆರವಣಿಗೆಯ ಸಂಗಡ ಹೋಗತಕ್ಕವರೆಲ್ಲರು ನಡುವಂ ಕಟ್ಟಬೇಕು, ಅವಕ್ಕಿಷ್ಟವಿಲ್ಲದವರು ಆಚೆ ಹೊರಟುಹೋಗಬೇಕೆಂದು ಮಹಾರಾಣಿಯವರಿಂದ ಹುಕುಂ ಪಡಕೊಂಡು ಬರುವದರೊಳಗಾಗಿ ಮೆ|| ನರಸಿಂಹಯ್ಯಂಗಾರ್ರವರು ಮೆರವಣಿಗೆಯಂ ಬಿಟ್ಟು ಹೊರಟು ಹೋಗಿಬಿಟ್ಟರೆಂದು ತಿಳಿಯಲಾದೆವು. ಈ ಸಂದರ್ಭದೊಳು ಈ ವಿಷಯವಂ ಕುರಿತು ಇಲ್ಲಿ ಸ್ವಲ್ಪ ವಿಚಾರಮಾಡಬೇಕಾದುದು ಅವಶ್ಯಕರ್ತವ್ಯವಾದುದೆಂದು ಭಾವಿಸುವೆವು. ಈಸಂಸ್ಥಾನದಲ್ಲಿ ಯಾರೇ ಆಗಲಿ, ಅರಮನೆಯ ಆನೆಬಾಗಿಳೊ

ಳಗೆ ಪ್ರವೇಶಿಸುವ ಕಾಲದಲ್ಲಿ ನಡುವಂ ಕಟ್ಟಬೇಕೆಂಬುವದು ಒಂದು ಅನಾದಿ ಸಂಪ್ರದಾಯವಾಗಿ ನಡೆಯುತಬಂದು ಈಚೆಗೆ ಕೆಲವು ಸಂವತ್ಸರಗಳ ಹಿಂದೆ ಸಂಸ್ಥಾನದ ದೊಡ್ಡ ಅಧಿಕಾರಿಗಳಲ್ಲಿ ಕೆಲವರು ಸದರೀ ನಿರ್ಬಂಧದಿಂದ ವಿನಾಯಿಸಲ್ಪಟ್ಟರು. ಸದರೀ ವಾಡಿಕೆ ಅರಮನೆಯೊಳಗೂ, ಅನ್ಯತ್ರ ಶ್ರೀಮನ್ಮಹಾರಾಜರವರ ಸಾನ್ನಿಧ್ಯದಲ್ಲೂ ಅಬಾಧ್ಯವಾಗಿ ನಡೆಯುತಲಿದೆ. ಹೀಗಿರುವಲ್ಲಿ ಶ್ರೀಮನ್ಮಹಾರಾಜರವರ ಅಥವಾ ಶ್ರೀಮನ್ಮಹಾರಾಣಿಯವರ, ಅಥವಾ ಯುವರಾಜರವರ ಸಾನ್ನಿಧ್ಯವಿಲ್ಲದೆ, ರಾಜಪುತ್ರಿಯವರ ವಿವಾಹಾಂಗವಾದ ಮೆರವಣಿಗೆಯ ಸಂಗಡ ಹೋಗತಕ್ಕವರೆಲ್ಲರು ನಡುವಂ ಕಟ್ಟಬೇಕೆಂದು ಶ್ರೀಮನ್ಮಹಾರಾಣೀ ರೀಜಂಟರವರು ಹುಕುಂ ಕೊಟ್ಟದ್ದಾಗಿ ಮೆ|| ನಂಜುಂಡರಾಜ ಅರಸಿನವರು ತಿಳಿಸಿದ್ದು ಯೆಷ್ಟರಮಟ್ಟಿಗೆ ನಂಬಿಕೆಗೆ ಅರ್ಹವಾದುದೊ ನಾವರಿಯೆವು. ಏತಕ್ಕೆಂದರೆ, ಮೇಲೆ ತಿಳಿಸಿರುವಂತೆ ಶ್ರೀಮನ್ಮಹಾರಾಣೀ ರೀಜಂಟರವರು, ಶ್ರೀಮನ್ಮಹಾರಾಜರವರು, ಅಥವಾ ಯುವರಾಜರವರು, ಇವರಲ್ಲಿ ಒಬ್ಬರ ಸಾನ್ನಿಧ್ಯವಾದರು ಇಲ್ಲದ ಸಂದರ್ಭದಲ್ಲಿ ಸಿಪಾಯರೂ ನಡುವಂ ಕಟ್ಟಬೇಕೆಂದು ಹುಕುಂ ಕೊಡುವಂಥದು ನಮ್ಮ ಬುದ್ಧ್ಯಾ ಯೋಚಿಸಿದರೆ ಯುಕ್ತವಾಗಿ ತೋರಲಿಲ್ಲವು, ಮತ್ತು ಕೇವಲ ಪ್ರಾಜ್ಞತೆಯನ್ನುಳ್ಳ ಶ್ರೀಮನ್ಮಹಾರಾಣೀ ರೀಜಂಟರವರು ಮೇಲೆ ಕಂಡಂತೆ ಹುಕುಂ ಕೊಟ್ಟಿರುವರೆಂದು ನಾವು ನಂಬಲಾರೆವು. ಒಂದು ವೇಳೆ ಅಂತ ಹುಕುಂ ಕೊಟ್ಟಿರುವ ಪಕ್ಷದಲ್ಲಿ ಅದನ್ನು ಕುರಿತು ಪುನರಾಲೋಚನೆ ಮಾಡಿ, ಉಚಿತರೀತಿಯಿಂದ ಅದನ್ನು ಬದಲಾಯಿಸುವರೆಂದು ನಂಬುತ್ತೇವೆ. ಹಾಗೆ ಮಾಡದೆ ಹೋದರೆ ರಾಜ್ಯವನ್ನಾಳುವ ಅರಸರವರಿಗೂ ಇತರರಿಗೂ ಅವಶ್ಯ ಇರಬೇಕಾದ ತಾರತಮ್ಯಕ್ಕೆ ಲೋಪವನ್ನುಂಟುಮಾಡಿದ ಹಾಗುವುದು.

Occasional Notes.
ನೈಮಿತ್ತಿಕ ವಿಷಯಾನ್ವಯ.

ಮುಂಬೈಯಲ್ಲಿ ವ್ಯಾಪಿಸಿರುವ ಮಹಾಮಾರಿ ರೋಗದಿಂದ ಇದುವರೆಗೆ ಅಜಮಾಸು ೩೦೮೦ ಮಂದಿ ಘಾಸಿ ಜನರು ಮೃತಪಟ್ಟಿರುತ್ತಾರೆ.

ಕಲ್ಕತ್ತೆಯೊಳು ಸ್ಥಾಪಿಸಲ್ಪಟ್ಟಿರುವ ಕ್ಷಾಮನಿವಾರಕ ಫಂಡಿಗೆ ೫೦,೧೫,೯೭೪ ರೂಪಾಯಿಗಳು ಚಂದಾ ಮಾಡಲ್ಪಟ್ಟಿರುತ್ತದೆ.

ಈಗ ಉತ್ತರ ದೇಶದೊಳು ಪ್ರಬಲವಾಗಿರುವ ದುರ್ಭಿಕ್ಷದ ಬಗ್ಗೆ ಸ್ಥಾಪಿಸಲ್ಪಟ್ಟಿರುವ ಫಂಡಿಗೆ ಬ್ರಿಟಿಷ್ ರೆಜಿಮೆಂಟಿಗೆ ಸೇರಿದವರು ಅನೇಕರು ಚಂದಾ ಕೊಡಿರುತ್ತಾರೆ.

ಪುದುಕೋಟೆ ಸಂಸ್ಥಾನದ ಸಾಲೀಯಾನಾ ಹುಟ್ಟುವಳಿಯು ೬೬ ಲಕ್ಷ ರೂಪಾಯಿಗಳಿದ್ದಾಗ್ಯೂ ಕಳೆದ ಜನವರಿ ತಿಂಗಳ ೧೯ ನೇ ತಾರೀಖು ಮೊದಲು ಅರಸರವರು ಸ್ವಂತ ಖರ್ಚಿಗೆ ಸಾಲೀಯಾನಾ ಒಂದು ಲಕ್ಷ ರೂಪಾಯಿಗಳಂ ಪಡೆಯುತಲಿದಾರೆ

ಇಂಡ್ಯಾ ದೇಶದಲ್ಲಿ ಫ್ರೆಂಚ್ ಸರ್ಕಾರದವರ ಆಧಿಪತ್ಯಕ್ಕೆ ಒಳಪಟ್ಟಿರುವ ಚಂದ್ರನಗರದಲ್ಲಿ ಯಾರಾದರು ಮೃತಪಟ್ಟರೆ ಅವರ ಮುರ್ದೆಯನ್ನು ಎರಡು ಘಂಟೆಯ ಕಾಲದೊಳಗಾಗಿ ದಫನ್ ಮಾಡಬೇಕೆಂದು ನಿಬಂಧನೆ ಮಾಡಿರುತ್ತಾರೆ.

ಶ್ರೀಮನ್ಮಹಾರಾಜ್ಞೀ ಇಂಡ್ಯಾ ಚಕ್ರವರ್ತಿನೀಯವರ ದೀರ್ಘಕಾಲಿಕವಾದ ಆಳ್ವಿಕೆಯಬಗ್ಗೆ ಅಲ್ಲಿ ನಡೆಸಲ್ಪಡುವದಾಗಿರುವ ಉತ್ಸವಾರ್ಥ ಇಂಗ್ಲಂಡ್ ದೇಶಕ್ಕೆ ಹೋಗುವವರಾಗಿರುವ ಅರಸರುಗಳಲ್ಲಿ ಸಯಾಂ ರಾಜ್ಯದ ಅರಸರವರೂ ಸೇರಿದವರಾಗಿದ್ದಾರೆ.

ಮುಂಬೈಯಲ್ಲಿ ವ್ಯಾಪಿಸಿ ಅನೇಕ ಸಹಸ್ರ ಜನರಿಗೆ ಪ್ರಾಣಹಾನಿಯನ್ನುಂಟುಮಾಡಿದ ರೋಗದ ಉತ್ಪತ್ತಿಗೆ ಕಾರಣವಂ ಕಂಡು ಹಿಡಿದು ಅದನ್ನು ಮೂಲೋತ್ಪಾಟನ ಮಾಡುವದಕ್ಕಾಗಿಯೂ, ಮುಂಬೈ ಷಹರಿನ ವಿಶೇಷ ಆರೋಗ್ಯತೆಯನ್ನುಂಟುಮಾಡುವದಕ್ಕಾಗಿಯೂ ಕ್ಷಿಪ್ರದಲ್ಲಿ ಒಂದು ಕಮಿಷನ್ ಏರ್ಪಾಡು ಮಾಡಲ್ಪಡುವದೆಂದು ಒಂದಾನೊಂದು ಮುಂಬೈಪತ್ರಿಕೆ ತಿಳಸುತಿದೆ. ಇಂತಾ ಸಂಘಗಳನ್ನೇರ್ಪಡಿಸುವದರಲ್ಲಿರುವ ಸೌಖ್ಯವು ರೋಗಕಾರಣವಂ ಕಂಡು ಹಿಡಿಯುವವರಲ್ಲುಂಟಾಗಿರುವದೆಂದು ನಾವು ನಂಬಲಾರೆವು.

LOCAL AND PROVINCIAL NEWS.
ಒಳದೇಶಮತ್ತುತಾಲ್ಲೂಕುಜಾತಿವೃತ್ತಾಂತಗಳು.

ಕೃಷ್ಣರಾಜಪೇಟೆ ತಾಲ್ಲೂಕು ಹೆಮ್ಮಿಗೆಯಲ್ಲಿ ಅಲ್ಲಿನ ನದಿಯನ್ನು ೧೮ ಜನರು ದೋಣಿಯಿಂದ ದಾಟುತ್ತಿರುವಾಗ ಅಕಸ್ಮಾತ್ತಾಗಿ ದೋಣಿಗೆ ಅಪಾಯ ಸಂಭವಿಸಿ, ಆ ಪೈಕಿ ೭ ಜನರು ಮುಳಗಿ ಸತ್ತರು.

ಈ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರವರು ಕಳೆದ ಮಂಗಳವಾರದದಿನ ಮೈಸೂರಿಗೆ ಹೋಗಿ ಅಲ್ಲಿನ ತಾತ್ಕಾಲಿಕ ಸ್ಥಿತಿಯಂ ಪ್ರತ್ಯಕ್ಷದಲ್ಲಿ ನೋಡಿಕೊಂಡು ಬೃಹಸ್ಪತಿವಾರದದಿನ ಬೆಂಗಳೂರಿಗೆ ವಾಪಸ ಬಂದರು.

ಮೈಸೂರು ಅರಮನೆಯಲ್ಲಿ ಬೆಂಕಿಯನ್ನಾರಿಸುವದಕ್ಕಾಗಿ ಇಲ್ಲಿಂದ ರಾಜಧಾನಿಗೆ ಹೋಗಿದ್ದ ಸಾಪರ್ ಜನರಲ್ಲಿ ಯೆಂಟುಮಂದಿವಿನಾ ಮಿಕ್ಕವರೆಲ್ಲರು ವಾಪಸ್ ಬಂದರಾಗಿ ಅಲ್ಲಿ ಬೆಂಕಿ ಶಾಂತವಾಯಿತೆಂದು ನಂಬುತ್ತೇವೆ

ಈಚೆಗೆ ಕುಂಭಕೋಣದಲ್ಲಿ ನಡೆದ ಮಾಘಮಹೋತ್ಸವಾರ್ಥ ಅಲ್ಲಿಗೆ ಹೋಗಿದ್ದವರು ಕೆಲವರಿಗೆ ವಾಂತಿ ಭೇದಿ ತಗಲಿ ಈ ವ್ಯಾಧಿಗೆ ಬಂದ ಮೇಲೆ ಮೊನ್ನೆಯದಿನ ಇಲ್ಲಿ ಮೃತಪಟ್ಟರೆಂದು ಕೇಳುತ್ತೇವೆ.

ಇಲ್ಲಿನ ಚಿಕ್ಕ ಪೇಟೆಯಲ್ಲಿರುವ ಕಂಚಗಾರ ಅಂಗಡಿಯೊಂದಕ್ಕೆ ಕಳೆದ ಶನಿವಾರದದಿನ ರಾತ್ರಿ ಬೆಂಕಿ ತಗಲಿ ಉರಿಯುವದಕ್ಕೆ ಪ್ರಾರಂಭವಾದ ಕೂಡಲೆ ಮಾಳಿಗೆಯ ಮೇಲೆ ಹತ್ತಿ ಚಾವಣಿಯನ್ನು ಕಿತ್ತುಹಾಕಿ ಬೆಂಕಿಯನ್ನಾರಿಸಿಬಿಟ್ಟರು.

ಈಚೆಗೆ ಮೂರುನಾಲ್ಕು ದಿನಗಳ ಹಿಂದೆ ಈ ಪ್ರಾಂತ ಹಳೆ ತಿಪ್ಪೆಕಟ್ಟೆಯಲ್ಲಿರುವ ಒಂದು ಅಂಗಡಿಗೆ ರಾತ್ರಿಕಾಲದಲ್ಲಿ ಕಳ್ಳರು ಪ್ರವೇಶಿಸಿ ಬೀಗ ಮುರಿದು ಅಂಗಡಿಯೊಳಗೆ ಪೆಟ್ಟಿಗೆಯಲ್ಲಿಟ್ಟದ್ದ ದುಡ್ಡನ್ನುಮಾತ್ರ ದೋಚಿಕೊಂಡುಹೋದರಂತೆ

ಈಗ ಮೈಸೂರು ಅರಮನೆಯ ತಾತ್ಕಾಲಿಕ ಸ್ಥಿತಿಯು ಶ್ರೀಮನ್ಮಹಾರಾಜರವರ ವಾಸಕ್ಕೆ ಅನುಕೂಲವಾಗಿಲ್ಲದಿರುವದರಿಂದ ಶ್ರೀಮನ್ಮಹಾರಾಜರವರೂ, ಅವರ ಮಾತುಶ್ರೀ ಮೊದಲಾದವರೂ ಕ್ಷಿಪ್ರದಲ್ಲಿ ಬೆಂಗಳೂರಿಗೆ ಬಂದು ಬಿಡಾರಬಿಡುವ ಪ್ರಸ್ತಾಪವುಂಟಾಗಿದೆ.

ಇಲ್ಲಿನ ಬ್ರಿಟಿಷ್ ರೆಸಿಡೆಂಟರಾದ ಕರ್ನಲ್ ರಾಬರ್ಟ್ಸನ್ ಸಾಹೇಬರವರು ಇದುವರೆಗೆ ಈಗಿನ ಕೆಲಸವನ್ನು ಬದಲೀ ನೋಡುತಲಿದ್ದರಷ್ಟೆ. ಈಗ ಮೈಸೂರು ರೆಸಿಡೆಂಟ್ ಮತ್ತು ಕೊಡಗು ಛೀಫ್ ಕಮಿಷನರಾಗಿ ಖಾಯಂ ಮಾಡಲ್ಪಟ್ಟರೆಂದು ಕೇಳಿ ಸಂತೋಷಿಸುತ್ತೇವೆ.

ಮೈಸೂರು ಅರಮನೆಯಲ್ಲಿ ಈಚೆಗೆ ಪ್ರಾಪ್ತವಾದ ಸಂಕಟದ ದೆಸೆಯಿಂದ ಶ್ರೀಮನ್ಮಹಾರಾಣಿಯವರೂ, ಶ್ರೀಮನ್ಮಹಾರಾಜರವರೂ ಬೇಸಿಗೆಯಬಗ್ಗೆ ಈಸಲ ನೀಲಗಿರಿಗೆ ಹೋಗುವ ಆಲೋಚನೆಯನ್ನು ಸದ್ಯಕೆ ಬಿಟ್ಟಿರುವಂತೆ ತಿಳಿಯಬರುತಿದೆ.

ಕಾಲಸ್ಥಿತಿ.—ಬಿಸಿಲು ದಿನೇದಿನೆ ಬಲಿಯುತಲೂ ರಾತ್ರಿ ಕಾಲದಲ್ಲಿ ಸೆಕೆ ಹೆಚ್ಚುತಲೂ ಬರುತಿವೆ. ತೃಣಜಲಕಾಷ್ಠ ಸಮೃದ್ಧಿಯು ಸಾಮಾನ್ಯವಾಗಿದೆ. ಆಹಾರ ಪದಾರ್ಥಗಳ ಧಾರಣೆಗಳು ಸುತರಾಂ ಇಳಿಯಲಿಲ್ಲವು, ಪರಂತು ಚಡಾವ್‌ನಲ್ಲೇ ಇವೆ. ಜನಾರೋಗ್ಯವು ಸಾಮಾನ್ಯವಾಗಿದೆ, ರೋಗಾದ್ಯುಪದ್ರವಗಳು ಯಾವದೂ ಕಂಡುಬರಲಿಲ್ಲವು.

ಅರಮನೆಯ ದಾಸಿ ಆಳುಗಳಿಗೆ ಸೇರಿದ ಕೊಂಚೆಗಾರ ಜಾತಿ ರಂಗನೆಂಬುವನ ಮನೆಯನ್ನು ಗುಮಾನಿಯಿಂದ ಜಪ್ತಿ ಮಾಡಲು ಅಲ್ಲಿ ಪದಕ ಹಾಕಿದ ಮುತ್ತಿನಸರ, ಚಿನ್ನದ ಕೈಕಡಗ, ಭಾರಿ ಮುತ್ತು, ಕೆಂಪು, ವಜ್ರಗಳು ಕೆತ್ತಿದ್ದ ಪಟ್ಟಿ ಮುಂತಾದ ಬೆಲೆಯುಳ್ಳ ಕೆಲವು ಒಡವೆಗಳು ಸಿಕ್ಕಿದವಂತೆ. ಇದಕ್ಕಾಗಿ ಅವನನ್ನು ಲಷ್ಕರ್ ಪೋಲೀಸ್ ಸ್ಟೇಷನ್ನಲ್ಲಿ ಇಟ್ಟಿರುತ್ತಾರೆಂದು ತಿಳಿಯಬರುತದೆ.

ಶ್ರೀಮನ್ಮಹಾರಾಜ್ಞೀ ವಿಕ್ಟೋರಿಯಾ ಚಕ್ರವರ್ತಿನೀಯವರು ರಾಜ್ಯಧುರವಂ ಕೈಕೊಂಡು ಅರವತ್ತು ಸಂವತ್ಸರಕಾಲ ಪೂರ್ತಿಯಾಗುವದರಿಂದ ತತ್ಪ್ರಯುಕ್ತವಾಗಿ ಇಂಗ್ಲಂಡ್ ರಾಜ್ಯದಲ್ಲಿ ಮಾಡಲುದ್ದೇಶಿಸಲ್ಪಟ್ಟಿರುವ ಮಹೋತ್ಸವಕ್ಕೆ ಈ ಸಂಸ್ಥಾನದ ಪ್ರತಿನಿಧಿಯಾಗಿ ಲೆಫ್ಟಿನೆಂಟ್ ಕರ್ನಲ್ ದೇಶರಾಜೆ ಅರಸಿನವರು ಕ್ಷಿಪ್ರದಲ್ಲಿ ಇಂಗ್ಲಂಡಿಗೆ ಪ್ರಯಾಣಮಾಡುವರೆಂದು ಮೈಸೂರು ಪತ್ರಿಕೆಯೊಂದು ತಿಳಸುತಿದೆ.

ಮೈಸೂರು ಸಂಸ್ಥಾನದ [illegible]ಟ್ರೋಲರಾದ ಮೆ|| ಸುಬ್ರಾಯರವರು ಕ್ಷಿಪ್ರದಲ್ಲಿ ಅರಮನೆಯ ಕಂಟ್ರೋಲರಾಗಿ ನಿಯಮಿಸಲ್ಪಟ್ಟು, ಅವರಿಗೆ ಅಸಿಸ್ಟೆಂಟರಾಗಿ ಕೆಲಸ ನೋಡುತಲಿರುವ ಮೆ|| ಶ್ರೀಕಂಠೇಶ್ವರಯ್ಯರವರು ಸಂಸ್ಥಾನದ ಕಂಟ್ರೋಲರಾಗಿ ನೇಮಕರಾಗ್ಮಾಡಲ್ಪಡುವರೆಂದು ಬಲವಾದ ಒಂದು ಪ್ರವಾದ ಹುಟ್ಟಿರುವಂತೆ ಒಳದೇಶದ ಪತ್ರಿಕೆಯೊಂದು ತಿಳಸುತದೆ. ಇದು ಕೇವಲ ಕಲ್ಪಿತ ಕಥೆಯೆಂದು ನಾವೆಣಿಸುತ್ತೇವೆ.

ಈ ಪ್ರಾಂತ ಧರ್ಮಾಂಬುಧಿ ಕೆರೆಯ ಕೆಳಗಡೆಯಿರುವ ಮ್ಯೂನಿಸಿಪಲ್ ತೋಟದಲ್ಲಿ ಪ್ರತಿ ಭಾನುವಾರದದಿನ ಸಾಯಂಕಾಲದಲ್ಲಿ ನಡೆಯುತಲಿದ್ದ ನೇಟಿವ್ ಓಲಗವನ್ನು ಈಚೆಗೆ ಕೆಲವು ತಿಂಗಳ ಹಿಂದೆ ನಿಲ್ಲಿಸಿ, ಅದಕ್ಕೆ ಬದಲು ಇಂಗ್ಲಿಷ್ ಬ್ಯಾಂಡ್ ವಾದ್ಯವನ್ನು ಯೇರ್ಪಡಿಸಲಾಗಿ, ಅದರ ಮೇಲೆ ಈ ಪೇಟೆಯ ಪ್ರಜೆಗಳು ಗವರ್ನಮೆಂಟಿಗೆ ಅಪೀಲ್ ಮಾಡಿಕೊಂಡಿದ್ದರಷ್ಟೆ. ಸದರೀ ವಿಷಯವಂ ಕುರಿತು ಮರಳಿ ಆಲೋಚಿಸಿ ಅಭಿಪ್ರಾಯವಂ ತಿಳಸಬೇಕೆಂದು ಗವರ್ನಮೆಂಟಿನವರು ಮಾಡಿದ ಪ್ರೊಸೀಡಿಂಗ್ಸ್ ಅನುಸರಿಸಿ, ಈಚೆಗೆ ಕೆಲವು ದಿನಗಳ ಹಿಂದೆ ಮ್ಯೂನಿಸಿಪಲ್ ಕಮಿಷನರ್‌ಗಳು ಮೀಟಿಂಗ್ ಮಾಡಿ ಸದರೀ ವಿಷಯವಂ ಕುರಿತು ಆಲೋಚಿಸಿ, ಒಂದು ತಿಂಗಳಲ್ಲಿ ಯೆರಡುವಾರ ಓಲಗವೂ, ಯೆರಡು ವಾರ ಬ್ಯಾಂಡ್ ವಾದ್ಯವೂ ನಡೆಯತಕ್ಕದ್ದೆಂದು ತೀರ್ಮಾನಿಸಿದಂತೆ ಕೇಳಿ ಸಂತೋಷಿಸುತ್ತೇವೆ. ಇಷ್ಟುಮಟ್ಟಿಗೆ ಆಗುವದಕ್ಕೆ ಮ್ಯೂನಿಸಿಪಲ್ ಮೆಂಬರಾದ ಮೆ ಡಿ. ವೆಂಕಟರಾಮಯ್ಯನವರು ಮುಖ್ಯಕಾರಣರೆಂದು ಕೇಳಿ ವಿಶೇಷತಃ ಸಂತೋಷಿಸುತ್ತೇವೆ.

ಬೆಂಗಳೂರು ಪೇಟೆಯ ಜಿನಿಸಿ ನಿರಖ್ ಪಟ್ಟಿ

		ರೂ.
ಅವ್ವಲ್ ರಾಗಿ ಖಂಡಿ ೧ಕ್ಕೆ	...	೪೦ ೩-೦
ದುಯಂ ರಾಗಿ	"	೩೩-೮
ಅವ್ವಲ್ ಅಕ್ಕಿ ಪಲ್ಲಾ ೧ಕ್ಕೆ	...	೧೫
ದುಯಂ "	" ...	೧೩||-೧೪
ಹೆಸರು	"	೧೦|||
ಉದ್ದು	" ..	೧೦||
ಘಾಟ್ಯಾಪದ ಗೋಧಿ	" ..	೧೨||-೧೪
ಜೋಳ	" ..	೬
ಕಡ್ಲೆ	" ...	೧೧||
ಕಾರಾಮಣಿ	" ...	೮||
ಹರಳು ೬೫ ಸೇರಿನ ಖಂಡಿ ೧ಕ್ಕೆ	...	೩೫
ಹುಚ್ಚೆಳ್ಳು	" ...	೩೭
ಹರಳೆಣ್ಣೆ ಮಣ ೧ಕ್ಕೆ	...	೪|| =
ಕಳ್ಳೆಕಾಯಿ ಎಣ್ಣೆ ಮಣ ೧ಕ್ಕೆ	...	೫
ಒಳ್ಳೆಣ್ಣೆ	" ...	೫|||
ಮೆಣಸು	" ...	೪
ಧನಿಯ	" ...	೧||=
ಸುಳಿಹಣ್ಣು	" ...	೬-೬
ತುಪ್ಪ	" ..	೧೬
ಬೆಲ್ಲ	" ..	೧|=
ಮೆಣಸಿನಕಾಯಿ ಮಣ ೧ಕ್ಕೆ	..	೨೦-೨೬
ಹುರಳಿ ರೂ|| ೧ಕ್ಕೆ ಸೇರು	...	೧೫|||

ಮೈಸೂರು ಅರಮನೆಯು ಸುಟ್ಟುಹೋದದ್ದು

ಕಳೆದ ತಿಂಗಳ ೨೮ನೇ ತಾರೀಖು ಭಾನುವಾರ ಬೆಳಗ್ಗೆ ೭ ಘಂಟೆ ಹೊತ್ತಿನಲ್ಲಿ ದಿವಾನರವರು ಅರಮನೆಗೆ ಹೋಗಿ ಸೌಭಾಗ್ಯವತಿ ಜಯಲಕ್ಷ್ಮಮ್ಮಣ್ಣಿಯವರನ್ನು ಅವರ ಗಂಡಂದಿರಾದ ಮೆ|| ಕಾಂತರಾಜೇ ಅರಸಿನವರ ಮನೆಗೆ ಕಳುಹಿಸಿಕೊಡುವದಕ್ಕೂ ಮನೆತುಂಬಿಸುವದು ಎಂಬ ಶಾಸ್ತ್ರವನ್ನು ಮಾಡಿಸುವದಕ್ಕೂ ಮಹಾರಾಣೀ ರೀಜಂಟರವರ ಸಂಗಡ ಆಲೋಚನೆ ಮಾಡುತ್ತಿದ್ದರು. ಅದಿನ ರಾತ್ರಿಯೇ ಮನೆತುಂಬಿಸುವ ಶಾಸ್ತ್ರಕ್ಕೆ ಬೇಕಾದ ಏರ್ಪಾಡುಗಳನ್ನೆಲ್ಲ ಮಾಡುತ್ತಿದ್ದರು. ಅರಮನೆಯ ಆನೇ ಬಾಗಿಲಿನ ಉತ್ತರಭಾಗದ ಚಪ್ಪರದಲ್ಲಿ ಬೆಂಕಿ ಕಾಣಿಸಿತು. ಆಕಾಶದೇ ತೊಟ್ಟಿಯು ತುಂಬಾ ಸೂರ್ಯರಶ್ಮಿಯು ಕಾಣದಂತೆ ಒಂದುವಾರದ ಕೆಳಗೆ ನಡೆದ ಜ್ಯೇಷ್ಠರಾಜಪುತ್ರಿಯರ ವಿವಾಹ ಮಹೋತ್ಸವಕ್ಕಾಗಿ ಚಪ್ಪರವನ್ನು ಹಾಕಿಸಿದ್ದರು. ಈ ಚಪ್ಪರವನ್ನು ಹೊಸ ಬಟ್ಟೆಗಳಿಂದಲೂ, ನಾನಾ ಬಣ್ಣದ ಕಾಗದಗಳಿಂದಲೂ, ಕಂದೀಲು ಗುಳೋಪೆಗಳಿಂದಲೂ ಮತ್ತು ಕಾಡವೃಗಳಿಂದಲೂ ಮನೋಹರವಾಗಿ ಅಲಂಕಾರ ಮಾಡಿದ್ದರು ಇಂತ ಭಾರೀ ಚಪ್ಪರದಲ್ಲಿ ಉತ್ತರಭಾಗಕ್ಕೆ ಬೆಂಕಿ ತಗಲಿತು. ಒಣಗಿದ್ದ ಕಾಗದ ಬಟ್ಟೆಗಳು, ಬೊಂಬುಗಳು, ಹೆಂಗಿನ ಸೋಗೆ ದಬ್ಬೆಗಳು, ಹುರಿ, ತ್ಯಾಗದ ಸರಗಳು, ಮೊದಲಾದವುಗಳೆಲ್ಲ ನಾಲ್ಕಾರು ನಿಮಿಷಗಳಲ್ಲಿ ಸಂಪೂರ್ಣವಾಗಿ ಹತ್ತಿಕೊಂಡವು. ಅರಮನೆಯ ಹೊರಗಡೆಯಲ್ಲಿ ತಮಾಷೆ ನೋಡುತಿದ್ದ ನೂರಾರುಜನ ಪ್ರಜೆಗಳಿಗೆ ಅರಮನೆಯೊಳಗೆ ಬೆಂಕಿ ಬಿದ್ದಿದೆ ಎಂಬುವದನ್ನು ಹೊಗೆಯಿಂದ ತಿಳಿದು ಓಡಿಹೋಗಿ ಅರಮನೆಯೊಳಕ್ಕೆ ನುಗ್ಗಿದರು. ಅಷ್ಟರೊಳಗಾಗಿ ಈ ಬೆಂಕಿಬಿದ್ದ ವರ್ತಮಾನವು ಒಳಗಿದ್ದ ಮಹಾರಾಣೀ ರೀಜಂಟರಿಗೂ, ದಿವಾನರಿಗೂ, ಕಂಟ್ರೋಲರಿಗೂ ತಿಳಿಯಿತು. ದಿವಾನರು ಮಹಾರಾಣೀ ರೀಜಂಟರನ್ನೂ, ಯುವರಾಜರನ್ನೂ, ರಾಜಪುತ್ರಿಯರನ್ನೂ, ಗಾಡಿಯಲ್ಲಿ ಕೂರಿಸಿ ಬಾಸ ಬಂಗಲೆಗೆ ಕಳುಹಿಸಿ ಕೊಟ್ಟು ಅವಸರದಹೋಬಳಿ, ಜನಾನಿ ತೊಟ್ಟಿ, ಅಂಬಾ ವಿಲಾಸ, ಸೀತಾವಿಲಾಸ, ಬಿಡಾರ, ಈಭಾಗಗಳಲ್ಲಿರುವ ಅತ ಸಮಸ್ತವಾದ ಸಾಮಾನು ಒಡವೆ ವಸ್ತ್ರ ಪದಾರ್ಥಗಳನ್ನೂ ಹೊರಕ್ಕೆ ಸಾಗಿಸುವಂತೆ ಹುಕುಂ ಕೊಟ್ಟರು. ಅರಮನೆಯ ಆಳುಗಳವರೇ ಮುಂತಾದ ಚಾಕರರುನವರು ಚಪ್ಪರವನ್ನು ಕಿತ್ತುಹಾಕಬೇಕೆಂದು ಎಷ್ಟೆಷ್ಟೋ ಪ್ರಯಾಸ ಪಟ್ಟರೂ ಬೆಂಕಿಯನ್ನು ಆರಿಸಬೇಕೆಂದು ಒಳಗಿದ್ದ ನೀರನ್ನೆಲ್ಲ ಸುರಿದರೂ ಪ್ರಯೋಜನವಾಗಲಿಲ್ಲ. ಹೊರಗಿನಿಂದ ಬಂದು ಬಾಗಿಲಲ್ಲಿ ನಿಂತಿದ್ದ ಪ್ರಜೆಗಳೆಲ್ಲ ಏಕಮುಖವಾಗಿ ಬಿಟ್ಟರೆ ನಮ್ಮನ್ನು ಒಳಕ್ಕೆ ಬಿಡಿಸಿ ನಾವೆಲ್ಲಾ ಸೇರಿ ಚಪ್ಪರವನ್ನು ಕಿತ್ತುಹಾಕಿ ಬೆಂಕಿಯನ್ನು ಆರಿಸುತ್ತೇವೆ. ನಮ್ಮ ಪ್ರಭುವಿನ ಮನೆ ಹಾಳಾಗುತ್ತದಲ್ಲ ಎಂದು ಅಧಿಕಾರಿಗಳನ್ನು ಎಷ್ಟೆಷ್ಟೋ ಕೇಳಿಕೊಂಡರೂ ಅಧಿಕಾರಿಗಳ್ಯಾರೂ ಇವರ ಮಾತಿಗೆ ಕಿವಿಗೊಡಲಿಲ್ಲ ನೀವೆಲ್ಲ ಅರಮನೆಯೊಳಕ್ಕೆ ನುಗ್ಗಿ ಇದ್ದಬದ್ದದನ್ನೆಲ್ಲ ಕದ್ದುಕೊಂಡು ಹೋಗಬೇಕೆನ್ನುತ್ತೀರಾ, ಎಂದಿಗೂ ನಿಮ್ಮನ್ನು ಒಳಕ್ಕೆ ಬಿಡುವದಿಲ್ಲ. ಬಲಾತ್ಕಾರವಾಗಿ ನೀವೇನಾದರೂ ನುಗ್ಗಿದರೆ ನಿಮ್ಮನ್ನೆಲ್ಲಾ ಹೊಡೆಸಿಬಿಡುತ್ತೇವೆ ಎಂದು ಹೇಳಿ ಹೆದರಿಸಿದರು. ಆಗ ಅವರೆಲ್ಲ ಕಣ್ಣೀರು ಸುರಿಸುತ್ತಾ ಹೊರಗೇ ನಿಂತಿದ್ದರು. ಇವರನ್ನು ಬಿಟ್ಟಿದ್ದರೆ ಚಪ್ಪರವು ಅವರ ಮೇಲೆ ಬಿದ್ದು ಬಹಳ ಪ್ರಾಣಹಾನಿಯಾಗುತಿತ್ತೆಂಬುವದಕ್ಕೆ ಸಂದೇಹವಿಲ್ಲ. ಅಷ್ಟುಹೊತ್ತಿಗೆ ಸುಮಾರು ಕಾಲುಘಂಟೆಯೊಳಗಾಗಿ ಬೆಂಕಿಯು ಚಪ್ಪರವನ್ನೆಲ್ಲ ಸುಟ್ಟು ಭಸ್ಮಮಾಡಿ ಸಮೀಪ ಇದ್ದ ಕುದುರೆ ತೊಟ್ಟಿಗೆ ಹತ್ತಿಕೊಂಡಿತು. ಅದರ ಭಾರೀ ಕಂಭಗಳೆಲ್ಲ ಹತ್ತಿಕೊಂಡು ಉರಿಯಲಾರಂಭವಾಯಿತು. ಈ ಮಧ್ಯರಂಗದ ಸುತ್ತಲೂ ಅರಮನೆಯ ಅಂಚಿನಲ್ಲಿ ಮರದ ತೊಲೆಗಳು ಗೋಡೆಯಷ್ಟೆ ಅವುಗಳಿಗೂ ಜ್ವಾಲೆಯು ಚಿಮ್ಮಿ ಹತ್ತಿಗೊಂಡಿತು. ವಿಶೇಷ ಮಂಟಪವು ಉರಿದು ಬೂದಿಯಾಯಿತು ಈ ಕಾಲದಲ್ಲೆಲ್ಲ ಅರಮನೆಯ ನೌಕರರೆಲ್ಲ ವಿಶೇಷವಾಗಿ ಸಾಮಾನುಗಳನ್ನು ಹೊರಕ್ಕೆ ಸಾಗಿಸುವದರಲ್ಲೇ ಮಗ್ನರಾಗಿದ್ದರು ಆನೆ ಬಾಗಲಿಂದ ಒಳಕ್ಕೆ ಯಾರೂ ಹೋಗದಹಾಗಾಯಿತು. ಅಲ್ಲೇ ನಿಂತು ನೀರು ಎರಚುವದಕ್ಕಾರಂಭಿಸಿದರು. ಅಷ್ಟರಿಂದು ಅರಮನೆಯೆಲ್ಲ ಹತ್ತಿ ಉರಿಯುತ್ತಿರುವಾಗ್ಯೆ ಇವರು ಚೆಲ್ಲಿದ ನೀರು ಎಲ್ಲಿಗೆ ಹೋಯಿತೋ ಅರಮನೆಯು ಮುಂದೆಲ್ಲ ಹೆಜ್ಜೆ ಮುಣುಗುವಷ್ಟು ನೀರು ನಿಂತಿದ್ದರೂ ಬೆಂಕಿಯ ಜ್ವಾಲೆಯೋ ಪ್ರತಿ ನಿಮಿಷದಲ್ಲೂ ಪ್ರಬಲವಾಗುತ್ತ ಬಂತು. ಯಾರನ್ನು ನೋಡಿದರೂ ಮುಂದೇನುಗತಿ! ಮುಂದೇನುಗತಿ! ನಮ್ಮ ಪ್ರಭುವಿನ ಮನೆ ಹೋಯಿತಲ್ಲಾ! ಎಂದು ಧ್ವನಿಮಾಡುತ್ತಿದ್ದರು. ಸುಮಾರು ೧೦ ಘಂಟೆಯ ಹೊತ್ತಿಗೆ ಈ ಉರಿಯನ್ನು ನಿಲ್ಲಿಸುವದಕ್ಕೆ ತಮ್ಮಿಂದ ಆಗಲಾರದು ಎಂದು ಅಧಿಕಾರಿಗಳಿಗೆ ಗೊತ್ತಾಯಿತು. ಆದಕಾರಣ ಬೆಂಕಿಗೆ ಹಿಂಡದ್ದೇ ಲಾಭ ಎಂಬ ನಾಣ್ಣುಡಿಗನುಸಾರವಾಗಿ ಅವಷ್ಟು ಸಾಮಾನುಗಳನ್ನೂ ಒಳ್ಳೆ ಭಂಡಾರಗಳನ್ನೂ ಪೆಟ್ಟಿಗೆ ಜಮಾಖಾನೆಗಳ್ನು—ಮುಖ್ಯವಾಗಿ ಕೈಗೆ ಸಿಕ್ಕಿದ್ದನ್ನೆಲ್ಲಾ ಹೊರಕ್ಕೆ ಸಾಗಿಸುತ್ತಾ ಬಂದರು. ದಿವಾನರು ಕೌನ್ಸಿಲ್ ಮೆಂಬರುಗಳು ಅಧಿಕಾರಿಗಳು ಎಲ್ಲರೂ ಹಾಜರಾಗಿದ್ದರು ಬೆಳ್ಳಿ ಬಂಗಾರದ ಸಾಮಾನುಗಳು ಕೋಟೆಯ ಹೊರಕ್ಕೆ ಹೋಗಬಹುದೆಂದು ಸರಿಯಾಗಿ ಯೋಚಿಸಿ ಸುಮಾರು ೧೧ ಘಂಟೆಯಲ್ಲಿ ಕೋಟೆಯ ನಾಲ್ಕು ಬಾಗಲುಗಳನ್ನೂ ಮುಚ್ಚಿ ಪಹರೆ ಇಡುವಂತೆ ಸಿಪಾಯರಿಗೂ ಪೋಲೀಸಿನವರಿಗೂ ಆಜ್ಞೆ ಆಯಿತು. ಆದರೆ ನೀರು ಹಾಕಿ ಬೆಂಕಿಯನ್ನು ಆರಿಸುವದಕ್ಕಾಗಿ ಎಷ್ಟು ಜನ ನುಗ್ಗಿದ್ದರೋ ವಿಚಾರಿಸಬೇಕು—ಒಂದು ಜಾತಿಯವರಲ್ಲ, ಒಂದು ಇಲಾಖೆಯವರಲ್ಲ, ಒಂದು ಕೋಮಿನವರಲ್ಲ, ಸಾಹುಕಾರ ಜನಗಳೂ ಬ್ರಾಹ್ಮಣರ ಮುಂತಾದ ನಾನಾ ವರ್ಣದವರೂ ಅಧಿಕಾರಿಗಳೂ ಶ್ರೀ ಮಹಾರಾಜರ ಅರಮನೆಯನ್ನು ಉಳಿಸಿಕೊಡುತ್ತೇವೆಂಬ ಆಶೆಯಿಂದ ದುಡಿದು ಸೋತರು, ಆದರೂ ಪ್ರಯೋಜನವೇನು ? ಅರಮನೆಯು ಸುಟ್ಟು ಬೂದಿಯಾಯಿತು. ಬೆಳಿಗ್ಗೆ ಬೆಂಕಿ ಹುಟ್ಟಿದ ಕೂಡಲೇ ಪ್ರಜೆಗಳನ್ನು ಅಡ್ಡಿಮಾಡದೆ ಒಳಕ್ಕೆ ಬಿಟ್ಟಿದ್ದರೆ ಚೆನ್ನಾಗಿತ್ತೆಂತಲೂ, ಅಷ್ಟೊಂದು ಸಂಪೂರ್ಣವಾಗಿ ಹಾಳಾಗುತ್ತಿರಲಿಲ್ಲವೆಂತಲೂ ಹೇಳುತ್ತಿದ್ದಾರೆ ಅದಲ್ಲದೆ ಸುಮಾರು ೧೦-೧೧ ಘಂಟೆ ಹೊತ್ತಿಗೆ ಈ ಬೆಂಕಿಯು ರೌದ್ರಾಕಾರವನ್ನು ತಾಳಿ ಯಾರಿಗೂ ಅಸಾಧ್ಯವಾಗಿದೆ ಎಂದು ಎಲ್ಲರಿಗೂ ಗೊತ್ತಾದಾಗಲೇ ತಂತೀ ವರ್ತಮಾನ ಕೊಟ್ಟು ಬೆಂಗಳೂರಿಂದ ಸ್ಪೆಷಲ್ ಟ್ರೈನಿನಲ್ಲಿ ಫೈರ್‌ಮನ್ ಎಂಬ ಸಿಪಾಯಿಗಳನ್ನು ತರಿಸಿಕೊಂಡಿದ್ದರೂ ಅರಮನೆಯ ಮುಂಭಾಗವಾದ ನಜ್ಜಗೋಪುರದ ೭ ಅಂತಸ್ತಿನ ಮಹಡಿ ಇಷ್ಟೆಲ್ಲ ಉರಿದರೂ ಉಳಿಯುವದಾಗಿತ್ತೆಂದೂ ಹೇಳುತ್ತಾರೆ ಇಷ್ಟೆಲ್ಲಾ ಆಗುವಾಗ್ಯೆ ರಾಜಧಾನಿಯಲ್ಲಿ ಬೆಂಕಿಯನ್ನು ಆರಿಸುವಂಥ ಒಂದು ಯಂತ್ರವಿಲ್ಲವೇ ಎಂದು ವಾಚಕರು ಕೇಳಬಹುದು ಈ ವಿಷಯದಲ್ಲಿ ನಾವು ಬರೆಯುವದಕ್ಕೂ ನಮಗೆ ನಾಚಿಕೆಯಾಗುತ್ತದೆ. ನಮ್ಮ ಮ್ಯೂನಿಸಿಪಾಲಿಟಿಯವರು ಮತ್ತೆ ಕೊಟ್ಟು ತರಿಸಿಟ್ಟಿರುವ ಯಂತ್ರವನ್ನು ಪ್ಯಾಗೆ ಪ್ಯಾಗೆ ಅಟ್ಟ ಪ್ರಯಾಸಮಾಡಿದರೂ ಒಬ್ಬರ ಜಬರ ಚಕ್ರದ ನಲ್ಲಿಯೊಳಕ್ಕೆ ನೀರೇ ಹತ್ತದೆ ಹೋಯಿತು ಅದರಿಂದ ಯಾವ ಪ್ರಯೋಜನವೂ ಆಗಲಾರದೆಂದು ತೀರ್ಮಾನಿಸಿ ನೀರನ್ನು ಹೊತ್ತು ಎರಚಿ ಬೆಂಕಿ ಆರಿಸುವದಕ್ಕೆ ಪ್ರಯತ್ನಪಡಿಸಿದರು. ಸಣ್ಣ ಉಳಿಯುವದು

ಷ್ಟ್ರವೆಂದು ತಿಳಿದ ಕೂಡಲೇ ಮೇಲಿದ್ದ ಸಿಂಹಾಸನ, ಚಿನ್ನದ ಕನ್ನಡಿ ಮುಂತಾದವುಗಳನ್ನೆಲ್ಲಾ ತೆಗೆದು ಸಾಗಿಸಿಬಿಟ್ಟರು. ಅರಮನೆಯ ಉತ್ತರಭಾಗದ ಉಪ್ಪರಿಗೆಯ ಮೊದಲನೇ ಕೊಠಡಿಯಲ್ಲಿ ದಿನಾವರಿ ವಾದ್ಯಗಳನ್ನು ಇಟ್ಟಿದ್ದರು. ಇದಕ್ಕೆ ಗಾಯನಶಾಲೆ ಎಂದು ಹೆಸರಿಟ್ಟಿದ್ದರು ಎರಡನೇ ಕೊಠಡಿಯಲ್ಲಿ ಬಹು ಪುರಾತನ ಕಾಲದಿಂದ ಬಂದ ಪುಸ್ತಕಗಳನ್ನೆಲ್ಲಾ ಕೂಡಿಸಿಟ್ಟಿದ್ದರು. ಇದಕ್ಕೆ ಸರಸ್ವತೀಭಂಡಾರವೆಂದು ಹೆಸರಿತ್ತು. ಇನ್ನೊಂದು ಕೊಠಡಿಯಲ್ಲಿ ಸಕಲವಿಧವಾದ ಸರ್ವೋತ್ತಮವಾದ ಆಯುಧಗಳೂ ಇಡಲ್ಪಟ್ಟಿದ್ದುವು. ಈ ಕೊಠಡಿಗೆ ಆಯುಧಶಾಲೆ ಎಂದು ಹೆಸರಿತ್ತು. ಈ ಮೂರು ಕೊಠಡಿಗಳು ಸುಟ್ಟು ಬೂದಿಯಾದವೆಂದು ಕೇಳಿ ಮರುಗದವರು ಇಲ್ಲ. ಚಿನ್ನ ಬಂಗಾರ, ಮುತ್ತು, ರತ್ನಗಳನ್ನು ಕ್ರಯಕ್ಕೆ ಪಡೆಯಬಹುದು. ಈಗ ಸುಟ್ಟುಹೋದ ಪದಾರ್ಥಗಳು ಬೆಲೆಯಿಲ್ಲದವುಗಳಾಗಿಯೂ ಪುನಃ ದೊರೆಯಲಾರದವುಗಳಾಗಿಯೂ ಇರುವುವು. ಅತ್ತಲಾಗಿ (ಹೊಸ ಅಂಬಾವಿಲಾಸ) ದರ್ಬಾರ್ ಹಾಲಿನಲ್ಲಿ ಬೆಂಕಿಯ ಹಾವಳಿಯನ್ನು ಏನೆಂದು ಹೇಳೋಣ! ಲೇಟ್ ಮಹಾರಾಜಾ ಚಾಮರಾಜೇಂದ್ರ ಒಡೆಯರವರು ಬಹಳವಾಗಿ ಪ್ರೀತಿಯಿಂದ ಮೆಚ್ಚಿ ಮೆಚ್ಚಿ ಕಟ್ಟಿಸಿದ್ದರಲ್ಲಾ, ಅದೂ ಅವರು ತಯಾರಾದದ್ದನ್ನು ನೋಡುವ ಕಾಲವಾಗಿ ಈಚೆಗೆ ಮೊನ್ನೆ ತಾನೇ ೨ ವರ್ಷಗಳ ಕೆಳಗೆ ಮುಕ್ತಾಯವಾಗಿತ್ತು. ಇಂತಾ ಹೊಸ ಅಂಬಾವಿಲಾಸಕ್ಕೆ ತಗಲಿದ ಬೆಂಕಿಯು ಎರಡು ಅಂತಸ್ತುಗಳಲ್ಲಿದ್ದ ಸಮಸ್ತವಾದ ಮರದ ಸಾಮಾನನ್ನೂ ಸುಡು ಬೂದಿಮಾಡಿತು ಕಬ್ಬಿಣದ ತೊಲೆಗಳೂ, ಜೋಡಿಗೆಗಳೂ, ಸಲಾಕಿಗಳೂ, ಸಾಯಿ ಕಂಭಗಳೂ, ಗಾರೆಕಲ್ಲುಗಳಿಂದ ನಿಲ್ಲಿಸಲ್ಪಟ್ಟಿರುವ ಕಂಭಗಳೂ ಇವೇ ಉಳುಕೊಂಡಿವೆ. ಈ ಕಟ್ಟಡವನ್ನೆಲ್ಲಾ ಸುಟ್ಟುಬಿಟ್ಟಿತು ಹಿಂದುಗಡೆ ಕಾಲೇಕಲ್ಲುತೊಟ್ಟಿ, ಬಂಗಾರದ ತೊಟ್ಟಿ, ಕನ್ನಡೀ ತೊಟ್ಟಿ ಎಂಬೀ ಮುಂತಾದ ಕೆಲವು ಭಾಗಗಳು ಮಾತ್ರ ಬೆಂಕಿಯ ಜ್ವಾಲೆಗೆ ಸಿಕ್ಕದಂತೆ ಕಾಪಾಡಿಕೊಂಡರು ಅದೇ ಭಾನುವಾರ ಸಾಯಂಕಾಲ ದಿವಾನರವರು ಉರಿಯುತ್ತಿರುವ ಅರಮನೆಯ ಮುಂದೆ ಬಂದು ನಿಂತುಕೊಂಡು ಈ ಅಗ್ನಿಜ್ವಾಲೆಯು ಕೋಟೆಗಲ್ಲ ಎಲ್ಲಿ ಹಬ್ಬಿ ಕೊಳ್ಳೆ ಮಾಡುವುದೋ ಎಂದು ಯೋಚಿಸಿ ಆಗ ಬೆಂಗಳೂರಿಗೆ ತಂತಿ ವರ್ತಮಾನವನ್ನು ಕೊಟ್ಟರಂತೆ ಸ್ಪ್ಯಾಗೂ ಬೆಂಗಳೂರು ದಂಡಿನಿಂದ ಅದೇ ಭಾನುವಾರ ಸಾಯಂಕಾಲ ೭ ಘಂಟೆಗೆ ೩೫ ಜನ ಸಯನಿಯರ್ ಎಂಬ ೩ ಸಾಯಿಗಳು ೩ ನೀರಿನ ಯಂತ್ರಗಳನ್ನು ತೆಗೆದುಕೊಂಡು ಸ್ಪೆಷಲ್ ರೈಲಿನಲ್ಲಿ ಹೊರಟು ಸುಮಾರು ೧೨ ಘಂಟೆಗೆ ರಾಜಧಾನಿಗೆ ಬಂದರು, ಆಗಲೇ ಸಜ್ಜೆಯೂ, ಮೇಲಣ ಅಂತಸ್ತುಗಳೂ ಕೆಲಸಗಳ ಸಮೇತ ಬಿದ್ದವು. ಇವರು ಬಂದು ಪಂಪುಗಳನ್ನು ಬೇರೆ ಬೇರೆ ಕಡೆಗಳಲ್ಲಿ ಇಟ್ಟು ಜನರಿಂದ ಒತ್ತಿಸಿ ಪಂಪು ನಲ್ಲಿಗಳನ್ನು ಹಿಡಿದು ಬೆಂಕಿಯನ್ನು ಆರಿಸುವದಕ್ಕೆ ಪ್ರಾರಂಭಿಸಿದರು. ಇನ್ನೂ ಆರಿಸುತ್ತಲೇ ಇದ್ದಾರೆ. ಮುಂದಕ್ಕೆ ಬೆಂಕಿಯು ಹಬ್ಬದಂತೆ ಕೆಲವು ಭಾಗಗಳನ್ನೆಲ್ಲಾ ಸಬ್ಬಲಿಂದಲೂ ಗುದ್ದಲಿಗಳಿಂದಲೂ ಕೆಡವಿರುತ್ತಾರೆ, ಇನ್ನೂ ಕೆಡವುತ್ತಲಿದ್ದಾರೆ. ಸಧ್ಯದಲ್ಲಿ ಮೂರು ಜನರು ಸತ್ತುಹೋಗಿದ್ದಾರೆಂದು ತಿಳಿದು ಬಂದಿದೆ. ಇನ್ನೂ ಬಿದ್ದಿರುವ ಗೋಡೆಗಳನ್ನೆಲ್ಲಾ ಅಗೆದು ನೋಡಿದಾಗ ಎಷ್ಟು ಜನ ಸುಟ್ಟುಹೋದರೆಂಬುವದು ಗೊತ್ತಾಗಬೇಕು ಇನ್ನೂ ಎಲ್ಲರಿಗೂ ಬೆಂಕಿ ಆರಿಸುವದೇ ಕೆಲಸವಾಗಿದೆ—ವೃ ಪ,

ಪ್ರಜಾ ಪ್ರತಿನಿಧಿ ಸಭಾ ಸ್ಟ್ಯಾಂಡಿಂಗ್ ಕಮಿಟಿ ಪ್ರೊಸೀಡಿಂಗ್ಸ್.

ಸನ್ ೧೮೯೭ನೇ ಇಸವಿ ಫೆಬ್ರವರಿ ೨೦ರಲ್ಲು ಮಧ್ಯಾಹ್ನ ೧ ಘಂಟೆಗೆ ಮೈಸೂರು ಟೌನ್‌ಹಾಲಿನಲ್ಲಿ ನಡೆದ ಪ್ರಜಾಪ್ರತಿನಿಧಿಗಳ ಸ್ಟ್ಯಾಂಡಿಂಗ್ ಕಮಿಟಿ ಮೀಟಿಂಗಿನ ಪ್ರೊಸೀಡಿಂಗ್ಸ್.

ಹಾಜರಿದ್ದ ಮೆಂಬರುಗಳು.

ಮ|| ಎಚ್. ಎಸ್. ನಂಜುಂಡರಾಯರು, ಮ|| ಡಿ. ವೆಂಕಟರಾಮಯ್ಯನವರು, ಮ|| ಎ. ರಾಮಣ್ಣನವರು, ಮ|| ಪಂಡಿತ ಆನಂದಾಳ್ವಾರ್ರವರು, ಮ|| ಕಾಮಣ್ಣನವರು, ಮ|| ತಿರುವೆಂಗಡಮೊದಲಿಯಾರ್ರವರು, ಮ|| ಹುಣಸೂರು ನರಸೈಯ್ಯನವರು, ಮ|| ಎಜಮಾನ ನರಸಿಂಹಯ್ಯನವರು, ಮ|| ಎಂ. ವೆಂಕಟಕೃಷ್ಣಯ್ಯನವರು, ಮ|| ದೊಡ್ಡಬಳ್ಳಾಪುರದ ಸದಾಶಿವರಾಯರು, ಮ|| ಎಚ್. ಕೃಷ್ಣರಾಯರು, ಮ|| ನಾವಿಗ ಶಿವಪ್ಪನವರು, ಮ|| ಎಸ್. ರಾಮದಾಸಪ್ಪನವರು, ಮ|| ಎಚ್. ರಂಗೈಯ್ಯಂಗಾರ್ರವರು, ಮ|| ಹೊಸಕೋಟೆ ರಾಮಣ್ಣನವರು, ಮ|| ಗೋವಿಂದಶೆಟ್ಟರವರು, ಮ|| ದೊಡ್ಡಬಳ್ಳಾಪುರದ ಶ್ರೀನಿವಾಸಮೂರ್ತಿಗಳು.

ಸುಮಾರು ೨ ಘಂಟೆಗೆ ಮೆಂಬರುಗಳು ಸೇರಿದರು. ಮೀಟಿಂಗು ಉಪಕ್ರಮವಾದ ಕೂಡಲೆ ಪ್ರೆಸಿಡೆಂಟರಾದ ಮ|| ಎಚ್. ಎಸ್ ನಂಜುಂಡರಾಯರವರು, ಜನವರಿಯಲ್ಲಿ ಆಗಬೇಕಾದ ಮೀಟಿಂಗು ಈಗ ನಡೆಯುವದಕ್ಕೆ ಈ ಮಧ್ಯೆ ದಸರಾ ಕಾಲದಲ್ಲಿ ಪ್ರತಿನಿಧಿಗಳು ಬರತಕ್ಕ ಸಂದರ್ಭದಲ್ಲಿ ಈ ಮೀಟಿಂಗು ಕೂಡ ಈಗ ನಡೆಯುವಂತೆ ಮಾಡಲ್ಪಟ್ಟಿತೆಂದು ಹೇಳಿ ಮೀಟಿಂಗು ಕರೆಯುವದಕ್ಕೋಸ್ಕರ ಕೊಡಲ್ಪಟ್ಟಿದ್ದ ನೋಟೀಸನ್ನು ಓದಿದರು. ತರುವಾಯ ಮ|| ಸದಾಶಿವರಾಯರು " ಈ ಮೀಟಿಂಗು ಉಪಕ್ರಮವಾಗುವದಕ್ಕೆ ಮುಂಚೆಯೇ ನಮ್ಮ ಶ್ರೀಮನ್ಮಹಾರಾಜ್ಞೀಯವರ ಜ್ಯೇಷ್ಠಪುತ್ರಿಯರಾದ ಸೌ|| ಜಯಲಕ್ಷಮ್ಮಣ್ಣಿಯವರನ್ನು ಮ|| ಕಾಂತರಾಜೇ ಅರಸು ಬಿ ಎ ಯವರಿಗೆ ಕೊಟ್ಟು ಮಾಡಿಸಿದ ಲಗ್ನವು ಬಹಳ ವಿಚಕ್ಷಣೆಯಿಂದ ನಡೆದದ್ದರಿಂದ ಈ ವಿಷಯದಲ್ಲಿ ಈ ಸಂಸ್ಥಾನದ ಪ್ರಜೆಗಳಿಗೂ ನಮಗೂ ಉಂಟಾಗಿರತಕ್ಕ ಸಂತೋಷಾತಿಶಯವನ್ನು ಶ್ರೀಮನ್ಮಹಾರಾಜ್ಞೀಯವರಿಗೆ ಅವರ ಪ್ರೈವೇಟ್ ಸೆಕ್ರೆಟರಿಯವರ ಮೂಲಕ ತಿಳಿಸಬೇಕೆಂದು ಪ್ರಸ್ತಾಪಿಸಿದರು ಇದನ್ನು ಮ|| ತಿರುವೆಂಗಡಮೊದಲಿಯಾರ್ರವರು ಅನುಮೋದಿಸಿದರು. ಇದಕ್ಕೆ ಸರ್ವರೂ ಒಪ್ಪಿದರು. ಈ ರೆಜಲ್ಯೂಷನ್ನಿಗೆ ಅನುಸಾರವಾಗಿ ಶ್ರೀಮನ್ಮಹಾರಾಜ್ಞೀಯವರಿಗೆ ಒಪ್ಪಿಸಲ್ಪಟ್ಟ ಈ ಕೆಳಗೆ ನಮೂದಿಸಿರುವ ವಿಜ್ಞಾಪನಾಪತ್ರಿಕೆಯು ಸರ್ವರಿಂದಲೂ ಒಪ್ಪಲ್ಪಟ್ಟಿತು.

ಶ್ರೀಮನ್ಮಹಾರಾಜ್ಞೀ ಮೈಸೂರು ರೀಜೆಂಟರಾದ ವಾಣೀವಿಲಾಸ ಸನ್ನಿಧಾನದ ಶ್ರೀಮನ್ಮಹಾರಾಜ್ಞೀಯವರ ಚರಣಸನ್ನಿಧಾನಂಗಳಲ್ಲಿ

ಮೈಸೂರು ಪ್ರಜಾಪ್ರತಿನಿಧಿಸಭಾ ಮೆಂಬರುಗಳಾದ ಈ ಪ್ರೊಸೀಡಿಂಗ್ಸಿನಲ್ಲಿ ನಮೂದಿಸಲ್ಪಟ್ಟ ನಾವುಗಳು ರಾಜಭಕ್ತಿ ವಿಶ್ವಾಸ ಪೂರ್ವಕವಾಗಿ ಒಪ್ಪಿಸತಕ್ಕ ವಿಜ್ಞಾಪನೆಗಳು, ಏನೆಂದರೆ —

ತಮ್ಮ ಜ್ಯೇಷ್ಠಪುತ್ರಿಯವರಾದ ಸೌ|| ಜಯಲಕ್ಷಮ್ಮಣ್ಣಿಯವರನ್ನು ಮ|| ಕಾಂತರಾಜೆ ಅರಸಿನವರಿಗೆ ಕೊಟ್ಟು ಬೆಳಸಿದ ಲಗ್ನವು ಈ ಸಂಸ್ಥಾನದ ಪ್ರಜೆಗಳಿಗೂ ನಮಗೂ ಅತ್ಯಂತಾನಂದವನ್ನು ಉಂಟುಮಾಡಿ ಇದೆ. ಶುಭಮಹೋತ್ಸವದಲ್ಲಿ ಈ ವಿವಾಹವು ಸ್ವಾಮಿಗೂ ಆನಂದಮಯವಾಗಿ ಪರಿಣಮಿಸಿದ್ದರಿಂದ ನಮಗೆ ಉಂಟಾದ ಸಂತೋಷವನ್ನು ಮಹಾ ಪಾದದಲ್ಲಿ ವಿಜ್ಞಾಪಿಸಿಕೊಳ್ಳತಕ್ಕ ನಮ್ಮ ಸಂತೋಷ ರಾಜಭಕ್ತಿಗಳು ತಮಗೂ ಸಂತೋಷವನ್ನು ಉಂಟುಮಾಡಬಹುದೆಂದು ನಂಬಿ ಇದ್ದೇವೆ.

ಜಗದೀಶ್ವರನು ಈ ವಧೂವರರಿಗೆ ಚಿರ ಆರೋಗ್ಯ ಐಶ್ವರ್ಯಾದಿಗಳೇ ಮೊದಲಾದ ಸಕಲ ಸಂಪತ್ತುಗಳನ್ನು ಕೊಟ್ಟು ಸಲಹಿ ಆದರಿಂದ ತಮ್ಮ ಮನಸ್ಸನ್ನು ಸಂತೋಷಪಡಿಸುವದಲ್ಲದೆ ಮಹಾ ಪಾದದ ಪ್ರಜೆಗಳಾದ ನಮಗೂ ಸಂತೋಷಾತಿಶಯವನ್ನುಂಟು ಮಾಡಬೇಕೆಂದು ನಾವು ಭಕ್ತಿಪುರಸ್ಸರವಾಗಿ ಕೋರುತ್ತೇವೆ.

ಶ್ರೀಮಹಾಸ್ವಾಮಿಯವರ ಪ್ರಜೆಗಳಾದ ಮೈಸೂರು ಪ್ರಜಾಪ್ರತಿನಿಧಿಗಳು.

II ಈ ರೆಜಲ್ಯೂಷನ್ ಪಾಸಾದ ಕೂಡಲೆ ರೇಖಾಕ್ರಮವಾಗಿರತಕ್ಕ ರಿಸೆಟಲ್‌ಮೆಂಟ್ ವಿಚಾರವು ಚರ್ಚಿಸಲ್ಪಟ್ಟಿತು. ಈ ವಿಷಯದಲ್ಲಿ ಅನೇಕ ಪ್ರತಿನಿಧಿಗಳು ಸರ್ವೇ ಅಧಿಕಾರಿಗಳಿಂದಲೂ ನೌಕರರಿಂದಲೂ ರೈತರಿಗೆ ಉಂಟಾಗತಕ್ಕ ಕಿರಿಕಿರಿಯನ್ನು ಕುರಿತು ತಮ್ಮ ತಮ್ಮ ಅನುಭವವಿಚಾರಗಳನ್ನು ತಿಳಿಸಿದರು " ಕೆಲವು ಸ್ಥಳಗಳಲ್ಲಿ ಕಳೆದ ಸಾರಿ ನಡೆದ ಸರ್ವೇ ಸೆಟಲ್‌ಮೆಂಟು ನ್ಯಾಯವಾಗಿಲ್ಲವೆಂಬದಾಗಿಯೂ, ಕಂದಾಯವು ಬಹಳ ಜಾಸ್ತಿಯಾಗಿ ಬಿದ್ದಿದೆ ಎಂಬದಾಗಿಯೂ, ಇಂಥಾ ಸ್ಥಳಗಳಲ್ಲಿ ಕಂದಾಯವು ಸರಿಯಾಗಿರುವದರಿಂದ ಆ ಪ್ರದೇಶಗಳಲ್ಲಿ ರೀ ಸರ್ವೇ ಆವಶ್ಯಕವಿಲ್ಲವೆಂಬದಾಗಿಯೂ, ಪಿರ್ಯಾದು ಬರತಕ್ಕ ಸ್ಥಳಗಳಲ್ಲಿ ಮಾತ್ರ ಸರ್ವೇ ಮಾಡಿ ಪರ್ಮನೆಂಟ್ ಸೆಟಲ್‌ಮೆಂಟು ಮಾಡ ಬೇಕಾದ ಅವಶ್ಯಕವೆಂಬದಾಗಿಯೂ, ಹಾಗೆ ಮಾಡಿದ ಪಕ್ಷದಲ್ಲಿ ರೈತರು ವಿಶೇಷ ಶ್ರದ್ಧೆಯಿಂದ ತಮ್ಮ ಜಮೀನುಗಳನ್ನು ರೂಢಿಸಿ ತಮ್ಮ ಹೀನಸ್ಥಿತಿಯಿಂದ ವಿಮುಕ್ತರಾಗುವದಕ್ಕೆ ಅವಕಾಶವನ್ನು ಹೊಂದುವರೆಂಬದಾಗಿಯೂ, ಹೆಚ್ಚು ಕಂದಾಯವು ಬಿದ್ದಿರತಕ್ಕ ಸ್ಥಳಗಳಲ್ಲಿ ಸರಿಯಾದ ಕಂದಾಯವನ್ನು ಬೈಖಲಿ ಮಾಡಿ ಎಲ್ಲಾ ಸ್ಥಳಗಳಲ್ಲಿಯೂ ಜಮೀನಿನ ಗುಣವೇ ಮೊದಲಾದವುಗಳಿಗೆ ಅನುರೂಪವಾಗಿಯೂ ವಿಶೇಷ ಹೆಚ್ಚು ಕಡಿಮೆ ಇಲ್ಲದ್ದಾಗಿಯೂ ಇರುವಂತೆ ಕಂದಾಯಗಳನ್ನು ವಿಧಿಸಿ ಈ ಸೆಟಲ್‌ಮೆಂಟನ್ನೇ ಪರ್ಮನೆಂಟನ್ನಾಗಿ ಮಾಡಬೇಕೆಂಬದಾಗಿಯೂ, ತರೀ ಬಾಗಾಯಿತು ಕಮ್ಮಿ ಇವುಗಳು ಬದಲಾವಣೆಯಾಗಿರುವ ಜಮೀನುಗಳಿಗೆ ಮಾತ್ರ ಸರ್ವೇ ಮಾಡಬಹುದೆಂಬದಾಗಿಯೂ, ಮಿಕ್ಕವುಗಳಿಗೆ ಸರ್ವೇ ಆವಶ್ಯಕವಿಲ್ಲ ಜನಗಳಿಗೆ ಬಹಳ ತೊಂದರೆಯಾಗುವದೆಂಬದಾಗಿಯೂ, ಸರ್ಕಾರದವರು ಪ್ರಾರ್ಥಿಸಲ್ಪಡಬೇಕೆಂದು ಮ|| ಆನಂದಾಳ್ವಾರ್ರವರು ಪ್ರಸ್ತಾಪಿಸಿದ್ದನ್ನು ಮ|| ರಾಮಣ್ಣನವರು ಅನುಮೋದಿಸಿದರು ಸರ್ವರೂ ಒಪ್ಪಿದರು.

(ಸಶೇಷ)

SUMMARY OF NEWS.
ವೃತ್ತಾಂತ ಸಂಗ್ರಹವು.

ಸೀತಾಪುರದ ಡಿಸ್ಟ್ರಿಕ್ಟು ಕಲೆಕ್ಟರ ಮುನಿಷಿ ಸಿದ್ದೇಶ್ವರ ನಾರಾಯಣರವರ ಮೇಲೆ ಲಂಚದ ಪ್ರಕರಣ ಬಂದು ಅವರ ವಿಚಾರಣೆಯಾಗಿ ಸದರೀಯವರಿಗೆ ೩ ವರ್ಷಗಳ ಕಠಿಣಶಿಕ್ಷೆಯೂ, ೫ ಸಾವಿರ ರೂಪಾಯಿ ದಂಡವೂ ಆಯಿತು.

ವಿಲಾಯಿತಿಯಲ್ಲಿ ಗ್ರೀಕರಿಗೂ, ತುರ್ಕರಿಗೂ ಯುದ್ಧ ನಡೆದರೆ, ಯುರೋಪ್ ಖಂಡದ ಕೆಲವು ರಾಷ್ಟ್ರದವರು ಈ ಯುದ್ಧವನ್ನು ನಿಲ್ಲಿಸಬೇಕೆಂದು ಮಾಡಿದ ಪ್ರಯತ್ನವು ನಿಷ್ಫಲವಾಯಿತು. ಗ್ರೀಕರಿಗೆ ಇಂಗ್ಲೀಷರ ಅಲ್ಲವೆ ರಷ್ಯದವರ ಒಳಸಹಾಯವಿರತ್ತದೆಂದು ಹೇಳುತ್ತಾರೆ. ವಿಲಾಯಿತಿಯಲ್ಲಿ ತುರ್ಕಿಸ್ಥಾನವು ಒಂದೇ ಮುಸಲ್ಮಾನರ ರಾಜ್ಯವಾಗಿರುವದು. ಅದನ್ನು ಎತ್ತಿ ಬಾಯೊಳಗೆ ಹಾಕಿಕೊಳ್ಳುವದಕ್ಕೆ ಕ್ರಿಸ್ತರೆಲ್ಲರ ಉದ್ಯೋಗವಿರುತ್ತದೆ.

ತುರ್ಕೀ ಮತ್ತು ಗ್ರೀಸ್ ಈ ಉಭಯರಾಷ್ಟ್ರಗಳ ನಡುವೆ ಯುದ್ಧ ಪ್ರಾರಂಭವಾಯಿತು. ತುರ್ಕೀ ರಾಜ್ಯದಲ್ಲಿ ಕ್ರೈಸ್ತರ ಕೊಲೆಯಾಗುತ್ತದೆಂಬದಾಗಿ ಯುರೋಪಿಯನ್ ರಾಷ್ಟ್ರಗಳು ಬಹು ದಿವಸದಿಂದ ಕೂಗುತ್ತಿದ್ದು ಮೊನ್ನೆ ದೊಡ್ಡ ಗಂಡಾಂತರ ಅಲ್ಲಿಯಾದ್ದರಿಂದ ರಾಷ್ಟ್ರಗಳು ಕೂಡಿ ತುರ್ಕಿಸ್ಥಾನವನ್ನು ಎತ್ತಿ ಬಾಯಲ್ಲಿ ಹಾಕಿಕೊಳ್ಳುವ ಯತ್ನ ಮಾಡಿರಲು ತುರ್ಕಿಯ ರಾಜನು ಮಿಕ್ಕ ರಾಷ್ಟ್ರದವರ ಹೇಳಿಕೆಯಂತೆ ಸಧಾರಣೆ ಮಾಡಿದ್ದರಿಂದ ಉಳುಕೊಂಡನು. ಆದರೆ ಈಗ ಕ್ರೀಟದ್ವೀಪದ ಸಂಬಂಧವಾಗಿ ಗ್ರೀಸ್ ಮತ್ತು ತುರ್ಕಿಯ ನಡುವೆ ಬಹು ದಿವಸದ ವಿವಾದ ನಡೆಯುತಲಿದ್ದು ಅಲ್ಲಿಯ ಕ್ರಿಸ್ತೀ ಜನರು ತುರ್ಕರ ಮೇಲೆ ತಿರುಗಿಬಿದ್ದು ಮುಸಲ್ಮಾನರನ್ನು ಕೊಲೆಮಾಡಲಾರಂಭಿಸಿದರೂ ಗ್ರೀಕ್‌ದೇಶೀಯರು ಅವರ ಪಕ್ಷವನ್ನೇ ವಹಿಸಿ ತಮ್ಮ ಸೈನ್ಯವನ್ನು ತುರ್ಕಿಯ ಮೇಲೆ ಕಳುಹಿಸಿದ್ದರಿಂದ ತುರ್ಕಿ ರಾಜನು ತನ್ನ ಸೈನ್ಯವನ್ನು ತಯಾರುಮಾಡಿಕೊಂಡು ಯುದ್ಧಕ್ಕೆ ಸಿದ್ಧವಾಗಿದ್ದನು. ಈ ಸಂಬಂಧದ ಇತರ ರಾಷ್ಟ್ರದವರು ಗ್ರೀಸಿಗೆ ಕ್ರೀಟದ್ವೀಪವನ್ನು ನಿಮಗೆ ಸಿಗಗೊಡಲಾರೆವೆಂದು ಬೆದರಿಕೆಯನ್ನು ತೋರಿಸಿದರೂ ಗ್ರೀಸ್‌ದೇಶವು ಚಿಕ್ಕದಾಗಿದ್ದು ಇಂಥ ಬಲಾಢ್ಯರಾದವರ ದವಡೆ ತೆಗೆದು ಕೊಳ್ಳುವದು ನೋಡಿದರೆ ಈ ರಾಜ್ಯಕ್ಕೆ ಒಳಗಿಂದೊಳಗೇ ಯಾವದಾದರೂ ಬಲಾಢ್ಯರಾಷ್ಟ್ರದ ಬೆಂಬಲವಿರಬೇಕೆಂದು ತರ್ಕವಾಗುತ್ತದೆ. ರಷ್ಯಾ ಅಂತೂ ತನ್ನ ಸೈನ್ಯವನ್ನು ಸಿದ್ಧಪಡಿಸಿಕೊಂಡು ಕೂತಿರತ್ತದೆ ಈ ರಾಷ್ಟ್ರದ ಸಂಬಂಧದ ಯುದ್ಧ ಪ್ರಾರಂಭವಾದರೆ ಹಿಂದು ಲಷ್ಕರವು ಅಲ್ಲಿಗೆ ಹೋಗಬೇಕಾಗುವದು ಖರ್ಚು ಹಿಂದುಸ್ಥಾನದ ಮೇಲೇನು!

ನೋಟೀಸು.

ಸನ್ ೧೮೯೭ನೇ ಇಸವಿ ಏಪ್ರಿಲ್ ೧ನೇ ತಾರೀಖ್ ಮೊದಲು ೧೮೯೮ನೇ ಇಸವಿ ಮಾರ್ಚಿ ೩೧ನೇ ತಾರೀಖಿನವರೆಗೆ, ಕುಣಿಗಲ್ ರಿಮೌಂಟ್ ಡಿಪೋವಿಗೆ ಮುಂಚಿಗೆ ಸರಬರಾಯಿಗೆ ಮೊಹರ್ ಮಾಡಲ್ಪಟ್ಟ ಹೊಸ ದರಖಾಸ್ತುಗಳು ಇದರಡಿ ರುಜು ಮಾಡಿರುವವರಿಂದ ೧೮೯೭ನೇ ಇಸವಿ ಮಾರ್ಚಿ ೧೩ನೇ ತಾರೀಖ್ ಶನಿವಾರ ಮಧ್ಯಾಹ್ನ ೧೨ ಘಂಟೆಯವರೆಗೆ ಬರಮಾಡಿಕೊಳ್ಳಲ್ಪಡುವವು.

ರಿಮೌಂಟ ಡಿಪೋ, ಕುಣಿಗಲು ೩ನೇ ಮಾರ್ಚಿ ೧೮೯೭ } T WYNN Captain, for Supdt, Remount Depot

ನೋಟೀಸ್

ಬೆಂಗಳೂರು ಸಿಟಿ ಮ್ಯುನಿಸಿಪಲ್ ಕಮಿಷನ್. ರೇಟ್ಸ್ ಮತ್ತು ತೆರಿಗೆಗಳ ವಸೂಲಾತಿ.

ಇದರಿಂದ ಸಮಸ್ತಜನರಿಗೂ ತಿಳಿಯಪಡಿಸುವದೇನೆಂದರೆ:—

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯ ರೇಟ್ಸ್ ಯಾ ದರ ಮತ್ತು ತೆರಿಗೆಗಳ ವಸೂಲಿಗೆ ಕಲೆಕ್ಟರ್ ಆಫೀಸರವರು ಕ್ಷಿಪ್ರದಲ್ಲಿಯೇ ಉಪಕ್ರಮಿಸುತ್ತಾರೆಯಾಗಿ ಬೆಂಗಳೂರು ಸಿಟಿ ಮ್ಯುನಿಸಿಪಲ್ ರೆಗ್ಯುಲೇಷನಿನ 82, 83, 87 ನೇ ಸೆಕ್ಷನ್‌ಗಳಿಗೆ ನಿಗಾ ಕೊಡಬೇಕು. ಸದರೀ ಸೆಕ್ಷನ್‌ಗಳು ತಿಳುವಳಿಕೆಗೋಸ್ಕರ 1897 ನೇ ಇಸವಿ ಫೆಬ್ರವರಿ ಮಾಹೆ 4ನೇ ತಾರೀಖಿನ ಗಜೆಟಿನಲ್ಲಿಯೂ, ಮತ್ತು ಅದೇ ತಿಂಗಳಲ್ಲಿ ತದನಂತರ ಛಾಪಿಸಲ್ಪಡುವ ಗಜೆಟುಗಳಲ್ಲಿಯೂ ಪ್ರಚುರ ಮಾಡಲ್ಪಡುತ್ತವೆ ಬಿಲ್ಲು ತೋರಿಸಿದ ಕೂಡಲೇ ಅದರಲ್ಲಿ ಕಂಡ ಮೊಬಲಗು ಬಾಕಿ ಇರುವ ಪಕ್ಷಕ್ಕೆ, ಸದರೀ ಮೊಬಲಗನ್ನು ಏಳು ದಿನಗಳೊಳಗಾಗಿ ಕಲೆಕ್ಟರ್ ಆಫೀಸರವರಲ್ಲಿ ಕಟ್ಟಬೇಕು. ತಪ್ಪಿದ ಪಕ್ಷದಲ್ಲಿ ಪ್ರತಿ ರೂಪಾಯಿಗೆ ದಂಡ ನೋಟೀಸು ಮತ್ತು ಜಪ್ತಿ ವಾರಂಟುಗಳು ಸಹ ಜಾರಿಮಾಡಲ್ಪಟ್ಟು ಮತ್ತು ಇತರಗಳ ಮೂಲಕ ಉಂಟಾಗುವ ಖರ್ಚು ಬಾಕಿದಾರರಿಗೆ ಬರಿಯಾಗುತ್ತಾರೆ.

P T LEONARD,
President,
City Municipal Commission

NOTICE.

VIDYASARA SANGRAHA.

A TREATISE ON THE PRINCIPLES OF
HINDU MEDICINE
Price, including Postage Rs 5-0-0

ವೈದ್ಯಸಾರಸಂಗ್ರಹ.

ಇದು ಚರಕ, ಸುಶ್ರುತ, ವಾಗ್ಭಟ, ಶಾರ್ಙ್ಗಧರಾದ್ಯನೇಕ ಪೂರ್ವಗ್ರಂಥಗಳ ಸಂಗ್ರಹ ರೂಪವಾಗಿರುತ್ತದೆ.
ಇದರ ಕ್ರಯ— ಪ್ಯಾಕಿಂಗ್ ಮತ್ತು ಅಂಚೆ ಹಾಸಲ್ ಸೇರಿಸಿ ಪ್ರತಿ ೧ಕ್ಕೆ ೫—೦—೦
ಬೇಕಾದವರು ಬೆಂಗಳೂರು ಕರ್ನಾಟಕ ಪ್ರೆಸ್ ಪ್ರೊಪ್ರೈಟರವರಿಗೆ ಬರೆದು ತರಿಸಿಕೊಳ್ಳಬಹುದು

ಈ ಕಂಪನಿಯು ಸನ್ ೧೮೯೩ನೇ ಇಸವಿಯಲ್ಲಿ ಸ್ಥಾಪಿತವಾಯಿತು.

ಜನ್ಮದ ಲಾಭವು.

ವಜ್ರಾಂಗ ಖರ್ಜೂರವು.

ಬಲಾರೋಗ್ಯ ಪುಷ್ಟಿಗಳನ್ನು ಬೆಳೆಸತಕ್ಕ ಉತ್ಪತ್ತಿಯು.

ಅತ್ಯುತ್ಕೃಷ್ಟಕರವಾದ ಖರ್ಜೂರಗಳಿಂದ ತಯಾರಿಸಿದ ಈ ಉತ್ಪತ್ತಿಗಳು ಕೊಂಕಣಪ್ರಾಂತದ ಅನೇಕ ವನಸ್ಪತಿಗಳ ಸಾರಗಳ ಪುಟಗಳನ್ನು ಕೊಟ್ಟು, ತುಪ್ಪದೊಳಗೆ ಮಾಗಿಸಿ, ಒಳ್ಳೇ ಚಟ್ಟಿನ ತರಗತಿಯ ಸಕ್ಕರೆಯ ಪಾಕದಲ್ಲಿ ಸಿದ್ಧ ಮಾಡಿರುತ್ತೇವೆ. ಈ ಉತ್ಪತ್ತಿಗಳು ಮಹೌಷಧಗಳಿದ್ದು, ಒಳ್ಳೇ ರುಚಿಯುಳ್ಳವಿವೆ ಇವುಗಳ ಸೇವನೆಯಿಂದ ಕಫ, ವಾತ, ಪಿತ್ತ ಈ ತ್ರಿದೋಷಗಳುಂಟಾಗತಕ್ಕ ಯಾವತ್ತು ಬಗೆಯ ವ್ಯಾಧಿಗಳೂ ಹೋಗುತ್ತವೆ ೩೦ ವರ್ಷಗಳ ಪ್ರಾಯದಲ್ಲಿ ಮುದುಕರ ಕಾಮವಿಕಾರವಾದರೂ ಹದಿನಾರರ ಗಂಡಸರಂತೆ ಪ್ರಜ್ವಲಿತವಾಗುತ್ತದೆ. ಜನನೇಂದ್ರಿಯದಲ್ಲಿ ಬಲ ಉಂಟಾಗಿ ನಪುಂಸಕತ್ವವು ಇಲ್ಲದಂತಾಗುತ್ತದೆ ಲಘ್ವಿಯು ಮುಂದೆ ಅಥವಾ ಹಿಂದೆ ಸರಿದುಹೋಗುವ ಧಾತು ನಿಲ್ಲುತ್ತದೆ. ಸ್ವಪ್ನಾವಸ್ಥೆಯಾಗುವದಿಲ್ಲ ವೀರ್ಯವು ಬೆಳೆದು ತೇಜಸ್ಸು ಬಣ್ಣವು ಸುಧಾರಿಸುತ್ತದೆ ಪರಮಾ ಹಾಗೂ ಉಷ್ಣಪಡಿಕೆ ಬೇನೆಗಳು ಇಲ್ಲದಂತಾಗಿ ಧಾತು ಪುಷ್ಟವಾಗುತ್ತದೆ. ಮೂರು ಹೊತ್ತುಂಡರೂ ಅನ್ನ ಪಚನವಾಗಿ ಒಳ್ಳೇ ಹಸಿವೆಯಾಗುತ್ತದೆ ಹೋಗುವದೊಂದೆ ತಡ ಕೂಡಲೇ ಸ್ವಚ್ಛ ಶೌಚವಾಗುತ್ತದೆ. ಕ್ಷಯ, ಉದರ, ದಮ್ಮು ಈ ರೋಗಗಳು ನಾಶ ಹೊಂದುತ್ತವೆ. ಹೊಸ ಬೇನೆ ಇದ್ದಲ್ಲಿ ೧೧ ದಿವಸಗಳ ವರೆಗೆ ಸಾಲುವ ಒಂದೇ ಡಬ್ಬಿಯಿಂದ ಗುಣವುಂಟಾಗುತ್ತದೆ. ಮತ್ತು ಹಳೆದಿದ್ದಲ್ಲಿ ೪೦ ದಿವಸಗಳ ಮೇಲೆ ಗುಣ ಬಂದೀತು. ೧೧ ದಿವಸಗಳವರೆಗೆ ಸಾಲತಕ್ಕ ೧ ಡಬ್ಬಿಗೆ ೧—೮—೦ ರೂ|| ಒಂದೇ ವ್ಯಾಳ್ಯಕ್ಕೆ ೪ ಡಬ್ಬಿಗಳು ತೆಗೆದುಕೊಳ್ಳತಕ್ಕವರಿಗೆ ಒಂದು ಡಬ್ಬಿಯು ಉಚಿತವಾಗಿ ಸಿಕ್ಕೀತು. ಈ ಉತ್ಪತ್ತಿಯಿಂದ ಹೆಂಗಸರು ಸತೇಜರಾಗುತ್ತಾರೆ. ಕರಗಿನ ಹಾಗೂ ಬಾಣಂತಿ ಬೇನೆಗಳು ನಾಶವಾಗುತ್ತವೆ ಎಲ್ಲರನ್ನೂ ಸರಿಯಾಗಿ ಬೇನೆ ಇಲ್ಲದವರನ್ನಾಗಿ ಮಾಡಿ ಬಲಾರೋಗ್ಯ ಪುಷ್ಟಿಗಳನ್ನು ಬೆಳೆಸುತ್ತವೆ. ಸಾಹೇಬ್ ಜನರಲ್ಲಿ ಬಹಳ ಡಬ್ಬಿಗಳು ಖಪಾಗುತ್ತವೆ ಈ ಔಷಧವು ಈ ಕಂಪನಿಯ ಹೊರ್ತು ಬೇರೆ ಸ್ಥಳದಲ್ಲಿ ಆಗುವದಿಲ್ಲ ಯಾವತ್ತು ದೇಶಗಳಲ್ಲಿಯೂ ವೈದ್ಯಶಾಲೆಗಳಿಗಾಗಿ ಕಳುಹಿಸಲ್ಪಡುತ್ತದೆ. ಬರೆದು ಬಂದ ಕೂಡಲೆ ಈ ಕಂಪನಿಯು ಬೇಕಾದವರಿಗೆ ಈ ಡಬ್ಬಿಯು ಕಳುಹಿಸಿಕೊಟ್ಟೀತು. ಅಂಚೆಯ ಹಾಗೂ ವ್ಯಾಲ್ಯೂ ಪೇಯಬಲ್ ಖರ್ಚು ಬೇರೆ ಕೊಡಬೇಕು (ಉಚಿತ ಡಬ್ಬಿ ಸಹ ೪ ಡಬ್ಬಿಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬಿಯಾದ್ದರಿಂದ ಎಲ್ಲಾ ಖರ್ಚಿನ ಹಾಕಿ ರವಾನಿಸುವದು, ಹೀಗೆ ಕಳುಹಿಸಿದರೆ ಟಪಾಲ್ ಖರ್ಚು ಕಡಮೆ ಬೀಳುವದು)

ಮೇಲ್ವಿಳಾಸ—ಪಿ. ಎಲ್. ಎ ಬ್ರದರ್ಸ್ ಮತ್ತು ಕಂಪೆನಿ,
ಫಸ್ಟ್ ಇಂಗ್ಲಿಷ್ ಬ್ರ್ಯಾಂಚ್ ಆಫೀಸ್, ಡಿಸ್ಟ್ರಿಕ್ಟ್ ಬೆಳಗಾಂವ.
ಪೋಸ್ಟ್—ಬೆಳಗಾಂವ. Post BELGUAM.

BANGALORE —Printed and Published at the KARNATAKA PRESS, No 40, HOSPITAL ROAD, CITY,—1897.

THE

Karnataka Prakasika.

ಕರ್ಣಾಟಕ ಪ್ರಕಾಶಿಕಾ.

Published Every Monday Morning

1 ವರ್ಷಕ್ಕೆ .. 3 0 0	ವರ್ಷ 1 ಕ್ಕೆ .. 4 0 0	6 ತಿಂಗಳಿಗೆ ... 2 0 0	6 ತಿಂಗಳಿಗೆ .. 2 8 0
3 ತಿಂಗಳಿಗೆ .. 1 4 0	3 ತಿಂಗಳಿಗೆ ... 1 8 0		

Vol. XXIV. BANGALORE:—MONDAY, MARCH 15, 1897. No. 11.

ADVERTISEMENTS

NOTICE

Fresh sealed Tenders will be received by the undersigned for the supply of Bombay Wheat Bran to the Remount Depot, Hosur, from 1st April 1897 to 31st March 1898, at 12 noon on Saturday the 13th March 1897

Remount Depot, Hosur, 3rd March 1897 } T. Wynn Captain, *for Sup't, Remount Depot*

FAMINE RELIEF FUND, BANGALORE BRANCH.

NOTICE

Subscriptions are earnestly invited in aid of the above Fund All contributions however small, will be thankfully received Subscriptions may be paid to the Bangalore Branch of the Bank of Madras or to any member of the local committee of the Fund In the latter case, receipt should be obtained from the member of the committee to whom payment is made

All subscriptions will be acknowledged by the notice in the local papers, by the honorary Treasurer Mr J. T. Leonard Those of Rs 5 or more will be acknowledged individually, and those of less than Rs 5 in a lump sum weekly

(Sd) A M SLIGHT,
(Sd) V N NARASIMHAIYENGAR,
Joint Secretaries Indian Famine Charitable Relief Fund, Bangalore Branch

Select Telegrams

London, 8th March —A meeting was held in Hyde Park yesterday, at which upwards of ten thousand people were present, to protest against coercive measures being resorted to with Greece

Several Liberal members of the Commons addressed the meeting.

Constantinople, 7th March —The Porte has replied to the first collective note of the Powers and accepts the proposals contained therein in principle but desires to discuss the details of the proposed autonomy of Crete

London, 9th March —The Greek reply to the Collective Note has been presented to the Powers It urges that the Powers should not insist upon autonomy of Crete, which would be inadequate to prevent anarchy and fanaticism, but rather to restore Crete to Greece Greece, it adds, cannot withdraw the troops and abandon the Cretans to the mercy of the Mussalmans, but that a part of the Greek fleet might be removed

The reply appeals to the Powers to let the Cretans decide upon the requisite reforms in Government

The Foreign Admirals have notified to the Greek Vice Consul that the journalists and other Greek subjects at Canea must quit the island

London, 10th March.—Great Britain is not satisfied with the Greek reply to the collective note, and considers it necessary that the Greek forces should quit and especially in view of the renewed fighting between Mussalmans and Christians in the vicinity of Canea

The Hon'ble A. J Balfour, replying to Sir W V Harcourt, in the House of Commons, declined to pledge the Government to take no steps in the Cretan question without first consulting Parliament.

The policy of Government, he said, aimed at the liberty of Crete, and the peace of Europe

THE

Karnataka Prakasika.

MONDAY, MARCH 15, 1897

THE INDIAN FAMINE FUND

The meetings now being held in different parts of the country to raise funds for the sufferers by the famine show the great interest people are taking in the movement They see the need the people are in, they see their sufferings, and so they have come to the rescue But not only are these meetings being held in India, the same is being done in all parts of the British empire, and in some of the countries of continental Europe. The meeting in the Mayo Hall on Tuesday last was a very interesting one The speeches were short and to the point, and the speakers, more especially the chairman, pointed out the great need there was for help Colonel Robertson said that at the present time there were two millions and six hundred thousands on relief works, and in addition there were five lakhs and forty thousand people receiving gratuitous relief The figures are something fearful They tell a terrible story. Put into words they display the misery and suffering of the famine area All these people have been prevented by the famine from pursuing their regular avocations, and have to be relieved in some way or other All these people have been thrown on the hands of Government, and provision must be made for them Of course, the relief works must be supported by Government Money must be provided whatever may be required Life must be saved wherever it is in danger, although millions may have to be spent But, as was explained at the meeting on Tuesday, more than this is required. The money given by Government—large as it is—is not sufficient to meet all the wants of the case. The wages paid them is often in sufficient to support them in comfort, or support them in any way. It must, consequently be supplemented, and this must come from the money now being collected Then there are many people who cannot go to the works at all They may be too old or too weak to work, or they may belong to a class that has not been accustomed to manual labour These people are in the most pitiable condition, and they are deserving of every consideration. They cannot go on the works, and if they suffer they have to do so in silence Therefore, they must be helped, they must have money given to them to tide over the time of want. Then, as the chairman said, there were the orphans who must be attended to During a famine there is great mortality, and, as a rule, many orphans are left behind. It is the duty of those who have means to assist the poor children, to place them in the same condition of life they would have been had their parents lived This is a very important step for those connected with the famine fund to take All the orphans must be looked after and properly brought up Then there is another very important step to be taken, and one that will require much money The people who have suffered by the famine will require money to start in life again They will have nothing to lay out on their lands or on the trade they may have learnt A large sum of money must be devoted to this purpose, as was done after the famine in Southern India twenty years ago The money then spent did much good It helped the people who had suffered to begin life again, and the same must be done now We are glad to see that meetings are to be held in the whole of the Mysore province, a notice to this effect having been sent out to all Deputy Commissioners.

THE FIRE IN THE MYSORE PALACE

The fire in the Mysore palace on the 28th of last month continues to be the chief topic of conversation in the province The people can talk of nothing else They look upon the burning down of this pile as a loss not only to the State but to themselves They feel as though their own houses had been burnt to the ground, that they had suffered a terrible loss. Their loyalty towards the royal family of the province has been deeply touched They feel that this family has been plunged into the direst distress by the fire that burnt down the palace The palace will be rebuilt, but it will not be the same palace, The historical associations will be gone, the people will not have the same reverence for it as they had for the old building Then again what gives them still more pain is that the palace ought have been saved if a little commonsense and energy had been displayed The authorities on the spot were panic stricken; they could do nothing, or next to nothing. They removed some of the things but beyond this they failed in their duty, and failed ignominiously It is true that the fire took them unawares, but this is the case with every calamity Notice is not given that one is to come off at such a time like a performance in a circus or a theatre So the authorities at Mysore need not think they have been badly used in this respect A man with presence of mind is ready for any emergency, whatever may be its nature. He does not complain that the evil has come upon him of a sudden, but be makes the best of it when it does come We are glad to find that an investigation is going on, and it is to be hoped that it will bring out the truth of the whole matter, how the palace was set on fire, and who helped to put it out, who performed their duty, and who did not We can wait till the report comes out before we pass judgment upon the whole business

News and Notes.

The highest wisdom of Greece was to know ourselves, the highest wisdom of India was to know our self.

Attachment to wordly things is productive of evil The silk worm is finally destroyed by the cocoon that itself weaves

The end of education is to know ourselves and the world the means for this end is to know the best which has been thought and said in the world

The number of scholars under instruction during 1895-96, in the Schools and Colleges throughout India, exceeded forty-three lacs The gross expenditure on education increased by twenty lakhs

The *Nilgiri News* says that had any one gone up to the top of Snowdon with a good pair of glasses he would have been able to see the flames of the burning palace in Mysore by night and the smoke by day

It is highly creditable that a Nambudri Brahmin has passed the last B A examination, Mathematics branch, as first in the second class and fourth in the Presidency. C Krishna Bhattatiri is the name of this first Nambudri B A

The air is so clear in the Arctic regions that conversation can be carried on easily by persons two miles apart It has also been asserted on good authority that at Gibraltar the human voice has been distinctly heard at a distance of ten miles

One of the most remarkable things about twins is the similarity of their minds and the identity of their constitution, so that they think the same thoughts, suffer from the same diseases, and even sometimes die in the same way and at the same time

Body is the boat by which we must cross the river of life Forgiveness is the oar by which it is to steady it The practice of righteousness is the rope for dragging it along difficult waters, and the wind to urge its sail onwards is charity.

Arrangements are being matured for sending representative native officers and men of the native army to England to share in the military Procession on the occasion of the Queen's commemoration The Imperial Service Troops also will be represented.

In the reign of Edward III, there were at Bristol three brothers, who were eminent clothiers and woollen weavers, and whose family name was Blanket They were the first persons who manufactured that comfortable material which has ever since been called by their name and which was then used for peasants' clothing

Often, when the Chinese want to know what o'clock it is, they will run to the nearest cat, open her eyes, and at once tell what time it is This they do by observing the size of the aperture of the pupil of the eye, which they have discovered is of varying size at different hours of the day, being affected by the position of the sun and the character of light, even when the day is cloudy

The following notification published in the *Fort St George Gazette* of the 21st February 1897, is republished for general information in this week's *Gazette* —It is hereby notified, with reference to by-law 152 (4), that in counting attendance for the first term of the subsequent College course of a candidate who has failed in the B A degree examination, that term shall be held to begin on the *tenth* day after the results of that examination have been published.

Mr Dharmapala, the energetic Secretary to the movement of Buddhist revival in India, who is now in America, writes a brief reply to the Rev Dr Ellinwood who spoke of that religion as "a system which is one thing in Ceylon, quite another in Tibet and still another in China and Japan" To this Mr. Dharmapala gives the neat reply "Just so, Christianity is one thing in Russia, quite another in Rome, and still another in Germany, England and America where the Presbyterian and Universalist live side by side"

SPEAKING at Ealing on the 17th ultimo, Lord George Hamilton observed that the growth of education among the natives and the consequent desire in them to supplant their European rulers suggested problems in the future for the solution of which at present he did not see much light. "But whatever the future might bring forth," his Lordship said, "I am convinced that the more we showed our sympathy with the native population, the more we established a community of ideas and of interests with them, the less anxious would become the duties and responsibilities of the future."

THE following *Gazette of India Extraordinary*, has been issued :—"The Honourable Sir Dennis Fitzpatrick K. C. S. I., has obtained permission from His Excellency the Governor-General of India to resign, from the afternoon of the 5th instant, the office of Lieutenant-Governor of the Punjab and its Dependencies. His Excellency is pleased to direct, as a mark of respect due to the character and services of Sir Dennis Fitzpatrick, that all the honours and distinctions to which he is now entitled as Lieutenant-Governor of Punjab shall be continued to him from the 5th instant until the date of his embarkation for Europe."

IF a man is superior to the lower animal, it is not as a mere physical being. In keenness of sight and the extent of vision, he is inferior to the eagle. In the strength of the body, the elephant is decidedly his superior. In swiftness of speed, the deer outruns him several times over. In powers of organization, the tiny ant far excels him. In courage and nobility, he is by far lower than the king of beasts. If in any respect, then, he can claim superiority, it must be in respect of his *spiritual* nature. Should, therefore, this important factor be found lacking in a person, it is certain he is no better than a brute.

No fewer than five of the cases of murder that were reported in the Central Provinces during the year 1895-96 were due to belief in witchcraft, which was strong enough to over power all sense of the consequence involved in the commission of murder. It appears that both men and women were ruthlessly put to death in the Chanda and Sambulpur districts for not exercising the power they were supposed to possess of stopping cholera epidemics. Another curious case reported during the year is that at Narasingpur an old woman requested her husband to put her out of misery and the devoted husband forthwith cut her throat without any demur or hesitation.

SPEAKING at the last Convocation, Mr. Conlan, Vice-Chancellor, deplored the ignorance of English language displayed by the B. L's of the Allahabad University. "As a matter of fact," said he "the ignorance of most Law students of the language in which the professor lectures is so egregious, that they fail to catch his finer points and miss the training he is there to give them. To cure this evil, to provide that those who attend the Law classes shall have an adequate knowledge of English, the High Court of these Provinces has wisely framed and promulgated a rule that every student, before joining a Law class must take his degree in English literature up to a given standard and not in the Science Course only, otherwise he shall not be eligible for enrolment as a legal practitioner.

LOKANATHA Mudali is the name of a bazaarman at Chintadripet, says the *Hindu*, who appeared before the Chief Presidency Magistrate yesterday and pressed for the conviction of his own son, a lad of 12 years, on a charge of house breaking and theft. During the father's absence the son broke into his shop and carried away Rs 16 and annas 8. The father said that his son was incorrigible and always showed an inclination to thieving. The Magistrate apparently sympathised with the father and convicted the juvenile accused to four months' rigorous imprisonment and to receive 14 stripes. In Madras streets little boys are sometimes found put in irons to restrain their pranks perhaps. And parents who are ready to subject their children to this sort of treatment, need not hesitate to have them confined with felons, in the jail. Such is the father's love for his son!

Local and Provincial.

HARMSTON'S CIRCUS.—Is still here, and is drawing large houses.

THE PUBLIC HEALTH.—Is not very good just now. Many are suffering from coughs and colds, and there is a good deal of fever about.

THE WEATHER.—Is very hot and trying. There are no signs of rain, and probably we shall have none for sometime to come. There is plenty of dust and altogether the weather is anything but pleasant.

FIRST EXAMINATION IN LAW.—Applications for admission to the approaching First Examination in Law will be received by the Registrar of the University up to, and inclusive of, the 1st April 1897.

THE LATE MAHARAJAH'S STATUE.—A beautiful marble Statue of H. H. the late Maharajah made during his lifetime at a cost of nearly Rs 10,000 has, we regret to learn, been destroyed by the fire.

THE NEXT CONVOCATION.—A convocation for conferring degrees will be held in the Senate House, Madras, on Friday the 26th March 1897, at 4-30 P.M., Applications from candidates for degrees must reach the Registrar *not later than* the 19th idem.

THE MAHARANEE'S COLLEGE.—We are glad to learn that the Committee of management of the Maharanee's Girls' School has raised it to the standard of a second grade College. The ladies who passed the Matriculation Examination were given, we hear, appointments of Rs 100 each and were given leave on half pay to undergo a training of 3 years for the F. A. Examination.

Under Article 188 of the Mysore Service Regulation, Mr. P. Panchanatha Row, Sub Division Officer, French Rocks, Mysore district, is granted privilege leave of absence for three months with effect from the 30th January 1897, after the expiry of which his retirement ordered in Government Proceedings No. 5327-30—R. 1903, dated 30th December 1896, will be given effect to.

Consequent on the return of Mr. B. Srinivasa Row, Assistant Conservator of Forests, 3rd grade, from sick leave on the forenoon of 4th February 1897, the following revocations are ordered with effect from the above date.—

Mr. J. J. Monteiro, Officiating Assistant Conservator of Forests, 3rd grade, Extra Assistant Conservator of Forests.

Mr. M. Srinivasa Row, Officiating Extra Assistant Conservator of Forests to Ranger, 2nd grade.

Consequent on Lieut. Colonel A. H. Mcintire, I. S. C., proceeding on six months furlough Her Highness the Maharani-Regent has been pleased to make the following officiating appointments with effect from 20th February 1897.

Lieut Colonel J. Desaraj Urs, Commandant of the Imperial Service Regiment, to officiate, in addition to his own duties, as Military Secretary and Commandant of the Mysore troops.

Mr. B. Gopal Iyengar, Assistant, Amrut Mahal Department, to officiate as Officer in charge, Amrut Mahal Department.

The Government of Mysore are pleased to direct that the following be read as para 1A. of Rule XX of the Mysore Land Revenue Rules :—

"1A. No darkhasts for unoccupied land shall be rejected by Amildars or Deputy Amildars without the orders of Deputy Commissioners or Assistant Commissioners in charge of taluks, to whom all such cases shall be reported with a clear statement of the grounds on which the rejection is recommended."

Rejection of dark hasts for unoccupied lands by whom to be ordered.	

AN ENQUIRY INTO THE FIRE IN THE MYSORE PALACE.—We are glad to learn that the Government of Mysore has appointed a committee, consisting of Messrs P. N. Krishna Murti, Councillor, Dalvi Devaraj Arse, S. M. Fraser, and Col. Bowen, with Mr. Krishna Murti, as President and Mr. Ramanuja Iyengar as Secretary, to enquire into the cause of the Palace Fire and to the circumstances that led to the spread of the conflagration. We hope the result of the enquiry will set at rest the absurd rumours which are being got up by interested persons as to the origin and spread of the fire.

ಕರ್ಣಾಟಕ ಪ್ರಕಾಶಿಕೆ.

೧೮೯೭ನೇ ಇಸವಿ ಮಾರ್ಚ ತಾ|| ೧೫ನೇ ಸೋಮವಾರ.

ಡಿಗ್ರಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವ ವಿದ್ಯಾವಂತರ ಭವಿಷ್ಯತ್ಪರಿಣಾಮಗಳು.

ಈ ಕಾಲದಲ್ಲಿ ಮಾನವರಿಗೆ ವಿದ್ಯೆಯು ಅಲಂಕಾರಭೂತವಾದುದಾಗಿಯೂ, ಸ್ವಪ್ರಕಾಶಕವಾದುದಾಗಿಯೂ ಇದ್ದರು ವಿದ್ಯಾರ್ಥಿಗಳ ಬಾಹುಳ್ಯದಿಂದಲೂ ಅಧಿಕಾರಿ ತಾರತಮ್ಯವಿಲ್ಲದೆ ಯೋದುದರಿಂದಲೂ ಸಾಮಾನ್ಯೇನ ವಿದ್ಯಾವಂತರಿಗೆ ಲಭಿಸಬೇಕಾದ ಗೌರವವು ಈ ಕಾಲದಲ್ಲಿ ಸಿದ್ಧಿಸುವದಿಲ್ಲವು. ವಿದ್ಯಾಸಂಪಾದನಕ್ಕೆ ಅರ್ಥಾರ್ಜನವೇ ಮುಖ್ಯೋದ್ದೇಶವೆಂಬ ತಾತ್ಪರ್ಯವು ಸಾರ್ವತ್ರಿಕ ಮಾದುದಾಗಿರುವದರಿಂದ ಅರ್ಥಸಂಪಾದಕವಾದ ವಿದ್ಯೆಯೇ ವಿದ್ಯೆಯೆಂಬದಾಗಿ ಎಣಿಸಲ್ಪಟ್ಟು ಅದಭ್ಯಾಸಕ್ಕಾಗಿ ಎಲ್ಲರೂ ಪ್ರಯತ್ನಿಸುತ್ತಾರೆ. ವಿದ್ಯಾಸಂಗ್ರಹಣ ಪ್ರವರ್ತಿಸುವಂತವರಿಗೆ ಪಾಂಡಿತ್ಯಪ್ರದರ್ಶನೋದ್ದೇಶವಿಲ್ಲದ್ದರಿಂದ ದೇಶಾಯಾತ್ರೆಗೆ ಬೇಕಾದವಟ್ಟಿಗೆ ಸಾಧಕರೂಪವಾಗಿ ವ್ಯಾಸಂಗ ಮಾಡಿ ಪರೀಕ್ಷೆಗಳನ್ನು ಕೊಟ್ಟು ತೇರ್ಗಡೆಯು ಹೊಂದುತ್ತಾರೆ. ಹೀಗೆ ತೇರ್ಗಡೆಯಾಗುವಂತ ಬಾಲಕರ ಸಂಖ್ಯೆಯು ದಿನೇದಿನೆ ಅಪರಿಮಿತವಾಗಿ ವೃದ್ಧಿಯನ್ನೈದುತಲಿದೆ. ಈ ವಿದ್ಯಾವಂತರ ಸ್ಥಿತಿಯು ಈಗೀಗ ಬಹಳ ಶೋಚನೀಯವಾಗುತಲಿದೆ. ಮುಂದೆ ಇವರ ಪರಿಣಾಮವೆಂತಾದ್ದು ? ಇವರು ಮಾಡಬೇಕಾದುದೇನು ? ಎಂಬ ವಿಚಾರವು ಪ್ರತಿಮನುಷ್ಯನ ಹೃದಯದಲ್ಲೂ ಸ್ಫುರಿಸಿ ಅದ್ಯಾಪಿ ನಿರ್ಣಯವಾಗದೆ ಇದೆ. ಪ್ರಕೃತ ವಿಷಯವು ಕುರಿತು ಮದರಾಸಿನಲ್ಲಿ ಈಚೆಗೊಂದು ಸಂದರ್ಭದೊಳು ಡಿವಾನ್ ಬಹದೂರ್ ರಘುನಾಥರಾಯರವರು ವಿಚಾರಪೂರ್ವಕ ತಿಳಿಸಿದ ಅಭಿಪ್ರಾಯವೇನೆಂದರೆ :—

ಡಿಗ್ರೀ ಪರೀಕ್ಷೆಗಳಲ್ಲಿ ತೇರ್ಗಡೆಯು ಹೊಂದುವ ಗ್ರಾಜ್ಯುಯೆಟಿಗಳು ಮುಂದೆ ತಾವು ಜೀವಿಸಬೇಕಾದ ವಿಧಾನವನ್ನೂ, ಅವಲಂಬಿಸಬೇಕಾದ ಮಾರ್ಗವನ್ನೂ ಅರಿಯದೆಯೂ, ಅಥವಾ ಪ್ರವ್ಯೋಪಪತ್ತಿ ಇಲ್ಲದೆಯೂ ಸೆಸೆಟಿಪಾಸ್ ನಿಂದ ಗೌನ್‌ಗಳನ್ನೂ ಹೂವೆಗಳನ್ನೂ ಧರಿಸಿಕೊಂಡು ಗಂಭೀರವಾಗಿ ಹೊರಗೆ ಬರುವಂತವರಾಗಿದುತ್ತಾರೆ. ಇವರಲ್ಲಿ ಎಲ್ಲರೂ ಜೀವನೋಪಾಯವು ಳ್ಳವರಾಗಿದ್ದರೆ ಉತ್ತಮವಾಯಿತಷ್ಟೆ. ಆದಿಲ್ಲದವರನೇಕರು ಜೀವನಾಧಾರವಿಲ್ಲದೆ ಕುಷ್ಠಜೀವಿಗಳಾಗಿ ಕಡೆಗೆ ಪಶುಪಕ್ಷ್ಯಾದಿಗಳಂತೆ ಪ್ರಾಣವಂಬಿಡುತ್ತಾರೆ. ಇರುತು ಗ್ರಾಜ್ಯುಯೇಟಿಗಳಲ್ಲಿ ಧನಿಕರೆನಿಸಿಕೊಂಡಿರುವಂತವರ ಸಂಖ್ಯೆಯು ಕೇವಲ ಸ್ವಲ್ಪವಾಗಿಯೂ ಇದಿತರರ ಸಂಖ್ಯೆಯು ವಿಶೇಷವಾಗಿಯೂ ಇರುತಿದೆ. ಇಂತವರು ಸೆನೆಟಿಹಾಸಿನಿಂದ ಹೊರಗೆ ಬರುವಾಗಲೇ ಅಶನರಹಿತರಾಗಿಯೂ ದನಹೀನರಾಗಿಯೂ ಡಾಂಗಾಮಿಯಾಗಿ ಗೌನ್‌ಗಳನ್ನು ಎರವಲು ಕೊಟ್ಟವರಿಗೆ ಕ್ಲುಪ್ತಮಾಡಿದ್ದ ಬಾಡಿಗೆಯನ್ನು ಸಹ ಕೊಡಲಿಕ್ಕೆ ಚೈತನ್ಯವಿಲ್ಲದವರಾಗಿಯೂ, ನಿರಾಶ್ರಿತರಾಗಿಯೂ, ವಾಸಸ್ಥಾನ ಸಹ ಇಲ್ಲದಂತವರಾಗಿಯೂ ಇರುತ್ತಾರೆ. ಇಂತ ಬಹುಜನ ಬಾಲಕರ ದುರ್ದಶೆಯು ಕೇವಲ ಅನುತಾಪಕರವಾಗಿಯೂ ಅತಿ ದುಸ್ಸಹವಾಗಿಯೂ ಇರುತಿದೆ. ಕತನಿಧಾನುಪಪತ್ತಿ ಪೀಡಿತರಾದ ಸದರೀ ಗ್ರಾಜ್ಯುಯೇಟಿಗಳು ಆತ್ಮಗೌರವವೆಂಬುದು ಪ್ರಥಮತಃ ಮರೆತು ಬಿಡುತ್ತಾರೆ. ತಾವೂ ಯೋಗ್ಯರೆನಿಸಿ ಅನ್ಯರಿಗೆ ಒಳ್ಳೆಯದನ್ನುಂಟುಮಾಡಬೇಕೆಂಬ ಪರಿಜ್ಞಾನವು ಅವರಿಗೆ ಶೂನ್ಯವಾಗುತಿದೆ. ತಮ್ಮ ದೇಹಪೋಷಣೆಗೆ ಎಷ್ಟು ಹೀನವಾದರು ದೊರೆಯಬಹುದಾದಂತ ಯಾವದಾದರೊಂದು ಜೀವನೋಪಾಯವು ಅವರು ವಿಧಿಯಿಲ್ಲದೆ ಮಾಡಬೇಕಾದ ನಿರ್ಬಂಧಕ್ಕೆ ಗುರಿಯಾಗುತ್ತಾರೆ. ಇಂತವರ ಗುಂಪೇ ಈಗ ಅತ್ಯಧಿಕವಾಗಿರುವದರಿಂದ ಇವರ ಭವಿಷ್ಯಸ್ಥಿತಿ ಯೆಂತು ಪರಿಣಮಿಸುವದೋ ಅದು ದೇವರಿಗೇ ಗೊತ್ತಾಗಬೇಕಾದ ವಿಷಯವಾಗಿದೆ. ಪ್ರಕೃತ ಸ್ಥಿತಿಯು ಈ ರೀತಿಯಾಗಿರುವಲ್ಲಿ ವಿದ್ಯಾವಂತರೆನಿಸಿರುವ ಇವರ ಮೂಲಕ ನಾವು ಅನುಭವಿಸಬಹುದೆಂದು ನಿರೀಕ್ಷಿಸಬಹುದಾದ ವಿಷಯವು ಯಾವದು ? ಮೇಲೆ ಕಂಡವಿದ್ಯಾವಂತರು ಉತ್ತಮ ಮಧ್ಯಮಾಧಮರೆಂಬದಾಗಿ ಮೂರು ಪ್ರಭೇದಗಳುಳ್ಳವರಾಗಿರುತ್ತಾರೆ. ಪ್ರಥಮ ತರಗತಿಗೆ ಸೇರಿದವರು ಮೇಲೆ ತಿಳಿಸಲ್ಪಟ್ಟಂತೆ ಅತಿ ವಿರಳರಾಗಿರುತ್ತಾರೆ. ಪರಂತು ಈ ತರಗತಿಗೆ ಸೇರಿದ ಉಪಪನ್ನರಾದವರು ತಾವು ಚಿರಕಾಲ ವಿದ್ಯಾಭ್ಯಾಸ ಮಾಡಿ ಸಂಪಾದಿಸಿದ ಜ್ಞಾನವನ್ನು ಲೋಕೋಪಯುಕ್ತ ವಿಷಯಗಳಲ್ಲಿ ವಿನಿಯೋಗಿಸಿ ಜಗತ್ಸೃಷ್ಟಿಯಲ್ಲಿರುವ ಅಜ್ಞಾತಾಂಶಗಳನ್ನು ಸ್ವಬುದ್ಧಿ ಬಲದಿಂ ಕಂಡು ಹಿಡಿದು ಸ್ವಾರ್ಥ ಸುಖಪಡುತ ಅನ್ಯರ ಸ್ಥಿತಿಯಂ ವೃದ್ಧಿಪಡಿಸತಕ್ಕವರಾಗಿರುತ್ತಾರೆ. ಇವರು ತಮ್ಮ ಶಕ್ತ್ಯನುಸಾರ ತಮ್ಮ ಆಯುತಿಯನ್ನು, ಕೃಷಿ ವಾಣಿಜ್ಯ ಕುಶಲ ವಿದ್ಯೆಗಳು ಮತ್ತು ಧರ್ಮಕಾರ್ಯಗಳು ಇವುಗಳ ಪುರೋಭಿವೃದ್ಧಿಯ ಬಗ್ಯೆ ವಿನಿಯೋಗಿಸಬಹುದು, ಮತ್ತು ಆವಶ್ಯಕವಾಗಿ ಕಂಡುಬಂದರೆ ಅವರು ಆಸ ಧರ್ಮರಕ್ಷಣೆಯು ಮಾಡಲಿಕ್ಕೆ ಅಭಿಮುಖರಾಗಿ ನಿಲ್ಲಬಹುದು. ಮುಖ್ಯವಾಗಿ ಇವರ ಸಂಖ್ಯೆಯು ಮೇಲೆ ತಿಳಿಸಲ್ಪಟ್ಟಂತೆ ಕೇವಲ ಅಲ್ಪವಾಗಿರುವದರಿಂದ ಇವರು ಮಾಡಬೇಕಾದ ಕರ್ತವ್ಯಗಳಂ ಕುರಿತು ಇಲ್ಲಿ ವಿಶೇಷತಃ ಪ್ರಸ್ತಾಪಿಸಿ ಪ್ರಯೋಜನವಿಲ್ಲವು. ಎರಡನೆಯ ತರಗತಿಯವರು, ಅಂದರೆ, ಯಥೋಚಿತ ಜೀವನಾಧಾರ ಮುಳ್ಳವರು ಪ್ರಥಮತಃ ತಮ್ಮ ಗೃಹಕೃತ್ಯಗಳನ್ನು ಕ್ರಮಪಡಿಸಿಕೊಳ್ಳುವದಕ್ಕೆ ತಮ್ಮ ಅವಧಾನವು ವಿನಿಯೋಗಿಸಬೇಕು. ಪ್ರಾಮಾಣಿಕವಾದ ಮಾರ್ಗಗಳಲ್ಲಿ ತಮ್ಮ ಆದಾಯವನ್ನು ವೃದ್ಧಿಪಡಿಸಿಕೊಳ್ಳುವದಲ್ಲಿ, ತಾವು ಶಾಲೆ ಕಾಲೇಜುಗಳಲ್ಲಿ ಓದಿ ಸಂಪಾದಿಸಿದ ವಿದ್ಯಾಪರಿಜ್ಞಾನವ ಜ್ಞಾನವನ್ನುಪಯೋಗಿಸಬೇಕು, ಹ್ಯಾಗಂದರೆ, ಇವರಲ್ಲಿ ಯಾರಾದರು ಜಮೀನು ಸ್ಥಿತಿಯುಳ್ಳವರಾಗಿದ್ದರೆ ಅವರು, ತಮ್ಮ ಜಮೀನುಗಳನ್ನು ವಿಶೇಷವಾಗಿ ವ್ಯವಸಾಯಮಾಡಿ ಅಭಿವೃದ್ಧಿ ತಂದು, ಬೇಕಾದ ಫಸಲುಗಳನ್ನಿಟ್ಟು ಬಹು ಪ್ರಯೋಜನವಂ ಪಡೆಯಲೆತ್ನಿಸಬೇಕು. ಇದಲ್ಲದೆ ತಮ್ಮ ಕುಟುಂಬ ನಿರ್ವಹಣದಲ್ಲಿ ಸಾಧ್ಯವಾದಷ್ಟಿಗೆ ಮಿತವ್ಯಯವಂ ಮಾಡಬೇಕು. ಇವರ ಪ್ರಕೃತಿಗೆ ಪ್ರತಿಕೂಲವಾದ ಆಹಾರಗಳು ಸ್ವೀಕರಿಸಿ ಕೇವಲ ಕೃಶರಾಗಿ ತಮ್ಮ ಜೀವಿತಕಾಲವು ಕಳೆವ ಗತಿಸಿವ ಲೋಕ ಅಂತ ಆಹಾರಗಳಿಂದಲೂ, ಮಹಾಲಂಕಾರಗಳಿಂದಲೂ ತೃಪ್ತರಾಗಿ ಉಪಪತ್ತಿಗೆ ತಕ್ಕಂತೆ ವರ್ತಿಸಲಿಕ್ಕೆತ್ನಿಸಬೇಕು. ಹೀಗೆ ಸ್ವತಃ ನಡೆಯುವವರು ತಮ್ಮ ಐಶ್ವರ್ಯವನ್ನಭಿವೃದ್ಧಿಪಡಿಸಿಕೊಳ್ಳುವರಲ್ಲದೆ ಸಾಮಾನ್ಯವಾಗಿ ಪ್ರಜೆಗಳ ಐಶ್ವರ್ಯಾಭಿವೃದ್ಧಿಗೆ ಸಹ ಕಾರಣಭೂತರಾಗುವರು. ಯಾವನು ತನಗೆ ಬೇಕಾದುದಕ್ಕಿಂತಲೂ ಅಧಿಕ ಆಯುತಿಯೂ ಉಪಪತ್ತಿಯೂ ಉಳ್ಳವನಾಗಿರುತ್ತಾನೆಯೋ, ಅಂತವನು, ಯಾವದೇಶದಲ್ಲಿ ಜನಿಸಿ ಅಭಿವೃದ್ಧಿಯನ್ನೈದಿ ಯಾವದಕ್ಕೆ ಬದ್ಧನಾಗಿರುತ್ತಾನೆಯೋ ಅಂತ ದೇಶದ ಸುಖಾಭಿವೃದ್ಧಿಗೆ ಸಾಧಕಗಳಾದ ಯಾವದಾದರು ಮಾರ್ಗಗಳನ್ನು ತನ್ನ ಬುದ್ಧಿ ಆಲೋಚಿಸಿ ಅದು ಅನುಸರಿಸುವುದು ಯುಕ್ತವಾಗಿರುತಿದೆ. ಅವನಿಗೆ ವಾಣಿಜ್ಯ, ಕೈಗಾರಿಕೆ, ವೈದ್ಯ ಮುಂತಾದ ಯಾವವಿಷಯದಲ್ಲಾಗಲಿ ಅಭಿರುಚಿಯೂ, ಅಭಿಮಾನವೂ ಇದ್ದಾಗಿದ್ದರೆ ಅದರಲ್ಲಿ ಯಾವದಾದರೊಂದು ವೃತ್ತಿಯನ್ನವಲಂಬಿಸಿ, ಪ್ರಾತಿಕೂಲ್ಯಗಳಿಗಾಗಿ ಹೆದರದೆ, ಸಹನೆಯುಳ್ಳವನೆ ವಿವೇಕಿಯಾಗಿ ಶ್ರಮಿಸುವನಾದರೆ ಭಗವತ್ಕೃಪೆಯು ಅವನಲ್ಲಿ ಪ್ರಸರಿಸಿ ಅವನಿಗೂ ಅವನ ದೇಶಕ್ಕೂ ಸಹ ಯಾವದಾದರೊಂದು ಒಳ್ಳೆಯದುಂಟಾಗುವದೆಂಬದೇನೋ ನಿಶ್ಚಯವೆಂದು ನುಡಿಯುವೆವು. ಇನ್ನು ಮೂರನೆಯ ತರಗತಿಯವರ ಸ್ಥಿತಿಯಂ ಕುರಿತು ಚಿಂತಿಸುವೆವಾದರೆ, ಅವರ ಅವಸ್ಥೆಯು ಅನುತಾಪಕರವಾದುದಾಗಿಯೂ ಆಶ್ಚರ್ಯಕಾರವಾದುದಾಗಿಯೂ ಇರುತಿದೆ, ಪ್ರಾಯಶಃ ದೇಶದಲ್ಲಿ ಈ ತರಗತಿಯವರ ಸಂಖ್ಯೆಯೇ ಅಪಾರವಾದುದಾಗಿರುತಿದೆ. ಇವರ ಭವಿಷ್ಯತ್ಪರಿಣಾಮವು ಹ್ಯಾಗೆ ವ್ಯವಸ್ಥೆಯನ್ನೈದತಕ್ಕದ್ದೋ ಅದಂ ನಿಷ್ಕರ್ಷಿಸಿ ತಿಳಿಸುವುದು ಅತಿ ಪ್ರಯಾಸವಾಗಿರುತಿದೆ. ಇವರಿಗೆ ಜೀವನೋಪಾಯವು ದುರ್ಲಭವು ; ಉಪಪತ್ತಿಯು ಶೂನ್ಯವು ; ಆದುದರಿಂದ ಯಾವಕಾಲಕ್ಕಾಗಲಿ ಬಂಡವಾಳವನ್ನಿಟ್ಟು ಅವರ ವೃತ್ತ್ಯಂತರದಿಂದ ಜೀವಿಸಲಿಕ್ಕೆ ಚೈತ

ಸ್ವವಿಲ್ಲದವರಾಗಿರುತ್ತಾರೆ. ಆದಕಾರಣ ಈ ತರಗತಿಯವರು, ಯಾವನಾದರೊಬ್ಬ ಬಂಡವಾಳವುಳ್ಳವನನ್ನಾಶ್ರಯಿಸಿ ಅವನ ಅಭಿಮಾನವನ್ನಾರ್ಜಿಸಿ ಜೀವಿಸಬೇಕಾದ ನಿರ್ಬಂಧವು ಇವರಿಗೆ ಪ್ರಾಪ್ತವಾಗಿರುತಿದೆ. ಬಂಡವಾಳವುಳ್ಳಂತವರಲ್ಲಿ ಇಂಡ್ಯ ಗವರ್ನಮೆಂಟಿನವರು ಅಗ್ರಿಮ ರೆನಿಸಿರುತ್ತಾರೆ. ಇವರ ಅಧಿಕಾರ ಒಲವು ಬಹಳ ದೂರ ವ್ಯಾಪ್ತವಾಗಿದ್ದರೂ, ಸ್ವರೂಪತಃ ಮಿತಗೊಳಿಸಲ್ಪಟ್ಟದ್ದಾಗಿರುತಿದೆ. ಇವರು ಕೇವಲ ದಯಾನಾಗ ಯುಕ್ತರಾಗಿದ್ದಾಗ್ಯೂ ಸರ್ವಸಾಧಾರಣ್ಯೇನ ದೇಶದ ಪ್ರಜೆಗಳೆಲ್ಲರಿಗೂ ಉಪಕಾರಿಗಳೆನಿಸಲಿಕ್ಕೂ, ದಯಾ ಪ್ರದರ್ಶನಕ್ಕೂ ಸಾಧ್ಯವಾಗಲಾರದು. ಪ್ರಭುತ್ವವು ವಿದೇಶೀಯರಿಂದ ಭರಿತವಾದುದಾಗಿರುವುದರಿಂದ ಅವರಿಗೂ ಪ್ರಜೆಗಳಿಗೂ ಮಧ್ಯೆ ನೆಲೆಗೊಂಡಿರುವ ಅಂತರವು ಅಪಾರವಾದುದಾಗಿ ಏರ್ಪಟ್ಟದೆ. ಹೀಗಿರುವದರಿಂದ ಗವರ್ನಮೆಂಟಿನವರು ಪಡೆದಿರುವ ಜನರ ಸ್ಥಿತಿ ಪರಿಜ್ಞಾನವು ಅನ್ಯಥಾ ಕಲ್ಪಿತವಾದುದಾಗಿಯಾಗಲಿ, ಅಥವಾ ಅತ್ಯಂತ ಕಾಲ್ಪನಿಕವಾದುದಾಗಿಯಾಗಲಿ ಏರ್ಪಟ್ಟಿರುತದೆ. ಜನರ ಸ್ವರೂಪವನ್ನವರು ಅರಿಯಲೆತ್ನಿಸದಿರುವದರಿಂದಲೇ ಪ್ರಜೆಗಳು ಅವರ ಸ್ವಭಾವವನ್ನರಿತು ನಿರ್ವಹಿಸಲಸಮರ್ಥರಾಗಿರುತ್ತಾರೆ. ಇಂತಹ ಸ್ಥಿತಿಯಲ್ಲಿ ಕೆಳವರ್ಗಕ್ಕೆ ವ್ಯಂಗ್ಯವಾಗಿರುವದೇನೂ ಆಶ್ಚರ್ಯವಲ್ಲವು. ವಿಶೇಷವಾಗಿ ಪ್ರಾಮಾಣಿಕರಾಗಿರುವ ಸಂದರ್ಭಗಳಲ್ಲಿ ಗವರ್ನಮೆಂಟಿನವರು ಕುಂಬಳಕಾಯಿ ಹೋಗುವದನ್ನರಿಯದೆ ಸಾಸುವೆಕಾಳಿನ ನಷ್ಟಕ್ಕಾಗಿ ಪಟ್ಟು ಹಿಡಿದು ಬಾಧೆ ಪಡುವಂತ ಅಪಹಾಸ್ಯರೆನಿಸಿಕೊಳ್ಳುತ್ತಾರೆ.

Occasional Notes.
ನೈಮಿತ್ತಿಕ ವಿಷಯನ್ಯಾಸ

ಮಹಾಮಾರಿ ಜಾಡ್ಯದಿಂ ಪೀಡಿತರಾದವರನ್ನ ಪರೀಕ್ಷಿಸಿ ರಿಪೋರ್ಟ್ ಮಾಡುವದಕ್ಕೆ ಸ್ಟೀಮರುಗಳಲ್ಲೂ ರೈಲ್ವೇ ಸ್ಟೇಷನುಗಳಲ್ಲೂ ನಿಯಮಿಸಲ್ಪಟ್ಟಿರುವ ಅಸ್ಪತ್ರೆ ಅಸಿಸ್ಟೆಂಟರಿಗೆ ಜಾಸ್ತಿ ರುಸುಂ ಕೊಡಬೇಕೆಂದು ಸಿಫಾರಸ್ ಮಾಡಲ್ಪಟ್ಟದ್ದಕ್ಕೆ ಅದು ಗವರ್ನಮೆಂಟಿನವರು ಮಂಜೂರ್ಮಾಡಿದಾರೆಂದು ಕೇಳುತ್ತೇವೆ.

ಸಯಾಂ ಅರಸರವರು ಬರುವ ಜೂಲೈ ತಿಂಗಳಲ್ಲಿ ಇಂಗ್ಲಾಂಡಿಗೆ ದಯಮಾಡುವರೆಂದು ತಿಳಿಯ ಬರುತಿದೆ. ಆಸಂದರ್ಭದಲ್ಲಿ ಸದರೀ ಅರಸರವರು ಶ್ರೀಮನ್ಮಹಾರಾಣೀ ಚಕ್ರವರ್ತಿನೀಯವರ ಭೇಟಿ ಮಾಡಿಕೊಳ್ಳುವರೆಂತಲೂ ಬ್ರಿಟಿಷಿನವರ ನ್ಯಾಯನೀತಿ ಆಚಾರ ವ್ಯವಹಾರಗಳನ್ನು ಅನುಭವ ಪೂರ್ವಕ ತಿಳಿದುಕೊಳ್ಳುವದಕ್ಕಾಗಿ ಒಂದು ವರುಷಕಾಲ ಇಂಗ್ಲಾಂಡಿನಲ್ಲಿರುವರೆಂತಲೂ ತಿಳಿಯಬರುತಿದೆ.

ಪೆಷಾವರ್ ಪಟ್ಟಣದಲ್ಲಿನ ಪ್ರಜೆಗಳು ಕಳೆದ ತಿಂಗಳ ೧೪ನೇ ತಾರೀಖಿನಲ್ಲಿ ನಹಿಷ್ಭಾಗ ಎಂಬ ಪ್ರದೇಶದೊಳು ಸಭೆ ಸೇರಿ ಈಗ್ಗೆ ಐದುನೂರು ಸಂವತ್ಸರಗಳ ಹಿಂದೆ ಮುಸಲ್ಮಾನಮತಕ್ಕೆ ಸೇರಿ ತದ್ವೇಷ ಭಾಷಾಚಾರಗಳನ್ನವಲಂಬಿಸಿದ್ದ ಒಬ್ಬ ಹಿಂದೂ ಜಾತಿಯವನನ್ನು ಪ್ರಾಯಶ್ಚಿತ್ತಪೂರ್ವಕ ಸದ್ವ್ಯವಹಾರದಲ್ಲಿ ಸೇರಿಸಿಕೊಂಡು ಎಲ್ಲರೂ ಕಲೆತು ಭೋಜನವಂ ಮಾಡಿದರೆಂದು ಅಲ್ಲಿನ ಪತ್ರಿಕೆಯೊಂದು ತಿಳಿಸುತಿದೆ.

ವಿವೇಕಾನಂದ ಸ್ವಾಮಿಗಳವರು ಇಂಡ್ಯದೇಶದಲ್ಲಿ ಜನರಿಗೆ ಅದ್ವೈತ ವೇದಾಂತ ಶಾಸ್ತ್ರವನ್ನುಪದೇಶಿಸಿ, ಯೆಲ್ಲರೂ ವೇದಾಂತಿಗಳನ್ನಾಗಿ ಮಾಡಬೇಕೆಂಬ ಕೋರಿಕೆಯುಳ್ಳವರಾಗಿ, ಕಲಕತ್ತಾ, ಮದರಾಸ್, ಮಸೂರಿ ಈ ಮೂರು ಪ್ರದೇಶಗಳಲ್ಲಿ ಆಶ್ರಮಗಳು ಅಂದರೆ ಗುರು ಪೀಠಗಳನ್ನು ಸ್ಥಾಪಿಸಲುದ್ದೇಶಿಸಿರುವಂತ ತಿಳಿಯಬರುತಿದೆ. ಮುಂದೆ ನಮ್ಮ ಮತತ್ರಯ ಪೀಠಾಧಿಪತಿಗಳು ಮಾಡಬೇಕಾದ ಕರ್ತವ್ಯಗಳು ಏನಾ ನೆಯದೆಂದು ವ್ಯಕ್ತವಾಗಲಿಲ್ಲವು.

ಪಂಜಾಬ್ ದೇಶದ ಲೆಪ್ಟನೆಂಟ್ ಗವರ್ನರ್‌ರವರಾಗಿದ್ದು ಈ ತಿಂಗಳ ೩ನೇ ತಾರೀಖಿನಲ್ಲಿ ತಮ್ಮ ಕೆಲಸದ ಚಾರ್ಜನ್ನು ಮಿ॥ ಮ್ಯಾಕವರ್ತಯಂಗ್ ಯವರಿಗೊಪ್ಪಿಸಿ ಕೆಲಸದಿಂದ ನಿವೃತ್ತರಾದ ಸರ್ ಡೆನ್ನಿಸ್ ಫಿಡ್ಜಪ್ಯಾಟ್ರಿಕ್ ಯವರು ೯ನೇ ತಾರೀಖು ಮಂಗಳವಾರದದಿನ ಮದರಾಸಿಗೆ ಬಂದು ಆದಿನವೆಲ್ಲ ಗವರ್ನರವರ ಆತಿಥ್ಯವಂಕೈಗೊಂಡಿದ್ದು ಅದೇದಿನ ರಾತ್ರಿ ದಕ್ಷಿಣಇಂಡ್ಯ ರೈಲ್ ಮಾರ್ಗವಾಗಿ ತೂತ್ತುಕುಡಿಗೆ ಹೋಗಿ ಅಲ್ಲಿಂದ ಸಿಲೋನಿಗೆ ಪ್ರಯಾಣವಾಗಿ ಅಲ್ಲಿಂದ ಇಂಗ್ಲಾಂಡಿಗೆ ಹೊರಟುಹೋದರೆಂದು ತಿಳಿಯಬರುತಿದೆ.

ಇಂಡ್ಯ ದೇಶದಲ್ಲಿ ಸರ್ವತ್ರ ಪ್ರಜೆಗಳ ವಿದ್ಯಾಭಿವೃದ್ಧಿಗಾಗಿ, ೧೮೯೫-೯೬ನೇ ಇಸವಿಯಲ್ಲಿ ೬ ಕೋಟಿ ಎಂಭತ್ತು ಲಕ್ಷ ರೂಪಾಯಿಗಳು ವ್ಯಯವಾಗಿರುತಿವೆ. ೧೮೯೪-೯೫ನೇ ಇಸವಿಯಲ್ಲಿ ಮೂರುಕೋಟಿ ಮೂವತ್ತು ಲಕ್ಷ ರೂಪಾಯಿಗಳು ಖರ್ಚಾಗಿದ್ದವು ಹಿಂದಿನ ಸಂವತ್ಸರಕ್ಕಿಂತಲೂ ಕಳೆದ ಸಾಲಿನಲ್ಲಿ ಇದಕ್ಕಾಗಿ ಮೂರು ಕೋಟಿ ರೂಪಾಯಿಗಳು ಜಾಸ್ತಿಯಾಗಿ ವ್ಯಯ ಮಾಡಲ್ಪಟ್ಟಿರುತಿವೆ. ಈ ಮೊಬಲಗಿನಲ್ಲಿ ನೇಕಡ ೨೫ ರೂಪಾಯಿಗಳು ಪ್ರೊವಿನ್ಷಿಯಲ್ ಫಂಡಿನಿಂದ ಸಹಾಯ ಮಾಡಲ್ಪಟ್ಟಿರುತಿದೆ. ವಿದ್ಯಾಭ್ಯಾಸದ ಇಲಾಖೆಯಲ್ಲಿ ಫೀಜ್ ಮೂಲಕ ಆದಾಯವು ನೇಕಡ ೩೦ ರೂಪಾಯಿಗಳು, ಲೋಕಲ್ ಫಂಡಿನಿಂದ ನೇಕಡಾ ೧೭ ರೂಪಾಯಿಗಳು, ಮ್ಯುನಿಸಿಪಲ್ ಫಂಡಿನಿಂದ ೩೪ ರೂಪಾಯಿಗಳ ಪ್ರಕಾರ ಪಡಿಸಲ್ಪಟ್ಟಿರುತಿವೆ.

ಮದರಾಸ್ ಯೂನಿವರ್ಸಿಟಿಯವರು ಪೂರ್ವದೇಶೀಯ ಭಾಷೆಗಳಲ್ಲಿ ಪರೀಕ್ಷೆಗಳನ್ನೇರ್ಪಡಿಸಿ ಅವುಗಳಲ್ಲಿ ತೇರ್ಗಡೆಯಾದವರಿಗೆ ಡಿಗ್ರಿಗಳನ್ನು ಕೊಡಬೇಕೆಂಬ ಉದ್ದೇಶವುಳ್ಳವರಾಗಿದಾರೆಂತಲೂ, ಎಫ್. ಎ, ಬಿ. ಎ, ಎಂ. ಎ ಪರೀಕ್ಷೆಗಳು ಇಂಗ್ಲಿಷ್ ಭಾಷೆಯಲ್ಲಿ ಗ್ರಂಥವಿಷಯಭೇದಗಳಿಂದ ಭಾಗಗಳಾಗಿ ವಿಭಜಿಸಲ್ಪಟ್ಟು ಹ್ಯಾಗೆ ನಡೆಸಲ್ಪಡುತವೆಯೋ ಅದೇರೀತಿ ದೇಶಭಾಷೆಗಳಲ್ಲೂ ನಡೆಸಲ್ಪಡುವವೆಂತಲೂ, ಪ್ರಸಕ್ತ ವಿಷಯವಂ ಕುರಿತು ಮದರಾಸ್ ಪ್ರೆಸಿಡೆನ್ಸಿಯ ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರಾದ ಡಾಕ್ಟರ್ ಡಂಕನ್ನವರು ಮುಂದಿನ ಸೆನೇಟಿಗಳ ಮೀಟಿಂಗ್‌ನಲ್ಲಿ ಪ್ರಸ್ತಾಪಿಸಿ ಚರ್ಚಿಸಬೇಕೆಂಬ ತಾತ್ಪರ್ಯವುಳ್ಳವರಾಗಿರುತ್ತಾರೆಂತಲೂ ಕೇಳುತ್ತೇವೆ. ಈ ಕ್ರಮವನ್ನ ಪಂಜಾಬ್ ಯೂನಿವರ್ಸಿಟಿಯವರು ಮಾತ್ರ ಅಂಗೀಕರಿಸಿ ವ್ಯವಹಾರದೊಳು ತಂದಿದಾರೆಂದು ತಿಳಿಯಬರುತಿದೆ.

ಈಗ ಇಂಡ್ಯ ದೇಶಕ್ಕೆ ಪ್ರಾಪ್ತವಾಗಿರುವ ದುರ್ದಶೆಗೆ ಕಾರಣಭೂತವಾದವು ಮಹಾಮಾರಿ ಜಾಡ್ಯವು ಕ್ಷಾಮ, ಈ ಎರಡು ಕಾರಣಗಳಿಂದ ಪ್ರಜೆಗಳು ನಾಶ ಹೊಂದುತಲಿರುವದಲ್ಲದೆ ವ್ಯಾಪಾರಗಳಿಗೂ ಪದಾರ್ಥಗಳ ಆಮದುರಫ್ತಿಗೂ ನ್ಯೂನತೆ ಯುಂಟಾಯಿತು. ಇದಕ್ಕೆ ದೃಷ್ಟಾಂತವಾಗಿ ಇಂಡ್ಯ ದೇಶದ ಆಯಾ ರೈಲ್ವೆ ಇಲಾಖೆಗಳ ಆದಾಯನಷ್ಟವನ್ನಿದರಡಿ ತಿಳಿಸುವೆವು. ೧೮೯೬ನೇ ಇಸವಿ ಏಪ್ರಿಲ್ ೧ಗ ಯಿಂದ ಇದುವರೆಗೆ ಒಂದುಕೋಟಿ ಮೂವತ್ತೊಂದು ಲಕ್ಷ ರೂಪಾಯಿಗಳ ಆಯತಿ ಕಡಮೆಯಾದಂತೆ ಲೆಕ್ಕ ನೇರ್ಪಟ್ಟಿತು. ಪಶ್ಚಿಮೋತ್ತರ ರೈಲ್ವೆಯಲ್ಲಿ ೩೫ ಲಕ್ಷ, ರಾಜಪುಟ್ಟಣ—ಮಾಳ್ವಾ ರೈಲ್ವೆಯಲ್ಲಿ ೩೪ ಲಕ್ಷ, ಮುಂಬೈ ಬರೋಡೆ ರೈಲ್ವೆಯಲ್ಲಿ ೨೦ ಲಕ್ಷ, ಗ್ರೇಟ್ ಇಂಡಿಯನ್ ಪೆನಿನ್ಸುಲರ್ ರೈಲ್ವೆಯಲ್ಲಿ ೧೪ ಲಕ್ಷ, ಈರೀತಿ ಕಮ್ಮಿಯುತ್ಪತ್ತಿಯಾಗಿರುತಿದೆ. ಪ್ರಕೃತ ಸ್ಥಿತಿಯು ಮುಂದೆಯೂ ಅನುಸರಿಸುವ ಪಕ್ಷಕ್ಕೆ ಮಾರ್ಚಿ ಆಖೈರಿಗೆ ಒಂದೂವರೆಕೋಟಿ ರೂಪಾಯಿಗಳು ನಷ್ಟವುಂಟಾಗಬಹುದೆಂದು ಅಂದಾಜಾಗಿರುತಿದೆ.

ಈಗ ಮುಂಬೈ ಪ್ರೆಸಿಡೆನ್ಸಿಯಲ್ಲಿ ಪ್ರಾಪ್ತವಾಗಿರುವ ದುರ್ಭಿಕ್ಷದ ದೆಸೆಯಿಂದ ಪ್ರಾಥಮಿಕ ವಿದ್ಯಾಲಯಗಳೆಲ್ಲವು ಪ್ರಾಯಶಃ ಮುಚ್ಚಲ್ಪಟ್ಟವೆ. ಅವುಗಳಲ್ಲಿ ಓದುತಲಿದ್ದ ವಿದ್ಯಾರ್ಥಿಗಳಲ್ಲಿ ಅನೇಕರು ಅನ್ನಕ್ಕೆ ಶ್ರಮಪಡುತ ರಿಲೀಫ್ ಕೆಲಸಗಳಲ್ಲಿ ದಾಖಲಾಗಿ ಕೂಲಿಮಾಡಿ ಜೀವಿಸುತಲಿದಾರೆ. ಬಾಲಕರು ಸಂಪಾದಿಸಿದ ವಿದ್ಯೆಯು ಕಲ್ಲುಗಳು ಒಡೆಯುವದಕ್ಕೆ ಸಹಕಾರಿ ಯಾಗಬೇಕಾದ ಕಾಲವು ಪ್ರಾಪ್ತವಾಯಿತು ಸದರೀ ಪಾಠಶಾಲೆಗಳ ಉಪಾಧ್ಯಾಯರ ನೌಕರಿಯು ಡಿಸ್ಟ್ರಿಕ್ಟ್ ಅಧಿಕಾರಿಗಳ ಯಿಷ್ಟಾನುಸಾರಿಗೆ ಕೊಡಲ್ಪಟ್ಟಿರುತಿದೆ. ಅವರು ಆ ಉಪಾಧ್ಯಾಯರನ್ನು ರಿಲೀಫ್ ಕಾಮಗಾರಿಗಳನ್ನು ಮಾಡುವ ಬಾಲಕರ ಮೇಲ್ ವಿಚಾರಣೆಯ ಬಗ್ಗೆ ಕೂಡಲೇ ಆಯಾ ಪ್ರದೇಶಗಳಿಗೆ ಕಳುಹಿಸಿದರು. ಮಿಷನರಿಗಳು ಇದು ಒಳ್ಳೆಯ ಸಮಯವೆಂದರಿತು ರಿಲೀಫ್ ಕಾಮಗಾರಿಗಳು ಜರಗುವ ಸ್ಥಳಗಳಿಗೆ ಸೇರಿದಂತೆ ತಾವು ಪಾಠಶಾಲೆಗಳನ್ನಿಟ್ಟು ಬಾಲಕರಿಗೆ ವಿದ್ಯಾಭ್ಯಾಸ ಮಾಡಿಸುತ ರಿಲೀಫಿಗೆ ಓದಿ ಹೋಗದಂತೆ ತಾವು ಕಾಪಾಡಿಕೊಳ್ಳುವದಾಗಿ ತಿಳಿಸಲು, ಸದರೀ ಪ್ರಾರ್ಥನೆಯು ಗವರ್ನಮೆಂಟಿನವರಿಂದ ಬಹಳ ಯೋಗ್ಯವಾಗಿ ನಿರಾಕರಿಸಲ್ಪಟ್ಟಿತು.

LOCAL AND PROVINCIAL NEWS.
ಒಳದೇಶಮತ್ತು ತಾಲ್ಲೂಕುಜಾತಿ ವೃತ್ತಾಂತಗಳು.

ಗತಿಸಿದ ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರ್ ಬಹದೂರವರ ಪ್ರತಿಮೆಯನ್ನು ನೂವತ್ತು ಸಾವಿರ ರೂಪಾಯಿಗಳ ಖರ್ಚಿನಿಂದ ಇಂಗ್ಲಾಂಡ್ ದೇಶದೊಳು ಶ್ವೇತ ಶಿಲೆಯಲ್ಲಿ ತಯಾರ್ಮಾಡಿಸಿ ತರಿಸಿ ಅರಮನೆಯಲ್ಲಿಟ್ಟದ್ದರ ಪೆಟ್ಟಿ ಅದು ಸಹ ೧೬ನೆ ಅಲ್ಲಿ ಪ್ರಾಪ್ತವಾದ ಅಗ್ನಿಯ ಪಾಲಾಯಿತೆಂದು ತಿಳಿದು ನಮ್ಮ ಹೃದಯವು ವಿಶೇಷತಃ ಸಂತಪಿಸುತಲಿದೆ.

ಈಸಲ ಯೂನಿವರ್ಸಿಟಿಯಲ್ಲಿ ಡಿಗ್ರಿ ಪರೀಕ್ಷೆಗಳಂ ಕೊಟ್ಟು ತೇರ್ಗಡೆಯಂ ಹೊಂದಿದವರಿಗೆ ಡಿಗ್ರಿಗಳಂ ಕೊಡುವದಕ್ಕಾಗಿ ಈತಿಂಗಳ ೨೭ನೇ ತಾರೀಖು ಶುಕ್ರವಾರದ ದಿನ ಸೆನೆಟ್ ಹಾಲಿನಲ್ಲಿ ಸಭೆ ಸೇರಿಸಲ್ಪಡುವದಾಗಿ ಸದರೀ ಡಿಗ್ರಿಗಳಂ ಪಡೆಯಬೇಕೆಂಬ ಇಷ್ಟವುಳ್ಳ ಉಮೇದುವಾರರೆಲ್ಲರು ಈ ತಿಂಗಳ ೧೯ನೇ ತಾರೀಖಿನೊಳಗಾಗಿ ಯೂನಿವರ್ಸಿಟಿ ರಿಜಿಸ್ಟ್ರರವರಿಗೆ ಬರೆದುಕೊಳ್ಳಬೇಕಾದ್ದಾಗಿರುತದೆ.

ಶ್ರೀಮನ್ಮಹಾರಾಣಿಯವರ ಬಾಲಿಕಾ ಪಾಠಶಾಲೆಯು ಒಂದು ಸೆಕೆಂಡ್ ಗ್ರೇಡ್ ಕಾಲೇಜ್ ಮಾಡಲ್ಪಟ್ಟಿತು. ಈಸಲ ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನು ಪ್ಯಾಸ್‌ಮಾಡಿದವರಿಗೆ ೧೦೦ ರೂಪಾಯಿ ಸಂಬಳವನ್ನು ಗೊತ್ತುಮಾಡಿ ಎಫ್. ಎ ಪರೀಕ್ಷೆಗೆ ಓದತಕ್ಕವರಿಗೆ ೩ ವರ್ಷಗಳವರೆಗೆ ಅರ್ಧ ಸಂಬಳದ ಮೇಲೆ ರಜಾ ಕೊಟ್ಟಿರುತ್ತಾರೆ.—ವ್ಯ. ಚಿಂ.

ನಮ್ಮ ಮಹಾರಾಣೀ ರೀಜ ಟರವರ ದ್ವಿತೀಯ ಪುತ್ರಿಯರು ಗರ್ಭಿಣಿಯಾಗಿರುವದರಿಂದಲೂ, ಅರಮನೆಯ ಸಾಮಾನುಗಳನ್ನೆಲ್ಲ ತಾವೇ ಖುದ್ದಾಗಿ ಇದ್ದು ನೋಡಿಕೊಳ್ಳಬೇಕೆಂತಲೂ ಈಸಲ ನೀಲಗಿರಿಯ ಪ್ರಯಾಣವನ್ನು ನಿಲ್ಲಿಸಿಬಿಟ್ಟರು. ನಮ್ಮ ಮಹಾರಾಜರು ಮಾತ್ರ ಅವರ ಉಪಾಧ್ಯಾಯರ ಜೊತೆಯಲ್ಲಿ ಇನ್ನು ಕೆಲವು ದಿನಗಳೊಳಗಾಗಿ ಅಲ್ಲಿಗೆ ಹೊರಟು ಹೋಗುತ್ತಾರೆಂದು ಕೇಳುತ್ತೇವೆ.—ವ್ಯ. ವ.

ಅರಮನೆಗೆ ಅಗ್ನಿಪ್ರವೇಶವಾದ ಕಾಲದಲ್ಲಿ ತಪ್ಪಿಸಿಕೊಳ್ಳಲಿಕ್ಕೆ ಅವಕಾಶವಿಲ್ಲದೆ ಒಳಗೆ ಸಿಕ್ಕಿ ಮೃತಪಟ್ಟವರ ಸಂಖ್ಯೆಯು ಅದ್ಯಾಪಿ ಗೊತ್ತಾಗಿ ತಿಳಿಯದಿದ್ದರೂ ಇದುವರೆಗೆ ಐದುಮಂದಿಯ ಮುರ್ದೆಗಳು ಮಾತ್ರ ಇದ್ದಲು ಬೂದಿ ಮೊದಲಾದವುಗಳ ಕೆಳಭಾಗದಲ್ಲಿ ದೊರೆತವು. ಅವರ ಪ್ರಕೃತ ಸ್ಥಿತಿಯಲ್ಲಿ ಶವವನ್ನು ನೋಡಿ ಇಂಥವರೆಂದು ಕಂಡು ಹಿಡಿಯಲು ಕೇವಲ ಅಸಾಧ್ಯವಾಗಿ ಏರ್ಪಟ್ಟಿತೆ ತಿಳಿಯಬರುತಿದೆ. ಬೆಂಕಿಯನ್ನಾರಿಸಿ ಸಾಧ್ಯವಾದಮಟ್ಟಿಗೆ ಅರಮನೆಯನ್ನುಳಿಸಿಕೊಳ್ಳಬೇಕೆಂಬ ಉದ್ದೇಶವುಳ್ಳವರಾಗಿ ಶ್ರಮಿಸಿ ತಮ್ಮ ಪ್ರಾಣಗಳನ್ನೀಗಿದಂತವರ ಕುಟುಂಬಗಳಿಗೆ ಸಂಭವಿಸಿದ ದುರ್ದಶೆಯಂ ಕೇಳಿ ಶ್ರೀಮನ್ಮಹಾರಾಣೀ ರೀಜಂಟರವರು ಬಹಳ ಪಶ್ಚಾತ್ತಾಪಪಟ್ಟರೆಂತಲೂ, ಈ ಆಪತ್ಕಾಲದಲ್ಲಿ ಧೈರ್ಯ ಸಾಹಸಗಳಂ ತೋರಿಸಿ ತಮ್ಮ ಪ್ರಾಣಗಳಂ ಕಳಕೊಂಡವರ ಕುಟುಂಬಕ್ಕೆ ಜೀವನಾಧಾರವಂ ಕಲ್ಪಿಸಬೇಕೆಂದು ಶ್ರೀಮನ್ಮಹಾರಾಣೀ ರೀಜಂಟರವರು ಆಲೋಚಿಸುತಲಿರುವಂತೆಯೂ ಕೇಳಿ ಸಂತೋಷಿಸುತ್ತೇವೆ.

ಮೈಸೂರು ಅರಮನೆಗೆ ಕಳೆದ ತಿಂಗಳ ೨೪ನೇ ತಾರೀಖು ಭಾನುವಾರದ ದಿನ ಬೆಳಿಗ್ಗೆ ಪ್ರಾಪ್ತವಾದ ಅಗ್ನಿ ಮೂಲಕವಾದ ನಷ್ಟವನ್ನೂ ತನ್ನಿಮಿತ್ತವನ್ನೂ ವಿಚಾರಿಸಿ ನಿರ್ಧರಿಸುವ ಬಗ್ಗೆ ಈಚೆಗೊಂದು ಕಮಿಟಿ ಏರ್ಪಟ್ಟು ಸದರೀ ಕಮಿಟಿಗೆ ಕೌನ್ಸಿಲರ್ ಮಿ॥ ಕೃಷ್ಣಮೂರ್ತಿಗಳು ಪ್ರೆಸಿಡೆಂಟರಾಗಿಯೂ, ಮಿ॥ ಫ್ರೇಜರ್ ಸಾಹೆಬರವರು, ಕರ್ನಲ್ ಜೋನ್ಸ್ ಸಾಹೆಬರವರು, ಮಿ॥ ದಳವಾಯ್ ದೇವರಾಜ ಅರಸಿನವರು, ಈ ಮೂವರು ಮೆಂಬರ್‌ಗಳಾಗಿಯೂ ಮಿ॥ ರಾಮಾನುಜಯ್ಯಂಗಾರ್ರವರು ಕಮಿಟಿಯ ಸೆಕ್ರೆಟರಿಯಾಗಿಯೂ ನಿಯಮಿತರಾಗಿದಾರೆಂದು ತಿಳಿಯಬರುತಿದೆ. ಈ ತಿಂಗಳ ೪ನೇ ತಾರೀಖ್ ಗುರುವಾರದ ದಿನ ಮೇಲೆ ಕಂಡ ಕಮಿಟಿಯವರು ಪ್ರಥಮಾವರ್ತಿ ಸಭೆ ಸೇರಿ ವಿಚಾರಣೆಗುಪಕ್ರಮಿಸಿ, ಅರಮನೆ ಹತ್ತಿಕೊಂಡ ಸಮಯದಲ್ಲಿ ಹಾಜರಿದ್ದ ಒಬ್ಬರಿಬ್ಬರು ಸಾಕ್ಷಿಗಳನ್ನು ದರ್ಯಾಪ್ತು ಮಾಡಿ ಅವರ ಶೃಖಾಮೂಲಗಳನ್ನು ತೆಗೆದುಕೊಂಡರು. ಅದರ ಮಾರನೆಯ ದಿವಸ್ಸು ಬದಸೂರ್ ಐದಾರು ಜನರ ವಿಚಾರಣೆಯು ನಡೆಯಿತು. ಹೀಗೆಯೇ ಕಮಿಟಿಯವರು ಈ ವಿಷಯದ ನಿಜಸ್ಥಿತಿಯಂ ತಿಳಿದುಕೊಳ್ಳುವದಕ್ಕಾಗಿ ಎಷ್ಟುಮಂದಿಯಂ ಕರೆಯಿಸಿ ವಿಚಾರಣೆ ಮಾಡುತಲಿದಾರಂತೆ. ಕಮಿಟಿಯವರ ವಿಚಾರಣೆಯು ಕೇವಲ ಅಂತರಂಗವಾಗಿ ಜರಗುತಲಿರುವಂತೆ ಕೇಳುತ್ತೇವೆ. ಪ್ರಸಕ್ತ ಅವರು ನಿಮಿತ್ತ ನಿರ್ಧಾರಕರ ಅಭಿಪ್ರಾಯವು ಹೊರಗಾದ ಕೂಡಲೇ ಅದಂ ಪ್ರಕಟಿಸುವೆವು. ಪರಂತು ಅರಮನೆಗೆ ಪ್ರಾಪ್ತವಾದ ಪದಾರ್ಥ ನಷ್ಟವೂ, ಧನಹಾನಿಯೂ ಇಷ್ಟೆಂದು ಖಂಡಿತವಾಗಿ ತಿಳಿಯಬರಲಿಲ್ಲವು.

ಮೈಸೂರಲ್ಲಿ ಅರಮನೆ ಸುಟ್ಟುಹೋದದ್ದು.

ಕಳೆದ ತಿಂಗಳ ೨೪ನೇ ತಾ॥ ಭಾನುವಾರ ಬೆಳಿಗ್ಗೆ ಮೈಸೂರಲ್ಲಿ ಅರಮನೆಗೆ ಬೆಂಕಿಬಿದ್ದು ಉರಿದುಹೋದ ಸಂಗತಿಯಂ ಕಳೆದಸಾರದ ಪತ್ರಿಕೆಯಲ್ಲಿ ಪ್ರಕಾಶಪಡಿಸಿದ್ದೆವಷ್ಟೆ, ಅದೇ ವಿಷಯದಲ್ಲಿ ಈಗ ಹೆಚ್ಚಿನ ಸಂಗತಿ ಏನೆಂದರೆ —ಹೊಗೆಕೊಳವೆ ನೀರಿನ ಪಂಪುಗಳನ್ನು ತಂದಿಟ್ಟ ಸಾಪರ್ ಮೈನರ್ ಎಂಬ ಶಿಪಾಯಿಗಳು ಬೆಂಕಿಯನ್ನು ಆರಿಸಿ, ಕಿಚ್ಚು ಹಾರುವ ಭಾಗಗಳನ್ನೆಲ್ಲ ಒಡೆದು ಕೆಡವಿ ಅಲ್ಲಿನ ಜನರೇ ಮುಂದಿನ ಕೆಲಸಗಳನ್ನು ಮಾಡಿಕೊಳ್ಳುವಂತ ಸ್ಥಿತಿಗೆ ತಂದಿಟ್ಟು ಕಳೆದ ಗುರು ಶುಕ್ರವಾರಗಳಲ್ಲಿ ವಾಪಸ ಹೊರಟುಹೋದರು. ಅಲ್ಲಿನ ಜನರು, ಅರಮನೆ ಚಾಕರರು, ಬಂದಿವಾನರು, ಕೂಲಿಗಾರರು ದಿನಗಳು ದುಂಡಾದವರೆಲ್ಲ ಸಣ್ಣ ಗೋಡೆಗಳನ್ನು ಕೆಡವುವದು, ಬೆಂಕಿಯನ್ನು ಆರಿಸುವದು, ಮಣ್ಣು ಎತ್ತಿ ಸುರಿಯುವದು, ಬೆಂದ ಮರದ ತುಂಡುಗಳನ್ನು ಕಿತ್ತು ಹಾಕುವದು, ಇದೆಲ್ಲ ಕೋಟೆಯ ಹೊರಕ್ಕೆ ಸಾಗಿಸುವದು ಈ ಕೆಲಸದಲ್ಲಿ ಮಗ್ನರಾಗಿರುತ್ತಾರೆ. ಇವರಿಗೆಲ್ಲ ಮಹಾರಾಣೀ ರೀಜಂಟರವರು ಅರಮನೆಯ ಬಿಡದಿಯಲ್ಲಿಯೇ ಊಟ ಮಾಡಿಸುತ್ತಾರೆ ದಿನವೂ ರಾತ್ರಿವೇಳೆ ಮೂರು ಘಂಟೆಯ ಕಾಲ ನಿದ್ರೆಮಾಡಿ ಎಲ್ಲರೂ ಅಲ್ಲಿಯೇ ದಿನವೆಲ್ಲ ಕೆಲಸ ಮಾಡುವರು

ಮದನವಿಲಾಸ ತೊಟ್ಟಿ, ಅಪಸರದ ಕೋಟೆ, ಆಯುಧ ಶಾಲೆ, ಸರಸ್ವತಿ ಭಂಡಾರ, ಇವೇ ಮುಂತಾದ ಕಡೆಗಳಲ್ಲಿ ಬೆಂಕಿಯು ಇನ್ನೂ ಆರಲಿಲ್ಲವು. ಸ್ವಲ್ಪಸ್ವಲ್ಪವಾಗಿ ತಗೆಯುತಲೊಳಗೆ ಉರಿಯುತಲಿರುವ ಪದಾರ್ಥಗಳನ್ನು ಹೊರಗೆ ಹಾಕುತಲೂ ಇದಾರೆ ಬೊಕ್ಕಸದ ಸಾಮಾನುಗಳನ್ನೇ ಇನ್ನೂ ತೆಗೆಯುತಲಿರುವರು ದಿನ ೧೦ನೂರಾರು ಗಾಡಿಗಳಲ್ಲಿ ಗೋಡೆಗಳ ಇಟ್ಟಿಗೆ, ಗಾರೆ, ಮಣ್ಣು, ತೊಲೆ, ಸರಪಂತೆಗಳು ಸಾಗಿಹೋಗುತಲಿವೆ ಮೇಲಣ ಅಂತಸ್ತಿನ ಸಾಮಾನುಗಳನ್ನೆಲ್ಲ ತೆಗೆದ ತರುವಾಯ ಕೆಳಗಿನ ಕೊಠಡಿಗಳು ನೆಲವಂ ಶೋಧಿಸಬೇಕಾಗಿದೆ. ಇದಕ್ಕೆ ಇನ್ನೂ ೩-೪ ದಿನಗಳು ಬೇಕಾಗುತದು

ಬೆಂಕಿ ಬಿದ್ದಾಗ ಒಳಗಿನಿಂದ ಉತರ ಕಡೆಗಳಿಗೆ ಸಾಗಿಸಿದ್ದ ಸಾಮಾನುಗಳನ್ನೂ ಪದಾರ್ಥಗಳನ್ನೂ ಈಗೀಗ ಹೊರಗೆ ತೆಗೆದು ಒಂದು ಕಾಟಕದ ತೊಟ್ಟಿಯಲ್ಲಿ ಸೇರಿಸುತಲಿದಾರೆ, ಇನ್ನೂ ಯಾವ ಸಾಮಾನು ಹೋಯಿತೊ ಯಾವದು ಉಳಿಯಿತೊ ಒಂದೂ ಗೊತ್ತಾಗುವಹಾಗಿಲ್ಲವು ಚಿನ್ನ ಬೆಳ್ಳಿ ಮುತ್ತು ಪದಾರ್ಥಗಳಲ್ಲಿ ಬಹಳ ಭಾಗವನ್ನೆಲ್ಲ ಈಗ ಬಿದ್ದುಹೋಗಿರುವ ಕೆಳಗಿನ ಕೊಠಡಿಗಳಲ್ಲಿ ಸಿಕ್ಕಿಕೊಂಡಿವೆ ಇದನ್ನು ಬಿಡಿಸಿ ನೋಡಿದಾಗ ಇರುವದೂ ಇಲ್ಲದ್ದೂ ಗೊತ್ತಾಗುವುದು.

ಬೆಂಕಿಯನ್ನು ಆರಿಸುವದಕ್ಕಾಗಿ ಒಳಗೆ ನುಗ್ಗಿ ಹೊರಗೆ ಬರುವದಕ್ಕಾಗದೆ ಅಲ್ಲಿಯೇ ಪ್ರಾಣ ಕಳೆದುಕೊಂಡವರು ಎಷ್ಟುಜನವೊ ಇನ್ನೂ ತಿಳಿಯದು. ಮೇಲಣ ಅಂತಸ್ತಿನ ಒಂದು ಭಾಗದಲ್ಲಿ ನಾಲ್ಕು ಶವಗಳು ಸಿಕ್ಕಿರುವು. ಅವೆಲ್ಲ ಗುರುತು ಹಿಡಿಯುವದಕ್ಕಾಗದಹಾಗೆ ಬೆಂದು ಹೋಗಿದ್ದವು. ಬೆಂಕಿಯ ಉರಿಗೆ ಸಿಕ್ಕಿದವರಲ್ಲಿ ಆರುಜನ ಆಸ್ಪತ್ರೆಯಲ್ಲಿದ್ದರು. ಇವರಲ್ಲಿ ಒಬ್ಬನು ಸತ್ತುಹೋದನು ಚಪ್ಪರದ ಕೆಳಗಡೆ ಸಿಕ್ಕಿ ಒಬ್ಬನು ಪ್ರಾಣ ಕಳಕೊಂಡನು ಅವಸರದ ಹೊಟೆ, ಫಿರಂಗಿ ಪಡಸೆ, ಆನೆಬಾಗಿಲು ಈ ಸ್ಥಳಗಳಲ್ಲಿ ಕೆಲವರು ಸಿಕ್ಕಿಹೋದವರು ಪಾಪಸ ಬದುಕ್ಕಿದೆಂದು ತಿಳಿಯಬೇಕು. ಈ ಸ್ಥಳಗಳಲ್ಲಿ ಬಿದ್ದುಹೋದ ಮಾಳಿಗೆಯಲ್ಲಿ ಗೋಡೆಗಳು ಬಿದ್ದು ಕೆಳಗಿನಿಂದ ಇನ್ನೂ ಹೊಗೆ ಬರುತಲಿದೆ. ಎಲ್ಲ ಕಸ ನೆಲಸಮವಾಗುವ ಎಷ್ಟುಜನ ಸತ್ತರೆಂಬುವುದು ಗೊತ್ತಾಗದು, ಇದುವರೆಗೆ ೬ ಜನ ಸತ್ತಿರುತಾರೆ.

ಹೊಸ ಅಂಬು ನಿಳಾಸದಲ್ಲಿ ಮಾಮ ಇರುವದಕ್ಕಾಗಿಲ್ಲವು ಅನ್ನೂ ಕೆಲವುಕಡೆ ಬೆಂಕಿ ಚೆನ್ನಾಗಿ ಆರಲಿಲ್ಲವು ಹೊರಗಣ ನಾಲ್ಕು ಗೋಪುರಗಳೂ ಕಟ್ಟಣದ ಸಾಮಾನೂ ಕಪ್ಪಾಗಿ ನಿಂತಿವೆ ಅಷ್ಟು ಸುಂದರವಾಗಿದ್ದ ಈ ಭಾಗವನ್ನು ಈಗ ನೋಡಿದರೆ ಯಾರಿಗೂ ಭಯ ಪ್ರಾಪ್ತವಾಗುವದು.

ಚಿನ್ನದ ಸಾಮಗ್ರೀ ವಿಪರೀತವಾಗಿ ಉರಿದುಹೋಯಿತು ಹೊರಕ್ಕೆ ಸಾಗಿಸಿದ್ದೆಲ್ಲ ಚೆನ್ನಾಗಿವೆ ಲೇಟ್ ಚಾಮರಾಜ ಒಡೆಯರವರು ತಮ್ಮ ಪ್ರತಿಮೆಯನ್ನು ಗೋಲಿ ಕಲ್ಲಿನಲ್ಲಿ ಕೆತ್ತಿಸಿದ್ದರು ಇದಕ್ಕೆ ಸುಮಾರು ೪೦,೦೦೦ ರೂಪಾಯಿ ಖರ್ಚಾಗಿತ್ತು ಈ ಪ್ರತಿಮೆಯನ್ನು ಚಾಮರಾಜ ಪೇಟೆಯಲ್ಲಿ ಸೀತಾವಿಲಾಸ ಧರ್ಮಶಾಲೆಯ ಮೇಲ್ಭಾಗದಲ್ಲಿರುವ ಚಾವಡಿಯಲ್ಲಿ ಇಡಿಸಬೇಕೆಂದಿದ್ದರು ಇಂಥಾ ಬೆಲೆಯುಳ್ಳ ಸುಂದರವಾದ ಪ್ರತಿಮೆಯು ಉರಿಯಲ್ಲಿ ಸಿಕ್ಕಿ ಚೂರು ಚೂರಾಗಿ ಬಿದ್ದಿದೆ

ಅರಮನೆಯು ಸುಟ್ಟುಹೋದ್ದರಲ್ಲಿ ಮಹಾರಾಣೀ ರೀಜಂಟರವರಿಗೆ ಎಷ್ಟು ದ್ರವ್ಯ ನಷ್ಟವಾಯಿತೋ ಇನ್ನೂ ಗೊತ್ತಾಗಿಲ್ಲ ಹೇಳುವದಕ್ಕಾಗುವದಿಲ್ಲವು ಕೆಲವರು ೨೦ ಲಕ್ಷ ರೂಪಾಯಿಗಳ ಮೇಲೆಯೇ ನಷ್ಟವಾಯಿತೆಂದು ಹೇಳುತ್ತಾರೆ

ನಷ್ಟವಾದದ್ದರಲ್ಲಿ ಅಧಿಕಾರಿಗಳೇ ಮೊದಲುಗೊಂಡು ಬಡಬಗ್ಗರೆಲ್ಲ ಅರಮನೆ ಉರಿದುಹೋದದ್ದೇ ದೊಡ್ಡದಾಗಿದೆ ಯಾರೂ ಹಸನ್ಮುಖಿಗಳಾಗಿಲ್ಲ, ಎಲ್ಲರೂ ದುಃಖಿಸಿ ಚಿಂತಾಕ್ರಾಂತರಾಗಿರುವರು ಹೀಗಿರುವಲ್ಲಿ ಮಹಾರಾಣೀ ರೀಜಂಟರವರ ವ್ಯಸನವನ್ನು ಯಾಷ್ಟೆಂದು ವಿವರಿಸಬಹುದು, ಅದು ಅಪಾರವಾದದ್ದಾಗಿದೆ

ಇಂಥ ಅರಮನೆಗೆ ಇಂಥಾ ಉತ್ಸವಕಾಲದಲ್ಲಿ ಬೆಂಕಿ ಬೀಳುವದಕ್ಕೆ ಕಾರಣವೇನೆಂದು ವಿಚಾರಿಸುವದಕ್ಕಾಗಿ ಒಂದು ಕಮಿಟಿಯು ಏರ್ಪಾಡಾಯಿತು ಈ ಕಮಿಟಿಗೆ ಕರ್ನಲ್ ರಾದ ಮ|| ಕೃಷ್ಣಮೂರ್ತಿಯವರೇ ಪ್ರೆಸಿಡೆಂಟರು ಮ|| ಫ್ರೇಜರ್ ಮ|| ಬರ್ಡಸಾಹೇಬರು ಮ|| ದಳವಾಯಿ ಮೇವರಾಜೆ ಅರಸಿನವರು ಮೆಂಬರುಗಳು ಮ|| ಹೆಚ್ ರಾಮಾನುಜಯ್ಯಂಗಾರ್ಯರು ಸೆಕ್ರೆಟರಿಯೂ ಆಗಿದ್ದಾರೆ ಇವರು ಕಳೆದ ಗುರುವಾರದಿಂದ ವಿಚಾರಣೆ ನಡಸುತಲೂ ಬಂದಿರುವರು ಮ|| ಸೀತಾರಾಮರಾವ್, ಮರಕಾದ್ಮುಕಿ ಇಲಾಖೆ ಭಕ್ಷಿ ಲಿಂಗರಾಜೇ ಅರಸಿನವರು, ಅರಮನೆಯಲ್ಲಿರುವ ಕೆಲವು ಆಪ್ಸರುಗಳು, ಮ|| ಸೂಪರ್‌ಕಾರ್, ಹೊಲಗೇರಿಯ ಕೆಲವು ಜನರು, ಇವರೇ ಮುಂತಾದವರನ್ನು ಕರೆಸಿಕೊಂಡು ಅವರ ವಾಙ್ಮೂಲವನ್ನು ಬರೆದುಕೊಳ್ಳುತ್ತಿದ್ದಾರೆ ವಿವಾಹ ಮಂಟಪದ ಒಂದು ನಕ್ಷೆಯನ್ನು ಇಟ್ಟುಕೊಂಡು ಅದನ್ನು ತೋರಿಸಿ ಬೆಂಕಿ ಯಾವ ಕಡೆ ಹ್ಯಾಗೆ ಎಷ್ಟುಹೊತ್ತಿನಲ್ಲಿ ಹಚ್ಚಿತು, ಆಗ ಯಾವ ಯಾವ ಅಧಿಕಾರಿಗಳು ಎಲ್ಲೆಲ್ಲಿದ್ದರು, ಏನು ಮಾಡುತ್ತಿದ್ದರು, ಮೊದಲು ಬೆಂಕಿ ಕಂಡಾಗ ಅದನ್ನು ಆರಿಸುವದಕ್ಕೆ ಯಾರು ಯಾರು ಏನೇನು ಮಾಡಿದರು, ಜನಗಳನ್ನು ಬಳಕ್ಕೆ ಬಿಡದೆ ತಡೆದವರು ಯಾರು, ಯಾತಕ್ಕೆ—ಎಂಬಿವೇ ಮುಂತಾದ ರೀತಿಯಾಗಿ ಪ್ರಶ್ನೆ ಹಾಕಿ ಅವರವರು ಹೇಳುವದನ್ನೆಲ್ಲ ಬರೆದುಕೊಳ್ಳುತಲಿದ್ದಾರೆ. ಬೆಂಕಿ ಹುಟ್ಟುವದಕ್ಕೆ ಕಾರಣ ಇಂತಾದ್ದೆಂದು ಇದುವರೆಗೆ ಯಾರೂ ಗೊತ್ತಾಗಿ ಹೇಳಲಿಲ್ಲವಂತೆ ಇಂತಾದ್ದರಲ್ಲಿ ಈ ಕಮಿಟಿಯವರು ಹ್ಯಾಗೆ ತೀರ್ಮಾನ ಮಾಡುವರೋ ನೋಡಬೇಕು ಜನರು ಮೊದಲೇ ಹೀಗೆ ಮಾಡಬೇಕಾಗಿತ್ತು, ಹಾಗೆ ಮಾಡಬೇಕಾಗಿತ್ತು, ಆ ಏರ್ಪಾಡು ಮಾಡಲಿಲ್ಲ, ಆ ಏರ್ಪಾಡು ಮಾಡಲಿಲ್ಲ, ಎಂದು ಆಕ್ಷೇಪಣೆ ಮಾಡುತಿರುವರು —ವೃ ಪ

ಪ್ರಜಾ ಪ್ರತಿನಿಧಿ ಸಭಾ ಸ್ಟ್ಯಾಂಡಿಂಗ್ ಕಮಿಟಿ ಪ್ರೊಸೀಡಿಂಗ್ಸ್.

(ಕಳೆದವಾರದ ಶೇಷ)

III ಸಿವಿಲ್ ಸರ್ವಿಸ್ ಪರೀಕ್ಷೆಗೋಸ್ಕರ ಈಗ ಹೊಸದಾಗಿ ಮಾಡಲ್ಪಟ್ಟು ಗೆಜೆಟ್‌ನಲ್ಲಿ ಪ್ರಾಯಶ್ಚ ಮಾಡಲ್ಪಟ್ಟಿರತಕ್ಕ ಸಿವಿಲ್ ಸರ್ವಿಸ್ ರೂಲುಗಳು ಚರ್ಚಿಸಲ್ಪಟ್ಟವು ನಮ್ಮ ಲೇಟ್ ಮಹಾರಾಜರವರು ಈ ಪರೀಕ್ಷೆಯು ಮೈಸೂರು ಪ್ರಜೆಗಳಿಗೆ ಮಾತ್ರವೇ ಸಂಬಂಧಿಸುವಂತೆ ಮಾಡಬೇಕೆಂದಿದ್ದರು. ಈ ತಾತ್ಪರ್ಯಕ್ಕೆ ಅನುಸಾರವಾಗಿ ಮೈಸೂರು ಗವರ್ನಮೆಂಟಿನವರು ಮಾಡಬಹುದೆಂದು ಯೋಚಿಸಲ್ಪಟ್ಟಿತ್ತು, ಇದುವರೆಗೂ ಈ ಪರೀಕ್ಷೆಯು ಪ್ರಸಿದ್ಧವಿಲ್ಲದೇ ಇದ್ದದ್ದರಿಂದ ನಮ್ಮ ಲೇಟ್ ಶ್ರೀಮನ್ಮಹಾರಾಜರವರ ಕೊನೇ ತಾತ್ಪರ್ಯಗಳಿಗೆ ಅನುಸಾರವಾಗಿ ಏರ್ಪಾಡುಗಳಾಗಿರಬಹುದೆಂದು ಯೋಚಿಸಲ್ಪಟ್ಟಿತ್ತು ಈ ರೂಲುಗಳಿಂದ ಆ ತಾತ್ಪರ್ಯವು ಈಗ ಸಿದ್ಧಿಗೆ ಬಾರಿಗೆ ಬರುವಂತೆ ತೋರುವದಿಲ್ಲ. ಅನೇಕ ಪ್ರತಿನಿಧಿ ಸಭೆಗಳಲ್ಲಿ ಈ ಪರೀಕ್ಷೆಗೆ ಪರದೇಶೀಯರನ್ನು ಸೇರಿಸಕೂಡದೆಂಬದಾಗಿಯೂ ಒಂದುವೇಳೆ ಸೇರಿಸಿದಾಗ್ಯೂ ಇಂಗ್ಲಿಷ್‌ನಂತೆಯೇ ಕನ್ನಡಭಾಷಾ ಪರಿಚಯವೂ ಆವಶ್ಯಕವಾಗಿರುವಂತೆ ಮಾಡಲ್ಪಡಬೇಕೆಂಬದಾಗಿಯೂ ಪರೀಕ್ಷೆಗೆ ಹೋಗತಕ್ಕವರ ವಯಸ್ಸು ೩೦ ವರ್ಷದವರೆಗೂ ಅವಧಿ ಉಳ್ಳದ್ದಾಗಿರಬೇಕೆಂಬದಾಗಿಯೂ ಅನೇಕಜನ ಪ್ರತಿನಿಧಿಗಳು ಸರ್ಕಾರಕ್ಕೆ ವಿಜ್ಞಾಪಿಸಿದರು ಆದರೆ ಈಗ ಬದಲಾಯಿಸಲ್ಪಟ್ಟಿರತಕ್ಕ ರೂಲುಗಳಲ್ಲಿ ಈ ಪರೀಕ್ಷೆಗೆ ಬಿ ಎ ಪರೀಕ್ಷೆಯನ್ನು ಕೊಟ್ಟಿರತಕ್ಕ ಯಾವ ದೇಶದ ರಂದರೂ ೨೪ ವರ್ಷ ವಯಸ್ಸುಳ್ಳವರಾಗಿ ಇದ್ದಲ್ಲಿ ಸೇರಬಹುದೆಂಬದಾಗಿಯೂ ಬಿ ಎಲ್ ಪರೀಕ್ಷೆಯನ್ನು ಕೊಟ್ಟಿದ್ದರೆ ಅಥವಾ ಚೀಫ್‌ಕೋರ್ಟು ಅಡ್ವೊಕೇಟ್‌ಗಳಾಗಿದ್ದರೆ ಅಥವಾ ೨೫ ವರ್ಷ ವಯಸ್ಸುಳ್ಳವರಾಗಿ ಬಿ ಎ ಪರೀಕ್ಷೆಯನ್ನು ಕೊಟ್ಟು ಸರ್ಕಾರದ ನೌಕರಿಗೆ ಸೇರಿ ೩೦ ವರ್ಷ ವಯಸ್ಸು ಮೀರದವರಾಗಿದ್ದರೆ ಅವರೂ ಕೂಡ ಈ ಪರೀಕ್ಷೆಗೆ ಸೇರಬಹುದೆಂಬದಾಗಿಯೂ ಈ ಪರೀಕ್ಷೆಯಲ್ಲಿ ತೇರ್ಗಡೆಯಾದ ಮೊದಲನೇ ಎರಡನೇಯವರು ದೇಶೀಯರಾಗಲಿ ಅಥವಾ ಪರದೇಶೀಯರಾಗಲಿ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಆಗತಕ್ಕದ್ದೆಂಬದಾಗಿಯೂ ಜಾತಿಯವರಲ್ಲಿ ಮೈಸೂರಿನವರಾಗಿ ತೇರ್ಗಡೆಯಾದವರಲ್ಲಿ ಒಂದನೇ ಎರಡನೇಯವರೂ ಕೂಡ ಈ ಕೆಲಸಕ್ಕೆ ನೇಮಿಸಲ್ಪಡುವರೆಂಬದಾಗಿಯೂ ಇದಲ್ಲದೆ ಪೂರ್ವದಂತೆ ಶ್ರೀಮನ್ಮಹಾರಾಜಶ್ರೀಯವರು ಇನ್ನಿಬ್ಬರನ್ನು ನೇಮಿಸಬಹುದೆಂಬದಾಗಿಯೂ ವಿಧಾಯಕವಾಗಿ ಇದೆ ಪೂರ್ವದ ಏರ್ಪಾಡಿಗಿಂತಲೂ ಈಗಿನ ಏರ್ಪಾಡು ಈ ದೇಶೀಯರಿಗೆ ಸ್ವಲ್ಪ ಹೆಚ್ಚಾಗಿ ಶ್ರೇಯಸ್ಕರವಾಗಿದೆ ಈ ರೀತಿಯಲ್ಲಿ ಈ ರೂಲುಗಳನ್ನು ಏರ್ಪಡಿಸಿದ್ದಕ್ಕೋಸ್ಕರ ನಾವು ಶ್ರೀಮನ್ಮಹಾರಾಣಿಯವರಿಗೂ ಮತ್ತು ಗವರ್ನಮೆಂಟಿನವರಿಗೂ ಬಹಳ ಕೃತಜ್ಞರಾಗಿದ್ದೇವೆ ಮುಂದೆ ಈ ಪರೀಕ್ಷೆಯು ಮೈಸೂರಿನವರಿಗೆ ಮಾತ್ರ ಆಸ್ಪದವಾಗುವಂತೆ ಮಾಡಬೇಕೆಂಬದಾಗಿಯೂ ಹಾಗೆ ಮೈಸೂರಿನವರು ಈ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿ ಅಧಿಕಾರಕ್ಕೆ ಬರಲುವದಿಲ್ಲವೆಂಬದಾಗಿ ಧೀರ್ಘವಾಗಿ ಒಂದೇ ದೃಷ್ಟಿ ಉಳ್ಳ ಮಾತು ಆದ ಪಕ್ಷದಲ್ಲಿ ಆಗ್ಗೆ ಈ ಪರೀಕ್ಷೆಗೆ ಪರದೇಶೀಯರನ್ನು ಸೇರಿಸಬಹುದೆಂಬದಾಗಿಯೂ ಶ್ರೀಮನ್ಮಹಾರಾಜಶ್ರೀಯವರನ್ನೂ ಅವರ ಗವರ್ನಮೆಂಟಿನವರನ್ನೂ ನಾವು ಬಹು ವಿನಯದಿಂದ ಪ್ರಾರ್ಥಿಸಬೇಕೆಂಬದಾಗಿ ಮ|| ರಾಮಣ್ಣನವರು ಸೂಚಿಸಿದ್ದನ್ನು ಮ|| ರಾಮದಾಸಪ್ಪನವರು ಅನುಮೋದಿಸಿದರು ಸರ್ವರೂ ಒಪ್ಪಿದರು.

IV ತಾಲ್ಲೋಕು ಜಾಬುಪಿ ನೌಕರರ ಸಂಬಳ ವಿಷಯಗಳು ಚರ್ಚಿಸಲ್ಪಟ್ಟವು ಈ ಬಡನೌಕರರ ಸಂಬಳವು ೩೦–೪೦ ವರ್ಷಗಳಿಗೆ ಮುಂಚೆ ಹ್ಯಾಗೆ ಇದ್ದವೋ ಹಾಗೆಯೇ ಇದೆ ಎಂಬದಾಗಿಯೂ ಆಗ ದವಸ ಧಾನ್ಯಗಳು ಅಗ್ಗವಾಗಿದ್ದವೆಂಬದಾಗಿಯೂ ಬಟಾಯಿ ಏರ್ಪಾಡು ಇದ್ದದ್ದರಿಂದ ಆ ನೌಕರರಿಗೆ ಧಾನ್ಯ ಮತ್ತು ದ್ರವ್ಯರೂಪವಾಗಿ ಸಂಬಳ ಸಲ್ಲುವದಕ್ಕೆ ಅವಕಾಶವಿತ್ತೆಂಬದಾಗಿಯೂ ಇದರಿಂದ ವಿಶೇಷ ಶ್ರಮವಿಲ್ಲದೇ ಜೀವನವಾಗುತ್ತಿತ್ತೆಂಬದಾಗಿಯೂ ಈಚೆಗೆ ರೈಲು ಮಾರ್ಗಗಳು ರಸ್ತೆಗಳು ಜಾಸ್ತಿಯಾಗಿ ರಫ್ತು ಮೊದಲಾದವುಗಳು ಹೆಚ್ಚಿದ್ದರಿಂದ ದವಸದ ವಿಶೇಷ ತಗ್ಗಾಯಿತೆಂಬದಾಗಿಯೂ ಹೀಗಾದಾಗ್ಯೂ ನೌಕರರ ಸಂಬಳ ಮಾತ್ರ ಒಂದೇರೀತಿ ಇದೆ ಎಂಬದಾಗಿಯೂ ಈ ನೌಕರರ ಸಂಬಳಗಳು ಕಾಲ ದೇಶ ವರ್ತಮಾನ ಗಳಿಗನುಸಾರವಾಗಿ ಜಾಸ್ತಿ ಮಾಡಬೇಕಿದೆ ಎಂಬದಾಗಿಯೂ ಈ ಬಡನೌಕರರ ಕ್ಷೇಮವು ಚೆಂತೆ ಮಾತ್ರ ಸರ್ಕಾರದ ಪರಾಂಬರಿಕೆಗೆ ಬಂದಿಲ್ಲವೆಂಬದಾಗಿಯೂ ಈ ನೌಕರರ ಇಳಿಕೆ ವಿಷಯದಲ್ಲಿ ಪ್ರತಿನಿಧಿಗಳು ಪ್ರಜಾಪ್ರತಿನಿಧಿ ಸಭೆಯಲ್ಲಿ ಹೇಳಿಕೊಂಡದ್ದಕ್ಕೆ ಸರ್ಕಾರದವರು ಈ ಪ್ರಾರ್ಥನೆಯನ್ನು ತಿರಸ್ಕರಿಸಿ ಉಪೇಕ್ಷಿಸಿದಂತಾಯಿತೆಂಬದಾಗಿಯೂ ಈ ಬಡನೌಕರರು ಹಗಲೂರಾತ್ರಿ ಕೆಲಸಮಾಡಿದರೂ ಹೊಟ್ಟೆ ಬಟ್ಟೆಗಿಲ್ಲದೆ ತಾಪಪಡುತ್ತಾರೆಂಬದಾಗಿಯೂ ದಿನಕ್ಕೆ ಹತ್ತರಿಂದ ಹನ್ನೆರಡು ಘಂಟೆಗಳು ಕೆಲಸವಿಲ್ಲದೆ ಸಖೇಡಿಗಳಾಗಿರತಕ್ಕ ಭಾರೀ ಅಧಿಕಾರಿಗಳ ಕ್ಷೇಮದ ಚೆಂತೆ ಮಾತ್ರ ಸರ್ಕಾರದವರ ಪರಾಂಬರಿಕೆಗೆ ಆಗಾಗ್ಗೆ ಬರುತ್ತದೆಂಬದಾಗಿಯೂ ಸರ್ಕಾರದವರು ಈ ಬಡನೌಕರರ ಯೋಗಕ್ಷೇಮವನ್ನು ಪರಾಮರ್ಶಿಸುವದು ಆವಶ್ಯಕವೆಂಬದಾಗಿಯೂ ಆವರಿಗೆ ಇವರು ಮಾಡತಕ್ಕ ಕೆಲಸಕ್ಕೂ ಯೋಗ್ಯತೆಗೂ ಅನುಸಾರವಾಗಿ ಸಂಬಳವನ್ನು ಜಾಸ್ತಿ ಮಾಡುವದಲ್ಲದೆ ಡಿಸ್ಟ್ರಿಕ್ಟ್ ಮೊದಲಾದ ಸ್ಥಳಗಳಲ್ಲಿ ಕೆಲಸಗಳು ಖಾಲಿ ಬಿದ್ದಾಗ ಇವರಲ್ಲಿ ಯೋಗ್ಯರಾದವರಿಗೆ ಅಲ್ಲಿಗೆ ಪ್ರಮೋಷನ್ ಆಗುವದಕ್ಕೆ ಅವಕಾಶ ಕೊಡಲ್ಪಡಬೇಕೆಂಬದಾಗಿಯೂ ಇವರಿಗೂ ಮತ್ತು ಶೇಕದಾರರಿಗೂ ಟ್ರಾವೆಲಿಂಗ್ ಮೈಲೇಜ್ ಮೊದಲಾದವುಗಳು ಕೊಡಲ್ಪಡಬೇಕೆಂಬದಾಗಿಯೂ ಈ ಸಂಸ್ಥಾನದ ಎಗ್ಜಿಕ್ಯುಟಿವ್ ಕೌನ್ಸಿಲ್ ಆದಾಗ ಈ ಬಡನೌಕರರಿಗೂ ಸಣ್ಣ ಜಿಗಳಿಗೂ ಬೇಕಾದ ವಿಷಯಗಳೆಲ್ಲಾ ಕೌನ್ಸಿಲರ್ ಮೊದಲಾದವರ ನ್ಯಾಯ ವಿಮರ್ಶೆಗೆ ಪಾತ್ರರಾಗಬಹುದೆಂದು ಭಾವಿಸಲ್ಪಟ್ಟಿತ್ತೆಂಬದಾಗಿಯೂ ಈ ಭಾವನೆಗೆ ಇನ್ನೂ ಅವಕಾಶ ದೊರೆತಂತೆ ತೋರುವದಿಲ್ಲವೆಂಬದಾಗಿಯೂ ಈ ಕೌನ್ಸಿಲರೇ ಮೊದಲಾದವರು ಈ ಬಡನೌಕರರ ಮೇಲೂ ಪ್ರಜೆಗಳ ಮೇಲೂ ದಯವನ್ನು ಇಟ್ಟು ನಡೆಯಬೇಕಾದ ಏರ್ಪಾಡುಗಳನ್ನು ಮಾಡಿ ನಮ್ಮ ಕೃತಜ್ಞತೆಗೂ, ಪ್ರೀತಿಗೂ ಪಾತ್ರರಾಗುವರೆಂದು ಕೋರುತ್ತೇವೆಂಬದಾಗಿಯೂ ಮ|| ನಾಡಿಗ ಶಿವಪ್ಪನವರು ಸೂಚಿಸಿದ್ದನ್ನು ಅನೇಕರು ಅನುಮೋದಿಸಿದರು ಇದಕ್ಕೆ ಸರ್ವರೂ ಒಪ್ಪಿದರು.

(ಸಶೇಷ)

SUMMARY OF NEWS.
ವೃತ್ತಾಂತ ಸಂಗ್ರಹವು.

ಹಿಂದುಸ್ಥಾನದಲ್ಲಿ ಚಲಾವಣೆಯಲ್ಲಿರುವ ರೂಪಾಯಿಗಳನ್ನು ಭೂಪಾಲ ಸಂಸ್ಥಾನದಲ್ಲೂ ಉಪಯೋಗ ಮಾಡುವಂತೆ ಇಂಡಿಯಾ ಗವರ್ನಮೆಂಟಿನವರು ಒಪ್ಪಿಕೊಂಡರು.

ಮದರಾಸಿನಿಂದ ಬೆಜವಾಡಕ್ಕೆ ಹಾಕುತ್ತಿರುವ ರೈಲ್ವೆ ಕಾಮಗಾರಿಯು ಪೂರೈಸುತ್ತಾ ಬಂದಿದೆ ಮಾರ್ಚಿಯಿಂದ ನೆಲ್ಲೂರುವರೆಗೆ ಜನ ತಿಂಗಳಲ್ಲಿ, ಒಂಗೋಲಿನವರೆಗೆ ಅಕ್ಟೋಬರಿನಲ್ಲೂ ಗಾಡಿಗಳನ್ನು ಬಿಡಬೇಕೆಂದು ಗೊತ್ತಾಗಿದೆ.

ಬಂಗಾಳಾ ಪ್ರಾಂತಕ್ಕೆ ಸೇರಿದ ಹಿಲ್‌ಟಿಪ್ಪಾರ ಎಂಬ ಸಂಸ್ಥಾನದ ಅರಸರಾದ ರಾಧಾ ಕಿಶೋರದೇವ ಬರ್ಮಾ ಮಾಣಿಕ್ಯರವರಿಗೆ ಮೊನ್ನೆ ೫ನೇ ತಾರೀಖಿನದಿನ ಇಂಗ್ಲಿಷ್‌ಸರ್ಕಾರದವರು ರಾಜ್ಯ ಪದವಿಯನ್ನು ಒಪ್ಪಿಸಿಕೊಟ್ಟರು

ಅಮೆರಿಕಾದೇಶದಲ್ಲಿ ಒಬ್ಬ ಶಾಸ್ತ್ರಜ್ಞನು ಒಂದುವಿಧವಾದ ಪದಾರ್ಥವನ್ನು ಕಂಡು ಹಿಡಿದಿರುತ್ತಾನೆ ಅದಕ್ಕೆ ಒಂದುವೇಳೆ ಬೆಂಕಿ ಹತ್ತಿದರೆ, ನೀರಿನಿಂದಲೇ ಆಗಲಿ, ಅಥವಾ ಮತ್ತಾವ ಉಪಾಯದಿಂದಲಾಗಲಿ, ಆ ಪದಾರ್ಥವೆಲ್ಲ ಸುಡುವತನಕ ಆರುವದೇ ಇಲ್ಲ

ಸಿಯೋನಿಕಪ್ಪರ ಊರಲ್ಲಿ ಪ್ರಚಂಡವಾದ ಬಿರುಗಾಳಿಯೊಡನೆ ಕಲ್ಮಳೆ ಸುರಿಯಿತು ಮರಗಳು ಬೇರು ಸಹ ಕಿತ್ತುಹೋದವು ಗೋಧಿ ಹುರುಳಿ ಬಿತ್ತಿದ ಹೊಲಗಳು ಕಸ ಉಡುಗಿದ ಹಾಗೆ ಹಾಳಾದವು ಐದು ಮೈಲು ಫಾಸಲೆಯಲ್ಲಿ ಹೊಲಗಳಲ್ಲ ಆನೆಕಲ್ಲು ಮಳೆಯಿಂದ ಹಾಳಾದವು ಬಡರೈತರು ಆನೆಕಲ್ಲುಗಳನ್ನು ಪೆಟ್ಟಿಗೆಯಲ್ಲಿ ತುಂಬಿಸಿ ಕಮಿಷನರವರಿಗೆ ತೋರಿಸಿದರು.

ಅಲಾಸ್ಕಾ ಎಂಬ ಪರ್ಯಾಯ ದ್ವೀಪವು ಮೊದಲು ರಷ್ಯಾಕ್ಕೆ ಸೇರಿದ್ದಾಗ ವಿಲಾಯತಿ ಸರ್ಕಾರದವರು ಕೊಂಡುಕೊಳ್ಳದೆ ತಿರಸ್ಕರಿಸಿದರು ಈಗ ಅದರಲ್ಲಿ ಭೂಶೋಧನೆ ಮಾಡಿದಂತಾ ಒಬ್ಬ ದೊಡ್ಡ ಮನುಷ್ಯನು ಹೇಳಿದ್ದನ್ನು ಕೇಳಿ ಎಲ್ಲರೂ ಪಶ್ಚಾತ್ತಾಪ ಪಡಬೇಕಾಗಿದೆ ಆ ದ್ವೀಪದಲ್ಲಿ ೩೦೦ ಮೈಲಿ ಫಾಸಲೆಯಷ್ಟು ಭೂಮಿಯಲ್ಲಿ ಚಿನ್ನದ ಗಣಿಗಳು ದೊರೆತಿರುತಿವೆ. ವಿಲಾಯತಿ ಗವರ್ನಮೆಂಟಿನವರು ಕೊಂಡುಕೊಂಡಿದ್ದರೆ ಅವರ ಐಶ್ವರ್ಯವು ಅಪಾರವಾಗುತ್ತಿತ್ತು.

ಲಂಡನ್ ಪಟ್ಟಣದಲ್ಲಿ ಹಿಂದುಸ್ಥಾನದ ಆದಾಯ ವೆಚ್ಚದ ವಿಷಯವಾಗಿ ಚರ್ಚೆ ಮಾಡುವದಕ್ಕೋಸ್ಕರ ಸೇರಿರುವ ರಾಯಲ್ ಕಮಿಷನ್ ಮುಂದೆ ಸಾಕ್ಷಿ ಕೊಡುವದಕ್ಕಾಗಿ ಬೊಂಬಾಯಿಯಿಂದ ಮ|| ವಾಚಾಯವರೂ ಪುನಾದಿಂದ ಪ್ರೊಫೆಸರ್ ಗೋಖಲೆಯವರೂ ಸಹ ಇಂಗ್ಲಂಡಿಗೆ ಹೊರಟುಹೋದರು ಕಲ್ಕತ್ತೆಯಿಂದ ಆನರಬಲ್ ಬಾಬು ಸುರೇಂದ್ರನಾಥ ಬಾನರ್ಜಿಯವರೂ, ಮದರಾಸಿನಿಂದ 'ಹಿಂದು' ವರ್ತಮಾನ ಪತ್ರಿಕೆಗೆ ಎಡಿಟರಾದ ಮ|| ಸುಬ್ರಹ್ಮಣ್ಯಐಯ್ಯರೂ ಕೂಡಲೆ ಹೊರಡುವರು

ಆಫಘಾನಿಸ್ಥಾನದ ಅಮೀರರ ಕಡೆ ಅಧಿಕಾರಿಗಳು ಪೆಷಾವರ ಪಟ್ಟಣದಲ್ಲಿ ಇಂಗ್ಲಿಷಿನವರ ಆಡಳಿತಕ್ಕೊಳಪಟ್ಟ ಪ್ರಾಂತದಲ್ಲಿ ತೆರಿಗೆಯನ್ನು ವಸೂಲುಮಾಡುತ್ತಿರುವದರಿಂದ ಈಚೆಗೆ ಬಹಳವಾಗಿ ತಮ್ಮ ಎಲ್ಲೆಯನ್ನು ಮೀರುತ್ತಿರುವರಾಗಿ ಕೇಳುತ್ತೇವೆ ಹಿಂದುಸ್ಥಾನ ಸರ್ಕಾರದವರು ಅಮೀರರಿಗೆ ವರ್ಷ ಒಂದಕ್ಕೆ ೧೮ ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದಾಗ್ಯೂ, ಈ ದುಶ್ಚರ್ಯದ ವಿಷಯವನ್ನು ಅಮೀರರ ಗಮನಕ್ಕೆ ತರುವದಕ್ಕೆ ಹೆದರುತ್ತಾರೆ ಇಂಡಿಯಾ ಸರ್ಕಾರದವರಿಗಿಂತ ಅಮೀರರು ಪ್ರಬಲರೆಂದು ಅತ್ಯಂತದವರ ತಿಳುವಳಿಕೆಯಾಗಿದೆಯತ್ತೆ

ಇಂಗ್ಲಿಷಿನವರು ಹಿಂದುಸ್ಥಾನಕ್ಕೆ ಬಂದು ತಮ್ಮ ಕ್ಲಬ್ಬುಗಳನ್ನು ಮಾಡಿಕೊಳ್ಳುವರಿಗೆ ನಮ್ಮ ದೇಶದಿಂದ ಇಂಗ್ಲೆಂಡಿಗೆ ಹೋಗಿರುವವರೆಲ್ಲರೂ ಸೇರಿ 'ಲಂಡನ್ ಹಿಂದೂ ಅಸೋಸಿಯೇಷನ್' ಎಂಬ ಹೆಸರಿನಿಂದ ಒಂದು ಕ್ಲಬ್ಬನ್ನು ಮಾಡಿಕೊಂಡಿದ್ದಾರೆ ಇದರಲ್ಲಿ ಆಗಾಗ್ಗೆ ಹಿಂದು ದೇಶದ ಸಂಗೀತವನ್ನು ಗುತ್ತಿರುವದುಂಟು ಹೀಗೆಯೇ ಕಳೆದ ಡಿಸಂಬರ್ ತಿಂಗಳಲ್ಲಿಯೂ ಒಂದು ಹಾಡುಗಾರಿಕೆಯಾಗಿತ್ತು ಅದನ್ನು ಕೇಳಿ ಅನೇಕ ಜನ ಆ ದೇಶದವರು ಬಹಳ ಸಂತೋಷಪಟ್ಟರು ಇನ್ನು ಮುಂದೆ ಹಿಂದೂ ಸಂಗೀತಕ್ಕೆ ಗಮನ ಕೊಟ್ಟರೆ ಅನೇಕ ವಿಷಯಗಳು ತಿಳಿಯುವವೆಂದು ಅಲ್ಲಿನ ಒಂದುನೊಂದು ಪತ್ರಿಕೆಯು ಹೇಳುತ್ತದೆ

ನೋಟಿಸು.

೧೮೯೭ನೇ ಇಸವಿ ಫೆಬ್ರವರಿ ತಾರೀಖು ೨೮ರಲ್ಲು ಮೈಸೂರಲ್ಲಿ ಶ್ರೀಮನ್ಮಹಾರಾಣೀ ರೀಜಂಟರವರ ಮತ್ತು ಬ್ರಿಟಿಷ್ ರೆಸಿಡೆಂಟರವರ ಪ್ರೋತ್ಸಾಹದಲ್ಲಿ ಮೈಸೂರ್ ಡಿವಾನ್ ಸರ್ ಕೆ. ಶೇಷಾದ್ರಿ ಅಯ್ಯರ್ ಕೆ. ಸಿ. ಎಸ್. ಐ. ಯವರು ಅಗ್ರಾಸನವನ್ನು ವಹಿಸಿ ನಡೆಸಿದ ಜನರಲ್ ಮೀಟಿಂಗ್‌ನಲ್ಲಿ ಇ ಡಿಯಾ ದೇಶದ ಕ್ಷಾಮ ನಿವಾರಣೆ ಧರ್ಮಸಹಾಯದ ಫಂಡು ಬಗ್ಗೆ ಮೈಸೂರಲ್ಲಿ ಒಂದು ಬ್ರಾಂಚ ಏರ್ಪಾಡು ಮಾಡಲ್ಪಟ್ಟಿದೆ

ಈ ಫಂಡಿಗೆ ಚಂದಾ ಕೊಡಬೇಕೆಂದು ಅಪೇಕ್ಷಿಸುವವರು ಮೈಸೂರಲ್ಲಿ ಬನವಿ ಟ್ರೆಜರರ್ ಮ|| ಹೆಚ್ ಜೆ. ಭಾಬಾ ಯವರಲ್ಲಾದರೂ ಅಥವಾ ಆಯಾ ಡಿಸ್ಟ್ರಿಕ್ಟ್‌ಗಳಲ್ಲಿ ಮೀಟಿಂಗ್ ಮಾಡಲು ಅಪೇಕ್ಷಿಸಲ್ಪಟ್ಟಿರುವ ಡೆಪ್ಯುಟಿ ಕಮ್ಮಿಷನರವರಲ್ಲಾದರು ಕಳುಹಿಸಬೇಕು

(Signed) S M FRASER, I C S,
C MADIAH,
6h March 1897 Honorary Secretaries

ನೋಟೀಸು.

೧೮೯೭ನೇ ಇಸವಿ ಏಪ್ರಿಲ್ ಗುರುವಾರ ತಾರೀಖ್ ಮೊದಲು ೧೮೯೮ನೇ ಇಸವಿ ಮಾರ್ಚ ೩೧ನೇ ತಾರೀಖು ವರೆಗೆ, ಹೊಸೂರು ರಿಮಾಂಟ್ ಡಿಪೋಗೆ ಮುಂತಾದವುಗಳಿಗೆ ಬೇಕಾದ ಸರಬರಾಯಿ ಮಾಡಲು ಟೆಂಡರ್ ಕರೆಯಲ್ಪಟ್ಟ ಹೊಸ ದರದ ಪಟ್ಟಿಗಳು ಇವರ ಆಫೀಸಿಗೆ ಮೊಹರು ಮಾಡಿ ೧೮೯೭ನೇ ಇಸವಿ ಮಾರ್ಚ ೧೩ನೇ ತಾರೀಖ್ ಶನಿವಾರ ಮಧ್ಯಾಹ್ನ ೧೨ ಘಂಟೆಯವರೆಗೆ ಒಪ್ಪಿಸಿಕೊಳ್ಳಲ್ಪಡುವವು.

ರಿಮಾಂಟ್ ಡಿಪೊ, ಹೊಸೂರು ೩ನೇ ಮಾರ್ಚಿ ೧೮೯೭ | T WEST Captain for Supt Remount Depot

ಈ ಕಂಪೆನಿಯು ೧೮೯೨ನೇ ಇಸವಿಯಲ್ಲಿ ಸ್ಥಾಪಿತವಾಯಿತು

ಜನ್ಮದ ಲಾಭವು.

ರಿಜಿಸ್ಟರ್ಡ್

ವಜ್ರಾಂಗ ಬಜಾರವು.

ಬಲಾರೋಗ್ಯ, ಪುಷ್ಟಿಗಳನ್ನು ಬೆಳಸತಕ್ಕ ಉತ್ಕೃಷ್ಟಿಯ

ಅತ್ಯಾಕ್ಷರ್ಯಕರವಾದ ಬಳ್ಳಿಗಳಿಂದ ತಯಾರಿಸಿದ ಈ ಉತ್ಕೃಷ್ಟಿಗಳು ಕೊಂಕಣಪ್ರಾಂತದ ಅನೇಕ ವನಸ್ಪತಿಗಳ ಸಾರಗಳ ಪುಟಗಳನ್ನು ಕೊಟ್ಟು, ತುಪ್ಪದೊಳಗೆ ಹಾಕಿ, ಒಳ್ಳೇ ಹೆಚ್ಚಿನ ತರಗತಿಯ ಸಕ್ಕರೆಯ ಪಾಕದಲ್ಲಿ ಸಿದ್ಧ ಮಾಡಿರುತ್ತೇವೆ ಈ ಉತ್ಕೃಷ್ಟಿಗಳು ಮಹೌಷಧಗಳಿದ್ದು, ಒಳ್ಳೇ ರುಚಿಯುಳ್ಳವಾಗಿ ಇವುಗಳ ಸೇವನೆಯಿಂದ ಕಫ, ವಾತ, ಪಿತ್ತ ಈ ತ್ರಿದೋಷಗಳಿಂದುಂಟಾಗತಕ್ಕ ಯಾವತ್ತು ಬಗೆಯ ವ್ಯಾಧಿಗಳೂ ಹೋಗುತ್ತವೆ ೬೦ ವರ್ಷಗಳ ಪ್ರಾಯವುಳ್ಳ ಮುದುಕರ ಕಾಮವಿಕಾರವಾದರೂ ಪಡೆಯಾದ ಗಂಡಸರಂತೆ ಪ್ರಜ್ವಲಿತವಾಗುತ್ತದೆ ಜನನೇಂದ್ರಿಯದಲ್ಲಿ ಬಲ ವುಂಟಾಗಿ ನಪುಂಸಕತ್ವವು ಇಲ್ಲದಂತಾಗಿ ಕ್ರೀಡೆಯ ಮುಂಚೆ ಅಥವಾ ಹಿಂದೆ ಹರಿದುಹೋಗುವ ಧಾತು ನಿಲ್ಲುತ್ತದೆ ಸ್ವಪ್ನಾವಸ್ಥೆಯಾಗುವದಿಲ್ಲ ವೀರ್ಯವು ಬೆಳೆದು ಮೈ ಬಣ್ಣವು ಸುಧಾರಿಸುತ್ತದೆ ಪರಮಾ ಹಾಗೂ ಇವುಗಳ ಸಂಬಂಧಿಸಿ ಬೇನೆಗಳಿಗೆ ಕಾರಣ ಇಲ್ಲದಂತಾಗಿ ಧಾತು ಪುಷ್ಟವಾಗುತ್ತದೆ ಮೂರು ಹೊತ್ತಿಂಡರೂ ಅನ್ನ ಪಚನವಾಗಿ ಒಳ್ಳೇ ಹಸಿವೆಯಾಗುತ್ತದೆ ಹೋಗುವದೊಂದೆ ತಡ ಕೂಡಲೇ ಸ್ವಚ್ಛ ಶೌಚಕ್ಕಾಗುತ್ತದೆ ಕ್ಷಯ, ಉದರ, ದಮ್ಮು ಈ ರೋಗಗಳು ನಾಶ ಹೊಂದುತ್ತವೆ. ಹೊಸ ಬೇನೆ ಇದ್ದಲ್ಲಿ ೧೧ ದಿವಸಗಳ ವರೆಗೆ ಸಾಲುವ ಒಂದೇ ಡಬ್ಬಿಯಿಂದ ಗುಣವುಂಟಾಗುತ್ತದೆ ಮತ್ತು ಹಳೆಯದ್ದಲ್ಲಿ ೪೦ ದಿನಗಳ ಮೇಲೆ ಗುಣ ಬಂದೀತು ೧೧ ದಿನಗಳವರೆಗೆ ಸಾಲತಕ್ಕ ೧ ಡಬ್ಬಿಗೆ ೧–೪–೦ ರೂ|| ಒಂದೇ ವ್ಯಕ್ತಿಗೆ ೪ ಡಬ್ಬಿಗಳು ತೆಗೆದುಕೊಳ್ಳತಕ್ಕವರಿಗೆ ಒಂದು ಡಬ್ಬಿಯು ಉಚಿತವಾಗಿ ಸಿಕ್ಕೀತು. ಈ ಉತ್ಕೃಷ್ಟಿಯಿಂದ ಹೆಂಗಸರು ಸತೇಜರಾಗುತ್ತಾರೆ. ಕರಗಿನ ಹಾಗೂ ಬಾಣಂತಿ ಬೇನೆಗಳು ವಾಸಿಯಾಗುತ್ತವೆ. ಎಲ್ಲರನ್ನೂ ಸರಿಯಾಗಿ ಬೇನೆ ಇಲ್ಲದವರನ್ನಾಗಿ ಮಾಡಿ ಬಲಾರೋಗ್ಯ ಪುಷ್ಟಿಗಳನ್ನು ಬೆಳಸುತ್ತವೆ ಸಾಹೇಬ್ ಜನರಲ್ಲಿ ಬಹಳ ಡಬ್ಬಿಗಳು ಖರ್ಚಾಗುತ್ತವೆ ಈ ಔಷಧವು ಈ ಕಂಪೆನಿಯದಹೊರತು ಬೇರೆ ಸ್ಥಳದಲ್ಲಿ ಆಗುವದಿಲ್ಲ ಯಾವತ್ತು ದೇಶಗಳಲ್ಲಿಯೂ ವೈದ್ಯಶಾಲೆಗಳಿಗಾಗಿ ಕಳುಹಿಸಲ್ಪಡುತ್ತದೆ ಬರೆದು ಬಂದು ಕೂಡಲೆ ಈ ಕಂಪೆನಿಯು ಬೇಕಾದವರಿಗೆ ಈ ಡಬ್ಬಿಗಳು ಕಳುಹಿಸಿಕೊಡ್ಬೇತು. ಅಂಚೆಯ ಹಾಗೂ ವ್ಯಾಲ್ಯು ಪೆಯಬಲ್ ವೆಚ್ಚ ಬೇರೆ ಕೊಡಬೇಕು (ಉಚಿತ ಡಬ್ಬಿ ಸಹ ೮ ಡಬ್ಬಿಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬಾದಲ್ಲಿ ಎಲ್ಲಾ ಖರ್ಚಿನ ಹಾಕಿ ರವಾನಿಸುವೆವು, ಹೀಗೆ ಕಳುಹಿಸಿದರೆ ಟಪ್ಪಾಲ್ ಖರ್ಚು ಕಡಮೆ ಬೀಳುವದು)

ಮೇಲ್ವಿಳಾಸ—ಪಿ. ಎಲ್ ಎ. ಬ್ರದರ್ಸ್ ಮತ್ತು ಕಂಪೆನಿ,

ಫಸ್ಟ್ ಇಂಗ್ಲಿಷ್ ಬ್ರ್ಯಾಂಚ್ ಆಫೀಸ್, ಡಿಸ್ಟ್ರಿಕ್ಟ್ ಬೆಳಗಾಂವ.

ಪೋಸ್ಟ್—ಬೆಳಗಾಂವ. Post BELGAUM.

BANGALORE —Printed and Published at the KARNATAKA PRESS, No 40, HOSPITAL ROAD, CITY,—1897

THE

Karnataka Prakasika.

ಕರ್ಣಾಟಕ ಪ್ರಕಾಶಿಕಾ.

Published Every Monday Morning

ಪ್ರಕಟನೆಯ ರೀತಿ { ಮೊದಲನೆಯದಕ್ಕೆ ಪಟ್ಟಿ ಒಂದಕ್ಕೆ 0 2 0 / ಎರಡನೆಯದಕ್ಕೆ ಪಟ್ಟಿ ಒಂದಕ್ಕೆ 0 1 0

[illegible]

ಸಂ 1 ಕ್ಕೆ ... 3 0 0 | ಸಂ 1 ಕ್ಕೆ ... 4 0 0
6 ತಿಂಗಳಿಗೆ ... 2 0 0 | 6 ತಿಂಗಳಿಗೆ ... 2 8 0
3 ತಿಂಗಳಿಗೆ ... 1 4 0 | 3 ತಿಂಗಳಿಗೆ ... 1 8 0

[illegible]

Vol. XXIV. BANGALORE:—MONDAY, MARCH 22, 1897. No. 12.

ADVERTISEMENTS

FAMINE RELIEF FUND, BANGALORE BRANCH.

NOTICE

Subscriptions are earnestly invited in aid of the above Fund. All contributions however small, will be thankfully received. Subscriptions may be paid to the Bangalore Branch of the Bank of Madras or to any member of the Local Committee of the Fund. In the latter case, receipt should be obtained from the member of the committee to whom payment is made.

All subscriptions will be acknowledged by the notice in the local papers, by the honorary Treasurer Mr. T. T. Leonard. Those of Rs 5 or more will be acknowledged individually, and those of less than Rs 5 in a lump sum weekly.

(Sd) A. M. SLIGHT,
(Sd) V. N. NARASIMHAIYENGAR,
Joint Secretaries, Indian Famine Charitable Relief Fund, Bangalore Branch.

Select Telegrams.

London 17th March.—France is sending six hundred marines to Crete. It is stated that six hundred of the Seaforth Highlanders have been ordered to Crete from Malta. The blockade of Crete has virtually begun, and if Greece remains obstinate, the foreign squadrons will blockade the Piraeus and seize the telegraph station at Syra and probably blockade Volo. Lord Salisbury has suggested that each Power should contribute ten thousand pounds sterling in order to start an autonomous regime in Crete. This and other points are now under discussion.

The Italian Consulate confirms the news that the Cretan insurgents have massacred 960 Mussulmans at Sitia.

Athens 16th March.—Five thousand troops left here for Larissa, on the Greek Frontier today, amid the frantic enthusiasm of the populace. (Above delayed in transmission.)

Athens 17th March.—All the Greek troops except the Crown Prince's Regiment, have gone to the frontier.

A conviction prevails here that war is now inevitable.

The Greek troops in Crete have been ordered to occupy Sphakia, which is the most inaccessible district in the island, and there await events.

Mussulmans at Canea, Candia, and Retimo are pillaging Christian property. The authorities are quite apathetic.

London, 19th March.—The blockade of Crete begins officially on Sunday next, but an Austrian cruiser yesterday fired upon and sank a Greek schooner which was landing provisions. A Russian regiment has passed the Bosphorus *en route* to Crete.

The Greek Government have decided to recall two of the gunboats still remaining at Crete.

The disposition of the foreign troops in Crete will be as follows:—British troops will occupy Candia, French, Sitia and Spinalonga, Russians, Retimo, and Germans, Suda Bay and Canea.

THE
Karnataka Prakasika.

MONDAY MARCH 22, 1897

INDIAN EXPENDITURE

The affairs of India are now being better understood in England than they have been at any former period. The people are beginning to comprehend that this land has been unfairly treated in many ways. England is the larger partner, and it expects more than its share of the profit of the concern. It puts little in, it takes a great deal out. This cannot be considered just, this cannot be considered right. The Commission now sitting at home, it is to be hoped, will adjust matters to the satisfaction of all. It is hoped that the people and Government of England will see the necessity of making a change in the relations now existing between the two countries, and thus relieve India from a heavy burden. Several of those who have given evidence before the Expenditure Commission have spoken strongly of the injustice done to this land, of the amount India has to pay that she ought not to pay. It is chiefly as regards the army that this country is dealt unfairly by. It is well known that a large military force is kept up in India and several of the witnesses before the Commission declared it to be much larger than was required to preserve internal order in the land. There are about 80,000 European troops here, and all these are not required to keep the country quiet. This was pointed out by Lord Northbrook, and by Sir H. Brackenbury, and in very plain terms. Their argument is this. India requires so many soldiers to keep order. For these she ought to pay, and for no more. Over and above this if troops are found necessary for Imperial purposes the Imperial Government ought to pay for them. This is only fair, this would be done between man and man. Sir H. Brackenbury said that if a war in Europe broke out troops would be taken from this land to fight the battles of England, so that India has to maintain the soldiers when they are not wanted, and when they are they are taken away. It is against England, not against India that war would be directed, and consequently England ought to bear the greater part of the cost. Should Russia declare war against England and attack the north west frontier of India it would not fight against India, but against the land it was displeased with. It is quite clear then that that country ought to bear the brunt of the strife, ought to pay the cost of the struggle. England has made this land the training ground for her troops, she knows she has a reserve of troops here, and that they are maintained free of cost. It is believed that the military forces in India cost the people the enormous sum of £17,000,000. This has to be provided out of the taxes, this has to be forthcoming when it is required, and the burden it inflicts upon the people is something frightful. There must be an adjustment of the amount paid by India or there will be a terrible crisis. Now that several of the witnesses before the expenditure Commission have testified to the treatment India has received in the past, we may be certain that a change for the better will be brought about. It is the duty of every one in the country to try to bring this change about.

THE FIRE IN MYSORE.

The fire that took place in Mysore on the 28th of last month still attracts much attention in all parts of the province. The people look upon it as a terrible calamity, and they pity the royal house which has suffered it. Besides, they do not believe that everything was done that might have been. They are of opinion that there was negligence on the part of the authorities, and they are angry on this account. We stated in our last issue that a Commission of enquiry sat at Mysore before which witnesses were examined. This closed about ten days ago, but up to this time no report of the proceedings has been published. The enquiry was made with closed doors, a palpable mistake. Everything should have been open. The public and the press should have been admitted and the report should now be before the world. If the authorities performed their duty they should only be too glad that this should be made known to the world. If they did not their conduct ought to be reported so they may be censured. In any case the matter should be made public, there should be no concealment, no trying to hush up matters. It is quite useless to do this, for the truth is sure to come out sooner or later, and if those in charge failed in their duty the censure directed against them will be all the heavier. The policy they are adopting is something like that of the ostrich which when pursued is said to hide its head in the sand, when it thinks no harm can come to it. We trust the report will be published, so that the subjects of the Maharajah may know the cause of the fire, and whether everything was done that was possible to put it out.

News and Notes.

The Hindus of Lahore have subscribed five thousand rupees as a reward for the arrest of the Ghazi who murdered Pandit Lekh Ram.

The Government of India has declined the proposal of the *Madras Mail* to give the ½ pie postage privilege to papers weighing 10 tolas, but is considering the matter of raising the permissible weight from 3 to 4 or 5 tolas.

The construction of the Bezwada Madras Railway is making rapid progress. The Government of India is desirous that the section to Nellore should be opened for passenger traffic by the 1st June next and that to Ongole by the 1st October.

The Japanese Governor of Formosa issued a proclamation on the 24th February to forbid the importation of opium into the island, as in other parts of the Japanese Empire, except as medicine. Its private sale and purchase are forbidden.

A Nambudiri lady in Walluvanad Taluk, who has been suspected of light conduct, is kept separate from the family. She will as usual be tried by an assembly of Nambudiries. Until her guilt or innocence is established, she will continue to live separate.

It is reported at Quetta that a very large number of deaths have recently occurred in Herat from a sickness believed to be another form of the plague, the symptoms of which are intense irritation of the throat followed by high fever and almost invariably by death.

An Esbourne bar-maid has distinguished herself. Wishing to benefit the fund which the Mayor is raising on behalf of the Famine, she decided to retail kisses across the bar to those customers who would pay a shilling each for them. The girl is blessed with good looks, and in less than half an-hour on the morning she decided to put her plan into practice she had received 19s for the benefit of the fund.

Mr. G. Subramania Iyer, editor of the *Hindoo* is another Indian who will appear as a witness before Lord Welby's Commission. He is being sent by the Mahajana Sabha of Madras. So Bengal, Bombay and Madras will each be represented. The statistical Wacha, the argumentative Subramaniya and the eloquent Surendra Nath form a Triple Alliance which may well appal the boldest apologist of the present state of things.—*The Hindoo Patriot.*

The situation in Poona seems to be daily getting worse. The daily mortality from the plague is rising fast. According to the local newspaper Poona is now half empty. The houses and shops have been closed to a large extent, the inmates having left Poona through panic. Eighty five deaths per day among sixty thousand people is, certainly, a terrible rate of mortality, and Poona is in this stage at present.

The Registrar of the Appellate Side of the Calcutta High Court, having asked the opinion of the Vakils' Association regarding the enrolment of LL. B's of the Allahabad University as Vakils of the Calcutta High Court, a meeting was held lately at the Vakils' Library to consider the matter. After some discussion, a Sub Committee was appointed to consider the letters of the Registrars of both the Calcutta and Allahabad High Courts on the subject.

The birth place of Lord Buddha is claimed to have been found by Dr. Fuhrer at the site indicated by Dr. Waddel in the Nepal Terai. Going from the village of Niglua, for about ten miles, Dr. Fuhrer found projecting from a mass of ruined buildings, a colossal edict pillar of Asoka, which bore an inscription, about twenty four feet from its summit, stating that Asoka, after having been anointed twenty years, that is, about 239 B. C., came to the Lumbini Garden, worshipped, and erected this pillar on the very spot where Lord Buddah was born.

The London Correspondent of the *Hindu*, writes:—"The other evening amongst the ladies assembled in the Lobby of the House of Commons was an Indian lady whose dress—a mixture of the Indian *Saree* and English—attracted much attention and whose presence in their midst was most agreeably commented upon as a step in the right direction. On making inquiries I learned that our Indian lady visitor was the wife of Professor Bose, the distinguished electrician of the City of Palaces who is on a tour through Western Europe.

To what extremes, want of tact and discrimination on can drive ignorant people is evidenced by the case reported by the "Baluchistan Herald" of a double murder at Ruk. It appears that a Peshawari Mahomedan with his wife was travelling by train. On arrival at Ruk he was ordered to bring his wife out of the carriage for examination to ascertain that she was not suffering from plague. This the man refused to do, whereupon an altercation ensued which resulted in the fanatic killing his wife on the spot and severely wounding the inspecting doctor who is said to have since died. The man attempted to kill himself also, but he was prevented from doing so by those present.

GREAT indignation prevails owing to the publication of the rules under the Plague Act. The wildest rumours about the possible black mailing and oppression by the Police are afloat. A meeting of representatives of all classes under the presidency of Prince Soleman Quadir was held on Wednesday last. It was followed by a bigger meeting attended by the leading Princes, Nawabs, Moulvies, Traders and other professionals meeting under the presidency of Nawab Aga Mehdi Hossain. The rules were discussed. The Segregation Rules were strongly condemned. The rule authorising the Health Officer to segregate any Bubonic Plague patient was proposed to be amended with a view to enable the relatives to segregate the patient in any lonely room of the house. It was proposed also that the Health Officer was not to issue orders likely to interfere with the customs, manners and religious or personal liberty and honour of the people especially females. The rule regarding the burial of the dead bodies of Bubonic patients with chloride of lime was condemned, and the Government was asked to direct Health Officers not to interfere with the religious observances during the funerals. A memorial will be submitted to Government embodying the views of the meeting.

Local and Provincial

THE CHIEF ENGINEER'S OFFICE.—Will be held from Monday in the morning, on account of the summer season.—E M

THE FIRE REPORT.—We hear that the Resident has called for the Report of the fire in Mysore in order to send it to the Government of India.

SANCTION.—The Mysore Durbar has sanctioned the introduction of Octroi duty on Kerosine oil in the Municipality of the Mysore City.—L M

Mr R. T. Scaldwell, Superintending Engineer, Eastern Circle, is granted leave on medical certificate for five months with effect from 4th instant.

THE FOREST DEPARTMENT.—The Government of Mysore has sanctioned the abolition of the sub divisional charges of Hunsur, Heggadevankote and French Rocks.

NORMAL SCHOOLS.—The Government of Mysore have refused to sanction the establishment of any more of those institutions being of opinion there is a sufficiency of them.

A SEPARATE ENGINEER FOR THE PALACE.—Mr. Raghavalu Naidu, Executive Engineer, has been placed exclusively in charge of the Palace Division which has been newly formed.

THE WEATHER.—Is very hot just now, especially in the middle of the day. There is not much breeze at any time and sometimes it is very sultry. A good shower of rain would be very acceptable.

A SUB REGISTRAR FINED.—We learn that the Sub Registrar of Nanjangud was fined Rs. 15 for the simple reason that owing to the sickness of his wife he stayed in Mysore but was attending his office at Nanjangud by going there by Rail every day and returning in the evening.

REMOVAL TO PALACE.—It is reported that Her Highness the Maharani and party who were occupying the Summer Palace along with the Maharaja have removed themselves to the Palace owing to the accouchment of the 2nd Princess which took place on Thursday last.

THE HESSARGATTA WATER SUPPLY.—We are given to understand that the Mysore Durbar is contemplating to hand over the Hessarngatta water supply to the City Municipal authorities, from June next.

Under Article 188 of the Mysore Service Regulations, Mr S K Hanumantha Rao Sub Assistant Surgeon, Shimoga, is granted privilege leave of absence for thirty days, with effect from such date as he may avail himself of it.

The leave without allowances granted to Mr D Devaraj Arss, Superintendent of Police, Bangalore district, in Government Notification No 8194—J 911, dated 20th January 1897 is further extended by three months from 1st March 1897.

Sub Assistant Engineer Mr S N Duggappayya, attached to the Mysore division, has been granted privilege leave of absence for 18 days in extension of the 26 days sanctioned in Notification No 104—578 of the 26th January 1897.

THE PALACE FIRE INQUIRY COMMITTEE.—The sitting of the Palace Fire Inquiry Committee was concluded on Wednesday before last. It appears about 70 witnesses were examined in all. The Committee has not yet submitted its report.—M H

A REPRESENTATIVE.—We learn that Mr Channaraj Urs, First Class Risaldar of the Imperial Service troops, has been deputed to represent Mysore in England during the Jubilee of the Empress of India as Lieutenant Colonel D Saraj Urs is unable to go.

A SPECIAL CASE.—The Government of Mysore has deferred for the present the assignment of special Sub Registrars of magisterial and lock-up work, but as a special case has appointed Rangaswamiengar, Sub Registrar of Anekal Officer in charge of the taluk lock up.—L M

Mr V H Karve, Executive Engineer, Mysore division, is appointed to officiate as Superintending Engineer, Eastern Circle, during the absence of Mr R T Scaldwell on leave or until further orders. To join.

Mr C A Mahadeva Sastri, Executive Engineer, is transferred from the Chamraj Channel division to the Mysore division. To join at once.

THE OOTHARADI MATT CASES.—These cases against H H the Swamy of Ootharadi Matt which had been remanded to the Sub ordinate Judge of Mysore for finding whether the said Matt was a Muzroy Institution were disposed of last week with the result that the Matt was not a Muzroy Institution, and that suits relating to the officers of the Matt were within the jurisdiction of the civil courts.—M H

A CONVICTION.—In our last issue we reported that a pearl necklace with a ruby was detected in the house of a Palace servant and that the offender was undergoing trial. The trial having been concluded, the accused has been sentenced to 2 years' rigorous imprisonment. The most unfortunate aspect of the case is that the offender turned out dishonest after 30 years' good service in the Palace.—M B

ಕರ್ಣಾಟಕ ಪ್ರಕಾಶಿಕಾ.

೧೮೯೭ನೇ ಇಸವಿ ಮಾರ್ಚ ತಾ|| ೨೨ನೇ ಸೋಮವಾರ

ಡಿಗ್ರಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವ ವಿದ್ಯಾವಂತರ ಭವಿಷ್ಯತ್ಪರಿಣಾಮಗಳು

(ಕಳೆದವಾರದ ಶೇಷ)

ಈಚೆಗೆ ಗವರ್ನಮೆಂಟಿನವರು ಕಂ ತೆಲವ್ ಗಳುಳ್ಳ ಉದ್ಯೋಗವನ್ನು ವಜಾಮಾಡಿ ಅಭಿವೃದ್ಧಿಗೊಳಿಸುವ ವ್ಯಾಜದಿಂ ಭಾರೀ ವೇತನಗಳುಳ್ಳ ಉನ್ನತಾಧಿಕಾರಿಗಳ ಸಂಖ್ಯೆಯನ್ನು ಅಪರಿಮಿತವಾಗಿ ಹೆಚ್ಚಿಸಿದರು. ಈ ಕ್ರಮದಿಂದ ಸಾಧಾರಣವಾಗಿ ವಿದ್ಯಾವಂತರಿಗೆ ಲಭಿಸಬಹುದಾದ ಉದ್ಯೋಗಗಳು ಅನೇಕವಾಗಿ ಕಡಿಮೆಯಾದವಲ್ಲದೆ ಅಲ್ಪ ವೇತನಗಳುಳ್ಳ ಕ್ಲಾರ್ಕ್ ಉದ್ಯೋಗಸ್ಥರು ಬೇಕಾದಮಟ್ಟಿಗೆ ಕಡುಕಾಗಳಂ ಮಾಡಲಿಕ್ಕೆ ಶಕ್ತರೆನಿಸಿರುತ್ತಾರೆ ಈ ಜನರಿಗೆ ಬದು ಕಡೆಯಲ್ಲಿ ಹ ದಾಹವಂ ತೀರಿಸಿಕೊಳ್ಳುವುದೂ, ಮತ್ತೊಂದು ಕಡೆಯಲ್ಲಿ ಪ್ರೇರೇಪಕ ಸಾಮಗ್ರಿಗಳಂ ನಿರೋಧಿಸುವುದೂ ಅವರಿಗೆ ಕೇವಲ ಕಷ್ಟಸಾಧ್ಯವಾದ ವಿಷಯವಾಗಿ ಪರಿಣಮಿಸಿದೆ ಈ ಉಭಯ ಸಂಕಟಕ್ಕೆ ಸಿಲುಕಿದ ಮನುಷ್ಯನ್ಯಾವನಾದರು ಯಾವುದರಲ್ಲಿ ಪರಾಜಯವನ್ನು ಹೊಂದಿದರೂ ಅವನು ಎಂದೆಂದಿಗೂ ಮುಂದೆ ತಲೆಯೆತ್ತಿ ಜೀವಿಸುವಂತಿಲ್ಲವು ಇದಲ್ಲದೆ ಬೇರೆ ಅನರ್ಥವೊಂದು ಪ್ರಾಪ್ತವಾಗುದೇನೆಂದರೆ-ದೇಶದ [illegible] ಸ್ತ್ರೀಯರ ಸಂಖ್ಯೆಯ [illegible] ನಿರ್ವಿವಾದವಾದ ಅಂಶವಾಗಿರುತ್ತದೆ ಮಾತಾಪಿತೃಗಳು ತಮ್ಮ ಹೆಣ್ಣುಮಕ್ಕಳ [illegible] ವಿಷಯವಾಗಿ, ಯಾವಜ್ಜೀವ ಸ್ತ್ರೀಯರು ಅವಿವಾಹಿತರಾಗಿರತಕ್ಕವರೆಂತಲೂ [illegible] ದೋಷಾವಹವೆಂತಲೂ [illegible] ರು ನಡೆಸುತ್ತಾರೆ ಮತ್ತು [illegible] ಇದೊಂದು ಪರಿಭಾವನೀಯಾಂಶವಾಗಿ ಗಣಿಸಲ್ಪಟ್ಟಿದೆ ಇಂತಹ ದುರವಸ್ಥೆಯು [illegible] ರುವುದರಿಂದ, [illegible] ಇಷ್ಟು [illegible] ಬಾಲಿಕೆಯರು [illegible] ವಿವಾಹ ಮಾಡಿರುವ ಹೆಣ್ಣುಮಗುವನ್ನು ನಾವು ನೋಡಿದೇವೆ

ಇವೆಲ್ಲವೂ ಸೂತಿಕಾಗೃಹದಲ್ಲಿ ಸದ್ಯೋಜಾತವಾದ ಸ್ತ್ರೀ ಶಿಶುವಿಗೆ ಅಪಾಯಾಸ್ಪದಗಳೆಂದಲೂ, ವಾರಪತ್ರ [illegible] ದೇಶದ [illegible] ಸ್ತ್ರೀಯರಲ್ಲಿ ಹಿರಿಯರು [illegible] ವನ್ನು ಆಗಲೆ ಬಿಟ್ಟ ಅವಿವಾಹಿತನ [illegible] ನಿನ್ನ ಭ್ರೂಣದಿಂದಲಾದರು ಬದುಕಿಕೊಳ್ಳಲು ತಿಳಿಸಿ [illegible] ಪರಿವರ್ತನೆಯಂ ಮಾಡುವದು ನಮ್ಮ ದೃಷ್ಟಿಯಲ್ಲಿ ಬಿದ್ದಿರುತ್ತದೆ ಇಂತಹ ಬಾಲ್ಯವಿವಾಹ [illegible] ಅನುಸರಿಸುವ ಬಾಲಕನ ವಿದ್ಯಾಭಿವೃದ್ಧಿಗೆ ಸಹಾಯಕವಾಗಿ ಬೇಕಾದ ಅನುಕೂಲ್ಯಗಳು [illegible] ಕಡೆಯಿಂದ ಲಭಿಸುವ ಪ್ರಮೇಯಗಳೂ ಅನೇಕವಾಗಿವೆ, ಆದರೂ ಮುಂದೆ ಅಳಿಯನ [illegible] ಉಮೇದಿನೊಡನೆ [illegible] ವಾಡಿ ಅವನು [illegible] ಪರೀಕ್ಷೆ [illegible] ಅವನಿಗೆ ವಿವಾಹ [illegible] ಬೆಳೆಯುತ್ತದೆ ಇವನು ಪರೀಕ್ಷೆಗಳಲ್ಲಿ ತೇರ್ಗಡೆಯಾಗುತ ಬಂದಹಾಗೆಲ್ಲ ವರನ ಗಿರಾಕಿಯು ಹೆಚ್ಚಿ, ಊರು ಅಧಿಕವಾಗಿ ವರದಕ್ಷಿಣೆ [illegible] ಅಂತವರಿಗೆ ಆವನು ವಶ್ಯನಾಗುವದಂ ನಾವು ನೋಡುತಲಿದೇವೆ ಅವನು ಬಿ. ಎ ಪರೀಕ್ಷೆ ಕೊಟ್ಟು [illegible] ಉತ್ತೀರ್ಣನಾಗಿ "[illegible]" (ಡಿಪ್ಲೊಮಾ) ಯೋಗ್ಯತಾಪತ್ರಿಕೆಯು [illegible] ನಿರ್ಭಯವಾಗಿ ಕೊಡಲ್ಪಡುತಿದೆ ವಿದ್ಯಾಭ್ಯಾಸಕ್ಕೆ ಬೇಕಾದ ಪುಸ್ತಕಗಳನು ತೆಗದುಕೊಳ್ಳುವದಕ್ಕಾಗಿಯೂ, ಸಂಬಳಗಳಂ ಕೊಡುವದಕ್ಕಾಗಿಯೂ, ಜೀವನಾಧಾರವಾಗಿ [illegible] ಏನಾದರು ಇದ್ದಲ್ಲಿ ಅವೆಲ್ಲವು ತೀರಿ ಕಡೆಗೆ ಭಾರ್ಯೆಯು ಮನೆಗೆ ಬರುವ ತರುಣದಲ್ಲಿ ಸಾಲಗಾರನಾಗಿಯೂ, [illegible] ಬುದ್ಧಿ ಶರೀರ ನೇತ್ರಪಾಟವಗಳು ಅತಿ ವ್ಯಾಸಂಗದಿಂದ ನ್ಯೂನತೆಯನ್ನೈದಿ ಸುರಕ್ಷಣ ಬಲದಿಂದ ಮದವಿಯಂ [illegible] ಅನಂತರ ದೇಹದಾರ್ಢ್ಯ ಸಂಪಾದನಾರ್ಥ ಕಾಡ್ಲಿವರ್ ಎಣ್ಣೆ ತೀಷದು(?) ಬಿಸ್ಕತ್ತನ್ನು ಸಹ ಬಾರ್ಲಿಯಂ ಯಾಚಿಸಿ ಪಡೆಯಬೇಕಾದವನಾಗಿಯೂ ಏರ್ಪಡುತ್ತಾನೆ ಇಂತ ಸ್ಥಿತಿಯಲ್ಲಿರುವವರು ತಮ್ಮನ್ನೂ ತಮ್ಮ ಭಾರ್ಯಾಪುತ್ರರನ್ನೂ ರಕ್ಷಿಸಬೇಕಾದ ಭಾರವುಳ್ಳವರಾಗಿ, ಅದಕ್ಕೆ ಶಕ್ತಿ ಇಲ್ಲದೆ ಖಿನ್ನರಾಗಿ ಸಂಕಟ ಪಡುತ್ತಾರೆ ಇದಲ್ಲದೆ ವಿದ್ಯಾಭ್ಯಾಸಪ್ರಯುಕ್ತವಾದ ನಾಗರಿಕತೆಗೂ ಸಹಕಾಲಿಕರಾದ ವಿಶ್ರುವರ್ಗದ ಅಭಿರುಚಿಗೂ ಕಾಲಸ್ಥಿತಿಗೂ ಅನುಗುಣವಾದ ವಸನಾಲಂಕಾರಗಳು ಆವಶ್ಯಕಗಳಾಗಿರುತಿವೆ, ತಮ್ಮ ಪೂರ್ವಿಕರು ಜೀವಿಸಿದ ಮಾರ್ಗದಲ್ಲಿ ತುಚ್ಛಜ್ಞಾನ [illegible] ವಿಲಕ್ಷಣವಾದ [illegible] ವೇಷಾಲಂಕಾರಗಳನ್ನು ಇವರ ಮನಸ್ಸು ಬಯಸುವದರಿಂದ ಇವರ ಸ್ಥಿತಿಯು ಮತ್ತಷ್ಟು [illegible] ಶೋಚನೀಯತೆಯನ್ನೈದಲಿಕ್ಕೆ ನಿಮಿತ್ತವಾಗುತಿದೆ ತಂದೆಯಾದವನು ಪ್ರತಿ ನಿತ್ಯವು ಒಂದೆರಡಾಣೆಗಳಿಂದ ಜೀವನ ಮಾಡುತ [illegible] ಆತನ ಕುಮಾರನಿಗೆ ಆರೇಳಿಯಾಣೆ ಜೀವನವು ರುಚಿಸಲಾರದು [illegible] ಅನಪೇಕ್ಷಿತಗಳಾದವು, ಅಂದರೆ [illegible] ಬೂಟ್ಸುಗಳು, ಇಂಗ್ಲಿಷ್ ನಮೂನೆ ಕೋಟುಗಳು ಕನ್ನಡಕಗಳು, [illegible] ಬೈಸಿಕಲ್, [illegible] ಟೀ, ಕಾಫಿ, ತದನುಸಾರ ಫಲಾಹಾರಗಳು, [illegible] ಅವಶ್ಯಕತೆ [illegible] ಪಾನೀಯಗಳು [illegible] ಅವನು ಶರೀರ [illegible] ಅವನಿಗೆ [illegible] ಇವು ಕೇವಲ [illegible] ಈಗಿನವರು [illegible] ಅವರು ಮಾಡುವ ಪ್ರಯತ್ನಗಳು [illegible] ಕಾರ್ಯ [illegible] ಇದೇ ಮಾರ್ಗ [illegible] ದರಿಂದ ಇಂತ ಅನುಪಪತ್ತಿ ಪೀಡಿತರಾದ ವಿದ್ಯಾವಂತರು ಪ್ರತಿನಿತ್ಯವೂ ಪ್ರಬಲಿಸುತಲಿರುವದರಿಂದ ಇವರ ಸ್ವಾಸ್ಥ್ಯ [illegible] ದೇಶೀಯರಿಗೆ [illegible] ಮಾಡುವರೋ ಅದಂ ಮನಸ್ಸು ಊಹಿಸ ಅರಿಯಲಿಕ್ಕೆ ಸಹ ಪ್ರಕೃತಸ್ಥಿತಿಯಲ್ಲಿ ಅಸಾಧ್ಯವಾಗಿ ಪರಿಣಮಿಸಿರುತಿದೆ

Occasional Notes.

ನೈಮಿತ್ತಿಕ ವಿಷಯನ್ಯಾಸ.

ಕಲ್ಕತ್ತೆಯ ಟೌನ್ ಹಾಲ ಎಂಬ ಕಟ್ಟಡವನ್ನು ರಿಪೇರೀ ಮಾಡುವದಕ್ಕೆ ಒಂದು ಲಕ್ಷ ಇಪ್ಪತ್ತಾರು ಸಾವಿರ ರೂಪಾಯಿಗಳು ಖರ್ಚಾಯಿತೆಂದು ಒಂದಾನೊಂದು ಪತ್ರಿಕೆ ತಿಳಿಸುತಿದೆ ಈ ರಿಪೇರಿಗೆ ಇಷ್ಟು ಖರ್ಚ ಪಡೋರ ಮೊದಲು ಸದರೀ ಕಟ್ಟಡವನ್ನು ಕಟ್ಟಿಸುವದಕ್ಕೆ ಅನೇಕಲಕ್ಷ ರೂಪಾಯಿಗಳು ಹಿಡಿದಿರುವುದೆಂಬುದರಲ್ಲಿ ಸಂಶಯವಿಲ್ಲವು.

ಈಗ ಮದರಾಸಿನಿಂದ ಬೆಜವಾಡವರೆಗೆ ಹಾಕಲ್ಪಡುವ ರೈಲ್ವೆ ರಸ್ತೆಯ ಕಾಮಗಾರಿಯು ಕೇವಲ ಆತುರದೊಡನೆ ನಡೆಸಲ್ಪಡುತಿದೆ. ಬರುವ ಜೂನ್ ಗುರ್ತೀ ತಾರೀಖಿನಲ್ಲಿ ನೆಲ್ಲೂರಿನ ಮಾರ್ಗವಾಗಿ ಪ್ರಯಾಣಸ್ಥರ ಗಾಡಿ ನಡೆಸಲ್ಪಡುವದಕ್ಕೆ ಪ್ರಾರಂಭವಾಗಬೇಕೆಂತಲೂ, ಅಕ್ಟೋಬರ್ ತಿಂಗಳಲ್ಲಿ ಅಂ [illegible] ಗಾಡಿ ಬಿಡಲ್ಪಡಬೇಕೆಂತಲೂ ಇದ್ದು ಗವರ್ನಮೆಂಟಿನವರು ಅಪೇಕ್ಷಿಸುತಲಿದ್ದಾರೆ

ಜರ್ಮನ್ ಆಧಿಪತ್ಯಕ್ಕೆ ಒಳಪಟ್ಟ ಇತರ ಪ್ರದೇಶಗಳಲ್ಲಿ ನಿರ್ಬಂಧಿಸಲ್ಪಟ್ಟಿರುವಂತೆ, ಘೋರ್ಮೋಸಾ ದ್ವೀಪದೊಳಗೂ ಔಷಧಕ್ಕೆ ವಿನಾ ಅಫೀಮು ಉಪಯೋಗ ಮಾಡಕೂಡದೆಂದು ಸದರೀ ದ್ವೀಪವಲ್ಲಿರುವ ಜಪಾನ್ ಸರ್ಕಾರದವರಕಡೆ ಗವರ್ನರವರು ಕಳೆದ ಫೆಬ್ರುವರಿ ತಿಂಗಳ ೨೮ನೇ ತಾರೀಖಿನಲ್ಲಿ ಇಸ್ತಿಹಾರನಾಮೆ ಕೊಟ್ಟು ಅಫೀಮನ್ನು ಯಾರೂ ಮಾರಲೂಕೂಡದು, ಕೊಂಡುಕೊಳ್ಳಲೂಕೂಡದೆಂದು ನಿರ್ಬಂಧಿಸಿಬಿಟ್ಟರು.

ಮಲೆಯಾಳ ದೇಶಕ್ಕೆ ಸೇರಿದ ಪಳ್ಳನಾಡು ತಾಲ್ಲೂಕಿನಲ್ಲಿ ನಂಬೂದ್ರಿ ಜಾತಿ ಹೆಂಗುಸೊಬ್ಬಳ ನಡತೆಯ ವಿಷಯದಲ್ಲಿ ಸಂಶಯ ತೋರಿಬರಲು ಅವಳನ್ನು ಕುಟುಂಬದಿಂದ ಪ್ರತ್ಯೇಕಿಸಿಟ್ಟರು ಮತ್ತೆಯೂ, ಇಂತ ಸಂದರ್ಭಗಳಲ್ಲಿ ಕುಲಾಚಾರ ವಾಡಿಕೆಯನ್ನನುಸರಿಸಿ ನಂಬೂದ್ರಿಗಳು ಸಮಾಜ ಸೇರಿ ವಿಚಾರಣೆ ಮಾಡುವರು ಅವಳು ದೋಷಿ ಅಥವಾ ನಿರ್ದೋಷಿಯೆಂದು ಏರ್ಪಡುವ ತನಕ ಅವಳು ಪ್ರತ್ಯೇಕವಾಗಿಯೇ ಇರುವಳು. ಈ ವಿಚಾರಣೆ ಶ್ಲಾಘನೀಯವಾದುದೆ

ಅಲಹಾಬಾದ್ ಯೂನಿವರ್ಸಿಟಿಯಲ್ಲಿ ಬಿ ಎಲ್ ಪರೀಕ್ಷೆಯಂ ಕೊಟ್ಟವರನ್ನು ಕಲ್ಕತ್ತಾ ಹೈಕೋರ್ಟಿನಲ್ಲಿ ವಕೀಲರನ್ನಾಗಿ ಸೇರಿಸಿಕೊಳ್ಳುವ ವಿಷಯದಲ್ಲಿ ವಕೀಲ್ ಸಂಘದವರ ಅಭಿಪ್ರಾಯವಂ ಸದರೀ ಹೈಕೋರ್ಟ್ ಆಫೀಸಿನ ರಿಜಿಸ್ಟ್ರಾರವರು ಕೇಳಿದಂತೆ ಅದಂ ಕುರಿತು ಆಲೋಚಿಸುವದಕ್ಕಾಗಿ ಆ ವಾರದೊಳು ವಕೀಲ ಸಂಘದ ಮೆಂಬರುಗಳು ತಮ್ಮ ಲೈಬ್ರರಿಯಲ್ಲಿ ಸಮಾಜ ಸೇರಿ ಅದಂ ಕುರಿತು ವಿಚಾರಮಾಡಿ, ಅದೇ ವಿಷಯದಲ್ಲಿ ಅಲಹಾಬಾದ್ ಮತ್ತು ಕಲ್ಕತ್ತಾ ಹೈಕೋರ್ಟುಗಳ ರಿಜಿಸ್ಟ್ರಾರುಗಳ ಕಡೆಯಿಂದ ಬರುವ ಲೆಟರುಗಳಂ ಕುರಿತು ಆಲೋಚಿಸುವದಕ್ಕಾಗಿ ಒಂದು ಉಪಸಭೆಯನ್ನೇರ್ಪಡಿಸಿದರು

ಶ್ರೀಮನ್ಮಹಾರಾಜ್ಞೀ ಇಂಡ್ಯಾ ಚಕ್ರವರ್ತಿನೀಯವರ ಜೂಬಿಲಿ ಉತ್ಸವಕಾಲಿಕವಾದ ಆಜ್ಞೆಯ ಜ್ಞಾಪಕಾರ್ಥ, ಅನುಪಮವೆನ್ನಿಸುವ ರಾಜಪುತ್ರ ಬಾಲಕರ ವಿದ್ಯಾಭ್ಯಾಸದ ಬಗ್ಗೆ ಕಾಶೀಯಲ್ಲಿ ಒಂದು ಕಾಲೇಜ್ ಪಾಠಶಾಲೆಯನ್ನೂ, ಅದಕ್ಕೆ ಸೇರಿದಂತೆ ವಿದ್ಯಾರ್ಥಿಗಳ ಭೋಜನಶಾಲೆಯನ್ನೂ, ಆಯುರ್ವೇದದಲ್ಲಿ ತಿಳಿಸಲ್ಪಟ್ಟಿರುವಂತೆ ಚಿಕಿತ್ಸೆಮಾಡುವ ಕ್ರಮವಂ ಕಲಿಸುವದಕ್ಕಾಗಿ ಅಲಹಾಬಾದ್ ಅಥವಾ ಕಾಶಿಯೊಳು ಒಂದು ವೈದ್ಯ ಪಾಠಶಾಲೆಯನ್ನೂ ಏರ್ಪಡಿಸಬೇಕೆಂದು ಈಗ ರಾಜ್ಯವನ್ನಾಳುತ್ತಿರುವ ರಾಜಪುತ್ರ ಅರಸರುಗಳಲ್ಲಿ ಒಂದು ಆಲೋಚನೆ ಉಂಟಾಗಿರುವಂತೆ ಕೇಳಿ ಬಹಳ ಸಂತೋಷಿಸುತ್ತೇವೆ.

ಪುನೆಗೆ ಪ್ರಾಪ್ತವಾಗಿರುವ ದುರ್ದಶೆಯು ದಿನೇ ದಿನೇ ಬಲಪಡುತಲಿದೆ. ಪ್ಲೇಗು ಮಾರಿಕೋಪದಿಂದ ಪ್ರತಿದಿನವೂ ಮೃತಿ ಹೊಂದುವ ಜನರ ಸಂಖ್ಯೆಯು ವೃದ್ಧಿಯಾಗುತಲಿದೆ. ಅಲ್ಲಿನ ಮನೆಗಳಲ್ಲಿ ಅರ್ಧ ಖಾಲಿಯಾಗಿರುವಂತೆಯೂ, ಬಹಳಮಟ್ಟಿಗೆ ಮನೆಗಳೂ, ಅಂಗಡಿಗಳೂ ಮುಚ್ಚಲ್ಪಟ್ಟು ಅವುಗಳ ನಿವಾಸಿಗಳೆಲ್ಲರು ದಿಗಿಲು ಹೊಂದಿ ಪರಸ್ಥಳಗಳಿಗೆ ಹೊರಟುಹೋದಂತೆಯೂ, ಅಲ್ಲಿನಪತ್ರಿಕೆಗಳು ತಿಳಿಸುತಿವೆ. ಸದರೀ ಶಹರಿನ ಪ್ರಜಾ ಸಂಖ್ಯೆ ಅರವತ್ತು ಸಾವಿರ, ಅದರಲ್ಲಿ ದಿನ ಒಂದಕ್ಕೆ ಎಂಬತ್ತೈದುಮಂದಿ ಮೃತರಾಗುವುದು ಕೇವಲ ಭಯಂಕರವಾದುದು. ಪುನೇ ಶಹರಿನ ತಾತ್ಕಾಲಿಕ ಸ್ಥಿತಿಯು ಕೇವಲ ಚಿಂತನೀಯವಾಗಿದೆ.

ಈಗ ಮೂರು ತಿಂಗಳ ಕಾಲಕ್ಕೆ ಕಡಮೆ ಇಲ್ಲದೆ ಒಂದು ಕ್ಲುಪ್ತಕಾಲಕ್ಕೆ ಪ್ರೊಪ್ರೈಟರನ್ನು ಮುಂಗಡವಾಗಿ ಪ್ರೊಪ್ರೈಟರುಗಳಿಗೆ ಪಾವತೀ ಮಾಡಿ ಇತರ ಕ್ರಮಗಳಂ ನಡೆಸುವಂತ ವೃತ್ತಾಂತ ಪತ್ರಿಕೆಗಳ ತೂಕವು ಮೂರು ತೊಲೆಗೆ ಒಳಪಟ್ಟಿರುವ ಪಕ್ಷದಲ್ಲಿ ಕಾಸಿ ಒಂದಕ್ಕೆ ಮೂರು ಪ್ರತಿಗಳ ಮೇರೆ ಹಾಸಲನ್ನು ತೆಗದುಕೊಂಡು ಪತ್ರಿಕೆಗಳಂ ರವಾನೆ ಮಾಡುತಲಿದ್ದಾರೆಯಷ್ಟೆ ಈಚೆಗೆ ನಾಲ್ಕಾರು ತಿಂಗಳ ಹಿಂದೆ ಮದರಾಸ್ ಮೆಯಿಲ್ ಪತ್ರಿಕೆಯು ಮೂರು ಕಾಸಿನ ಹಾಸಲು ಹತ್ತು ರೂಪಾಯಿಗಳ ತೂಕವುಳ್ಳ ಪೇಪರ್‌ಗಳಿಗೆ ಸಹ ವ್ಯಾಪಿಸುವಂತೆ ಮಾಡುವದರಿಂದ ಚಂದಾದಾರರಿಗೂ ಸರ್ಕಾರಕ್ಕೂ ಸಮಾನವಾಗಿ ಪ್ರಯೋಜನಕರವಾಗಿರುವದೆಂದು ಗವರ್ನ್‌ಮೆಂಟಿಗೆ ಸೂಚಿಸಿತ್ತಷ್ಟೆ. ಗವರ್ನ್‌ಮೆಂಟಿನವರು ಸದರೀ ಸಲಹೆಯನ್ನು ಅಂಗೀಕರಿಸಲಿಲ್ಲವೆ, ಪರುತು ಮೂರು ಕಾಸಿನ ತೂಕವನ್ನು ನಾಲ್ಕು ಅಥವಾ ಐದುಕಾಸಿನ ತೂಕಕ್ಕೆ ಹೆಚ್ಚಿಸುವ ವಿಷಯವಂ ಕುರಿತು ಯೋಚಿಸುತಲಿದಾರೆಂದು ತಿಳಿಯಬರುತಿದೆ.

LOCAL AND PROVINCIAL NEWS.

ಒಳದೇಶಮತ್ತುತಾಲ್ಲೂಕಿನವೃತ್ತಾಂತಗಳು.

ಮೈಸೂರು ಶಹರಿಗೆ ಆಮದ್ ಮಾಡಲ್ಪಡುವ ಕೆರೋಸಿನ್ ಎಣ್ಣೆಯಮೇಲೆ ತೆರಿಗೆ ವಸೂಲ್ಮಾಡಬೇಕೆಂದು ಅಲ್ಲಿನ ಮ್ಯುನಿಸಿಪಾಲಿಟಿಯವರು ತಿಳಿಸಿದ ಅಭಿಪ್ರಾಯವನ್ನು ಗವರ್ನ್‌ಮೆಂಟಿನವರು ಮಂಜೂರ್ಮಾಡಿರುತ್ತಾರೆಂದು ತಿಳಿಯಬರುತಿದೆ.

ಹವಾ-ಬಿಸಿಲು ದಿನದಿನೆ ಜೋರಾಗುತಲೂ ರಾತ್ರಿ ಕಾಲದಲ್ಲಿ ಸೆಖೆ ಹೆಚ್ಚುತಲೂ ಇದೆ. ಆಹಾರ ಧಾನ್ಯಗಳ ದಾರಣೆಗಳು ಪ್ರಾಯಶಃ ಹಿಂದಿನವಾರದಲ್ಲಿ ತಿಳಿಸಿರುವಂತೆಯೇ ಇವೆ. ಜನಾರೋಗ್ಯವು ಸಾಮಾನ್ಯವಾಗಿದೆ. ಇದುವರೆಗೆ ರೋಗೋಪದ್ರವಗಳು ಯಾವವೂ ಇಲ್ಲವು.

ಹೆಸರುಘಟ್ಟದಿಂದ ಈ ಪುರಿಗೆ ನೀರು ಸರಬರಾಯಿ ಮಾಡುವದಕ್ಕಾಗಿ ಏರ್ಪಟ್ಟಿರುವ [illegible] ಬರುವ ಜೂನ್ ಅಥವಾ ಜುಲೈ ತಿಂಗಳಲ್ಲಿ ಸಿಟಿ ಮ್ಯುನಿಸಿಪಾಲಿಟಿಯವರಿಗೆ ಒಪ್ಪಿಸಬೇಕೆಂದು ಗವರ್ನ್‌ಮೆಂಟಿನವರು ಆಲೋಚಿಸುತಲಿರುವಂತೆ ಕೇಳುತ್ತೇವೆ.

ಶ್ರೀಮನ್ಮಹಾರಾಜ್ಞೀ ಇಂಡ್ಯಾ ಚಕ್ರವರ್ತಿನೀಯವರ ಜೂಬಿಲೀ ಉತ್ಸವಕ್ಕೆ ಮೈಸೂರ ಸಂಸ್ಥಾನದ ತರಫ ಪ್ರತಿನಿಧಿಯಾಗಿ, ಇಂಪೀರಿಯಲ್ ಸರ್ವಿಸ್ ಟ್ರೂಪ್ಸಿನ ಫಸ್ಟ್‌ಕ್ಲಾಸ್ ರಿಸಾಲ್ದಾರರಾದ ಮೆ|| ಚಾಮರಾಜ ಅರಸಿನವರು ಇಂಗ್ಲೆಂಡಿಗೆ ಕಳುಹಿಸಲ್ಪಡುವರೆಂದು ಒಳದೇಶದ ಪತ್ರಿಕೆಯೊಂದು ತಿಳಿಸುತಿದೆ

ನಂಜನಗೂಡಿನಲ್ಲಿ ವಾಂತಿ ಭೇದಿ ರೋಗವು ವ್ಯಾಪಿಸಿ ಅದರ ಭಯದಿಂದ ಅಲ್ಲಿನ ಸಬ್‌ರಿಜಿಸ್ಟ್ರಾರವರು ಕೆಲವು ದಿನಗಳ ಕಾಲ ತಮ್ಮ ಆಫೀಸನ್ನು ರೆಯಿಲ್ವೇ ಸ್ಟೇಷನ್ನಲ್ಲಿ ಮಾಡಿದ ಬಗ್ಗೆ ಹಬ್ಬದ ರಥಯೋಗಗಳ ಜಾತ್ರೆ ನಿಷೇಧಿಸಲ್ಪಟ್ಟಿತೆಂದು ಮೈಸೂರು ಹೆರಾಲ್ಡ್ ಪತ್ರಿಕೆ ತಿಳಿಸುತಿದೆ.

ಅರಮನೆಗೆ ಬೆಂಕಿ ತಗಲಿದ್ದ ಮೇಲೆ ಶ್ರೀಮನ್ಮಹಾರಾಣೀ ರೀಜೆಂಟರವರು ಶ್ರೀಮನ್ಮಹಾರಾಜಾಸಾಹೇಬರವರು ಮೊದಲಾದವರೊಡನೆ ಪಟಿಕೆಗೂಡು ಬಂಗ್ಲೆಯಲ್ಲಿ ವಾಸವಾಗಿರುತ್ತಾರೆಯಷ್ಟೆ. ಅಲ್ಲಿಂದ ಶೀಘ್ರದಲ್ಲಿ ಜಗನ್ಮೋಹನ ಬಂಗ್ಲೆಗೆ ಬಂದುಬಿಡುವ ಆಲೋಚನೆಯುಂಟಾಗಿದೆಯೆಂದು ಹೇಳಿಕೊಳ್ಳುತ್ತಾರೆ.

ಸುಮಾರು ಮೂವತ್ತುವರ್ಷಗಳ ಕಾಲದವರೆಗೂ ಅರಮನೆಯ ನೌಕರಿಯಲ್ಲಿರುತ ಯೋಗ್ಯನೆನಿಸಿದ್ದ ಒಬ್ಬ ಮನುಷ್ಯನ ಮನೆಯಲ್ಲಿ ಕೆತ್ತಿದ ಒಂದು ಮುತ್ತಿನ ಕಂಠಿಯು ಸಿಕ್ಕಿ ಅವನನ್ನು ದಸ್ತಗಿರಿಯಿಂದ ದರ್ಯಾಫ್ತು ಮಾಡಿದ್ದರಲ್ಲಿ ಅವನ ಮೇಲೆ ಕಳವು ರುಜುವಾತ್ತಾಗಿ ಎರಡು ಸಂವತ್ಸರಗಳ ಕಠಿಣ ಕೈದ್ ಸಜಾ ವಿಧಿಸಲ್ಪಟ್ಟಿತೆಂದು ತಿಳಿಯಬರುತದೆ.

ಈಚೆಗೆ ಕೆಲವು ತಾಲ್ಲೂಕುಗಳಿಗೆ ಸಬ್ ರಿಜಿಸ್ಟ್ರಾರ್‌ಗಳನ್ನು ನೇಮಕಮಾಡಿರುವುದು ಮಾತ್ರವಲ್ಲದೆ ಅವರಿಗೆ ಮ್ಯಾಜಿಸ್ಟ್ರೇಟ್ ಅಧಿಕಾರವನ್ನೂ, ತಾಲ್ಲೂಕ್ ಲಾಕಪ್ ಚಾರ್ಜನ್ನೂ ಕೊಡಬೇಕೆಂಬ ಆಲೋಚನೆ ಯುಂಟಾಗಿರುವಂತೆ ಒಂದು ಪ್ರವಾದ ವುಂಟಾಗಿತ್ತಷ್ಟೆ. ಗವರ್ನ್‌ಮೆಂಟಿನವರು ಸದ್ಯಕ್ಕೆ ಸದರೀ ಆಲೋಚನೆಯಂ ಬಿಟ್ಟು ಅನೇಕಲ್ ಸಬ್ ರಿಜಿಸ್ಟ್ರಾರವರಿಗೆ ಮಾತ್ರ ಲಾಕಪ್ ಚಾರ್ಜ್ ಕೊಟ್ಟರೆಂದು ಅರಿತೆವು

ಅರಮನೆಯಲ್ಲಿ ಬೆಂಕಿ ಬಿದ್ದುದಕ್ಕೆ ಕಾರಣವಂ ಕಂಡು ಹಿಡಿಯುವದಕ್ಕಾಗಿ ಏರ್ಪಟ್ಟ ಕಮಿಟಿಯವರು ತಮ್ಮ ವಿಚಾರಣೆಯಂ ಆಚೆ ಬುಧವಾರದಿನ ಪ್ರಾರಂಭಿಸಿದರು ಒಟ್ಟು ಸುಮಾರು ಎಪ್ಪತ್ತುಮಂದಿ ಸಾಕ್ಷಿಗಳ ದರ್ಯಾಫ್ತು ಮಾಡಲ್ಪಟ್ಟರೆಂದು ಕೇಳುತ್ತೇವೆ. ಕಮಿಟಿಯವರು ಈವರೆಗೆ ಮಾಡಿದ ವಿಚಾರಣೆಯ ಫಲಿತಾಂಶವನ್ನು ಮೇಲಕ್ಕೆ ರಿಪೋರ್ಟ್ ಮಾಡಿದ ಸಂಗತಿ ಇನ್ನೂ ತಿಳಿಯಬರಲಿಲ್ಲವು.

ಮೈಸೂರು ಗವರ್ನ್‌ಮೆಂಟಿನವರು ಸಾಲಿಯಾನಾ ಅನೇಕ ಸಹಸ್ರ ರೂಪಾಯಿಗಳ ವ್ಯಯದಿಂದ ಅಲ್ಲಿಯಲ್ಲಿ ಕ್ವಾಸೀರೀನಾ, ಸುಂದರ ವಸ್ತ್ರರೆ ಎಗ್ಜಿಬಿಷನ್‌ಗಳನ್ನು ಮಾಡಿಸುತಲಿರುವದು ಸರಿಯಷ್ಟೆ. ಈಗಿನ ಫಾರೆಸ್ಟ್ ಕನ್ಸರ್ವೇಟರಾಗಿರುವ ಕರ್ನಲ್ ಕ್ಯಾಂಬರ್ ವಾಕರ್ ಸಾಹೇಬರವರು [illegible]ಮಾತ್ರವಾಗಿ ಬೆಳೆಯುವದಕ್ಕಾಗಿ ದಗಳಿಗಾಗಿ ಖರ್ಚು ಮಾಡುವಣವು ಅನಾವಶ್ಯಕವಾದದ್ದೆಂದು ಭಾವಿಸಿ ಮುಂದೆ ಆರೀತಿ ಮಾಡಬೇಕಾದ್ದಿಲ್ಲವೆಂದು ಹುಕುಂ ಕೊಟ್ಟಿರುವಂತೆ ಕೇಳುತ್ತೇವೆ.

ಕಳೆದ ಗುರುವಾರದದಿನ ಕಾಮ ದಹನವಾದುದರಿಂದ ಆ ಬಗ್ಗೆ ಈ ಸಂಸ್ಥಾನದ ವಿಶಿಷ್ಟ ಇಲಾಖೆಗಳಿಗೂ ರಜಾ ಕೊಡಲ್ಪಟ್ಟಿತ್ತು. ಈ ಹಬ್ಬದಲ್ಲಿ ನಾನಾವಿಧ ವೇಷಗಳಂ ಹಾಕಿಕೊಂಡು ಕುಣಿದಾಡುವಂತ ಜನರಿಗೆ ಆ ಬಗ್ಗೆ ಲೈಸೆನ್ಸು ದುರ್ಲಭವಾಯಿತು. ಇದು ಅಧಿಕಾರಿಗಳು ಮಾಡಿದ ಚಮತ್ಕಾರವೆಂಬುದರಲ್ಲಿ ಸಂಶಯವಿಲ್ಲವು ಪರಂತು ಮುಂದಿನ ಬಾಬಯ್ಯನ ಹಬ್ಬದಲ್ಲಿ ವೇಷಗಳಬಗ್ಗೆ ಲೈಸೆನ್ಸು ಬಾಯಿ ಪ್ರಾಪ್ತಬಹುದಾದ ಮುಸಲ್ಮಾನರಿಗೆ ಲೈಸೆನ್ಸು ಕೊಡದೆ ತಪ್ಪಿಸಿ ಕೊಳ್ಳುವುದಕ್ಕೆ ಯಾವ ಉಪಾಯವಂ ಹೂಡುವರೋ ಅದಂ ನಾವು ಆಸ್ಥೆಯಿಂದ ನಿರೀಕ್ಷಿಸುತಲಿರುವೆವು

ಮೈಸೂರು ಬ್ರಿಟಿಷ್ ಇಂಡ್ಯಾದೇಶದ ಕ್ಷಾಮ ನಿವಾರಣಾರ್ಥದ ದ್ರವ್ಯದ ಫಂಡು

ಮೇಲೆ ವಿವರಿಸಿರುವ ಚಂದಾ ಪಟ್ಟಿ

ಹೆಸರು.	ರೂ	ಅ	ಪೈ
ಘನವನ್ನು ಹೊಂದಿದ ಶ್ರೀಮನ್ಮಹಾರಾಣೀ ರೀಜೆಂಟವರವರು	೧೦,೦೦೦	೦	೦
ಬೆಂಗಳೂರು ಮೆ|| ಎಸ್ ಕಾಮಣ್ಣನವರು	೧,೦೦೦	೦	೦
ಹಾಜೀ ಸರ್ ಅಬ್ದುಲ್ ರಹಮಾನ್ ಸಾಹೇಬರವರು	೩೫೦	೦	೦
ಮೆ|| ಜೆ ಡಬ್ಲ್ಯು ಬೆಸ್ಟ್ ಸಾಹೇಬರವರು	೨೦೦	೦	೦
ಕರ್ನಲ್ ಜೆ. ಪಿ. ಗ್ರಾಂಟ್ ಸಾಹೇಬರವರು	೨೦೦	೦	೦
ಮೆ|| ಸಿ ಮಾಧವರಾಯನವರು	೧೫೦	೦	೦
„ ಎಸ್ ಎಂ ಫ್ರೇಜರ್ ಸಾಹೇಬರವರು	೧೫೦	೦	೦
„ ಸಿ ಶ್ರೀನಿವಾಸಯ್ಯಂಗಾರ್ (ಜು|| ಸೆಕ್ರೆಟರಿ)	೧೫೦	೦	೦
ಮೈಸೂರು ಮಹಾರಾಜಾ ಕಾಲೇಜ್ ಹೈಸ್ಕೂಲ್ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳು	೧೨೫	೦	೦
ಮಹಾರಾಜ ಪಿಳ್ಳೆ ಎಸ್ ಹಸೀನ್ ಭಾಷಾ ದಿವಸದಿ ಬಾರತಮ್ಮ ದೇವಸ್ಥಾನದಲ್ಲಿ ರೆವರೆಂಡ್ ಸಿ ಹೆಚ್ ಮಾಲ್ಟರ್ ಸಾಹೇಬರಿಂದ ವಸೂಲಾದದ್ದು	೧೦೮	೧೩	೬
ಕರ್ನಲ್ ಜೆ ಕ್ಯಾಂಪ್‌ಬೆಲ್ ವಾಕರ್ ಸಾಹೇಬರವರು	೧೦೦	೦	೦
ಮೆ|| ಹೆಚ್. ಜೆ ಬಿ ಭಾಸ್ಕರವರು	೧೦೦	೦	೦
ಕರ್ನಲ್ ಜೆ ಎ ಕ್ಯಾಂಬೆಲ್ ಸಾಹೇಬರವರು	೧೦೦	೦	೦
ಮೆ|| ಡಬ್ಲ್ಯು ಮೆಕ್‌ಚೈಸ್ ಸಾಹೇಬರವರು	೧೦೦	೦	೦
ಮೈಸೂರು ಹಾರ್ಡ್ವಿಕ್ ಕಾಲೇಜಿನ ಕ್ರಿಸ್ತ ವಿದ್ಯಾರ್ಥಿಗಳು ...	೧೦೦	೦	೦
ಮೈಸೂರು ಲಷ್ಕರ್ ಮೊಹಲ್ಲೆಯಲ್ಲಿ ಮ್ಯುನಿಸಿಪಲ್ ಕಮಿಷನರ್ ಮೆ|| ಎಂ ಅನಂತರಾಮಯ್ಯನವರಿಂದ ವಸೂಲಾದದ್ದು	೭೭	೪	೦
ಅಸಿಸ್ಟೆಂಟ್ ಕಮಿಷನರ್ ಮ|| ಬಿ ರಾಮಸ್ವಾಮಯ್ಯಂಗಾರ್ಯರವರು ...	೬೦	೦	೦
ಮೆ|| ಜೆ. ಪಿ. ಪೀರಿಸ್ ಸಾಹೇಬರವರು	೬೦	೦	೦
ಕ್ಯಾಂಬೆಲ್ ನಾಕರ್ ಧರ್ಮಸಂಸ್ಥೆಯವರು	೫೦	೦	೦
ಮೆ|| ಹೆಚ್ ನಂಜರಾಜ ಅರಸಿನವರು	೫೦	೦	೦
„ ಡಿ ಸುಬ್ಬಯ್ಯನವರು ...	೫೦	೦	೦
ಅಬ್ದುಲ್ ಕರೀಂ ಸಾಹೇಬರವರು ...	೫೦	೦	೦
ಮೆ|| ಕೃಷ್ಣ ಅಯ್ಯಂಗಾರ್ ಯವರು	೫೦	೧	೬
ಸಾಹುಕಾರ್ ದಾಸ್ ಜನ್ನದಾಸ್ ಸೇಟ್ ...	೫೦	೦	೦
ನಂದಲಾಲ್ ಶಿವನಾರಾಯಣ್ ಸೇಟ್	೫೦	೦	೦
ಸಾಹುಕಾರ್ ಕಿಶನ್‌ದಾಸ್ ಸೇಟ್ ...	೫೦	೦	೦
ಮಾಗೂವಾಲ್ ಜೀಸಾಸಿಂಗ್ ಸೇಟ್ ..	೫೦	೦	೦
ರೆವರೆಂಡ್ ಡಬ್ಲ್ಯು ಡಬ್ಲ್ಯು ಹೋಲ್ಡ್ಸ್‌ವರ್ತ್ ಸಾಹೇಬರು ಮತ್ತು ಅವರ ಧರ್ಮಸಭೆಯವರು ...	೫೦	೦	೦
ಸಾಹುಕಾರ್ ಲಕ್ಷ್ಮೀಪತಯ್ಯನವರು ...	೫೦	೦	೦
ಲಂಡನ ಆಟದಲ್ಲಿ ಹುಟ್ಟುವ ಆದ್ಯರ ಭಾಗದಲ್ಲಿ ಮೆ|| ಟಿ ಡೇಹಾಂ ಸಾಹೇಬರವರಿಂದ ...	೪೫	೦	೦
ಗಾಡ್‌ಫ್ರೇ ಮೆಸ್ಸೀಯವರು ..	೪೦	೦	೦
ಚೆಯಿರಾಂ ಹಿರಾಸಿಂಗ್ ಸೇಟ್	೩೦	೦	೦
ಮೆ|| ಸಿದ್ದರಾಜ ಅರಸಿನವರು ..	೨೫	೦	೦
ಡಾಕ್ಟರ್ ಟಿ ಸಿ ಅನಂತಾಚಾರ್ಯರವರು ..	೨೫	೦	೦
ಮೆ|| ಟಿ ಜೇಮ್ಸ್ ಸಾಹೇಬರವರು	೨೫	೦	೦
ಅ|| ಇಂಜಿನಿಯರ್ ಮೆ|| ಎನ್ ವೆಂಕಟರಾಮಯ್ಯನವರು	೨೫	೦	೦
ರೆವರೆಂಡ್ ಪಿ ಹೆಚ್ ಗಾಡ್ವಿನ್ ಸಾಹೇಬರವರು	೨೫	೦	೦
ಚೇಲಾರಾಮ್ ಸೇಟ್ .	೨೫	೦	೦
ಮೆ|| ಎಸ್ ಎನ್ ಸುಬ್ರಹ್ಮಣ್ಯ ಅಯ್ಯರವರು	೨೦	೦	೦
ರೆವರೆಂಡ್ ಡಬ್ಲ್ಯು ಡಬ್ಲ್ಯು ಹೋಲ್ಡ್ಸ್‌ವರ್ತ್ ಸಾಹೇಬರವರ ಸ್ನೇಹಿತರು ..	೨೦	೨	೦
ಹುಣಸೂರು ಮೆ|| ಬಿ ಕೃಷ್ಣಪ್ಪನವರು	೧೦	೦	೦
ಮೆ|| ಎಸ್ ನಂಜುಂಡಯ್ಯಂಗಾರ್ರವರು	೧೦	೦	೦
ಮ್ಯುನಿಸಿಪಲ್ ಕಮಿಷನರ್ ಮೆ|| ಕೆ ಎಸ್ ಮಲ್ಲಿಕಾರ್ಜುನಯ್ಯನವರು	೧೦	೦	೦
ಮೆ|| ಮುಕುಂದಯ್ಯ ...	೧೦	೦	೦
„ ಟಾಮಿ ಸಾಹೇಬ್ ಮೊಹಮ್ಮದ್ ಜಾಫರ್	೧೦	೦	೦
„ ಸಿ ಲಕ್ಷ್ಮಣಯ್ಯನವರು ..	೫	೦	೦
„ ಅಲಮೂರು ರಾಮಯ್ಯನವರು ..	೫	೦	೦
ಪಾಲಂಪೂರ್ ವಿದ್ಯಾರ್ಥಿಗಳು .	೫	೦	೦
ಮೆ|| ಸಿ. ವಾಸುದೇವಯ್ಯನವರು ...	೫	೦	೦
„ ಕರಡಿ ಅನಂತರಾಜಯ್ಯನವರು .	೫	೦	೦
ಲಂಡನ ಆಟದಲ್ಲಿ ಹುಟ್ಟುವ ಆದ್ಯರ ಭಾಗದಲ್ಲಿ ಮೆ|| ಟಿ ಡೇಹಾಂ ಸಾಹೇಬರವರಿಂದ ..	೫	೦	೦
ಮೆ|| ಬಿ. ಶ್ರೀಕಂಠಯ್ಯನವರು ..	೧	೦	೦
ಜಮ್ಲ ...	೧೪,೦೯೩	೧	೬

ಪ್ರಜಾ ಪ್ರತಿನಿಧಿ ಸಭಾ ಸ್ಟ್ಯಾಂಡಿಂಗ್ ಕಮಿಟಿ ಪ್ರೊಸೀಡಿಂಗ್ಸ್.

(ಕಳೆದವಾರದ ಶೇಷ)

V. ವ್ಯವಸಾಯದ ಬ್ಯಾಂಕುಗಳ ವಿಷಯವು ಆಮೇಲೆ ಚರ್ಚಿಸಲ್ಪಟ್ಟಿತು. ಈ ಬ್ಯಾಂಕುಗಳಲ್ಲಿ ಇದಕ್ಕೆ ಗುರಿದ ಪ್ರತಿಯೊಬ್ಬನೂ ಬಾಕಿದಾರರದೇಣಿಗೆ ಗುರಿಯಾಗಿರುವಾಗ ಈ ಬ್ಯಾಂಕುಗಳ ಅಭಿವೃದ್ಧಿಗೆ ಇದು ಒಂದು ಪ್ರಬಲವಾದ ತೊಂದರೆಯಾಗುತ್ತದೆ. ಸರ್ಕಾರದವರು ಈ ದೇಶೀ ದಾರರ ಪೈಕಿ ಯಾರು ತಮ್ಮ ಬಡಿಬಡಿಕೆ ಪ್ರಕಾರ ಸಾಲ ಯಾವದಿಲ್ಲವೋ ಅಂಥವರಿಂದ ಬರಬೇಕಾದ ಬಾಕಿಗಳ ರೂಪಗಳನ್ನು ಅನುಸರಿಸಿ, ಕೂಡಲೆ ಸರ್ಕಾರದವರೇ ವಸೂಲಿ ಮಾಡುವುದನ್ನು ಮಾಡಿ ಅವರಿಂದ ಬರಬೇಕಾದ ಮೊಬಲಗಿಗೆ ಇತರರನ್ನು ಉತ್ತರ ವಾದಿಗಳನ್ನಾಗಿ ಮಾಡಿದರೆ ಎಷ್ಟರಮಟ್ಟಿಗೆ ಸ್ವಲ್ಪ ಮಧ್ಯಸ್ಥ ವಾದಬಹುದು ಎಂದು ಮ|| ಆನಮಲೆಯಾರವರು ಸೂಚಿಸಿದ್ದನ್ನು ಮ|| ಎಜಮಾನ ನರಸಿಂಹಯ್ಯನವರು ಅನುಮೋದಿಸಿದರು. ಇದಕ್ಕೆ ಸರ್ವರೂ ಒಪ್ಪಿದರು. ಈ ವಿಷಯ ಬಹುಜನ ಪ್ರಜೆಗಳಿಗೆ ಸಂಬಂಧಪಟ್ಟದ್ದರಿಂದ ಇದರಲ್ಲಿರತಕ್ಕ ಪ್ರತಿ ಕಲಶಗಳನ್ನು ತೀರ್ಮಾನ ಮಾಡತಕ್ಕ ಬಗ್ಗೆ ದಸರಾ ಜನರಲ್ ಮೀಟಿಂಗಿನಲ್ಲಿ ವ್ಯವಸ್ಥೆ ಆಗಬೇಕೆಂದು ಇತ್ಯರ್ಥವಾಯಿತು

VI. ತಿರುಮಕೂಡ್ಲು, ನರಸೀಪುರ, ಕೂಳಲೆ ಮೊದಲಾದ ಗ್ರಾಮನಿವಾಸಿಗಳು ಮತ್ತು ಅಲ್ಲಿನ ಪ್ರತಿನಿಧಿಗಳು ಈ ಕಮಿಟಿಯಿಂದ ಕೊಡಲ್ಪಟ್ಟ ನೋಟೀಸಿನಲ್ಲಿ ಕಂಡ ವಿಷಯಗಳನ್ನು ಕುರಿತು ಮೀಟಿಂಗು ಮಾಡಿ ನಡೆಸಿದ ಪ್ರೊಸೀಡಿಂಗ್ಸ್ ಅದರ ಜೊತೆಯಲ್ಲಿ ಅವರು ಕಳುಹಿಸಿರತಕ್ಕ ಲೆಟರವೂ ಓದಲ್ಪಟ್ಟು ರೆಕಾರ್ಡ್ ಮಾಡಲ್ಪಟ್ಟಿತು.

VII. ಈ ಸ್ಟ್ಯಾಂಡಿಂಗ್ ಕಮಿಟಿಯಲ್ಲಿ ಮಾತ್ರ ಲ್ಪಡತಕ್ಕ ಪ್ರೊಸೀಡಿಂಗ್ಸಿಗೆ ಸರ್ಕಾರದವರು ಯಾವವಿಧವಾದ ಗಮನವನ್ನು ಕೊಡುತ್ತಾರೆಂದು ಮ|| ಅನಂತಾಳ್ವಾರ್ಯರು ವಿಚಾರಿಸಿದರು. ಕಳೆದ ಜನರಲ್ ಮೀಟಿಂಗಿನಲ್ಲಿ ನಡೆದ ಪ್ರೊಸೀಡಿಂಗ್ಸನ್ನು ಗವರ್ನ್‌ಮೆಂಟ್ ಸೆಕ್ರೆಟರಿಯವರು ವೇದಾಂತ್ ಕಡೆಗೆ ತಿರಸ್ಕರಿಸಿದರೆಂಬ ವಿಷಯದಲ್ಲಿ ಆದಕ್ಕಾಗಿ ಖುದ್ದು ಹೋಗಿ ಕೇಂದ್ರಕ್ಕೆ ಸ್ಟ್ಯಾಂಡಿಂಗ್ ಕಮಿಟಿಯವರನ್ನು ಸರ್ಕಾರದವರು ಅಂಗೀಕರಿಸದೆ ಇರುವದರಿಂದ ಕಮಿಟಿಯು ಆಫೀಸಿನಿಂದ ಬರತಕ್ಕ ಲೇಖನಕ್ಕೆ ಗಮನ ಕೊಡುವುದಿಲ್ಲವೆಂಬದಾಗಿಯೂ ಹೇಳಿದರು. ಆದ್ದರಿಂದ ಈ ಕಮಿಟಿಯನ್ನು ಸರ್ಕಾರದವರು ಒಪ್ಪಿರುವಿಲ್ಲವೆಷ್ಟೆ. ಹಾಗಿದ್ದಾಗ್ಯೂ ಈ ಕಮಿಟಿ ಪ್ರೊಸೀಡಿಂಗ್ಸನ್ನು ತಿರಸ್ಕರಿಸುತ್ತಿರಬಹುದೆಂಬದಾಗಿ ತಿಳಿಸಲ್ಪಟ್ಟಿತು. ಅದಕ್ಕೆ ಸೆಕ್ರೆಟರಿಯವರು ಹಾಗಾದರೆ ಈಗಲೂ ಕಳುಹಿಸುವುದು ಆದರೆ ನೀವು ಕಳುಹಿಸತಕ್ಕ ಪ್ರೊಸೀಡಿಂಗ್ಸಿಗೆ ಸರ್ಕಾರದವರು ಗಮನ ಕೊಡುವದಿಲ್ಲವೆಂದು ಹೇಳಿದರು ಎಂದು ಮೆ|| ಪ್ರಸಿಡೆಂಟರು ಅಪ್ಪಣೆ ಕೊಡಿಸಿದರು. ಹಿಂದಿನ ವರುಷದಲ್ಲಿ ನಡೆದ ಸಭೆಗಳು ಬಹಳ ದೂರದಿಂದ ಬರಬೇಕಾದ ಮೂರುನಾಲ್ಕು ದಿನ ಮೀಟಿಂಗು ಮಾಡಿ ಪ್ರೊಸೀಡಿಂಗ್ಸುಗಳನ್ನು ಸರ್ಕಾರಕ್ಕೆ ಕಳುಹಿಸಿ ಪ್ರಯೋಜನವೇನು ಎಂದು ಮ|| ಅಣ್ಣಪ್ಪನವರು ಕೇಳಿದರು. ಸ್ಟ್ಯಾಂಡಿಂಗು ಕಮಿಟಿಯನ್ನು ಮಂಜೂರು ಮಾಡದ ಪಕ್ಷದಲ್ಲಿ ವರ್ಷಕ್ಕೆ ಎರಡ ಸಾರಿ ಪ್ರತಿನಿಧಿ ಸಭೆಯ ಮೀಟಿಂಗು ಆಗಬೇಕೆಂದು ಕೇಳುವುದಕ್ಕೆ ಸರ್ಕಾರದವರು ಅಧಿಕಾರದಲ್ಲಿರತಕ್ಕವರಿಗೆ ಅವಕಾಶವಾಗುವದಿಲ್ಲವೆಂದು ದಿವಾನರವರು ಅಪ್ಪಣೆ ಕೊಡಿಸಿದರು. ಅನೇಕ ಕೆಲಸಗಳಲ್ಲಿ ರೈತರು ಅವಕಾಶವನ್ನು ಮಾಡಿಕೊಂಡು ಮೀಟಿಂಗಿಗೆ ಬರುವದಾದರೆ ಸರ್ಕಾರದವರು ಯಾಕೆ ಅವಕಾಶವನ್ನು ಮಾಡಿಕೊಡುತ್ತು ಎರಡು ಪ್ರತಿನಿಧಿ ಸಭಾ ಮೀಟಿಂಗುಗಳನ್ನು ಮಾಡಿಕೊಡದು ಎಂಬದಾಗಿಯೂ ಹೀಗೆ ಅವಕಾಶ ಮಾಡಿಕೊಳ್ಳುವದಕ್ಕೆ ಆಗದ ಇದ್ದರೆ ಪ್ರಥಮತಃ ಸ್ಟ್ಯಾಂಡಿಂಗ್ ಕಮಿಟಿಯನ್ನು ಮಾಡಿಕೊಳ್ಳಿ ಎಂದು ಹೇಳಿದ ಸರ್ಕಾರದವರೇ ಈ ಕಮಿಟಿಯವರು ಕಳುಹಿಸತಕ್ಕ ಲೇಖನಗಳಿಗೆ ಗಮನ ಕೊಡುವದಿಲ್ಲವೆಂದರೆ ಹೇಗೆ ಎಂದು ಆವಾಗ ಉತ್ತರವಾಗಿಯೂ ಮ|| ಬಿ ಮುನಿಯಪ್ಪನವರು ಹೇಳಿದರು. ಈ ಸ್ಟ್ಯಾಂಡಿಂಗ್ ಕಮಿಟಿಯಿಂದ ಕಳುಹಿಸತಕ್ಕ ಪ್ರೊಸೀಡಿಂಗ್ಸಿಗೆ ಸರ್ಕಾರದವರು ಗಮನ ಕೊಡದೆ ಇರುವದರಿಂದ ಹಾಗೆ ಗಮನ ಕೊಡದೆ ಇದ್ದಮೇಲೆ ಜನಗಳು ಹೇಳತಕ್ಕದನ್ನು ಸರ್ಕಾರದ ಮುಂದಿಡತಕ್ಕ ಬಹಳ ನ್ಯೂನತೆಯನ್ನುಂಟುಮಾಡುತ್ತದೆ ಈ ಸಂಸ್ಥಾನದಲ್ಲಿರತಕ್ಕ ಅತ್ಯಲ್ಪನಾದಂಥಾ ಮನುಷ್ಯನು ಯಾವನಾದರೂ ಒಂದು ಅರ್ಜಿಯನ್ನು ಒರೆದುಕೊಂಡರೂ ಸರ್ಕಾರದವರು ಅದನ್ನು ಪರ್ಯಾಲೋಚಿಸಿ ನ್ಯಾಯವಾಗಿ ಇರುವಂತೆ ಹೇಳಿ ಕೊಡು ಮಾಡಬೇಕು. ಕ್ರಾಂತಿಯನ್ನು ಪ್ರತಿನಿಧಿಯು ಅನೇಕ ಪ್ರಜೆಗಳ ಪಕ್ಷವಾಗಿರಬೇಕಾದ ವಿಷಯಗಳನ್ನು ವಿಜ್ಞಾಪಿಸುವನು. ಇದನ್ನು ಕೇಳುವದು ಸರ್ಕಾರಕ್ಕೆ ಮುಖ್ಯ ಕರ್ತವ್ಯವಾಗಿರುವದು. ಸ್ಟ್ಯಾಂಡಿಂಗ್ ಕಮಿಟಿಯಲ್ಲಿ ಇಂಥಾ ಪ್ರತಿನಿಧಿಗಳು ಸೇರಿ ತಮ್ಮ ಅಭಿಪ್ರಾಯಗಳನ್ನು ಸರ್ಕಾರಕ್ಕೆ ವಿಜ್ಞಾಪಿಸುವರು. ಪ್ರತಿಯೊಬ್ಬ ರೈತನ ಅಭಿಪ್ರಾಯಗಳನ್ನು ಕೇಳಿ ನ್ಯಾಯವಾದ ತೀರ್ಪನ್ನು ಮಾಡುವವ

ಕರ್ತವ್ಯವಾಗಿ ಉಳ್ಳ ಸರ್ಕಾರದವರು ಈ ಸ್ಟ್ಯಾಂಡಿಂಗ್ ಕಮಿಟಿ ಪ್ರೊಸೀಡಿಂಗ್ಸಿಗೆ ಗಮನ ಕೊಡುವದಿಲ್ಲವೆಂದು ಹೇಳುವದು ಧರ್ಮವೇ ? ಈ ಸ್ಟ್ಯಾಂಡಿಂಗ್ ಕಮಿಟಿಗೆ ಪ್ರಜಾಪ್ರತಿನಿಧಿಗಳು ಬಹುಮಂದಿ ಬಪ್ಪಿದಾಗ್ಯೂ ಎಲ್ಲಾ ಪ್ರಜಾಪ್ರತಿನಿಧಿಗಳೂ ಸೇರಿ ಈ ಸ್ಟ್ಯಾಂಡಿಂಗ್ ಕಮಿಟಿ ಇರಬೇಕೆಂದು ತಿಳಿಸಿದರೆ ಬಗ್ಗೆ ಈ ಕಮಿಟಿಯನ್ನು ಮಂಜೂರು ಮಾಡುತ್ತೀವೆ. ಪ್ರತಿನಿಧಿಗಳಲ್ಲಿ ಒಬ್ಬನು ಬಪ್ಪದೆ ಇದ್ದಾಗ್ಯೂ ಈ ಕಮಿಟಿಯನ್ನು ಮಂಜೂರು ಮಾಡುವದಿಲ್ಲವೆಂಬದಾಗಿ ಸರ್ಕಾರದವರು ಅಪ್ಪಣೆ ಕೊಡಿಸಿದರೆ, ಹೀಗೆ ಎಲ್ಲರೂ ಈ ಕಮಿಟಿಯು ಪಕ್ಷವಾಗಿ ಇರುವದು ಸಾಧ್ಯವೇ ? ಇದು ಅಸಾಧ್ಯವಾಗುವಂತೆ ಮಾಡ ವದು ಈ ಕಮಿಟಿಯು ಪ್ರತಿಕಕ್ಷಿಗಳಿಗೆ ದೊತ್ತದೇ ? ಪ್ರಪಂಚದಲ್ಲಿ ಯಾವದೇಶದಲ್ಲೇ ಆಗಲಿ ಹೀಗೆ ಎಲ್ಲರೂ ಒಪ್ಪುವಂಥ ವಿಷಯವು ಇರುತ್ತದೆಯೇ ? ಅದು ಹಾಗಿರಲಿ. ನಾವು ಮೀಟಿಂಗುಗಳನ್ನು ಮಾಡಿ ಪ್ರೊಸೀಡಿಂಗ್ಸ್‌ಗಳನ್ನು ಮಾಡಿ ನಮ್ಮ ಕಮಿಟಿ ರೂಲು ಪ್ರಕಾರ ಸರ್ಕಾರಕ್ಕೂ, ಶ್ರೀಮನ್ಮಹಾರಾಜ್ಞೀಯವರಿಗೂ ಬ್ರಿಟಿಷ್ ರೆಸಿಡೆಂಟರವರಿಗೂ ಕಳುಹಿಸುತ್ತಾ ಬರೋಣ, ಸರ್ಕಾರದವರು ದಯವಿಟ್ಟು ನಾವು ಮಾಡತಕ್ಕ ನ್ಯಾಯವಾದ ಪ್ರಾರ್ಥನೆಗಳಿಗೆ ಗಮನವನ್ನು ಕೊಟ್ಟೇ ಕೊಡುವರು ; ಕೊಡದೇಇದ್ದ ಪಕ್ಷದಲ್ಲಿ ಹಾಗೆ ಅವರು ಗಮನವನ್ನು ಕೊಡತಕ್ಕ ಕಾಲವನ್ನೂ ಸಂದರ್ಭಗಳನ್ನೂ ನಿರೀಕ್ಷಿಸುತ್ತ ನಮ್ಮ ಕಮಿಟಿ ಕೆಲಸಗಳನ್ನು ನಾವು ಮಾಡುತ್ತಾ ಇರೋಣ, ಎಂಬದಾಗಿ ಮ|| ರಾಮಣ್ಣನವರು ಹೇಳಿದರು. ಈ ಕಮಿಟಿಯನ್ನು ನಾವು ದಿವಾನರವರ ಅಭಿಪ್ರಾಯಕ್ಕೆ ಅನುಸಾರವಾಗಿ ಮಾಡಿ ಇರುತ್ತೇವೆ. ಅವರಿಗೆ ಈ ಕಮಿಟಿಯು ಪ್ರತ್ಯಕ್ಷವಾಗಿ ಗೊತ್ತಾಗಿರುತ್ತದೆ. ಈ ಕಮಿಟಿಯ ವಿಷಯದಲ್ಲಿ ಅವರಿಗೆ ಸಂಪೂರ್ಣವಾದ ಅಭಿಮಾನವು ಇದ್ದೇ ಇರಬಹುದು ವಿಷಮವಾದ ಕೆಲವು ಸಂದರ್ಭ ಸಂಯೋಗಗಳಿಂದ ನಮಗೆ ಅವರ ಅಭಿಪ್ರಾಯವು ತಪ್ಪಿ ಇದ್ದು ತಿರಿಗಿ ಆ ಅಭಿಮಾನವು ಬರಬಹುದು ಆದ್ದರಿಂದ ಈಗಲೂ ನಮ್ಮ ರೆಜಲ್ಯೂಷನ್‌ಗಳನ್ನು ಗವರ್ನಮೆಂಟಿಗೆ ಕಳುಹಿಸಿ ಅವುಗಳ ಗುಣಾಗುಣಗಳನುಸಾರವಾಗಿ ತೀರ್ಮಾನವನ್ನು ಮಾಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಬೇಕೆಂದು ಮ|| ಸದಾಶಿವರಾಯರವರು ಸೂಚಿಸಿದ್ದನ್ನು ಮ|| ಕೆ. ರಂಗಯ್ಯಂಗಾರ್ರವರು ಅನುಮೋದಿಸಿದರು ಇದಕ್ಕೆ ಸರ್ವರೂ ಒಪ್ಪಿದರು.

VIII ಇನಾಮತಿ ಬಾಲನೇತಿನ ವಿಷಯದಲ್ಲಿ ಈಗ ವಿಚಾರಣೆ ನಡೆಯುತಲಿದೆ, ಈ ವಿಚಾರಣೆ ಪೂರೈಸುವವರಿಗೂ ಈ ಬಾಲನೇತ್ ಸಂಬಂಧವಾದ ಕಂದಾಯದ ವಸೂಲಿಯನ್ನು ನಿಲ್ಲಿಸುವಂತೆ ಸರ್ಕಾರದವರು ಪ್ರಾರ್ಥಿಸಲ್ಪಡಬೇಕೆಂದು ಮ|| ಸದಾಶಿವರಾಯರವರು ಸೂಚಿಸಿದ್ದನ್ನು ಮ|| ರಾಮದಾಸಪ್ಪನವರು ಅನುಮೋದಿಸಿದರು, ಇದಕ್ಕೆ ಸರ್ವರೂ ಒಪ್ಪಿದರು

IX ಈ ಪ್ರೊಸೀಡಿಂಗ್ಸಿನ ಕಾಪಿಗಳನ್ನು ಶ್ರೀಮನ್ಮಹಾರಾಜ್ಞೀ ರೀಜಂಟರವರಿಗೂ, ಬ್ರಿಟಿಷ್ ರೆಸಿಡೆಂಟರವರಿಗೂ, ಗವರ್ನಮೆಂಟಿನವರಿಗೂ, ವರ್ತಮಾನ ಪತ್ರಿಕೆಗಳಿಗೂ ಕಮಿಟಿ ರೂಲ್ಸುಗಳಿಗನುಸಾರವಾಗಿ ಕಳುಹಬೇಕೆಂದು ನಿರ್ಧರಿಸಲಾಯಿತು

ಪ್ರೆಸಿಡೆಂಟರವರಿಗೆ ವಂದನ ಪೂರ್ವಕವಾಗಿ ಈ ಕಮಿಟೀ ಮೀಟಿಂಗು ಬರಖಾಸ್ತು ಮಾಡಲ್ಪಟ್ಟಿತು.

[illegible] ಮೈಸೂರು.	ಟಿ ಸಿಡೆಂಟ್, ಪ್ರಜಾಪ್ರತಿನಿಧಿಸಭಾ ಸ್ಟ್ಯಾಂಡಿಂಗ್ ಕಮಿಟಿ, ಮೈಸೂರು

SUMMARY OF NEWS.
ವೃತ್ತಾಂತ ಸಂಗ್ರಹವು.

ಕಳೆದ ಗುರುವಾರ ಮುಂಬಯಿಯಲ್ಲಿ ಚಂದ್ರಭಾಗದೊಳಗಿನ ಬಂಗಲೆಗೆ ಬೆಂಕಿಹತ್ತಿ ಅದರೊಳಗಿನ ಯಾವತ್ತು ಸಾಮಾನುಸಹಿತ ಸುಟ್ಟು ಬೂದಿಯಾದದರಿಂದ ಅಜಮಾಸು ೩—೪ ಲಕ್ಷ ರೂಪಾಯಿಗಳು ಲುಕ್ಸಾನಿಯಾಗಿರುತ್ತದೆ

ಲಾಹೋರಿನಲ್ಲಿ ನಡೆದ ನಾಯಿಗಳ ಪ್ರದರ್ಶನಕ್ಕೆ [illegible] ನಾಯಿಗಳು ಬಂದಿದ್ದವು ಹಿಂದುಸ್ಥಾನದಲ್ಲಾದ ಈ ತರದ ಪ್ರದರ್ಶನಗಳಲ್ಲೆಲ್ಲಾ ಇದು ಬಹಳ ದೊಡ್ಡದೆಂದು ಹೇಳುತ್ತಾರೆ. ಧೋಲಪುರ ಮತ್ತು ಪಾಟಿಯಾಲ ದೇಶದ ನಾಯಿಗಳಿಗೆ ಅನೇಕ ಬಹುಮಾನಗಳು ಸಿಕ್ಕಿದವು

ಜೀರಾತ್ತಿನಲ್ಲಿ ಬ್ಯೂಬೋನಿಕ್ಪ್ಲೇಗಿನ ಜಾತಿಯ ಮತ್ತೊಂದು ರೋಗವು ಹುಟ್ಟಿ ಅನೇಕ ಜನಗಳನ್ನು ಕೊಲ್ಲುತ್ತಿದೆ ಇದರಿಂದ ಗಂಟಲು ಬಾತುಕೊಂಡು ಬಹಳ ಪ್ರಬಲವಾದ ಜ್ವರವು ಬರುತ್ತದೆ ಆಮೇಲೆ ಪ್ರಾಯಶಃ ರೋಗಿಯು ಸಾಯುತ್ತಾನೆ

ಹೊನ್ನಾವರ ತಾಲ್ಲೂಕ ಬೆಂಗ್ರೆ ಗ್ರಾಮದ ಪೈಕಿ ಆಯಿಕಿಣಿ ರಾಮಪ್ಪನ ತೋಟದಲ್ಲಿ ಒಂದೇ ಬಾಳೆ ಗಿಡಕ್ಕೆ ೩ ಬದಿಯಿಂದ ೩ ಸುಳಿಗಳು ಬಂದು, ೩ ಬಾಳೆ ಗೊನೆಗಳು ಬಂದು, ಅದರ ಪೂರಾ ಸುಳಿಗಳು ಬಂದಾಗದೆ ೭ ಕೊನೆ ಬಂದು ಸುಳಿಗಳೆಲ್ಲ ಬಂದಾದವು, ಇಂತ ಅದ್ಭುತ ವಾರ್ತೆಯು ಎಂದೂ ಕೇಳಿಲ್ಲವು—ವಿದ್ಯಾಸಂತಾನ ಪತ್ರ,

ಕಲ್ಕತ್ತೆಯ ಟಂಕಸಾಲೆಯಲ್ಲಿ ದಿನ ಒಕ್ಕೆ ೧೦|| ಘಂಟೆಯ ಹೊತ್ತಿನ ಪ್ರಕಾರ ಕೂಲಿಯವರು ಕೆಲಸ ಮಾಡಿ ನಾಣ್ಯಗಳನ್ನು ಅಚ್ಚು ಹಾಕುತ್ತಿದ್ದಾರೆ. ಕ್ಷಾಮಪೀಡಿತರಾಗಿ ೦ ಬೀಳೆ ಕಾಮಗಾರಿಗಳಲ್ಲಿ ಕೆಲಸ ಮಾಡುತ್ತಿರುವ ಜನರಿಗೆ ಸರ್ಕಾರದವರು ದಿನವಹಿ ತಾಂಬ್ರದ ನಾಣ್ಯಗಳನ್ನು ಕೂಲಿಗಾಗಿ ಕೊಡಬೇಕಷ್ಟೆ ಆದಕ್ಕಾಗಿಯೇ ಹೊಸತರದ ನಾಣ್ಯಗಳನ್ನು ಆ ಟಂಕಸಾಲೆಯಲ್ಲಿ ಅಚ್ಚು ಹಾಕಿಸುತ್ತಿರುವರು. ಹೀಗೆ ದಿನ ಒಕ್ಕೆ ೧೦—೧೧ ಲಕ್ಷ ತಾಂಬ್ರದ ನಾಣ್ಯಗಳು ತಯಾರಾಗುತ್ತಿವೆ

ರಾವಲ ಪಿಂಡಿಯಲ್ಲಿ ಭಯಂಕರವಾದ ರೈಲ್ವೆ ಕಳುವು ನಡೆಯಿತು ಒಂದು ಗುಂಪಿನ ಕಳ್ಳರು ರಾತ್ರಿ ಹೋಗುತ್ತಿದ್ದ ರೈಲನ್ನು ಹಿಡಿದು ಒಳಕ್ಕೆ ಹೋಗಿ ಗಾರ್ಡು ಎಂಬ ರೈಲ್ವೆ ಅಧಿಕಾರಿಯನ್ನು ಹಿಡಿದು ಕಟ್ಟಿಹಾಕಿ ಅವನ ವಶದಲ್ಲಿದ್ದ ಹಣದ ಪೆಟ್ಟಿಗೆಯನ್ನು ಒಡೆದು ಹಣವನ್ನೆಲ್ಲಾ ದೋಚಿಕೊಂಡರು ಆಗ ಆ ಗಾರ್ಡು ಬಲಾತ್ಕಾರವಾಗಿ ರೈಲಿನ ತಂತಿಯನ್ನು ಬದ್ದಿ ಗಾಡಿಯನ್ನು ನಿಲ್ಲಿಸಿ ಬಿಟ್ಟನು ಕೂಡಲೆ ಕಳ್ಳರು ಗಾಡಿಯಿಂದ ಧುಮುಕಿ ಓಡಿ ಹೋದರು, ಆದರೆ ಆ ರೈಲ್ವೆ ಅಧಿಕಾರಿಗೆ ಪ್ರಾಣ ಉಳಿದು ಬದುಕುವದೇ ಕಷ್ಟವಾಗಿದೆ.

ಲಾಹೋರಿನಲ್ಲಿ ಕಳೆದ ವಾರದಲ್ಲಿ ಅಲ್ಲಿನ ಸನಾತನ ಧರ್ಮ ಸಭೆಯ ಎಂಟನೇ ವಾರ್ಷಿಕ ಮಹೋತ್ಸವವು ನೆರವೇರಿತು ವೇದದ ಉತ್ಸವವು ಪಟ್ಟಣದ ಎಲ್ಲಾ ಬೀದಿಗಳಲ್ಲಿಯೂ ಬಹಳ ವಿಜೃಂಭಣೆಯಿಂದ ಮೆರೆಯಿತು ಇಂತಹ ಮೆರವಣಿಗೆಯು ಆ ಪೂರಿನಲ್ಲಿ ಎ ದೂ ಆಗಲಿಲ್ಲವೆಂದು ಹೇಳುತ್ತಾರೆ ಸಭೆಗೆ ಆ ಪ್ರಾಂತದ ಅನೇಕ ಪ್ರಸಿದ್ಧ ಪಂಡಿತರು ಬಂದಿದ್ದರು. ಅವರಲ್ಲಿ ಪಂಡಿತದೀನದಯಾಳಶರ್ಮರೆಂಬವರು ಬಹಳ ಚನ್ನಾಗಿ ಉಪನ್ಯಾಸವಮಾಡಿದರು ಲಾಹೋರಿನಲ್ಲಿ ಒಂದು ಸನಾತನ ಸಭಾ ಕಾಲೇಜನ್ನು ಸ್ಥಾಪಿಸುವದಕ್ಕೋಸ್ಕರ ಸುಮಾರು ೧೦ ಸಾವಿರ ರೂಪಾಯಿಗಳು ಆಕೂಡ್ಲೆ ಜಮಾಯಿಸಿದವು

ಮದರಾಸ ಸರ್ಕಾರದವರು ತಾಲ್ಲೋಕು ಬೋರ್ಡುಗಳ ಹತ್ತರ ರೈತರು ತಮ್ಮ ಕೆಲಸಕ್ಕಾಗಿ ಕಾದಿರುತ್ತಾರೆಂದಲೂ ಅವರಿಗೆ ನಿಲ್ಲುವದಕ್ಕೆ ನೆರಳಿಲ್ಲವೆಂತಲೂ ತಿಳಿದು ಅವರಿಗಾಗಿ ಒಂದೊಂದು ಕಟ್ಟಡವನ್ನು ಕಟ್ಟಿಕೊಡ ಬೇಕೆಂದು ತೀರ್ಮಾನಿಸಿರುತ್ತಾರಷ್ಟೆ ಈಗ ಹೊಲೆಯರು ಮಾದಿಗರನ್ನು ಮೇಲ್ಕಂಡ ಕಟ್ಟಡದಲ್ಲಿ ರೈತರು ಸೇರಿಸುವದಿಲ್ಲವೆಂತಲೂ ಆದ್ದರಿಂದ ಹೊಲೆಯರಿಗಾಗಿಯೂ ಪ್ರತ್ಯೇಕವಾದ ಕಟ್ಟಡಗಳನ್ನು ಸರ್ಕಾರದವರು ಕಟ್ಟಿಸಿಕೊಡಬೇಕಾದದ್ದು ಬಹು ಆವಶ್ಯಕವೆಂತಲೂ ಈ ಜಾತಿಯವರನ್ನು ಉತ್ತಮ ಸ್ಥಿತಿಗೆ ತರುವದಕ್ಕಾಗಿ ಸರ್ಕಾರದವರೂ ಪ್ರಯಾಸ ಪಡಬೇಕೆಂತಲೂ ಮದರಾಸಿ ಪತ್ರಿಕೆಯಲ್ಲಿ ಬರದಿದೆ

ಲಾಹೋರ ಪಟ್ಟಣದಲ್ಲಿ ಆರ್ಯ ಸಮಾಜದ ಬೋಧಕರಾಗಿದ್ದ ಪಂಡಿತ ಲೇಖ್ರಾಮ ಎಂಬವರನ್ನು ಕಳೆದ ೬ನೇ ತಾರೀಖಿನ ದಿನ ಒಬ್ಬ ಮುಸಲ್ಮಾನನು ಕೊಂದು ಹಾಕಿದನು ಊರಿನಲ್ಲೆಲ್ಲಾ ಹಿಂದೂ ಜನರ ಮನಸ್ಸು ಬಹಳ ಕಳವಳ ಪಡುತಿದೆ, ಕಳೆದ ಭಾನುವಾರ ಆ ಬೋಧಕನ ಶವವನ್ನು ಹಿಂದುಗಳು ಮೆರವಣಿಗೆಯಿಂದ ಹೊತ್ತುಕೊಂಡು ಹೋದರು ಸುಮಾರು ೧೦ ಸಹಸ್ರ, ಪ್ರಜೆಗಳಿಗಿಂತಲೂ ಹೆಚ್ಚು ಜನ ಸೇರಿದ್ದರು, ಅಂಗಡಿ ಬೀದಿಯಲ್ಲಿ ವರ್ತಕರು ಜೇನದ ಮೇಲೆ ಅತರನ್ನೂ, ಪುಷ್ಪಗಳನ್ನೂ ಎರಚುತ್ತಿದ್ದರು ಘಾತನನು ಕೊಂದವನು ತಪ್ಪಿಸಿಕೊಂಡಿರುತ್ತಾನೆ, ಅವನನ್ನು ಹಿಡಿದು ಕೊಟ್ಟವರಿಗೆ ೧ ಸಾವಿರ ರೂಪಾಯಿ ಇನಾಮು ಕೊಡುತ್ತೇವೆಂದು ಪ್ರಸಿದ್ಧ ಮಾಡಿರುವರು ಹಿಂದುಗಳು ಸುಮಾರು ೩ ಸಾವಿರದ ವರೆಗೆ ಸೇರಿ ಸಭೆ ಮಾಡಿ ಆತನ ಹೆಸರು ಖ್ಯಾತಿಗೊಳಿಸುವದಕ್ಕೆ ಒಂದು ಫಂಡು ಏರ್ಪಾಡು ಮಾಡಿರುವರು ಮತ್ತು ಕೊಲ್ಲಿಸಿದವರ್ಯಾರೆಂದು ವಿಚಾರಿಸುವದಕ್ಕೂ, ಕೊಂದವನನ್ನು ಹಿಡಿಯುವದಕ್ಕೂ ಹಿಂದುಗಳೆಲ್ಲಾ ಪ್ರಯತ್ನಪಡಬೇಕೆಂದು ತೀರ್ಮಾನಿಸಿದರು.

ನೋಟಿಸ್.

ಸನ್ ೧೮೯೭ನೇ ಇಸವಿ ಫೆಬ್ರವರಿ ತಾರೀಖು [illegible]ರಲ್ಲು ಮೈಸೂರಿನಲ್ಲಿ ಶ್ರೀಮನ್ಮಹಾರಾಣೀ ರೀಜೆಂಟರವರ ಮತ್ತು ಬ್ರಿಟಿಷ್ ರೆಸಿಡೆಂಟರವರ ಪ್ರೋತ್ಸಾಹದಿಂದಲ್ಲಿ ದಿವಾನ್ ಸರ್. ಕೆ. ಶೇಷಾದ್ರಿ ಅಯ್ಯರ್ ಕೆ. ಸಿ. ಎಸ್. ಐ ಯವರು ಅಗ್ರಾಸನವನ್ನು ವಹಿಸಿ ನಡೆಸಿದ ಜನರಲ್ ಮೀಟಿಂಗ್‌ನಲ್ಲಿ ಇಂಡಿಯಾ ದೇಶದ ಕ್ಷಾಮ ನಿವಾರಣೆ ಧರ್ಮ ಸಹಾಯದ ಫಂಡು ಬಗ್ಗೆ ಮೈಸೂರಲ್ಲಿ ಒಂದು ಬ್ರಾಂಚ ಏರ್ಪಾಡು ಮಾಡಲ್ಪಟ್ಟಿದೆ

ಈ ಫಂಡಿಗೆ ಚಂದಾ ವೊಬಲಗು ಕೊಡಲು ಅಪೇಕ್ಷಿಸುವವರು ಮೈಸೂರಲ್ಲಿ ಆನರರಿ ಟ್ರಜರರ್ ಮ|| ಟಿ. ಜೆ. ಫ್ರಾ ಯವರಲ್ಲಾದರು ಅಥವಾ ಆಯಾ ಡಿಸ್ಟ್ರಿಕ್ಟಿನಲ್ಲಿ ವಸೂಲು ಮಾಡಲು ಅಪೇಕ್ಷಿಸಲ್ಪಟ್ಟಿರುವ ಡಿಪ್ಯುಟಿ ಕಮಿಷನರವರಲ್ಲಾದರು ಕಳುಹಿಸಬೇಕು

(Signed) S M FRASER, I C S,
C MADIAH,
5th March 1897 Honorary Secretaries

NOTICE.

VIDYASARA SANGRAHA.
A TREATISE ON THE PRINCIPLES OF
HINDU MEDICINE

Price, including Postage Rs 5-0-0

ವೈದ್ಯಸಾರಸಂಗ್ರಹ.

ಇದು ಚರಕ, ವಾಗ್ಭಟ, ಸುಶ್ರುತ, ಹಾರೀತಾದ್ಯನೇಕ ಪೂರ್ವಗ್ರಂಥಗಳ ಸಂಗ್ರಹ ರೂಪವಾಗಿರುತಿದೆ.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಹಾಸಲ್ ಸಹಿತ ಪ್ರತಿ ಒಕ್ಕೆ ೫—೦—೦

ಬೇಕಾದವರು ಬೆಂಗಳೂರು ಕರ್ನಾಟಕ ಪ್ರೆಸ್ ಪ್ರೊಪ್ರೈಟರವರಿಗೆ ಬರೆದು ತರಿಸಿಕೊಳ್ಳಬಹುದು.

BANGALORE CITY MUNICIPALITY.
ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ
ನೋಟೀಸ್.

ತಾರೀಖ್ ೧೫ನೇ ಮಾರ್ಚಿ ೧೮೯೭

ಸನ್ ೧೮೯೭ನೇ ಇಸವಿ ಮಾರ್ಚಿ ೨೬ನೇ ತಾರೀಖ್ ಶುಕ್ರವಾರದ ದಿನ ಬೆಳಿಗ್ಗೆ ೩|| ಘಂಟೆಗೆ ಬೆಂಗಳೂರು ಸಿಟಿ ಮ್ಯುನಿಸಿಪಲ್ ಕಮಿಷನರಗಳು, ಕೋಟೆಯೊಳಗಿರುವ ತಮ್ಮ ಆಫೀಸಿನಲ್ಲಿ ಸಾಮಾನ್ಯ ಸಭೆಸೇರುವಾಗ ಇದರಡಿ ತಿಳಿಸಲ್ಪಡುವ ಕೆಲಸಗಳು ನಡೆಸಲ್ಪಡುವವು —

೧ ಸನ್ ೧೮೯೭ನೇ ಇಸವಿ ಫೆಬ್ರವರಿ ತಿಂಗಳ ನಗದು ಜಮಾಖರ್ಚಿನ ಲೆಕ್ಕ, ಮರಣಲೆಕ್ಕ, ಮನೆಗಳಿಗೆ ಹೋಗಿ ಚಿಕಿತ್ಸೆಮಾಡುವ ಮೆಡಿಕಲ್ ಆಫೀಸರರ ಲೆಕ್ಕ ತಗಾದೆ ವಸೂಲಿ ಮತ್ತು ಬಾಕಿ ಪಟ್ಟಿ, ಕಾಮಗಾರಿಗಳ ಅಭಿವೃದ್ಧಿಯನ್ನು ಕುರಿತ ರಿಪೋರ್ಟು, ಶ್ರೀನಿವಾಸ ಮಂದಿರದ ಛತ್ರದಲ್ಲಿ ಊಟಮಾಡಿದ್ದ ಜನರನ್ನು ಕುರಿತ ಯಾದಿ, ಸಿಟಿ ಮ್ಯುನಿಸಿಪಲ್ ಇಂಗ್ಲಿಷ ಮತ್ತು ಕನ್ನಡ ಸ್ಕೂಲುಗಳ ಲೆಕ್ಕಗಳು, ಸಾಂಕ್ರಾಮಿಕ ರೋಗ ಚಿಕಿತ್ಸೆ ಮಾಡಿದವರ ಲೆಕ್ಕ, ದೀಪಗಳನ್ನು ಕುರಿತ ರಿಪೋರ್ಟು ಸಂಗ್ರಹ, ಪ್ರಸವಾಸ್ಪತ್ರೆಯ ಲೆಕ್ಕ ಲಂಗರುಖಾನೆಯ ಲೆಕ್ಕ, ದಳವಾಯಿ ಲೆಕ್ಕ, ಮತ್ತು ನಾಯಿಗಳನ್ನು ಕೊಲ್ಲುವದಕ್ಕೆ ಕೊಟ್ಟ ಇನಾಮುಗಳ ಪಟ್ಟಿ

೨ ಈಗ ಮ್ಯುನಿಸಿಪಾಲಿಟಿ ಮಂಜೂರುಮಾಡಿರುವ ಕೊಡಲ್ಪಡುವ ೪೦೦ ರೂಪಾಯಿಗಳಿಂದ, ಲಕ್ಷ್ಮಿ ಸತ್ರ ದಲ್ಲಿ ನಡೆಯುವದಲ್ಲದೆ, ೭ ದಿನ್ನದು ದಿನ ಬಡ ವಿದ್ಯಾರ್ಥಿಗಳಿಗೆ ಅನ್ನ ಹಾಕಿಸುವದಕ್ಕೆ ಪ್ರತ್ಯೇಕವಾಗಿ ಯೋಜನೆ ಮಾಡಬೇಕೆಂದು [illegible] ಸನ್ ೧೮೯೬ನೇ ಇಸವಿ [illegible] ನೇ ತಾರೀಖಿನ್ನ ಬೋರ್ಡಿನವರು ಮಾಡಿದ [illegible]ನೇ ನಂಬರ ನಿರ್ಣಯವನ್ನನುಸರಿಸಿ ಮಂಜೂರುಮಾಡಲ್ಪಟ್ಟ [illegible] ನಡೆಸಿದ ಪ್ರೊಸೀಡಿಂಗ್ಸ್

೩ ೧೮೯೬—೯೭ನೇ ಇಸವಿಯ ಜಮಾಖರ್ಚಿನ ಬಡ್ಜೆಟ್ಟು ಮುಸವಿದಾ ಅಂದಾಜ್ ಲೆಕ್ಕ

೪ ಬೆಂಗಳೂರು ಟೌನ್ ಮ್ಯುನಿಸಿಪಲ್ ರೆಗ್ಯುಲೇಷನ್ ೧೮ನೇ ಸೆಕ್ಷನ್ನಲ್ಲಿ ತಿಳಿಸಲ್ಪಟ್ಟಿರುವಂತೆ [illegible]ಯನ್ನು [illegible] ತರದೇಳಿದು ಸ್ಥಳವಿಟ್ಟು ಕೊಟ್ಟ ಲಭಿಸುವಯವನ್ನು ಕುರಿತು ಆಲೋಚಿಸುವದಕ್ಕಾಗಿ, ೧೮೯೭ನೇ ಇಸವಿ ಮಾರ್ಚಿ ೮ನೇ ತಾರೀಖು [illegible]ನವರು ಮಾಡಿದ ಪ್ರೊಸೀಡಿಂಗ್ಸ್‌ಗಳ ೧೧ನೇ ರೆಜೊಲ್ಯೂಷನ್ ಅನುಸರಿಸಿ ಮೊಕರರ್ಮಾಡಲ್ಪಟ್ಟ ಸಬ್ ಕಮಿಟಿಯವರು ನಡೆಸಿದ ಪ್ರೊಸೀಡಿಂಗ್ಸ್

೫ ಸಿವಿಲ್ ಅಂಡ್ ಮಿಲಿಟರಿ ಸ್ಟೇಷನ್ ಮ್ಯುನಿಸಿಪಾಲಿಟಿಯಲ್ಲಿ ಅವರ ಜಮೀನುಗಳು ತರಲ್ಪಟ್ಟಿರುವ ರೀತಿಯಲ್ಲಿ, ಮನೆಗಳ ಮಾಲೀಕತ್ವವನ್ನು ಕುರಿತ ಉಪನಿಬಂಧನೆಗಳನ್ನು [illegible] ತರುವ ವಿಷಯವನ್ನು ಕುರಿತು ಯೋಚಿಸತಕ್ಕ ಬಗ್ಗೆ ೧೮೯೭ನೇ ಇಸವಿ ಮಾರ್ಚಿ ೮ನೇ ತಾರೀಖಿನಲ್ಲಿ ಬೋರ್ಡಿನವರು ನಡೆಸಿದ ಪ್ರೊಸೀಡಿಂಗ್ಸಿನ [illegible]ನೇ ನಿರ್ಣಯವನ್ನು ಅನುಸರಿಸಿ ನೇಮಕವಾಗಲ್ಪಟ್ಟ ಸಬ್ ಕಮಿಟಿಯವರು ನಡೆಸಿದ ಪ್ರೊಸೀಡಿಂಗ್ಸ್

೬. ೧೮೯೭ ೯೮ನೇ ಇಸವಿಯ ಜಮಾ ಖರ್ಚನ್ನು ಕುರಿತ ಸಪ್ಲಿಮೆಂಟಲ್ ಬಡ್ಜೆಟ್ ಅಂದಾಜ್ ಲೆಕ್ಕ

೭ ಮ್ಯುನಿಸಿಪಲ್ ಎಗ್ಜಿಕ್ಯುಟಿವ್ ಇಂಜನಿಯರರ ಕೆಲಸವನ್ನು ನಡೆಸಬೇಕಾದ ವಿಷಯದಲ್ಲಿ ಸೂಚಿಸಲ್ಪಟ್ಟಿರುವ ತಾತ್ಕಾಲಿಕ ಯೋಜನೆಗಳನ್ನು ಕುರಿತ ಯಾದಿ

೮ ಕಳೆದ ಜನವರಿ ತಿಂಗಳಲ್ಲಿ ನಡೆಸಲ್ಪಟ್ಟ ಸಾರ್ವಜನಿಕ ಮಾರ್ಕೆಟ ವಹಿವಾಟಿಗೆ ಸಂಬಂಧಪಟ್ಟ ಲೆಕ್ಕಗಳನ್ನು ಕುರಿತ ಯಾದಿ

೯ ಮ|| [illegible]ಗೆ ವಿಕ್ರಯ ಮಾಡಿದ ಜಾಗದ ಸಂಬಂಧ ಮ್ಯುನಿಸಿಪಾಲಿಟಿ ಮಾಡಿಕೊಂಡ ಕೆಲವು ನಿವೇಶನಗಳಿಗೆ ಬದಲಾಗಿ ಕಾಶೀ ವಿಶ್ವೇಶ್ವರ ದೇವಸ್ಥಾನದ ಬೀದಿಯ ಹತ್ತಿರ ಕೆಲವು ನಿವೇಶನಗಳನ್ನು ಕೊಡಬೇಕೆಂದು ಸದರೀ ವರದಮ್ಮಯ್ಯಂಗಾರ್ರವರ ತರಫ್ ಒಕ್ಕೀಲ ಮಿ ಎಸ ರಾಮಸ್ವಾಮಯ್ಯಂಗಾರ್ರವರು ೧೮೯೭ನೇ ಇಸವಿ ಮಾರ್ಚಿ ೧೨ನೇ ತಾರೀಖಿನಲ್ಲಿ ಬರದ ಅರ್ಜಿ

T. F. LEONARD,
President,
City Municipal Commission

ಈ ಕಂಪನಿಯು ಸನ್ ೧೮೭೩ನೇ ಇಸವಿಯಲ್ಲಿ ಸ್ಥಾಪಿತವಾಯಿತು

ಜನ್ಮದ ಲಾಭವು.

[illegible] ವಜ್ರಾಂಗ ಖರ್ಜೂರವು. [illegible]

ಬಲಾರೋಗ್ಯ, ಪುಷ್ಟಿಗಳನ್ನು ಬೆಳೆಸತಕ್ಕ ಉತ್ತಮವಾದ್ದು.

ಆತ್ಯಾಶ್ಚರ್ಯಕರವಾದ ಬಲ್ಲವರಿಂದ ತಯಾರಿಸಿದ ಈ ಉತ್ತಮ ಗುಣ ಕೊಂಡಿರುವ ಅನೇಕ ವನಸ್ಪತಿಗಳ ಸಾರಗಳ ಘಟಕಗಳನ್ನು ಸೇರಿಸಿ, ಶುದ್ಧದೊಳಗೆ ಮಾಗಿಸಿ, ಒಳ್ಳೇ ಹೆಚ್ಚಿನ ತರಗತಿಯ ಸಕ್ಕರೆಯ ಪಾಕದಲ್ಲಿ ಸಿದ್ಧ ಮಾಡಿರುತ್ತೇವೆ ಈ ಉತ್ತಮಗಳು ಮಹೌಷಧಗಳಿದ್ದು, ಒಳ್ಳೇ ರುಚಿಯುಳ್ಳದ್ದವೆ ಇವುಗಳ ಸೇವನೆಯಿಂದ ಕಫ, ವಾತ, ಪಿತ್ತ ಈ ತ್ರಿದೋಷ ಸಂಬಂಧಗಳಾದ ಯಾವತ್ತು ಜಡವಾದ ವ್ಯಾಧಿಗಳೂ ಹೋಗುತ್ತವೆ ೬೦ ವರ್ಷಗಳ ಪ್ರಾಯವುಳ್ಳ ಮುದುಕರ ಶರೀರದಲ್ಲಿ [illegible] ಪ್ರಾಪ್ತಿ ಮಾಡುತ್ತವೆ [illegible] ನಪುಂಸಕತ್ವವು ಇಲ್ಲದಂತಾಗುತ್ತದೆ [illegible] ನಿಲ್ಲುತ್ತದೆ ಸ್ವಪ್ನದಲ್ಲಿ [illegible] ಬಣ್ಣವು ಸುಧಾರಿಸುತ್ತದೆ [illegible] ಉಷ್ಣ ಸಂಬಂಧಿಕ ಬೇನೆಗಳ [illegible] ಪುಷ್ಟವಾಗುತ್ತದೆ [illegible] ಒಳ್ಳೇ ಹಸಿವು [illegible] ಹೋಗುವದೊಂದೆ ತಡ ಕೂಡಲೇ ಸ್ವಚ್ಛ ಶೌಚವಾಗುತ್ತದೆ ಕ್ಷಯ, ಉದರ, ದಮ್ಮು ಈ ರೋಗಗಳು ನಾಶ ಹೊಂದುತ್ತವೆ. ಯೋಗ್ಯ ಬೇನೆ ಇದ್ದಲ್ಲಿ ೧೧ ದಿವಸಗಳಲ್ಲಿ [illegible] ಒಂದೇ ಡಬ್ಬಿಯಿಂದ [illegible] ಮತ್ತು [illegible] ಮೇಲೆ ಗುಣ ಬಂದೀತು ೧೧ ದಿನಗಳವರಿಗೆ [illegible] ಡಬ್ಬಿಗೆ [illegible] ರೂ|| ಒಂದು ವ್ಯಕ್ತಿಗೆ ೪ ಡಬ್ಬಿಗಳು ತೆಗೆದುಕೊಳ್ಳತಕ್ಕವರಿಗೆ ಒಂದು ಡಬ್ಬಿಯು ಉಚಿತವಾಗಿ ಸಿಕ್ಕೀತು ಈ ಉತ್ತಮದಿಂದ ಹೆಂಗಸರು [illegible]ರಾಗುತ್ತಾರೆ. [illegible] ಬಾಣಂತಿ [illegible] ದೀನ ಇಲ್ಲದವರನ್ನು [illegible] ಆರೋಗ್ಯ ಪುಷ್ಟಿಗಳನ್ನು ಬೆಳಸುತ್ತವೆ [illegible] ಜನರು ಬಹಳ ಡಬ್ಬಿಗಳು ಖರ್ಚಾಗುತ್ತವೆ ಈ ಔಷಧವು ಈ ಕಂಪನಿಯ ಹೊರ್ತು ಬೇರೆ ಸ್ಥಳದಲ್ಲಿ ಆಗುವದಿಲ್ಲ ಯಾವತ್ತು ದೇಶಗಳಲ್ಲಿಯು ವೈದ್ಯಶಾಲೆಗಳಿಗಾಗಿ ಕಳುಹಲ್ಪಡುತ್ತವೆ ಬರೆದು ಎಂದು ಕೊಡಲೆ ಈ ಕಂಪನಿಯು ಬೇಕಾದವರಿಗೆ ಈ ಡಬ್ಬಿಗಳು ಕಳುಹಿಸಿಕೊಡುತ್ತೇವೆ. ಅಂಚೆಯ ಹಾಗೂ ವ್ಯವಸ್ಥೆ ಪೇಯಬಲ್ ವೆಚ್ಚ ಬೇರೆ ಕೊಡಬೇಕು (ಉಚಿತ ಡಬ್ಬಿ ಸಹ ೪ ಡಬ್ಬಿಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬಿಯಾದ್ದು ಎಲ್ಲಾ ಖರ್ಚಿನ ಹಾಕಿ ರವಾನಿಸುವೆವು, ಹೀಗೆ ಕಳುಹಿಸಿದರೆ ವಿಪಿಪಿಲ್ ಖರ್ಚು ಕಡಮೆ ಬೀಳುವದು)

ಮೋಲ್ವಿಳಾಸ—ಪಿ ಎಲ್. ಎ. ಬ್ರದರ್ಸ್ ಮತ್ತು ಕಂಪನಿ,

ಹೆಸ್ಟ ಇಂಗ್ಲಿಷ್ ಬ್ಯಾಂಡ್ ಆಫಿಸ್, ಡಿಸ್ಟ್ರಿಕ್ಟ ಬೆಳಗಾಂವ

ಪೋಸ್ಟ—ಬೆಳಗಾಂವ, Post BELGAUM.

BANGALORE —Printed and Published at the KARNATAKA PRESS, No 40, HOSPITAL ROAD, CITY,—1897.

THE Karnataka Prakasika.

ಪ್ರಕಟನೆಯ ದರಗಳು { ಮೊದಲನೆಯ ವರ್ಷ ಪಂಕ್ತಿ ಒಂದಕ್ಕೆ 0 2 0 / ಎರಡನೆಯ ವರ್ಷ ಪಂಕ್ತಿ ಒಂದಕ್ಕೆ 0 1 0 }
[illegible]

ಕರ್ಣಾಟಕ ಪ್ರಕಾಶಿಕಾ.

Published Every Monday Morning

ಚಂದಾ ದರಗಳು — [illegible]
ಸಾಲ್ 1 ಕ್ಕೆ, 3·0 0 | ಸಾಲ್ 1 ಕ್ಕೆ ..4 0 0
6 ತಿಂಗಳಿಗೆ, .2 0 0 | 6 ತಿಂಗಳಿಗೆ ...2 8 0
3 ತಿಂಗಳಿಗೆ, 1 4 0 | 3 ತಿಂಗಳಿಗೆ ...1 8 0

[illegible]

Vol. XXIV. BANGALORE:—MONDAY, MARCH 29, 1897. No. 13.

ADVERTISEMENTS.

Southern Mahratta Railway Company.

District Traffic Superintendent's Office Bangalore, 22 3 1897

NOTICE.

It is hereby notified to the public that the consignment of two Wagons load of Chunam dust booked under Invoice No 1 of 6 2 97 from Ranganpuram to Yeswanta pur, and Railway Receipt No 97 of 6 2 97, will be sold by a public auction under section 56 of the Indian Railway Act, at 8 a.m on the 12th April 1897, at Yeswantapur Railway Station, unless claimed and charges paid in the interval.

D. H. LINDSAY,
District Traffic Superintendent

Select Telegrams.

Athens, 20th March.—The Crown Prince's Regiment left Athens this morning for the Frontier.

Constantinople, 20th March. Six Turkish men-of-war and two torpedo boats left here for the Dardanelles, [illegible] the [illegible] from [illegible] assembled on shore to watch their departure.

Athens, 20th March.—The Cretan insurgents have informed the foreign Admirals that they will accept nothing short of annexation of Crete with Greece.

London, 22nd March.—Shots have been exchanged on the frontier of Epirus, but the officers prevented a conflict ensuing.

Athens, 22nd March.—Notwithstanding the excitement among the populace and in the journals, it is believed that the Government is willing to withdraw the Greek force under Colonel Vassos from Crete if some slight concession was made to the *amour propre* of Greece, such for instance as the withdrawal of Turkish troops from the island.

There is a great scarcity of food-stuffs in Crete.

Athens, 22nd March.—All robust citizens in Greece have been called out to guard the towns during the absence of the troops.

London, 23rd March.—*The Times* states that it is believed that the Powers which are friendly to Greece are trying to arrange a compromise.

Skirmishing was going on all day yesterday outside Canea the Turks vainly attempting to revictual the blockhouse at Malaxa.

London, 24th March.—*The Daily Chronicle* states that Great Britain has notified to the Powers that she will abstain from taking part in the blockade of Greece, but will not object to those undertaking the blockade.

It is stated that Germany, while she declines to send any troops to Crete, threatens to withdraw from the concert unless Greece is blockaded.

London, 23rd March, Midnight.—Trouble has broken out at Tokat in the Vilayet of Sivas, where one hundred Armenians have been massacred.

The latest from Crete states that the Admirals have issued a fresh proclamation and have warned the insurgents and the Greek troops to abstain from attacking the Turkish forts, which are necessary to preserve order in the vicinity of the ports where the foreign troops will land.

300 French Marines have landed at Canea, and another 300 will land at Sitia.

THE Karnataka Prakasika.

MONDAY, MARCH 29, 1897

THE TURKISH EMPIRE.

Affairs in the East of Europe are in a very critical way just now, and it may be sometime they settle down, if they ever do this without war. They have been working up to this state for a long time, and now the crisis seems to have been reached. It has long been apparent that the Ottoman empire was hastening towards its fall, that it was fast decaying, and that it must give place to something else. The Sultan has promised over and over again that he will bring about reforms, but he never kept his promises. As soon as the danger was over he procrastinated, and thus the matter blew over. He has done [illegible] he has become quite [illegible] and set the public voice of Europe at defiance. He thinks he will not be punished, that he can continue in the same course for all time, and that punishment will not fall upon him. It will be remembered how he allowed the Armenians to be massacred, if he did not actually order these massacres. So many of these people were slain in different parts of the empire that very few are left. The more the sympathy of the people of Europe was excited in favour of these victims the more the Government of Turkey seemed determined to destroy them. But the scene has been changed to Crete. There the people—at least, the Christians—have been fearfully treated, and they have risen against the Turks. For more than a year a war has been going on in the island, and at last the powers of Europe had to interfere. They ordered Turkey to cease to treat her subjects so brutally, and they commenced devising steps to free the island from her power. But this was a difficult matter as all the powers could not agree on what was to be done, what was to take the place of Turkey. They were all agreed that Crete must be set free from the power that now tyrannises over it. But something must take its place, and what this is to be the powers cannot well make out. To make matters worse Greece has invaded Crete. This power has for a long time past laid claim to this land. It formerly belonged to Greece, and the people now think they have a right to it. This invasion has disturbed the settlement the powers were trying to arrive at, and so they have told the Government at Athens to clear out of Crete as soon as possible. If it does not comply it will be made to do so. This may seem wrong to many, and one hundred members of Parliament have sent word to the king of Greece to persevere, and all would come right. The people of that country are very much excited over the matter, and it is just possible that if the rulers do not go along with them they may be cast one side, and others put in their place. It is said that the people will not give way, though the rulers may. What then would follow remains to be seen. The powers cannot allow themselves to be defied by such a small power as Greece, and if she will not retire of herself she will be compelled to do so. She cannot be allowed to indulge her ambition at the cost of a European war, for this is what her annexation of the country would lead to. Besides, it is thought by some that the possession of Crete by Greece would not put an end to the difficulties in the island, that this power would favour the Christians, but would neglect or oppress the Mohammedans, and thus the strife would continue, the parties now fighting changing places. Such a change is not one to be desired, it is not one that would satisfy the world. But the whole business shows the rottenness of the Turkey's rule. It shows how completely unable the rulers of that land are to carry on the Government of the country, and that before long they must give place to somebody. Even the Mohammedan subjects of the Sultan are perfectly dissatisfied with the way they are governed, and in many places are ready to turn against those now ruling them.

OFF TO THE HILLS.

THE Maharani Regent has set a good example to the rulers of India as regards the exodus to the Hills. She has decided not to go to Ootacamund this year in consequence of the fire to the Palace. Everything was prepared for the journey, but on account of this catastrophe the trip has been abandoned. The Maharani-Regent is filled with sorrow on account of the destruction of the Palace, and hence she thinks it her duty not to leave the capital. We quite approve of the decision this lady has arrived at, and we wish the Viceroy and the Governors of the different Presidencies had arrived at the same. They are determined to leave the places where they now are, and proceed to cooler climates, there to remain for some months till the heat decreases. It may be said that the calamity that has fallen upon the capital prevents the Maharani Regent from leaving it. But two calamities have fallen upon India—famine and pestilence. The former prevails to a very great extent. There are more than a million of people on relief works, besides hundreds of thousands seeking relief in other ways. The supervision is on a very large scale, and consequently the Viceroy ought not to leave the capital and proceed to Simla where he will be out of touch with the people, and where he cannot supervise the relief work efficiently. It is a great mistake that the Viceroy is making, and this he will discover in time. Then there is famine in a portion of the Bombay Presidency besides the plague in the capital and several other places. But the Governor, we are told, intends going away to the Hills in a short time, and leaving the famine and the plague to take care of themselves. The Governor of Madras will also go to Ootacamund in a short time, and will remain there till the end of the year. A portion of the Presidency, it is well known, is afflicted with famine, and this fact ought to be sufficient to keep the Governor and suite on the plains. But it is not. They are going to the Hills, as we have said, and the famine will have to take care of itself. The rulers who thus neglect their duty set a very bad example to the officials in general. If the heads run away from their work why should not they follow their example? It is well that the Maharani-Regent sets such a good example.

News and Notes.

THE Indian Famine Relief Fund has now reached £445,450.

A Hindu lady has, by her will, bequeathed Rs 15,000 to the Fergusson College.

MISS MULLER, B A, has arrived in Calcutta and intends working with Swami Vivekananda.

ROUMANIA has some queer taxes. There is a tax on female servants, on doorplates, and on doctors.

ONE Chadi K har has been sentenced to one month's rigorous imprisonment for flaying alive a goat at 39 College Street.

The Maharaja's High School for girls, Trivandrum, has been affiliated to the Madras University as a second grade College.

Miss Helen Gladstone, the daughter of Mr. Gladstone, who has been Principal of a Cambridge College for fifteen years, retires in order to watch over the declining years of her parents.

THE Hindus in the Punjab have started a subscription list, for starting a Technical Institute in the interests of Hindus, in commemoration of the sixtieth year of the reign of our Queen-Empress.

The Miller Gold medal, which is awarded to the candidate who stands first in Philosophy in the final B. A. of the Madras University, has this year been won by a P[illegible] student of the Christian College.

A Post Office has been opened at the office of the *Amrita Bazar Patrika* under the name of the *Patrika* Post Office. All classes of postal work will be performed at this office except Savings Bank.

Within the last twenty months, there have been no fewer than twenty marriages in Lahore, of childwidows belonging to highly respectable families. They are traced to the example set by Dewan Sant Ram two years ago.

Krishnadass Swamy, the revivalist preacher, who stood charged with having committed rape on a girl in his Asramum at Benares has been sentenced to three years' rigorous imprisonment by the Benares Sessions Court.

THE river Mississippi has overflowed its banks, and in parts the overflow extends to a width of forty miles. Many have been drowned, and immense damage has been done. The water is still rising, and a calamity is feared.

THE Secretary of State has telegraphed to the Madras Government to pay the expenses of Mr G Subramanya Iyer, the delegate of the Mahajana Sabha, for his voyage to England to give evidence before the Royal Commission on Indian Expenditure.

MR MAXIM has come to the fore with a new quick-firer, which weighs just 25 lbs, and with its pivots only 15 lbs more. This terrible weapon throws out 500 shots a minute, and will prove a matchless automatic gun for Britain's petty wars.

AN American named Floyd claims to have accidentally discovered a substance which when once ignited, cannot be extinguished by water or other means, but will burn itself out. It

is easily and cheaply made, but the discoverer, afraid of the misuse to which it might be put, refuses to disclose the secret of the ingredients

RESTLESS eyes denote a deceitful, designing disposition, greenish eyes mean falsehood, malice, and a love of scandal, blue eyes tell of a tendency to coquetry, black eyes mean a lively, passionate and sometimes deceitful character eyes with a yellowish blood-shot white usually betoken strong passions and hot temper, grey eyes a tender, true, kind and happy nature.

WONDERS will never cease. The Emperor of China is learning French and recently sought a teacher. One Li was recommended by a courtier. His Majesty, however, who had acquired a very slight acquaintance with the language, soon found out that Li knew nothing about it, and Li trembled for his life, but the Emperor has only condemned him to be kept in duress until he can prove that he knows French—an excellent stimulus to his studies

IN the course of his financial statement, Sir James Westland mentions that the Native Bundlekhand States having been hard hit by not one but two or three successive bad seasons, and finding themselves in some cases without adequate funds to meet the expenditure on famine relief, His Highness the Maharaja Scindia has agreed to lend funds to the Native States in question, the Government of India becoming guarantee for the loan and taking measures to ensure its punctual repayment This is, indeed, generous of the Maharaja Scindia.

SEVERAL interesting experiments have recently been carried out in Bombay by Babu Shama Chunder Das, Assistant to the Maharaj Kumar P K Tagore, who was sent across from Calcutta with the Maharaj Kumar's X rays apparatus with a view to testing the effect of the new rays upon plague patients. It was thought that these rays, which are destructive to small animal life, might prove efficacious in dealing with the plague bacillus Several patients were subjected to the rays, which were kept on for half an hour, and the results have certainly been encouraging Sleep in each case followed upon the operation, and the patients were declared out of danger a couple of days afterwards

A PLEADER, it is reported by the Dacca paper, urged before Mr Douglas, Sessions Judge of Dacca, that a prisoner should never be sent to jail on the evidence of witnesses, half of whom had been disbelieved by the Court, and the Judge replied —" Don't bring forward such arguments before me, Babu I have hanged people, believing only a fourth of the statement of witnesses." This reminds us of the remark made by a third class Magistrate in one of the Madras Districts to a Pleader who argued that the case was one triable by a second class Magistrate, and that his honor had therefore no jurisdiction in the matter. The Magistrate angrily replied — " Let me see if the prisoner will not go to Jail if I sentence him "

At a recent meeting of the Royal Society of Edinburgh, Dr. Munro read a paper on intermediary links between man and the lower animals, in which he maintained that by adopting an erect position, and the subsequent conversion of his extremities into hands and feet, man became what he is now His evolution was divisible into two stages, that by which his body became adapted for walking upright, and that by which his mind became a governing force in the world The first was comparatively quick, the second a very slow process Hence he considers that our chance of finding "missing links" is small, while our chance of finding human skulls of all grades of intelligence is good The "pithecanthropus" of Dr Dubois is, he thinks, a very early type of man, and the lower races of to-day are survivals of some early types

Local and Provincial.

INSTALLATION DAY —Thursday last being Installation day, all the Courts and Offices in the Mysore Province were closed.

RACES —The Spring Races came off on Tuesday, Thursday and Saturday last, and were, upon the whole, very good

TRAVANCORE.—We have received a copy of the Administration Report of this province, and shall review it in a future issue.

THE WEATHER —Is extremely hot, hotter we think than it was this time last year, and there are no signs of rain A good shower would be very acceptable.

THE MAHARAJAH —We are given to understand that the Maharajah, together with his tutor, Mr Fraser, will proceed to Ootacamund on the 7th of next month

THE MAHARANI'S SCHOOL, MYSORE —It was proposed sometime ago to raise this institution to a second grade college, but this idea has been abandoned on account of the cost The amount cannot be spared.

BIRTH OF A PRINCESS.—The Second Princess, who was married to Lieutenant Col. D Desaraj Urs only 10 months ago, gave birth to a daughter on Friday before last and the happy event was announced to the public by the report of 21 guns and the distribution of sugar all over the city

The Mysore Gazette.

Bangalore, Thursday, 25th March 1897

NOTIFICATIONS BY THE GOVERNMENT OF MYSORE

GENERAL AND REVENUE

Camp No 5?3 dated Mysore 22nd March 97

Her Highness the Maharani-Regent desires to express her heartfelt thanks for the kind messages of sympathy for her and her family which she has received from Public Associations and from private individuals on the occasion of the fire at her Palace at Mysore

Her Highness takes this opportunity of thanking all those who so promptly and energetically assisted in controlling the fire The detachment of Sappers and Miners, under the command of Jemadar Alexander, deserve Her Highness' thanks and praise for the efficient aid which their perfect soldierly discipline enabled them to render

While deeply lamenting the loss of some lives Her Highness gratefully acknowledges that she is spared from having to deplore a disaster which might have been of still greater magnitude

No 10399—*J 1193, dated, 19th March* 1897

Under Section 37 of the Code of Criminal Procedure, Mr. C B Seshagiri Rao, Extra Special Assistant Commissioner and 1st Class Magistrate, Shimoga district, is invested with power to make orders as to local nuisances, Section 133

No 10485—*Mis* 2951, *dated 22nd March* 97

The following promotions of Hospital Assistants are ordered with effect from 1st July 1896 —

1. Senior Hospital Assistant N R Ponnusami Pille, to be Senior Hospital Assistant on higher pay *vice* Ranganatha Pille appointed Superintendent, of Indigenous Hospital, Mysore, and seconded

2 1st Class Hospital Assistant D. M Gnanaprium Pille, to be Senior Hospital Assistant *vice* Ponnusami Pille.

No 468—*L F 128 A 95 96, dated, Camp Mysore 16th March* 1897

Under Article 188 of the Mysore Service Regulations, [illegible] N Venkata Rao, Assistant Commissioner, [illegible] district, is granted privilege leave of absence for three months with effect from such date as he may avail himself of it.

Mr P Srinivasa Rao, Extra Assistant Commissioner, doing duty in the office of the Inspector General of Police, is temporarily posted to the Mysore district, with the powers of a Magistrate of the 1st class, for employment during the absence of Mr N Venkata Rao on leave or until further orders (To join on 1st April 1897)

No 463—*Rev, dated Camp Mysore 16th March* 1897.

Mr B Ramaswami Iyer, Assistant Commissioner, attached to the Dewan's office, is posted to the Bangalore district for duty under the Deputy Commissioner

PUBLIC WORKS

Notification, dated 20th March 1897.

Mr B P. Raghavalu Naidu Executive Engineer, is posted to the Palace Division at Mysore, which will be attached to the Western Circle of the Mysore Public Works Department

ಕರ್ನಾಟಕ ಪ್ರಕಾಶಿಕಾ.

೧೮೯೭ನೇ ಇಸವಿ ಮಾರ್ಚಿ ತಾ॥ ೨೯ನೇ ಸೋಮವಾರ.

ಕಡೆಗೆ ಮುಸಲ್ಮಾನರಿಗೆ ಜ್ಞಾನೋದಯವಾಯಿತು.

ಜಗತ್ಕರ್ತನಾದ ಭಗವಂತನನ್ನಂಗೀಕರಿಸಿರುವಂತ ಆಸ್ತಿಕರ ಮತಪ್ರಭೇದಗಳಲ್ಲಿ ಮುಸಲ್ಮಾನರ ಮತವೊಂದೆನಿಸಿದ್ದರೂ ವೇದಭಾಷಾಚಾರ ವ್ಯವಹಾರಾದಿಗಳಲ್ಲಿ ಸಾಕ್ಷಾತ್ ವಿರುದ್ಧ ಮಾರ್ಗಾವಲಂಬಿಗಳೆನಿಸಿರುವ ತನ್ಮತಾವಲಂಬಿಗಳು ಹಿಂದೂಗಳಿಗೆ ಪ್ರತ್ಯರ್ಥಿಗಳಾಗಿ ಸಕಲ ವಿಷಯಗಳಲ್ಲೂ ಅವರಿಗೆ ಅಪಕಾರವು ಮಾಡುವದರಲ್ಲೇ ವಿಶೇಷ ಉತ್ಸಾಹ ಪೂರ್ಣರಾಗಿರುವುದು ಪ್ರಸಿದ್ಧ ವಿಷಯವಾಗಿದೆಯಷ್ಟೆ. ಇದಕ್ಕೆ ತಕ್ಕಂತೆ ಇಂಗ್ಲೀಷ್ ಗವರ್ನ್‌ಮೆಂಟಿನವರು ತಮ್ಮ ಪ್ರಜೆಯ ಐಕ್ಯ ಆತಂಕವಾದ ಭೀತಿಯೂ, ಬಾಹ್ಯವಾದ ಪ್ರೀತಿಯೂ, ದೃಶ್ಯವಾದ ಪಕ್ಷಪಾತವೂ ಉಳ್ಳವರಾಗಿ, ತತ್ತತ್ಕಾಲಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ಪ್ರಕಾರಾಂತರದಿಂ ವ್ಯಕ್ತಪಡಿಸುತ ಕದಾಚಿತ್ ಕಾರ್ಯದಲ್ಲಿ ತೋರ್ಪಡಿಸುತಲಿದಾರೆ. ಈ ಅಂಶವನ್ನು ತಿಳಿದು ಮುಸಲ್ಮಾನರು ಹಿಂದೂಗಳ ವಿಷಯದಲ್ಲಿ ತಮ್ಮ ವಿರೋಧ ಸಂಪೂರ್ಣವಾಗಿ ವ್ಯಕ್ತಪಡಿಸಿದರೆ ಗವರ್ನ್‌ಮೆಂಟಿನವರು ತಮ್ಮಲ್ಲಿ ವಿಶೇಷ ಗೌರವವು ತೋರ್ಪಡಿಸಿ ಇತರಾಪೇಕ್ಷೆಯಾ ಉತ್ಕೃಷ್ಟವಾದ ಪದವಿಗಳಂತಮಗೆ ಅನುಗ್ರಹಿಸುವರೆಂಬ ಭ್ರಾಂತಿಯಿಂದನೆ ಇದುವರೆಗೆ ಹಿಂದೂಗಳು ಮಾಡುತಿರುವ ಪ್ರಯತ್ನಗಳಿಗೆಲ್ಲ ವಿರುದ್ಧವಾಗಿ ವರ್ತಿಸುತ ಬೇಕಾದ ವಿಘಾತಗಳನ್ನುಂಟುಮಾಡುತ ಬಂದರು. ಪರಂತು ಮುಸಲ್ಮಾನರು ಇದುವರೆಗೂ ಗವರ್ನ್‌ಮೆಂಟಿನವರ ಪ್ರಭುತ್ವದ ಮೂಲ ಸಿದ್ಧಾಂತವು ತಿಳಿದುಕೊಳ್ಳಲಿಕ್ಕೆ ಪ್ರಯತ್ನ ಪಡದೆ ಭ್ರಾಂತರಾಗಿಯೂ ಅವಿಚಾರಿಗಳಾಗಿಯೂ ವರ್ತಿಸಿದ್ದು ಚಿಂತನೀಯವಾಗಿದೆ. ಇಂತೆ ಭ್ರಾಂತಿಯ ದೆಸೆಯಿಂದ ಮುಸಲ್ಮಾನರು ಹಿಂದೂಗಳೊಡನೆ ಏಕೀಭವಿಸಿ ಮಾಡಬೇಕಾದ ಕರ್ತವ್ಯಗಳನ್ನು ಸಂಪೂರ್ಣವಾಗಿ ಮಾಡದೆ ತಟಸ್ಥರಾಗಿಯೂ, ಪ್ರತ್ಯರ್ಥಿಗಳಾಗಿಯೂ ಇದ್ದುದರಿಂದ ಕಾಲವನ್ನು ನಿಷ್ಫಲವಾಗಿ ಕಳೆಯಬೇಕಾಯಿತು. ಈಗ ಗವರ್ನ್‌ಮೆಂಟಿನವರ ಸಿದ್ಧಾಂತವನ್ನೂ, ವರ್ತನವನ್ನೂ ಮುಸಲ್ಮಾನರು ತಿಳಿದು, ತಮ್ಮ ತಾಟಸ್ಥ್ಯದಿಂ ತಮಗೆ ಮುಂದೆ ಯಾವ ಪ್ರಯೋಜನವೂ ಉಂಟಾಗಲಾರದೆಂದು ನಿಶ್ಚಯಿಸಿ, ಹಿಂದೂಗಳ ಪ್ರಯತ್ನೋದ್ದೇಶಗಳಿಗೆ ಅನುಕೂಲರಾಗಿ ಅಭಿನಂದಿಸಲಾರಂಭಿಸಿದಾರೆ. ಇದುವರೆಗೆ ಮುಸಲ್ಮಾನರು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸಭೆಯಲ್ಲಿ ಪ್ರತಿಪಕ್ಷವನ್ನವಲಂಬಿಸಿ ಬೇಕಾದಷ್ಟು ತಕರಾರುಗಳನ್ನುಂಟುಮಾಡಿದ್ದು ಪ್ರಸಿದ್ಧ ವಿಷಯವಾಗಿದೆಯಷ್ಟೆ. ಈಗ ಸದರೀ ಮುಸಲ್ಮಾನರು ಹಿಂದೂಗಳ ಪ್ರಯತ್ನೋದ್ದೇಶಗಳಲ್ಲಿ ಏಕೀಭವಿಸಿ ತಮಗೂ ಹಿಂದೂಗಳು ಕೋರುವ ಸ್ವಾತಂತ್ರ್ಯವನ್ನು ಕೊಡಬೇಕೆಂದು ಗವರ್ನ್‌ಮೆಂಟಿನವರನ್ನು ಸಾಮುದಾಯಿಕವಾಗಿ ಪ್ರಾರ್ಥಿಸಲಿಚ್ಛಿಸಿರುವಂತೆ ತಿಳಿಯಬರುತಿದೆ. ಶ್ರೀಮನ್ಮಹಾರಾಜ್ಞೀ ಚಕ್ರವರ್ತಿನೀಯವರ ಪ್ರಭುತ್ವದ ಅರವತ್ತನೆಯ ಸಂವತ್ಸರವು ಪೂರ್ತಿಯಾಗುವಾಗ ನಡೆಸಬೇಕಾದ ವಿಭವಗಳನ್ನು ಕುರಿತು ಆಲೋಚಿಸುವದಕ್ಕಾಗಿ ಬಹುಮಂದಿ ಮುಸಲ್ಮಾನರು ದೆಹಲಿ, ಅಲಿಘರಿ ಪಟ್ಟಣಗಳಲ್ಲಿ ಸಭೆ ನೇರಿದ್ದ ಸಮಯದಲ್ಲಿ ಸಭಾಸದರೆಲ್ಲರೂ ಏಕೀಭವಿಸಿ ಇದರಡಿ ತಿಳಿಸಲ್ಪಡುವ ತೀರ್ಮಾನಗಳನ್ನು ಮಾಡಿ ಗವರ್ನ್‌ಮೆಂಟಿನವರಿಗೆ ಕಳುಹಿಸಿರುತ್ತಾರೆಂದು ತಿಳಿಯಬರುತಿದೆ, ಅವು ಯಾವವೆಂದರೆ.—

೧ ಕ್ಷಾಮನಿವಾರಕ ಸಹಾಯದ್ರವ್ಯವನ್ನು ಪ್ರತ್ಯೇಕವಾಗಿ ಇಡಿಸಿ ಅದಂ ಅಭಿವೃದ್ಧಿ ಪಡಿಸಬೇಕಾದುದು ಪ್ರಕೃತ ಕಾಲ ದೇಶಸ್ಥಿತಿಯನ್ನನುಸರಿಸಿ ಕೇವಲ ಅಪೇಕ್ಷಿತವಾದುದು.

೨ ಗವರ್ನ್‌ಮೆಂಟಿನವರು ಸ್ವತಃ ದಾಖಲ್ಮಾಡಿಕೊಂಡಿರುವ ಧರ್ಮಾದಾಯ ಸ್ವತ್ತುಗಳನ್ನು ಬಿಡುಗಡೆಮಾಡಿ ಸದರೀ ಸ್ವತ್ತುಗಳು ಪ್ರಥಮತಃ ಯಾವ ಕೆಲಸಗಳಗೋಸ್ಕರ ಕೊಡಲ್ಪಟ್ಟವೋ ಸದರೀ ಧರ್ಮಕಾರ್ಯಗಳನ್ನು ಊರ್ಜಿತಪಡಿಸಿ ರಕ್ಷಿಸಬೇಕಾದುದು ಆವಶ್ಯಕವು.

೩. ಜುಮ್ಮಾ ಮಸೀದಿಗಳಲ್ಲಿಯೂ ಹಿಂದೂ ದೇವಾಲಯಗಳಲ್ಲೂ ವಿದೇಶೀಯರು ಬೂಡ್ಸು ತೊಟ್ಟುಕೊಂಡು ಒಳಗೆ ಪ್ರವೇಶಿಸುವ ವಾಡಿಕೆಯನ್ನು ಅಡ್ಡಿಮಾಡಬೇಕಾದುದು ಅಪೇಕ್ಷಿತವಾದುದು.

೪ ಹಿಂದೂ ಧರ್ಮಶಾಸ್ತ್ರಗಳನ್ನು ಮತ್ತು ಮಹಮ್ಮದ್ ಲಾವನ್ನು ಅನುಸರಿಸಿ ಸಮಯಬಂದಾಗ ಶಾಸ್ತ್ರಾಧಾರಗಳನ್ನು ತಿಳಿಸಿ ಅಭಿಪ್ರಾಯಗಳಂ ಕೊಡುವದಕ್ಕೆ ಸಮರ್ಥರಾದ ಪಂಡಿತರನ್ನೂ ಮೌಲ್ವೀಗಳನ್ನೂ ಪ್ರತಿ ನ್ಯಾಯವಿಚಾರಕ ಸಭೆಯಲ್ಲಿ ನಿಯಮಿಸಬೇಕಾದುದು ಆವಶ್ಯಕವು.

೫ ಲಾಹೋರ್ ಪಟ್ಟಣದಲ್ಲಿ ಒಂದು ಹೈಕೋರ್ಟ್ ಸ್ಥಾಪಿಸಲ್ಪಡಬೇಕು

೬ ರೈತರಿಂದ ವಸೂಲ ಪಡೆ ಸಲ್ಲು ನಿಂತಿರುವ ಹಿಂದಿನ ಕಂದಾಯಗಳನ್ನು ಗವರ್ನ್‌ಮೆಂಟಿನವರು ರಿಮಿಟ್ ಮಾಡಿ ಮುಂದೆ ಸಾಗುವಳಿ ಉಪಯುಕ್ತ ಕಾಮಗಾರಿಗಳಗೋಸ್ಕರ ತಕಾವಿ ಅಡ್ವಾನ್ಸ್ ಧಾರಾಳವಾಗಿ ಕೊಡಿಸಬೇಕು

೭ ಇನ್‌ಕಂಟ್ಯಾಕ್ಸ್ ಅಂದರೆ ಆಮದಾನಿ ತೆರಿಗೆಯ ಮೊಬಲಗನ್ನು ಒಂದುಸಾವಿರ ರೂಪಾಯಿಗೆ ಹೆಚ್ಚಿಸಿ ಸಾಲೀಯಾನಾ ಅದಕ್ಕೆ ಮೇಲ್ಪಟ್ಟ ಆಮದಾಯುಳ್ಳವರೇ ತೆರಿಗೆ ಕೊಡಬೇಕೆಂಬದಾಗಿ ನಿಬಂಧಿಸಬೇಕು.

೮. ಕ್ರಿಶ್ಚಿಯನರ ಚರ್ಚಿಗಳಂತೆಯೇ ಹಿಂದೂ ದೇವಾಲಯಗಳನ್ನೂ, ಮುಸಲ್ಮಾನರ ಮಸೀದಿಗಳನ್ನೂ ಗವರ್ನ್‌ಮೆಂಟಿನವರ ರಕ್ಷಣೆಗೊಳಪಡಿಸಿಕೊಳ್ಳಬೇಕು.

೯. ಐದು ಸಂವತ್ಸರಗಳ ತನಕ ಯೆಲ್ಲಾ ಗವರ್ನ್‌ಮೆಂಟ್ ಸ್ಕೂಲುಗಳಲ್ಲೂ ಫೀಜುಗಳನ್ನು ಕಡಮೆಮಾಡಿ ಅನಂತರ ಅರ್ಧಫೀಜ್ ಏರ್ಪಡಿಸಿ ವಸೂಲ್ಮಾಡತಕ್ಕದ್ದು.

೧೦. ಆಯುಧಗಳನ್ನು ಕುರಿತ ಕಾನೂನುಗಳನ್ನು ತಿದ್ದುಪಡಿ ಮಾಡಬೇಕು.

೧೧ ರೆವಿನ್ಯೂ ಮತ್ತು ಜ್ಯುಡಿಷಿಯಲ್ ಅಧಿಕಾರಗಳೆರಡೂ ಈಗ ಏಕತ್ರ ನೆರೆಗೊಂಡಿರುವದನ್ನು ತಪ್ಪಿಸಿ ಪ್ರತ್ಯೇಕಿಸಬೇಕು.

೧೨. ಮಿಲಿಟರಿ ಕಾಲೇಜುಗಳನ್ನು ಸ್ಥಾಪಿಸಿ ನೇಟಿವ್‌ಗಳಿಗೆ ದೊಡ್ಡ ಮಿಲಿಟರಿ ಉದ್ಯೋಗಗಳನ್ನು ಕೊಡಬೇಕು ಎಂಬದಾಗಿ ತೀರ್ಮಾನಿಸಿಕೊಂಡಿದಾರೆ.

ಮೇಲೆ ತಿಳಿಸಲ್ಪಟ್ಟ ತೀರ್ಮಾನಗಳಲ್ಲಿ ಬಹುಶಃ ಎಲ್ಲವೂ ಹಿಂದೆ ನಡೆದ ಕಾಂಗ್ರೆಸ್ ಸಭೆಯಲ್ಲಿ ಚರ್ಚಿಸಲ್ಪಟ್ಟು ತೀರ್ಮಾನ ಮಾಡಲ್ಪಟ್ಟ ವಿಷಯಗಳಾಗಿಯೇ ಕಂಡುಬರುತಿವೆ. ಇವುಗಳ ಸಾಧ್ಯಾಸಾಧ್ಯತೆಯನ್ನು ಕುರಿತು ಇದುವರೆಗೆ ಪ್ರಸಿದ್ಧರಾದವರನೇಕರು ಬಹಳ ಮಟ್ಟಿಗೆ ಚರ್ಚಿಸಿ ತೀರ್ಮಾನಿಸಿರುತ್ತಾರೆ. ಆಯಾಕಾಲದಲ್ಲಿ ಮೇಲೆ ಕಂಡ ಮುಸಲ್ಮಾನರು ವಿರುದ್ಧಭಾವವಂ ತೋರ್ಪಡಿಸದೆ ಸಹಾಯಭೂತರಾಗಿದ್ದರುವದಾದರೆ, ಕಾಂಗ್ರೆಸ್ ಸಭೆಯು ಗವರ್ನ್‌ಮೆಂಟಿನವರಿಗೆ ಪ್ರಬಲಸಹಾಯಕನಾಯಿತೆಂಬುದಾಗಿ ಅಮೋಘವಾದ ಶಕ್ತಿಯಂ ತೋರ್ಪಡಿಸಲಿಕ್ಕೆ ಸಾಧ್ಯವಾದುದಾಗಿರುತಲಿತ್ತು. ಮತ್ತು ಅದಕ್ಕೆ ಧನಸಹಾಯವೂ ಬೇಕಾದಂತೆ ಲಭಿಸಿ ಇಂಗ್ಲಂಡಿನಲ್ಲಿ ನಡೆಸಬೇಕಾದ ವಿಶೇಷ ಏರ್ಪಾಡುಗಳನ್ನು ಅನಾಯಾಸವಾಗಿಯೂ ಧೈರ್ಯದೊಡನೆಯೂ ಮಾಡಲಿಕ್ಕೆ ಸಹ ಸಾಧನವಾದುದಾಗಿರುತ್ತಿತ್ತು. ಇದಲ್ಲದೆ ಜನಗಳು ಭಿನ್ನಾಭಿಪ್ರಾಯವಿಲ್ಲದೆ ಏಕರಂಗ್ಯವುಳ್ಳವರಾಗಿದ್ದರೆ, ಅವರ ಅಭಿಪ್ರಾಯಗಳನ್ನು ಪುರಸ್ಕರಿಸಿ ಗೌರವಿಸಬೇಕಾದ ನಿರ್ಬಂಧವು ಗವರ್ನ್‌ಮೆಂಟಿನವರಿಗೆ ವಿಧಿ ಇಲ್ಲದೆ ಸ್ವತಂತ್ರವಾಗಿ [illegible] ವರ್ತಿಸುವವು. ಇವುಗಳಿಗೆ ಅವಕಾಶವನ್ನು ಸದರೀ ಮುಸಲ್ಮಾನರು ತಾವಾಗಿ ತಪ್ಪಿಸಿದರು. ಏವಂಚಲೇ ಗವರ್ನ್‌ಮೆಂಟಿನವರು ಕಾಂಗ್ರೆಸ್ ಸಭೆಯವರ ತೀರ್ಮಾನಗಳಿಗೆ ವಿಶೇಷಾವಧಾನವು ಕೊಡದೆ ಉದಾಸೀನರಾಗಿರುತ್ತಾರೆ. ಇನ್ನು ಮುಂದೆಯಾದರು ಮುಸಲ್ಮಾನರು ಸ್ವಾಭಾವಿಕವಾದ ಸ್ವಮತಾಭಿನಿವೇಶವನ್ನು ತ್ಯಜಿಸಿ ಸೋದರ ವಾತ್ಸಲ್ಯದೊಡನೆ ವರ್ತಿಸುತ್ತು, ಜ್ಞಾತಿತ್ವವನ್ನು ಸ್ಮರಿಸಿಕೊಳ್ಳದೆ, ಐಕಮತ್ಯವಂ ತೋರ್ಪಡಿಸಿ ಹಿಂದೂಗಳ ಮುಂದಿನ ರಾಜಕೀಯ ಪ್ರಯತ್ನಗಳಿಗೆ ಸಹಕರಿಸುತಲಿರುವರಾದರೆ, ನೇಟಿವ್‌ಗಳಂತೆಯೇ ಮುಸಲ್ಮಾನರೂ ಪ್ರಭುತ್ವ ವೈಭವಗಳ ಫಲವಾಗಿ ಸುಖೋದಯದೊಡನೆ ವರ್ತಿಸಬಹುದು. ಮುಸಲ್ಮಾನರು

ವಿದ್ಯಾವಂತರಾದರೆ ಅವರು ಹಿಂದೂಗಳಿಗಿಂತ ಬಹಳ ಉಪಕಾರಿಗಳಾಗಿಯೂ ಈರ್ಷ್ಯಾಸೂಯೆಗಳಿಲ್ಲದವರಾಗಿಯೂ ಸ್ವಮತ ವಿಷಯಕವಾದ ದುರಭಿಮಾನವಿಲ್ಲದವರಾಗಿಯೂ ಆಗುತ್ತಾರೆ ಆದಕಾರಣ ಸಕಲ ಶತ್ರುತ್ವವನ್ನುಂಟುಮಾಡಿ ಪರಂಪರೆಯಾ ಮಹದನರ್ಥಗಳನ್ನುಂಟುಮಾಡುವಂತ ಮತದ್ವೇಷವೆಂಬುವದನ್ನು ಹಿಂದೂ ಮುಸಲ್ಮಾನರುಗಳಿಬ್ಬರೂ ತೊರೆದು ಇಬ್ಬರೂ ಮಿತ್ರಭಾವದೊಡನೆ ವರ್ತಿಸುವರಾದರೆ ತನ್ಮೂಲಕ ಪಾಲ್ಯಪಾಲಕ ಸಂಬಂಧವು ಸ್ಥಿರಪಟ್ಟು ಕ್ರಮೇಣ ಗವರ್ನಮೆಂಟಿನವರಿಗೆ ಸಪ್ತಾಂಗಗಳಲ್ಲಿ ಪ್ರಜಾಶಕ್ತಿಯೂ ಬಲವಾದ ಒಂದು ಅಂಗವೆನಿಸಿ ಸಕಲರು ಸುಖದಿಂ ಜೀವಿಸಿ ಆನಂದಿಸಬಹುದೆಂಬುದನ್ನು ಕೇವಲ ಸ್ನೇಹಭಾವದಿಂ ನಮ್ಮ ಮಿತ್ರರಾದ ಮುಸಲ್ಮಾನರಿಗೆ ಪ್ರಾಧಾನ್ಯೇನ ತಿಳಿಸುವದು ಕರ್ತವ್ಯವೆಂದು ಬಗೆಸುವೆವು

ಕ್ರೀಟದ್ವೀಪವನ್ನು ಕುರಿತ ಕಲಹವು.

ಯೂರೋಪಿಯುತಕ್ಕೆ ಸೇರಿದ ಗ್ರೀಕ್ ಸಂಸ್ಥಾನಕ್ಕೆ ದಕ್ಷಿಣಪಶ್ಚಿಮಗಾವ ಕ್ರೀಟ ಎಂಬ ದ್ವೀಪವು ಬಹುಕಾಲದ ಹಿಂದೆ ಗ್ರೀಕ ಆಧಿಪತ್ಯಕ್ಕೆ ಸೇರಿದ್ದಾಗಿದ್ದು ತರುವಾಯ ತುರ್ಕಿಯವರಿಗೆ ಸೇರಿದ್ದಾಯಿತು. ಸದರೀ ದ್ವೀಪದೊಳು ಮುಸಲ್ಮಾನರೂ ಕ್ರಿಸ್ತಿಯನ್ ಜನರೂ ಇರುತಲಿದ್ದಾರೆ. ಈಚೆಗೆ ಸುಮಾರು ಒಂದು ವರ್ಷದ ಕಾಲದ ಮೊದಲು ಕ್ರಿಸ್ತಿಯನ್ನರಿಗೂ ಮುಸಲ್ಮಾನರಿಗೂ ಆಗಿಂದಾಗ್ಗೆ ಕಲಹಗಳು ಪ್ರಾಪ್ತವಾಗುತ ಮುಸಲ್ಮಾನರು ಕ್ರಿಸ್ತಿಯನ್ ಜನರನ್ನು ನಿರ್ದಯಾತ್ಮಕರಾಗಿ ಕೊಲ್ಲುತಲಿರುವ ಅಂಶವು ಯೂರೋಪ್ ಖಂಡದ ದೊಡ್ಡ ಸಂಸ್ಥಾನಾಧಿಪತಿಗಳಿಗೆ ತಿಳಿಯಬಂದು ಸದರೀ ದುಷ್ಕೃತ್ಯವನ್ನು ತಪ್ಪಿಸಬೇಕೆಂದು ತುರ್ಕಿ ಸುಲ್ತಾನರವರಿಗೆ ನಾನಾವಿಧವಾಗಿ ಎಚ್ಚರಿಸಿ ಬುದ್ಧಿ ಮಾತುಗಳು ಹೇಳುತಬಂದಾಗ್ಯೂ ಅವರು ಅದಂ ಲಕ್ಷ್ಯವಿಲ್ಲದವೆ ಉದಾಸೀನ ಭಾವವಂ ವ್ಯಕ್ತಪಡಿಸುತಬರಲು ಮುಸಲ್ಮಾನರ ಘೋರಕೃತ್ಯಗಳು ದಿನೇದಿನೆ ಹೆಚ್ಚುತ ಬಂದವು. ಈಗ ಗ್ರೀಕ್ ಸಂಸ್ಥಾನದವರು ಸದರೀ ದ್ವೀಪವಂ ತಮ್ಮ ಸ್ವಾಧೀನ ಮಾಡಿಕೊಂಡು ಕ್ರಿಸ್ತಿಯನ್ರ ಪ್ರಾಣರಕ್ಷಣೆ ಮಾಡಬೇಕೆಂಬ ಬದ್ಧಸಂಕಲ್ಪವುಳ್ಳವರಾಗಿ ಯುದ್ಧ ನಾವೆಗಳನ್ನೂ, ಸೈನ್ಯಗಳನ್ನು ಸದರೀ ದ್ವೀಪಕ್ಕೆ ಕಳುಹಿಸುತಲಿದ್ದಾರೆ. ಸದರೀ ದ್ವೀಪವು ತುರ್ಕಿಯವರ ಅಥವಾ ಗ್ರೀಕ್ ಸರ್ಕಾರದ ಅಧಿಪತ್ಯಕ್ಕೆ ಒಳಪಡದೆ ಸ್ವತಂತ್ರಾಧಿಕಾರವುಳ್ಳದ್ದಾಗಿದ್ದರೆ ಈ ವಿಧವಾದ ಕಲಹಗಳಿಗೆ ಅವಕಾಶವಿಲ್ಲದಿರುವದೆಂದು ದೊಡ್ಡ ಸಂಸ್ಥಾನಾಧಿಪತಿಗಳೆಲ್ಲರು ಸೇರಿ ಯೋಚಿಸಿ ಆರೀತಿ ಮಾಡುವದಕ್ಕೆ ತಕ್ಕ ಉಪಾಯಗಳಂ ಹುಡುಕುತಲಿದ್ದಾರೆ. ಇದಕ್ಕಾಗಿ ಫ್ರಾನ್ಸ್, ಜರ್ಮನಿ, ರಷ್ಯಾ, ಇಂಗ್ಲಾಂಡ್ ಮೊದಲಾದ ದೊಡ್ಡ ಸಂಸ್ಥಾನಗಳಿಂದ ಸದರೀ ದ್ವೀಪಕ್ಕೆ ಯುದ್ಧಸನ್ನಾಹದೊಡನೆ ನಾವೆಗಳು ಕಳುಹಿಸಲ್ಪಟ್ಟಿರುತಿವೆ ಇದು ಹೀಗಿರುವಲ್ಲಿ ಗ್ರೀಕ್‌ಸಂಸ್ಥಾನಕ್ಕೂ, ತುರ್ಕಿಸ್ಥಾನಕ್ಕೂ ಸಮಾಧಾನ ಮಾಡಿಸುವ ಪ್ರಯತ್ನಗಳು ಸಹ ನಡೆಯುತಲಿವೆ. ಈ ಕಲಹದ ಪರ್ಯವಸಾನವು ಮುಂದೆ ತಿಳಿಯಬೇಕಾಗಿದೆ

ಧನಾರ್ಜನೆಯ ಕ್ರಮ

ಎಂಬ ಅಂಕಿತದಿಂ ಮೈಸೂರಲ್ಲಿರುವ [illegible] ಮಲ್ಲಪ್ಪನವರ [illegible] ಎಂ. ವೆಂಕಟಕೃಷ್ಣಯ್ಯನವರಿಂದ [illegible] ಬರೆಯಲ್ಪಟ್ಟ ಗ್ರಂಥವು [illegible] ನಮಗೆ ಕಳುಹಿಸಲು ಅದು ನಾವು ಬಹಳ ಸಂತೋಷದೊಡನೆ ಬರಮಾಡಿಕೊಂಡು ಆ ಮೂಲಾಗ್ರ ಓದಿ ನೋಡಿದೆವು ಈ ಗ್ರಂಥ ರಚನೆಗೆ ಉಂಟಾದ ಮುಖ್ಯೋದ್ದೇಶವೇನೆಂದರೆ,—ಲೋಕದಲ್ಲಿ ಮನುಷ್ಯನಾದವನಿಗೆ ಅರ್ಥಾರ್ಜನವೆಂಬುದೇ ಸಕಲವಿಧ ಗೌರವಕ್ಕೂ, ಸುಖಾನುಭವಕ್ಕೂ ಮುಖ್ಯಕಾರಣವಾಗಿರುವದರಿಂದ, ಉಚಿತ ಮಾರ್ಗಗಳಲ್ಲಿ ಅದು ಸಂಪಾದಿಸಿ, ಕೇವಲ ಜಾಗರೂಕತೆಯೊಡನೆ ಅದಂ ಕಾಪಾಡುತ, ಐಹಿಕಾಮುಷ್ಮಿಕ ಸುಖ ಸಂಪಾದನಕ್ಕೆ ಸಾಧಕಗಳಾಗಿ ಕಂಡು ಬರುವ ಸಂದರ್ಭಗಳಲ್ಲ ಮಿತವ್ಯಯವಂ ಮಾಡುತ, ತಾನೂ ಸುಖಿಸುತ ಅನ್ಯರನ್ನೂ ಸುಖಪಡಿಸುತ ವರ್ತಿಸಬೇಕಾದುದು ಪ್ರತಿಮನುಷ್ಯನಿಗೂ ಅವಶ್ಯಕರ್ತವ್ಯವಾಗಿರುತಿದೆಂಬುವದಕ್ಕೆ ಬಹುವಿಧ ನಿದರ್ಶನಗಳು ಉದಹರಿಸಲ್ಪಟ್ಟಿವೆ. ಈ ಗ್ರಂಥವು ಲಲಿತವಾದ ಭಾಷೆಯಲ್ಲಿ ಬರೆಯಲ್ಪಟ್ಟು ಅನ್ಯರ ಸಹಾಯಾಪೇಕ್ಷೆ ಇಲ್ಲದೆ ಎಲ್ಲರೂ ಓದಿ ಅದರ ಅರ್ಥವಂ ತಿಳಿದುಕೊಳ್ಳುವದಕ್ಕೆ ಅನುಕೂಲವಾಗಿರುವದರಿಂದ ಅನೇಕರು ಸದರೀ ಗ್ರಂಥವಂ ತರಿಸಿಕೊಂಡು ಓದಿ ಅದರಿಂದುಂಟಾಗಬಹುದಾದ ಪ್ರಯೋಜನವಂ ತಾವೂ ಅನುಭವಿಸುತ ಗ್ರಂಥಕರ್ತರಿಗೂ ಪ್ರೋತ್ಸಾಹವನ್ನುಂಟುಮಾಡುವರೆಂದು ನಂಬುತ್ತೇವೆ.

ಈ ಗ್ರಂಥದ ಮುದ್ರಾಂಕಣಕ್ಕೆ ಈಗ ಉಪಯೋಗಿಸಲ್ಪಟ್ಟಿರುವ ಕಾಗದಕ್ಕಿಂತಲು ಸ್ವಲ್ಪ ಉತ್ತಮವಾದ ಕಾಗದವು ಉಪಯೋಗಿಸಲ್ಪಟ್ಟಿರುವದಾದರೆ ಇದರ ಗೌರವಕ್ಕೆ ಅನುಗುಣವಾಗಿಯೂ ಗ್ರಂಥಕರ್ತರಿಗೆ ವಿಶದಪೇಕ್ಷೆಯಾ ಫಲದಾಯಕವಾಗಿಯೂ ಇರುವುದೆಂದು ಸೂಚಿಸುವೆವು.

Occasional Notes.
ಪ್ರಾಸಂಗಿಕ ವಿಷಯನ್ಯಾಸ

ಮಹಾರಾಜ್ಞೀ ವಿಕ್ಟೋರಿಯಾ ಚಕ್ರವರ್ತಿನಿಯವರು ಈ ದೇಶದ ಕ್ಷಾಮಕ್ಕಾಗಿ ಮೊದಲು ಕೊಟ್ಟ ೫೦೦ ಪೌಂಡುಗಳಲ್ಲದೆ ಮರಳಿ ೫೦೦ ಪೌಂಡುಗಳು ಕೊಟ್ಟಿರುತ್ತಾರೆ.

ಕಳೆದ ಇಪ್ಪತ್ತು ತಿಂಗಳ ಕಾಲದೊಳಗಾಗಿ ಲಾಹೂರ್ ಪ್ರಾಂತದಲ್ಲಿ ಬಹಳ ಗೌರವವಾದ ಕುಟುಂಬಗಳೊಳು ಇಪ್ಪತ್ತಕ್ಕೆ ಮೇಲ್ಪಟ್ಟು ವಿಧವಾ ವಿವಾಹಗಳು ನಡೆದಿರುತಿವೆ

ತಿರುವಾಂಕೂರಲ್ಲಿ ಮಹಾರಾಜರವರಿಂದ ಸ್ತ್ರೀ ವಿದ್ಯಾಭ್ಯಾಸಕ್ಕಾಗಿ ಸ್ಥಾಪಿಸಲ್ಪಟ್ಟಿರುವ ಪಾಠಶಾಲೆ ಎರಡನೇ ತರಗತಿ ಕಾಲೇಜಾಗಿ ಮಾಡಲ್ಪಟ್ಟು ಮದರಾಸ್ ಯೂನಿವರ್ಸಿಟಿಗೆ ಸೇರಿಸಿಕೊಳ್ಳಲ್ಪಟ್ಟಿರುತಿದೆ

ಉತ್ತರ ಅಮೆರಿಕಾ ಖಂಡದಲ್ಲಿರುವ ಮಿಸಿಸಿಪಿ ಎಂಬ ನದಿಯಲ್ಲಿ ಪ್ರವಾಹವುಂಟಾಗಿ ಬಂದು ಅದರ ಕಟ್ಟೆಯಮೇಲೆ ಹರಿಯುತ ತನ್ಮೂಲಕ ಅದರಲ್ಲಿ ಅನೇಕರು ಮುಣುಗಿಹೋದುದು ಮಾತ್ರವಲ್ಲದೆ ಅಪರಿಮಿತವಾದ ನಷ್ಟವುಂಟಾಯಿತೆಂದು ತಿಳಿಯಬರುತಿದೆ.

ಕಾಶಿಪ್ರಾಂತದಲ್ಲಿ ಕೃಷ್ಣಾನಂದ ಸ್ವಾಮಿ ಎಂಬ ಹಿಂದೂ ಮತ ಪ್ರಚಾರಕರೊಬ್ಬರು ತಮ್ಮ ಆಶ್ರಮದಲ್ಲಿ ಒಬ್ಬ ಹುಡುಗಿಯನ್ನು ಬಲಾತ್ಕಾರಪೂರ್ವಕ ಕೆಡಿಸಿದರೆಂದು ಆಪಾದಿಸಲ್ಪಟ್ಟು ಬನಾರಿಸ್ ಸೆಷನ್ ಜಡ್ಜಿಯವರಿಂದ ಮೂರು ಸಂವತ್ಸರಗಳ ಕಠಿಣಸ್ಥಿತಿ ಸಜಾ ವಿಧಿಸಲ್ಪಟ್ಟರೆಂದು ತಿಳಿದು ಬಹಳ ವಿಷಾದಿಸುತ್ತೇವೆ.

ಬ್ಯೂಬೋನಿಕ್‌ಪ್ಲೇಗ ಎಂಬ ಮಹಾಮಾರಿ ರೋಗೋಪದ್ರವದಿ ಮದರಾಸ್ ಟ್ರೈಬ್ ಅರಕೊನ್ನದ ಸ್ಟೇಷನಬಳಿ ಈಚೆಗೆ ಒಂಭತ್ತು ಜನ ಮೃತಪಟ್ಟರೆಂದು ವೃತ್ತಾಂತ ಪತ್ರಿಕೆಗಳ ಮೂಲಕ ತಿಳಿಯಬರುತದೆ. ಸದರಿ ಜನರು ರೋಗಪೀಡಿತರಾಗಿ ಪ್ರಾಣರಕ್ಷಣೆಯ ಬಗ್ಗೆ ಸ್ವಸ್ಥಳವಂ ಬಿಟ್ಟು ಅನ್ಯದೇಶ ವಾಸಕ್ಕಾಗಿ ಬಂದಿರಬಹುದೆಂದು ನಂಬುತ್ತೇವೆ.

ಈಗಿನ ಕ್ಷಾಮವು ಮಧ್ಯ ಇಂಡಿಯಾ ದೇಶದೊಳು ಕೆಲವು ಪ್ರದೇಶಗಳಲ್ಲಿಯೂ, ವಾಯುವ್ಯದೇಶದೊಳಗೂ [illegible] ಸಿಎಯಲ್ಲಿ ಪ್ರಾಪ್ತ [illegible] ರಿಣವಾಗಿರುತ ತನ್ಮೂಲಕ ಅನೇಕ ಗ್ರಾಮಗಳು [illegible] ಮಾಡುವದಕ್ಕೆ ದಿಕ್ಕಿಲ್ಲದ, [illegible] ದೇಶದ ವೃತ್ತಾಂತಪತ್ರಿಕೆಗಳ ಮೂಲಕ ತಿಳಿದು ಬಹಳ ವಿಷಾದಿಸುತ್ತೇವೆ.

ಇಂಡ್ಯ ದೇಶದೊಳು ವ್ಯಾಪಿಸಿರುವ ಘೋರತರವಾದ [illegible] ದೆಸೆಯಿಂದ ಪೀಡಿತರಾದ [illegible] ಇಂಗ್ಲಾಂಡ್ ದೇಶದೊಳು ಸ್ಥಾಪಿಸಲ್ಪಟ್ಟಿರುವ ಧರ್ಮನಿಧಿಯಲ್ಲಿ ಈ ತಿಂಗಳ [illegible] ತಾರೀಖು ವರೆಗೆ ೪,೪೫ ೪೫೦ ಪೌಂಡುಗಳು ಜಮಾ ಆಗಿದೆ. ಈಗಿನ ಸವರನ್ ಧಾರಣೆಯ ಪ್ರಕಾರ ನೋಡಿದರೆ ಮೇಲಿನ ಮೊತ್ತವು ಸುಮಾರ್ ಎಪ್ಪತ್ತು ಲಕ್ಷಕ್ಕೆ ಮೇಲ್ಪಟ್ಟು ಆಗುತಿದೆ, ಇನ್ನು ಜಮಾ ಆಗುತಲೇ ಇದೆ. ಬ್ರಿಟಿಷ್ ಜನರ ಉದಾರಸ್ವಭಾವಕ್ಕಾಗಿ ಎಷ್ಟು ಸಂತೋಷಿಸಿದಾಗ್ಯೂ ಸ್ವಲ್ಪವಾಗಿಯೇ ಇರುವುದು.

ಇಂಡ್ಯಾ ರಾಜ್ಯದ ಖರ್ಚುಗಳಂ ತನಿಖೀ ಮಾಡುವದಕ್ಕಾಗಿ ಇಂಗ್ಲಾಂಡಿನಲ್ಲಿ ಏರ್ಪಡಿಸಲ್ಪಟ್ಟಿರುವ ಕಮಿಟಿಯ ಮುಂದೆ ಸಾಕ್ಷ್ಯ ಹೇಳುವದಕ್ಕಾಗಿ ಮದರಾಸು ಹಿಂದೂ ಪತ್ರಿಕೆಯ ಎಡಿಟರಾದ ಮೆ|| ಜಿ. ಸುಬ್ರಹ್ಮಣ್ಯಅಯ್ಯರವರು ಅಲ್ಲಿನ ಮಹಾಜನ ಸಭೆಯ ಪ್ರತಿನಿಧಿಯಾಗಿ ಚುನಾಯಿಸಲ್ಪಟ್ಟು ಇಂಗ್ಲಾಂಡಿಗೆ ಹೋಗುವದಕ್ಕೆ ಸನ್ನಾಹಗಳು ಮಾಡುತಲಿದ್ದಾರೆ. ಸದರೀಯವರ ಪ್ರಯಾಣ ಖರ್ಚುಗಳನ್ನೆಲ್ಲ ಕೊಡುವಂತೆ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಮದರಾಸ್ ಗವರ್ನಮೆಂಟಿಗೆ ತಂತಿ ವರ್ತಮಾನ ಕೊಟ್ಟಿರುತ್ತಾರೆ.

ಈಗ ಪುನೆಯಲ್ಲಿ ಬ್ಯೂಬೋನಿಕ್‌ಪ್ಲೇಗೆಂಬ ರೋಗವು ವ್ಯಾಪಿಸಿ ಕಳೆದ ತಿಂಗಳಲ್ಲಿ ಇಪ್ಪತ್ತು ದಿನಗಳೊಳಗಾಗಿ ಮುನ್ನೂರು ಜನರು ಮೃತಪಟ್ಟದ್ದರಿಂದ ಅಲ್ಲಿಗೆ ಯಾರೂ ಹೋಗಕೂಡದೆಂತಲೂ, ಅಲ್ಲಿಂದ ದಾರ್ವಾಡ ಪ್ರಾಂತಕ್ಕೆ ಬರತಕ್ಕವರು ತಾವು ಇಳಿಯಬೇಕೆಂದು ಉದ್ದೇಶಿಸಿರುವ ಸ್ಥಳವಂ ಸೇರುವದರೊಳಗಾಗಿ ರೆಯಿಲ್ ಸ್ಟೇಷನ್ ಬಳಿ ತಮ್ಮ ಬಟ್ಟೆಗಳು, ಹಾಸಿಕೆಗಳು ವಗೈರೆಯನ್ನು ಬಿಸಿಲಿಗೆ ಹಾಕಿ ಪರಿಶುದ್ಧವಾಗಿ ಮಾಡಿಕೊಂಡ ಮೇಲೆಯೇ ಊರೊಳಗೆ ಹೋಗಬೇಕೆಂತಲೂ ಧಾರ್ವಾಡ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ನೋಟಿಸ್ ಕೊಟ್ಟಿರುತ್ತಾರೆ.

ಮುಂಬೈ ಗವರ್ನಮೆಂಟ್ ಸೆಂಟ್ರಲ್ ಪ್ರೆಸ್ಸಿನಲ್ಲಿ ಕಂಪಾಜಿಟರಾಗಿದ್ದ ಪಾಂಡು ಎಂಬವನು ಅಲ್ಲಿನ ಬ್ಯೂಬೋನಿಕ್ ರೋಗಕ್ಕೆ ಹೆದರಿ, ಮೂರು ತಿಂಗಳ ರಜಾ ತೆಗದುಕೊಂಡು ತನ್ನ ಸ್ಥಳಕ್ಕೆ ಹೋಗುವದಕ್ಕೆ ಸಿದ್ಧನಾದನು. ಆದರೆ ಅವನ ಹೆಂಡತಿಯು ಅವನ ಸಂಗಡ ಊರಿಗೆ ಬರುವದಿಲ್ಲವೆಂದು ಬಹಳವಾಗಿ ಹಟ ಮಾಡಿದಳು. ಅಷ್ಟರಲ್ಲಿ ಅವನಿಗೆ ಜ್ವರಬಂತು. ಆವೇಳೆಯಲ್ಲಿ ಅವನು ತನ್ನ ಹೆಂಡತಿಯನ್ನು ಕೊಂದು ಈ ವರ್ತಮಾನವನ್ನು ಪೋಲೀಸಿನವರಿಗೆ ತಿಳಿಸಲು ಅವರು ಅವನನ್ನು ದಸ್ತಗಿರಿಮಾಡಿದ ಮಾರನೆಯದಿನವೇ ಅವನು ಮೃತಪಟ್ಟನೆಂದರಿತೆವು.

ಮದರಾಸ್ ಯೂನಿವರ್ಸಿಟಿಗೆ ಸೇರಿದ ಬಿ. ಎ ಎಂ. ಎ. ಮೊದಲಾದ ಪರೀಕ್ಷೆಗಳಲ್ಲಿ ತೇರ್ಗಡೆಯಂ ಹೊಂದಿದ ವಿದ್ಯಾರ್ಥಿಗಳಿಗೆ ಡಿಗ್ರಿಗಳೆಂಬ ಪ್ರಶಸ್ತಿಯಂ ಕೊಡುವದಕ್ಕಾಗಿ ಈ ತಿಂಗಳ ೧೨ನೇ ತಾ|| ಶುಕ್ರವಾರದದಿನ ಸಾಯಂಕಾಲ ಸೆನೆಟಹಾಲ್ ಎಂಬ ಕಟ್ಟಡದಲ್ಲಿ ಒಂದು ದೊಡ್ಡ ಸಭೆ ಸೇರಿತ್ತು. ಸದರೀ ಸಭೆಯಲ್ಲಿ ಮದರಾಸ್ ಗವರ್ನರವರಾದ ಸರ್ ಆರ್ಥರ್ ಹಾವಲಾಕ್ ಸಾಹೇಬರವರು ಅಗ್ರಾಸನವಂ ವಹಿಸಿದರು. ಈ ವಿಶೇಷ ಸಂದರ್ಭಕ್ಕೆ ಆಹೂತರಾಗಿ ಬಹುಮಂದಿ ಯೂರೋಪಿಯನ್ ಆಫೀಸರ್‌ಗಳೂ, ಅವರ ಲೇಡಿಗಳೂ, ನೇಟಿವ್ ದೊಡ್ಡ ಮನುಷ್ಯರೂ, ಅವರಲ್ಲಿ ಕೆಲವರು ಲೇಡಿಗಳೂ ಬಂದಿದ್ದರು. ಈ ಸಂದರ್ಭದೊಳು ವಾಡಿಕೆಯನ್ನನುಸರಿಸಿ ಪೂರ್ವಭಾವಿಯಾಗಿ ನಡೆಯಬೇಕಾದ ಕ್ರಮಗಳೆಲ್ಲವು ನೆರವೇರಿಸಲ್ಪಟ್ಟ ಮೇಲೆ ಮೊದಲು—

ಬಿ. ಎಲ್. ಡಿಗ್ರಿ	..	೫೦ ಮಂದಿಗೆ
ಎಂ. ಬಿ. ಡಿಗ್ರಿ	...	೨ ,,
ಎಲ್. ಎಂ. ಎಸ್. ಡಿಗ್ರಿ	..	೮ ,,
ಸಿವಿಲ್ ಇಂಜಿನಿಯರ್ ಡಿಗ್ರಿ	...	೧ ,,
ಎಲ್. ಟಿ. ಡಿಗ್ರಿ	..	೨೨ ,,
ಎಂ. ಎ. ಡಿಗ್ರಿ	...	೬ ,,
ಬಿ. ಎ. ಡಿಗ್ರಿ	.	೫೪೪ ,,
ಜುಮ್ಲಾ	.	೬೩೩.

ಈ ಮೊತ್ತದಲ್ಲಿ ಉಪಾಧ್ಯಾಯ ಪರೀಕ್ಷೆಯೊಳು ಒಬ್ಬಳು, ವೈದ್ಯಶಾಸ್ತ್ರ ಪರೀಕ್ಷೆಯಲ್ಲಿ ಒಬ್ಬಳು, ಆಮೇಲೆ ಇಬ್ಬರು ಹೆಂಗುಸರು ತೇರ್ಗಡೆಯಂ ಹೊಂದಿ ಡಿಗ್ರಿಗಳಂ ಪಡೆದಿರುತ್ತಾರೆ ಕಾಲಕ್ರಮೇಣ ಇನ್ನೂ ಬಹುಮಂದಿ ಹೆಂಗುಸರು ಡಿಗ್ರಿಗಳೆಂಬ ಪ್ರಶಸ್ತಿಯಂ ಪಡೆಯುವರೆಂದು ನಂಬುತ್ತೇವೆ.

LOCAL AND PROVINCIAL NEWS.
ಒಳದೇಶಮತ್ತುತಾಲ್ಲೂಕಿನ ವೃತ್ತಾಂತಗಳು.

ಬರುವ ತಿಂಗಳ ೭ನೇ ತಾರೀಖಿನಲ್ಲಿ ಶ್ರೀಮನ್ಮಹಾರಾಜರವರು ತಮ್ಮ ವಿದ್ಯಾ ಗುರುಗಳಾದ ಮೆ|| ಫ್ರೇಜರ್ ಸಾಹೇಬರೊಡನೆ ಬೇಸಿಗೆಯ ಬಗ್ಗೆ ನೀಲಗಿರಿಗೆ ದಯಮಾಡುವರೆಂದು ಕೇಳುತ್ತೇವೆ

ಕಳೆದ ಬೃಹಸ್ಪತಿವಾರದ ದಿನ ಮಧ್ಯಾಹ್ನ ಇಲ್ಲಿನ ಕೋಟೆಗೆ ಪೂರ್ವದಿಕ್ಕಿನಲ್ಲಿರುವ ಕಲಾಸೀಪಾಳ್ಯದಲ್ಲಿ ಒಂದು ಹುಲ್ಲಿನ ಮನೆಗೆ ಬೆಂಕಿ ತಗಲಿ ಅದು ವ್ಯಾಪಿಸಿ ನಾಲ್ಕಾರು ಮನೆಗಳು ಸುಟ್ಟುಹೋದವೆಂದು ತಿಳಿಯಲಾದೆವು.

ನಂಜನಗೂಡಿನಲ್ಲಿ ಇನ್ನೂ ವಾಂತಿ ಭೇದಿ ಉಪದ್ರವವು ಶಮನವಾಗಲಿಲ್ಲವು. ದಿನಕ್ಕೆ ಇಬ್ಬರು ಮೂವರು ಸಾಯುತ್ತಿದ್ದಾರೆ. ಇದಲ್ಲದೆ ಚಾಮರಾಜನಗರ ತಾಲ್ಲೂಕಿಗೆ ಸೇರಿದ ಒಂದು ಗ್ರಾಮದಲ್ಲೂ ಈ ಉಪದ್ರವವು ಕಾಣಿಸಿಕೊಂಡಿರುವ ಹಾಗೂ, ಕೆಲವು ಜನರು ತೀರಿಹೋದ ಹಾಗೂ ಕೇಳುತ್ತೇವೆ.

ರಾಜಧಾನಿಯ ಅಪೀಲ್ ಚೀಫ್‌ಕೋರ್ಟಿನಲ್ಲಿ ಈ ತಿಂಗಳ ೨೩ನೇ ತಾರೀಖಿನ್ನ ಹಿಯರಿಂಗ್ ಆಗಿ ಅವಳ ಕಡೆ ಮೆ|| ಯಂ. ಡಿ ನಾರಣಯ್ಯಂಗಾರರೂ, ಮೆ|| ಈವನ್ಸ್ ಸಾಹೇಬರೂ ಆರ್ಗ್ಯುಮೆಂಟ್ ಮಾಡಿದ್ದರಲ್ಲಿ ಆ ಪ್ರಕಾರ ಇವಳು ತಪ್ಪಿತಸ್ಥಳಲ್ಲವೆಂದು ಇವಳಿಗೂ, ಮತ್ತು ಚೆಂಗಯ್ಯಶೆಟ್ಟಿಗೂ ಖುಲಾಸೆ ಆಯಿತು.

ಮೈಸೂರು ಸರ್ಕಾರದವರು ಸಿವಿಲ್‌ಸರ್ವಿಸ್ ಪರೀಕ್ಷೆಯನ್ನು ಈ ವರುಷ ನಡೆಸಬೇಕೆಂದು ತೀರ್ಮಾನಿಸಿರುತ್ತಾರಷ್ಟೆ. ಈ ಪರೀಕ್ಷೆಯಲ್ಲಿ ತೇರ್ಗಡೆಯಂ ಹೊಂದಿ ಕೆಲಸವಂ ಪಡೆಯುವ ಕುತೂಹಲದಿಂದ ಮೈಸೂರು ಸೀಮೆಯ ಆಚೆಯಿರುವಂಥವರೇ ೩೦೦ ಜನರವರೆಗೆ ಅರ್ಜಿ ಮಾಡಿಕೊಂಡಿರುತ್ತಾರೆಂದು ತಿಳಿಯಬರುತಿದೆ.

ಈ ತಿಂಗಳ ೧೯ನೇ ತಾರೀಖು ಶುಕ್ರವಾರದ ದಿನ ಶ್ರೀಮನ್ಮಹಾರಾಣೀ ರೀಜಂಟರವರ ದ್ವಿತೀಯ ಪುತ್ರಿಯವರಿಗೆ ಸುಖಪ್ರಸವವಾಗಿ ಸ್ತ್ರೀಜನನವಾಯಿತೆಂತಲೂ, ತತ್ಸೂಚಕವಾಗಿ ೨೧ ತೋಪುಗಳು ಹಾರಿಸಲ್ಪಟ್ಟು ಮೈಸೂರು ಪಟ್ಟಣದಲ್ಲಿ ಶರ್ಕರೆ ಹಂಚಲ್ಪಟ್ಟಿತೆಂತಲೂ ಕೇಳಿ ಬಹಳ ಸಂತೋಷಿಸುತ್ತೇವೆ.

ಮೈಸೂರು ಶ್ರೀಮನ್ಮಹಾರಾಣಿಯವರ ಹೆಸರಿನಲ್ಲಿ ಸ್ಥಾಪಿಸಲ್ಪಟ್ಟಿರುವ ಬಾಲಿಕಾ ಪಾಠಶಾಲೆಯು ಎರಡನೆಯ ತರಗತಿ ಕಾಲೇಜಾಗಿ ಮಾಡಲ್ಪಡುವದೆಂದು ಹಿಂದಿನ ಪತ್ರಿಕೆಯಲ್ಲಿ ತಿಳಿಸಿದ್ದೆವಷ್ಟೆ. ಸದರೀ ಪ್ರಯತ್ನವು ಅತ್ಯವಶ್ಯವಾಗಿರುವದರಿಂದ ಸದ್ಯಃ ಸದರೀ ಆಲೋಚನೆಯು ಮಂಜೂರು ಮಾಡಲ್ಪಟ್ಟಿತೆಂತ ಈಚೆಗೆ ತಿಳಿಯಬರುತಿದೆ.

ಕಳೆದ ಬೃಹಸ್ಪತಿವಾರದ ದಿನ, ಈ ರಾಜ್ಯವನ್ನು ಮರಳಿ ನೇಟಿವ್ ಅಧಿಕಾರಕ್ಕೆ ವಾಪಸ್ ಕೊಟ್ಟು ಗಳಿಸಿದ ಶ್ರೀಮನ್ಮಹಾರಾಜರವರಿಗೆ ಪಟ್ಟಾಭಿಷೇಕ ಮಹೋತ್ಸವವು ನಡೆದ ಶುಭದಿನವಾದುದರಿಂದ ಅದರ ಗೌರವಾರ್ಥ ಸದರೀ ದಿನ ಮಾಮೂಲನ್ನನುಸರಿಸಿ ಈ ಸಂಸ್ಥಾನದ ವಿಶಿಷ್ಟ ಛಾವಡಿಗಳಿಗೂ, ಪಾಠಶಾಲೆಗಳಿಗೂ ರಜಾ ಕೊಡಲ್ಪಟ್ಟಿತ್ತು.

ಚಿಲ್ಲರೇ ನೌಕರರ ಪೈಕಿ ಯಾರಾದರು ೫೫ ವರುಷ ವಯಸ್ಸಾಗಿ ಇನ್ನೂ ಕೆಲಸ ಮಾಡಲು ಶಕ್ತಿಯುಳ್ಳವರಾಗಿದ್ದರೆಂದು ಆಯಾ ಇಲಾಖೆಯ ಮುಖ್ಯಾಧಿಕಾರಿಗಳು ತಾವೇ ಹುಕುಂ ಮಾಡಿ ಕೆಲಸದಲ್ಲಿ ಇಟ್ಟುಕೊಳ್ಳಬಹುದೆಂತಲೂ, ೬೦ ವರುಷಕ್ಕೆ ಮೇಲ್ಪಟ್ಟ ನೌಕರನ್ನು ಯಾವ ಸಂದರ್ಭದಲ್ಲೂ ಕೆಲಸದಲ್ಲಿಟ್ಟುಕೊಳ್ಳಕೂಡದೆಂತಲೂ, ಅಧಿಕಾರಿಗಳು ಪ್ರತಿವರುಷದಲ್ಲೂ ನೌಕರನು ದೃಢಕಾಯನಾಗಿರುವ ತನಕ ಕೆಲಸದ ಮೇಲಿರುವಂತೆ ಅಪ್ಪಣೆ ಕೊಡಬೇಕೆಂತಲೂ ಹುಕುಂ ಆಗಿದೆ.

ನಂದೀದುರ್ಗ ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜಿಯವರಾದ ಮೆ|| ಟಿ [illegible] ರವರು ಈಗ ಕಾಹಿಲೆ ರಜಾಮೇಲಿರುತ್ತಾರೆಯಷ್ಟೆ. ಸದರೀಯವರಿಗೆ ಮುಂದಿನ ತಿಂಗಳ ೯ನೇ ತಾರೀಖಿನಲ್ಲಿ ರಜಾ ಪೂರ್ತಿಯಾಗಿ ತಮ್ಮ ಕೆಲಸಕ್ಕೆ ವಾಪಸ್ ಬರುವರಾಗಿ ಈಗ ಇವರ ಕೆಲಸವಂ ಬದಲೀ ನೋಡುತಲಿರುವ ಮೆ|| ಕ್ರಸ್ ಸಾಹೇಬರವರು ತಮ್ಮ ಖಾಯಂ ಕೆಲಸವಾದ ಅಷ್ಟಗ್ರಾಮ ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜಿ ಅಧಿಕಾರಕ್ಕೂ, ಮೆ|| ಬಿ. ತಿರುಮಲಾಚಾರ್ಯರವರು ನಗರ ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜಿ ಅಧಿಕಾರಕ್ಕೂ ವಾಪಸ್ ಹೋಗುವರೆಂದು ಕೇಳುತ್ತೇವೆ.

ನೆಲಮಂಗಲ ತಾಲ್ಲೂಕು ಮತ್ತಿಕೆರೆ ಗ್ರಾಮದಲ್ಲಿ ಹೊಲೆಯರ ಜಾತಿಯೊಳು ೭ ವರ್ಷಗಳ ವಯಸ್ಸುಳ್ಳ ಒಬ್ಬ ಹುಡುಗನಿಗೂ, ನಾಲ್ಕು ವರ್ಷಗಳ ವಯಸ್ಸುಳ್ಳ ಒಬ್ಬ ಹುಡುಗಿಗೂ ವಿವಾಹ ನಡೆದ ಸಂಗತಿ ಬೆಂಗಳೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರಿಗೆ ತಿಳಿಯಬರಲು ಸದರೀ ವಿವಾಹಕ್ಕೆ ಕಾರಣಭೂತರಾದ ತಂದೆತಾಯಿಗಳಂ ಹಿಡಿದು ತರಿಸಿ ವಿಚಾರಣೆ ಮಾಡಿ ಭೀ ಇಸಂ ಎರಡು ರೂಪಾಯಿಗಳ ಜುಲ್ಮಾನೆ ವಿಧಿಸಿದರೆಂದು ಕೇಳುತ್ತೇವೆ

ಕೋಲಸ್ಕಿತಿ—ಬಿಸಿಲು ಬಹಳ ಜೋರುಆಗುತ್ತ ಬರುತ್ತ ರಾತ್ರಿ ಕಾಲದಲ್ಲಿ ಸೆಖೆ ದುಸ್ಸಹವಾಗಿದೆ. ಈಚೆಗೆ ಒಂದೆರಡು ದಿನಗಳಿಂದ ಆಗಿಂದಾಗ್ಗೆ ಸ್ವಲ್ಪ ಮೋಡವಾಗುವದಕ್ಕೆ ಪ್ರಾರಂಭವಾಯಿತು. ರಾತ್ರಿ ಕಾಲದೊಳು ಪೂರ್ವ ದಕ್ಷಿಣದಿಕ್ಕುಗಳಲ್ಲಿ ಮಿಂಚುತದೆ ಈ ಚಿನ್ಹೆಗಳಂ ನೋಡಿದಾಗ ಶೀಘ್ರದಲ್ಲೇ ವರ್ಷಬರಬಹುದೆಂದು ಕಾಣುತದೆ ಜನಿಸಿಗಳ ಧಾರಣೆಗಳು ಹಿಂದಿನ ವಾರದಲ್ಲಿ ತಿಳಿಸಿದ್ದಂತೆಯೇ ಇವೆ ಜನಾರೋಗ್ಯವು ಸಾಮಾನ್ಯವಾಗಿದೆ ದನಗಳಿಗೆ ಮೇವು ಕಡಮೆಯಾಯಿತು ಇತರ ವಿಷಯಗಳಲ್ಲಿ ಅಧಿಕಾಂತರವೇನೂ ಇಲ್ಲವು

THE MYSORE GAZETTE
ಮೈಸೂರು ಗೆಜೆಟ

ಗುರುವಾರ, ತಾ|| ೨೫ನೇ ಮಾರ್ಚಿ ೧೮೯೭

ಮೈಸೂರ್ ಗವರ್ನಮೆಂಟಿನವರಿಂದ ಕೊಡೋಣಾದ ಅಪ್ಪಣೆಗಳು.

ಜನರಲ್ ಮತ್ತು ರೆವಿನ್ಯೂ.

ತಾ|| ೨೦ನೇ ಮಾರ್ಚಿ ೧೮೯೭, ಮೊಕ್ಕಾಂ ಮೈಸೂರ್

ಕ್ಯಾಂಪ್ ನಂ||೫೦೧ ಮೈಸೂರು ಅರಮನೆಗೆ [illegible] ಶ್ರೀಮನ್ಮಹಾರಾಜ್ಞೀ ರೀಜೆಂಟರವರಿಗೂ ಮತ್ತು ಅವರ ಕುಟುಂಬಕ್ಕೂ ಪಬ್ಲಿಕ್ ಸಂಘಗಳವರೂ ಮತ್ತು ಇತರ ಜನಗಳಿಂದಲೂ ಕಳುಹಿಸಲ್ಪಟ್ಟ ಕನಿಕರವಾದ ವಿಜ್ಞಾಪನಾ ಪತ್ರಿಕೆಗಳಿಗಾಗಿ ತಮ್ಮ ಮನಃಪೂರ್ವಕವಾದ ಕೃತಜ್ಞತೆಯನ್ನು ಇದರಿಂದ ತಿಳಿಸುತ್ತಾರೆ

ಬೆಂಕಿಯನ್ನು ಆರಿಸುವದರಲ್ಲಿ ಅತಿ ಜಾಗ್ರತೆಯಾಗಿಯೂ ಮತ್ತು ಯತ್ನದಿಂದಲೂ ಸಹಾಯ ಮಾಡಿದ ಸಕಲ ಜನಗಳಿಗೂ ತಮ್ಮ ಕೃತಜ್ಞತೆಯನ್ನು ಶ್ರೀಮನ್ಮಹಾರಾಜ್ಞೀಯವರು ತೋರಿಸುತ್ತಾರೆ ಜಮಾದಾರ್ [illegible] ಯವರ ಅಧಿಕಾರದಲ್ಲಿದ್ದ ಸುಪರ್ [illegible] ಗಳ [illegible] ಕಾಯಿದೆ ಮೀರಿ ಮಾಡಿದ ಸಮಯೋಚಿತ ಸಹಾಯವನ್ನು ಶ್ರೀಮನ್ಮಹಾರಾಜ್ಞೀಯವರು ಕೊಂಡಾಡಿ ಕೃತಜ್ಞತೆಯನ್ನು ತೋರಿಸುತ್ತಾರೆ

ಕೆಲವು ಪ್ರಾಣಹಾನಿಯಾದದ್ದಕ್ಕೆ ಕೇವಲ ವ್ಯಸನ ಪಡುವದಲ್ಲದೆ, ಇದಕ್ಕಿಂತಲೂ ಹೆಚ್ಚಾದದ್ದು ಸಂಭವಿಸದೆ ಇದ್ದದಕ್ಕಾಗಿ ಶ್ರೀಮನ್ಮಹಾರಾಜ್ಞೀಯವರು ಕೃತಜ್ಞತೆಯಿಂದ ಸಂತೋಷಪಡುತ್ತಾರೆ

ತಾ|| ೧೯ನೇ ಮಾರ್ಚಿ ೧೮೯೭

ನಂ||೧೦೪೯೯—ಜ ೧೦೯೩—ಕ್ರಿಮಿನಲ್ ಪ್ರೊಸಿಜ್ಯರ್ ಕೋಡಿನ ೩೭ನೇ ಸೆಕ್ಷನ್ ಅನುಸರಿಸಿ ಶಿವಮೊಗ್ಗ ಡಿಸ್ಟ್ರಿಕ್ಟ್ ಎಕ್ಸ್ಟ್ರಾ ಸ್ಪೆಷಲ್ ಅಸಿಸ್ಟೆಂಟ್ ಕಮಿಷನರ್ ವ ಒಂದನೇ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮ||ರಾ ಬಿ ಶೇಷಗಿರಿರಾಯರಿಗೆ ೧೪೭ನೇ ಸೆಕ್ಷನ್ ಮೇರೆ [illegible] ಗಳ ವಿಷಯದಲ್ಲಿ ಹುಕುಂ ಮಾಡುವಬಗ್ಗೆ ಅಧಿಕಾರ ಕೊಡಲ್ಪಟ್ಟಿರುತ್ತೆ.

ತಾ|| ೨೦ನೇ ಮಾರ್ಚಿ ೧೮೯೭

ನಂ|| ೧೦೬೪೩—ಮಿ ೨೦೫೧—ಇದರಡಿಕಂಡ ಆಸ್ಪತ್ರೆ ಅಸಿಸ್ಟೆಂಟರುಗಳ ಬದ್ಲಿಗಳು ೧೮೯೭ ನೇ ಜುಲೈ ಗುರ್ರೇ ಆಗುಯಿತು ಹುಕುಂ ಮಾಡಲ್ಪಟ್ಟಿರುತಿವೆ—

೧ ಸೀನಿಯರ್ ಆಸ್ಪತ್ರೆ ಅಸಿಸ್ಟೆಂಟ್ ಎಂ ಆರ್ ಪೊನ್ನುಸಾಮಿ ಪಿಳ್ಳೆಯವರು, ಮೈಸೂರ್ ದೇಶೀಯ ಆಸ್ಪತ್ರೆಯ ಸುಪರಿಂಟೆಂಡೆಂಟರಾಗಿ ನೇಮಿಸಲ್ಪಟ್ಟ ರಂಗಸಾಮಿ ಪಿಳ್ಳೆಯವರಿಗೆ ಬದಲಾಗಿ, ಜಾಸ್ತೀ ತಲಬಿನಮೇಲೆ ಸೀನಿಯರ್ ಆಸ್ಪತ್ರೆ ಅಸಿಸ್ಟೆಂಟರಾಗಿರತಕ್ಕದ್ದು ಮತ್ತು ಸಕೆಂಡ್ ಮಾಡಲ್ಪಟ್ಟಿರುತ್ತಾರೆ

೨ ಮೊದಲನೇ ಕ್ಲಾಸ್ ಆಸ್ಪತ್ರೆ ಅಸಿಸ್ಟೆಂಟ್ ಬಿ ಡಿ ಎಂ [illegible] ಪಿಳ್ಳೆಯವರು, ಪೊನ್ನುಸಾಮಿ ಪಿಳ್ಳೆಯವರಿಗೆ ಬದಲಾಗಿ ಸೀನಿಯರ್ ಆಸ್ಪತ್ರೆ ಅಸಿಸ್ಟೆಂಟರಾಗಿರತಕ್ಕವರು

ಮೊಕ್ಕಾಂ ಮೈಸೂರ್, ತಾ|| ೧೬ನೇ ಮಾರ್ಚಿ ೧೮೯೭

ಕ್ಯಾಂಪ್ ನಂ ||೮೩೮—ರೆ ಪೈ ೧೩೮—ಪಿ ೯೨೪—೯೬—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೮೧ ನೇ ಆರ್ಟಿಕಲ್ ಅನುಸರಿಸಿ, ಮೈಸೂರು ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮೆ||ಎಂ ವೆಂಕಟರಾಯರಿಗೆ ಅವರು ಉಪಯೋಗಿಸಿಕೊಳ್ಳುವ [illegible] ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ

ಪೋಲೀಸ್ ಇನ್ಸ್ಪೆಕ್ಟರ್ ಜನರಲ್ಲವರ ಆಫೀಸಿನಲ್ಲಿ ಕೆಲಸನೋಡುತಲಿರುವ ಎಕ್ಸ್ಟ್ರಾ ಅಸಿಸ್ಟೆಂಟ್ ಕಮಿಷನರ್ ಪಿ ಮ|| ಶ್ರೀನಿವಾಸ ರಾಯರು ಸದರಿ ಮೆ|| ಎಂ ವೆಂಕಟರಾಯರು ರಜಾ ಮೇಲಿರುವ ಕಾಲದಲ್ಲಿ ಯಾ ದಾತ್ಸ್ಯಾಂದು ಹುಕುಂ ಕೊಡುವ ಪರಿಯಂತ ಕೆಲಸಕ್ಕಾಗಿ ಮೈಸೂರು ಡಿಸ್ಟ್ರಿಕ್ಟ್‌ಗೆ ಮೊದಲನೇ ಕ್ಲಾಸ್ ಮ್ಯಾಜಿಸ್ಟ್ರೇಟರ ಅಧಿಕಾರಗಳೊಡನೆ ಹಂಗಾಮಿಯಾಗಿ ನಿಯಮಿಸಲ್ಪಟ್ಟಿರುತ್ತಾರೆ

ಮೊಕ್ಕಾಂ ಮೈಸೂರ್ ತಾ|| ೧೮ನೇ ಮಾರ್ಚಿ ೧೮೯೭

ಕ್ಯಾಂಪ್ ನಂ|೮೬೩ ರೆ—ದಿವಾನರ ಆಫೀಸಿಗೆ ಸೇರಿದ ಅಸಿಸ್ಟೆಂಟ್ ಕಮಿಷನರ ಮ| ಬಿ ರಾಮಸ್ವಾಮಿ ಅಯ್ಯರವರು ಡೆಪ್ಯುಟಿ ಕಮಿಷನರವರ ಹಾಜರಿನಲ್ಲಿ ಕೆಲಸಕ್ಕಾಗಿ ಬೆಂಗಳೂರು ಡಿಸ್ಟ್ರಿಕ್ಟ್‌ಗೆ ನಿಯಮಿಸಲ್ಪಟ್ಟಿರುತ್ತಾರೆ

EXTRACT

ಗಸಂದು ರಾಣಿ

[illegible] ಎಂಬ ಒಂದು ಸಣ್ಣ ಸಂಸ್ಥಾನವಿತ್ತು [illegible] ಸ್ವತಂತ್ರವಾಗಿರುವದಕ್ಕೆ [illegible]

[illegible]

ಡೆಂದು ತಿಳಿಸು ಆಕೆಯು ರಾಣಿಯಾಗುವದಕ್ಕೆ ನಿಜವಾಗಿಯೂ ಯೋಗ್ಯಳು ಇದುವರೆಗೂ ರಾಣಿಯಾಗಿದ್ದಳು ಮುಂದೆ ನನ್ನ ಜೀವಮಾನದಲ್ಲಿಯೂ ಆಕೆಯೇ ರಾಣಿಯಾಗಿರಲಿ ನಾನು ಅವಳ ಸೇವಕನೆಂದು ಹೇಳು ಗಸಂದು ಸಂಸ್ಥಾನವನ್ನು ಅವಳೇ ಆಳಲಿ ನನ್ನನ್ನೂ ಆಳಲಿ " [illegible] ರೀತಿ ಹೇಳದೆ ಖಾನನ ಮನೋಭಿಲಾಷೆಯು ರಾಣಿಗೆ ತಿಳಿಯಲು, ತಿರಸ್ಕರಿಸುವದು ನಿಷ್ಫಲವು, ಬಲಾತ್ಕಾರದಿಂದ ಲಾದರೂ ತನ್ನನ್ನು ವಶಮಾಡಿಕೊಳ್ಳದೆ ಬಿಡುವದಿಲ್ಲ ಆಗ ಕಾರಣ ತಂತ್ರವನ್ನೆಸಗುವದೇ ಸರಿ [illegible]

" [illegible] ನಾನು [illegible] ನೀವು [illegible] ನನ್ನನ್ನು [illegible]

[illegible]

ವಳಕೊಂಡಿಕೆಗಳನ್ನು ಸ್ವಲ್ಪವೂ ಚ್ಯುತಿಯಿಲ್ಲದೆ ನೆರವೇರಿ [illegible] ಸಿದ್ಧನಾಗಿದ್ದನು ಪರಸ್ಪರ ಸಂಭಾಷಣೆಯಲ್ಲಿ ಸ್ವಲ್ಪಕಾಲ ಕಳೆಯಲು ರಾಣಿಯು ಸೌಂದರ್ಯಶೀಲವನ್ನು [illegible] ಖಾನನಿಗೆ ಘಂಟೆಗಳು ನಿಮಿಷಗಳಂತೆ ಕಳೆದು [illegible]

ಸ್ವಲ್ಪ ಹೊತ್ತಾಗುತ್ತಲೆ ಖಾನನ [illegible]

[illegible]

NOTICE

VIDYASARA SANGRAHA

[illegible]

HINDU MEDICINE

Price, including Postage Rs 0—0—0

ವೈದ್ಯಸಾರಸಂಗ್ರಹ

[illegible]

[illegible] ಬೆಂಗಳೂರು ಕರ್ನಾಟಕ ಪ್ರೆಸ್ಸಿನ [illegible]

[illegible]

ಜನ್ಮದ ಲಾಭವು.

LEAVE —We hear that Mr. Narahari Rao, District and Sessions Judge, has applied for a further extension of three month's leave to recruit his health Mr. Cress will have therefore to continue to act here for three months more.

EDUCATIONAL DEPARTMENT —The Government have authorised the Inspector General of Education to sanction on his own authority estimates for all works of his *Department, original or repairs, up to the* limit of Rs. 500

NEWS FROM KOLAR.—We hear that a merchant at the Kolar Gold Fields bought gold of the value of Rs. 1500 for Rs 350, from another man After melting it he found that it was pure brass The whereabouts of the man who sold the gold are not known.—E M

JUDGMENT —The District Magistrate, Mr Slight, delivered judgment on the 5th, in the case in which a police servant was charged with preferring a false complaint. The Magistrate found the accused guilty, and sentenced him to suffer three months' rigorous imprisonment

CRIMINAL BREACH OF TRUST —The District Magistrate, Mr Slight, delivered judgment on the 5th, in the case in which W Hewas charged with criminal breach of trust, by Messrs Menkin & Co The Magistrate, on conviction, sentenced the accused to suffer six months' rigorous imprisonment

DISTRICT NORMAL SCHOOL AT KOLAR —The Government have authorized the Inspector General of Education in Mysore to open as a tentative measure, a District Normal School at Kolar, and have it held there until further order, the question of shifting the school from Kolar to Bangalore being reserved for further consideration after some experience is gained of the working of the school in the former station.

The Mysore Gazette.

Bangalore Thursday, 8th April 1897
NOTIFICATIONS BY THE GOVERNMENT OF MYSORE

GENERAL AND REVENUE

No 534, dated, Camp Mysore, 30th March 97
Under Article 203 (b) ( ) of the Mysore Service Regulations, Mr T Denham, M A, Professor of History, Maharaja's College, Mysore, is granted three month's privilege leave on half pay with effect from 2nd April 1897
C No 593 dated, Camp Mysore, 30th March 97
Under Section 12 of the Code of Criminal Procedure, T Parameswara Iyer, General Assistant Commissioner and 2nd C as Magistrate, Hassan district, is appointed a Magistrate of the 1st Class.
Camp No 656, dated, Mysore, 6th April 1897
In exercise of the powers conferred by Section 2 of the Epidemic Diseases Regulation II 1897, the Government of Mysore are pleased to prohibit the bringing of used apparel and bedding (except when carried as the personal baggage of travellers) rags, waste paper and used gunny bags from the territories administered by the Government of Bombay, in Council, including Sind, into any part of the territories of Mysore
No 8317—Fl 696, dated, Camp Mysore, 25th March 1897
The Government of Mysore are pleased to direct that the following be added to the scale fixed in Government Notification No 9064—G 2133, dated 4th December 1894, for the recovery of Stamp duty and Registration fees on documents executed by, or in favour of, Agricultural Banks established in Mysore under the authority of Government —

Stamp duty under Act I of 1897

(1) (c) For every Rs 1 000 or part thereof in excess of Rs 1,000	2 annas
(2) (e) For every Rs 1,000 or part thereof in excess of Rs 1 000	.. 4 annas

Registration fees under Act III of 1877

2. (a) Exceeding Rs 1,000 and not exceeding Rs 5 000	. Rs 2
2 (b) In all other cases	...Rs 4

MYSORE GEOLOGICAL DEPARTMENT.
Notification, No 402—1896 97, dated 2nd April 1897
Under Article 221 of the Mysore Service Regulations, Mr George Lavelle, Prospector, Geological Department, is granted leave without allowance for four months, with effect *from 1st April 1897*

ಕರ್ಣಾಟಕ ಪ್ರಕಾಶಿಕಾ.

೧೮೯೭ನೇ ಇಸವಿ ಏಪ್ರಿಲ್ ತಾ|| ೧೨ನೇ ಸೋಮವಾರ.

ಯೂರೋಪ್ ದೇಶದ ಸ್ತ್ರೀಯರ ನಾಗರಿಕತೆಯಂ ಕುರಿತು.

ಯೂರೋಪ್ ದೇಶೀಯರಾದ ಸ್ತ್ರೀಯರು ಸಾಮಾನ್ಯವಾಗಿ ವೈಲಕ್ಷಣ್ಯ ಪೂರ್ಣವರೆಂತಲೂ ನಾಗರಿಕರೆಂತಲೂ, ಜನಸಮುದಾಯದಲ್ಲಿ ತಾವು ಆಚರಿಸಬೇಕಾದ ಮಾನ ಮರ್ಯಾದಾದಿ ಸಂಪ್ರದಾಯಾದಿಗಳಂ ಚೆನ್ನಾಗಿ ಅರಿತವರೆಂತಲೂ, ವಾಙ್ಮಾಧುರ್ಯ ಪೂರ್ಣವರೆಂತಲೂ, ದಯಾನುರಾಗಯುಕ್ತರೆಂತಲೂ, ಸುಶೀಲೆಯರೆಂತಲೂ ಅನೇಕರು ಅಭಿಪ್ರಾಯಪಟ್ಟು ಅದಂ ಆಯಾ ಸಂದರ್ಭದಲ್ಲಿ ವ್ಯಕ್ತಪಡಿಸುತಲಿರುವುದು ಮಾತ್ರವಲ್ಲದೆ ತಾದೃಶ ಗುಣ ಸಮುದಾಯದಲ್ಲಿ ಕೆಲವನ್ನಾದರು ಹಿಂದೂ ಸ್ತ್ರೀಯರಿಗೆ ಉಂಟುಮಾಡಬೇಕಾದುದು ಅವರ ಹಿತಚಿಂತಕರಾದವರಿಗೆಲ್ಲ ಅವಶ್ಯಕರಣೀಯವೆಂದು ಬೋಧಿಸುತಲಿರುತ್ತಾರೆ ಇದಕ್ಕೆ ಸಕಲಗುಣೋತ್ಪಾದಕವಾದ ವಿದ್ಯಾಜ್ಞಾನವು ಅಪೇಕ್ಷಿತವಾದುದರಿಂದ ನಮ್ಮ ಸ್ತ್ರೀಯರೆಲ್ಲರು ವಿದ್ಯಾವತಿಯರಾಗುತ ಬರುವಷ್ಟರಲ್ಲೆ ಆತ್ಮನಿಷ್ಠಗಳಾದ ಅಜ್ಞಾನಕೃತದೋಷಗಳು ಸ್ವತಃ ಯೇವ ನಿವೃತ್ತಿಯಾಗುವವೆಂದು ನಂಬಿ ತತ್ಪ್ರಯತ್ನದೊಳು ನಿರತರಾಗಿರುತ್ತಾರೆ ಆದರೆ ಜನ್ಮಸಿದ್ಧವಾದ ದುರ್ಗಂಧಗಳಂ ವಿದ್ಯಾಭ್ಯಾಸವು ಶುದ್ಧಾಂಗವಾಗಿ ಹೋಗಲಾಡಿಸಿ ಗುಣಭೇದವನ್ನುಂಟುಮಾಡುವದಕ್ಕೆ ಶಕ್ತವಾಗುತಿದೆಯೇ ಎಂಬ ಅಂಶ ಅದ್ಯಾಪಿ ವಿವಾದಾಸ್ಪದವಾದ ವಿಷಯವಾಗಿಯೇ ಇರುತಲಿದೆ ಇದೊಂದು ಕಡೆ ಹಾಗಿರಲಿ ನಾಗರಿಕ ಸ್ತ್ರೀಲಕ್ಷಣಗಳು ನಮಗೆ ಪ್ರಕಟವಾಗಿ ತಿಳಿಯಬರುವಂತೆಲ್ಲ ಅವಂ ಜನರಿಗೆ ಯಥಾವಸ್ಥಿತವಾಗಿ ಅರುಹಿ, ಅವರು ಪಡೆದಿರುವಂತೆ ಅಭಿಪ್ರಾಯದ ಸಾಧುತ್ವವನ್ನವರೇ ಪರಿಶೀಲನೆ ಮಾಡಿ ತೃಪ್ತಿಯನ್ನೈದುವಂತೆ ಮಾಡಬೇಕಾದುದು ಪತ್ರಿಕಾಲೇಖಕೋದ್ಯೋಗವಾಗಿರುವದರಿಂದ ತಾದೃಶ ಕರ್ತವ್ಯವಂ ನೆರವೇರಿಸುವಬಗ್ಗೆ ಹಂಗೇರಿ ದೇಶದಲ್ಲೀಗ ಅಲ್ಲಿನ ಸ್ತ್ರೀಯರಿಂದ ಸ್ಥಾಪಿಸಲ್ಪಟ್ಟಿರುವ ನರಹತ್ಯಸಂಘದ ವಿಚಾರವನ್ನಿಲ್ಲಿ ಸಂಗ್ರಹವಾಗಿ ತಿಳಿಸಿ, ಸ್ತ್ರೀಯರ ಹೃದಯವು ಎಷ್ಟರ ಕ್ರೂರವಾದುದೆಂಬುದನ್ನೂ, ಅವರೆಷ್ಟು ವಿವೇಕಿಗಳೆನಿಸಿದರೂ ಸಮಯ ಬಂದಾಗ ತಮ್ಮ ದೌರ್ಜನ್ಯಸ್ವಭಾವವಂ ಪರಿಪರಿ ವಿಧದಿಂ ತೋರ್ಪಡಿಸದೆಯೋಗಲಾರರೆಂಬುದನ್ನೂ ಪ್ರಾಮಾಣ್ಯೇನ ಇಲ್ಲಿ ಸೂಚಿಸಬೇಕಾಗಿರುತಿದೆ ಈಗ್ಗೆ ಕೆಲವು ಕಾಲದಹಿಂದೆ ಯೂರೋಪ್‌ಖಂಡಕ್ಕೆ ಸೇರಿದ ರಾಜ್ಯಗಳಲ್ಲೊಂದಾದ ಹಂಗೇರೀ ದೇಶದಲ್ಲಿ ವಿದ್ಯಾವತಿಯರಾದ ಹದಿನೆಂಟು ಮಂದಿ ಸ್ತ್ರೀಯರು ತಮ್ಮ ಪತಿಗಳಿಗೆ ಏಕಕಾಲದಲ್ಲಿ ವಿಷಹಾಕಿ ಎಲ್ಲರನ್ನೂ ಕೊಂದುಹಾಕಿದ ಅಂಶವು ವೃತ್ತಾಂತಪತ್ರಿಕೆಗಳಮೂಲಕ ಇದುವರೆಗೆ ಪ್ರಸಿದ್ಧವಾಗಿತ್ತಷ್ಟೆ. ಈಗ ಕ್ರಮವಾಗಿ ಇತರ ಸಂಘಗಳಂತೆ ನರಹತ್ಯಸಂಘವೊಂದು ಏರ್ಪಾಟಾಗಿ ಅದಕ್ಕೆ ವೈದ್ಯಶಾಸ್ತ್ರಪ್ರವೀಣಳಾದ ಮಂತ್ರಸಾನಿ ಯೊರ್ವಳು ಸಭಾನಾಯಕಿಯಾಗಿಯೂ, ವಿದ್ಯಾವತೀಯರಾದವರಿಬ್ಬರು ಕಾರ್ಯದರ್ಶಿಗಳಾಗಿಯೂ, ಅನೇಕರು ಅಭಿಮಾನಿಗಳಾಗಿಯೂ, ಕೆಲದರು ಏತತ್ಸಂಘಕ್ಕೆ ಪ್ರೋತ್ಸಾಹಕರಾಗಿಯೂ ಏರ್ಪಟ್ಟಿರುತ್ತಾರೆ ಇವರಲ್ಲಿ ಕೆಲವರು ಮಾತೃ ಪಿತೃ ಪುತ್ರ ಇಷ್ಟಬಾಂಧವರೆಂಬ ತಾರತಮ್ಯವಂ ಸಹ ಪರಿಗಣಿಸದೆ ತೋರಿದವರಿಗೆಲ್ಲ ವಿಷಪ್ರಯೋಗವಂಮಾಡಿ ಯಮಪುರಕ್ಕೆ ಕಳುಹಿಸುತ್ತಾರೆ. ಈ ಸಂಘದವರು ರಸಪಾಷಾಣ ಪ್ರಯೋಗ ಮಾಡುವದಕ್ಕಾಗಿ ಮೊದಲು ಆಹಾರ ಪದಾರ್ಥಗಳಲ್ಲಿ ಮದ್ದಿಕ್ಕಿ ಅದನ್ನು ತೆಗೆಯಿಸಿ ವಾಸಿಮಾಡಿಸುವ ವ್ಯಾಜದಿಂ ಡಾಕ್ಟರಿಗಳನ್ನು ಕರೆಯಿಸಿ ಅವರ ಮೂಲಕ ಪ್ರಾಣಾಪಹಾರಕಗಳಾದ ವಿಷ ಪದಾರ್ಥಗಳನ್ನು ಸೇರಿಸಿ ಕೊಡಿಸುತ್ತಾರಂತೆ. ಹೀಗೆ ಮೃತಪಟ್ಟವರ ಶರೀರವನ್ನು ಕುಯಿದು ಅಜಮಾಯಿಷಿ ಮಾಡಿ ನೋಡಲಾಗಿ ೬೨ ಮಂದಿಗೆ ಗರ್ಭಾಶಯದಲ್ಲಿ ವಿಷವು ತಂಗಿ ಅದರ ವ್ಯಾಪಕತೆಯಿಂದ ಮೃತಪಟ್ಟರೆಂದು ಸ್ಪಷ್ಟವಾಯಿತು. ಈ ದೇಶದೊಳು ಸಹ ದುರಾತ್ಮರಾದ ಸ್ತ್ರೀಯರು ಕೆಲವು ತಮ್ಮ ಗಂಡಂದಿರಿಗೆ ಮದ್ದು ಇಡುವ ದುಸ್ಸಂಪ್ರದಾಯವು ಅಧಿಕವಾಗಿರುತಿದೆ. ಇದು ಪ್ರಾರಂಭದಲ್ಲಿ ಅವ್ಯಕ್ತವಾಗಿದ್ದರೂ ಕ್ರಮೇಣ ದೇಹದಲ್ಲಿ ವ್ಯಾಪಿಸಿ ಅನೇಕವಿಧ ಅಪಾಯಗಳಿಗೆ ಆವರುಗ ರಿಮಾಡುತಿದೆ ಪುರುಷನು ತನಗೆ ಅನುಕೂಲನಾಗಿ ಹೇಳಿದಂತೆ ಕೇಳುತಲಿರಬೇಕೆಂಬ ಉದ್ದೇಶದೊಡನೆ ಅನೇಕರು ಇಂತ ದುಷ್ಕಾರ್ಯಗಳಂ ಮಾಡುತ್ತಾರೆ, ಪರಂತು ಅವರು ತಮ್ಮ ದುಷ್ಕಾರ್ಯವನ್ನು ಗೂಢವಾಗಿ ನಡೆಸುತ್ತಾರೆಯೇ ಹೊರತು ಮೇಲೆ ಕಂಡ ಹಂಗೇರಿ ದೇಶದ ಸ್ತ್ರೀಯರಂತೆ ವ್ಯವಸ್ಥಿತವಾದ ಒಂದು ಸಂಘವನ್ನೇರ್ಪಡಿಸಿಕೊಂಡು ಕಸಬುದಾರೀ ರೂಪವಾಗಿ ಕೆಲಸಗಳನ್ನು ನಿರ್ವಹಿಸುವಷ್ಟರ ನಾಗರಿಕತೆಯನ್ನೂ ವೈಲಕ್ಷಣ್ಯವನ್ನೂ ಪಡೆಯದಿರುವದರಿಂದಲೇ ಇವರು ಇನ್ನೂ ನಾಗರಿಕ ಗೋಷ್ಟಿಗೆ ಬಾಹ್ಯರೆನಿಸಿದಾರೆ ಮುಂದೆ ನಮ್ಮ ದೇಶದ ಸ್ತ್ರೀಯರು ಸಹ ವಿದ್ಯಾವಂತರಾಗುತ ಬಂದರೆ ಅವರಿಗಿಂತ ವಿಷಯಗಳು ಅಸಾಧ್ಯಗಳೆಂದು ತೋರಲಾರವು.

ವರದಕ್ಷಿಣೆಯ ನಿರ್ಬಂಧವಂ ಕುರಿತು.

ಹಿಂದೂಗಳಲ್ಲಿ ಮಧ್ಯೆ ಕೆಲವು ಕಾಲದ ಮೊದಲು ನೆರೆಗೊಂಡು ಅನುಸರಿಸಲ್ಪಡುತಬಂದ ಶಾಸ್ತ್ರಗರ್ಹಿತವಾದ ದುಸ್ಸಂಪ್ರದಾಯವೊಂದು ವೈಲಕ್ಷಣ್ಯವಿಶ್ವದಿಂದ ಬದಲಾಯಿಸಿ ರೂಪಾಂತರವನ್ನೈದುತ ಬಂದಿರುವದಕ್ಕಾಗಿ ಬಹಳ ವಿಷಾದಿಸಬೇಕಾಗಿದೆ. ಅಶಾಸ್ತ್ರೀಯವಾದ ಯಾವದುರಾಚಾರದಿಂದ ಬಹುವಿಧ ಅನರ್ಥಗಳುಂಟಾಗುತಿವೆಯೆಂದು ಅನೇಕರು ಮೊರೆಯಿಡುತ ತನ್ನಿವಾರಣಾರ್ಥ ಪ್ರಯತ್ನಪಡುತಲಿದ್ದರೋ ತತ್ತೋಽಪ್ಯತಿಶಯಿತವಾದ ಖೇದವನ್ನೂ, ನಿರ್ಬಂಧವನ್ನೂ ಉಂಟುಮಾಡುವಂತ ದುಷ್ಪದ್ಧತಿ ಯೊಂದು ಈಗ ಪ್ರಚಾರದೊಳು ಬಂದು ಅದಕ್ಕಾಗಿ ರಿಕ್ತಕುಟುಂಬಗಳು ಅನೇಕವಾಗಿ ಚಿಂತಿಸುತಲಿವೆ ಹಿಂದೂಗಳಲ್ಲಿ ಪದಾಸಿಕ್ತ ರ ಕಾಲದೊಳು ರಿಕ್ತರಾದವರು ಕನ್ಯಾಶುಲ್ಕರೂಪವಾಗಿ ತಮಗಿಷ್ಟು ಕೊಡಬೇಕೆಂದು ಕೇಳುವುದೂ, ಕನ್ಯೆಗೆ ಆಭರಣಕ್ಕಾಗಿ ಇಷ್ಟು ಕೊಡಬೇಕೆಂದು ನಿಬಂಧಿಸುವುದೂ, ವ್ರತಿಷ್ಠಾವಸ್ತ್ರಗಳು ಇಷ್ಟರಬೆಲೆಯುಳ್ಳವಾಗಿರಬೇಕೆಂದು ಕೋರುವುದೂ, ಸ್ವಾಸ್ಥ್ಯಕಾಲಿಕವಾಗಿ ಕನ್ಯೆಯ ತಾಯಿಗೆ ಪ್ರತ್ಯೇಕವೇನಾದರು ಕೊಡತಕ್ಕದ್ದೆಂದು ಅಪೇಕ್ಷಿಸುವುದೂ ವಾಡಿಕೆಯಲ್ಲಿದ್ದವು. ಸದರೀ ಸಂಪ್ರದಾಯವು ಈಗಲೂ ಕೆಲವು ಪ್ರದೇಶಗಳಲ್ಲಿ ಅನುಸರಿಸಲ್ಪಡುತಲಿವೆ ಅನೇಕ ದೋಷಗಳಲ್ಲೊಂದಾದುದುಮಾಂಸವಿಕ್ರಯವಂತಲೂ, ಕನ್ಯಾವಿಕ್ರಯವು ತತ್ಸಮಾನವಾದುದೆಂತಲೂ, ಆದಕಾರಣ ಇದು ಕೇವಲ ನೀಚಕೃತ್ಯಗಳಲ್ಲೊಂದೆಂತಲೂ ವಾದಿಸಿ ಜನರ ನಿರೂಪಣೆಗೆ ತರುವುದು ಪ್ರಯಾಸವಾಗಿ ಪರಿಣಮಿಸಿತು. ಈ ಸಂಪ್ರದಾಯದಿಂದ ವರನಿಗೆ ತಕ್ಕ ಕನ್ಯೆಯು ದೊರೆಯುವುದು ಕಷ್ಟಸಾಧ್ಯವಾಗಿಯೂ, ಕದಾಚಿತ್ ರಿಕ್ತರಿಗೆ ಕೇವಲ ಅಸಾಧ್ಯವಾಗಿಯೂ ಪರಿಣಮಿಸಿತು. ಈಗಿನ ಹೊಸಪದ್ಧತಿಯಲ್ಲಾದರೋ ರಿಕ್ತರು ಧನಿಕರು ಸಹ ಸಮಾನವಾಗಿ ಚಿಂತಿಸುವಂತೇರ್ಪಟ್ಟದೆ ತಥಾಪಿ ಅನನ್ಯಗತಿಕರಾದ ಕನ್ಯಾಪಿತೃಗಳ ದುಃಖವಂ ತಿಳಿಸಲಸಾಧ್ಯವಾದುದಾಗಿರುತಿದೆ ಹ್ಯಾಗೆಂದರೆ :—ಈಗ ಕನ್ಯಾಶುಲ್ಕಕ್ಕೆ ಪ್ರತಿಯಾಗಿ ವರದಕ್ಷಿಣೆ ಯೇರ್ಪಟ್ಟು ಅದು ಅನೇಕ ಕುಟುಂಬಗಳನ್ನು ನಿರಂತರ ದುಃಖಕ್ಕೆ ಗುರಿಮಾಡಿದೆ ಈಚೆಗೆ ವಿದ್ಯಾಭ್ಯಾಸವು ವೃದ್ಧಿಯಾಗುತ ಬರುವಂತೆಲ್ಲ ಮಾತಾಪಿತೃಗಳು ಅಕ್ಷರಾಸ್ಯರಾದ ವರನನ್ನು ತಮ್ಮ ಸುತೆಯರಿಗೆ ಹುಡುಕಲಿಕ್ಕೆ ತ್ನಸುತ ಬಂದುದರಿಂದ ಅವರ ಗಿರಾಕಿಯು ದಿನೇದಿನೆ ವೃದ್ಧಿಯಾಗಿ ವರದಕ್ಷಿಣೆಯು "ಇಂಗ್ಲಿಷ್ ಎಕ್ಸ್‌ಚೇಂಜ್" ಅಂದರೆ ನಾಣ್ಯಪರಿವರ್ತನಾಕುಲ್ಕದಂತೆ, ಅನಿಯತವಾಗಿ ಹೆಚ್ಚುತ ಬರುತಲಿದೆ. ಪ್ರಥಮತಃ ವಧುವಿನ ವಿಷಯವಂ ಕುರಿತು ಸ್ವಲ್ಪ ವಿಚಾರ ಮಾಡುವಂ ಹೆಣ್ಣುಮಕ್ಕಳು ಜನಿಸಿದ ಕೂಡಲೆ ಮಾತಾಪಿತೃಗಳ ಚಿಂತೆಯು ಪರಕ್ರಮವಾಗಿ ಅವರ ವಯಸ್ಸು ಕಳೆದಂತೆಲ್ಲ ಅವರ ವಿಷಯಕವಾದ ಮನೋವ್ಯಥೆಯು ಹೆಚ್ಚಾಗು

ವುದು ಸ್ವಾಭಾವಿಕವಾಗಿರುತಿದೆ. ಕನ್ಯೆಗೆ ವರಿಸುವ ಯುಕ್ತಕಾಲವು ಪ್ರಾಪ್ತವಾದ ಕೂಡಲೇ ಕನ್ಯಾಕ್ಷೇಮಾಭಿಲಾಷಿಗಳಾದ ತಾಯಿತಂದೆಗಳಿಗೆ ವರಾನ್ವೇಷಣೆಯಲ್ಲಿ ಭಿನ್ನಾಭಿಪ್ರಾಯಗಳುಂಟಾಗಿ ವೈಮನಸ್ಯಗಳುಂಟಾಗುತಿವೆ. ವರನ ಜಾತಕಫಲವು ಅನಾವಶ್ಯಕವು, ಮನೋಜಯವಿದ್ದರೆ ಸಾಕೆಂದೆಣಿಸಲ್ಪಡುತಿದೆ. ಮತವಿಚಾರವು ಉಪೇಕ್ಷಿತವು. ಮಾವಿ ಸಂಬಂಧಗಳು ಪಶ್ಚಾತ್ ವಧೂವರರಿಗೆ ಸ್ವತಃ ಉಂಟಾಗುವದರಿಂದ ಅದು ಪೃಥಕ್ಕಾಗಿ ವಿಚಾರಾರ್ಹವಲ್ಲವು. ಏಕೆನೆ ವರನೆಂತವನಾಗಿರಬೇಕೆಂದಪೇಕ್ಷಿಸಲ್ಪಡುತಿದೆಯೆಂದರೆ, ಯೂನಿವರ್ಸಿಟಿ ಪರೀಕ್ಷೆಗಳನ್ನು ಕೊಟ್ಟವನಾಗಿದ್ದರೆ ಸಾಕಾಗಿರುತಿದೆ. ವಿದ್ಯಾವಂತನಾದ ಅಳಿಯನ ದೆಸೆಯಿಂದ ತಮ್ಮ ಮಗಳೂ, ತಾವು ಸಹ ವಿಶೇಷ ಸುಖಪಡಬೇಕೆಂಬ ಕೋರಿಕೆಯುಳ್ಳ ಮಾತಾಪಿತೃಗಳ ಮನೋರಥವನ್ನರಿತು ಬಾಲಕರು ತಮ್ಮ ಬೆಲೆಯನ್ನು ತಾವಾಗಿ ಹೆಚ್ಚಿಸಿಕೊಳ್ಳಲೆತ್ನಿಸಿದಾರೆ ಅವರು ಕೋರುವ ವರದಕ್ಷಿಣೆಯಂ ಕೊಡುವುದಕ್ಕೆ ತಾಯಿತಂದೆಗಳಿಗೆ ಉಪಪತ್ತಿ ಇರುವದಿಲ್ಲವು ಇವರ ಹೆಣ್ಣುಮಕ್ಕಳನ್ನವರು ವೃಷ್ಟಸಿಸಹ ನೋಡಲಿಲ್ಲವು. ಪರಿಣಾಮ ಕಾಲವಿಹಾರಿ ಗಿರಾಕಿ ಬರುವತನಕ ಕನ್ಯೆಯರನ್ನಿಟ್ಟುಕೊಂಡಿರಲಿಕ್ಕೆ ಕಾಲದೇಶ ವರ್ತಮಾನ ಸ್ಥಿತಿಯು ತಡೆಪಡಿಸುತಲಿದೆ. ಭವಿಷ್ಯತ್ಪರಿಣಾಮವಂ ಚಿಂತಿಸಿ ಮುಂಚಿತವಾಗಿ ಕನ್ಯೆಯರ ಪಾಣಿಗ್ರಹಣಪಡಿಸಬೇಕಾದುದು ಆವಶ್ಯಕವೆಂಬ ನಿರ್ಬಂಧವು ಅವರಿಗೆ ಅಧಿಕವಾಗಿರುತಿದೆ; ಇದಲ್ಲದೆ ಹೆಣ್ಣುಮಕ್ಕಳು ಪ್ರಾಪ್ತವಯಸ್ಕರಾದ ಬಳಿಕ ಅವರಿಗೆ ವರಿಸುವಂತವರಿಗೆ ಕೊಟ್ಟು ವಿವಾಹ ಮಾಡುವುದು ನಾಗರಿಕಲಕ್ಷಣವಾಗಿ ಏರ್ಪಟ್ಟಿರುವ ಕಾರಣ ಹತ್ತು ಹನ್ನೆರಡು ವರುಷಗಳ ಕಾಲದಲ್ಲಿಯೇ ಬಾಲೆಯರು ಮುಗ್ಧಾವಸ್ಥೆಯಂ ಕಳೆದು ಅಂಗ ಸೌಷ್ಠವದಿಂದ ಮಧ್ಯಾವಸ್ಥೆಯಂ ಕೈಗೊಳ್ಳುತ ಮನೋರಥದಲ್ಲಿ ಪ್ರಾಗಲ್ಭ್ಯವನ್ನೈದಿ ಪ್ರೌಢಾಂಗನೆಯರೆನಿಸಿಕೊಳ್ಳುತ್ತಾರೆ. ಇವರಿಗೆ ಪಾತಿವ್ರತ್ಯ ಧರ್ಮಗಳು ವರನ ದೌರ್ಭಾಗ್ಯವೂ, ಸ್ವಾತಂತ್ರ್ಯ ಉಂಟಾಗುವಾಗ ಪರಕೀಯ ಪ್ರಸಂಗಗಳಲ್ಲಿ ಗುಣದೋಷ ವಿಚಾರ ಪ್ರವೃತ್ತಿಯೂ, ಅನಭಿಮತ ಪ್ರದರ್ಶನೌತ್ಸುಕ್ಯವೂ ನಿರವಧಿಕವಾಗಿ ಉಂಟಾಗುತಿದೆ. ಅವರವರ ನಿವಾಹವು ಅಸಾಧ್ಯವಾಗಿ ಪರಿಣಮಿಸಿದೆ. ಮುಖ್ಯವಾಗಿ ತಮ್ಮ ಸ್ಥಿತಿ ಯಾವತ್ತನ್ನು ಪರಾಧೀನಪಡಿಸಿ, ನಾವರು ತಮ್ಮ ಬೇಗರಾದವರು ಕೇಳುವಷ್ಟರ ಹಣವಂ ಕೊಟ್ಟು ಮಗಳಿಗೆ ಒಬ್ಬನಿಂದ ಮಾಂಗಲ್ಯಧಾರಣೆಯಂ ಮಾಡಿಸಬೇಕಾದ ನಿರ್ಬಂಧವುಂಟಾಗಿರುವದಕ್ಕಾಗಿ ಅನೇಕರು ವ್ಯಥೆಪಡುತಲಿದಾರೆ. ಇನ್ನು ವರನ ಸ್ಥಿತಿಯಂ ಕುರಿತು ವಿಚಾರಮಾಡಿ ನೋಡುವೆವಾದರೆ, ತೋರಿಬರುವದೇನೆಂದರೆ — ಈಗಿನ ಕಾಲದ ವಿದ್ಯಾವಂತರಲ್ಲಿ ನೇಕಡ ಐವತ್ತುಮಂದಿಗಿಂತ ಅಧಿಕವಾಗಿ ಯಾಚಕ ವೃತ್ತಿಯುಳ್ಳವರಾಗಿರುತ್ತಾರೆ. ಇವರಿಗೆ ಭೂಮಿಯೊಳಗಿನ ಜೀವನವೇ ಆಧಾರವು. ಕದಾನ್ನವೇ ಮೃಷ್ಟಾನ್ನವು. ಹೋಟಲ್‌ಗಳಲ್ಲಿರುವವರೇ ಇಷ್ಟಬಾಂಧವರು. ಸಹಭೋಕ್ತೃ ಸಹಪಾಠಿಗಳೇ ಕುಲೀನರು. ಹೋಟಲಿಗಳೇ ಆಶ್ರಯಸ್ಥಾನವು. ಇವರಿಗೆ ತೋರಿದ್ದೇ ಗತಿ. ಇಂತ ಅನುಪಪನ್ನರಾದ ಬಾಲಕರು ಪರೀಕ್ಷೆಗಳಂ ಕೊಟ್ಟು ಉತ್ತೀರ್ಣರಾಗಿ ಡಿಗ್ರಿಗಳಂ ಪಡೆದು ಬಂದ ಕೂಡಲೆ ಅನುಭವಿಸತಕ್ಕ ದುರ್ದಶೆಯು ಕಳೆದ ಎರಡುವಾರಗಳ ಪತ್ರಿಕೆಗಳಲ್ಲಿ ವಿಸ್ತಾರವಾಗಿ ವಿಚಾರ ಮಾಡಲ್ಪಟ್ಟಿರುತಿದೆ. ಇವರಿಗೆ ಸುಲಭವಾಗಿ ಜೀವನೋಪಾಯವು ದೊರೆಯುವದಿಲ್ಲವು ಸರ್ಕಾರ್ ಉದ್ಯೋಗವು ಅಲಭ್ಯವು. ಇತರ ವೃತ್ತಿಯನ್ನವಲಂಬಿಸಲಿಕ್ಕೆ ಉಪಪತ್ತಿ ಸಾಲದು, ಅಥವಾ ಗೌರವಲೋಪ, ವಿದ್ಯಾಭ್ಯಾಸಕ್ಕಾಗಿ ವ್ಯಯಮಾಡಿದ ಹಣಕ್ಕೆ ನೇಕಡ ೮ ಆಣೆಯಂತೆ ಸಹ ಬಡ್ಡಿ ರೂಪವಾದ ಆಯತಿಯು ದುರ್ಲಭವು. ಇಂತವರು ಸ್ವತಃ ವಿವಾಹ ಮಾಡಿಕೊಳ್ಳುವದಕ್ಕೆ ಶಕ್ತಿ ಸಾಲದವರಾಗಿದ್ದಾಗ್ಯೂ ಕುಟುಂಬ ಭರಣಾಸಮರ್ಥತೆಯಿಂದ ಅಂತಶ್ಚಕಿತರಾಗಿ ತಮ್ಮ ಪರಿಶ್ರಮಕ್ಕೂ ಅರ್ಥವ್ಯಯಕ್ಕೂ ತಕ್ಕ ಪ್ರತಿ ಫಲವನ್ನು ಕನ್ಯಾದಾನ ಮಾಡುವಂತವರ ಮೂಲಕ ನಿರೀಕ್ಷಿಸಿ ಧನಕನಕ ವಸ್ತು ವಾಹನ ಗೃಹಾರಾಮಾದಿಗಳಂ ಪಡೆದು ಏಕಕಾಲವಚ್ಛೇದೇನ ಉತ್ತಮ ದಿಶಾಧಿಪನಾಗಬೇಕೆಂಬ ಉತ್ಕಟೇಚ್ಛೆಯುಳ್ಳವರಾಗಿ ಮೆರೆಯುತ ನಿರ್ಲಕ್ಷ್ಯ ಮಾಡಲಾರಂಭಿಸಿರುತ್ತಾರೆ. ಉತ್ತಮವಾದ ಸ್ವಾರ್ಜಿತ ವಿತ್ತವು ದೊರೆಯುವದಿಲ್ಲವು. ಮಧ್ಯಮವಾದ ಪೈತೃಕಧನವು ನಷ್ಟವಾಗಿ ಹೋಗಿರುತಿದೆ. ಅಧಮವಾದ ದಾಯಾದಿಗಳ ಸ್ವತ್ತು ಪ್ರಾಪ್ತವಾಗತಕ್ಕದ್ದಲ್ಲವು ಪರಿಶೇಷಾತ್ ಅಧಮಾಧಮವಾದ ಸ್ತ್ರೀವಿತ್ತಾಪೇಕ್ಷೆಗಳಾಗಿ ತನ್ಮೂಲಕ ಜೀವಿಸಲೆಳೆಸುವಂತವರಿಗೆ ಆತ್ಮ ವಿಕ್ರಯ ದೋಷವು ಸಹ ಪರಿಗಣನೀಯವಲ್ಲದೆ ಹೋಗಿದೆ. ಅನೇಕರು ಅತ್ತೆಮಾವಂದರು ಕೊಡುವ ಅಲ್ಪಸ್ವಲ್ಪ ಧನದಿಂ ಲಾವಾದೇವಿ ಮಾಡಿಕೊಂಡು ಜೀವಿಸುವಂತವರಾಗಿರುತ್ತಾರೆ. ಈ ನೀಚ ಪದ್ಧತಿಯು ದಕ್ಷಿಣೋತ್ತರ ದೇಶಗಳಲ್ಲಿ ಅಧಿಕವಾಗಿ ವ್ಯಾಪಿಸುತ ಬರುತಲಿದೆ. ಈಗ ವಿದ್ಯಾವಂತರೆನಿಸತಕ್ಕವರಿಗೆ ಯುಕ್ತಾಯುಕ್ತ ಪರಿಜ್ಞಾನವು ಧನಾರ್ಜನೆಯ ವಿಷಯದಲ್ಲಿ ವಿಶೇಷತಃ ಇರುವದಿಲ್ಲವೆಂಬುದಕ್ಕೆ ಇದೊಂದು ಸಾಕ್ಷಾತ್ ನಿದರ್ಶನವಾಗಿರುತಿದೆ. ಇದರಿಂದ ಹೆಣ್ಣು ಮಕ್ಕಳನ್ನು ಹಡೆದಿರುವಂತವರು ಪಡುವ ಪರಿಭವವು ಅವರ್ಣನೀಯವಾಗಿದೆ. ಇದಕ್ಕೆ ಪ್ರತಿಕ್ರಿಯೆಯು ಸುಲಭಸಾಧ್ಯವಾಗಿರುವದರಿಂದ ಇದನ್ನರಿತು ಮಾತಾಪಿತೃಗಳು ವರ್ತಿಸುವರಾದರೆ ಆಗ ಈ ಬಾಲಕರ ಮತ್ತು ಅವರ ತಾಯಿ ತಂದೆಗಳ ಅಹಂಕಾರವು ನಿರಸನವಾಗಿ ಮದವು ಇಳಿಯಬಹುದೆಂದೆಣಿಸುತ್ತೇವೆ. ಸ್ತ್ರೀ ಸ್ವಾತಂತ್ರ್ಯವು ಹೆಚ್ಚುವಂತೆಲ್ಲ ಪುರುಷ ಪ್ರಾಬಲ್ಯವು ತಗ್ಗಬೇಕಾದುದು ಸಹಜವಾದುದರಿಂದ ಹಿಂದೂ ಬಾಲೆಯರು ಸ್ವಾತಂತ್ರ್ಯ ಪ್ರವರ್ತನ ಮೂಲಕ ಪ್ರಾಪಕರಾಗಿ ಅಸ್ವಾಧೀನರಾದ ಬಳಿಕಲೇ ಪುರುಷರು ತಮ್ಮ ಅವಿವೇಕಗಳಂ ತಿಳಿದುಕೊಂಡು ಉಚಿತರೀತಿಯಿಂ ಪ್ರವರ್ತಿಸುವರೆಂದೆಣಿಸಬಹುದಾಗಿದೆ. ಅತ್ಯಂತಿಕ ವಿಷಯ ವೈರಾಗ್ಯಾನಂತರ ಇದಂ ಪೂರ್ವಸ್ಥಿತಿಗೆ ತರುವುದು ಹ್ಯಾಗೆ ಅಸಾಧ್ಯವೋ ತದ್ವತ್ ಅನಂತರ ನಮ್ಮ ಅನಭಿಜ್ಞತೆಯಂ ಕುರಿತು ಚಿಂತಿಸುವವು ನಿಷ್ಪ್ರಯೋಜನವೆಂಬ ನಮ್ಮ ಅಭಿಪ್ರಾಯವಂ ಸಮುದರ್ಶಿಗಳು ಅಂಗೀಕರಿಸಿ ಅನುಮೋದಿಸಬಹುದೆಂದೆಣಿಸುತ್ತೇವೆ.

ಈ ಷಹರಿಗೆ ಉಂಟುಮಾಡಲ್ಪಡತಕ್ಕ ತಿರುವ ಜಲವಸತಿಯು.

ಈಗ್ಗೆ ಸುಮಾರು ಆರು ತಿಂಗಳ ಕಾಲದ ಮೊದಲು ಹೆಸರಘಟ್ಟದಿಂದ ನಲ್ಲಿಗಳ ಮೂಲಕ ಈ ಷಹರಿಗೆ ನೀರು ಸರಬರಾಯಿಯಾಗುತಲಿದೆಯಷ್ಟೆ. ಈ ವಿಷಯದೊಳು ಅದಕ್ಕಾಗಿ ಏರ್ಪಡಿಸಲ್ಪಟ್ಟಿರುವ ಇಲಾಖೆಯವರು ಅನುಸರಿಸುತಬರುವ ಕ್ರಮವಂ ಕುರಿತು ಸ್ವಲ್ಪ ವಿಚಾರ ಮಾಡಬೇಕಾಗಿರುತಿದೆ. ಮೊದಲು, ಇಷ್ಟುದೂರಕ್ಕೊಂದು ಟ್ಯಾಪ್ ಎಂಬ ಕೊಳಾಯಿಯನ್ನಿಡಬೇಕೆಂಬ ನಿಯಮವಿಲ್ಲದೆ, ಕೆಲವು ಪ್ರದೇಶಗಳೊಳು ಒಂದಕ್ಕೊಂದು ಕೆಲವು ಗಜಗಳ ದೂರದಲ್ಲಿ ಮೂರು ನಾಲ್ಕು ನಲ್ಲಿಗಳೂ, ಕೆಲವು ಬೀದಿಗಳಲ್ಲಿ ಬಹುದೂರದ ಮೇಲೊಂದೂ ಇಡಲ್ಪಟ್ಟಿರುತಿದೆ. ಇನ್ನು ಕೆಲವು ದೊಡ್ಡ ಬೀದಿಗಳಲ್ಲಿ ಸುತರಾಂ ಇಲ್ಲವೇಯಿಲ್ಲವು. ಇಂತ ಕ್ರಮವಂ ಕುರಿತು ಯೋಚಿಸಲಾಗಿ ಗವರ್ನಮೆಂಟಿನವರು ಸದರೀ ಇಲಾಖೆಯವರ ಮನಸ್ವೀ ವರ್ತನಕ್ಕೆ ಅವಕಾಶ ಕೊಟ್ಟರುವಂತೆ ಕಾಣುತಿದೆಯೆ ಹೊರ್ತು ಒಂದು ಕ್ರಮವನ್ನನುಸರಿಸಿ ಕೊಳಾಯಿಗಳನ್ನಿಟ್ಟು ಪ್ರಜೆಗಳೆಲ್ಲರಿಗೂ ನೀರಿನ ವಿಷಯದಲ್ಲಿ ಸಮಾನವಾದ ಅನುಕೂಲ್ಯವಂ ಕಲ್ಪಿಸಬೇಕೆಂಬ ನಿರ್ಬಂಧವನ್ನುಂಟುಮಾಡಿರುವಂತೆ ತೋರಲಿಲ್ಲವು. ಈ ನೀರಿನ ಸರಬರಾಯಿ ಬಗ್ಗೆ ಕಂದಾಯ ಮೊಕರರ್ ಮಾಡಲ್ಪಡುವ ಕಾಲದಲ್ಲಿ ಅದನ್ನೆಲ್ಲರೂ ಸಮಾನವಾಗಿ ಕೊಡಬೇಕಾದವರಾಗಿರುವದೇ ಹೊರ್ತು ಅಪರಪ್ರಯೋಜನಾನುಭವಕ್ಕೆ ತಾವು ಗುರಿಮಾಡಲ್ಪಡಲಿಲ್ಲವೆಂಬ ವಾದವು ಪರಿಗಣನೀಯವಲ್ಲದೆ ಹೋಗುವದರಲ್ಲಿ ಸಂಶಯವಿಲ್ಲವು. ಮತ್ತು ಈಗ ಇಡಿಸಲ್ಪಟ್ಟಿರುವ ಕೊಳಾಯಿಗಳ ಬಂದೋಬಸ್ತು ವಿಷಯವು ಅನಾವಶ್ಯಕತ್ವೇನ ಭಾವಿಸಲ್ಪಟ್ಟಿರುವಂತೆ ಕಾಣುತಿದೆ. ಈಚೆಗೆ ಇಡಲ್ಪಟ್ಟ ಕೊಳಾಯಿಗಳ ಕೈ ಪಿಡಿಗಳು ಅನೇಕ ಸ್ಥಳಗಳಲ್ಲಿ ಮುರಿದುಹೋಗಿ ನೀರು ಬರುವದಕ್ಕೆ ಅವಕಾಶವಿಲ್ಲದೆ ಅಲ್ಲಿನ ಜನರು ಅದಕ್ಕಾಗಿ ಬಹುದೂರ ಹೋಗಬೇಕಾಗಿದೆ. ಈ ಕೊಳಾಯಿಗಳಲ್ಲಿ ಬರತಕ್ಕ ನೀರು ಅರ್ಧಭಾಗಕ್ಕಿಂತಲು ಅಧಿಕವಾಗಿ ದುರ್ವಿನಿಯೋಗವಾಗುತಲಿದೆ. ಕುಡಿಯುವ ನೀರೆಂದು ಹೆಸರಿಟ್ಟುಕೊಂಡು, ಮಾರ್ಗದಲ್ಲಿ ಸಂಚರಿಸುವ ಜನರಿಂದ ಕಾಲ್ತೊಳೆಯುವದಕ್ಕೆ ಅತಿಯಾಗಿ ಉಪಯೋಗಿಸಲ್ಪಡುತಿರುವುದು ಮಾತ್ರವಲ್ಲದೆ ಕೊಳಾಯಿಗಳ ಕೈಪಿಡಿಗಳಂ ತಿರುಗಿಸಿಬಿಟ್ಟು ಹೋಗುವದರಿಂದಲೂ ನೀರು ವ್ಯರ್ಥವಾಗುತಲಿದೆ. ಇದೂ ಅಲ್ಲದೆ ಬೀದಿಗಳಲ್ಲಿ ಆಡುವ ಸಣ್ಣ ಹುಡುಗರು ಮನಸ್ವೀ ನೀರನ್ನು ಬಿಟ್ಟು ಆಡಿ ಗಲ್ಲಿ ಕುಣಿದಾಡುತ್ತಾರೆ. ಈರೀತಿ ದೂರದಿಂದ ಬರತಕ್ಕ ನೀರು ಮನಸ್ವಿ ವ್ಯರ್ಥವಾಗುವದಕ್ಕೆ ಪ್ರಾರಂಭವಾದಮೇಲೆ ಒಂದು ಸಂವತ್ಸರಕ್ಕೆ ಸರಬರಾಯಿ ಆಗಬಹುದಾದುದು ಆರುತಿಂಗಳಗೇನೇ ಮುಗಿದು ಹೋಗುವದರಲ್ಲಿ ಸಂಶಯವಿಲ್ಲವು. ಆದುದರಿಂದ ಈ ನೀರಿನ ಸರಬರಾಯಿ ವಿಷಯದಲ್ಲಿ ಒಂದುವಿಧ ಕ್ರಮವಾದರೂ ಏನಿಯೂ ದರೂ ಇಲ್ಲವೆಂದು ಧಾರಾಳವಾಗಿ ಹೇಳಬಹುದಾಗಿದೆ. ಈ ಬಗ್ಗೆ ಕಂದಾಯ ವಸೂಲೀಗೆ ಪ್ರಾರಂಭವಾಗುವ ಕಾಲದಲ್ಲಿ ಬಹುವಿಧ ತಕರಾರುಗಳುಂಟಾಗುವದರಲ್ಲಿ ಸಂಶಯಲೇಶವೂ ಇಲ್ಲಾರದು. ಮುಖ್ಯವಾಗಿ ಈ ವಿಷಯಕ್ಕೆ ಗವರ್ನಮೆಂಟಿನವರು ಕೂಡಲೆ ಪೂರ್ಣಾವಧಾನವಂ ಕೊಟ್ಟು ಇದನ್ನೊಂದು ಕ್ರಮಕ್ಕೆ ತಂದು ಸರ್ವ ಜನೋಪಯುಕ್ತವಾಗ ಮಾಡದೆ ಹೋಗುವ ಪಕ್ಷದಲ್ಲಿ ಈ ವಿಷಯದೊಳು ಅವರು ನಿರೀಕ್ಷಿಸುವ ಕೀರ್ತಿ ಪ್ರತಿಷ್ಠೆಗಳು ಸಿದ್ಧವಾಗಿರುವದೆಂದು ನಾವು ನಂಬಲಾರೆವು.

LOCAL AND PROVINCIAL NEWS

ಒಳದೇಶ ಮತ್ತು ತಾಲ್ಲೂಕುಜಾತ ವೃತ್ತಾಂತಗಳು.

ಫ್ರೇಜರ್‌ಟೌನ್ ಬಳಿ ವಾಂತಿಭೇದಿ ರೋಗ ವ್ಯಾಪಿಸಿರುವಂತೆ ಕೇಳಿ ಬಹಳ ಚಿಂತಿಸುತ್ತೇವೆ

ದಿವಾನರವರೂ ಕೌನ್ಸಿಲ್ ಮೆಂಬರುಗಳೂ ಈ ತಿಂಗಳ ೪ನೇ ತಾರೀಖಿನ ಬೆಳಗ್ಗೆ ಈ ಊರಿಗೆ ಬಂದುಸೇರಿದರು.

ಈದಿನ ಮೇಷ ಸಂಕ್ರಮಣವಾದುದರಿಂದ ಮಾಮೂಲಿ ಅನುಸರಿಸಿ ಈ ಸಂಸ್ಥಾನದ ಪಕಿಸ್ಟ ಇಲಾಖೆಗಳಿಗೂ ರಜಾ ಕೊಡಲ್ಪಟ್ಟದೆ.

ಕಳೆದವಾರದ ಪತ್ರಿಕೆಯ ಮೂಲಕ ತಿಳಿಸಿದ್ದಂತೆ ಶ್ರೀಮನ್ಮಹಾರಾಜಾ ಸಾಹೇಬರವರು ತಮ್ಮ ವಿದ್ಯಾಗುರುಗಳಾದ ಮಿ॥ ಫ್ರೇಜರ್ ಸಾಹೇಬರವರೊಡನೆ ಕಳೆದ ಬುಧವಾರದ ದಿನ ನೀಲಗಿರಿಗೆ ದಯಮಾಡಿದರೆಂದು ತಿಳಿಯಲಾದೆವು.

ಈ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರವರು ಈಗ ಕೊಡಗು ಪ್ರಾಂತಕ್ಕೆ ಸರ್ಕ್ಯೂಟಿ ಹೋಗಿರುತ್ತಾರಷ್ಟೆ. ಸದರೀ ಅಧಿಕಾರಿಯು ಈದಿನ ಇಲ್ಲಿಗೆ ವಾಪಸ್ ಬಂದು ಇನ್ನು ಮೂರು ನಾಲ್ಕು ದಿನಗಳೊಳಗಾಗಿ ಬೇಸಿಗೆಯ ಬಗ್ಗೆ ನೀಲಗಿರಿಗೆ ಪ್ರಯಾಣಮಾಡುವರೆಂದು ಕೇಳುತ್ತೇವೆ

ಇಲ್ಲಿನ ಮಿಲಿಟರಿ ಸ್ಟೇಷನಿಗೆ ಸೇರಿದ ಪೊಲೀಸ ಸಾರ್ಜೆಂಟನೊಬ್ಬತನು ತಪ್ಪು ಫಿರ್ಯಾದ ಮಾಡಿದ ಅಪರಾಧದ ಬಗ್ಗೆ ಅಲ್ಲಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಆಪಾದಿಸಲ್ಪಟ್ಟು ಮೂರು ತಿಂಗಳ ಕಠಿಣ ಕೈದ್ ಸಜಾ ವಿಧಿಸಲ್ಪಟ್ಟನು.

ಈ ಸಂಸ್ಥಾನದ ದಿವಾನರಾದ ಸರ್. ಕೆ. ಶೇಷಾದ್ರಿ ಅಯ್ಯರವರು ಒಂದು ವರ್ಷದ ಫರ್ಲೋ ರಜಾ ಪಡಕೊಳ್ಳುವ ಆಲೋಚನೆಯಲ್ಲಿರುವಂತೆ ಈಚೆಗೆ ಈ ಪುರದಲ್ಲೊಂದು ಪ್ರವಾದ ಹುಟ್ಟಿರುತದೆ. ಪರಂತು ಇದರ ನಿಜಸ್ಥಿತಿಯು ಮುಂದೆ ತಿಳಿಯಬೇಕಾಗಿರುತದೆ.

ಚಿತ್ರದುರ್ಗ ಡಿಸ್ಟ್ರಿಕ್ಟ್ ಯಾವಾಗಲೂ ಶುಷ್ಕಭೂಮಿಯಾಗಿ ಸಕಾಲದಲ್ಲಿ ಮಳೆ ಬಾರದೆ ಹೋಗುವದರಿಂದ ಅದಕ್ಕೆ ಸೇರಿದ ಕೆಲವು ತಾಲ್ಲೂಕುಗಳಲ್ಲಿ ತರೀ ಜಮೀನುಗಳ ಕಂದಾಯದಲ್ಲಿ ಅರ್ಧ ರಿಮಿಷನ್ ಕೊಡುವಂತೆ ಗವರ್ನಮೆಂಟಿನವರು ಹುಕುಂ ಮಾಡಿರುವಂತೆ ಕೇಳುತ್ತೇವೆ.

ನಂದೀದುರ್ಗ ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜಿಯವರಾದ ಮಿ॥ ಟಿ. ನರಹರಿರಾಯರವರು ಮೂರಳ ಮೂರು ತಿಂಗಳ ಕಾಹಿಲೇ ರಜಾ ಪ್ರಯಿಷ್ ಮಾಡಿರುವಂತೆಯೂ ಅದುವರೆಗೆ ಮಿ॥ ಕ್ರಿಸ್ ಯವರೇ ಬದಲೀ ನೋಡುತಲಿರುವರೆಂತಲೂ ತಿಳಿಯಬರುತಿದೆ.

ವಿದ್ಯಾಭ್ಯಾಸದ ಇಲಾಖಾ ಕಟ್ಟಡಗಳ ರಿಪೇರಿ, ಅಥವಾ ಹೊಸ ಕಟ್ಟಡಗಳು ಕಟ್ಟಿಸಲ್ಪಡಬೇಕಾದುದು ಆವಶ್ಯಕವಾಗಿ ಕಂಡುಬಂದು, ಅದರ ಲಾಗವತ್ತು ೫೦೦ ರೂಪಾಯಿಗಳಿಗೆ ಮೀರದೆ ಇರುವ ಪಕ್ಷದಲ್ಲಿ ಸದರೀ ಇಲಾಖಾ ಇನ್ಸ್‌ಪೆಕ್ಟರ್ ಜನರಲವರು ಸ್ವತಂತ್ರಿಸಿ ಮಂಜೂರ್ ಮಾಡಬಹುದೆಂದು ಗವರ್ನಮೆಂಟಿನವರು ಅವರಿಗೆ ಅಧಿಕಾರ ಕೊಟ್ಟಿರುವದಾಗಿ ತಿಳಿಯಲಾದೆವು.

ಈಚೆಗೆ ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ದರೋಡೆಗಳು ಅಧಿಕವಾಗಿ ನಡೆಯುತಲಿರುವದು ಮಾತ್ರವಲ್ಲದೆ ಒಂದು ವಾರದೊಳಗಾಗಿ ಹನ್ನೆರಡು ದರೋಡೆಗಳು ನಡೆದಂತೆಯೂ, ಸದರೀ ಗುಂಪಿನವರ ಪುಂಡನ್ನು ಅಡಗಿಸುವದಕ್ಕೆ ಅಲ್ಲಿನ ಪೊಲೀಸ್ ಶಿಬ್ಬಂದಿಯು ಸುತರಾಂ ಅಶಕ್ತವಾದುದಾಗಿರುವಂತೆಯೂ ಕೇಳುವದಕ್ಕೆ ಬಹಳ ವಿಷಾದಿಸುತ್ತೇವೆ.

ಇಲ್ಲಿನ ಗವರ್ನಮೆಂಟ್ ಗರ್ಲ್ಸ್ ಸ್ಕೂಲಿನಲ್ಲಿ ಹಿಂದೆ ಉಪಾಧ್ಯಾಯರಾಗಿದ್ದ ಬಟ್ಟವರ್ಧನ ಸುಬ್ರಾಯಶಾಸ್ತ್ರಿ ಎಂಬವರು ಕಳೆದ ಗುರುವಾರದದಿನ ಬೆಳಗ್ಗೆ ಸುಮಾರು ಒಂಭತ್ತು ಘಂಟೆಯವೇಳೆಯಲ್ಲಿ ಲಾಲ್‌ದಾಸ್ ವೆಂಕಟರಮಣಸ್ವಾಮಿ ದೇವಸ್ಥಾನದಬಳಿ ಹೋಗುತಿರುವಲ್ಲಿ ಯಾವಕಾರಣದಿಂದಲೋ ಕೆಳಗೆ ಬಿದ್ದು ಕೂಡಲೆ ಮೃತಪಟ್ಟರೆಂದು ಕೇಳುತ್ತೇವೆ.

ಮುಂಬೈ ಪ್ರಾಂತದಿಂದ ಕಿರ್ಲೋಸ್ಕರ್ ನಾಟಕ ಕಂಪೆನಿಯವರು ಈ ಊರಿಗೆ ಬಂದು ಹಿಂದಿ ಭಾಷೆಯಲ್ಲಿ ನಾನಾವಿಧ ನಾಟಕಗಳಂ ಆಡುತಲಿದಾರೆ. ಈ ನಾಟಕವಂ ನೋಡುವದರಲ್ಲಿ ತದ್ಭಾಷಾ ಪರಿಚಯವುಳ್ಳ ಜನರಿಗೆ ಮಾತ್ರ ವಿಶೇಷ ಆಸಕ್ತಿಯುಂಟಾಗಿರುವದರಿಂದ ಸದರೀ ಕಂಪೆನಿಯವರ ಆಯತಿಯು ಪರಿಮಿತವಾಗಿರುವಂತೆ ಕೇಳುತ್ತೇವೆ.

ಈಗ್ಗೆ ಹದಿನೈದು ದಿನಗಳ ಹಿಂದೆ ಒಂದು ದಿನ ಸಾಯಂಕಾಲ ಬಂದು ಹದ ಮಳೆ ಬಿದ್ದಂತೆ ಹಿಂದಿನ ವಾರದಲ್ಲಿ ತಿಳಿಸಿರುತ್ತೇವಷ್ಟೆ. ಅಂದಿನಿಂದೀಚೆಗೆ ವರ್ಷವಾಗಲಿ ಅದರ ಸೂಚನೆಗಳಾಗಲಿ ಇಲ್ಲವು. ಬಿಸಿಲು ಅತಿ ತೀಕ್ಷ್ಣವಾಗಿದೆ. ಜಿನಸಿಗಳ ಧಾರಣೆಗಳು ಪ್ರಾಯಶಃ ಒಂದೇ ವಿಧವಾಗಿವೆ. ರೋಗಾದ್ಯುಪದ್ರವಗಳು ಯಾವದೂ ಸದ್ಯಃ ಇಲ್ಲವು.

ಗವರ್ನಮೆಂಟ್ ಉದ್ಯೋಗಸ್ಥರು ಮ್ಯುನಿಸಿಪಲ್ ಕಮಿಷನರುಗಳಾಗಿ ಚುನಾಯಿಸಲ್ಪಡಬಹುದೆಂತಲೂ, ಪರಂತು ಅವರು ತಮ್ಮನ್ನು ಹಾಗೆ ಚುನಾಯಿಸುವದಕ್ಕಾಗಿ ತಮ್ಮ ಡಿವಿಜನ್ನಲ್ಲಿರುವ ಮನೆ ಮನೆಗೂ ಹೋಗಿ ಅಲ್ಲಿನ ಜನರು ತಮಗಾಗಿ ಸಮ್ಮತಿಯಂ ಕೊಡುವಂತೆ ಅವರಂ ಪೀಡಿಸಿ ದಾಕ್ಷಿಣ್ಯ ಪ್ರಯೋಗ ಮಾಡಕೂಡದೆಂತಲೂ ಗವರ್ನಮೆಂಟಿನವರು ಈಚೆಗೆ ನಿಬಂಧನೆ ಮಾಡಿರುವಂತೆ ಕೇಳುತ್ತೇವೆ

ಈ ಊರ ಬಳ್ಳಾಪುರದ ಪೇಟೆಯಲ್ಲಿರುವ ಹೊಗೇಸೊಪ್ಪಿನ ಉಗ್ರಾಣಯ್ಯ ಶೆಟ್ಟರು ತೆಗೆಯಿಸಿರುವ ಭಾವಿಯಲ್ಲಿ ಕಳೆದ ಬುಧವಾರದ ದಿನ ರಾತ್ರಿ ಸುಮಾರು ಮೂರು ಘಂಟೆ ಸಮಯದಲ್ಲಿ ಅದೇ ಪೇಟೆಯೊಳಿರುವ ಶಿವಾಚಾರಜಾತಿ ಸುಮಾರು ನಾಲ್ವತ್ತು ವರುಷಗಳ ವಯಸ್ಸುಳ್ಳ ಹೆಂಗಸೊಬ್ಬಳು ಬಿದ್ದು ಮೃತಪಟ್ಟಳು. ಮಾರುದಿನ ಬೆಳಗ್ಗೆ ಈ ವರ್ತಮಾನವು ಹೊರಗಾಗಿ ಪೊಲೀಸ್‌ನವರು ಬಂದು ಮುರ್ದೆಯನ್ನು ತೆಗೆಯಿಸಿ ವಿಚಾರಣೆ ಮಾಡಿ ದಫ್ನ ಮಾಡುವದಕ್ಕೆ ವಾರಸುದಾರರಿಗೆ ಒಪ್ಪಿಸಿದರು

ಚನ್ನಪಟ್ಟಣಕ್ಕೆ ಸುಮಾರು ಮೂರು ಮೈಲಿಗಳ ದೂರದಲ್ಲಿರುವ ಒಂದು ಗ್ರಾಮದಲ್ಲಿ ಒಬ್ಬ ಬಲಗೈಯವನು ಮತ್ತೊಬ್ಬ ಬಲಗೈಯವನು ತನ್ನ ಹೆಂಡತಿಯನ್ನು ಇಟ್ಟುಕೊಂಡಿದ್ದನೆಂದು ಕಳೆದ ಮಾರ್ಚಿ ೧೪ನೇ ತಾರೀಖಿನಲ್ಲಿ ಅತಿ ಕ್ರೂರಬುದ್ಧಿಯೊಡನೆ ಅವನನ್ನು ಕುಡಗೋಲಿನಿಂದ ಕತ್ತರಿಸಿಬಿಟ್ಟನು. ಅದೇ ರಾತ್ರಿ ತಾನು ಮಾಡಿದ ಕೃತ್ಯವನ್ನು ಸರ್ಕಾರಕ್ಕೆ ತಿಳಿಸಿದನು. ಕೂಡಲೆ

ಪೋಲೀಸಿನವರು ಆಕೆನ ಮೇಲೆ ವಹರೆ ಇದ್ದು ಹೆಣವನ್ನು ಆಸ್ಪತ್ರೆಗೆ ತಂದು ಆಪರೇಷನ್ ಮಾಡಿ ನಬೆಡಿವಿದನ್ನಲ್ಲಿ ಅಪರಾಧಿಯು ಕೈಹಿಡಿಯುತ್ತ ಶೆಗದುಕೊಂಡು ಸೆರ್ಜನಿಗೆ ಕವಿಬಿ ಮಾಡಿದ್ದು ಶ್ರುತಿ—ವ್ಯ. ಪ.

ಹುಂಡಿ ಕೃಷ್ಣಮಾಚಾರ್ರಿಗೆ ಬರತಕ್ಕ ಸಾಲವನ್ನು ವಸೂಲು ಮಾಡಿಕೊಳ್ಳುವದಕ್ಕೆ ಇವರ ಹಿರೀಮಕ್ಕಳಾದ ರಂಗ ಶ್ರೀನಿವಾಸಾಚಾರ್ರಿಗೆ ವಾರಸ ಸರ್ಟಿಫಿಕೇಟು ಕೊಡಲ್ಪಟ್ಟು ಇವರ ಕಿರಿ ಮಕ್ಕಳಾದ ಮೈನರ್ ಶೇಷಾದ್ರಿ ನರಸಿಂಹಾಚಾರ್ರು ಕ್ಷೇಮಾರ್ಥವಾಗಿ ಸೆಷೆಕೋರ್ಟಿನವರು ರಂಗಶ್ರೀನಿವಾಸಾಚಾರ್ರು ಸಾಲ ವಸೂಲ್ಮಾಡಿದ ಹಾಗೆಲ್ಲ ಅರ್ಧ ವೊಬಲಗನ್ನು ಇವರ ತನ್ಹ ನಿಗೋಸ್ಕರ ಹಾಜರ್ಮಾಡಬೇಕೆಂದು ಆರ್ಡರ್ ಮಾಡಿತು. ಈಗ ಇವರು ೭೬ ಸಾವಿರ ಚಿಲ್ಲರೆ ರೂಪಾಯಿ ವಸೂಲ್ಮಾಡಿದ ಹಾಗೂ, ೭೫ ಸಾವಿರ ಚಿಲ್ಲರೆ ರೂಪಾಯಿ ಖರ್ಚು ಮಾಡಿದಹಾಗೂ ಲೆಕ್ಕವನ್ನು ಕೊಟ್ಟದ್ದಾರೆ. ಈ ಲೆಕ್ಕದ ನಿಜಸ್ಥಿತಿ ತಕರಾರಿನಲ್ಲಿದೆ. ಈಗ ಮೈನರ ತರಫೆ ಡಿಸ್ಟ್ರಿಕ್ಟ್ ಜಡ್ಜರವರಕೋರ್ಟಿನಲ್ಲಿ ಡಿಟೋ ರಂಗಶ್ರೀನಿವಾಸಾಚಾರ್ರ್ಯರು ಸಾಲವನ್ನು ವಸೂಲ್ ಮಾಡಿಕೊಂಡು ತನ್ನ ಕಡೆಗಳು ಇದ್ದಾಗಲೇ ವಸೂಲ್ ಆದಹಾಗೆ ಮಿಂದಲ ತಾರೀಖು ಹಾಕಿ ವತ್ರಗಳಗೆ ಮರಾ ಬಸಿನುತಾರೆಂದು ವಗೈರೆ ಅರ್ಜಿ ಕೊಟ್ಟದ್ದರ ಮೇಲೆ ಪತ್ರಗಳನ್ನೆಲ್ಲಾ ಕೋರ್ಟಿಗೆ ಹಾಜರ್ಮಾಡಬೇಕೆಂದು ನೋಟೀಸ್ ಕೊಟ್ಟದ್ದಾರೆ:—ವ್ಯ. ಪ.

THE MYSORE GAZETTE.
ಮೈಸೂರು ಗೆಜೆಟು.

ಗುರುವಾರ, ತಾ|| ೪ನೇ ಏಪ್ರಿಲ್ ೧೮೯೭,
ಮೈಸೂರ ಗವರ್ನಮೆಂಟಿನವರಿಂದ ಹೊರಡಿಸಿದ
ಇಸ್ತಿಹಾರನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾ|| ೩೧ನೇ ಮಾರ್ಚ್ ೧೮೯೭, ಮೊಕ್ಕಾಂ ಮೈಸೂರ್

ಕ್ಯಾಂಪ್ ನಂ|| ೫೯೪,—ಮೈಸೂರ ಸರ್ವಿಸ ರೆಗ್ಯುಲೇಷನ್‌ಗಳ ೨೦೩ (ಬಿ) (1)ನೇ ಆರ್ಟಿಕಲ್ ಅನುಸರಿಸಿ, ಮೈಸೂರ ಮಹಾರಾಜರವರ ಕಾಲೇಜಿನ ಚರಿತ್ರೆಯ ಪಂಡಿತರಾದ ಮೆ|| ಟಿ ಡೆಣ್ಯಾಂ, ಎಂ. ಎ ಯವರಿಗೆ, ೧೮೯೭ನೇ ಏಪ್ರಿಲ್ ೨ನೇ ತಾರೀಖ ಲಾಗಾಯತು ನಿಶ್ಚಯಿಸಿದ ಮೇಲೆ ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ|| ೩ ೫೯೩—ಕ್ರಿಮಿನಲ್ ಪ್ರೊಸೀಜರ್ ಕೋಡಿನ ೧೦ನೇ ಸೆಕ್ಷನ್ ಅನುಸರಿಸಿ, ಹಾಸನ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮಿಷನರ ೩ನೇ ಎರಡನೇ ಕ್ಲಾಸ ಮಾಜಿಸ್ಟ್ರೇಟು ಮೆ|| ಟಿ. ಪರಮಶಿವ ಅಯ್ಯರವರು ೧ನೇ ಕ್ಲಾಸ ಮ್ಯಾಜಿಸ್ಟ್ರೇಟಾಗಿ ನೇಮಕಮಾಡಲ್ಪಟ್ಟಿರುತ್ತಾರೆ.

ತಾ|| ೩ನೇ ಏಪ್ರಿಲ್ ೧೮೯೭, ಮೊಕ್ಕಾಂ ಮೈಸೂರ

ಕ್ಯಾಂಪ್ ನಂ|| ೬೩೭—ಸನ್ ೧೮೯೭ನೇ ಇಸವಿಯ ಎಪಿಡೆಮಿಕ್ ಡಿಸೀಜಸ್ ೧ನೇ ರೆಗ್ಯುಲೇಷನಿನ ೨ನೇ ಸೆಕ್ಷನಿನಿಂದ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವದರಲ್ಲಿ ಮೈಸೂರು ಸೀಮೆಯ ಯಾವ ಪ್ರದೇಶಕ್ಕಾಗಲಿ, ಮುಂಬಾಯಿ ಪ್ರಾಂತ್ಯದ ಸಮುದ್ರತೀರದೊಳಗಣ ಬೊಂಬಾಯಿಯು ಗವರ್ನಮೆಂಟಿನವರ ಅಧಿಕಾರಕ್ಕೊಳಪಟ್ಟ ಸೀಮೆ ಮತ್ತು ಸಿಂಧುದೇಶ ಸಹ ಈ ಪ್ರಾಂತಗಳಿಂದ ತರಲ್ಪಡುವ ಉಪಯೋಗಿಸಿದ ಉಡುಪು ವ ಬಟ್ಟೆ (ಪ್ರಯಾಣಿಕರ ಉಡುಪು, ಬಟ್ಟೆ ವಿನಾ) ಚಿಂದಿ ಬಟ್ಟೆಗಳು ಅನುಪಯುಕ್ತವಾದ ಕಾಗದ ಮತ್ತು ಗೋಣೀ ಚೀಲಗಳು ಈ ಸಾಮಾನುಗಳನ್ನು ತರಕೂಡದೆಂದು ಮೈಸೂರ ಗವರ್ನಮೆಂಟಿನವರು ನಿರೋಧಿಸುತ್ತಾರೆ.

ತಾ|| ೨೫ನೇ ಮಾರ್ಚಿ ೧೮೯೭, ಮೊಕ್ಕಾಂ ಮೈಸೂರ್

ನಂ|| ೯೬೭೩—ಫೈ. ೬೫—ಗವರ್ನಮೆಂಟಿನವರ ಅಧಿಕಾರಕ್ಕೊಳಪಟ್ಟು ಮೈಸೂರ ಸೀಮೆಯಲ್ಲಿ ಸ್ಥಾಪಿಸಲ್ಪಟ್ಟಿರುವ ವ್ಯವಸಾಯ ಸಂಬಂಧವಾದ ಬ್ಯಾಂಕುಗಳಿಂದ ಸಾಲ ಅವುಗಳಿಗಾಗಿ ಬರೆದುಕೊಟ್ಟ ದಸ್ತೈವಜುಗಳ ಮೇಲೆ ಸ್ಟಾಂಪು ಕಿಮ್ಮತ್ತು ಮತ್ತು ರಿಜಿಸ್ಟ್ರೇಷನ್ ರುಸುಂಗಳು ವಸೂಲ್ಮಾಡುವ ಬಾಬ್ತಾಗಿ ೧೮೯೪ನೇ ಡಿಸಂಬರ್ ೪ನೇ ಮುಕ್ಕಾಂ ೯೦೬೪ ಜ ೨೧೪೩ನೇ ನಂಬರ ಗವರ್ನಮೆಂಟ್ ಇಸ್ತಿಹಾರ್ ನಾಮೆಯಲ್ಲಿ ಗೊತ್ತುಮಾಡಿದ ದರಕ್ಕೆ ಈ ಕೆಳಗೆ ಕಂಡದ್ದನ್ನು ಸೇರಿಸತಕ್ಕದ್ದೆಂದು ಮೈಸೂರ ಗವರ್ನಮೆಂಟಿನವರು ಅಪ್ಪಣೆ ಕೊಡುತ್ತಾರೆ:—

೧೮೯೯ನೇ ಇಸವಿಯ ೧ನೇ ಆಕ್ಟ್ ಅನುಸರಿಸಿ, ವಸೂಲ್ಮಾಡಬೇಕಾದ ಛಾಪಾ ರುಸುಂ

(1) (ಸಿ) ಪ್ರತಿ ೧,೦೦೦ ರೂಪಾಯಿಗಳಿಗೂ ಯಾ ೧,೦೦೦ ರೂಪಾಯಿಗಳಿಗೆ ವಿಭಾಗ ಭಾಗಕ್ಕೂ—೨ ಆಣೆಗಳು

(2) (ಈ) ಪ್ರತಿ ೧,೦೦೦ ರೂಪಾಯಿಗಳಿಗೂ ಯಾ ೧,೦೦೦ ರೂಪಾಯಿಗಳಿಗೆ ವಿಭಾಗ ಭಾಗಕ್ಕೂ—೪ ಆಣೆಗಳು.

೧೮೯೭ನೇ ಇಸವಿಯ IIIನೇ ಆಕ್ಟ್ ಅನುಸರಿಸಿ ವಸೂಲ್ಮಾಡಬೇಕಾದ ರಿಜಿಸ್ಟ್ರೇಷನ್ ರುಸುಂಗಳು.

2 (ಏ) ೧,೦೦೦ ರೂಪಾಯಿಗಳಿಗೆ ವಿನಾ ೫,೦೦೦ ರೂಪಾಯಿಗಳಿಗೆ ವಿಸರದಿದ್ದರೆ—೨ ರೂಪಾಯಿಗಳು

2. (ಬಿ) ಇತರ ವಿಷಯಗಳಲ್ಲಿ ೪ ರೂಪಾಯಿಗಳು.

ಮೈಸೂರ್ ಖಸಿಜ ಬಲ ಬಾ.
ಇಸ್ತಿಹಾರನಾಮೆ.

ತಾ|| ೨ನೇ ಏಪ್ರಿಲ್ ೧೮೯೭

ನಂ|| ೬೩೩—೧೮೯೬—೯೭,—ಮೈಸೂರ ಸರ್ವಿಸ ರೆಗ್ಯುಲೇಷನ್‌ಗಳ ೨೩೧ನೇ ಆರ್ಟಿಕಲ್ ಅನುಸರಿಸಿ, ಖನಿಜ ಇಲಾಖಾ ಸಂರಕ್ಷಕರಾದ ಮೆ|| ಜಾರ್ಜ್‌ಲಿವೆಲ್ ಯವರಿಗೆ, ೧೮೯೭ನೇ ಏಪ್ರಿಲ್ ಗುರ್ರೇ ಲಾಗಾಯಿತು ನಾಲ್ಕು ತಿಂಗಳುಗಳ ತಲಬಿಲ್ಲದ ರಜಾ ಕೊಡಲ್ಪಟ್ಟಿರುತ್ತೆ.

೧೮೯೭ನೇ ಇಸವಿ ಏಪ್ರಿಲ್ ೩ನೇ ತಾರೀಖು ಸಾಯಂಕಾಲ ಮಾಜರಪುರದ ಸುಗ್ಗಿಮಕ್ಕಿ ಮಲ್ಲೇಶಯ್ಯನವರ ಸತ್ರದಲ್ಲಿ ನಡೆಸಲ್ಪಟ್ಟ ಪ್ರೊಸೀಡಿಂಗ್ಸ್.

ತಾ|| ಅಮಲ್ದಾರ್ ಮೆ|| ನ ಸುಬ್ಬರಾಯರು ಅಗ್ರಾಸನವನ್ನು ವಹಿಸಿದರು.

ಈ ಕೆಳಗೆ ನಮೂದಾಗುವ ಮೆಂಬರಗಳು ಹಾಜರಿದ್ದರು.

ಆಫಿಷಿಯಲ್	ನಾನ್ ಆಫಿಷಿಯಲ್.
ಅಮಲ್ದಾರ್ ಮೆ||ನ ಸುಬ್ಬರಾಯರವರು, ರಸ್ತೇದಾರ್ ಕೆ ಶ್ರೀನಿವಾಸರಾವ್.	ಮೆ||ಮಲ್ಲೇಶಯ್ಯನವರು
	,, ಕಂ. ಕೃಷ್ಣಪ್ಪನವರು,
	,, ಗುರುವಾಚಾರು
	,, ದೇವಯ್ಯನಸುಬ್ಬಾಭಟ್ಟರು
	,, ಬಮ್ಮಟಿಗಣ್ಣನಭಟ್ಟರು
	,, ಅಂಗಡಿ ವೆಂಕಟರಮಣಯ್ಯ.
	,, ಅಸಗೋಡು ಪಾ|| ತಿಮ್ಮಣ್ಣ.

ಅಗ್ರಾಸನವನ್ನು ವಹಿಸಿದ ಅಮಲ್ದಾರ್ ಮೆ|| ಸುಬ್ಬರಾಯರವರು ಪಿಸಾಟೋಗಿನ ಉದ್ದೇಶ ಕುರಿತು ಉಪನ್ಯಾಸ ಮಾಡಿದ್ದರಲ್ಲಿ ಕ್ಷಾಮವು ಬಹಳ ಭಯಂಕರವಾಗಿರುವದರಿಂದಲೂ, ಕ್ಷಾಮ ಪೀಡಿತರಾಗಿರುವ ಹೀನ ದೇಶದ ಪ್ರಜೆಗಳ ಕಷ್ಟ ನಿವಾರಣಾರ್ಥ ಯಥೋಚಿತ ದ್ರವ್ಯ ಸಹಾಯ ಮಾಡತಕ್ಕದ್ದು ನಮ್ಮಗಳ ಕರ್ತವ್ಯವೆಂದು ಸೂಚಿಸಿದರು ಸಹಾಯಮಾಡತಕ್ಕದ್ದು ಆವಶ್ಯಕವೆಂದಲೂ ಮತ್ತು ಇದಕ್ಕಾಗಿ ಚಂದಾಪಟ್ಟಿ ತಯಾರ್ಮಾಡಿ ಕೂಡ್ಲೆ ಪ್ರಾರಂಭಿಸಬೇಕೆಂತಲೂ ಮಹಾರಾಜಶ್ರೀ ಮಲ್ಲೇಶಯ್ಯನವರು ಅಭಿಪ್ರಾಯಪಟ್ಟರು

ಚಂದಾ ಹಣವನ್ನು ವಸೂಲ್ಮಾಡತಕ್ಕದ್ದಕ್ಕೆ ಈ ಕೆಳಗೆ ನಮೂದಾಗುವ ತಾ|| ಸಂ|| ಮೆಂಬರಗಳನ್ನು ನೇಮಕ ಮಾಡಬೇಕೆಂತ ಮ|| ಮಲ್ಲೇಶಯ್ಯನವರು ಸೂಚಿಸಿದ್ದನ್ನು ಕಂಚೀಕೊಳಿಟ ಕೃಷ್ಣಪ್ಪನವರು ಅನುಮೋದಿಸಿದರು, ಮತ್ತು ಅದೇರೀತಿ ಎಲ್ಲರೂ ಒಪ್ಪಿ ತೀರ್ಮಾನಿಸಲ್ಪಟ್ಟಿತು

ಮೆ|| ಸುಗ್ಗಿಮಕ್ಕಿ ಮಲ್ಲೇಶಯ್ಯನವರು.
,, ಆಡಿನಿಕೊಪ್ಪದ ಮಂಜಪ್ಪನವರು,
,, ಕಂಚೀಕೊಳಿಟದ ಕೃಷ್ಣಪ್ಪನವರು
,, ಬಮ್ಮಟಿಗೆ ಪದ್ಮನಾಭ ಭಟ್ಟರು.
,, ಕಾಸಿಸಾಮಿ ಮುದಲಿಯಾರ್ ಕಂಟ್ರಾಕ್ಟರ್
,, ಅಸಗೋಡು ಪಟೇಲ್ ತಿಮ್ಮಣ್ಣ
,, ಶ್ರೀನಿವಾಸರಾವ್ ತಾಲ್ಲೂಕ್ ರಸ್ತೇದಾರ್

ಈ ಕಮಿಟಿಗೆ ಮ|| ಸುಗ್ಗಿಮಕ್ಕಿ ಮಲ್ಲೇಶಯ್ಯನವರು ಆನರರಿ ಸೆಕ್ರೆಟರಿ ಆಗುವದಕ್ಕೂ, ತಾಲ್ಲೂಕ್ ರಸ್ತೇದಾರರು ಟ್ರೆಜರರಾಗಿರುವದಕ್ಕೂ ಒಪ್ಪಿರುತ್ತಾರೆ.

ಆನರರಿ ಸೆಕ್ರೆಟರಿ ಮ|| ಮಲ್ಲೇಶಯ್ಯನವರು ವಸೂಲಾದ ಹಣವನ್ನೆಲ್ಲಾ ಟ್ರೆಜರರಾದ ತಾಲ್ಲೂಕು ರಸ್ತೇದಾರ್ರ ವಶಕ್ಕೆ ಕಳುಹಿಸಬೇಕು, ತಾಲ್ಲೂಕು ಸೂಕಮಿಟಿ ವೈಸ ಪ್ರೆಸಿಡೆಂಟರಾದ ಅಮಲ್ದಾರ್ ಸುಬ್ಬರಾಯರವರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ ಸಾಹೇಬರವರಲ್ಲಿಗೆ ರವಾನಿಸಬೇಕು

ಆನರರಿ ಸೆಕ್ರೆಟರಿ ಮ|| ಮಲ್ಲೇಶಯ್ಯನವರು ವಸೂಲಾದ ಹಣ ಇಷ್ಟೆಂತ ಪ್ರತಿ ವಾರ ತಾಲ್ಲೂಕು ಅಮಲ್ದಾರ್ರವರಿಗೆ ತಿಳಿಸಬೇಕು.

ಚಂದಾಪಟ್ಟಿ ಪ್ರಚಾರ ಪಡಿಸಿದ್ದರಲ್ಲಿ ರೂ|| ೧೯೩೦೬೬೦ ಆಯಿತು.

ಎಗ್. ಸುಬ್ಬರಾವ್,
ಅಮಲ್ದಾರ್.

ಚಂದಾ ಲಿಸ್ಟು.

		ರೂ	ಆ.	ಪೈ
ಸನರದ ಸುಬ್ಬರಾಯರು	...	17	8	0
ಸುಗ್ಗಿಮಕ್ಕಿ ಮಲ್ಲೇಶಯ್ಯನವರು	...	25	0	0
ಬಮ್ಮಟಿಗೆ ವಿಶ್ವೇಶ್ವರಭಟ್ಟರು	...	15	0	0
ಕಂಚೀಕೊಳಿಟದ ಕೃಷ್ಣಪ್ಪ	...	15	0	0
ಹೊನ್ನಾಳ ಸುಬ್ಬಣ್ಣಯ್ಯ	...	10	0	0
ಕಮಾಯುಲ್ ಡಿಸೋಜಾ	.	10	0	0
ಕಾಸಿಸಾಮಿ ಮುದಲಿಯಾರ್	...	10	0	0
ಅಸಗೋಡು ತಿಮ್ಮಣ್ಣ	...	10	0	0
ಬೇರುಕೊಡಗೆ ಸುಬ್ಬರಾಯರು	....	15	0	0
ಪಿ|| ದೆ|| ಸುಬ್ಬಾಭಟ್ಟರು	..	2	0	0
ಅಂಗಡಿ ವೆಂಕಟರಮಣಯ್ಯ	...	2	0	0
ವೆಂಕಟಗಿರಿಭಟ್ಟರು	...	1	0	0
ಡೆ|| ಕಾಂಟಿಷ್ಟರು	...	0	4	0
ಅಂಗಡಿ ಸುಬ್ಬಯ್ಯ	...	0	8	0
ಸಕ್ಕರೇಪಟ್ಟಣದ ಗುಂಡೇರಾಯರು		2	0	0
ಪುಟ್ಟರಾಮ ಜೋಯಿಸರು		1	0	0
ಡೆ|| ಶ್ರೀನಿವಾಸರಾಯರು	...	4	0	0
ಬಿ ಶ್ರೀನಿವಾಸರಾಯರು	...	3	0	0
ರೆ|| ಗು|| ಸುಬ್ಬಣ್ಣಾಚಾರ್	...	1	8	0
ಆಂಗ್ಲೋವರ್ನಾಕ್ಯುಲರ್ ಸ್ಕೂಲ್ ಮಾಸ್ಟರ್		1	0	0
ಬಿ. ಚೆಲುವೈಯಂಗಾರ್	..	0	12	0
ಶ್ರೀನಿವಾಸೈಯಂಗಾರ್	..	1	0	0
ಬಿ. ಕಾಸಿರಾವ್	...	0	8	0
ರಾಮಭಟ್ಟರು	...	0	8	0
ಅನಂತೈಯ್ಯ	...	0	8	0
ರೆ|| ಗು|| ನರಸಿಂಹಯ್ಯನವರು	...	1	0	0
ಬಮ್ಮಟಿಗೆ ಅನಂತಜೋಯಿಸರು	..	1	0	0
ವರದಾಚಾರ್ರು	...	1	0	0
ಶಾ|| ತರೀಕೆರೆ ವೆಂಕಟರಮಣಯ್ಯ		2	0	0
ಸುಬ್ರಾನ್ ಜಾ|| ಗು||	...	0	8	0
ಶಾ. ವೆಂಕಟರಮಣಯ್ಯ	...	0	8	
ವೈ ಶ್ರೀನಿವಾಸರಾವ್	...	1	0	0
ಕೃಷ್ಣಪ್ಪ		0	8	0
ಮಂಜಪ್ಪ	...	0	4	0
ಬಿ. ಶ್ರೀನಿವಾಸರಾಘವಾಚಾರ್	...	0	8	0
ದೆ. ಶ್ಯಾಮರಾವ್	.	1	8	0
ಹೆಡ್ ಗು|| ಸುಬ್ಬರಾಯರು	.	1	8	0

V. AYANOR'S
PREPARATIONS

ವಿ. ಅಯನಾರಿ ಎಂಬವರಿಂದ ತಯಾರ್ಮಾಡಲ್ಪಟ್ಟ ಪ್ರಸಿದ್ಧ ಔಷಧಗಳು.

ಪೆರ್ಮಡಿಸಿಪ್ರಾರ್.—ಇದು ಹೊಟ್ಟೆಶೂಲೆ, ಅಜೀರ್ಣ, ಕರಳು ನೋವು, ವಾಂತಿಭೇದಿ, ಅಜೀರ್ಣಭೇದಿ, ಬೇಳುಕಡತ, ಕೆಮ್ಮು, ಮೂತ್ರಶತೆ, ವಾಯುಶೂಲ, ಕ್ಷಯ, ಆರ್ತವ ದೋಷಜನ್ಯವಾದ ಸ್ತ್ರೀಯರ ವ್ಯಾಧಿಗಳು, ತಲೆನೋವು, ದಂತಶೂಲೆ, ಘಾಯ ಮೊದಲಾದವುಗಳಿಗೆ ಬಹಳ ಉಪಯುಕ್ತವಾದದ್ದು ಇದರ ಕ್ರಯ ದೊಡ್ಡಶೀಸೆ ೧ಕ್ಕೆ ೧ ರೂ ಸಣ್ಣಶೀಸೆ ೧ಕ್ಕೆ ೮ ಆಣೆ.

ದೀಪಾವಳಿಯ ತೈಲ—ಶಿರಃಶೂಲೆ ನೋವು, ಪಕ್ಕಶೂಲೆ, ಸೊಂಟನೋವು, ತಲೆಶೂಲೆ ಇವು ಪರಿಹಾರವಾಗುವವು, ಇದರ ಕ್ರಯ ದೊಡ್ಡಶೀಸೆ ೧ಕ್ಕೆ ೧ ರೂ ಸಣ್ಣಶೀಸೆ ೧ಕ್ಕೆ ೮ ಆಣೆ.

ಜ್ವರದ ಧೃತಿ—ಇದು ಎಂಥಾ ಜ್ವರವನ್ನಾದರು ಎರಡು ದಿನಗಳೊಳಗಾಗಿ ನಿವೃತ್ತಿ ಮಾಡತಕ್ಕದ್ದು. ದೊಡ್ಡ ಶೀಸೆ ೧ಕ್ಕೆ ೧ ರೂ ಸಣ್ಣಶೀಸೆ ೧ಕ್ಕೆ ೮ ಆಣೆ

ಓಮಕರ್ಪೂರದ ಶೊಂಠಿ.—ಇದು ಶೀತಭೇದಿ, ರಕ್ತಭೇದಿ, ರಜಸ್ವಲೆಯರಿಗುಂಟಾಗುವ ಉಪಾಧಿ, ಎದೆನೋವು, ಬೊಂಕೆನೋವು ಇವುಗಳಿಗೆ ಬಹಳ ಪ್ರಯೋಜನಕರವಾದದ್ದು, ಇದರ ಕ್ರಯ ದೊಡ್ಡಶೀಸೆ ೧ಕ್ಕೆ ೧ ರೂ, ಸಣ್ಣಶೀಸೆ ೧ಕ್ಕೆ ೮ ಆಣೆ.

ಮೇಹವಾಯು ಎಣ್ಣೆ—ಇದು ಮೇಹವಾಯುವಿನಿಂದ ಶರೀರವು ಉಬ್ಬುವದು, ಚರ್ಮವು ಒಡೆಯುವದು, ಪಾರ್ಶ್ವ ತಲೆನೋವು, ಗ್ರಂಥಿಗಳು ಇವುಗಳಿಗೆಲ್ಲ ಬಹಳ ಉಪಯುಕ್ತವಾದದ್ದು. ಇದರ ಕ್ರಯ ದೊಡ್ಡಶೀಸೆ ೧ಕ್ಕೆ ೧ರೂ. ಸಣ್ಣಶೀಸೆ ೧ಕ್ಕೆ ೮ ಆಣೆ.

ವ್ಯಾಘ್ರಸ್ಥಾಲವು—ಇದು ನಡುವು ನೋವು, ಕೀಲುನೋವು, ಬೆನ್ನಿನನೋವು, ಅರತಲೆನೋವು, ಒಡ್ಡಿಗಟ್ಟ ಇವುಗಳಿಗೆ ಪ್ರಸಿದ್ಧವಾದ ತೈಲವು. ದೊಡ್ಡ ಡಬ್ಬಿ ೧ಕ್ಕೆ ೧ ರೂ. ಸಣ್ಣ ಡಬ್ಬಿ ೧ಕ್ಕೆ ೮ ಆಣೆ

ಶ್ವೇತಕುಷ್ಠೌಷಧ—ಇದು ಸಕಲವಿಧ ಕುಷ್ಠರೋಗಗಳಿಂದ ಜನಿಸುವ ಬಿಳುಪು, ಕಸರು ವಗೈರೆ ಸ್ತ್ರೀವಿಷಯಕ ದುರ್ವ್ಯಾಧಿಗಳೆಲ್ಲಕ್ಕೂ ಶೀಘ್ರವಾಗಿಯೂ, ಮರಳಿ ಎಂದಿಗೂ ಬಾರದಂತೆ ನಿಶ್ಶೇಷವಾಗಿಯೂ ಗುಣಪಡಿಸತಕ್ಕಂತಾ ಔಷಧ. ಇದರ ಕ್ರಯ ಶೀಸೆ ೧ಕ್ಕೆ ೧ ರೂ. ೮ ಆಣೆ.

ಕೂದಲು ಸರಿಯಾದ ಕಪ್ಪಾಗಿ ಬೆಳೆಯುವಿಕ್ಕೆ ಔಷಧ.—ಈ ತೈಲವು ನರತ ಕೂದಲುಗಳನ್ನು ಕಪ್ಪಾಗಿ ಮಾಡುವದು ಕೂದಲು ಬೆಳೆಯದಿರುವ ಸ್ಥಳಗಳಲ್ಲಿ ಹುಟ್ಟಿ ಬೆಳೆಯುವದು ಇದನ್ನು ತಲೆಗೆ ಹಚ್ಚಿಕೊಂಡು ಸ್ನಾನ ಮಾಡುವದು ಮತ್ತು ಸುವಾಸನೆಯುಳ್ಳದ್ದಾಗಿರುತ್ತದೆ, ಇದರ ಕ್ರಯ ಶೀಸೆ ೧ಕ್ಕೆ ೧ ರೂ.

ಬೇಕಾದವರು ಒಳ್ಳಾರಿ ಬ್ರೂಸ್ ಪೇಟೆಯಲ್ಲಿರುವ ವಿ. ಅಯನಾರ್ ಔಷಧಶಾಲೆಗೆ ಬರೆದು ತರಿಸಿಕೊಳ್ಳಬಹುದು.

NOTICE.

VIDYASARA SANGRAHA.

A TREATISE ON THE PRINCIPLES OF
HINDU MEDICINE.

Price, includig Postage Rs. 5–0–0

ವೈದ್ಯಸಾರಸಂಗ್ರಹ.

ಇದು ಚರಕ, ವಾಗ್ಭಟ, ಸುಶ್ರುತ, ಶಾರ್ಙ್ಗಧರಾದ್ಯನೇಕ ಪೂರ್ವಗ್ರಂಥಗಳ ಸಂಗ್ರಹ ರೂಪವಾಗಿರುತ್ತದೆ,
ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಹಾಸಲ್ ವೆಚ್ಚಲ್ ಪ್ರತಿ ೧ಕ್ಕೆ ೫—೦—೦

ಬೇಕಾದವರು ಬೆಂಗಳೂರು ಕರ್ನಾಟಕ ಪ್ರೆಸ ಪ್ರೊಪ್ರೈಟರವರಿಗೆ ಬರೆದು ತರಿಸಿಕೊಳ್ಳಬಹುದು.

ಈ ಕಂಪನಿಯು ಸನ್ ೧೮೮೪ನೇ ಇಸವಿಯಲ್ಲಿ ಸ್ಥಾಪಿತವಾಯಿತು.

ಜನ್ಮದ ಲಾಭವು.

ರಜಿಸ್ಟರ್ಡ್ ಟ್ರೇಡ್ ಮಾರ್ಕ್.

ವಜ್ರಾಂಗ ಖರ್ಜೂರವು.

ಬಲಾರೋಗ್ಯ, ಪುಷ್ಟಿಗಳನ್ನು ಬೆಳಸತಕ್ಕ ಉತ್ತತ್ತಿಯು.

ಅತ್ಯುತ್ಕೃಷ್ಟಕರವಾದ ಬಳ್ಳಿಗಳಿಂದ ತಯಾರಿಸಿದ ಈ ಉತ್ತತ್ತಿಗಳು ಕೊಂಕಣಪ್ರಾಂತದ ಅನೇಕ ವನಸ್ಪತಿಗಳ ಸಾರಗಳ ಪುಟಗಳನ್ನು ಕೊಟ್ಟು, ತುಪ್ಪದೊಳಗೆ ಮಾಗಿಸಿ, ಒಳ್ಳೇ ಜೇನಿನ ತರಗತಿಯ ಸಕ್ಕರೆಯ ಪಾಕದಲ್ಲಿ ಸಿದ್ಧ ಮಾಡಿರುತ್ತೇವೆ. ಈ ಉತ್ತತ್ತಿಗಳು ಮಧುರವಾಗಿದ್ದು, ಒಳ್ಳೇ ರುಚಿಯುಳ್ಳವಾದ್ದರಿಂದ ಇವುಗಳ ಸೇವನೆಯಿಂದ ಕಫ, ವಾತ, ಪಿತ್ತ ಈ ತ್ರಿದೋಷಗಳಿಂದುಂಟಾಗತಕ್ಕ ಯಾವತ್ತು ಜಾತಿಯ ವ್ಯಾಧಿಗಳೂ ಹೋಗುತ್ತವೆ. ೪೦ ವರ್ಷಗಳ ವಯಸ್ಸುಳ್ಳ ಮುದುಕರ ಶಾಮವಿಕಾರವಾದರೂ ಹರೆಯದ ಗಂಡಸರಂತೆ ಪ್ರಸ್ಫುಲಿತವಾಗುತ್ತದೆ. ಜನನೇಂದ್ರಿಯದಲ್ಲಿ ಬಲ ಹುಟ್ಟಾಗಿ ನಪುಂಸಕತ್ವವು ಇಲ್ಲದಂತಾಗುತ್ತದೆ ಲಘ್ವಿಯ ಮುಂಚೆ ಅಥವಾ ಹಿಂದೆ ಸರಿದುಹೋಗುವ ಧಾತು ನಿಲ್ಲುತ್ತದೆ ಸ್ವಪ್ನಾವಸ್ಥೆಯಾಗುವದಿಲ್ಲ ವೀರ್ಯವು ಬೆಳೆದು ಮೈ ಬಣ್ಣವು ಸುಧಾರಿಸುತ್ತದೆ. ಪರಮಾ ಹಾಗೂ ಉಷ್ಣಸಂಬಂಧಿಕ ರೋಗಗಳ ಸಂಕಟ ಇಲ್ಲದಂತಾಗಿ ಧಾತು ಪುಷ್ಟವಾಗುತ್ತದೆ. ಮೂರು ಹೊತ್ತಿಂದಲೂ ಅನ್ನ ಪಚನವಾಗಿ ಒಳ್ಳೇ ಹಸಿವೆಯಾಗುತ್ತದೆ. ಹೋಗುವದೊಂದೆ ತಡ ಕೂಡಲೇ ಸ್ವಚ್ಛ ಶೌಚಕ್ಕಾಗುತ್ತದೆ. ಕ್ಷಯ, ಉದರ, ದಮ್ಮು ಈ ರೋಗಗಳು ನಾಶ ಹೊಂದುತ್ತವೆ. ಹೊಸ ಬೇನೆ ಇದ್ದಲ್ಲಿ ೧೧ ದಿವಸಗಳ ವರೆಗೆ ಸಾಲುವ ಒಂದೇ ಡಬ್ಬಿಯಿಂದ ಗುಣವುಂಟಾಗುತ್ತದೆ. ಮತ್ತು ಹಳದಿದ್ದಲ್ಲಿ ೪೪ ದಿನಗಳ ಮೇಲೆ ಗುಣ ಬಂದೀತು. ೧೧ ದಿನಗಳ ವರೆಗೆ ಸಾಲತಕ್ಕ ೧ ಡಬ್ಬಿಗೆ ೧–೮–೦ ರೂ|| ಒಂದೇಸಾರ್ಯಕ್ಕೆ ೪ ಡಬ್ಬಿಗಳು ತಕ್ಕೊಳ್ಳತಕ್ಕವರಿಗೆ ಒಂದು ಡಬ್ಬಿಯು ಉಚಿತವಾಗಿ ಸಿಕ್ಕೀತು. ಈ ಉತ್ತತ್ತಿಯಿಂದ ಹೆಂಗಸರು ಸತೇಜರಾಗುತ್ತಾರೆ. ಕರಗಿನ ಹಾಗೂ ಎಂಥಾ ಬೇನೆಗಳು ವಾಸಿಯಾಗುತ್ತವೆ. ಎಲ್ಲರನ್ನು ಸರಿಯಾಗಿ ಬೇನೆ ಇಲ್ಲದವರನ್ನಾಗಿ ಮಾಡಿ ಬಲಾರೋಗ್ಯ ಪುಷ್ಟಿಗಳನ್ನು ಬೆಳಸುತ್ತವೆ. ಸಾಹೇಬ್ ಜನರಲ್ಲಿ ಬಹಳ ಡಬ್ಬಿಗಳು ಖಪಾಗುತ್ತವೆ ಈ ಔಷಧವು ಈ ಕಂಪನಿಯಹೊರ್ತು ಬೇರೆ ಸ್ಥಳದಲ್ಲಿ ಆಗುವದಿಲ್ಲ ಯಾವತ್ತು ದೇಶಗಳಲ್ಲಿಯು ವೈದ್ಯಶಾಲೆಗಳಿಗಾಗಿ ಕಳುಹಿಸಲ್ಪಡುತ್ತದೆ. ಬರೆದು ಬಂದು ಕೂಡಲೆ ಈ ಕಂಪನಿಯು ಬೇಕಾದವರಿಗೆ ಈ ಡಬ್ಬಿಗಳು ಕಳುಹಿಸಿಕೊಟ್ಟೀತು. ಅಂಚೆಯ ಹಾಗೂ ವ್ಯಾಲ್ಯು ಪೆಯಬಲ್ ವೆಚ್ಚ ಬೇರೆ ಕೊಡಬೇಕು (ಉಚಿತ ಡಬ್ಬಿ ಸಹ ೪ ಡಬ್ಬಿಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬಾದಲ್ಲಿ ಎಲ್ಲಾ ಖರ್ಜೂರ ಹಾಕಿ ರವಾನಿಸುವೆವು, ಹೀಗೆ ಕಳುಹಿಸಿದರೆ ಟಪಾಲ್ ಖರ್ಚು ಕಡಮೆ ಬೀಳುವದು.)

ಮೇಲ್ವಿಳಾಸ—ಪಿ. ಎಸ್ ಎ. ಬ್ರದರ್ಸ ಮತ್ತು ಕಂಪನಿ,

ಫಸ್ಟ ಇಂಗ್ಲಿಷ್ ಬ್ರ್ಯಾಂಚ್ ಆಫೀಸ್, ಡಿಸ್ಟ್ರಿಕ್ಟ್ ಬೆಳಗಾಂವ.

ಪೋಸ್ಟ—ಬೆಳಗಾಂವ. Post BELGUAM.

BANGALORE:—Printed and Published at the KARNATAKA PRESS, No. 40, HOSPITAL ROAD, CITY,—1897.

THE

Karnataka Prakasika.

ಪ್ರಕಟನೆಯ ರೇಟು { ಮೊದಲನೆಯವುವಕ್ಕೆ ಪಂಕ್ತಿ ಒಂದಕ್ಕೆ 0 2 0
ಎರಡನೆಯ ವಕ್ಕೆ ಪಂಕ್ತಿ ಒಂದಕ್ಕೆ 0 1 0

ಕರ್ಣಾಟಕ ಪ್ರಕಾಶಿಕಾ.

Published Every Monday Morning

ಚಂದಾದರಗಳು — ಸ್ಥಳದವರಿಗೆ | ಪರಸ್ಥಳದವರಿಗೆ ಪೋಸ್ಟೇಜ್ ಸಹ,
ಸಾಲ್ 1 ಕ್ಕೆ 3 0 0 | ಸಾಲ್ 1 ಕ್ಕೆ 4 0 0
6 ತಿಂಗಳಿಗೆ, ... 2 0 0 | 6 ತಿಂಗಳಿಗೆ .. 2 8 0
3 ತಿಂಗಳಿಗೆ, ... 1 4 0 | 3 ತಿಂಗಳಿಗೆ ... 1 8 0

Vol. XXIV. BANGALORE:—MONDAY, APRIL 19, 1897. No. 16.

Select Telegrams.

London, 9th April—Greek bands have crossed the frontier at Kranea, close to Grevena. The Turks opened fire and surrounded the enemy in a forest, where fighting has been going on since dawn this morning.

It is not known whether any Greek regular troops are engaged. The entire Turkish force is on the alert, and reserves are ready for when their services may be required.

The Cretan insurgents are investing Fort Kissamos and continual firing is kept up.

London, 10th April—The invaders who crossed the Greek frontier at Kranea were two thousand strong, and included Italian volunteers. They are commanded by ex-officers and non-commissioned officers, and are well armed, at the expense of the National League.

London, 11th April—The Greek Government has stopped the League agents and is with a view of preventing further conflicts on the frontier and declare that they know nothing of the projected incursion of the insurgents.

London, 11th April—A circular issued by the Porte calls the attention of the Powers, in view of their recent note, to the fact that Greece is the aggressor.

Athens, 11th April—The Greeks admit that the invaders have recrossed the border and lost heavily in their retreat.

M Delyannis has asked the Chamber for twenty-three million drachmas for the army and navy, and, in doing so, said he hoped the army would be fully concentrated in a few days and capable of doing its duty.

[The "drachma" is the Greek "franc" and is worth 9½d. The total sum asked for amounts, therefore, to some £920,000.]

Athens, 15th April—Some Greek bands are still remaining in Macedonia in the vicinity of Grevena, and hold all roads from Thessaly. A fresh band of 2,500 men have left Volanos in the direction of Lamia.

Constantinople, 15th April—The Council of Ministers held a prolonged sitting here yesterday, and it is believed that a plan of campaign was prepared, and that it was decided to take the offensive against Greece in the event of any fresh frontier incident.

THE

Karnataka Prakasika.

MONDAY, APRIL 19, 1897.

THE CITY WATER SUPPLY.

The water supply is a great boon to the City. There is now no fear of a water famine if the drought only lasts for one year. It is a great comfort to have a constant supply of water brought into the place. We have waited many years for this, and we have got it at last, and for this we are thankful to the Mysore Government. We must not forget who introduced the water into the City. But though the water comes into this part of the place the best is not made of it. There is a terrible wastage of this precious element. The people seem to forget that a short time ago they were very badly off for water, and that it is their duty to be careful now that they have it. A very good portion of the water is wasted, and this ought not to be. In fact the whole business is fearfully mismanaged. Altogether the water supply is in anything but a satisfactory condition. There is mismanagement on all sides. Many of the taps are broken, and consequently cannot be used. New ones should be put in the place of these useless articles. It is to be feared these taps were not very good ones or they would not have been broken so soon. Then again, many of the taps and fountains have been placed at random, the wants and convenience of the public not having been consulted in the least. It appears as if the work of placing these taps and fountains had been entrusted to some underlings who did just as they thought proper in the matter. The way these are put reminds us of the way the milestones were placed between Agra and Delhi. The posts were delivered to a man who did not understand the figures placed on them, and so he put them down just as they came to hand. The result may be well imagined. In some localities where the water in the wells has dried up there are neither taps nor fountains for furlongs together. The people have to go a long distance for water, and are thus put to great inconvenience. This ought to be remedied at once. On the other hand in some places fountains and taps are placed nearer than are required. This is notably the case in a certain street where within a distance of fifty or sixty yards two fountains and three taps are to be seen. This is quite as bad as the milestones we have referred to. It is plain to be seen that there is something wrong about the whole matter; that the management is not what it ought to be, and that a change ought to be brought about. It is absurd to have a number of taps and fountains crowded together while other parts of the place are crying out for them. It is like giving relief to a man who does not require it, while another who is really in want is left without any help whatever. This is not as it ought to be. Mr Standish Lee, who is in charge of the work does not seem to take that amount of interest in it that might be reasonably expected of him. He is not seen going about to see what the wants of the City are. He leaves the matter to his subordinates instead of visiting the place himself. These, of course, do what they like. They have their own ends to serve, and they do not, in the least, consider the public good. They may have friends to oblige, and they oblige them, they want taps or fountains near their own dwellings, and they place them there. We know well what such men will do if left to themselves. Our popular Municipal President who knows well the wants of the place has, unfortunately, no voice in the matter. If the work had been left to him he would have managed it much better we may be certain. He would have known where to place the taps and fountains, and the complaints would have been very few, if any at all. Instead of the random placing of these means of supply they would have been put just where they were wanted, and the people could have got water easily. We therefore strongly urge that the management of the City water supply should be made over to the President of the Municipality, and the sooner this is done the better will it be for all concerned. We trust the Government will take up the matter, and act as we have said. Such a change would curtail the heavy expense now incurred of maintaining a separate establishment to look after the water supply of the City. It would be much better looked after than it is now, and there would be fewer complaints. It is a great pity after so much money has been spent a want of proper management should spoil the whole concern.

News and Notes.

The Famine Fund amounts to Rs. 1,07,34,395.

It is on the cards that the Lahore Oriental College may be abolished in a year or two.

The Hon'ble Mr. A. M. Bose has been elected President of the Indian Association, Calcutta.

Decrees for the abolition of slavery were expected to be proclaimed in Zanzibar this week.

In all conditions and circumstances, well-being is in the power of those who have power over themselves.

'Kadambari' has been translated into English by Miss C. M. Ridding, formerly Scholar of Girton College, Cambridge.

Over two hundred of the London Missionary Society's stations in Madagascar have been destroyed by the insurgents against the French.

If you were now perfected in unselfishness in the *real* sense, you would have a conscious existence separate from the body, and would be able to quit the body at will.

The infant son of Lord and Lady Elgin was christened on Saturday, and named Victor Christian. Her Majesty the Queen stood Godmother by proxy through Lady White.

All doubts come from the lower nature, and *never*, in any case, from the higher nature. The man of doubtful mind enjoys neither this world nor the other (the Deva world), nor final beatitude.

The Maharaja of Kashmir is going to commemorate the Diamond Jubilee of Her Majesty the Queen by founding two Female Hospitals—one at Srinagar, and another at Jammu, which will be worked by Lady doctors.

A writer in a contemporary has laid down a test for judging domestic felicity. "If a man talks wittily and bitterly about public affairs," says he, "it is a sure indication that his domestic relations are of an unhappy character." Let us hope that he speaks from experience.

A Christian girl at Calcutta, a few days after her marriage, wrote to a friend for some poison to put an end to her husband's life. The letter was intercepted, whereupon the girl attempted suicide, but was prevented. The matter has created great sensation.

The Calcutta Marwaris held an orderly meeting on the 25th instant to protest against the rain gambling legislation. They particularly urged the postponement and further consideration of the Bill, and a resolution to abstain from taking part in opium sales was carried with acclamation.

The native officers of the regular army who are attending the Queen's Commemoration, will sail from Bombay in the mail steamer of May 15th. The Imperial Service officers will leave a fortnight earlier. Among Officers of distinction will be Sir Pratap Singh of Jodhpur and Colonels Afsar Jung of Hyderabad and Desaraja Urs of Mysore.

In consequence of having received a cut on the finger while making a pathological examination of a subject who had died of plague, Dr. Mueller, the German specialist at Bombay, has been attacked with the disease. It is stated that he refused to receive an injection of Dr. Yersin's serum because Dr Yersin is a Frenchman. He is now a patient at the European General Hospital.

The academic prejudice against admitting women to university degrees, still reigns rampant in Cambridge. The committee appointed to consider the question has made a report. While all are agreed about not admitting women to degrees, nine recommend that the degrees of B.A., M.A., D.Sc., or LL.D., be conferred by diploma or *honoris causa*, while five think that a new title of Mistress of Letters, or Mistress in Science, may be created to satisfy female vanity.

He who is silent is forgotten; he who abstains is taken at his word; he who does not advance falls back; he who stops is overwhelmed, distanced, crushed; he who ceases to grow greater becomes smaller; he who leaves off gives up; the stationary condition is the beginning of the end—it is the terrible symptom which precedes death. To live is to achieve a perpetual triumph; it is to assert one's self against destruction, against sickness, against the annulling and dispersion of one's physical and moral being. It is to will without ceasing—or rather to refresh one's will day by day.

The match maker, or the matrimonial dalbash, is a regular institution in Hindu society. But those who employ his services and then curse him, little know what a benefactor he is. He is a great reformer. Only he does not say he is one, nor is he recognised as such. We know a man whose boast is that he has made over a thousand matches. And such an intermingling of castes, and a breaking down of social barriers, as he has brought about by his marriages, half a century of preaching and pamphleteering could not have accomplished! Thanks to his good offices, many quarter bloods, half bloods, and full bloods are all kindred, and are happy.

The Bombay Mahomedans were from the first against segregation and search parties and several representations were made to get rid of them, but the Committee refused to pay any attention to them. The whole Committee attended by the Magistrates, the Police Commissioners and male and female doctors and a big military force to overawe the inhabitants, has been having a round of visiting and people seem to have submitted meekly to their orders. The Bombay Mahomedan population is full of roughs, and a peaceful submission has quieted the anxious minds of officials and non-officials.

A London Correspondent writes to an up-country contemporary:—The Sultan does not seem disposed to take any hasty step. He is described as contemplating the turn of affairs in Crete with cynical delight, ironically wishing the powers joy of the Augean stable they have undertaken to cleanse. He regards himself as having completely washed his hands of the entire Cretan business. It is not though

likely that he will attack Greece if she goes any further with him. So far he is contenting himself with pouring troops into Macedonia. He has contributed out of his privy purse towards their expense sums variously estimated at from two to five millions sterling.

We are indebted to the Sub-Assistant Inspector of Schools, Madras Range, for copies of a circular regarding Lodd Krishnadas and Govandas School for the blind. Mr Aiyyakannu Pillai is entitled to our thanks for taking special interest in this humane institution. Instruction in general education will be given to the pupils on the Braille system in Tamil and Telugu which, it is believed, is the most largely adopted in England. There is at present a school for the blind at Palamcottah and another at Sivakasi under the able management of Miss Askwith and the schools are doing good work. Messrs Das have hit upon a very appropriate form of charity and we wish them success in their enterprise.

The Hon. Surendra Nath Bannerji has left for England, where he gives evidence before Lord Welby's Commission. Babu Surendra Nath had, some weeks ago, sent a printed copy of the subjects he offered to be examined upon, and this was approved by the Commission. His evidence, we understand, will embrace the following subjects:—(1) Provincial contracts, (2) Inadequacy of existing financial control, (3) Wider employment of Indians in relation to its financial bearing. In this connection, he will deal with the employment of natives of the country in the Opium, Police, Custom and Telegraph Departments, and lastly he desires to be heard on the Exchange Compensation Allowance.

Local and Provincial

The Dewan.—It is said that Sir Seshadri Iyer will leave for Ootacamund by this day's Mail Train.

The Resident.—Will leave this evening for Ootacamund where he will remain till the beginning of June.

Visitors.—A number of visitors has come into Bangalore from different places to enjoy the Easter holidays.

The Controller's Office.—Has only two days' holidays while the other offices have five. We do not know why this difference has been made.

The Weather.—Is very hot as a rule, and often it is very sultry. At times there are clouds hanging about, and it is to be hoped that rain will soon come down.

The Civil Courts.—Both of the province and the Civil and Military Station are now closed. The Chief Court will re-open on the 20th of June. The District Court, C and M. Station will resume work on the 31st of May.

Going to England.—It is said that Lieut. Col. Desaraje Urs and party will leave this for England on the 27th instant. Messrs V. P. Madhava Rao, C. I. E., Dalavai Devaraj Urs, T. V. Armogam Modeliar, Civil Surgeon, and others will, it is said, accompany the party.—M. H.

Report of the Fire Committee.—The Report of the Palace Fire Committee is out, but it is not yet given out to the public. So far as we have been able to gather, all important personages have got off from all blame, excepting four who are in the Palace Service, one a Eurasian, two Ursus and a fourth a Brahmin.—M. H.

The Mysore Gazette.

Bangalore, Thursday, 15th April 1897.

NOTIFICATIONS BY THE GOVERNMENT OF MYSORE.

GENERAL AND REVENUE.

No 675, dated, Camp Mysore, 10th April 97.

Her Highness the Maharani-Regent has been pleased to appoint Surgeon Major J. Smyth as Durbar Surgeon, Mysore, with effect from the afternoon of the 5th April 1897, on which date he reported himself for duty.

No 11174—*J 1272, dated 13th April 1897.*

Under Section 12 of the Code of Criminal Procedure, V. Sabhapati Pillai, Amildar, Kadur taluk, is appointed a Magistrate of the 2nd Class.

No 11176—*J. 1274, dated 13th April 97.*

Under Section 12 of the Code of Criminal Procedure, K. G. Shamanna, B. A., Amildar of the Bagepalli taluk, is appointed a Magistrate of the 2nd Class.

No 8766—Fl F 7 96, dated, Mysore, 7th April 1897.

Under Article 188 of the Mysore Service Regulations, Mr J. J. Monteiro, Extra Assistant Conservator of Forests Shimoga district, is granted privilege leave of absence for one month and twenty one days with effect from such date as he may avail himself of the same.

M. Srinivasa Rao, Ranger in charge of the Shikarpur Range, will, in addition to his own duties, be in charge of the Sorab Range during the absence of Mr J. J. Monteiro on leave or until further orders.

No 8914—R F 146 95 dated 12th April 97.

Under Articles 172 of the Mysore Service Regulations, B. Sankaraiya, Amildar of the Arkalgud taluk, is granted casual leave of absence for fifteen days, with effect from the 11th April 1897, or such other date as he may avail himself of the same.

2. Shikarpur Krishnappa, Judicial Head Munshi of the Hassan Deputy Commissioner's office is appointed to act as Amildar and 2nd Class Magistrate of the Arkalgud taluk during the absence of Sankaraiya on leave or until further orders.

PUBLIC WORKS.

Notification No 257—1527, dated 9th April 97.

Sub Assistant Engineer, Mr S. N. Doggappayya attached to the Mysore division, is granted leave on medical certificate for three months with effect from 18th March 1897.

Extracts.

"YAGNOPAVITHAM" OR "THE HOLY THREAD."

As explained by Mr K. Narayanaswami Iyer, F. T. S.

As Brahmam in His real state is unspeakable and unthinkable, only His manifested aspect can be symbolised and that is the universe. Let us take the attributes of the universe above stated and apply them to the sacred thread. It is made round and circular to exemplify the eternal and the cyclic character of the universe. First a streak of 96 digits in length is taken from cotton which is folded thrice and twisted and then again it is folded thrice and twisted and forms one of the strings of one Yagnopavith which consists of 3 cords. The 96 digits represent the 96 Thatwas. The streak is folded thrice to represent *Sathwa, Rajas, Thamas*. It is again folded thrice to represent the three kinds of intelligence acting upon the three kinds of matter. Then if we dissect one of the strings of one *Yagnopavitha*, it will be found that there are 9 strings hidden therein. Why? To represent the latent character of the 3 kinds of intelligence acting upon the 3 kinds of matter which are invisible in the universe. The knot is the central place essential for the Atmic knowledge to radiate from, just as the sun is the centre of the solar system, and radiates its light everywhere. The sacred thread is not worn round the waist but only round the heart, because the heart is the place where the spirit is located. It is worn from left to right and not from right to left because the seat of the spirit is on the left side of the heart where the cordial plexus is situated. It is an inseparable concomitant for the Dwijas as it is taken with a vow that the wearer pledges himself at the time of Upanayanam to devote the whole of his life to the service of God. In the case of a real Sanyasi, outward symbols are not necessary as he has cognized the Atmic truth. Besides the holy thread being a symbol of God, it serves the purpose of preserving in itself a good influence to ward off external, subtle, and injurious influence through the utterance of the *Gayathri* and a particular mantra uttered when we catch hold of the thread before wearing it. India is replete with symbols in multifarious temples and ceremonies. All that we can do and ought to do is to take those symbols and find out their true *rationale*. Mere cursory reading or performance will not suffice. Western Missionaries who have devoted more than 50 years of their precious lives to the study of our religion have not been able to make the head or tail of it simply because it is hydra headed.

—*S. I. Mail.*

ನೋಟೀಸ್.

ಈ ಸಿಟಿಗೆ ಸೇರಿದ ದೊಡ್ಡ ಮಾವಳ್ಳಿಯಲ್ಲಿರುವ ತಿಗಳರ ಕಾನಪ್ಪನ ತಮ್ಮ ನಾರಾಯಣಸ್ವಾಮಿಯ ಹೆಂಡತಿ ಮುನಿಯಮ್ಮನು ಇದರಿಂದ ಸಮಸ್ತ ಜನಗಳಿಗೂ ತಿಳಿಸುವದೇನೆಂದರೆ.—

ನನ್ನ ಬಾಸೀ ಮಗನಾದ ಸುಮಾರು ಮೂವತ್ತು ವರ್ಷಗಳ ವಯಸ್ಸುಳ್ಳ ಲಕ್ಷ್ಮಯ್ಯನೆಂಬುವನು ಅವನ ದೊಡ್ಡಪ್ಪನಾದ ನಂಜುಂಡಪ್ಪನ ದುರ್ಬೋಧನೆಗೆ ಒಳಪಟ್ಟು ನನ್ನ ಸ್ವಾಧೀನದಲ್ಲಿರುವ ನನ್ನ ಗಂಡನ ಜಮೀನುಗಳನ್ನು ಖುಲ್ಲಾ ಮಾಡಲು ಪ್ರಯತ್ನ ಮಾಡಿರುವಂತೆ ತಿಳಿಯಬರುವದರಿಂದ ಸದರೀ ಜಮೀನುಗಳ ಪೈಕಿ ಯಾವದನ್ನೇ ಆಗಲಿ, ಯಾರೇ ಆಗಲಿ ಕ್ರಯ ಭೋಗ್ಯಾದಿಗಳು ಮಾಡಿಕೊಳ್ಳುವರಾದರೆ ಅವರಿಗೆ ಸಿದ್ಧಿಸಲಾರದು, ಮತ್ತು ಅದರಿಂದ ನನಗೆ ಉಂಟಾಗಬಹುದಾದ ವಿಶಿಷ್ಟ ಖರ್ಚುಗಳಿಗೆ ಕ್ರಯ ಭೋಗ್ಯದಾರರೇ ಗುರಿಯಾಗುವರೆಂದು ಇದರಿಂದ ತಿಳಿಯತಕ್ಕದ್ದು.

ತಾ|| ೧೮ನೇ ಏಪ್ರಿಲ್ ೧೮೯೭ } ಈ ಒಳೇಗುರ್ತು ಮುನಿಯಮ್ಮನು [illegible]

ಕರ್ಣಾಟಕ ಪ್ರಕಾಶಿಕೆ.

೧೮೯೭ನೇ ಇಸವಿ ತಾ|| ಏಪ್ರಿಲ್ ೧೯ನೇ ಸೋಮವಾರ.

ಸಮುದ್ರಯಾನ ವಿಷಯ.

ಮುಂದಿನ ಜೂನ್ ತಿಂಗಳ ೨೦ನೇ ತಾರೀಖಿನಲ್ಲಿ ಇಂಗ್ಲೆಂಡ್ ರಾಜ್ಯದ ರಾಜಧಾನಿಯಾದ ಲಂಡನ್ ಪಟ್ಟಣದೊಳು ನಡೆಯುವದಾಗಿರುವ ಶ್ರೀ ೩ ಮಹಾರಾಜ್ಞೀಯವರ ಆಳ್ವಿಕೆಯ ಷಷ್ಟ್ಯಬ್ದಪೂರ್ತಿ ಉತ್ಸವಾರ್ಥ ಇಂಡ್ಯ ದೇಶದಲ್ಲಿನ ಸಂಸ್ಥಾನಾಧಿಪತಿಗಳಲ್ಲಿ ಕೆಲವರು ಖುದ್ದಾಗಿಯೂ, ಕೆಲವು ಸಂಸ್ಥಾನಗಳ ಪ್ರತಿನಿಧಿಗಳೂ ಅಲ್ಲಿಗೆ ಹೋಗಿಯೂ ಹೋಗುವವರಾಗಿಯೂ ಇರುತ್ತಾರೆ. ಈ ಮೈಸೂರು ಸಂಸ್ಥಾನದ ಪ್ರತಿನಿಧಿಯಾಗಿ ಲೆಫ್ಟಿನೆಂಟ್ ಕರ್ನಲ್ ದೇಶರಾಜೇ ಅರಸಿನವರೂ ಕೇವಲ ವೀಕ್ಷಕರಾಗಿ ಮ|| ದಳವಾಯ್ ದೇವರಾಜ ಅರಸಿನವರೂ, ಮೈಸೂರು ಸಿವಿಲ್ ಸರ್ಜನ್ ರಾದ ಡಾಕ್ಟರ್ ಅರುಮುಗಮುದಲಿಯಾರ್ರವರೂ ಇಂಗ್ಲೆಂಡಿಗೆ ಹೋಗತಕ್ಕದ್ದೆಂದು ನಿಷ್ಕರ್ಷೆಯಾಗಿರುವಂತೆ ಕೇಳುತ್ತೇವೆ. ಇಲ್ಲಿನ ಪ್ರೋಲೀಸ್ ಇನ್ಸ್ಪೆಕ್ಟರ್ ಜನರಲರಾದ ಮ|| ವಿ. ಪಿ. ಮಾಧವರಾಯರವರೂ ಸಹ ಹೋಗುವರೆಂದು ವೃತ್ತಾಂತ ಪತ್ರಿಕೆಗಳಲ್ಲಿ ಪ್ರಕಟಿಸಲ್ಪಡುತಲಿತ್ತು. ಪರಂತು ಈಚೆಗೆ ತಿಳಿಯಬರುವವರಲ್ಲಿ ಯಾವ ಕಾರಣದಿಂದಲೋ ಅವರ ಪ್ರಯಾಣವು ಮನ್ನಾ ಮಾಡಲ್ಪಟ್ಟಿತೆಂದು ಕೇಳುತ್ತೇವೆ. ಗವರ್ನ್ಮೆಂಟ್ ಜನರಲ್ ಸೆಕ್ರೆಟರಿಯವರಾದ ಮ|| ಶ್ರೀನಿವಾಸಯ್ಯಂಗಾರ್ರವರು ಇಂಗ್ಲೆಂಡಿಗೆ ಪ್ರಯಾಣೋನ್ಮುಖರಾಗಿರುವಂತೆ ಈಚೆಗೊಂದು ಪ್ರವಾದ ಹುಟ್ಟಿರುತದೆ. ಇದರ ನಿಜಸ್ಥಿತಿಯು ಮುಂದೆ ತಿಳಿಯಬೇಕಾದ್ದಾಗಿದೆ. ಇದು ಹಾಗಿರಲಿ. ಬ್ರಹ್ಮ ಕ್ಷತ್ರಿಯರಿಗೆ ಸಮುದ್ರಯಾನವು ಹಿಂದೂ ಧರ್ಮಶಾಸ್ತ್ರಗಳಲ್ಲಿ ನಿಷೇಧಿಸಲ್ಪಟ್ಟಿರುವುದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದ ಅಂಶವಾಗಿರುತದೆ. ಈ ಇಂಡ್ಯದೇಶಕ್ಕೂ, ಇಂಗ್ಲೆಂಡ್ ರಾಜ್ಯಕ್ಕೂ ಸುಮಾರು [illegible] ಮೈಲಿಗಳ ಫಾಸಲೆ ಇರುತದೆ. ಈ ಫಾಸಲೆಯಲ್ಲಿ [illegible] ಮೈಲಿಗಳ ದೂರ ರೈಲುಗಾಡಿಯಲ್ಲಿ ಪ್ರಯಾಣ ಮಾಡಬೇಕಾಗಿರುತಿದೆ. ಮುಂಬೈಯಿಂದ ಹೊರಡುವ ಜಹಜು ಒಂಭತ್ತನೆಯ ದಿನ ಅರಬ್ಸ್ತಾನ ಸಮುದ್ರ ತೀರದಲ್ಲಿರುವ ಏಡನ್ ಎಂಬ ಪಟ್ಟಣವಂ ಸೇರುತಿದೆ. ಈ ಮಧ್ಯೆ ಇಳಿಯುವದಕ್ಕೆ ಯೆಲ್ಲಿಯೂ ಸುತರಾಂ ಅವಕಾಶವಿರುವದಿಲ್ಲವು. ಅಲ್ಲಿ ಇಳಿಯತಕ್ಕವರನ್ನಿಳಿಸಿ ಹತ್ತುವಂತವರಂ ಹತ್ತಿಸಿಕೊಂಡು ಹೊರಟರೆ ರೆಡ್ಸೀ ಎಂಬ ಸಮುದ್ರದ ಅಂತ್ಯದಲ್ಲಿರುವ ಸ್ಯೂಯಜ್ ಕೆನಾಲ್ ಎಂಬ ಕಾಲ್ವೆಯಂ ಹೊಕ್ಕು ಮುಂದಕ್ಕೆ ಮಿಡಿಟರೇನಿಯನ್ ಸಮುದ್ರದಲ್ಲಿ ಪ್ರವೇಶಿಸಿ, ಫ್ರೆಂಚ್ರಾಜ್ಯದ ಸಮುದ್ರ ತೀರದಲ್ಲಿರುವ ಮಾರ್ಸೆಲೀಸ್ ಎಂಬ ಪಟ್ಟಣವಂ ಸೇರಿ ಅಲ್ಲಿಂದ ಮುಂದಕ್ಕೆ ರೈಲಿನಲ್ಲಿ ಪ್ರಯಾಣ ಮಾಡಬೇಕು. ಮೇಲೆ ತಿಳಿಸಿರುವ ಏಡನ್ ಮತ್ತು ಸ್ಯೂಯಜ್ ಪಟ್ಟಣದಬಳಿ ಜಹಜುಗಳು ಕೆಲವು ಘಂಟೆಗಳಕಾಲ ತಂಗಿ ಮುಂದಕ್ಕೆ ಹೊರಡುತವೆ. ಏಡನ್ ಪಟ್ಟಣದಿಂದ ಸ್ಯೂಯಜ್ ಪಟ್ಟಣ ಸೇರುವದಕ್ಕೆ ಸುಮಾರು ನಾಲ್ಕು ದಿನಗಳಕಾಲ ಹಿಡಿಯಬಹುದು. ಅಲ್ಲಿಂದ ಮಾರ್ಸಲೀಸ್ ಪಟ್ಟಣ ಸೇರುವದಕ್ಕೆ ಸುಮಾರು ಆರು ದಿನಗಳ ಕಾಲ ಹಿಡಿಯಬಹುದು. ಈ ರೀತಿ ಹಗಲು ರಾತ್ರಿ ಅವಿಚ್ಛಿನ್ನವಾಗಿ ಹದಿನೆಂಟು ದಿನಗಳ ಕಾಲ ಜಹಜಿನಲ್ಲಿ ಪ್ರಯಾಣ ಮಾಡಬೇಕಾಗಿದೆ. ಹೀಗಿರುವಲ್ಲಿ ವಿಧಿಚೋದಿತ ಆಚಾರಬದ್ಧರಾದ ಬ್ರಹ್ಮ ಕ್ಷತ್ರಿಯರಿಗೆ ಲೋಪವಿಲ್ಲದೆ ನಿತ್ಯಕರ್ಮಗಳು ಹ್ಯಾಗೆ ನಡೆಯುವವೋ ನಾವರಿಯೆವು. ಜಹಜಿನಲ್ಲಿ ಸ್ನಾನ ಪಾನ ಭೋಜನಾದಿಗಳು ನಡೆಯಬೇಕಾದ ವಿಷಯವಂ ಕುರಿತು ಆಲೋಚಿಸಿದರೆ ಅದರಲ್ಲಿಯೂ ಬಹುವಿಧ ಅನಾನುಕೂಲಗಳು ಕಂಡುಬರುತಲಿವೆ. ಸಮುದ್ರಯಾಯಿಗಳು ತಮಗೆ ಅವಶ್ಯಕವಾದಷ್ಟು ನೀರನ್ನು ಪೀಪಾಯಿಗಳಲ್ಲಿ ತುಂಬಿ ಜಹಜಿನಲ್ಲಿಟ್ಟುಕೊಂಡು ಹೋಗಬೇಕು. ಸದರೀ ಭರ್ತಿ ಪೀಪಾಯಿಗಳನ್ನು ಜಹಜಿನಮೇಲೆ ಹತ್ತಿಸತಕ್ಕವರು ಜಹಜಿನ ಕಲಾಸಿಗಳಾದದರಿಂದ ಅವರ ಜಾತಿಮತ ನುಸರಿಸಿ ವಿಚಾರವು ಇಲ್ಲಿ ಅನಾವಶ್ಯಕವಾದುದು. ಜಹಜಿನಲ್ಲಿ ಪಾಕಕ್ಕೆ ಪ್ರತ್ಯೇಕ ಸ್ಥಳ ಸಿಕ್ಕಬಹುದು, ಪರಂತು ಅದೂ ನಿರಾಕ್ಷೇಪಣೀಯವಾಗಿರುವದೆಂದು ನಾವು ನಂಬಲರೆವು. ಏತೀನ ಜಲ ಮತ್ತು ದೃಷ್ಟಿ ದೋಷವನ್ನು ಪರಿಗಣಿಸುವ ದಾಕ್ಷಿಣಾತ್ಯರಾದ ಬ್ರಹ್ಮ ಕ್ಷತ್ರಿಯರಿಗೆ, ಆಚಾರ ಲೋಪವಿಲ್ಲದೆ ಸಮುದ್ರಯಾನವು ನಡೆಯಲಾರದೆಂದು ಹೇಳಬಹುದಾಗಿದೆ.

ಮಹಾರಾಜ್ಞೀಯವರ ಆಳ್ವಿಕೆಯ ಷಷ್ಟ್ಯಬ್ದಪೂರ್ತಿ ಉತ್ಸವ

ಈ ಪ್ರಪಂಚದೊಳಗಿನ ಪ್ರಸಿದ್ಧ ಪಟ್ಟಣಗಳಲ್ಲಿ ಲಂಡನ್ ನಗರವು ವ್ಯಾಪಾರ ವಿಷಯದಲ್ಲೂ ಐಶ್ವರ್ಯದಲ್ಲೂ ಸರ್ವೋತ್ಕೃಷ್ಟವಾದುದೆಂಬ ಪ್ರಶಸ್ತಿಯಂ ಪಡೆದಿರುವದೆಯಷ್ಟೆ. ಹಾಗಿದ್ದಾಗ್ಯೂ ಸದರೀ ಪಟ್ಟಣದ ಸುಮಾರು ೬೦ ಲಕ್ಷ ಪ್ರಜೆಗಳಲ್ಲಿ ಒಂದು ಲಕ್ಷ ಜನರು ಸುತರಾಂ ವಾಸಸ್ಥಳಗಳಿಲ್ಲದೆ ಕೇವಲ ನಿರಂದಾರಿಗಳಾಗಿ ಬೀದಿಬೀದಿಗಳೂ ತಿರುಗಾಡುತಲಿದಾರೆ. ಮೇಲಿನ ಮೊತ್ತದಲ್ಲಿ ಅರವತ್ತುಸಾವಿರ ಮಂದಿ ಲಂಡನ್ ಪುರಿಗೆ ಸೇರಿದವರಾಗಿರುತ್ತಾರೆ. ಈ ಷಹರಿನಲ್ಲಿ ಪ್ರತಿದಿನ ರಾತ್ರಿ ಕಾಲದೊಳು ಅರವತ್ತುಸಾವಿರ ಜನರಿಗಿಂತಲೂ ಅಧಿಕವಾಗಿಯೇ ಬೈಲುಗಳಲ್ಲಿ ನಿದ್ರೆ ಮಾಡುತ್ತಾರೆ. ಈ ಷಹರಿನಲ್ಲೇ ತೊಂಬತ್ತುಸಾವಿರ ಮಂದಿ ನಿರಾಧಾರಿಗಳಾದ ಬಡಜನರಿರುತ, ಸಾಫ್ ಒಂದಕ್ಕೆ ಖೇ ಇಸುಂ ಸರಾಸರಿ ಒಂದು ಪೆಂಡಿನಂತೆ, ಕಂದಾಯದಾರರ ಖರ್ಚಿನಲ್ಲಿ ಜೀವಿಸುತಲಿದಾರೆ. ಈ ಜನರಲ್ಲದೆ ಇನ್ನು ಅನೇಕ ಸಹಸ್ರ ಬಡಜನರಿರುತ್ತಾರೆ. ಇವರು ಬಡಜನರಿಗಾಗಿ ಸ್ಥಾಪಿಸಲ್ಪಟ್ಟಿರುವ ಧರ್ಮ ಸತ್ರಗಳಿಗೆ ಹೋಗುವದಿಲ್ಲವು. ಪರಂತು ಅನಿಶ್ಚಿತವಾದ ಜೀವನೋಪಾಯವಂ ಕಲ್ಪಿಸಿಕೊಂಡು ಜೀವಿಸತಕ್ಕವರಾಗಿರುತ್ತಾರೆ. ಇವರ ವಾಸಕ್ಕೆ ಸ್ಥಿರವಾದ ಸ್ಥಳವಿಲ್ಲವು. ಕೆಲವು ಕಾಲ ಲಂಡನ್ ಷಹರಿನಲ್ಲೂ ಕೆಲವು ಕಾಲ ಆಸ್ಪಾಸ್ ಪೇಟೆಗಳಲ್ಲೂ ಇರುತ್ತಾರೆ. ಈ ಜನರಲ್ಲಿ ಸುಮಾರ್ ಹನ್ನೆರಡುಸಾವಿರಮಂದಿ ಮನೆಗಳ ಬಾಗಿಲುಗಳಲ್ಲಿ, ತೋಟಗಳಲ್ಲೂ, ಹೊಲಗಳಲ್ಲೂ, ರೈಲ್ ಗಾಡಿಗಳಲ್ಲೂ, ಅನುಪಯುಕ್ತಗಳಾದ ಸೇತುವೆಗಳ ಕೆಳಗೂ, ಖಾಲೀ ಗಾಡಿಗಳಲ್ಲೂ, ದೋಣಿಗಳಲ್ಲೂ ನಿದ್ರೆ ಮಾಡುತ್ತಾರೆ. ಸಂಯುಕ್ತರಾಜ್ಯದ (ಅಂದರೆ ಇಂಗ್ಲೆಂಡ್, ಸ್ಕಾಟ್ಲೆಂಡ್ ಮತ್ತು ವೇಲ್ಸ್ ಸೇರಿ) ಪ್ರಜಾ ಸಂಖ್ಯೆಯಲ್ಲಿ ಇಪ್ಪತ್ತುನಾಲ್ಕು ಮಂದಿಗೆ ಒಬ್ಬನಂತೆ ಸುತರಾಂ ಜೀವನಾಧಾರವಿಲ್ಲದವನಾಗಿ, ಪರಸ್ಥಳಗಳಲ್ಲಿನ ಮತ ಸಂಬಂಧವಾದ ಸ್ಥಾಪನೆಗಳಮೂಲಕ ಜೀವಿಸತಕ್ಕವರಾಗಿರುತ್ತಾರೆ. ಲಂಡನ್ ಪಟ್ಟಣದಲ್ಲಿನ ದಾರಿದ್ರ್ಯದಿಂದಲೂ, ಅಲ್ಲಿ ಜೀವನೋಪಾಯಗಳು ಅನಿಶ್ಚಿತವಾಗಿರುವದರಿಂದಲೂ, ಐದುಮಂದಿಗೆ ಒಬ್ಬನಂತೆ, ಬಡಜನರಿಗಾಗಿ ಸ್ಥಾಪಿಸಲ್ಪಟ್ಟಿರುವ ಕಾರ್ಖಾನೆಗಳಲ್ಲೂ, ಆಸ್ಪತ್ರೆಗಳಲ್ಲೂ, ಹುಚ್ಚರ ಆಸ್ಪತ್ರೆಗಳಲ್ಲೂ ಸಾಯುವಂತೆ ಅಂದಾಜ್ ಮಾಡಲ್ಪಟ್ಟಿರುತಿದೆ.

ಬರುವ ಜೂನ್ ತಿಂಗಳ ೨೦ನೇ ತಾರೀಖು ಸುಮಾರಿಗೆ, ಶ್ರೀಮನ್ಮಹಾರಾಜ್ಞೀ ವಿಕ್ಟೋರಿಯಾ

ಚಕ್ರವರ್ತಿನೀಯವರು ಸಿಂಹಾಸನಾಸೀನರಾಗಿ ರಾಜ್ಯಧುರವಂ ಕೈಗೊಂಡದ್ದು ಮೊದಲು ಅರವತ್ತು ಸಂವತ್ಸರಗಳ ಕಾಲ ಪೂರ್ತಿಯಾಗುತ ಬಂದುದರಿಂದ ಇದ್ದು ದೀರ್ಘಕಾಲಿಕವಾದ ಆಳ್ವಿಕೆಯು ಆಕೆಯವರ ಪ್ರಜೆಗಳ ಜ್ಞಾಪಕದಲ್ಲಿ ಶಾಶ್ವತವಾಗಿ ನೆಲಗೊಂಡಿರುವಂತೆ ಅದು ಒಂದು ಪ್ರಬಲ ಉತ್ಸವರೂಪವಾಗಿ ಆಚರಿಸಲ್ಪಡತಕ್ಕದ್ದೆಂದು ನಿಷ್ಕೃಷ್ಟವಾಗಿ ಅದಕ್ಕೆ ಆವಶ್ಯಕಗಳಾದ ಪ್ರಬಲ ಸನ್ನಾಹಗಳಿಗೆ ಪ್ರಾರಂಭವಾಗಿರುತ್ತದೆಂಬುದು ಪ್ರಸಿದ್ಧ ವಿಷಯವಾಗಿರುತದೆ. ಏತದರ್ಥ ಲಂಡನ್ ಪಟ್ಟಣದ ರಾಜಮಾರ್ಗಾಲಂಕಾರಗಳಗೂ, ರಾತ್ರಿಕಾಲದಲ್ಲಿ ದೀಪೋತ್ಸವದಬಗ್ಗೂ ಕೋಟ್ಯಾಂತರ ರೂಪಾಯಿಗಳು ಖರ್ಚು ಮಾಡಲ್ಪಡುವಂತಿದೆ. ಈ ಸಂದರ್ಭದೊಳು ಮಾಡಲ್ಪಡುವ ಸಂಭ್ರಮಗಳೆಲ್ಲವು ಬಡವರಾದ ತಮ್ಮ ಪ್ರಜೆಗಳಿಗೆ ಸಹಾಯಕವಾಗಿರಬೇಕೆಂಬ ತಮ್ಮ ಅಭಿಪ್ರಾಯವನ್ನು ರಾಜ್ಞೀಯವರೇ ತಿಳಿಸಿರುತ್ತಾರೆಂದರಿತು, ಆಕೆಯವರಿಗೆ ತಮ್ಮ ಪ್ರಜೆಗಳ ಸುಖ ಸಂತೋಷಾಭಿವೃದ್ಧಿ ವಿಷಯದಲ್ಲುಂಟಾಗಿರುವ ಅಂತರವಾದ ಅಕ್ಕರೆಯಬಗ್ಗೆ ಅವರ ಪ್ರಜೆಗಳಿಗೆ ಅವರಲ್ಲೀಗ ಉಂಟಾಗಿರುವ ರಾಜಭಕ್ತಿ ಕೃತಜ್ಞತಾದಿ ಭಾವಗಳು ವಿಶೇಷತಃ ದೃಢವಾದವು. ಕೋಟ್ಯಾಂತರ ದ್ರವ್ಯ ವ್ಯಯವಾಗುವ ಇಂತಹ ಸಮಯಗಳಲ್ಲಿ ಉಪಪನ್ನರಾದ ಪ್ರಜೆಗಳ ವಿಶೇಷ ದಾನ ಮಾಡಲ್ಪಡುವ ಹಣ ಧಾರ್ಮಿಕ ಕಾರ್ಯಗಳಿಗಾಗಿ ಬಸ್ಸ್ಯರ್ಥ ವ್ಯಯ ಮಾಡುವದಕ್ಕಿಂತಲೂ, ನಿರಾಧಾರಿಗಳಾದ ಬಡಜನರಿಗೆ ಮಾಡಲ್ಪಡುವ ಸಹಾಯವು ಐಹಿಕಾಮುಷ್ಮಿಕ ಫಲದಾಯಕವಾಗಿರುವದರ್ಲ್ಲ ಸಂಶಯವಿಲ್ಲವು. ಪರಂತು "ಸ್ವಾಮಿಸ್ಥಾನಸಮಮೋಪನಯೋಪಿ ಶಸ್ಯಾದಿಕ" ಎಂಬುತೆ ಆಸ್ಥಾನಗೆ ಉಪದೇಶಕರಾಗಿರುವ ಪ್ರಭುಪ ಪ್ರಭುಗಳು ಸ್ವಾಸ್ಥ್ಯಾನದಲ್ಲಿ ಯಾವ ಕ್ರಮವನ್ನವಲಂಬಿಸುವರೋ ಅದು ಮುಂದೆ ತಿಳಿಯಬರಬೇಕಾಗಿದೆ.

Occasional Notes.

ನೈಮಿತ್ತಿಕ ವಿಷಯ ನ್ಯಾಸ

ಕಲ್ಕತ್ತೆ ವಿಕ್ಟೋರಿಯಾ ಸ್ಮಾರಕ ಫಂಡಿನಲ್ಲಿ ಈಗ ೧,೩೨,೨೦೦ ರೂಪಾಯಿಗಳು ಜಮಾ ಆಗಿವೆ.

ಕಾದಂಬರಿ ಗ್ರಂಥವು ಪದ್ಯಸಮೇತಳಾದ ಒಬ್ಬ ಯೂರೋಪಿಯನ್ ಯುವತಿಯಿಂದ ಇಂಗ್ಲೀಷ್ ಭಾಷೆಯಲ್ಲಿ ತರ್ಜುಮೆ ಮಾಡಲ್ಪಟ್ಟಿರುವಂತೆ ತಿಳಿಯಬರುತಿದೆ.

ಕಲ್ಕತ್ತೆಯೊಳು ನಡೆಯುವದಾಗಿರುವ ಇಂಡಿಯನ್ ಅಸೋಸಿಯೇಷನ್ ಎಂಬ ಸಮಾಜಕ್ಕೆ ಆನರಬಲ್ ಮಿ॥ ಎ. ಎಂ. ಬೋಸ್ ಎಂಬವರು ಪ್ರೆಸಿಡೆಂಟಾಗಿ ಚುನಾಯಿಸಲ್ಪಟ್ಟಿರುತ್ತಾರೆ.

ಈಚೆಗೆ ಗ್ರೀಕ್ ಸರ್ಕಾರದವರು ಮೆಸಿಡೋನಿಯಾ ಎಂಬ ಪ್ರಾಂತದಮೇಲೆ ಯುದ್ಧಮಾಡಿ ಅದು ತಮ್ಮ ಸ್ವಾಧೀನ ಮಾಡಿಕೊಂಡಿರುತ್ತಾರೆಯು ಷ್ಟೆ. ಅಲ್ಲಿನ ಕಲಹಗಳಿಂದ ಲಂಡನ್ ಮೊದಲಾದ ನಗರಗಳ ವಾಸಸ್ಥಾನಗಳಲ್ಲಿ ಇನ್ನೂರಕ್ಕೆ ಮೇಲ್ಪಟ್ಟ ನಾಶ ಮಾಡಲ್ಪಟ್ಟವು.

ಇಂಡ್ಯ ದೇಶದ ಭಾಷಾಭ್ಯಾಸಕ್ಕಾಗಿ ಲಂಡನ್ನಲ್ಲಿ ಸ್ಥಾಪಿಸಲ್ಪಟ್ಟಿರುವ ಓರಿಯಂಟಲ್ ಕಾಲೇಜ್ ಎಂಬ ಪಾಠಶಾಲೆಯನ್ನು ಇನ್ನು ಕೆಲವು ವರ್ಷಗಳ ಕಾಲದೊಳಗಾಗಿ ತೆಗದುಹಾಕಬೇಕೆಂದ ನಿಷ್ಕರ್ಷೆಯಾಗಿರುವಂತೆ ಕೇಳುವದಕ್ಕೆ ಬಹಳ ವಿಷಾದಿಸುತ್ತೇವೆ.

ಶ್ರೀಮನ್ ಮಹಾರಾಜ್ಞೀಯವರ ದೀರ್ಘಕಾಲಿಕವಾದ ಆಳ್ವಿಕೆಯ ಜ್ಞಾಪಕಾರ್ಥ ಆಚರಿಸಲ್ಪಡುವದಾಗಿರುವ ಉತ್ಸವ ಸಂದರ್ಭದಲ್ಲಿ ಕಾಶ್ಮೀರದೇಶದ ಮಹಾರಾಜರವರು, ರಾಜ್ಞೀಯವರಲ್ಲಿ ತಮಗಿರುವ ರಾಜಭಕ್ತಿ ಕೃತಜ್ಞತಾದಿ ಭಾವಪ್ರದರ್ಶಕವಾಗಿ, ತಮ್ಮ ಸಂಸ್ಥಾನದಲ್ಲಿ ಸ್ತ್ರೀಯರಿಗಾಗಿ ಎರಡು ಆಸ್ಪತ್ರೆಗಳನ್ನು ಶ್ರೀನಗರದಲ್ಲೊಂದು, ಜಮ್ಮೂ ಎಂಬ ಪೂರ್ವರಾಜಧಾನಿಯಲ್ಲೊಂದು—ಸ್ಥಾಪಿಸಬೇಕೆಂದುದ್ದೇಶಿಸಿರುವಂತೆ ತಿಳಿಯಲಾದೆವು.

ಕಲ್ಕತ್ತೆಯಲ್ಲಿ ಕ್ರಿಸ್ತಿಯನ್ ಜಾತಿ ಹುಡುಗಿಯೊಬ್ಬಳು ತನಗೆ ವಿವಾಹವಾದ ಕೆಲವು ದಿನಗಳ ಮೇಲೆ, ತನ್ನ ಗಂಡನಿಗೆ ವಿಷ ಹಾಕಿ ಕೊಲ್ಲಬೇಕೆಂಬ ಉದ್ದೇಶದಿಂದನೆ, ಹನಗೆ ಸ್ವಲ್ಪ ವಿಷ ಕಳುಹಿಸಿ ಕೊಡಬೇಕೆಂದು ಅನ್ನ ಮಿತ್ರನೊಬ್ಬನಿಗೆ ಕಾಗದ ಬರೆದಳು. ಸದರೀ ಕಾಗದವು ಮಧ್ಯೆ ತಡೆಯಲ್ಪಟ್ಟ ಸಂಗತಿಯು ಅವಳಿಗೆ ತಿಳಿಯಬಂದು ಆತ್ಮಹತ್ಯೆ ಮಾಡಿಕೊಳ್ಳುವ ಪ್ರಯತ್ನ ನಡೆಸಿದಳು, ಪರಂತು ಸದರೀ ಪ್ರಯತ್ನವು ಕೂಡಲೆ ಹೊರಗಾಗಿ ನಿರೋಧಿಸಲ್ಪಟ್ಟಿತು. ಇದರಿಂದ ಆ ಪ್ರಾಂತದೊಳು ಬಹಳ ಅಲ್ಲರಿಯುಂಟಾಗಿದೆ.

ಕಲ್ಕತ್ತೆ ಪ್ರಾಂತದಲ್ಲಿ ಬಹುಕಾಲದ ಮೊದಲು ಒಂದುಬಗೆ ಜೂಜಾಟ ನಡೆಯುತ ತನ್ಮೂಲಕ ಅನೇಕರು ತಮ್ಮ ಸರ್ವಸ್ವವ ಹೋಗಲಾಡಿಸಿಕೊಂಡು ಕೇವಲ ಬಡಸ್ಥಿತಿಗೆ ಬರುತಲಿದಾರೆ. ಸದರೀ ಜೂಜಾಟದ ಸ್ವರೂಪವೆಂತೆಂದರೆ, ಕೆಲವರು ಒಂದುಕಡೆ ಸೇರಿ ಇಷ್ಟ ದಿನಸಗಳೊಳಗಾಗಿ ಮಳೆ ಬರುವುದು, ಹಾಗೆ ಬಾರದೆ ಹೋದರೆ ಇಷ್ಟ ರೂಪಾಯಿಗಳು ನಾನು ದಂಡಕೊಡುತ್ತೇನೆಂದು ಹೇಳಿ ಅದನ್ನು ಡಿಪಾಜಿಟ್ ಕಟ್ಟುವುದು. ಹೀಗೆಯೇ ಅವರವರಿಗೆ ಕೋರಿದಂತೆ ಪರತ್ತಾಗಿ ಳಂಮಾಡಿಕೊಂಡು ರೇವಣಿ ಇಡುವುದು. ಯಾರ ಹೇಳಿಕೆಯಂತೆ ನಡೆಯುವದಿಲ್ಲವೋ ಅವರು ಇಟ್ಟ ಡಿಪಾಜಿಟ್ಟನ್ನು ಕಳಕೊಳ್ಳುವರು. ಕುಮರಿ ಜೂಜುಗಳು ನಡೆಯುವ ಕಾಲದಲ್ಲಿ ಕೇಸು ವಿಚಾರಣೆಗಾಗಿ ಬರುವ ಯೂರೋಪಿಯನ್ ಆಫಿಸರಗಳು ಸಹ ಮೇಲಿನಂತೆ ಪರತ್ತುಗಳಂ ಮಾಡಿಕೊಂಡು ಬಹಳ ನಷ್ಟವಂ ಅನುಭವಿಸುವುದು ಪ್ರಸಿದ್ಧವಾಗಿದೆಯಷ್ಟೆ. ಮೇಲೆ ತಿಳಿಸಲ್ಪಟ್ಟ ಜೂಜಾಟವನ್ನು ತಪ್ಪಿಸುವದಕ್ಕಾಗಿ ಗವರ್ನಮೆಂಟಿನವರು ಈಚೆಗೆ "ರೇಯಿನ್ ಗ್ಯಾಂಬ್ಲಿಂಗ್ ಆಕ್ಟ್" ಎಂಬ ಹೆಸರಿನಿಂದ ಒಂದು ಕಾನೂನನ್ನು ರಚಿಸಿ ವೈಸರಾಯರವರ ಮಂತ್ರಾಲೋಚಕ ಸಮಾಜದಲ್ಲಿ ಅದನ್ನು ಮಂಜೂರ್ಮಾಡಿಸಿರುತ್ತಾರೆ. ಈ ಸಂಬಂಧದಲ್ಲಿ ಮುಖ್ಯ ಪ್ರವರ್ತಕರಾದ ಬಂಗಾಳಿ ಮಾರ್ವಾಡಿ ಜನರಿಗೆ ಇದು ಕೇವಲ ಬಾಧಕರೂಪವಾಗಿ ಪರಿಣಮಿಸಿದ್ದರಿಂದ ಸದರೀ ಜನರೆಲ್ಲರು ಈಚೆಗೆ ಒಂದು ಸಭೆ ಸೇರಿ, ಸದರೀ ಹೊಸ ಕಾನೂನನ್ನು ಜಾರಿಗೆ ತರಕೂಡದೆಂತಲೂ, ಅದು ಕುರಿತು ಪುನರಾಲೋಚನೆ ಮಾಡಬೇಕೆಂತಲೂ, ಗವರ್ನಮೆಂಟಿನವರು ಅರಿತಿಮಾಡದೆ ಇದ್ದರೆ ಅಧಿಕಾರ ಹರಾಜಿನಲ್ಲಿ ತಮ್ಮ ಗುಂಪಿಗೆ ಸೇರಿದವರ್ಯಾರೂ ಸಹಾಯ ಮಾಡಕೂಡದೆಂತಲೂ ನಿರ್ಣಯಗಳಂ ಮಾಡಿ ಗವರ್ನಮೆಂಟಿಗೆ ಕಳುಹಿಸಿರುತ್ತಾರೆ.

ಈಗ ಇಂಡ್ಯದೇಶದೊಳು ಪ್ರಾಯಶಃ ಸರ್ವತ್ರ ಕ್ಷಾಮವೂ ಸಾಂಕ್ರಾಮಿಕ ರೋಗಗಳೂ ವ್ಯಾಪಿಸಿ ಪ್ರಜೆಗಳು ಪೀಡಿತರಾಗುತಲಿರುವದರಿಂದ ಮುಂದಿನ ಜೂನ್ ತಿಂಗಳಲ್ಲಿ ಇಂಗ್ಲೆಂಡಿನೊಳು ನಡೆಯುವದಾಗಿರುವ ಮಹಾರಾಜ್ಞೀಯವರ ಆಳ್ವಿಕೆಯ ಷಷ್ಟ್ಯಬ್ದ ಪ್ರಯುಕ್ತವಾದ ಉತ್ಸವಕ್ಕೆ ಇಂಡ್ಯದೇಶದಿಂದ ಬಹುಮಂದಿ ಅಲ್ಲಿಗೆ ಹೋಗುವರೆಂದು ನಿರೀಕ್ಷಿಸುವದಕ್ಕಾಗುವದಿಲ್ಲವು. ಗ್ವಾಲಿಯರ್ ಸಂಸ್ಥಾನದ ಮಹಾರಾಜರವರಾದ ಸಿಂಧಿಯಾರವರು ಈ ಸಂವತ್ಸರದಲ್ಲಿ ವೃಥಾಯತಃ ಇಂಗ್ಲೆಂಡಿಗೆ ಹೋಗಬೇಕೆಂದು ಯೋಚಿಸಿದ್ದರು. ಪರಂತು ತಮ್ಮ ದೇಶದಲ್ಲಿ ಪ್ರಸ್ತವಾಗಿರುವ ಕ್ಷಾಮನಿವಾರಣ ಕಾರ್ಯಗಳನ್ನು ಅವರು ಪ್ರತ್ಯಕ್ಷದಲ್ಲಿದ್ದು ನಡೆಸುತಲಿರುವದರಿಂದ ಅವರ ಪ್ರಯಾಣವು ಮುನ್ನ ಮಾಡಲ್ಪಟ್ಟಿತು. ಬಂಡೆಲುಖಂಡದೇಶದ ಅರಸರುಗಳ ವಿಷಯವೂ ಮೇಲಿನಂತೆಯೇ ಇದೆ. ವಿಶೇಷ ಮಧ್ಯಇಂಡಿಯಾದೇಶದ ಪ್ರಮುಖರಲ್ಲಿ ಸದರೀ ಉತ್ಸವಕಾಲದೊಳು ಅಲ್ಲಿ ಕಣ್ಣಿಗೆ ಬೀಳತಕ್ಕವರು ಇಂಪೀರಿಯಲ್ ಸರ್ವಿಸ್ ಸೈನ್ಯಕ್ಕೆ ಸೇರಿದ, ಗ್ವಾಲಿಯರ್ ಸವಾರ್ ಸೇನೆಯ ಕಪ್ತಾನ್ ಅಬ್ದುಲ್ ಘನಿ, ಭೋಪಾಲಸವಾರ್ ಸೇನೆಯ ಕರ್ನಲ್ ಡೇಡಿ ಮಿರ್ಜಾ ಕರೀಂಬೇಗ್, ಇಂದೂರ ಸೇನೆಯ ಕವಾಲ್ದಾರ ಗೋವಿಂದರಾವ್ ಮುತ್ಕರ್, ಹೈದರಾಬಾದ್ ಇಂಪೀರಿಯಲ್ ಸೇನೆಯ ಕರ್ನಲ್‌ರವರಾದ ಕರ್ನಲ್ ಅಪ್ಸರ್‌ದುಗಿರವರು, ಮೈಸೂರುಸೇನೆಯ ಲೆಪ್ಟಿನೆಂಟ್ ಕರ್ನಲ್‌ರವರಾದ ದೇಶರಾಜೇ ಅರಸಿನವರು, ಎಂದಾಗಿರುತ್ತಾರೆ. ರಾಜಪುತಾನಾ ದೇಶದ ಅರಸರುಗಳಲ್ಲಿ ಜೋಧಪುರದ ಮಹಾರಾಜಾ ಸರ್ ಪ್ರತಾಪಸಿಂಗ್, ಕೆ. ಸಿ ಎಸ್ ಐ. ಯವರು ಮಾತ್ರ ಸದರೀ ಉತ್ಸವಾರ್ಥ ಇಂಗ್ಲಾಂಡಿಗೆ ಪ್ರಯಾಣಮಾಡುವರೆಂದು ಕೇಳುತ್ತೇವೆ. ಈ ಅರಸರು ಇಂಡ್ಯದೇಶದ ಇತರ ಸಂಸ್ಥಾನಾಧಿಪತಿಗಳನ್ನಪೇಕ್ಷಿಸಿ ವಿಶೇಷ ಸ್ವತಂತ್ರಾಧಿಕಾರವುಳ್ಳವರಾಗಿರುತ್ತಾರೆ.

LOCAL AND PROVINCIAL NEWS.

ಸ್ಥಳದೇಶದ ಮತ್ತು ತಾಲ್ಲೂಕು ಜಾತಿವೃತ್ತಾಂತಗಳು.

ಈ ಸಂಸ್ಥಾನದ ದಿವಾನರಾದ ಸರ್. ಕೆ. ಶೇಷಾದ್ರಿ ಅಯ್ಯರವರು ಈದಿನ ನೀಲಗಿರಿಗೆ ಪ್ರಯಾಣ ಮಾಡುವರೆಂದು ಕೇಳುತ್ತೇವೆ.

ಮೈಸೂರು ಸರ್ಕಾರದವರು ಸೂಲಗಿತ್ತಿ ವಿದ್ಯೆಯನ್ನು ಕಲಿಸುವದಕ್ಕೆ ಮೂರುಜನ ಬ್ರಾಹ್ಮಣಸ್ತ್ರೀಯರುಗಳಿಗೆ ಸಂಬಳ ಕೊಡುವಂತೆ ಅಪ್ಪಣೆ ಮಾಡಿದಾರೆ.

ರಾಜಧಾನಿಯಲ್ಲಿ ಅರಮನೆ ಸುಟ್ಟುಹೋದಾಗ ಒಳಗೆ ಸಿಕ್ಕಿ ಮೃತಪಟ್ಟ ನೌಕರರ ವಾರಸುದಾರರಿಗೆಲ್ಲ ಇನಾಂಗಳನ್ನೂ ಪೆನ್ಷನ್‌ಗಳನ್ನೂ ಕೊಡುವಂತೆ ಮಹಾರಾಣೀಯವರು ಅಪ್ಪಣೆ ಮಾಡಿದರೆಂದು ಕೇಳುತ್ತೇವೆ.

ಕಳೆದ ಸೋಮವಾರ ಮಧ್ಯಾಹ್ನ ಮೈಸೂರಲ್ಲಿ ದಿವಾನರವರ ಅಗ್ರಹಾರದ ಹತ್ತಿರ ಒಂದು ಹುಲ್ಲುಮನೆಗೆ ಬೆಂಕಿ ಬಿದ್ದು ೫-೬ ಮನೆಗಳು ಸುಟ್ಟುಹೋದವೆಂತಲೂ ಆದರೆ ಪ್ರಾಣ ನಷ್ಟವೇನೂ ಆಗಲಿಲ್ಲವೆಂತಲೂ ಕೇಳುತ್ತೇವೆ.

ಈದಿನ ಮೊದಲು ಬೇಸಿಗೆಯಬಗ್ಗೆ ಮಾಮೂಲಿ ಅನುಸರಿಸಿ, ಇಲ್ಲಿನ ಚೀಫ್‌ಕೋರ್ಟ್ ಜೂನ್ ೧೫ನೇ ತಾರೀಖ್ ವರೆಗೂ, ಇತರ ವಿಶಿಷ್ಟ ಕೋರ್ಟುಗಳೂ ಮೇ ಮಾಹೆ ಆಖೈರವರೆಗೂ ಮುಚ್ಚಲ್ಪಡುವವು.

ಹಿಂದಿನವಾರದಲ್ಲಿ ನಾವು ತಿಳಿಸಿದ್ದಂತೆ ಇಲ್ಲಿನ ಬ್ರಿಟಿಷ್ ರೆಸಿಡೆಂಟರಾದ ಕರ್ನಲ್ ರಾಬರ್ಟ್‌ಸನ್ ಸಾಹೇಬರವರು ಕೊಡಗು ಪ್ರಾಂತದಿಂದ ಇಲ್ಲಿಗೆ ವಾಪಸ್ ಬಂದರು. ಈದಿನ ರಾತ್ರಿ ಬೇಸಿಗೆಯಬಗ್ಗೆ ನೀಲಗಿರಿಗೆ ಹೊರಡುವರೆಂದು ಕೇಳುತ್ತೇವೆ.

ಮೈಸೂರಲ್ಲಿ ಅರಮನೆಗೆ ಬೆಂಕಿಬಿದ್ದ ವಿಷಯದ ರಿಪೋರ್ಟು ಚೆನ್ನಾಗಿ ಪ್ರಸಿದ್ಧವಾಗಲಿಲ್ಲ. ಆದರೆ ಹೊರಗೇನೂ ಬಂದ ಬಿಟ್ಟಿದೆ. ನಮಗೆ ತಿಳಿದುಬಂದಿದ್ದಕ್ಕೆ ಒಬ್ಬ ಯೂರೋಪಿಯನ್, ಇಬ್ಬರು ಅರಸುಗಳು, ಒಬ್ಬ ಬ್ರಾಹ್ಮಣರು, ಈ ನಾಲ್ಕು ಜನಗಳವಿನಾ ಎಲ್ಲರೂ ದೋಷವಿಮುಕ್ತರಾಗಿದಾರೆ.

ಕೋಲಾರ ಡಿಸ್ಟ್ರಿಕ್ಟು ಮಾಲೂರುತಾಲ್ಲೂಕು ನೊಣವಿನಕೆರೆ ಗ್ರಾಮದಲ್ಲಿ ತಿರುಮಲದೇವರ ಇನಾಮತಿ ಜಮೀನು ಇದೆ. ಸದರೀ ಜಮೀನ್ ಮಾಡುವ ರೈತನು ಈಸ್ತು ಕೆಲವುದಿನಗಳ ಕೆಳಗೆ ಮಳೆ ಬಿದ್ದಾಗ ಅಗೆಯಲು ಮೊದಲು ಕೆಲವು ಇಟ್ಟಿಗೆಗಳು ಕಾಣಿಸಿದವು. ಮತ್ತೆ ಕುತೂಹಲದಿಂದ ಆ ಇಟ್ಟಿಗೆಗಳನ್ನು ಮನೆಗೆ ಸಾಗಿಸಲು ಎತ್ತಿಸುವಾಗ ಇಟ್ಟಿಗೆಯ ಕೆಳಗಡೆ ಒಂದು ಜೈನರ ತಾಂಬ್ರದ ಶಾಸನಗಳೂ, ಒಂದು ಪಂಚಲೋಹದ ಆನೆಯೂ, ಎರಡು ವಿಗ್ರಹಗಳೂ, ೬ ಕೊಳಗಳೂ, ಸಿಕ್ಕಿದವು. ಆಬಳಿ ತಾಲ್ಲೂಕು ಅಮಲ್ದಾರರು ಹೋಗಿ ವಿಚಾರಣೆಮಾಡಿ ಪೋಲೀಸ್ ಪಹರೆ ಇಟ್ಟು ಮೇಲಿನ ಅಧಿಕಾರಿಗಳಿಗೂ ಮತ್ತು ಶಾಸನದ ಇಲಾಖೆ ಡೈರೆಕ್ಟರ್ ಮಿ॥ ರೈಸ್ ಸಾಹೇಬರವರಿಗೂ ತಿಳಿಯಪಡಿಸಿದರು. ಶಾಸನಗಳು ವಗೈರೆ ಅಜಮಾಯಿಷಿಬಗ್ಗೆ ಬೆಂಗಳೂರಿಗೆ ತರಲ್ಪಟ್ಟಿವೆಯೆಂದು ತಿಳಿಯಬರುತಿದೆ.

ಈಚೆಗೆ ಇಂದುವಾರದ ಮೊದಲು ಬಿಸಲಿನ ಝಳವು ಕೇವಲ ದುಸ್ಸಹವಾಗಿದೆ. ವರ್ಷವು ಬಿದ್ದು ಸುಖಕಾರಂ ಇಲ್ಲವು. ಪರಂತು ಆಗಿಂದಾಗ್ಗೆ ಮೋಡವಾಡುತ ವರ್ಷ ಸೂಚನೆಗಳು ಕಾಣಬರುತಲಿವೆ. ವಾಸಸ್ಥಳಗಳ ಭಾವಿಗಳಲ್ಲಿ ನೀರು ಇಳಿಮುಖಹೋಗಿ ಎಣಿಸಿದಂತೆ ಪಾಲ್ಕಾರುಪಿಂಡಿಗಳ ನೀರುಸಿಕ್ಕತಿವೆ. ಧರ್ಮಾಂಬುಧಿ ಕೆರೆಯಲ್ಲಿ ಸುಖರಾಂ ನೀರಿಟ್ಟು ಹೋಗಿ ಹಾಜರಿರುವ ಸ್ವಲ್ಪನೀರು ಸಹಮಳೆಬಿದ್ದು ದುರ್ಸ್ಥಾಪನೆ ಹೊದೆಯು ಬಿದೆ. ಈ ಕೆರೆಯಲ್ಲಿ ನೀರು ಸಮೃದ್ಧಿಯಾಗಿದ್ದರೆ ಅಷ್ಟೇ ದಕ್ಷಿಣ ಭಾಗದಲ್ಲಿರುವ ಪೇಟೆಗಳ ಭಾವಿಗಳಲ್ಲಿ ನೀರು ಸಮೃದ್ಧಿಯಾಗಿರುವುದು. ಹೆಸರುಘಟ್ಟದ ನೀರಿನಸಂಬಂಧವಾಗಿ ಈ ಕೆರೆಯನ್ನು ಉದಾಸೀನವಾಗಿ ಕೈಬಿಟ್ಟಂತೆ ಕಾಣುತಿದೆ. "ಬುದ್ಧಿಯನ್ನು ನಂಬಿ ಹೊಳೆಯಲ್ಲಿ ಇದನೆಂಬ ಗಾದೆಯಂತೆ" ಹೆಸರುಘಟ್ಟದ ನೀರನ್ನು ನಂಬಿ ಈ ಪಟ್ಟಣದಲ್ಲಿರುವ ಕೆರೆಬಾವಿಗಳೆಲ್ಲವು ಹಾಳುಮಾಡಲ್ಪಟ್ಟವು. ಈ ಪೇಟೆಯಲ್ಲಿ ನೀರಿನ ಕೊಳಾಯಿಗಳು ಇಡಲ್ಪಡುವ ಕ್ರಮವು ಹಿಂದಿನವಾರದ ಪತ್ರಿಕೆಯ ಮೂಲಕ ತಿಳಿಸಲ್ಪಟ್ಟಿರುವದರಿಂದ ಅದು ಕುರಿತು ಮರಳಿ ಪ್ರಸ್ತಾಪಿಸುವದು ಚರ್ವಿತಚರ್ವಣವಾಗಿರುವುದು. ಮುಖ್ಯವಾಗಿ ಮಾಹೇಯಾನಾ ನಾಲ್ಕಾರು ರೂಪಾಯಿಗಳ ತಲಬುಗಳಂ ಪಡೆಯುತ ಈ ಸಂಸ್ಥಾನೋದ್ಧಾರಕರೆನ್ನಿಸಿಕೊಂಡು ಬೆಂಗಳೂರಿನಲ್ಲಿ ವಾಸಮಾಡುತಲಿರುವ ಅಧಿಕಾರಿಗಳ ಮನೆಗಳಿಗೂ ಕೋಟೆಗಳಿಗೂ ಜಲಸಮೃದ್ಧಿಯನ್ನುಂಟುಮಾಡಿ ತನ್ಮೂಲಕ ಅವರ ಪ್ರೀತಿಪಾತ್ರನಗಳಿಗೆ ಪಾತ್ರ ಮಾತ್ರರಾಗುವಪುದೇ ಕ್ರಮಗ ಮುಖ್ಯ ಕರ್ತವ್ಯವೆಂದು ಸದರೀ ಇಲಾಖೆಯವರುಭಾವಿಸಿ ಆ ಕಾರ್ಯಕ್ಕೆ ವಿಶೇಷಾವಧಾನನಂ ಕೊಡುತ ಈ ಪಟ್ಟಣದ ಕೆಂಟಾಮಯದಾರರ ಸುಖವು ಅವರಿಗೆ ಅಮುಖ್ಯವಾಗಿ ತೋರಿರುವಂತೆ ಕಾಣುತಿದೆ. ಈ ಕಾರ್ಯಕ್ಕೆ ಪ್ರಥಮಪ್ರವರ್ತಕರಾದ ದಿವಾನರವರು ತಮ್ಮ ಉದ್ದೇಶಾನುಗುಣವಾಗಿ ಎಲ್ಲವು ಸರ್ವಸಮ್ಮತವಾಗಿ ನಡೆಯುತಲಿದೆ ಎಂಬ ಭರವಸೆಯೊಡನೆ ಇದರ ವಿಚಾರಣೆಯನ್ನೇ ಮರೆತಿರುವಂತೆ ಕಾಣುತಿದೆ. ವಿಶೇಷ ಈ ಪಟ್ಟಣದ ಜಲಾನುಕೂಲ್ಯಕಲ್ಪನಾಧಿಕಾರವು ಕೈ ಬದಲಾಯಿಸಿದ ಹೊರತು ಪೇಟೆಯ ನಿವಾಸಿಗಳಿಗೆ ಜಲಕಷ್ಟವು ತಪ್ಪಲಾರದು.

THE MYSORE GAZETTE.

ಮೈಸೂರು ಗೆಜೆಟ್.

ಗುರುವಾರ, ತಾ॥ ೧೫ನೇ ಏಪ್ರಿಲ್ ೧೮೯೭,
ಮೈಸೂರ್ ಗವರ್ನಮೆಂಟಿನವರಿಂದ ಹೊರಡಿಸಿದ
ಇಸ್ತಿಹಾರನಾಮೆಗಳು,
ಜನರಲ್ ಮತ್ತು ರೆವಿನ್ಯೂ.

ತಾ॥ ೧೦ನೇ ಏಪ್ರಿಲ್ ೧೮೯೭, ಮೊಕ್ಕಾಂ ಮೈಸೂರ್.

ಕ್ಯಾಪ್ಟನ್ ನಂ॥ ... —ಸರ್ಜನ್ ಮೇಜರ್ ಜಿ. ಸ್ಮಿತ್ ರವರಿಗೆ ಅವರು ಕೆಲಸಕ್ಕಾಗಿ ರಿಪೋರ್ಟ್ ಮಾಡಿದ ೧೮೯೭ನೇ ಏಪ್ರಿಲ್ ೫ನೇ ತಾರೀಖಿನ ಮಧ್ಯಾಹ್ನದ ಲಾಗಾಯತು ಮೈಸೂರು ದರ್ಬಾರ್ ಸರ್ಜನರಾಗಿ ಶ್ರೀಮನ್ಮಹಾರಾಜ್ಞೀ ದಿವಾನರವರು ಮೊಕರರ್ ಮಾಡಿರುತ್ತಾರೆ.

ತಾ॥ ೧೩ನೇ ಏಪ್ರಿಲ್ ೧೮೯೭

ನಂ॥ ೧೮೯೭-ಪು ... —ಮೈಸೂರು ರೆಸಿಡೆಂಟರವರ ಮೂಲಕ ತಲ್ಪಿದ ಫಾರಿನ್ ಆಫೀಸ್ ಪೊಲಿಟಿಕಲ್ ಏಜಂಟರವರಿಂದ ಕೊಡಲ್ಪಟ್ಟ ಈ ಕೆಳಗೆ ಕಂಡ ಇಸ್ತಿಹಾರ್‌ನಾಮೆಯು ಸಕಲರ ತಿಳುವಳಿಕೆಗೋಸ್ಕರ ಪ್ರಚುರಪಡಿಸಲ್ಪಟ್ಟಿರುತ್ತೆ :—

ಇಸ್ತಿಹಾರ್‌ನಾಮೆ

ಸನ್ ೧೮೯೭ನೇ ಇಸವಿಯ ನಂಬರ್ ೧೮.

ಅದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನೆಂದರೆ, ಕಥಿಯವಾಡ್ ಮತ್ತು ಇಂಡ್ಯ ದೇಶದ ಅನೇಕ ಪ್ರದೇಶಗಳಲ್ಲಿ ಪ್ಲೇಗ್ ಸಂಬಂಧವಾದ ಅಂಟು ರೋಗವು ವ್ಯಾಪಿಸಿರುವದರಿಂದ ಚೈತ್ರಶುದ್ಧ ಪೂರ್ಣಿಮೆಗೆ ಸರಿಯಾದ ಏಪ್ರಿಲ್ ೧೬ನೇ ತಾರೀಖಿನಲ್ಲಿ ಶ್ರೀಶತ್ರುಂಜಯ ಬೆಟ್ಟದಲ್ಲಿ ನಡೆಯುವ ಜೈನ ಯಾತ್ರಿಕರುಗಳ ವಾರ್ಷಿಕ ಸಂಘವು ಈ ವರುಷದಲ್ಲಿ ಸೇರುವದಕ್ಕೆ ಅಪ್ಪಣೆ ಕೊಡಲ್ಪಡಲಾರದು.

ತಾರೀಖ್ ೧೩ನೇ ಏಪ್ರಿಲ್ ೧೮೯೭

ನಂ॥ ೧೧೯೬-ಜ್. ೧೨೬೦—ಕ್ರಿಮಿನಲ್ ಪ್ರೊಸೀಜರ್ ಕೋಡ್ ೧೨ ನೇ ಸೆಕ್ಷನ್ ಅನುಸರಿಸಿ ಕಡೂರು ತಾಲ್ಲೂಕು ಅಮಲ್ದಾರ್ ಎ. ಸಭಾಪತಿ ಪಿಳ್ಳೆಯವರು ಎರಡನೇ ಕ್ಲಾಸಿನ ಮ್ಯಾಜಿಸ್ಟ್ರೇಟಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ॥ ೧೧೯೬-ಜ್. ೧೨೬೪—ಕ್ರಿಮಿನಲ್ ಪ್ರೊಸೀಜರ್ ಕೋಡಿನ ೧೨ನೇ ಸೆಕ್ಷನ್ ಅನುಸರಿಸಿ ಬಾಗೇಪಲ್ಲಿ ತಾಲ್ಲೂಕ್ ಅಮಲ್ದಾರ್ ಕೆ. ವಿ. ಶಿವಣ್ಣ ಬಿ. ಎ. ಯವರು ಎರಡನೇ ಕ್ಲಾಸಿನ ಮ್ಯಾಜಿಸ್ಟ್ರೇಟಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾ॥ ೩ನೇ ಏಪ್ರಿಲ್ ೧೮೯೭, ಮೊಕ್ಕಾಂ ಮೈಸೂರ್

ನಂ, ೯೭೩೩-ಫು. ಪ್ಪೈ ೩-೯೬—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೮೯ನೇ ಆರ್ಟಿಕಲ್ ಅನುಸರಿಸಿ, ಶಿವಮೊಗ್ಗಾ ಡಿಸ್ಟ್ರಿಕ್ಟ್ ಫಾರಸ್ಟ್‌ಗಳ ಎಕಸ್ಟ್ರಾ ಅಸಿಸ್ಟೆಂಟ್ ಕನ್ಸರ್ವೇಟರ್ ಮಿ॥ ಜೆ. ಜೆ. ಮಾರ್ಟಿನ್ ರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯತು ಒಂದು ತಿಂಗಳು ಇಪ್ಪತ್ತೊಂದು ದಿನಗಳ ಪ್ರಿವಿಲೇಜ್‌ರಜಾ ಕೊಡಲ್ಪಟ್ಟಿದೆ.

ಶಿಕಾರಿಪುರದ ರೇಂಜಿನ ಚಾರ್ಜನಲ್ಲಿರುವ ರೇಂಜರ್ ಎಂ. ಶ್ರೀನಿವಾಸರಾಯರು ತಮ್ಮ ಕೆಲಸಗಳೊಂದಿಗೆ ಸದರೀ ಮಿ॥ ಜೆ. ಜೆ. ಮಾರ್ಟಿನ್ ರವರು ರಜಾಪಡೆದಿರುವ ಕಾಲದಲ್ಲಿ ಯಾ ಮನತ್ತುವು ಹುಕುಂ ಕೊಡುವ ಪರಿಯಂತ ಸೊರಬದ ರೇಂಜಿನ ಚಾರ್ಜನ್ನಿಟ್ಟುಕೊಳ್ಳತಕ್ಕದ್ದು

ತಾ|| ೧೨ನೇ ಏಪ್ರಿಲ್ ೧೮೯೭

ನಂ||೪೯೧೩-ರ ಪ್ರೈ. ೧೮೩-೯೪— ಮೈಸೂರುಸರ್ವಿಸ್ ರೆಗ್ಯುಲೇಷನ್‍ಗಳ ೧೭೨ನೇ ಆರ್ಟಿಕಲ್ ಅನುಸರಿಸಿ ಆರಕಲ್ಗೂಡು ತಾಲ್ಲೂಕಿನ ಅಮಲ್ದಾರ್ ಬಿ ಶಂಕರಯ್ಯನವರಿಗೆ ೧೮೯೭ನೇ ಏಪ್ರಿಲ್ ೧೧ನೇ ತಾರೀಖು ಜಾಗಾಯಿತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ಪ್ರಿವಿಲೇಜ್ ಹೊರತು ೨೧ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿದೆ.

೨. ಹಾಸನ ಡೆಪ್ಯುಟಿ ಕಮಿಷನರವರ ಆಫಿಸ ಜಾಡಿಷಿಯಲ್ ಶಿರಸ್ತೇದಾರ್ ಶಿಕಾರಿಪುರದ ಕೃಷ್ಣಪ್ಪನವರು ಸದರೀ ಶಂಕರಯ್ಯನವರು ರಜಾದಲ್ಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರ್ಯಂತ ಆರಕಲಗೂಡು ತಾಲ್ಲೂಕಿನ ಅಮಲ್ದಾರ್ ವ ಮೂರನೇ ಕ್ಲಾಸ ಮ್ಯಾಜಿಸ್ಟ್ರೇಟಾಗಿ ಆಕ್ಟಿಂಗ್ ತಾತ್ಕಾಲಿಕ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ಪಬ್ಲಿಕ್ ವರ್ಕ್ಸ್

ಇಸ್ತಿಹಾರ್‍ನಾಮ.

ತಾ|| ೯ನೇ ಏಪ್ರಿಲ್ ೧೮೯೭

ನಂ||೨೫೩—೧೮೨೭—ಮೈಸೂರು ಡಿವಿಜನಿಗೆ ಸೇರಿದ ಸಬ್ ಅಸಿಸ್ಟೆಂಟ್ ಇಂಜಿನಿಯರ್ ಮ|| ಎಸ ಎ ವೆಂಕಟಕೃಷ್ಣಯ್ಯನವರಿಗೆ ೧೮೯೭ನೇ ಮಾರ್ಚಿ ೧೮ನೇ ತಾರೀಖು ಆಗಾಯಿತು ಮೂರು ತಿಂಗಳ ಫರ್ಲೋ ರಜಾ ಕೊಡಲ್ಪಟ್ಟಿರುತ್ತೆ.

SUMMARY OF NEWS.
ವೃತ್ತಾಂತ ಸಂಗ್ರಹವು.

ಉತ್ತರ ಅಮೇರಿಕಾ ಖಂಡಕ್ಕೆ ಸೇರಿದ ಇಲ್ಲಿನಾಯಿಸ ಡಿಸ್ಟ್ರಿಕ್ಟಿನಲ್ಲಿ ಒಂದು ಭಾರೀ ದವಸದ ಕಾರ್ಖಾನೆಗೆ ಬೆಂಕಿ ಬಿದ್ದು ೯ ಲಕ್ಷರೂಪಾಯಿಗಳ ಗೋಧಿಯು ಸುಟ್ಟು ಬೂದಿಯಾಯಿತು.

ಬರ್ನಿಯೆಂಬ ಪ್ರಾಂತದಲ್ಲಿ ಮಲೇರಿಯಾ ಎಂಬ ಛಳಿಜ್ವರವು ಹುಟ್ಟಿ ಕೆಲವು ದಿನಗಳೊಳಗಾಗಿ ೩೦೦-೪೦೦ ಜನರನ್ನು ಕೊಂದು ಬಿಟ್ಟಿತು ಇನ್ನೂ ಕಮಿಯಾಗಲಿಲ್ಲವಂತೆ.

ನೌಸರಾ ಹತ್ತಿರ ಬಿರುಗಾಳಿ ದೊಡ್ಡ ದೊಡ್ಡ ಆನೆ ಕಲ್ಲುಗಳ ಮಳೆ ಬಿದ್ದು ನಾನಾ ಬಣ್ಣದ ಆನೆಕಲ್ಲಿನ ರಾಶಿಗಳು ಬಿದ್ದಿದ್ದವಂತೆ

ಚೀನಾ ದೇಶದವರು ಅಪರಾಧಿಗಳಿಗೆ ನಿದ್ರೆಗೆ ಅವಕಾಶ ಕೊಡದೆ ಕೊಲ್ಲುತ್ತಾರೆ. ಅವರು ನಿದ್ರೆ ಇಲ್ಲದೆ ಹನ್ನೆರಡು ದಿವಸಗಳಿಂದ ಇಪ್ಪತ್ತು ದಿವಸಗಳ ವರೆಗೆ ಬದುಕುತ್ತಾರೆ.

೧೮೯೭ನೇ ಇಸವಿ ಫೆಬ್ರವರಿ ತಾರೀಖು ೧೨ನೇ ಶುಕ್ರವಾರ ದಿವಸ ಡಿಲ್ಲಿಯೊಳಗಿನ ಜುಮ್ಮಾ ಮಸೀದಿಯಲ್ಲಿ ಒಬ್ಬ ಯೂರೋಪಿಯನು ಮುಸಲ್ಮಾನೀ ದೀಕ್ಷೆಯನ್ನು ತೆಗದುಕೊಂಡನು.

ಲೀಡ್ಸ್ ಪಟ್ಟಣದಲ್ಲಿ ಒಬ್ಬ ಅದ್ಭುತಾಕಾರವುಳ್ಳ ಜೋಲಿಗೆ ಯಂತ್ರವನ್ನು ಮಾಡಿರುತ್ತಾರೆ. ಐದೂಕಾಲು ಟನ್ ತೂಕವಿರುವ ಇದನ್ನು ಪಟ್ಟಣದ ಸವಾರು ಬಟ್ಟೆ ಮೊದಲಾದವನ್ನು ಕೊಳೆಯುವದಕ್ಕೆ ಉಪಯೋಗಿಸುವರು

ಪೂನೆಯಲ್ಲಿ ಮನೆಗಳಿಗೆಲ್ಲ ಪ್ಲೇಗ ಹಾಕಿದೆ, ಬೀದಿಯಲ್ಲ ಸುದ್ದಾನೆ ಗೋಳು ಸುರಿಯುತಿದೆ ಯಾವ ಪದಾರ್ಥವೂ ಸಿಕ್ಕುವದೇ ಇಲ್ಲ ಆದರೆ ಬೆರಣಿ ಮಾತ್ರ ಬೀದಿ ಬೀದಿಯಲ್ಲಿ ಬೇಕಾದಷ್ಟಿದೆ,

ಸಿಂಧಿಯಾ ಮಹಾರಾಜರವರು ಬೆಂಗಾಲದವರ ಕಷ್ಟವನ್ನು ನಿವಾರಿಸುವದಕ್ಕೋಸ್ಕರ ಸಾಲ ಕೊಡತಕ್ಕವರಾಗಿದ್ದಾರೆ. ಈ ಸಾಲಕ್ಕೆ ಇಂಡಿಯಾ ಗವರ್ನರವರು ಜವಾಬ್ದಾರರಾಗಿ ಅದನ್ನು ತೀರಿಸುವ ಉಪಾಯ ಮಾಡಿಸಿದಾರೆ.

ಆಸ್ಟ್ರಿಯಾ ದೇಶದಲ್ಲಿ ಹೆಂಗಸರನ್ನು ಕಾರಾಗೃಹದಲ್ಲಿಡುವದಿಲ್ಲವು ಅವರಿಗೆ ಮರಣ ದಂಡನೆಯನ್ನು ವಿಧಿಸುವದಿಲ್ಲವು ತಪ್ಪು ಸಾಬೀತಾದಮೇಲೆ ಯೋಗ್ಯಾಶ್ರಮಕ್ಕೆ ಕಳುಹಿಸಿ ಅಲ್ಲಿ ಕೆಲವು ವರ್ಷಗಳವರೆಗಿಟ್ಟಿರುತ್ತಾರೆ.

ಬರೋಡೆ ಸಂಸ್ಥಾನದ ಗಾಯಕವಾಡ ಮಹಾರಾಜರವರು ಪತ್ನೀ ಸಂಸಾರ ಸಮೇತ ಕಳೆದವಾರದಲ್ಲಿ ರಾಜಧಾನಿಯನ್ನು ಬಿಟ್ಟು ನೀಲಗಿರಿಗೆ ದಯಮಾಡಿದರು. ಅವರ ಪರಿವಾರದವರೇ ಸುಮಾರು ೭೦೦ ಜನಗಳು ಉದಕಮಂಡಲದಲ್ಲಿ ಎರಡು ಭಾರೀ ಬಂಗಲೆಗಳಲ್ಲಿ ಇಳಿಕೊಂಡಿದಾರಂತೆ.

ನವಲಗುಂದದಲ್ಲಿಯೂ ಅದರ ಆಜುಬಾಜು ಗ್ರಾಮಗಳಲ್ಲಿಯೂ ಈ ತಿಂಗಳ ೪ನೇ ತಾರೀಖಿನ ಮರುದಿನ ರಾತ್ರಿ ರು ಘಂಟೆಗಳ ತನಕ ಉತ್ತಮ ವೃಷ್ಟಿಯಾಯಿತು ನವಲಗುಂದದ ಕೆರೆಗೆ ೨-೩ ತಿಂಗಳ ನೀರು ಬಂತಂತೆ, ಈ ಮಳೆ ಯಾವದಕ್ಕೆ ಎಲ್ಲರು ಆನಂದಭರಿತರಾಗಿದಾರೆ.

ಆಕಾಶ ಬುಟ್ಟಿಗಳಲ್ಲಿ ಮೇಲಕ್ಕೇರುವ ಪ್ರಯತ್ನವನ್ನು ಈಚೆಗೆ ಕೆಲವು ದಿವಸಗಳಿಂದ ಪಾಶ್ಚಾತ್ಯರು ಮಾಡುತಿರುವರಷ್ಟೇ. ಇದರಲ್ಲಿ ಕೂತು ನಾಲ್ಕು ಮೈಲಿಗಳಷ್ಟು ಮೇಲಕ್ಕೇರುವಾಗ ಸಿಡಿಮದ್ದಿನ ನಾಳಿಯ ಬೋಗಣಿಗೆ ಅದರ ಧ್ವನಿಯು ಬಹಳ ಸ್ಪಷ್ಟವಾಗಿ ಕೇಳಿಸುತಿದೆಯಂತೆ.

ತಿರುವಲ್ಲೀಲಿಗೆ ೪೦ ಮೈಲಿಗಳ ದೂರದಲ್ಲಿ ತೋತಾದ್ರಿ ಆದಾ ಬಾಲಾ ನಾರಾಯಣನೆಂಬದೊಂದು ಕ್ಷೇತ್ರವಿದೆ, ಅದರಲ್ಲಿ ಎಂದೆಂದಿಗೂ ಮುಗಿಯದ ಐರತಕ್ಕ ಒಂದು ಎಣ್ಣೆ ಕೊಳವಿರುತಿದೆ, ಅದಕ್ಕೆ ಯಾವದಾದರೂ ಔಷಧಿ ಸೇವನೆ ಗಳು ಸ್ವಲ್ಪ ಬಳ್ಳೆ ಸುವಾಸನೆ ಯುಂಟಾಗಿರುತಿದೆ ಅನೇಕ ಯಾತ್ರಾಜನಗಳು ಅಲ್ಲಿಗೆ ಸ್ನಾನಮಾಡುವದಕ್ಕೆ ಬರುತ್ತಾರೆ

ನ್ಯೂಯಾರ್ಕಿನಲ್ಲಿ ತಬ್ಬಲಿಗಳಿಗೆ ಮದುವೆಯನ್ನು ಮಾಡುವದಕ್ಕೋಸ್ಕರ ಒಂದು ಸಭೆಯನ್ನು ಅಲ್ಲಿನವರು ಸ್ಥಾಪಿಸಿ ಕೊಂಡಿದಾರೆ ಅಲ್ಲಿ ತಬ್ಬಲಿ ಹುಡುಗಿಯರಿಗೆ ಮದುವೆಯಾದರೆ ೨೦ ಪೌಂಡು ಬಳುವಳಿಯನ್ನು ಕೊಡುತ್ತಾರೆ ಇದಕ್ಕೆ ಅನೇಕರು ಚಂದಾ ಹಣವನ್ನು ಹಾಕಿ ಸಹಾಯವನ್ನು ಮಾಡುತ್ತಾರೆ ಈಗ ಅಲ್ಲಿ ಒಂದೇ ಸಮ ಮದುವೆಗಳು ನಡೆಯುವದಂತೆ.

ಸಯಾಂ ರಾಜ್ಯದ ರಾಜಧಾನಿಯಲ್ಲಿ ಕಳೆದ ತಿಂಗಳ ೨೫ನೇ ತಾರೀಖಿನ ರಾತ್ರಿ ೮ ಘಂಟೆ ಸಮಯದಲ್ಲಿ ಪ್ರಜೆಗಳೆಲ್ಲ ಆಕಾಶದಲ್ಲಿ ಅಪೂರ್ವವಾದ ಒಂದು ಪ್ರಕಾಶವನ್ನು ಕಂಡು ಬೆದರಿ ದೇವಸ್ಥಾನಕ್ಕೆ ಓಡಿಹೋಗಿ ಅಲ್ಲಿದ್ದ ಪೂಜಾರಿಯನ್ನು ಅದಕ್ಕೆ ಕಾರಣವೇನೆಂದು ಕೇಳಿದರು ಅವನಿಗೂ ತಿಳಿಯದೆ ಆತುರದಿಂದ ನೋಡಿ ಆಶ್ಚರ್ಯಪಡುತಿದ್ದನು ಈಗ ಜ್ಯೋತಿಷ್ಯ ಶಾಸ್ತ್ರದ ದೊಡ್ಡ ವಿದ್ವಾಂಸರು ಸೇರಿ ಕಾರಣವನ್ನು ವಿಚಾರಮಾಡುತಿರುವರು

ಬೆಳಗಾವಿಯಲ್ಲಿ ಸ್ಥಾಪಿಸಲ್ಪಟ್ಟಿರುವ ಹಿಂದು ಛತ್ರ ಸಹಿತ ಮೊದಲಿಯವರು ಯುಗಾದಿ ಹಬ್ಬದ ದಿನ ೧೦೦ ಜನ ಬಡಹುಡುಗರಿಗೆ ಪ್ರತಿ ಒಬ್ಬ ಹುಡುಗನಿಗೂ ಒಂದು ಟೊಪ್ಪಿ ಅಂಗಿ ಒಂದು ಕೈಲಾಸಿಯಂತೆ ಕೊಟ್ಟರು. ಮತ್ತು ಆ ದಿನ ಸದರಿ ಮಂಡಳಿಯವರು ಚಿಕ್ಕೋಡಿ, ನಂದಗಡ, ಕೊಲ್ಲಾಪುರ ಇವುಗಳಲ್ಲಿನ ಬಡ ಹುಡುಗರಿಗೆ ಅರಿವೆ ಕೊಡಬೇಕೆಂದು ಕೇಳುತ್ತೇವೆ

ಭಾತಿಯಾ ಜಾತಿಯ ಅಣ್ಣಾ ಹಂಗಿಯರೆಂಬುವರು ಮೋರ್ಬಿಯಲ್ಲಿ ಒಂದು ಬಂಗಲೆಯಲ್ಲಿ ವಾಸ ಮಾಡುತಿದ್ದರು ಇವರ ಹತ್ತರ ಬಹಳ ಹಣವಿತ್ತು ಅವರು ಮಲಗಿರುವಾಗ್ಗೆ ಕಳ್ಳರು ನುಗ್ಗಿ ಅವರಿಬ್ಬರ ಕೈ ಕಾಲುಗಳನ್ನು ಕಟ್ಟಿ ಕತ್ತು ಹಿಸುಕಿ ಕೊಂದು ಕಬ್ಬಿಣದ ಪೆಟ್ಟಿಗೆಯನ್ನು ಒಡೆದು ಅದರಲ್ಲಿದ್ದ ಹಣವನ್ನೆಲ್ಲ ತಮ್ಮ ಕೊಂಡು ಹೋಗಿದ್ದರು ಪೋಲೀಸಿನವರು ಈ ಘಾತುಕರನ್ನು ಹಿಡಿಯುವ ಪ್ರಯತ್ನ ಮಾಡಿದಾರೆ

ರಷ್ಯಾ ಚಕ್ರವರ್ತಿನಿಯಾಗಿರುವ ಸಾಮ್ರಾಜ್ಞಿ ಒಂದು ಕಾಲು ಇರುತದೆ, ಇದು ರಷ್ಯಾ ದೇಶದ ದಕ್ಷಿಣಭಾಗದ ಕ್ರಿಮಿಯಾ ಸ್ಥಳದಲ್ಲಿರುವ ಸ್ತ್ರೀಯರಿಂದ ಮಾಡಲ್ಪಟ್ಟು ಇವರ ಮದುವೆಗೆ ಉಡುಗೊರೆಯಾಗಿ ಕೊಡಲ್ಪಟ್ಟಿತಂತೆ ಇದು ಸುಮಾರು ಹತ್ತುಗಜದ ಸುತ್ತಳತೆಯುಳ್ಳದ್ದು, ಇದರ ನೂಲು ಬಹಳ ತೆಳು ವಸ್ತುವಾಗಿ ಇದೆ ಇದನ್ನು ಬೆರಳಿನ ಉಂಗುರದೊಳಗಿಂದ ದಾಟಿಸಬಹುದು ಇದನ್ನು ಮಡಿಸಿ ಒಂದು ಮುಷ್ಟಿಯೊಳಗೆ ಹಿಡಿಯಬಹುದಂತೆ ಹಿಡಿದುಕೊಳ್ಳಬಹುದು. ಇಂಥ ಕೌಶಲ್ಯದ ಕೈಗಾರಿಕೆಗಳು ಆ ದೇಶದಲ್ಲಿ ಇರ ತಿನ ನಮ್ಮ ಹಾಳು ದೇಶದಲ್ಲಿ ಕಾಲು ಅಂದರೆ ಕಂಬಳಿ ಸಮಾನ ಇರುತಿವೆ

ಯೂರೋಪ್ ದೇಶದೊಳು ಒಂದು ದೊಡ್ಡ ಕದನ ಹುಟ್ಟುವ ಲಕ್ಷಣಗಳು ದಿನೇ ದಿನೇ ಹೆಚ್ಚುಹೆಚ್ಚು ಪ್ರಕಟವಾಗುತಲಿವೆ ಕ್ರೀಟ ದ್ವೀಪದಲ್ಲಿ ತುರ್ಕರಿಗೂ ಗ್ರೀಕರಿಗೂ ಯುದ್ಧ ನಡೆದದ್ದುಂಟು, ಯೂರೋಪ ಮುಖ್ಯ ಸರಕಾರಗಳ ದಂಡಿನವರಿಗೂ ಗ್ರೀಕರಿಗೂ ಜಟಾಪಟಿ ಹುಟ್ಟಿದೆ ಥಿಸೆಲಿ, ಮಾಸಿಡೋನಿಯಾ ಪ್ರಾಂತಗಳ ಸೀಮೆಗಳಲ್ಲಿ ತುರ್ಕರ ದಂಡು ಕೂಡಿದ್ದರಿಂದ ಗ್ರೀಕರ ದಂಡುಗಳೂ ಆ ದಂಡುಗಳೆದುರಿಗೆ ಬಂದು ನಿಂತಿರುತಿವೆ ಟರ್ಕಿ ಸರಕಾರದವರು ಕಾನಸ್ಟಾಂಟಿನೋಪಲ್ ಪಟ್ಟಣದ ಸಮೀಪದಲ್ಲಿ ೨೦ ಸಾವಿರ ದಂಡು ನಿಲ್ಲಿಸಿರುವರು ಆರ್ಮೇನಿಯಾ ದೇಶದಲ್ಲಿ ತುರ್ಕರು ಕ್ರಿಸ್ತಿ ನಿವಾಸಿಗಳನ್ನು ಮೊದಲಿನಂತೆ ಮತ್ತೆ ನೂರುಗಟ್ಟಲೆಯಿಂದ ಕೊಲ್ಲ ಹತ್ತಿರುವರು ಕಾನಸ್ಟಾಂಟಿನೋಪಲಿನಲ್ಲಿನ ನಿವಾಸಿಗಳಾದ ಗ್ರೀಕರೂ ಆರ್ಮೇನಿಯನ್‍ರೂ ಯುದ್ಧದ ಸನ್ನಾಹ ಮಾಡುತಲಿದಾರೆ

ಮುಂಬೈಯಲ್ಲಿ ಬ್ಯೂಬೋನಿಕ್ ಬಾಧೆಯು ತ ಸು ಕಡಿಮೆಯಾದಾಗ್ಯೂ ಮನೆಹಾಳು ಬೆಳೆಯುತ ನಡೆಸಿದೆ, ಪ್ರತಿನಿತ್ಯ ೪೦—೫೦ ಜನರು ಸಾಯುತಲಿದಾರೆ ಆದರೆ ಬಹು ಜನರೀರುವ ಉಪದ್ರವಕ್ಕಿಂತಲೂ ಪ್ಲೇಗ್ ಕಮಿಟಿಯವರ ಉಪದ್ರವವು ಹೆಚ್ಚಾಗಿರುತಿದೆ ಈ ಕಮಿಟಿಯಲ್ಲಿ ದಂಡಿನ ಅಮಲ್ದಾರನೊಬ್ಬನಿದ್ದು ಅವನ ಕೈ ಕೆಳಗೆ ಸಾವಿರಾರು ಜನ ಸೋಲ್ಜರರನ್ನೂ ಶಿಪಾಯಿಗಳನ್ನೂ ತಂದು ಪಟ್ಟಣದೊಳಗೆ ಇಟ್ಟಿರುವರು. ಈ ದಂಡಿನವರು ತಂಡ ತಂಡವಾಗಿ ಬೀದಿ ಬೀದಿಗಳಲ್ಲಿ ಮನೆ ಮನೆಗೆ ಹೋಗಿ ಅತಿಕ್ರಮಿಸಿ, ದೇಹ ಪರೀಕ್ಷೆಯ ನೆವದಿಂದ ಹೋಗಿ ರೋಗಿಗಳನ್ನು ಹುಡುಕುವರು ರೋಗಿ ದೊರಕಿದರೆ ಅವನನ್ನು ಕೂಡಲೆ ಎತ್ತಿ ಊರ ಹೊರಗೆ ಹಾಕಿರುವ ಆಸ್ಪತ್ರೆಗೆ ಕಳುಹಿಸಿ ಮನೆಯೊಳಗಿನ ಜೀವಜನರನ್ನು ಊರೊಳಗೆ ಬೇರೆ ಕಡೆಯಲ್ಲಿ ಇರಲಿಕ್ಕೆ ಕಳುಹಿಸಿ, ಮನೆಯೊಳಗಿನ ವಸ್ತ್ರ ಪಾತ್ರೆಗಳನ್ನು ಸುಡುವರು, ಮನೆಯನ್ನು ಸಹ ಸುಡುವರು, ಇಲ್ಲವೆ ಕೆಡಹುವರು ಮನೆಯೊಳಗಿನ ಬದುಕು ಬಾಳ್ವೆ ನಾಯಿಪಾಲಾಗಿ ಹೋಗುವದು, ಊರ ಹೊರಗೆ ಹೋದ ರೋಗಿಯಂತು ಬಹುತರ ಸಾಯುವದೇ ನಿಶ್ಚಯ. ನಿರೋಗಿಗಳಾದವರು ಗತಿ ಏನಾಗಿ ಹಾಗೆ ಬರುವದೆಂಬ ನೇಮವಿಲ್ಲ

ವೈಯನ್ನಾ ಪಟ್ಟಣದಲ್ಲಿ ನ್ಯೂಯೆರ್ಕ್ ಷೀಲ್ಡ್ ಎಂಬ ಸ್ಥಳದಲ್ಲಿ ಒಬ್ಬ ಬಡ ನೆಯಿಗೆಯವನ ಹೆಂಡತಿಯು ೩೨ ಜನ ಮಕ್ಕಳನ್ನು ಹೆತ್ತಿದ್ದಾಳೆ, ಅವಳು ೪೦ ವರ್ಷಗಳ ವಯಸ್ಸಿನವಳು. ಇವಳು ೨೬ ಗಂಡು ಮತ್ತು ೬ ಹೆಣ್ಣು ಮಕ್ಕಳ ತಾಯಿಯಾಗಿದ್ದಾಳೆ, ಈ ಮಕ್ಕಳ ಉತ್ಪತ್ತಿ ಕ್ರಮವು ಹ್ಯಾಗೆಂದರೆ, ಮೊದಲಿನೆಯ ಗರ್ಭದಲ್ಲಿ ೬ ಮಕ್ಕಳು, ಎರಡನೆಯದರಲ್ಲಿ ಮೂರು, ಮೂರನೆಯದರಲ್ಲಿ ನಾಲ್ಕು ನಾಲ್ಕನೆಯದರಲ್ಲಿ ಎರಡು, ಐದನೆಯದರಲ್ಲಿ ಮೂರು, ಆರನೆಯದರಲ್ಲಿ ಎರಡು, ಏಳನೆಯದರಲ್ಲಿ ಎರಡು, ಎಂಟನೆಯದರಲ್ಲಿ ಮೂರು, ಒಂಭತ್ತನೆಯದರಲ್ಲಿ ಎರಡು, ಹತ್ತನೆಯ ದರಲ್ಲಿ ಮೂರು, ಹನ್ನೊಂದನೆಯದರಲ್ಲಿ ಮೂರು, ಈರೀತಿಯಾಗಿ ಆಕೆಯು ಮಕ್ಕಳನ್ನು ಹೆತ್ತು ಇಂಥ ಬಡತನಕ್ಕೆ ಸಹಾಯವನ್ನು ಹೊಂದುತ್ತಾಳೆ ಇದರಲ್ಲಿ ಇನ್ನೊಂದು ವೈಲಕ್ಷಣ್ಯವೇನಂದರೆ, ಅವಳು ಹದಿನೆಂಟನೆಯ ವರ್ಷ ವಯಸ್ಸಿನಿಂದ ಪ್ರಾರಂಭಿಸಿ ಕೆಲ ಕಾಲದಲ್ಲಿ ಪ್ರತಿವರ್ಷ ಮೂರ್ಛೆರೋಗದಿಂದ ಪೀಡಿತಳಾಗುವಳು, ಆದರೆ ಈ ರೋಗವು ಇದುವರೆಗೂ ಆ ಮಕ್ಕಳಿಗೆ ಅಂಟಿದವಾಗಿ ತೋರುವದಿಲ್ಲ ಇವಳು ಇವಳ ತಾಯಿಗೆ ಅವಳಿ ಜವಳಿಯಾಗಿ ಹುಟ್ಟಿದ ನಾಲ್ಕು ಮಕ್ಕಳ ಪೈಕಿ ಒಬ್ಬಳು, ಇವಳ ತಾಯಿಯು ಅವಳ ಕಾಲದಲ್ಲಿ ತನ್ನ ಪ್ರಿಯನಿಗೆ ೩೮ ಮಕ್ಕಳನ್ನು ನಜರೆ ಒಪ್ಪಿಸಿದಳಂತೆ

V. AYANOR'S
PREPARATIONS

ವಿ ಅಯನಾರ್ ಎಂಬವರಿಂದ ತಯಾರ್ ಮಾಡಲ್ಪಟ್ಟ ಪ್ರಸಿದ್ಧ ಔಷಧಗಳು.

ಜಿಮ ರಿಕಿಸ್ಟೋರೇಟಿವ್ —ಇದು ಹೆಚ್ಚಿಕಾಳಿ, ಅಜೀರ್ಣ, ಕರುಳು ನೋವು, ವಾಂತಿಭೇದಿ, ಅಜೀರ್ಣಭೇದಿ ಮೊದಲಾದ ಅಶಕ್ತತೆ, ಕೆಮ್ಮು, ಮೂತ್ರತಡೆ, ಬಾಯಿ ಹುಣ್ಣು ಕೃಶತ್ವ, ಆರ್ತವ ದೋಷ ಜನ್ಯಗಳಿಂದ ಸ್ತ್ರೀಯರ ... ತಲೆನೋವು, ಗಂಟಲುಬ್ಬೆ, ಧಾತು ನಷ್ಟ ಮೊದಲಾದವುಗಳಿಗೆ ಬಹಳ ಉಪಯುಕ್ತವಾದದ್ದು ಇದರ ಕ್ರಯ ದೊಡ್ಡ ಶೀಸೆ ೧ಕ್ಕೆ ೧ ರೂ ಸಣ್ಣ ಶೀಸೆ ೧ಕ್ಕೆ ೮ ಆಣೆ

ಪಿ ರ್ಮಾ ವಾತಾ ತೈಲ—ಜೀರ್ಣ ಕಾಯಿಲೆ ನರಗಳ, ಕೈಕಾಲು, ಸೊಂಟನೋವು, ತಲೆಶೂಲೆ ಇವು ಪರಿಹಾರವಾಗುವವು, ಇದರ ಕ್ರಯ ದೊಡ್ಡ ಶೀಸೆ ೧ಕ್ಕೆ ೧ ರೂ ಸಣ್ಣ ಶೀಸೆ ೧ಕ್ಕೆ ೮ ಆಣೆ

ಜ್ವರದ ದೃತಿ —ಇದು ಎಲ್ಲಾ ಜ್ವರಗಳನ್ನು ಎರಡು ದಿನಗಳೊಳಗಾಗಿ ನಿವೃತ್ತಿ ಮಾಡತಕ್ಕದ್ದು. ದೊಡ್ಡ ಶೀಸೆ ೧ಕ್ಕೆ ೧ ರೂ ಸಣ್ಣ ಶೀಸೆ ೧ಕ್ಕೆ ೮ ಆಣೆ

ಓಮಕ ಕರ್ಪೂರದ ಕೊಂಡಿ —ಇದು ಶೀತಭೇದಿ, ರಕ್ತಭೇದಿ, ರಜಸ್ವಲೆಯರಿಗೆ ಬರುವ ಜಾಡ್ಯ, ಎದೆನೋವು, ಹೊಟ್ಟೆ ಕಡಿತ ಇವುಗಳಿಗೆ ಬಹಳ ಪ್ರಯೋಜನಕರವಾದದ್ದು ಇದರ ಕ್ರಯ ದೊಡ್ಡ ಶೀಸೆ ೧ಕ್ಕೆ ೧ ರೂ. ಸಣ್ಣ ಶೀಸೆ ೧ಕ್ಕೆ ೮ ಆಣೆ.

ದೇಹಪವನಾರು ಎಣ್ಣೆ —ಇದು ಮೇಹವಾಯುವಿನಿಂದ ಶರೀರವು ಉಬ್ಬುವದು, ಚರ್ಮವು ಒಡೆಯುವದು, ಬೆರಳುಗಳು ತಿನ್ನುವವು, ಗ್ರಂಥಿಗಳು ಇವುಗಳಿಗೆಲ್ಲ ಬಹಳ ಉಪಯುಕ್ತವಾದದ್ದು ಇದರ ಕ್ರಯ ದೊಡ್ಡ ಶೀಸೆ ೧ಕ್ಕೆ ೧ ರೂ. ಸಣ್ಣ ಶೀಸೆ ೧ಕ್ಕೆ ೮ ಆಣೆ

ವ್ಯಸ್ತ್ರಕ್ಷೈಪವು —ಇದು ನಡುವು ನೋವು, ಕಾಲು ನೋವು, ಹೊಟ್ಟೆನೋವು, ಅರತಲೆನೋವು, ಬಿಚ್ಚುಗಳು ಇವುಗಳಿಗೆ ಪ್ರಸಿದ್ಧವಾದ ತೈಲವು ದೊಡ್ಡ ಡಬ್ಬಿ ೧ಕ್ಕೆ ೧ ರೂ. ಸಣ್ಣ ಡಬ್ಬಿ ೧ಕ್ಕೆ ೮ ಆಣೆ

ಶ್ವೇತಕ್ಷಪೀಠ —ಇದು ಸಕಲವಿಧ ಮೇಹರೋಗಗಳಿಂದ ಬರುವ ಹುಣ್ಣು, ಹಸಿರು ಮತ್ತೆ ಸ್ತ್ರೀಯರ ಕೆಡ ರಕ್ತ ಭಾಗಗಳೆಲ್ಲಕ್ಕೂ ಉಪಶಮನ ಮಾಡುತ್ತದೆ, ಮತ್ತೆ ಎಂದಿಗೂ ಬಾರದಂತೆ ನಿರ್ಮೂಲ ಮಾಡುವ ಗುಣವುಳ್ಳದ್ದು. ಇದರ ಕ್ರಯ ಶೀಸೆ ೧ಕ್ಕೆ ೧ ರೂ ೮ ಆಣೆ.

ಕೂದಲು ನರೆಯದೆ ಕಪ್ಪಾಗಿ ಬೆಳೆಯುವಿಕ್ಕೆ ಔಷಧ — ಈ ತೈಲವು ನರೆತ ಕೂದಲುಗಳನ್ನು ಕಪ್ಪಾಗಿ ಮಾಡುವದು ಕೂದಲು ಬೆಳೆಯದಿರುವ ಸ್ಥಳಗಳಲ್ಲಿ ಹುಟ್ಟಿ ಬೆಳೆಯುವದು ಇದನ್ನು ತಲೆಗೆ ಹಚ್ಚಿಕೊಂಡು ಸ್ನಾನ ಮಾಡಬಹುದು ಮತ್ತು ಸುವಾಸನೆಯ ದ್ರವ್ಯವಾಗಿರುತಿದೆ. ಇದರ ಕ್ರಯ ಶೀಸೆ ೧ಕ್ಕೆ ೧ ರೂ

☞ ಬೇಕಾದವರು ಬಳ್ಳಾರಿ ಬ್ರೂಸ್‍ಪೇಟೆಯಲ್ಲಿರುವ ವಿ ಅಯನಾರ್ ಔಷಧ ಶಾಲೆಗೆ ಬರೆದು ತರಿಸಿಕೊಳ್ಳಬಹುದು

NOTICE.

VIDYASARA SANGRAHA

A TREATISE ON THE PRINCIPLES OF

HINDU MEDICINE

Price, including Postage Rs 5-0-0

ವೈದ್ಯಸಾರಸಂಗ್ರಹ

ಇದು ಚರಕ, ಬಾಹಟ, ಸುಶ್ರುತ ಮೊದಲಾದ ಅನೇಕ ಪೂರ್ವಗ್ರಂಥಗಳ ಸಂಗ್ರಹ ರೂಪವಾಗಿರುತಿದೆ

ಇದರ ಕ್ರಯ — ಪ್ಯಾಕಿಂಗ್ ಮತ್ತು ಅಂಚೆ ಹಾಸಲ್ ಸೇರಿ ಪ್ರತಿ ೧ಕ್ಕೆ ೫—೦—೦

ಬೇಕಾದವರು ಬೆಂಗಳೂರು ಕರ್ನಾಟಕ ಪ್ರೆಸ್ ಪ್ರೊಪ್ರೈಟರವರಿಗೆ ಬರೆದು ತರಿಸಿಕೊಳ್ಳಬಹುದು

ಈ ಕಂಪೆನಿಯು ೫೯ ೧೮೯೭ನೇ ಇಸವಿಯಲ್ಲಿ ಸ್ಥಾಪಿತವಾಯಿತು

ಜನ್ಮದ ಲಾಭವು.

ವಜ್ರಾಂಗ ಖಜೂರವು.

ಬಲಾರೋಗ್ಯ, ಪುಷ್ಟಿಗಳನ್ನು ಬೆಳೆಸತಕ್ಕ ಉತ್ತತ್ತಿಯು.

ಅತ್ಯುತ್ತಮ ಗುಣಕರವಾದ ಬಳ್ಳಗಳಿಂದ ತಯಾರಿಸಿದ ಈ ಉತ್ತತ್ತಿಗಳು ಕೊಂಕಣಪ್ರಾಂತದ ಅನೇಕ ವನಸ್ಪತಿಗಳ ಸಾರಗಳ ಪುಟಗಳನ್ನು ಕೊಟ್ಟು ತುಪ್ಪದೊಳಗೆ ಬೇಯಿಸಿ, ಒಳ್ಳೇ ಜೇನಿನ ತರಗತಿಯ ಸಕ್ಕರೆಯ ಪಾಕದಲ್ಲಿ ಸಿದ್ಧ ಮಾಡಿರುತ್ತೇವೆ ಈ ಉತ್ತತ್ತಿಗಳು ಮಾಧುರ್ಯದಿಂದಿದ್ದು, ಒಳ್ಳೇ ರುಚಿಯುಳ್ಳವೆ ಇವುಗಳ ಸೇವನೆಯಿಂದ ಕಫ, ವಾತ, ಪಿತ್ತ ಈ ತ್ರಿದೋಷಗಳುಂಟಾಗತಕ್ಕ ಎಂಭತ್ತು ಬಗೆಯ ವ್ಯಾಧಿಗಳೂ ಹೋಗುತ್ತವೆ ೬೦ ವರ್ಷಗಳ ಪ್ರಾಯದವನಾದರೂ ತರುಣರ ಸಮಾನ ವೀರ್ಯವಾದರೂ ಹರೆಯದ ಸಂತಸದಿಂದ ಪ್ರಜ್ವಲಿತನಾಗುತ್ತಾನೆ ಜನನೇಂದ್ರಿಯದಲ್ಲಿ ಬಲ ಹುಟ್ಟಿ ನಪುಂಸಕತ್ವವು ಇಲ್ಲದಂತಾಗುತ್ತದೆ ಲಘ್ವಿಯ ಮುಂಚೆ ಅಥವಾ ಹಿಂಬೆ ಸರಿದುಹೋಗುವ ಧಾತು ನಿಲ್ಲುತ್ತದೆ. ಸ್ವಪ್ನಾವಸ್ಥೆಯಾಗುವದಿಲ್ಲ ವೀರ್ಯವು ಬೆಳೆದು ಅದರ ಬಣ್ಣವು ಸುಧಾರಿಸುತ್ತದೆ ಬರವು ಹಾಗೂ ಉಷ್ಣಸಂಬಂಧಿ ಬೇನೆಗಳ ಕಸರ ಇಲ್ಲದಂತಾಗಿ ಧಾತು ಪುಷ್ಟವಾಗುತ್ತದೆ ಮೂರು ಹೊತ್ತುಂಡರೂ ಅನ್ನ ಪಚನವಾಗಿ ಒಳ್ಳೇ ಹಸಿವೆಯಾಗುತ್ತದೆ. ಹೋಗುವದರಿಂದ ತಡ ಕೂಡಲೇ ಸ್ವಚ್ಛ ಶೌಚವಾಗುತ್ತದೆ. ಕ್ಷಯ, ಉದರ, ದಮ್ಮು ಈ ರೋಗಗಳು ನಾಶ ಹೊಂದುತ್ತವೆ. ಹೊಸ ಬೇನೆ ಇದ್ದಲ್ಲಿ ೧೧ ದಿವಸಗಳ ವರೆಗೆ ಸಾಲುವ ಒಂದೇ ಡಬ್ಬಿಯಿಂದ ಗುಣವುಂಟಾಗುತ್ತದೆ. ಮತ್ತು ಹಳೆಯದಲ್ಲಿ ೬೦ ದಿನಗಳ ಮೇಲೆ ಗುಣ ಬಂದೀತು ೧೧ ದಿನಗಳವರಿಗೆ ಸಾಲತಕ್ಕ ೧ ಡಬ್ಬಿಗೆ ೧-೮-೦ ರೂ|| ಒಂದೇಸಾರಿ ೬ ಡಬ್ಬಿಗಳು ತರಿಸತಕ್ಕವರಿಗೆ ಒಂದು ಡಬ್ಬಿಯು ಉಚಿತವಾಗಿ ಸಿಕ್ಕೀತು. ಈ ಉತ್ತತ್ತಿಯಿಂದ ಹೆಂಗಸರು ಸಶಕ್ತರಾಗುತ್ತಾರೆ. ಕರುಗಿನ ಹಾಗೂ ಬಾಣಂತಿ ಬೇನೆಗಳು ವಾಸಿಯಾಗುತ್ತವೆ. ಎಲ್ಲರನ್ನೂ ಸರಿಯಾಗಿ ಬೇನೆ ಇಲ್ಲದವರನ್ನಾಗಿ ಮಾಡಿ ಬಲಾರೋಗ್ಯ ಪುಷ್ಟಿಗಳನ್ನು ಬೆಳೆಸುತ್ತವೆ. ಸಾಹೇಬ ಜನರಲ್ಲಿ ಬಹಳ ಡಬ್ಬಿಗಳು ಖರ್ಚಾಗುತ್ತವೆ ಈ ಔಷಧವು ಈ ಕಂಪೆನಿಯ ಹೊರ್ತು ಬೇರೆ ಸ್ಥಳದಲ್ಲಿ ಸಿಗುವದಿಲ್ಲ ಯಾವತ್ತು ದೇಶಗಳಲ್ಲಿಯೂ ವೈದ್ಯಶಾಲೆಗಳಿಗಾಗಿ ಕಳುಹಿಸಲ್ಪಡುತ್ತದೆ. ಬರೆದು ಬಂದು ಕೂಡಲೆ ಈ ಕಂಪೆನಿಯು ಬೇಕಾದವರಿಗೆ ಈ ಡಬ್ಬಿಗಳು ಕಳುಹಿಸಿಕೊಟ್ಟೀತು. ಅಂಚೆಯ ಹಾಗೂ ವ್ಯಾಲ್ಯೂ ಪೇಯಬಲ್ ವೆಚ್ಚ ಬೇರೆ ಕೊಡಬೇಕು (ಉಚಿತ ಡಬ್ಬಿ ಸಹ ೬ ಡಬ್ಬಿಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬಿಯಾದಲ್ಲಿ ಎಲ್ಲಾ ಖರ್ಚುಗಳ ಹಾಕಿ ರವಾನಿಸುವೆವು, ಹೀಗೆ ಕಳುಹಿಸಿದರೆ ಟಪ್ಪಾಲ್ ಖರ್ಚು ಕಡಮೆ ಬೀಳುವದು)

ಮೋಕ್ಷಿಳಾಸ—ಪಿ ಎಲ್ ಎ. ಬ್ರದರ್ಸ್ ಮತ್ತು ಕಂಪೆನಿ,

ಫಸ್ಟ ಇಂಗ್ಲಿಷ್ ಬ್ರ್ಯಾಂಚ್ ಆಫಿಸ್, ಡಿಸ್ಟ್ರಿಕ್ಟ ಬೆಳಗಾಂವ

ಪೋಸ್ಟ—ಬೆಳಗಾಂವ. Post BELGAUM.

BANGALORE —Printed and Published at the KARNATAKA PRESS, No 40, HOSPITAL ROAD, CITY,—1897

THE

Karnataka Prakasika.

ಪ್ರಕಟನೆಯ ರೇಟು. } ಮೊದಲನೆಯ ದಫಾ ಪಙ್ತಿ ಒಂದಕ್ಕೆ 0 2 0 / ಎರಡನೆಯ ದಫಾ ಪಙ್ತಿ ಒಂದಕ್ಕೆ 0 1 0 [illegible]

ಕರ್ಣಾಟಕ ಪ್ರಕಾಶಿಕಾ.

Published Every Monday Morning

ಚಂದಾದರಗಳು.—[illegible] ಸಾಲ್ 1 ಕ್ಕೆ ... 3 0 0 | ಸಾಲ್ 1 ಕ್ಕೆ ... 4 0 0; 6 ತಿಂಗಳಿಗೆ, ... 2 0 0 | 6 ತಿಂಗಳಿಗೆ ... 2 8 0; 3 ತಿಂಗಳಿಗೆ, ... 1 4 0 | 3 ತಿಂಗಳಿಗೆ ... 1 8 0

[illegible] ||

Vol. XXIV. BANGALORE:—MONDAY, APRIL 26, 1897. No. 17.

Select Telegrams.

Athens, 16th April.—The Greek Chamber of Deputies have voted the credit of 23 million drachmas asked for by Mr Delyannis.

Constantinople, 16th April.—The Turkish Commander on the Greek frontier has declared his position to be untenable, and has demanded permission to enter Thessaly. A Council of Ministers here have acquiesced in his demand but *the sanction of the Sultan is* wanting.

The Porte has vigorously protested against the intention of the Powers that Turkey would not be allowed to reap any advantage in the event of a war *with Greece*.

London, 16th April.—A strong Turkish force has attacked and routed four hundred invaders who had entrenched themselves at Karya.

Another band of invaders has captured Kritades, after severe fighting, in which the Turks lost a hundred killed, besides prisoners.

Constantinople, 18th April.—It is declared here that war has broken out between Turkey and Greece.

The Cabinet have decided to recall the Turkish Minister from Athens, to hand the Greek Minister his passports, *and to order the Turkish* troops to assume the offensive.

London, 18th April.—Fighting has commenced along the whole line on the Greek frontier.

Turkish Batteries at Prevesa have sunk a Greek steamer leaving for Ambracia this morning. The crew were saved.

The Greek flotilla is now bombarding Prevesa.

The Greeks have captured a fortified position at Meuexe in Macedonia.

London, 18th April.—Admiral Rawson, with a squadron of nine ships, has arrived at *Durban*, quite unexpectedly. The object of his visit and the ultimate destination of this large naval force is not yet known.

London, 19th April.—The Turkish forts at Prevesa have destroyed the Greek station, on the opposite shore of the Straits. Several of the garrison were killed. The Greek flotilla thereupon bombarded the Turkish forts. Two thousand Greeks effected a landing, and are marching on Prevesa.

M. Delyannis announced in the Chamber of Deputies that Turkey had declared war on Greece, and that Greece accepts the challenge.

The German Minister at Athens announces that he will protect Turks in Greece.

London, 19th April, later.—Reuter's special correspondent telegraphs from Elassona, on Sunday evening, that the Turks are masters of the Maluna Pass, and carried the Greek Blockhouses at the point of the bayonet.

Severe fighting began in the Maluna Pass, situated to the eastward of Elassona, on Friday evening and continued for thirty hours. It extended for many miles along the frontier, and twenty thousand troops were engaged.

The result of the fighting was indecisive, but the Turks appear to have gained ground. Nevertheless it is reported to-day from Greek sources that the Greeks retain Meuexe, which is the key to the whole position.

The Greek flotilla has reduced Prevesa to ruins, and the forts there have been silenced.

The Greek artillery at Artas have silenced two Turkish batteries commanding the town, but a third battery, and the strongest, has not yet been subdued.

Heavy fighting took place on Saturday at Karya to the westward of Nezeros, the Greeks retaining the positions they captured.

Greek bands have landed on the coast opposite the island of Thasos, with the object of cutting the Constantinople-Salonica Railway.

London, 20th April.—France has undertaken to protect the Greeks in Turkey.

The Turks say that they lost two hundred men at the Maluna Pass, and that the Greeks lost at least one thousand. Fighting was continuous for two days.

The Turks maintained a stolid and steady bearing, whilst the Greeks were enthusiastic.

The Duke of Sparta and Prince Nicholas have gone to the front.

A strong Greek force has entered Epirus.

The firing before Prevesa has become desultory, owing to a rough sea prevailing.

It is understood that Servia, Bulgaria, and *Montenegro, at the request of Russia, have* promised not to interfere in the Turco-Greek war.

Fighting was renewed yesterday, when the Greeks checked the Turkish advance at points *on both sides of the Maluna Pass, but were* hard pressed, and especially at Gritzovoli, to the northward of Turnova, where 22,000 Turks attempted a flank advance in the direction of Larissa.

The Greeks at first retreated for several miles, but having been reinforced they partly recovered their positions.

A desperate battle was fought at Reveni Pass, further to South, which resulted in the Turks *retreating across the Frontier with* great loss.

The Greek Force which entered Epirus is advancing on Janina.

London, 21st April.—*The Turks have now* carried all positions commanding the road to Larissa, and are now bombarding Tyrnavos, to which place the Greeks have retired.

Notwithstanding the small Greek gains in *Epirus, the Turks have up to the present been* victorious.

All the Greek police have been ordered to reinforce the army in the field. Citizens will replace them.

A Greek squadron has left *Athens under sealed orders*.

The Greek bands which were attempting to cut the railway between Salonica and Constantinople have been repulsed.

Reuter is informed that the war between Greece and Turkey will not effect the decision of the Powers in regard to the autonomy of Crete.

The Greeks have abandoned their fortified camp to the west of Tyrnavos, and have occupied the last height before that town.

The Turks began to attack the height yesterday morning.

The Turks are immensely superior in artillery.

Another Turkish force is attacking Zirkos situated to the south west of Tyrnavos.

A large Greek force has advanced from Revenis between Tyrnavos and Zirkos, and has captured the Turkish village of Damasi, after heavy fighting.

Russia has sent a circular to the Powers advising an expectant attitude until one of the combatants requests them to intervene meanwhile to maintain the blockade of Crete and hold it in trust. It is stated that the *Powers have agreed to this*.

THE

Karnataka Prakasika.

MONDAY APRIL 26, 1897

EDUCATION IN INDIA.

All the people of India are proud of the system of education that has been established in their midst. It has worked wonders during the time it has been established. Thousands of graduates have been turned out, hundreds of thousands of under graduates have gone forth from it, and the number is increasing year by year. Every youth is ambitious to pass an examination, and to get on in the world by means of that education. This is a good sign. It is well to see the youths of a country striving to obtain knowledge, and do their best in life. We see the lists growing longer and longer every time they come out, and it may happen in time that a boy who has not passed a test will be difficult to find. Still the educational system is not perfect. There are faults connected with it that should be remedied. Because it *has done so much* we should not shut our eyes to the fact that it might do *more. To begin with. The system makes* boys look too exclusively to particular lines *of life in order to* gain a living. In the first place they all wish to get into Gover*nment employment*. This is the highest ideal of most of them. If they can accomplish *this they* are quite satisfied, they require nothing more. Government cannot provide places for all—for very few, in fact—and the rest must be disappointed. Then many turn their attention to the law, and the result is that the legal market is quite overstocked. Many practitioners are doing nothing or next to nothing. It is rarely that a case comes their way, and they have to live upon hope, which is anything but substantial. They do not grow rich, or anything like it. It is strange that many of the boys who leave our schools do not turn their attention in other directions in order to gain their daily bread. There is trade that they could follow, and which would remunerate them better than a Government post or the law. They would also increase the wealth of the country, which would not be the case were they to devote *themselves to the service of the State or to* working in the Courts. Then there is agriculture to which they could devote *themselves. With the education they have* received they could improve the cultivation of the land. It is well known that this might be made much better than it is. Foreigners are amazed at the wretched way the ryots plough the soil, and wonder how they can get a crop from it. The plough just scratches the ground and nothing more. A change must be made in this respect before the condition of the ryots can be materially changed, and we should like to see the young men who pass out of our schools and colleges bringing this change about. The cultivation of the land is an honourable profession in all parts of the world, and in some countries men of great scientific attainments devote *their time to it, and make a living out of it.* Why should not the same be the case in India? In the next place, *there are com*plaints about the manners of the students. They seem to be losing the manners of their forefathers. They are often rough and off hand, and they mistake this for independence. They look down upon their relatives who have not received an English education. They are often disobedient in class, and we have heard of outbreaks by students, and of a serious nature. There is something wrong, it is to be feared, in the *discipline* of some of the educational *institutions. The boys have got* out of hand *to some* extent, *and this* must be remedied, or great evil will ensue not only to the youths themselves but also to their friends and to the country at large.

THE SALARIES OF SUBORDINATES.

We are glad to hear that the salaries of the clerks forming the taluq establishments are likely soon to be increased. This must be good news to the men who have been working for so long on such miserable pittances. Hope must have almost forsaken their breasts, when it was revived by the news that something was to be done for them. It must be said that the news *has not come too soon*. The poor subordinates must have found it hard work to *make both ends meet. Life must have been* miserable to them, and hardly worth living. *To make matters worse they saw those* higher up on the official ladder have their salaries added to at intervals and substantially. It is said that everything comes to those who wait. But the worst of it is that they may have to wait a long time. This has been the case with the subordinates in question, and it is about time something was done for them. This want of consideration towards these men must have a bad effect upon them. They become discontented, they will not do more work than they can possibly help and that not in the best way. They will get through anyhow, and thus the state will suffer, and it may be very seriously. Men cannot stand injustice; it breaks them down; it takes the spirit out of them, and when injustice is done to the subordinates of Government the result, as we have pointed out, is very bad. We are glad, therefore to hear that the injustice done to these subordinates is not likely to continue much longer. The Darbar is coming to the *rescue*.

THE INDIAN FAMINE CHARITABLE RELIEF FUND.

There was a meeting of the Executive Committee of the Bangalore Branch of the Indian Famine Charitable Relief Fund on Saturday morning at the Mayo Hall, with *Mr Slight, I.C.S., President, C. and M. Station*, in the chair. The Honorary Treasurer, Mr T.T. Leonard, *read the accounts showing* that up to date the sum of Rs. 6742—14—1 had been collected, which, together with Rs 739—14—0 paid over at the meeting, made the total up to Rs 7482—12—1. Two contributions amounting to Rs. 4500 had been paid over by the Hon. Treasurer to the Mysore Committee and it was resolved to pay over a third contribution of Rs. 3000 shortly. Among the sums collected and paid in we are glad to notice the following:

Collected by Messrs B. Krishna Row, Chick Basappah and P. Thimaiyya in Bangalore City	3232—2—0
Collected in Dodballapur Taluk by the Amildar	600—0—0
Collected in Anekal Taluq by the Amildar	400—0—0
Collected in Magadi Taluq by the Amildar	273—8—0
Collected in Devanhalli Taluq by the Amildar	551—2—0

The proceeds of a lecture on Famine by Dr. S. V. Ramaswamy Iyengar contributed Rs 119—10—1. All this shows that some interest is taken in the matter by many of our citizens, but still much can be done, and it is incumbent on every body to help to the best of his ability. We would like to see more of the higher paid officials contribute largely to the Fund as they are well able to do so. With a few honorable exceptions, *there is an apparent* want of practical sympathy with the movement on the part of Native Officers and highly paid native subordinates, which we hope to see soon effaced by large donations.

News and Notes.

An association has been started for the re*pair of all temples and shrines at Brindavan*-

THE Indian Famine Fund now amounts to nearly one crore, nine lakhs of rupees, of which eighty-seven and a quarter lakhs have been subscribed in Great Britain

THE bachelor tax is now in force in Argentine. From twenty years of age to eighty, every man who remains unmarried is to be fined twice a month until he takes a wife.

A MAN will die for want of air in five minutes, for want of sleep in ten days, for want of water in a week, and for want of food at varying periods, dependent on circumstances

THE national god of the Assyrians was Asur, and in Sanskrit this would denote a demon. Is it not suggestive of the times when Assyrians waged war with our ancestors, but were vanquished?

THE Hon. Mr P. M. Mehta, C I E leaves Bombay with his family by the mail steamer of the 15th May with a view to obtain medical advice in England, for an ailment from which he has been suffering for some time

WE are told that the late Dare House Venkataswamy Naidu was refused audience with the Queen on the ground that he was a Dubash—a broker though with a big B. If so, we wonder if a similar objection will be made to Sir Savalai being in the Madras Deputation

ACCORDING to certain tables annexed to the report on the French War budget it would appear that the effective strength of the French and German armies on a peace-footing are as follows —France, 28,963 officers and 504,931 men, Germany, 28,370 officers and 278 359 men. Surely, Europe is an armed camp indeed!

THE Governor General in Council has directed that the 21st and 22nd June be observed as public holidays throughout British India Beyond this it is not intended that there shall be any public recognition in India of the Diamond Jubilee. A long list of honours may then be expected. The usual birthday honours will not be gazetted as usual, the awards being deferred till the Jubilee honours are announced.

Local and Provincial.

OFF TO OOTY —The Resident and the Dewan left last Monday night for Ooty

OFFICES.—Re-opened after the Easter holidays on Wednesday last, when all the hands returned to work

GOING TO OOTY —We understand that Her Highness the Maharani and party will leave Mysore for Ooty on the 29th instant

THE LATE COLONEL MACINTIRE —It is with a deep sense of regret that we have to record the death of Colonel Macintire, of dropsy, on Wednesday last, at Nice

TECHNICAL EXAMINATIONS —Examinations in surveying, drawing, book keeping &c, will be held to-day and six following days in the R B A N. M High School, Civil and Military Station

THE WEATHER —Is hot still. At the beginning of last week it was much cooler after the shower of rain we had. But the effect of the rain has passed, and it may be sometime before any more comes down. The nights are fairly cool

GRANTING PENSION —We learn that Her Highness the Maharani Regent has been graciously pleased to order a bonus of Rs 250 and a monthly pension of Rs 5 to the family of each of the three persons that were killed in the Palace Fire and a life pension to all that were seriously hurt therein

THE DEPUTATION TO ENGLAND —It is believed that the deputation to be sent to England to represent Mysore at the Diamond Jubilee of Her Majesty the Queen Empress has fallen through. This is a pity as such an important state as Mysore ought to be well represented. Smaller states will send deputation and it will not look well of this to be unrepresented

TALUK ESTABLISHMENT —We are glad to learn that the Government has after all decided to improve the prospect of the Taluk Establishment. The following scale of pay has been fixed for all the Gumastas, Munshees, and Deputy Munshees &c Rs 12, 15, 20, 25 and 30. The present scale is to rise to the improved scale by annual increments. The scale of the Taluk Sheristadar's pay has been fixed at Rs 40, 50 and 60 —M H

THE MYSORE C S EXAMINATION —This examination comes off on the 2nd of August next. 71 applications have already come. Of the applicants Mysore shows a strong contingent of 49. 21 applications have come from Madras and one from Hyderabad. The majority of the applicants are B A's and Law students, there are some Advocates of the Chief Court of Mysore, and one Master of Arts from Madras

The Mysore Gazette

Bangalore Thursday, 22nd April 1897

NOTIFICATIONS BY THE GOVERNMENT OF MYSORE

GENERAL AND REVENUE

No 11263—J 1-80, dated 15th April 1897

The leave on medical certificate granted under Article 218 of the Mysore Service Regulations, to Mr T Narahari Rao, 2nd District and Sessions Judge of the Nundydroog Division, in Government Notification Camp No 21—23, dated 9th October 1896, is extended by three months

2 The present temporary arrangements will continue during the further absence of Mr T Narahari Rao on leave

No 11131—J 1307 dated 20th April 1897

Under Section 37 of the Code of Criminal Procedure, Mr G Hay Wright Special Magistrate Kolar Gold Fields, is invested with power to try in a summary way, under Chapter XXII of the said Code, all the offences mentioned in Section 260

No 9001—Ft F 2 96, dated, 9th April 1897

It is hereby notified that a seigniorage of annas 2 per hundred on Bamboos per cart-load will be levied upon bamboos when allowed to be removed from a District or State Forest on license.

2 Agriculturists are allowed to take the Bamboos from District Forests only for bona fide agricultural purposes and under a free permit to be obtained from the Amildar of the taluk, or any official authorised by the Amildar in that behalf. Persons cutting and removing Bamboos without having obtained the necessary license, paid or free, or breaking the conditions thereof, will be liable to punishment under Section 10 of the Forest Rules of 1878

No 9005—Ft F 2 95 dated 9th April 1897

The following addition to the Rules published under Notification No 193 dated 21st September 1889, is approved and hereby notified for general information —

All the above Rules excepting Rules II, III, IV and so much of Rule VII as prescribes a penalty equivalent to one-fourth of the license fee to be paid by a license holder for not removing the produce to its destination within the license period shall apply to free licenses or permits issued for wood bamboos or any other forest produce

No 9110—F F 154 95 dated 20th April 97

Under Articles 188 of the Mysore Service Regulations P Parthasarathiengar, Amildar of the Molakalmuru taluk is granted privilege leave of absence for forty days with effect from such date as he may avail himself of the same

2 Sra Mohadin Ali, Deputy Amildar, Hosdurga, is appointed to act as Amildar and 3rd Class Magistrate of the Molakalmuru taluk during the absence of P Parthasarathiengar on leave or until further orders

3 B Thimmgraiengar Judicial Head Munshi, District Office, Chitaldrug, is appointed to act as Deputy Amildar and 3rd Class Magistrate of Hosdurga during the employment of Sra Mohadin Ali on other duty, or until further orders

No 9139—R 2035, dated 21st April 97.

P Nanjunda Naidu Amildar of the Hassan taluk, is temporarily transferred to the Shimoga taluk (vice Gajanur Hanumantha Rao on other duty) To join forthwith

S Venkataramanayya, Deputy Amildar of the Alur sub taluk, will, in addition to his duties as such, act as Amildar and 3rd Class Magistrate of the Hassan taluk, during the employment of P Nanjunda Naidu at Shimoga or until further orders

Deputy Amildar Kesavayya is transferred from the Hulyar to the Kunsi sub taluk. To join forthwith

Deputy Amildar Chinnappayya Pillai is transferred from the Kunsi to the Hulyar sub taluk. To join on relief

ಕರ್ಣಾಟಕ ಪ್ರಕಾಶಿಕಾ.

೧೮೯೭ನೇ ಇಸವಿ ಏಪ್ರಿಲ್ ತಾ|| ೨೬ನೇ ಸೋಮವಾರ.

ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆ

ಈ ತಿಂಗಳ ೧೫ನೇ ತಾರೀಖಿನ ಮೈಸೂರು ಗವರ್ನಮೆಂಟ್ ಗಜೆಟ್ ಪತ್ರಿಕೆಯಿಂ ನೋಡಲಾಗಿ ಮುಂದಿನ ಅಗಸ್ಟ್ ತಿಂಗಳ ೨ನೇ ತಾರೀಖಿನಲ್ಲಿ ನಡೆಸಲ್ಪಡುವಂತೆ ನಿಷ್ಕರ್ಷೆಯಾಗಿರುವ ಮೈಸೂರು ಸಿವಿಲ್ ಸರ್ವಿಸ್ ಪ್ರೊಬೇಷನರ್ ಪರೀಕ್ಷೆಗೆ ಒಟ್ಟು ೭೧ ಮಂದಿ ದರಖಾಸ್ತುಗಳು ಕಳುಹಿಸಿ, ಅವು ಗವರ್ನಮೆಂಟಿನಿಂದ ಅಂಗೀಕರಿಸಲ್ಪಟ್ಟಿರುವಂತೆಯೂ, ಅವರಲ್ಲಿ ನಾಲ್ವತ್ತೊಂಭತ್ತು ಮಂದಿ ಮೈಸೂರು ದೇಶೀಯರೆಂತಲೂ ಉಳಿದವರು ಮದರಾಸ್ ವಗೈರೆ ಅನ್ಯದೇಶೀಯರೆಂತಲೂ ನಮೂದಿಸಲ್ಪಟ್ಟಿರುತ್ತದೆ. ಸದರೀ ಪಟ್ಟಿಯನ್ನು ನಾವು ನೋಡಿ ವಿಚಾರ ಮಾಡಿದ್ದರಲ್ಲಿ ಇಲ್ಲಿನ ಉದ್ಯೋಗಿಗಳ ಹಾಲ್ಪಟ್ಟಿ ಒಳಪಿಂದ ಕೆಲವರು ಮೈಸೂರು ದೇಶೀಯರ ಪಟ್ಟಿಗೆ ಸೇರಿಸಲ್ಪಟ್ಟಿರುವಂತೆ ಕಾಣುತ್ತೆ. ಅಂತಹ ವಿಷಯ ಮಂಕುರಿತು ವಿಚಾರ ಮಾಡುವದಕ್ಕೆ ಇದು ಉಚಿತ ಸಮಯವಲ್ಲವಾಗಿ ಅದು ಹಾಗಿರಲಿ.

ಈ ಪರೀಕ್ಷೆಯೊಳು ಉತ್ತೀರ್ಣರಾಗುವಂತವರ ಪಟ್ಟಿಯಲ್ಲಿ ಒಂದು ಎರಡನೆಯ ಸ್ಥಾನಗಳಂ ಹೊಂದುವಂತವರಿಗೆ, ದೇಶ ನಿಯಮವಿಲ್ಲದೆ, ನಿಷ್ಕರ್ಷವಾಗಿರುವ ಅಧಿಕಾರಗಳು ನಿರೀಕ್ಷಿಸಲ್ಪಡುವವೆಂತಲೂ, ಮೂರು ನಾಲ್ಕನೆಯ ಸ್ಥಾನಗಳು ಮೈಸೂರು ದೇಶೀಯರಿಗಾಗಿ ಉದ್ದೇಶಿಸಲ್ಪಟ್ಟಿರುವದರಿಂದ ಅವರಲ್ಲಿ ತೇರ್ಗಡೆಯಂ ಹೊಂದಿದವರಿಗೆ ಸ್ವಾನಕ್ರಮಾನುಗುಣವಾಗಿ ಕೆಲಸಗಳು ನಿರೀಕ್ಷಿಸಲ್ಪಡುವವೆಂತಲೂ ವ್ಯವಸ್ಥೆಯಾಗಿದೆ. ಇದು ಅನ್ಯದೇಶ ವೃತ್ತಾಂತ ಪತ್ರಿಕಾ ಲೇಖಕರು ಕೆಲವರಿಗೆ ಬಹಳ ಅಸಮಾಧಾನವನ್ನುಂಟುಮಾಡಿರುವಂತೆ ಕಾಣುತ್ತಿದೆ, ಹ್ಯಾಗೆಂದರೆ, ಈ ಪರೀಕ್ಷೆಯಲ್ಲಿ ತೇರ್ಗಡೆಯಂ ಹೊಂದತಕ್ಕವರ ಪಟ್ಟಿಯಲ್ಲಿ ಪ್ರಥಮ ದ್ವಿತೀಯ ಸ್ಥಾನಗಳಂ ಪಡೆಯುವಂತವರ ವಿಷಯವು ನಿರ್ವಿವಾದವಾದುದು. ಈ ಪರೀಕ್ಷೆಯ ವಿಷಯದಲ್ಲಿ ಈಚೆಗೆ ನೂತನವಾಗಿ ರಚಿಸಲ್ಪಟ್ಟಿರುವ ನಿಬಂಧನೆಗಳನ್ನನುಸರಿಸಿ, ಮೂರು ನಾಲ್ಕನೆಯವರಾಗಿ ತೇರ್ಗಡೆಯಂ ಹೊಂದತಕ್ಕವರು ಮೈಸೂರು ದೇಶೀಯರಾಗಿದ್ದರೆ ಮಾತ್ರ ಅವರಿಗೆ ಅಧಿಕಾರಗಳು ನಿರೀಕ್ಷಿಸಲ್ಪಡುವವೇ ಹೊರತು ಅನ್ಯದೇಶೀಯರಾಗಿದ್ದರೆ ಲಭಿಸಲಾರದು. ಪ್ರಸಕ್ತ ಪರೀಕ್ಷೆಯಲ್ಲಿ ಇಪ್ಪತ್ತು ಜನ ತೇರ್ಗಡೆಯಾಗಬಹುದೆಂದು ಇಟ್ಟುಕೊಳ್ಳುವಣ. ಅದರಲ್ಲಿ ಒಂದೆರಡನೆಯವರು ಯಾವ ದೇಶೀಯರಾಗಿದ್ದಾಗ್ಯೂ ಅವರಿಗೆ ಕೆಲಸಗಳು ಕೊಡಲ್ಪಡುವವು. ಮೂರುನಾಲ್ಕನೆಯವರು ಮೈಸೂರು ದೇಶೀಯರಾಗಿರುವ ಪಕ್ಷದಲ್ಲಿ ಅವರಿಗೂ ಒಂದೆರಡನೆಯವರಂತೆಯೇ ಕೆಲಸಗಳು ಕೊಡಲ್ಪಡುವವೆಂದೇರ್ಪಟ್ಟಿದೆ. ಏತನ್ಮಧ್ಯೆ ತೇರ್ಗಡೆಯಂ ಹೊಂದುವಂತವರ ಪಟ್ಟಿಯಲ್ಲಿ ಒಂದೆರಡನೆಯವರೂ, ಹತ್ತೊಂಭತ್ತು ಇಪ್ಪತ್ತನೆಯವರೂ ಸ್ವದೇಶೀಯರಾಗಿಯೂ, ಮೂರು ನಾಲ್ಕನೆಯವರು ಅನ್ಯದೇಶೀಯರಾಗಿಯೂ ಇರುವ ಪಕ್ಷದಲ್ಲಿ ಇವರುಬಿಟ್ಟು ಹತ್ತೊಂಭತ್ತು ಇಪ್ಪತ್ತನೆಯವರಾಗಿ ಬರುವ ಸ್ವದೇಶೀಯರಿಗೆ ಅಧಿಕಾರಗಳಂ ಕೊಟ್ಟು ಅನ್ಯದೇಶೀಯರನ್ನು ಭಗ್ನಮನಸ್ಕರನ್ನಾಗಿ ಮಾಡುವಣವು ಸಾಮಾನ್ಯವಾಗಿ ಅಂಗೀಕಾರಾರ್ಹವಾಗಲಾರದೆಂದು ಮೇಲೆ ತಿಳಿಸಲ್ಪಟ್ಟಿರುವ ಪತ್ರಿಕಾಲೇಖಕರು ಅಭಿಪ್ರಾಯಪಡುತ್ತಾರೆ. ಈ ವಿಷಯದಲ್ಲಿ ಈದೇಶದೊಳು ನಮ್ಮಂತೆ ಅನೇಕರು ಪಟ್ಟಿರುವ ಅಭಿಪ್ರಾಯವಂ ಈ ಸಂದರ್ಭದೊಳು ಸಂಗ್ರಹವಾಗಿ ತಿಳಿಸುವಣವು ಅವಶ್ಯಕರ್ತವ್ಯವೆಂದು ಭಾವಿಸುತ್ತೇವೆ, ಏನೆಂದರೆ'— ಪ್ರಸಕ್ತ ಪರೀಕ್ಷೆಗೆ ದೇಶತಾರತಮ್ಯವಿಲ್ಲದೆ ಯಾರು ಬೇಕಾಗಿದ್ದಾಗ್ಯೂ ದರಖಾಸ್ತು ಮಾಡಬಹುದೆಂದು ವ್ಯವಸ್ಥೆ ಮಾಡಿದ್ದು ಮೊದಲನೆಯ ತಪ್ಪು. ಪರೀಕ್ಷಕರನ್ನೆಲ್ಲ ಮದರಾಸ ಪ್ರೆಸಿಡೆನ್ಸಿಗೆ ಸೇರಿದ ಕಾಲೇಜ್‌ಗಳ ಪಂಡಿತರುಗಳ ಪೈಕಿ ಚುನಾಯಿಸಿದ್ದು ಎರಡನೆಯ ತಪ್ಪು. ಈ ಅನುಕೂಲ್ಯಕಲ್ಪನದಿಂದಲೇ ಹಿಂದೆನಡೆದ ಎರಡು ಪರೀಕ್ಷೆಗಳಲ್ಲೂ ಮದರಾಸಿನವರು ಒಂದೆರಡನೆಯವರಾಗಿ ತೇರ್ಗಡೆಯಂ ಹೊಂದುವದಕ್ಕೆ ಸಂಪೂರ್ಣ ಅವಕಾಶ ನ್ಯಾಯಯೆಂದು ಹೇಳುವದರಲ್ಲಿ ಬಾಧಕ ಯಾವದೂ ಕಂಡು ಬರುವದಿಲ್ಲವು. ಏತಕ್ಕೆಂದರೆ, ಇವರೆಲ್ಲರ, ಪರೀಕ್ಷಕರಾಗಿ ಚುನಾಯಿಸಲ್ಪಟ್ಟ ಪಂಡಿತರುಗಳ ವಿದ್ಯಾರ್ಥಿಗಳಾಗಿದ್ದು ಅವರ ಬೋಧನಾಕ್ರಮವನ್ನು, ಆಯಾ ಪರೀಕ್ಷಾಕಾಲಗಳಲ್ಲಿ ಅವರು ಕೊಡುತಬಂದ ಪ್ರಶ್ನಪತ್ರಗಳ ರೀತಿಯನ್ನೂ ಚೆನ್ನಾಗಿ ಅರಿತವರಾಗಿಯೂ, ಕೆಲವರು ವಿದ್ಯಾರ್ಥಿಗಳು ವಿಶೇಷ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿಯೂ ಇರುತಲಿದ್ದರು. ಈ ಸೌಲಭ್ಯವು ಮೈಸೂರು ದೇಶೀಯರಿಗೆ ಇಲ್ಲದೆ ಹೋದುದರಿಂದಲೇ ಅವರು ಒಂದೆರಡನೆಯ ಸ್ಥಾನಗಳಂ ಹೊಂದುವದಕ್ಕೆ ಅವಕಾಶವಿಲ್ಲದೆ ಹೋಯಿತು. ಹಿಂದಿನ ರೂಲ್ಸುಗಳನ್ನು ಬದಲಾಯಿಸಿ ಮೈಸೂರು ದೇಶೀಯರಿಗೆ ಸ್ವಲ್ಪ ರಿಯಾಯತಿಯಂ ತೋರಿಸವೇಕಾದ ನಿಬಂಧನವು ಗವರ್ನಮೆಂಟಿನವರಿಗುಂಟುಮಾಡಲ್ಪಟ್ಟ ಮೇಲೆ ನಿರ್ಬಂಧವಿಲ್ಲದೆ ಅವನ್ನು ಬದಲಾಯಿಸಿದಂತೆ ಪರೀಕ್ಷಕರನ್ನೂ ಇಂಗ್ಲೆಂಡ ದೇಶದಲ್ಲಿ ಚುನಾಯಿಸಿ ಅಲ್ಲಿಂದ ಪ್ರಶ್ನಪತ್ರಗಳಂ ತರಿಸಿ, ಪರೀಕ್ಷೆಯಾದ ಮೇಲೆ ಉತ್ತರಗಳಂ ಅಲ್ಲಿಗೆ ಕಳುಹಿಸಿ, ತೇರ್ಗಡೆಯ ವಿಷಯದಲ್ಲಿ ಅವರು ಕಳುಹಿಸಿಕೊಡುವ ಪಟ್ಟಿ ಪ್ರಕಾರ ಇಲ್ಲಿ ಕೆಲಸಗಳಂ ನಿರೀಕ್ಷಿಸುವ ಪಕ್ಷದಲ್ಲಿ ಯಾವವಿಧ ಆಕ್ಷೇಪಣೆಗಳಿಗೂ ಅವಕಾಶವಿರುತಿರಲಿಲ್ಲವು. ಈ ಮುಖ್ಯ ವಿಷಯಕ್ಕೆ ಗವರ್ನಮೆಂಟಿನವರು ಅವಧಾನ ಕೊಡದೆ ಹೋದುದರಿಂದ ಈ ಪರೀಕ್ಷೆಯ ವಿಷಯದಲ್ಲಿ ಮೈಸೂರು ದೇಶೀಯರಿಗುಂಟಾಗಿರುವ ಅನುಮಾನವು ಅವ್ಯಾಹ ನಿವೃತ್ತವಾಗಲಿಲ್ಲವು. ಇಂತ ವಿದ್ಯಮಾನದಲ್ಲಿ ಈಚೆಗೆ ಈ ದೇಶೀಯರ ವಿಷಯದೊಳು ತೋರಿಸಲ್ಪಟ್ಟ ಸ್ವಲ್ಪ ರಿಯಾಯತಿಯ ಬಗ್ಗೆ ಅನ್ಯದೇಶೀಯರು ಆಕ್ಷೇಪಿಸಿ ದೂಷಿಸುತ್ತಿರುವದು ಉಚಿತವಾಗಿ ಕಾಣಲಾರದು.

ಹಿಂದ್ಯದೇಶದ ಕ್ಷಾಮ ನಿವಾರಕ ಧರ್ಮದ್ರವ್ಯವು.

ಇಂಡ್ಯದೇಶದ ಕ್ಷಾಮನಿವಾರಕ ಧರ್ಮ ದ್ರವ್ಯ ಶೇಖರದ ಬಗ್ಗೆ ಏರ್ಪಾಡಾಗಿರುವ ಕಮಿಟಿಗೆ ಸೇರಿದ ಬೆಂಗಳೂರು ಎಗ್ಜಿಕ್ಯುಟಿವ್ ಕಮಿಟಿಯವರು ಕಳೆದ ಶನಿವಾರದ ದಿನ ಬೆಳಿಗ್ಗೆ ಮೀಟಿಂಗ್ ಹಾಲ್ ನಲ್ಲಿ ಸಭೆ ಸೇರಿದ್ದರು. ಸದರೀ ಸಭೆಯಲ್ಲಿ ಸಿವಿಲ್ ವ ಮಿಲಿಟರಿ ಸ್ಟೇಷನ್ ಮ್ಯುನಿಸಿಪಲ್ ಪ್ರೆಸಿಡೆಂಟರಾದ ಮಿ|| ಸ್ಮಿತ್, ಐ. ಸಿ. ಎಸ್ ಯವರು ಅಗ್ರಾಸನವ ವಹಿಸಿದ್ದರು. ಆಗ ಸದರೀ ಕಮಿಟಿಯ ಆನರೆರಿ ಟ್ರೆಜರರಾದ ಮಿ|| ಟಿ. ಟಿ. ಲೆನಾರ್ಡ್ ಯವರು ಲೆಕ್ಕಗಳಂ ಓದಿ, ಈ ತಾರೀಖ್ ವರೆಗೆ ೬೩,೦೮೦—೧೮—೧ ರೂಪಾಯಿಗಳು ವಸೂಲಾಗಿ, ಮಿಾಟಿಗನಲ್ಲಿ ವಸೂಲಾದ ೩೩೯—೧೮—೦ ರೂಪಾಯಿಗಳು ಸೇರಿ, ಒಟ್ಟು ೬೩,೪೨೦—೧೨—೦ ರೂಪಾಯಿಗಳು ಜಮೆ ಆಯಿತೆಂತಲೂ, ಅದರ ಪೈಕಿ ಮೈಸೂರು ಕಮಿಟಿಗೆ ಮೊದಲು ದಫೆ ಒಟ್ಟು ೫೩,೦೦೦ ರೂಪಾಯಿಗಳು ಕಳುಹಿಸಲ್ಪಟ್ಟಿರುವಂತೆಯೂ, ಕ್ಷಿಪ್ರದಲ್ಲಿ ಮೂರನೇ ದಫೆ ೩,೦೦೦ ರೂಪಾಯಿಗಳು ಕಳುಹಿಸಲ್ಪಡತಕ್ಕದ್ದೆಂದು ನಿರ್ಣಯ ಮಾಡಲ್ಪಟ್ಟದೆಂತಯೂ ತಿಳಿಸಿದರು.

ವಸೂಲಾಗಿ ಜಮಾ ಬಂದ ಮೊತ್ತಗಳಲ್ಲಿ.

ಮೆಸ್ಸರ್ಸ್ ಬಿ ಕೃಷ್ಣರಾವ್, ಚಿಕ್ಕಬಣ್ಣಪ್ಪ, ತಿಮ್ಮಯ್ಯ, ಇವರ ಮೂಲಕ ಬಂದದ್ದು	೧,೬೩೦	೦	೦
ದೊಡ್ಡಬಳ್ಳಾಪುರದ ಅಮಲ್ದಾರರ ಮೂಲಕ ..	೬೦೦	೦	೦
ಆನೇಕಲ್ ಅಮಲ್ದಾರರ ಮೂಲಕ .	೩೦೦	೦	೦
ಮಾಗಡಿ ಅಮಲ್ದಾರರಿಂದ .	೨೯೩	೮	೦
ದೇವನಹಳ್ಳಿ ಅಮಲ್ದಾರರಿಂದ ..	೫೫೦	೬	೦

ಡಾಕ್ಟರ್ ಎಸ್ ವಿ ರಾಮಸ್ವಾಮಯ್ಯಂಗಾರ್ಯರವರು ಕ್ಷಾಮವನ್ನು ಕುರಿತು ಮಾಡಿದ ಉಪನ್ಯಾಸ ಕಾಲದಲ್ಲಿ ೧೮೯—೧೦—೬ ರೂಪಾಯಿಗಳು ವಸೂಲಾಯಿತು. ಇವೆಲ್ಲವ ನೋಡಲಾಗಿ ನಮ್ಮ ಪಟ್ಟಣ ನಿವಾಸಿಗಳಿಗೆ ಈ ವಿಷಯದಲ್ಲಿ ಸ್ವಲ್ಪ ಆಸಕ್ತಿಯುಂಟಾಗಿರುವಂತೆ ವ್ಯಕ್ತವಾಗುತಿದೆ. ಆದಾಗ್ಯೂ ಇದಕ್ಕಿಂತಲು ಅಧಿಕವಾಗಿ ಸಹಾಯ ಮಾಡುವದಕ್ಕೆ ಸಾಧ್ಯವಾಗಿರುವುದು. ಮತ್ತು ಪ್ರತಿಯೊಬ್ಬರು ಈ ಧರ್ಮದ್ರವ್ಯಕ್ಕೆ ಅವರವರ ಶಕ್ತಿ ಮಿಾರಿ ಸಹಾಯ ಮಾಡಬೇಕಾದ್ದು ಅವಶ್ಯಕರ್ತವ್ಯವು. ಭಾರಿ ಸಂಬಳ ಪಡೆಯುವ ಅಧಿಕಾರಿಗಳು ವಿಶೇಷತಃ ಅರ್ಥಸಹಾಯ ಮಾ

ಹುವದಕ್ಕೆ ಶಕ್ತರಾಗಿರುವದರಿಂದ ಅವರೆಲ್ಲರು ಆ ರೀತಿ ಮಾಡಬೇಕಾದ್ದು ಕೇವಲ ಅಪೇಕ್ಷಿತವಾಗಿರುತದೆ. ಭಾರಿ ಸಂಬಳಗಳಂ ಪಡೆಯುವ ಈ ದೊಡ್ಡ ಅಧಿಕಾರಗಳಲ್ಲಿ, ತಾಬೇದಾರಿ ನೇಟಿವ್ ಉದ್ಯೋಗಸ್ಥರಲ್ಲೂ ಕೆಲವರು ವಿನಾ ಮಿಕ್ಕವರಿಗೆಲ್ಲ ಈ ಪ್ರಯತ್ನದೊಳು ಕಾರ್ಯಕ್ಕೆ ಅನುಕೂಲವಾಗಲಿಲ್ಲವೆಂದು ಸ್ಪಷ್ಟವಾಗಿ ಕಾಣುತಿದೆ ಯಾಗಿ ಇವರೆಲ್ಲರು ವಿಶೇಷತಃ ಅರ್ಥ ಸಹಾಯ ಮಾಡುವದರ ಮೂಲಕ ಈ ಅವಸ್ಥೆಯಂ ಹೋಗಲಾಡಿಸಿಕೊಳ್ಳುವರೆಂದು ಕೋರುವೆವು.

ಯುದ್ಧಾರಂಭ.

ಈಗ್ಗೆ ಸುಮಾರು ನಾಲ್ಕಾರು ತಿಂಗಳ ಮೊದಲು ಕ್ರೀಟ ಎಂಬ ದ್ವೀಪದ ಆಧಿಪತ್ಯದ ವಿಷಯದಲ್ಲಿ ಸದರೀ ದ್ವೀಪ ನಿವಾಸಿಗಳಾದ ತುರ್ಕಿಯವರಿಗೂ ಗ್ರೀಕ್ ದೇಶೀಯರಿಗೂ ಪರಸ್ಪರವುಂಟಾಗಿದ್ದ ವೈಮನಸ್ಯವು ಉಭಯ ಕಕ್ಷಿಯವರಲ್ಲೂ ಅನೇಕ ಪ್ರಾಣಹಾನಿಗಳಿಗೆ ಕಾರಣವಾಗಿ ಏರ್ಪಟ್ಟಿತ್ತಷ್ಟೆ. ಕಡೆಗೆ ಗ್ರೀಸ್ ಸಂಸ್ಥಾನದವರಿಗೂ ತುರ್ಕಿ ಸಂಸ್ಥಾನದವರಿಗೂ ಬಹಳವಾದ ಪ್ರಬಲ ಯುದ್ಧಕ್ಕೆ ಪ್ರಾರಂಭವಾಗಿ ಉಭಯ ಸಂಸ್ಥಾನಗಳ ಸರಹದ್ದಿನಲ್ಲಿ ನಡೆಯುತಲಿದೆ. ಇದುವರೆಗೆ ನಡೆದ ಅನೇಕ ಯುದ್ಧಗಳಲ್ಲಿ ತುರ್ಕಿಯವರ ಕೈ ಸ್ವಲ್ಪ ಮೇಲಾಗಿರುವಂತೆ ಕಾಣುತಿದೆ ಇತರ ದೊಡ್ಡ ಸಂಸ್ಥಾನಾಧಿಪತಿಗಳು, ಎರಡು ಟಗರುಗಳಂ ಜಗಳಕ್ಕೆ ಬಿಟ್ಟು ತಮಾಷೆ ನೋಡುವಂತೆ ತಾಟಸ್ಥ್ಯವು ವಹಿಸಿ ನೋಡುತಲಿದ್ದಾರೆ ಪರಂತು ಇಬ್ಬರ ಜಗಳ ಮೂರನೆಯವನ ಲಾಭವೆಂಬ ಗಾದೆಯಂತೆ ಅವರವರ ಸೈನ್ಯಗಳೊಡನೆ ಸ್ವಪ್ರಯೋಜನೋದ್ದೇಶಪ್ರವರ್ತಿಗೆ ಉಚಿತ ಸಮಯವಂ ನಿರೀಕ್ಷಿಸುತಲಿರುವಂತೆ ತೋರುತಿದೆ ಯಾವಾಗಲಾದರು ಒಂದು ದಿನ ತುರ್ಕಿಯವರು ತಮ್ಮ ರಾಜ್ಯದಲ್ಲಿ ಯೂರೋಪ್ ಖಂಡಕ್ಕೆ ಸೇರಿರುವ ಭಾಗವನ್ನು ಅಲ್ಲಿನ ದೊಡ್ಡ ಸಂಸ್ಥಾನಾಧಿಪತಿಗಳಿಗೆ ಒಪ್ಪಿಸಿಕೊಟ್ಟು ಅಲ್ಲಿನ ತಮ್ಮ ಸಿಂಹಾಸನವನ್ನು ಏಷ್ಯಾ ಖಂಡದೊಳಗಣ ತಮ್ಮ ರಾಜ್ಯಕ್ಕೆ ಸಾಗಿಸಬೇಕಾಗಿರುವುದೆಂಬ ಬಹು ಜನರ ಅಭಿಪ್ರಾಯವು ನಿರಾಧಾರವಾದುದಲ್ಲವು, ಏತಕ್ಕೆಂದರೆ, ತುರ್ಕಿಯವರ ರಾಜ್ಯತಂತ್ರವು ಒಂದು ವ್ಯವಸ್ಥಿತಸ್ಥಿತಿಯಲ್ಲಿಲ್ಲವಾಗಿ ಅದರ ಫಲವು ಮೇಲೆ ತಿಳಿಸಲ್ಪಟ್ಟಿರುವದಕ್ಕಿಂತ ಅನ್ಯಥಾ ಇರಲಾರದು.

Occasional Notes.
ನೈಮಿತ್ತಿಕ ವಿಷಯನ್ಯಾಸ

ಬೃಂದಾವನ ಪ್ರಾಂತದಲ್ಲಿರುವ ವಿಶಿಷ್ಟ ದೇವಾಲಯಗಳು, ಮತ್ತು ಪುಣ್ಯಕ್ಷೇತ್ರಗಳನ್ನು ದುರಸ್ತು ಮಾಡುವ ಕಾರ್ಯಕ್ಕಾಗಿ ಒಂದು ಸಭೆ ಏರ್ಪಾಡಾಗಿರುತದೆ.

ಮಹಾರಾಜ್ಞೀಯವರ ಆಳ್ವಿಕೆಯ ಷಷ್ಟ್ಯಬ್ದಪೂರ್ತಿ ಉತ್ಸವದ ಬಗ್ಗೆ ಬರುವ ಜೂನ್ ತಿಂಗಳ ೨೧ ಮತ್ತು ೨೨, ಈ ಯೆರಡು ದಿನಗಳು ಇಂಡ್ಯಾರಾಜ್ಯದ ವಿಶಿಷ್ಟ ಸರ್ಕಾರ್ ಕಚೇರಿಗಳಿಗೂ ರಜಾ ಕೊಡಲ್ಪಡತಕ್ಕದ್ದೆಂದು ಇಂಡ್ಯಾ ಗವರ್ನಮೆಂಟಿನವರು ಹುಕುಂ ಮಾಡಿರುತ್ತಾರೆ.

ಮನುಷ್ಯನಾದವನಿಗೆ ಐದು ನಿಮಿಷಗಳ ಕಾಲ ಶ್ವಾಸ ನಿರೋಧಿಸಿದರೂ, ಹತ್ತು ದಿನಗಳ ಕಾಲ ನಿದ್ರೆಯಿಲ್ಲದೆ ಹೋದಾಗ್ಯೂ, ಒಂದು ವಾರದ ಕಾಲ ಕುಡಿಯುವದಕ್ಕೆ ನೀರು ಸಿಕ್ಕದೆ ಹೋದಾಗ್ಯೂ, ಸಾಯುತ್ತಾನೆ. ಪರಂತು ಆಹಾರ ವಿಷಯ ಮಾತ್ರ ಅವರವರ ದೇಹ ದಾರ್ಢ್ಯವನ್ನನುಸರಿಸಿರುವದು.

ಮಹಾರಾಜ್ಞೀ ವಿಕ್ಟೋರಿಯಾ ಚಕ್ರವರ್ತಿನೀಯವರ ಆಳ್ವಿಕೆಯ ಷಷ್ಟ್ಯಬ್ದಪೂರ್ತಿ ಉತ್ಸವ ಪ್ರಯುಕ್ತವಾದ ಊರುಮೆರವಣಿಗೆಯು ಯಾವ ಯಾವ ರಾಜಮಾರ್ಗಗಳಲ್ಲಿ ಹೋಗತಕ್ಕದ್ದೆಂದು ನಿಷ್ಕರ್ಷೆಯಾಗಿವೆಯೊ ಆ ಮಾರ್ಗಗಳಲ್ಲಿನ ಮನೆಗಳಿಗೆ ಸದರೀ ದಿನ ಒಂದಕ್ಕೆ ಒಂದುಸಾವಿರದ ಮೊದಲು ಐದುಸಾವಿರ ಪೌಂಡುಗಳ ವರೆಗೆ ಬಾಡಿಗೆ ಕೊಟ್ಟು ಕಂಟ್ರಾಕ್ಟ್ ಬರೆಸಿಕೊಂಡಿರುವದಾಗಿ ವಿಲಾಯತಿ ಪತ್ರಿಕೆಗಳು ತಿಳಸುತಿವೆ. ಈ ಬಾಡಿಗೆಯು ಇನ್ನು ಹೆಚ್ಚುವ ಸಂಭವವು ಸಹ ಉಂಟು.

ಈ ತಿಂಗಳ ೧೬ನೇ ತಾರೀಖು ಮೊದಲು ೨೨ನೇ ತಾರೀಖು ವರೆಗೆ ಮುಂಬೈ ಪ್ರೆಸಿಡೆನ್ಸಿಯಲ್ಲಿ ಬ್ಯೂಬೋನಿಕ್ ಪ್ಲೇಗ್ ಎಂಬ ರೋಗ ತಗಲಿದವರ ಮತ್ತು ತನ್ಮೂಲಕ ಮೃತಪಟ್ಟವರ ಸಂಖ್ಯೆಯು ಇದರಡಿ ತಿಳಿಸಲ್ಪಡುತಿದೆ:—

	ರೋಗತಗಲಿದವರು.	ಸತ್ತವರು
ರಾಜಧಾನಿಯಲ್ಲಿ .	137	104
ಮುಂಬೈಸಬರ್ಬನ್ನಲ್ಲಿ ...	212	218
ಕೊಲಾಬಾ ...	102	96
ಪುನೆ ...	108	97
ಸುರತ್ ...	121	114
ಅಹಮದಾಬಾದ್ ..	2	1
ಕರಾಚಿ	182	130
ಸಿಂಧು ಹೈದರಾಬಾದ್...	180	128
ಶಿಕಾರಿಪುರ ...	151	100
ಜುಮ್ಲಾ	1,195	994

ಹಿಂದಿನ ಸದರೀ ರೋಗ ತಗಲಿದವರಲ್ಲಿ ಸೇಕಡ ೮೩ಕ್ಕೆ ಸ್ವಲ್ಪ ಜಾಸ್ತಿಯಾಗಿಯೇ ಮೃತಪಟ್ಟಂತೆ ಸ್ಪಷ್ಟವಾಗುತಿದೆ.

ಈ ತಿಂಗಳ ೧೭ನೇ ತಾರೀಖಿಗೆ ಖಾತ್ರಿಯಾದ ವಾರದಲ್ಲಿ ಕ್ಷಾಮ ನಿವಾರಕ ಕಾಮಗಾರಿಗಳ ಮೂಲಕವಾಗಿಯೂ, ಧರ್ಮ ಸತ್ರಗಳ ಮೂಲಕ ವಾಗಿಯೂ ಪ್ರಾಣರಕ್ಷಣ ಮಾಡಿಕೊಂಡಿದ್ದ ಜನರ ಸಂಖ್ಯೆಯು ಇದರಡಿ ತಿಳಿಸಲ್ಪಡುತಿದೆ:—

ಮದರಾಸ್ ಪ್ರಾಂತದಲ್ಲಿ	1,32,062
ಮುಂಬೈ	4,53,839
ಬಂಗಾಳದೇಶ	99,587
ವಾಯುವ್ಯಪ್ರಾಂತ ಮತ್ತು ಅಯೋಧ್ಯೆ	10,03,600
ಪಂಜಾಬ್ ದೇಶ	90,053
ಮಧ್ಯಪ್ರಾಂತ ...	4,62,146
ಬರ್ಮಾ ಒಂದು ಡಿಸ್ಟ್ರಿಕ್ಟಿನಲ್ಲಿ	14,341
ಬರಾರ್ ...	15,966
ಹೈದರಾಬಾದ್	8,950
ಮಧ್ಯ ಇಂಡಿಯ	4,47,526
ರಜಪುಟಾಣಾ ...	28,061
ಜುಮ್ಲಾ...	...29,52,031

ಇದರ ಹಿಂದಿನ ವಾರದಲ್ಲಿ ಮೇಲೆ ತಿಳಿಸಲ್ಪಟ್ಟಿರುವ ಕಾಮಗಾರಿಗಳ ಮೂಲಕ ಜೀವಿಸಿದವರ ಸಂಖ್ಯೆಗಿಂತಲೂ ಈ ವಾರದಲ್ಲಿ ೯೪,೯೦೦ ಮಂದಿ ಜಾಸ್ತಿಯಾಗಿ ಕಂಡು ಬರುವದರಿಂದ, ಈಗಿನ ಕ್ಷಾಮವು ಶಾಂತವಾಗುವದಕ್ಕೆ ಬದಲು ದಿನೇ ದಿನೇ ವೃದ್ಧಿಯಾಗುತಲಿರುವಂತೆ ಸ್ಪಷ್ಟವಾಗಿ ಕಾಣುತಿದೆ.

LOCAL AND PROVINCIAL NEWS.
ಒಳದೇಶ ಮತ್ತು ತಾಲ್ಲೂಕಿನ ವೃತ್ತಾಂತಗಳು.

ಶ್ರೀಮನ್ಮಹಾರಾಣೀ ರೀಜಂಟರವರು ಈ ತಿಂಗಳ ೨೯ನೇ ತಾರೀಖಿನಲ್ಲಿ ಘನವಂತರಾದ ಯುವರಾಜರವರೊಡನೆ ನೀಲಗಿರಿಗೆ ಪ್ರಯಾಣ ಮಾಡುವರೆಂದು ತಿಳಿದುಬರುತಿದೆ.

ಹಿಂದಿನ ವಾರದಲ್ಲಿ ನಾವು ತಿಳಿಸಿದ್ದಂತೆ ಕಳೆದ ಸೋಮವಾರದ ದಿನ ರಾತ್ರಿ ಈ ಸಂಸ್ಥಾನದ ದಿವಾನರವರು ನೀಲಗಿರಿಗೆ ಪ್ರಯಾಣ ಮಾಡಿದರು.

ಮೈಸೂರು ಡಿಸ್ಟ್ರಿಕ್ಟ್ ಟ್ರೆಷರಿ ಅಸಿಸ್ಟೆಂಟರಾಗಿದ್ದ ಎಂ. ವಿ. ಶ್ರೀನಿವಾಸಾಚಾರ್ಯರವರು ಈಚೆಗೆ ಕೆಲವು ದಿನಗಳ ಮೊದಲು ಅಸ್ವಸ್ಥಸ್ಥಿತಿಯಲ್ಲಿರುತಲಿದ್ದು ಒಂದುವಾರದ ಹಿಂದೆ ಮೃತಪಟ್ಟರೆಂದು ಕೇಳಿ ಬಹಳ ವಿಷಾದಿಸುತ್ತೇವೆ.

ಬಿಸಿಲು ದಿನೇದಿನೆ ದುಸ್ಸಹವಾಗುತಲಿದೆ ವರ್ಷವೆಂಬುದು ಸುತರಾಂ ಇಲ್ಲವು, ಪರಂತು ಪರವಪ್ರಾಂತಗಳಲ್ಲಿ ಪ್ರತಿದಿನವೂ ಮಿಂಚು ಗುಡುಗುಗಳು ಕಾಣುತಿರುವವು. ತಾಲ್ಲೂಕು ಜಾಗಗಳಲ್ಲಿ ಆಗಿಂದಾಗ್ಗೆ ಸ್ವಲ್ಪ ವರ್ಷ ಬೀಳುತಲಿರುವಂತೆ ಕಾಣುತಿದೆ ಆಹಾರ ಪದಾರ್ಥಗಳ ಬೆಲೆಗಳು ಹೆಚ್ಚುತಲಿವೆ. ಇತರ ವಿಷಯಗಳಲ್ಲಿ ಅಧಿಕಾಂಶವೇನೂ ಇಲ್ಲವು.

ಈ ಗವರ್ನಮೆಂಟು ಮಿಲಿಟರಿ ಸೆಕ್ರೆಟರಿಯವರಾದ ಕರ್ನಲ್ ಎ. ಸಿ. ಮ್ಯಾಕ್‌ಇಂಟೈರ್ ಸಾಹೇಬರವರು ಕಾಹಿಲೆ ರಜಾಮೇಲೆ ಸ್ವದೇಶಕ್ಕೆ ಹೋಗಿದ್ದರಷ್ಟೆ. ಸದರೀ ಯವರು ಕಳೆದ ಬುಧವಾರದ ದಿನ ಅಲ್ಲಿ ಮೃತಪಟ್ಟರೆಂದು ಕೇಳಿ ಬಹಳ ವಿಷಾದಿಸುತ್ತೇವೆ.

ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಾದ ಮಿ॥ ವಿ. ಎಸ್. ನರಸಿಮ್ಮಯ್ಯಂಗಾರ್ಯರವರು [illegible] ಅರಮನೆಯ ಕಂಟ್ರೋಲರಾಗಿ ನಿಯಮಿಸಲ್ಪಡುವರೆಂದು ಈಚೆಗೆ ಮೂರುನಾಲ್ಕು ದಿನಗಳ ಮೊದಲು ಊರಲ್ಲಿ ಒಂದು ಪ್ರವಾದ ಉಂಟಾಗಿರುತದೆ. ಇದರ ಯಾಥಾರ್ಥ್ಯವನ್ನು ಮುಂದೆ ತಿಳಿಸಬೇಕಾಗಿರುವುದು.

ಮೈಸೂರುದೇಶದ ಸಿವಿಲ್‌ಸರ್ವಿಸ್ ಪರೀಕ್ಷೆಯ ಬಗ್ಗೆ ದರಖಾಸ್ತುಗಳಂ ಕಳುಹಿಸಿರುವ ೩೧ ಮಂದಿಯಲ್ಲಿ:—

ಗಣಿತಶಾಸ್ತ್ರದಲ್ಲಿ ..	೧೧ ಜನ
ಭೌತಿಕಶಾಸ್ತ್ರದಲ್ಲಿ ...	೨೨ "
ದೇಶಚರಿತ್ರೆಯಲ್ಲಿ ..	೨೯ "
ವೇದಾಂತಶಾಸ್ತ್ರದಲ್ಲಿ ...	೬ "
ಜೀವಕೋಟಿಯನ್ನು ಕುರಿತಶಾಸ್ತ್ರದಲ್ಲಿ	೨ "
ರಸಾಯನಶಾಸ್ತ್ರ ..	೧ "
ಜುಮ್ಲಾ	..೩೧ "

ತಾಲ್ಲೂಕು ಜಾತಿ ಸಿಬ್ಬಂದಿಯ ಸಂಬಳ ಬಡ್ತಿಯ ವಿಷಯದಲ್ಲಿ ಮೈಸೂರು ಸರ್ಕಾರದವರು ಈಗಲೀಗ ಅವಧಾನ ಕೊಟ್ಟ ಬಗ್ಗೆ ಸಂತೋಷಿಸಬೇಕಾಗಿದೆ. ತಾಲ್ಲೂಕು ಗುಮಾಸ್ತೆಯರು, ಡೆಪ್ಯುಟಿ ಮುನಿಷಿಗಳು ಮುನಿಷಿಗಳು ಇವರೆಲ್ಲರಿಗೂ ಮಾಹೆಯಾನಾ ಸಂಬಳ ೧೨ ೧೫ ೨೦ ೨೫-೩೦ ರೂಪಾಯಿಗಳಂತೆ ಗೊತ್ತು ಮಾಡಲ್ಪಟ್ಟಿರುವಂತೆಯೂ, ಸಾಲೀಯಾನಾ ಬಡ್ತಿಯು ಮೇಲೆ ಈ ಸಂಬಳ ದ್ವಾರಾ ಸಲ್ಲುವಂತೆಯೂ ಕಾಣುತಿದೆ ತಾಲ್ಲೂಕು ಶಿರಸ್ತೇದಾರರುಗಳ ಸಂಬಳ ಸಹ ೪೦-೫೦-೬೦ ರೂಪಾಯಿಗಳಂತೆ ನಿಷ್ಕರ್ಷಿಸಲ್ಪಟ್ಟವಾಗಿರುವದಾಗಿ ಕೇಳುತ್ತೇವೆ

ಇಂಡ್ಯಾದೇಶದ ಅರಸರುಗಳೂ, ಪ್ರಮುಖರೂ ತಮ್ಮ ದೇಶಗಳ ಹೊರಗಡೆ ಮನೆಗಳನ್ನೂ, ಜಮೀನುಗಳನ್ನೂ ಪಡೆಕೊಂಡಿರುವುದು ಅಯುಕ್ತವೆಂತಲೂ, ಹಾಗೆ ಪಡೆಕೊಂಡಿರುವಂತಹವರೆಲ್ಲರು ಮಾರಿಬಿಡಬೇಕೆಂತಲೂ ಇಂಡ್ಯಾ ಗವರ್ನಮೆಂಟಿನವರಿಂದ ಈಚೆಗೆ ಕೊಡಲ್ಪಟ್ಟ ಹುಕುಂ ಅನುಸರಿಸಿ, ಹೈದರಾಬಾದ ನಿಜಾಮರವರು, ಮೈಸೂರು ಮಹಾರಾಜರವರು, ವಿಜಯನಗರದ ಮಹಾರಾಜರವರು, ಆರ್ಕಾಟ್ ಜಹಗೀರ್ದಾರರವರು ಹೈದರಾಬಾದ್ ಪ್ರಮುಖರೊಬ್ಬರು, ಇವರೆಲ್ಲರಿಗೂ ನೀಲಗಿರಿ ಬೆಟ್ಟದ ಮೇಲಿರುವ ಬಂಗ್ಲೆಗಳು ಶೀಘ್ರದಲ್ಲಿ ಮಾರಾಟಕ್ಕೆ ಬರುವವೆಂದು ನೀಲಗಿರಿ ನ್ಯೂಸ್ ಎಂಬ ಪತ್ರಿಕೆ ತಿಳಸುತಿದೆ.

ಮೇಲೆ ತಿಳಿಸಲ್ಪಟ್ಟಿರುವ ಹುಕುಮಿನ ಔಚಿತ್ಯವು ಕುರಿತು ಯೋಚಿಸಲಾಗಿ ನೇಟಿವ್ ಸಂಸ್ಥಾನಗಳಲ್ಲಿ ಕಾಯಮಾಗಿ ಸೇರಿ ಬಂಗ್ಲೆಗಳಂ ಕಟ್ಟಿಕೊಂಡು ಊರೆಲ್ಲವಂ ಬಳಸಿ ವಿಸ್ತಾರವಾಗಿ ಕಾಫೀ ತೋಟಗಳಂ ಮಾಡಿಕೊಂಡು, ರೈತಾಪಿ ಜನರಿಗೆ ನಾನಾವಿಧ ತೊಂದರೆಗಳನ್ನುಂಟುಮಾಡುತಲಿರುವ ಯೂರೋಪಿಯನ್ ಪ್ಲಾಂಟರ್‌ಗಳು ತಮ್ಮ ಬಂಗ್ಲೆಗಳನ್ನೂ, ತೋಟಗಳನ್ನೂ ಮಾರಿಬಿಟ್ಟು ಹೋಗಬೇಕಾದ್ದವಶ್ಯಕವಲ್ಲವೋ?

ಇಂಗ್ಲಾಂಡಿನಲ್ಲಿ ನಡೆಯುವದಾಗಿರುವ ಮಹಾರಾಜ್ಞೀಯವರ ದೀರ್ಘಕಾಲಿಕವಾದ ಆಳ್ವಿಕೆಯ ಷಷ್ಟ್ಯಬ್ದಪೂರ್ತಿ ಉತ್ಸವಕ್ಕೆ ಮೈಸೂರು ಸಂಸ್ಥಾನದ ತರಫ ಪ್ರತಿನಿಧಿಯಾಗಿ ಲೆಫ್ಟಿನೆಂಟ್ ಕರ್ನಲ್ ದೇಸರಾಜ ಅರಸಿನವರು ಈ ತಿಂಗಳ ಅಂತ್ಯಭಾಗದಲ್ಲಿ ಇಂಗ್ಲಾಂಡಿಗೆ ಪ್ರಯಾಣ ಮಾಡುವರೆಂದು ಹಿಂದಿನ ವಾರದ ಪತ್ರಿಕೆಯ ಮೂಲಕ ತಿಳಿಸಿದ್ದೆವಷ್ಟೆ. ಹೀಗಿರುವಲ್ಲಿ ಶ್ರೀಮನ್ಮಹಾರಾಣೀ ರೀಜಂಟರವರು, ತಮ್ಮ ದಿವಾನರವರು, ಕೌನ್ಸಿಲ್ ಮೆಂಬರ್‌ಗಳು, ಪ್ರಮುಖರಾದ ಅರಸರುಗಳು ಇವರೆಲ್ಲರಂ ಈಚೆಗೆ ಅರಮನೆಯಲ್ಲಿ ಸಭೆಸೇರಿಸಿ, ಸಮುದ್ರಯಾನವಂ ಕುರಿತು ಯೋಚಿಸಲಾಗಿ ಅದಕ್ಕೆ ಇನ್ನು ಅನುಕೂಲ ಕಾಲ ಬರಲಿಲ್ಲವೆಂತಲೂ, ಈಗ ಆತುರಪಟ್ಟು ಮುಂದುಬಿದ್ದು ಪ್ರಯಾಣ ಮಾಡಿದರೆ ಮತ ಪ್ರಮುಖರಾದವರ ಆಕ್ಷೇಪಣೆಗಳಿಗೂ ದೂಷಣತಿರಸ್ಕಾರಗಳಿಗೂ ಗುರಿಯಾಗಿ ಇಂಗ್ಲಾಂಡ್ ದೇಶಕ್ಕೆ ಹೋಗಿ ಬರತಕ್ಕವರು ಮುಂದೆ ಪ್ರಬಲ ಸಂಕಟಗಳಿಗೆ ಗುರಿಯಾಗಬೇಕಾಗಿರುವದರಿಂದ ಸದರೀ ಪ್ರಯತ್ನವನ್ನು ಮನ್ನಾ ಮಾಡಬೇಕೆಂದು ಸಭಾಸದರೆಲ್ಲರು ನಿರ್ಣಯಿಸಿ ಮಹಾರಾಣೀ ರೀಜಂಟರವರಿಗೆ ಶ್ರುತಪಡಿಸಲು ಆಕೆಯವರು ಅದನ್ನಂಗೀಕರಿಸಿದರೆಂದು ಕೇಳುತ್ತೇವೆ. ಈ ನಿರ್ಣಯವು ಅಥ ನಿಕ ವೈಲಕ್ಷಣ್ಯಾವಲಂಬಿಗಳಾದವರಿಗೆ ಬಹಳ ಅಸಮಾಧಾನವನ್ನುಂಟುಮಾಡದೆ ಹೋಗಲಿಲ್ಲವು. ಏತಕ್ಕೆಂದರೆ ಇದು ತಮಗೆ ಮೇಲ್ಪಂಕ್ತಿಯಾಗಿರುವದೆಂದು ನಂಬಿದ್ದುದರಿಂದ ಈಗ ಭಗ್ನಮನಸ್ಕರಾಗುವದಕ್ಕೆ ಕಾರಣವಾಯಿತು

THE MYSORE GAZETTE.
ಮೈಸೂರು ಗೆಜೆಟ್.

ಗುರುವಾರ, ತಾ॥ ೨೨ನೇ ಏಪ್ರಿಲ್ ೧೮೯೭.
ಮೈಸೂರ್ ಗವರ್ನಮೆಂಟಿನವರಿಂದ ಕಡೆಯಾಗಿ ಹೊರಡಿಸಿದ
ಇಷ್ತಿಹಾರ್‌ನಾಮೆಗಳು."
ಜನರಲ್ ಮತ್ತು ರೆವಿನ್ಯೂ.

ತಾ॥ ೧೫ನೇ ಏಪ್ರಿಲ್ ೧೮೯೭.

ನಂ॥ ೧೦,೨೬೩,—ಜಿ ೧,೨೯೦.—ನಂದಿದುರ್ಗ್ ಡಿವಿಜನ್ ಡಿಸ್ಟ್ರಿಕ್ಟ್ ನ ಸೆಷನ್ಸ್ ಜಡ್ಜರಾದ ಮಿ॥ ಟಿ. ನರಸಿಂಹರಾವ್ ಎಂ. ಎಲ್. ಯವರಿಗೆ ಮೈಸೂರ್ ಸರ್ವಿಸ್ ರೆಗ್ಯುಲೇಷನ್ಸ್‌ಗಳ ೨೧೯ನೇ ಆರ್ಟಿಕಲ್ ಅನುಸರಿಸಿ, ೧೮೯೬ನೇ ಅಕ್ಟೋಬರ್ ೯ನೇ ತಾರೀಖಿನ ಕ್ಯಾಂಪ್ ನಂಬರ ೨೧೧–೨೪ನೇ ಗವರ್ನಮೆಂಟ್ ಇಷ್ತಿಹಾರ್‌ನಾಮೆಯಲ್ಲಿ ಕೊಟ್ಟಿದ್ದ ಕಾಹಿಲೆ ರಜಾ ಅನ್ನು ಮೂರು ತಿಂಗಳವರೆಗೆ ಜಾಸ್ತಿ ಮಾಡಲ್ಪಟ್ಟಿರುತ್ತೆ.

೨ ಜಾರಿ ಮಾಡಿರತಕ್ಕ ಹಂಗಾಮಿ ನಿರ್ಬಂಧಗಳು ಸದರೀ ಮಿ॥ ಟಿ. ನರಸಿಂಹರಾಯರು ಮುಂದೆ ರಜಾ ಮೇಲೆಯಿರುವ ಕಾಲದಲ್ಲಿಯೂ ನಡೆಸತಕ್ಕದ್ದು.

ತಾರೀಖ್ ೯ನೇ ಏಪ್ರಿಲ್ ೧೮೯೭.

ನಂ॥ ೯೦೦೪,—ಫಾ. ಫೈ ೨–೯೬,—ಇದರಿಂದ ಪ್ರಸಿದ್ಧಪಡಿಸುವದೇನೆಂದರೆ:–ಲೈಸೆನ್ಸಿನ ಮೇಲೆ ಡಿಸ್ಟ್ರಿಕ್ಟು ಯಾ ಸ್ಟೇಟ್‌ಫಾರೆಸ್ಟಿನಿಂದ ತೆಗೆದುಕೊಂಡು ಹೋಗುವ ಬಗ್ಗೆ ಅಪ್ಪಣೆ ಕೊಟ್ಟಾಗ ಪರ್ಮಿಟ್ಟಿನ ಮೇಲೆ ಪ್ರತಿ ತಲೆ ಹೊರೆಗೆ ೨ ಆಣೆಗಳಂತೆ ಯಾ ಪ್ರತಿ ಬಂಡೀ ಹೊರೆಗೆ ೫ ರೂಪಾಯಿಗಳಂತೆ ತೀರ್ವೆಯು ವಸೂಲ್ಮಾಡಲ್ಪಡತಕ್ಕದ್ದು.

೨. ಜಮೀನ್ದಾರರು ಹೊಡೆನ್ನಾರನ್ನು ವ್ಯವಸಾಯ ಸಂಬಂಧವಾದ ಕೆಲಸಗಳಿಗಾಗಿ ಮಟ್ಟಿಗೆ ತಾಲ್ಲೂಕಿನ ಅಮಲ್ದಾರರಾಗಲಿ ಯಾ ಆ ವಿಷಯದಲ್ಲಿ ಅಮಲ್ದಾರರ ಅಧಿಕಾರ ಹೊಂದಿದ ಯಾವ ಉದ್ಯೋಗಸ್ಥನಾಗಲಿ ಮಾಫಿ ರಹದಾರಿಯನ್ನು ಪಡೆದು ಡಿಸ್ಟ್ರಿಕ್ಟು ಫಾರೆಸ್ಟುಗಳಿಂದ ಮಾತ್ರವೇ ತೆಗೆದುಕೊಂಡು ಹೋಗುವ ಬಗ್ಗೆ ಅಪ್ಪಣೆ ಕೊಡಲ್ಪಟ್ಟಿರುತ್ತೆ. ಅವಶ್ಯಕವಾದ ನಗದ್ ಯಾ ಮಾಫಿ ಲೈಸೆನ್ಸನ್ನು ಪಡೆಯದೆ ಅಥವಾ ಮೇಲ್ಕಂಡ ಷರತ್ತುಗಳನ್ನುಲ್ಲಂಘಿಸಿ ಹೊಡೆನ್ನಾರನ್ನು ಕಡಿಯುವ ಮತ್ತು ತೆಗೆದುಕೊಂಡು ಹೋಗುವ ಜನಗಳು ೧೮೭೮ನೇ ಇಸವಿಯ ಫಾರೆಸ್ಟ್ ರೂಲ್ಸಿನ ೪೦ನೇ ಸೆಕ್ಷನ್ ಅನುಸರಿಸಿ, ಶಿಕ್ಷೆಗೆ ಅರ್ಹರಾಗಿರುವರು.

ನಂ॥ ೯೦೦೫,—ಫಾ. ಫೈ. ೨–೯೬, ೧೮೯೬ನೇ ಸೆಪ್ಟಂಬರ್ ೨೧ನೇ ಮತ್ತು ೧೮೯೭ನೇ ನಂಬರ ಇಷ್ತಿಹಾರ್‌ನಾಮೆ ಅನುಸರಿಸಿ ಘೋಷಿಸಲಾದ ರೂಲ್ಸಿಗೆ ಈ ಕೆಳಗೆ ಕಂಡದ್ದನ್ನು ಸೇರಿಸುವದಕ್ಕೆ ಮಂಜೂರ್ಮಾಡಿ ಮತ್ತು ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಇದರಿಂದ ಪ್ರಸಿದ್ಧಪಡಿಸಿರುತ್ತೆ:—

ಲೈಸೆನ್ಸ್ ಕಾಲದೊಳಗಾಗಿ ಹುಟ್ಟುವಳಿಯನ್ನು ಉದ್ದೇಶಿಸಿದ ಸ್ಥಳಕ್ಕೆ ತೆಗೆದುಕೊಂಡು ಹೋಗುವದಕ್ಕಾಗಿ ಲೈಸೆನ್ಸಿನ ಫೀಜಿನ ನಾಲ್ಕರಲ್ಲೊಂದು ಭಾಗಕ್ಕೆ ಸಮವಾದ ಜುಲ್ಮಾನೆಯನ್ನು ಲೈಸೆನ್ಸದಾರನು ಕೊಡತಕ್ಕದ್ದೆಂತ VIIನೇ ರೂಲಿನ ಯಾವ ಭಾಗದಲ್ಲಿ ವಿಧಿಸಿದೆಯೋ ಅಷ್ಟು ಭಾಗವೂ ಮತ್ತು II, III ಮ IVನೇ ರೂಲುಗಳು ವಿನಾ ಮೇಲ್ಕಂಡ ವಿಷಯದ ರೂಲ್ಸುಗಳೂ ಸಾವೆ, ಜೊಂಡುಗಳು ಯಾ ಇತರ ಹಾಂಗ್ಲಿ ಉತ್ಪತ್ತಿಗಾಗಿ ಕೊಟ್ಟ ಮಾಫಿ ಲೈಸೆನ್ಸುಗಳು ಯಾ ರಹದಾರಿಗಳಿಗೆ ಅನ್ವಯಿಸತಕ್ಕದ್ದು.

ತಾ॥ ೨೦ನೇ ಏಪ್ರಿಲ್ ೧೮೯೭.

ನಂ॥ ೯೦೦೦,- ರೆ. ಫೈ ೧೭೪—೯೬,—ಮೈಸೂರ್ ಸರ್ವಿಸ್ ರೆಗ್ಯುಲೇಷನ್ಸ್‌ಗಳ ೧೯೯ನೇ ಆರ್ಟಿಕಲ್ ಅನುಸರಿಸಿ, ಮೊಳಕಾಲ್ಮೂರು ತಾಲ್ಲೂಕು ಅಮಲ್ದಾರ್ ಪಿ. ಪದ್ಮನಾಭ ಅಯ್ಯಂಗಾರ್ಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಮೊದಲುಗೊಂಡು ನಾಲ್ವತ್ತು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

೨. ಹೊಸದುರ್ಗದ ಡೆಪ್ಯುಟಿ ಅಮಲ್ದಾರ ಸಿರಾ ಮೊಹಿದ್ದೀನ್ ಅಲ್ಲಿ ಯವರು ಸದರೀ ಪಿ. ಪದ್ಮನಾಭ ಅಯ್ಯಂಗಾರ್ಯರು ರಜಾ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಮೊಳಕಾಲ್ಮೂರು ತಾಲ್ಲೂಕಿನ ಅಮಲ್ದಾರ ಮ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರ್ಕೀಕ್ ಮೊಕರರ್ಮಾಡಲ್ಪಟ್ಟಿರುತ್ತಾರೆ.

೩. ಚಿತ್ರದುರ್ಗ ಡಿಸ್ಟ್ರಿಕ್ಟು ಆಫೀಸ್ ಜುಡಿಷಿಯಲ್ ಹೆಡ್ ಮುನಿಷಿ ಬಿ. ಅಳಸಿಂಗ್ರಯ್ಯಂಗಾರ್ಯರು ಸದರೀ ಸಿರಾ ಮೊಹಿದ್ದೀನ್ ಅಲ್ಲಿ ಯವರು ಬೇರೆ ಕೆಲಸದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಹೊಸದುರ್ಗದ ಡೆಪ್ಯುಟಿ ಅಮಲ್ದಾರ ಮ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರ್ಕೀಕ್ ಮೊಕರರ್ಮಾಡಲ್ಪಟ್ಟಿರುತ್ತಾರೆ.

ತಾ॥ ೨೧ನೇ ಏಪ್ರಿಲ್ ೧೮೯೭.

ನಂ॥ ೯೦೩೯,—ಆರ್ ೩೦೪೪,—ಹಾಸನ ತಾಲ್ಲೂಕು ಅಮಲ್ದಾರ್ ಪಿ. ನಂಜುಂಡನಾಯಕರವರು ಬೇರೆ ಕೆಲಸದ ಮೇಲಿರುವ ಗಜನೂರು ಹನುಮಂತರಾಯರಿಗೆ ಬದಲು ಹಂಗಾಮಿಯಾಗಿ ಶಿವಮೊಗ್ಗೆಗೆ ವರ್ಗ ಮಾಡಲ್ಪಟ್ಟಿರುತ್ತಾರೆ. ಕೂಡಲೆ ಹೋಗಿ ಕೆಲಸದ ಮೇಲೆ ಹಾಜರಾಗತಕ್ಕದ್ದು.

ಆಲೂರು ಸಬ್‌ತಾಲ್ಲೂಕು ಡಿಪ್ಯುಟಿ ಅಮಲ್ದಾರ ಎಸ್. ವೆಂಕಟರಮಣಯ್ಯನವರು ತಮ್ಮ ಸ್ವಂತ ಕೆಲಸಗಳೊಂದಿಗೆ ಪಿ. ನಂಜುಂಡನಾಯಕರವರು ಶಿವಮೊಗ್ಗೆಯಲ್ಲಿ ಕೆಲಸ ನೋಡುತ್ತಿರುವ ಕಾಲದಲ್ಲಿ ಹಾಸನ ತಾಲ್ಲೂಕ್ ಅಮಲ್ದಾರ ಮ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲೀ ನೋಡತಕ್ಕದ್ದು.

ಡೆಪ್ಯುಟಿ ಅಮಲ್ದಾರ್ ಶೇಷರಙ್ಗಯ್ಯನವರು ಹುಲಿಯೂರ ದುರ್ಗದಿಂದ ಕುಣಿಗಲ್ ತಾಲ್ಲೂಕಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ ಕೂಡಲೆ ಹೋಗಿ ಕೆಲಸದ ಮೇಲೆ ಹಾಜರಾಗತಕ್ಕದ್ದು

ಡೆಪ್ಯುಟಿ ಅಮಲ್ದಾರ್ ಚಿನ್ನಪ್ಪಪಿಳ್ಳೆಯವರು ಕುಣಿಗಲ್ ನಿಂದ ಹುಲಿಯೂರುದುರ್ಗ ಸಬ್ ತಾಲ್ಲೂಕಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ ಬಿಡುಗಡೆಯಾದ ಮೇಲೆ ಹೋಗಿ ಕೆಲಸದ ಮೇಲೆ ಹಾಜರಾಗತಕ್ಕದ್ದು

SUMMARY OF NEWS.

ವೃತ್ತಾಂತ ಸಂಗ್ರಹವು.

ಕಲ್ಕತ್ತೆಯ ಹತ್ತಿರ ಚತ್ಪುರಿ ಎಂಬ ಗ್ರಾಮಕ್ಕೆ ಬೆಂಕಿ ಬಿದ್ದು ೬೦೦ ಮನೆಗಳು ಸುಟ್ಟುಹೋದವು ಸುಮಾರು ೫೦ ಸಾವಿರ ರೂಪಾಯಿ ನಷ್ಟವಾಯಿತಂತೆ

ಕಲ್ಕತ್ತೆಯಲ್ಲಿ ಒಬ್ಬ ಯೂರೋಪಿಯನು ಕ್ಷಾಮನಿವಾರಣೆಯ ಫಂಡಿನ ಹಣವನ್ನು ಸ್ವಕಾರ್ಯಗಳಿಗೆ ಉಪಯೋಗಿಸಿದ್ದೆಂದು ತಿಳಿದುಬಂದದ್ದರಿಂದ ಮ್ಯಾಜಿಸ್ಟ್ರೇಟರು ಅವನಿಗೆ ೩೦೦ ರೂಪಾಯಿ ಜುಲ್ಮಾನೆಯೂ ೩ ತಿಂಗಳ ಕಠಿಣಸಜಾ ಶಿಕ್ಷೆಯೂ ವಿಧಿಸಿದರು

ಗುಜರಾತಿನಲ್ಲಿ ಕ್ಷಾಮವೂ, ಬೆಳೆಯಾಯಿತ ಉಪದ್ರವವೂ ಪ್ರಜೆಗಳನ್ನು ಕೊಲ್ಲುತ್ತಿತ್ತು. ಸಾಲದ್ದಕ್ಕೆ ಈಗ ವಾಂತಿಭೇದಿ ಉಪದ್ರವವೂ ಪ್ರಾರಂಭವಾಗಿದೆ ಎಂತಲೂ, ದಿನಕ್ಕೆ ೩೦ ಜನರಿಗೆ ಕಡಮೆ ಇಲ್ಲದೆ ಸಾಯುತ್ತಿದ್ದಾರೆಂತಲೂ ವರ್ತಮಾನ ಬಂದಿದೆ

ಅಲಿಸ್ಬರ್ ಪಟ್ಟಣದ ಜೈಲಿನಿಂದ ೬ ಜನ ಖೈದಿಗಳು ಸಾಯಂಕಾಲ ೭ ಘಂಟೆ ಮೇಲೆ ದೇವರ ಧ್ಯಾನ ಮಾಡುವ ಸಮಯದಲ್ಲಿ ತಮ್ಮ ಕೋಣೆಗೆ ಹಾಕಿದ್ದ ಕಬ್ಬಿಣದ ಸಲಾಕಿಗಳನ್ನು ಮುರಿದು ಹೊರಕ್ಕೆ ಬಂದು ತಪ್ಪಿಸಿಕೊಂಡು ಓಡಿಹೋದರು. ಇವರಲ್ಲಿ ಒಬ್ಬನು ಮಾತ್ರ ಸಿಕ್ಕಿದ್ದಾನೆ

ಜರ್ಮನಿ ರಾಜ್ಯದ ಸೈನ್ಯಾಧಿಪತಿಯಾಗಿದ್ದ ಯಾಗಟದಾಯನು ಐವನೆಯದಿವಾರ ಸಮೀಪ ಸಿಲುಯಾಗಿ ಹೋಗುವನು ಮಾ... ಇವನಿಗೆ ಬಹಳ ರ್ವ್ಯಾಧಿ ಮಾಡಿಯಾರೆಂದು ತೋರಿದೆ. ಚಳಿಯಿಂದ ಮೇಲೆ ಜರ್ಮನರು ಯುದ್ಧ ಮಾಡಿದಾಗ ಈ ಸೈನ್ಯಾಧಿಪತಿಯೇ ಜಯಿಸಿದವರನ್ನು ಸೋಲಿಸಿ ಆನ್ಸ್ ರಾಜ್ಯಕ್ಕೆ ಜಯವನ್ನೂ, ತನಗೆ ಶಾಶ್ವತವಾದ ಕೀರ್ತಿ ಒಹುಮಾನಗಳನ್ನೂ ತಂದು ಇರುತ್ತಾನೆ

ಬೆಳಗಾವಿ ಜಿಲ್ಲೆಯ ಅಲ್ಲಿ ಮೇಲ್ತಾಣಗಳನ್ನು ಬಂದು ಶರಹ ಮರದಲ್ಲಿ ತಯಾರ್ಮಾಡಿರುತ್ತಾರಷ್ಟೆ ಅದನ್ನು ಈಚೆಗೆ ಕಾಣವಲ್ಲಾ ತಯಾರ್ಮಾಡಿರುತ್ತಾರೆ. ಇವೆರಡರಿಂದ ಬೆಳಗಳನ್ನು ಚಾಕಿನಿಂದ ಒರೆಯಬೇಕಾಗಿದೆ. ಆದರೆ ಈಚೆಗೆ ಮದ್ರಾಸಿನಲ್ಲಿ ಬಂದು ಅಂಗಡಿಯವರು ಈ ಬೆಳಗಳನ್ನು ಹೊಸದಿಲ್ಲದೆ ಮಾಡಿದ್ದಾರೆ ಈ ಬೆಳಗಳನ್ನು ಒರೆಯುವದಕ್ಕೆ ಚಾಕಿ ಬೇಕಾಗಿಲ್ಲ ಕೈಬೆರಳಿಗಳಿಂದಲೇ ಒರೆಯಬಹುದು ಒರೆಯುವದರಿಂದ ಒಹಳ ಅನುಕೂಲ ಮಾಡಿಕೊಟ್ಟ ಹಾಗಾಯಿತು.

ಪ್ರಪಂಚದಲ್ಲೆಲ್ಲ ಅತ್ಯಂತ ಧನವಂತನು ಥ್ರೋ ಎಂಬ ಪಟ್ಟಣದಲ್ಲಿರುವ ಪ್ರಿನ್ಸ್ ಅಲ್ಬರ್ಟ್ ಎಂಬವನೇ ಈತನು ಪ್ರತಿದಿನವೂ ದೇರೆಯಿಂದ ತರಿಸಿ ಬೆರಣ ಬಂದ ವುಗಳನ್ನೇ ತಾಕೀತುಮಾಡುತ್ತಾನೆ ಈ ಪಟ್ಟಣಗಳಿಗೆ ಅವನಿಗೆ ವರ್ಷ ೧೮ ಸಾವಿರ ರೂಪಾಯಿ ಖರ್ಚಾಗುವದು ಪ್ರತಿಹಿಂದಿನ ಹಾಕಿಕೊಳ್ಳುವ ಪಟ್ಟಣಗಳ ಸಲ್ಲೋ ತೃಪ್ತಿಯಾಗದ ಸ ಬಾಗಿಲಿನ ಉತ್ತರಗಳನ್ನು ಹಾಕುವನು ಈ ಅಕ್ಕರಿಗೆ ಬುದ್ಧಿ ೧೪೦ ರೂಪಾಯಿ ಇದ್ದು ೬—೭ ದಿನಕ್ಕೆ ಮೂರು ಹೊಸದಾಗಿ ಒಂದು ವರ್ಷದಲ್ಲಿ ಅವನು ಸಾಧಾರಣವಾಗಿ ೧೨೦೦ ಕತ್ತಿನ ಪಟ್ಟಿಗಳನ್ನು ಕಟ್ಟಿಕೊಳ್ಳುವನು, ದಿನಕ್ಕೆ ಮೂರಾವರ್ತಿ ಹೊಸ ಕತ್ತಿನ ಪಟ್ಟಿಗಳನ್ನು ಕಟ್ಟಿಕೊಂಡಹಾಗಾಗುವದು. ಅವನು ಉಪಯೋಗಿಸಿ ಎಸೆಯುವ ಜೋಡುಗಳು ೧೬ ತಿಂಗಳಿಗೆ ೬೦೦ ಜೋತೆಗೆ ಕಡಮೆ ಇಲ್ಲ. ಅವನು ಅತ್ಯಂತ ಸುವಾಸನೆಯ ಶ್ರೀಗಂಧಗಳನ್ನೇ ಸೇದುತ್ತಾನೆ ಇಂಥಾ ಬೀಡಿಗಳಿಗಾಗಿ ಅವನು ವರ್ಷಕ್ಕೆ ೩೬೦೦ ರೂಪಾಯಿ ಖರ್ಚುಮಾಡುವನು. ಮತ್ತು ವಿಶೇಷವಾಗಿ ಆನೇಕ ಆಟಪಾಟಗಳಲ್ಲಿ ಕಾಲಕಳೆಯುವನು ಬಂದು ವರ್ಷಕ್ಕೆ ಅವನು ಷಿಕಾರಿ, ಷೂಟಿಂಗ್, ಮೀನು ಹಿಡಿಯುವದು, ಚಂಡಾಟ, ಕ್ರಿಕೆಟಿಲಾಗಾಡಿ ಸವಾರೀ ಮುಂತಾದ ಆಟಗಳಿಗಾಗಿ ೨॥ ಲಕ್ಷ ರೂಪಾಯಿ ಖರ್ಚು ಮಾಡುವನು.

V. AYANOR'S PREPARATIONS

ವಿ ಅಯನಾರ್ ಎಂಬವರಿಂದ ತಯಾರ್ಮಾಡಲ್ಪಟ್ಟ ಪ್ರಸಿದ್ಧ ಔಷಧಗಳು.

ಡೈಯರ್ಡಿಸ್ಪೆನ್ಸರಿ—ಇದು ಹೊಟ್ಟೆನೋವು, ಅಜೀರ್ಣ, ರಕ್ತದ ನೋವು, ವಾಂತಿಭೇದಿ, ಆಮಶಂಕೆ, ಬೇಗುಳಿತ, ಕೆಮ್ಮು, ಮುಂತಾದ, ಒಳಯುಣ್ಣು, ರಕ್ತಸ್ರಾವ, ಆರ್ತವ ದೋಷ ಸಂಬಂಧವಾದ ಸ್ತ್ರೀಯರ ಉಪಾಧಿಗಳು, ತಲೆನೋವು, ದುರ್ಬಲತೆ, ಧಾತುನಷ್ಟ ಮೊದಲಾದವುಗಳಿಗೆ ಬಹಳ ಉಪಯುಕ್ತವಾದದ್ದು ಇದರ ಕ್ರಯ ದೊಡ್ಡ ಸೀಸೆ ೧ಕ್ಕೆ ೧ ರೂ ಸಣ್ಣ ಸೀಸೆ ೧ಕ್ಕೆ ೮ ಆಣೆ

ಪೇನ್ಕ್ಯೂರ್ ಎಂಬ ತೈಲ—ಶಿರಃಶೂಲೆ, ಕಿವಿನೋವು, ಹಲ್ಲುನೋವು, ಕೀಲುನೋವು, ತಲೆ ಸುತ್ತುವದು ಇವು ಪರಿಹಾರವಾಗುವದು ಇದರ ಕ್ರಯ ದೊಡ್ಡ ಸೀಸೆ ೧ಕ್ಕೆ ೧ ರೂ ಸಣ್ಣ ಸೀಸೆ ೧ಕ್ಕೆ ೮ ಆಣೆ

ಜ್ವರದ ಪ್ರತಿ—ಇದು ಎಲ್ಲಾ ಜ್ವರವನ್ನಾದರೂ ಎರಡು ದಿನಗಳೊಳಗಾಗಿ ನಿವೃತ್ತಿ ಮಾಡತಕ್ಕದ್ದು ದೊಡ್ಡ ಸೀಸೆ ೧ಕ್ಕೆ ೧ ರೂ ಸಣ್ಣ ಸೀಸೆ ೧ಕ್ಕೆ ೮ ಆಣೆ

ಓಮಕರ್ಪೂರದ ಗೋಳಿ—ಇದು ಸೀತಭೇದಿ, ರಕ್ತಭೇದಿ, ರಕ್ತಪಿತ್ತ ಮುಂತಾದ ರೋಗಗಳಿಗೆ, ಎದೆನೋವು, ಹೊಟ್ಟೆನೋವು ಇವುಗಳಿಗೆ ಬಹಳ ಪ್ರಯೋಜನಕರವಾದದ್ದು ಇದರ ಕ್ರಯ ದೊಡ್ಡ ಸೀಸೆ ೧ಕ್ಕೆ ೧ ರೂ ಸಣ್ಣ ಸೀಸೆ ೧ಕ್ಕೆ ೮ ಆಣೆ

ಮಲಹರವಾಯು ಚಿಕಿತ್ಸೆ—ಇದು ಅಂಗವಾಯುವಿನಿಂದ ಆರೋಗ್ಯ ಉಳ್ಳವರ, ಚರ್ಮವು ಒಡೆಯುವದು, ತುರಿ, ತಲೆನೋವು, ಗ್ರಂಥಿಗಳು ಇವುಗಳೆಲ್ಲ ಬಹಳ ಉಪಯುಕ್ತವಾದದ್ದು ಇದರ ಕ್ರಯ ದೊಡ್ಡ ಸೀಸೆ ೧ಕ್ಕೆ ೧ ರೂ. ಸಣ್ಣ ಸೀಸೆ ೧ಕ್ಕೆ ೮ ಆಣೆ

ವ್ಯಾಕ್ಸಿನೈಲು—ಇದು ಸಿಡುಬು ನೋವು, ಕೀಲುನೋವು, ಪಕ್ಷವಾತ, ಅರತಲೆನೋವು, ಒಡಕುಗಳಿಗೆ ಇವುಗಳಿಗೆ ಪ್ರಸಿದ್ಧವಾದ ತೈಲವು ದೊಡ್ಡ ಡಬ್ಬಿ ೧ಕ್ಕೆ ೧ ರೂ ಸಣ್ಣ ಡಬ್ಬಿ ೧ಕ್ಕೆ ೮ ಆಣೆ

ಶ್ವೇತಕುಷ್ಟೌಷಧ—ಇದು ಸಕಲವಿಧ ಮೇಹರೋಗಗಳಿಂದ ಜನಿಸುವ ಬಿಳುಪು, ಹಸರು ವರ್ಣದ ಸ್ರಾವ ಮೊದಲಾದ ದುರ್ಬಲ್ಯ ಧಿಗಳೆಲ್ಲವನ್ನೂ ಶೀಘ್ರವಾಗಿಯೂ, ಪೂರ್ಣ ಎಂದಿಗೂ ಬಾರದಂತೆ ನಿವೃತ್ತಿಪಡಿಸಿಯೂ ಗುಣಪಡಿಸತಕ್ಕಂತಾ ಔಷಧ ಇದರ ಕ್ರಯ ಸೀಸೆ ೧ಕ್ಕೆ ೧ ರೂ ೮ ಆಣೆ

ಕೂದಲು ನರೆಯದೆ ಕಪ್ಪಾಗಿ ಬೆಳೆಯುವಿಕೆ ಔಷಧ—ಈ ತೈಲವು ನರತ ಕೂದಲುಗಳನ್ನು ಕಪ್ಪಾಗಿ ಮಾಡುವದು ಕೂದಲು ಬೆಳೆಯದಿರುವ ಸ್ಥಳಗಳಲ್ಲಿ ಹುಟ್ಟಿ ಬೆಳೆಯುವದು ಇದನ್ನು ತಲೆಗೆ ಹಚ್ಚಿಕೊಂಡು ಸ್ನಾನ ಮಾಡಲು ಹುಡು ಮತ್ತು ಸುವಾಸನೆಯ ಬಹಳ ನನ್ನಾಗಿರುವದು. ಇದರ ಕ್ರಯ ಸೀಸೆ ೧ಕ್ಕೆ ೧ ರೂ

☞ ಬೇಕಾದವರು ಬಳ್ಳಾರಿ ಬ್ರೂಸ್ ಪೇಟೆಯಲ್ಲಿರುವ ವಿ ಅಯನಾರ್ ಔಷಧಶಾಲೆಗೆ ಬರೆದು ತರಿಸಿಕೊಳ್ಳಬಹುದು

ನೋಟಿಸ್.

No 1392, Dated 21-4-97

ಇದರಿಂದ ಸರುನ್ನ ಜನಗಳಿಗೂ ತಿಳಿಯಪಡಿಸುವದೇನೆಂದರೆ —

೧ ಇದರ ಕೆಳಗೆ ನಮೂದಿರುವ ಮೇರೆಗೆ ಸಿಟಿ ಮ್ಯುನಿಸಿಪಲ್ ರಸ್ತೆಗಳಿಗೆ ೧೮೯೭—೯೮ನೇ ಸಾಲಿಗೆ ಸಲ್ಲತಕ್ಕ ಆವಶ್ಯಕವಿರುವ (ಮಳೆಯ) ಮೆಟಲುಗಳನ್ನು ಸಪ್ಲೈ ಮಾಡಲು ೧೮೯೭ನೇ ಇಸವಿ ಮೇ ೧೦ನೇ ತಾರೀಖ್ ಮಧ್ಯಾನ್ಹದ ವರೆಗೂ ಟೆಂಡರ್ ಗಳನ್ನು ಬೆಂಗಳೂರು ಸಿಟಿ ಮ್ಯುನಿಸಿಪಲ್ ಪ್ರೆಸಿಡೆಂಟರವರು ಬರಮಾಡಿಕೊಳ್ಳುವರು ಟೆಂಡರ್ ಮಂಜೂರಾದ ಕೂಡಲೆ ಮೊದಲು ೩ ತಿಂಗಳುಗಳಿಗಾಗಿ ಪೂರೈಸಿಯಾಗಿ ಸಪ್ಲೈ ಮಾಡತಕ್ಕದ್ದು

೨ ಎಸ್ಟಿಮೇಟಿ ವಗೈರೆ ನೋಡಬೇಕಾದವರು ಮ್ಯುನಿಸಿಪಲ್ ಎಕ್ಸಿಕ್ಯೂಟಿವ್ ಇಂಜನೀಯರ್ ಆಫೀಸಿನಲ್ಲಿ ಆಫೀಸ್ ದಿನಗಳ ಆಫೀಸ್ ಕಾಲಗಳಲ್ಲಿ ಬಂದು ನೋಡಬಹುದಾಗಿರುತ್ತೆ ಪ್ರತಿ ಫೋರಂ ಟೆಂಡರ್ ಜತೆನೂ (೧೦೦) ಬಂದುನೂರು ರೂಪಾಯಿ ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ೧೮೯೭ನೇ ಇಸವಿ ಜೂಲೈ ತಿಂಗಳಲ್ಲಿ ಸೆಟಲ್ಮೆಂಟಿಗೆ ಸಮಾಪ್ತಿಪಡಿಸುವ

ಸುಮಾರು ಬೇಕಾಗಿರುವ ಸಮಾನುಗಳ ಮೊತ್ತ		
ಲ್ಯಾಟರೈಟ್ ಸಲಿಗೆ	ಜಂಗಲ್ ಮೆಟಲ್ ಸಲಿಗೆ	ಗ್ರಾವಲ್ ಸಲಿಗೆ
2,146	5,655	5198.

ಏಪ್ರಿಲ್ ೨೧ನೇ ೧೮೯೭

T T LEONARD,
President,
City Municipal Commission.

BANGALORE CITY MUNICIPALITY.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ ನೋಟೀಸ್.

ತಾರೀಖ್ ೨೦ನೇ ಏಪ್ರಿಲ್ ೧೮೯೭

ಸನ್ ೧೮೯೭ನೇ ಇಸವಿ ಏಪ್ರಿಲ್ ೨೯ನೇ ತಾರೀಖ್ ಬೃಹಸ್ಪತಿವಾರದ ದಿನ ಬೆಳಗ್ಗೆ ೭॥ ಘಂಟೆಗೆ ಬೆಂಗಳೂರು ಸಿಟಿ ಮ್ಯುನಿಸಿಪಲ್ ಕಮ್ಮಿಷನರುಗಳು, ತಮ್ಮ ಆಫೀಸ ಕಟ್ಟಡದಲ್ಲಿ ಸಾಮಾನ್ಯ ಸಭೆ ಸೇರುವಾಗ ಇದರಡಿ ಬರೆಯಲ್ಪಡುವ ಕೆಲಸಗಳು ನಡೆಸಲ್ಪಡುವವು —

ನಿಲ್ಲಿಸಲ್ಪಟ್ಟಿದ್ದ ವಿಷಯಗಳು.

೧ ಸನ್ ೧೮೯೭ನೇ ಇಸವಿ ಫೆಬ್ರವರಿ ತಿಂಗಳ ಬಾಬತು ಬಾಕಿ ನಗದು ಜಮಾಖರ್ಚು ಲೆಕ್ಕಗಳು

೨ ಮೆ॥ ಎಸ್ ವರದಯ್ಯಂಗಾರಿಗೆ ವಿಕ್ರಯ ಮಾಡಿದ ಬಾಲಕೃಷ್ಣ ದಾಸರೆಂಬವರಿಂದ ಮ್ಯುನಿಸಿಪಾಲಿಟಿಯವರು ಪಡಕೊಂಡ ಕೆಲವು ನಿವೇಶನಗಳಿಗೆ ಬದಲಾಗಿ ಕಾಶಿ ವಿಶ್ವೇಶ್ವರ ದೇವಸ್ಥಾನದ ಬೀದಿಯಲ್ಲಿರುವ ಕೆಲವು ನಿವೇಶನಗಳಂ ಕೊಡಿಸಬೇಕೆಂದು ಸದರೀ ವರದಯ್ಯಂಗಾರ್ಯರ ತರಫೆ ಅಡ್ವೊಕೇಟ್ ಮೆ॥ ಎಸ್ ಶ್ರೀನಿವಾಸಯ್ಯಂಗಾರ್ಯರು ೧೮೯೭ನೇ ಇಸವಿ ಮಾರ್ಚಿ ೫ನೇ ತಾರೀಖಿನಲ್ಲಿ ಬರೆದ ಲೆಟರ

ಸಾಮಾನ್ಯ ವಿಷಯಗಳು

೧ ಸನ್ ೧೮೯೭ನೇ ಇಸವಿ ಮಾರ್ಚಿ ತಿಂಗಳ ನಗದು ಜಮಾಖರ್ಚು ಲೆಕ್ಕ, ಮೊರಾಲೆಕ್ಕ, ಮನೆಗಳಿಗೆ ಹೋಗಿ ಚಿಕಿತ್ಸೆಮಾಡುವ ಮೆಡಿಕಲ್ ಆಫೀಸರರ ಲೆಕ್ಕ, ತಗಾದೆ ವಸೂಲಿ ಮತ್ತು ಬಾಕಿ ಪಟ್ಟಿ, ಕಾನೂಗಾರಿಗಳ ಅಭಿವೃದ್ಧಿಯನ್ನು ಕುರಿತ ರಿಪೋರ್ಟ್, ಶ್ರೀನಿವಾಸ ಮಂದಿರದ ಲೈಬ್ರರಿಗೆ ಹೋಗಿದ್ದ ಜನರನ್ನು ಕುರಿತ ಯಾದಿ, ಸಿಟಿ ಮ್ಯುನಿಸಿಪಲ್ ಇಂಗ್ಲಿಷ್ ಮತ್ತು ಕನ್ನಡ ಸ್ಕೂಲುಗಳ ಲೆಕ್ಕಗಳು, ಸೂಲಗಿತ್ತಿಯರು ಚಿಕಿತ್ಸೆ ಮಾಡಿದವರ ಲೆಕ್ಕ, ಬೀಜಗಳನ್ನು ಕುರಿತ ರಿಪೋರ್ಟಿನ ಸಂಗ್ರಹ, ಪ್ರಸವ ಸಿಬ್ಬಂದಿಯ ಲೆಕ್ಕ, ಬಾಣಂತಿಯರ ಲೆಕ್ಕ, ದನಗಳ ಲೆಕ್ಕ, ಮತ್ತು ನಾಯಿಗಳನ್ನು ಕೊಲ್ಲುವದಕ್ಕೆ ಕೊಟ್ಟ ಇನಾಮುಗಳ ಪಟ್ಟಿ

೨ ಬತ್ತಿಗಳು (ಬಿಸ್ಕತ್ ಮತ್ತು ನ ತಂದ) ಸಿಟಿ ಬೆಂಗಳೂರು ಸಿಟಿಯ ಈಗಿನ ಮ್ಯುನಿಸಿಪಲ್ ಸರಹದ್ದಿನ ವಿಷಯದಲ್ಲಿ ಪ್ರಸ್ತಾಪವಾದ ತಪ್ಪುಗಳನ್ನು ತೋರಿಸುವ ಮ್ಯಾಪು ಮತ್ತು ಪ್ಲಾನನ್ನು ಕುರಿತು ಆಲೋಚಿಸಿದ್ದಕ್ಕಾಗಿ ವಿಷಯದಲ್ಲಿ ೧೮೯೭ನೇ ಇಸವಿ ಮಾರ್ಚಿ ೮ನೇ ತಾರೀಖಿನಲ್ಲಿ ಜರುಗಿದವರು ಮಾಡಿದ ನಿರ್ಣಯಗಳ ಪ್ರತಿ ಎಂದರೆ ನಿರ್ಣಯದಲ್ಲಿ ಸೂಚಿಸಿ ಮೊಕದ್ದಮ್ಮೆ ತಪ್ಪಿದ್ದಕ್ಕೆ ಸಹ ಅಲಿಯಬೇಕಾದದು ಮಾಡಿದ ಪ್ರೊಸೀಡಿಂಗ್ಸ್

೩ ಆಕ್ಷ್ಯಾಯಿ ತೆಗೆಯುವದನ್ನು ಜಾರಿಯಲ್ಲಿ ತರುವದಕ್ಕೆ ಸ್ಟ್ಯಾಟಿಸ್ಟಿಕ್ ಲೆಕ್ಕವನ್ನು ತಯಾರ್ಮಾಡಿಕೊಡುವವರಲ್ಲಿ ಒಪ್ಪಿದ ಬಾಬಿನವರ ಆರು ಭಗವಂತ ರಾವ್ ರವರು ರಾಯರುಗಳನ್ನು ನಿಯಮಿಸಿ ರಿಯಲಿಗೆ ಇವರೇ ಮಾಡತಕ್ಕದ್ದು ಇವರು ಹುಟ್ಟಿಸಬೇಕೆಂದು ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ ಮ್ಯುನಿಸಿಪಲ್ ಪ್ರೆಸಿಡೆಂಟರವರು ೧೮೯೭ನೇ ಇಸವಿ ಏಪ್ರಿಲ್ ೨ನೇ ತಾರೀಖಿನಲ್ಲಿ ಬರೆದ ೫೯ನೇ ನಂಬರ್ ಲೆಟರ

ಜಾಸ್ತಿ ವಿಷಯ

೧ ಗವರ್ನಮೆಂಟ್ ನೇತ್ರ ಚಿಕಿತ್ಸಾಶಾಲೆಗೆ ಮ್ಯುನಿಸಿಪಾಲಿಟಿಯಿಂದ ದಾಖಲೇಕಾಗಿ ಕೊಡಲ್ಪಡುತಲಿರುವ ೧೪ ರೂಪಾಯಿಗಳನ್ನು ಅವರಿಗೆ ತಪ್ಪಿಸಿಯೂ, ಈಗ ತ ಬ್ಲಾಕ್ ಕಟ್ಟಡ ಕಟ್ಟಡದಲ್ಲಿ ಇರುತ್ತಿರುವ ಮ್ಯುನಿಸಿಪಲ್ ವೈದ್ಯಶಾಲೆಗೆ ಸೇರಿಕೊಂಡು ಅನುಕೂಲವಾದ ಸ್ಥಳವು ನೋಡತಕ್ಕದ್ದೆಂತಲೂ, ಆಗ ತ ಬ್ಲಾಕ್ ಕಟ್ಟಡ ಕಟ್ಟಡದಲ್ಲಿ ನೇತ್ರ ವೈದ್ಯಶಾಲೆ ಇಡಲ್ಪಡುವದೆಂತಲೂ, ೧೮೯೭ನೇ ಇಸವಿ ಏಪ್ರಿಲ್ ೧೯ನೇ ತಾರೀಖಿನಲ್ಲಿ ಗವರ್ನಮೆಂಟವರು ಮಾಡಿದ 1101—5 M F 18—96 ನೇ ನಂಬರ್ ಪ್ರೊಸೀಡಿಂಗ್ಸ್

T T LEONARD,
President,
City Municipal Commission

ಈ ಕಂಪೆನಿಯು ಸನ್ ೧೮೯೭ರಲ್ಲಿ ಇನಾಮಿನಲ್ಲಿ ಸ್ಥಾಪಿತವಾಯಿತು

ಜನ್ಮದ ಲಾಭವು.

ವಜ್ರಾಂಗ ಖರ್ಜೂರವು.

ಬಲಾರೋಗ್ಯ, ಪುಷ್ಟಿಗಳನ್ನು ಬೆಳೆಸತಕ್ಕ ಉತ್ತಮಾದ್ಯ.

ಅತ್ಯುತ್ಕೃಷ್ಟವಾದ ಬಲ್ಯಕಲ್ಪದ ತಯಾರಿಸಿದ ಈ ಉತ್ತಮವಾದ ಬಳಿ... ವನಸ್ಪತಿಗಳ ಸಾರಗಳ ಪ್ರಭಾವಗಳನ್ನು ಕೂಡಿಸಿ, ತುಪ್ಪದಿಂದ ಸೋಸಿ, ಒಳ್ಳೇ ಜೇನಿನ ತರದಿಂದ ಸಕ್ಕರೆಯ ಪಾಕದಲ್ಲಿ ಸಿದ್ಧಮಾಡಿರುತ್ತೇವೆ ಈ ಉತ್ತಮಗಳು ಮಹೌಷಧಿಗಳಲ್ಲದ್ದು ಒಳ್ಳೇ ರುಚಿಯುಳ್ಳವೆ ಇವುಗಳ ಸೇವನೆಯಿಂದ ಕಫ, ವಾತ, ಪಿತ್ತ, ಈ ತ್ರಿದೋಷಗಳಿಂದಾಗತಕ್ಕ ಯಾವತ್ತು ಜಠರ ವ್ಯಾಧಿಗಳು ಹೋಗುತ್ತವೆ ೩೦ ವರ್ಷಗಳ ಗ್ರಂಥ ಪ್ರಕಾರ ಈ ದುಃಖದ ಕಾಮಾಧಿಕಾರಕವಾದರೂ ಹರಿಯಾದ ಇಂತ ಸರುತ ಭ್ರಷ್ಟರಾಗಿದ್ದಾನು ಜನರೀಂದ್ರಿಯದಲ್ಲಿ ಬಲ ಕುಂದಿ ನಿಶ್ಶಕ್ತಿಯುಳ್ಳವನೂ ಇಲ್ಲದಂತಾಗುತ್ತದೆ ಲಘ್ವಿಯು ಮುಂಚೆ ಅಥವಾ ಹಿಂದೆ ಸಂದುಹೋಗುವ ಧಾತು ನಿಲ್ಲುತ್ತದೆ ಸ್ವಪ್ನಾವಸ್ಥೆಯಾಗುವದಿಲ್ಲ ವೀರ್ಯವು ಬೆಳೆದು ಸ್ತ್ರೀ ಬಿಳ್ಳದ್ದು ಬುಧ್ಧಿ ಸುತ್ತದೆ ಜರಣ ... ಬುದ್ಧಿ ... ಬಂದ ಇಲ್ಲದಂತಾಗಿ ಧಾತು ಪುಷ್ಟವಾಗುತ್ತದೆ ಮೂರು ಹೊತ್ತಿನಲ್ಲೂ ಅನ್ನ ... ಪೆರೆಯಾಗುತ್ತದೆ ಹೋಗುಣದಿಂದ ತಡ ಕೂಡಲೆ ಸ್ವಚ್ಛ ಗಾತ್ರವಾಗುತ್ತದೆ ಕ್ಷಯ, ಉಬ್ಬಸ, ದಮ್ಮು ಈ ರೋಗಗಳು ನಾಶ ಹೊಂದುತ್ತವೆ ಹೊಸ ದೇಹ ಇದ್ದಲ್ಲಿ ೧೧ ದಿವಸಗಳ ವರೆಗೆ ಸಾಲನ ಒಂದೇ ಡಬ್ಬಿಯಿಂದ ಗುಣಪುಟವಾಗುತ್ತದೆ ಮತ್ತು ಹಳದಲ್ಲಿ ೩ ದಿನಗಳ ಮೇಲೆ ಗುಣ ಬಂದೀತು. ೧೧ ದಿನಗಳವರೆಗೆ ನಾಲಕ್ಕಕ್ಕೆ ೧ ಡಬ್ಬಿಗೆ ೧—೦ ರೂ॥ ಬಂದವನ್ನಲ್ಲಕ್ಕೆ ೩ ಡಬ್ಬಿಗಳು ತಕ್ಕೊಳ್ಳತಕ್ಕವರಿಗೆ ಒಂದು ಡಬ್ಬಿಯು ಬಹುಮಾನ ಸಿಕ್ಕೀತು. ಈ ಉತ್ತಮದಿಂದ ಯೋಗರು ಸತೇಜರಾಗುತ್ತಾರೆ. ಕರಿನ ಕಾಣಾಕ್ಕ ವಾರಂತಿ ಬೇಕಾಗು ವಾಸಿಯಾಗುತ್ತವೆ ಎಲ್ಲರನ್ನೂ ಸರಿಯಾಗಿ ಬೇಸ ಇಲ್ಲದವರನ್ನಾಗಿಮಾಡಿ ಬಲಾರೋಗ್ಯ ಪುಷ್ಟಿಗಳನ್ನು ಬೆಳೆಸುತ್ತವೆ ಸಾಹೇಬ್ ಜನರಲ್ಲಿ ಬಹಳ ಡಬ್ಬಿಗಳು ಖರ್ಚಾಗುತ್ತವೆ ಈ ಔಷಧವು ಈ ಕಂಪೆನಿಯಹೊರ್ತು ಬೇರೆ ಸ್ಥಳದಲ್ಲಿ ಸಿಗುವದಿಲ್ಲ ಯಾವತ್ತು ದೇಶಗಳಲ್ಲಿಯು ಸ್ವೈದ್ಯ ಶಾಲೆಗಳಿಗಾಗಿ ಕಳುಹಿಸಲ್ಪಡುತ್ತದೆ ಬರೆದು ಬಂದು ಕೂಡಲೆ ಈ ಕಂಪೆನಿಯು ಪೇಕಾದವರಿಗೆ ಈ ಡಬ್ಬಿಗಳು ಕಳುಹಿಸಿಕೊಡುತ್ತೇವೆ. ಅಂಚೆಯ ಹಾಗೂ ವ್ಯಾಲ್ಯೂಪೇಯಬಲ್ ವೆಚ್ಚ ಬೇರೆ ಕೊಡತಕ್ಕ (ಅಂಚೆ ವೆಚ್ಚ ಸಹ ೩ ಡಬ್ಬಿಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬಾದಲ್ಲಿ ಎಲ್ಲಾ ಖರ್ಚಿನ ಹಾಕಿ ರವಾನಿಸುವದು, ಹೀಗೆ ಕಳುಹಿಸಿದರೆ ಟಪ್ಪಾಲ್ ಖರ್ಚು ಕಡಮೆ ಬೀಳುವದು)

ಮೇಲ್ವಿಚಾರಕ—ಪಿ ಎಲ್ ಎ ಬ್ರದರ್ಸ್ ಮತ್ತು ಕಂಪೆನಿ,

ನಕ್ಷ ಇಂಗ್ಲಿಷ್ ಬ್ರಾಂಚ್ ಆಫೀಸ್, ಡಿಸ್ಪೆನ್ಸರಿ ಬೆಳಗಾಂವ.

ಪೋಸ್ಟ್—ಬೆಳಗಾಂವ. Post BELGAUM.

BANGALORE.—Printed and Published at the KARNATAKA PRESS, No. 40, HOSPITAL ROAD, CITY,—1897

THE

Karnataka Prakasika.

ಕರ್ನಾಟಕ ಪ್ರಕಾಶಿಕಾ.

Published Every Monday Morning

ಬೆಂಗಳೂರಿನಲ್ಲಿ		ಹೊರಸ್ಥಳಗಳಿಗೆ	
ಸಾಲ್ 1 ಕ್ಕೆ	3 0 0	ಸಾಲ್ 1 ಕ್ಕೆ	4 0 0
6 ತಿಂಗಳಿಗೆ	2 0 0	6 ತಿಂಗಳಿಗೆ	2 8 0
3 ತಿಂಗಳಿಗೆ	1 4 0	3 ತಿಂಗಳಿಗೆ	1 8 0

Vol. XXIV. BANGALORE:—MONDAY, MAY 3, 1897. No. 18.

ADVERTISEMENTS.

Bangalore City Municipality

Notice, *Dated 20th April 1897*

Applications accompanied by copies of testimonials &c, (which will not be returned) from duly qualified candidates, for the post of Executive Engineer, City Municipality, Salary Rs. 150 per mensem, will be received by the undersigned up to 20th May 1897. A certificate of physical fitness for out door work must be submitted by each applicant. The selected candidate must be prepared to join for duty on 1st July 1897. Personal interview to intending applicants will not be granted.

F. T. LEONARD,
President,
City Municipal Commission

Southern Mahratta Railway Company.

District Traffic Superintendent's Office,
[illegible], 30-4-1897

NOTICE.

Under Section 56 of Indian Railway Act it is hereby notified to the public that a consignment of one Waggon Loose bones booked under Invoice No. 10 of 16-1-97 from B[illegible] to Bangalore City will be sold at the Bangalore City goods shed by public auction on Monday morning 17th May 1897, at 8 a. m.

D. H. Lindsay,
District Traffic Superintendent

Select Telegrams.

London, 26th April.—The Turks have occupied Larissa, and declare that the Greeks have abandoned a quantity of munitions there.

After six days constant fighting, a decisive battle was fought on Friday, which resulted by the evening in the Greeks being defeated, chiefly owing to the superior numbers of the Turks. After this the Greeks fell back, and the Turkish advance took place.

It is mooted in diplomatic circles that the Powers will now intervene and put an end to the fighting. A German communiqué urges the necessity of Greece being first made to promise to respect the advice of Europe.

Friday's battle, mentioned in this morning's telegram, was fought at Mati, three miles to the north of Tyrnavos. The Greek retreat became a perfect rout. The Turkish Cavalry closely pursued them and did great execution.

Reuter's special correspondent and other correspondents had narrow escapes of their lives.

The Duchess of York has given birth to a daughter. Both are doing well.

The Emperor Francis Joseph has left Vienna for St. Petersburg on a visit to the Czar.

London, 27th April.—Discontent exists at Athens to a dangerous extent, owing to their being a strong feeling that the retreat of the Greek Army from Mati was premature. The position of the Members of the Royal Family is serious.

The *Standard* states that the Greek Royal Family have made all arrangements to leave the country at any moment in case of necessity.

St Petersburg, 28th April.—A grand banquet was given last night in honour of the Emperor of Austria.

The Tsar exchanged most cordial toasts with His Majesty, pledging continued friendship and the common aim of peace.

London, 29th April.—The Greeks are losing ground in Epirus. The Turks have made an attack on Velestino (situated about 20 miles to west of Volo), which the Greeks repulsed, inflicting heavy losses on the Turks.

The Powers have decided that they will not mediate until Greece recalls Colonel Vassos from Crete as a token of their submission.

M. Hanotaux had an interview with the Turkish Ambassador in Paris yesterday, which lasted five hours.

The *Daily News* learns that M. Hanotaux warned the Turkish Ambassador that if the Turks advanced any further France would be compelled to defend Greece.

THE

Karnataka Prakasika.

MONDAY, MAY 3, 1897.

THE PRESENT WAR.

The war between the Greeks and the Turks may now be said to be nearly over. The former have been thoroughly defeated, and driven back into their own country. The war was short and sharp. It lasted not much longer than a week, but the whole of that time was spent in fighting. From the time the two forces met on the field till the Greeks were completely defeated there was no cessation in the struggle. It was one continuous struggle. For a long time past there has been bad blood between the two nations. The Greeks were formerly under the Turks. With the help of the European powers they threw off the yoke, but the two peoples have never become friendly. Of late, however, matters have become accentuated. Crete rose in revolt against Turkey, and Greece, contrary to the wishes of the European powers went to the rescue of the people of the island. This exasperated the Sultan and his people, and war was the result. It was thought that the forces were pretty well matched. The Turks were more in number than their opponents, but it was believed the Greeks would make up for this by their better drill and generalship. Then again it was thought that the enthusiasm of Greece would tell that the patriotism of the country would be a strong factor against the troops of the Sultan. But from the first the former were outnumbered, and it was discovered that the Greeks were deficient in artillery. They lost ground, one place after another was lost, and they had to retire into their own land. This was a sad blow to them and to their friends, who made sure that they would win. It was also believed that if the Greeks were victorious the Bulgarians and Servians would rise and expel—or try to do so—the Turks from Europe. They have now a lease of life granted them, which it is to be hoped they will make the best use of, but it is likely they will not. In spite of the energy the Turks have put forth it is plain to be seen that the rule of the country is rotten to the core. It is so bad that it cannot be improved. The officials are as corrupt as it is possible for them to be. The treasury is empty; the soldiers are not paid. It is a wonder that they fight under such circumstances, and more wonderful still that they fight so well. The powers are determined that the Turks shall not rule any longer in Crete, but they will not allow the Greeks to have power there. It is believed that the people will be permitted to set up a rule of their own; that they will have a Government chosen by themselves, and that the powers will guard the island till matters become settled. The powers of Europe must also step in and tell the Turks to retire from Greece. Before the war began, the two nations were told that whatever victories one might gain it would not be permitted to gain any advantage from them. What they did would all go for nothing. It is possible that Turkey may be able to obtain a war indemnity from the power it has been fighting with, but it need not expect anything more. Not a foot of land will the Sultan be allowed to take from the Greeks, his army must retire, and he must not trouble his late enemy in any way. It will be interesting to see how the powers will settle the matter between the two combatants. One is flushed with victory and will want to press on; the other is depressed, and almost helpless. The Greeks were expected to make a better fight of it than they have done. It was thought that if they were not victorious they would be able to hold their own. But *instead of driving back their enemies, they* have themselves been driven back, and though the king and people talk of reorganising the force, we fancy it is no use trying this. The troops will not fight in such a way that they can drive back the Turks, and it only remains for the powers of Europe to settle matters.

THE EYE HOSPITAL.

We are glad to find that the Mysore Government has made the Eye Hospital a permanent institution. For sometime it was on probation. The authorities were not certain whether it would succeed, and so they did not like to give anything like permanency to the hospital. But they discovered there was a need for such a place. They found that the people resorted to it in large numbers, and it was doing much good. Many cures were effected, and so it was decided to make it a lasting thing. The Government has been very fortunate in securing the services of such an efficient practitioner as Dr. Ramaswamiengar, and it is to be hoped that he will remain at the head of the institution for many years to come. This gentleman is a specialist as regards the eye, and thoroughly understands the work he has undertaken. He was trained in the subject in England and on the continent, and he made the most of his opportunities. Of course the Hospital is not for Bangalore alone, but for the whole of the province, and when the people who have diseases of the eye come to understand they can be treated at the hospital that has been established we may be certain they will present themselves in large numbers. Such a place was urgently required, and now it has been brought into existence we feel sure it will be highly valued.

News and Notes.

Several Greeks employed in Bombay firms have left for their native country to serve as Volunteers.

No school is more necessary to children than patience, because either the will must be controlled in childhood, or the heart broken in old age.

Of the thirty-eight Sultans who have ruled the Ottoman Empire since the conquest of Constantinople by the Turks, thirty-four have died violent deaths.

Mr Gladstone has written to a German paper that "the diplomacy of the last two *years has furnished the history of the 19th* century with its most disgraceful chapter."

Women in Austria cannot under any circumstances be imprisoned or condemned to death. After sentence has been pronounced upon a woman, she is sent to a convent and kept there a certain number of years.

The Government of India have decided that henceforth Governors, Lieutenant-Governors and Members of the Viceroy's Executive Council will be entitled to reserved accommodation on Indian Railways, even when not travelling on duty.

Lady Aberdeen, the accomplished wife of the Governor-General of Canada is to be "convocation orator" at the University of Chicago in April. Never before in America has a woman been chosen as the principal speaker on such an occasion.

Mr Ahmedi, Executive Engineer of Bombay, has been appointed Chief Engineer of Hyderabad. Mr Ahmedi is a nephew of Mr Justice Badrudin Tyabji, and is a Rurki Engineer. He was sent to England on special work by the Government of India.

The Queen's Jubilee has become a source of income to the English people. A London Correspondent writes:—That already sixteen million pounds are being paid, for the use of windows, roofs and other places from which the grand procession is to be seen.

Mrs. Besant arrived in New York the other day. She will remain in the United States for some time. She has been telling the newspapers that she has no quarrel whatever with Mrs. Tingly, who claims to be the legitimate successor of Madame Blavatsky. Mrs. Besant declared her mission to be to spread Theosophy.

The famine returns for last week show that the numbers in receipt of relief were nearly 3,121,000, or an increase of over 168,000 on the previous week. The numbers in Bengal have risen by 59,000, in the North West Provinces by 54,000, Madras 30,000, and Berar 17,400. There was a decrease of 7,400 in Bombay and 3,100 in the Central Provinces.

His Excellency the Governor, accompanied by Major Romilly, Mr. H. A. Sim, and Captain Wintour, A. D. C., and escorted by the Body Guard, paid a return visit on Saturday to H. H. the Maharajah of Mysore at Fern Hill, His Highness the previous day having paid the Governor a visit. No salutes were fired on either occasion, as both visits were private.

A man who has a reputation for truthfulness says that he recently purchased a box of pills. He took some of them, and the rest were set aside in a cupboard which was very damp. After a few weeks he again sought his pills, and to his astonishment each had developed a healthy green shoot, which was not rhubarb or aloes, but grew from what turned out to be a white pea covered with some white coating.

According to the correspondent of a contemporary, one of the primary reasons for Salar Jung's removal from Hyderabad is

that he successfully blocked the negotiations between the Nizam's and British Governments to raise a loan of a crore of rupees on the mortgage of Aurungabad, which the British Government were prepared to advance. The loan was subsequently obtained from Sir Asman Jah on the temporary mortgage of this district.

The plague has opened the eyes of many eminent doctors to the advantages of cremating the dead bodies. Dr Gordon Stables says — "What I wish to see is cremation made cheaper, as it is by far the most cleanly way of disposing of the dead. I think, the present mode of burial is a disgrace to all our head nations, and not only should cremation be brought within the reach of all, but in all cases of death by infectious diseases it should be compulsory."

Says the *Indian Mirror* of Calcutta:—The Government of India has lately issued a report regarding literary publications, in which, in point of excellence, the place of honour is accorded to men of letters in the Southern Presidency. Bombay runs her close and Bengal, with its cartloads of publications brings up the rear. We have indeed fallen from our high estate, and it is time we made *an effort to regain our former glory.*

The great ear pulling case has been decided. First it was dismissed by Mr Pearson, the Chief Presidency Magistrate, and then it was referred back to him for trial by Mr Justice Chunder Madhub Ghose, on the ground that the pulling of a respectable gentleman by the ear was a very grave offence. The Magistrate has again dismissed the complaint on the extraordinary ground that pulling a man by the ear is a trivial offence of which no man of ordinary sense would complain. Has the Magistrate authority to enforce such an opinion when the High Court has clearly held that it is a grave offence. We hope the case will come before the High Court again. The facts are these. It seems the Babu had been in the habit of going late to office, and that one morning Mr Walmsley took him by the ear and told him to look at the clock. The Babu is possessed of property amounting to Rs 80,000.

The Secretary to the Government of India has sent us the following for publication:—

The Governor General in Council has, by the announcement published in today's *Gazette of India*, directed that Monday and Tuesday, the 21st and 22nd of June, shall be kept as public holidays throughout British India to commemorate the completion of the sixtieth year of the reign of Her Majesty the Queen, Empress of India.

2. It is, in the opinion of the Governor General in Council, undesirable that, while famine and plague prevail over wide areas of the country there should be large Public ceremonials or that great assemblages of People should be encouraged.

3. His Excellency in Council is assured that the executive authorities may on this occasion, as on that of the Jubilee in 1887, safely yield the initiative in taking steps to commemorate the completion of the sixtieth year of Her Majesty's reign to the spontaneous action of the community at large, and that the unanimous voice of the Empire will gratefully tender to Her Majesty the Queen, Empress of India, a homage worthy of the noble charity of her life never more fully exemplified than in the events of the present year, and of the justice and benevolence of a reign that has now exceeded those of all her predecessors.

It has been intimated to the Viceroy that various bodies and sections of the community wished to present addresses to Her Majesty the Queen, Empress of India, on the occasion of the completion of the sixtieth year of her reign, and to send deputations to England for the purpose of laying the addresses before Her Majesty in person.

At the Viceroy's request the Secretary of State has taken Her Majesty's pleasure in the matter, and has now telegraphed that, in view of the special circumstances of the year, which have involved also a departure from the precedent of 1887 in regard to the reception of Gazette in England, Her Majesty has been pleased to direct that addresses should, on this occasion be submitted through Government and not personally, and has authorised the Viceroy to receive loyal addresses on her behalf.

If the communities or bodies who are preparing addresses should wish to send deputations to present the addresses to the Viceroy on behalf of Her Majesty, early intimation of their intention should be made to me, in order that the arrangements for the reception of such deputations may be made.

Local and Provincial

Colonel Desiraj Urs.—Arrived in Bangalore last Wednesday where he will remain for sometime.

The Councillors.—Returned from Mysore last Tuesday, the Maharani Regent and the Dewan having gone to Ootacamund.

The Going to Ooty.—Her Highness the Maharani Regent with Mr Kantharaj Urs and suite left Mysore for Ooty via Gundlupet.—M H

The Maharaja of Mysore.—A salute of nineteen guns on Tuesday evening announced the arrival of Her Highness the Maharani Regent of Mysore, at Ootacamund.

The Jewel Committee.—The Jewel Committee has completed its work. It has catalogued, described and numbered the old and new jewels of the Palace.—M H

Holidays.—All the schools in the Station and in the City are closed for the mid summer vacation. They will re-open towards the end of next month or the beginning of June.

The Royal Family.—The Second Princess together with her husband, her grand mother, and the Durbar Bakshi lives in Mysore. The rest of the members of the Palace have left for Ooty.—M H

Geological Survey.—The Geological Department has been carrying on its geological survey in the Chickmagalore District and the head of the department seems to be highly pleased with the iron prospects of the District.—M H

The cost.—The cost of the New Palace building and the New Pondal will, it is said, be charged to the D P W Budget of the State and full allotment of funds for them will, it is said, be made during the current and next official years.—M H

Mangoes.—Although this is the time these ought to come into the market, we have scarcely yet seen one. The crop has entirely failed in Bangalore, and it is not very good, we hear, in other places. This is a bad lookout for those who are fond of this fruit.

Under Section 357 of the Code of Criminal Procedure, Mr P Srinivasa Rao, Extra Assistant Commissioner and 1st Class Magistrate, Mysore district, is empowered to take down the evidence of witnesses with his own hand in the English language.

A Permanent Pendal.—The P W D has been instructed to lay so some suitable pavilion of non combustible materials to cover the entire central court and so as to obviate the need of a temporary pendal in the Palace on any future festival or marriage occasion.

Sir K Seshadri Iyer, Dewan of Mysore, was at Calcutta on Tuesday week to arrange the marriage of his son with a daughter of Mr Ramaswamy Iyer, District Court Head Clerk. He left for Mysore on Thursday. At Calcutta he was the guest of Mr Subba Rao, Assistant Inspector of Schools.—*Hindu*

The following transfers of Civil Surgeons are ordered:—

(1) Mr P S Atchyuta Rao, Civil Surgeon now on leave, *from* Shimoga *to* Mysore.

(2) Mr I V Arumugam Mudaliar, Officiating Civil Surgeon, *from* Mysore *to* Shimoga.

The following Amildars are invested with power to take cognizance of cases arising under the Breach of Contract Act XIII of 1859:—

C Rangacharlu, Amildar and 2nd Class Magistrate, Nelamangala taluk.

N Gopalaiengar, Amildar and 2nd Class Magistrate, Doddaballapur taluk.

Tirumalachar, Amildar and 2nd Class Magistrate, Magadi taluk.

ಕರ್ನಾಟಕ ಪ್ರಕಾಶಿಕಾ.

೧೮೯೭ನೇ ಇಸವಿ ಮೇ ತಾ|| ೩ನೇ ಸೋಮವಾರ

ಪ್ರಕೃತ ಯುದ್ಧವು.

ಗ್ರೀಕ್ ದೇಶೀಯರಿಗೂ ತುರ್ಕಿಯರಿಗೂ ಈಗ ನಡೆಯುತಲಿರುವ ಯುದ್ಧವು ನ್ಯಾಯಾಶ್ರಯವಾಗಿದೆಯೆಂದೇ ಭಾವಿಸಬೇಕಾಗಿರುತದೆ ಏತಕ್ಕೆಂದರೆ, ಗ್ರೀಕ್ ದೇಶದವರು ಪೂರ್ಣವಾಗಿ [illegible] ಜಯವನ್ನು ಹೊಂದಿ ಸ್ವದೇಶಕ್ಕೆ [illegible] ರು. ಈ ಯುದ್ಧವು ಏ ದಿವಸದ ಕಾಲವೇ ನಡೆದಿದ್ದಾಗ್ಗ್ಯೂ [illegible] ಬಹಳ ಸೈನ್ಯಗಳು ಯುದ್ಧರಂಗದಲ್ಲಿ ಸೇರಿದ್ದು ಕೇವಲ ನಿಮಿಷಮಾತ್ರ ವಿರಾಮವಿಲ್ಲದೆ ಯುದ್ಧ ನಡೆಯುತಲೇ ಇತ್ತು. ಈ ಸಂಸ್ಥಾನ ಬಿಪತಿಗಳಿಬ್ಬರಿಗೂ ಬಹು ಕಾಲದ ಮೊದಲು ಪರಸ್ಪರ ಅಂತರವಾದ ದ್ವೇಷಾಸೂಯೆಗಳು ಹುಟ್ಟಿಕೊಂಡಿದ್ದುವು. ಗ್ರೀಕ್ ಸಂಸ್ಥಾನವು ಹಿಂದೆ ತುರ್ಕಿಯವರ ಅಧಿಕಾರಕ್ಕೆ ಒಳಪಟ್ಟಿತ್ತು. ತರುವಾಯ [illegible] ಸಂಸ್ಥಾನಾಧಿಪತಿಗಳ [illegible] ಗ್ರೀಕ್ ದೇಶೀಯರು ಸ್ವತಂತ್ರರಾಗಿ ತುರ್ಕಿಯವರನ್ನು ಉಲ್ಲಂಘಿಸಿದರು. [illegible] ಯುರೋಪಿನ ಸಂಸ್ಥಾನಾಧಿಪತಿಗಳಿಗೂ ಮನಸ್ತಾಪ [illegible] ಕ್ರೀಟ ಎಂಬ ದ್ವೀಪದವರು ತುರ್ಕಿಯವರೊಡನೆ ಕಲಹಿಸಲು, ಯುರೋಪಿನ ಸಂಸ್ಥಾನಾಧಿಪತಿಗಳ ಅಭಿಪ್ರಾಯಕ್ಕೆ ವಿರುದ್ಧವಾಗಿ ಗ್ರೀಕ್ ದೇಶೀಯರು ಸದರೀ ದ್ವೀಪದ ಜನರ ಸಹಾಯಕ್ಕೆ ಹೋದರಾಗಿ, [illegible] ಪ್ರಜೆಗಳಿಗೂ [illegible] ಪ್ರಕೃತ ಯುದ್ಧಕ್ಕೆ ಕಾರಣವಾಯಿತು. [illegible] ಗಳೂ ಸಮಾನ [illegible] ಅಭಿಪ್ರಾಯವನ್ನು [illegible] ತುರ್ಕಿಯವರ ಸೇನೆಯ [illegible] ಸೈನ್ಯ [illegible] ವಾಗಿ ಹೋರಾಟ [illegible] ಗ್ರೀಕ್ ಸೈನ್ಯವು [illegible] ದೊಡ್ಡ ಸಂಬಳ ಬಿಟ್ಟಿಗಿದ್ದ ಮಾತ್ರವಲ್ಲದೆ ಯುದ್ಧ ವಿಷಯದಲ್ಲಿ ಗ್ರೀಕ್ ದೇಶೀಯರ ಉತ್ಸಾಹ [illegible] ಯುದ್ಧಾರಂಭದ ಮೊದಲು ತುರ್ಕಿ ಸೇನೆಯು ಅಧಿಕವಾಗಿದ್ದರೂ, ಗ್ರೀಸ್ ದೇಶೀಯರಿಗೆ [illegible] ಸಹಾಯ [illegible] ಯುದ್ಧದಲ್ಲಿ ಅವರು [illegible] ಬೇಕಾಗಿರುವುದು. ಗ್ರೀಕ್ ದೇಶೀಯರು ಯುದ್ಧದಲ್ಲಿ ಜಯವನ್ನು ಹೊಂದುವದಕ್ಕೆ ತುರ್ಕಿ ಸಂಸ್ಥಾನಕ್ಕೆ ಸೇರಿದ ಬಲ್ಗೇರಿಯ [illegible] ದೇಶದವರು ಸುಲ್ತಾನರ ಮೇಲೆ ಕಲಹಿಸಿ ಅವರು [illegible] ರೆಂದು ಸಾಮಾನ್ಯವಾದ ನಂಬಿಕೆ ಯುಂಟಾಗಿತ್ತು. ಈಗ ತುರ್ಕಿಯವರಿಗೆ ಆ ಭಯ ತಪ್ಪಿಹೋಗಿರುವದರಿಂದ ಅವರು ತಮ್ಮ ದೇಶಗಳನ್ನು ತಿದ್ದಿಕೊಳ್ಳುವರೆಂದು ಕೋರುವೆವು. ಪರಂತು ಅವರು ಆರೀತಿ ನಡೆದುಕೊಳ್ಳುವ ಸಂಭವ ತೋರಲಿಲ್ಲವು.

ಪ್ರಸಕ್ತ ಯುದ್ಧದಲ್ಲಿ ತುರ್ಕಿಯವರು ತಮ್ಮ ಶಕ್ತಿ ಸಾಹಸಗಳು ವ್ಯಕ್ತಪಡಿಸಿದ್ದಾಗ್ಯೂ ಅವರ ರಾಜ್ಯಾಡಳಿತವು ಬಹಳ ಕೆಟ್ಟಿರುವುದು ಒಂದು ವ್ಯವಸ್ಥಿತಿಗೆ ಬರುವಂತಿಲ್ಲ. ಸರ್ಕಾರ ಅಧಿಕಾರಿಗಳು ರುಷವತ್ತಿನ [illegible] ರಾಗಿ ಹೋಗಿರುತ್ತಾರೆ. ಗವರ್ನಮೆಂಟ್ ಖಜಾನೆಯಲ್ಲಿ ಹಣವಿಲ್ಲದೆ ಸೈನಿಕರಿಗೆ ಕ್ರಮವಾಗಿ ಸಂಬಳ ಸಲ್ಲುವದಿಲ್ಲವು. ಇಂತ ವಿದ್ಯಮಾನದಲ್ಲಿ ಅವರು ಯುದ್ಧಕ್ಕೆ ಬಂದು ಇನ್ನು [illegible] ರವರೊಡನೆ ಯುದ್ಧ ಮಾಡಿದ್ದು ವಿಶೇಷ ಆಶ್ಚರ್ಯಕರವಾದದ್ದು. ತುರ್ಕಿಯವರು ಇನ್ನು ಮೇಲೆ ಕ್ರೀಟ ಎಂಬ ದ್ವೀಪದಲ್ಲಿ ತಮ್ಮ ಅಧಿಕಾರವನ್ನು ನಡೆಸಕೂಡದೆಂತಲೂ, ಪರಂತು ಗ್ರೀಕ್ ದೇಶೀಯರು ಸದರೀ ದ್ವೀಪದಲ್ಲಿ ಯಾವ ಅಧಿಕಾರವನ್ನಾಗಲಿ ಚಲಾಯಿಸುವದಕ್ಕೆ ಅವಕಾಶ ಕೊಡಲ್ಪಡಕೂಡದೆಂತಲೂ ದೊಡ್ಡ ಸಂಸ್ಥಾನಾಧಿಪತಿಗಳು ನಿರ್ಣಯಿಸಿರುತ್ತಾರೆ. ಕ್ರೀಟ ದ್ವೀಪದ ಜನರು ಸ್ವತಂತ್ರಾಧಿಕಾರವನ್ನು ಸ್ಥಾಪಿಸಿಕೊಂಡು ಅವರೇ ರಾಜ್ಯಕಾರ್ಯಗಳನ್ನು ನಡೆಸಿಕೊಳ್ಳುವದಕ್ಕೆ ಅವಕಾಶ ಕೊಡಲ್ಪಟ್ಟಿತು. ಸದರೀ ದ್ವೀಪದಲ್ಲಿ ಕಲಹಗಳು ಶಾಂತವಾಗುವ ವರೆಗೆ ದೊಡ್ಡ ಸಂಸ್ಥಾನಾಧಿಪತಿಗಳು ಅದರ ಮೇಲೆ ಉಸ್ತುವಾರಿ ಇಟ್ಟಿರುವರೆಂಬ ನಂಬಿಕೆಯುಂಟಾಗಿದೆ. ಯುದ್ಧಾರಂಭವಾಗುವದಕ್ಕೆ ಪೂರ್ವ ಯಾವದೇಶೀಯರು ಜಯವನ್ನು ಹೊಂದಿದಾಗ್ಯೂ ಅದರಿಂದ ಅವರು ಏನು ಪ್ರಯೋಜನವನ್ನು ಪಡೆಯುವದಕ್ಕೆ ಅವಕಾಶ ಕೊಡಲ್ಪಡಲಾರದೆಂದು ತಿಳಿಸಲ್ಪಟ್ಟಿದ್ದರು. ತುರ್ಕಿಯವರು ತಮ್ಮ ಶತ್ರುಗಳಾದ ಗ್ರೀಕ್ ದೇಶೀಯರಿಂದ ಯುದ್ಧ ಖರ್ಚನ್ನು ಪಡೆಯಬಹುದೇ ಹೊರತು [illegible] ಯಾವದನ್ನೂ ನಿರೀಕ್ಷಿಸಲಾಗದು, ಅಂದರೆ ಗ್ರೀಕ್ ದೇಶದ [illegible] ಭೂಮಿಯನ್ನಾವದು ಪಡೆಯಲು ಅವಕಾಶ ಕೊಡಲ್ಪಡಲಾರದು. ಸುಲ್ತಾನರ ಸೇನೆಯು ಹೊರಟು [illegible] ಅವರು ತಮ್ಮ ಶತ್ರುಗಳಾದ ಗ್ರೀಕ್ ದೇಶೀಯರಿಗೆ ಯಾವವಿಧ [illegible] ಕೊಡಲಾಗದು, ತುರ್ಕಿಯವರು ಈ ಯುದ್ಧದಲ್ಲಿ ತಮಗೆ ಬಂದ ಜಯ [illegible] ಗಿ ಅವರಿಗುಂಟಾ [illegible] ವಾಗಿರುವದು. ಗ್ರೀಕ್ ದೇಶೀಯರು [illegible] ಸಹಾಯ [illegible] ರುತ್ತಾರೆ. ಇಂತ ವಿದ್ಯಮಾನದಲ್ಲಿ ದೊಡ್ಡ ಸಂಸ್ಥಾನಾಧಿಪತಿಗಳು [illegible] ವ್ಯವಸ್ಥೆ [illegible] ನೋಡಬೇಕು.

[illegible] ರವರ ಆಳ್ವಿಕೆಯ [illegible] ಸಂವತ್ಸರ ಪೂರ್ತಿಯಾಗಿ ಸಮಾಪ್ತವಾಗಿರುವ ಉತ್ಸವ [illegible] ವಿಜ್ಞಾಪನಾ ಪತ್ರಿಕೆಗಳು [illegible] ಒಪ್ಪಿಸಬೇಕೆಂದು ಯೋಚಿಸಿ [illegible] ತಮ್ಮ ಪ್ರತಿನಿಧಿಗಳು [illegible] ಗ್ಲಂಡಿಗೆ ಕಳುಹಿಸಬೇಕೆಂದು [illegible] ವೈಸರಾಯಿ ಸಾಹೇಬರವರ ತಿಳುವಳಿಕೆಗೆ ತರಲ್ಪಡಲು, ವೈಸರಾಯಿ ಸಾಹೇಬರವರು ಈ ವಿಷಯವಾಗಿ [illegible] ಸ್ಟೇಟಿ ಸೆಕ್ರೆಟರಿಯವರಿಗೆ [illegible] ಮಹಾರಾಜ್ಞೀಯವರ [illegible] ಆಗಲಿ, ಪ್ರತ್ಯಕ್ಷದಲ್ಲಿ ವಿಜ್ಞಾಪನಾ ಪತ್ರಿಕೆಗಳ [illegible] ಪರಂತು ಗವರ್ನಮೆಂಟಿನ ಮೂಲಕ [illegible] ಕಳುಹಿಸಿಕೊಡಬಹುದೆಂತಲೂ, ಹಾಗೆ [illegible] ಪೂರ್ವಕವಾಗಿ [illegible] ವಿಜ್ಞಾಪನಾ ಪತ್ರಿಕೆಗಳು [illegible] ವೈಸರಾಯಿಯವರಿಗೆ ಅಧಿಕಾರ ಕೊಟ್ಟಿರುವಂತೆಯೂ ಮಹಾರಾಜ್ಞೀಯವರು ಆಜ್ಞಾಪಿಸಿರುವವಾಗಿ ಇಂಡಿಯಾ ಸ್ಟೇಟ ಸೆಕ್ರೆಟರಿಯವರು [illegible] ಮೂಲಕ ತಿಳಿಸಿರುವದರಿಂದ ಹೀಗೆ ವಿಜ್ಞಾಪನಾ ಪತ್ರಿಕೆಗಳು ಸಿದ್ಧಪಡಿಸುತಲಿರುವ ಸಂಘದವರು ಮಹಾರಾಜ್ಞೀಯವರ ತರಫ ವೈಸರಾಯಿಯವರ ವಶದಲ್ಲಿ ಸದರೀ ಪತ್ರಿಕೆಗಳನ್ನು ಒಪ್ಪಿಸಬೇಕೆಂದು ಕೋರುವ ಪಕ್ಷದಲ್ಲಿ ತಮ್ಮ ಅಭಿಪ್ರಾಯವನ್ನು ಕೂಡಲೆ ತಿಳಿಸಿದರೆ, ಅವರು [illegible] ಯೋಜನೆಗಳು ಮಾಡಲ್ಪಡುವವೆಂದು ಇಂಡಿಯಾ ಗವರ್ನಮೆಂಟ್ ಹೋಂ ಡಿಪಾರ್ಟ್ಮೆಂಟಿನ ಸೆಕ್ರೆಟರಿಯವರು ಆಯಾ ಸ್ಥಳಿಕ ಗವರ್ನಮೆಂಟುಗಳಿಗೆ ತಂತಿ ವರ್ತಮಾನ ಕೊಟ್ಟಿರುತ್ತಾರೆ.

ಇಂಗ್ಲೀಷಿನವರ ವಿಜ್ಞಾಪನಾಪತ್ರಿಕೆಗಳು ನಿರಾಕರಿಸಿ ಶ್ರೀಮನ್ಮಹಾರಾಜ್ಞೀಯವರು ಮೇಲೆ ತಿಳಿಸಲ್ಪಟ್ಟಿರುವ ರೀತಿಯಲ್ಲಿ ಹುಕುಂ ಕೊಡುವದಕ್ಕೆ ಪ್ರಥಮತಃ ಜವಾಬ್ದಾರರಾದವರು ಯಾರೇಯಾಗಲಿ, ಅವರು ತಮ್ಮ ಕೆಟ್ಟ ಸಲಹೆಯ ಪರಿಣಾಮವನ್ನು ಸ್ವಲ್ಪವೂ ತಿಳಿದವರಲ್ಲವು. ರಾಜ್ಞೀಯವರಿಗೆ ತಮ್ಮ ಪ್ರಜೆಗಳ ವಿಷಯದಲ್ಲುಂಟಾಗಿರುವ ಪ್ರಸಿದ್ಧವಾದ ಅನುರಾಗ [illegible] ಪ್ರತ್ಯಕ್ಷವಿರುದ್ಧವಾದ ಈ ನಡತೆಯ ಬಗ್ಗೆ ಈ ದೇಶದ ಪ್ರಜೆಗಳಿಗುಂಟಾದ [illegible] ಅದ್ಯಾಪಿ ತಪ್ಪಲಿಲ್ಲವು. ಇಂಗ್ಲೀಷ್ ದೇಶದ [illegible] ತೋರಿಸಿಕೊಟ್ಟು, ಮಹಾರಾಜ್ಞೀಯವರ ದೃಷ್ಟಿಯಲ್ಲಿಕೂಡ, ಆಕೆಯವರಿಂದ ೧೮೫೮ನೆಯ ಇಸವಿಯಲ್ಲಿ ಕೊಡಲ್ಪಟ್ಟ ಪ್ರಸಿದ್ಧವಾದ ಇಸ್ತಿಹಾರನಾಮೆಯಲ್ಲಿ ಅವರ ಇತರ ಪ್ರಜೆಗಳೂ ಇಂಡ್ಯ ದೇಶೀಯರೂ ಸಮಾನವಾದ ಮಾನವ

ರ್ಯಾಬೆಗಳಗೆ ಅರ್ಹರೆಂದು ತಿಳಿಸಲ್ಪಟ್ಟಿರುವದಾಗಿ ನಾವು ತಿಳಿದಿದ್ದದ್ದು ತಪ್ಪೆಂದು ಮಾರ್ಗಾಂತರವಾಗಿ ಸೂಚಿಸಬೇಕೆಂಬ ಅಭಿಪ್ರಾಯವು ಕೆಲವರಿಗೆ ಉಂಟಾಗಿ ಆರೀತಿ ಮಾಡುವಂತೆ ಕಾಣುತಿದೆ. ಇಂಡ್ಯಾ ದೇಶಕ್ಕೆ ಐನಂಬರ್ರೇಣ ಆಗೌರವನ್ನುಂಟು ಮಾಡಬೇಕೆಂಬ ಉದ್ದೇಶದೊಡನೆಯೂ, ಹಿಂದೆ ಕೊಡಲ್ಪಟ್ಟಿದ್ದ ಉದಾರವಾದ ಮಾಗ್ಯಾನಗಳಂ ತಪ್ಪಿಸಬೇಕೆಂಬ ಪ್ರಯತ್ನದೊಡನೆಯೂ ಆರೀತಿ ಈಗ ಮಾಡಿರುವದಕ್ಕಾಗಿ ಜನಗಳಿಗೆ ಉಂಟಾದ ಮನೋವ್ಯಾಧೆಯು ಅಪಾರವಾಗಿರುತದೆ ಕೇವಲ ಆತುರದೊಡನೆ ಕೊಡಲ್ಪಟ್ಟ ಹಾಸಿಕರವಾದ ಮೇಲಿನ ಹುಕುಮನ್ನು ಕುರಿತು ಮರಳಿ ಆಲೋಚಿಸುವದಕ್ಕೆ ಬೇಕಾದಷ್ಟು ಕಾಲವಿರುತದೆಯಾಗಿ ರಾಜ್ಞೀಯವರು ಪುನರ್ಯೋಚನೆಯಿಂದ ಅದನ್ನು ರದ್ದು ಮಾಡುವರೆಂದು ನಂಬುತ್ತೇವೆ

Occasional Notes
ಸ್ವೈಪುತ್ತ್ರಿಕ ವಿಷಯಗಳು

ತುರ್ಕಿಯವರು ಕಾನ್‌ಸ್ಟಾಂಟಿನೋಪಲ್ ಪಟ್ಟಣವನ್ನು ಗೆದ್ದು ಸ್ವಾಧೀನ ಮಾಡಿಕೊಂಡದ್ದು ಮೊದಲು ರಾಜ್ಯವನ್ನಾಳಿದ ಮೂವತ್ತೆಂಟು ಸುಲ್ತಾನರುಗಳಲ್ಲಿ ಮುವತ್ನಾಲ್ಕು ಮಂದಿ ಘೋರವಾದ ಮರಣವಂ ಹೊಂದಿರುತ್ತಾರೆ.

ಆಸ್ಟ್ರೇಲಿಯಾ ದೇಶದೊಳು ಜೂಗಸರು ಅಪರಾಧ ಮಾಡಿ ಬಂಧಿಸಲ್ಪಟ್ಟರೆ ಅವರನ್ನು ಸಮ್ರಾಜ್ಯಗಳಲ್ಲಿ ಕೆಲವು ಸಂವತ್ಸರಗಳ ಕಾಲ ಇಟ್ಟರೆ ಪ್ರತೀ ಜೂಜಿನ ಯಾವ ಸಂದರ್ಭದಲ್ಲಿಯೂ ಅವರನ್ನು ಜೈಲಿಗೆ ಕಳುಹಿಸುವದಾಗಲಿ ಗಡೀಪಾರು ಮಾಡುವದಾಗಲಿ ಅಲ್ಲಿ ವಾಡಿಕೆಯಿಲ್ಲವು.

ಮುಂಬೈ ಕೆಂಪವಾರದ ನೌಕರಿಯಲ್ಲಿರುವ ಗ್ರೀಸ್ ದೇಶದವರೆಲ್ಲ ಸ್ವದೇಶಾಭಿಮಾನದಿಂದ ನೌಕರಿಗೆ ಸಲಾಮು ಹೇಳಿ ತುರ್ಕಿಯವರ ಮೇಲೆ ಯುದ್ಧಕ್ಕೆ ಹೋಗಬೇಕೆಂಬ ಉದ್ದೇಶದೊಡನೆ ಸ್ವದೇಶಕ್ಕೆ ಹೊರಟು ಹೋದರೆಂದು ಅಲ್ಲಿನ ಪತ್ರಿಕೆಯೊಂದು ತಿಳಿಸುತದೆ

ಗವರ್ನರುಗಳು, ಲೆಫ್ಟಿನೆಂಟ್ ಗವರ್ನರುಗಳು, ಮೈಸೂರು ಬರೋಡ ಮುಂತಾದ ಸಂಸ್ಥಾನದ ರಸಿಡೆಂಟರುಗಳು, ಇವರೆಲ್ಲರು ಸರ್ಕಾರ ಕೆಲಸದ ಮೇಲಲ್ಲದೆ ಸ್ವಂತ ಕೆಲಸದ ಬಗ್ಗೆ ಇಂಡ್ಯಾ ದೇಶದ ರೈಲುಮಾರ್ಗಗಳಲ್ಲಿ ಸಂಚರಿಸುವ ಕಾಲದಲ್ಲಿ ಪ್ರೈವೇಟ್ ಗಾಡಿಗಳಂ ಪಡೆಯುವದಕ್ಕೆ ಬಾಡಿಗೆ ಕೊಡಬೇಕಾಗಿರುವದಾಗಿ ಇಂಡ್ಯಾ ಗವರ್ನ್‌ಮೆಂಟಿನವರು ನಿರ್ಣಯಿಸಿರುತ್ತಾರೆ

ಮಹಾರಾಜ್ಞೀಯವರ ದೀರ್ಘರಾಜ್ಯಕಾಲಿಕವಾದ ಆಳ್ವಿಕೆಯ ಜುಬಿಲಿ ಉತ್ಸವಕ್ಕಾಗಿ ಇಂಗ್ಲೆಂಡ್ ದೇಶದವರಿಗೆ ದ್ರವ್ಯ ಸಂಪಾದನೆ ಪೂರ್ಣವಾಗಿ ನಿಂತಿರುವಂತೆ ಕಾಣುತದೆ. ಸದರೀ ದಿನ ನಡೆಯುವ ಉತ್ಸವವಂ ನೋಡುವದಕ್ಕಾಗಿ ಕಿಟಕಿಗಳು, ಛಾವಣಿಗಳು, ಮೇಲು ಮನೆಗಳ ಬಗ್ಗೆ ಇದುವರೆಗೆ ೧೬ ಕೋಟಿ ರೂಪಾಯಿಗಳು ಬಾಡಿಗೆಯಬಗ್ಗೆ ಮುಂಗಡವಾಗಿ ಮಾಲೀಕರುಗಳಿಗೆ ಪಾವತಿಯಾಗಿರುವಂತೆ ಒಂದಾನೊಂದು ಪತ್ರಿಕೆಯ ಲಂಡನ್ ವೃತ್ತಾಂತ ಲೇಖಕರೊಬ್ಬರು ಬರೆದಿರುತ್ತಾರೆ.

ಈಗ್ಗೆ ಕೆಲವು ದಿನಗಳ ಮೊದಲು ತುರ್ಕೀಯವರಿಗೂ ಗ್ರೀಸ್ ದೇಶೀಯರಿಗೂ ಯುದ್ಧ ನಡೆಯುತಲಿದೆಯಷ್ಟೆ. ಸದರೀ ಯುದ್ಧವನ್ನು ಕುರಿತು ಈಚೆಗೆ ಬಂದ ತಂತಿ ವೃತ್ತಾಂತದ ಮೂಲಕ ತಿಳಿಯಬರುವದೇನೆಂದರೆ:—ಮೇಲೆ ತಿಳಿಸಿರುವ ಉಭಯ ಸಂಸ್ಥಾನದವರಿಗೂ ಕಳೆದ ತಿಂಗಳ ೨೬ನೇ ತಾರೀಖು ವರೆಗೆ ಆರು ದಿನಗಳ ಕಾಲ ಅವಿಚ್ಛಿನ್ನವಾಗಿ ನಡೆದ ಯುದ್ಧದಲ್ಲಿ ತುರ್ಕೀಯವರ ಸೈನ್ಯ ಬಾಹುಳ್ಯದಿಂದ ಗ್ರೀಸ್‌ದೇಶದ ಸೈನ್ಯವು ಸೋಲಿಸಲ್ಪಟ್ಟು ಹಿಮ್ಮೆಟ್ಟಲು ತುರ್ಕೀ ಸವಾರ್ ಸೈನಿಕರು ಅವರ ಬೆನ್ನಟ್ಟಿಕೊಂಡು ಮುಂದಕ್ಕೆ ಹೋಗಿ ಅಮಿತವಾಗಿ ಪ್ರಾಣಹಾನಿಗಳನ್ನುಂಟುಮಾಡಿದರು.

ಈಗ ಉತ್ತರ ದೇಶದೊಳು ಪ್ರಬಲವಾಗಿರುವ ದುರ್ಭಿಕ್ಷವು ದಿನೇದಿನೇ ಪ್ರಬಲಿಸುತಲಿರುವಂತೆ ಅದನ್ನು ಕುರಿತ ಕಳೆದವಾರದ ಲೆಕ್ಕದಿಂದ ತಿಳಿಯಬರುತಿದೆ. ಆಬೇವಾರದಲ್ಲಿ ೩೧,೭೧,೦೦೦ ಮಂದಿ ಬಡಜನರು ಕ್ಷಾಮ ನಿವಾರಕ ಕಾಮಗಾರಿಗಳ ಮತ್ತು ಧರ್ಮಾರ್ಥ ಸ್ಥಾಪಿಸಲ್ಪಟ್ಟಿರುವ ಅನ್ನಸತ್ರಗಳ ಮೂಲಕ ಜೀವಿಸುತಲಿದ್ದರು. ಇದು ನೋಡಲಾಗಿ ಅದರ ಹಿಂದಿನ ವಾರಕ್ಕಿಂತಲು ೧,೬೪,೦೦೦ ಮಂದಿ ಜಾಸ್ತಿಯಾದಂತೆ ತೋರ್ಪಡುತಿದೆ. ಬಂಗಾಳೇದೇಶದೊಳು ೫೯,೦೦೦ ವಾಯುವ್ಯ ದೇಶದಲ್ಲಿ ೫೮,೦೦೦ ಮದರಾಸ್ ಪ್ರೆಸಿಡೆನ್ಸಿಯಲ್ಲಿ ೩೦,೦೦೦, ಬರಾರ್ ಪ್ರಾಂತದಲ್ಲಿ ೧೨,೦೦೦ ಈರೀತಿ ಜಾಸ್ತಿಯಾಗಿರುತದೆ. ಉತ್ತರ ದೇಶದ ತಾತ್ಕಾಲಿಕ ಸ್ಥಿತಿಯಂ ಕುರಿತು ಯೋಚಿಸಲಾಗಿ ಧಾತು ಈಶ್ವರ ಸಂವತ್ಸರಗಳಲ್ಲಿ ದಕ್ಷಿಣ ದೇಶದೊಳು ಪ್ರಾಪ್ತವಾದ ಘೋರಕ್ಷಾಮಕ್ಕಿಂತಲು ಪ್ರಕೃತ ಕ್ಷಾಮವು ಕಠಿಣವಾಗಿರುವಂತೆ ಕಾಣುತಿದೆ

ಇಂಡ್ಯಾ ರಾಜ್ಯದ ಗವರ್ನರ್ ಜನರಲ್ ಸಾಹೇಬರವರು ಇದರ ತಿಳಿಸಲ್ಪಡುವಂತೆ ಆಯಾ ಸ್ಥಳಿಕ ಗವರ್ನ್‌ಮೆಂಟುಗಳಿಗೆ ಬರೆದಿರುತ್ತಾರೆ:—

ಇಂಗ್ಲೆಂಡ್ ಚಕ್ರವರ್ತಿನೀಯವರ ಆಳ್ವಿಕೆಯ ಅರವತ್ತನೆಯ ಸಂವತ್ಸರದ ಪೂರ್ತಿಯಬಗ್ಗೆ ೧೮೯೭ನೇ ಇಸವಿ ಜೂನ್ ತಿಂಗಳ ೨೧ ಮತ್ತು ೨೨ನೇ ತಾರೀಖುಗಳು ಇಂಡ್ಯಾ ದೇಶದಲ್ಲೆಲ್ಲ ಕಡೆಯಲ್ಲೂ ರಜಾದಿನಗಳಾಗಿ ಆಚರಿಸಲ್ಪಡತಕ್ಕದ್ದು

೨ ಇಂಡ್ಯಾ ದೇಶದ ಬಹುಭಾಗದಲ್ಲಿ ಕ್ಷಾಮವೂ ಪ್ಲೇಗು ರೋಗವೂ ವ್ಯಾಪಿಸಿರುವ ಈ ಕಾಲದಲ್ಲಿ ಪ್ರಜೆಗಳು ಪ್ರಬಲಗಳಾದ ಉತ್ಸವಗಳಂ ಮಾಡುವದಾಗಲಿ, ಸಭೆಗಳು ಸೇರುವಂತೆ ಯಾಗಲಿ ಪ್ರೋತ್ಸಾಹ ಪಡಿಸುವದು ಅಸಂಗತವೆಂದು ಗವರ್ನರ್ ಜನರಲ್ ಸಾಹೇಬರವರು ಅಭಿಪ್ರಾಯಪಡುತ್ತಾರೆ.

೩ ಸರ್ಕಾರೀ ಅಧಿಕಾರಿಗಳು, ೧೮೮೭ನೇ ಇಸವಿಯ ಜೂಬಿಲಿ ಉತ್ಸವಕಾಲದಲ್ಲಿ ನಡೆಸಲ್ಪಟ್ಟಂತೆ ಈ ಸಂದರ್ಭದಲ್ಲಿಯೂ, ರಾಜ್ಞೀಯವರ ಆಳ್ವಿಕೆಯ ಷಷ್ಟ್ಯಬ್ದಪೂರ್ತಿ ಉತ್ಸವಾಚರಣೆಯ ಜ್ಞಾಪಕಾರ್ಥವಾಗಿ ಪ್ರಜೆಗಳ ಒಳ್ಳೆಯದಕ್ಕೆ ಬಿಟ್ಟುಬಿಡುವದೆಂಬ ಯಂತ್ರಸೂಚಕ ಸಮಾಜಗಳನ್ನು ಗವರ್ನರ್ ಜನರಲ್ ಸಾಹೇಬರವರು ದೃಢವಾಗಿ ನಂಬಿರುತ್ತಾರೆ, ಎಂಬದು.

LOCAL AND PROVINCIAL NEWS.
ಒಳದೇಶಮತ್ತು ತಾಲ್ಲೂಕಿನ ವೃತ್ತಾಂತಗಳು.

ಈ ಸಂಸ್ಥಾನದ ಕೌನ್ಸಿಲ್ ಮೆಂಬರುಗಳೆಲ್ಲರು ಇದುವರೆಗೆ ಮೈಸೂರಿನಲ್ಲಿ ವಾಸವಾಗಿದ್ದರಷ್ಟೆ ಅವರೆಲ್ಲರು ಕಳೆದ ವಾರದಲ್ಲಿ ಇಲ್ಲಿಗೆ ವಾಪಸು ಬಂದು ಸೇರಿದರು.

ಮೈಸೂರು ಅರಮನೆಯ ಜವಾನಿಗಳಂ ಕಡಿಮೆ ಮಾಡಿ ಹೊಸದಾಗಿ ಒಂದು ಪದ್ಧತಿಯಂ ನಡೆಸುವದಕ್ಕಾಗಿ ಯೋಜಿಸಲ್ಪಟ್ಟ ಕಮಿಟಿಯವರು ತಮ್ಮ ಕೆಲಸಗಳಂ ಪೂರೈಸಿ ಆಬಗ್ಗೆ ತಮ್ಮ ರಿಪೋರ್ಟನ್ನು ಸಹ ಕಳುಹಿಸಿರುವರೆಂದು ಕೇಳುತ್ತೇವೆ.

ಹಿಂದಿನ ವಾರದ ಪತ್ರಿಕೆಯ ಮೂಲಕ ತಿಳಿಸಿದ್ದಂತೆ ಶ್ರೀಮನ್ಮಹಾರಾಣೀ ರೀಜಂಟರವರು ಶ್ರೀಮನ್ಮಹಾರಾಜರವರು ಮೊದಲಾದವರೊಡನೆ ಕಳೆದ ತಿಂಗಳ ೨೭ನೇ ತಾರೀಖಿನಲ್ಲಿ ನೀಲಗಿರಿ ಸೇರಿದರು. ಅಲ್ಲಿ ಮಹಾರಾಣಿಯವರ ಆಗಮನಸೂಚಕವಾದ ಶೋಭೆ ಮೊದಲಾದ ಮರ್ಯಾದೆಗಳೆಲ್ಲವು ನೆರವೇರಿಸಲ್ಪಟ್ಟವು.

ಶ್ರೀವೈಷ್ಣವ ಮತೋದ್ಧಾರಕರಾದ ಶ್ರೀರಾಮಾನುಜಾಚಾರ್ಯರವರ ತಿರುನಕ್ಷತ್ರದ ಮುಖ್ಯವಾದ ಉತ್ಸವವು ಇಲ್ಲಿನ ತುಲಸೀ ತೋಟದ ಶ್ರೀಕೃಷ್ಣಸ್ವಾಮಿ ದೇವಾಲಯದಲ್ಲೂ, ಶ್ರೀನಿವಾಸಮಂದಿರದಲ್ಲೂ ಕಳೆದ ಮಂಗಳವಾರದದಿನ ಪ್ರಾರಂಭವಾಗಿ ವಿಜೃಂಭಣೆಯಿಂದ ನಡೆಯುತಲಿದೆ. ವಿದ್ವಜ್ಜನ ಪರಿಷತ್ತುಗಳಿಂದ ಅಧ್ಯಾಪಕರು ಸಹ ಕರೆಯಿಸಲ್ಪಟ್ಟಿರುತ್ತಾರೆ

ಈಗ್ಗೆ ನಾಲ್ಕೈದು ದಿನಗಳ ಮೊದಲು ಆಗಿಂದಾಗ್ಗೆ ಮಳೆಯಾಗುತಲಿದೆ. ಪರಂತು ವರ್ಷ ಬೀಳುವದಿಲ್ಲವು. ಅದರ ಸೂಚನೆಗಳು ಮಾತ್ರ ಅಧಿಕವಾಗಿವೆ. ಡಿಸ್ಟ್ರಿಕ್ಟು ಜಾತಿನಲ್ಲಿ ಕೆಲವು ತಾಲ್ಲೂಕುಗಳೊಳು ಹಿಂದೆರಡು ದಿವಸಗಳ ವರ್ಷ ಬಿದ್ದಂತೆ ಸರ್ಕಾರೀ ರಿಪೋರ್ಟಿನ ಮೂಲಕ ತಿಳಿಯಬರುತಿದೆ. ಬೆಳೆಸಿಗಳ ಧಾರಣೆಗಳು ಒಂದೇವಿಧವಾಗಿವೆ. ರೋಗಾದ್ಯುಪದ್ರವಗಳು ಯಾವದೂ ಯಿಲ್ಲವು. ಜನಾರೋಗ್ಯತೆ ಸಾಮಾನ್ಯವಾಗಿದೆ.

ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರಾದ ಮೆ॥ ವಿ. ಪಿ. ನರಸಿಂಹಯ್ಯಂಗಾರ್ಯವರನ್ನು ಅರಮನೆಯ ಕಂಟ್ರೋಲರವರಾಗಿ ನಿಯಮಿಸಬೇಕೆಂದು ಶ್ರೀಮನ್ಮಹಾರಾಣೀ ರೀಜಂಟರವರು ನಿಷ್ಕರ್ಷಿಸಿರುವಂತೆ ಕಳೆದ ತಿಂಗಳ ೨೯ನೇ ತಾರೀಖಿನ ಮದರಾಸ ಹಿಂದೂ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುವುದರಿಂದ ಈ ವಿಚಾರವು ಕೇವಲ ಪ್ರವಾದರೂಪವಾಗಿ ಪರಿಣಮಿಸದೆ ಕಾರ್ಯತಃ ಆಚರಣೆಯಲ್ಲಿ ತರಲ್ಪಡುವದೆಂದು ನಂಬುತ್ತೇವೆ.

ಮೈಸೂರ್ ರಾಜಧಾನಿಯಲ್ಲಿ ಪ್ರಕಟವಾಗುವ ಸ್ಟಾಂಡರ್ಡ್ ಎಂಬ ಪತ್ರಿಕೆಯ ಎಡಿಟರವರ ಮೇಲೆ ಏನೋ ಅಪಮಾನಕರವಾದ ವಿಷಯವನ್ನು ಪ್ರಕಟಿಸಿದ್ದಾರೆಂದು ಹೇಳಿ ಇಲ್ಲಿನ ಡಿಸ್ಟ್ರಿಕ್ಟ್ ಆಫೀಸ್ ರೆವಿನ್ಯೂ ಶಿರಸ್ತೇದಾರ್ರಾದ ಮೆ॥ ಕೃಷ್ಣಯ್ಯಂಗಾರ್ರು ಮೇಲ್ಕಂಡ ಎಡಿಟರ ಮೇಲೆ ಟೌನ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮೊನ್ನೆಯದಿನ ಛಾರ್ಜು ದಾಖಲ್ಮಾಡಿ ಸಾಕ್ಷಿಯನ್ನು ಕೊಟ್ಟಿರುವರೆಂತಲೂ, ಅಡ್ವೊಕೇಟ್ ಲಕ್ಷ್ಮೀನರಸಿಂಹಯ್ಯಂಗಾರ್ರು ಫಿರ್ಯಾದಿ ತರಫೆ ವಕೀಲರಾಗಿದಾರೆಂತಲೂ ಕೇಳಬಂತು—ವೃ ಪ.

ಶಿವಮೊಗ್ಗೆಯಲ್ಲಿರುವ ಸರ್ವೇಯರ್ ಚಿನ್ನರಪ್ಪಪಿಳ್ಳೈ ಎಂಬವರು ತಮ್ಮ ಆಳು ಅಂತೋನಿ ಎಂಬವನನ್ನು ಮೂತ್ರಸ್ಥಾನದ ಮೇಲೆ ಒದ್ದು ಹಿಂಸೆ ಪಡಿಸಿ ಸದರೀ ಅಂತೋನಿ ಒಂದು ತಿಂಗಳ ಮೇಲೆ ಆಸ್ಪತ್ರೆಯಲ್ಲಿ ಮೃತಪಟ್ಟನು ಈ ಕೇಸು ಸೆಷನ್ ಕಮಿಟಿ ಆಗಿ ಚಿನ್ನರಪ್ಪಪಿಳ್ಳೆಗೆ ೨೦೦ ರೂಪಾಯಿ ಜುರ್ಮಾನೆ ಕೋರ್ಟ್ ಬರಖಾಸ್ತು ಆಗುವವರೆಗೆ ಸಜಾ ಆಯಿತು. ದೀಪಕ್ಕೆ ಎಣ್ಣೆಯಿಲ್ಲ, ತರಬೇಕೆಂಬದಾಗಿ ಮೃತಪಟ್ಟ ಅಂತೋನಿಗೆ ಹೇಳಿದ್ದಕ್ಕೆ ಇಷ್ಟುರಾತ್ರಿ ಆದ ಮೇಲೆ ಹೇಳುತ್ತೀಯಾ ಎಂದು ಒದ್ದನೆಂದು ತಿಳಿಯಬರುತ್ತೆ. ಧಣಿಯರು ನೌಕರರುಗಳನ್ನು ದಂಡಿಸುವ ವಿಧಾನ ಇದೇಯೋ?—ವೃ ಪ.

ಈಗ ಮೈಸೂರು ಅರಮನೆಯನ್ನು ನೂತನವಾಗಿ ಕಟ್ಟಿಸಬೇಕೆಂದು ವ್ಯವಸ್ಥೆಯಾಗಿರುತದೆಯಷ್ಟೆ. ಈಬಗ್ಗೆ ಹಿಡಿಯಬಹುದಾದ ಖರ್ಚುಗಳೆಲ್ಲವು ಸಂಸ್ಥಾನದ ಮರಾಮತಿ ಇಲಾಖೆಯ ಬಜೆಟ್ಟಿಗೆ ಸೇರಿಸಲ್ಪಟ್ಟು ಅದಕ್ಕೆ ಬೇಕಾದ ದ್ರವ್ಯವು ಮುಂದಿನ ಯೆರಡು ವರ್ಷಗಳಲ್ಲಿ ಕೊಡಲ್ಪಡತಕ್ಕದ್ದೆಂದು ಏರ್ಪಾಡಾಗಿರುವಂತೆಯೂ, ಅರಮನೆಯಲ್ಲಿ ಮುಂದೆ ನಡೆಯಬಹುದಾದ ವಿಶೇಷ ಸಂದರ್ಭಗಳಲ್ಲಿ ತಾತ್ಕಾಲಿಕವಾಗಿ ಕಟ್ಟಲ್ಪಡಬೇಕಾದ ಚಪ್ಪರಗಳಿಗೆ ಬದಲು ಬೆಂಕಿ ಅಂಟುವದಕ್ಕೆ ಅವಕಾಶ ಕೊಡದ ಸಾಮಗ್ರಿಗಳಿಂದ ಕಾಯವಾಗಿ ಒಂದು ಚಪ್ಪರವಂ ನಿರ್ಮಾಣ ಮಾಡುವದಕ್ಕೆ ತಕ್ಕ ಉಪಾಯವಂ ಯೋಚಿಸತಕ್ಕದ್ದೆಂದು ಮರಾಮತ್ ಇಲಾಖಾ ಅಧಿಕಾರಿಗಳಿಗೆ ಹುಕುಂ ಕೊಟ್ಟಿರುವಂತೆಯೂ ಕೇಳುತ್ತೇವೆ

ಚೆನ್ನಪಟ್ಟಣದ ಆರ್ಯಮತ ಸಂಘವು.
ಉದ್ದೇಶಗಳು.

ಆರ್ಯಧರ್ಮಗಳನ್ನು ಕ್ರಮವಾಗಿ ಅನುಷ್ಠಿಸುವದಕ್ಕೂ, ಹಿಂದೂ ದೇಶವು ಕ್ಷೇಮವಂ ಹೊಂದಿ ಚೆಂದುಂದಿರುವದಕ್ಕೂ, ಇಹಪರ ಸಾಧಕಂಗಳಾದ ಮನೋಭ್ಯಾಸವು, ನಿತ್ಯಾಭಿವೃದ್ಧಿ, ಆತ್ಮ ಸಾಯುಜ್ಯವು, ಇವುಗಳನ್ನು ನಮ್ಮ ದೇಶಸ್ಥರೆಲ್ಲರೂ ಪಡೆದು ಕೃತಾರ್ಥರಾಗುವದಕ್ಕೆ ನಮ್ಮ ಕೈಯಲ್ಲಾದ ಮಟ್ಟಿಗೆ ಪ್ರೋತ್ಸಾಹವಂ ಮಾಡುವದಕ್ಕೂ, ಬರುವ ಕಾಲದ ಸಂತತಿಯವರಾದ ನಮ್ಮ ದೇಶದ ಹುಡುಗರಿಗೆ ಆರ್ಯರಪದ್ಧತಿ, ಯುಕ್ತವಾದ ನೀತಿಮಾರ್ಗವು, ಮತವಿಚಾರವು, ಇವುಗಳಂ ಬೋಧಿಸಿ ಅವರಂ ನೀತಿಮಾರ್ಗವಂ ತೊರೆಯದಂತೆ ಮಾಡುವದಕ್ಕೂ, ಸಾಮಾನ್ಯ ಜನರೂ, ಪಾಮರರೂ, ಆಯುರಾರೋಗ್ಯಾದಿ ಸಂಪತ್ತುಗಳಂ ಹೊಂದುವದಕ್ಕೆ ಅನುಗುಣವಾದ ವಿಷಯಂಗಳಂ ತಿಳಿಯಪಡಿಸಿ ಅವರಿಗೆ ಜ್ಞಾನಾಭಿವೃದ್ಧಿಯನ್ನುಂಟು ಮಾಡುವದಕ್ಕೆ ಯತ್ನಪಡುವದಕ್ಕೂ, "ಆರ್ಯಮತಸಂಘವು" ಎಂಬ ಈ ಸಮಾಜವು ಧಾತು ನಾಮ ಸಂವತ್ಸರ ಮಾಘ ಬಹುಳ ಪಂಚಮಿಯಲ್ಲಿ ಚೆನ್ನಪಟ್ಟಣದೊಳು (ಮದ್ರಾಸಿನಲ್ಲಿ) ಸ್ಥಾಪಿಸಲ್ಪಟ್ಟಿತು.

ಕಾರ್ಯವಿಭಾಗಗಳು.

೧ ಸಂಸ್ಕೃತ ಧರ್ಮ ಪಾಠಶಾಲೆ.—ಸಾಧ್ಯವಾದ ಸ್ಥಳಂಗಳಲ್ಲಿ ಸಂಸ್ಕೃತ ಧರ್ಮ ಪಾಠಶಾಲೆಗಳನ್ನೇರ್ಪಡಿಸಿ, ಮತ ನೀತ್ಯಾಚಾರಂಗಳು ಸಮಸ್ತಜನರಿಗೂ ಉಚಿತಾರ್ಥವಾಗಿ ಬೋಧಿಸಲ್ಪಡುವವು. ಬಾಲಕರು, ವಯೋಧಿಕರು ಸಹ ಓದುವದಕ್ಕೆ ಅನುಕೂಲ್ಯವುಂಟು. ಕಾಲಕ್ರಮೇಣ ದ್ರವ್ಯ ಸಹಾಯಕ್ಕೆ ತಕ್ಕಂತೆ ಸಂಸ್ಕೃತ ಪಾಠಶಾಲೆಗಳಲ್ಲಿ ದೇಶಭಾಷೆಯೂ, ಲೌಕಿಕ ವೃತ್ತಿಗೆ ಆವಶ್ಯಕವಾದ ಇಂಗ್ಲಿಷ್ ಭಾಷೆಯಂ ಕಲಿಸಿಕೊಡುವದಕ್ಕೆ ಯೋಚನೆಗಳು ಮಾಡಲ್ಪಡುವವು. ಚೆನ್ನಪುರಿ ಯೊಳಗಿನ ಒಂದೊಂದು ಪೇಟೆಯಲ್ಲಿ ಒಂದೊಂದು ಪಾಠಶಾಲೆಯನ್ನು ನಿಯಮಿಸುವದಲ್ಲದೆ, ಇತರ ಗ್ರಾಮಂಗಳಲ್ಲಿ ಕೂಡ ಪಾಠಶಾಲೆಗಳನ್ನೇರ್ಪಡಿಸುವದಕ್ಕೆ ನಾವು ಪ್ರಯತ್ನವಂ ಮಾಡುತ್ತೇವೆ. ಈ ಹೇವಿಳಂಬಿನಾಮ ಸಂವತ್ಸರ ಚೈತ್ರಶುದ್ಧ ಪ್ರಥಮೆಯಲ್ಲಿ ಚೆನ್ನಪಟ್ಟಣಕ್ಕೆ ಸೇರಿದ ಮಯಿಲಾಪುರದಲ್ಲಿ ಶ್ರೀ ಕಪಾಲೀಶ್ವರಸ್ವಾಮಿ ಸನ್ನಿಧಿಯಲ್ಲಿ ಒಂದು ಶಾಲೆಯನ್ನು ಸ್ಥಾಪಿಸಿರುತ್ತೇವೆ.

೨. ಉಪನ್ಯಾಸಗಳು:—ವಿಶೇಷ ವಿದ್ಯಾವಂತರಾದ ಪಂಡಿತರುಗಳನ್ನೂ, ಅನುಭವಶಾಲಿಗಳಾದವರನ್ನೂ ಅನುಸರಿಸಿ, ಅವರಂ ಪ್ರಾರ್ಥಿಸಿ, ಅವರಿಂದ ಎಲ್ಲಾ ಗ್ರಾಮಂಗಳಲ್ಲಿಯೂ ಆರ್ಯಮತ ವೇದಾಂತ ಸಿದ್ಧಾಂತ ವಿಷಯಗಳನ್ನೂ, ಯೋಗಾದಿ ಕ್ರಮಗಳನ್ನೂ ಕುರಿತು ಆಗಾಗ್ಗೆ ಉಪನ್ಯಾಸಗಳಂ ಕೊಡುವಂತೆ ಮಾಡಿ ಇಷ್ಟಗೋಷ್ಠಿಯೊಡನೆ ಸಂಬಂಧಿಸಿದ ಪಂಡಿತ ಮಹಾಶಯರುಗಳು ಆನಂದವಂ ಪಡುವಂತೆ ಮಾಡುವದು. ಶಾಸ್ತ್ರ ರಹಸ್ಯಂಗಳಂ ಪರಿಶೋಧಿಸಿ ಅವಂ ಉಪನ್ಯಾಸಪೂರ್ವಕ ಬೈಲುಮಾಡಿದ ಪಕ್ಷದಲ್ಲಿ ಸುಲಭದಿಂದ ಜ್ಞಾನಾಭಿವೃದ್ಧಿ ಹೊಂದುವದಕ್ಕೆ ದೊಡ್ಡ ಸಾಧನವಾಗಿರುವದೆಂದು ನಂಬುತ್ತೇವೆ.

೩. ಪದ್ಮಸರೋವರವು.—ಪ್ರತಿ ಭಾನುವಾರದಲ್ಲಿಯೂ ಬಾಲಕರನ್ನೆಲ್ಲ ಒಂದುಕಡೆ ಸೇರಿಸಿ ಅವರಿಗೆ ತಕ್ಕಷ್ಟು ನೀತಿ ಮತ ಆಚಾರ ವಿಷಯಗಳಂ ಬೋಧಿಸಿಕೊಂಡು ಬರುತ್ತೇವೆ. ಈ ರೀತಿಯಿಂದ ಅನೇಕ ಸಭೆಗಳಂ ಹುಡುಗರ ನಿಮಿತ್ತ ಏರ್ಪಡು ಮಾಡುವದಕ್ಕೆ ಪ್ರಯತ್ನವಂ ಮಾಡಲಾಗುವದು. ಬಾಲಕರ ಸಭೆಗೆ "ಪದ್ಮ ಸರೋವರವು" ಎಂಬ ಹೆಸರನ್ನು ಇಟ್ಟಿರುವೆವು. ಬಾಲಕರ ಮನಸ್ಸಿನಲ್ಲಿ ನೀತಿ ಬೀಜವಂ ಬಿತ್ತಿ ಬೇರು ದೃಢಪಟ್ಟು ವೃದ್ಧಿ ಹೊಂದಿಸುವದಕ್ಕೆ ಇಂತ ಮಾರ್ಗದಲ್ಲಿ ಉಪಾಯವಾಗಿ ಪ್ರಾರಂಭಿಸುವದಕ್ಕೆ ಉದ್ಯುಕ್ತರಾದೆವು ಇನ್ನು ಬೇಕಾದ ಮಾರ್ಗಗಳನ್ನೂ, ಅನುಕೂಲ್ಯಗಳನ್ನೂ, ಕಲ್ಪಿಸಿ ಈ ಶಾಖೆಯು ಎಲ್ಲಾ ಗ್ರಾಮಗಳಲ್ಲಿಯೂ ಪ್ರಬಲವಾಗುವಂತೆ, ಪ್ರಯತ್ನಿಸುವದಕ್ಕೆ ಸ್ವದೇಶಸ್ಥರು ಎಮಗೆ ಸಹಾಯವಾಗುವರಾಗಲಿ.

೪ ಸತ್ಯಸಾಧನಿ:—ಈ ಹೆಸರುಳ್ಳ ಒಂದು ಮಾಸ ಪತ್ರಿಕೆಯು ತೆಲುಗು ಭಾಷೆಯಲ್ಲಿ ಆರ್ಯಮತ ಸಂಘದಲ್ಲಿ ಸೇರಿದವರಿಂದ ಪ್ರಚುರಿಸಲ್ಪಡುವದು ತತ್ಕಾಲದಲ್ಲಿ ಇದು ಸಂಘದ ಪತ್ರಿಕೆಯಾಗಿ ಅಂಗೀಕರಿಸಲ್ಪಟ್ಟಿರುವದು. ಇದರಲ್ಲಿ ಆರ್ಯಧರ್ಮ ವಿಷಯಗಳೂ, ಯೋಗ ವೇದಾಂತ ರಹಸ್ಯಗಳೂ, ಶಾಸ್ತ್ರಾರ್ಥಗಳೂ ಬರೆಯಲ್ಪಡುವದು. ಈ ಪತ್ರಿಕೆಗೆ ಅಸಲಿಗೆ ಚಂದಾ ರೂಪಾಯಿಗಳು ೩—೦—೦. ಅತಿ ಶೀಘ್ರ ಕಾಲದಲ್ಲಿ ಕರ್ನಾಟಕ ಭಾಷೆಯಲ್ಲಿಯೂ ಇಂತಾ ಪತ್ರಿಕೆಯು ಪ್ರಚುರ ಪಡಿಸಲ್ಪಡುವದು.

೫. ಭಕ್ತವಿಲಾಸವು:—ವಾರಕ್ಕೊಮ್ಮೆ ಭಗವದ್ಗೀತಾ ಶ್ರವಣ ಕಾಲಕ್ಷೇಪವು ಜರುಗುತದೆ. ವ್ಯಾಖ್ಯಾನ ಸಹಿತವಾಗಿ ಮೂಲವನ್ನು ಓದಿ ಅರವ ಭಾಷೆಯಲ್ಲಿಯೂ, ಇತರ ಭಾಷೆಯಲ್ಲಿಯೂ ಅರ್ಥವು ಹೇಳಲ್ಪಡುವುದು. ಈಗ ಪ್ರತಿ ಶನಿವಾರದಲ್ಲಿಯೂ ಸಾಯಂಕಾಲದಲ್ಲಿ ಜರುಗುತದೆ. ಇನ್ನು ಮೇಲೆ ಇತರ ಗ್ರಂಥಗಳೂ ಕೂಡ ಈಪ್ರಕಾರವಾಗಿ ಓದಲ್ಪಡುವವು ಇಷ್ಟವಾದವರೆಲ್ಲರು ಬಂದು ಕೇಳಿ ಆನಂದವಂ ಹೊಂದಬಹುದು.

೬. ಇಷ್ಟಾಪಠನಶಾಲೆ.—ಮತವಿಷಯವು, ವೇದಾಂತ ವಿಚಾರವು, ಪ್ರಕೃತಿಶಾಸ್ತ್ರವು, ಆತ್ಮವಿದ್ಯೆ, ಮಾನಸಿಕ ತತ್ತ್ವವಿಚಾರವು ಮೊದಲಾದ ವಿಷಯಂಗಳಂ ಬೋಧಿಸತಕ್ಕಂತಾ ಸುಮಾರು ೪೦ ಪತ್ರಿಕೆಗಳು ಸಂಘದ ಕಾರ್ಯಸ್ಥಾನದ ಮೇಜಿನಮೇಲೆ ಇಟ್ಟಿರುತ್ತೇವೆ. ಓದುವದಕ್ಕೆ ಅಭಿಲಾಷೆಯುಳ್ಳವರೆಲ್ಲರು ತಮ್ಮ ಇಷ್ಟಾನುಸಾರ ಓದಿ ಓದಬಹುದು. ಆದುದರಿಂದ ಇದಕ್ಕೆ ಇಷ್ಟಾಪಠನಶಾಲೆ ಎಂದು ಹೆಸರಿಡಲ್ಪಟ್ಟಿತು. ಈ ಸಂಘದಲ್ಲಿ ಸೇರಿದವರು ಮಾತ್ರವೇ ಬಂದು ಓದಬಹುದೆಂಬ ನಿಬಂಧನೆ ಇಲ್ಲ. ಮೇಲೆ ವಿವರಿಸಲ್ಪಟ್ಟ ಪತ್ರಿಕೆಗಳಲ್ಲಿ ವಿಲಾಯತಿ ಪತ್ರಿಕಾ ರತ್ನಂಗಳೇ ಸ್ವಲ್ಪವು. ಉಳಿದವುಗಳಲ್ಲಿ ಒಂದು ರೂಪಾಯಿ ಸಂಚಿಕೆಗಳವರಿಂದಲೂ ಓದಬಹುದು. ತೆಲುಗು, ಅರವ, ಕನ್ನಡ ಪತ್ರಿಕೆಗಳು ಸಹ ಇರುತವೆ.

೭. ಸರಸ್ವತೀ ವಿಲಾಸವು:—ಸಂಸ್ಕೃತವು, ಕನ್ನಡ, ತೆಲುಗು, ಅರವ, ಇಂಗ್ಲಿಷ್ ಈ ಭಾಷೆಗಳಲ್ಲಿ ಸುಮಾರು ೧೦೦ ಪುಸ್ತಕಗಳು ಸಂಘದಕಾರ್ಯಸ್ಥಾನದಲ್ಲಿ ಇಡಲ್ಪಟ್ಟಿರುವದು. ಇಂತಾ ಪುಸ್ತಕಂಗಳಂ ಓದುವದಕ್ಕೆ ಇಷ್ಟಪಟ್ಟವರೆಲ್ಲರು ಬಂದು ಓದಬಹುದು. ಪುಸ್ತಕಂಗಳನ್ನು ಮಾತ್ರ ತಮ್ಮ ಮನೆಗೆ ತೆಗೆದುಕೊಂಡು ಹೋಗಕೂಡದು. ಇನ್ನು ಅನೇಕ ಪುಸ್ತಕಂಗಳಂ ತರಿಸಿ ಇಡುವದಕ್ಕೆ ಎಲ್ಲರು ಸಹಾಯವಂ ಮಾಡುವರೆಂದು ನಂಬುತ್ತೇವೆ.

ಮೇಲೆ ವಿವರಿಸಲ್ಪಟ್ಟ ಈ ಕಾರ್ಯಗಳು ಒಬ್ಬರಿಂದಲ್ಲಿ ನೆರವೇರತಕ್ಕದ್ದಲ್ಲವು. ಆದ್ದರಿಂದ ದೇಶಾಭಿಮಾನಿಗಳೂ ಆರ್ಯಮತೋದ್ಧಾರಕ ಬುದ್ಧಿಯುಳ್ಳ ಪುಣ್ಯರೂ ಈ ಸಂಘಕ್ಕೆ ಸಹಾಯವಂ ಮಾಡಿ ಬಹುವಿಧ ಸಾಧನಂಗಳಂ ಕೊಟ್ಟು ಈ ಪುಣ್ಯಕಾರ್ಯವು ನಿರ್ವಿಘ್ನವಾಗಿ ಜರುಗುವಂತೆ ಮಾಡಿ ಒಸಗಳ ಕೀರ್ತಿಯನ್ನು ಹೊಂದಿ ಕರ್ಮಯೋಗಫಲವಾದ ಸಾಕ್ಷಾತ್ಕಾರವನ್ನು ಕೈಗೊಂಡು ಚಿರಂಜೀವಿಗಳಾಗಿರಬೇಕೆಂದು ಕೋರುತ್ತೇವೆ ಆರ್ಯಭ್ರಾತೃಗಳು ದಯಪ್ಪರು ತಮ್ಮ ತಮ್ಮ ಕೈಲಾದಮಟ್ಟಿಗೂ ಸಹಾಯವಂ ಮಾಡಬೇಕಾದರೆ ಎಂತಾ

ಮುದ್ರಾತ್ಮಾಲ್ಯವಾದರು ಕೈಗೂಡುವದು. ತಮ್ಮ ಸೈಲೀದ್ದು ಸ್ವಲ್ಪವೇ ಎಂದು ಯೋಚಿಸದೆ ಅದಾದರು ಇಂತಾ ಸತ್ಕಾರ್ಯಕ್ಕೆ ಕೊಡುತ್ತವೆ ಯೆಂಬ ಕುತೂಹಲದೊಡನೆ ಎಲ್ಲರು ಸಹಾಯ ಮಾಡಬೇಕೆಂದು ಪ್ರಾರ್ಥಿಸುತ್ತೇವೆ.

ಟಿ. ಎ. ಸ್ವಾಮಿನಾಥಯ್ಯರ್,
ಕಾರ್ಯದರ್ಶಿ,
ಆರ್ಯಮತಸಂಘಾತ್ರ,
ಚೆನ್ನಪಟ್ಟಣವು, (ಮದ್ರಾಸ್)

THE MYSORE GAZETTE.
ಮೈಸೂರು ಗೆಜೆಟ್.

ಗುರುವಾರ, ತಾ|| ೨೯ನೇ ಏಪ್ರಿಲ್ ೧೮೯೭.
ಮೈಸೂರ್ ಗವರ್ನಮೆಂಟಿನವರಿಂದ ಹೊರಡಿಸಿದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾ|| ೨೦ನೇ ಏಪ್ರಿಲ್ ೧೮೯೭.

ನಂ|| ೧೦೩೭೫.—ಜಿ. ೨೦೩೮.—ಈ ಕೆಳಗೆ ಕಂಡ ಸಿವಿಲ್ ಸರ್ಜನ್‌ಗಳ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತ್ತವೆ:—

(೧) ಹಾಲಿ ರಜಾದ ಮೇಲಿರುವ ಸಿವಿಲ್ ಸರ್ಜನರಾದ ಮೆ|| ಪಿ. ಎಸ್. ಅಚ್ಯುತರಾಯರು, ಶಿವಮೊಗ್ಗೆಯಿಂದ ಮೈಸೂರಿಗೆ.

(೨) ಆಫೀಸಿಯೇಟಿಂಗ್ ಸಿವಿಲ್ ಸರ್ಜನರಾದ ಮೆ|| ಟಿ. ಎ. ಆರ್ಮುಗಂ ಮೊದಲಿಯಾರ್ರು, ಮೈಸೂರಿನಿಂದ ಶಿವಮೊಗ್ಗೆಗೆ.

ತಾ|| ೨೩ನೇ ಏಪ್ರಿಲ್ ೧೮೯೭.

ನಂ|| ೧೧,೩೩೦.—ಜ. ೧,೯೨೩.—ಈ ಕೆಳಗೆ ಕಂಡ ಅಮಲ್ದಾರುಗಳು ೧೮೭೯ನೇ ಇಸವಿಯ ಕಂಟ್ರ್ಯಾಕ್ಟ್ ಉಲ್ಲಂಘನೆಯ XIIIನೇ ಆಕ್ಟ್ ಅನುಸರಿಸಿ, ಬರತಕ್ಕ ಮೊಕದ್ದಮೆಗಳನ್ನು ದರ್ಯಾಪ್ತು ಮಾಡುವದಕ್ಕೆ ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ನೆಲಮಂಗಲ ತಾಲ್ಲೂಕು ಅಮಲ್ದಾರ್ ೨ನೇ ಕ್ಲಾಸ್ ಮಾಜಿಸ್ಟ್ರೇಟ್ ಸಿ. ರಾಜಗೋಪಾಲಾಚಾರ್ಯುಲುರವರು.

ದೊಡ್ಡಬಳ್ಳಾಪುರ ತಾಲ್ಲೂಕು ಅಮಲ್ದಾರ್ ೨ನೇ ಕ್ಲಾಸ್ ಮಾಜಿಸ್ಟ್ರೇಟ್ ಎ. ಗೋಪಾಲಯ್ಯಂಗಾರ್ರು.

ಮಾಗಡಿ ತಾಲ್ಲೂಕು ಅಮಲ್ದಾರ್ ೨ನೇ ಕ್ಲಾಸ್ ಮಾಜಿಸ್ಟ್ರೇಟ್ ತಿರುಮಲಾಚಾರ್ರು.

ನಂ|| ೧೧,೩೩೨.—ಜ. ೧,೯೨೫.—ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ ೩೫೬ನೇ ಸೆಕ್ಷನ್ ಅನುಸಾರ, ಮೈಸೂರು ಡಿಸ್ಟ್ರಿಕ್ಟ್ ಎಕ್ಸ್ಟ್ರಾ ಅಸಿಸ್ಟೆಂಟ್ ಕಮಿಷನರ್ ೨ನೇ ಕ್ಲಾಸ್ ಮಾಜಿಸ್ಟ್ರೇಟ್ ಮೆ|| ಬಿ. ಶ್ರೀನಿವಾಸರಾಯರು ಸಾಕ್ಷಿಗಳ ಸಾಕ್ಷ್ಯವನ್ನು ಇಂಗ್ಲಿಷ್ ಭಾಷೆಯಲ್ಲಿ ಸ್ವದಸ್ತೂರಿ ಬರೆದುಕೊಳ್ಳುವದಕ್ಕೆ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

SUMMARY OF NEWS.
ವೃತ್ತಾಂತ ಸಂಗ್ರಹವು.

ಈಜಿಪ್ಟಿನಲ್ಲಿ ಇಂಗ್ಲೀಷರಿಗೆ ಭಯ ಉಂಟಾಗಿ ೪೦೦ ಜನಗಳು ಒಂದು ವಾರದಲ್ಲಿ ಯೂರೋಪಿಗೆ ಹೊರಟುಹೋದರಂತೆ.

ಲೋವರ್‌ಬ್ಯಾಸಿನ್ ಎಂಬ ಸ್ಥಳದಲ್ಲಿ ಮಂಜುಬಿದ್ದು ಸ್ವೀಟ್, ಪೊಟೆಟೋ ಎಂಬೆರಡು ಸಸಿಗಳನ್ನು ದಾಪಳಿಕ್ಕೆ ಆಗುವದಿಲ್ಲ.

ವಾಯುವ್ಯ ಪ್ರಾಂತದ ಸರ್ಕಾರಕ್ಕೆ ರೈತರುಗಳು ಉತ್ತು ಪೈರುಮಾಡಲಿಕ್ಕೋಸ್ಕರ ೧೫,೦೦,೦೦೦ ರೂಪಾಯಿಗಳು ಕೊಡಲ್ಪಟ್ಟಿದೆ.

ಡಿಕಾಡಿಸ್ಟ್ರಿಕ್ಟ್‌ನಲ್ಲಿ ಒಬ್ಬ ಪತಿವ್ರತೆಯು ಗಂಡನಿಗೆ ರೋಗಬಂದು ಸಾಯುತ್ತಿರುವಾಗ ಅವನ ಕಾಲಿನ ಬಳಿ ಮಲಗಿಕೊಂಡು ತಾನೂ ಪ್ರಾಣಬಿಟ್ಟಳಂತೆ.

ಕರಾಚಿಯ ಹತ್ತಿರ ಒಂದು ಹಳ್ಳಿಯಲ್ಲಿ ಬ್ಯೂಬೋನಿಕ್ ಪ್ಲೇಗ್ ತೋರಿದ್ದರಿಂದ ಹಳ್ಳಿಯನ್ನೇ ಸುಟ್ಟುಬಿಟ್ಟು ಸರ್ಕಾರದವರು ಅಲ್ಲಿನ ನಿವಾಸಿಗಳಿಗೆ ವಾಸಮಾಡಲು ಬೇರೇ ಸ್ಥಳವನ್ನು ಕೊಟ್ಟರಂತೆ.

ಬೊಂಬಾಯಿನಲ್ಲಿ ಪ್ಲೇಗ್ ಕ್ರಮವಾಗಿ ದಿನೇದಿನೆ ಕಡಿಮೆಯಾಗುತ್ತಿರುವದರಿಂದ ಗುಜರಾತಿನಿಂದ ಜನಗಳು ಗುಂಪುಗುಂಪಾಗಿ ಬರುತ್ತಿದ್ದಾರೆ. ಇತರ ದಿಕ್ಕಿನವರು ನಿಧಾನವಾಗಿ ಹಿಂದಿರುಗುತ್ತಿದ್ದಾರೆಂದು ಕೇಳುತ್ತೇವೆ.

ಬೆಯಿಲ್‌ಸ್ಟೀಮರ್ ಲೋಪಿಟ್ ಎಂಬದೊಂದು ಹಡಗು ಗೋವಾಲಂದೋ, ನಾರಾಯಣ್‌ಗಂಗ್ ಮಧ್ಯದಲ್ಲಿ ತೇಲಾಡುತ್ತಿದ್ದಾಗ ಕಳೆದ ತಿಂಗಳ ೨ನೇ ತಾರೀಖಿನಲ್ಲಿ ನೀರಿನಲ್ಲಿ ಮುಳುಗಿಹೋಯಿತು, ೨೨೦ ನೇಟಿವ್ ಜನಗಳು ಇದರಲ್ಲಿದ್ದರಂತೆ.

ಕಳೆದ ತಿಂಗಳ ೨೬ನೇ ತಾರೀಖಿನಲ್ಲಿ ಇಂಡಿಯಾ ಚಕ್ರವರ್ತಿನಿಯವರು ವೃಕ್ಷವಾಟಿಕೆಯಲ್ಲಿ ವಿಹರಿಸುತ್ತಿರುವಾಗ ಅವರ ಮಕ್ಕಳ ವಿನೋದಾರ್ಥವಾಗಿ ಹಿಂದುಸ್ಥಾನದ ಇಂದ್ರಜಾಲಿಕರು ತಮಾಷೆಯನ್ನು ತೋರಿಸುವದಕ್ಕೋಸ್ಕರ ಅಪ್ಪಣೆ ಕೊಟ್ಟರಂತೆ. ಈ ಜಾದೂಗಾರರಿಗೆ ತುಂಬಾ ಬಹುಮಾನ ದೊರೆಯಬಹುದು.

ಬರ್ಮಿಂಘಾಮಿನ ಆಭರಣ ನಿರ್ಮಾಣಕರು ಇಂಗ್ಲಾಂಡಿನ ಚಕ್ರವರ್ತಿನಿಯವರ ಮಹೋತ್ಸವಕ್ಕೋಸ್ಕರ ಶನಿವಾರದ ವಿಶ್ರಾಂತಿಯನ್ನು ಬಿಟ್ಟು ಹಗಲು ರಾತ್ರಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರು ೧,೫೦,೦೦,೦೦೦ ಬಿರುದುಗಳನ್ನು, ೩೦,೦೦,೦೦೦ ಪದಕಗಳನ್ನು ತಯಾರ್ಮಾಡಿದ್ದಾರೆ. ಜರ್ಮನಿಯಲ್ಲಿ ತಯಾರಾದ ಬಿರುದುಗಳೂ ಬರಬಹುದು ಬರುತ್ತವೆ ಎಂಬದಾಗಿ ಸುದ್ದಿಯನ್ನು ಕೇಳುತ್ತೇವೆ.

ಯಾವ ದೇಶದಲ್ಲಿಯಾಗಲಿ ಶವಗಳನ್ನು ಸುಟ್ಟುಬಿಡುವದು ಪರಿಶುದ್ಧವಾದ ಕೃತ್ಯವಾಗಿದೆ. ನೆಲದಲ್ಲಿ ಹೆಣಗಳನ್ನು ಹೂಳುವದನ್ನು ನೋಡಿದರೆ, ನಾಗರಿಕರಾದ ಜನಗಳಿಗೆ ಅದು ಬಹಳ ಮಾನಹಾನಿಯಾಗಿದ್ದ ಮಹಮ್ಮದೀಯರು ಹೆಣವನ್ನು ಪಜಾತೀಯವಾಗಿ ತಿಂದುಹಾಕುತ್ತಿದ್ದಾರೆ. ಆದ್ದರಿಂದ ಹೂಳುವದಿಲ್ಲ. ನಿಜವಾಗಿ ನಾಗರಿಕರಾದವರು ತಮ್ಮ ಪದ್ಧತಿಗೆ ವಿರೋಧವಾಗಿದ್ದರೂ ಸುಂಕು ರೋಗಗಳಿಂದ ಮೃತರಾದವರ ಶವಗಳನ್ನು ಸುಟ್ಟುಬಿಡುವದೇ ಲೇಸು. ಎಂಬದಾಗಿ ಒಬ್ಬ ಸುಪ್ರಸಿದ್ಧ ಯೂರೋಪಿನ ವಿದ್ವಾಂಸನು ಬರೆಯುತ್ತಾನೆ. ಆದ್ದರಿಂದ ಅನಾದಿಯಾಗಿ ಶವಗಳನ್ನು ಸುಡುವ ಪದ್ಧತಿಯು ಒಳ್ಳೆಯದೆಂದು ಇವರಿಗೆ ಈಗ ತಿಳಿಯಿತು.

ಕಲ್ಕತ್ತಾ ರಾಜಧಾನಿಯಿಂದ ಭೌತಿಕ ಶಾಸ್ತ್ರ ವಿಶಾರದರಾದವರೊಬ್ಬರು ಲಂಡನ್ ಪಟ್ಟಣಕ್ಕೆ ಒಂದು ವಿಚಿತ್ರವಾಗಿರುವದೊಂದು ಕನ್ನಡಿಯನ್ನು ಉಡುಗೊರೆಯಾಗಿ ಕಳುಹಿಸಿದ್ದಾರೆ. ಅದರಲ್ಲಿ ಕಣ್ಣನ್ನಿಟ್ಟು ನೋಡಿದರೆ ದೃಷ್ಟಿಯು ಶರೀರದಲ್ಲಿಯೂ, ಹಲಿಗೆಗಳಲ್ಲಿಯೂ, ಗೋಡೆಗಳಲ್ಲಿಯೂ ಒಳಹೊಕ್ಕು ಅಂತರ್ಗತವಾದ ವಿಷಯಗಳನ್ನೆಲ್ಲಾ ತಿಳಿಯುವಂತೆ ಮಾಡಿರುವರೆಂದು ತಿಳಿಸಿದ್ದವಷ್ಟೆ? ಅವರೀಗ ಅದೇ ಕನ್ನಡಿಯನ್ನು ಇನ್ನೂ ಚೆನ್ನಾಗಿ ಸಂಸ್ಕರಿಸುವದರಲ್ಲಿ ಕಣ್ಣಿನಿಂದ ನೋಡಿದರೆ ದೇಹದೊಳಗೆ ಮೂಳೆಗಳಲ್ಲಿಯೂ, ರಕ್ತನಾಳಗಳಲ್ಲಿಯೂ ಸಹ ಪ್ರವೇಶಿಸಿ ಬಹು ಸೂಕ್ಷ್ಮವಿಷಯಗಳನ್ನೆಲ್ಲಾ ತಿಳಿದುಕೊಳ್ಳಬಹುದಾಗಿದೆಯಂತೆ. ಇದರಿಂದ ಇನ್ನು ಮೇಲೆ ಡಾಕ್ಟರುಗಳಿಗೆ ರೋಗಿಗಳ ದೇಹದಲ್ಲಿರುವ ಸಕಲ ಸೂಕ್ಷ್ಮದೋಷಗಳೂ ಈ ಸಾಧನದಿಂದ ಸುಲಭವಾಗಿ ತಿಳಿದು ಬರುತ್ತದೆಯಾಗಿ ಪ್ರಜೆಗಳಲ್ಲಿ ಸಾಧಾರಣವಾಗಿ ಚಿಕಿತ್ಸೆಯಿಂದಿನ್ನಿ ಕ್ಷುದ್ರೋಪದ್ರವಗಳಿಂದ ಸಾಯುವ ಹಾವಳಿಯನ್ನು ಬಹಳವಟ್ಟಿಗೆ ತಪ್ಪಿಸಬಹುದೆಂದು ಅನೇಕರು ತಾತ್ಪರ್ಯಪಡುತಲಿದ್ದಾರೆ.

ಕಾಸರಗೋಡು ಸಿದ್ಧಾಂತಿ ಬಿ ಸುಬ್ರಾಯ ಪಂಡಿತರು ಲೋಕೋತ್ತರ ಶುಭಕರವಾದ ಭವಿಷ್ಯವನ್ನು ಪ್ರಕಟಿಸಿರುತ್ತಾರೆ. ಏನೆಂದರೆ:—

ಈ ಹೇವಿಳಂಬಿ ಸಂವತ್ಸರದಲ್ಲಿ ಅಶ್ವಿನಿ, ಭರಣಿ, ಕೃತ್ತಿಕಾ ಈ ನಕ್ಷತ್ರಗಳು ಕಹುವಳ ಮತ್ತು ಮಲೆನಾಡು ಪ್ರಾಂತಗಳಲ್ಲಿ ಸ್ವಲ್ಪ ಹಸಿಗಳನ್ನು ಕ್ರಮದಂತೆ ಬೆಳೆಸುವತಿ. ರೋಹಿಣಿ, ಮೃಗಶಿರ, ಆರ್ದ್ರಾ, ಪುನರ್ವಸು, ಪುಷ್ಯ ಈ ನಕ್ಷತ್ರಗಳು ಭೂಮಿಯ ಸರ್ವ ಭಾಗಗಳಲ್ಲಿ ಯೋಗ್ಯ ರೀತಿಯಿಂದ ಜಲ ವ್ಯವಸ್ಥೆಯಿಂದ್ಯೈನು ಅತ್ಯಧಿಕ ಶುಭೋದಯವನ್ನುಂಟು ಮಾಡುವದು. ಆಶ್ಲೇಷ, ಮಘಾ, ಪುಬ್ಬ ಈ ಮೂರು ನಕ್ಷತ್ರಗಳು ಕ್ರಮಪ್ರಕಾರ ಮಳೆ ಕೊಡದೆ ಜಲವನ್ನು ಮಿಂಚಿಸಿದ್ದು ಉತ್ತರ, ಹಸ್ತಾ, ಚಿತ್ತಾ, ಸ್ವಾತಿ ಈ ನಕ್ಷತ್ರಗಳಿಗೆ ತಮ್ಮ ಜಲವನ್ನು ವಹಿಕೊಟ್ಟು ಇವುಗಳಿಂದ ಅಮಿತ ವೃಷ್ಟಿಗರಿಸುವದು. ವಿಶಾಖಾ ಅನೂರಾಧ ಮಳೆಗಳು ಹಿತದಿಂದ ಜಲವನ್ನು ಹೆಚ್ಚಾಗಿ ಕೊಡುವದು.

ಸಮುದ್ರದಲ್ಲಿ ಬಹಳ ತೂಫಾನು ಪಸ್ಸಿರೆ ಉಂಟಾಗಿ ಹೆಚ್ಚು ತೊಂದರೆ ಇನ್ನುಳಿದಾನಿಕರಿಗೆ ನಷ್ಟವು ಬರದೇ ಬರುವಮು ಸಿಡಿಲು, ಮಿಂಚು, ಥಳಿ, ಮೇಗಗಳು ಬರವ ಪೂರೈಸುವತಿಲ್ಲ. ಈ ವರುಷ ಈ ಲೋಕದಲ್ಲಿ ಉಂಟಾಗುವ ಧಾನ್ಯಗಳು ಮುಂದೆ ಮೂರು ವರ್ಷಗಳ್ಕೆ ಸಾಕು. ದೇವರ ದಯೆಗೆ ಇನ್ನು ೩ ವರುಷ ಪರಿಯಂತರ ಈ ನಮ್ಮ ದೇಶವು ಪವಿತ್ರವಾಗಿರುವದು, ಇನ್ನು ಮುಂದೆ ೩ ವರುಷ ಹಿಂದುಸ್ಥಾನವು ಅನುಭವಿಸುವ ಸುಖವು ಬಹಳ ಹೆಚ್ಚಾದದ್ದು ಸರಿ ಮಳೆ ಬೆಳೆ ಪಸ್ಸಿರೆಯಿಂದ ತುಂಬ ಆನಂದದಾತರಾಗಿ ಪ್ರಜೆಗಳು ಯಾವ ಭೀತಿಗಳಿಲ್ಲದೆ ಸುಖಿಸುವರು.

V. AYANOR'S PREPARATIONS.
ವಿ. ಅಯನಾರಿ ಎಂಬವರಿಂದ ತಯಾರ್ಮಾಡಲ್ಪಟ್ಟ ಪ್ರಸಿದ್ಧ ಔಷಧಗಳು.

ಕಾರ್ಡಿನಲ್ ಸ್ಪೆಸಿಫಿಕ್.—ಇದು ಹೊಟ್ಟೆಶೂಲೆ, ಅಜೀರ್ಣ, ಕರುಳು ನೋವು, ವಾಂತಿಭೇದಿ, ಆಜೀರ್ಣಭೇದಿ, ಬೇಳುಕಡತ, ಕೆಮ್ಮು, ಮೂತ್ರತಡೆ, ಬಾಯಿಹುಣ್ಣು, ರಕ್ತಸ್ರಾವ, ಆರ್ತವ ದೋಷಜನ್ಯಗಳಾದ ಸ್ತ್ರೀಯರ ವ್ಯಾಧಿಗಳು, ತಲೆನೋವು, ದಂತಶೂಲೆ, ಥಾಯ ಮೊದಲಾದವುಗಳಿಗೆ ಬಹಳ ಉಪಯುಕ್ತವಾದದ್ದು. ಇದರ ಕ್ರಯ ದೊಡ್ಡಶೀಸೆ ೧ಕ್ಕೆ ೧ ರೂ ಸಣ್ಣಶೀಸೆ ೧ಕ್ಕೆ ೮ ಆಣೆ.

ಪಾರ್ಶ್ವವಾಯು ತೈಲ—ಶಿರ್ಷಕಾಲಿಕ ನೋವು, ಪಕ್ಕಶೂಲೆ, ಸೊಂಟನೋವು, ತಲೆಶೂಲೆ ಇವು ಪರಿಹಾರವಾಗುವದು. ಇದರ ಕ್ರಯ ದೊಡ್ಡಶೀಸೆ ೧ಕ್ಕೆ ೧ ರೂ. ಸಣ್ಣಶೀಸೆ ೧ಕ್ಕೆ ೮ ಆಣೆ.

ಜ್ವರದ ಧೃತಿ.—ಇದು ಎ ತಾ ಜ್ವರವನ್ನಾದರು ಎರಡು ದಿನಗಳೊಳಗಾಗಿ ನಿವೃತ್ತಿ ಮಾಡತಕ್ಕದ್ದು. ದೊಡ್ಡಶೀಸೆ ೧ಕ್ಕೆ ೧ ರೂ. ಸಣ್ಣಶೀಸೆ ೧ಕ್ಕೆ ೮ ಆಣೆ.

ಓಮತಪೂರ್ರ ಶೋಂಠಿ—ಇದು ಶೀತಭೇದಿ, ರಕ್ತಭೇದಿ, ರಜಸ್ವಲೆಯರಿಗುಂಟಾಗುವ ಉಬ್ಬಸ, ಎದೆನೋವು, ಟೊಂಕನೋವು ಇವುಗಳಿಗೆ ಬಹಳ ಪ್ರಯೋಜನಕರವಾದದ್ದು. ಇದರ ಕ್ರಯ ದೊಡ್ಡಶೀಸೆ ೧ಕ್ಕೆ ೧ರೂ. ಸಣ್ಣಶೀಸೆ ೧ಕ್ಕೆ ೮ಆಣೆ.

ಮೇಹವಾಯು ಎಣ್ಣೆ—ಇದು ಮೇಹವಾಯುವಿನಿಂದ ಶರೀರವು ಉಬ್ಬುವದು, ಚರ್ಮವು ಒಡೆಯುವದು, ಪಾರ್ಶ್ವ ತಲೆನೋವು, ಗ್ರಂಥಿಗಳು ಇವುಗಳಿಗೆಲ್ಲ ಬಹಳ ಉಪಯುಕ್ತವಾದದ್ದು. ಇದರ ಕ್ರಯ ದೊಡ್ಡಶೀಸೆ ೧ಕ್ಕೆ ೧ರೂ. ಸಣ್ಣಶೀಸೆ ೧ಕ್ಕೆ ೮ ಆಣೆ.

ವಾತಘ್ನತೈಲವು.—ಇದು ನಡುವು ನೋವು, ಕೀಲುನೋವು, ಪಾರ್ಶ್ವನೋವು, ಅರತಲೆನೋವು, ಬಿಚ್ಚುಗಚ್ಚೆ ಇವುಗಳಿಗೆ ಪ್ರಸಿದ್ಧವಾದ ತೈಲವು ದೊಡ್ಡ ದಬ್ಬಿ ೧ಕ್ಕೆ ೧ ರೂ ಸಣ್ಣ ದಬ್ಬಿ ೧ಕ್ಕೆ ೮ ಆಣೆ

ಶ್ವೇತಕುಷ್ಠೌಷಧ—ಇದು ಸಕಲವಿಧ ಮೇಹರೋಗಗಳಿಂದ ಜನಿಸುವಬಿಳುಪು, ಹಸರು ಪಗ್ಗರೆ ಸಿಡುಬಿಯಾರೆ ದರಿದ್ರ್ಯ ಭಾಗಳ್ಲಕ್ಕ ಶೀಘ್ರವಾಗಿಯೂ, ಮಾರ್ಗ ಎಂದಿಗೂ ಬಾರದಂತೆ ನಿಶ್ಶೇಷವಾಗಿಯೂ ಗುಣಪಡಿಸತಕ್ಕಂತಾ ಔಷಧ ಇದರ ಕ್ರಯ ಶೀಸೆ ೧ಕ್ಕೆ ೧ ರೂ. ೮ ಆಣೆ.

ಕೂದಲು ಸರಿಯುವ ಕಪ್ಪಾಗಿ ಬೆಳೆಯುವಿಕ್ಕೆ ಔಷಧ—ಈ ತೈಲವು ನರತ ಕೂದಲುಗಳನ್ನು ಕಪ್ಪಾಗಿ ಮಾಡುವದು, ಕೂದಲು ಬೆಳೆಯದಿರುವ ಸ್ಥಳಗಳಲ್ಲಿ ಹುಟ್ಟಿ ಬೆಳೆಯುವದು. ಇದನ್ನು ತಲೆಗೆ ಹಚ್ಚಿಕೊಂಡು ಸ್ನಾನ ಮಾಡಬಹುದು ಮತ್ತು ಸುವಾಸನೆಯುಳ್ಳದ್ದಾಗಿರುತ್ತದೆ. ಇದರ ಕ್ರಯ ಶೀಸೆ ೧ಕ್ಕೆ ೧ ರೂ

ಬೇಕಾದವರು ಬಳ್ಳಾರಿ ಬ್ರೂಸ್ ಪೇಟೆಯಲ್ಲಿರುವ ವಿ. ಅಯನಾರ್ ಔಷಧಶಾಲೆಗೆ ಬರೆದು ತರಿಸಿಕೊಳ್ಳಬಹುದು.

NOTICE.
VIDYASARA SANGRAHA.
A TREATISE ON THE PRINCIPLES OF
HINDU MEDICINE
Price, including Postage Rs. 5-0-0

ವೈದ್ಯಸಾರಸಂಗ್ರಹ.

ಇದು ಚರಕ, ಸುಶ್ರುತ, ವಾಗ್ಭಟ, ಧನ್ವಂತರಿ ಮೊದಲಾದ ಪೂರ್ವಗ್ರಂಥಗಳ ಸಂಗ್ರಹ ರೂಪವಾಗಿರುತ್ತದೆ.
ಇದರ ಕ್ರಯ - ಪ್ಯಾಕಿಂಗ ಮತ್ತು ಅಂಚೆ ಹಾಸಲ ದೇಖಿಲ್ ಪ್ರತಿ ೧ಕ್ಕೆ ೫—೦—೦
ಬೇಕಾದವರು ಬೆಂಗಳೂರು ಕರ್ನಾಟಕ ಪ್ರೆಸ್ ಪ್ರೊಪ್ರೈಟರವರಿಗೆ ಬರೆದು ತರಿಸಿಕೊಳ್ಳಬಹುದು.

ನೋಟೀಸ್.

No 1392, Dated 24-4-97.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನೆಂದರೆ:—

ಇದರಡಿ ನಮೂದಿರುವ ಮೇರಿಗೆ ಸಿಟಿ ಮ್ಯೂನಿಸಿಪಲ್ ರಸ್ತೆಗಳಿಗೆ ೧೮೯೭—೯೮ನೇ ಸಾಲಿಗೆ ಸಪ್ಲೈ ಆಗಬೇಕಾಗಿರುವ (ರಳವಾಡ) ಮೆಟೀರಿಯಲ್ಸ್ ಬಗ್ಗೆ ಬಾಕ್ಸ್ತೀ ಇಸವಿ ಮೇ ೧೦ನೇ ತಾರೀಖ್ ಮಧ್ಯಾಹ್ನದ ವರಗೂ ಮೊಹರ್ ಮಾಡಿದ ಟೆಂಡರ್‌ಗಳನ್ನು ಬೆಂಗಳೂರು ಸಿಟಿ ಮ್ಯೂನಿಸಿಪಲ್ ಪ್ರೆಸಿಡೆಂಟರವರು ಬರಮಾಡಿಕೊಳ್ಳುವರು. ಟೆಂಡರ್ ಮಂಜೂರಾದ ಕಾಲದ ಮೊದಲು ೭ ತಿಂಗಳೊಳಗಾಗಿ ಪೂರ್ತಿಯಾಗಿ ಸಪ್ಲೈ ಮಾಡತಕ್ಕದ್ದು

೨ ಎಸ್ಟಿಮೇಟ್ ವಗೈರೆ ನೋಡಬೇಕಾದವರು ಮ್ಯೂನಿಸಿಪಲ್ ಎಗ್ಸಿಕ್ಯೂಟಿವ್ ಇಂಜಿನಿಯರ್ ಆಫೀಸಿನಲ್ಲಿ ಆಫೀಸ ದಿನಗಳ ಆಫೀಸ್ ಕಾಲಗಳಲ್ಲಿ ಬಂದು ನೋಡಬಹುದಾಗಿರುತ್ತೆ. ಪ್ರತಿ ಪ್ರೊಮ ಟೆಂಡರ ಜತೆಯಾಗೂ (೧೦೦) ಒಂದುನೂರು ರೂಪಾಯಿ ಡಿಪಾಜಿಟ್ ಹಾಜರ್ಪಡಿಸಬೇಕಾಗಿರುತ್ತೆ. ೧೮೯೬ನೇ ಇಸವಿ ಜೂಲೈ ತಿಂಗಳಲ್ಲಿ ಟೆಂಡರುಗಳು ಮಾಡಲ್ಪಡುತವೆ

ಸುಮಾರು ಬೇಕಾಗಿರುವ ಸಾಮಗ್ರಿಗಳ ಮೊತ್ತ		
ಬ್ರ್ಯಾಕೆಟ್ ಸಲಿಗಜ	ಜಂಗಲ್ ಮೆಟಲ್ ಸಲಿಗಜ	ಗ್ರಾವಲ್ ಸಲಿಗಜ.
2,146	5,655.	5198.

ತಾ|| ೨೩ನೇ ಏಪ್ರಿಲ್, ೧೮೯೭.

T T LEONARD,
President,
City Municipal Commission

ಈ ಕಂಪೆನಿಯು ಸನ್ ೧೮೯೩ನೇ ಇಸವಿಯಲ್ಲಿ ಸ್ಥಾಪಿತವಾಯಿತು.

ಜನ್ಮದ ಲಾಭವು.

ವಜ್ರಾಂಗ ಖರ್ಜೂರವು.

ಬಲಾರೋಗ್ಯ, ಪುಷ್ಟಿಗಳನ್ನು ಬೆಳೆಸತಕ್ಕ ಉತ್ಪತ್ತಿಯು.

ಅತ್ಯಾಶ್ಚರ್ಯಕರವಾದ ಬಳ್ಳಿಗಳಿಂದ ತಯಾರಿಸಿದ ಈ ಉತ್ಪತ್ತಿಗಳು ಕೊಂಕಣಪ್ರಾಂತದ ಅನೇಕ ವನಸ್ಪತಿಗಳ ಸಾರಗಳ ಪುಟಗಳನ್ನು ಕೊಟ್ಟು ತುಪ್ಪದೊಳಗೆ ಮಾಗಿಸಿ, ಒಳ್ಳೇ ಜೇನ್ನಿನ ತರಗತಿಯ ಸಕ್ಕರೆಯ ಪಾಕದಲ್ಲಿ ಸಿದ್ಧ ಮಾಡಿರತ್ತಾರೆ. ಈ ಉತ್ಪತ್ತಿಗಳು ಮಾಸಿಹೋಗದಿದ್ದು, ಒಳ್ಳೇ ರುಚಿಯುಳ್ಳವವೆ ಇವುಗಳ ಸೇವನೆಯಿಂದ ಕಫ, ವಾತ, ಪಿತ್ತ ಈ ತ್ರಿದೋಷಗಳಿಂದುಂಟಾಗತಕ್ಕ ಯಾವತ್ತು ಬಗೆಯ ವ್ಯಾಧಿಗಳೂ ಹೋಗುತ್ತವೆ. ೩೦ ವರ್ಷಗಳ ಪ್ರಾಯವುಳ್ಳ ಮುದುಕರ ಶರೀರವು ವಿಕಾರವಾದರೂ ಹದಿನಾರರ ತರುಣರಂತೆ ಪ್ರಜ್ವಲಿತವಾಗುತ್ತದೆ. ದನಕೇಂದ್ರಿಯದಲ್ಲಿ ಬಲ ಹುಂಟಾಗಿ ನಪುಂಸಕತ್ವವು ಇಲ್ಲದಂತಾಗುತ್ತದೆ. ಅಪ್ಪಿಯ ಮುಂದೆ ಅಥವಾ ಹಿಂದೆ ಸರಿದುಹೋಗುವ ಧಾತು ನಿಲ್ಲುತ್ತದೆ. ಸ್ವಪ್ನಾವಸ್ಥೆಯಾಗುವದಿಲ್ಲ. ವೀರ್ಯವು ಬೆಳೆದು ಮೈ ಬಣ್ಣವು ಸುಧಾರಿಸುತ್ತದೆ. ಪರಮ ಹಾಗೂ ಉಷ್ಣಸಂಬಂಧಿಕ ಬೇನೆಗಳಿತಸರ ಇಲ್ಲದಂತಾಗಿ ಧಾತು ಪುಷ್ಟವಾಗುತ್ತದೆ. ಮೂರು ಹೊತ್ತುಂಡರೂ ಅನ್ನ ಪಚನವಾಗಿ ಒಳ್ಳೇ ಹಸಿವೆಯಾಗುತ್ತದೆ. ಹೋಗುವದೊಂದೆ ತಡ ದೊಡನೇ ಸ್ವಚ್ಛ ಶೌಚಕ್ಕಾಗುತ್ತವೆ. ಕ್ಷಯ, ಉದರ, ದಮ್ಮು ಈ ರೋಗಗಳು ನಾಶ ಹೊಂದುತ್ತವೆ. ಹೊಸ ಬೇನೆ ಇದ್ದಲ್ಲಿ ೧೧ ದಿವಸಗಳ ವರೆಗೆ ನಾಲುವ ಒಂದೇ ಡಬಿಯಿಂದ ಗುಣವುಂಟಾಗುತ್ತದೆ. ಮತ್ತು ಹಳಬಿದ್ದಲ್ಲಿ ೬ ದಿನಗಳ ಮೇಲೆ ಗುಣ ಬಂದೀತು. ೧೧ ದಿನಗಳವರೆಗೆ ಸಾಲತಕ್ಕ ೧ ಡಬ್ಬಿಗೆ ೧-೪-೦ ರೂ|| ಸಂದೇಹವುಳ್ಳವರಿಗೆ ೩ ಡಬ್ಬಿಗಳು ತೆಗೆದುಕೊಳ್ಳತಕ್ಕವರಿಗೆ ಒಂದು ಡಬ್ಬಿಯು ಉಚಿತವಾಗಿ ಸಿಕ್ಕೀತು. ಈ ಉತ್ಪತ್ತಿಯಿಂದ ಹೆಂಗಸರು ಸತೇಜರಾಗುತ್ತಾರೆ. ಕರಗಿನ ಹಾಗೂ ಜಾಣಂತಿ ಬೇನೆಗಳು ವಾಸಿಯಾಗುತ್ತವೆ. ಎಲ್ಲರನ್ನು ಸರಿಯಾಗಿ ಬೇನೆ ಇಲ್ಲದವರನ್ನಾಗಿಮಾಡಿ ಬಲಾರೋಗ್ಯ ಪುಷ್ಟಿಗಳನ್ನು ಬೆಳೆಸುತ್ತವೆ. ಸಾಹೇಬ ಜನರಲ್ಲಿ ಬಹಳ ಡಬ್ಬಿಗಳು ಖರ್ಚಾಗುತ್ತವೆ ಈ ಔಷಧವು ಈ ಕಂಪೆನಿಯಹೊರ್ತು ಬೇರೆ ಸ್ಥಳದಲ್ಲಿ ಆಗುವದಿಲ್ಲ. ಯಾವತ್ತು ದೇಶಗಳಲ್ಲಿಯೂ ವೈದ್ಯಶಾಲೆಗಳಿಗಾಗಿ ಕಳುಹಿಸಲ್ಪಡುತ್ತದೆ. ಬರೆದು ಬಂದು ಕೂಡಲೆ ಈ ಕಂಪೆನಿಯು ಬೇಕಾದವರಿಗೆ ಈ ಡಬ್ಬಿಗಳು ಕಳುಹಿಸಿಕೊಟ್ಟೀತು. ಅಂಚೆಯ ಹಾಗೂ ವ್ಯಾಲ್ಯೂ ಪೇಯಬಲ್ ವೆಚ್ಚ ಬೇರೆ ಕೊಡಬೇಕು (ಉಚಿತ ಡಬ್ಬಿ ಸಹ ೪ ಡಬ್ಬಿಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬಿಯಲ್ಲಿ ಎಲ್ಲಾ ಖರ್ಜೂರ ಹಾಕಿ ರವಾನಿಸುವವು, ಹೀಗೆ ಕಳುಹಿಸಿದರೆ ಟಪಾಲ್ ಖರ್ಚು ಕಡಮೆ ಬೀಳುವದು)

ಮೇಲ್ವಿಳಾಸ—ಪಿ. ಎಲ್. ಎ ಬ್ರದರ್ಸ್ ಮತ್ತು ಕಂಪೆನಿ,
ಗೆಸ್ಟ್ ಇಂಗ್ಲಿಷ್ ಬ್ರ್ಯಾಂಚ್ ಆಫೀಸ್, ಡಿಸ್ಟ್ರಿಕ್ಟ್ ಬೆಳಗಾಂವಿ.
ಪೋಸ್ಟ್—ಬೆಳಗಾಂವ. Post BELGAUM.

BANGALORE:—Printed and Published at the KARNATAKA PRESS, No. 40, HOSPITAL ROAD, CITY,—1897.

THE

Karnataka Prakasika.

ಕರ್ನಾಟಕ ಪ್ರಕಾಶಿಕಾ.

Published Every Monday Morning

ಪ್ರಕಟನೆಯ ದಾ.ಹ. | ಮೊದಲನೆಯದಕ್ಕೆ ಪಙ್ಕ್ತಿ ಒಂದಕ್ಕೆ 0 2 0 | ಎರಡನೆಯದಕ್ಕೆ ಪಙ್ಕ್ತಿ ಒಂದಕ್ಕೆ 0 1 0

ಚಂದಾದರರಿಗೆ — ಸ್ಥಳದವರಿಗೆ, ಪರಸ್ಥಳದವರಿಗೆ, ಪೋಸ್ಟೇಜ್ ಸಹಾ

ಸಾಲ 1 ಕ್ಕೆ	3 0 0	4 0 0
6 ತಿಂಗಳಿಗೆ	2 0 0	2 8 0
3 ತಿಂಗಳಿಗೆ	1 4 0	1 8 0

VOL. XXIV. BANGALORE:—MONDAY, MAY 10, 1897. No. 19.

ADVERTISEMENTS

Bangalore City Municipality

Notice, Dated 20th April 1897

Applications accompanied by copies of testimonials &c., (which will not be returned) from duly qualified candidates, for the post of Executive Engineer, City Municipality, Salary Rs 150 per mensem will be received by the undersigned up to 20th May 1897. A certificate of physical fitness for out door work must be submitted by each applicant. The selected candidate must be prepared to join for duty on 1st July 1897. Personal interview to intending applicants will not be granted.

T. J. LEONARD,
President,
City Municipal Commission.

Select Telegrams

London 4th May.—Two hundred French soldiers have been landed at V[illegible] and are patrolling the streets.

There is a strong impression that the Powers will mediate between Greece and Turkey.

Athens despatches from Athens state that the Greeks are wholly lacking in stores and [illegible].

Forty Greek officers, including Colonel V[illegible] have been recalled from Crete on [illegible] to the purpose of strengthening the [illegible]. It is hoped that this is an indication of submission to the Powers on the part of Greece.

The Greek Ministers for War and the Interior, who went to Pharsala to ascertain the condition of the army, have reported hopefully on the condition of the forces there and at Velestino.

It is reported that the Greeks finally repulsed the Turks at Velestino and began re[illegible] which ended in a regular battle, the Greeks fighting with the greatest courage. Several [illegible] the Turks are sending reinforcements and sanguine regarding the speedy fall of Velestino.

London, 5th May.—In the House of Commons, last night, Mr. Curzon replying to a question, said that negotiations are proceeding between the Powers who earnestly desire that the war should be terminated. It is impossible, however to tender mediation unless they know it would be welcome.

Athens 5th May.—Greece has decided to continue the war with Turkey. The report of the Ministers approves the action of the Crown Prince, who opposed the retreat from Larissa.

Paris, 4th May.—A most appalling fire took place here this evening at a Charity Bazaar, which was attended by the cream of Paris Society.

The flames spread with incredible swiftness, and one hundred charred bodies, so far, have been recovered, and that it is feared that at least one hundred more remain in the debris. Besides many injured, those missing include the Duchess d'Alencon, the Countess Mon the Marquise de Galliffet, and General Munier. The piteous scenes of horror and panic which were witnessed were truly heart-rending and baffle description.

Paris 5th May.—The disastrous fire here last night was caused by the fusing of the wires of the electric light in the Kinemato graph. The Bazaar was being held in a long wooden shed having exits only at one end.

The structure was utterly consumed in twelve minutes, and it was crowded with people at the moment of the outbreak of the fire. *The remains of the unfortunate victims* filled fourteen waggons. The victims include some of the greatest names in France.

THE Karnataka Prakasika.

MONDAY MAY 10 1897.

THE CONGRESS IN LONDON.

It has been proposed that the Indian National Congress should be held this year in London, and that July should be the month chosen in which to hold it. The reason assigned is that there will be many native gentlemen in England at that time. Some have gone there to give evidence before the Expenditure Committee, while others have proceeded thither to witness the celebration of the Diamond Jubilee of Her Majesty. It is said that it would be easy to get the men together to hold a meeting. Then many English people would attend the meeting, and advocate the *cause of India* or listen to what is said about the administration of the country. There is a good deal to be said in favour of this view of the case, but at the same time we think there is more to be said against it. We do not think it would be well to hold the meeting of the Congress in London, for its continuity would there by be broken. It has been held in India up to this time, and there is no reason why a change should be made. The institution is called the Indian National Congress, its interests are Indian, and it should be held *in India*. *It would look like a slur* on the people of this land if it were held elsewhere. It would seem as if they were not capable of conducting the meeting. Besides, the Expenditure Committee is now sitting, and the Report will not be out in July. It would be well to wait till this document is published before holding the annual meeting of the Congress. The speakers would criticise what is given in it. They would point out what was wrong, they could praise what was right. No doubt the report will require a good deal of criticism. Rather, we fancy there will be more than one report, for we may be certain that Mr. Dadabhai Naoroji and Sir William Wedderburn will not agree with what some of the other members will have to say. The two will draw different conclusions from the material placed before them. *It would therefore* be well to wait till a report is published before holding a meeting of the Congress. In the next place preparations are being made to hold the Congress meeting at the capital of the Berars, and it will be a great disappointment to the people of that place—and to the people around—should a change such as is contemplated be made. They will think they have been sacrificed, and they will resent what they will consider a slight put upon them. We think the original programme should be adhered to, and that the London idea should be abandoned. If the Congress should be held in the capital of the empire in July there would not be another meeting till December 1898—two years between a meeting in India. This would not be well and on this account the idea of holding one in London ought to be abandoned. The time would be long and people would begin to lose interest in the affairs of the institution. They could read about the London meeting, but that would be different from attending one. In the next place, the Congress meeting gives an opportunity to many of seeing the country. They travel from the place where they dwell to the place where the Congress is held, and they gain thereby not only pleasure but also instruction. If there should be no Congress held this year at *Amaraoti they would be deprived of this* pleasure, and they would not feel particularly pleased. They would miss their annual holiday, and in addition they would lose the speeches at the Congress, and lose the instruction they might there gain.

THE DIAMOND JUBILEE.

The time is approaching for the celebration of the Diamond Jubilee of the Queen Empress, and yet nothing is being done to commemorate the event. No steps have been taken either in the City or the Civil and Military Station to get things ready for the celebration. In Madras the people held a meeting, when they decided upon what was to be done on the 22nd of June, they are collecting money, and people in this place are giving towards the Madras celebration. But we want to know why there should not be a celebration here, why the money sent to Madras should not be utilised here. There is no reason, as far as we can see, why it should not. There ought to be spirit and energy enough in the City and Station to show that the *people are loyal to the Queen Empress*, and to let it be known that they are able to appreciate the noble qualities she possesses, and the good she has done for the empire. We sometime ago recommended that a Town Hall should be erected in the City which might not only perpetuate the memory of the Queen, but also of the late Maharajah. No steps have been taken to this end. It is not creditable to the people of Mysore, and more especially of Bangalore that they have done nothing to keep the memory of their ruler green. They almost appear to have forgotten him. This does not speak well for all the display of loyalty they professed to show when news came of his death. Then they gave out they were going to accomplish all sorts of things. Schemes were proposed, but nothing came of them. Up to this day not a step has been taken in the desired direction, and there is not a sign of one being taken. It is to be hoped that Bangalore will not always lag behind as it has so often done in the past, and especially as regards what we have been discussing.

News and Notes.

Burma is made a Lieutenant-Governorship from the 1st Instant.

The Vaccination Act has been extended by the Government of India to British Baluchistan.

The Fancy Fair organised by Lady Mackenzie in aid of the Bengal Famine Fund, has yielded a profit of Rs 18,000.

No less than 150 convicts have died of cholera in the Coimbatore Jail, which high rate appears to be unprecedented.

According to the latest figures, the number of persons employed on relief works and in receipt of gratuitous relief, has reached a total of upwards of thirty one lakhs.

A Petition, signed by 300,000 persons, praying the Queen to refuse to grant money to hospitals, where vivisection is practised has been laid before Her Majesty by the Home Secretary.

Of those who attended officially the coronation *of the Queen, only four survive*. Mr. Villers, M P, aged 95, Mr W. Gladstone, ex-Premier, aged 88, Earl Nelson, 73, and the patriarchal Earl of Leicester.

The expenditure on intoxicating liquors in the United Kingdom for the past year showed an increase of six and a half millions sterling. In 1895, it amounted to £142,414,812, in 1896, it rose to £148,972,230.

The exports of wheat from India for the eleven months ending February 28 h were just under 26,000 tons, and there have been practically no exports since. Last year over 487,000 tons were exported, or five times as much. Those figures tell their own tale.

Mr Norendra Nath Sen was elected on the 6th instant to the local Council by 33 votes against 27 scored by his rival. All the best men including Europeans and Mahomedans voted for him. The election has given universal satisfaction.

Government has directed the Courts of Wards to assume charge of the estate, and arrangements are being made to take over the management. The estate lies in the Coimbatore District, and the Collector has taken charge of the properties in the British territory and he is in correspondence with the Mysore State in respect to the property lying in that State.

The announcement made in the Chancellor of the Exchequer's statement regarding the reduction of the foreign and colonial postage rate to 2½ is an important one as indicating yet another step towards a universal penny postage between England and her dependencies. India presumably will now have the homeward rates reduced to 2 annas.

The Famine returns now show nearly 3,300,000 persons receiving relief, or an increase of over 177,000 during the past week. The numbers have risen in the N.-W. P. by over 113,000, in the Central Provinces by 46,000, Madras, nearly 31,000; Bengal, 23,800, and Hyderabad, 7,000. In the Berars the numbers have fallen by 13,000, in Bombay by 10,000, and in the Punjab and Central India by 8,000.

The London Correspondent of the *Advocate of India* writes:—"The Marquis of Lorne, it is said, will be raised to the Peerage when the Jubilee list is published, and rumour has it that he will be your next Viceroy, but it is more likely that the Earl of Onslow will succeed Lord Elgin. The Marquis is to go abroad, but I hardly think that India is his destination." The Marquis is the Queen's son in law and may go to Canada if he is not appointed to India.

A PAINFUL incident took place on the 1st instant at Athens When the Duchess of Sparta was returning on foot from visiting the wounded in hospital, Her Royal Highness was jeered at by the mob, and was compelled to retrace her steps and to take refuge in the hospital, when her carriage was fetched, and drove at a gallop back to the palace Disturbances have also taken place in the church es at Athens during the reading of the loyal prayers

---

IN what is known as the Ranaghat outrage case the Magistrate has delivered judgment, sentencing the accused Lawson to one month's rigorous imprisonment The nature of the offence may be judged from the following passage in the judgment —"Lawson outraged the modesty of those women by assaulting them He first seized Larna Bibi by the breast, pulling her cloth off, and tried to have intercourse with her Failing, he passed to Soudamini whom he went so far as to unbutton, etc, etc" The Magistrate's justification for awarding so light a punishment is *Lawson's youth But all people generally do not think of outraging women*, We think there must be an end to this kind of special pleading where grave offences are concerned

---

A NUMBER of Native Chiefs and Officers left for England by the last mail steamer Among them were, the Hon The Rajah of Bobbili and Sutle Rai Bahadur Bhutnath, H H Maharajah Col Sir Pertab Singh, H H Thakore Hari Singh Char Dolkal Sing, Jalal ud-din Mahomed, Syud Saif ud din Ali Akbar, Syed Gas-ud-din Ali Akbar, Commandant Nand Singh, Commandant Didar Singh, Commandant Kishen Singh, Jemedar Hara Sing, Commandant Rao Bahadur Dip Singh, Commandant Dir Singhji Rissaldar Suniyal Singh, Commandant Chatra Singh Capt, Mir Hashim Ali, Commandant Rai Bahadur Dhanpat Rai, Commandant Govinda Rao Mutkar Commandant Dhon Khan, Commandant Kareem Beg, Jemadar Abdool Majid, Commandant Nasir Khan Commandant Abdul Ghani, Capt Ahmed Husein and Sirdar Umrao Singh and wife

---

MAHARAJ KUMAR Pradyot Kumar Tagore has been amongst the first to realise the potentialities of the newly discovered X Rays According to the *Hindu Patriot*, he has been engaged for some time in conducting a series of experiments with a view to demonstrate the efficacy of the X rays in destroying the plague bacillus The result of these experiments having been satisfactory, the Maharaj Kumar determined to push the matter further ahead by sending to Bombay a few sets of the X rays apparatus for experiments to be made on suitable cases in the local plague hospitals He has just received a letter *from the Private* Secretary to His Excellency the Governor of Bombay conveying to him His Excellency's thanks for his present and expressing His Excellency's hope that the results of the experiment may be successful and satisfactory

Local and Provincial.

A GARDEN PARTY —Her Highness the Maharani Regent of Mysore is giving a '*Garden Party*' *at Fern Hill* on Friday the 14th instant.

THE BLACKPULLY MURDER CASE —It is said that this case will be retried as the Man Mullappah was undefended An order has been published that in cases of the kind where a man is unable to pay a lawyer the Government shall provide somebody to defend him

---

THE TEMPORARY WATER-SUPPLY, C AND M STATION —The people are taking advantage of this, and they find it very convenient The place was never so well off for water as it is now, and it is hoped that the supply will soon be *given to all parts* of the place

---

THE WEATHER —Is still very hot We had a shower of rain at the beginning of last week, but not enough to do much good The clouds gather and the lightning flashes, but the rain does not come down It is hoped that before long we shall have a good downpour

The Mysore Gazette.

Bangalore, Thursday, 6th May 1897

NOTIFICATIONS BY THE GOVERNMENT OF MYSORE

GENERAL AND REVENUE

No 11905—*J* 1353, *dated 30th April* 1897

Under Section 12 of the Code of Criminal *Procedure, Mr R B Pramar, Acting Special* Magistrate Kolar Gold Fields, is appointed a Magistrate of the 1st Class

No 11920—Ms F 3 93, dated 1st May 97

The following transfers of Sub Assistant Surgeons are ordered —

Mr J A Coelho, L M & S from Civil Hospital, Chikmagalur, to General Hospital Mysore To join on relief

2 Mr. S K Hanumanta Rao, M B & C M from Civil Hospital, Shimoga, to Civil *Hospital*, Chikmagalur To join on the expiry of his leave

No 11988—*J 1362 dated 3rd May* 1897

The services of G. Janar Hanumanta Rao Amildar of the Shimoga taluk are temporarily placed at the disposal of the Inspector General of Police, for employment on Police duty as Acting Special Assistant Superintendent of Police, 2nd Class (with effect from the date on which he entered upon special duty)

No 12013—J 1367 dated 4th May 1897

Under Section 37 of the Code of Criminal Procedure, Mr M Shama Rao, Assistant Commissioner and a Magistrate of the 2nd Class, Mysore, is invested with the following power specified in the 4th Schedule as an additional power which Government may confer on a Magistrate of the said Class

Power to commit for trial Section 206

No 12027—*Ms* 2314 *dated, 4th May* 1897

The privilege leave for thirty days granted to Mr S K Hanumanta Rao M B & C M, Sub Assistant Surgeon, in Notification No 10096—Ms 1870, dated the 11th March 1897 is hereby extended by fifteen days

No 9330—*R F* 123 90, *dated 25th April* 97

Under Article 188 of the Mysore Service *Regulations, C N Chandraya Amildar of the* Maddagiri taluk, Tumkur district is granted privilege leave of absence for two months and twenty eight days, with effect from such date as he may avail himself of the same

2 B Vasudeva Rao Deputy Amildar of the Koratagere sub taluk, is appointed to act as Amildar and 3rd Class Magistrate of the Maddagiri taluk during the absence of Amildar C N Chandraya on leave or until further orders

3 Nageswara Iyer, Police Inspector Tumkur taluk, is appointed to act as Deputy Amildar and 3rd Class Magistrate of the Koratagere sub taluk, during the employment of Deputy Amildar B Vasudeva Rao on other duty, or until further orders

No 9397—*R F* 90 96, *dated, 28th April* 1897.

Under Article 171 of the Mysore Service Regulations, Mr A Rangaswamaiengar, Deputy Commissioner, Kolar district is granted casual leave of absence for five days with *effect from the 5th of May 1897 or such other* date as he may avail himself of the same

2 The Senior Assistant Commissioner at head quarters will be in charge of the district during the absence of the Deputy Commissioner on leave or until further orders.

No 9475—*R F* 47 95, *dated 28th April* 1897

Under Article 171 of the Mysore Service Regulations, S Krishnamurthi Rao Amildar of the Mysore taluk Mysore District, is granted casual leave of absence for five days, with *effect from such date as he may avail himself* of the same

2 The Taluk Sheristadar will be in charge of the current duties of the taluk during the absence of the Amildar on leave or until further orders

No 9482—*R* 3132, *dated 28th April* 97

Mr A Hayes, Sheristadar of the Pavagad taluk is appointed to act as Deputy Amildar and 3rd Class Magistrate of the Alur sub taluk *sub p otem*, during the employment of *Venkataramanaiya as Acting Amildar of the* Hassan taluk or until further orders (To join forthwith)

PUBLIC WORKS

Notification dated 5th May 1897

Sub-Assistant Engineer Mr C R Srinivasaiengar, attached to the Mysore Division, is granted privilege leave of absence for fifteen days with effect from 10th May 1897 or date of departure

ಕರ್ಣಾಟಕ ಪ್ರಕಾಶಿಕಾ.

೧೮೯೭ನೇ ಇಸವಿ ಮೇ ತಾ|| ೧೦ನೇ ಸೋಮವಾರ

ಮಹಾರಾಜ್ಞೀಯವರ ಆಳ್ವಿಕೆಯಂ ಕುರಿತ ಉತ್ಸವವು

ಶ್ರೀಮನ್ಮಹಾರಾಜ್ಞೀ ಇಂಡ್ಯ ಚಕ್ರವರ್ತಿನೀಯವರ ಆಳ್ವಿಕೆಯ ಅರವತ್ತನೆಯ ಸಂವತ್ಸರವು ಪೂರ್ತಿಯಾಗುತಲಿರುವದರಿಂದ ಈ ಶುಭ ಸಂದರ್ಭವು ಆಕೆಯವರ ಪ್ರಜೆಗಳ ಜ್ಞಾಪಕದಲ್ಲಿ ನಿರಂತರವಾಗಿ ನೆಲಗೊಂಡಿರುವಂತೆ ಒಂದು ಉತ್ಸವ ರೂಪವಾಗಿ ಆಚರಿಸಲ್ಪಡತಕ್ಕದ್ದೆಂದು ನಿಶ್ಚಯಿಸಲ್ಪಟ್ಟು ಆ ಬರುವ ಜೂನ್ ತಿಂಗಳ ೨೧ ಮತ್ತು ೨೨ನೇ ತಾರೀಖುಗಳಲ್ಲಿ ಹರ್‌ಮ್ಯಾಜೆಸ್ಟೀಯವರ ದೇಶಕ್ಕೆ ಸೇರಿದ ವಿಶಿಷ್ಟ ಇಲಾಖೆಗಳಿಗೂ ರಜಾ ಕೊಡತಕ್ಕದ್ದೆಂದು ಇಂಡ್ಯಾ ಗವರ್ನ್ಮೆಂಟ್ ಘೋಷಿಸಿ ಆಗಿರುತದೆಯಷ್ಟೆ. ಇದೇ ವಿಶೇಷ ದಿನವನ್ನು ಯಾವ ರೀತಿಯಲ್ಲಿ ಕೊಂಡಾಡತಕ್ಕದ್ದೆಂದು ಯೋಚಿಸಿ ನಿರ್ಧರಿಸಿ, ಅದಕ್ಕೆ ಹಿಡಿಯುವ ಖರ್ಚುಗಳನ್ನು ಚಂದಾಮೂಲಕ ವಸೂಲ್ ಮಾಡುವದಕ್ಕಾಗಿ ಮದರಾಸು ಮುಂತಾದ ಕಡೆ ಜನರು ಸಭೆ ಸೇರಿ ಆ ದಿನ ನಡೆಸಬೇಕಾದ ಕಾರ್ಯಗಳ ವಿಚಾರವನ್ನು ನಿರ್ಧರಿಸಿ ಚಂದಾ ವಸೂಲ್ಮಾಡುತಲಿದ್ದಾಗ್ಯೂ ಈ ಬೆಂಗಳೂರು ಸಿಟಿಯಲ್ಲಾಗಲಿ ಇದಕ್ಕೆ ಸೇರಿದ ಮಿಲಿಟರಿ ಸ್ಟೇಷನಿನಲ್ಲಾಗಲಿ ಸದರೀ ವಿಷಯವಂ ಕುರಿತ ಪ್ರಯತ್ನ ಇದುವರೆಗೆ ನಡೆಸಲ್ಪಡದೆ ಇರುವುದು ಕೇವಲ ಆಶ್ಚರ್ಯಕರವಾಗಿರುತದೆ. ಇಲ್ಲಿನವರು ಕೆಲವರು ಮದರಾಸಿನಲ್ಲಿ ನಡೆಯುವ ಉತ್ಸವಕ್ಕೆ ಚಂದಾಹಣ ಕಳುಹಿಸುತಲಿರುವದರಿಂದ ಸದರೀ ಉತ್ಸವವನ್ನು ಇಲ್ಲಿ ಅನಾವಶ್ಯಕವೆಂದು ಭಾವಿಸಿರುವರೆಂದು ಯೋಚಿಸಬೇಕಾಗಿರುತದೆ. ಆಯಾ ಷಹರ್ ನಿವಾಸಿಗಳಿಗೆ ಮಹಾರಾಜ್ಞೀಯವರಲ್ಲಿರುವ ರಾಜಭಕ್ತಿ ಕೃತಜ್ಞತಾದಿ ಭಾವಪ್ರದರ್ಶನಕ್ಕೆ ಸ್ವಸ್ಥಳವು ಅನುಕೂಲವಾಗಿರುವಲ್ಲಿ ಅದನ್ನುಪೇಕ್ಷಿಸಿ ವ್ಯರ್ಥ ಅನ್ಯತ್ರ ನಡೆಸಲ್ಪಡುವ ಪ್ರಯತ್ನಕ್ಕೆ ಸಹಾಯ ಕರಿಗುವದಕ್ಕುಂಟಾದ ಕಾರಣವೂ ವ್ಯಕ್ತವಾಗಲಿಲ್ಲವೆ. ಈ ಷಹರಿನಲ್ಲಿ ಟೌನ್ ಹಾಲೆಂಬ ರಮಣೀಯವಾದ ಒಂದು ಕಟ್ಟಡವಂ ಕಟ್ಟಿಸುವದರ ಮೂಲಕ ಮಹಾರಾಜ್ಞೀ ಇಂಡ್ಯಾ ಚಕ್ರವರ್ತಿನೀಯವರ ಮತ್ತು ಗತಿಸಿದ ಶ್ರೀಮನ್ಮಹಾರಾಜಾ ಚಾಮರಾಜೇಂದ್ರ ಒಡೆಯರ್ ಬಹದ್ದೂರವರ ಜ್ಞಾಪಕವಂ ಊರ್ಜಿತ ಪಡಿಸಬಹುದಾಗುವದೆಂದು ಕೆಲವು ಕಾಲದ ಹಿಂದೆ ಸೂಚಿಸಿದ್ದೆವು, ಪರಂತು ಸದರೀ ವಿಷಯದಲ್ಲಿ ಮೈಸೂರು ದೇಶೀಯರು ಇದುವರೆಗೆ ಪ್ರಯತ್ನಶೂನ್ಯರಾಗಿರುವದು ಸಾಮಾನ್ಯವಾಗಿ ಮೈಸೂರು ದೇಶೀಯರಿಗೆ, ವಿಶೇಷತಃ ಬೆಂಗಳೂರು ನಿವಾಸಿಗಳಿಗೆ ಗೌರವಾವಹವಾಗಿರಲಾರದೆಂದು ಯೋಚಿಸಬೇಕಾಗಿರುತದೆ ಶ್ರೀಮನ್ಮಹಾರಾಜರವರ ಅಕಾಲಿಕ ಮರಣ ವೃತ್ತಾಂತ ಬಂದ ಕಾಲದೊಳು ಅವರಲ್ಲಿ ತಮಗುಂಟಾದ ರಾಜಭಕ್ತಿ ಪ್ರದರ್ಶನರೂಪವಾಗಿ ಯಾವದಾದರೊಂದು ಶಾಶ್ವತವಾದ ಕಾರ್ಯವಂ ನಡೆಸಬೇಕೆಂದು ಯೋಚಿಸುತಲಿರುವಂತೆ ಪ್ರಕಟಿಸಿದರು, ಪರಂತು ಆ ವಿಷಯದಲ್ಲಿ ಇದುವರೆಗೆ ಯಾವ ಪ್ರಯತ್ನವೂ ನಡೆಸಲ್ಪಡಲಿಲ್ಲವು ಇನ್ನಾದರು ಪ್ರಸಕ್ತ ವಿಷಯದಲ್ಲಿ ಉಚಿತಪ್ರಯತ್ನವಂ ಮಾಡುವವರ ಮೂಲಕ ಇದುವರೆಗೆ ಉಂಟಾಗಿರುವ ಅಪವಾದವಂ ಹೋಗಲಾಡಿಸಿಕೊಳ್ಳುವರೆಂದು ನಂಬುತ್ತೇವೆ.

ಶೃಂಗೇರಿ ಮಠದ ಆದಾಯ ವ್ಯಯಗಳು

ಶೃಂಗೇರಿ ಶ್ರೀಮಠದ ಗೌರವಕ್ಕೂ, ಕೀರ್ತಿಪ್ರತಿಷ್ಠೆಗಳಿಗೂ ಅನುಗುಣವಾಗಿ ಸಂವತ್ಸರವೊಂದಕ್ಕೆ ಸುಮಾರು ೩೦,೦೦೦ ರೂಪಾಯಿಗಳ ಆಮತಿ ಕಲ್ಪಿಸಲ್ಪಟ್ಟದಾಗ್ಯೂ ಅದರ ವ್ಯಯವು ಆಯತಿಯಂ ಮೀರಿ ಪ್ರತಿ ಸಂವತ್ಸರದಲ್ಲೂ ೨೦,೦೦೦ ರೂಪಾಯಿಗಳು ಶ್ರೀಮಠಕ್ಕೆ ಸಾಲವಾಗುತಲಿರುವ ಅಂಶವು ಈಚೆಗೆ ಶ್ರೀಸ್ವಾಮಿಗಳವರ ದಿವ್ಯಚಿತ್ತಕ್ಕೆ ಬಂದು ಸಾಧ್ಯವಾದಮಟ್ಟಿಗೆ ವ್ಯಯವಂ ಮಿತಪಡಿಸಬೇಕೆಂದು ಯೋಚಿಸಿ, ಮುಜರಾಯಿ ಸೆಕ್ರೆಟರಿಯವರಾದ ಶ್ರೀಮಾನ್ ಆರ್ಕಾಡು ಶ್ರೀನಿವಾಸಾಚಾರ್ಯರವರನ್ನು ಶೃಂಗೇರಿಗೆ ಬರಮಾಡಿಕೊಂಡು ಶ್ರೀಮಠದ ತಾತ್ಕಾಲಿಕ ಆದಾಯ ವ್ಯಯಗಳನ್ನವರಿಗೆ ತಿಳಿಸಿ, ಖರ್ಚುಗಳಂ ಆದಾಯಕ್ಕೆ ಒಳಪಡಿಸಬೇಕಾದ ವಿಷಯದಲ್ಲಿ ಅವರ ಅಭಿಪ್ರಾಯವಂ ಕೇಳಲಾಗಿ, ಈಗ ಆಗುತಲಿರುವ ಒಟ್ಟು ಖರ್ಚು ೯೦,೦೦೦ ರೂಪಾಯಿಗಳಲ್ಲಿ ೨೪,೦೦೦ ರೂಪಾಯಿಗಳು ಕಡಮೆ ಮಾಡಿ, ಅಂದರೆ ಖರ್ಚನ್ನು ೬೬,೦೦೦ ರೂಪಾಯಿಗಳಿಗೆ ಇಳಿಸಿ, ಸಾಲೀಯಾನಾ ಉಳಿದ ರೂಪಾಯಿಗಳು ಶ್ರೀಮಠಕ್ಕೆ ಶಿಲ್ಕು ನಿಲ್ಲುವ ರೀತಿಯಲ್ಲಿ ಒಂದು ಲೆಕ್ಕವನ್ನು ತಯಾರ್ಮಾಡಿ ಅದಕ್ಕೆ ಶ್ರೀಸ್ವಾಮಿಗಳವರ ಅನುಮತಿಯಂ ಪಡೆದು ಗವರ್ನಮೆಂಟಿಗೆ ತಿಳಿಸಿರುವಂತೆ ಕಳೆದ ಸೋಮವಾರದ ಮೈಸೂರು ಹೆರಾಲ್ಡ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟದೆ ಶ್ರೀಮಠದಲ್ಲಿ ಬ್ರಾಹ್ಮಣ ಸಂತರ್ಪಣೆಯ ಬಗ್ಗೆ ವಿದ್ಯಾರ್ಥಿಗಳೆನಿಸಿಕೊಂಡು ದೂರದೇಶದಿಂದ ಬರತಕ್ಕವರಿಗೆ ಕೊಡಲ್ಪಡುವ ಸಂಭಾವನೆಗಳ ಬಗ್ಗೆ ಆಗುತಲಿರುವ ಖರ್ಚುಗಳು ದುಬಾರಿಯೆಂದು ಮ|| ಶ್ರೀನಿವಾಸಾಚಾರ್ಯರವರಿಗೆ ತೋರಿದ್ದು ಕಾಲಾನುಗುಣವಾಗಿರುತದೆ. ಶ್ರೀಮಠದ ಹಿಂದಿನ ಎರಡುಮೂರು ಸಂವತ್ಸರಗಳ ಲೆಕ್ಕವನ್ನು ಮುಜರಾಯಿ ಸೆಕ್ರೆಟರಿಯವರು ನೋಡಿರುವ ಪಕ್ಷದಲ್ಲಿ ಎಷ್ಟು ಸಹಸ್ರ ರೂಪಾಯಿಗಳು ಮನೆಗಳಿಗಾಗಿಯೂ, ಮದುವೆಗಳಿಗಾಗಿಯೂ ಶ್ರೀಮಠದಲ್ಲಿ ಸೇರಿಕೊಂಡಿರುವ ಶಾಸ್ತ್ರಿಗಳ ಪಾಲಾಗಿರುವ ಅಂಶವು ಆಚಾರ್ಯರವರ ಲಕ್ಷ್ಯಕ್ಕೆ ಬಂದು, ಇತದಪೇಕ್ಷೆಯಾ ಅನ್ನದಾನ ಮತ್ತು ವಿದ್ವತ್ಸಂಭಾವನೆಯ ಬಗ್ಗೆ ಆಗುವ ವ್ಯಯವು ಪ್ರಾಧಾನ್ಯೇನ ಟೀಕೆಗೆ ವಿಷಯವಾಗಿರಲಾರದು. ಇದರಿಂದ ಸೋಮಾರಿಗಳಾಗಿ ಶ್ರೀಮಠದಲ್ಲಿ ಸೇರಿಕೊಂಡು ಅನಧ್ಯಯನ ಮಾಡುತ ಕಾಲವಂ ಕಳೆಯುವಂತವರಿಗೆ ಅದರಲ್ಲಿ ಪ್ರೋತ್ಸಾಹವಂ ಕಲ್ಪಿಸುವ ಅಭಿಪ್ರಾಯವು ಸುತರಾಂ ನಮಗಿಲ್ಲವು ಈ ಕಾಲದೊಳು ಶ್ರೀಮಠಗಳ ತಾತ್ವಿಕಸ್ಥಿತಿಯು ಕುರಿತ ಲೇಖನವು ಅನೇಕರಿಗೆ ಕೇವಲ ಹೃದಯ ವ್ಯಥಾಕಾರಿಯಾಗಿ ಪರಿಣಮಿಸಬಹುದಾದುದರಿಂದ ಅದಕ್ಕೆ ಅವಕಾಶವಂ ಕೊಡಲು ಇಷ್ಟವಿಲ್ಲದವರಾಗಿರುತ್ತೇವೆ

ಮದರಾಸ್ ಗವರ್ನಮೆಂಟ್ ಅಡ್ವೊಕೇಟ್ ಜನರಲಾಗಿದ್ದ ಮಿ|| ಸ್ಪ್ರಿಂಗ್ ಬ್ರಾನ್ಸನ್ ಸಾಹೇಬರವರು ಕಾಹಿಲೆ ರಜಾ ಪಡಕೊಂಡು ಸ್ವದೇಶಕ್ಕೆ ಹೋದ ಸಂದರ್ಭದಲ್ಲಿ ಅವರ ಕೆಲಸವನ್ನು ಬದಲೀ ನೋಡುವಂತೆ ಅಲ್ಲಿನ ಹೈಕೋರ್ಟ್ ವಕೀಲ್ ಮಂಡಲಿಯಲ್ಲಿ ಅಗ್ರಮರೆನ್ನಿಸಿರುವ ಆನರೆಬಲ್ ಮ|| ವಿ ಭಾಷ್ಯಮಯ್ಯಂಗಾರ್ಯರವರು ನಿಯಮಿಸಲ್ಪಟ್ಟು ಅವರು ಸದರೀಅಧಿಕಾರವು ಸರ್ವಜನಸಮ್ಮತವಾಗಿ ನಿರ್ವಹಿಸುತಲಿದ್ದರಷ್ಟೆ ಆರೋಗ್ಯ ಸಂಪಾದನಾರ್ಥ ಸ್ವದೇಶಕ್ಕೆ ಹೋದ ಮಿ|| ಬ್ರಾನ್ಸನ್ ಸಾಹೇಬರವರು ಅಲ್ಲಿ ದೈವಾಧೀನರಾದರೆಂದು ಈಚೆಗೆ ಕೆಲವು ದಿನಗಳ ಹಿಂದೆ ತಂತಿ ವರ್ತಮಾನ ಬಂದುದರಿಂದ ಅವರ ಕೆಲಸವನ್ನು ಈಗ ಬದಲೀ ನೋಡುತಲಿರುವ ಮಿಸ್ಟರ್ ಭಾಷ್ಯಮಯ್ಯಂಗಾರ್ಯರವರೇ ಅದರಲ್ಲಿ ಕಾಯಂ ಮಾಡಲ್ಪಡುವರೆ ಅಥವಾ ಬೇರೆಯವರಂ ನಿಯಮಿಸಲ್ಪಡುವರೆ ಎಂಬ ಜಿಜ್ಞಾಸೆಯುಂಟಾಗಿ, ಕಕ್ಷಿದ್ವಯವೇರ್ಪಟ್ಟು, ಆಯಾ ಕಕ್ಷಿಗೆ ಪೋಷಕವಾದ ಲೇಖನಗಳಿಗೆ ಪ್ರಾರಂಭವಾಗಿರುತದೆ ಮಿಸ್ಟರ್ ಭಾಷ್ಯಮಯ್ಯಂಗಾರ್ಯರವರು ಸಾಮಾನ್ಯವಾಗಿ ಹೈಕೋರ್ಟ್ ವಕೀಲಗಳಲ್ಲೊಬ್ಬರಾಗಿದ್ದರು ಬಹುಕಾಲದ ಮೊದಲು ಅವರಲ್ಲಿ ಮುಖ್ಯಸ್ಥರಾಗಿರುತ್ತ, ದಕ್ಷಿಣ ದೇಶದೊಳು ಪ್ರಾಯಶಃ ಭಾರೀ ಮೊಕದ್ದಮೆಗಳೆಲ್ಲವು ಇವರಲ್ಲೇ ಬರುತ್ತ, ವಿಶೇಷ ಆಯತಿಯುಳ್ಳವರಾಗಿರುವದರಿಂದಲೂ, ಬೇರೇ ಕಾರಣಗಳಿಂದಲೂ, ಮಿ|| ಬ್ರಾನ್ಸನ್ನಯವರ ಸ್ಥಾನಕ್ಕೆ ಇವರೇ ಅರ್ಹರೆಂಬ ಅಭಿಪ್ರಾಯದೊಡನೆ ಗವರ್ನಮೆಂಟಿನವರು ಇವರನ್ನು ಚುನಾಯಿಸಿ ಸದರೀ ಕೆಲಸದಲ್ಲಿ ನಿಯಮಿಸಿದರು ಈ ಬದಲಿ ನಿಯಾಮಕ ಸಹ ಮದರಾಸ್ನಲ್ಲಿ ಯೂರೋಪಿಯನ್ ಬ್ಯಾರಿಸ್ಟರೆಲ್ಲರಿಗೂ ಬಹಳ ಅಸಮಾಧಾನವನ್ನುಂಟುಮಾಡಿ, ಒಂದು ಸಂದರ್ಭದಲ್ಲಿ ಅವರ ಮೊಕರರಂತಿಯು ನ್ಯಾಯ ವಿರುದ್ಧವಾದುದೆಂದು ಹೈಕೋರ್ಟಿನಲ್ಲಿ ಆಕ್ಷೇಪಿಸಲು, ಅಲ್ಲಿನ ಜಡ್ಜಿಗಳು ಅದು ಸಂಪೂರ್ಣವಾಗಿ ನ್ಯಾಯಸಮ್ಮತವಾದುದೆಂದು ನಿರ್ಣಯಿಸಿದ್ದು ಪ್ರಸಿದ್ಧವಾ

ಗಿ ಯೆಲ್ಲರಿಗೂ ತಿಳಿದ ವಿಷಯವಾಗಿಯೇ ಇದೆ. ಮೆ|| ಭಾಷ್ಯಮಯ್ಯಂಗಾರ್ರವರು ಇದುವರೆಗೆ ಅವರ ನೂತನಾಧಿಕಾರವಂ ನಿರ್ವಹಿಸುತ ಬಂದ ರೀತಿಯನ್ನಾಲೋಚಿಸಲಾಗಿ, ಅವರು ಅದರಲ್ಲಿ ಕಾಯಂ ಮಾಡಲ್ಪಡುವರೆಂದು ನಿರೀಕ್ಷಿಸುವುದು ನ್ಯಾಯವಾಗಿಯೇ ಇರುತಿದೆ. ಮೆ|| ಅಯ್ಯಂಗಾರ್ರವರಲ್ಲಿ ಇತರಾಪೇಕ್ಷೆಯಾ ಯಾವ ಅರ್ಹತೆಯು ಗವರ್ನಮೆಂಟಿನವರ ದೃಷ್ಟಿಗೆ ಗೋಚರವಾಗಿ ಅವರನ್ನು ಬದಲೀ ನೋಡುವಂತೆ ಮಾಡಿದರೂ ಸದರೀ ಅರ್ಹತೆಯು ಈಗ ಗವರ್ನಮೆಂಟಿನವರ ಪರಿಭಾವನೆಗೆ ವಿಷಯವಾಗದೆ ಹೋಗಲಾರದೆಂದು ದೃಢವಾಗಿ ನಂಬುತ್ತೇವೆ.

Occasional Notes.
ನೈಮಿತ್ತಿಕ ವಿಷಯನ್ಯಾಸ

ಬಹುಕಾಲದ ಮೊದಲು ಮದರಾಸನಲ್ಲಿ ಪ್ರಕಟಿಸಲ್ಪಡುತಲಿದ್ದ ಪೀಪಲ್ಸ್ ಫ್ರಂಡ್ ಎಂಬ ಇಂಗ್ಲಿಷ್ ವೃತ್ತಾಂತ ಪತ್ರಿಕೆಯು ಮುಂದೆ ನೆಲ್ಲೂರಲ್ಲಿ ಪ್ರಕಟಿಸಲ್ಪಡುವದೆಂದು ಮದರಾಸಿ ಹಿಂದು ಪತ್ರಿಕೆಯ ಮೂಲಕ ತಿಳಿಯಬರುತಿದೆ.

ಮಹಾರಾಜ್ಞೀಯವರ ಅರುವತ್ತನೆಯ ಸಂವತ್ಸರ ಪ್ರಯುಕ್ತವಾಗಿ ವಿಶಿಷ್ಟ ಉದ್ಯೋಗಿಗಳಿಗೆ ರಜಾ ಕೊಡಲ್ಪಡುವದು ವಿನಾ ಸರಕಾರೀಯಾಗಿ ಬೇರೆ ಯಾವ ಕೆಲಸಗಳೂ ನಡೆಸಲ್ಪಡಲಾಗದೆಂದು ಇಂಡ್ಯಾಗವರ್ನಮೆಂಟಿನವರು ತೀರ್ಮಾನಿಸಿರುತ್ತಾರೆ.

ಕಲ್ಕತ್ತೆ ಮೊದಲು ಬೆಜವಾಡೆಗೆ ಹಾಕಲ್ಪಟ್ಟಿರುವ ಈಸ್ಟಿಂಡಿಯಾ ರೈಲ್ವೆ ಮಾರ್ಗದಲ್ಲಿ ಸಂಚರಿಸುವ ವಿಶಿಷ್ಟ ಗಾಡಿಗಳಲ್ಲಿ ಯಲಕ್ಟ್ರಿಕ್ ದೀಪವನ್ನು ಇಡಿಸಬೇಕೆಂಬ ಪ್ರಾರ್ಥನೆಯನ್ನು ಸದರೀ ಕಂಪೆನಿಯ ಏಜಂಟರು ಒಪ್ಪಿ ವಿಲಾಯತಿಯಲ್ಲಿರುವ ಬೋರ್ಡಿನವರ ಮಂಜೂರಾತಿಯ ಬಗ್ಗೆ ಕಳುಹಿಸಿರುತ್ತಾರೆ.

ಮಹಾರಾಣೀ ಸುವರ್ಣಮಯಿ ಎಂಬವರ ಕೀರ್ತಿಸ್ತಂಭಗಳು ಉತ್ತರ ಹಿಂದೂದೇಶದೊಳು ಬಹುದೂರದ ವ್ಯಾಪಿಸಿರುತ್ತವೆ. ಮುಷ್ಟಿ ಆಕೆಯಿಂದ ಜನಿರ್ಮಿತವಾದ ಗಳೊಳು ಒಂದರಲ್ಲಿ ಕ್ಷಾಮ ಹಿಡಿತರಾದ ಬಡವರಿಗೆ ಪ್ರತಿದಿನದಲ್ಲೂ ಸುಮಾರ್ ನಾಲ್ಕು ಮಣ ಅಕ್ಕಿ ಕೊಡುತಲಿದಾರೆಂದು ಉತ್ತರದೇಶದ ಪತ್ರಿಕೆಯೊಂದು ತಿಳಿಸುತಿದೆ

ಪ್ರಸ್ತುತವ್ವ ನಿಜಾಂ ರಾಜ್ಯ ಜೀವದಶೆಯಲ್ಲಿರುವ ಜನಗಳನ್ನು ಬಾಧಿಸುವ ಆಪತ್ತುಗಳಿಗೆ ಸರಕಾರದವರು ಕೊಡುತಲಿರುವ ಸಹಾಯದ್ರವ್ಯವನ್ನು ನಿಲ್ಲಿಸಬಿಡುವಂತೆ ಹುಕುಂ ಮಾಡಬೇಕೆಂಬ ಪ್ರಾರ್ಥನಾಪೂರ್ವಕ ಮೂರು ಲಕ್ಷ ಪ್ರಜೆಗಳು ರುಜು ಮಾಡಿ ಒಂದು ಅರ್ಜಿಯನ್ನು ಮಹಾರಾಜ್ಞೀಯವರಿಗೊಪ್ಪಿಸಿರುತ್ತಾರೆ.

ಆಗ್ಗೆ ಯೆಂಟುವರ್ಷಗಳ ಹಿಂದೆ ಇಂಡ್ಯಾರಾಜ್ಯದ ವೈಸ್‌ರಾಯಿಯವರಾಗಿದ್ದ ಲಾರ್ಡ್ ಡಫರಿನ್ ಸಾಹೇಬರವರ ಲೇಡಿಯವರು, ಇಂಡ್ಯಾದೇಶದ ಹೆಂಗುಸರ ವಿಷಯದಲ್ಲಿ ತಮಗುಂಟಾಗಿರುವ ನಿರಂತರವಾದ ಕ್ಷೇಮಚಿಂತೆಗೆ ನಿದರ್ಶನರೂಪವಾಗಿ, ವಾಯುವ್ಯದೇಶದ ಬಡ ಹೆಂಗುಸರ ಉಪಯೋಗಾರ್ಥ ಐದು ಪೆಟ್ಟಿಗೆಗಳ ಬಟ್ಟೆಗಳಂ ಸದರೀ ಲೇಡಿಯವರು ಕಳುಹಿಸಿರುವಂತೆ ಇಂಡ್ಯದೇಶದ ಕ್ಷಾಮನಿವಾರಕ ಕಮಿಟಿಯವರಿಗೆ ಕಾಗದ ಬಂದಿರುತದೆ.

ಮಹಾರಾಜ್ಞೀಯವರ ಜೂಬಿಲಿ ಉತ್ಸವಾರ್ಥ ಕಲ್ಕತ್ತೆಯಲ್ಲಿ ಯೇರ್ಪಡಿಸಲ್ಪಟ್ಟಿರುವ ಯೆಗ್ಸಿಕ್ಯೂಟಿವ್ ಕಮಿಟಿಯವರು, ಮಹಾರಾಜ್ಞೀಯವರ ಪ್ರತಿಮಾ ನಿರ್ಮಾಣಾರ್ಥವಾಗಿಯೂ, ಕಲ್ಕತ್ತೆಯಲ್ಲಿ ಒಂದು ಆಸಿಪತ್ರೆಯನ್ನು ಸ್ಥಾಪಿಸುವದಕ್ಕೆ ಮೂಲದ್ರವ್ಯದ ಬಗ್ಗೆ ಚಂದಾಮೂಲಕವಾಗಿ ದ್ರವ್ಯಶೇಖರ ಮಾಡಬೇಕೆಂದು ಜನರಲ್ ಕಮಿಟಿಯವರಿಗೆ ಶಿಫಾರಸ್ ಮಾಡಿರುತ್ತಾರೆ.

ಈಚೆಗೆ ಕೆಲವು ತಿಂಗಳ ಮೊದಲು ಪ್ರಥಮತಃ ಮುಂಬೈಯಲ್ಲಿ ವ್ಯಾಪಿಸಿ ಅಸಂಖ್ಯಾಕವಾದ ಪ್ರಾಣಹಾನಿಗಳನ್ನುಂಟುಮಾಡುತಲಿರುವಪ್ಲೇಗ್ ಎಂಬ ಮಹಾ ಮಾರಿಕೋಪದ್ರವದ ಭಯದಿಂದ ಅನೇಕ ಸಹಸ್ರ ಪ್ರಜೆಗಳು ಸದರೀ ಪಟ್ಟಣಂಬಿಟ್ಟು ಪರಸ್ಥಳಗಳಿಗೆ ಹೊರಟುಹೋಗಿದ್ದರಷ್ಟೆ. ಈಚೆಗೆ ಕೆಲವು ದಿನಗಳ ಮೊದಲು ಸದರೀರೋಗವು ಸ್ವಲ್ಪ ಶಾಂತವಾಗುತಲಿರುವದರಿಂದ ಪರಸ್ಥಳಗಳಿಗೆ ಹೋಗಿದ್ದವರೆಲ್ಲರು ಮರಳಿ ಸ್ವಸ್ಥಳವಂ ಸೇರುತಲಿರುವಂತೆ ಕೇಳಿ ಸಂತೋಷಿಸುತ್ತೇವೆ.

ಈಚೆಗೆ ತಯಾರಾಗಿ ಬಂದ ಕ್ಷಾಮವನ್ನು ಕುರಿತ ಲೆಕ್ಕದಿಂದ ಈಗ ಸುಮಾರು ೩೩ ಲಕ್ಷ ಪ್ರಜೆಗಳು ಕ್ಷಾಮನಿವಾರಕ ಕಾಮಗಾರಿಗಳು, ಮತ್ತು ಧರ್ಮ ಸತ್ರಗಳ ಮೂಲಕ ಜೀವಿಸುತಲಿರುವಂತೆ ವ್ಯಕ್ತವಾಗುತಲಿದೆ. ಇದಂ ಕುರಿತು ಯೋಚಿಸಲಾಗಿ ಆಚೆ ವಾರಕ್ಕಿಂತಲೂ ಕಳೆದವಾರದಲ್ಲಿ ೧,೩೩,೦೦೦ ಮಂದಿ ಹೊಸಬರು ರಿಲೀಫ್‌ಗೆ ಸೇರಿದಂತೆ ಕಾಣುತಿದೆ. ಪಿಶೇನ ಮುಂಬೈ ಮೊದಲು ಹಿಮಾಚಲದವರೆಗೆ ಕ್ಷಾಮವು ವ್ಯಾಪಿಸಿ ದಿನೇದಿನೆ ವೃದ್ಧಿಯನ್ನೈದುತ, ಅರ್ಥಹಾನಿ ಪ್ರಾಣಹಾನಿಗಳನ್ನುಂಟು ಮಾಡುತಲಿದೆ ಯೆಂದು ಸ್ಪಷ್ಟವಾಗಿ ಕಾಣುತಿದೆ.

ಸಂಯುಕ್ತ ರಾಜ್ಯದಲ್ಲಿ, ಅಂದರೆ ಇಂಗ್ಲೆಂಡ್, ಸ್ಕಾಟ್ಲೆಂಡ್, ವೇಲ್ಸ್ ಮತ್ತು ಐರ್ಲೆಂಡ್ ದೇಶಗಳೊಳು ೧೮೯೬ನೇ ಇಸವಿಯಲ್ಲಿ ನಾನಾವಿಧ ಮಾದಕಪದಾರ್ಥಗಳ ಸೇವನೆ ಮಾದಕಕ್ಕೆ ವರಿಂದ ೧೪ಕೋಟಿ ೫೪ ಲಕ್ಷ ೧೪ಸಾವಿರ ೪೧೨ ಪೌಂಡುಗಳು ಖರ್ಚುಮಾಡಲ್ಪಟ್ಟವು ೧೮೯೫ನೇ ಇಸವಿಯಲ್ಲಿ ಹಿಂದಿನ ಸಂವತ್ಸರಕ್ಕಿಂತಲು ೬೫ ಲಕ್ಷ ಪೌಂಡುಗಳು ಸಾರಾಯಿಯ ಬಗ್ಗೆ ಹೆಚ್ಚಿಗೆ ಖರ್ಚು ಮಾಡಲ್ಪಟ್ಟಿರುವದರಿಂದ ಸದರೀ ದೇಶದ ಜನರು ಹೆಂಡ ಕುಡಿಯುವದರಲ್ಲಿ ಪ್ರಚಂಡರಾಗುತಲಿದೆ

ಗ್ರೀಕ್ ದೇಶೀಯರಿಗೂ ತುರ್ಕೀ ದೇಶೀಯರಿಗೂ ಸಮಾಧಾನ ಮಾಡಿಸಬೇಕೆಂಬ ಕೋರಿಕೆಯೊಡನೆ ಯೂರೋಪ್ ದೇಶದ ದೊಡ್ಡ ಸಂಸ್ಥಾನಾಧಿಪತಿಗಳಿಗೆ ಕಾಗದ ಪತ್ರಗಳು ನಡೆಯುತಲಿರುವಂತೆಯೂ, ಪರಂತು ಈಗ ಯುದ್ಧವು ಪ್ರಕಟವಾಗಿರುವಂತವರಿಗೆ ಸಮಾಧಾನವಾಗಿ ಹೋಗುವದಾವು ಅಭಿಮತವಾಗಿರುವದೆಂದು ದೊಡ್ಡ ಸಂಸ್ಥಾನಾಧಿಪತಿಗಳಿಗೆ ತಿಳಿದ ಹೊರತು ಅವರಿಗೆ ಮಾಧ್ಯಸ್ಥ ಪ್ರಯತ್ನವು ಅಸಾಧ್ಯವಾಗಿರುವದೆಂದು ಇಂಗ್ಲೆಂಡ್ ರಾಜ್ಯದ ಅಂಡರ್ ಸೆಕ್ರೆಟರಿಯವರು ಈತಿಂಗಳ ೫ನೇ ತಾರೀಖಿನಲ್ಲಿ ಪಾರ್ಲಿಯಮೆಂಟ್ ಸಮಾಜದಲ್ಲಿ ಪ್ರಸ್ತಾಪಿಸಿರುತ್ತಾರೆ.

ಕಳೆದ ಏಪ್ರಿಲ್ ೧೫ನೇ ತಾರೀಖ್‌ವರೆಗೆ, ಇಂಡ್ಯಾದೇಶದ ದುರ್ಭಿಕ್ಷ ನಿವಾರಣಾರ್ಥ ಏರ್ಪಡಿಸಲ್ಪಟ್ಟಿರುವ ಜನರಲ್ ಫಂಡಿನಲ್ಲಿ ೧,೧೧,೫೬,೯೫೩—೩—೬ ರೂಪಾಯಿಗಳು, ಇಂಡ್ಯಾದೇಶದಲ್ಲಿ ಚಂದಾಮಾಡಲ್ಪಟ್ಟಿರುವವೆ [illegible] ೧,೫೪,೮೯೩—೫—೧ [illegible] ಒಟ್ಟು ೧,೩೩,೧೦ [illegible] ರೂಪಾಯಿಗಳು ಜಮಾ ಆಗಿರುತವೆ. ಈ ಮೊತ್ತದೊಳು ಗ್ರೇಟ್ ಬ್ರಿಟನ್ ಎಂಬ ಇಂಗ್ಲಿಷಿನವರ ದೇಶದಲ್ಲಿ ಮಾತ್ರ ೯೬,೧೫,೪೭೭—೨—೧೧ ರೂಪಾಯಿಗಳು ಚಂದಾ ಮೂಲಕ ವಸೂಲಾಗಿ ಬಂದಿರುತವೆ

ಈಚೆಗೆ ಕೆಲವು ದಿನಗಳ ಹಿಂದೆ ಭಾವನಗರದ ಮಹಾರಾಜರವರ ಇಪ್ಪತ್ತೆರಡನೆಯ ವರ್ಷವರ್ಧಂತಿ ಮಹೋತ್ಸವವು ಬಹಳ ವಿಭವದೊಡನೆ ನೆರವೇರಿಸಲ್ಪಟ್ಟಿತು ಏತದರ್ಥ ಹತ್ತುಸಾವಿರ ರೂಪಾಯಿಗಳು ಬಡಜನರಿಗೆ ಕೊಡಲ್ಪಟ್ಟವು. ಬಡವರಾದ ಕ್ರಿಸ್ತಿಯನ್ ಜನರ ಸಹಾಯಾರ್ಥ ಯೇರ್ಪಡಿಸಲ್ಪಟ್ಟಿರುವ ಫಂಡಿಗೆ ಐನೂರು ರೂಪಾಯಿಗಳು ಕೊಡಲ್ಪಟ್ಟವು ಕಾಲವರ್ಷಾಭಾವದ ಮೂಲಕ ಬೆಳೆಗೆ ಅವಕಾಶವಿಲ್ಲದೆ ಹೋಗಿ ತನ್ಮೂಲಕ ಕಷ್ಟಕ್ಕೆ ಗುರಿಯಾದ ಜನರ ಸಹಾಯಾರ್ಥ ಬಹಳ ಕಂದಾಯವು ಈ ವರ್ಷಕ್ಕೆ ಮಾಫಿ ಮಾಡಲ್ಪಟ್ಟಿತು. ದೇಶಭಾಷಾ ಪಾಠಶಾಲೆಗಳು ಕೆಲವು ನೂತನವಾಗಿ ಯೇರ್ಪಡಿಸಲ್ಪಟ್ಟವು.

ಈ ತಿಂಗಳ ೪ನೇ ತಾರೀಖಿನ ಸಾಯಂಕಾಲ ಫ್ರಾನ್ಸ್ ದೇಶದ ರಾಜಧಾನಿಯಾದ ಪ್ಯಾರಿಸ್ ಪಟ್ಟಣದ ಚಾರಿಟಿ ಬಜಾರ್ ಎಂಬ ಧರ್ಮಸಂತೆ ಬೀದಿಗೆ ಬೆಂಕಿ ತಗಲಿತು. ಆ ಕಾಲದಲ್ಲಿ ಸದರೀ ಬಜಾರಿಗೆ ಪಟ್ಟಣ ಪ್ರಮುಖರುಂಡಲಿಗೆ ಸೇರಿದವರಲ್ಲ ಕೇವಲ ಮುಖ್ಯಸ್ಥರಾದವರನೇಕರು ಬಂದಿದ್ದರು ಅಗ್ನಿಯ ಜ್ವಾಲೆಯು ಅತಿವೇಗದೊಡನೆ ವ್ಯಾಪಿಸಿತು. ಈ ಬೆಂಕಿಗೆ ಸಿಕ್ಕಿದವರಲ್ಲಿ ಇದುವರೆಗೆ ದೊರೆತ ಮಟ್ಟಿಗೆ ನೂರಹನ್ನೊಂದು ಮಂದಿಯ ಕಳೇಬರಗಳು ಇದ್ದಲಿನಂತೆ ದೊರೆತವು. ಅಧನುಪಕ್ಷ ಇನ್ನು ನೂರುಮಂದಿಯವರಿಗೆ, ಬೆಂಕಿಯಿಂದ ಸುಟ್ಟುಬಿದ್ದ ಸಾಮಾನುಗಳ ಕೆಳಗಡೆ ಸಿಕ್ಕಿಕೊಂಡಿರಬಹುದೆಂಬ ಹೆದರಿಕೆಯುಂಟಾಗಿದೆ. ಅನೇಕರಿಗೆ ಪ್ರಬಲ ಘಾಯಗಳು ತಗಲಿರುವುದು ಮಾತ್ರವಲ್ಲದೆ ಪತ್ತೆ ಆಗದೆಯಿರುವಂತವರಲ್ಲಿ ದೊಡ್ಡ ದೊಡ್ಡ ಜಹಗೀರ್‌ದಾರರೂ, ಸೇನಾಧಿಪತಿಗಳೂ ಸೇರಿರುತ್ತಾರೆ. ಮೇಲೆ ತಿಳಿಸಲ್ಪಟ್ಟ ಬಾಜಾರು ಮರಗಳಿಂದ ಕಟ್ಟಲ್ಪಟ್ಟು ಅದಕ್ಕೆ ಒಂದೇಕಡೆ ಬಾಗಿಲು ಇಡಲ್ಪಟ್ಟಿತ್ತು. ಬೆಂಕಿ ತಗಲಿದ ಹನ್ನೆರಡು ನಿಮಿಷಗಳ ಕಾಲದೊಳಗಾಗಿ ಕಟ್ಟಡವಾದ್ಯಂತ ಭಸ್ಮವಾಯಿತು. ಈ ಅಗ್ನಿಯಲ್ಲಿ ಮೃತಪಟ್ಟವರ ಶವಗಳು ಹನ್ನೆರಡು ರೈಲುಗಾಡಿಗಳಿಗೆ ಭರ್ತಿಯಾದವು ಈರೀತಿ ಮೃತಪಟ್ಟವರಲ್ಲಿ ಪ್ಯಾರಿಸ್ ರಾಜಧಾನಿಯೊಳು ಕೇವಲ ಪ್ರಬಲರಾಗಿದ್ದವರು ಕೆಲವರು ಸೇರಿರುತ್ತಾರೆ. ಆಸ್ಟ್ರಿಯಾ ದೇಶದ ಚಕ್ರವರ್ತಿನೀಯವರ ಸೋದರಿಯವರು ಸಹ ಇದರಲ್ಲಿ ಪ್ರಾಣವಂ ಕಳಕೊಂಡರು. ಪ್ಯಾರಿಸ್ ಪಟ್ಟಣದಲ್ಲಿ ಯೆತ್ತ ನೋಡಿದಾಗ್ಯೂ ರೋದನ ಧ್ವನಿಗಳು ಕೇಳಿಸುತಲಿದೆ, ಎಂದು ವಗೈರೆ ತಂತಿ ವೃತ್ತಾಂತ ಬಂದಿರುತದೆ

LOCAL AND PROVINCIAL NEWS.
ಒಳದೇಶಮತ್ತುತಾಲ್ಲೂಕಜಾತಿವೃತ್ತಾಂತಗಳು.

ತುಮಕೂರು ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳಲ್ಲೂ ೧೦,೦೦೦ ರೂಪಾಯಿ ಮುಟ್ಟಿಸಿ ಕುಡಿಯುವ ನೀರಿನ ಭಾವಿ ಕೊಳಗಳನ್ನು ತೋಡಿಸಿದರು. ಈಗ ಮತ್ತೆ ಇನ್ನೂ ೧೧೧ ಭಾವಿ ಕೊಳಗಳನ್ನು ತೆಗಿಸಬೇಕೆಂತಲೂ ಇದಕ್ಕಾಗಿ ಸದ್ಯದಲ್ಲಿ ೧೨,೦೦೦ ರೂಪಾಯಿ ತೆಗದುಕೊಂಡು ಜಾಗ್ರತೆಯಾಗಿ ಕಾಮಗಾರಿಪ್ರಾರಂಭಿಸಬೇಕೆಂತಲೂ ಸರಕಾರದವರು ಅಪ್ಪಣೆಕೊಟ್ಟಿರುತ್ತಾರೆ.—ವೃ. ವ.

ಕೈಪೇಸಿಪೇಟೆ ತಾಲ್ಲೂಕು ಪೊಲೀಸ್ ಇನ್ಸ್‌ಪೆಕ್ಟರಾದ ತಿಮ್ಮಣ್ಣನೆಂಬವರು ಒಂದು ಮೊಕದ್ದಮೆಯಲ್ಲಿ ಪ್ರತಿವಾದಿಯವರು ಕೆಲವರಿಂದ ೧೦೦ ರೂಪಾಯಿಗಳ ರುಷ್ವತ್ ಪಡೆದುಕೊಂಡರೆಂದು ಅವರಮೇಲೆ ಫಿರ್ಯಾದ್ ಬಂದು ಆ ಮೊಕದ್ದಮೆಯು ಇಲ್ಲಿನ ಟೌನ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಈಗ್ಗೆ ನಾಲ್ಕಾರು ದಿನಗಳ ಮೊದಲು ಫಿರ್ಯಾದಿಕಡೆ ಸಾಕ್ಷಿಗಳ ವಿಚಾರಣೆ ನಡೆಯುತಲಿದೆ ಈ ಮೊಕದ್ದಮೆಯ ಪರ್ಯವಸಾನವಂ ಮುಂದೆ ತಿಳಿಸುವೆವು

ಕಳೆದ ತಿಂಗಳ ೧೯ನೇ ತಾರೀಖಿನಲ್ಲಿ ಚೆನ್ನಪಟ್ಟಣ ತಾಲ್ಲೂಕು ಹಲಗೂರಿನ ಪಶ್ಚಿಮಕಡೆ ಇರುವ ಕೋಟೆಮ ತಿಟ್ಟಯೆಂಬುವನ ದಿಮಾನಿನಲ್ಲಿ ಜನಗಳು ಮಣ್ಣು ಹೊಡೆಯುತ್ತಾ ಇರಲು ಅಲ್ಲಿ ಕೆಲವು ಕಬ್ಬಿಣದ ಚಕ್ರಗಳು, ಕಂಬಗಳು ಸಿಕ್ಕಿರುತ್ತವೆ ಇಲ್ಲಿ ಸುಮಾರು ೫೦೦—೬೦೦ ವರುಷಗಳಿಂದೀಚೆ ಹಾಕಿರಬಹುದೆಂದು ತೋರುತ್ತೆ. ಈಗಲೂ ಸಾಧಾರಣವಾಗಿ ೧೦ ಗಜ ಎತ್ತರವಾಗಿ ೧೦೦ ಗಜ ಉದ್ದವಾಗಿ ೪೦—೫೦ ಗಜ ಅಗಲವಾಗಿ ಇರುವ ತಿಟ್ಟು ಒಂದಿರುತ್ತೆ. ಇಲ್ಲಿ ಇನ್ನು ಅತಿಶಯವಾದ ಪದಾರ್ಥಗಳು ಸಿಕ್ಕುತ್ತವೆಂದು ಜನಗಳು ಹೇಳುತ್ತಾರೆ.

ಕೋಲಾರ, ತುಮಕೂರು, ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿ ಕೆರೆಯಕೆಳಗಣ ಜಮೀನುಗಳು ವ್ಯವಸಾಯ ಮಾಡಿದ್ದರೂ ಮಳೆ ಬಾರದೆ ಹೋದಕಾರಣದಿಂದ ತೀರೀಕಸಲು ಆಗದೆ ಪಾಳು ಬಿದ್ದಿದ್ದರೆ ಅಂಥಾ ಜಮೀನುಗಳ ಚಾಲ್ತಿವರುಷದ (೧೮೯೬—೯೭) ಕಂದಾಯದಲ್ಲಿ ಅರ್ಧ ಭಾಗವನ್ನು ರಿಮಿಷನ್ ಮಾಡಲಾದೀತು. ಮುಖ್ಯವಾಗಿ ಮೊಣಕಾಲ್ಮುರು, ಚಿಂತಾಮಣಿ, ಶ್ರೀನಿವಾಸಪುರ, ಬಾಗೇಪಲ್ಲಿ, ಗುಡಿಬಂಡೆ, ಸಿರಾ, ಚಳ್ಳಕೆರೆ, ಹಿರಿಯೂರು ಈ ತಾಲ್ಲೂಕುಗಳ ತರೀ ಜಮೀನುಗಳ ವಿಷಯವನ್ನು ಡಿ|| ಕಮಿಷನರು ಅಜಮಾಯಿಷಿ ಮಾಡಿ ರಿಮಿಷನ್‌ಕೊಡತಕ್ಕದ್ದೆಂದು ಗವರ್ನಮೆಂಟಿನವರು ಹುಕುಂ ಮಾಡಿರುತ್ತಾರೆ:—ವೃ. ವ.

ವರ್ಷಾಭಾವದ ಮೂಲಕ ಇಲ್ಲಿನ ಧರ್ಮಾಂಬುಧಿ ಕೆರೆಯಲ್ಲಿ ನೀರು ಬತ್ತಿ ಹೋಗುವ ಕಾಲದಲ್ಲಿ ಸ್ಯಾಂಕಿ ಕರೆಯಿಂದ ಮೇಲಿನ ಕೆರೆಗೆ ನೀರು ಬಿಡುವ ಪಾಡಿಕೆ ಯಿದ್ದಾಗ್ಯೂ ಈಸಲ ಅದೂ ಬಂದಾಗಿ ಹೋಗಿರುತದೆ. ಹೆಸರಘಟ್ಟದಿಂದ ನಲ್ಲಿಗಳ ಮೂಲಕ ಈ ಷಹರಿಗೆ ತರಲ್ಪಟ್ಟಿರುವ ನೀರಿನ ವಿಷಯವಾದರೆ, ಅದೂ ಅನೇಕಮನೆಗಳಿಗೆ ದುರ್ಲಭವಾಗಿ ಪರಿಣಮಿಸಿದೆ ನೀರಿನ ನಲ್ಲಿಗಳನ್ನಿಡುತಲಿರುವ ಕ್ರಮವಂ ಹಿಂದಿನ ಪತ್ರಿಕೆಗಳ ಮೂಲಕ ತಿಳಿಸಿರುತ್ತೇವೆಯಾಗಿ ಮರಳಿ ಅದಂ ಕುರಿತ ವಿಚಾರವು ಚರ್ವಿತಚರ್ವಣವಾಗಿ ತೋರಬಹುದಾದಾಗ್ಯೂ ನೀರಿನ ವಿಷಯದಲ್ಲಿ ಈಗ ಪ್ರಾಪ್ತವಾಗಿರುವ ಕಷ್ಟದ ದೆಸೆಯಿಂದ ಮರಳಿ ಅದಂ ಕುರಿತ ಪ್ರಸ್ತಾಪವು ಅನಾವಶ್ಯಕವಾಗಿ ಯೆಣಿಸಲ್ಪಡಲಾರದೆಂದು ನಂಬುತ್ತೇವೆ. ನೀರಿನ ನಲ್ಲಿಗಳನ್ನಿಡುವ ವಿಷಯದಲ್ಲಿ ಈಗ ಅನುವರ್ತಿಸಲ್ಪಡುತಲಿರುವ ಆಕ್ರಮವು ಪರಿಹರಿಸಲ್ಪಡದೆ ಹೋಗುವ ಪಕ್ಷದಲ್ಲಿ ಅದರಿಂದ ಈ ಷಹರ್ ನಿವಾಸಿಗಳು ನಿರೀಕ್ಷಿಸುವ ಸುಖವು ಲಭಿಸಲಾರದೆಂದು ಧಾರಾಳವಾಗಿ ಹೇಳುವೆವು.

THE MYSORE GAZETTE.
ಮೈಸೂರು ಗಜೆಟಿ.

ಗುರುವಾರ, ತಾ|| ೬ನೇ ಮೇ ೧೮೯೭.
ಮೈಸೂರ ಗವರ್ನಮೆಂಟಿನವರಿಂದ ಕೊಡೋಣಾದ ಇಸ್ತಿಹಾರನಾಮೆಗಳು.
ಜನರಲ್ ಮತ್ತು ರೆವಿನ್ಯೂ.

ತಾ|| ೧ನೇ ಮೇ ೧೮೯೭.

ನಂ|| ೧೮೭೨—ಎಂ ಫೈ ೩—೯೭—ಜರೂರಿ ಕಂಡ ಸಬ್ ಅಸಿಸ್ಟೆಂಟ್ ಸರ್ಜನಗಳ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತವೆ —

೧ ಮೆ|| ಜೆ. ಎ ಕೋಯಿಲೆನ ಎಲ್ ಎಂ. ಡ ಎಸ್. ಯವರು, ಚಿಕ್ಕಮಗಳೂರು ಸಿವಿಲ್ ಆಸ್ಪತ್ರೆಯಿಂದ ಮೈಸೂರು ಜನರಲ್ ಆಸ್ಪತ್ರೆಗೆ, ಚಾರ್ಜು ಒಪ್ಪಿಸಿದ ತರುವಾಯ ಕೆಲಸಕ್ಕೆ ಹೋಗಿ ಸೇರತಕ್ಕದ್ದು.

೨ ಮೆ|| ಎಸ್ ಕೆ. ಹನುಮಂತರಾವ್, ಎಂ ಬಿ ಮ ಸಿ. ಎಂ. ಯವರು, ಶಿವಮೊಗ್ಗ ಸಿವಿಲ್ ಆಸ್ಪತ್ರೆಯಿಂದ ಚಿಕ್ಕಮಗಳೂರು ಸಿವಿಲ್ ಆಸ್ಪತ್ರೆಗೆ, ಅವರ ರಜಾ ಪೂರೈಸಿದ ತರುವಾಯ ಕೆಲಸಕ್ಕೆ ಹೋಗಿ ಸೇರತಕ್ಕದ್ದು.

ತಾ|| ೩ನೇ ಮೇ ೧೮೯೭

ನಂ|| ೧೮೪೪—ಜೀ. ೧೩೬೨—ಶಿವಮೊಗ್ಗ ತಾಲ್ಲೂಕು ಅಮಲ್ದಾರ್ ಗಾಜನೂರು ಹನುಮಂತರಾಯರ ನೌಕರಿಯು (ಅವರು ಸ್ಪೆಷಲ್ ಕೆಲಸದಮೇಲೆ ದಾಖಲಾದ ತರುವಾಯ) ೨ನೇ ಕ್ಲಾಸ್ ಪೊಲೀಸ್ ಆಫೀಸಿಂಗ್ ಸ್ಪೆಷಲ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟಾಗಿ ಪೊಲೀಸ್ ಕೆಲಸಕ್ಕೆ ವರ್ಗ ಪೊಲೀಸಿನ ಇನ್ಸ್‌ಪೆಕ್ಟರ್ ಜನರಲ್ಲವರ ತಾಬೆಯಲ್ಲಿ ಹಂಗಾಮಿದಾಗಿ ಇಡಲ್ಪಟ್ಟಿರುತ್ತೆ

ತಾ|| ೪ನೇ ಮೇ ೧೮೯೭

ನಂ|| ೧೨೦೧೩—ಜೀ. ೧೩೬೭—ಕ್ರಿಮಿನಲ್ ಪ್ರೊಸೀಜರ್ ಕೋಡಿನ ೩೬ನೇ ಸೆಕ್ಷನ್ ಅನುಸರಿಸಿ, ಮೈಸೂರು ಅಸಿಸ್ಟೆಂಟ್ ಕಮಿಷನರ್ ಮ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮೆ|| [illegible] ಎಂ [illegible] ರಾಯರಿಗೆ ಸದರೀ ಕ್ಲಾಸಿನ ಮ್ಯಾಜಿಸ್ಟ್ರೇಟರಿಗೆ ಸರಕಾರದವರು ಕೊಡಬಹುದಾದ ೪ನೇ ಷೆಡ್ಯೂಲಿನಲ್ಲಿ ನಮೂದಿಸಿರುವ ಈ ಕೆಳಗೆ ಕಂಡ ಜಾಸ್ತೀ ಅಧಿಕಾರವು ಕೊಡಲ್ಪಟ್ಟಿರುತ್ತೆ :—

ದರ್ಖಾಸ್ತಿ ಬಗ್ಯಾಗಿ ಕಮಿಟ್ ಮಾಡುವದಕ್ಕೆ ಅಧಿಕಾರ, ಸೆಕ್ಷನ್ ೨೦೬.

ನಂ|| ೧೨೦೨೭—ಎಂ. ೨೩೩೬—ಸಬ್ ಅಸಿಸ್ಟೆಂಟ್ ಸರ್ಜನ್ ಮೆ|| ಎಸ್. ಕೆ ಹನುಮಂತರಾವ್, ಎಂ ಬಿ ಮ ಸಿ. ಎಂ, ಯವರಿಗೆ ೧೮೯೬ನೇ ಮಾರ್ಚ್ ೧೧ನೇ ಹುಕುಂ ೧೮೯೬—೯೭ ೧೮೪೧ನೇ ನಂಬರ್ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ ಮೂವತ್ತು ದಿನಗಳ ಪ್ರಿವಿಲೇಜ್ ರಜಾ ಇನ್ನೂ ಹದಿನೈದು ದಿನಗಳಿಗೆ ಜಾಸ್ತೀ ಮಾಡಲ್ಪಟ್ಟಿರುತ್ತೆ

ತಾರೀಖ್ ೨೯ನೇ ಏಪ್ರಿಲ್ ೧೮೯೭

ನಂ|| ೯೬೩೪—ರೆ, ಫೈ ೬೨—೯೬—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೪೧ನೇ ಆರ್ಟಿಕಲ್ ಅನುಸರಿಸಿ ಮೈಸೂರು ಡಿಸ್ಟ್ರಿಕ್ಟ್ ಮೈಸೂರು ತಾಲ್ಲೂಕಿನ ಅಮಲ್ದಾರ್ ಎಸ್. ಕೃಷ್ಣಮೂರ್ತಿರಾಯರಿಗೆ ಅವರುಪಯೋಗಿಸಿಕೊಳ್ಳುವ ಕಾರ್ಯ ಲಾಗಾಯಿತು ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ

೨ ತಾಲ್ಲೂಕು ಶಿರಸ್ತೇದಾರರು ಸದರೀ ಅಮಲ್ದಾರರು ರಜಾ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರ್ಯಂತ ಸದರೀ ತಾಲ್ಲೂಕಿನ ಚಾಲ್ತೀ ಕೆಲಸಗಳ ಚಾರ್ಜಿನಲ್ಲಿರತಕ್ಕದ್ದು

ನಂ|| ೯೬೮೨—ರೆ ೩೪೩—ಮಾಗಡಿ ತಾಲ್ಲೂಕು ಶಿರಸ್ತೇದಾರ್ ಮ ಎ ಹೇಸ್ಯವರು, ವೆಂಕಟರಮಣಯ್ಯನವರು ಹಾಸನ ತಾಲ್ಲೂಕಿನ ಆಫೀಸಿಂಗ್ ಅಮಲ್ದಾರ್ರಾಗಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರ್ಯಂತ, ಆಲೂರು ಸಬ್‌ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ಮ ಮೊದಲನೇಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಫೀಸಿಂಗ್ ತಾತ್ಕಾಲ ಸಬ್ಸ್ಟಿಟ್ಯೂಟ್ ಮಾಗಿ ನೇಮಕ ಮಾಡಲ್ಪಟ್ಟಿರುತ್ತಾರೆ

ನಂ|| ೯೩೯೩.—ರ ಫೈ ೯೯-೯೩—ಮೈಸೂರು ಸರ್ವಿಸ ರೆಗ್ಯುಲೇಷನ್‌ಗಳ ೧೩೩ನೇ ಆರ್ಟಿಕಲ್ ಅನುಸರಿಸಿ, ಕೋಲಾರ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮೆ|| ಪಿ ರಂಗಸ್ವಾಮಯ್ಯಂಗಾರ್ರಿಗೆ ೧೮೯೭ನೇ ಮೇ ೫ನೇ ತಾರೀಖು ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

೨. ಹೆಡ್ ಕ್ವಾರ್ಟರಿನಲ್ಲಿರುವ ಸೀನಿಯರ್ ಅಸಿಸ್ಟೆಂಟ್ ಕಮಿಷನರವರು ಸದರೀ ಡೆಪ್ಯುಟಿ ಕಮಿಷನರವರು ರಜಾ ಮೇಲಿರುವ ಕಾಲದಲ್ಲಿ ದಿನ ವಹಿತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ಡಿಸ್ಟ್ರಿಕ್ಟಿನ ಚಾರ್ಜಿನಲ್ಲಿರತಕ್ಕದ್ದು.

ತಾರೀಖ್ ೨೫ನೇ ಏಪ್ರಿಲ್, ೧೮೯೭.

ನಂ|| ೯೩೩೦—ರ ಫೈ ೧೨೩-೯೫—ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ ೧೮೮ನೇ ಆರ್ಟಿಕಲ್ ಅನುಸರಿಸಿ, ತುಮಕೂರು ಡಿಸ್ಟ್ರಿಕ್ಟ್ ಮಧುಗಿರಿ ತಾಲ್ಲೂಕಿನ ಅಮಲ್ದಾರ್ ಸಿ ಎಸ್ ಬಾಳಯ್ಯನವರಿಗೆ ಅವರುಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಎರಡು ತಿಂಗಳು ಇಪ್ಪತ್ತೆಂಟು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

೨. ಕೊರಟಗೆರೆ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ಟಿ ವಾಸುದೇವರಾಯರು ಸದರೀ ಅಮಲ್ದಾರ್ ಸಿ ಎಸ್ ಬಾಳಯ್ಯನವರು ರಜಾ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಮಧುಗಿರಿ ತಾಲ್ಲೂಕಿನ ಅಮಲ್ದಾರ್ ವ ೩ನೇ ಕ್ಲಾಸ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ ಮೊಕರರ್ ಮಾಡಲ್ಪಟ್ಟಿರುತ್ತಾರೆ.

೩. ತುಮಕೂರ ತಾಲ್ಲೂಕ ಪೋಲೀಸ ಇನ್ಸ್‌ಪೆಕ್ಟರ ನಾಗೇಶ್ವರ ಅಯ್ಯರವರು ಸದರೀ ಡೆಪ್ಯುಟಿ ಅಮಲ್ದಾರ್ ಟಿ ವಾಸುದೇವರಾಯರು ಬೇರೆ ಕೆಲಸದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಕೊರಟಗೆರೆ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ವ ೩ನೇ ಕ್ಲಾಸ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ ಮೊಕರರ್ ಮಾಡಲ್ಪಟ್ಟಿರುತ್ತಾರೆ.

SUMMARY OF NEWS
ವೃತ್ತಾಂತ ಸಂಗ್ರಹವು

ಪಂಜಾಬಿನಲ್ಲಿ ಹಿಂದೂಗಳೂ, ಮುಸಲ್ಮಾನರೂ ಸಂಭವಿಸಿದ ಕಲಹವನ್ನು ಮುರಿಯುವ ಉದ್ದೇಶದಿಂದ ಲಾಹೋರಿನ ನವಾಬ್ ಪತ್ತೆ ಅಲ್ಲಿಖಾನರೆಂಬ ದೊಡ್ಡಮನುಷ್ಯರು ತಮ್ಮ ಮನೆಯಲ್ಲಿ ಹಿಂದೂ ಮುಸಲ್ಮಾನರ ಸಭೆ ಕೂಡಿಸಿ, ಉಭಯತ್ರರೂ ಮುಂದೆ ಸ್ನೇಹಭಾವದಿಂದ ನಡೆಯುವ ಬಗ್ಗೆ ಸಭೆಯಲ್ಲಿ ನಿಯಮಗಳನ್ನು ಮಾಡಿಸಿದರು.

ಜಾಮ್ನಪುರದ ದಿವಾನರು ತಮಗೆ ಅಪಮಾನಮಾಡಿದ ಬಗ್ಗೆ ರಜಪುತಸ್ಥಾನದ ಟೈಂಸ್ ಪತ್ರಿಕೆಯ ಮೇಲೆ ಫಿರ್ಯಾದ್ ಮಾಡಿದ್ದರು ಇದರಲ್ಲಿ ಪತ್ರದೊಡೆಯರಿಗೆ ೧೮ ತಿಂಗಳ ಕೈದು, ೫,೦೦೦ ರೂಪಾಯಿ ದಂಡ, ಮತ್ತು ಅದರ ಲೇಖಕರಿಗೆ (ಯಡಿಟರಿಗೆ) ೬ ತಿಂಗಳ ಕೈದು, ೩೫೦ ರೂಪಾಯಿ ದಂಡವಾಯಿತು. ವರ್ತಮಾನ ಪತ್ರಕರ್ತರಿಗೆ ಇಷ್ಟು ದೊಡ್ಡ ಶಿಕ್ಷೆಯಾದದ್ದು ಇದೇ ಮೊದಲನೇದು

ಕಲ್ಕತ್ತೆಯ ಹತ್ತಿರ ಒಂದು ಹಳ್ಳಿಯಲ್ಲಿ ಗಂಡಹೆಂಡರು ಇರುವದೊಂದು ಮನೆಗೆ ರಾತ್ರಿಯಲ್ಲಿ ದರೋಡೆ ಕಳ್ಳರು ಬರಲು, ಗಂಡನು ಪಿಸ್ತೂಲಿನ ಎರಡು ಗುಂಡುಗಳನ್ನು ಕಳ್ಳರ ಮೇಲೆ ಹಾರಿಸಿದ್ದರಿಂದ ಎಲ್ಲರೂ ಹಿಂದಕ್ಕೆ ಓಡಿ ಮೂವರು ಮಾತ್ರ ಮನೆಯ ಬಾಗಿಲಲ್ಲಿ ನಿಂತರು ಅವರು ಪ್ರಯತ್ನದಿಂದ ಬಾಗಿಲು ಮುರಿದು ಒಳಗೆ ಸೇರಲು, ಒಳಗಿನ ಹೆಂಗಸು ಧೈರ್ಯದಿಂದ ತೊರೆದು ಕೈಯೊಳಗೆ ಕತ್ತಿಯಂಥಾ ದೊಡ್ಡದು ಚಾಕುವನ್ನು ತೆಗೆದು ಬಾಗಿಲಿನ ಹಿಂದೆ ನಿಂತು ಮೊದಲು ಮುಂದೆ ಬಂದವನ ರುಂಡವನ್ನು ಕಡಿದು ಕೆಡಹಿದಳು ಎರಡನೇಯವನು ಕೊಡ್ಲಿಯನ್ನು ಸೆಳೆದುಕೊಂಡು ಮುಂದಕ್ಕೆ ಬಂದ ಕೂಡಲೆ ಅವನು ನೆವರಿದ ತಲೆಯನ್ನೇ ಆ ತರುಣಿಯು ಹಾರಿಸಿಬಿಟ್ಟಳು ಬಳಿಕ ಕಳ್ಳರು ಓಡಿಹೋದರು —ಕ. ವೈ.

ಈಗ್ಗೆ ಕೆಲವು ದಿನಗಳ ಹಿಂದೆ ಬೆಣ್ಣೆಪುರ್, ಮೋಗರಾ ಮುಂತಾದ ಎರಡು ಮೂರು ಹಳ್ಳಿಗಳಲ್ಲಿ ದೊಡ್ಡ ದೊಡ್ಡ ಭಯಂಕರವಾದ ಮೋಡಗಳಾಗಿ ಆನೆಕಲ್ಲಿನ ಮಳೆಯಾಯಿತು ಅದರಿಂದ ಮನೆಗಳು ಬಿದ್ದುಹೋದವು, ಮರಗಳು ಭಗ್ನವು, ಮತ್ತು ಹದಿನಾಲ್ಕು ಜನಗಳು ಮೃತಪಟ್ಟರು, ಇದಲ್ಲದೆ ಬಹುಜನಗಳಿಗೆ ಭಾರೀ ಜಖಮುಗಳಾಗಿರುತಿವೆ ಮೇಲೆ ಹೇಳಿದ ಹಳ್ಳಿಗಳ ಪೈಕಿ ಒಂದು ಹಳ್ಳಿಯು ನಾಶವಾಗಿ ಹೋಯಿತು. ಆ ವೇಳೆಯಲ್ಲಿ ಹಳ್ಳಿಯಲ್ಲಿ ವಾಸ ಮಾಡುತಲಿದ್ದ ಜನಗಳು ಎರಡನೆಯ ಪೂರಿಗೆ ಸಂತೆ ನಡೆಯುವ ಮೂಲಕ ಹೋಗಿದ್ದರು. ಇಲ್ಲದಿದ್ದರೆ ಇದಕ್ಕಿಂತಲೂ ಹೆಚ್ಚು ಅನರ್ಥವಾಗುತಲಿತ್ತು ಒಂದು ಮನೆಯಲ್ಲಿ ಒಬ್ಬ ಬ್ರಾಹ್ಮಣ ಮತ್ತು ಅವನ ಹೆಂಡತಿ ಒಬ್ಬ ಮಗನು ಈ ಪ್ರಕಾರ ಮೂರು ಜನರಿದ್ದರು ಅವರ ಮನೆಯೇ ಕಿತ್ತುಹೋಯಿತು, ಬ್ರಾಹ್ಮಣನ ಹೆಂಡತಿ ಮತ್ತು ಮಗನು ಬಾವಿಗೆ ಒರಗಿ ಪ್ರಾಣ ಬಿಟ್ಟರು ಬ್ರಾಹ್ಮಣನು ಅವರ ಸಂಗಡಲೇನೆ ಮೇಲಕ್ಕೆ ಹಾರಿಹೋಗಿ ೧೫ ಅಡಿ ಎತ್ತರದ ಒಂದು ಗಿಡದ ಮಧ್ಯದಲ್ಲಿ ಸಿಕ್ಕಿ ಅಲ್ಲಿಯೇ ಅವನು ಪ್ರಾಣಬಿಟ್ಟನು

THE APPROACHING JUBILEE FETE AT CUBBON PARK.—The General Committee of the City Municipality, in connection with the commemoration of the Queen's Diamond Jubilee at the Cubbon Park, have secured the services of an experienced artist, in the person of Mr Shama Rao, Drawing Instructor of the City Police School, to prepare two transparencies of the life size likenesses of Her Most Gracious Majesty Queen Victoria, Empress of India, and His Highness the Maharajah of Mysore. —D. P.

The Mysore Gazette.

Bangalore, Thursday, 3rd June 1897.

NOTIFICATIONS BY THE GOVERNMENT OF MYSORE.

GENERAL AND REVENUE.

No. 12693—J. 1137, *dated 26th May* 1897.

Under Section 12 of the Code of Criminal Procedure, B. S. Ranoji Rao, Revenue Probationer, Mysore district, is appointed a Magistrate of the 3rd Class.

No. 10422—*R. F. 83-96, dated 27th May* 97.

Under Article 188 of the Mysore Service Regulations, C. Shamaiengar, Amildar of the Nagamangala taluk, is granted three months' privilege leave of absence, with effect from such date as he avail himself of it.

D. Subba Rao, Deputy Amildar, French Rocks, is appointed to act as Amildar and 3rd Class Magistrate of the Nagamangala taluk during the absence of C. Shamaiengar on leave or until further orders.

N. Gopalakrishnaiengar, B.A., B.L., Clerk, Dewan's office, is appointed to act as Deputy Amildar and 3rd Class Magistrate, French Rocks, during the employment of D. Subba Rao on other duty or until further orders.

AN EARLY WARNING.

The Madras Government has issued the following order to the District officers:—Even a partial failure of the next south-west monsoon is likely to lead to a very considerable extension of the distressed area in the Presidency besides greatly accentuating the scarcity and suffering in the districts already affected, and His Excellency the Governor in Council is of opinion that the next month or two should be utilised in getting this ready for the possibility. The attention of the Collectors of all districts, especially of the non-affected ones, should therefore be drawn to the urgent necessity of having programmes of famine relief works prepared in advance and of providing a sufficient number of sanctioned works ready to be started whenever required in places likely to be seriously affected. The division of the district into village relief circles, the localities where poor-houses and kitchens will be most wanted and the extra establishments likely to be required are the matters that should be thought out in advance. It is of the utmost importance that District officers should be prepared on all points for the contingency of serious distress next July; all the detailed enquiries prescribed in section 75 of the Famine Code should be completed by the 15th June, plans for circle inspections laid down, men designated for the charges, and works made ready for immediate opening by the provision of tools, staff and the like.

The experience of the past few months has brought out prominently that the Public Works Department is generally unable to start the works proposed by Collectors at short notice and that considerable delay is frequently caused in the opening of relief works by the insufficiency of the Public Works staff. Orders have already been issued that relief works should in the first instance be taken up by the ordinary Public Works staff of the district, and that their opening should in no case be delayed pending the arrival of special officers deputed from other districts. Superintending Engineers will now be instructed to frame for each district in consultation with the Collector a forecast of the probable requirements as regards staff, tools &c. and submit it to the Chief Engineer as early as possible.

ನೋಟೀಸು.

ಇದರಿಂದ ನಮ್ಮ ಚಂದಾದಾರರಿಗೆ ಪ್ರಕಟಪಡಿಸುವದೇನೆಂದರೆ —

ಈಸಾಲಿನಲ್ಲಿ ಆರಂಭವಾದ ೧೮೯೭ನೇ ಇಸವಿಯಲ್ಲಿ ಆರನೇ ತಿಂಗಳು ನಡೆಯುತಲಿರುವದರಿಂದ ನಮ್ಮ ಚಂದಾದಾರರೆಲ್ಲರು ಅವರವರ ಚಂದಾ ಹಣವನ್ನು ಕೂಡಲೆ ಕಳುಹಿಸಿ ನಮಗೆ ಸಹಾಯಕರಾಗಿರಬೇಕೆಂದು ಕೋರುತ್ತೇವೆ.

ಇನ್ನು—ನಮ್ಮ ಚಂದಾದಾರರಲ್ಲಿ ಅನೇಕರು ಹಿಂದಿನ ಒಂದೆರಡು ಸಾಲಿನ ಚಂದಾವನ್ನು ಬಾಕಿಯುಳ್ಳಿಸಿಕೊಂಡು, ಅದಕ್ಕೆ ನಾವು ಅವರಿಗೆ ಅನೇಕಸಲ ಬರೆದ ಕಾಗದಗಳಿಗೆ ಜವಾಬ್ ಕೊಡದೆ ಉದಾಸೀನ ಭಾವವಂ ತೋರ್ಪಡಿಸುತಲಿರುವುದು ಸುತರಾಂ ಸರಿಯಾಗಿ ಕಾಣುವದಿಲ್ಲವಾಗಿ ನಮ್ಮ ಬಾಕಿದಾರರೆಲ್ಲರು ಈ ನೋಟೀಸನ್ನು ನೋಡಿದ ಕೂಡಲೆ ಬಾಕಿಗಳನ್ನು ಕಳುಹಿಸಿಕೊಡುವುದು ಉಚಿತವಾಗಿರುವದೆಂದು ಮತ್ತೊಂದಾವರ್ತಿ ಸೂಚಿಸುತ್ತೇವೆ. ಇಲ್ಲದ ಪಕ್ಷದಲ್ಲಿ ಬಾಕಿದಾರರಿಗೆ ಕಳುಹಿಸಲ್ಪಡುವ ಪತ್ರಿಕೆಗಳನ್ನು ಕೂಡಲೆ ನಿಲ್ಲಿಸಿ, ಅವರ ಹೆಸರುಗಳಂ ಈ ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿಬರುವುದು ಖಂಡಿತವಲ್ಲದೆ ಬಾಕಿ ವಸೂಲಿ ವಿಷಯದಲ್ಲಿ ನಾವು ಅವಲಂಬಿಸಲುದ್ದೇಶಿಸಿರುವ ಕ್ರಮದಿಂದ ಬಾಕಿದಾರರಿಗೆ ಉಂಟಾಗಬಹುದಾದ ನಷ್ಟಗಳಿಗೆ ನಾವು ಜವಾಬ್ದಾರರಾಗಲಾರೆವೆಂದು ತಿಳಿಯಬೇಕು.

ಪ್ರೊಪ್ರೈಟರ್ ಕ. ಪ್ರ.

ಕರ್ಣಾಟಕ ಪ್ರಕಾಶಿಕಾ.

೧೮೯೭ನೇ ಇಸವಿ ಜೂನ್ ತಾ|| ೭ನೇ ಸೋಮವಾರ.

ಜವಾಬ್ದಾರಿಯುಳ್ಳ ಉನ್ನತಾಧಿಕಾರಿಗಳ ಪುರೋದೃಷ್ಟಿ

ಈ ದೇಶಕ್ಕೆ ಕೇವಲ ಸಮೀಪದಲ್ಲಿರುವ ಮದರಾಸ್ ಪ್ರೆಸಿಡೆನ್ಸಿಗೆ ಸೇರಿದ ಕೆಲವು ಡಿಸ್ಟ್ರಿಕ್ಟುಗಳಲ್ಲಿ ದುರ್ಭಿಕ್ಷ ತಲೆದೋರಿ ಅದಕ್ಕೆ ಗುರಿಯಾದ ಬಡಜನರ ಸಹಾಯಾರ್ಥ ಅಲ್ಲಲ್ಲಿ ರಿಲೀಫ್ ಕಾಮಗಾರಿಗಳು ಪ್ರಾರಂಭಿಸಲ್ಪಟ್ಟು ನಡೆದು ಬರುತಲಿದೆಯಷ್ಟೆ. ಅಲ್ಲಿನ ಗವರ್ನರವರಾದ ಸರ್ ಆರ್ಥರ್ ಹಾವಲಾಕ್ ಸಾಹೇಬರವರು ದೇಶದ ತಾತ್ಕಾಲಿಕ ಸ್ಥಿತಿಯನ್ನಾಲೋಚಿಸಿ ಪುರೋದೃಷ್ಟಿಯಿಂದ ಡಿಸ್ಟ್ರಿಕ್ಟು ಆಫೀಸರುಗಳಿಗೆ ಸಾದರ್ಮಾಡಿರುವ ಹುಕುಮಿನ ಸಾರಾಂಶವಂ ಇದರಡಿ ಪ್ರಕಟಿಸುತ್ತೇವೇನೆಂದರೆ —

ಮುಂದೆ ಆಗಬೇಕಾದ ವರ್ಷವು ಪೂರ್ತಿಯಾಗಿ ಆಗದೆ ಹೋಗುವದರಿಂದ ಇದುವರೆಗೆ ಕ್ಷಾಮದಿಂದ ಪೀಡಿತಗಳಾಗಿರುವ ಡಿಸ್ಟ್ರಿಕ್ಟುಗಳಲ್ಲಿ ಇದ್ದ ಘೋರ ದುರ್ಭಿಕ್ಷ್ಯವೂ ಪ್ರಜೆಗಳ ಕಷ್ಟವೂ ಬಹಳಮಟ್ಟಿಗೆ ಹೆಚ್ಚುವುದು ಮಾತ್ರವಲ್ಲದೆ, ಮದರಾಸಿ ಪ್ರೆಸಿಡೆನ್ಸಿಯೊಳು ಇನ್ನು ವಿಸ್ತಾರವಾದ ಪ್ರದೇಶಗಳಲ್ಲಿ ಅದು ಸಹ ವ್ಯಾಪಿಸುವುದು. ಆ ಸಂಭವಗಳಿಗೆ ಸನ್ನದ್ಧರಾಗಿರತಕ್ಕ ಬಗ್ಗೆ ಮುಂದಿನ ಒಂದೆರಡು ತಿಂಗಳ ಕಾಲವನ್ನು ಉಪಯೋಗಿಸಿಕೊಳ್ಳಬೇಕೆಂದು ಮಂತ್ರಿಸಭಾ ಸಮೇತರಾದ ಘನವಂತರಾದ ಗವರ್ನರವರ ಅಭಿಪ್ರಾಯ ಇರುತ್ತದೆ. ಆದುದರಿಂದ ಪೂರ್ವಭಾವಿಯಾಗಿ ಕ್ಷಾಮ ನಿವಾರಕ ಕಾಮಗಾರಿಗಳ ಯೋಚಿಸಿ, ಬಲವಾದ ಕ್ಷಾಮಕ್ಕೆ ಗುರಿಯಾಗುವ ಸಂಭವ ಕಂಡುಬರುವ ಪ್ರದೇಶಗಳಲ್ಲಿ ಬೇಕಾದರೇ ಬೇಕಾದಮಟ್ಟಿಗೆ ಕಾಮಗಾರಿಗಳಂ ಪ್ರಾರಂಭಿಸುವದಕ್ಕೆ ಮಂಜೂರಾತಿಯಂ ಪಡೆದಿಟ್ಟಿರುವ [illegible] ಕೇವಲ ಆವಶ್ಯಕವೆಂದು [illegible] ವಾಗಿ ಡಿಸ್ಟ್ರಿಕ್ಟುಗಳ ಕಲೆಕ್ಟರುಗಳ, ವಿಶೇಷವಾಗಿ ಕ್ಷಾಮ ಪೀಡಿತಗಳಲ್ಲದ ಡಿಸ್ಟ್ರಿಕ್ಟುಗಳ ಕಲೆಕ್ಟರುಗಳ ಗಮನಕ್ಕೆ ತರಬೇಕಾದ್ದು ಅವಶ್ಯವಾಗಿರುತ್ತದೆ. ಯಾವ ಯಾವ ಡಿಸ್ಟ್ರಿಕ್ಟಿನ ಯಾವ ಯಾವ ವಿಭಾಗದಲ್ಲಿ ರಿಲೀಫ್ ಕಾಮಗಾರಿಗಳಂ ಪ್ರಾರಂಭಿಸಬೇಕಾಗುವುದೋ, ಎಲ್ಲೆಲ್ಲಿ ಅನ್ನಸತ್ರಗಳಂ ಇಡಬೇಕಾಗಿರುವುದೋ, ಎಷ್ಟರಮಟ್ಟಿಗೆ ಹೆಚ್ಚಾಗಿ ಜನಗಳನ್ನು ನೇಮಿಸಬೇಕಾಗಿರುವುದೋ, ಇವುಗಳನ್ನು ಮೊದಲು [illegible] ಯೋಚಿಸಿ [illegible]. ಮುಂದಿನ ಜುಲೈ ತಿಂಗಳಲ್ಲಿ ಬಲವಾದ ಕ್ಷಾಮವು ಪ್ರಾಪ್ತವಾಗುವ ಸಂಭವದಲ್ಲಿ ಪ್ರತಿ ಜವಾಬ್ದಾರಿಯ ಡಿಸ್ಟ್ರಿಕ್ಟು ಆಫೀಸರುಗಳು ಅದಕ್ಕೆ ತಕ್ಕ ಸನ್ನಾಹಗಳಂ ಮಾಡಿಕೊಂಡಿರಬೇಕಾದುದು ಅತ್ಯಂತ ಅವಶ್ಯಕವಾದುದು. ಫ್ಯಾಮಿನ್ ಕೋಡಿನ ೭೫ನೇ ಸೆಕ್ಷನ್ನಿನಲ್ಲಿ ವಿಧಿಸಲ್ಪಟ್ಟಿರುವ ತನಿಖೆಗಳನ್ನು ಈ ಜೂನ್ ತಿಂಗಳ ೧೫ನೇ ತಾರೀಖಿನೊಳಗಾಗಿ ಪೂರೈಸತಕ್ಕದ್ದು. [illegible] ಸರ್ಕಲ್ ಇನ್ಸ್‌ಪೆಕ್ಷನ್‌ಗಳ ಪ್ಲಾನುಗಳು ಸಿದ್ಧಪಡಿಸಲ್ಪಟ್ಟು, ಅವುಗಳ ಚಾರ್ಜ್ ವಹಿಸುವುದಕ್ಕೆ ಜನರಂ ನೇಮಿಸಲ್ಪಡತಕ್ಕದ್ದು, ಕಾಮಗಾರಿಗಳಂ ಕೂಡಲೆ ಪ್ರಾರಂಭಿಸುವದಕ್ಕೆ ಬೇಕಾದ ಕರ್ಮಚಾರಿಗಳು ಮೊದಲಾದುವು ಸಿದ್ಧಪಡಿಸತಕ್ಕದ್ದು. ಕಲೆಕ್ಟರುಗಳು ತಿಳಿಸುವ ಕಾಮಗಾರಿಗಳನ್ನು ಕೂಡಲೆ ಪ್ರಾರಂಭಿಸುವದಕ್ಕೆ ಪಬ್ಲಿಕ್‌ವರ್ಕ್ಸ್ ಇಲಾಖೆಯವರು ಸಾಮಾನ್ಯವಾಗಿ ಅಶಕ್ತರಾಗಿರುತ್ತಾರೆಂತಲೂ, ಸದರೀ ಇಲಾಖೆಯ ಉದ್ಯೋಗಸ್ಥರು ಸಾಲದಾಗಿರುವದರಿಂದ ರಿಲೀಫ್ ಕಾಮಗಾರಿಗಳನ್ನು ಪ್ರಾರಂಭಿಸುವದಕ್ಕೆ ಬಹಳ ಸಾವಕಾಶವಾಗುತದೆಯೆಂತಲೂ, ಹಿಂದಿನ ನಾಲ್ಕು ತಿಂಗಳ ಅನುಭವದ ಮೂಲಕ ತಿಳಿಯಬರುವದರಿಂದ ಡಿಸ್ಟ್ರಿಕ್ಟು ಪಬ್ಲಿಕ್‌ವರ್ಕ್ಸ್ ಇಲಾಖೆಯವರೇ ಮೊದಲು ರಿಲೀಫ್ ಕಾಮಗಾರಿಗಳನ್ನು ಪ್ರಾರಂಭಿಸತಕ್ಕದ್ದೆಂತಲೂ ಬೇರೆ ಡಿಸ್ಟ್ರಿಕ್ಟುಗಳಿಂದ ಸ್ಪೆಷಲ್ ಆಫೀಸರುಗಳು ಬರುವ ತನಕ ಯಾವ ಸಂದರ್ಭದಲ್ಲಿಯೂ ಕಾಮಗಾರಿಗಳಂ ಪ್ರಾರಂಭಿಸದೆ ಇರಕೂಡದೆಂತಲೂ, ಬೇಕಾದ ಉದ್ಯೋಗಸ್ಥರು ಮತ್ತು ಹತ್ಯಾರುಮುಟ್ಟು ವಿಷಯದಲ್ಲಿ ಸೂಪರಿಂಟೆಂಡಿಂಗ್ ಇಂಜಿನಿಯರುಗಳು ಕಲೆಕ್ಟರುಗಳೊಡನೆ ಆಲೋಚಿಸಿ ಕೂಡಲೆ ಚೀಫ್ ಇಂಜಿನಿಯರವರಿಗೆ ತಿಳಿಸತಕ್ಕದ್ದೆಂತಲೂ, ಇದುವರೆಗೇನೆ ಹುಕುಂ ಕೊಡಲ್ಪಟ್ಟಿದೆ, ಎಂಬುದು.

ಪ್ರಕೃತ ಕ್ಷಾಮವು ಪ್ರಾಪ್ತವಾಗುವ ಸೂಚನೆಗಳು ಕಂಡುಬಂದ ಕೂಡಲೆ ಪುರೋದೃಷ್ಟಿಯಿಂದ ಅದರ ಉಲ್ಬಣವಂ ಸಾಧ್ಯವಾದಮಟ್ಟಿಗೆ ತಪ್ಪಿಸಬೇಕಾದ ವಿಷಯದಲ್ಲಿ ಆವಶ್ಯಕಗಳಾಗಿ ಕಂಡುಬರುವ ಸನ್ನಾಹಗಳಂ ಪೂರ್ವಭಾವಿಯಾಗಿ ಸಿದ್ಧಪಡಿಸಿಕೊಂಡಿದ್ದಿರುವ ಪಕ್ಷದಲ್ಲಿ ಅದು ಈಗಿನಷ್ಟು ಪ್ರಾಬಲ್ಯದೆಶೆಗೆ ಬಂದು, ಅಸಂಖ್ಯಾತವಾದ ಪ್ರಾಣಹಾನಿಗಳನ್ನುಂಟುಮಾಡಿಲಾರದು. ಇದರ ಪ್ರಾರಂಭದಲ್ಲಿ ಇಂಡ್ಯ ಗವರ್ನಮೆಂಟಿನವರು ವ್ಯಕ್ತಪಡಿಸಿದ ಔದಾಸೀನ್ಯದಿಂದ ದುರ್ಭಿಕ್ಷವು ಬಹುದೂರ ವ್ಯಾಪಿಸಿ ಅದರ ನಿವಾರಣೆಯು ಕೇವಲ ಕಷ್ಟಸಾಧ್ಯವಾಗಿ ಪರಿಣಮಿಸಿತು. ಮದರಾಸ್ ಗವರ್ನರವರಾದ ಸರ್ ಆರ್ಥರ್ ಹಾವಲಾಕ್ ಸಾಹೇಬರವರು ಸ್ವಭಾವತಃ ತಮ್ಮ ಅಧಿಕಾರಕ್ಕೆ ಒಳಪಟ್ಟ ಪ್ರಜೆಗಳಿಗ ಸುಖಸ್ಥಿತಿಯಂ ಕಲ್ಪಿಸುವದರಲ್ಲಿ ಬದ್ಧಸಂಕಲ್ಪರುಳ್ಳವರಾಗಿರುವದರಿಂದ ದೇಶದ ತಾತ್ಕಾಲಿಕ ಸ್ಥಿತಿಯಂ ಚೆನ್ನಾಗಿ ಆಲೋಚಿಸಿ, ದೈವಾತ್ ಮುಂದೆ ಪ್ರಾಪ್ತವಾಗಬಹುದಾದ ಸಂಕಟಗಳಂ ಸಾಧ್ಯವಾದಮಟ್ಟಿಗೆ ನಿವಾರಿಸುವದಕ್ಕೆ ಆವಶ್ಯಕಗಳಾದ ಸನ್ನಾಹಗಳಂ ಮಾಡಿಕೊಂಡಿರುವು ಉಚಿತವೆಂದು ಭಾವಿಸಿ ಕೊಟ್ಟ ಮೇಲಿನ ಹುಕುಂ ಅವರ ಉಚಿತಜ್ಞತೆಗೂ ಪುರೋದೃಷ್ಟಿಗೂ ನಿದರ್ಶನರೂಪವಾಗಿರುವುದೆ.

ಮಹಾರಾಜ್ಞೀಯವರ ಡೈಮಂಡ್ ಜೂಬಿಲೀ ಉತ್ಸವವು

ಶ್ರೀಮನ್ಮಹಾರಾಜ್ಞೀ ಇಂಡ್ಯ ಚಕ್ರವರ್ತಿನೀಯವರು ರಾಜ್ಯಭಾರವನ್ನು ಕೈಗೊಂಡದ್ದು ಮೊದಲು ಈ ತಿಂಗಳಿಗೆ ಅರವತ್ತು ಸಂವತ್ಸರಗಳು ಪೂರ್ತಿಯಾಗುವದರಿಂದ ಇಷ್ಟು ದೀರ್ಘಕಾಲಿಕವಾದ ಆಳ್ವಿಕೆಯು ಆಕೆಯ ವಂಶ ಅಧಿಕಾರಕ್ಕೆ ಒಳಪಟ್ಟ ಸಮಸ್ತ ದೇಶಗಳಲ್ಲೂ ಒಂದು ಉತ್ಸವ ರೂಪವಾಗಿ ಆಚರಿಸಲ್ಪಡತಕ್ಕದ್ದೆಂದು ಇಂಗ್ಲಾಂಡಿನಲ್ಲಿ ಆದ ವ್ಯವಸ್ಥೆಯನ್ನನುಸರಿಸಿ ಇಂಡ್ಯ ದೇಶದೊಳು ಸಹ ತದರ್ಥ ಸನ್ನಾಹಗಳು ನಡೆಯುತಲಿರುವಂತೆ ಹಿಂದಿನ ಪತ್ರಿಕೆಗಳ ಮೂಲಕ ತಿಳಿಸಿರುತ್ತೆ. ಮೈಸೂರಿನಲ್ಲಿ ತದರ್ಥ ನಿಶ್ಚಯಿಸಲ್ಪಟ್ಟಿರುವ ಈ ತಿಂಗಳ ೨೦ ಮತ್ತು ೨೨ನೇ ತಾರೀಖುಗಳಲ್ಲಿ ನಡೆಸಲ್ಪಡುವ ಮೂರು ವಿನೋದಕರಗಳಾದ ಕಾರ್ಯಗಳಲ್ಲಿ ಕೆಲವನ್ನು ಇದರಡಿ ತಿಳಿಸುವೆವು.—

ಕೋಲಾರ, ಮೈಸೂರ ನಾರ್ಥ್ ಪೈಮರಿ ಸ್ಕೂಲ್ ಆರ್, ಬೆಂಗಳೂರು, ಪಶ್ಚಿಮ, ಪುಟ್ಟಣ್ಣ ಬೆಂಗಳೂರು, ಮೈಸೂರು ನಾರ್ಥ್ ಹೈಸ್ಕೂಲ್, ಇದು ಬಿಸಮ್ ಎನ್ನು ಕೆಲವು ಇಂಗ್ಲಿಷ್ ಶಾಲೆಗಳು ಆಡಿಸಲ್ಪಡುವವು. ದೊಡ್ಡಕಚ್ಚೇರಿ ಮ್ಯೂಸಿಯಂ, ಸೆಂಟ್ರಲ್ ಕಾಲೇಜ್, ಕಬ್ಬನ್ ಪಾರ್ಕ್ ಇವುಗಳಲ್ಲಿ ದೀಪೋತ್ಸವವು ನಡೆಸಲ್ಪಡುವುದು. ಕಬ್ಬನ್‌ಪಾರ್ಕ್ ತೋಟದ ಬಳಿ ವಿಚಿತ್ರವಾದ ನಾನಾವಿಧ ಬಾಣಗಳು ಸುಡಲ್ಪಡುವವು. ಆ ಪಾರ್ಕಿನ ಸಭಿಕರ್‌ಗಳಿರುವ ಜನ್ನೆ [illegible] ಒಳಗೆಲ್ಲ ಉತ್ಸವ ಸಂಭ್ರಮವಾದ ಮೆಟ್ಟಲು ಹಾಕಲ್ಪಡುವವು. ಶ್ರೀ ಮಹಾರಾಣೀ ಮತ್ತು ಇಲ್ಲಿನ ಶ್ರೀ ಮಹಾರಾಜರವರ ಬಳಿಯಾಗಿ ಕಟ್ಟಲ್ಪಡುವ ಆವಿಷ್ಕೃತಿಗೆ ಅಸ್ತಿಬಾರ ಹಾಕುವದಕ್ಕಾಗಿ ಬರುವ ಮಾರ್ಗವು ತೋರಣಾವಳಿಗಳಿಂದಲಂಕರಿಸಲ್ಪಡುವುದು. ಈ ಸಿಟಿಯ ಪ್ರತಿ ಬೀದಿ ಮತ್ತು ಅಂಗಡಿಗಳ ಸುತ್ತ ಚೆಲುವಾದ ತೋರಣ ಕದಳೀ ಸ್ತಂಭಗಳಿಂದಲಂಕರಿಸಲ್ಪಡುವುದು. ಪ್ರತಿದಿವಸವು ಪ್ರಧಾನ ಸ್ಥಾನಗಳಲ್ಲಿಯೂ ದೇವತಾರಾಧನೆ ಉತ್ಸವ, ಮತ್ತು ಪ್ರಾರ್ಥನೆಗಳು ನಡೆಸಲ್ಪಡುವುವು. ಇದುವರೆಗೆ ಇಷ್ಟರಮಟ್ಟಿಗೆ ನಡೆಯುವಂತೆ ತಿಳಿಯಬರುತಿದೆ. ಮುಂದೆ ಆಗಬಹುದಾದ ಜಾಸ್ತೀಲಂಕಗಳನ್ನು ಮುಂದಿನವಾರದಲ್ಲಿ ತಿಳಿಸುವೆವು.

Occasional Notes
ಸ್ವನಿಮಿತ್ತಿಕವಿಷಯನ್ಯಾಸ

ಕಲ್ಕತ್ತಾ ಪ್ರೆಸಿಡೆನ್ಸಿ ಕಾಲೇಜ ಸಂಸ್ಕೃತ ಪ್ರೊಫೆಸರ್ ಶಾಸ್ತ್ರಿ ಎಂ ಎ ಯವರು ಪುರಾತನಗಳಾದ ಬೌದ್ಧಮತ ಗ್ರಂಥಗಳ ವಿಷಯದಲ್ಲಿ ಆವಶ್ಯಕಗಳಾದ ಕೆಲವು ವರ್ತಮಾನಗಳಂ ಪಡೆಯುವ ಉದ್ದೇಶದೊಡನೆ ನೇಪಾಳದೇಶಕ್ಕೆ ಹೋಗುವವರಾಗಿರುತ್ತಾರೆಂದು ಇಂಡಿಯನ್ ಡೆಯಿಲೀ ನ್ಯೂಸ್ ಎಂಬ ಪತ್ರಿಕೆ ತಿಳಿಸುತಿದೆ.

ಮದರಾಸ್ ಪ್ರೆಸಿಡೆನ್ಸಿಯಲ್ಲಿ ನಡೆಸಲ್ಪಡುತಿರುವ ಕ್ಷಾಮನಿವಾರಕ ಕಾಮಗಾರಿಗಳಲ್ಲಿ ಕೂಲಿ ಮಾಡಿ ಜೀವಿಸುತಲಿರುವ ಜನರಿಗೆ ಮಹಾರಾಜ್ಞೀಯವರ ಜೂಬಿಲೀ ಉತ್ಸವಾರ್ಥ ಒಂದು ದಿನ ರಜಾಕೊಟ್ಟು ಆದಿನ ಕೂಲಿಯನ್ನು ಸಹ ಪೂರಾ ಕೊಡಬೇಕೆಂದು ಗವರ್ನಮೆಂಟಿನವರು ಯೋಚಿಸುತಲಿರುವರೆಂತ ಕೇಳಬಹಳ ಸಂತೋಷಿಸುತ್ತೇವೆ.

ಮದುರಾ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು, ಇದುವರೆಗೆ ಪ್ರೈವೇಟು ವಕೀಲರೆನ್ನಿಸಿಕೊಂಡು ವಕಾಲತ್ತು ಮಾಡುತಲಿದ್ದ ಜೀಕಸವದಾರೀ ಜನರನ್ನು ಮ್ಯಾಜಿಸ್ಟ್ರೇಟು ಕೋರ್ಟುಗಳಿಗೆ ಇದು ಮೊದಲು ಮುಂದೆ ಬರಗೊಳಿಸಕೂಡದೆಂದು ಹುಕುಂ ಕೊಟ್ಟು ಅದರಂತೆ ಜಾರಿಯೊಳು ತರಲ್ಪಟ್ಟಿರುವುದಾಗಿ ಅಲ್ಲಿನ ಪತ್ರಿಕೆಯೊಂದರ ಮೂಲಕ ತಿಳಿಯಬರುತಿದೆ.

ಈಚೆಗೆ ವಿಲಾಯತಿಯಲ್ಲಿ ಹೊಸದಾಗಿ ಒಂದು ಯಂತ್ರವು ನಿರ್ಮಿಸಲ್ಪಟ್ಟು ಅದು ಈಗ ಸ್ವಿಟ್ಜರ್ಲೆಂಡ್ ದೇಶದೊಳು ಉಪಯೋಗದಲ್ಲಿದೆ ಈ ಯಂತ್ರದ ಮೂಲಕ ಹಾಲು ಕರೆದ ಕೂಡಲೆ ಅಂದರೆ ಒಂದು ನಿಮಿಷದೊಳಗಾಗಿ ಅದನ್ನು ಪರಿಶುದ್ಧವಾದ ಬೆಣ್ಣೆ ಮಾಡುವದಕ್ಕೆ ಸಾಧ್ಯವಾಗುತಿದೆ. ಸದರೀ ಬೆಣ್ಣೆಯನ್ನು ಅಲ್ಲಿನ ವೈದ್ಯಶ್ರೇಷ್ಠರು ಪರೀಕ್ಷಿಸಿ ನೋಡಿ ಉತ್ತಮವಾದುದೆಂದು ಅಭಿಪ್ರಾಯ ಕೊಟ್ಟಿರುತ್ತಾರೆ

ಕ್ಷಾಮಪೀಡಿತಗಳಾದ ಪ್ರದೇಶಗಳಲ್ಲಿ ರೈತರು ಹೋಗಲಾಡಿಸಿಕೊಳ್ಳುವ ದನಗಳಿಗೆ ಬದಲು ಅವರು ಬೇರೆ ದನಗಳನ್ನು ಕೊಂಡುಕೊಳ್ಳುವದಕ್ಕಾಗಿ ಬಡರೈತರಿಗೆ ಸಹಾಯ ಮಾಡುವದಕ್ಕೆ ಹತ್ತು ಲಕ್ಷ ರೂಪಾಯಿಗಳೂ, ಅವರಿಗೆ ಕೊಡಬೇಕಾದ ಬೀಜ ಬಿತ್ತದ ಬಗ್ಗೆ ಹತ್ತು ಲಕ್ಷ ರೂಪಾಯಿಗಳೂ ಹಿಡಿಯುವುದೆಂದು ಮದರಾಸ್ ಕ್ಷಾಮ ನಿವಾರಕ ಕಮಿಟಿಯವರು ಅಂದಾಜ್ ಮಾಡಿರುತ್ತಾರೆ.

ಅರಸರು ಹದಿನಾಲ್ಕು ವರ್ಷಗಳ ವಯಸ್ಸಿನಲ್ಲಿ ರಾಜ್ಯಭಾರವಂ ವಹಿಸಬಹುದು, ಹದಿನೆಂಟು ವರ್ಷಗಳ ವಯಸ್ಸು ಪೂರ್ತಿಯಾಗುವವರೆಗೂ ವಿವಾಹ ಮಾಡಿಕೊಳ್ಳಕೂಡದೆಂಬ ಕೆಲವು ದೇಶಗಳಲ್ಲಿ ನಿರ್ಬಂಧ ಏರ್ಪಡಿಸಲ್ಪಟ್ಟಿರುವದಕ್ಕೆ ಕಾರಣವೇನೆಂದು ಒಬ್ಬಾತನು ಜಾಣನೊಬ್ಬನನ್ನು ಕೇಳಿದುದಕ್ಕೆ, ರಾಜ್ಯವನ್ನಾಳುವದಕ್ಕಿಂತಲು ಹೆಂಡತಿಯನ್ನಾಳುವದು ಬಹಳ ಕಷ್ಟವಾದ ಕಾರ್ಯವೆಂದು ಜವಾಬ್ ಕೊಟ್ಟನಂತೆ. ಇದು ನಿರಸಕಾರಣವಾದುದಲ್ಲವು

ಬಳ್ಳಾರಿ ಡಿಸ್ಟ್ರಿಕ್ಟಿನಲ್ಲಿ ದನಗಳಿಗೆ ಮೇವು ಯಿಲ್ಲದೆ ಇಲ್ಲವೆ ಬೇಗನೆ ಕ್ಷೀಣಗತಿಯಂ ಹೊಂದುತಲಿರುವದನ್ನಾಲೋಚಿಸಿ ಅಲ್ಲಿನ ಜನರು ಅವುಗಳನ್ನು ಅಲ್ಪ ಕ್ರಯಕ್ಕೆ ಮಾರಿಬಿಡುತಲಿದಾರೆ ಕಳೆದ ಏಪ್ರಿಲ್ ತಿಂಗಳಲ್ಲಿ ೨೧೦ ದನಗಳು ಮಾರಾಟಕ್ಕಾಗಿ ಅದವೋನಿಗೆ ತರಲ್ಪಟ್ಟು ಅವುಗಳಲ್ಲಿ ೩೪ ದನಗಳು ರೈತರಿಗೂ, ೧೫ ಕಸಾಯಿಯವರಿಗೂ ಮಾರಲ್ಪಟ್ಟು ಉಳಿದವು ಕೇಳುವವರಿಲ್ಲದೆ ಹೋದವೆಂದು ಬಳ್ಳಾರಿ ಕಲೆಕ್ಟರವರು ರಿಪೋರ್ಟ ಮಾಡಿರುತ್ತಾರೆ.

ಗತಿಸಿದ ವಿಜಯನಗರದ ಮಹಾರಾಜರವರಿಗೆ ಮದರಾಸಿನಲ್ಲಿಯೂ, ಉದಕಮಂಡಲದಲ್ಲಿಯೂ ಇರುವ ಜವಾಹಿರುಗಳ ಪಟ್ಟಿಯಂ ತಯಾರ್ಮಾಡಿಸಿ ಇಟ್ಟುಕೊಳ್ಳುವಂತೆ ವಿಶಾಖಪಟ್ಟಣದ ಡಿಸ್ಟ್ರಿಕ್ಟ್ ಕಲೆಕ್ಟರವರು ಮದರಾಸ್ ಮತ್ತು ನೀಲಗಿರಿ ಕಲೆಕ್ಟರುಗಳಿಗೆ ತಂತಿ ವರ್ತಮಾನ ಕೊಡಲು ಅದನ್ನನುಸರಿಸಿ ಮದರಾಸ್ ಪೋಲೀಸ್ ಕಮಿಷನರವರು ಅಡಯಾರಿನಲ್ಲಿರುವ ಬಂಗ್ಲೆ ವಗೈರೆ ಜವಾಹಿರುಗಳನ್ನು ತಮ್ಮ ಸ್ವಾಧೀನಪಡಿಸಿಕೊಂಡರೆಂದು ಅಲ್ಲಿನ ಪತ್ರಿಕೆಯೊಂದು ತಿಳಿಸುತಿದೆ.

ಗ್ರೀಸ್ ಸಂಸ್ಥಾನಕ್ಕೂ ತುರ್ಕೀ ಸಂಸ್ಥಾನಕ್ಕೂ ಈಚೆಗೆ ನಡೆದ ಯುದ್ಧದಲ್ಲಿ ತುರ್ಕೀಯವರಿಗೆ ಉಂಟಾದ ಜಯದಬಗ್ಗೆ ಪುನೆ ಶಹರ ನಿವಾಸಿಗಳಾದ ಮುಸಲ್ಮಾನ ಜನರು ಸದರೀ ಷಹರ ಮತ್ತು ಅದಕ್ಕೆ ಸೇರಿದ ಲಷ್ಕರಿನಲ್ಲಿನ ಮಶೀದಿಗಳಲ್ಲಿ ದೀಪೋತ್ಸವ ನಡೆಸಿದರು. ಮೇಲಿನಂತೆಯೇ ಮುಂಬೈ ಮೊದಲಾದ ದೊಡ್ಡ ಷಹರ ನಿವಾಸಿಗಳಾದ ಮಹಮ್ಮದೀಯ ಪ್ರಭುಗಳು ಅವರವರ ವಾಸ ಗೃಹಗಳನ್ನಲಂಕರಿಸಿ ದೀಪೋತ್ಸವ ಮೊದಲಾದ ಸಂತೋಷ ಸೂಚಕಗಳಾದ ಕಾರ್ಯಗಳಂ ಮಾಡಿಯೂ ಮಾಡುತಲೂ ಇದಾರೆ.

ಈಗ್ಗೆ ಅಯಿದಾರು ಸಂವತ್ಸರಗಳ ಹಿಂದೆ ಹೈದರಾಬಾದ ನಿಜಾಮರವರು ಮಿ॥ ಜೇಕಬ್ ಎಂಬವರಿಂದ ಕೊಂಡು ಕೊಂಡು ತಮ್ಮ ಸಂಸ್ಥಾನದ ಖಜಾನೆಯಲ್ಲಿಟ್ಟದ್ದ ವಜ್ರವು ಈಚೆಗೆ ಕಳವಾಗಿ ಅದಕ್ಕೆ ಬದಲು ಕೃತ್ರಿಮವಾದ ಒಂದು ವಜ್ರವು ಇಡಲ್ಪಟ್ಟಿತ್ತೆಂಬದಾಗಿಯೂ, ಸದರೀ ವಜ್ರವನ್ನು ಮಹಾರಾಜ್ಞೀ ಇಂಡ್ಯಾ ಚಕ್ರವರ್ತಿನೀಯವ ಜೂಬಿಲೀ ಮಹೋತ್ಸವ ಕಾಲದಲ್ಲಿ ಆಕೆಯವರಿಗೆ ನಜರ್ ಒಪ್ಪಿಸಬೇಕೆಂದು ನಿಜಾಮರವರು ಆಲೋಚಿಸಿದ್ದರೆಂತಲೂ ಈಗ್ಗೆ ಕೆಲವು ದಿನಗಳ ಮೊದಲು ವೃತ್ತಾಂತ ಪತ್ರಿಕೆಗಳಲ್ಲಿ ಪ್ರಕಟವಾಗುತಲಿತ್ತಷ್ಟೆ. ಸದರೀ ವಜ್ರವು ಕಳವಾಯಿತೆಂದು ಹುಟ್ಟಿದ ವರ್ತಮಾನವು ಸುತರಾಂ ನಿರಾಧಾರವಾದುದೆಂತಲೂ, ಅದು ಖಜಾನೆಯಲ್ಲೇ ಭದ್ರವಾಗಿದೆಯೆಂತಲೂ, ನಿಜಾಮರವರು ಒಂದು ವೇಳೆ ರಾಜ್ಞೀಯವರಿಗೆ ನಜರ್ ರೂಪವಾಗಿ ಅದಂ ಕೊಟ್ಟಾಗ್ಯೂ ಅದನ್ನು ಅವರಾಗಲಿ ಇಂಡ್ಯಗವರ್ನಮೆಂಟಿನವರಾಗಲಿ ಅಂಗೀಕರಿಸಲಾಗದೆಂತಲೂ ಕಲ್ಕತ್ತೆಯ ಇಂಗ್ಲಿಷ್ ಮ್ಯಾನ್ ಪತ್ರಿಕೆ ಅಭಿಪ್ರಾಯಪಡುತಿದೆ.

ನೇಟಿವ್ ಅರಸರುಗಳು ಬ್ರಿಟಿಷ್ ರಾಜ್ಯಗಳಲ್ಲಿ ಬಂಗ್ಲೆಗಳನ್ನಾಗಲಿ ಭೂಸ್ಥಿತಿಗಳನ್ನಾಗಲಿ ಪಡೆಯಕೂಡದೆಂದು ಈಚೆಗೆ ಕೆಲವು ದಿನಗಳ ಹಿಂದೆ ಇಂಡ್ಯಾ ಗವರ್ನಮೆಂಟಿನವರು ಕೊಟ್ಟ ಹುಕುಮಿನ ಔಚಿತ್ಯವಂ ಕುರಿತು ಇಂಡಿಯನ್ ಸ್ಪೆಕ್ಟೇಟರ್ ಎಂಬ ಪತ್ರಿಕೆಯು ವಿಚಾರ ಮಾಡುವ ಸಂದರ್ಭದಲ್ಲಿ ತಿಳಿಸುವದೇನೆಂದರೆ.—ಇಂಡ್ಯಾ ದೇಶದೊಳು ಬಿನಾಮಿ ವ್ಯವಹಾರಗಳು ತಿಳಿಯದೆ ಇರಲಿಲ್ಲವು ನೇಟಿವ್ ಅರಸರುಗಳಲ್ಲಿ ಯಾರಿಗೆ ತಮ್ಮ ಜಹಗೀರುಗಳನ್ನು ಮಾರಿಬಿಡಲು ಇಷ್ಟವಿಲ್ಲವೊ ಅಥವಾ ಹೊಸದಾಗಿ ಕೊಂಡುಕೊಳ್ಳಲು ಇಷ್ಟಪಡುವರಾಗಿರುತ್ತಾರೆಯೊ ಅಂತವರು ತಮ್ಮ ಜಹಗೀರುಗಳನ್ನೆಲ್ಲ ನಾಮಮಾತ್ರಕ್ಕೆ ಅನ್ಯರ ಹೆಸರಿನಲ್ಲಿ ವರ್ಗ ಮಾಡುವದಕ್ಕೆ ತಕ್ಕ ಜನರನ್ನು ಸಂಪಾದಿಸದೆ ಹೋಗಲಾರರು ಪೊಲಿಟಿಕಲ್ ಏಜೆಂಟರಿಂದ ಕೇಳಲ್ಪಟ್ಟ ಹೊಸ ಆಜ್ಞೆಯಲ್ಲಿನ ದೌರ್ಬಲ್ಯವು ಇದರಲ್ಲೇ ಇರುತದೆ ಸುಲಭವಾಗಿ ಅಪ್ರಯೋಜಕವನ್ನಾಗಿ ಮಾಡುವದಕ್ಕೆ ಅವಕಾಶಕೊಡುವ ಹುಕುಮುಗಳಂ ಕೊಡುವದು ರಾಜ್ಯತಂತ್ರವಂ ಬಲ್ಲವರ ಕಾರ್ಯವಲ್ಲವು ನೇಟಿವ್ ಅರಸರುಗಳಲ್ಲಿ ಯಾರಾದರೂ ಕೆಲವರು ಸ್ವಲ್ಪದಿನಗಳಕಾಲ ತಮ್ಮ ದೇಶವಂಬಿಟ್ಟು ಅನ್ಯತ್ರ ವಾಸ ಮಾಡಬೇಕಾದ ಸಂದರ್ಭಗಳಲ್ಲಿ ಬಂಗ್ಲೆಗಳ ಬಾಡಿಗೆಯ ಬಗ್ಗೆ ಜಾಸ್ತೀ ಖರ್ಚ ಮಾಡಬೇಕಾಗಿ ಬರುವದು, ಅದು ಕ್ರಮೇಣ ಅವರ ಬಡರೈತರಿಂದ ವಸೂಲಾಗಬೇಕಾಗಿರುವುದು, ಎಂಬದು. ನೇಟಿವ್ ಅರಸರು ಮಾಡುವ ದಾಂಧಳೆ ಖರ್ಚುಗಳೆಲ್ಲವು ಹರುಪರಿಯೂ ಪ್ರಜೆಗಳಿಂದ ವಸೂಲ್ಮಾಡಲ್ಪಡುವುದು ಪ್ರಸಿದ್ಧವಾಗಿ ಯೆಲ್ಲರಿಗೂ ತಿಳಿದ ಅಂಶವಾಗಿಯೇ ಇದೆ

LOCAL AND PROVINCIAL NEWS.

ಒಳದೇಶಮತ್ತುತಾಲ್ಲೂಕಿನ ವೃತ್ತಾಂತಗಳು.

ಈ ಸಂಸ್ಥಾನದ ದಿವಾನರವರಾದ ಸರ್. ಕೆ. ಶೇಷಾದ್ರಿ ಅಯ್ಯರವರು ಕಳೆದ ಮಂಗಳವಾರದ ದಿನ ನೀಲಗಿರಿಯಿಂದ ಇಲ್ಲಿಗೆ ವಾಪಸ್ ಬಂದರು.

ಈ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರವರು ಈಗ ನೀಲಗಿರಿಯಲ್ಲಿರುತ್ತಾರೆಯಷ್ಟೆ. ಸದರೀ ಅಧಿಕಾರಿಯು ಈ ತಿಂಗಳ ೧೬ನೇ ತಾರೀಖಿನಲ್ಲಿ ಇಲ್ಲಿಗೆ ವಾಪಸ್ ಬರುವರೆಂದು ಕೇಳುತ್ತೇವೆ

ಬೇಸಿಗೆಯ ಬಗ್ಗೆ ಮಾಮೂಲನುಸರಿಸಿ ಇಲ್ಲಿನ ಚೀಫ್‌ಕೋರ್ಟ ಮುಚ್ಚಲ್ಪಟ್ಟಿದೆಯಷ್ಟೆ ಅದು ಈ ತಿಂಗಳ ೧೫ನೇ ತಾರೀಖಿನಲ್ಲಿ ಮರಳಿ ತೆರೆಯಲ್ಪಟ್ಟು ಕೆಲಸಗಳಿಗೆ ಪ್ರಾರಂಭವಾಗುವುದು.

ಘನವಂತರಾದ ಶ್ರೀಮನ್ಮಹಾರಾಜರವರ. ಬೇಸಿಗೆಯ ಬಗ್ಗೆ ಇದುವರೆಗೆ ನೀಲಗಿರಿಯಲ್ಲಿ ದಯಮಾಡಿದ್ದರಷ್ಟೆ. ಈ ದಿನ ಅಲ್ಲಿಂದ ಪರಿವಾರಸಮೇತರಾಗಿ ರಾಜಧಾನಿಗೆ ದಯಮಾಡುವರೆಂದು ತಿಳಿಯಬರುತಿದೆ.

ಇಲ್ಲಿನ ಸೆಂಟ್ರಲ್ ಕಾಲೇಜ್ ಬೇಸಿಗೆಯ ಬಗ್ಗೆ ಆರುವಾರಗಳ ಕಾಲದ ಮೇರೆಗೆ ಮುಚ್ಚಲ್ಪಟ್ಟಿತ್ತಷ್ಟೆ. ಅದು ಪೂರ್ತಿಯಾಗಿ ಈದಿನ ಸದರೀ ಪಾಠಶಾಲೆಯು ತೆರೆಯಲ್ಪಟ್ಟು ಮರಳಿ ಪಾಠಪ್ರವಚನಗಳಿಗೆ ಪ್ರಾರಂಭವಾಗುವದು.

ಈ ಸಂಸ್ಥಾನದ ಮಿಲಿಟರಿ ಸೆಕ್ರೆಟರಿಯಾಗಿದ್ದು ಈಚೆಗೆ ಕೆಲವು ದಿನಗಳ ಹಿಂದೆ ಸ್ವದೇಶದಲ್ಲಿ ಮೃತಪಟ್ಟ ಕರ್ನಲ್ ಮ್ಯಾಕಿಂಟೈರ್ ಯವರ ಸ್ಥಾನದಲ್ಲಿ ಲೆಫ್ಟಿನೆಂಟ್ ಕರ್ನಲ್ ದೇವರಾಜ ಅರಸಿನವರು ಮುಕರರ್ಮಾಡಲ್ಪಟ್ಟರೆಂದು ಕೇಳಿ ಬಹಳ ಸಂತೋಷಿಸುತ್ತೇವೆ.

ಈ ಸಂಸ್ಥಾನದ ಕೌನ್ಸಿಲ್ ಮೆಂಬರಾದ ಮ॥ ಪಿ. ಎನ್. ಕೃಷ್ಣಮೂರ್ತಿರಾಯರವರು ಶ್ರೀಮನ್ಮಹಾರಾಣಿ ರೀಜೆಂಟರವರ ಸವಾರಿಯೊಡನೆ ನೀಲಗಿರಿಯಲ್ಲಿರುತಲಿದ್ದರಷ್ಟೆ. ಸದರೀ ಅಧಿಕಾರಿಯು ಕಳೆದ ಶುಕ್ರವಾರದ ದಿನ ಈ ಊರಿಗೆ ವಾಪಸ್ ಬಂದರೆಂದು ಅರಿತೆವು.

ಇಲ್ಲಿನ ಮ್ಯೂನಿಸಿಪಾಲಿಟಿಯ ಪ್ರೆಸಿಡೆಂಟರಾದ ಮಿ॥ ಟಿ. ಟಿ. ಲೆನಾರ್ಡ್‌ಯವರು ಕಳೆದತಿಂಗಳ ೨೯ನೇ ತಾರೀಖಿನಲ್ಲಿ ೩ ತಿಂಗಳ ರಜಾ ಮೇಲೆ ಇಂಗ್ಲಾಂಡಿಗೆ ಪ್ರಯಾಣಮಾಡಿದರು. ಅವರ ಅಧಿಕಾರವನ್ನು ಡಾಕ್ಟರ್ ಚೋಕ್ಸಿ ಯವರು ವಹಿಸಿಕೊಂಡರು.

ಇಲ್ಲಿನ ನಾರ್ಥರ್ನ ಯಕ್ಸ್ಟೆನ್ಷನ್, ಅಂದರೆ ಹೈಗ್ರೌಂಡಿನಲ್ಲಿ ಈ ಸಂಸ್ಥಾನದ ದಿವಾನರವರು ಸುಮಾರು ೭೦,೦೦೦ ರೂಪಾಯಿಗಳವರೆಗೆ ಖರ್ಚುಮಾಡಿ ಕಟ್ಟಿಸಿದ ರಾಜಾರ್ಹವಾದ ನೂತನ ಗೃಹಕ್ಕೆ ಕಳೆದ ಶುಕ್ರವಾರದ ದಿನ ಪ್ರವೇಶ ಮಾಡಿದ ಬಗ್ಗೆ ಇಲ್ಲಿನ ಅಧಿಕಾರಿಗಳನ್ನೆಲ್ಲ ಕರೆದು ಬಹಳ ವಿತರಣೆಯೊಡನೆ ಭೋಜನ ಮಾಡಿಸಿದರೆಂದು ತಿಳಿದು ಬಹಳ ಸಂತೋಷಿಸುತ್ತೇವೆ.

ಇಲ್ಲಿನ ಮಿಲಿಟರಿ ಸ್ಟೇಷನಿಗೆ ಸೇರಿದ ಸ್ಯಾಪರ್ಸ್ ಫೌಜಿನ ಕವಾಯತಿ ಮೈದಾನದ ಬಳಿ ಇರುವ ಒಂದು ಹಲಸಿನ ಗಿಡದಲ್ಲಿ ಈ ಸಲ ೯೦೦ ಹಣ್ಣು ಬಿಟ್ಟಿವೆಯೆಂತಲೂ, ಹಣ್ಣು ಒಂದಕ್ಕೆ ಸರಾಸರಿ ೨೦ ಪೌಂಡ್ ತೂಕವಾಗುತ್ತಿದೆಯೆಂತಲೂ, ಒಂದು ಗಿಡದಲ್ಲಿ ಇಷ್ಟು ಹಣ್ಣು ಬಿಟ್ಟದ್ದು ಈ ಪ್ರಪಂಚದೊಳು ಬೇರೆ ಯೆಲ್ಲಿಯೂ ಕಂಡು ಕೇಳದಿದ್ದಲ್ಲವೆಂತಲೂ ಇಲ್ಲಿನ ಡೆಯಿಲೀಪೋಸ್ಟ್ ಪತ್ರಿಕೆ ತಿಳಿಸುತಿದೆ.

ಬೆಂಗಳೂರಿನಲ್ಲಿರುವ ಮದರಾಸ್ ಬ್ಯಾಂಕ್ ಅಕೌಂಟೆಂಟರಾದ ಮ॥ ಇಂಗಿಲ್ ಎಂಬವರಿಗೆ ವಿಲಾಯಿತಿಯ ದರ್ಬಿರೇಸ್ ಎಂಬ ಕುದುರೆ ಪರತಿ ಜೂಜಿನಲ್ಲಿ ಒಂದು ಲಕ್ಷ ನಾಲ್ಕು ಸಾವಿರ ರೂಪಾಯಿಗಳು ಬಂತೆಂದು ಮದರಾಸ್ ಸ್ಟ್ಯಾಂಡರ್ಡ್ ಮೊದಲಾದ ಪತ್ರಿಕೆಗಳ ಮೂಲಕ ತಿಳಿಯಬರುತಿದೆ ಮ॥ ಇಂಗಿಲ್ ಯವರು ಪರಸ್ತ ನಡೆಯುವದಕ್ಕೆ ಮುಂಚೆಯೇ ತಮ್ಮ ಟಿಕೆಟ್ಟನ್ನು ೫೨೦೦೦ ರೂಪಾಯಿಗಳಿಗೆ ಮಾರಿಬಿಟ್ಟರೆಂದು ಸಹ ಕೇಳುತ್ತೇವೆ

ಬೆಂಗಳೂರು ಡಿಸ್ಟ್ರಿಕ್ಟ್ ಜಡ್ಜಿಯವರ ಇಲಾಖೆಯಲ್ಲಿ ಒಬ್ಬ ಸ್ಟೈಪೆಂಡರಿಯಾಗಿದ್ದ ಮ॥ ಎಂ. ಕುಪ್ಪಣ್ಣ ಬಿ.ಎ. ಬಿ.ಎಲ್. ಯವರು ಈಚೆಗೆ ಯಡತೊರೆಗೆ ಹೋಗಿದ್ದ ಕಾಲದಲ್ಲಿ ವಾಂತಿಭೇದಿ ರೋಗ ತಗಲಿ ದೈವಶಪಟ್ಟರೆಂತಲೂ, ಇವರ ತಂದೆಯ ಉತ್ತರಕ್ರಿಯೆಗಾಗಿ ಹೋಗಿದ್ದ ಕಾಲದಲ್ಲಿ ಇವರಿಗೂ, ಮತ್ತು ಇವರ ಸಹೋದರರು ಮೊದಲಾದವರಿಗೆ ಸಹ ಸದರೀ ರೋಗವು ತಗಲಿ ಮೃತಪಟ್ಟರಂತೆ. ಇವರಿಗೆ ಇಂತ ಅಕಾಲಮೃತ್ಯುವು ಪ್ರಾಪ್ತವಾಯಿತೆಂದು ಕೇಳುವದಕ್ಕೆ ಬಹಳ ವಿಷಾದಿಸುತ್ತೇವೆ

ಬೆಂಗಳೂರು ಡಿಸ್ಟ್ರಿಕ್ಟ್ ಆಫೀಸ್ ಹೆಡ್‌ಕ್ಲಾರ್ಕಾಗಿದ್ದ ಮ॥ ಸ್ಮಿತ್ ಯೆಂಬವರು ಈಗ್ಗೆ ಕೆಲವು ಕಾಲದ ಹಿಂದೆ ರೆಸಿಡೆನ್ಸಿ ಆಫೀಸ್ ಮ್ಯಾನೇಜರಾಗಿ ಮುಕರರ್ಮಾಡಲ್ಪಟ್ಟು ಇದುವರೆಗೆ ಸದರೀ ಕೆಲಸವನ್ನು ನೋಡುತಲಿರುತ್ತಾರೆಯಷ್ಟೆ. ಅಲ್ಲಿನ ಕೆಲಸವು ಅವರಿಗೆ ಯಾವ ಕಾರಣದಿಂದಲೊ ಸರಿಬೀಳದೆ ಹೋಗಿ ಮರಳಿ ತಮ್ಮ ಪೂರ್ವದ ಕೆಲಸಕ್ಕೆ ವಾಪಸ್‌ಬರುವ ಪ್ರಯತ್ನದಲ್ಲಿರುವಂತೆ ಕೇಳುತ್ತೇವೆ. ಈಗ ಅವರು ಮೂರುತಿಂಗಳರಜಾ ಪಡಕೊಂಡಿರುವಂತೆ ತಿಳಿಯಬರುತಿದೆ

ಬೆಂಗಳೂರು ಡಿಸ್ಟ್ರಿಕ್ಟ್ ಆನೇಕಲ್ ತಾಲ್ಲೂಕು ಜಿಗಣಿ ಹೋಬಳಿ ಹುಲಿಮಂಗಲ ಗ್ರಾಮದ ಪಟೇಲ್ ನಂಜಪ್ಪನವರ ಮನೆಯೊಳು ಕಳೆದ ತಿಂಗಳ ೩೧ನೇ ತಾರೀಖಿನ ರಾತ್ರಿ ದರೋಡೆಕಳ್ಳರು ನುಗ್ಗಿ ಮನೆಯಲ್ಲಿದ್ದ ಸ್ವತ್ತಿನ ಜೊತೆಗೆ ಮತ್ತು ಸರ್ಕಾರಿ ಕಂದಾಯದ ಬಗ್ಗೆ ವಸೂಲಾಗಿದ್ದ ಮುನ್ನೂರ ಚಿಲ್ಲರೆ ರೂಪಾಯಿಗಳನ್ನು ಕಳವು ಮಾಡಿಕೊಂಡು ಹೋದರೆಂದು ನಮ್ಮ ವೃತ್ತಾಂತ ಲೇಖಕರ ಮೂಲಕ ತಿಳಿಯಬರುತಿದೆ ಈಚೆಗೆ ಈದೇಶವು ದರೋಡೆಗಳಿಗೆ ತೌರುಮನೆಯಾಗಿ ಯೇರ್ಪಟ್ಟ ಬಗ್ಗೆ ಬಹಳ ವಿಷಾದಿಸುತ್ತೇವೆ.

ಆಚೆ ಆದಿತ್ಯವಾರದ ದಿನ ಸಾಯಂಕಾಲ ಸುಮಾರು ಅಯಿದುಘಂಟೆಗೆ ಬಲವಾಗಿ ಮೋಡ ಮುಸುಕಿ ವರ್ಷಕ್ಕೆ ಪ್ರಾರಂಭವಾಗಿ ರಾತ್ರಿ ಹನ್ನೊಂದು ಘಂಟೆಯವರೆಗೆ ಬಿದ್ದುದರಿಂದ ಕೆರೆ ಕುಂಟೆಗಳಿಗೆ ಒಂದೆರಡು ತಿಂಗಳ ನೀರು ಬಂದಿರುತದೆ. ಈ ಮಳೆಯು ಮೂರು ಇಂಚಿಗೆ ಮೇಲ್ಪಟ್ಟದ್ದಾಗಿ ಲೆಕ್ಕ ಮಾಡಲ್ಪಟ್ಟಿರುವಂತೆ ಕೇಳುತ್ತೇವೆ. ಅದು ಮೊದಲು ಪ್ರತಿದಿನ ಸಾಯಂಕಾಲ ಮೋಡ ಮುಸುಕಿದಾಗ್ಯೂ ಕೆಲವು ಹನಿಗಳೊಡನೆ ಪರ್ಯವಸಾನವಾಗುತಲಿದೆ. ಪಟ್ಟಣಗಳಲ್ಲಿ ಯೆಲ್ಲಿಯೂ ಸಾಗುವಳಿ ಪ್ರಾರಂಭಕ್ಕೆ ಪ್ರೋತ್ಸಾಹಕರವಾದ ವರ್ಷ ಬೀಳಲಿಲ್ಲವೆಂದು ತಿಳಿಯಬರುತಿದೆ ಆಹಾರ ಪದಾರ್ಥಗಳ ಧಾರಣೆಗಳು ಪ್ರಾಯಶಃ ಒಂದೇವಿಧವಾಗಿದೆ. ಈ ಷಹರಿನಲ್ಲಿ ರೋಗಾದ್ಯುಪದ್ರವಗಳು ಯಾವದೂ ಇಲ್ಲವು. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

ಉದಕಮಂಡಲದಲ್ಲಿರುವ ಶ್ರೀಮನ್ಮಹಾರಾಜರವರ ಬಂಗ್ಲೆಯನ್ನು ಬಡ್ತಮಾಡುವ ಕಾರ್ಯಕ್ಕಾಗಿ ಮಿ॥ ಸ್ಟ್ಯಾಂಡಿಷ್ಲೀ ಸಾಹೇಬರವರು ಕೂಡಲೆ ಅಲ್ಲಿಗೆ ಹೊರಡುವಂತೆ ಮೈಸೂರು ಗವರ್ನಮೆಂಟಿನವರು ಹುಕುಂ ಕೊಟ್ಟಿರುವಂತೆ ಪಡುವಲದೇಶದ ಈವನಿಂಗ್‌ಮೆಯಿಲ್ ಪತ್ರಿಕೆ ತಿಳಿಸುತಿದೆ. ನೇಟಿವ್ ಸಂಸ್ಥಾನಾಧಿಪತಿಗಳು ಬ್ರಿಟಿಷ್ ರಾಜ್ಯದಲ್ಲಿ ಬಂಗ್ಲೆಗಳನ್ನಾಗಲಿ ಭೂಸ್ಥಿತಿಗಳನ್ನಾಗಲಿ ಪಡೆದಿರಕೂಡದೆಂದು ಇಂಡ್ಯಾ ಗವರ್ನಮೆಂಟಿನವರು ಒಂದುಕಡೆ ಹುಕುಂಕೊಡುತಲೂ, ಮತ್ತೊಂದುಕಡೆ ನೇಟಿವ್ ಅರಸರು ಸದರೀ ರಾಜ್ಯದೊಳಿರುವ ತಮ್ಮ ಬಂಗ್ಲೆಗಳನ್ನು ರಿಪೇರಿ ಮಾಡಿಸುತಲೂ ಹೊಸದಾಗಿ ಪಡೆಯುತಲೂ ಇರುವದರಿಂದ ಪರಸ್ಪರ ವಿರುದ್ಧವಾದ ಮೇಲಿನ ಕಾರ್ಯಗಳಂ ಹ್ಯಾಗೆ ಸಮಂಜಸಮಾಡಬೇಕೋ ನಾವರಿಯೆವು.

CORRESPONDENCE.

ಮ ರಾ| ಕರ್ನಾಟಕ ಪ್ರಕಾಶಿಕಾ ಎಡಿಟರವರ ಸ್ವಕ್ಕೆ

ಚಿಕ್ಕಮಗಳೂರು ಟೌನ್ ಬಸವನಹಳ್ಳಿಯಲ್ಲಿ ಪ್ರಸಕ್ತವಾದದುರ್ಮರಣ.

ಚಿಕ್ಕಮಗಳೂರಿನಿಂದ ಸಂತವೇರಿಗೆ ಹೋಗತಕ್ಕ ರೋಡಿನ ಪಕ್ಕದಲ್ಲಿ ಬಸವಹಳ್ಳಿಯವರ ಕೊಳವೆಂಬದಾಗಿ ಒಂದು ಸಣ್ಣ ಕಲ್ಯಾಣಿ ಇರುತ್ತೆ. ಈ ಕಲ್ಯಾಣಿಯು ಬೇಸಿಗೆಗೆ ಒತ್ತತಕ್ಕದ್ದಾಗಿ ಇದ್ದರೂ, ಇಲ್ಲಿನ ಬ್ರಾಹ್ಮಣರು ಊರಿನಲ್ಲಿರತಕ್ಕ ನಲ್ಲಿಗಳಿಗೆ ನೀರನ್ನು ಬಿಡತಕ್ಕ ಉದ್ದೇಶದಿಂದ ಧರಣಿಯಲ್ಲಿ ಬಿಟ್ಟಿರತಕ್ಕ ನೀರನ್ನ ಪರಪುಟ್ಟರಿಂದ ಬಾಲಕರು ಆಗಾಗ ಈ ಕಲ್ಯಾಣಿಗೆ ಬಿಡುತ್ತಿರುವದರಿಂದ ಅದು ಸುಮಾರು ೪ ಆಳುದ್ದ ನೀರು ತುಂಬಿಕೊಂಡಿರುತಿದೆ.

ಇಂತಾ ಕಲ್ಯಾಣಿಯ ಸಮೀಪದಲ್ಲಿರತಕ್ಕ ಒಂದು ಅಶ್ವತ್ಥ ದೇವಸ್ಥಾನದಲ್ಲಿ ವೇದಮೂರ್ತಿಗಳಾದ ಮಾನವಿ ಕೃಷ್ಣಾಚಾರ್ಯರೆಂಬುವರು ವಿದ್ಯಾರ್ಥಿಗಳಿಗೆ ಸಂಸ್ಕೃತವನ್ನು ಬೋಧಿಸಲು ಪಾಠಶಾಲೆಯನ್ನಿಟ್ಟಿರುತ್ತಾರೆ. ಈ ಪಾಠಶಾಲೆಯಲ್ಲಿ ವಿದ್ಯಾಭ್ಯಾಸಂಗ ಮಾಡುತಲಿದ್ದ ಬೇಲೂರು ಸುಬ್ಬಭಟ್ಟರ ಮಗ ೧೩ ವರ್ಷಗಳ ವಯಸ್ಸುಳ್ಳ ಕೇಶವನೆಂಬ ಬ್ರಾಹ್ಮಣ ಬಾಲಕನೊಬ್ಬನು ಸಹಪಾಠಿಗಳೊಡಗೂಡಿ ಮೇಲೆಕಂಡ ಕೊಳದಲ್ಲಿ ಈಜುತಲಿದ್ದವನು ಕೈ ಸೋತದ್ದರಿಂದಲೊ, ಅಥವಾ ಮತ್ಯಾವ ಕಾರಣದಿಂದಲೊ ಒಳಗೆ ಮುಳುಗಿದವನು ಮೇಲಕ್ಕೆ ಬರಲೇ ಇಲ್ಲವು. ಇದನ್ನು ಕೊಳದ ಬಳಿಯಲ್ಲಿದ್ದ ಬಾಲಕರು ನೋಡಿ ಅವರಲೊಬ್ಬನು ಸಮೀಪದಲ್ಲಿದ್ದವರಿಗೆ ಸುದ್ದಿ ತಿಳಿಸಿದನು ಇದನ್ನು ಕೇಳಿ ಮ್ಯಾಜಿಸ್ಟ್ರೇಟ್ ಟಿ. ಎಂ. ವೆಂಕಪ್ಪನವರು ಮತ್ತು ಕಾಫಿ ಪ್ಲ್ಯಾಂಟರ್ ಸಿ. ವಾಸುದೇವರಾಯರವರು, ಇನ್ನೂ ಅನೇಕರು ಸಹ ಬಹಳ ಹೊತ್ತಿನತನಕ ನೀರಿನಲ್ಲಿ ಹುಡುಕಿಸಿದರೂ ಅಂತಾ ಕಡೆಯಲ್ಲಿ ಹುಡುಗನಿರುವ ಬಾವದು ತಿಳಿಯದೆ ಹೋಯಿತು. ಅನಂತರ ಬಹಳ ಸಾಹಸದಿಂದ ಜನರನ್ನು ನೀರಿನಲ್ಲಿ ಮುಳುಗಿಸಿ ನೋಡಿಸಿದ್ದರಲ್ಲಿ ಕಲ್ಯಾಣಿಯ ಒಳಗೆ ಇರತಕ್ಕ ಸಣ್ಣದೊಂದು ಭಾವಿಯಲ್ಲಿ ಹುಡುಗನಿರುತ್ತಾನೆಂತ ತಿಳಿಯಬಂದು ಮುಸಲ್ಮಾನ ಜನಾಬ್ ಸಾಬಿ ಎಂಬವನು ಕಷ್ಟಪಟ್ಟು ಮುಳುಗಿ ಮೇಲಕ್ಕೆ ತೆಗೆದನು, ನೋಡುವಲ್ಲಿ ಬಾಲಕನು ಇಹಲೋಕ ಸುಖವನ್ನು ಬಿಟ್ಟುಬಿಟ್ಟಿದ್ದನು! ಅಯ್ಯೋ ಪಾಪ! ಎಂತಾ ಮರಣ!! ಈ ಮರಣವು ಈ ತಿಂಗಳ ೨ನೇ ತಾರೀಖು ಮಂಗಳವಾರದ ಹಗಲು ಸುಮಾರು ೯ ಘಂಟೆ ಬೆಳಗಾಯಿತು ೧೦ ಘಂಟೆಯೊಳಗೆ ನಡೆಯಿತು. ಈ ಕೊಳವು ಬಸವನಹಳ್ಳಿಯ ಊರು ಮಧ್ಯದಲ್ಲಿದ್ದು ಇಷ್ಟು ಗಲಾಟೆ ನಡೆದಿದ್ದಾಗ್ಯೂ ಯಾವೊಬ್ಬ ಪೊಲೀಸ್ ಆಫೀಸರು ಸ್ಥಳದಲ್ಲಿ ಬರದೆ "ಊರು ಸೂರೆಹೋದ ಮೇಲೆ ಊರು ಬಾಗಿಲು ಹಾಕಿದರೆಂಬ" ಗಾದೆಗೆ ಅನುಕೂಲವಾಗಿ ಶವವನ್ನು ನೀರಿನಿಂದ ಮೇಲಕ್ಕೆ ತಂದಮೇಲೆ ಆತುರ್ಯದಿಂದ ಬಂದು ವಿಧ್ಯುಕ್ತವಾದ ಪಂಚನಾಮೆ ಕಾರ್ಯವನ್ನು ಸಾಂಗವಾಗಿ ನಡೆಸಿಕೊಂಡು ಹೋದನಂತರ ದಹನಕರ್ಮವು ನೆರವೇರಿಸಲ್ಪಟ್ಟಿತು. ವಿಶ್ವಸ್ಯ ಅನುಕೂಲ ಪ್ರವರಾದ ಮ ರಾ|| ಬಿ. ರಾಮಸ್ವಾಮಯ್ಯ ಬಿ. ಎ ಯವರು ಮಿತ್ರರಾದ ಪೊಲೀಸ್ ಜಮೇದಾರನಿಷ್ಠ ಮ|| ರಾ|| ಬಿ ಕೃಷ್ಣರಾಯರೊಡನೆ ಬಂದು ಸ್ವಲ್ಪಹೊತ್ತು ಕಲ್ಯಾಣಿ ಬಳಿ ನಿಂತಿದ್ದು, ಆಫೀಸಿಗೆ ಹೋಗಲು ಕಾಲಪ್ರಾಪ್ತವಾಗುತದೆಂಬದರ ಮೇಲೆ ದಫ್ತರಾಗಿ ರವಾನಿಸಿದರು. ಇದೆಲ್ಲ ಹಾಗಿರಲಿ, ಬಾಲಕನನ್ನು ಕಳಕೊಂಡ ವೇ|| ಸುಬ್ಬಭಟ್ಟರಿಗೆ ತಮ್ಮ ಯಾವನಸ್ಥನಾದ ಜ್ಯೇಷ್ಠಪುತ್ರನ ಮರಣ ದುಃಖವನ್ನು ಪೂರ್ತಿಯಾಗಿ ಮರೆಯುವದರೊಳಗೇನೆ ಈ ದ್ವಿತೀಯ ಪುತ್ರನ ಮರಣದ ಶೋಕವು ಪ್ರಾಪ್ತಿಸಿದ್ದಕ್ಕಾಗಿ ಬಹಳ ವ್ಯಸನಪಡಬೇಕಾಗಿರುತ್ತೆ.

THE MYSORE GAZETTE.

ಮೈಸೂರು ಗೆಜೆಟ್.

ಗುರುವಾರ, ತಾ|| ೩ನೇ ಜೂನ್ ೧೮೯೭.

ಮೈಸೂರ್ ಗವರ್ನಮೆಂಟಿನವರಿಂದ ಹೊರಡಿಸಲ್ಪಟ್ಟ ಇಸ್ತಿಹಾರನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖ್ ೨೬ನೇ ಮೇ ೧೮೯೭.

ನಂ|| ೧೬೬೯-೬೩. ಎಲ್ಸ್ಟ.—ಕ್ರಿಮಿನಲ್ ಪ್ರೊಸೀಜರ್ ಕೋಡಿನ ೧೬ನೇ ಸೆಕ್ಷನ್ ಅನುಸರಿಸಿ, ಮೈಸೂರು ಡಿಸ್ಟ್ರಿಕ್ಟಿನ ರೆವಿನ್ಯೂ ಪ್ರೊಬೇಷನರ್ ಬಿ. ಎನ್. ರಾಣೋಜಿರಾಯರು ೩ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ನೇಮಕರಲ್ಪಟ್ಟಿರುತ್ತಾರೆ.

ತಾ|| ೨೬ನೇ ಮೇ ೧೮೯೭,

ನಂ|| ೧೬೮೨-ರೆ. ಫೈ. ೪೩-೯೬,—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೮೪ನೇ ಆರ್ಟಿಕಲ್ ಅನುಸರಿಸಿ, ನಾಗಮಂಗಲ ತಾಲ್ಲೂಕ್ ಅಮಲ್‌ದಾರ್ ಸಿ. ಶಾಮಯ್ಯಂಗಾರ್‌ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಮೊದಲುಗೊಂಡು ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ಪ್ರೊಬೇಷನರಿ ಡೆಪ್ಯುಟಿ ಅಮಲ್‌ದಾರ್ ಡಿ ಸುಬ್ಬರಾಯರು ಸದರೀ ಸಿ. ಶಾಮಯ್ಯಂಗಾರ್‌ರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ನಾಗಮಂಗಲ ತಾಲ್ಲೂಕಿನ ಅಮಲ್‌ದಾರ್ ವ ೩ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ನೇಮಕರಾಗಲ್ಪಟ್ಟಿರುತ್ತಾರೆ.

ದಿವಾನರವರ ಆಫೀಸ್ ಕ್ಲಾರ್ಕ್ ಎನ್. ಗೋಪಾಲಕೃಷ್ಣಯ್ಯಂಗಾರ್, ಬಿ. ಎ., ಬಿ. ಎಲ್., ಇವರು ಸದರೀ ಡಿ ಸುಬ್ಬರಾಯರು ಬೇರೆ ಕೆಲಸದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಪ್ರೊಬೇಷನರಿ ಡೆಪ್ಯುಟಿ ಅಮಲ್‌ದಾರ್ ವ ೩ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ನೇಮಕರಾಗಲ್ಪಟ್ಟಿರುತ್ತಾರೆ.

SUMMARY OF NEWS.

ವೃತ್ತಾಂತ ಸಂಗ್ರಹವು.

ಸೂಜಿಗಳನ್ನು ಮಾಡುವಂಥಾ ಒಂದು ಯಂತ್ರದಲ್ಲಿ ನಿಮಿಷ ೧ಕ್ಕೆ ೧೪ ಲಕ್ಷ ಸೂಜಿಗಳು ತಯಾರಾಗುತವೆ.

ರಾತ್ರಿಯಲ್ಲಿ ಸ್ವಪ್ನಗಳು ಬೀಳಬಾರದೆಂದಿದ್ದರೆ ಊಟವಾದ ಕೂಡಲೆ ಮಲಗಬಾರದು.

ಜರ್ಮಾದೇಶದಲ್ಲಿ ಈಗ ಭೂಕಂಪದ ಅವಾಂತರವು ಹೆಚ್ಚಾಗಿದೆ, ಸುಮಾರಾಗಿ ೧ ದಿನಕ್ಕೆ ಮೂರಾವರ್ತಿ ಭೂಕಂಪವಾಗುತಿದೆಯಂತೆ.

ಝೂಲು ಜನರು ಒಂದು ತಾಸಿಗೆ ೯ ಮೈಲು ನಡೆಯುತ್ತಾರೆ. ಆಂದುಬಳಿಕ ಸದರ್ನ್‌ಮರಾಠಾ ರೈಲ್ವೆಯು ಹೋಗಿ ಬಂಡಿಗೂ ಇವರಿಗೂ ಜಿದ್ದು ಬಿಡಬೇಕು.

ಬಳ್ಳಾರಿಯಲ್ಲಿ ಒಬ್ಬನು ತನ್ನ ಮನೆಯಲ್ಲಿ ಭಾವಿ ತೋಡಿಸುವಾಗ್ಗೆ ಒಂದು ಹೊನ್ನು ತುಂಬಿದ ಕೊಡ ಸಿಕ್ಕಿರುತ್ತದೆ.

ಮುಂಬೈ ಪುಣೆಯಲ್ಲಿ ರೋಗದಿಂದ ಸಾವಿರಾರು ಜನರು ಸತ್ತರು. ಕಳ್ಳರು, ತುಡುಗರು ಸಾಯಲಿಲ್ಲವೆಂತಲೂ ಅವರು ತಮ್ಮ ಕರ್ಮವನ್ನು ಎಥಾಪ್ರಕಾರವಾಗಿ ನಡೆಸುತ್ತಾರೆಂತಲೂ ಅಲ್ಲಿಯ ಪತ್ರಗಳು ಹೇಳುತಲಿವೆ.

ಪಾರಸೀ ಜನಗಳೆಲ್ಲೆಲ್ಲಾ ಅತ್ಯಂತ ಐಶ್ವರ್ಯವಂತೆಯಾಗಿದ್ದ ಬಾಯಿ ಮೋತಿಬಾಯಿ ವಾಡಿಯ ಎಂಬಾಕೆಯು ಕಳೆದವಾರದಲ್ಲಿ ಬೊಂಬಾಯಿನಲ್ಲಿ ತೀರಿಹೋದಳು. ಅವಳ ಹತ್ತಿರ ೨ ಕೋಟಿ ದ್ರವ್ಯವಿತ್ತಂತೆ.

ಬೇಳು ಕಡಿದ್ದಕ್ಕೆ ಕೆರೋಸಿನ್ ಎಣ್ಣೆಯು ಸರ್ವೋತ್ಕೃಷ್ಟವಾದ ಔಷಧವೆಂದು ಇತ್ತಲಾಗಿನ ಅನುಭವಿಕರು ಅನುಭವನೊಂದು ತಿಳಿಸಿದ್ದಾರೆ. ಕಡಿದ ಸ್ಥಳವನ್ನು ಮೇಲೆತಾಣಿಸಿದ ಎಣ್ಣೆಯಲ್ಲಿ ಅದ್ದಿದೊಡನೆ ಝುಂಗನೆ ವಿಷವು ಇಳಿದುಹೋಗುತ್ತದೆ.

ಹೋದವಾರದಲ್ಲಿ ನಿಪಾಣಿಯಲ್ಲಿಯು ಪ್ರಸಿದ್ಧ ವ್ಯಾಪಾರಿ ಮತ್ತು ಸಾವಕಾರರಾದ ಶ್ರೀ. ರಾ. ಫುಲಚಂದ ಗೋಪಾಳಚಂದ ಶೇಟರವರು ದುಷ್ಕಾಳ ಪೀಡಿತ ೧ ಸಾವಿರ ಸ್ತ್ರೀಯರಿಗೆ ದರ ಒಬ್ಬ ಸ್ತ್ರೀಗೆ ಒಂದೊಂದು ಶೀರೆ ಮತ್ತು ಒಂದೊಂದು ಕುಬಸದ ಕಣ ಈ ಪ್ರಕಾರ ಹಂಚಿದರು.

ಅಹಮ್ಮದ್‌ನಗರದಲ್ಲಿ ಒಬ್ಬ ಸಾಹೇಬನ ಬಂಗ್ಲೆಯೊಳಗೆ ಒಂದು ಆಕಳ ಹೊಕ್ಕಿತು. ಸಾಹೇಬ್ ಬಹದ್ದೂರನು ದುದ್ದಿ ಖಜಿ ಖಾದ್ಯ ಶಿಕ್ಕಿದ್ದನ್ನು ತಿಳಿದು ಅದಕ್ಕೆ ಗುಂಡು ಹಾಕಿಕೊಂದು ನಾಲ್ಕಾರು ದಿವಸಗಳವರೆಗೆ ಅದರ ಮಾಂಸ ಭಕ್ಷಣ ಮಾಡಿದನು. ಈನರಾಧಮನ ಮೇಲೆ ಫಿರ್ಯಾದಿಯಾಗಿದೆ.

ಈಗಿನ ಕ್ಷಾಮಕಾಲದಲ್ಲಿ ಉಪ್ಪಿನ ಮೇಲಿರುವ ಸುಂಕವನ್ನು ಕಡಿಮೆ ಮಾಡಬೇಕೆಂದು ಸರ್‌ವಿಲ್ಲಿಯಮ್ ವೆಡರ್‌ಬರ್ನ್ ಸಾಹೇಬರು ಸ್ಟೇಟ್ ಸೆಕ್ರೆಟರಿಯವರನ್ನು ಕೇಳಲು, ಅದಕ್ಕೆ ಹಿಂದುಸ್ಥಾನದ ಜನರು ಸದರೀ ಸುಂಕವನ್ನು ಕಡಿಮೆ ಮಾಡಬೇಕೆಂದು ಅಪೇಕ್ಷಿಸುವಂತೆ ತೋರುವದಿಲ್ಲವೆಂದು ಸೆಕ್ರೆಟರಿಯವರು ಉತ್ತರ ಕೊಟ್ಟರು.

ದರಭಂಗಾ ಮಹಾರಾಜರವರು ಈಗಿನ ಕ್ಷಾಮವನ್ನು ಯೋಚಿಸಿ ತಮ್ಮ ಸಂಸ್ಥಾನದಲ್ಲಿಯ ರೈತರಿಗೆ ತೆರಿಗೆಯನ್ನು ಮಾಫ್ ಮಾಡಿದ್ದಲ್ಲದೆ ಅವರ ಪೋಷಣಾರ್ಥ ೪ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರು. ಆದರೆ ಆ ಹಣವು ಸಾಲದೆಹೋದುದರಿಂದ ಮತ್ತೂ ೪ ಲಕ್ಷ ರೂಪಾಯಿಗಳನ್ನು ಕೊಟ್ಟರೆಂದು ಕೇಳುತ್ತೇವೆ

ಕಲ್ಕತ್ತೆಯ ಬೀದಿಯಲ್ಲಿ ಒಬ್ಬ ಫಕೀರನು ಬಂದಿರುವನು. ಅವನು ಹುಲ್ಲಿನ ಮೇಲೆ ಬಾಯಿಂದ ಊದಿ ಅದಕ್ಕೆ ಉರಿ ಹಚ್ಚುತ್ತಾನೆಂತಲೂ, ಉಸುಬು ತೆಗೆದುಕೊಂಡು ಮಿಠಾಯಿಯನ್ನು ಮಾಡುತ್ತಾನೆಂತಲೂ, ಘನರೋಗಗಳನ್ನು ಒಹುಬೇಗ ವಾಸಿಮಾಡುತ್ತಾನೆಂತಲೂ ಒಂದು ಪತ್ರಿಕೆಯು ತಿಳಿಸುತಿದೆ.

ಲಂಡನ್ ಪಟ್ಟಣದ ಲಾರ್ಡ್ ಮೇಯರ್ ಎಂಬ ಅಧಿಕಾರಿಯು ಹಾಕಿಕೊಳ್ಳುವಂಥಾ ಒಂದು ಡವಾಲಿಯಲ್ಲಿ ೧೯ ಲಕ್ಷ ರೂಪಾಯಿ ಬಾಳುವ ವಜ್ರಖಡಿಗಳು ಕೆತ್ತಿವೆ. ಈ ಡವಾಲಿಯನ್ನು ಸರ್ಕಾರದವರು ಆ ಅಧಿಕಾರಿಗೆ ಮಾಡಿಸಿ ಕೊಟ್ಟಿದ್ದಾರೆ. ಈ ಕೆಲಸಕ್ಕೆ ಯಾರಾದರು ಬದಲೀ ಬಂದರೆ ಅವರಿಂದ ಹಣ ಡಿಪಾಜಿಟ್ ಇಡಿಸಿಕೊಳ್ಳುತ್ತಾರೆ.

ಲಂಡನ್ ಪಟ್ಟಣದಲ್ಲಿ ನಡೆಯುವ ಜೂಬಿಲಿ ಉತ್ಸವಕಾಲದಲ್ಲಿ ಬಡಬಗ್ಗರಿಗೆ ಶುಭ ಭೋಜನ ಮಾಡಿಸಬೇಕೆಂದು ಆಸ್ಟ್ರೇಲಿಯಾ ದ್ವೀಪದಿಂದ ೩೦,೦೦೦ ಕುರಿಗಳನ್ನೂ, ೫೦೦ ಎತ್ತುಗಳನ್ನೂ ಕಳುಹಿಸಿ ಕೊಡುತ್ತಾರೆ ಇದಲ್ಲದೆ ಒಬ್ಬ ಸಾಹುಕಾರನು ಇತರ ಸಾಮಗ್ರಿಗಳಿಗಾಗಿ ೨೫,೦೦೦ ಪೌಂಡುಗಳನ್ನು ಧರ್ಮಾರ್ಥವಾಗಿ ಕೊಟ್ಟಿರುತ್ತಾರೆ.

ಐರ್ಲ್ಯಾಂಡ್ ಸೀಮೆಯ ಪ್ರತಿನಿಧಿಗಳು ಲಂಡನ್ ಪಾರ್ಲಿಮೆಂಟಿನಲ್ಲಿ ಮೆಂಬರುಗಳಾಗಿದ್ದಾರಷ್ಟೆ. ಅವರೆಲ್ಲಾ ಕಳೆದವಾರ ಸಭೆಮಾಡಿ ವಿಲಾಯತಿ ರಾಣಿಯವರು ಐರ್ಲ್ಯಾಂಡ್ ಪ್ರಜೆಗಳಿಗಿರುವ ಕೊರತೆಗಳನ್ನು ಹೋಗಲಾಡಿಸಿ ಕೊಟ್ಟಿಲ್ಲವಾದ್ದರಿಂದ ಅವರ ಜೂಬಿಲಿ ಉತ್ಸವ ಕಾಲದಲ್ಲಿ ತಾವು ಯಾರೂ ಸೇರುವದಿಲ್ಲವೆಂದು ತೀರ್ಮಾನ ಮಾಡಿಕೊಂಡಿದ್ದಾರೆ

ಲಂಡನ್ ಷಹರಿನಲ್ಲಿ ೩೫ ಸಾವಿರ ಜನರು ಊರೊಳಗೆ ಮನೆಯಿಲ್ಲದೆ, ಅಡವಿಯೊಳಗೆ ಹೊಲವಿಲ್ಲದೆ, ತಿನ್ನ ಲಿಕ್ಕೆ ಕೂಳು ಇಲ್ಲದೆ, ದಿಕ್ಕಿಲ್ಲದವರಾಗಿ ಬಳಲುತ್ತಿರುವರು. ಇಂಥ ಜನರಿಗೆ ಇರಲಿಕ್ಕೆ ಧರ್ಮಶಾಲೆಗಳನ್ನು ಕಟ್ಟಿಸಲು ರಾಣಿಯವರ ಜ್ಯೇಷ್ಠಪುತ್ರರು ಪ್ರಯತ್ನ ಮಾಡಿದ್ದಕ್ಕೆ ಒಬ್ಬ ಸಾಹುಕಾರನೇ ೫೦ ಲಕ್ಷ ರೂಪಾಯಿ ಕೊಟ್ಟನು.

ಮುಂಬೈಯಿಯ ಗತಿಸಿದ ಪಾರ್ಸಿ ಗೃಹಸ್ಥರಾದ ವಾಡಿಯಾ ಎಂಬುವವರ ಆಸ್ತಿಯು ಒಂದು ಕೋಟಿ ಇದ್ದು, ಇದೆಲ್ಲವನ್ನು ಧರ್ಮಕೆಲಸಕ್ಕೆ ಉಪಯೋಗಿಸಬೇಕೆಂದು ಅವರು ತಮ್ಮ ಮೃತ್ಯುಪತ್ರದಲ್ಲಿ ಬರೆದಿಟ್ಟಿರುತ್ತಾರೆ. ಹಿಂದುಸ್ಥಾನದಲ್ಲಿ ಈ ತರದ ಧರ್ಮ ಮಾಡಿದವರಲ್ಲಿ ಇವರೇ ಮೊದಲನೇಯವರು.

ನೇಪಾಳ ಸಂಸ್ಥಾನದಲ್ಲಿ ಕೆಳದಿವಸ ಮಳೆ ವಿಪರೀತವಾಗಿ ಸುರಿಯಿತು ಕೆಲವು ವೇಳೆ ಸಿಡಿಲುಗಳು ಬಿದ್ದವು ಒಂದು ಮನೆಯಲ್ಲಿ ಗಂಡಹೆಂಡತಿಯರು ಎಳೇಮಗುವನ್ನು ನಡುವೆ ಮಲಗಿಸಿಕೊಂಡು ತಾವೂ ನಿದ್ದೆ ಮಾಡುತ್ತಿದ್ದರು. ಅವರಿಬ್ಬರಿಗೂ ಸಿಡಿಲು ಬಿದ್ದು ಕೊಂದು ಮಗುವನ್ನು ಮಾತ್ರ ಬಿಟ್ಟುಬಿಟ್ಟಿತು ಇನ್ನೊಂದು ಕಡೆ ೪—೧೦ ಜನರು ಒಂದು ಮನೆಯಲ್ಲಿ ಸೇರಿಕೊಂಡಿದ್ದರು. ಇವರ ಪೈಕಿ ಮೂರು ಮಂದಿ ಸಿಡಿಲಿನ ಏಟಿಗೆ ಸಿಕ್ಕಿ ಸತ್ತರು. ಉಳಿದವರೆಲ್ಲಾ ಬದುಕಿಕೊಂಡರು.

ಆಸ್ಟ್ರಿಯಾ ರಾಜ್ಯದ ವೈದ್ಯಸಂಘದವರು ತಮ್ಮಕಡೆ ಜನರನ್ನು ಬೊಂಬಾಯಿಗೆ ಕಳುಹಿಸಿದ್ದರು. ಇವರು ಬೊಂಬಾಯಿನಲ್ಲಿ ಪ್ರಬಲವಾಗಿದ್ದ ಬ್ಯೂಬೋ ಎಂಬ ಉಪದ್ರವ ಲಕ್ಷಣಗಳನ್ನೆಲ್ಲಾ ಕಣ್ಣಾರ ನೋಡಿದರು. ಮತ್ತು ಅವರು ತಮ್ಮ ಊರಿಗೆ ಆ ರೋಗದಲ್ಲಿ ಸತ್ತ ಕೆಲವು ಜೀವಾರಸು ಹೆಣಗಳನ್ನು ಪರೀಕ್ಷೆ ಮಾಡುವದಕ್ಕಾಗಿ ಹಡಗಿನಲ್ಲಿ ಹೊತ್ತುಕೊಂಡು ಹೋಗಿರುತ್ತಾರೆ. ಇದರಿಂದ ಯೂರೋಪ್ ಖಂಡದ ಜನರು ರೋಗಗಳಿಗೆ ತಕ್ಕ ಚಿಕಿತ್ಸೆಯನ್ನು ಕಂಡು ಹಿಡಿಯುವದರಲ್ಲಿ ಎಷ್ಟು ಶ್ರದ್ಧೆಯುಳ್ಳವರಾಗಿದ್ದಾರೆಂಬುವದು ವ್ಯಕ್ತವಾಗುತ್ತೆ.

ಪ್ಯಾರಿಸ್ ಪಟ್ಟಣದ ಅಂಗಡಿಗಳಲ್ಲಿ ಪದಾರ್ಥಗಳು ಒಳ್ಳೇದಾಗಿಲ್ಲವೆಂದು ತಿಳಿದು ಬಂದರೆ ಅದನ್ನು ಸ್ವಲ್ಪ ಕೊಂಡುಹೋಗಿ ಮ್ಯೂನಿಸಿಪಲ್ ಬೋರ್ಡಿನವರಿಗೆ ತೋರಿಸಿದರೆ ಅವರು ಆಪದಾರ್ಥವನ್ನು ವೈದ್ಯರ ಮೂಲಕ ಪರೀಕ್ಷಿಸಿ ನೋಡುತ್ತಾರೆ, ಕೆಟ್ಟದ್ದಾಗಿದ್ದರೆ ಅವರು ಆ ಅಂಗಡಿಯವನಿಗೆ ಜುಲ್ಮಾನೆ ಸಹಾ ಶಿಕ್ಷೆಯನ್ನು ಹಾಕಿಸುತ್ತಾರೆ. ಇದಲ್ಲದೆ ಆ ಅಂಗಡಿಯವನು ೧ ವರುಷಕಾಲ ತನ್ನ ಅಂಗಡಿಯ ಮುಂದುಗಡೆ ಒಂದು ಹಲಿಗೆಯನ್ನು ಹಾಕಿ ಅದರಲ್ಲಿ ಈ ಅಂಗಡಿಯ ಪದಾರ್ಥವನ್ನು ಕೆಟ್ಟದ್ದೆಂದು ಸರ್ಕಾರದವರು ಶಿಕ್ಷಿಸುತ್ತಾರೆ ಎಂಬದಾಗಿ ಬರೆದು ಇಡಬೇಕೆಂದು ಅಪ್ಪಣೆ ಕೊಡುತ್ತಾರೆ.

ಕಳೆದ ೧೯ನೇ ತಾರೀಖಿನ ಬೆಳಿಗ್ಗೆ ೮ ಘಂಟೆಯಲ್ಲಿ ದಿಲ್ಲಿ ಪಟ್ಟಣದಲ್ಲಿ ಒಬ್ಬನು ಕೆಲವು ನೋಟೀಸುಗಳನ್ನು ಬೀದಿಬೀದಿಗಳಲ್ಲೆಲ್ಲಾ ಅಂಟಿಸುತ್ತಿದ್ದನು. ಪೋಲೀಸಿನವರು ಅವನು ಅಂಟಿಸುತ್ತಿದ್ದನ್ನು ನೋಡಿ ಏನೋ ನಾಟಕದ ಜಾಹಿರಾತುಗಳಿರಬಹುದೆಂದು ಚೆನ್ನಾಗಿ ಪರೀಕ್ಷೆ ಮಾಡಿ ನೋಡದೆ ಆಲಕ್ಷ್ಯಮಾಡಿ ಸುಮ್ಮನಿದ್ದರು. ದಿನಗಾದ ಮೇಲೆ ಜನರು ರಸ್ತೆಯಲ್ಲಿ ತಿರುಗಾಡುತ್ತ, ಈ ದೊಡ್ಡ ನೋಟೀಸನ್ನು ಓದುತ್ತಾ ಆಶ್ಚರ್ಯಪಡುತ್ತಿದ್ದರು. ಆ ನೋಟೀಸಿನಲ್ಲಿ ತುರ್ಕಿ ಸುಲ್ತಾನರಿಗೆ ಯೂರೋಪ್ ಖಂಡದಲ್ಲಿ ಜಯವಾಗಿದೆ ಎಂತಲೂ ಆದ್ದರಿಂದ ಹಿಂದುಸ್ಥಾನದ ಮಹಮ್ಮದೀಯರು ಒಗ್ಗಟ್ಟಾಗಿ ನಿಂತು ಯುದ್ಧ ಮಾಡಬಾರಂಭಿಸಬೇಕೆಂತಲೂ ಜನರಿಗೆ ಪ್ರೋತ್ಸಾಹ ಬರುವಮಾತುವ ಮಾತುಗಳನ್ನು ಬರೆದಿತ್ತು. ಈಗ ಸರ್ಕಾರದವರು ಅಂಥಾ ನೋಟಿ ಸನ್ನು ಬರೆದವರುಯಾರು, ಯಾರು ಅಚ್ಚುಹಾಕಿಕೊಟ್ಟರು ಎಂಬದಾಗಿ ವಿಚಾರಿಸುತ್ತಾ ಪತ್ತೇ ತರದೂದು ನಡಿಸುತ್ತಿದಾರೆ

NOTICE.

VIDYASARA SANGRAHA.

A TREATISE ON THE PRINCIPLES OF

HINDU MEDICINE

Price, including Postage Rs. 5–0–0

ವೈದ್ಯಸಾರಸಂಗ್ರಹ.

ಇದು ಚರಕ, ವಾಗ್ಭಟ, ಸುಶ್ರುತ, ಶಾರ್ಙ್ಗಧರ ಮೊದಲಾದ ಅನೇಕ ಪೂರ್ವಗ್ರಂಥಗಳ ಸಂಗ್ರಹ ರೂಪವಾಗಿರುತಿದೆ.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಹಾಸಲ್ ದೇಖಿಲ್ ಪ್ರತಿ ೧ಕ್ಕೆ ೫—೦—೦

ಬೇಕಾದವರು ಬೆಂಗಳೂರು ಕರ್ನಾಟಕ ಪ್ರೆಸ್ ಪ್ರೊಪ್ರೈಟರವರಿಗೆ ಬರೆದು ತರಿಸಿಕೊಳ್ಳಬಹುದು.

NOTICE.

ನಮ್ಮ ಆಫೀಸ್‌ನಲ್ಲಿ ವಿಲ್ಸನ್ ಮತ್ತು ರಿಚ್ಚರ್ಡ್ಸ್ ಕಂಪೆನಿಯವರಿಂದ ತಯಾರ್ಮಾಡಲ್ಪಟ್ಟ ರಾಯಲ್ ಪ್ರೆಸ್ ಒಂದು, ಅದಕ್ಕೆ ತಕ್ಕಂತೆ ಹಾರೀಲ್ಡ್ ಕಂಪೆನಿಯ ರಾಯಲ್ ಸೈಜ್ ಇಂಕಿಟೇಬಲ್ ಒಂದು, ಇವೆರಡೂ ಬಿಕರಿಗೆ ಸಿದ್ಧವಾಗಿವೆ. ಮೇಲಿನ ಯೆರಡೂ ಒಳ್ಳೆಯ ಸ್ಥಿತಿಯಲ್ಲಿವೆ. ಜಬೂತಾಗಿವೆ. ಬೇಕಾದವರು ಬಂದು, ನೋಡಿ, ಕ್ರಯ ವಗ್ಯೆರೆ ನಿಷ್ಕರ್ಷೆಮಾಡಿ ಪಡೆಯಬಹುದು. –ಪ್ರೊಪ್ರೈಟರ್.

V. AYANOR'S PREPARATIONS.

ವಿ. ಅಯನಾರ್ ಎಂಬವರಿಂದ ತಯಾರ್ಮಾಡಲ್ಪಟ್ಟ ಪ್ರಸಿದ್ಧ ಔಷಧಗಳು.

ಪೆರಿಯಾಡಿಸೆಸ್ಪೈಯರ್.—ಇದು ಹೊಟ್ಟೆಕೂಳಿ, ಅಜೀರ್ಣ, ಕರುಳು ನೋವು, ವಾಂತಿಭೇದಿ, ಅಜೀರ್ಣಭೇದಿ, ಬೇಗುರೆತನ, ಕೆಮ್ಮು, ಮೂತ್ರಕಟ್ಟು, ಬಾಯಿಹುಣ್ಣು, ಗರ್ಭಿಣಿ ಸ್ತ್ರೀಯರ ಉಪಾಧಿಗಳು, ತಲೆನೋವು, ದಂತಶೂಲೆ, ಬಾಯಿ ಮೊದಲಾದವುಗಳಿಗೆ ಬಹಳ ಉಪಯುಕ್ತವಾದದ್ದು. ಇದರ ಕ್ರಯ ದೊಡ್ಡಶೀಸೆ ೧ಕ್ಕೆ ೧ ರೂ. ಸಣ್ಣಶೀಸೆ ೧ಕ್ಕೆ ೪ ಆಣೆ.

ಪೇನ್ಕ್ಯೂರವಾಯು ತೈಲ—ಶಿರೋರ್ಧಶಾಲಿಕ ನೋವು, ಪಕ್ಕಶೂಲೆ, ಸೊಂಟನೋವು, ತಲೆಶೂಲೆ ಇವು ಪರಿಹಾರವಾಗುವದು. ಇದರ ಕ್ರಯ ದೊಡ್ಡಶೀಸೆ ೧ಕ್ಕೆ ೧ ರೂ. ಸಣ್ಣಶೀಸೆ ೧ಕ್ಕೆ ೪ ಆಣೆ.

ಜ್ವರದ ಭ್ರಾಂತಿ.—ಇದು ಎಂತಾ ಜ್ವರವನ್ನಾದರು ಎರಡು ದಿನಗಳೊಳಗಾಗಿ ನಿವೃತ್ತಿ ಮಾಡತಕ್ಕದ್ದು. ದೊಡ್ಡಶೀಸೆ ೧ಕ್ಕೆ ೧ ರೂ. ಸಣ್ಣಶೀಸೆ ೧ಕ್ಕೆ ೪ ಆಣೆ.

ಓಮಕರ್ಪೂರದ ಕಶಾಯಿ.—ಇದು ಶೀತಭೇದಿ, ರಕ್ತಭೇದಿ, ರಜಸ್ವಲೆಯರಿಗಾಗುವ ಉಪಾಧಿ, ಎದೆನೋವು, ಹೊಟ್ಟೆನೋವು ಇವುಗಳಿಗೆ ಬಹಳ ಪ್ರಯೋಜನಕರವಾದದ್ದು. ಇದರ ಕ್ರಯ ದೊಡ್ಡಶೀಸೆ ೧ಕ್ಕೆ ೧ರೂ. ಸಣ್ಣಶೀಸೆ ೧ಕ್ಕೆ ೪ ಆಣೆ.

ಮೇಹವಾಯು ಚಿಕಿತ್ಸೆ—ಇದು ಮೇಹವಾಯುವಿನಿಂದ ಶರೀರವು ಉಬ್ಬುವದು, ಚರ್ಮವು ಒಡೆಯುವದು, ಸಾರ್ಧ್ವ ತಲೆನೋವು, ಗ್ರಂಥಿಗಳು ಇವುಗಳಿಗೆಲ್ಲ ಬಹಳ ಉಪಯುಕ್ತವಾದದ್ದು ಇದರಕ್ರಯ ದೊಡ್ಡಶೀಸೆ ೧ಕ್ಕೆ ೧ರೂ. ಸಣ್ಣಶೀಸೆ ೧ಕ್ಕೆ ೪ ಆಣೆ

ವಾತ್ಸ್ಯಾಪ್ತೈಲವು—ಇದು ನಡುವು ನೋವು, ಕೀಲುನೋವು, ಮೊಣಕಾಲನೋವು, ಅರ್ಧತಲೆನೋವು, ಬಚ್ಚಗತ್ತೆ ಇವುಗಳಿಗೆ ಪ್ರಸಿದ್ಧವಾದ ತೈಲವು ದೊಡ್ಡ ಡಬ್ಬಿ ೧ಕ್ಕೆ ೧ ರೂ. ಸಣ್ಣ ಡಬ್ಬಿ ೧ಕ್ಕೆ ೪ ಆಣೆ

ಶ್ವೇತಕುಷ್ಠೌಷಧ—ಇದು ಸಕಲವಿಧ ಮೇಹರೋಗಗಳಿಂದ ಜನಿಸುವಬಿಳುಪು, ಹುರುಪು ವಗ್ಯೆರೆ ಸ್ತ್ರೀವಿಷಯಕ ದರ್ದುಗಳಿಗೆಲ್ಲಕ್ಕೂ ಶೀಘ್ರವಾಗಿಯೂ, ಮಾರಿ ಎಂದಿಗೂ ಬಾರದಂತೆ ನಿರ್ಮೂಲವಾಗಿಯೂ ಗುಣಪಡಿಸತಕ್ಕಂತಾ ಔಷಧ. ಇದರ ಕ್ರಯ ಶೀಸೆ ೧ಕ್ಕೆ ೧ ರೂ. ೪ ಆಣೆ

ಕೂದಲು ನರೆಯದೆ ಕಪ್ಪಾಗಿ ಬೆಳೆಯಲಿಕ್ಕೆ ಔಷಧ.—ಈ ತೈಲವುನರೆತ ಕೂದಲುಗಳನ್ನು ಕಪ್ಪಾಗಿ ಮಾಡುವದು. ಕೂದಲು ಬೆಳೆಯದಿರುವಸ್ಥಳಗಳಲ್ಲಿ ಹುಟ್ಟಿ ಬೆಳೆಯುವದು ಇದನ್ನು ತಲೆಗೆಹಚ್ಚಿಕೊಂಡು ಸ್ನಾನಮಾಡಬಹುದು ಮತ್ತು ಸುವಾಸನೆಯುಳ್ಳದ್ದಾಗಿರುವದರಿಂದ ಇದರ ಕ್ರಯ ಶೀಸೆ ೧ಕ್ಕೆ ೧ ರೂ.

ಇವು ಬೇಕಾದವರು ಬಳ್ಳಾರಿ ಪಟ್ಟಣದ ವಿ. ಅಯನಾರ್ ದಿವಾನಖಾನೆಗೆ ಬರೆದು ತರಿಸಿಕೊಳ್ಳಬಹುದು.

V. GOPALAKRISTNA IYER,
Proprietor,
Mr V IYNAR & Co.
Bellary.

ಈ ಕಂಪೆನಿಯು ಸನ್ ೧೮೯೩ನೇ ಇಸವಿಯಲ್ಲಿ ಸ್ಥಾಪಿತವಾಯಿತು.

ಜನ್ಮದ ಲಾಭವು.

ವಜ್ರಾಂಗ ಖರ್ಜೂರವು.

ಬಲಾರೋಗ್ಯ, ಪುಷ್ಟಿಗಳನ್ನು ಬೆಳೆಸತಕ್ಕ ಉತ್ಪತ್ತಿಯು.

ಅತ್ಯುತ್ಕೃಷ್ಟವಾದ ಬಳ್ಳಿಗಳಿಂದ ತಯಾರಿಸಿದ ಈ ಉತ್ಪತ್ತಿಗಳು ಕೋಕಣಪ್ರಾಂತದ ಅನೇಕ ವನಸ್ಪತಿಗಳ ಬೀಜಗಳ ಪುಟಗಳನ್ನು ಕೊಟ್ಟು, ತುಪ್ಪದೊಳಗೆ ನೆನಸಿ, ಒಳ್ಳೇ ಜೇನಿನ ತಳಿತಿಯ ಸಕ್ಕರೆಯ ಪಾಕದಲ್ಲಿ ಸಿದ್ಧ ಮಾಡಿರತ್ತೇವೆ ಈ ಉತ್ಪತ್ತಿಗಳು ಮಹೌಷಧಗಳಿದ್ದು, ಒಳ್ಳೇ ರುಚಿಯುಳ್ಳವವೆ ಇವುಗಳ ಸೇವನೆಯಿಂದ ಕಫ, ವಾತ, ಪಿತ್ತ ಈ ತ್ರಿದೋಷಗಳಿಂದುಂಟಾಗತಕ್ಕ ಯಾವತ್ತು ಬಗೆಯ ವ್ಯಾಧಿಗಳೂ ಹೋಗುತ್ತವೆ. ೬೦ ವರ್ಷಗಳ ಪ್ರಾಯವುಳ್ಳ ಮುದುಕರ ಕಾಮವಿಕಾರವಾದರೂ ಪರೆಯದ ನಂತರದಂತೆ ಪ್ರಜ್ವಲಿತವಾಗುತ್ತದೆ ಜನನೇಂದ್ರಿಯದಲ್ಲಿ ಬಲ ಹುಟ್ಟಿ ನಪುಂಸಕತ್ವವು ಇಲ್ಲದಂತಾಗುತ್ತದೆ ಲಘ್ವಿಯ ಮುಂಚೆ ಅಥವಾ ಹಿಂಚೆ ಹರಿದುಹೋಗುವ ಧಾತು ನಿಲ್ಲುತ್ತದೆ. ಸ್ವಪ್ನಾವಸ್ಥೆಯಾಗುವದಿಲ್ಲ ವೀರ್ಯವು ಬೆಳೆದು ಮೈ ಬಣ್ಣವು ಸುಧಾರಿಸುತ್ತದೆ. ಪರಮಾ ಬಾಗೂ ಉಷ್ಣಸಂಬಂಧಿಕ ಬೇನೆಗಳತರದ ಇಲ್ಲದಂತಾಗಿ ಧಾತು ಪುಷ್ಟವಾಗುತ್ತದೆ. ಮೂರು ಹೊತ್ತೊಂದರೂ ಅನ್ನ ಪಚನವಾಗಿ ಒಳ್ಳೇ ಹಸಿವೆಯಾಗುತ್ತದೆ. ಹೋಗುವದೊಂದೆ ತಡ ಕೂಡಲೇ ಸ್ವಚ್ಛ ಶೌಚವಾಗುತ್ತದೆ. ಕ್ಷಯ, ಉದರ, ದಮ್ಮು ಈ ರೋಗಗಳು ನಾಶ ಹೊಂದುತ್ತವೆ. ಹೊಸ ಬೇನೆ ಇದ್ದಲ್ಲಿ ೧೧ ದಿವಸಗಳ ವರೆಗೆ ಸಾಲುವ ಒಂದೇ ಡಬಿಯಿಂದ ಗುಣವುಂಟಾಗುತ್ತದೆ. ಮತ್ತು ಹಳೆದ್ದಲ್ಲಿ ೬ ದಿನಗಳ ಮೇಲೆ ಗುಣ ಬಂದೀತು ೧೧ ದಿನಗಳವರೆಗೆ ಸಾಲತಕ್ಕ ೧ ಡಬ್ಬಿಗೆ ೧–೪–೦ ರೂ|| ಒಂದೇಸಾರ್ಯಕ್ಕೆ ೩ ಡಬ್ಬಿಗಳು ತರಿಸಿಕೊಳ್ಳತಕ್ಕವರಿಗೆ ಒಂದು ಡಬ್ಬಿಯು ಉಚಿತವಾಗಿ ಸಿಕ್ಕೀತು. ಈ ಉತ್ಪತ್ತಿಯಿಂದ ಹೆಂಗಸರು ಸತೇಜರಾಗುತ್ತಾರೆ. ಶರಗಿನ ನಾಗೂ ಬಾಣಂತಿ ಬೇನೆಗಳು ವಾಸಿಯಾಗುತ್ತವೆ. ಎಲ್ಲರನ್ನು ಸರಿಯಾಗಿ ಬೇರೆ ಇಲ್ಲದವರನ್ನಾಗಮಾಡಿ ಬಲಾರೋಗ್ಯ ಪುಷ್ಟಿಗಳನ್ನು ಬೆಳಸುತ್ತವೆ. ಸಾಹೇಬ್ ಜನರಲ್ಲಿ ಬಹಳ ಡಬ್ಬಿಗಳು ಖರ್ಚಾಗುತ್ತವೆ ಈ ಔಷಧವು ಈ ಕಂಪೆನಿಯವರೊರ್ತು ಬೇರೆ ಸ್ಥಳದಲ್ಲಿ ಆಗುವದಿಲ್ಲ ಯಾವತ್ತು ದೇಶಗಳಲ್ಲಿಯು ವೈದ್ಯಶಾಲೆಗಳಿಗಾಗಿ ಕಳುಹಿಸಲ್ಪಡುತ್ತದೆ. ಬರೆದು ಬಂದು ಕೂಡಲೆ ಈ ಕಂಪೆನಿಯು ಬೇಕಾದವರಿಗೆ ಈ ಡಬ್ಬಿಗಳು ಕಳುಹಿಸಿಕೊಟ್ಟೀತು. ಅಂಚೆಯ ಹಾಗೂ ಸ್ಯಾಲ್ಯೂ ಪೇಯಬಲ್ ವಚ್ಚ ಬೇರೆ ಕೊಡಬೇಕ (ಉಚಿತ ಡಬ್ಬಿ ಸಹ ೮ ಡಬ್ಬಿಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬಾದಲ್ಲಿ ಎಲ್ಲಾ ಖರ್ಚಿನ ಹಾಕಿ ರವಾನಿಸುವೆವು, ಹೀಗೆ ಕಳುಹಿಸಿದರೆ ಟಪ್ಪಾಲ್ ಖರ್ಚು ಕಡಮೆ ಬೀಳುವದು)

ಮೇಲ್ವಿಳಾಸ—ಪಿ. ಎಲ್. ಎ. ಬ್ರದರ್ಸ್ ಮತ್ತು ಕಂಪೆನಿ,

ಫಸ್ಟ ಇಂಗ್ಲಿಷ್ ಪ್ರೈವೇಟ್ ಆಫೀಸ್, ಡಿಸ್ಟ್ರಿಕ್ಟ ಬೆಳಗಾಂವ.

ಪೋಸ್ಟ—ಬೆಳಗಾಂವ. Post BELGAUM.

BANGALORE :—Printed and Published at the KARNATAKA PRESS, No. 40, HOSPITAL ROAD, CITY,—1897.

THE

Karnataka Prakasika.

ಪ್ರಕಟನೆಯ ರಿವಾಜು, { ಮೊದಲನೆಯದಕ್ಕೆ ಪಙ್ಕ್ತಿ ಒಂದಕ್ಕೆ 0 2 0
ಎರಡನೆಯದಕ್ಕೆ ಪಙ್ಕ್ತಿ ಒಂದಕ್ಕೆ 0 1 0
[ಹೆಚ್ಚು ಸಲ ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟುಸಲ ಬೇಕೋ ಪಙ್ಕ್ತಿ ಒಂದಕ್ಕೆ ಆಣೆ ಒಂದರಂತೆ ಲೆಕ್ಕ ಮಾಡಲ್ಪಡುವದು]

ಕರ್ಣಾಟಕ ಪ್ರಕಾಶಿಕಾ.

Published Every Monday Morning

ಚಂದಾದರಗಳು,—ಸ್ಥಳದವರಿಗೆ, ಪರಸ್ಥಳದವರಿಗೆ, ಪೋಸ್ಟೇಜ್ ಸಹ

ಸಾಲ್ 1 ಕ್ಕೆ ... 3 0 0	ಸಾಲ್ 1 ಕ್ಕೆ ... 4 0 0
6 ತಿಂಗಳಿಗೆ ... 2 0 0	6 ತಿಂಗಳಿಗೆ ... 2 8 0
3 ತಿಂಗಳಿಗೆ ... 1 4 0	3 ತಿಂಗಳಿಗೆ ... 1 8 0

ಪ್ರಕಾಶಯವಿವಿಧಸ್ವನೃತ್ತ್ಯುದಗವರ್ಧಕ ಕರ್ಣಾಟಕಪ್ರಕಾಶಿಕಾಭಿಧಾಪ್ರಥಿತಸಾಹಿತ್ಯೋದ್ಯತಾ ॥ ಪ್ರಿಯಾಂಕಿತವಾಸರನಿಹಿತಮುದ್ರಣಸಜ್ಜನೈರ್ದ್ದಿ ಕಾಸುದಂಬೋಷಿತಾದಿಕಿತಿವಸನಸಂಸವದಂ ॥

VOL. XXIV. BANGALORE:—MONDAY, JUNE 14, 1897. No. 24.

1897

DIAMOND JUBILEE

ADVERTISEMENT

INTENDING stall keepers and exhibitors at the Cubbon Park Fête to be held on the 21st and 22nd June 1897, should apply for the requisite accommodation in the said Park, to the Diamond Jubilee Committee for the City of Bangalore on or before the 5th June 1897.

2 Exhibitors and performers of the Fête should also apply to the said Committee between the 5th and 10th June 1897., specifying the space wanted and other requirements

K. SRINIVASA ROW,
For President

Select Telegrams.

London, 5th June—There are various indications of the Turks preparing for a long occupation of Thessaly A Governor, Judges and Schoolmasters are being appointed Hoards are arriving from Turkey

The King of Siam has visited the Pope

Constantinople, 5th June—At a meeting of the Ambassadors and Tewfik Pasha at Pera, to day, to discuss the peace conditions between Turkey and Greece the representatives of Great Britain, France and Italy definitely declared against the proposal for the annexation of Thessaly to the Turkish Empire

London 6th June—High importance is attached in diplomatic circles to the declaration made by the British, French and Italian Ambassadors at Pera yesterday regarding Thessaly, especially in view of a rapprochement between Russia and Germany. There are signs of a revival of the League of Three Emperors"

An Egyptian reconnoitring party met a dervish post some sixty miles north of Dongola. A fight ensued, in which the dervishes were repulsed and pursued twelve miles in the desert. Twelve Egyptians were killed and wounded Capt Peyton, of the 15th Hussars, was severely wounded, but from latest accounts, is doing well

Constantinople, 6th June—The Porte, in a Memorandum presented to the Embassies, justifies its own conditions of peace

Turkey claims to re-annex Thessaly because the conditions of its cession to Greece have been unobserved The Porte renews its demand for the abolition of the capitulations because Greece abused them. Regarding the indemnity the Memorandum declares that the victor was entitled to be reimbursed for his losses

London, 8th June—A Greek Memorandum to the Powers complains of Turkish atrocities in Thessaly and Epirus, and urges them to intervene

Rome, 8th June—The King of Siam has gone to Florence King Humbert and the Princes escorted the potentate to the station

Washington, 7th June—America has decided to sell the grain collected for the famine and to send India the money instead.

London, 10th June—The embassies at Constantinople have appointed three Committees of experts, principally composed of attaches, to examine into the questions of the frontier of Thessaly, the indemnity, and the capitulations Their reports will form the basis of further negotiations

The Daily News' correspondent at Constantinople states that Tewfik Pasha has informed the Ambassadors of the Powers that it was against the Mussalman religion to restore territory which has been conquered by blood

It is stated from the same source that the German Ambassador supported Tewfik Pasha.

London, 11th June—The Porte has ordered the collection of a sheep tax in Thessaly, and has appointed a Turkish Governor of Pharsala

It is stated that the Porte will withdraw its claim to Thessaly, with the exception of the district to the north of the river Peneus, and will also modify her other demands

Lord Wolseley, with an escort of Indian Cavalry, will immediately precede the Queen's carriage in the Jubilee procession

THE

Karnataka Prakasika.

MONDAY, JUNE 14, 1897.

HYDERABAD AND MYSORE.

THE condition of Hyderabad at the present is anything but what it ought to be In fact the state of things is wretched in the extreme. The province seems to be going from bad to worse. It has not got on well since the late Sir Salar Jung, the great Minister who did so much for the country The ministers since he died have been men of very different calibre, men of a totally different stamp. The result has been bad; the country has gone backward in every way; its servants have failed to do their duty and in every way there has been a falling off Let us begin with the finances, for if these are wrong everything else is wrong. When Lord Ripon seated the present Nizam on the *guddi* he advised him to look well to the finances. Lord Lansdowne gave him the same advice, so did the present Viceroy when he visited Hyderabad in 1895 Still there is no improvement. Things are falling back instead of going forward. The Treasury is empty, the servants of Government have not been paid; the interest due on the money borrowed cannot be met, and the ministers do not know what to do to carry on the work of the State. They cannot borrow money anywhere, for it is well known that Hyderabad does not meet its liabilities when they fall due, that the lenders cannot get their interest, much less their principal, so those who have money will not pay any attention to the solicitations of the Nizam's ministers when they ask that money may be lent. They are defaulting debtors, and the men of money will have nothing to do with them. What the result will be we cannot say. The work of the Government must be carried on, its servants must be paid their salaries; the Nizam must have sufficient to support his dignity, and the pay of the Military must be forthcoming But where is the money to come from. This is the question people in the Hyderabad State are asking, and they get no answer to it; all are silent when they are asked to lend money or suggest something to tide over the present difficulty. To make matters worse there is famine in a portion of the dominions of His Highness, the Nizam, and of a rather severe type This requires money; money must be spent to save the lives of the people. The Nizam's Government is doing its best, but what can be done without money? It is to be feared that the famine stricken will be very badly looked after, and that the number of sufferers will be very great, It is unfortunate that this calamity should have occurred when the country was in such a bad way, when the Government is so little able to do what is required Then this country is full of intrigue and corruption There is no other part of India that is so corrupt as is Hyderabad; there is no part of India so much given up to intrigue. There is intrigue everywhere - intrigue in the courts; intrigue in the public offices. One man tries to trip another up, and take his place, and if he succeeds he is quite satisfied, quite happy. He wants nothing more. Men who have influence can easily make money in that place. A man by the name of Sarvar Jung went away from Hyderabad a short time ago with, it is believed, sixty five lakhs of rupees, and this sum he had managed to get together in the course of three years! He must have plundered the country to a fearful extent, and though it was well known that he was very corrupt he was allowed to stay in the place till the British Resident interfered and told the Nizam to send him away. He was the scourge of Hyderabad. He was the actual ruler of the State, and he ruled it with a rod of iron. This Sarvar Jung took bribes openly, he extorted money from the people; he black-mailed —in fact he did not care what he did if only he would obtain money. He thrust his relatives and friends into the best posts, and got mansabs for those too young to take office. But though this man was the worst—the greatest sinner—there are many in the State who run him pretty close. They take bribes; they are corrupt; they oppress those they ought to treat with justice. They only think of themselves; they do not consider the good of the people. The result is what we have stated at the present time, and unless a change is brought about soon there will to a certainty be a crisis, and one of large dimensions It is difficult to say what changes are required, but one must be a financial reformation. Without this nothing can be done If the finances are wrong everything else is wrong—the whole body politic is wrong. The State of Mysore, though far from being perfect, is in a much better condition than Hyderabad. There is an equilibrium between income and expenditure, rather there is a surplus in the treasury, and a fair one. Education is far more advanced than it is in the sister State, and in every way matters are better managed. As we have said, unless some change is made before long there must be a crisis in the Nizams dominions. Matters cannot go on for ever as they do now, and the end must come sooner or later.

News and Notes.

THE Government of India has refused to sanction a detachment of His Excellency the Governor's Body Guard being taken to Ootacamund.

WE understand that Rai Rao Bahadur C. Venkobachary, Sub Judge of Tanjore, has been appointed to act as District and Sessions Judge of Ganjam, for a period of six weeks, at the end of which he will be posted as Judge to the North Arcot District.

OVER fifteen hundred pounds have been subscribed by the London School Boardschool for the Indian famine. The Chairman, Lord Londonderry, says all the subscriptions have been given ungrudgingly, and that some of the poorest children in the metropolis subscribed half-pennies.

Sir William Wedderburn, in a letter to the *Times*, suggests the advisability of signalising the Jubilee of Her Majesty's reign by granting various boons to India:—viz, an extension of the representative element; a grant to cultivators, fixity of tenure, with limitation to the Government demand; the fulfillment of the Queen's Proclamation of 1858 with regard to the equal rights of all her subjects to public employment, and facilities for conducting periodical enquiries into the administration of the country.

The other day three men who looked every inch *sadhus* and who were comfortably staying at a temple in the district of Jammu, turned out on enquiry to be Mussalmans. The suspicion of the other sadhus in the mundir was roused and word was sent to the police who on examination discovered the physical marks that distinguish the Mussulman. The budmashes were expelled the territories of the State.

The news that an educated and wealthy Hindu gentleman has informed the Turkish Consul-General at Bombay that he wishes to serve as a Volunteer in the Ottoman forces and that he has applied for necessary passports for the journey has pleased the Mussalman papers of the province immensely. The question has been raised that if English Volunteers could fight for Greece why should not Indian Volunteers be allowed to go to Turkey.

Was it not Mr. Balfour that justified the occupation of Chitral, in the face of the Proclamation disclaiming any such intention of the Government of India, on the ground that it was against the traditions of the British soldier to retrace his steps from territory he has once conquered. "Where the British soldier had once been," he said, "there he should remain," The Turkish Government has improved upon this principle They say that it is part of the Mahomedan religion that Mahomedans should retain the territory they have conquered at the cost of their blood. We wonder how the British Government can, with any consistency, oppose the Turkish occupation of Thessaly after this.

WE learn that there was a good meeting of over 300 Indians and gentlemen in Sunderland on the 20th of May to hear Mr Dadabhai Naoroji and Mr Surendra Nath Banerjee on Indian affairs Councillor Calvert was in the chair. That such masters of Indian politics and of the English language produced a good,

impression on the and once, goes without saying The meeting was so well impressed that the two speakers were asked to go to Sunderland once more Other meetings are being arranged for, especially, outside London, where it is almost impossible to get up a good meeting on Indian topics which can create no sensation.

The natural desire of His Highness the Gaekwar of Baroda to maintain the dignity attaching to his exalted position has led him to abandon a projected holiday at his favourite hill resort—Ootacamund He intimated his intention to the British authorities a short time back and stated that his medical staff would certify that he and his Maharani were free from plague symptoms His Highness was informed, however, that such certificate would not obviate the need for a medical examination *en route* which would take place at certain stations Rules were specially issued on the subject, but the Maharajah of Baroda rather than submit to an examination that he considered wholly needless abandoned his intention of travelling to Ootacamund It seems to us that as plague is nonexistent in Baroda city the notion of the authorities in insisting upon the observance of the ordinary routine in this exceptional case was pedantic and tactless, and that the Gaekwar was justified in protesting against it The examination of the staff of His Highness would have been quite sufficient to meet the needs of the case —*The Bombay Gazette*

The earliest of the notable arrivals from India to day (21st May) is expected in the person of Sir Jamsetji Jejeebhoy, Bart, C S I who is due to arrive at Victoria at 4 50 p m To-morrow we expect seventeen officers Commanding Imperial Service Troops belonging to the Native Princes in India, who will be duly cared for by Colonel Mellise, Major Drummond, and Major Turner The P. and O steamer *Britannia* conveying these officers is due at Plymouth to-day and London to-morrow afternoon They will be met with on disembarkation by a representative of the Secretary of State for India who will welcome them on behalf of Her Majesty the Queen Empress Included in the visitors and representatives is Sir Pertab Singh, A D C, to the Prince of Wales, who will take up his duties with His Royal Highness during the Jubilee celebrations in which the Prince may take an active part His Highness the Thakore of Gondal accompanied by Her Highness the Maharani, and His Highness the Thakore of Morvi, and the Maharaja of Kapurthala will also be among the Indian visitors this season The Native States represented will include Hyderabad, Gwalior, Jeypore, Indore, Patiala, Ulwar, Jodpore, Bhurtpur, Bikanir, Bhopal, Mysore Rampore, Bhavnagar and Kashmere

Lord Elgin's Government seems to positively delight in irritating popular opinion In spite of strenuous protests from all sides, we are sorry to hear that it has been decided by Government to amalgamate Kotah and Jhallawar States The orders of the Government of India, as approved by the Secretary of State in this matter have been made public at Jhalrapatan The deposition of the Rana Zalim Singh, who was removed last year, is confirmed, and Jhallawar reverts to Kotah from which State it was originally severed in 1838 But the Shahabad Pergunnah and the four Pergunnahs in the south-western part of Jhallawar known as the Chabua Mahals are to be regranted to a selected member of the Kotah branch of the original Zalim Singh's family The selection has yet to be made, and it will be from among the descendants of Agar Singh, the only branch of the family now existing In this way a small new State will be created, the boundaries of which will hereafter be laid down definitely As Shahabad is a detached Pergunnah in the east of Kotah it may possibly be exchanged for the Jhalrapatan Pergunnah, so as to make the new State a compact one By this partition of Jhallawar provision will be made for the descendants of the first Raj Rana and for any nobles and subjects of the present State of Jhallawar whose allegiance it may be undesirable to transfer to Kotah The latter State obtains the territories which Maharaj Ram Singh surrendered in 1838 in token of his obligations to Zalim Singh's family. It is not intended to make any sudden transfer of territory the districts hitherto comprised in the Jhallawar State will remain under the superintendence of the Political Agent until the boundaries of the new State have been determined and satisfactory arrangements been completed for protecting the interests of the sirdars and people, more especially of the transferred tracts —*Hindu*

Local and Provincial

MR R SCALDWELL —Has gone to Ootacamund to carry out some improvements in the Maharajah's palace there

THE MAHARANI REGENT —Did not come in on the 5th as was expected, and the exact date of her arrival has not yet been fixed

Mr M Krishnaiengar is promoted from the 2nd to the 1st Class of Extra Assistant Commissioners with effect from the 18th April 1897

CONSUMMATION OF MARRIAGE —The Nuptials ceremony of the first Princess came off on Friday last, but there was no public Durbar in connection therewith —M H

THE JUBILEE CELEBRATION —Preparations are being made both in the City and Civil and Military Station, and it is to be hoped that everything will be ready by the 22nd when the event comes off

THE WEATHER—Is dry again There have been a few sprinklings but nothing that could be called a shower Still the weather has undergone a great change since the downpour of a fortnight ago We could however do with a good deal more rain.

Her Highness the Maharani Regent of Mysore publishes a special notice regarding the Diamond Jubilee celebrations in Mysore and among other matters directs that at the head quarters of every District, the Deputy Commissioner shall hold a Durbar for the purpose of announcing to the assembled people the sentiments of Her Highness the Maharani-Regent on the auspicious event

The Motor Car in Mysore —A representative of a motor-car manufacturing firm in England has for some time been in negotiation with the Mysore Government for the right to run mail cars on the motor principle in lieu of the present mail tongas The Hunting Districts are naturally largely in favour of the enterprise, and it is just possible that the Mysore Government will consent to its introduction

LATE ARRIVAL OF TRAINS —Of late the trains have been coming in late On Wednesday night, it was eight o'clock before the train reached the Central Station, and it had to wait there till the mail train had left for Madras Sometimes the train is detained on account of the examination of passengers to see whether any of them have the plague Such delays are very annoying to the passengers

Mr B G Krishnaiengar Officiating Deputy Commissioner, Hassan district, is granted casual leave of absence for five days, with effect from such date as he may avail himself of the same

2 The Senior Assistant Commissioner will be in charge of the current duties of the district during the absence of Mr Krishnaiengar on leave or until further orders

A NEW TALUK —Government have given sanction for the transfer of the Head-quarters of the Koppa Taluk from Hariharpur to Koppa, and the establishment of a new Taluk with head-quarters at Balehonnur, the present Sub Taluk of Yadehalli, consisting of Yedehalli and Balehonnur Hoblis being abolished We learn the Munsiff's Court also will be removed from Yedehalli to Koppa These changes &c, were made on the recommendations made by the Deputy Commissioner on account of the unhealthiness of the climate of Hariharpur and also on the representations repeatedly made by the European Planters in the Dasara Assembly

ಕರ್ನಾಟಕ ಪ್ರಕಾಶಿಕಾ.

೧೮೯೭ನೇ ಇಸವಿ ಜೂನ್ ತಾ|| ೧೪ನೇ ಸೋಮವಾರ.

ಹೈದರಾಬಾದ್ ಸಂಸ್ಥಾನದ ವೃತ್ತಸ್ಥಿತಿ.

ಹೈದರಾಬಾದ್ ಸಂಸ್ಥಾನದ ಪ್ರಧಾನ ಮಂತ್ರಿಯವರಾಗಿದ್ದ ಸರ್ ಸಾಲರ್‌ಜಂಗ್, ಜಿ. ಸಿ. ಎಸ್ ಐ ಯವರು, ಸಂಸ್ಥಾನದ ಪುರೋಭಿವೃದ್ಧಿಗೆ ಆವಶ್ಯಕಗಳಾಗಿ ಕಂಡುಬಂದ ನೂತನ ಏರ್ಪಾಡುಗಳನ್ನೆಲ್ಲ ಮಾಡಿ ಅವನ್ನು ಬಹಳಮಟ್ಟಿಗೆ ಕಡೆಬಂದಿಗೆ ತಂದಿದ್ದದ್ದು ಪ್ರಸಿದ್ಧ ವಿಷಯವಾಗಿದೆಯಷ್ಟೆ. ಅವರ ಕಾಲಾನಂತರ ಅವರ ಸ್ಥಾನವನ್ನಾಗಿ ಒಂದ ಪ್ರಧಾನಿಗಳ ಆಡಳಿತದಲ್ಲಿ ಸಂಸ್ಥಾನದ ಕಾರ್ಯಗಳು ದಿನೇದಿನೆ ಕ್ಷೀಣಗತಿಯನ್ನೈದುತ ಈಗ ಕೇವಲ ಶೋಚನೀಯವಾದ ಸ್ಥಿತಿಗೆ ಬಂದಿರುವಂತೆ ಕಾಣುತದೆ. ಸಂಸ್ಥಾನ ನೌಕರರು ತಮ್ಮ ಕರ್ತವ್ಯವಂ ಮಾಡದೆ ಹೋಗುವದರಿಂದ ದೇಶದ ಆಮದಾಯಿ ಬಹಳ ಕಡಮೆಯಾಗಿಹೋಗಿದೆ. ಈಗಿನ ನಿಜಾಮರವರು ರಾಜ್ಯಭಾರವಂ ಕೈಗೊಂಡದ್ದು ಮೊದಲ್ಗೊಂಡು ಪ್ರತಿಯೊಬ್ಬ ಪ್ರಧಾನರೂ ದೇಶದ ಆದಾಯವನ್ನು ವಾಡಲು ಬುದ್ಧಿಗೆಟ್ಟು ... ಕೊಳ್ಳದೆ ನಿಜಾಮರವರಿಗೆ ಮೆಚ್ಚಿಕೆಯಂ ತೋರಿಸುವುದಕ್ಕಾಗಿ ಅವರು ಅಪೇಕ್ಷಿಸಿದ ಹಣವಂ ಕೊಟ್ಟಂತೆ ಕಾಣಲಿಲ್ಲವು. ಸಂಸ್ಥಾನದ ಖಜಾನೆಯಲ್ಲಿ ಹಣವಿಲ್ಲವು. ಸರ್ಕಾರ್ ನೌಕರರಿಗೆ ನಿಂತಿಗೆ ಉಚಿತ ಕಾಲದಲ್ಲಿ ಸಂಬಳ ಬಟವಾಡೆ ಆಗುವದಿಲ್ಲವು. ಸಂಸ್ಥಾನದ ಖಿದ್ಮತಗಾರ ಮುಂತಾದ್ದವರಿಗೆ ಸಂಬಳಗಳೇ ಒದ್ದಾಗಲು ... ವತಿಯಾಗುವದಿಲ್ಲವು. ಹೀಗೆ ಪ್ರತಿಯೊಂದು ಕಾರ್ಯ ಸಂಗತಿಗಳು ಸಂಸ್ಥಾನದ ಕಾರ್ಯಗಳು ನಡೆಸುವ ಮಾರ್ಗದಲ್ಲಿ ಅನ್ನ ಕೊಡದೆ ಪೀಡಿಸುತಲಿವೆ. ಮಾಡಿದ ಸಾಲವನ್ನು ವಾಪಸು ಕೊಡುವ ವ್ಯವಸ್ಥೆ ಮಾಡದೆ ದ್ರವ್ಯವನ್ನು ಕೊಡದೆ ಇರುವದರಿಂದ ಯಾರೂ ಸಾಲ ಕೊಡುವದು ಇಲ್ಲ, ಸಾಲ ಕೊಟ್ಟವರಿಗೆ ಒದಗಿ ... ಇಲ್ಲ ... ಕಾರ್ಯಗಳು ನಡೆಯಬೇಕು. ನೌಕರರಿಗೆ ಸಂಬಳ ಬಟವಾಡೆ ಮಾಡಬೇಕು, ಪುಲೀಸಿಯವರಿಗೆ ಸಂಬಳ ಸಲ್ಲಬೇಕು, ನಿಜಾಮರವರು ತಮ್ಮ ಖಾಸಗಿ ವೆಚ್ಚಕ್ಕೆ ಬೇಕಾದ ಹಣವಿಲ್ಲದೆ ಆವಶ್ಯಕವಾದಷ್ಟು ದ್ರವ್ಯವನ್ನು ಯಾವ ಕಡೆಯಿಂದ ಪಡೆಯಬೇಕು. ಇವುಗಳೆಲ್ಲ ಯಾವ ಮಾರ್ಗದಿಂದ ದ್ರವ್ಯೋತ್ಪತ್ತಿಯಂ ಕಲ್ಪಿಸಿಕೊಳ್ಳಬೇಕೆಂಬ ಯೋಚನೆಯು ಯೆಲ್ಲರನ್ನು ಬಾಧಿಸುತಲಿದೆ. ಇದು ಹೀಗಿರುವಲ್ಲಿ ಸದರೀ ದೇಶದ ಒಂದು ಕಡೆ ಘೋರ ರಕ್ಷಸ ಪ್ರಾಯವಾಗಿ ಪ್ರಜೆಗಳಂ ಬಾಧಿಸುತಲಿವೆ. ಇವರ ರಕ್ಷಣೆಗೆ ದ್ರವ್ಯಸಹಾಯವು ಅಪೇಕ್ಷಿತವಾಗಿದೆ. ಈ ಜನರ ರಕ್ಷಣೆಯ ವಿಷಯದಲ್ಲಿ ಸರ್ಕಾರದವರು ಯೆಷ್ಟು ಶ್ರಮಪಟ್ಟಾಗ್ಯೂ ಅರ್ಥಾನುಕೂಲ್ಯವಿಲ್ಲದೆ ಯಾವಕಾರ್ಯ ನಡೆದೀತು? ಯಾವದೂ ಸಾಧ್ಯವಿಲ್ಲವು. ದೇಶದ ತಾತ್ಕಾಲಿಕ ಸ್ಥಿತಿಯಲ್ಲಿ ದುರ್ಭಿಕ್ಷವೂ ತಲೆದೋರಿದ್ದು ದೌರ್ಭಾಗ್ಯ ವಿಶೇಷವೆಂತಲೇ ತಿಳಿಯಬೇಕು. ಸಂಸ್ಥಾನದ ಅಧಿಕಾರಿ ಮಂಡಲಿಯಲ್ಲಿ ರಹಸ್ಯವಾಗಿ ಕೃತ್ರಿಮ ಸಂಧಾನಗಳೂ ಅತ್ಯಧಿಕವಾಗಿ ಹೋಗಿವೆ. ಅಂದರೆ ಈ ಸಂಸ್ಥಾನದೊಳು ನಡೆಯುವಷ್ಟು ಕೃತ್ರಿಮ ಸಂಧಾನಗಳು ಅನ್ಯತ್ರ ಯೆಲ್ಲಿಯೂ ನಡೆಯುವದಿಲ್ಲವು. ಒಬ್ಬನು ಮತ್ತೊಬ್ಬನನ್ನು ಯಾವ ಸಂಧಾನದಿಂದಲಾದರೂ ಯೆತ್ತಿಹಾಕಿ ಅವನ ಸ್ಥಾನವನ್ನು ತಾನು ಆಕ್ರಮಿಸಿಕೊಂಡು ಸುಖಪಡಬೇಕೆಂದು ಯತ್ನಿಸುತ್ತಾನೆ. ವಸೀಲೆಯುಳ್ಳ ಜನರು ತನ್ಮೂಲಕ ಸುಲಭವಾಗಿ ಅರ್ಥ ಸಂಪಾದನೆ ಮಾಡುವದಕ್ಕೆ ಅವಕಾಶ ಉಂಟಾಗಿರುತದೆ. ಸ್ವಲ್ಪ ಕಾಲದ ಹಿಂದೆ ನವಾಬ್‌ಜಂಗ್ ಎಂಬ ಅಧಿಕಾರಿಯು ಅರವತ್ತೈದುಲಕ್ಷ ರೂಪಾಯಿಗಳೊಡನೆ ಹೈದರಾಬಾದಿನಿಂದ ಹೊರಟು ಹೋದರು. ಅವರು ಅಧಿಕಾರಪದದಲ್ಲಿದ್ದ ಮೂರುವರ್ಷಗಳ ಕಾಲದೊಳಗಾಗಿ ಇಷ್ಟು ಹಣ ಜಮಾಯಿಸಿದರು. ನಾನಾಪ್ರಕಾರದಿಂದ ದೇಶವನ್ನು ಲೂಟಮಾಡದೆ ಇವರಿಗೆ ಇಷ್ಟು ಭಾರಿ ಮೊತ್ತ ಯೆಲ್ಲಿಂದ ಬಂದಿರಬೇಕು? ಈ ಅಧಿಕಾರಿಯ ನಡತೆಯು ಅಲ್ಲಿನ ಬ್ರಿಟಿಷ್ ರೆಸಿಡೆಂಟರವರಿಗೆ ತಿಳಿಯಬಂದು ಅವರು ನಿಜಾಮರವರಿಗೆ ಹೇಳಿ ಅವರನ್ನು ದೇಶದಿಂದ ಹೊರಡಿಸುವ ತನಕ ಅವರ ದುಷ್ಕೃತ್ಯವನ್ನು ಅವರು ನಿರಾತಂಕವಾಗಿ ನಡೆಸುತಬಂದರು. ಇವರು ಹೈದರಾಬಾದಿಗೆ ಹಿಂದು ಅಕಸ್ಮಿಕವಾಗಿ, ಸಂಸ್ಥಾನದ ಕಾರ್ಯವನ್ನೆಲ್ಲ ಸ್ವೇಚ್ಛೆಯಾಗಿ ನಡೆಸುತಬಂದರು. ಇವರು ಮುಚ್ಚುಮರೆ ಇಲ್ಲದೆ ಬಾಹಾಟವಾಗಿ ಲಂಚ ತೆಗದುಕೊಳ್ಳುತಲಿದ್ದಾಗ್ಯೂ ಕೇಳತಕ್ಕವರಿಲ್ಲದೆ ಇತ್ತು. ಅರ್ಥ ಸಂಪಾದನೆಯ ವಿಷಯದಲ್ಲಿ ಕೃತ್ಯಾಕೃತ್ಯ ವಿಚಾರವಿಲ್ಲದೆ ನಡೆಸುತಬಂದರು. ಇವರಂತೆಯೇ ಇನ್ನು ಕೆಲವರು ಸಂಸ್ಥಾನದಲ್ಲಿ ಸೇರಿಕೊಂಡಿರುತ್ತಾರೆ. ಇವರೂ ದುಷ್ಟವರ್ತನರಾಗಿ, ನ್ಯಾಯ ನೀತಿಗಳಂ ಮರೆತು, ಸ್ವಪ್ರಯೋಜನವನ್ನೇ ಪ್ರಧಾನ್ಯವಾಗಿ ಯೆಣಿಸಿ, ಕೇವಲ ದುರ್ವೃತ್ತರಾಗಿರುತ್ತಾರೆಂದು ತಿಳಿಯಬರುತಿದೆ. ಕ್ಷಿಪ್ರದಲ್ಲಿ ಇವುಗಳಿಗೆ ತಕ್ಕ ಪರಿಹಾರವು ಕಲ್ಪಿಸಲ್ಪಡದೆ ಹೋಗುವ ಪಕ್ಷದಲ್ಲಿ ದೇಶವು ಪ್ರಬಲ ಗದ್ದಲಕ್ಕೂ ವಿಪತ್ತಿಗೂ ಗುರಿಯಾಗುವದರಲ್ಲಿ ಸಂಶಯ ಲೇಶವೂ ಇರಲಾರದು. ಅದರ ಫಲವು ಕೇವಲ ಶೋಚನೀಯವಾಗಿರಬಹುದಾದ್ದರಿಂದ ಕೂಡಲೆ ಎಚ್ಚರಗೊಂಡು ಆವಶ್ಯಕಗಳಾದ ಉಚಿತ ಯೇರ್ಪಾಡುಗಳಂ ಮಾಡುವದರ ಮೂಲಕ ಸಂಸ್ಥಾನದ ಆತಂಕವಂ ತಪ್ಪಿಸುವುದು ನಿಜಾಮರವರಿಗೆ ಆವಶ್ಯ ಕರ್ತವ್ಯವೆಂದು ಸೂಚಿಸುವೆವು.

ಈಗ ಮುಂಬೈ ಪ್ರಸಿಡೆನ್ಸಿಗೆ ಸೇರಿದ ಅನೇಕ ಪಟ್ಟಣಗಳಲ್ಲಿ ಪ್ಲೇಗ್ ಎಂಬ ರೋಗವು ವ್ಯಾಪಿಸಿ ಅನೇಕ ಗ್ರಾಮ ಪ್ರದೇಶಗಳು ಪ್ರಾಣಗಳಂ ಕಳಕೊಂಡಿರುವದು ಪ್ರಸಿದ್ಧ ವಿಷಯವಾಗಿದೆಯಷ್ಟೆ. ಸದರೀ ರೋಗವು ಹಿಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವ್ಯಾಪಿಸದೆ ಇರುವುದಕ್ಕೆ ಮಾರ್ಗ ಸಂಚಾರಿಗಳನ್ನು ಅವರು ಬಂದು ಇಳಿಯುವ ಸ್ಥಳದಲ್ಲಿ ಡಾಕ್ಟರುಗಳ ಮೂಲಕ ಪರೀಕ್ಷೆ ಮಾಡಿಸಿ, ಅವರಲ್ಲಿ ರೋಗ ಚಿಹ್ನೆಗಳು ಯಾವದೂ ಇಲ್ಲವೆಂದು ತಿಳಿಯಬಂದ ಮೇಲೆ ಅವರನ್ನು ಊರೊಳಗೆ ಬಿಡತಕ್ಕದ್ದೆಂದು ಗವರ್ನಮೆಂಟಿನವರು ಖಂಡಿತವಾದ ಹುಕುಂ ಕೊಟ್ಟು ಅದರಂತೆ ಸರ್ವತ್ರ ನಡೆಸುಬರ ತಿದೆ. ಹೀಗಿರುವಲ್ಲಿ ಬರೋಡೆ ಗಾಯಕವಾಡ ಮಹಾರಾಜರವರು ಬೇಸಿಗೆಯ ಬಗ್ಗೆ ನೀಲಗಿರಿಗೆ ಹೋಗಬೇಕೆಂದು ಯೋಚಿಸಿ, ಪರಂತು ಮಾರ್ಗದಲ್ಲಿ ಮೇಲೆ ತಿಳಿಸಿದ ಡಾಕ್ಟರ್ ಪರೀಕ್ಷೆಗೆ ಒಳಗಾಗುವುದು ತಮ್ಮ ಘನತೆಗೆ ಕೊರತೆಯನ್ನುಂಟುಮಾಡುವುದೆಂಬ ಭಾವದಿಂದ ಮೇಲೆ ತಿಳಿಸಿದ ರೋಗ ಚಿಹ್ನೆಗಳು ತಮ್ಮಲ್ಲಿ ಯಾವವೂ ಇಲ್ಲವೆಂಬುದಕ್ಕೆ ನಿದರ್ಶನ ರೂಪವಾಗಿ ತಮ್ಮ ಸಂಸ್ಥಾನಕ್ಕೆ ಸೇರಿದ ಡಾಕ್ಟರುಗಳಿಂದ ಸರ್ಟಿಫಿಕೇಟು ಕಳುಹಿಸಿದರೆ ಸಾಕಾಗಿರುವುದೆಯೆಂದು ಗವರ್ನಮೆಂಟಿನವರನ್ನು ಪ್ರಶ್ನೆ ಮಾಡಲು, ಮಾರ್ಗದಲ್ಲಿ ಆಗಬೇಕಾದ ಡಾಕ್ಟರ್ ಪರೀಕ್ಷೆಯನ್ನು ತಪ್ಪಿಸುವದಕ್ಕೆ ಅಂತ ಸರ್ಟಿಫಿಕೆಟ್ ಸಾಲದ್ದೆಂದು ಮಹಾರಾಜರವರಿಗೆ ಜವಾಬ್ ಕೊಟ್ಟಂತೆಯೂ, ಅದರಮೇಲೆ ಮಹಾರಾಜರವರು ಉದಕಮಂಡಲ ಪ್ರಯಾಣವನ್ನು ಮನ್ನಾ ಮಾಡಿದರೆಂತಲೂ ಮುಂಬೈ ಗೆಜೆಟ್ ಪತ್ರಿಕೆಯು ತಿಳಿಸಿ, ಮಹಾರಾಜರವರ ವಿಷಯದಲ್ಲಿ ಗವರ್ನಮೆಂಟಿನವರು ಇಷ್ಟು ಅಚಾತುರ್ಯವಾಗಿ ನಡೆಸಿದ್ದು ಅವಿವೇಕವಾದ ಕಾರ್ಯವೆಂದು ಅಭಿಪ್ರಾಯಪಡುತಿದೆ

ಇಂಡ್ಯಾ ದೇಶದ ಅಪೇಕ್ಷಿತಾಂಶಗಳೆಂಬ ಅಭಿದಾನದೊಡನೆ ಡಾಕ್ಟರ್ ಮ ರ್ಕ್ ಎಂಬವರು ರಚಿಸಿದ ಗ್ರಂಥದ ಒಂದು ಭಾಗದಲ್ಲಿ ತಿಳಿಸಲ್ಪಟ್ಟಿರುವ ಅಂಶಗಳು ಈ ಪತ್ರಿಕೆಯ ನ್ನೋದುವಾತರಿಗೆ ಪ್ರಯೋಜನಕರವಾಗಿರುವದೆಂಬ ನಂಬಿಕೆಯೊಡನೆ ಅವುಗಳನ್ನು ದರಡಿ ಪ್ರಕಟಿಸುತ್ತೇವೆ.

ಈ ದೇಶದೊಳು ಕೈಗಾರಿಕೆಯು ನಿಕೃಷ್ಟಸ್ಥಾನ ಭಾವಿಸಲ್ಪಟ್ಟದೆ ಮ|| ಗ್ಲಾಡ್‌ಸ್ಟನ್ ಸಾಯಬರವರು ತಿಳಿಸಿರುವ ಅಭಿಪ್ರಾಯಾನುಗುಣವಾಗಿ, ಇಂಡ್ಯಾ ದೇಶಿಯ್ಯರಿಗೆ ಸರ್ಕಾರದಲ್ಲಿ ಒಂದು ನೌಕರಿ ಸಿಕ್ಕಿದರೆ ಅದೇ ಅವರಿಗೆ ಸರ್ವಸಿದ್ಧಿಪ್ರದವಾದ ಸ್ವರ್ಗಲೋಕವೆಂಬ ಭಾವನೆಯುಂಟಾಗಿರುತದೆ. ಜನಗಳ ಪ್ರಯೋಜನಾರ್ಥ ಕೆಲವರು ಸರ್ಕಾರ್ ನೌಕರಿಯಲ್ಲಿ ಪ್ರವೇಶಿಸಬೇಕು

ಷುದು ಆವಶ್ಯಕವೆ, ಪರಂತು ಅಂಥವರ ಸಂಖ್ಯೆಯು ಮಿತವಾಗಿರಬೇಕು. ಆರೋಗ್ಯ, ವಿದ್ಯಾ, ವಾಸಗೃಹ ವಿಷಯಗಳಲ್ಲಿ ಇಂಡ್ಯ ದೇಶೀಯರು ಅನುಭವಿಸತಕ್ಕವರೆ ಹೊರತು ಅವುಗಳಂ ಸ್ವಯಂ ಕಲ್ಪಿಸಿಕೊಳ್ಳತಕ್ಕವರಲ್ಲವು. ಹಿಂದು ಜನಾಂಗವು ಸೇನಾಧಿಪತಿಯುವುದರಿಂದಲೇ ಯೆಂದಿಗೂ ವಿಶ್ವಸ್ಯವಂ ಪಡೆಯಲಾರದು. ಇಂಗ್ಲೀಷ ದೇಶದ ಐಶ್ವರ್ಯಾಭಿವೃದ್ಧಿಗೆ ಪದಾರ್ಥಗಳ ತಯಾರಿ, ವ್ಯವಸಾಯ, ವಾಣಿಜ್ಯ, ಇವುಗಳಿಗೆ ಅವರು ಕೊಡುವ ವಿಶೇಷಾದರವೇ ಮುಖ್ಯಕಾರಣವಾಗಿರುತದೆ. ಇಂಡ್ಯದೇಶೀಯರಾದರೋ, ಇವುಗಳನ್ನು ಉಪೇಕ್ಷಿಸುತಲಿರುವದರಿಂದ ದಾರಿದ್ರ್ಯವನ್ನನುಭವಿಸುತಲಿದಾರೆ, ಎಂಬುದು

Occasional Notes.
ಸ್ವಲ್ಪ ಪ್ರಕೀರ್ಣವಿಷಯಗಳು

ಇಂಡ್ಯದೇಶದ ಕ್ಷಾಮಕ್ಕಾಗಿ ಅಮೆರಿಕಾದೇಶೀಯರು ದವಸ [illegible] ಧಾನ್ಯವನ್ನು ತುಂಬಿಸಿ [illegible] ಹಡಗನ್ನು ಇಲ್ಲಿಗೆ ಕಳುಹಿಸಿಕೊಡಬೇಕೆಂದು ಅವರು ನಿಶ್ಚಯಿಸಿದಂತೆ ತಂತಿ ವರ್ತಮಾನ ಬಂದಿರುತಿದೆ.

ಮದರಾಸ್ ಗವರ್ನರವರು ಬೆಂಗಳೂರಿನಿಂದ [illegible] ಹಿಂದಿರುಗುವ ಕಾಲದಲ್ಲಿ ಅವರ ಬಾಡೀಗಾರ್ಡ, ಕುದರೆ, ಅಂಗರಕ್ಷಕ ಸೈನ್ಯದ ವ್ಯಕ್ತಿಗಳನ್ನು [illegible] ಗವರ್ನಮೆಂಟಿನವರ ಮಂಜೂರಿಯಂ ಕೇಳಲು ಅವರು ಅದಕ್ಕೆ ಒಪ್ಪಲಿಲ್ಲವೆಂದು ತಿಳಿಯಬರುತಿದೆ.

ತಂಜಾವೂರು ಸಬ್‌ಜಡ್ಜಿಯವರಾದ ಎಮ್. ಬಿ. [illegible] ಸಿ. [illegible] ಆರು ವಾರಗಳ ಕಾಲಕ್ಕೆ ಗುಂಟೂರು ಡಿಸ್ಟ್ರಿಕ್ಟು ಜಡ್ಜಿಯವರಾಗಿ ಬದಲೀ ನೇಮಿಸಲ್ಪಟ್ಟು, ಅದು ಮುಗಿದಕೂಡಲೇ ಉತ್ತರ ಆರ್ಕಾಟು ಡಿಸ್ಟ್ರಿಕ್ಟು ಜಡ್ಜಿಯವರಾಗಿ ಕಳುಹಿಸಲ್ಪಡುವರೆಂದು ತಿಳಿಯಬಂದಿದೆ.

ಮದರಾಸ್ ಹೈಕೋರ್ಟಿನ ವಕೀಲರಾಗಿದ್ದ ಮಿ॥ ಸುಂದರಶಾಸ್ತ್ರಿಗಳವರೂ ಅವರ ಹೆಂಡತಿಯವರೂ ಈಚೆಗೆ ಕೆಲವು ದಿನಗಳ ಮೊದಲು ಕಾಯಿಲೆಯಾಗಿದ್ದು ಕಳೆದ ಬೃಹಸ್ಪತಿವಾರದದಿನ ಹಗಲು ಹನ್ನೆರಡು ಘಂಟೆಗೆ ಹೆಂಡತಿಯೂ ಅದೇ ದಿನ ರಾತ್ರಿ ಹನ್ನೊಂದು ಘಂಟೆಗೆ ಗಂಡನೂ ಮೃತಪಟ್ಟರೆಂದು ಕೇಳಿ ಬಹಳ ವಿಷಾದಿಸುತ್ತೇವೆ.

ಹೈದರಾಬಾದ ನಿಜಾಮರವರು ಸಂಸ್ಥಾನದ [illegible] ಒಂದು ಕೋಟಿ ರೂಪಾಯಿಗಳು ಸಾಲ ಮಾಡುವದಕ್ಕೆ ಇಂಡ್ಯ ಗವರ್ನಮೆಂಟಿನವರ ಮಂಜೂರಾತಿಯಂ ಪಡೆದಿರುವರೆಂದೂ, ಈ ಸಾಲಕ್ಕೆ ಅಲ್ಲಿನ ಸ್ಟೇಟ್ ರೈಲ್ವೇಯಲ್ಲಿ ಅವರಿಗಿರುವ ಹಿಸ್ಸೆಗಳು ಆಧಾರ ಮಾಡಲ್ಪಡುವವೆಂತಲೂ ಕೇಳುತ್ತೇವೆ.

ಸ್ಪೈಯಿನ್ ದೇಶದ ಅರಸರವರು ಈಗ ವಿಲಾಯಿತಿಗೆ ಹೋಗಿರುತ್ತಾರೆಯಷ್ಟೆ, ಸದರೀಯವರು ಮಾರ್ಗವಶಾತ್ ಇಟಲೀ ದೇಶಕ್ಕೆ ಹೋಗಿ ಅಲ್ಲಿನ ಅರಸರಾದ ಹಂಬರ್ಟ ಯೆಂಬವರು ಮಾಡಿದ ಆತಿಥ್ಯವಂ ಕೈಕೊಂಡು ಅಲ್ಲಿಂದ ಮುಂದಕ್ಕೆ ಹೊರಡುವಕಾಲದಲ್ಲಿ ಅಲ್ಲಿನ ಅರಸರವರೂ ಅವರ ಮಕ್ಕಳೂ ರೈಲ್ವೆ ಸ್ಟೇಷನವರೆಗೆ ಹೋಗಿ ಸ್ಪೈಯಿನ್ ಅರಸರವರನ್ನು ಸಾಗಕಳುಹಿಸಿದರೆಂದು ತಂತಿ ವರ್ತಮಾನ ಬಂದಿರುತಿದೆ.

ಇಂಡ್ಯ ದೇಶದಲ್ಲಿ ಪ್ರಾಪ್ತವಾಗಿರುವ ಕ್ಷಾಮಕ್ಕಾಗಿ ಆಕ್ಸಫರ್ಡ ವಿಶ್ವವಿದ್ಯಾಲಯದ ಪಾಠಶಾಲೆಗಳ ವಿದ್ಯಾರ್ಥಿಗಳು ಹಿಂದುಸ್ಥಾನದ ಜನರಿಗೆ ಐನೂರು ಪೌಂಡುಗಳಿಗೆ ಅಧಿಕವಾಗಿಯೇ ಚಂದಾ ಕೊಟ್ಟಿರುತ್ತಾರೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಅನುಮಾನದ ಲೇಶವಿಲ್ಲದೆ ಸಂತೋಷದೊಡನೆ ಅವನವನ ಉಪಪತ್ತ್ಯನುಗುಣವಾಗಿ ನಾಲ್ಕು ಕಾಸು ಕೊಟ್ಟರೆಂದು ಕೇಳಿ ಅವರ ಅನುರಾಗಕ್ಕಾಗಿ ಬಹಳ ಸಂತೋಷಿಸುತ್ತೇವೆ.

ಈಗ ಉತ್ತರ ದೇಶದೊಳು ಅಲ್ಲಿಯಲ್ಲಿ ಬಲವಾದ ವರ್ಷ ಬೀಳುತಲಿರುವದರಿಂದ ಕ್ಷಾಮನಿವಾರಕ ಕಾಮಗಾರಿಗಳಲ್ಲಿ ಕೆಲಸ ಮಾಡಿ ಜೀವಿಸುತಲಿರುವ ರೈತಾಪಿ ಜನರ ಸಂಖ್ಯೆಯು ಕ್ರಮೇಣ ಕಡಮೆಯಾಗಬಹುದೆಂದು ಕಾಣುತಿದೆ. ಸದರೀ ಕಾಮಗಾರಿಗಳಲ್ಲಿ ಕೆಲಸ ಮಾಡುವ ಜನರನ್ನು ಪ್ರೋತ್ಸಾಹ ಪಡಿಸಿ, ವ್ಯವಸಾಯ ಕೆಲಸಗಳಿಗೆ ವಾಪಸ್ ಹೋಗುವಂತೆ ಮಾಡಬೇಕೆಂದು ಸರ್ಕಾರದವರು ರಿಲೀಫ್ ಆಫೀಸರುಗಳಿಗೆ ಸರ್ಕ್ಯುಲರ್ ಹುಕುಂ ಕೊಟ್ಟಿರುವುದು ಮಾತ್ರವಲ್ಲದೆ ಪ್ರಯೋಜನಕರವಾದ ವ್ಯವಸಾಯ ಕೆಲಸಕ್ಕೆ ಅವಕಾಶವುಂಟಾದಮೇಲೆ ನಿರ್ಗತಿಕರಂತೆ ಸರ್ಕಾರ ಸಹಾಯವನ್ನು ನಂಬಿ ಸೋಮಾರಿಗಳಂತೆ ಇರುವದು ಉಚಿತವಲ್ಲವೆಂದು ಸಹ ಅವರಿಗೆ ತಿಳಿಸಬೇಕಾದ ಭಾಗವಲ್ಲಿ ಪ್ರಯತ್ನ ನಡೆಸಲ್ಪಡಬೇಕೆಂದು ಸದರಿ ಸರ್ಕ್ಯುಲರಿನಲ್ಲಿ ಸೂಚಿಸಲ್ಪಟ್ಟಿದೆ.

ಮಹಾರಾಜ್ಞಿಯವರ ಜೂಬಿಲಿ ಉತ್ಸವ ಕಾಲದಲ್ಲಿ ಅನೇಕ ರೀತಿಯಲ್ಲಿ ತಮ್ಮಗಿರುವ ರಾಜಭಕ್ತಿಯನ್ನು ವ್ಯಕ್ತಪಡಿಸುವ ಉದ್ದೇಶದೊಡನೆ ಇಂಡ್ಯ ದೇಶದ ಅರಸುಗಳನೇಕರು ಇಂಗ್ಲಾಂಡಿಗೆ ಹೋಗಿರುತ್ತಾರೆಯಷ್ಟೆ. ಇದು ಸ್ವಂತ [illegible] ಅಲ್ಲಿನ ಪ್ರಜೆಗಳು ತಮ್ಮ ರಾಜಭಕ್ತಿ ಪ್ರದರ್ಶನವನ್ನು ವ್ಯಕ್ತಪಡಿಸುವದಕ್ಕಾಗಿರುತದೆ. ಅನ್ಯತ್ರ ಅಸ್ವತಂತ್ರರಾದ ಹಿಂದೂದೇಶದ ಅರಸರುಗಳಿಗೆ ಅಲ್ಲಿ ವಿಶೇಷ ಮರ್ಯಾದೆಗೆ ಅವಕಾಶವಿರುವಂತೆ ತೋರುವದಿಲ್ಲವು. ಇಂತಾ ಸ್ಥಿತಿಯಲ್ಲಿ ಈ ದೇಶದ ಅರಸರುಗಳು ತಮ್ಮ ಪ್ರಜೆಗಳಿಂದ ಪಡೆದ ದ್ರವ್ಯವನ್ನು ಮನಸ್ವಿ ವ್ಯಯಮಾಡಿಕೊಂಡು ಅಲ್ಲಿಗೆ ಹೋಗಿ, [illegible] ರಾಜಭಕ್ತಿ ಕೃತಜ್ಞತಾದಿ ಭಾವವು ಅಷ್ಟು ವ್ಯಕ್ತವಾಗುವದಿಲ್ಲ. ಇಲ್ಲಿಯೇ [illegible] ಉಚಿತರೀತಿಯಿಂದ [illegible] ಅನ್ನಂಗೀಕರಿಸಿ ಸಂತೋಷಿಸುವರೆಂದು ನಂಬುತ್ತೇವೆ. ಪ್ರಜೆಗಳ ಕಾಣಿಕೆಗಳಂತಿರುವ [illegible] ನೇಟಿವ್ ಅರಸುಗಳ ಮನಸ್ಸ್ವೀಕರಣಕ್ಕೆ ಆತಂಕವಿಲ್ಲದು

ತುರ್ಕಿಯವರಿಗೂ ಗ್ರೀಕಿ ದೇಶದವರಿಗೂ ನಡೆದ ಯುದ್ಧದಲ್ಲಿ ಗ್ರೀಸ್ ಸಂಸ್ಥಾನದವರು ಪೂರ್ಣವಾಗಿ ಅಪಜಯವನ್ನು ಹೊಂದಿದ ಮೇಲೆ ಈಗ ಯುರೋಪಿನ ದೊಡ್ಡ ಸಂಸ್ಥಾನಾಧಿಪತಿಗಳೆಲ್ಲರು ಸೇರಿ [illegible] ಸಂಸ್ಥಾನಾಧಿಪತಿಗಳಿಗೂ ಸಮಾಧಾನ ಮಾಡಿಸಿ ಗ್ರೀಕ್ ರಾಜ್ಯವನ್ನು ಉಳಿಸಬೇಕೆಂದು ಪ್ರಯತ್ನಪಟ್ಟು ತುರ್ಕಿಯವರಿಗೆ ತಿಳಿಸಿದ ಕೆಲವು ಷರತ್ತುಗಳನ್ನು ಅವರು ಒಪ್ಪದೆ, ತಮಗೆ ಯುಕ್ತವಾಗಿ ತೋರಿದ ಕೆಲವು ಷರತ್ತುಗಳನ್ನು ಬರೆದು ದೊಡ್ಡ ಸಂಸ್ಥಾನಾಧಿಪತಿಗಳ ಕಡೆ ರಾಯಭಾರಿಗಳಿಗೆ ಕಳುಹಿಸಿರುತ್ತಾರೆ ಅದರಲ್ಲಿ, ತೆಸಲಿ ಎಂಬ ತುಕಡಿಯು ಯಾವ ಷರತ್ತಿನ ಮೇಲೆ ಹಿಂದೆ ಗ್ರೀಕಿ ರಾಜ್ಯಕ್ಕೆ ಸೇರಿಸಿಕೊಡಲ್ಪಟ್ಟಿತೋ ಆ ಷರತ್ತುಗಳ ಪ್ರಕಾರ ಅವರು ನಡೆಯಲಿಲ್ಲವಾಗಿ ಸದರೀ ತುಕಡಿಯನ್ನು ಮರಳಿ ತಮಗೆ ಬಿಟ್ಟುಬಿಡಬೇಕಾದ್ದು, ಆಬಗ್ಗೆ ಹುಟ್ಟಿರುವ ತಹನಾಮೆಯನ್ನು ರದ್ದು ಮಾಡಬೇಕಾದ್ದು ಯುದ್ಧದಲ್ಲಿ ಜಯವಂ ಹೊಂದಿದವರಿಗೆ ಅವರ ಖರ್ಚುಗಳನ್ನು ಪರಾಜಿತರಾದವರು ಕೊಡುವದಕ್ಕೆ ಬದ್ಧರಾಗಿರತಕ್ಕದ್ದು, ಎಂದು ನಮೂದ ಮಾಡಲ್ಪಟ್ಟಿದೆ

ಮಹಾರಾಜ್ಞಿಯವರ ಪಾರ್ಲಿಯಮೆಂಟ ಸಭೆಯಲ್ಲಿ ಒಬ್ಬ ಮೆಂಬರಾದ ಸರ್ ವಿಲ್ಲಿಯಂ ವೆಡರ್ಬರ್ನ ಸಾಹೇಬರವರು, ಇಂಡ್ಯದೇಶಕ್ಕೆ ನಾನಾವಿಧ ಸಹಾಯ ಮಾಡುವವರ ಮೂಲಕ ರಾಜ್ಞಿಯವರ ಜೂಬಿಲೀ ಉತ್ಸವವು ಅದರ ಪ್ರಜೆಗಳ ಜ್ಞಾಪಕದಲ್ಲಿ ಶಾಶ್ವತವಾಗಿ ನೆಲಗೊಂಡಿರುವಂತೆ ಮಾಡಬೇಕೆಂದು ಲಂಡನ್ ಟೈಂಸ್ ಪತ್ರಿಕೆಗೆ ಬರೆದಿರುತ್ತಾರೆ, ಅವು ಯಾವವೆಂದರೆ—ಗವರ್ನಮೆಂಟ ನ್ಯಾಯವಿಧಾಯಕ ಸಭೆಯಲ್ಲಿ ಪ್ರಜಾಪ್ರತಿನಿಧಿಗಳ ಸಂಖ್ಯೆಯನ್ನು ಜಾಸ್ತೀ ಮಾಡಬೇಕಾದುದು. ಜಮೀನ್ ಕಂದಾಯ ವಿಷಯದಲ್ಲಿ ಗವರ್ನಮೆಂಟಿನ ತಗಾದೆಯನ್ನು ಮಿತಪಡಿಸಿ, ಖಾಯಂಗುತ್ತಿಗೆ ಮಾಡಬೇಕಾದ್ದು. ೧೮೫೮ನೆಯ ಇಸವಿಯಲ್ಲಿ ರಾಜ್ಞೀಯವರಿಂದ ಕೊಡಲ್ಪಟ್ಟ ಇಸ್ತಿಹಾರ್ ನಾಮೆಯಲ್ಲಿ ಕಂಡಂತೆ, ಸರ್ಕಾರದ ನೌಕರಿಯ ವಿಷಯದಲ್ಲಿ ಆಕೆಯವರ ಪ್ರಜೆಗಳೆಲ್ಲರಿಗೂ ಸಮಾನವಾದ ಬಾಧ್ಯತೆಯನ್ನುಂಟುಮಾಡಬೇಕಾದುದು, ಮತ್ತು ದೇಶದ ಆಡಳಿತ ಕ್ರಮವನ್ನು ಕ್ಲುಪ್ತಕಾಲದಲ್ಲಿ ತನಿಖೀ ಮಾಡುವದಕ್ಕೆ ಸೌಲಭ್ಯವನ್ನುಂಟುಮಾಡಬೇಕಾದುದು.

LOCAL AND PROVINCIAL NEWS.
ಒಳದೇಶಮತ್ತುತಾಲ್ಲೂಕಜಿಲ್ಲಾವೃತ್ತಾಂತಗಳು.

ಶ್ರೀಮನ್ಮಹಾರಾಣೀ ರೀಜಂಟರವರ ಜ್ಯೇಷ್ಠಪುತ್ರಿಯವರಿಗೆ ಆಚೆ ಶುಕ್ರವಾರದದಿನ ಗರ್ಭದಾನ ಮಹೋತ್ಸವ ನಡೆಯಿತೆಂದು ತಿಳಿದು ಸಂತೋಷಿಸುತ್ತೇವೆ.

ಕಳೆದ ಶುಕ್ರವಾರ ದಿವಸ ಘನವಂತರಾದ ಶ್ರೀಮನ್ಮಹಾರಾಜರವರ ವರ್ಷವರ್ಧಂತಿಯ ಬಗ್ಗೆ ಈ ಸಂಸ್ಥಾನದ ವಿಶಿಷ್ಟ ಖಚೇರಿಗಳಿಗೂ ಶಾಲೆಗಳಿಗೂ ಮಾಮೂಲ್ ಅನುಸರಿಸಿ, ರಜಾ ಕೊಡಲ್ಪಟ್ಟಿತ್ತು. ಶನಿವಾರದದಿನ ಬಾಬಯ್ಯನ ಜಲ್ದಿಯ ಬಗ್ಗೆ ರಜಾ ಕೊಡಲ್ಪಟ್ಟಿತ್ತು.

ಹಿಂದಿನವಾರದ ಪತ್ರಿಕೆಯ ಮೂಲಕ ತಿಳಿಸಿದ್ದಂತೆ ಈ ತಿಂಗಳ ೭ನೇ ತಾರೀಖು ಸೋಮವಾರದದಿನ ಸಾಯಂಕಾಲ ೭ ಘಂಟೆ ಸುಮಾರಿಗೆ ಶ್ರೀಮನ್ಮಹಾರಾಜರವರು ತಮ್ಮ ಪರಿಜನ ಪರಿಚಾರಕರೊಡನೆ ನೀಲಗಿರಿಯಿಂದ ರಾಜಧಾನಿಗೆ ವಾಪಸ್ ದಯಮಾಡಿದರು. ಆಕಾಲದಲ್ಲಿ ಮಾಮೂಲ್ ಮರ್ಯಾದೆಗಳೆಲ್ಲವು ನಡೆಸಲ್ಪಟ್ಟವು.

ಮೈಸೂರು ಷಹರಿನಲ್ಲಿನ ಮನೆಗಳು ಮತ್ತು ಅಂಗಡಿಗಳು ವಗೈರೆಗೆ ಈಗ ಹಾಕಲ್ಪಟ್ಟಿರುವ ಕಂದಾಯಗಳನ್ನು ವಿಶೇಷ [illegible] ಹೆಚ್ಚಿಸಬೇಕೆಂದು ಅಲ್ಲಿನ ಮ್ಯುನಿಸಿಪಾಲಿಟಿಯವರು ನಿಶ್ಚಯಿಸಿ ಗವರ್ನಮೆಂಟಿಗೆ ಬರೆದು ಅವರ ಮಂಜೂರಾತಿಯಂ ಪಡೆದಿರುವಂತೆಯೂ ಸದರೀ ಕಾರ್ಯವನ್ನು ಕೂಡಲೆ ಪ್ರಾರಂಭಿಸುವರೆಂತಲೂ ಅಲ್ಲಿನ ಪತ್ರಿಕೆಗಳು ತಿಳಿಸುತವೆ

ಈ ತಿಂಗಳ ೨೦ ಮತ್ತು ೨೨ನೇ ತಾರೀಖ್ ಗಳಲ್ಲಿ ನಡೆಯುವ ಶ್ರೀಮನ್ಮಹಾರಾಜ್ಞೀ ಚಕ್ರವರ್ತಿನಿಯವರ ಜೂಬಿಲೀ ಉತ್ಸವದ ಗೌರವಾರ್ಥ ಇಲ್ಲಿನ ಸೆಂಟ್ರಲ್ ಜೇಯಿಲಿನಿಂದ ಸುಮಾರು ನೂರುಮಂದಿ ಖೈದಿಯರು ಖುಲಾಸೆ ಮಾಡಲ್ಪಡುವರೆಂದು ಕೇಳುತ್ತೇವೆ. ಈ ಸಂಸ್ಥಾನದೊಳಗಣ ಇತರ ಜೇಲುಗಳಿಂದಲೂ ಕೆಲವರು ಖೈದಿಯರು ಖುಲಾಸೆ ಮಾಡಲ್ಪಡುವರೆಂದು ಸಹ ತಿಳಿಯಬಂದಿದೆ.

ಕಳೆದ ತಿಂಗಳ ಅಂತ್ಯಭಾಗದಲ್ಲಿ ಕಾಕನಕೋಟೆ ಜಂಗಲ್ ಮಾಸ್ತಿ ಗುಡಿಯಲ್ಲಿ ಕೆಲವು ಒಳ್ಳೇ ಆನೆಗಳು ಬಂಗಡಿಯಲ್ಲಿ ಸಿಕ್ಕಿರುತ್ತವೆ. ಅಲ್ಲಿನ ಫಾರೆಸ್ಟ ರೇಂಜರವರೇ ಬಹಳ ಸಾಹಸಮಾಡಿ ಆನೆಗಳನ್ನೆಲ್ಲ ಕಪ್ಪಿನಲ್ಲಿ ತಡೆದುಕೊಂಡಿರುವರು. ಮೈಸೂರಿನಿಂದ ಕುಮ್ಮಕ್ಕಿಗೆ ಆನೆಗಳು ಹೋದ ಮೇಲೆ ಅವುಗಳನ್ನು ಕಟ್ಟಿ ಹಾಕುತ್ತಾರೆ. ಕೆಡ್ಡಾ ಸೂಪರಿಂಟೆಂಡೆಂಟರು ಇಲ್ಲದಿರುವಾಗಲೂ ಅಲ್ಲಿನ ಫಾರೆಸ್ಟ ಅಧಿಕಾರಿಗಳೇ ಸಾಹಸಮಾಡಿ ಆನೆಗಳನ್ನು ಹಿಡಿದದ್ದು ಅವರಿಗೆ ತುಂಬಾ ಪ್ರೋತ್ಸಾಹಕರವಾಗಿರುತ್ತದೆ—ವೈ. ವ.

ಈಗ್ಗೆ ಸುಮಾರು ಒಂದು ವಾರದ ಮೊದಲು ವರ್ಷವೆಂಬುದು ಸುತರಾಂ ಇಲ್ಲವು. ರಾತ್ರಿ ಹಗಲು ಬಲವಾದ ಗಾಳಿ ಬೀಸುತಲಿರುವದರಿಂದ ಮೇಘಗಳು ಚದರಿ ಹೋಗುತಲಿವೆ. ಇದು ವರ್ಷಕ್ಕೆ ಉಚಿತಕಾಲವಾಗಿರುತ, ಅದು ಅನಿಶ್ಚಿತವಾಗಿರುವದರಿಂದ ಸ್ವಲ್ಪ ಚಿಂತೆಗೆ ಅವಕಾಶವಿಲ್ಲದೆ ಹೋಗಲಿಲ್ಲವು. ಪರಂತು ಇನ್ನು ಕಾಲಾತೀತವಾಗದೆ ಇರುವದೇ ಸದ್ಯಃ ಸಮಾಧಾನರೂಪವಾಗಿರುತಿದೆ. ಆಹಾರ ಪದಾರ್ಥಗಳ ಧಾರಣೆಗಳೆಲ್ಲವು ಒಂದೇ ವಿಧವಾಗಿವೆ. ರೋಗಾದ್ಯುಪದ್ರವಗಳು ಯಾವದೂ ಇಲ್ಲವು.

ಇಲ್ಲಿನ ಮಿಲಿಟರಿ ಸ್ಟೋರ್ಸ್ ಯೆಕ್ಸೈಜ್ ಇದುವರೆಗೆ ಮೈಸೂರು ಯೆಕ್ಸೈಜ್ ಇಲಾಖೆಗೆ ಸೇರಿರುತಿದೆಯಷ್ಟೆ, ಮುಂದೆ ಮಿಲಿಟರಿ ಸ್ಟೋರ್ಸಿಗೆ ಪ್ರತ್ಯೇಕವಾಗಿ ಸದರೀ ಇಲಾಖೆಯೊಂದನ್ನೇರ್ಪಡಿಸಬೇಕೆಂದು ಅಲ್ಲಿನ ಅಧಿಕಾರಿಗಳು ಆಲೋಚಿಸಿ, ಅದಕ್ಕೆ ಅನುಭವಶಾಲಿಗಳಾದ ಕೆಲವರು ನೌಕರರ ಪಟ್ಟಿಯನ್ನು ಕಳುಹಿಸಬೇಕೆಂದು ಮೈಸೂರು ಗವರ್ನಮೆಂಟಿಗೆ ಬರೆದು ಅವರು ಹಾಗೆ ಪಟ್ಟಿಯಂ ತಯಾರ್ಮಾಡಿ ಕಳುಹಿಸಿರುವಂತೆಯೂ, ಇವರಿಂದ ಐದು ಸಾವಿರ ರೂಪಾಯಿಗಳು ಉಳಿಯುವದೆಂದು ನಿರೀಕ್ಷಿಸಲ್ಪಟ್ಟಿರುವಂತೆಯೂ, ಈ ಏರ್ಪಾಡು ಇಂಡ್ಯ ಗವರ್ನಮೆಂಟಿನವರಿಂದ ಮಂಜೂರ್ಮಾಡಲ್ಪಡುವ ಪಕ್ಷದಲ್ಲಿ ಮೈಸೂರು ಯೆಕ್ಸೈಜ್ ಇಲಾಖಾ ನೌಕರರು ಕೆಲವರು ಮಿಲಿಟರಿ ಸ್ಟೋರ್ಸ್ ನೌಕರಿಗೆ ತೆಗೆದುಕೊಳ್ಳಲ್ಪಡಬಹುದೆಂತಲೂ ಒಳದೇಶದ ಈವನಿಂಗ್‌ಮೆಯಿಲ್ ಪತ್ರಿಕೆ ತಿಳಿಸುತಿದೆ.

SUMMARY OF NEWS.
ವೃತ್ತಾಂತ ಸಂಗ್ರಹವು.

ಜೂಬಿಲೀ ಉತ್ಸವಕಾಲದಲ್ಲಿ ಹಿಂದುಸ್ಥಾನದ ಸಮಸ್ತ ಜೈಲ್‌ಖಾನೆಗಳಲ್ಲೂ ಶೇಕಡಾ ೧೦ರಂತೆ ಬಂದೀವಾನರನ್ನು ಬಿಡುಗಡೆ ಮಾಡುತ್ತಾರೆಂದು ವರ್ತಮಾನವಿದೆ.

ಪುಣೆಯಲ್ಲಿ ಬೇನೆಯ ಉಪದ್ರವವು ಬಹುತರ ಕಡಮೆಯಾದದರಿಂದ ಮನೆ ಮನೆ ತಿರುಗಿ ತಪಾಸುಮಾಡುತ್ತಿರುವ ಸೋಲ್ಜರರ ಆಟ ಕಟ್ಟಾಗಿರುವದೆಂದು ಲೋಕ ಸಂತೋಷಿಸುವಾಗುತ್ತದೆ.

ಹೈದರಾಬಾದಿನಲ್ಲಿ ಒಬ್ಬ ಮುಸಲ್ಮಾನನು ಒಂದು ಅಕ್ಕಿಕಾಳಿನ ಮೇಲೆ, ದೇವರು ರಾಣಿಯನ್ನು ರಕ್ಷಿಸಲಿ ಎಂದು, ಇಷ್ಟು ಅಕ್ಷರಗಳನ್ನು ಬರೆದು ಅದನ್ನು ವೈಸ್‌ರಾಯರಿಗೆ ನಜರು ಮಾಡಿದನು.

ಆಫ್ರಿಕೆಯಲ್ಲಿ ಇಂಗ್ಲೀಷಿನವರು ನುಪೆ ಜನರ ಕೂಡ ಯುದ್ಧ ಮಾಡಿ, ಅವರ ಎರಡು ಮುಖ್ಯ ಜನರನ್ನು ಕೊಂದುಹಾಕಿ ಅವರ ರಾಜ್ಯದೊಳಹೊಕ್ಕರೆಂದು ತಂತಿವರ್ತಮಾನ ಬಂದಿದೆ.

ಶ್ರೀಮಂತ ಹೋಲ್ಕರ್ ಮಹಾರಾಜರು ದುರ್ಭಿಕ್ಷ ಪೀಡಿತರಿಗಾಗಿ ಕಳುಹಿಸಿದ ಧಾನ್ಯವು ಬಂದು ಕಳೆದ ವಾರದಲ್ಲಿ ಅದನ್ನು ಅನ್ನಾನುಗತಿಕರಿಗೆ ತಿರುಗುತ್ತಿರುವ ಪ್ರತಿಯೊಬ್ಬನಿಗೆ ಪೊಂದುವರೆ ಚಟ್ಟಯಂತೆ ಹಂಚಲಾರಂಭಿಸಿದ್ದಾರೆ.

ನಾಲ್ಕು ಖಂಡಗಳಲ್ಲಿರುವ ಬ್ರಿಟಿಷ್ ಸರ್ಕಾರಕ್ಕೆ ಸೇರಿದ ವಸತಿಗಳಿಂದಲೂ ಇಂಗ್ಲೆಂಡಿನಿಂದಲೂ ಕಡೆಗೆ ಈ ಹೊತ್ತಿನವರೆಗೆ ೧,೩೫,೩೫,೦೦೦ ರೂಪಾಯಿ ಕ್ಷಾಮನಿವಾರಣಕ್ಕೋಸ್ಕರ ಬಂತು.

ದೇಶೀ ಸಂಸ್ಥಾನಿಕರ ಸೈನ್ಯಗಳೊಳಗಿಂದ ಕೆಲವು ರಾಹುತರನ್ನು ಇಂಗ್ಲಂಡಕ್ಕೆ ಕರೆಕೊಂಡು ಹೋಗಿದ್ದಾರೆ, ಅವರ ಪೋಷಾಕು, ತೋರಿಕೆ, ಉತ್ಸಾಹಗಳನ್ನು ನೋಡಿ ಲಂಡನದ ನಾಗರಿಕರು ಚಕಿತರಾದರೆಂದು ತಂತಿ ವೃತ್ತಾಂತವು ತಿಳಿಸುತ್ತದೆ.

ಲಾಹೋರ್ ಪಟ್ಟಣದಲ್ಲಿ ಆಸಿಸ್ಟೆಂಟ್ ಕಮಿಷನರ್ ಕೆಲಸದಲ್ಲಿದ್ದ ಮಾಲಿಕ್ ಎಂಬ ಮುಸಲ್ಮಾನನು ಲಂಚ ತಿಂದನೆಂಬ ಅಪರಾಧಕ್ಕೆ ಗುರಿಯಾಗಿ ಪರೀಕ್ಷೆ ಮಾಡಲ್ಪಟ್ಟು ಮೂರು ವರುಷಗಳ ಸಾಧಾರಣ ಸಜಾ ಶಿಕ್ಷೆಗೆ ಗುರಿಯಾದನು.

ವಿಚಿತ್ರಸೃಷ್ಟಿ—ಸೈದರ ಲಕ್ಷ್ಮಣರಾಯರ ಓಣಿಯಲ್ಲಿ ಒಬ್ಬಳು ಒಂದು ನಾಲ್ಕು ಕೈ, ನಾಲ್ಕು ಕಾಲು, ನಾಲ್ಕು ಕಣ್ಣು, ನಾಲ್ಕು ಕಿವಿ, ಎರಡು ಇಂದ್ರಿಯಗಳಿದ್ದ ಒಂದು ಕೂಸನ್ನು ಹೆತ್ತಳು. ಆದರೆ ಆಕೂಸು ಬಹಳ ಹೊತ್ತು ಬದುಕಲಿಲ್ಲವು.

ಚೀನಾ ಸರ್ಕಾರದವರು ಬೆಲ್‌ಜಿಯಂ ದೇಶದಲ್ಲಿ ೪೫ ಲಕ್ಷ ಪೌಂಡು ಸಾಲ ತೆಗೆದುಕೊಂಡು, ತಮ್ಮ ದೇಶದಲ್ಲಿ ರೈಯಿಲ್ ಮಾರ್ಗಗಳನ್ನು ಕಟ್ಟುವದಕ್ಕೆ ತಮಗೆ ಸಾಲಕೊಟ್ಟ ಸಾಹುಕಾರರಿಗೆ ಕೊಟ್ಟರು ಚೀನದರಾಜ್ಯವನ್ನು ಯುರೋಪಿನವರು ಈರೀತಿ ನಾನಾಪ್ರಕಾರದ ನೆವಗಳಿಂದ ಆಕ್ರಮಿಸುತ್ತ ನಡೆದಿರುವರು.

ಜಮಾ ಖರ್ಚಿನ ಕಮಿಷನಿನ ಮುಂದೆ ಸುರೇಂದ್ರನಾಥ ಬಾನರ್ಜಿಯವರ ಸಾಕ್ಷಿಯು ೧೯ನೇ ತಾರೀಖಿನಲ್ಲಿ ಆಯಿತು [illegible] ಸರ್ಕಾರಗಳು ಹೆಚ್ಚು ಸ್ವತಂತ್ರದಿಂದ ಕಾರಭಾರ ಮಾಡಲಿಕ್ಕೆ ಬೇಕೆಂತಲೂ, ಬಜೆಟ್ಟಿನ ದುರಸ್ತಿನ ಬಗ್ಗೆ ಪ್ರಜೆಗಳಿಂದ ನೇಮಿಸಲ್ಪಟ್ಟ ಕೌನ್ಸಿಲ್‌ದಾರರಿಗೆ ಸೂಚನೆ ಮಾಡಲಿಕ್ಕೆ ಅಧಿಕಾರವಿರಬೇಕೆಂತಲೂ, ಬ್ರಿಟಿಷ್ ಸರ್ಕಾರದವರು ಹಿಂದುಸ್ಥಾನದಲ್ಲಿ ಬಹಳ ತಿದ್ದುಪಾಟುಗಳನ್ನು ಮಾಡಿದ್ದಾಗ್ಯೂ ಇನ್ನೂ ಬಹಳ ಸುಧಾರಣೆಯಾಗಬೇಕಾಗಿರುತ್ತದೆಂತಲೂ ಹೇಳಿದಂತೆ ತಂತಿವೃತ್ತಾಂತದಿಂದ ತಿಳಿಯಬರುತದೆ.

[illegible]ನಗರದಲ್ಲಿ ನವಾಬ್ ಫಾತಾ ಅಲ್ಲಿಖಾನ ಎಂಬ ದೊಡ್ಡ ಮನುಷ್ಯನು ಆಚೆ ಸೋಮವಾರ ಸಾಯಂಕಾಲ ಭೋಜನ ಮಾಡಿ ತನ್ನ ಮಲಗುವ ಕೋಣೆಯೊಳಕ್ಕೆ ಹೋದಮೇಲೆ ಇನ್ನೊಂದು ಕೋಣೆಯಲ್ಲಿ ಮಲಗಿದ್ದ ಅವನ ಹೆಂಡತಿಗೆ ಪಿಸ್ತೋಲಿನ ಶಬ್ದ ಕೇಳಿಬಂದು. ಅದೇನೆಂದು ನೋಡುವದಕ್ಕಾಗಿ ಎದ್ದು ಹೋದಳು. ಇಬ್ಬರು ಕೆಲಸಗಾರರು ಅವಳ ಗಂಡನನ್ನು ಹೊಡೆದು ಕೊಂದು ತುಂಡಾಗಿ ಕತ್ತರಿಸಿ ಹಾಕಿ ಹೊರಕ್ಕೆ ಓಡಿಹೋಗುತ್ತಾ ಇದ್ದರು. ಇವಳಿಗೆ ಗಾಬರಿಯಾಗಿ ಕೂಗಿಕೊಳ್ಳುವದರೊಳಗೇ ಅವರು ತಪ್ಪಿಸಿಕೊಂಡರು. ಇನ್ನೂ ಅವರು ಯಾರೆಂದು ಗೊತ್ತಾಗಲಿಲ್ಲ. ಆ ಊರಿನಲ್ಲಿ ಈ ಕೊಲೆಯಾದ ವಿಷಯದಲ್ಲಿ ಎಲ್ಲರೂ ಬಹಳ ಗಾಬರಿಪಟ್ಟಿರುವರು.

ಇಂಗ್ಲೀಷಿನವರು ಹೈದರಾಬಾದಿನಲ್ಲಿ ಕೆಲವು ಸೈನ್ಯವನ್ನು ಇಟ್ಟಿದ್ದಾರೆ. ಸಿಕಂದರಾಬಾದಿನಲ್ಲಿರುವ ಸೈನ್ಯದ ಭೋಜನಕ್ಕೋಸ್ಕರ ನೈಜಾಮರವರು ಒಂದು ಹೊಸಿಯ ಎತ್ತಿಸಿಕೊಟ್ಟದ್ದರಲ್ಲಿರುವ ಗ್ರಾಮಗಳನ್ನೆಲ್ಲಾ ಬಿಟ್ಟುಕೊಟ್ಟಿರುವರು. ಈಗ ಆ ಹಣಿಯ ಕೆಳಗೆ ಭೂಗರ್ಭದಲ್ಲಿ ಸರ್ವೋತ್ಕೃಷ್ಟವಾದ ಕಲ್ಲಿದ್ದಲಿನ ಗಣಿಗಳಿವೆ ಎಂದು ಗೊತ್ತಾಯಿತು. ಮದರಾಸ್ ಸರ್ಕಾರದವರು ಈ ಗ್ರಾಮಗಳ ಏರ್ಪಾಡನ್ನು ನೋಡಿ ಕೊಳ್ಳಬೇಕೆಂದು ಪ್ರಯತ್ನಪಟ್ಟಾಗ ಈ ವಿಷಯದಲ್ಲಿ ನೈಜಾಮರವರಿಗೂ ಅವರಿಗೂ ವ್ಯಾಜ್ಯಹುಟ್ಟಿತು. ಕೊನೆಗೆ ಇಂಡಿಯಾ ಗವರ್ನಮೆಂಟಿನವರು ತನಿಖೆ ಮಾಡಿ ನ್ಯಾಯವನ್ನು ನೈಜಾಮರ ಕಡೆ ತೀರ್ಮಾನಮಾಡಿದರು. ಇದರಿಂದ ನೈಜಾಮರಿಗೆ ಬಹಳ ಆದಾಯವಾಗಿರುತ್ತದೆ.

ಲಾಹೋರಿನಲ್ಲಿ ಜೂಬಿಲೀ ಉತ್ಸವದ ನಿಮಿತ್ತ ನಾಗರಿಕರ ದೊಡ್ಡ ಸಭೆ ಕೂಡಿತ್ತು. ಹೈಕೋರ್ಟಿನ ಜಡ್ಜಿಯವರು ಅಧ್ಯಕ್ಷರಾಗಿದ್ದರು. ಮುಖ್ಯವಾಗಿ ಯೂರೋಪಿಯನ್ನರು ಅವರ ಪ್ರೀತಿಯನ್ನಪೇಕ್ಷಿಸುವ ದೇಶೀ ಜನರ ಸಹಾಯದಿಂದ ಜೂಬಿಲೀ ಸ್ಮಾರಕವಾಗಿ ಮಹಾರಾಣಿಯವರ ಬಿಳೀಕಲ್ಲಿನ ಪ್ರತಿಮೆಯನ್ನು ಮಾಡಿಸುವ ಠರಾವು ಮಾಡಲು, ಕಾಲೇಜುಗಳ ವಿದ್ಯಾರ್ಥಿಗಳು ಮೊದಲಾದವರು ದೊಡ್ಡ ಗಲಾಟೆಯನ್ನೆಬ್ಬಿಸಿ ಸಭೆಯು ಕೆಲಸವನ್ನು ನಡೆಯಗೊಡಲಿಲ್ಲ. ಈ ವಿರೋಧಿಗಳು ಕೂಡಲೆ ಬೇರೆಯಾಗಿ ತಮ್ಮ ಸಭೆ ಕೂಡಿಸಿ, ಜೂಬಿಲೀ ನಿಮಿತ್ತವಾಗಿ ಕೂಡಿದ ಹಣದಿಂದ ಮಧ್ಯಪ್ರಾಂತದಲ್ಲಿ ದಿಕ್ಕಿಲ್ಲದ ಬಾಲಕರಿಗೆ ಸಹಾಯ ಮಾಡಬೇಕೆಂದು ಠರಾವು ಮಾಡಿದರು. ಈ ಜಗಳದ ಪರಿಣಾಮವು ಎಲ್ಲಿಗೆ ಮುಟ್ಟುವದೋ ನೋಡಬೇಕಾಗಿದೆ.

ಜೂಗತ ಪಟ್ಟಣವು—ಉತ್ತರ ಹಿಂದುಸ್ಥಾನದೊಳಗಿನ ದಮಕ್ರಿಯಾ ಜಿಲ್ಲೆಯೊಳಗಿನ ನಡಿಯಾ ಎಂಬ ಊರಿಂದ ೪ ಮೈಲುಗಳ ಮೇಲೆ ಹಳೂದಬುಶಿಯಾ ಎಂಬದೊಂದು ಹಳ್ಳಿಯದೆ. ಅಲ್ಲಿ ರೈಲ್ವೆ ಕಾಮಗಾರಿಯು ನಡೆದ ಕಾಲದಲ್ಲಿ ಕೂಲಿಕಾರರು ನೆಲ ಅಗೆಯುವ ಕೆಲಸ ನಡಿಸಿದಾಗ್ಯೆ ೫ ಅಡಿ ತೋಡುವಷ್ಟರಲ್ಲಿ ಒಂದು ಇಮಾರತಿಯ ಮೇಲ್ಭಾಗವು ಕಂಡುಬಂತು. ಇದೇನಿರಬಹುದೆಂದು ಹೆಚ್ಚಿಗೆ ಅಗೆಯತೊಡಗಲು, ಅನೇಕಪಕ್ಕಾ ಇಟ್ಟಿಗೆಗಳ ಗೋಡೆಗಳೂ, ದೊಡ್ಡ ದೊಡ್ಡ ಮನೆಗಳೂ ಕಂಡವು. ಒಟ್ಟಿಗೆ ೧೩ ಬಿಘೆ ನೆಲವನ್ನು ಅಗೆದು ನೋಡಿದರು. ಅದೆಲ್ಲ ಮನೆಗಳಿಂದಲೂ, ಮಂದಿರಗಳಿಂದಲೂ ವ್ಯಾಪ್ತವಾಗಿದೆ. ಅಲ್ಲಿ ನಾನಾಪ್ರಕಾರದ ಶಸ್ತ್ರಗಳು ಸಿಕ್ಕಿದವು. ಅನೇಕ ಮನೆಗಳು ಕೀಲಿ ಹಾಕಲ್ಪಟ್ಟಿವೆ. ಮನುಷ್ಯರ ತಲೆ ಬುರುಡೆಗಳು ಹೇರಳವಾಗಿ ಹೊರಡುತ್ತವೆ. ಈಗ್ಯೆ ಈ ಸ್ಥಳದಲ್ಲಿ ಸರ್ಕಾರದವರು ಪಹರೆ ಇಟ್ಟು ಅಗೆಯುವ ಕೆಲಸವು ಪೊಲೀಸರ ನಜರಿನ ಕೆಳಗೆ ನಡೆದದೆ. ಜಿಲ್ಲಾಧಿಕಾರಿಗಳೂ ಅಲ್ಲಿಗೆ ಬೇಗನೇ ಹೋಗತಕ್ಕವರಿದ್ದಾರೆ. ಯಾಕೆಂದರೆ, ಇದು ಪ್ರಾಚೀನಕಾಲದ ಪಟ್ಟಣಗಿದ್ದು ಅಲ್ಲಿ ದ್ರವ್ಯ ಸಿಕ್ಕುವ ಸಂಭವವು ವಿಶೇಷವಿರುವದು. ನಮ್ಮ ಸರ್ಕಾರವು ದೈವವುಳ್ಳದ್ದಾಗಿರುವದು. ಈ ಸ್ಥಳದಲ್ಲಿ ಪುರಾತನ ಶಿಲಾಶಾಸನಗಳು ಸಿಕ್ಕಿದರೂ ಸಿಕ್ಕಬಹುದು.

EXTRACT

ಲಂಡನಿನ ಕೂಳ್ಖರ್ಚು.

ಈ ಷಹರಿನಲ್ಲಿ ಒಂದು ವರ್ಷದಲ್ಲಿ ಖರ್ಚಾಗುವಂಥ ಸ್ವಾಮಿಯ ಹಿಟ್ಟುಗಳನ್ನು ಒಂದರಮೇಲೊಂದು ಪೇರಿಸಿ ಇಟ್ಟರೆ ಸುಮಾರು ಒಂದು ಮೈಲು ಎತ್ತರವಾದ ಒಂದು ಸಾವಿರ ಕಂಬಗಳಾಗುವವು. ಒಂದೊಂದು ಸಾಲಿನಲ್ಲಿ ಹತ್ತರಂತೆ ಒಂದರಹಿಂದೊಂದು ಸಾಲನ್ನು ನಿಲ್ಲಿಸುತ ಹೋದರೆ ೩೦ ಮೈಲು ಉದ್ದವಾಗುವಷ್ಟು ಎತ್ತುಗಳು ಈ ಜನರಿಗಾಗಿ ಒಂದು ವರ್ಷದಲ್ಲಿ ಹಿಂಸಿಸಲ್ಪಡುತವೆ. ಇಲ್ಲಿ ಒಂದು ವರ್ಷದಲ್ಲಿ ಕೊಲ್ಲಲ್ಪಡುವ ಕರುಗಳನ್ನು ಒಂದೊಂದು ಸಾಲಿನಲ್ಲಿ ಹತ್ತರಂತೆ ಒಂದರಹಿಂದೊಂದು ಸಾಲಾಗಿ ನಿಲ್ಲಿಸಿದರೆ ಆ ಸಾಲು ೬೩ ಮೈಲು ಉದ್ದವಾಗಿರುವದು. ಅದರಂತೆ ಒಂದು ಸಾಲಿನಲ್ಲಿ ಹತ್ತರಂತೆ ಕುರಿಗಳ ಸಾಲುಗಳನ್ನು ಒಂದರಹಿಂದೊಂದು ನಿಲ್ಲಿಸಿದರೆ ಅವುಗಳ ಉದ್ದಳತೆಯು ೧೨೧ ಮೈಲಾಗುವದು. ಈ ಷಹರದಲ್ಲಿ ಪ್ರತಿವರ್ಷ ಕೊಲ್ಲಲ್ಪಡುವ ನೀರ್ಗೋಳಿ, ಕೋಳಿ ಮುಂತಾದ ಪಕ್ಷಿಗಳ ಗಣನೆ ಮಾಡಬೇಕಾದರೆ, ಪ್ರತಿಯೊಂದು ಪಕ್ಷಿಯು ಆಕಾಶದಲ್ಲಿ ಹಾರುತದೆಂತಲೂ, ಅದರ ಚುಂಚು ಎದುರಿನದರ ಪುಚ್ಛಕ್ಕೆ ಹೊಂದಿರುತ್ತದೆಂತಲೂ, ಪಕ್ಕಗಳು ಬೇರೆ ಪಕ್ಷಿಗಳ ಪಕ್ಕಗಳಿಗೆ ಹೊಂದಿರುವವೆಂತಲೂ ಕಲ್ಪಿಸಿದರೆ, ಈ ಎಲ್ಲ ಪಕ್ಷಿಗಳಿಂದ ವ್ಯಾಪಿಸಲ್ಪಟ್ಟ ಕ್ಷೇತ್ರವು ಸುಮಾರು ೫೦ ಚೌರಸ ಯಕರೆಯಾದೀತು. ಇಲ್ಲಿ ಖತವಾಗುವ ಮೊಟ್ಟೆಗಳನ್ನು ಪ್ರತಿಸಾಲಿನಲ್ಲಿ ೧೦ ಸಾವಿರಗಳಂತೆ ಒಂದರಹಿಂದೆ ಒಂದು ಸಾಲಿನಂತೆ ನಿಲ್ಲಿಸಿದರೆ ಅವುಗಳ ಉದ್ದಳತೆಯು ಸುಮಾರು ಒಂಬು ಮೈಲಾಗುವದು. ಇಲ್ಲಿ ಒಂದು ವರ್ಷದಲ್ಲಿ ಖರ್ಚಾಗುವ ೭ ಪೌಂಡು ತೂಕದ ರೊಟ್ಟಿಗಳನ್ನು ಗೋಪುರದ ಆಕಾರದಿಂದ ರಚಿಸಿದರೆ ಅದರ ತಳವು ೬೦೦ ಚೌರಸ ಫೂಟು, ಎತ್ತರವು ೧೩೯೪ ಫೂಟು ಆಗುವದು. ಈ ಷಹರಿಗೆ ಸಾಲುವಷ್ಟು ನೀರನ್ನು ಒಂದು ಕೆರೆಯಲ್ಲಿ ಸಂಗ್ರಹಿಸಬೇಕಾದರೆ ೧೫ ಅಡಿ ತಗ್ಗಾಗಿರುವ ೧ ಚೌರಸ ಮೈಲು ಕ್ಷೇತ್ರದ ಕೆರೆಯು ಬೇಕಾಗುವದು. ಇದಲ್ಲದೆ ಇಲ್ಲಿ ಖರ್ಚಾಗುವ ವಿಸಾಸುಗಳಿಗಂತೂ ಲೆಕ್ಕವೇ ಇಲ್ಲ. ಈ ಎಲ್ಲ ಪದಾರ್ಥಗಳು ಮೂಲಸ್ಥಳದಿಂದ ತಿನ್ನುವವರ ಬಾಯಿಯಲ್ಲಿ ಬೀಳಬೇಕಾದರೆ ೧ ಲಕ್ಷ ಜನರ ಕೈಯಲ್ಲಿ ಓಡಾಡುತವೆ. ಈ ಷಹರಿನಲ್ಲಿ ಒಟ್ಟು ೩,೦೦೦ ಅಂಗಡಿಕಾರರೂ ೧೧,೦೦೦ ಮಾಂಸ ಗಳನ್ನು ಮಾರುವವರೂ, ೩,೦೦೦ ಜನ ಕಟುಕರೂ ಜನರಿಗೆ ಅನ್ನ ಪೂರೈಸುತ್ತಾರೆ.

ಬಂಗಾಳಾ ಪ್ರಾಂತಕ್ಕೆ ಸೇರಿದ ಕುಷ್ಟಿಯೆ ಎಂಬ ಗ್ರಾಮದ ಸ್ಥಳಕ್ಕೆ ಮುಸಲ್ಮಾನರು ಸೈಯದ್ ಅಲ್ಲಾ ಫುಲ್ ಎಂಬ ಮೊಬಿನ ಮಹತುಕಳೆ ಹಿಂದೂಜನರ ಮನಸ್ಸು ನೋಯಿಸಬೇಕೆಂತಲೇ ಸಾರ್ವಜನಿಕ ರಸ್ತೆಯಮೇಲೆ ಮಧ್ಯಾಹ್ನ ಸಮಯದಲ್ಲಿ ಆಕಳುಗಳನ್ನು ಕೊಯ್ಯುವ ನೀಚ ಕೆಲಸವನ್ನು ನಡೆಸಿದರು. ಇಂತ ಕ್ರೂರತನದಿಂದ ನಡೆಸಿದ ಕೆಲಸವನ್ನು ನಿಲ್ಲಿಸಬೇಕೆಂದು ಹಿಂದೂ ಜನರು ಪುನಃ ಪುನಃ ಬಹುಪರಿಯನ್ನು ಮಾಡಿದರೂ ಕೇಳದಿದ್ದುದರಿಂದ ಕಠೋರವಾದ ಮಾರ್ಗವನ್ನವಲಂಬಿಸಬೇಕಾಯಿತು. ಈದ್ರಪಕ್ಷ ಮುಸಲ್ಮಾನರು ನಿಷ್ಕಾರಣವಾಗಿ ಅಡ್ಡಿಮಾಡಿ ತಮ್ಮ ತಮ್ಮೊಳಗೆ ಬಹಳ ಹುಟ್ಟಿಸುವ ಹಾಗು ರಕ್ತಸ್ರಾವ ಆಗುವ ಸಮಯವನ್ನು ತಂದಿಟ್ಟರು. ಮಹಮ್ಮದೀಯರಂತೆ ಈ ಕೆಡುಗೇಡಿತನವನ್ನು ಮುಸಲ್ಮಾನರೇ ಮೊದಲು ನಡೆಸಿದರು. ವಿಚಾರಮಾಡಿ ನೋಡಲಾಗಿ ಎಲ್ಲ ದೋಷಗಳೂ ಸರ್ಕಾರೀ ಅಮಲದಾರರಮೇಲೆಯೇ ಬರುತಿದೆ. ಸರ್ಕಾರದವರು ತಮಗೆ ಪ್ರೋತ್ಸಾಹ ಕೊಡುವರೆಂಬ ತಿಳುವಳಿಕೆಯು ಮುಸಲ್ಮಾನರದಾಗಿರುತಿದೆ. ಆದರೆ ಕುಷ್ಟಿಯಲ್ಲಿನ ಮ್ಯಾಜಿಸ್ಟ್ರೇಟರು ತೋರಿಸಿದ ನಿಷ್ಪಕ್ಷಪಾತವು ಎಲ್ಲ ಅಮಲದಾರರು ಲಕ್ಷ್ಯದಲ್ಲಿಡತಕ್ಕಂಥದ್ದಾಗಿರುತಿದೆ. ಮ್ಯಾಜಿಸ್ಟ್ರೇಟರ ಕಡೆಗೆ ಫಿರ್ಯಾದ ಮಾಡಿದಾಗ ಅವರು ಸ್ವತಃ ಬಂದು ಆಕಳುಗಳನ್ನು ಕೊಯಿದ ಸ್ಥಳವು ಸಾರ್ವಜನಿಕ ರಸ್ತೆಯ ಮೇಲೆ ಇರುವದೋ ಇಲ್ಲವೋ ಎಂಬುದನ್ನು ಖಾತ್ರಿ ಮಾಡಿಕೊಂಡರು. ಮತ್ತು ಈ ಕೃತ್ಯವು ಹಿಂದೂ ಜನರ ಮನಸ್ಸು ನೋಯಿಸಬೇಕೆಂತಲೇ ಮಾಡಿದ್ದಿರುವದೆಂಬದಂ ಅರಿತು ಹಿಂದೂ ಜನರ ಮನಃಪೂರ್ವಕವನ್ನು ಪಡೆಕೊಳ್ಳುವಂತೆ ತೀರ್ಮಾನಿಸಿ ೫೦ ರೂಪಾಯಿ ದಂಡವನ್ನು ವಿಧಿಸಿ, ಹಿಂದೂ ಮುಸಲ್ಮಾನರನ್ನು ಐಕಮತ್ಯಮಾಡಿ ಅವರನ್ನು ಕಳುಹಿಸಿದರು. ನಮ್ಮ ಮಾಜಿ ಗವರ್ನರಾದ ಲಾರ್ಡ್ ಹ್ಯಾರಿಸ್ ಸಾಹೇಬರವರು ಈ ಪ್ರಕಾರ ನಿಪಕ್ಷಪಾತವನ್ನು ವ್ಯಕ್ತಪಡಿಸಿದ್ದರೆ ಹಿಂದೂ ಮುಸಲ್ಮಾನರಲ್ಲಿ ನಡೆದ ಜಗಳಗಳು ಯಾವುದೂ ಆಗುತಲಿದ್ದಿಲ್ಲ, ಹಾಗೂ ಅವರ ಅಪಕೀರ್ತಿಯೆಂದಿಗೂ ಕುಂದು ಬರುತಿದ್ದಿಲ್ಲ.

ಪ್ರಾಥಮಿಕ ಶಿಕ್ಷಣವು

ನಮ್ಮ ದೇಶದಮೇಲೆ ಇಂಗ್ಲಿಷ ಸರ್ಕಾರದವರ ರಾಜ್ಯಾಡಳಿತೆಯಿಂದ ನಮಗೆ ಬಹಳ ದೊಡ್ಡ ಲಾಭವಾದದ್ದು ಯಾವದೆಂದರೆ, ವಿದ್ಯೆಯ ಪ್ರಸಾರವು. ಒಂದುನೂರು ವರ್ಷದಹಿಂದೆ ಜನಸಂಖ್ಯೆಯಲ್ಲಿ ಓದು ಬರಹ ಬಲ್ಲ ಜನರು ನಮ್ಮಲ್ಲಿ ಬಹು ಸ್ವಲ್ಪವಾಗಿದ್ದರು. ಆದರೆ ಇಪ್ಪತ್ತಾಗಿ ದಯಾಳು ಇಂಗ್ಲಿಷ ಸರ್ಕಾರದವರ ಕೃಪೆಯಿಂದ ಜಾತಿಧರ್ಮ ಮುಂತಾದ್ದರ ಅಡ್ಡಿ ಇಲ್ಲದೆ ಎಲ್ಲ ಜಾತಿಯವರಿಗೂ ಧರ್ಮದವರಿಗೂ ವಿದ್ಯಾಮೃತವು ಸಮನಾಗಿ ಸಿಕ್ಕುತವೆ. ಆದರೆ ಈ ಶಿಕ್ಷಣದ ಪದ್ಧತಿಯು ದೋಷ ರಹಿತವಾದದ್ದೆಂತ ನಾವು ಅನ್ನಲಾರೆವು, ಯಾತಕ್ಕೆಂದರೆ, ಶಿಕ್ಷಣದಲ್ಲಿ ಮುಖ್ಯಭಾಗವಾದ ಗಣಿತಶಾಸ್ತ್ರವು ಕಲಿಸತಕ್ಕ ರೀತಿಯು ನಮ್ಮ ಮೊದಲಿನ ರೀತಿಗಿಂತಲು ಅಗದಿ ಭಿನ್ನವಾದದ್ದಾಗಿರುತಿದೆ. ನಮ್ಮ ಮೊದಲಿನ ಲೆಕ್ಕ ಮಾಡುವ ರೀತಿಗಳು ಉತ್ಕೃಷ್ಟವಾದವುಗಳು. ಮತ್ತು ಅಂಥರೀತಿಯಿಂದ ಲೆಕ್ಕಗಳು ಬಹಳ ತೀವ್ರವಾಗುತಲಿದ್ದವು. ಮೊದಲು ನಮ್ಮಲ್ಲಿ ಎಸಿಕೆ ಹಾಕುವ ಸಣ್ಣಮಕ್ಕಳು ಮಾಡುತಲಿದ್ದ ಲೆಕ್ಕಗಳು ಈಗಿನ ಬಹಳ ಗ್ರ್ಯಾಜ್ಯುಯೇಟರಿಗೆ ಮಾಡಲಿಕ್ಕೆ ಬಹು ಅಸಾಧ್ಯವಾದ ಮಾತಾಗಿರುತಿದೆ. ಹಣ್ಣುಮಕ್ಕಳು ಬಾಯಿಂದ ಮಾಡುತಿದ್ದ ಲೆಕ್ಕಗಳು ಈಗಿನ ಗ್ರ್ಯಾಜ್ಯುಯೇಟರು ಪಾಟಿ ಪೆನಸಲ್ ತೆಗದುಕೊಂಡು ಸಹ ಮಾಡಲಿಕ್ಕೆ ಬರುವದಿಲ್ಲ. ಹೀಗಾಗುವದರ ಕಾರಣ ಶೋಧ ಮಾಡಿದರೆ ಹೀಗೆ ತಿಳಿಯಬರುವದಲ್ಲ. ಈಗ ನಮ್ಮ ಸರ್ಕಾರದವರು ಕೊಡುತಲಿರುವ ಪ್ರಾಥಮಿಕ ಶಿಕ್ಷಣವು ತೀರ ಅಪೂರ್ಣವಾದದ್ದು. ಬಾಲಕರಿಗೆ ಸ್ವಭಾಷೆ ನಾಲ್ಕು ಅಕ್ಷರಗಳು ಬಂದ ಕೂಡಲೇ ಇಂಗ್ಲಿಷ ಸಾಲೆಗೆ ಹೋಗುವದಕ್ಕಾಗಿ ತಾಯಿ ತಂದೆಗಳ ಆಗ್ರಹ ಹೆಚ್ಚಾಗಿ ಇಂಗ್ಲಿಷ ಕಲಿಯುವದಕ್ಕೆ ಪ್ರಾರಂಭ ಮಾಡಬೇಕಾಗಿರುತಿದೆ. ಇಂಗ್ಲಿಷ ಸಾಲೆಗಳಲ್ಲಂತು ವಿದ್ಯಾಭ್ಯಾಸ ಪದ್ಧತಿಯು ಪಾಶ್ಚಾತ್ಯ ಪದ್ಧತಿಯಮೇಲೆ ಇರುತಿದೆ. ಅದರಲ್ಲಿ ನಮ್ಮ ಹಳೇ ಪದ್ಧತಿಯ ಲೇಶ ಸಹ ಇರುವದಿಲ್ಲವು. ನಮ್ಮಲ್ಲಿ ಮೊದಲು ಹುಡುಗರಿಗೆ ಅಂಕೆ ಮಗ್ಗಿಗಳನ್ನು ಕಲಿಸುವಾಗ್ಗೆ ಏಕ, ದೀಸ, ಶಟ್ಟೆ ಮುಂತಾದವುಗಳನ್ನು ಕಲಿಸುತಿದ್ದರು. ಈಗಿನ ಗ್ರ್ಯಾಜ್ಯುಯೇಟ್ ಜನರಿಗೆ ಈ ಶಬ್ದಗಳ ಅರ್ಥ ಸಹ ಗೊತ್ತಿರುವದಿಲ್ಲವು. ಅಂದಮೇಲೆ ಅವುಗಳ ಸಹಾಯದಿಂದ ಲೆಕ್ಕಗಳನ್ನು ಬಿಡಿಸುವ ಮಾತು ದೂರ ಉಳಿಯಿತು. ನಮ್ಮ ಗ್ರ್ಯಾಜ್ಯುಯೇಟರಿಗೆ ಪಾಶ್ಚಾತ್ಯಜ್ಞಾನವು ಬಹಳ ಆಗುತಿದೆ. ಆದರೆ ಆ ಜ್ಞಾನದಿಂದ ನಮ್ಮ ದೇಶದ ಜನರಿಗೆ ಲಾಭ ಮಾಡಿಕೊಡುವದು ಅವರಿಗೆ ಸಾಧ್ಯವಾಗುವದಿಲ್ಲ. ಇದರ ಕಾರಣವಾದರೂ ನಮ್ಮ ದೇಶಭಾಷೆಯೊಳಗಿನ ಪ್ರಾಥಮಿಕ ಶಿಕ್ಷಣವು ಅಪೂರ್ಣವಾದದ್ದೆಂತಲೇ ಹೇಳಬಹುದು, ಯಾತಕ್ಕೆಂದರೆ, ಇವರಿಗೆ ದೇಶಭಾಷಾಜ್ಞಾನವು ಅತಿ ಸಂಕುಚಿತವಾದದ್ದು. ಇಂಗ್ಲಿಷ ಭಾಷೆಯಿಂದ ಇವರು ದೊರಕಿಸಿದಂತ ಜ್ಞಾನ ಭಂಡಾರದಿಂದ ಲಾಭವು ಅಂಥಾ ಜನರಿಗೇನೇ ಆಗುತಿದೆ, ಪೂರ್ಣವಾಗಿ ಕನ್ನಡಿಗರಿಗೆ ಅವರ ಮಾತು ಸಹ ಒಮ್ಮೊಮ್ಮೆ ಅಗೋಚರವಾಗಿರುತಿದೆ. ಇವರು ಸಭೆಗಳಲ್ಲಿ ನಿಂತು ಎರಡೆರಡು ತಾಸಿನವರೆಗೆ ಇಂಗ್ಲಿಷ ಭಾಷೆಯಲ್ಲಿ ವ್ಯಾಖ್ಯಾನ ಕೊಡಬಲ್ಲರು. ಆದರೆ ಸ್ವಭಾಷೆಯಲ್ಲಿ ಒಂದು ವಿಷಯದ ಮೇಲೆ ಇಂಗ್ಲಿಷ ಭಾಷೆ ಬಾರದೆ ಇದ್ದಂತವರಿಗೆ ತಿಳಿಯುವಂತೆ ಮಾತಾಡಲಿಕ್ಕೆ ಬರುವದಿಲ್ಲವು. ಇದು ಬಹು ನಾಚಿಕೆಯುಳ್ಳ ಮಾತು. ನಮ್ಮ ಪದವೀಧರರಿಗೆ ಈ ರೀತಿ ತಮ್ಮಲ್ಲಿ ನ್ಯೂನವಿರುವದನ್ನು ಕಂಡು ನಾಚಿಕೆ ಬಾರದೆ ಅಭಿಮಾನಪಡುತ್ತಾರೆ. ಇದು ಎಂತ ಸೋಜಿಗದ ಮಾತು! ಇವರು ತಮ್ಮ ಸ್ವಭಾಷೆಯಾದ ಕನ್ನಡ ಅಥವಾ ಮರಾಠಿ ಕಲಿಯುವರು ಮೂರನೇ ಅಥವಾ ನಾಲ್ಕನೇ ಪುಸ್ತಕದವರೆಗೆ ಹೋದರು, ಅಂದಮೇಲೆ ಇವರ ಸ್ವಭಾಷೆಯ ಜ್ಞಾನವು ಅಕುಂಚಿತವಾಗಿರುವದು ಅಗಾಧವಲ್ಲ. ಸ್ವಭಾಷೆಯ ಜ್ಞಾನವಿಲ್ಲದ್ದರಿಂದ ಅದರೊಳಗಿರುವ ಗ್ರಂಥ ವಾಚನವು ಅವರಿಗೆ ಸೇರುವದಿಲ್ಲ. ಆದ್ದರಿಂದ ನಮ್ಮ ಮೊದಲಿನ ಹಳೇ ಗ್ರಂಥಕರ್ತರ ಗ್ರಂಥಗಳು ಸಹ ಈಗ್ಯೆ ಎಲ್ಲಿಯೂ ಕಂಡುಬರುವದಿಲ್ಲವು. ಕನ್ನಡಭಾಷೆ ಪೂರ್ಣವಾಗಿ ಕಲಿತು ಅದರಲ್ಲಿ ಪಾರಂಗತರಾಗಿ ಗ್ರಂಥಗಳನ್ನು ಬರೆಯುವಷ್ಟು ಶಕ್ತಿಯುಳ್ಳ ಪಡೆದ ಮಹಾತ್ಮನು ಈ ಕಾಲದಲ್ಲಿ ನಮ್ಮಲ್ಲಂತೂ ತೋರುವದಿಲ್ಲವು.—ರಾಜಹಂಸ.

NOTICE.

ನಮ್ಮ ಆಫೀಸಿನಲ್ಲಿ ವಿಲ್ಲಿಯ್ ಮತ್ತು ರಿಚರ್ಡ್ಸ್ ಕಂಪನಿಯವರಿಂದ ತಯಾರುಮಾಡಲ್ಪಟ್ಟ ರಾಯಲ್ ಪ್ರೆಸ್ ಒಂದು, ಅದಕ್ಕೆ ತಕ್ಕಂತೆ ಹಾರ್ರಿಲ್ಡ್ ಕಂಪನಿಯ ರಾಯಲ್ ಸೈಜ್ ಇಂಕಿಟೇಬಲ್ ಒಂದು, ಇವೆರಡೂ ಬಿಕರಿಗೆ ಸಿದ್ಧವಾಗಿವೆ. ಮೇಲಿನ ಯೆರಡೂ ಒಳ್ಳೆಯ ಸ್ಥಿತಿಯಲ್ಲಿ ಮಜಬೂತಾಗಿವೆ. ಬೇಕಾದವರು ಬಂದು ನೋಡಿ, ಕ್ರಯ ವಗೈರೆ ನಿಷ್ಕರ್ಷೆಮಾಡಿ ಪಡೆಯಬಹುದು.—ಪ್ರೊಪ್ರೈಟರ್.

NOTICE.

VIDYASARA SANGRAHA

A TREATISE ON THE PRINCIPLES OF

HINDU MEDICINE

Price, including Postage Rs 2—0—0

ವೈದ್ಯಸಾರಸಂಗ್ರಹ

ಇದು ಚರಕ, ವಾಗ್ಭಟ, ಸುಶ್ರುತ, ಶಾರ್ಙ್ಗಧರ, ವ್ಯಾಸೋಕ್ತ ಪೂರ್ವಗ್ರಂಥಗಳ ಸಂಗ್ರಹ ರೂಪವಾಗಿರುತಿದೆ

ಇದರ ಕ್ರಯ—ಪ್ಯಾಕಿಂಗ ಮತ್ತು ಅಂಚೆ ಹಾಸಲ್ ಸೇರಿಸಿ ಪ್ರತಿ ೧ಕ್ಕೆ ೩—೦—೦

ಬೇಕಾದವರು ಬೆಂಗಳೂರು ಕರ್ನಾಟಕ ಪ್ರೆಸ್ಸ ಪ್ರೊಪ್ರೈಟರವರಿಗೆ ಬರೆದು ತರಿಸಿಕೊಳ್ಳಬಹುದು

V. AYANOR'S PREPARATIONS.

ವಿ. ಅಯಾನೋರಿ ಎಂಬವರಿಂದ ತಯಾರುಮಾಡಲ್ಪಟ್ಟ ಪ್ರಸಿದ್ಧ ಔಷಧಗಳು.

ಪಿಯೋರಿಸ್ಟ್ರಾಯರ್.—ಇದು ಹೊಟ್ಟೆಶೂಲಿ, ಅಜೀರ್ಣ, ಕರುಳು ನೋವು, ವಾಂತಿಭೇದಿ, ಅಜೀರ್ಣಭೇದಿ, ಬೇಳುಕಡಿತ, ಕೆಮ್ಮು, ಮೂತ್ರತಡೆ, ಬಾಯಿಹುಣ್ಣು, ರಕ್ತಕ್ರಿಮಿ, ಅರ್ತವ ದೋಷದವ್ಯಗಳಾದ ಸ್ತ್ರೀಯರ ಉದಿಧಿಗಳು, ತಲೆನೋವು, ದಂತಶೂಲೆ, ಥಂಡಿ ಮೊದಲಾದ ರೋಗಗಳಿಗೆ ಬಹಳ ಉಪಯುಕ್ತವಾದದ್ದು. ಇದರ ಕ್ರಯ ದೊಡ್ಡಶೀಷೆ ೧ಕ್ಕೆ ೧ ರೂ. ಸಣ್ಣಶೀಷೆ ೧ಕ್ಕೆ ೮ ಆಣೆ.

ಪಿಕ್ಷ್ಪಾವಾಯು ತೈಲ—ಸಂಧಿವಾತಿಕ ನೋವು, ಪಕ್ಷವಾಯು, ಕೊಂಬನೋವು, ತಲೆಶೂಲೆ ಇವು ಪರಿಹಾರವಾಗುವದು. ಇದರ ಕ್ರಯ ದೊಡ್ಡಶೀಷೆ ೧ಕ್ಕೆ ೧ ರೂ ಸಣ್ಣಶೀಷೆ ೧ಕ್ಕೆ ೮ ಆಣೆ.

ಜ್ವರದ ಧೃತಿ.—ಇದು ಎಂತಾ ಜ್ವರವನ್ನಾದರೂ ಎರಡು ದಿನಗಳೊಳಗಾಗಿ ನಿವೃತ್ತಿ ಮಾಡತಕ್ಕದ್ದು. ದೊಡ್ಡಶೀಷೆ ೧ಕ್ಕೆ ೧ ರೂ ಸಣ್ಣಶೀಷೆ ೧ಕ್ಕೆ ೮ ಆಣೆ.

ಓಮಕರ್ಪೂರ ಶೋಧ.—ಇದು ಶೀತಭೇದಿ, ರಕ್ತಭೇದಿ, ಶೀತಸ್ವರದಿಂದ ಆಗುವ ಉಬ್ಬಸ, ಎದೆನೋವು, ಹೊಟ್ಟೆನೋವು ಇವುಗಳಿಗೆ ಬಹಳ ಪ್ರಯೋಜನಕರವಾದದ್ದು. ಇದರ ಕ್ರಯ ದೊಡ್ಡಶೀಷೆ ೧ಕ್ಕೆ ೧ರೂ ಸಣ್ಣಶೀಷೆ ೧ಕ್ಕೆ ೮ಆಣೆ.

ಮಹಾಮಾಯು ಎಣ್ಣೆ—ಇದು ಮಹಾವಾಯುವಿನಿಂದ ಶರೀರವು ಉಬ್ಬುವದು, ಚರ್ಮವು ಒಡೆಯುವದು, ಸಂಧಿನೋವು, ಗ್ರಂಥಿಗಳು ಇವುಗಳೆಲ್ಲ ಬಹಳ ಉಪಯುಕ್ತವಾದದ್ದು. ಇದರ ಕ್ರಯ ದೊಡ್ಡಶೀಷೆ ೧ಕ್ಕೆ ೧ರೂ. ಸಣ್ಣಶೀಷೆ ೧ಕ್ಕೆ ೮ ಆಣೆ.

ವ್ಯಸ್ತ್ರನ್ಯೈಲವು —ಇದು ಶರೀರವು ನೋವು, ಕೀಲುನೋವು, ವಿಶ್ವರ್ಗನೋವು, ಅರತಲೆನೋವು, ಒಜ್ಜಗಡ್ಡೆ ಇವುಗಳಿಗೆ ಪ್ರಸಿದ್ಧವಾದ ತೈಲವು. ದೊಡ್ಡ ಡಬ್ಬಿ ೧ಕ್ಕೆ ೧ ರೂ. ಸಣ್ಣ ಡಬ್ಬಿ ೧ಕ್ಕೆ ೮ ಆಣೆ.

ಶ್ವೇತಕುಷ್ಠೌಷಧ — ಇದು ಸಕಲವಿಧ ಮೇಹರೋಗಗಳಿಂದ ಬರುವ ಬಾವು, ಹಸರು ಮಚ್ಚೆ ಸ್ತ್ರೀಯರ ಮುಖದ ದದ್ದು ಭಂಗಿ ಕೆಡ್ಡು ಹೋಗುವದು, ಎಂಥಾ ಎಂದಿಗೂ ಬಂದಂತೆ ನಿಶ್ಚಯವಾಗಿಯೂ ಗುಣಪಡಿಸತಕ್ಕಂತಾ ಔಷಧ ಇದರ ಕ್ರಯ ಶೀಷೆ ೧ಕ್ಕೆ ೧ ರೂ ೮ ಆಣೆ.

ಕೂದಲು ಬೆಳೆಯುವ ಕಪ್ಪಾಗಿ ಬೆಳೆಯುವಿಕೆ ಔಷಧ—ಈ ತೈಲವು ಸರದ ಕೂದಲುಗಳನ್ನು ಕಪ್ಪಾಗಿ ಮಾಡುವದು. ಕೂದಲು ಬೆಳೆಯುಗಿರುವವರಿಗೆ ಎಲ್ಲ ಹುಟ್ಟಿ ಬೆಳೆಯುವದು ಇದನ್ನು ಉಪಯೋಗಿಸಿದರೆ ಕೂದಲು ಉದುರುವದು ನಿಲ್ಲುವದು ಮತ್ತು ಸುವಾಸನೆಯಾಗಿರುತಿದೆ ಇದರ ಕ್ರಯ ಶೀಷೆ ೧ಕ್ಕೆ ೧ರೂ

ಬೇಕಾದವರು ಬಳ್ಳಾರಿ ಬಜಾರ್ ಪೇಟೆಯಲ್ಲಿರುವ ವಿ. ಅಯಾನೋರ್ ಔಷಧಶಾಲೆಗೆ ಬರೆದು ತರಿಸಿಕೊಳ್ಳಬಹುದು

V. GOPALAKRISHNA IYER,
Proprietor.
Mr. V IYANAR & Co.
Bellary

ಈ ಕಂಪನಿಯು ಸನ್ ೧೮೯೩ನೇ ಇಸವಿಯಲ್ಲಿ ಸ್ಥಾಪಿತವಾಯಿತು.

ಜನ್ಮದ ಲಾಭವು.

ವಜ್ರಾಂಗ ಬಜಾರವು.

ಬಹುಶರೀರೋಗ್ಯ, ಪುಷ್ಟಿಗಳನ್ನು ಬೆಳೆಸತಕ್ಕ ಉತ್ಪತ್ತಿಯು.

ಅತ್ಯಾಶ್ಚರ್ಯಕರವಾದ ಬಳ್ಳಿಗಳಿಂದ ತಯಾರಿಸಿದ ಈ ಉತ್ಪತ್ತಿಗಳು ಕೊಂಕಣಪ್ರಾಂತದ ಅನೇಕ ವನಸ್ಪತಿಗಳ ಸಾರವನ್ನು ಕೊಟ್ಟು ಅಷ್ಟದೊಳಗೆ ಮಾಗಿ, ಒಳ್ಳೇ ಹೆಚ್ಚಿನ ಎರಡನೆ ಸಕ್ಕರೆಯ ಪಾಕದಲ್ಲಿ ಸಿದ್ಧ ಮಾಡಿದ ಕ್ಷೀರ ... ಗಳು ಮಹೌಷಧಗಳಿದ್ದು, ಒಳ್ಳೇ ರುಚಿಯುಳ್ಳವವುಗಳ ಸೇವನೆಯಿಂದ ಕಫ, ವಾತ, ಪಿತ್ತ ಈ ತ್ರಿದೋಷಗಳುಂಟಾಗತಕ್ಕ ಯಾವತ್ತು ಬಗೆಯ ವ್ಯಾಧಿಗಳು ಹೋಗುತ್ತವೆ. ೭೦ ವರ್ಷಗಳ ಪ್ರಾಯವುಳ್ಳ ಮನುಷ್ಯರ ಶರೀರ ವಿಕಾರವಾದಾಗ್ಯೂ ಹರೆಯದಂತೆ ಮಾಡುವ ಪ್ರಯೋಜನವಾಗುತ್ತದೆ. ಜನ್ಮಾಂತ್ರಿಯದಲ್ಲಿ ಬಹು ಪುಂಟಾಗಿ ನಪುಂಸಕತ್ವವು ಇಲ್ಲದಂತಾಗುತ್ತದೆ. ಅಷ್ಟೆಯು ಮುಂದೆ ಆಹಾರ ಹಿಂದೆ ಕರಿದುಹೋಗುವ ಧಾತು ನಿಲ್ಲುತ್ತದೆ. ಸ್ವಪ್ನಾವಸ್ಥೆಯಲ್ಲಾಗುವದಲ್ಲ ವೀರ್ಯವು ಬೇರೆ ಮೈ ಬಣ್ಣವು ಸುಧಾರಿಸುತ್ತವೆ. ಪರಮಾ ಹಾನಿ ಉಷ್ಣಸಂಬಂಧಿಕ ಬೇನೆಗಳಿಗಸರ ಇಲ್ಲದಂತಾಗಿ ಧಾತು ಪುಷ್ಟವಾಗುತ್ತದೆ. ಮೂರು ಹೊತ್ತಿಂದರೂ ಅನ್ನ ಪಚನವಾಗಿ ಒಳ್ಳೇ ಹಸಿವೆ ಆಗುತ್ತದೆ. ತೋರುವದೊಂದೆ ತಡ ಕೊಡಲೆ ಸ್ವಚ್ಛ ಸೌಖ್ಯವಾಗುತ್ತದೆ. ಕ್ಷಯ, ಉದರ, ದಮ್ಮು ರೋಗಗಳು ನಾಶ ಹೊಂದುತ್ತವೆ. ಪ್ರಾಶನ ದೇವಿ ಇವುಗಳಲ್ಲಿ ೧೧ ದಿವಸಗಳ ವರೆಗೆ ಸಾಲುವ ಒಂದೇ ಡಬ್ಬಿಯಿಂದ ಗುಣಪಡಿಸುತ್ತದೆ. ಮತ್ತು ... ಬೇಕಾದ ಗುಣ ಬಂದೀತು. ೧೧ ದಿವಸಗಳವರೆಗೆ ಸಾಲತಕ್ಕ ೧ ಡಬ್ಬಿಗೆ ೧—೮— ರೂ॥ ೭ ಒಂದೇ ನ್ಯಾಯ್ಯಕ್ಕೆ ೩ ಡಬ್ಬಿಗಳು ತಕೊಳ್ಳತಕ್ಕವರಿಗೆ ಒಂದು ಡಬ್ಬಿಯು ಉಚಿತವಾಗಿ ಸಿಕ್ಕೀತು. ಈ ಉತ್ಪತ್ತಿಯಿಂದ ಹೆಂಗಸರು ಸತೇಜರಾಗುತಾರೆ. ಕರಗಿನ ಕಾಣದೂ ಬಾಣಂತಿ ಬೇನೆಗಳು ಮಾಸಿಯಾಗುತ್ತವೆ. ಎಲ್ಲವನ್ನು ಅರಿಯದಾಗಿ ಬೇರೆ ಇಲ್ಲದವರನ್ನಾಗಿಮಾಡಿ ಆರೋಗ್ಯ ಪುಷ್ಟಿಗಳನ್ನು ಬೆಳಸುತ್ತವೆ. ಸಾಹೇಬ ಜನರಲ್ಲಿ ಬಹಳ ಡಬ್ಬಿಗಳು ಖರ್ಚಾಗುತ್ತವೆ. ಈ ಪದಾರ್ಥವು ಈ ಕಂಪೆನಿಯವರೊರ್ತು ಬೇರೆ ಸ್ಥಳದಲ್ಲಿ ಆಗುವದಿಲ್ಲ. ಯಾವತ್ತು ದೇಶಗಳಲ್ಲಿಯು ವೈದ್ಯಶಾಲೆಗಳಿಗಾಗಿ ಕಳುಹಿಸಲ್ಪಡುತ್ತದೆ. ಬರೆದು ಬಂದು ಕೂಡಲೆ ಈ ಕಂಪೆನಿಯು ಬೇಕಾದವರಿಗೆ ಈ ಡಬ್ಬಿಗಳು ಕಳುಹಿಸಿಕೊಟ್ಟೀತು. ಅಂಚೆಯ ಹಾಸಲು ವ್ಯಾಲ್ಯು ಪೇಯಿಬಲ್ ವಗೈರೆ ಬೇರೆ ಕೊಡಬೇಕು (ಉಚಿತ ಡಬ್ಬಿ ಸಹ ೭ ಡಬ್ಬಿಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬಿಯಾದರೆ ಎಲ್ಲಾ ಖರ್ಚಿನ ಹಾಕಿ ರವಾನಿಸುವೆವು, ಹೀಗೆ ಕಳುಹಿಸಿದರೆ ಟಪಾಲ್ ಖರ್ಚು ಕಡಮೆ ಬೀಳುವದು.)

ಮೇಲ್ವಿಳಾಸ—ಪಿ. ಎಲ್ ಎ ಬ್ರದರ್ಸ ಮತ್ತು ಕಂಪೆನಿ,

ಫಸ್ಟ ಇಂಗ್ಲಿಷ್ ಬ್ರ್ಯಾಂಚ್ ಆಫೀಸ್, ಡಿಸ್ಟ್ರಿಕ್ಟ ಬೆಳಗಾಂವ.

ಪೋಸ್ಟ—ಬೆಳಗಾಂವ. Post BELGAUM.

BANGALORE :—Printed and Published at the KARNATAKA PRESS, No. 40, HOSPITAL ROAD, CITY,—1897.

THE

Karnataka Prakasika.

ಕರ್ಣಾಟಕ ಪ್ರಕಾಶಿಕಾ.

Published Every Monday Morning

ಪ್ರಕಟನೆಯ ದರಗಳು | ಮೊದಲನೆಯ ವಥಾ ಪಙ್ಕ್ತಿ ಒಂದಕ್ಕೆ 0 2 0 | ಎರಡನೆಯ ವಥಾ ಪಙ್ಕ್ತಿ ಒಂದಕ್ಕೆ 0 1 0

ಚಂದಾದರಗಳು —ಸ್ಥಳದವರಿಗೆ, ಪರಸ್ಥಳದವರಿಗೆ, ಪೋಸ್ಟೇಜ್ ಸಹಾ | ಸಾಲ್ 1 ಕ್ಕೆ 8 0 0 | 6 ತಿಂಗಳಿಗೆ . 2 0 0 | 8 ತಿಂಗಳಿಗೆ . 1 4 0 || ಸಾಲ್ 1 ಕ್ಕೆ . 4 0 0 | 6 ತಿಂಗಳಿಗೆ . 2 8 0 | 3 ತಿಂಗಳಿಗೆ . 1 8 0

ಪ್ರಕಾಶವಿವಿಧಪ್ರವೃತ್ತ್ಯುಪಗದಾರ್ಥ ಕರ್ಣಾಟಕಸ್ಯ... ‖ ...‖

VOL. XXIV. BANGALORE·—MONDAY, JUNE 21, 1897. No. 25.

NOTICE

Tenders are called for for the supply of articles of diet, country medicines, stationery articles, sundries &c. for the Lunatic and Leper asylums, the Government City Hospital, the Maternity, the Government Dispensary and the Medical Stores Bangalore up to 24th June 1897 by the Senior Surgeon and Sanitary Commissioner, Mysore Government.

For particulars see *Mysore Gazette* of the 13th June 1897.

P. H. B[illegible] M. B.,
15-6—97 *Senior Surgeon*
Mysore Government.

Select Telegrams

London, 12th June.—The *Times* Paris correspondent [illegible] that [illegible] between Russia and France will [illegible] during the forthcoming visit of President Faure to St. Petersburg.

Lond. 13th June.—At a crowded Conference held in [illegible] of the Indian Society presided over by Mr. Dadabhai Naoroji, and including Sir W. Wedderburn and Mr. Caine, a [illegible] the Queen on the [illegible] of the Jubilee [illegible] also praying for the fulfilment of the promises made in the proclamation of 1858.

THE

Karnataka Prakasika.

MONDAY JUNE 14, 1897

THE DIAMOND JUBILEE

THE Diamond Jubilee of Her Majesty which comes off to-morrow will be a unique event in the history of the world. So far as we can make out no sovereign ever ruled so long as Her Majesty Queen Victoria. Her grandfather George III came near it but for many years before his death he took no part whatever in the affairs of the State. But the Queen is not only reigning, but she is transacting all the duties that appertain to the office. She is doing as much as she ever did. Every one admires the high qualities of the Queen. She has ruled constitutionally, she has not been guilty of a single act of despotism, she has not given her people cause to complain. She [illegible] them, and when any great trouble came upon the country, upon any part of the empire she tendered her condolence, and if help was required she gave it. It is this spirit of kindness and sympathy that has so endeared her to her subjects, and which will make them take so much interest in the celebration of to-morrow's Jubilee. They will feel that it is not an idle show, that it is not a pageant got up by the rulers of the land but that everything has been spontaneous, that all has come from the heart of the people. But it is not only about the Queen herself we wish to speak but also about what has taken place during her reign—the changes that have been made from time to time. We will confine ourselves to India. In this land the changes during these sixty years have been prodigious. These have been made not in one direction only, but in many. Sixty years ago there were very few English schools in India. English was spoken by very few of the Natives of the land. The late Rev. B. Rice established the first school of the kind in the year that the Queen came to the throne. What a difference there is now! At the present time there are schools and colleges all over the country. Every town however small it may be, has its school, and many villages have such an institution. Education has spread to an enormous extent during these sixty years, and it will spread yet more. In 1837 there were no universities in this land. These were not established till many years afterwards. Now these are to be found in all the principal towns of the country, and hundreds of graduates are turned out every year. Thirty years ago graduates were few, now they are many, and their number [illegible] In addition [illegible] thousands of under-graduates, and many of these are [illegible] servants of Government, lawyers practising in the courts, or employed in offices. The full power of the educational system has not yet been fully realised, but when it is, it will be felt to be one of the wonders of the age—the development of the reign of Her Majesty Queen Victoria. In consequence of the education that has been imparted Natives of this land have risen to higher positions than they held sixty years ago. There were then no Native Judges of the High Courts, there were no Native Deputy Commissioners, no Native Judges of District Courts, and no Native members of Council. The change in this respect has been brought about by education. Those who occupy high posts have qualified themselves to hold them. Without education they would not have [illegible] the positions they now hold, and so we must come to the conclusion that education has made them what they are. The knowledge of English is spreading in such a manner that it is fast becoming the universal language of India, and some think of the whole world. A man may travel with ease from one end of the country to the other if he knows English, and he may communicate his thoughts to people wherever he goes, for they will also be acquainted with the same language. It would have been a perfect impossibility sixty years ago to have created such an institution as the Indian National Congress, [illegible] there was not a single language which [illegible] No [illegible] Then [illegible] look at the Legislative Councils of India. They [illegible] now very different institutions [illegible] they were. Now a certain number of members are elected to these Councils. The elective system would have been impossible sixty years ago. Then the medical profession has [illegible] improved since the Queen came to the throne. There were no Native surgeons in those days. The highest post in that line [illegible] to was that of dresser. Beyond [illegible] could not go. Now we find them in all ranks of the Medical Service. Sixty years ago it would have been considered a dreadful thing for a Brahman to [illegible] the Medical profession. Now there are many Brahmans in it, and in time there will be plenty more. If any one had foretold this sixty years ago he would have been called a false prophet. Many old customs have given place to new ones. In every way there has been change, and in most cases, a change for the better. Take another instance of the change that has come over the land. When the Queen came to the throne there were no railways in India. It was not till sixteen years after this that the sod of the first line was turned. It took three weeks in those days to travel from Bangalore to Madras, and the money required was not small. Now the trip only takes a night. There are railways all over the country, and the man can get to Calcutta in the present day in less time that it took him to reach Hassan in days gone by. Just fancy all the railways being suddenly stopped. But the country would only be in the same condition that it was when the Queen ascended the throne, and many years after. The advantages this country has gained during the present reign have been very great, and though some of them may have been crude and uncalled for, upon the whole they have been for the good of the people. Such being the case it is the duty of all to join together to celebrate the Jubilee of Her Majesty in such a way that it will honour her, and honour the country where we live.

News and Notes.

THE Indian Famine Relief Fund total now amounts to nearly Rs 1 38 00,000.

MR Booth Tucker has been convicted in New York of keeping a disorderly house at the Salvation Army head quarters.

MR Isaac S. Dement, a shorthand writer in Chicago, is credited with the extraordinary feat of writing 422 words in sixty seconds!

THE climate of Almorah has done much good to Swami Vivekananda who is now staying at the Dewal Dhar tea and fruit gardens.

IT is calculated that every week day morning a thousand miles of London news papers are given to the world by means of the rotary press.

WE learn that in Ganjam the famine is very severe. If the monsoon fails, there will be a terrible disaster. The Collector is said to be very anxious about the future.

FEELING is running very high in Kushtea in connection with the slaughter of twenty-one cows at a public place and in broad daylight, to the infinite disgust and horror of the local Hindus.

A FRENCH statistician announces that, after long and anxious calculation, he has arrived at the conclusion that the hairs of an average man's head number 12[illegible],920. He is not likely to be contradicted.

IT is estimated that there are now about 350,000 persons receiving relief in the famine areas of the Native States. The distress is most acute in the northern part of the Bundelkhand Agency.

A successful actor or actress in England earns more than £60 per week, or Rs 4,000 a month and there are many such successful theatrical people of both sexes. Are such incomes ever heard of in India?

AN Australian confectioner has hit upon the idea of printing the news of the day upon a thin paste of dough, using chocolate instead of ink. He delivers these cakes to his customers, who first read them, and then eat them with their coffee.

THE Advocate General in Bengal is entitled for every appearance to a daily fee of Rs 510 in addition to his official salary, it being understood that services so rendered to Government are to be considered as lying beyond the sphere of his official duties.

IT has been computed by geographers that, if the sea were emptied of its waters, and all the rivers of the earth were to pour their present floods into the vacant space, allowing nothing for evaporation, 40,000 years would be required to bring the water of the ocean up to its present level.

THE new bridge at the Niagara Falls consisting of a single steel arch having a span of 550 feet with an upper deck for the railway and a lower floor for a carriage way, side walks and trolleycar tracks—is rightly described as one of the greatest bridge building feats.

A severe earthquake occurred at Calcutta at 5 in the afternoon the like of which for strength or for duration is never recalled within the memory of the oldest resident. The shock lasted about seven minutes, and was accompanied with a rumbling noise, many houses cracked and casualties occurred. Serious damage has been done to property.

A FEE of one thousand guineas, for a *single* musical performance, has been recently paid to a foreign artist named Paderewski, and a similar fee, for singing just three songs, has been offered to the well known Madame Adelina Patti, who visited Madras some years ago. What splendid generosity and munificent patronage to first class musicians? No wonder that the fine arts flourish in Western lands, under such circumstances.

Saturday's earthquake was felt right across India, observers in Bombay, Agra, Sambalpur, Mymensingh, Simla and Calcutta all recording experiences which were varied from the disturbance of the magnetic observation in Bombay to the wrecking of the station in Mymensingh, where all the Courts, except the Collectorate, including the Post Office, are alleged to have fallen. As is usually the case with such earthquakes, the disturbance was most felt in Northern Bengal.

A contemporary reports the following tragedy enacted the other day at Karnal in the Punjab. A sick Hindu youth, utterly prostrated by protracted illness, swooned away on hearing of his failure in a University Examination, and those around him began to cry loudly, seeing his condition. The poor fellow's wife, hearing sounds of weeping proceeding from the sick room, at once concluded that her husband was dead, and rushing down-stairs, jumped down into a well, in which she was drowned, in spite of all efforts to save him.

Even the Russians, black as they are painted, continue to do a vast deal of good, very often, to the countries that come under their sway. For example, they are now constructing a railway, which, we believe, beats all other railways in the world in many respects. For one thing, it is the longest line in the world, as it will give an unbroken stretch of iron road from Ostend to Vladivostok, or a distance of 8 809 miles. The gauge adopted on this line will be much broader than the broadest in use elsewhere. It is said that the line will be completed by A. D. 1901.

Some not over-wise Hindu gentlemen of Madras lately made up their minds to send an address to the Sultan of Turkey, congratulating him upon the success that has attended the Turkish arms in the war with the Greeks. We really cannot make out the reasons that induced these gentlemen to poke their nose into a matter which does not concern them at

Hindus, in the least, though, of course it must be very interesting and gratifying to the Mahomedans to see the crescent successful and the cross beaten. The idea of sending addresses to all and sundry is being really overdone, and they are voted, and sent off on many occasions unnecessarily.

How foolishly indecorous and often indiscreet officials are may be known from the conduct of a Mr. Hare, an officer in charge of relief works in Behar. A. B. *Patrika* says—The image of *Mahamaya* is located in a hut and of *Sales*, the deity of the Dosads, stands without any hut. Mr. Hare told the villagers to remove the images, but they refused. In the afternoon of the 9th instant, Mr. Hare himself applied fire to the hut of *Mahamaya* burnt it to ashes. This is a sacrilegious act which no orthodox Hindu can bear. But the Mathurapur Hindus knew to their great cost what it was to be religiously susceptible and fanatic. If the above facts be true, certainly Mr. Hare's conduct is most obnoxious and government must punish him for this sacrilege being to people.

We are indebted to the *Hindu Patriot* for the following. Mr. Cotton has in his characteristic way given a well-merited snub to those Europeans who cannot bear the sight of the "oleaginous native." At Shillong there is a Park from which natives have hitherto been excluded. Some Assamese school boys took it into their head to memorialize the Chief Commissioner praying that the Park may be thrown open to natives. Few Chief Commissioners would have taken any notice of this juvenile effusion, but Mr. Cotton acted differently. He visited the Park and allowed the boys to enter it. The guard at the gate, not knowing that the European who gave the order to the boys to enter, was no other than the Chief Commissioner himself, protested against what he doubtless considered an act of unwarrantable interference with the authority of the Police. Imagine then his surprise when Haroun El Rashed disclosed his identity.

Local and Provincial.

VISITORS.—Many visitors are coming into Bangalore, and more may be expected as the season advances.

TRANSFER.—It is current here that Mr. D. Seetharama Rao, Palace Controller, will be drafted to the Borur Shimoga Railway works.—M. H.

THE EXCISE COMMISSIONER.—Has proceeded to Madras to learn the system of the Abkari that obtains in that presidency, so that changes may be made here.

INCREASE OF PAY.—We understand that Mr. K. Krishna Iyer, Private Secretary to the Dewan, has lately had an increase of Rs. 100 to his pay as personal allowance.

THE JUBILEE CELEBRATION.—Everything is now nearly ready for to morrow's celebration. The work has been pushed on very rapidly of late, and it looks as if everything would go off well.

THE NEW PALACE CONTROLLER.—The new Palace Controller is expected to take charge of his office by the end of this month. His pay has, it is said, been fixed at Rs. 1200 a month.—M. H.

THE MAHARANI REGENT.—Accompanied by the Maharajah came in on Saturday last at half past five. The usual ceremonies were observed on the occasion, and a salute was fired on the High Ground when Her Highness arrived at the Station.

THE WEATHER.—Has been for the past week, upon the whole, very pleasant. At times the wind is rather too high. On Thursday last we had a nice shower of rain but since then we have only had a slight drizzle. The tanks have received a fair supply, and the place looks very well.

The Mysore Gazette

Bangalore, Thursday, 17th June 1897

NOTIFICATIONS BY THE GOVERNMENT OF MYSORE.

GENERAL AND REVENUE

No 13341—*J 1510, dated 15th June 1897*

The leave without allowances granted to Mr. D. Devaraj Urs, Superintendent of Police, Bangalore district, in Government Notification No 10255—J 1176, dated 16th March 1897, is further extended by three months with effect from the 1st June 1897.

No 10827—*R F 88 96, dated 10th June 97*

The fifteen days' casual leave granted to V. N. Gopal Rao, Amildar of the Malur taluk, is commuted to privilege leave under Article 188 of the Mysore Service Regulations and is extended by fifteen days.

W. Shama Rao, Treasurer, Kolar District Treasury, is appointed to act as Amildar and 3rd Class Magistrate of the Malur taluk during the absence of V. N. Gopal Rao on leave, or until further orders.

No 10871—*Ft F 46 96 dated 15th June 97*

Under Article 188 of the Mysore Service Regulations, Mr. B. Hira Singh, Assistant Conservator of Forests, Kadur district, is granted privilege leave of absence for one month and a half, with effect from such date as he may avail himself of the same.

Mr. Y. Srinivasaiya, Assistant Conservator of Forests, on special duty in the Kadur district, will, in addition to his own duties be in charge of the District Forest Office during the absence of Mr. B. Hira Singh on leave or until further orders.

No. 10374—*Ft F 1 95, dated 15th June 97*

Under Article 188 of the Mysore Service Regulations, Mr. A. G. K. Theobald Sub Assistant Conservator of Forests, Mysore district, is granted privilege leave of absence for one month and a half in extension of the fifteen days casual leave granted to him in Government Notification No 9706—F F 1 95, dated 3rd May 1897, which will now be commuted into privilege leave.

Mr. B. Srinivasa Rao Assistant Conservator of Forests, will be in charge of the Sirgur Range in addition to his own duties as Acting Range Officer of Kakankote Range, during Mr. Theobald's absence on leave or until further orders.

No 10883—*Ft F 119 95, dated 15th June 97*

Under Article 188 of the Mysore Service Regulations, Mr. H. Muthappa, Assistant Conservator of Forests, Bangalore district, is granted privilege leave of absence for one month from the 10th June 1897 or from date of relief.

Mr. G. E. Ricketts, Assistant Conservator of Forests on special duty, will, in addition to his own duties be in charge of the Bangalore District Forest Office during Mr. Muthappa's absence on leave, or until further order.

ಕರ್ಣಾಟಕ ಪ್ರಕಾಶಿಕಾ.

೧೮೯೭ನೇ ಇಸವಿ ಜೂನ್ ತಾ|| ೨೧ನೇ ಸೋಮವಾರ

ಡೈಮಂಡ್ ಜೂಬಿಲಿ.

ಈ ಮಹೋತ್ಸವವು ಶ್ರೀಮನ್ಮಹಾರಾಣೀ ಇಂಡಿಯಾ ಚಕ್ರವರ್ತಿನೀಯವರು ರಾಜ್ಯಭಾರವನ್ನು ವಹಿಸಿ ೬೦ ಸಂವತ್ಸರಗಳಾದ ಪ್ರಯುಕ್ತ ಈ ೬೦ ಸಂವತ್ಸರಗಳಿಂದಲೂ ಪ್ರಜೆಗಳನ್ನು ತಿಳಿಯುವ್ವ ಬಾಧದಂತೆ ಕಾಪಾಡಿಕೊಂಡು ಬಂದದ್ದರ ಸಂತೋಷಾತಿಶಯದಿಂದ ಅವರ ರಾಜ್ಯಭಾರದ ಆಳ್ವಿಕೆಗೆ ಸೇರಿದವರೆಲ್ಲರೂ ಈ ದಿವಸವೂ ನಾಳೆಯೂ ಅತಿ ಕೋಲಾಹಲದೊಡನೆ ನಡೆಸೀ ಉತ್ಸವವನ್ನು ನೆರವೇರಿಸುವರು ಅದರಲ್ಲಿಯೂ ಇಂಡಿಯಾದೇಶದೊಳು ಆಸೇತು ಹಿಮಾಚಲ ಮಧ್ಯದೊಳಿರುವ ಸಕಲ ನೇಟಿವ್ ರಾಜರು ತಮ್ಮ ತಮ್ಮ ಶಕ್ತಿನಿಸಾರಿ ಖರ್ಚುಮಾಡಿ ಈ ಉತ್ಸವವನ್ನು ಕೊಂಡಾಡಿ ತಮ್ಮ ತಮ್ಮ ರಾಜಭಕ್ತಿಯನ್ನು ತೋರ್ಪಡಿಸಿಕೊಳ್ಳುವರು ಈ ಮೈಸೂರು ಸಂಸ್ಥಾನದವರು ವಿಶೇಷ ಅತಿಶಯದಿಂದ ಜರಿಗಿಸುವ ಏರ್ಪಾಡನ್ನು ಮಾಡಿರುವರು. ಈ ಉತ್ಸವವನ್ನು ಏಕಕಾಲದಲ್ಲಿ ೮ ಡಿಸ್ಟ್ರಿಕ್ಟ್‌ನಲ್ಲಿರುವ ಪ್ರಜೆಗಳೆಲ್ಲರೂ ಅನುಭವಿಸಿ ಆನಂದ ಪಡುವರು ಇವರಷ್ಟು ದೀರ್ಘಕಾಲಿಕವಾದ ದವಲತ್ತು ಮಾಡಿದವರೇ ಇವರಷ್ಟು ಭಾಗ್ಯಶಾಲಿಗಳೂ ಯಾವ ರಾಜರೂ ಇಲ್ಲ ಇವರ ಪ್ರಭುತ್ವದಲ್ಲಿ ನಾವು ಯೆಷ್ಟು ನಿರ್ಭೀತಿಯಿಂದ ಸುಖಗಳನ್ನು ಅನುಭವಿಸಿದೆವೊ ಮುಂದಣ ರಾಜ್ಯಭಾರದಲ್ಲಿ ಅಷ್ಟು ಪ್ರಜಾ ಸೌಖ್ಯ ನ್ಟಾಗುವದೆಂದು ಎಣಿಸುವದಕ್ಕೆ ಕಾರ್ಯ ಕಾರಣಗಳಿಂದ ಧೈರ್ಯ ಸಾಲುವದಿಲ್ಲ ಆದಕಾರಣ ಇವರೇ ಇನ್ನೂ ಚಿರಕಾಲ ದೀರ್ಘಾಯುಗಳಾಗಿದ್ದು ಇನ್ನು ಒಂದೆರಡು ಜೂಬಿಲೀ ಮಹೋತ್ಸವಗಳನ್ನು ಮಾಡಿಸಿಕೊಂಡು ಪ್ರಜೆಗಳನ್ನು ರಕ್ಷಿಸುತ ಬರಬೇಕೆಂಬುವ ಪ್ರಾರ್ಥನಾ ರೂಪವಾದ ನಮ್ಮ ರಾಜಭಕ್ತಿಯನ್ನು ಪ್ರದರ್ಶನ ಪಡಿಸುವೆವು.

ನಮ್ಮ ಮ್ಯುನಿಸಿಪಾಲಿಟಿ.

ಈ ಪೂರಿ ಮ್ಯುನಿಸಿಪಾಲಿಟಿಗೆ ಪ್ರೆಸಿಡೆಂಟ್ ಸಾಹೆಬರವರು ಬಂದಮೇಲೆ ರಾತ್ರಿ ಹಗಲು ಸಂಚಾರ ಮಾಡಿ ಅನೇಕ ಏರ್ಪಾಡುಗಳನ್ನು ಮಾಡಿದರು. ಅವರಿಗೆ ಸಹಾಯಕರಾಗಿ ಎಲ್ಲಮ್ಯುನಿಸಿಪಲ್ ಕಮಿಷನರುಗಳು ಮುತವಾಲಿಯವರೇ ಕೆಲಸ ಮಾಡಿದರು ಸಾದೆ ಅಂಗಡಿಯವರು ಕಲ್ಲುಗಳಲ್ಲಿ ಮೋಸ ಪಡಿಸುವರೆಂದು ಮನೋವರ್ಪಡಿಸಿಕೊಟ್ಟ ಪತ್ರಿಕಾಕಾರರ ಅಭಿಪ್ರಾಯಕ್ಕೆ ಗಮನ ಕೊಟ್ಟು ಅಂತವರ ಮೋಸಕ್ಕೆ ಅವಕಾಶ ವಿಲ್ಲವಂತೆ ತೂಕದ ಕಲ್ಲುಗಳನ್ನು ಮಾಡಿಸಿಕೊಟ್ಟರು. ಅದಕ್ಕಾಗಿ ಸಂತೋಷಿಸುತ್ತೇವೆ, ಕೆಲವರು ವರ್ತಕರು ಅಳತೆ ಕೊಳಗಳಲ್ಲಿಯೂ, ತೂಕದ ಬೊಟ್ಟುಗಳಲ್ಲಿಯೂ ವ್ಯತ್ಯಾಸವಾಡುತ್ತಾ ಇರುವವರಿಂದ, ಅಂತವುಗಳನ್ನೆಲ್ಲ ಬರಮಾಡಿಕೊಂಡು, ಅವುಗಳನ್ನೆಲ್ಲ ಅಬಾಯಡಿಮಾಡಿ, ಅದರ ದ ಖಲೆಗೆ ಸರಿಯಾದುದಕ್ಕೆಲ್ಲ ಒಂದು ಗುರುತು ಮಾಡಿ, ಸರಿಯಾದ ಸೇರ, ಕಲ್ಲು ಇಲ್ಲದವರಿಗೆ ಹೊಸದಾಗಿ ಕೊಡಿಸಿ ತನ್ಮೂಲಕವಿಂಡೀಗ ಉಂಟಾಗುತಲಿರ ವ ಮೋಸವನ್ನು ತಪ್ಪಿಸಬೇಕೆಂದು ಕೋರುವೆವು ಇನ್ನು ಕೆಲವರು ಕೆಮ ಎಣ್ಣೆ ಯುಳ್ಳ ನೀರನ್ನು ಬೆರಸಿ ಮೋಸದಿಂದ ಮಾರುತ್ತಾರೆ ಇವನ್ನು ಕಂಡು ಹಿಡಿದು ಬಂದೋಬಸ್ತು ಮಾಡಬೇಕು.

ಬಹುಜನರು ನೀರಿನ ನಲ್ಲಿಯಲ್ಲಿ ನೀರನ್ನು ಮನಸ್ವೀ ಬಿಟ್ಟು ಹಾಳುಮಾಡುತ್ತಾರೆಂದಾದ್ದರಿಂದಲೂ, ರಾತ್ರಿಕಾಲಗಳಲ್ಲಿ ಗಿಡಗಳಿಗೂ ಬಟ್ಟೆಗಳನ್ನು ಒಗೆಯುವದಕ್ಕೂ ಬಹಳವಾಗಿ ಉಪಯೋಗಿಸುತ್ತಿರುವರಾದ್ದರಿಂದಲೂ ಪಟ್ಟಣಿಗಳವರು ಬಂದು ತಾಳೆಯಿಂದ ಭದ್ರಪಡಿಸಿ ಯಿರುವ ನೀರಿನ ನಲ್ಲಿಗಳನ್ನು ಮಾತ್ರ ಬಿಟ್ಟು ಸಣ್ಣ ನಲ್ಲಿಗಳನ್ನೆಲ್ಲ ರಾತ್ರಿ ೯ ಘಂಟೆಯಾದಮೇಲೆ ಬೆಳಗಿನ ಝಾವ ೬ ಘಂಟೆವರಿಗೂ ಬಂದು ಮಾಡಿದ್ದರೆ ನೀರು ಪೋಲಾಗುವದು ತಪ್ಪುತ್ತದೆ.

ಮಿಯಿದ ಸೆಗಣಿಗಳನ್ನು ಮುಚ್ಚಿ ನಿತ್ಯ ತೆಗೆದುಕೊಂಡು ಹೋಗುವಹಾಗೆ ಮಾಡಬೇಕೆಂದು ಶ್ರಯತ್ನಿಸಿದರು ಅದು ದಿವಾಕಾರನಿಗೆ. ಪ್ರಕಾರ ಯೋಗಿ ಸದ್ಯಕ್ಕೆ ನೂತನಕಮಾಡತಕ್ಕದ್ದೆಂದು ಅವರು ಆರ್ಡರ್ ಕೊಡಿಸಿದರು ಮಾರ್ಕೆಟ್ಟು ಒಂದಾವರ್ಣ ಮ್ಯುನಿಸಿಪಲ್ ಓವರಸಿಯರುಗಳು ಮನೆಗಳೊಳಗೆ ನಗ್ಗಿ ಸಕಡದ ನೌಕರರಿಂದಲೇ ಎತ್ತಿಸಿ ಬಂಡಿ ತುಂಬಿಕೊಂಡ ಹೋಗಿ ದೂರಗೆ ದೂರವಾಗಿ ಸುರಿಯುವಂತೆ ಪ್ರಸಿದ್ಧಿಸಿದರು ಓವರಸಿಯರುಗಳಿಗೆ ಆರ್ಡರ್ ಇದವರೆ ದುರ್ಗಂಧಾದಿಗಳೆಲ್ಲವೂ ಪಾಕವಾಗುವದೆಂದು ಸೂಚಿಸುತ್ತೇವೆ

ಬೆಂಗಳೂರು ತುಲಸೀತೋಟ

ಶ್ರೀ ತುಲಸೀ ತೋಟದಲ್ಲಿ ವೇಣುಗೋಪಾಲಕೃಷ್ಣಸ್ವಾಮಿಯು ಪ್ರತಿಷ್ಠಿತರಾಗಿ ಸುಮಾರು ೫೦ ವರ್ಷಗಳಮೇಲೆ ಆಯಿತು. ಇಷ್ಟು ದಿವಸಗಳ ವರೆಗೂ ಶ್ರೀದೇವಿ ಭೂದೇವಿ ಎಂಬ ಉಭಯ ನಾಚ್ಚಮಾರುಗಳಲ್ಲಿ ಶ್ರೀದೇವಿಯನ್ನೇ ರುಕ್ಮಿಣಿ ಅಮ್ಮನವರೆಂದು ಭಾವಿಸಿಕೊಂಡು ಭಕ್ತರಿಗೂ ಹಾಗೆಯೇ ಸೇವೆಯನ್ನು ಕೊಡಿಸುತಲಿದ್ದರು ಈಗ ಅವರಿಗೆ ದ್ವಿತೀಯ ವಿವಾಹ ಮಾಡಿಕೊಳ್ಳಬೇಕೆಂದು ಅಭಿಪ್ರಾಯವು ಹುಟ್ಟಿತು. ಅದನ್ನು ಅರಿತು ಸನ್ನಿಧಿ ಕೈಂಕರ್ಯಪರರಾದ ತೂಪ್ಪಿಲ್ ವೆಂಕಟಾಚಾರ್ಯರವರು ಕನ್ಯಾನ್ವೇಷಣೆಯೊಳಿದ್ದರು ಕಾಂಚೀಪುರದಲ್ಲಿ ಅಧ್ಯಾಪಕ ಅಯ್ಯಂಗಾರ್ಯರವ ಮನೆಗೆ ಬಂದು ಸೇರಿದ್ದ ರುಕ್ಮಿಣಿ ಅಮ್ಮನವರು ಅತಿ ಸುಂದರರಾಗಿದ್ದದರಿಂದ ಅವರಿಗೆ ೫೦೦ ರೂಪಾಯಿ ಕನ್ಯಾ ಶುಲ್ಕವನ್ನು ನಾಲ್ವರಿಂದ ಸಂಪಾದಿಸಿಕೊಟ್ಟು ಸದರೀ ವೆಂಕಟಾಚಾರ್ಯರವರು ಬೆಂಗಳೂರಿಗೆ ಬಿಜಯಮಾಡಿಸಿಕೊಂಡು ಬಂದರು ಈ ರುಕ್ಮಿಣಿ ಅಮ್ಮನವರನ್ನು ಪ್ರತಿಷ್ಠೆ ಮಾಡಿಸಬೇಕೆಂದು ಯಾರು ಯಾರು ಯೋಚಿಸಿದರೂ ಯತ್ನವಾಗಲಿಲ್ಲ, ಕೊನೆಗೆ ಶ್ರೀ ಕೃಷ್ಣನು ತನ್ನ ಭಕ್ತವತ್ಸಲ ಪುತ್ರರಾದ ಫಾರೆಸ್ಟ್ ಇಲಾಖಾ ಮ್ಯಾನೇಜರ್ ನಾರಾಯಣ ಸ್ವಾಮಯ್ಯಂಗಾರ್ಯರ ಹೃದಯದಲ್ಲಿ ಪ್ರವರ್ತಿಸಿ ಅವರಿಂದ ನಿನ್ನೆ ಗುರುವಾರ ಪ್ರತಿಷ್ಠೆಯನ್ನು ಮಾಡಿಸಿಕೊಂಡು ತಮ್ಮ ದ್ವಿತೀಯ ಪತ್ನಿಯಂತೆ ಪರಿಗ್ರಹಿಸಿದರು. ಪ್ರತಿಷ್ಠಾ ಕ್ರಮವು ಅತ್ಯಂತ ಪ್ರತಿಷ್ಠೆಯಿಂದನೆಯೇ ನಡೆಸಲ್ಪಟ್ಟಿತು ಅವಸ್ಮಿನವರ ದರುಶನವು ಅತ್ಯದ್ಭುತವಾಗಿರುವುದು. ಈ ನಾರಣಸ್ವಾಮಯ್ಯಂಗಾರ್ಯ ಕುಟುಂಬವು ಅವರಿಗೆ ಪ್ರಾಪ್ತವಾಗಿರುವ ಪುತ್ರಶೋಕವನ್ನು ಮರೆತು ಅಮ್ಮನವರಿಗೆ ಚಿನ್ನದ ಕರಡಿನಲ್ಲಿ ಪೋಣಿಸಿದ ಮಾಂಗಲ್ಯವನ್ನು ಕೃಷ್ಣವರ್ಣದ ವಸ್ತ್ರ ಸಮೇತ ಅರ್ಪಿಸಿ ತಮ್ಮ ಭಕ್ತಿಯನ್ನು ತೋರ್ಪಡಿಸಿಕೊಂಡರು ಒಬ್ಬ ವೈಶ್ಯಸ್ತ್ರೀಯು ರಕ್ತವರ್ಣದ ವಸ್ತ್ರಸಮೇತ ಬೆಳ್ಳಿ ಕಂಬಿಯೊಳು ಪೋಣಿಸಿದ ಮಾಂಗಲ್ಯವನ್ನು ಮುತ್ತಿನ ಮೂಗುತಿಯನ್ನೂ ೫೦ ರೂಪಾಯಿ ದಕ್ಷಿಣೆ ಸಮೇತ ಒಪ್ಪಿಸಿ ಭಕ್ತಿಪ್ರದರ್ಶ ಮಾಡಿಕೊಂಡಳು ಯಜಮಾನರ ಮಗಳು ಸಾ|| ಅಮ್ಮಯ್ಯನು ಕೆಂಪಿನ ಪದಕ ಹ ಕಿ ದೊಡ್ಡ ಗುಂಡಿನ ಸರವನ್ನು ಅರ್ಪಿಸಿಕೊಂಡು ಭಕ್ತಿಯನ್ನು ವಿಶದಪಡಿಸಿಕೊಂಡರು. ದೇವಾಲಯದಲ್ಲಿ ಈಚೆಗೆ ನಿತ್ಯೋತ್ಸವ ಪಕ್ಷೋತ್ಸವ ಮಾಸೋತ್ಸವ ಸಂವತ್ಸರೋತ್ಸವಗಳು ನಡೆಯುವದಕ್ಕೆ ಪ್ರಾರಂಭವಾಯಿತು ಆದರೆ ರಥೋತ್ಸವವಿಲ್ಲದಿರುವದರಿಂದ ಬಹುಜನ ಭಕ್ತಾದಿಗಳ ಮನಸ್ಸಿಗೆ ಕೊರತೆ ಯುಂಟಾಗಿರುವದರಿಂದ ಅದನ್ನು ಶ್ರೀ ಕೃಷ್ಣನೇ ನಿವಾರಣೆಮಾಡಬೇಕೆಂದು ಸಕಲರೂ ಶ್ರೀ ಕೃಷ್ಣನನ್ನು ದೈನ್ಯದಿಂ ಪ್ರಾರ್ಥಿಸುವರು ನಾರಣಸ್ವಾಮಯ್ಯಂಗಾರ್ಯರು ತಮಗೆ ಪುತ್ರಶೋಕವನ್ನು ಮರೆತು ಈರೀತಿಯಾಗಿ ದೇವತಾ ಪ್ರತಿಷ್ಠಾ ರೂಪವಾದ ಸೇವೆಯನ್ನು ನಡೆಸಿದ್ದನ್ನು ನೋಡಿ ಅವರಿಗೆ ಇರುವ ಜ್ಞಾನವು ಯಾವ ಯತಿಗಳಿಗೂ ಇಲ್ಲವಲ್ಲಾ ಎಂದು ಬಹುಮಂದಿ ಸಾಧಿತರು ಪರಿಪರಿಯಾಗಿ ಕೊಂಡಾಡುತಿದ್ದರು. ಈ ದೇವಸ್ಥಾನಕ್ಕೆ ರಥೋತ್ಸವ ಸೇವೆಯೂ ಕೂಡ ಈ ನಾರಣಸ್ವಾಮಯ್ಯಂಗಾರ್ಯರ ಪ್ರೇರಣೆಯಿಂದಲೇ ನಡೆಯತಕ್ಕದ್ದಾಗಿರುತಿದೆ

ನಮ್ಮ ದೇಶೀಯರೆಲ್ಲರು, ಅತ್ರಾಪಿ ದ್ವಿಜರು ಸೂರ್ಯಚಂದ್ರೋಪರಾಗ ಕಾಲಗಳಲ್ಲಿ ಸಮುದ್ರಸ್ನಾನ ಮಾಡುವುದು ಪ್ರಾಯೇಣ ಪ್ರಸಿದ್ಧ ವಿಷಯವಾದುದಷ್ಟೆ ಅಂತ ಪುಣ್ಯಕಾಲದಲ್ಲಿ ಸಮುದ್ರಸ್ನಾನ ಮಾಡುವುದರಿಂದ ಪಾಪನಿವೃತ್ತಿ ಪೂರ್ವಕ ಪುಣ್ಯಸಂಪಾದನೆಯೆಂದು ಅನೇಕರು ತಾತ್ಪರ್ಯವಿಟ್ಟಿರುತ್ತಾರೆ ಇದು ಸಾಮಾನ್ಯಾಭಿಪ್ರಾಯವಾಗಿದ್ದರೂ ಇದರ ರಹಸ್ಯಾರ್ಥವೇನೆಂದರೆ —

೧ ಸಮುದ್ರಶಬ್ದಕ್ಕೆ ಸಂಖ್ಯಾಪರದಲ್ಲಿ ೧೦ ಎಂದರ್ಥವು ಶ್ರೋತ್ರತ್ವಕ್ಚಕ್ಷುರ್ಜಿಹ್ವಾಘ್ರಾಣಗಳೆಂಬ ಜ್ಞಾನೇಂದ್ರಿಯಗಳು ೫, ವಾಕ್ಪಾಣಿಪಾದಪಾಯೂಪಸ್ಥಗಳೆಂಬ ಕರ್ಮೇಂದ್ರಿಯಗಳು ೫. ಜ್ಞಾನೇಂದ್ರಿಯ ಕರ್ಮೇಂದ್ರಿಯಗಳಂ ಜಯಿಸಿ ಇಂದ್ರಿಯ ನಿಗ್ರಹ ಪೂರ್ವಕ ಬಂಧವಿಮುಕ್ತಿಯೇ ಸಮುದ್ರಸ್ನಾನದ ಫಲವೆಂದರಿಯುವುದು

೨ ಸಮುದ್ರಶಬ್ದಕ್ಕೆ ೭ ಎಂದು ಅರ್ಥವು, "ಲವಣೇಕ್ಷುಸುರಾಸರ್ಪಿ ದಧಿಕ್ಷೀರ ಜಲಾಸ್ತ್ರವ" ಎಂಬದಾಗಿ ಸಪ್ತ ಸಮುದ್ರಗಳು, ಇವುಗಳನ್ನೇ ಸಪ್ತ ಧಾತುಗಳೆಂಬದಾಗಿ ನುಡಿಯಬಹುದು, ಅವು ಯಾವವೆಂದರೆ, ರಸ, ರಕ್ತ, ಮಾಂಸ, ಮೇದಸ್ಸು, ಅಸ್ಥಿ, ಮಜ್ಜಾ, ಶುಕ್ಲ ಇವುಗಳಿಂದೊಡಗೂಡಿದ ಶರೀರವಂ ಪರಿಗ್ರಹಿಸಿರುವದರಿಂದ ದುಃಖ ನಿಮಿತ್ತಕವಾದ ಶರೀರ ಪರಿಗ್ರಹವಂ ಮುಂಬೈ ಮುಂದೆ ಮಾಡದಿರುವಬಗ್ಗೆ ಈಗ ಪ್ರಯತ್ನಪಡಬೇಕೆಂಬದನ್ನು ಸೂಚಿಸುತಿದೆ

೩ ಸಮುದ್ರಶಬ್ದಕ್ಕೆ ೪ ಎಂದು ಅರ್ಥವು. ಧರ್ಮಾರ್ಥ ಕಾಮಮೋಕ್ಷಗಳೆಂಬ ಇವು ಚತುರ್ವಿಧಪುರುಷಾರ್ಥ ಸಿದ್ಧರ್ಥ್ಯವೆಂದು ಸಂಕಲ್ಪಮಾಡುತ್ತಾರೆ

೪. "ಮುಕ್ತೀತು ಸಾಗರಾಸ್ಪರ್ಶೆ" ಎಂಬ ನ್ಯಾಯವನ್ನನುಸರಿಸಿ ಸಮುದ್ರಶಬ್ದಕ್ಕೆ ಮಾತೃಕುಕ್ಷಿ ಯೆಂದರ್ಥವು ತಾನು ಮಾತೃಗರ್ಭದಲ್ಲಿ ಮರಳಿ ಜನಿಸದಿರುವಬಗ್ಗೆ ಮಾಡಲ್ಪಡುವ ಕ್ರಿಯಾವಿಶೇಷವೆಂದು ತಿಳಿಯುವುದು.

೫ ಸಮುದ್ರಶಬ್ದಕ್ಕೆ ಸಂಸಾರವೆಂದರ್ಥವು, ಸಾಗರರೂಪವಾದ ಸಂಸಾರದಲ್ಲಿ ಮುಳುಗಿ ತೇಲದಿರುವಂತೆ ಅದರ ದಡವನ್ನು ಸೇರುವದಕ್ಕಾಗಿ ಮಾಡುವ ಕ್ರಿಯಾವಿಶೇಷವೇ ಸಮುದ್ರಸ್ನಾನವು ಎಂಬದಾಗಿ ಭಾವಿಸಬೇಕು. ಈ ರಹಸ್ಯಾರ್ಥವನ್ನು ತಿಳಿಯದವರು ಸಮುದ್ರಸ್ನಾನವು ನಿರರ್ಥಕವೆಂದು ಭಾವಿಸಿರುವರು :—ಸತ್ಯಸಾಧಿನಿ.

Occasional Notes.
ನೈಮಿತ್ತಿಕವಿಷಯನ್ಯಾಸ.

ಮದರಾಸ್ ಪ್ರೆಸಿಡೆನ್ಸಿಯಲ್ಲಿ ಕ್ಷಾಮವು ಪ್ರಬಲಿಸುವಂತಿದೆ. ಗತವಾರದಲ್ಲಿ ರಿಲೀಫ್ ಕಾಮಗಾರಿಗಳಲ್ಲಿ ಕೆಲಸ ಮಾಡುತಲಿದ್ದ ಕೂಲಿಯವರ ಸಂಖ್ಯೆಯು ೩,೩೬,೮೧೩ ಮಂದಿ. ಅದರ ಹಿಂದಿನವಾರದೊಳಗಿದ್ದವರು ೩,೫೮,೨೮೬ ಜನ. ಪದಾರ್ಥಗಳ ನಿರಖ್ ದಿನೇದಿನೆ ಹೆಚ್ಚುವ ಸಂಭವ ಕಂಡುಬರುತಿದೆ.

ಕಲ್ಕತ್ತೆಯಲ್ಲಿರುವ ಒಬ್ಬ ಬ್ರಾಹ್ಮಣನು ಕಟಕರು ನಡಸ್ಸಿನಕ್ಕೆ ಕೊಂಡೊಯ್ಯುತಲಿದ್ದ ಕೆಲವು ಆಕಳುಗಳನ್ನು ನೋಡಿ ಅನುತಾಪಪೀಡಿತನಾಗಿ ಅವುಗಳ ಪ್ರಾಣರಕ್ಷಣಾರ್ಥ ಪ್ರಯತ್ನಪಟ್ಟು ಮಹಾಸಂಭಕ್ತ್ಯಾ ಆಕೆಯಿಗೆ ರ ತಿಂಗಳ ಕಠಿಣಶಿಕ್ಷೆಯ ರಜಾ ವಿಧಿಸಲ್ಪಟ್ಟಿತೆಂದು ಕೇಳುತ್ತೇವೆ ಇದು ಕಾಲವಿಶೇಷವೆಂದೆಣಿಸಬೇಕು

ಜ್ಯೂಬಿಲೀ ವ.ಹೋತ್ಸವದಿನ ಇಂಡ್ಯಾ ದೇಶದಲ್ಲಿ ಸರ್ವತ್ರ ಇರುವ ಸೆರೆಮನೆ ಸ್ಟೇಷನುಗಳಲ್ಲಿ ಆದಿನದ ಗೌರವಾರ್ಥ ೩೧ ತೋಫೆಗಳು ಹಾಕಲ್ಪಡತಕ್ಕದ್ದೆಂದು ತೀರ್ಮಾನಿಸಲಾಗಿರುತ್ತದೆ. ಜ್ಯೂಬಿಲೀ ಕಾಲದಲ್ಲಿ ಇಂಡ್ಯಾ ದೇಶದ ಸೈನಿಕರಿಗೆ ತೋರಿಸಲ್ಪಡಬೇಕಾದ ರಿಯಾಯಿತಿಯ ವಿಷಯದಲ್ಲಿ ಇಂಡ್ಯಾ ಗವರ್ನಮೆಂಟಿನವರು ಸ್ಟೇಟ್ ಸೆಕ್ರೆಟರಿಯವರಿಗೆ ಪ್ರತ್ಯೇಕ ಲೇಖನ ಬರೆದಿರುವುದಾಗಿ ಕೇಳುತ್ತೇವೆ

ತಂಜಾವೂರು ಡಿಸ್ಟ್ರಿಕ್ಟಿನ ನನ್ನಿಲಂ ತಾಲ್ಲೂಕಿಗೆ ಸೇರಿದ ತಿಟ್ಟಚ್ಚೇರಿ ಎಂಬ ಗ್ರಾಮದಲ್ಲಿ ಹಿಂದೂಗಳಿಗೂ ಮುಸಲ್ಮಾನರಿಗೂ ದ್ವಂದ್ವಯುದ್ಧಗಳಾಗಿ ಮುಸಲ್ಮಾನರು ಹಿಂದೂಗಳ ಮನೆಗಳಿಗೆ ಬೆಂಕಿಯಿಟ್ಟು ಭಸ್ಮಮಾಡಿ ಸಂತೃಪ್ತರಾದರೆಂದು ಮದರಾಸ್ ಪತ್ರಿಕೆಯಿಂದ ತಿಳಿಸುತಿದೆ. ಆ ಜನ್ಮಸಿದ್ಧವಾದ ಇವರ ಮಾತ್ಸರ್ಯವು ಪ್ರಳಯಾಂತದವರೆಗೂ ನಿವೃತ್ತಿಯಾಗುವದೋ ಇಲ್ಲವೋ ತಿಳಿಯದು.

ಈ ತಿಂಗಳ ೩ನೇ ತಾರೀಖಿನಲ್ಲಿ ಕಲ್ಕತ್ತೆಯಲ್ಲಿರುವ ಪ್ರಮುಖರಾದ ನೆಟಿವ್ ದೊಡ್ಡಮನುಷ್ಯರನೇಕರು ಸಭೆ ಸೇರಿ ಜ್ಯೂಬಿಲಿ ಮಹೋತ್ಸವ ಜ್ಞಾಪಕಾರ್ಥ ಮಾಡಲ್ಪಡಬೇಕಾದ ಏರ್ಪಾಡುಗಳಂ ಕುರಿತು ಚರ್ಚಿಸಿ, ೧೮೫೮ನೇ ಇಸವಿಯಲ್ಲಿ ಶ್ರೀಮನ್ಮಹಾರಾಣಿಯವರು ದಯಪಾಲಿಸಿದ ಪ್ರಸಿದ್ಧ ಪತ್ರಿಕೆಯಲ್ಲಿ ಅಪ್ಪಣೆಕೊಡಿಸಿ ವಾಗ್ದಾನ ಮಾಡಿರುವ ಅಧಿಕ ಸ್ವಾತಂತ್ರ್ಯಗಳನ್ನು ಪಿತ್ರದೇಶೀಯರಿಗೆ ಕೃಪೆಗೈಯಲಿಕ್ಕೆ ಇದು ಉಚಿತ ಸಂದರ್ಭವೆಂದು ಪ್ರಾರ್ಥಿಸಿ ಒಂದು ವಿಜ್ಞಾಪನ ಪತ್ರಿಕೆಯನ್ನು ಮಹಾರಾಜ್ಞೀಯವರ ಸನ್ನಿಧಿಯಲ್ಲಿ ಅರ್ಪಿಸಬೇಕೆಂದು ತೀರ್ಮಾನಿಸಿದರು.

ಕಳೆದ ತಿಂಗಳ ೩೧ನೇ ತಾರೀಖ್ ಸೋಮವಾರದದಿನ ರಾತ್ರಿ ಸೋಲಾಪೂರ್ ಡಿಸ್ಟ್ರಿಕ್ಟಿಗೆ ಸೇರಿದ ಬಾರ್ಸಿ ಯೆಂಬ ಪ್ರದೇಶದಲ್ಲಿ ೮೦–೯೦ ಜನ ದರೋಡೆಕಳ್ಳರು ಲೈಟ್‌ರೈಲ್ವೇ ಕಂಪೆನಿಯ ಏಜಂಟರ ಆಫೀಸಿನಲ್ಲಿ ಪ್ರವೇಶಿಸಿ ಅಲ್ಲಿದ್ದ ಮೂರು ಕಬ್ಬಿಣದ ಪೆಟ್ಟಿಗೆಗಳ ಪೈಕಿ ಸಾಗಿಸಲಿಕ್ಕೆ ಅನುಕೂಲವಾದ ಒಂದೇ ಪೆಟ್ಟಿಗೆಯನ್ನು ತೆಗೆದುಕೊಂಡು ಹೋದರು. ಅನಂತರ ಅಸಿಸ್ಟಂಟ್ ಟ್ರಾಫಿಕ್ ಸೂಪರಿಂಟೆಂಡೆಂಟರ ಆಫೀಸಿನಲ್ಲಿ ನುಗ್ಗಿ ಅಲ್ಲಿನ ಒಂದು ಭಾರೀ ಪೆಟ್ಟಿಗೆಯನ್ನು ಕಳವು ಮಾಡಿಕೊಂಡು ಹೋದರು ಏತೇನ ಈ ಎರಡು ಕಳವುಗಳು ಏಕಕಾಲದಲ್ಲಿ ೩೫೦೦೦ ಪ್ರಜಾಸಂಖ್ಯೆಯುಳ್ಳ ಪಟ್ಟಣಕ್ಕೆ ಅರ್ಧಮೈಲ್ ಸಮೀಪದಲ್ಲಿ ನಡೆದು ಪತ್ತೆಯಾಗದೆ ಹೋದಬಗ್ಗೆ ಬಹಳ ಆಶ್ಚರ್ಯಪಡಬೇಕಾಗಿದೆ.

ಬರುವ ವಿಕಾರಿಸಂವತ್ಸರಾಂತದೊಳು ಯಾವವು ಯೆಂತು ವಿಕಾರವನ್ನೈದುವುದೋ ಯೆಂಬ ಅನುಮಾನದೊಡನೆಯೂ, ಬಡ್ಡಿ ವ್ಯಾಪಾರ ಮಾಡಿ ಜೀವಿಸುವ ವರ್ತಕರಿಗೆ ಕಾಲವು ಬಹಳ ವಿರುದ್ಧವಾಗಿರುವುದೆಂದು ಜ್ಯೋತಿಷ್ಕರು ತಿಳಿಸಿರುವವರಿಂದ ಆ ಭಾವನೆಯೊಡನೆಯೂ, ಪ್ರಮುಖರಾದ ವರ್ತಕರನೇಕರು ನಗದ್ ಲೇವಾದೇವಿ ಅಡಳಿತಗಳನ್ನೆಲ್ಲ ಮೌಕೂಫ್ ಮಾಡಿ, ಇದುವರೆಗೆ ತಾವು ಅನ್ಯರಿಗೆ ಕೊಟ್ಟಿರುವ ಸಾಲಗಳನ್ನು ಖುದಿತವಾಗಿ ವಸೂಲ್ಮಾಡುವದಕ್ಕೆ ಪ್ರಯತ್ನಪಡುತಲಿದಾರೆಂದು ಕೇಳುತ್ತೇವೆ. ಇವರ ಪ್ರಕೃತಿಯು ವಿಕೃತಿಯಂ ಹೊಂದುವಾಗ ಆ ಪ್ರಕೃತಿಯೊಂದೇ ಅನುವರ್ತಿಸುವುದೆಂಬುದಂ ಸದರೀ ಸುಕೃತಶಾಲಿಗಳು ಸತ್ಕೃತ್ಯ ದರು ಆಲೋಚಿಸದಿರಲಾರರೆಂದೆಣಿಸುತ್ತೇವೆ

ಈ ತಿಂಗಳ ೨೧–೨೨ನೇ ತಾರೀಖ್‌ಗಳಲ್ಲಿ ಇಂಡ್ಯಾ ದೇಶದೊಳು ಸರ್ವತ್ರ ಆಚರಿಸಲ್ಪಡುವ ಶ್ರೀ ಮನ್ಮಹಾರಾಣೀ ವಿಕ್ಟೋರಿಯಾ ಚಕ್ರವರ್ತಿನೀಯವರ ಷಷ್ಟ್ಯಬ್ದಪೂರ್ತಿವತ್ಸರಪಾಲನೋತ್ಸವ ಪ್ರವರ್ತಕವಾದ ಜ್ಯೂಬಿಲಿ ಮಹೋತ್ಸವಾಂಗವಾಗಿ ಇಂಡ್ಯಾದೇಶ ಜೈಲುಖಾನೆಗಳಲ್ಲಿರುವ ಖೈದಿಗಳ ಪೈಕಿ ನೂರಕ್ಕೆ ೧೫ ಮಂದಿಯ ಬಿಡುಗಡೆ ಖುಲಾಸೆ ಮಾಡಲ್ಪಡುವದಲ್ಲದೆ ಯಾವಜ್ಜೀವ ಮತ್ತು ದೀರ್ಘಕಾಲಿಕವಾದ ಸಜಾ ಅನುಭವಿಸುತ್ತ ಯೋಗ್ಯರಾಗಿಯೂ ವಿಧೇಯರಾಗಿಯೂ ವರ್ತಿಸುತಲಿರುವ ಅಪರಾಧಿಗಳ ಸಜಾ ಕಾಲದಲ್ಲಿ ಒಂದುಭಾಗ ಕಡಮೆ ಮಾಡಬೇಕೆಂದು ನಿರ್ಣಯವಾಗಿರುವಂತೆ ಕೇಳುತ್ತೇವೆ. ಕ್ಷಾಮ ಪೀಡಿತರಾಗಿ ಪ್ರಜೆಗಳು ಕಷ್ಟಪಡುತ್ತಿರುವ ಈ ಕಾಲದಲ್ಲಿ ಖೈದಿಗಳನ್ನು ಬಿಡುವದರಿಂದುಂಟಾಗಬಹುದಾದ ಭವಿಷ್ಯತ್ಫಲಗಳು ಕೇವಲ ಅನುತಾಪಕರವಾಗದೆ ಹೋಗಲಾರದು.

ಇಂಡ್ಯಾದೇಶದ ಕ್ಷಾಮನಿವಾರಣ ಫಂಡಿಗಾಗಿ ಅದ್ಯಾಪಿ ಅನ್ಯದೇಶಗಳಿಂದ ಅಪರಿಮಿತವಾಗಿ ಧನ ಸಹಾಯ ಮಾಡುತಲಿರುವ ವಿಷಯವು ನಮಗೆ ಅಮಿತವಾದ ಆನಂದವನ್ನುಂಟುಮಾಡತಕ್ಕದ್ದಾಗಿರುತಿದೆ. ರಷ್ಯಾ ರಾಜಧಾನಿಯಾದ ಸೆಂಟ್ ಪೀಟರ್ಸ್‌ಬರ್ಗ್ ಪಟ್ಟಣದಿಂದ ೨೩,೪೮೪ ರೂಪಾಯಿಗಳು ಆಚೆ ಶುಕ್ರವಾರದದಿನ ಕಳುಹಿಸಲ್ಪಟ್ಟವು. ಇದುವರೆಗೆ ಸದರೀ ಸಂಸ್ಥಾನದಿಂದ ಒಟ್ಟು ೬೮೯೩ ರೂಪಾಯಿಗಳು ಕಳುಹಿಸಲ್ಪಟ್ಟವು ಮಾರಿಷಸ್ ಎಂಬ ದ್ವೀಪವಾಸಿಗಳು ಎರಡನೇ ದಫಾ ಕಳುಹಿಸಿದ ೬,೦೦೦ ರೂಪಾಯಿಗಳು ಸೇರಿ ೧೩,೦೦೦ ರೂಪಾಯಿಗಳನ್ನು ಕಳುಹಿಸಿದರು. ನೈಯಾಂ ರಾಜ್ಯದಿಂದ ೫೯೫೩ ರೂಪಾಯಿಗಳು ಬಂದಿರುತಿವೆ. ಇದುವರೆಗೆ ಒಟ್ಟು ಒಂದುಕೋಟಿ ಇಪ್ಪತ್ತೊಂದುಲಕ್ಷ ಎಪ್ಪತ್ತೆರಡು ಸಾವಿರದನುವತ್ತು ರೂಪಾಯಿಗಳು ಚಂದಾ ಮೂಲಕ ಜಮೆಬಂದಿರುವಂತೆ ತಿಳಿಯಬರುತಿದೆ

ಈ ತಿಂಗಳ ೨೦ನೇ ತಾರೀಖ್ ಮೊದಲು ಶ್ರೀ ವಿಕ್ಟೋರಿಯಾ ಚಕ್ರವರ್ತಿನೀಯವರ ಜ್ಯೂಬಿಲಿ ಮಹೋತ್ಸವ ಲಾಂಛನ ರೂಪವಾಗಿ ಮದರಾಸಿನಲ್ಲಿ ಸಿದ್ಧಾಂತ ದೀಪಿಕೆ ಎಂಬ ಆಂಗ್ಲೇಯ ದ್ರಾವಿಡ ಭಾಷಾ ನಿಬದ್ಧವಾದ ಮಾಸ ಪತ್ರಿಕೆಯೊಂದು ಮತಸಿದ್ಧಾಂತ ಶಾಸ್ತ್ರ ಭ ಷಾವಿಷಯ ವಿಚಾರೋಪ್ದಿಷ್ಟವಾದುದಾಗಿ ಪ್ರಕಟಿಸಲ್ಪಡುವದೆಂತಲೂ, ಇದಕ್ಕೆ ಉಭಯಭಾಷಾ ಪ್ರವೀಣರಾದ ಪಂಡಿತರನೇಕರು ಲೇಖಕರಾಗಿ ಏರ್ಪಟ್ಟು ಸಹಕರಿಸುವರೆಂತಲೂ, ಇದರ ಪ್ರಥಮ ಸಂಚಿಕೆಯಲ್ಲಿ ಉಪಯುಕ್ತಗಳಾದ ಬಹ್ವಂಶಗಳು ವಿಚಾರ ಮಾಡಲ್ಪಡುವವೆಂತಲೂ, ಇದು ೪೮ ಪುಟಗಳುಳ್ಳದ್ದಾಗಿರುವುದೆಂತಲೂ, ಇದರ ವಾರ್ಷಿಕ ಮೌಲ್ಯವು ಆರು ರೂಪಾಯಿಗಳೆಂತಲೂ ತಿಳಿಯಬರತಿವೆ ಸನಾತನವಿದ್ಯಾ ವ್ಯಾಸಂಗ ಪ್ರಚಾರದೊಳು ಜನರಿಗೆ ಕುತೂಹಲವು ವೃದ್ಧಿಯಾಗುತ ಬರುವದು ಹ್ಯಾಗೆ ಶ್ರೇಯಸ್ಕರವೋ ತದ್ವತ್ ತದನುಷ್ಠಾನದಲ್ಲೂ ಪ್ರವೃತ್ತಿಯೂ ಉತ್ಸಾಹವೂ ಹುಟ್ಟಿದರೆ ಬಹಳ ಪ್ರಯೋಜನಕರವಾಗಿಯೂ ಶ್ರೇಯಸ್ಕರವಾಗಿಯೂ, ಉದ್ದಿಷ್ಟ ಫಲಪ್ರದಾಯಕವಾಗಿಯೂ ಇರುವುದು. ಇಲ್ಲದೊಡೆ ಈ ಪ್ರಯತ್ನವು ಅರ್ಥಾರ್ಜನೋಪಾಯವೆನಿಸ ಗಣಿಸಲ್ಪಟ್ಟು, ಡಾಂಭಿಕತ್ವದೊಳು ಪರ್ಯವಸಾನವನ್ನೈದುವದರಲ್ಲೇನೂ ಸಂದೇಹವಿರಲಾರದು.

LOCAL AND PROVINCIAL NEWS.
ಬಳದೇಶಮತ್ತುತಾಲ್ಲೂಕ್‌ಜಾತ್‌ವೃತ್ತಾಂತಗಳು.

ಇದುವರಿಗೂ ರಜಾದಮೇಲಿದ್ದ ಡಿಸ್ಟ್ರಿಕ್ಟ್ ಸೆರ್ಷನ್‌ಜಡ್ಜಿಯಾದ ಮೆ॥ ನರಹರಿರಾಯರವರು ಕ್ಷಿಪ್ರದಲ್ಲಿಯೇ ತಮ್ಮ ಕೆಲಸದ ಚಾರ್ಜನ್ನು ವಹಿಸುವರೆಂದು ತಿಳಿಯಬರುತಿದೆ.

ಘನವಂತರಾದ ಶ್ರೀಮನ್ಮಹಾರಾಣೀ ರೀಜಂಟರವರೂ ಶ್ರೀಮನ್ಮಹಾರಾಜರವರೂ ತಮ್ಮ ಪರಿಜನರೊಡನೆ ಈ ತಿಂಗಳ ೧೯ನೇ ತಾರೀಖ್ ಸಾಯಂಕಾಲ ೫॥ ಘಂಟೆಗೆ ಸ್ಪೆಷಲ್‌ಟ್ರೈನಿನಲ್ಲಿ ಈಪ್ರೂರಿಗೆ ದಯಮಾಡಿದರು.

ಶ್ರೀ ಶಿವಗಂಗಾ ಸ್ವಾಮಿಗಳವರು ಚಾತುರ್ಮಾಸ್ಯ ಸಂಕಲ್ಪವನ್ನು ಕಾನಕಾನಹಳ್ಳಿಯಲ್ಲಿ ನಡಿಸುವರಂತೆ. ಈ ಸ್ವಾಮಿಗಳು ಈಗ ಬಹಳ ವಿದ್ವಾಂಸರಾಗಿ ಉಪನ್ಯಾಸಾದಿಗಳನ್ನು ಮಾಡುವ ಷ್ಟು ಶಕ್ತರಾಗಿರುವರೆಂದು ಕೇಳಿ ಸಂತೋಷಿಸುತ್ತೇವೆ.

ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿಕಮಿಷನರಾದ ವಿ. ಎನ್. ನರಸಿಂಹಯ್ಯಂಗಾರ್ಯರು ಮೈಸೂರು ಅರಮನೆ ಕಂಟ್ರೋಲರ್ ಕೆಲಸದಚಾರ್ಜನ್ನು ಮಾಹೇಯಾನಾ ೧ ೨೦೦ ರೂಪಾಯಿ ಸಂಬಳ ನಿಶಿ ಬರುವ ತಿಂಗಳು ಗುರ್ರೆಲಾಗಾಯಿತು ವಹಿಸಿಕೊಳ್ಳುವರೆಂದು ತಿಳಿಯಬರುತ್ತ.

ಬೌರಿಂಗ್‌ಪೇಟೆ ಸ್ಟೇಷನಿನಲ್ಲಿ ಚಿನ್ನದಗಣಿ ರೈಲ್ವೆಯು ಒಂದು ಬ್ರಾಂಚ್ ಒಡೆದಿದೆ ಬೌರಿಂಗ್‌ಪೇಟೆಯು ಊರಿನಿಂದ ಸ್ಟೇಷನಿಗೆ ಬರತಕ್ಕವರು ರೈಲ್ವೆಕಂಬಿಯನ್ನು ಹಾದುಬರಬೇಕಾಗಿತ್ತು. ಇದರಿಂದ ಒಂದೆರಡು ಅಪಾಯ ಸಂಭವಿಸಿತು. ಅದಕ್ಕಾಗಿ ಈಗ ಕಬ್ಬಿಣದಲ್ಲಿ ಓವರ್‌ಬ್ರಿಡ್ಜ್ ತಯಾರಿಸ್ತಿದ್ದುತಲಿದಾರೆ.

ಈಪ್ರೂರು ಡೆಪ್ಯುಟಿಕಮಿಷನರ್ ಕೆಲಸಕ್ಕೆ ಕೋಲಾರದಿಂದ ಮೆ॥ ರಂಗಸ್ವಾಮಯ್ಯಂಗಾರ್ಯರು ಬರುವರೆಂತ ಕೆಲವರೂ, ಶಿವಮೊಗ್ಗೆಯಿಂದ ಮೆ॥ ವೆಂಕಟವರದಯ್ಯಂಗಾರ್ಯರು ಬರುವರೆಂದು ಕೆಲವರು, ಮತ್ತೆಕೆಲವರು ಮೆ॥ ಎಚ್ ವಿ. ನಂಜುಂಡಯ್ಯ, ಎಂ ಎ ಎಂ. ಎಲ್. ಯವರು ಬರುವರೆಂತಲೂ ಬಗೆಬಗೆಯಾಗಿ ಆಡಿಕೊಳ್ಳುವರು. ಪರಂತು ನಿಜಸ್ಥಿತಿಯು ವ್ಯಕ್ತಪಡಲಿಲ್ಲವು.

ಮಹಾದೇವಪಟ್ಟಣದ ಕಡೂರು ೩೦ನೇ ತಾರೀಖು ಗುರುವಾರ ಶ್ರೀ ಶಿವಗಂಗಾ ಸ್ವಾಮಿಗಳವರು ಚಂಗಳೂರಿಗೆ ಬಿಜಯಮಾಡಿಸುವರು. ಅದಿಕಾರಿಗಳೆಲ್ಲ ಎದುಗೊಂಡು ಹೋಗಿ ಅಪ್ಪಣೆಯಾಸದೆ ತನೆ ಕರಕೊಂಡು ಬಂದು ಶ್ರೀಗರ್ಜಮ್ಮನವರ ಸತ್ರದಲ್ಲಿ ಇಳಿಸುವಂತೆ ಅರಿಯತ್ತೇವೆ. ಇವರು ಇಲ್ಲಿಂದ ಕಾನಕಾನಹಳ್ಳಿಗೆ ದಯಮಾಡಿಸಿ ಅಲ್ಲಿ ಚಾತುರ್ಮಾಸ ಸಂಕಲ್ಪವನ್ನು ಬೆಳಸುವಂತೆ ನಿಶ್ಚಯವಾಗಿದೆ.

ಈಪ್ರೂರು ದ ಬ ನೆ ಪೇಟೆಯಲ್ಲಿರುವ ಮೈಸೂರು ಸುಬ್ಬಮ್ಮನೆಂಬಾಕೆಯು ಒಂದು ವೈದ್ಯಶಾಲೆಯನ್ನು ಇಟ್ಟುಕೊಂಡಿರುವಳು. ಅದಕ್ಕೆ ಸಹಾಯ ದ್ರವ್ಯವನ್ನು ಮಾಸಾಶನ ರೂಪವಾಗಿ ಕೊಡಿಸಬೇಕೆಂತಲೂ, ಅದಕ್ಕೆ “ರೀಜಂಟ ವೈದ್ಯಶಾಲೆ” ಎಂದು ಹೆಸರಿಡುವದಕ್ಕೆ ಅಪ್ಪಣೆಕೊಡಬೇಕೆಂತಲೂ, ನಮ್ಮ ಮಹಾರಾಣಿ ರೀಜಂಟರವರಿಗೆ ಅರ್ಜಿ ಬರೆದುಕೊಂಡಿದ್ದರಮೇಲೆ ಮಹಾರಾಣಿಯವರು ಆಕೆಯವರನ್ನು ಕರೆಸಿಕೊಂಡು ಸಂಗತಿಯನ್ನೆಲ್ಲ ವಿಚಾರಿಸಿ ಈಕೆಯ ಅರ್ಜಿಯನ್ನು ವಿಮರ್ಶೆಯ ಬಗ್ಗೆ ಬೆಂಗಳೂರು ಮ್ಯುನಿಸಿಪಾಲಿಟಿಗೆ ಕಳುಹಿಸಿರುವಂತೆಯೂ ಕೇಳುತ್ತೇವೆ ಇದರಿಂದ ಮಹಾರಾಣೀ ರೀಜಂಟರವರು ವಿಷಯಗಳನ್ನು ವಿಚಾರಿಸಿ ವ್ಯವಸ್ಥೆ ಮಾಡುವರೆಂದು ಗೊತ್ತಾಗುತಿದೆ. ಇದು ಪ್ರಜೆಗಳಭಾಗ್ಯೋದಯವೇ ಸರಿ.

ಶ್ರೀ ಶಿವಗಂಗಾ ಶ್ರೀ ಸುಬ್ರಹ್ಮಣ್ಯಾಭಿನವ ಸಚ್ಚಿದಾನಂದ ಭಾರತಿ ಸ್ವಾಮಿಗಳವರ ದಿವ್ಯಾಜ್ಞಾಪರಿಶೋಭಿತವಾಗಿ ಚೆನ್ನಪುರಿ ಆರ್ಯಮತ ಸಂಘದವರಿಂದುಪಕ್ರಮಿಸಲ್ಪಟ್ಟ ಸದ್ವಸಾಧಿನಿ ಯೆಂಬ ಆ ಧ್ರಭಾಷಾನಿಬದ್ಧವಾದ ಮಾಸಪತ್ರಿಕೆಯ ದ್ವಿತೀಯ ಸಂಚಿಕೆಯು ನಮಗೆ ಕಳುಹಿಸಲ್ಪಟ್ಟಿತು ಪ್ರಸಕ್ತ ಸಂಚಿಕೆಯಲ್ಲಿ ತತ್ವಾರ್ಥದೀಪಿಕೆ, ಭೂಭಗೋಳದೀಪಿಕೆ, ದತ್ತಾತ್ರೇಯ ಶತಕ, ಮಂತ್ರಮಹಿಮೆ, ವಿವೇಕಾನಂದ ಸ್ವಾಮಿಗಳವರ ಉಪನ್ಯಾಸಗಳು, ಪದ್ಮಾವತೀಪರಿಣಯ ವಗೈರೆ ವಿಷಯಗಳು ವಿಚಾರ ಮಾಡಲ್ಪಟ್ಟಿರುತಿವೆ. ಪ್ರಸಕ್ತ ಮಾಸಪತ್ರಿಕೆಯನ್ನು ಕರ್ಣಾಟಕ ಭಾಷೆಯಲ್ಲಿ ಪ್ರಕಟಿಸಬೇಕೆಂಬ ಅಭಿಪ್ರಾಯವು ಶ್ರೀಸ್ವಾಮಿಗಳವರಿಗೆ ಇರುವದಾಗಿಯೂ, ಕ್ಷಿಪ್ರದಲ್ಲಿ ಅಂತ ಪತ್ರಿಕೆಯೊಂದು ಲೋಕೋಪಕಾರಾರ್ಥ ಪ್ರಕಟಿಸಲ್ಪಡುವದೆಂತಲೂ ತಿಳಿಯಬರುತಿದೆ. ಇದು ಭಾಷಾ ಶೈಲಿ ವಿಷಯ ವಿನ್ಯಾಸಾದಿಗಳಿಂದ ಶ್ಲಾಘ್ಯವಾಗಿರುತಿದೆ.

THE MYSORE GAZETTE.
ಮೈಸೂರು ಗೆಜೆಟ್.

ಗುರುವಾರ, ತಾ॥ ೧೭ನೇ ಜೂನ್ ೧೮೯೭.
ಮೈಸೂರ್ ಗವರ್ನಮೆಂಟಿನವರಿಂದ ಹೊರಡಿಸಲಾದ ಇಸ್ತಿಹಾರನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖ್ ೧೫ನೇ ಜೂನ್ ೧೮೯೭.

ನಂ॥ ೧೪೩೫೧–ಜ. ೧೫೧೦,—ಬೆಂಗಳೂರು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟ್ ಮೆ॥ ಡಿ. ದೇವರಾಜ ಅರಸಿನವರಿಗೆ ೧೮೯೭ನೇ ಮಾರ್ಚಿ ೧೭ನೇ ಮಾಹೆವಾರು ೧೦೬೫೫–ಜ. ೧೦೭ನೇ ನಂಬರ್ ಗವರ್ನಮೆಂಟ್ ಇಸ್ತಿಹಾರನಾಮೆಯಲ್ಲಿ ಕೊಟ್ಟಿದ್ದ ತಲಬಿಲ್ಲದ ರಜಾವನ್ನು ೧೮೯೭ನೇ ಜೂನ್ ಗುರ್ರೇಲಾಗಾಯಿತು ಪೂರ್ವಕ್ತ ಮೂರು ತಿಂಗಳುಗಳವರಿಗೆ ಜಾಸ್ತಿ ಮಾಡಲ್ಪಟ್ಟಿರುತ್ತೆ.

ತಾ॥ ೧೦ನೇ ಜೂನ್ ೧೮೯೭

ನಂ॥ ೧೮೯೭೭ ಫೈ ೪೪–೯೬,—ಮಾಲೂರು ತಾಲ್ಲೂಕು ಅಮಲ್ದಾರ ವಿ ಎನ್. ಗೋಪಾಲರಾಯರಿಗೆ ಕೊಟ್ಟಿದ್ದ ಹದಿನೈದು ದಿನಗಳ ಕ್ಯಾಷುಯಲ್ ರಜಾ ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೮೪ನೇ ಆರ್ಟಿಕಲ್ ಅನುಸರಿಸಿ ಪ್ರಿವಿಲೇಜ್ ರಜಾಕ್ಕೆ ಬದಲಾಯಿಸಲ್ಪಟ್ಟು ಮತ್ತು ಹದಿನೈದು ದಿನಗಳು ಜಾಸ್ತಿ ಮಾಡಲ್ಪಟ್ಟಿರುತ್ತೆ.

ಕೋಲಾರ ಡಿಸ್ಟ್ರಿಕ್ಟ್ ಟ್ರೆಜರಿಯ ಟ್ರೆಜರ್ ಗುಮಾಸ್ತ ನಾಮುಂಡಯ್ಯರು ಸದರೀ ವಿ. ಎನ್. ಗೋಪಾಲರಾಯರು ರಜಾದಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಮಾಲೂರು ತಾಲ್ಲೂಕಿನ ಅಮಲ್ದಾರ್ ನ ೩ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತಾಕೀತು ಮಾಡಲ್ಪಟ್ಟಿರುತ್ತಾರೆ.

ತಾ॥ ೧೫ನೇ ಜೂನ್ ೧೮೯೭

ನಂ॥ ೧೮೯೭೦–ಫೈ ೪೯–೯೬,—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೮೪ನೇ ಆರ್ಟಿಕಲ್ ಅನುಸರಿಸಿ, ಕಡೂರು ಡಿಸ್ಟ್ರಿಕ್ಟ್ ಫಾರೆಸ್ಟುಗಳ ಅಸಿಸ್ಟಂಟ್ ಕನ್ಸರ್ವೇಟರ್ ಮೆ॥ ಬಿ. ಹೀರಾಸಿಂಗ್ ರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯಿತು ಒಂದೂವರೆ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ

ಕಡೂರು ಡಿಸ್ಟ್ರಿಕ್ಟಿನಲ್ಲಿ ಸ್ಪೆಷಲ್ ಕೆಲಸದ ಮೇಲಿರುವ ಫಾರೆಸ್ಟುಗಳ ಅಸಿಸ್ಟಂಟ್ ಕನ್ಸರ್ವೇಟರ್ ಮೆ॥ ವೈ. ಸೀತಾರಾಮಯ್ಯನವರು ತಮ್ಮ ಕೆಲಸಗಳೊಂದಿಗೆ ಸದರೀ ಮೆ॥ ಬಿ ಹೀರಾಸಿಂಗ್‌ರವರು ರಜಾ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನ ಚಾರ್ಜಿನಲ್ಲಿರತಕ್ಕದ್ದು

ನಂ॥ ೧೮೯೭೪–ಫೈ. ೧–೯೫,—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೮೪ನೇ ಆರ್ಟಿಕಲ್ ಅನುಸರಿಸಿ, ಮೈಸೂರ್ ಡಿಸ್ಟ್ರಿಕ್ಟ್ ಫಾರೆಸ್ಟುಗಳ ಸಬ್ ಅಸಿಸ್ಟಂಟ್ ಕನ್ಸರ್ವೇಟರ್ ಮೆ॥ ಎ. ಜೆ ಆರ್ ಧಿಎಲ್ಡ್‌ರವರಿಗೆ ೧೮೯೭ನೇ ಮೇ ೩ನೇ ಮಾಹೆವಾರು ೯೭೦೬ ಫೈ ೧–೯೫ನೇ ನಂಬರು ಗವರ್ನಮೆಂಟ್ ಇಸ್ತಿಹಾರನಾಮೆಯಲ್ಲಿ ಕೊಟ್ಟಿದ್ದ ಹದಿನೈದು ದಿನಗಳ ಕ್ಯಾಷುಯಲ್ ರಜಾ ಪ್ರಿವಿಲೇಜ್ ರಜಾಕ್ಕೆ ಬದಲಾಯಿಸಲ್ಪಟ್ಟು ಅದಕ್ಕೆ ಜಾಸ್ತಿಯಾಗಿ ಇನ್ನೂ ಒಂದೂವರೆ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ಫಾರೆಸ್ಟುಗಳ ಅಸಿಸ್ಟಂಟ್ ಕನ್ಸರ್ವೇಟರ್ ಮೆ॥ ಜಿ. ಶ್ರೀನಿವಾಸರಾಯರು ತಮ್ಮ ಕಾಕನಕೋಟೆ ಖೇಡಾ ಆಕ್ಟಿಂಗ್ ರೇಂಜ್ ಆಫೀಸರ್ ಕೆಲಸಗಳೊಂದಿಗೆ ಸದರೀ ಮೆ॥ ಧಿಎಲ್ಡ್‌ರವರು ರಜಾಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸರಗೂರು ರೇಂಜಿನ ಚಾರ್ಜಿನಲ್ಲಿರತಕ್ಕದ್ದು

ತಾ॥ ೧೫ನೇ ಜೂನ್ ೧೮೯೭

ನಂ॥ ೧೮೯೭೬–ಫೈ. ೧೦–೯೫, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೮೪ನೇ ಆರ್ಟಿಕಲ್ ಅನುಸರಿಸಿ ಬೆಂಗಳೂರು ಡಿಸ್ಟ್ರಿಕ್ಟ್ ಫಾರೆಸ್ಟುಗಳ ಅಸಿಸ್ಟಂಟ್ ಕನ್ಸರ್ವೇಟರ್ ಮೆ॥ ಎಸ್ ಮುತ್ತಪ್ಪನವರಿಗೆ ೧೮೯೭ನೇ ಜೂನ್ ೧೦ನೇ ತಾರೀಖು ಲಾಗಾಯಿತು ಯಾ ಚಾರ್ಜ್ ಒಪ್ಪಿಸಿದ ತಾರೀಖಿನಾರಭ್ಯ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ಸ್ಪೆಷಲ್ ಕೆಲಸದ ಮೇಲಿರುವ ಫಾರೆಸ್ಟುಗಳ ಅಸಿಸ್ಟಂಟ್ ಕನ್ಸರ್ವೇಟರ್ ಮೆ॥ ಜೆ ಈ ರಿಕೆಟ್ಸ್‌ರವರು ತಮ್ಮ ಕೆಲಸಗಳೊಂದಿಗೆ ಸದರೀ ಮೆ॥ ಮುತ್ತಪ್ಪನವರು ರಜಾಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಬೆಂಗಳೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸ ಚಾರ್ಜಿನಲ್ಲಿರತಕ್ಕದ್ದು.

SUMMARY OF NEWS.
ವೃತ್ತಾಂತ ಸಂಗ್ರಹವು.

ಇಂಗ್ಲಾಂಡಿನಲ್ಲಿ ಪ್ರತಿವಾರಕ್ಕೆ ೫ ಸಾವಿರ ಲಗ್ನಗಳಾಗುತ್ತವೆ.

ಮಿಸಿಸಿಪಿ ನದಿಗೆ ಮಹಾಪ್ರವಾಹ ಬಂದದರಿಂದ ಅದರ ಕೆರೆಯಲ್ಲಿ ೫ ಕೋಟಿ ಡಾಲರಿನ ಹತ್ತಿಯ ಲುಕ್ಸಾನ್ ಆಯಿತು.

ಸರ್ಕಾರದಿಂದ ಸಹಾಯಹೊಂದುವ ಕ್ಷಾಮಪೀಡಿತರ ಸಂಖ್ಯೆಯು ಎಲ್ಲ ಕಡೆಯಲ್ಲಿ ಕೂಡಿ ೪೦ ಲಕ್ಷ ವಿಸ್ತರಿಸಿರುವಿತು ಇನ್ನೂ ಈ ಸಂಖ್ಯೆಯು ಏರುತ್ತಾ ಬೆಳೆಯುತ ನಡಿದಿದೆ.

ಗ್ರೀಸ್‌ದೇಶದ ಪ್ರಜೆಗಳು ತಮ್ಮ ಅರಸರನ್ನು ತೆಗೆದುಹಾಕಿ ಪ್ರಜಾಸತ್ತಾತ್ಮಕ ಅರಭಾರವನ್ನು ನೆಲೆಗೊಳಿಸುವ ಪ್ರಯತ್ನದಲ್ಲಿರುವರು. ಅರಸನು ಅರಮನೆಯಲ್ಲಿ ಮುಚ್ಚಿಕೊಂಡು ಕೂತಿರುವನು.

ವಿಲಾಯತಿಯಲ್ಲಿ ಒಬ್ಬ ಬಸ್ಸಿಯ ಮಗನು ಬಾಡಿಗೆ ಹೊಡೆಯುವ ಕೆಲಸ ಮಾಡುತಿರುತ್ತಾನೆ. ಇನ್ನೊಬ್ಬ ಮಗನು ಎಮ್. ಎ. ಪದವೀಧರನಾಗಿದ್ದು ಅವನೂ ಇದೇ ಉದ್ಯೋಗ ಮಾಡುತ್ತಾನೆ.

ಯೂರೋಪಿನ ಮುಖ್ಯ ಸರ್ಕಾರಗಳು ಮಧ್ಯಸ್ಥಿಕೆ ವಹಿಸಿ ಹೇಳಿದ ಷರತ್ತುಗಳಿಗೆ ತುರ್ಕೀ ಸರ್ಕಾರವೂ ಗ್ರೀಸ್ ಸರ್ಕಾರವೂ ಒಪ್ಪಿಕೊಂಡಿರುವುದಿಲ್ಲ ನಿನ್ನೆ ತಾರೀಖಿನೊಳಗೆ ಜಗಳಕ್ಕೆ ಯುದ್ಧ ನಿಲ್ಲಿಸುವ ಮುದ್ದತು ತೀರಿತು. ಆದ್ದರಿಂದ ಈ ಹೊತ್ತಿನಿಂದ ಮತ್ತೆ ಯುದ್ಧವು ಆರಂಭವಾಗಿರಬಹುದು.

ಮೆಕ್ಸಿಕೋದಲ್ಲಿ ಎಲ್ ಟಿಲಿಗ್ರಾಫೋ, ಎಂಬ ಸಾಪ್ತಾಹಿಕ ವರ್ತಮಾನ ಪತ್ರವು ಹೊರಡುತ್ತಿದ್ದು ಇದರಷ್ಟು ಚಿಕ್ಕ ಆಕೃತಿಯ ಪತ್ರವೇ ಜಗತ್ತಿನಲ್ಲಿ. ಇದು ೫ ಇಂಚು ಉದ್ದ ೩ ಇಂಚು ಅಗಲವುಳ್ಳದ್ದಾಗಿ ಪ್ರತಿಯೊಂದು ಪ್ರತಿಯು ೩—೩ ಕಾಲಮುಗಳುಳ್ಳದ್ದಾಗಿರುತ್ತದೆ. ಇದರಲ್ಲಿ ಜಗತ್ತಿನೊಳಗಿನ ಪ್ರಸಿದ್ಧ ವರ್ತಮಾನಗಳಿರುತ್ತವೆ.

ಭಯಂಕರವಾದ ಭೂಕಂಪವು—ಮೊನ್ನೆ ಶನಿವಾರ ಕಲ್ಕತ್ತಾ ಪಟ್ಟಣದಲ್ಲಿ ಬಹು ಭಯಂಕರವಾದ ಭೂಕಂಪವಾಯಿತು. ಅನೇಕಾನೇಕ ಭಾರಿ ಭಾರಿ ಮನೆಗಳೆಲ್ಲ ಬಿದ್ದು ಹಾಳಾದವು. ಇದುವರಿಗೆ ಹುಡುಕಿದ್ದರಲ್ಲಿ ಎಂಟು ಜನರು ಮಾತ್ರ ಪ್ರಾಣಕಳೆಕೊಂಡರೆಂದು ತಿಳಿದುಬಂದಿದೆ. ಎಷ್ಟೊಂದು ಸಾಮಾನೂ ಜಿಂದಗಿಯೂ ನಷ್ಟವಾಗಿರಬಹುದೋ ಇನ್ನೂ ತಿಳಿದುಬಂದಿಲ್ಲ.

ಕೊಳೆಯು—ಇಂಗ್ಲಿಷ್ ಸೈನಿಕರು ವಜೀರಿಸ್ಥಾನಕ್ಕೆ ಸೇರಿದ ಟೋಚಿ ಎಂಬ ಕಣಿವೆಯಲ್ಲಿ ಹೋಗುತ್ತಿದ್ದಾಗ ಕಳ್ಳರಾದ ಅಲ್ಲಿನ ಮಹಮ್ಮದೀಯರು ಮೇಲೆ ಬಿದ್ದು ಇಂಗ್ಲಿಷಿನವರ ಮೂವರು (ಒಬ್ಬ ಕ್ಯಾಪ್ಟನ್, ಒಬ್ಬ ಲೆಫ್ಟಿನೆಂಟ್ಟು ಒಬ್ಬ ಕರ್ನಲ್) ಸರದಾರರನ್ನೂ ೨೦ ಮಂದಿ ಸೈನಿಕರನ್ನೂ, ೨೦—೩೦ ಒಂಟೆಗಳು ಹಾಗು ಕತ್ತೆಗಳನ್ನೂ ಕೊಂದುಹಾಕಿದರು. ಮತ್ತು ಅನೇಕ ಸೈನಿಕರಿಗೂ ಇನ್ನು ಕೆಲವು ಸರದಾರರಿಗೂ ನಾನಾ ಘಾಯಗಳಾಗಿವೆ. ಇಂಡಿಯಾ ಗವರ್ನಮೆಂಟಿನವರು ಈಗ ಬೇರೆ ಸೈನ್ಯಗಳನ್ನು ಆ ಪ್ರಾಂತಕ್ಕೆ ಕಳುಹಿಸಿರುತ್ತಾರೆ.

ಇಂಗ್ಲಾಂಡಿನಲ್ಲಿ ಸಾರಾಯಿಯ ಗುತ್ತಿಗೆದಾರರು ತಮ್ಮ ಸಾರಾಯಿಯ ಬಿಕ್ರೀ ಬಹಳವಾಗಬೇಕೆಂದು ಯಾವ ಹುಡುಗನು ಒಂದುವಾರದಲ್ಲಿ ಎಲ್ಲರಿಗಿಂತಲೂ ಹೆಚ್ಚಾಗಿ ಸಾರಾಯಿಯನ್ನು ಕೊಂಡುಕೊಳ್ಳುವನೋ ಅವನಿಗೆ ಪಿಪ್ಪರ್‌ಮೆಂಟಿನ ಪಡಿಗಳನ್ನಾಗಲಿ, ಮಿಠಾಯಿಯನ್ನಾಗಲಿ ಕೊಡುವ ಯುಕ್ತಿ ತೆಗೆದದ್ದರಿಂದ ಸಾವಿರಾರು ಹುಡುಗರ ಸಂಹಾರ ನಡೆಯುತ್ತದೆ ಅಲ್ಲಿಯ ಸರ್ಕಾರದವರು ಇದಕ್ಕೆ ಲಕ್ಷ್ಯವನ್ನೇ ಕೊಡುವದಿಲ್ಲ.

ADVERTISEMENT.

V. AYANOR'S
PREPARATIONS.

ವಿ. ಅಯನಾರ್ ಎಂಬವರಿಂದ ತಯಾರುಮಾಡಲ್ಪಟ್ಟ ಪ್ರಸಿದ್ಧ ಔಷಧಗಳು.

ಪಮೋಡಿಸ್ಟ್ರಯರ್.—ಇದು ಹೊಟ್ಟೆಕೂಲಿ, ಅಜೀರ್ಣ, ಕರುಳು ನೋವು, ವಾಂತಿಭೇದಿ, ಅಜೀರ್ಣಭೇದಿ, ಬೇಳುಕಡತ, ಕೆಮ್ಮು, ಮೂತ್ರಕಟ್ಟು, ಬಾಯಿಹುಣ್ಣು, ರಕ್ತಸ್ರಾವ, ಆರ್ತವ ದೋಷಜನ್ಯಗಳಾದ ಸ್ತ್ರೀಯರ ಉಪಾಧಿಗಳು, ತಲೆನೋವು, ದಂತಶೂಲೆ, ಘಾಯ ಮೊದಲಾದವುಗಳಿಗೆ ಬಹಳ ಉಪಯುಕ್ತವಾದದ್ದು. ಇದರ ಕ್ರಯ ದೊಡ್ಡಶೀಷೆ ೧ಕ್ಕೆ ೧ ರೂ. ಸಣ್ಣಶೀಷೆ ೧ಕ್ಕೆ ೮ ಆಣೆ.

ಪಾರ್ಶ್ವವಾಯು ತೈಲ.—ಪೀರ್ಘಕಾಲಿಕ ನೋವು, ಪಕ್ಕಶೂಲೆ, ಸೊಂಟನೋವು, ತಲೆಶೂಲೆ ಇವು ಪರಿಹಾರವಾಗುವದು. ಇದರ ಕ್ರಯ ದೊಡ್ಡಶೀಷೆ ೧ಕ್ಕೆ ೧ ರೂ. ಸಣ್ಣಶೀಷೆ ೧ಕ್ಕೆ ೮ ಆಣೆ.

ಜ್ವರದ ಧ್ವಂಸಿ—ಇದು ಎಂತಾ ಜ್ವರವನ್ನಾದರು ಎರಡು ದಿನಗಳೊಳಗಾಗಿ ನಿವೃತ್ತಿ ಮಾಡತಕ್ಕದ್ದು. ದೊಡ್ಡ ಶೀಷೆ ೧ಕ್ಕೆ ೧ ರೂ. ಸಣ್ಣಶೀಷೆ ೧ಕ್ಕೆ ೮ ಆಣೆ.

ಓಮಕರ್ಪೂರದ ಶೋಧಿ.—ಇದು ಶೀತಭೇದಿ, ರಕ್ತಭೇದಿ, ರಜಸ್ವಲೆಯರಿಗುಂಟಾಗುವ ಉಪಾಧಿ, ಎದೆನೋವು, ಟೊಂಕನೋವು ಇವುಗಳಿಗೆ ಬಹಳ ಪ್ರಯೋಜನಕರವಾದದ್ದು ಇದರ ಕ್ರಯ ದೊಡ್ಡಶೀಷೆ ೧ಕ್ಕೆ ೧ರೂ. ಸಣ್ಣಶೀಷೆ ೧ಕ್ಕೆ ೮ ಆಣೆ.

ಮೇಹವಾಯು ಎಣ್ಣೆ—ಇದು ಮೇಹವಾಯುವಿನಿಂದ ಶರೀರವು ಉಬ್ಬುವದು, ಚರ್ಮವು ಒಡೆಯುವದು, ಪಾರ್ಶ್ವ ತಲೆನೋವು, ಗ್ರಂಥಿಗಳು ಇವುಗಳಿಗೆಲ್ಲ ಬಹು ಉಪಯುಕ್ತವಾದದ್ದು. ಇದರ ಕ್ರಯ ದೊಡ್ಡಶೀಷೆ ೧ಕ್ಕೆ ೧ರೂ. ಸಣ್ಣಶೀಷೆ ೧ಕ್ಕೆ ೮ ಆಣೆ.

ವ್ಯಘ್ರತೈಲವು—ಇದು ನಡುವು ನೋವು, ಕೀಲುನೋವು, ಮೊಣಕಾಲುನೋವು, ಅರತಲೆನೋವು, ಬಿಸಿಗಡ್ಡೆ ಇವುಗಳಿಗೆ ಪ್ರಸಿದ್ಧವಾದ ತೈಲವು ದೊಡ್ಡ ಡಬ್ಬಿ ೧ಕ್ಕೆ ೧ ರೂ. ಸಣ್ಣ ಡಬ್ಬಿ ೧ಕ್ಕೆ ೮ ಆಣೆ.

ಶ್ವೇತಕುಷ್ಠ ಔಷಧ—ಇದು ಸಕಲವಿಧ ಮೇಹರೋಗಗಳಿಂದ ಜನಿಸುವ ಬಿಳುಪು, ಕೆಂಪು ಮಚ್ಚೆ ಸಿಬ್ಬೆ ಮೊದಲಾದ ವ್ಯಾಧಿಗಳೆಲ್ಲಕ್ಕೂ ಶೀಘ್ರವಾಗಿಯೂ, ಮರಳಿ ಎಂದಿಗೂ ಬಾರದಂತೆ ನಿಶ್ಶೇಷವಾಗಿಯೂ ಗುಣಪಡಿಸತಕ್ಕಂತಾ ಔಷಧ ಇದರ ಕ್ರಯ ಶೀಷೆ ೧ಕ್ಕೆ ೧ ರೂ. ೮ ಆಣೆ

ಕೂದಲು ನರೆಯದೆ ಕಪ್ಪಾಗಿ ಬೆಳೆಯುವಿಕ್ಕೆ ಔಷಧ—ಈ ತೈಲವನ್ನು ಸರತ ಕೂದಲಿಗೆ ಹಚ್ಚಿ [illegible] ಬೆಳೆಯದಿರುವವುಗಳೆಲ್ಲ [illegible] ಬೆಳೆಯುವದು ಇದನ್ನು ತಲೆಗೆ ಹಚ್ಚಿಕೊಂಡು ಸ್ನಾನ ಮಾಡಬಹುದು [illegible] ಸುವಾಸನೆಯುಳ್ಳದ್ದಾಗಿರುತ್ತದೆ. ಇದರ ಕ್ರಯ ಶೀಷೆ ೧ಕ್ಕೆ ೧ರೂ.

☞ ಬೇಕಾದವರು ಬಳ್ಳಾರಿ ಬ್ರೂಸ್ ಪೇಟೆಯಲ್ಲಿರುವ ವಿ. ಅಯನಾರ್ ಔಷಧಶಾಲೆಗೆ ಬರೆದು ತರಿಸಿಕೊಳ್ಳಬಹುದು.

V. GOPALAKRISHNA IYER,
Proprietor,
MR. V. IYNAR & Co.
Bellary

Bangalore City Municipality
ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.
ನೋಟಿಸ್.

ತಾ|| ೧೯ನೇ ಜೂನ್ ೧೮೯೭.

ಜುಲೈ ತಿಂಗಳ ೨೧—೨೨ನೇ ತಾರೀಖು ಸೋಮವಾರ ಮಂಗಳವಾರ ಈ ಎರಡು ದಿನಗಳಲ್ಲಿ ಕೆಬ್ಬನ್ ಪಾರ್ಕಿನೊಳಗೆ ದೈವಾರ್ಷಿಕ ಪ್ರಾಣಿ ತಮಾಷೆ ನಡೆಯುವದರಿಂದ ಸದರೀ ಪಾರ್ಕಿನೊಳಗೆ ಗುಡಿಗಳ್ಯಾವವೂ ಬಿಡಲ್ಪಡಲಾರವು

D. A. CHOKSI,
Ag. President,
City Municipal Commission.

BANGALORE CITY MUNICIPALITY.
ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.
ನೋಟಿಸ್.

ತಾರೀಖು ೧೯ನೇ ಜೂನ್ ೧೮೯೭.

ಸನ್ ೧೮೯೭ನೇ ಇಸವಿ ಜೂನ್ ೨೪ನೇ ತಾರೀಖು ಬೃಹಸ್ಪತಿವಾರದ ದಿನ ಬೆಳಗ್ಗೆ ೭|| ಘಂಟೆಗೆ ಬೆಂಗಳೂರು ಸಿಟಿ ಮ್ಯುನಿಸಿಪಲ್ ಕಮಿಷನರಗಳು, ತಮ್ಮ ಆಫೀಸ ಕಟ್ಟಡದಲ್ಲಿ ಸಾಮಾನ್ಯ ಸಭೆಸೇರುವಾಗ ಅದರಡಿ ತಿಳಿಸಲ್ಪಡುವ ಕೆಲಸಗಳು ನಡೆಸಲ್ಪಡುವವು:—

ನಿಶ್ಚಯಿಸಲ್ಪಟ್ಟ ವಿಷಯಗಳು.

೧. ಕಂದಾಯ ವಸೂಲಿ ಆಫೀಸ ಮಾಡುವದಕ್ಕೆ ಒಂದು ಬಾಡಿಗೆ ಮನೆ ಮಾಡಿಕೊಳ್ಳುವದಕ್ಕೂ, ಮಾಹೆಯಾನಾ ಇಸಮ ಒಂದಕ್ಕೆ ೫ ರೂಪಾಯಿಗಳ ತಲಬಿನ ಮೇಲೆ ಹಂಗಾಮಿಯಾಗಿ ಇಬ್ಬರು ಜವಾನರನ್ನಿಟ್ಟುಕೊಳ್ಳುವದಕ್ಕೂ ಹುಕುಂ ಆಗಬೇಕೆಂದು ಮ್ಯುನಿಸಿಪಲ್ ಕಂದಾಯದ ಕಲೆಕ್ಟರವರು ೧೮೯೭ನೇ ಇಸವಿ ಮೇ ಮಾಹೆ ೧೨ನೇ ತಾರೀಖಿನಲ್ಲಿ ಬರೆದ ೩೪೫ನೇ ನಂಬರ ಯಾದಿ.

ಸಾಮಾನ್ಯ ವಿಷಯಗಳು.

೧. ಸನ್ ೧೮೯೭ನೇ ಇಸವಿ ಮೇ ತಿಂಗಳ ನಗರದ ಜಮಾಖರ್ಚು ಲೆಕ್ಕ, ಮರಣಲೆಕ್ಕ, ಮನೆಗಳಿಗೆ ಹೋಗಿ ಚಿಕಿತ್ಸೆಮಾಡುವ ಮೆಡಿಕಲ್ ಆಫೀಸರರಲೆಕ್ಕ, ತಗಾದೆ, ವಸೂಲಿ ಮತ್ತು ಬಾಕಿ ಪಟ್ಟಿ, ಕಾಮಗಾರಿಗಳ ಅಭಿವೃದ್ಧಿಯನ್ನು ಕುರಿತ ರಿಪೋರ್ಟ್, ಶ್ರೀನಿವಾಸ ಮಂದಿರದ ಲೈಬ್ರರಿಗೆ ಹೋಗಿದ್ದ ಜನರನ್ನು ಕುರಿತ ಯಾದಿ, ಸಿಟಿ ಮ್ಯುನಿಸಿಪಲ್ ಇಂಗ್ಲಿಷ ಮತ್ತು ಕನ್ನಡ ಸ್ಕೂಲುಗಳ ಲೆಕ್ಕಗಳು, ಸೂಲಗಿತ್ತಿಯರು ಚಿಕಿತ್ಸೆ ಮಾಡಿದವರ ಲೆಕ್ಕ, ದೀಪಗಳನ್ನು ಕುರಿತ ರಿಪೋರ್ಟಿನ ಸಂಗ್ರಹ, ಪ್ರಸವಾಸ್ಪತ್ರೆಯ ಲೆಕ್ಕ, ಲಂಗರಖಾನೆಯ ಲೆಕ್ಕ, ದಳವಾಡಾ ಲೆಕ್ಕ, ಮತ್ತು ನಾಯಿಗಳನ್ನು ಕೊಲ್ಲುವದಕ್ಕೆ ಕೊಟ್ಟ ಇನಾಂಗಳ ಪಟ್ಟಿ.

೨. ೧೮೯೭ನೇ ಇಸವಿ ಜೂನ್ ೭ನೇ ತಾರೀಖಿನ ವಿಷಯಪಟ್ಟಿ ದಾಖಲಿಸಲ್ಪಟ್ಟ ಇಸ್ತಿಹಾರ ನಾಮೆಯನ್ನ ನಮೂನೆ, ೧೮೯೬—೯೭ನೇ ಇಸವಿಯಲ್ಲಿ ಸರ್ಕಾರಿ ಬಜಾರು ಮತ್ತು ಕೋಳಿ ಮಾರ್ಕೆಟುಗಳಲ್ಲಿ ರುಸುಂ ವಸೂಲ್ಮಾಡುವ ಹಕ್ಕುಸಂಬಂಧವಾಗಿ ಬಂದಿರುವ ದರಖಾಸ್ತುಗಳ ವ್ಯವಸ್ಥೆ.

೩. ೧೮೯೭—೯೮ನೇ ಇಸವಿಯಲ್ಲಿ ಸಿಟಿ ಕಾಲರಾ ವಗೈರೆಯನ್ನು ಸಾಗಿಸುವ ಕಂಟ್ರಾಕ್ಟಿನ ಹರಾಜನ್ನು ಖಾಯಂ ಮಾಡುವುದು ಅಥವಾ ಬೇರೆ ವಿಧವಾಗಿ ವ್ಯವಸ್ಥೆ ಮಾಡುವುದು.

೪. ಅಡ್ವೊಕೇಟ್ ಮ|| ಎಸ್ ಸುಬ್ಬರಾಯರವರು, ಕೃಷ್ಣಸಿಂಗ್ ಎಂಬಾತನಮೇಲೆ ತರಲ್ಪಟ್ಟ, ೧೮೯೬—೯೭ನೇ ಇಸವಿಯ ೪೦೯ನೇ ನಂಬರ ಕ್ರಿಮಿನಲ್ ಮೊಕದ್ದಮೆಯಲ್ಲಿ ೬೫ ರೂಪಾಯಿಗಳು ತಮಗೆ ರುಸುಂ ಸಲ್ಲಬೇಕೆಂದು ಬಿಲ್ ಸಹಿತ ೧೮೯೭ನೇ ಇಸವಿ ಮೇ ೧೯ನೇ ತಾರೀಖಿನಲ್ಲಿ ಬರೆದ ೪೯ನೇ ನಂಬರ ಲೆಟರು.

೫. ದೀಪಗಳನ್ನು ಕುರಿತ ರಿಪೋರ್ಟನ್ನು ಸಂಗ್ರಹಿಸಿ ಕಳುಹಿಸತಕ್ಕ ಬಗ್ಗೆ ಸೆಂಟ್ರಲ್ ಪೋಲೀಸ್ ಸ್ಟೇಷನ್ ರೈಟರಿಗೆ ಮಾಹೆಯಾನಾ ೪ ರೂಪಾಯಿಗಳ ರುಸುಂ ಕೊಡಬೇಕೆಂದು ಸೂಚಿಸಿ ಬೆಂಗಳೂರು ಸಿಟಿ ಪೋಲೀಸ್ ಇನ್ಸ್‌ಪೆಕ್ಟರವರು ೧೮೯೭ನೇ ಇಸವಿ ಮೇ ೨೫ನೇ ತಾರೀಖಿನಲ್ಲಿ ಬರೆದ ೫೯೩ನೇ ನಂಬರ ಲೆಟರ್

೬. ಜಸ್ಟೀ ಖರ್ಚಿಲ್ಲದ ಆಕಸ್ಮಿಕ ಲವಾಜಮೆಯಲ್ಲಿ ಕೆಲವು ಬದಲಾವಣೆಯನ್ನು ನಮೂದಿಸಿ, ಸದರೀ ಆಲಾಟ್ಮೆಂಟ್ ವ್ಯಾನೇಜರವರು ೧೮೯೭ನೇ ಇಸವಿ ಮೇ ೨೯ನೇ ತಾರೀಖಿನಲ್ಲಿ ಬರೆದ ೧೦೩ನೇ ನಂಬರ ರಿಪೋರ್ಟ್.

೭. ಚಿಕ್ಕಪೇಟೆಯಲ್ಲಿರುವ ನೇಟಿವ್ ವೈದ್ಯಶಾಲೆಯ ಸುಬ್ಬಮ್ಮನು ತಾನು ಇಟ್ಟಿರುವ ವೈದ್ಯಶಾಲೆಯ ವೃದ್ಧಿ ಮತ್ತು ಪೋಷಣೆಯ ಬಗ್ಗೆ ಮಾಹೆಯಾನಾ ನನಗೆ ಯಾನಾದರು ದ್ರವ್ಯ ಸಹಾಯ ಮಾಡಬೇಕೆಂದು ಬರೆದುಕೊಂಡ ಅರ್ಜಿಯನ್ನು ಆವಕಮಾಡಿ ೧೮೯೭ನೇ ಇಸವಿ ಮೇ ೨೭ನೇ ತಾರೀಖಿನಲ್ಲಿ ಗವರ್ನಮೆಂಟಿನವರು ಕಳುಹಿಸಿದ $\frac{Pol}{1728}$ನೇ ನಂಬರ ಆಫೀಸಿಯಲ್ ಮೆಮೋರಾಂಡಂ.

೮. ಮದರಾಸ ಮತ್ತು ಸದರ್ನ ಮರಾಟ ರೈಲುವೆಗಳ ಗುಡ್ಸ್‌ಷೆಡ್ಡುಗಳು ಒಡಾಯಿಸಲ್ಪಟ್ಟದರಿಂದ ನಾಗಡಿ ಮತ್ತು ಮೈಸೂರು ರಸ್ತೆಗಳನ್ನು ತಿರುಗಿಸತಕ್ಕ ಬಗ್ಗೆ ಬೇಕಾದ ಕೆಲವು ನಿವೇಶನಗಳನ್ನು ಬಿಟ್ಟುಕೊಡಬೇಕಾದ ವಿಷಯವಾಗಿ ಬೆಂಗಳೂರು ಡಿವಿಜನ್ ಎಕ್ಸಿಕ್ಯೂಟಿವ್ ಇಂಜಿನಿಯರವರು ಹುಜೂರಿಗೆ ಬರೆದ ಈ ತಿಂಗಳ ೬ನೇ ತಾರೀಖಿನ ೧೫೫೩ನೇ ನಂಬರ ಬಾಬತು ಈ ಆಫೀಸ ಲೆಟರಿನೊಡನೆ ಪುರ್ಜಿಯಾಗುವ ಕಾಗದ ಪತ್ರಗಳು.

೯. ಮೂರನೇ ನಂಬರ ಮಾವಳ್ಳಿ ಪೇಟೆ ಡಿವಿಜನ್ ಮ್ಯುನಿಸಿಪಲ್ ಕಮಿಷನರಾದ ಮ|| ವೀರಭದ್ರ ಶೆಟ್ಟರವರು ೬ನೇ ಇರುವ ಕಸಾಯಿ ದೊಡ್ಡಿಯನ್ನು ಮಾರ್ಟಿನ್ ಮಾರ್ಕೆಟ್ಟನ್ನು ಬೇರೆ ಅನುಕೂಲವಾದ ಸ್ಥಳಕ್ಕೆ ವರ್ಗಾಯಿಸಬೇಕೆಂದು ಸೂಚಿಸಿ ೧೮೯೭ನೇ ಇಸವಿ ಜೂನ್ ೭ನೇ ತಾರೀಖಿನಲ್ಲಿ ಬರೆದ ೩೦೩ನೇ ನಂಬರ ಲೆಟರು.

೧೦. ಮೈಸೂರು ಗವರ್ನಮೆಂಟ್ ಸೀನಿಯರ್ ಸರ್ಜನ್ ಮತ್ತು ಸಾನಿಟರಿ ಕಮಿಷನರವರು ಇದರಡಿ ತಿಳಿಸಲ್ಪಡುವ ವಿಷಯಗಳನ್ನು ನಮೂದಿಸಿ ೧೮೯೭ನೇ ಇಸವಿ ಜೂನ್ ೭ನೇ ತಾರೀಖಿನಲ್ಲಿ ಬರೆದ ಲೆಟರ್ —

"ಕೋಟೆಯ ಉತ್ತರ ಬಾಗಿಲ ಬಳಿ ಇರುವ ಭೂಮಿಯನ್ನು ಮುಚ್ಚಿಸಿಬಿಟ್ಟು ಅದಕ್ಕೆ ಬದಲು ಸ್ನಾನ ಮತ್ತು ಬಟ್ಟೆಗಳು ಒಗೆಯುವದಕ್ಕೆ ಬೇರೆಯೊಂದು ಭಾವಿಯನ್ನು ಕಟ್ಟಿಸಿ ಅದಕ್ಕೆ ಹೆಸರು ಘಟ್ಟದ ಕೆರೆಯ ನೀರನ್ನು ತಂದುಬಿಡಬೇಕು"

೧೧. ಕೆಲಸದಿಂದ ನಿವೃತ್ತಿಯಾಂ ಪಡೆದ ಶ್ರೀಮ ವೆಂಕಮ್ಮನ ಇನಾಂ ಯೆಂಬಾತನು ಗ್ರ್ಯಾಚ್ಯುಯಿಟಿಬಗ್ಗೆ ಬರೆದುಕೊಂಡ ಅರ್ಜಿ.

೧೨. ೧, ೨, ೩, ಮತ್ತು ೪ನೇ ಡಿವಿಜನಗಳಲ್ಲಿ ದೀಪಗಳ ಸ್ಥಿತಿಯು ಅತೃಪ್ತಿಕರವಾಗಿದೆಯೆಂದು ದೀಪಗಳ ಸೂಪ್ರ ಮಾಡಿದ ರಿಪೋರ್ಟ್

೧೩. ಕೆಲಸದಿಂದ ನಿವೃತ್ತಿಯಾಂ ಪಡೆದ ಮ್ಯುನಿಸಿಪಲ್ ಮ್ಯಾನೇಜರ್ ಮ|| ಟಿ ನರಸಿಂಹಮೂರ್ತಿ ರಾಯರವರ ಪೆನ್ಷನಿಗೆ ಸಂಬಂಧಪಟ್ಟ ಕಾಗದ ಪತ್ರಗಳು.

೧೪. ತೋಟಗಳು ವಗೈರೆಗಳಿಗಾಗಿ ತಿಗಳರು ದೊಡ್ಡ ಮೋರಿಗಳಿಂದ ಕೊಳಕು ನೀರನ್ನು ಉಪಯೋಗಿಸಿಕೊಳ್ಳುವದಕ್ಕೆ ಯಾವದಾದರು ಒಂದು ಕಂದಾಯವನ್ನು ಗೊತ್ತುಮಾಡಬೇಕೆಂದು ಮೈಸೂರು ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಡಿಪಾರ್ಟ್ಮೆಂಟ್ ಸೆಕ್ರೆಟರಿಯವರು ೧೮೯೭ನೇ ಇಸವಿ ಜೂನ್ ೧೪ನೇ ತಾರೀಖಿನಲ್ಲಿ ಬರೆದ $\frac{13276}{L.F.\ 215-96}$ನೇ ನಂಬರ ದಾಕಲೆಯೊಡನೆ ಪುರ್ಜಿಯಾಗುವ ಕಾಗದ ಪತ್ರಗಳು

D. A. CHOKSI,
Ag. President
City Municipal Commission.

ಈ ಕಂಪೆನಿಯು ಸನ್ ೧೮೯೮ನೇ ಇಸವಿಯಲ್ಲಿ ಸ್ಥಾಪಿತವಾಯಿತು

ಜನ್ಮದ ಲಾಭವು.

ವಜ್ರಾಂಗ ಖಜೂರವು.

ಬಲಾರೋಗ್ಯ, ಪುಷ್ಟಿಗಳನ್ನು ಬೆಳೆಸತಕ್ಕ ಉತ್ಪತ್ತಿಯು.

ಅತ್ಯಾಶ್ಚರ್ಯಕರವಾದ ಬಳ್ಳಿಗಳಿಂದ [illegible] ಈ ಉತ್ಪತ್ತಿಗಳು ಕೊಂಕಣಪ್ರಾಂತದ ಅನೇಕ ವನಸ್ಪತಿಗಳ ಸಾರಗಳ ಪುಟವನ್ನು ಕೊಟ್ಟು [illegible] ಒಳ್ಳೇ ಹೆಚ್ಚಿನ ತರಗತಿಯ [illegible] ರೆಯ ಪಾಕದಲ್ಲಿ ಸಿದ್ಧಮಾಡಿರುತ್ತೇವೆ ಈ ಉತ್ಪತ್ತಿಗಳು ಮಹಾಪೌಷ್ಟಿಕಗಳಿದ್ದು, ಒಳ್ಳೇ ರುಚಿಯುಳ್ಳವುಗಳಿವೆ ಇವುಗಳ ಸೇವನೆಯಿಂದ ಕಫ, ವಾತ, ಪಿತ್ತ [illegible] ಗಳಿಂದುಂಟಾಗತಕ್ಕ ಯಾವತ್ತು ಬಗೆಯ ವ್ಯಾಧಿಗಳೂ ಹೋಗುತ್ತವೆ. ೪೦ ವರ್ಷಗಳ ಪ್ರಾಯವುಳ್ಳ ಮುದುಕರ ಕಾಮವಿಕಾರವಾದರೂ ಹತೆಯಾದ ಗಂಡಸರಂತೆ ಪ್ರಜ್ವಲಿತವಾಗುತ್ತದೆ ಜನನೇಂದ್ರಿಯದಲ್ಲಿ ಬಲ ಉಂಟಾಗಿ ನಪುಂಸಕತ್ವವು ಇಲ್ಲದಂತಾಗುತ್ತದೆ ಲಘ್ವಿಯ ಮುಂಚೆ ಅಥವಾ ಹಿಂದೆ ಹರಿದುಹೋಗುವ ಧಾತು ನಿಲ್ಲುತ್ತದೆ. ಸ್ವಪ್ನಾವಸ್ಥೆಯಾಗುವದಿಲ್ಲ ವೀರ್ಯವು ಬೆಳೆದು ವೈ ಬಣ್ಣವು ಸುಧಾರಿಸುತ್ತದೆ ಪರಮಾ ಹಾಗೂ ಉಷ್ಣಸಂಬಂಧಕ ಬೇನೆಗಳಿಗೆ [illegible] ಇಲ್ಲದಂತಾಗಿ ಧಾತು ಪುಷ್ಟವಾಗುತ್ತದೆ [illegible] ಹೊಟ್ಟೆಯಿಂದರೂ ಅನ್ನ ಪಚನವಾಗಿ ಒಳ್ಳೇ ಹಸಿವೆಯಾಗುತ್ತದೆ ಹೋಗುವದೆಂತೆ [illegible] ಕ್ಷಯ, ಉದರ, ದಮ್ಮು ಈ ರೋಗಗಳು ನಾಶಹೊಂದುತ್ತವೆ. [illegible] ೧೧ ದಿವಸಗಳ ವರೆಗೆ ಸಾಲುವ ಒಂದೇ ಡಬಿಯಿಂದ ಗುಣಕಾಣುತ್ತದೆ. [illegible] ದಿನಗಳ ಮೇಲೆ ಗುಣ ಬಂದೀತು ೧೧ ದಿನಗಳ ವರೆಗೆ ಸಾಲತಕ್ಕ ೧ ಡಬ್ಬಿಗೆ ೧—೮—೦ ರೂ|| ಒಂದೇಸಾರ್ತಿಕ್ಕೆ ೩ [illegible] ಗಳು ತೆಕ್ಕೊಳ್ಳತಕ್ಕವರಿಗೆ ಒಂದು ಡಬ್ಬಿಯು ಉಚಿತವಾಗಿ ಸಿಕ್ಕೀತು. ಈ ಉತ್ಪತ್ತಿಯಿಂದ ಹೆಂಗಸರು ಸತೇಜರಾಗುತ್ತಾರೆ. ಕರಗಿನ ಹಾಗೂ ಬಾಣಂತಿ ಬೇನೆಗಳು ವಾಸಿಯಾಗುತ್ತವೆ. ಎಲ್ಲರನ್ನು ಸರಿಯಾಗಿ ಬೇನೆ ಇಲ್ಲದವರನ್ನಾಗಿಮಾಡಿ ಬಲಾರೋಗ್ಯ ಪುಷ್ಟಿಗಳನ್ನು ಬೆಳೆಸುತ್ತವೆ. ಸಾಹೆಬ ಜನರಲ್ಲಿ ಬಹಳ ಡಬ್ಬಿಗಳು ಖರ್ಚಾಗುತ್ತವೆ ಈ ಔಷಧವು ಈ ಕಂಪೆನಿಯಹೊರ್ತು ಬೇರೆ [illegible] ದಲ್ಲಿ ಆಗುವದಿಲ್ಲ. ಯಾವತ್ತು ದೇಶಗಳಲ್ಲಿಯು ವೈದ್ಯಶಾಲೆಗಳಿಗಾಗಿ ಕಳುಹಿಸಲ್ಪಡುತ್ತದೆ. ಬರೆದು ಬಂದು ಕೂಡಲೆ ಈ ಕಂಪೆನಿಯು ಬೇಕಾದ [illegible] ಈ ಡಬ್ಬಿಗಳು ಕಳುಹಿಸಿಕೊಟ್ಟೀತು ಅಂಚೆಯ ಹಾಗೂ ವ್ಹ್ಯಾಲ್ಯು ಪೆಯಬಲ್ ವೆಚ್ಚ ಬೇರೆ ಕೊಡಬೇಕು (ಉಚಿತ ಡಬ್ಬಿ ಸಹ ೪ ಡಬ್ಬಿಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬದಲ್ಲಿ ಎಲ್ಲಾ ಖಜೂರ ಹಾಕಿ ರವಾನಿಸುವವು, ಹೀಗೆ ಕಳುಹಿಸಿದರೆ ಪಾರ್ಸಲ್ ಖರ್ಚು ಕಡಮೆ ಬೀಳುವದು.)

ಮೋಲ್ಕಿಮಾಲಕ—ಪಿ. ಎನ್. ಎ ಬ್ರದರ್ಸ್ ಮತ್ತು ಕಂಪೆನಿ,

ಫಸ್ಟ ಇಂಗ್ಲಿಷ್ ಬ್ರ್ಯಾಂಚ್ ಆಫಿಸ್, ಡಿಸ್ಟ್ರಿಕ್ಟ ಬೆಳಗಾಂವ.

ಪೋಸ್ಟ—ಬೆಳಗಾಂವ. Post BELGAUM.

BANGALORE.—Printed and Published at the KARNATAKA PRESS, No 40, HOSPITAL ROAD, CITY,—1897.

THE Karnataka Prakasika.

ಪ್ರಕಟನೆಯ ದರ. } ಮೊದಲನೆಯದಕ್ಕೆ ಪಂಕ್ತಿ ಒಂದಕ್ಕೆ 0 2 0
} ಎರಡನೆಯ ವಸಾ ಪಂಕ್ತಿ ಒಂದಕ್ಕೆ 0 1 0
[ಪ್ರಕಟನೆಯ ಎರಡ ವರ್ಷಗಳಿಗಿಂತ ಹೆಚ್ಚಿನದಾಗಿ ಎಷ್ಟು ತಡವಾದರೂ ಇದ್ದವನು ಪಂಕ್ತಿ ಒಂದಕ್ಕೆ ಲಕ್ಕ ಮಾಡಲ್ಪಡುವದು.]

ಕರ್ನಾಟಕ ಪ್ರಕಾಶಿಕಾ.

Published Every Monday Morning

ಚಂದಾದರಗಳು — ಸ್ಥಳದವರಿಗೆ, ಪರಸ್ಥಳದವರಿಗೆ, ಪೋಸ್ಟೇಜ್ ಸಹಿ

ಸಾಲ್ 1 ಕ್ಕೆ . 3 0 0	ಸಾಲ್ 1 ಕ್ಕೆ . 4 0 0
6 ತಿಂಗಳಿಗೆ ... 2 0 0	6 ತಿಂಗಳಿಗೆ ... 2 8 0
3 ತಿಂಗಳಿಗೆ 1 4 0	3 ತಿಂಗಳಿಗೆ ... 1 8 0

ಪ್ರಕಾಶವಿವಿಧಪ್ರವೃತ್ತ್ಯುಪಗಮಾರ್ಥ ಕರ್ನಾಟಕಪ್ರಕಾಶನಸರಾಭಿಧಾಪ್ರಥಿತನ.ಹಿಂದೋಚಿತಃ । ಸ್ವಗಾಂಕಾಲತಮಾಸರನಿತವಮುದ್ರಾಸಜ್ಜನ್ವೈರ್ಭಿರಾಸುವರಪ್ರೋಷಿತ.ದಿತಿವಾನಸಂಸಂವಾದಂ ॥

Vol. XXIV BANGALORE:—MONDAY, JUNE 28, 1897. No. 26.

Select Telegrams

London, 22nd June 8 15 A M —The weather to-day opens with rain and clouds Many thousands remain all night in the streets which have been densely packed from an early hour this morning

LATER

The Queen left Buckingham Palace at 11 15 A M, in sunshine, amidst the firing of guns, and immense enthusiasm on the part of the assembled multitude

LATER

The scene at St Paul's was a most memorable one The Archbishop of Canterbury and the Bishop of London were in rich copes The clergy and choristers were assembled on the steps at the western door to receive the Queen, who remained in her carriage, while the *Te Deum* and the benediction were given The Old Hundredth and the National Anthem were then sung, the people joining in

Repeated cheers were given for the Queen who smiled most graciously

The return to Buckingham Palace, *via* London bridge and Southwark, was equally successful

The Naval Brigade the colonial premiers the colonial troops and the Indians were warmly cheered whilst Lord Roberts received a perfect ovation

The weather was splendid and the immense multitudes were most orderly

London 23rd June —The illuminations last night in London were on an unparalleled scale and continued up to two this morning The streets were packed with sightseers

The Queen was not at all tired after the fatigues of yesterday, and is quite well to-day

Enthusiastic functions were held in the colonies in every quarter of the globe, also in every town in the Continent and in America where British subjects resided

The Italian Parliament adopted an address of felicitation to the Queen on the occasion of Her Jubilee

London, 22nd June —The Egyptian Prime Minister proposed that the different ministries should be represented at the Queen's Jubilee but the Khedive has refused his consent

[The Khedive's refusal is a significant sign of his supposed unfriendliness towards Great Britain]

The House of Lords has unanimously passed the Jubilee address

In the House of Commons Mr Dillon protested against it, and the Dillonites left the House in a body

Mr Redmond then moved an amendment which was rejected by 436 against 7 and the address was then carried by 459 against 14 votes

Both Houses resolved to present the address corporately

President McKinley has sent his congratulations to the Queen in a most cordial letter

Poona, 24th June —Mr Rand, Plague Commissioner, Poona was shot while returning from Government House on the Jubilee night and taken to the Sassoon Hospital at midnight He is lying in a precarious state, his left lung and heart are injured There are few chances of recovery Lieutenant Ayerst whose carriage preceded his was shot dead on Wednesday night. Lieutenant Lewis who is the Superintendent of the segregation camp was fired at while entering mess He escaped with a wound in the head There is no trace of the culprits two swords and a hatchet were found in a neighbouring nullah Ten thousand rupees are offered as reward The greatest sensation prevails

London, 24th June —The Hawaii treaty has been referred to a sub committee for consideration Complications are likely to arise, as it now appears that Japan's protest is almost of the nature of an ultimatum

THE Karnataka Prakasika.

MONDAY, JUNE 28, 1897

THE JUBILEE CELEBRATION

The celebration of the Diamond Jubilee in the Civil and Military Station and the City was a perfect success Of course there were mistakes When do such not occur? But taken as a whole the word we have used is the correct one. There was great enthusiasm about the whole function Not only did those engaged in getting up the different events throw themselves into the affair, but the public at large did the same Every one seemed to think that by honouring the occasion they would honour Her Majesty the Queen Empress, and so they went heart and soul into the matter We never saw such a crowd in Cubbon Park as we saw last Tuesday night, all bent on enjoying themselves, and showing honour to the Queen The Mysore Government acted very generously It spent a large sum of money, in fact it spared no expense to produce a good and fitting result Most of the cost of the events in the Cubbon Park was borne by the Mysore Government All the shows—or nearly all—were put up by this Government All the decorations were at the cost of the Mysore State, and all the illuminations in the Park The lighting up of the buildings would not have cost a small sum All this has been cheerfully borne by the Maharani Regent and the Mysore authorities and they would have spent more if they had believed it to be necessary To crown all these, H H the Maharani Regent laid the foundation stone on the Jubilee day of a General Hospital in the City to be built at a cost of about 3 lacs of rupees and to be called " Victoria Jubilee Hospital " In the next place private individuals have come forward to give money to commemorate the occasion in a fitting manner, One gentleman intends building a Maternity, two others will add a ward to the Bowring hospital This is real charity, and the reason why it was displayed now is that it is the Diamond Jubilee of Her Majesty What the three gentlemen intend doing will be productive of much good, and when patients enjoy the benefits to be derived from them, they should also think of the good Queen who was the cause of this charity being evoked, and taking a practicable turn. But what has been done in Bangalore has also been done in all parts of the world People have endowed hospitals have established schools, have given alms to the poor in commemoration of the Diamond Jubilee of the Queen The sympathy and love of the whole empire has been stirred, and not only has this been the case where the Queen reigns directly, but in those places like Mysore, where she only rules indirectly. The people know that during all her long reign she has been true to the constitution of England, that she has not been guilty of a single act of despotism, that she has always done that which is right Not only this, but as we said in our last issue, she has always had the greatest sympathy with those in distress Only a few days ago she sent a message of condolence to the sufferers by the earthquake in Calcutta and wished to be informed how far the catastrophe had extended It is such acts as these that have endeared the Queen to her subjects, and this feeling made the celebration on Tuesday last a perfect success We ought to mention that the Mysore Government was very liberal with regard to the celebration of the Diamond Jubilee It did not spare money The sum required for the preparations in the Cubbon Park must have been large, and all that took place in the City must be added to this But the authorities knew they were spending money in a good cause, so they were lavish with it

NOTHING DONE

We are sorry to find that nothing has yet been done towards erecting a Town Hall for the City of Bangalore There has been a good deal of talk on the subject, and it has never got beyond this Action has not accompanied this talk Action would require money, and this evidently the people do not care to give When the Maharajah died there was a proposal to raise such a building to his memory. It was thought that this would be a fitting way to keep his name in remembrance But the time passed on, and nothing was done No body came forward with money, no body took the lead, and so the idea died out for a time We suggested that steps should be taken at the Diamond Jubilee to erect the required building But the Jubilee has come and gone and nothing has been done. Not a man came forward to take up the matter, and so the Town Hall is in the future—whether the near or the far future we cannot say, but probably the latter, It is high time something was done in this direction, for the need is great There is no place in the City where public meetings can be held Other places with a far smaller population, and of far less consequence have their public halls, but the City of Bangalore has none, and what is the worst of all the people do not seem to care much about it If they did they would supply the want They would at once take steps to give the place what it required If a town Hall were erected the public spirit of the place would increase. The people would have a place in which to meet and discuss public questions and in this way they would become more alive to their duties, and more willing to take a part in the work of citizenship. It is a great pity advantage was not taken of the Jubilee to commence operations, to set the matter going, and then the place would remove a discredit that attaches to it

News and Notes.

The King of Siam has arrived in Vienna, and is the guest of the Emperor

The Government paid Rs 2700 as passage money to the Hon'ble Surendra Nath Banerjee and Rs 400 as his outfit.

Advices from Madagascar state that the rebels have murdered two French Missionaries thirty miles south of Tananarivo

A lady has qualified for professional examination as Veterinary Surgeon, but the Royal College decline to admit her by reason of her sex.

A Chinaman traces his conversion to a sense of contrast between the genealogy in Luke, going back to " Adam, which was the son of God," and the Confucian genealogies

Professor Drummond has left ample materials for a biography, and Dr James Stalker, his life-long friend, is expected to put them into shape

A Swiss journalist has discovered at Middachte, in Holland, among the archives of the Bentinck family thirty nine unpublished letters of Voltaire, dated from 1753 to 1777.

It is significant that the Chinese Government has conferred on a Christian, the appointment of Envoy Extraordinary and Minister Plenipotentiary at Washington Minister Wu Ting Fang is a devout member of the Church of England

Through the noble efforts of the Hon'ble Narendra Nath Sen and the Hon'ble Surendra Nath Bannerjee, the Editor of the *Hitabadi* was released on the 22nd as a Jubilee prisoner by Mr Charles Christopher Stevens, Officiating Lieut Governor

Onion is recommended as an effective nerve tonic toning up the worn out system, and, if eaten freely, showing good results in case of nervous prostration If a sprig of parsley is dipped in vinegar and eaten after an onion, no unpleasant odour from the breath can be detected

The Hindu inhabitants of the District of Gorakhpore and Basti, in the N W Provinces have forwarded a memorial to the Lieutenant-Governor of Bengal, praying for an order for the removal of the Japanese image of Buddha from the rest house, in close proximity to the temple of Budh Gya, and the Hindu places of *Sradh*.

The Jain community of Bengal have submitted a memorial to the Government of India praying that the Diamond Jubilee of the Queen-Empress might be signalised by the issue of a general proclamation, prohibiting the slaughter of animals on that one particular day, " to enable them to participate in the general rejoicing "

A further consignment of seven bales of clothing intended for the benefit of the poor women affected by the prevailing distress in India, will shortly be received from the Marchioness of Dufferin and Ava. This clothing, as also the previous gift of the bales, is intended for the exclusive use of the distressed women in the North Western Provinces and Oudh

The Princess Louise opened a hospital in Fitzroy-square, for the treatment of wounds, ulcers, etc., by oxygen gas The new system of oxygen treatment was discovered by Dr George Stoker, brother of Mr Bram Stoker, of the Lyceum Theatre It consists of the exposure of the affected parts to the action of oxygen gas The ailments disappear as if by magic

The attempt to introduce improved implements amongst the agriculturists of India is meeting with some success A new form of plough, called the Baldeo plough, after Baldeo the head mechanic of the Cawnpore Farm workshop, is being bought throughout Northern India, it is cheap and efficient, and turns out better work than the old plough A demand is commencing also for harrows, water lifts, and chaff-cutters, of a better type

Awakened India, a neo-Hindu journal writes :—" We are really infinite, but think ourselves to be finite ; we are really eternal, but through our ignorance fancy ourselves to be mortal." This is the sort of awakening the Swami's *Vedanta* promises to the Hindu intellect. *Sophia* imposes the query—"Whence came ignorance to affect the eternal and the infinite ?"—and exclaims—' Poor infinite ! Poor eternal ! For the fault of no one else but of your own self you became ignorant and deluded, and thought yourself limited and mortal !'

By holding a Provincial Social Conference Madras has set an example which, we are hopeful, will be imitated by every other Province. For it is an undeniable fact that socially all the Provinces are not in an equal stage of development. Social views and social needs of one Province differ from those of another in not a few particulars, although on some general questions of Social Reform, leading men of every Province hold almost the same views. We are, therefore, of opinion that the holding of Provincial Social Conferences will give greater scope to Social Reform in the different Provinces. The example of Madras should not be lost upon Bengal. The circumstance that the Provincial Social Conference can afford to be more conservative than the National Social Conference ought to be an inducement to many sincere friends of cautious but solid Social Reform to set themselves to the task of organizing the proposed institution.

Local and Provincial.

The following Gracious Message from Her Majesty the Queen Empress, dated the 22nd June 1897, is published for general information :—

" From my heart I thank my beloved People. May God bless them."

LAYING THE FOUNDATION STONE.—On the Jubilee Day the 22nd instant at 4-30 p. m. H. H. the Maharani Regent laid the Foundation Stone of the Male and Female General Hospital to be built in the City at a cost of more than 8 lacs of rupees in commemoration of the Diamond Jubilee of Her Imperial Majesty the Queen Empress.

The Resident laid the foundation stone of the Sivagangmi Ammal Maternity Hospital and Caste wards, presented by Mr. Gangathara Chetty and Mr. Arunasami Mudaliar. Subsequently he presented certificates from the Viceroy to the Donors and Aga Abdulla.

THE CONFERRING OF A TITLE.—We are exceedingly glad to find in the Jubilee Honor's List the name of our worthy citizen and Councillor of State Mr. P. N. Kristnamurti as being one of those on whom Her Majesty the Queen Empress has been graciously pleased to confer the coveted title of " Companion of the Most exalted Order of the Indian Empire." We sincerely congratulate Mr. Kristnamurti on his deserved elevation.

TRANSFERS.—It is said that Mr. Nanja Raja Urs, Assistant Superintendent of Police, French Rocks, will be transferred to Mysore as Assistant Commissioner in charge of the Treasury and Mr P. Srinivasa Rao, Extra Assistant Commissioner to French Rocks as Assistant Superintendent of Police.

KHILATS.—Owing to the Palace Fire catastrophe the presentation of Khilats to some of the officers and the residents of the City on account of the marriage of the First Princess had to be put off. The said presents were distributed last week before the departure of H. H. the Maharani-Regent to Bangalore.—M.H.

GOVERNMENT SAVINGS BANKS.—It is notified in the *Gazette* for general information that in modification of Government Notification No. 13976—R. 1413, dated 17th February 1894, the rate of interest on deposits in the Mysore Government Savings Banks will be reduced from 3 4/7 to 3½ per cent per annum, with effect from 1st July 1897.

A CURIOUS CASE OF NUISANCE.—Mr. V Raghavachar, Advocate, has instituted a suit in the Mysore Munsiff's Court against one of his neighbours for the abatement of a nuisance. The said nuisance consists in the defendt's pounding paddy at the early hours of dawn so as to cause disturbance to the plaintiff's sleep.—M. H.

A LEAVE.—Mr. M. A. Narayanaiengar, Munsiff of Yedahalli, is granted leave without allowances for two months, with effect from the 24th June 1897.

Mr. Ananda Rao Sirsi, B. A., L. L. B., Advocate, is appointed to act as Munsiff of Yedahalli in the last class, *sub protem,* during the absence of Mr. M. A. Narayana iengar on leave or until further orders.

CHANGE AMONG MUNSIFFS.—Mr. Vander lowen the *pukka* Munsiff of Bangalore having returned from sick leave, has to take charge of his office this afternoon, Mr Sreenivasa Rao the present incumbent be coming the additional Munsiff of this place relieving Mr. Subramanya Iyer who has been translated to Dewan's office as one of the Assistant Commissioners doing duty there.

According to the *Gazette* the following additional rule shall be inserted after Rule 85 of the Rules framed under Section 69 of the Indian Registration Act III of 1877, as it is in force in Mysore :—

" 85A. (1) Government officers, who may require to search the registers or to take copies of entries for *bona fide* public purposes, shall be permitted to do so without payment of any fee.

" (2) Searches made in view to ascertain if there are any encumbrances on lands offered as security under the Mysore Land Improvement Loans Regulation, 1890 shall be made by the Registering Officer, who shall furnish a certificate as to the result of such search. Whenever possible, the search may be made under Rule 83 by the Revenue Officers."

Extracts.

A STORY OF QUEEN VICTORIA

Mr. A T Story vouches for the truth of the following incident of the Queen's childhood, which he narrates in the London *Quiver.* She was at the time but seven or eight years of age, and her heart was set on a certain doll which she had seen in a shop window She had to wait, however, until she could save the price, six shillings, out of her pocket-money At last the day came and the coveted doll was paid for and received. The story proceeds as follows —

" And now, with the precious treasure on her arm, the little lady bade the shop keeper good after-noon, and was about to step from the door, when a poor, miserable-looking object of a man met her eye. He was standing by a couple of feet away, and seemed as though he were going to speak to her, attracted doubtless by the innocent kindliness of her expression, and the tenderness of her blue eyes. But though his lips moved, no sound came from them.

" He stood aside to let her pass—a mute agonized appeal in his sunken cheeks and quivering chin

" ' Did you wish to speak to me ? ' asked the little lady, staying her steps.

" Encouraged by her winning voice, the poor tramp—for such he was—said, in trembling accents —

" ' I am very hungry I would not ask for help if I were not ready to sink with hunger.

" He looked famine from his eyes

" ' I am so sorry ; I have no money, or else—

" His lips trembled forth a humble ' Thank you, lady,' then he shuffled on his way, hunger impersonate.

" ' Stay !' murmured the little owner of the new doll. There was a quiver in her childish voice and a moisture in her eyes as she spoke. ' Wait a minute, please.'

" She stopped back into the shop, approached the lady behind the counter, and said :—

" ' Oh, please, do you mind taking the doll back and keeping it for me for a few days longer ? '

" ' Certainly I will ' replied the shopkeeper; ' and you wish me to return you the money ? '

" ' Yes, if you please.'

" This was done, and the little lady hurrying out of the shop, placed the whole of the money in the hands of the starving man

" He was like one thunderstruck. Never had bounty rained upon him in such profusion before. . . .

" The object of her bounty murmured in a low tone, though loud enough to reach her ear :—

" If the Almighty made you a queen it would not be more than your goodness deserves !'

" Then he hobbled away to satisfy his hunger."

ಕರ್ನಾಟಕ ಪ್ರಕಾಶಿಕಾ.

೧೮೯೭ನೇ ಇಸವಿ ಜೂನ್ ತಾ|| ೨೮ನೇ ಸೋಮವಾರ.

ಪ್ರಜಾ ಪ್ರತಿನಿಧಿ ಸಭೆ.

ನಾಳೆ ಬರುವದು ಆಷಾಢಮಾಸ. ಈ ಆಷಾಢಮಾಸದಲ್ಲಿ ಬರುವ ನವರಾತ್ರಿಯ ಪ್ರಜಾ ಪ್ರತಿನಿಧಿ ಸಭೆಗೆ ಬರುವಂತಾ ಪ್ರತಿನಿಧಿಗಳನ್ನು ಚುನಾಯಿಸುವ ಬಗ್ಗೆ ಎಲ್ಲಾ ತಾಲ್ಲೂಕುಗಳಲ್ಲಿಯೂ ಅಮಲ್ದಾರರು ಮೀಟಿಂಗ್ ಜರಿಗಿಸುತಲಿದಾರೆ. ಈಗ ಪ್ರಜೆಗಳು ತಿಳಿಯಬೇಕಾದ ಕೆಲವು ಅಂಶವನ್ನು ವ್ಯಕ್ತಪಡಿಸುವ ನಮ್ಮ ಕರ್ತವ್ಯವನ್ನು ನಾವು ನಡಿಸಬೇಕಾಗಿದೆ. ಪ್ರತಿನಿಧಿಗಳಾಗಿ ಹೋಗುವದಕ್ಕೆ ಅರ್ಹರಾದವರು ಇಂತವರೆಂತಲೂ, ಅಂತಾ ಪ್ರತಿನಿಧಿಗಳನ್ನು ಚುನಾಯಿಸುವದಕ್ಕೆ ಅರ್ಹರಾದವರು ಇಂತವರೆಂತಲೂ ಅಮಲ್ದಾರರು ಒಂದು ಪಟ್ಟಿಯನ್ನು ತಯಾರಿಸಿ ಎಲ್ಲಾ ಮೆಂಬರ್‌ಗಳ ಪೇರಿಗೂ ಜಾರೀಮಾಡಿ ಮೀಟಿಂಗ್ ಬಗ್ಗೆ ಒಂದು ತಾರೀಖ್ ಗೊತ್ತುಮಾಡುತ್ತಾರೆ. ಇದರಲ್ಲಿ ಆಕ್ಷೇಪಣೆ ಇಲ್ಲದಹಾಗೆ ಅಮಲ್ದಾರರು ಕೆಲವರೂ ಬಿಡುವದಿಲ್ಲವು ಆದುದರಿಂದ ನ್ಯಾಯವಾದ ಬಹುಮಂದಿಯರ ಹೆಸರು ಬಿಟ್ಟುಹೋಗುತಲಿದೆ. ಈ ಕೆಲಸವು ಅಮಲ್ದಾರರುಗಳ ತಿಳುವಳಿಕೆಯಿಂದಲೇ ನಡೆಯುತ್ತದೋ ಅವರ ತಿಳುವಳಿಕೆ ಇಲ್ಲದೆ ನಡೆದುಹೋಗುತದೆಯೋ ಗೊತ್ತಿಲ್ಲವು. ಹಾಗೆ ಬೇಕಾಗುವವರ ಹೆಸರನ್ನು ದಾಖಲ್ಮಾಡಿ ಕೊಳ್ಳಬೇಕೆಂದು ಅವಶ್ಯ ಬಂದವರು ಅಮಲ್ದಾರರಿಗೆ ಲಿಖಿತಮೂಲವಾಗಿ ತಿಳಿಸುತ್ತಿ ಸಿಕೊಳ್ಳುವದರಿಂದ ಅವಮಾನವೇನೂ ಇಲ್ಲವು. ಈಗ ಯೋಗ್ಯರಾದವರನ್ನು ಚುನಾಯಿಸಿಕೊಳ್ಳದಿದ್ದರೆ ಇನ್ನು ಮೂರು ವರ್ಷಗಳು ನಾವು ಬಹಳ ಶ್ರಮ ಪಡಬೇಕಾಗುತದೆ. ಪ್ರತಿನಿಧಿಗಳನ್ನು ಚುನಾಯಿಸುವ ಅಧಿಕಾರವು ಪ್ರಜೆಗಳಿಗೆ ಸೇರಿರುವದರಿಂದ ರಾಜಭಾಗಿಯ, ಸಾಹುಕಾರರಾಗಿಯೂ, ಆಸ್ಥಾನದ ಮರ್ಯಾದೆಯನ್ನು ತಿಳಿದು ಪತ್ರಿಗೌರವ ಅಧಿಕಾರಿಗಳ ಗೌರವವನ್ನು ತಿಳಿದು ಮಾತನಾಡತಕ್ಕವರಾಗಿಯೂ ಇರುವವರನ್ನು ಚುನಾಯಿಸದೆ ಹೋದರೆ ಅಂತ ದೋಷಕ್ಕೆ ಚುನಾಯಿಸುವ ಪ್ರಜೆಗಳೇ ಗುರಿಯಾಗುತ್ತಾರೆ ಇಂತವರನ್ನು ಚುನಾಯಿಸಿ ಈ ವರ್ಷ ಕಳುಹಿಸೋಣವೆ? ಎಂದು ಹೇಳುವದಕ್ಕೆ ಅಮಲ್ದಾರರಿಗೆ ಅಧಿಕಾರ ಸಾಲದು. ಮೀಟಿಂಗ್ ಕಾಲದಲ್ಲಿ ನ್ಯಾಯವಾಗಿ ಅಮಲ್ದಾರರು ಇರಬೇಕಾದದು. ಹಾದುವೇಳೆ ಇದ್ದರೂ ಯಾವ ಮಾತನ್ನು ಆಡದೆ ಮೌನವಾಗಿರಬೇಕು. ಈ ಅಂಶವನ್ನು ತಿಳಿಯದೆ ಬಹುಮಂದಿಯರು ಅಮಲ್ದಾರರಿಗೆ ಅಧಿಕಾರವಿದೆಯೆಂದು ಭ್ರಾಂತರಾಗಿ ಅಮಲ್ದಾರರು ಸ್ವಯಂಭುಗಳನ್ನು ಚುನಾಯಿಸುವಂತೆ ಹೇಳಿದರೆ ಹಾಗೆ ಆಗಬಹುದು, ಮಹಾಸ್ವಾಮಿ, ಎಂದು ಹೇಳುತ್ತಾರೆ. ಇದುವರೆಗೆ ಹಾಗೆ ಮಾಡಿಕೊಂಡೇ ಯೋಗ್ಯರಾದವರು ಸಭೆಗೆ ಬರುವದಕ್ಕೆ ಅವಕಾಶವಿಲ್ಲದೆ ಹೋಯಿತು ೧೬ ವರ್ಷಗಳಿಂದ ಹೀಗೆಯೇ ತಳ್ಳಿಹೋಯಿತು ಮುಂದೆಯೂ ಹಾಗೆಯೇ ತಪ್ಪದೆ ಯೋಗ್ಯರಾದವರನ್ನು ಚುನಾಯಿಸಿ ಪ್ರತಿನಿಧಿ ಸಭೆಯು ದಿನ ದಿನಕ್ಕೆ ಬಲಿಯುವಹಾಗೆ ಮಾಡುವದು ದೇಶಕ್ಕೂ ಅದರ ಗರ್ಭವಾಸದಲ್ಲಿರುವ ಪ್ರಜೆಗಳಿಗೂ ಕ್ಷೇಮಕರವು. ವಿದ್ಯಾಭ್ಯಾಸವಿಲ್ಲದೆ ರಾಜಕೀಯ ಜ್ಞಾನಶೂನ್ಯನಾಗಿರುವ ಮನುಷ್ಯನು ಐಶ್ವರ್ಯವಂತನಾಗಿದ್ದಾನೆಂದು ಚುನಾಯಿಸಿದರೆ ಆತನಿಂದ ನಮಗೇನು ಪ್ರಯೋಜನವಾದೀತು? ಪುಂಸ್ತ್ವವಿಲ್ಲದ ಅಳಿಯನು ನೋಟಕ್ಕೆ ಚೆನ್ನಾಗಿದ್ದಾನೆ ಆಸ್ತಿವಂತನೆಂದು ಮಗಳಿಗೆ ಮದುವೆ ಮಾಡಿದರೆ ವಂಶಾಭಿವೃದ್ಧಿಯಾದೀತೆ? ಶಾನುಭೋಗರನ್ನು ಪಟೇಲರನ್ನು ಚುನಾಯಿಸುವದು ನಮಗೆ ಪ್ರತಿಕೂಲವೇ ಹೊರ್ತು ಅನುಕೂಲವಾಗುವದಿಲ್ಲವು ಈ ಶಾನುಭೋಗ ಪಟೇಲರಿಗೆ ಅಮಲ್ದಾರರನ್ನ ನೋಡಿದರೆ ಕೈಕಾಲು ನಡುಗುತದೆ. ಡೆಪ್ಯುಟಿ ಕಮಿಷನರರನ್ನು ನೋಡಿದರೆ ಬಾಯಿ ತೆರೆಯಲು ಕೂಡ ನಾಚಿಕೆಯಾಗುತಿದೆ. ದಿವಾನರನ್ನು ನೋಡಿದಾಗ ಏನುಗತಿಯಾಗಬಹುದೊ ನಮ್ಮವಾಚಕರೇ ಆಲೋಚಿಸಲಿ. ತಮ್ಮ ಅಹವಾಲುಗಳನ್ನು ಬೋಧೆಯಾಗುವಂತೆ ಹೇಳುವ ಧೈರ್ಯವು ಯುಕ್ತಿ ಸಾಮರ್ಥ್ಯವು ಇಲ್ಲದ ಪ್ರತಿನಿಧಿಗಳಿಂದ ದಿವಾನರಿಗೆ ಪ್ರಜೆಗಳ ಕಷ್ಟ ಸುಖಗಳು ಎಷ್ಟು ಚನ್ನಾಗಿ ಗೊತ್ತಾಗಬಹುದೋ ಅದನ್ನೂ ಅವರುಗಳೇ ಪರ್ಯಾಲೋಚಿಸಬಹುದು. ಆದ್ದರಿಂದ ಸರಿಯಾದವರನ್ನು ಚುನಾಯಿಸಿ ಕಳುಹಿಸಿಕೊಟ್ಟು ತಮ್ಮಲಿಕ ರಾಜ್ಯಕ್ಕೆ ಕ್ಷೇಮಲಾಭವನ್ನು ತೋರಿಸರಿ ಎಂದು ಈಮೂಲಕ ಎಚ್ಚರಿಸುತ್ತೇವೆ.

ಹಯಗ್ರೀವ ಭಂಡಾರ.

ಮೈಸೂರಲ್ಲಿ ಅರಮನೆಯೊಳಗಿದ್ದ ಸರಸ್ವತೀ ಭಂಡಾರವು ಯಜ್ಞೇಶ್ವರನ ಸ್ವಾಧೀನಕ್ಕೆ ಸಿಕ್ಕಿಹೋದ್ದರಿಂದ ಅದರಲ್ಲಿದ್ದ ಗ್ರಂಥಗಳು ಮನುಷ್ಯರಾದವರಿಗೆ ಈಗ ಸಿಕ್ಕುವ ಹಾಗಿಲ್ಲವು. ಬಹುಮಂದಿ ಪಂಡಿತರು ಈ ನಷ್ಟವನ್ನು ಪುತ್ರಶೋಕದಂತೆ ಅನುಭವಿಸುತಲಿದಾರೆ. ಈ ಬೆಂಗಳೂರು ಉಪ ರಾಜಧಾನಿಯು ಇಲ್ಲಿರುವ ಪ್ರಜೆಗಳ ಉಪಯೋಗಕ್ಕೆ ಮೈಸೂರಲ್ಲಿರುವ ಜ್ಯುಬಿಲಿ ಭಂಡಾರವು ಸುಲಭವಾಗಿ ಉಪಯೋಗಿಸುವದಿಲ್ಲವೆಂಬ ಅಂಶವನ್ನರಿತು ಇಲ್ಲಿಯೂ ಪ್ರತ್ಯೇಕ ಹೆಸರಿನಂತೆ ಒಂದು ಪುಸ್ತಕ ಭಂಡಾರವನ್ನು ಏರ್ಪಡಿಸಬೇಕೆಂದು ಕೆಲವು ಪಂಡಿತರು ಪ್ರಯತ್ನಮಾಡಿರುವಂತೆ ಅರಿತು ಪುತ್ರಸಂತಾನವಾದವನು ಸಂತೋಷಿಸುವಂತೆ ಸಂತೋಷಿಸುತ್ತೇವೆ. ಈ ಪ್ರಯತ್ನಕ್ಕೆ ಮೂಲಭೂತರು ಯಾರೆಂದು ವಿಚಾರಿಸಲ್ಪಡಲು ಶ್ರೀಯುತ ಐಯ್ಯಂಗಾರ್ ರಾಘವಾಚಾರ್ಯರು, ತಿರುಪ್ಪತಿ ವೆಂಕಟಾಚಾರ್ಯರು ಎಂಬದಾಗಿ ತಿಳಿಯಬರುತದೆ. ಈಗ ಇವರ್ಗಳು ರೂಪಾಯಿ ಪುಸ್ತಕಗಳನ್ನು ಶೇಖರಿಸಿದಾರೆಯಂತೆ. ಇದನ್ನು ತಲೇ ತೋಟದಲ್ಲಿರುವ ಬಂಗಳೆಯನ್ನು ಅದರ ಸ್ವಾಧಾರಾದ ಬಿ. ಜೆ. ಕೃಷ್ಣಯ್ಯಂಗಾರ್‌ರವರು ಬಾಡಿಗೆ ಇಲ್ಲದಂತೆ ಕೊಡುತ್ತು ಇಡಬೇಕೆಂದು ಯೋಚಿಸಿರುವಹಾಗೆಯೂ ಕೇಳುತ್ತೇವೆ. ಇದೆಲ್ಲ ವಾಸ್ತವವಾಗಿ ಕೆಲಸವು ನಡೆದರೆ ನಮ್ಮಂತವರಿಗೆಲ್ಲ ಎಷ್ಟೋ ಪ್ರಯೋಜನಕರವಾಗಿರುವದು. ಈ ಪಂಡಿತರುಗಳು ಮಾಡಿರುವ ಆಲೋಚನೆಯು ಶ್ಲಾಘನೀಯವಾದದ್ದು. ಪ್ರಾರಂಭ ಮಾಡತಕ್ಕವರು ಈ ಡೈಮಂಡ್ ಜ್ಯುಬಿಲಿ ಮಹೋತ್ಸವದ ಜ್ಞಾಪಕಾರ್ಥವಾಗಿ ಶೀಘ್ರದಲ್ಲಿಯೇ ಆರಂಭಿಸಿದರೆ ದಿನದಿನಕ್ಕೆ ಅಭಿವೃದ್ಧಿಯಲ್ಲಿ ತರಬಹುದು. ಅಲ್ಲದೆ ಜನರನ್ನು ಪ್ರಾರ್ಥಿಸಿಕೊಂಡು ಇನ್ನೂ ಗ್ರಂಥಗಳನ್ನು ಶೇಖರಿಸಬಹುದು. ಇಂತಾ ಸತ್ಕಾರ್ಯಾರಂಭದ ಆಲೋಚನೆ ಹುಟ್ಟಿದಾಗಲೇ ಮಾಡುವ ಉತ್ಸಾಹವು ಸಿದ್ಧವಾಗದಿದ್ದರೆ ಕೆಲಸವು ನಿಧಾನದಲ್ಲಿಯೇ ಹೋಗುತಿದೆ ಈ ಪಂಡಿತರು ಕಾಲಹರಣ ಮಾಡದೆ ನಮಗೆ ಉಂಟಾದ ಆಲೋಚನೆಯನ್ನು ಸಾರ್ಥಕ ಪಡಿಸಿಕೊಳ್ಳುವರೆಂದು ನಂಬಿರುವೆವು.

ತುಲಸೀತೋಟ.

ಗತವಾರದಲ್ಲಿ ನಾವು ತುಲಸೀ ತೋಟದಲ್ಲಿನ ದಿನ ಪ್ರತಿಷ್ಠಾ ಕ್ರಮಗಳನ್ನೆಲ್ಲ ನಮ್ಮ ವಾಚಕರಿಗೆ ವಿಶದಪಡಿಸಿದ್ದೆವಷ್ಟೆ. ಅದರಲ್ಲಿ ವಿಷಯ ದೋಷವಾಗದೆ ಒಂದು ಅಂಶವು ಮಾನಸಿಕವಾದಲ್ಪಟ್ಟಿತ್ತು. ಆ ದೇವಸ್ಥಾನದ ಅರ್ಚಕ ಸುಂದರ ಭಟ್ಟರವರು ವಿಷ್ಣು ದೇವಾಲಯಕ್ಕೆ ಮುಖ್ಯಾಂಗಭೂತವಾದ ಗರುಡದೇವರ ಪ್ರತಿಷ್ಠೆಯನ್ನು ಮಾಡಿಸಿದರು. ಸಾಧಾರಣವಾಗಿ ಅರ್ಚಕರು ದೇವರ ಸ್ವತ್ತನ್ನು ಕಬಳಿಸುವವರಾದ್ದರಿಂದ ಅವರಿಗೆ ದೇವಲಕರೆಂಬ ಹೆಸರೊಂದುಂಟು. ಹೀಗಿದ್ದಾಗ್ಯೂ ಈ ಅರ್ಚಕರು ಈ ಕೃಷ್ಣನಿಗೆ ತಮ್ಮ ಕೈಯಿಂದಲೇ ಆಗಾಗ್ಗೆ ಸೇವೆಗಳು ನಡೆಸೋಣವು ವಿಗ್ರಹಗಳನ್ನು ಪ್ರತಿಷ್ಠೆ ಮಾಡಿಸೋಣವು ನೋಡಿ ಆಶ್ಚರ್ಯಪಡುತ್ತೇವೆ. ಅರ್ಚಕರ ಆರಾಧನಾಶಕ್ತಿಯ ಮಹಿಮೆಯಮೇಲೆ ದೇವರಲ್ಲಿ ಐತಿಹ್ಯವು ಅಧಿಕವಾಗುವದೆಂದು ಪಾಂಚರಾತ್ರದಲ್ಲಿ ಹೇಳುವಮೇರೆ ಈ ಅರ್ಚಕರ ಭಕ್ತಿಪುರಸ್ಸರವಾದ ಆರಾಧನೆಯ ದೆಸೆಯಿಂದಲೇ ಈ ದೇವಾಲಯವು ದಿನದಿನಕ್ಕೆ ಅಭಿವೃದ್ಧಿಯನ್ನೈದುತ ಭಕ್ತರ ಸಂಖ್ಯೆಯನ್ನು ಹೆಚ್ಚುಮಾಡಿಕೊಳ್ಳುತ ಬರುವ ಸಂತೋಷಕ್ಕೆ ದೇವಾಲಯಾಧಿಕಾರಿಯಾದ ಬಿ. ಜೆ. ಕೃಷ್ಣಯ್ಯಂಗಾರ್‌ರವರು ಹಿಗ್ಗಿ ಮೈಯುಬ್ಬಿತ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಬೇಕೆಂಬದಾಗಿ ಯೋಚಿಸಿ ಅಡಿಗೆ ಮನೆ, ಯಾಗಶಾಲೆ, ಉಗ್ರಾಣ, ಬೊಕ್ಕಸ

ಆಸ್ಥಾನದ ಅಟವೆ, ಇವುಗಳನ್ನೆಲ್ಲ ಕಟ್ಟಿಸುವದಕ್ಕಾಗಿ ಮೂರು ಸಹಸ್ರ ರೂಪಾಯಿಗಳ ವರೆಗೆ ಕಾಮಗಾರಿ ಮಾಡಿಸುವದಾಗಿ ನಿಶ್ಚಯಿಸಿಕೊಂಡು ಈ ಕಾಮಗಾರಿಯ ಮೇಲ್ವಿಚಾರಣಾಧಿಕಾರವನ್ನು ನೋಡಬೇಕೆಂದು ಲೋಕಲ ಅಮಲದಾರ ವೆಂಕಟಾಚಲಯ್ಯನವರಿಗೆ ಕಾಗದ ಬರೆದಿರುವಂತೆ ಅರಿತು ಸಂತೋಷಿಸುತ್ತೇವೆ. ಕಾಮಗಾರಿಗೆ ಪ್ರಾರಂಭ ಮಾಡಿದಸಂಗತಿ ತಿಳಿದು ಆಗ್ಗೆ ಹತ್ತು ಜನಗಳ ಸಹಾಯಾರ್ಥವಾಗಿ ಇವರು ಮಾಡತಕ್ಕ ಕಾವಪರಿಶ್ರಮವನ್ನು ವ್ಯಕ್ತಪಡಿಸುವೆವು

ಕೌನ್ಸಿಲಿನ ಬದಲಾವಣೆ

ಲೇಟಿ ಮಹಾರಾಜಾ ಶ್ರೀ ಚಾಮರಾಜೇಂದ್ರ ಒಡೆಯರವರು ಅಕಾಲಮರಣಕ್ಕೆ ಗುರಿಯಾಗಿ ಪ್ರಜೆಗಳನ್ನು ಕೈಬಿಟ್ಟ ೧ ವರ್ಷದ ಮೈಸೂರು ಧೊರೆಯನ್ನು ರಾಜ್ಯಭಾರಕ್ಕೆ ಅನರ್ಹರಾದ ಕಿರಿಯವರನ್ನು ಬಿಟ್ಟು ಹೋದಂದಿನ ಬ್ರಿಟಿಷ್ ಇಂಡಿಯಾ ಸರಕಾರದವರು ರಾಜ್ಯಭಾರದ ಆಡಳಿತ ಭಾರವನ್ನು ಸುಪ್ರಸನ್ನ ಮಹಾರಾಣೀ ರೀಜಂಟರ ಮೇಲೆಯೇ ಹಾಕಿ ... ನಡೆಸುವರೆಂದು ಪ್ರಜೆಗಳ ... ವಾಗಿ ಎಕ್ಸಿಕ್ಯುಟಿವ್ ಕೌನ್ಸಿಲ್ ಒಂದನ್ನು ಏರ್ಪಡಿಸಿದರಷ್ಟೆ; ಈ ಕೌನ್ಸಿಲಿನ ಮೆಂಬರುಗಳನ್ನು ಹತ್ತು ವರ್ಷ ಹಿಂದಾವರಿಗೆ ಬದಲು ಮಾಡಬಾರದೆಂದು ವೊದಲೇ ನಿಶ್ಚಯ ಮಾಡಿದಾರೆ ಅವರು ತಮ್ಮ ಕೆಲಸವನ್ನು ಸರಿಯಾಗಿ ನೆರವೇರಿಸುವ ಕಾಲವು ಸಮೀಪಿಸಿ ಬರುತಲಿದೆ. ಈಗಿನ ಕೌನ್ಸಿಲ ಮೆಂಬರರಿಗೆ ೨ ಸಂವತ್ಸರಗಳ ದಿವ್ಯ ಈ ಕೌನ್ಸಿಲರುಗಳು ನಡೆಸುವ ರಾಜ್ಯಭಾರಕ್ರಮದಿಂದ ಸಕಲರಿಗೂ ರಾಜ್ಯಭಾರದಲ್ಲಿ ಬದಲಾವಣೆಯಾದುತಮೇ ತೋರದೆ ಪಕಾರೀತಿಯಾಗಿರುತ್ತ ಪ್ರಜೆ ಕ್ಷೇಮಕ್ಕೆ ಬೇಕಾದ ಏರ್ಪಾಡುಗಳೊಂದೂ ಇವರ ಕಾಲದಲ್ಲಿ ನಡೆದಂತೆ ತೋರುವದಿಲ್ಲವಾಗಿ ವಿಷಾದಿಸಬೇಕಾಗಿದೆ. ಮುಂದಿನ ಬದಲಾವಣೆಗಳಲ್ಲಿ ಕೆಲ್ಟರವರಿಗೂ ಟಾರ್ ಸಾಹೇಬರವರಿಗೆ ಮಾತ್ರ ವಿಶ್ರಾಂತಿಯನ್ನು ಕಲ್ಪಿಸುವದಾಗಿಯೂ, ಕೃಷ್ಣಮೂರ್ತಿಯವರಿಗೆ ಇನ್ನು ಒಂದು ಛಾನ್ಸ್ ಕೊಡುವದಾಗಿಯೂ ವಿಚಾರ ನಡೆಯುತಲಿರುವಂತೆ ಅರಿಯುತ್ತೇವೆ. ಕೃಷ್ಣಮೂರ್ತಿಯವರು ರೆವಿನ್ಯೂ ಬಾಬಿನಲ್ಲಿ ಪ್ರಜೆಗಳ ಅಹವಾಲುಗಳನ್ನು ರಾಯತರ ಮುಖೇನ ತಿಳಿಯಪಡಿಸಿಕೊಳ್ಳುವದಕ್ಕೆ ಕೂಡ ಇಲ್ಲವಂತೆ ಅಮಲದಾರರುಗಳು ರಾಯತರ ಬಂದು ಹೇಳಿಕೊಳ್ಳಬೇಕೆಂದು ಮಾಡಿರುವ ಏರ್ಪಾಡು ಸರಿಯಾದ್ದಾಗಿ ತೋರಲಿಲ್ಲವು ಇದನ್ನು ಬದಲಾಯಿಸಿ ರೈತರು ತಮ್ಮ ಅಹವಾಲುಗಳನ್ನು ಖುದ್ದು ಹೇಳಿಕೊಳ್ಳಲಾಗಲಿ, ಅಥವಾ ಅವರ ತರಫ ವಾಯಿದೆದಾರರಾದ ವಕೀಲರ ಮೂಲಕದಿಂದಲಾಗಲಿ ಹೇಳಿಕೊಳ್ಳುವಂತೆ ಮಾಡಿದರೆ ಮಾತ್ರ ಪ್ರಯೋಜನವಾಗುವದಲ್ಲದೆ ಪ್ರಕೃತ ಸ್ಥಿತಿಯು ಬಹಳ ಹಿಂಸೆಕರವಾಗಿರುವಂತೆ ಎಣಿಸಬೇಕಾಗಿದೆ.

Occasional Notes.
ನೈಮಿತ್ತಿಕವಿಷಯನ್ಯಾಸ.

ಈ ತಿಂಗಳ ೮ನೇ ತಾರೀಖಿನಲ್ಲಿ ಲಾಹೋರಿ ಪಟ್ಟಣದೊಳಗೊಬ್ಬ ಸ್ತ್ರೀಗೆ ೪ ಮಕ್ಕಳುಗಳನ್ನು ಹತವು ತಿಂಗಳು ಛಾಣಾಂತಿ ಫಜ ಸುಖವಾಗಿದಾರೆಂದು ತಿಳಿಯುಬರುತಿದೆ.

ಕಳೆದ ಫೆಬ್ರುವರಿ ತಿಂಗಳಲ್ಲಿ ತೆಂಜಾವೂರ ಅರಮನೆಯೊಳಗೆ ೨೯,೦೦೦ ರೂಪಾಯಿಗಳು ಬಾಳುವಷ್ಟು ಜವಾಹಿರ್ ಚೋರಿ ಆಗಿರುವದಾಗಿಯೂ, ಇದನ್ನು ಪತ್ತೇ ಮಾಡಿಕೊಟ್ಟವರಿಗೆ ೧,೦೦೦ ರೂಪಾಯಿ ಇನಾಂ ಕೊಡುವದಾಗಿಯೂ ಅಲ್ಲಿನ ರಾಣೀಯವರು ಪ್ರಕಟಿಸಿರುತ್ತಾರೆ.

ಒಬ್ಬನೊಬ್ಬ ಪಂಜಾಬಿ ಮುಸಲ್ಮಾನ ಉಪನ್ಯಾಸಕನು ತಾನು ಉಪನ್ಯಾಸ ಮಾಡಲು ಸೂರ್ಯೋದಯದಲ್ಲುಪಕ್ರಮಿಸಿ ಆದಿನ ರಾತ್ರಿ ೧೦ ಘಂಟೆಯಾದರೂ ಮುಗಿಸದೆ ಇನ್ನೂ ಒದರುತಲೇ ಯಿದ್ದನೆಂತ ಒಂದಾನೊಂದು ಪತ್ರಿಕೆ ತಿಳಿಸುತಿದೆ. ೧೮ ಘಂಟೆಗಳಾದರೂ ಬಿಡದೇ ಕೂಗುತಲಿರುವದಕ್ಕೆ ಅವನ ಕಂಠ ತ್ರಾಣವೆಷ್ಟಿರಬಹುದೊ ಆ ಉಪನ್ಯಾಸದ ವಿಷಯವೆಂತಾದ್ದೊ ತಿಳಿಯಲಿಲ್ಲವು.

ಕಳೆದ ವೈಶಾಖಶುದ್ಧ ಪಂಚಮೀ ದಿನ ಗೋದಾವರಿ ಜಿಲ್ಲಾ ಪಿಠಾಪುರ ಯೆಂಬ ಸ್ಥಳದಲ್ಲಿ ಬ್ರಹ್ಮಶ್ರೀ ಅಪ್ಪೋರಿ ಲಕ್ಷ್ಮೀನೃಸಿಂಹ ದೀಕ್ಷಿತರವರು ಪಿಷ್ಟ ಪಶು ಅಧ್ವರ್ಯವನ್ನು ವಿಧ್ಯುಕ್ತವಾಗಿ ನೆರವೇರಿಸಿ ೪೦ ಸಹಸ್ರ ಬ್ರಾಹ್ಮಣ ಭೋಜನ ಮಾಡಿಸಿದರಂತೆ. ಸ್ಮಾರ್ತರಲ್ಲಿ ಆಚಾರವಿಲ್ಲದ ಪಿಷ್ಟಪಶುಯಜ್ಞವನ್ನು ಈ ದೀಕ್ಷಿತರು ಮಾಡಿದ್ದರಿಂದ ಆಪ್ರಾಂತದಲ್ಲಿರತಕ್ಕ ಬ್ರಾಹ್ಮಣರಲ್ಲಿ ಯೆರಡು ಕಕ್ಷಿಗಳಾಗೇರ್ಪಟ್ಟು ಪರಸ್ಪರ ದ್ವೇಷಕ್ಕೆ ಕಾರಣವಾಗಿರುವಂತೆ ಕೇಳಲು ವಿಷಾದಿಸುತ್ತೇವೆ

ಕೆಲವು ಮೊಕದ್ದಮೆಗಳಲ್ಲಿ ತೀರ್ಪುಗಳನ್ನು ಜಾಗ್ರತೆಯಾಗಿ ಕೊಡದೆ ಹೋದದಕ್ಕಾಗಿ ಪಟಿಯಾಲಾಸಂಸ್ಥಾನದ ಮಹಾರಾಜರವರು ತಮ್ಮ ಮಂತ್ರಿ ಮೊದಲಾಗಿ ನಾಲ್ಕುಜನ ದೊಡ್ಡ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿರುವದಾಗಿ ತಿಳಿಯುಬರುತಿದೆ ದೊಡ್ಡ ಅಧಿಕಾರಿಗಳ ವಿಷಯದಲ್ಲಿ ಹೀಗೆನಡಿಸಿದ್ದು ನೋಡಿದರೆ ಆ ಮೊಕದ್ದಮೆಗಳ ಸ್ವರೂಪವೆ ತಾದೆಂದ್ದು ಗೊತ್ತಾಗಲಿಲ್ಲವು ಪರಂತು ನಮ್ಮ ದೇಶದಲ್ಲಿ ಅನೇಕ ಮೊಕದ್ದಮೆಗಳಲ್ಲಿ ತೀರ್ಪುಗಳು ಹೇಳಲು ವರುಷಗಟ್ಟಲೆ ಹಿಡಿಯುತಲಿದ್ದರೂ ಕೇಳುವ ಧಣಿಯೇ ಇಲ್ಲದೆ ಇರುತ್ತೆ.

ರಾಮನಾಥಪುರದ ಜಮೀನ್ದಾರರಾದ ರಾಜಾ ಭಾಸ್ಕರ ಸೇತುಪತಿಯವರು ದುಂದುಗಾರಿಕೆಯಿಂದ ಬಹಳ ಸಾಲಮಾಡಿಕೊಂಡು ಅದನ್ನು ತೀರಿಸುವದಕ್ಕಾಗಿ ಯುರೋಪಿಯನ್ ವರ್ತಕರಿಂದ ೨೦ ಲಕ್ಷ ರೂಪಾಯಿಗಳು ಸಾಲಾ ತೆಗೆಯಲು ಪ್ರಯತ್ನ ನಡೆಸುತಲಿರುವಂತೆ ಕೇಳಲು ವಿಷಾದಿಸುತ್ತೇವೆ ಇವರು ವಿದ್ಯಾವಂತರು, ಪರಂತು ಇವನ್ನು ಬಾಹ್ಯ ಸಮೀಪವರ್ತಿಗಳಲ್ಲಿ ಯೋಗ್ಯರಾದ ಮಂತ್ರಿಗಳ್ಯಾರೂ ಇರುವಹಾಗೆ ತೋರಲಿಲ್ಲವು ಯಾವರೀತಿಯಲ್ಲಾದರೂ ಮೇಲ್ಕಂಡಸಾಲವನ್ನು ತೀರಿಸಿ ಮುಂದೆಯಾದರೂ ಉಚಿತವಾದಮಾರ್ಗದಲ್ಲಿ ನಡೆಯುವಂತೆ ದೇವರು ಅವರಿಗೆ ಒಳ್ಳೆಯ ಬುದ್ಧಿಯನ್ನು ಕೊಡಲೆಂದು ಪ್ರಾರ್ಥಿಸುತ್ತೇವೆ

ಗೋದಾವರಿ ಕೃಷ್ಣಾ ಮತ್ತು ತೆಂಜಾವೂರ ಜಿಲ್ಲೆಗಳಲ್ಲಿ ತಾಲ್ಲೂಕುಗಳು ಬಹಳ ಭಾರೀಯಾಗಿ ವೊಬ್ಬ ತಹಸಿಲ್ದಾರನಿಂದ ನಿರ್ವಹಿಸಲು ಅಸಾಧ್ಯವೆಂದು ತಿಳಿದು ಅಂತಾ ಭಾರೀ ತಾಲ್ಲೂಕುಗಳನ್ನು ಎರಡೆರಡಾಗಿ ಒಡದು ಅವವಕ್ಕೆ ಬೇರೆ ಬೇರೆ ತಹಸೀಲ್ದಾರರುಗಳನ್ನು ನಿಯಮಿಸಬೇಕೆಂದು ಮದರಾಸ ಗವರ್ನಮೆಂಟನವರು ತಜವೀಜ ಮಾಡುತಲಿರುವಂತೆ ಕೇಳುತ್ತೇವೆ ನಮ್ಮ ದೇಶದಲ್ಲಾದರೊ ಭಾರೀಯೆಂದು ತಿಳಿದುಬಂದ ಕೆಲವು ತಾಲ್ಲೂಕುಗಳನ್ನು ಒಡೆದು ಸಬ್ ತಾಲ್ಲೂಕುಗಳನ್ನಾಗಿ ಮಾಡಿ ಅವುಗಳಿಗೆಲ್ಲ ಒಬ್ಬೊಬ್ಬ ಡೆಪ್ಯುಟಿ ಅಮಲ್ದಾರರಂತೆ ನಿಯಮಿಸಿದ್ದದ್ದು ಈಗ ಪುನಃ ಪೂರ್ವದಂತೆ ಸಬ್ ತಾಲ್ಲೂಕುಗಳನ್ನೆಲ್ಲ ಆಯಾಯ ತಾಲ್ಲೂಕುಗಳಿಗೆ ಸೇರಿಸಿಬಿಡಲು ಆರಂಭವಾಗಿರುವದಕ್ಕೆ ಶ್ರೀನಿವಾಸಪುರದ ತಾಲ್ಲೂಕೇ ಸಾಕ್ಷಿಯಾಗಿರುತದೆ.

ಬೊಂಬಾಯಿ ಪಟ್ಟಣದಲ್ಲಿ ಪ್ಲೇಗ್ ಎಂಬ ಮಹಾಮಾರಿಕೋಪದ್ರವದಿಂದ ೨೦,೦೦೦ ಜನದವರಿಗೂ ಹೋದಸಂಗತಿ ತಿಳಿದಿರುತದೆಯಷ್ಟೆ ಸದರೀ ಉಪದ್ರವವು ಪುನಃ ಪಟ್ಟಣಕ್ಕೆ ವ್ಯಾಪಿಸಲು ತನ್ನಿವಾರಣಾರ್ಥವಾಗಿ ಸರ್ಕಾರದವರು ಬಹಳ ಕಠಿಣವಾದ ಏರ್ಪಾಡು ಮಾಡಿದ್ದರಲ್ಲ ಅದನ್ನು ಜಾರಿಯಲ್ಲಿ ತರಲು ಜವಾಬ್ದಾರಿಯನ್ನು ವಹಿಸಿದ್ದ ಕಮಿಷನರ್ ಮೆ॥ ರ‍್ಯಾಂಡ್ ಎಂಬವರು, ಲೆಫ್ಟಿನೆಂಟ ಅಗ್ರಿಸ್ಟ್, ಲೆಫ್ಟಿನೆಂಟ ಒಲೊಯಿಸ, ಎಂಬ ಈ ಮೂರು ಜನ ಸರದಾರರೂ ತಮ್ಮ ಕಾರ್ಯವನ್ನು ನೆರವೇರಿಸುವದರಲ್ಲಿ ತಾರತಮ್ಯವಿಲ್ಲದೆ ಜನರನ್ನು ಬಹಳ ಹಿಂಸೆಪಡಿಸಿದರೆಂಬ ಜಿದ್ದು ಮನಸ್ಸಿನಲ್ಲಿಟ್ಟಿದ್ದ ಕೆಲವರು ಸಮಯ ನೋಡಿಕೊಂಡಿದ್ದು ಈ ತಿಂಗಳ ೨೨ನೆಯ ತಾರೀಖು ಮಂಗಳವಾರದದಿನ ನಡೆದ ಜೂಬಿಲಿ ಮಹೋತ್ಸವವನ್ನು ನೋಡಿಕೊಂಡು ವಾಪಸುಬರುತಲಿದ್ದ ಮೇಲ್ಕಂಡ ಮೂವರು ಸರದಾರರನ್ನು ಬಂದೂಕಿನಿಂದ ಹೊಡೆದು ಕೊಂದುಬಿಟ್ಟರೆಂದು ತಿಳಿಯಲು ವಿಷಾದಿಸುತ್ತೇವೆ. ಆಸಾಮಿಗಳನ್ನೂ ಪತ್ತೇಯಾಗಲಿಲ್ಲವು ಪತ್ತೆಮಾಡಿದವರಿಗೆ ೧೦,೦೦೦ ರೂಪಾಯಿ ಇನಾಂ ಕೊಡುವದಾಗಿ ಸರ್ಕಾರದವರು ಘೋಷಿಸ್ಯಾಡಿರುತ್ತಾರೆ.

ಪಂಜಾಬ ದೇಶದಿಂದ ಬಂದ ವರ್ತಮಾನದಲ್ಲಿ ಅಲ್ಲಿ ವೊಬ್ಬ ನಡುವಯಸ್ಸಿನ ಹುಡುಗ ಯಾವದೊ ಒಂದು ದೊಡ್ಡ ಕಠಿಣವಾದ ಪರೀಕ್ಷೆಗೆ ಹೋಗಿದ್ದು ಅನಂತರ ಕಾಯಿಲೆ ಸಂಭವಿಸಿ ಕೇವಲ ನಿತ್ರಾಣನಾಗಿರುವ ಸಂದರ್ಭದೊಳು ತಾನು ಹೋಗಿದ್ದ ಪರೀಕ್ಷೆಯಲ್ಲಿ ತೇರ್ಗಡೆಯಾಗಲು ತಪ್ಪಿಹೋದನೆಂದು ಬಂದ ವರ್ತಮಾನ ಕೇಳಿದ ಕೂಡ್ಲೆ ಆ ಹುಡುಗ ಮೂರ್ಛೆ ಹೋಗಲು ಸುತ್ತುಮುತ್ತಲಿದ್ದವರು ಅಳುವದಕ್ಕೆ ಶುರುಮಾಡಿದರು. ಆಗ್ಗೆ ಮನೆಯ ಮಾಳಿಗೆಯ ಮೇಲೆ ಕೆಲಸಮಾಡುತಲಿದ್ದ ಅವನ ಹೆಂಡತಿ ಈ ರೋದನ ದಧ್ವನಿಯನ್ನು ಕೇಳಿ ತನ್ನಗಂಡ ಮೃತಪಟ್ಟನೆಂದು ಭಾವಿಸಿ ತಕ್ಷಣ ಕೆಳಗಿಳಿದು ಬಂದು ಭೂಮಿಯಲ್ಲಿ ಬಿದ್ದು ಮೃತಪಟ್ಟಳೆಂದು ಕೇಳಲು ಬಹಳ ವಿಷಾದಿಸುತ್ತೇವೆ. ಯಾತಕ್ಕೆಂದರೆ ತನ್ನ ಪತಿ ಮೃತಪಟ್ಟನೆಂಬ ಸಂಗತಿ ಚೆನ್ನಾಗಿ ತಿಳಿಯದೆ ಈ ರೀತಿ ತನ್ನ ಪ್ರಾಣ ಕಳದುಕೊಂಡ ವಿಷಯ ಮೂರ್ಛಾಕ್ರಾಂತನಾಗಿದ್ದ ಆಹುಡುಗನು ಎಚ್ಚತ್ತುಕೊಂಡ ಮೇಲೆ ಕೇಳಿದರೆ ಆದುಃಖದಿಂದ ಅವನೂ ಮೃತನಾಗುವದಕ್ಕೆ ಕಾರಣವಾಗಬಹುದಲ್ಲವೆ, ಪರಂತು ಆ ಹುಡುಗಿಯ ಪಾತಿವ್ರತ್ಯವನ್ನು ಕುರಿತು ಯೆಷ್ಟು ಶ್ಲಾಘಿಸಿದರೂ ಸಾಲದು. ಇದನ್ನು ನಿಜವಾದ ಸಹಗಮನವೆಂದು ಹೇಳಬಹುದು. ಇಂತಾದ್ದನ್ನು ನಿಲ್ಲಿಸುವದಕ್ಕೆ ಯಾರಿಂದಸಾಧ್ಯ?

ಬರುವ ೯೮ನೇ ಇಸವಿ ಜನವರಿ ತಿಂಗಳಲ್ಲಿ ನಮ್ಮ ದೇಶದಲ್ಲೊಂದು ಸೂರ್ಯನ ಪೂರ್ಣಗ್ರಹಣ ಸಂಭವಿಸುವದಾದ್ದರಿಂದಲೂ, ಅದರ ಮಧ್ಯರೇಖೆಗೆ ರತ್ನಗಿರಿ, ಸತಾರಾ, ನಾಗಪುರ, ಮಂಡಲ, ಬಕ್ಸಾರ, ಮೋತಿಹರಿ, ಕೊನೆಗೆ ಹಿಮಾಚಲದ ಶಿಖರಗಳ ಪೈಕಿ ಅತ್ಯುನ್ನತವಾದ ವೊಂದು ಶಿಖರವು ಸಿಕ್ಕುವದರಿಂದ ಈ ಸ್ಥಳಗಳಿಗೆಲ್ಲ ನಾನಾ ದೇಶದಿಂದ ಪ್ರಖ್ಯಾತರಾದ ಸಿದ್ಧಾಂತಿಗಳು ಬರುವರಲ್ಲದೆ ಇಂಗ್ಲಾಂಡಿನಿಂದ ಮೂರುಜನ ಸಿದ್ಧಾಂತಿಗಳು ಬರುವವರಾಗಿದಾರೆಯಾಗಿ ಅವರುಗಳಿಗೆ ಸ್ಥಳವೊದಲಾದ ತಕ್ಕ ಸರಬರಾಯಿಗಳೆಲ್ಲ ಆಗುವದಕ್ಕೆ ಇಂಡ್ಯಾ ಗವರ್ನಮೆಂಟನವರು ಈಗಲಿಂದ ಪ್ರಾರಂಭಿಸಲು ಹುಕುಂಕೊಟ್ಟಿರುವದಾಗಿ ಕೇಳಲು ನಮ್ಮ ಸಿದ್ಧಾಂತಿಗಳಾದರೊ ಅವಿಚಾರರಮಣೀಯವೆಂಬ ಯೋಗನಿದ್ರೆಯಲ್ಲಿದಾರೆ. ಇವರು ಯಾವ ಜನ್ಮಕ್ಕೆ ಕಣ್ಣುತೆರದು ನೋಡುವರೊ ತಿಳಿಯದು.

ಭೂಮಿಗೂ ಇತರ ಗ್ರಹಗಳಿಗೂ ಇರುವ ಫಾಸಲೆ ಕರಾರುವಾಕಾ ಇಷ್ಟೇಯೆಂದು ಗೊತ್ತಾಗಿರುವಂತೆ ಸೂರ್ಯನಿಗೂ ಭೂಮಿಗೂ ಇರುವ ಫಾಸಲೆ ಕರಾರುವಾಕಾ ಯಿಷ್ಟೇಯೆಂಬುವದು ಇನ್ನೂ ಗೊತ್ತಾಗಿರುವದಿಲ್ಲವು. ಇದನ್ನು ಗೊತ್ತುಮಾಡುವದಕ್ಕೆ ಪೂರ್ಣವಾದ ಸೂರ್ಯೋಪರಾಗದ ಕಾಲವೇಹೊರ್ತು ಇತರತಃ ಆಗುವದಿಲ್ಲವು. ಇದಕ್ಕಾಗಿ ಯುರೋಪಿಯನ್ ಸಿದ್ಧಾಂತಿಗಳು ಈಗ್ಯೆ ಬಹುಕಾಲದಿಂದ ಪೂರ್ಣವಾದ ಸೂರ್ಯಗ್ರಹಣ ಎಲ್ಲೆಲ್ಲಿ ಆಗುತ್ತೊ ಆಸ್ಥಳಗಳಿಗೆಲ್ಲ ಹೋಗಿಬರುತಲಿರುತ್ತಾರೆ. ಕಳೆದ ವರುಷದಲ್ಲಿ ಉತ್ತರಸಮುದ್ರ ತೀರವಾದ ನಾರ್ವೇ ದೇಶದಲ್ಲಾದ ಸೂರ್ಯನ ಪೂರ್ಣ ಗ್ರಹಣವನ್ನು ನೋಡಲು ಲಕ್ಷಾಂತರದ್ರವ್ಯ ಖರ್ಚಿಟ್ಟುಕೊಂಡು ಅನೇಕ ದೊಡ್ಡ ದೊಡ್ಡ ಸಿದ್ಧಾಂತಿಗಳು ಬಹುದೂರದೇಶಗಳಿಂದ ಹೋಗಿ ಬಹಳ ಆತುರದೊಡನೆ ಗ್ರಹಣ ಕಾಲವನ್ನು ನಿರೀಕ್ಷಿಸುತಲಿರುವಲ್ಲಿ ಗ್ರಹಚಾರವಶಾತ್ ಗ್ರಹಣ ಸ್ಪರ್ಶಕಾಲದಿಂದ ಮೋಕ್ಷಕಾಲದವರೆಗೆ ಆಕಾಶವೆಲ್ಲ ಮೋಡ ಮುಸುಕಿಹೋದ್ದರಿಂದ ವಿಶಿಷ್ಟರೂ ಭಗ್ನಮನಸ್ಕರಾಗಿ ಹೊರಟುಬಂದರು. ಬರುವ ವರುಷ ನಮ್ಮದೇಶದಲ್ಲಾಗುವ ಗ್ರಹಣ ಕಾಲವು ಸಿದ್ಧಾಂತಿಗಳ ಉತ್ಸಾಹವನ್ನು ಭಂಗಮಾಡಲಾರದೆಂದು ಹಾರೈಸುತ್ತೇವೆ.

LOCAL AND PROVINCIAL NEWS.

ಇಳದೇಶಮತ್ತು ತಾಲ್ಲೂಕುಜಾತಿವೃತ್ತಾಂತಗಳು.

ಪ್ರಸಿದ್ಧಪತ್ರಿಕೆ.

ಬೆಂಗಳೂರು, ತಾ॥ ೨೨ನೇ ಜೂನ್ ೧೮೯೭.

ಶ್ರೀಮನ್ ಮಹಾರಾಜ್ಞೀ ಚಕ್ರವರ್ತಿನೀಯವರ ಸನ್ನಿಧಿಯಿಂದ ಬಂದಿರುವ ೧೮೯೭ನೇ ಇಸವಿ ಜೂನ್ ೨೨ನೇ ತಾರೀಖಿನ ಪಯಾಮುಪುರಸ್ಸರವಾದ ಈ ಕೆಳಗಣ ಉತ್ತರವನ್ನು ಸರ್ವರ ತಿಳುವಳಿಕೆಬಗ್ಗೆ ಪ್ರಕಟಿಸಿರುತ್ತೆ.

“ನಮ್ಮ ಪ್ರೀತಿಪಾತ್ರರಾದ ಪ್ರಜೆಗಳನ್ನು ಹೃದಯಪೂರ್ವಕವಾಗಿ ವಂದಿಸುತ್ತೇವೆ. ಶ್ರೀ ಭಗವಂತನು ಅವರುಗಳಿಗೆ ಕ್ಷೇಮವನ್ನುಂಟುಮಾಡಲಿ.”

ಶ್ರೀಮನ್ಮಹಾರಾಜ್ಞೀ ವಿಕ್ಟೋರಿಯಾ ಚಕ್ರವರ್ತಿನೀಯವರು ಜೂಬಿಲಿಮಹೋತ್ಸವದಲ್ಲಿ ಮೈಸೂರು ಸಂಸ್ಥಾನದ ದೊಡ್ಡ ಅಧಿಕಾರಿಗಳ ಪೈಕಿ ರೆವಿನ್ಯೂ ಕೌನ್ಸಿಲರಾದ ಮೆ॥ ಕೃಷ್ಣಮೂರ್ತಿಯವರಿಗೆ ಸಿ. ಐ. ಇ. ಯೆಂಬ ಬಹು ಗೌರವವಾದ ಪ್ರಶಸ್ತಿಯನ್ನು ದಯಪಾಲಿಸಿದ್ದಕ್ಕಾಗಿ ನಾವು ಬಹಳ ಸಂತೋಷಿಸುತ್ತೇವೆ.

ತುಳಸೀತೋಟದ ನಾಟಕಶಾಲೆಯ ಹತ್ತಿರ ದಾರಿ ತಿರುಗುವ ಮೂಲೆಯಾಗಿದೆ. ಅಲ್ಲಿ ಒಂದು ಲಾಂದ್ರದ ಕಂಭವಿಲ್ಲದೆ ಅಲ್ಲಿ ತಿರುಗಾಡುವ ಹೆಂಗಸರನ್ನು ಪೋಕರಿಗಳು ಹೆದರಿಸುವದು, ಚಿವರಿಸುವದು ನಡೆಯುವದೆಂದು ತಿಳಿಯಲಾದೆವು. ಇದಕ್ಕೆ ಉಪ್ಪಾರಪೇಟೆ ಪೋಲೀಸ ಸ್ಟೇಷನಿನವರು ನಿಗಾ ಕೊಡದಿದ್ದರೆ ಸ್ವಲ್ಪದಿವಸದಲ್ಲಿಯೇ ಪ್ರಮಾದ ನಡೆಯುವಂತೆ ತೋರುತಿದೆ.

ಇದುವರಿಗೂ ಇಬ್ಬರು ಗ್ರಹಸ್ಥರು ನಾವು ಲೋಕಾಚಾರ್ಯರ ಮಠದವರೆಂದು ಹೇಳಿಕೊಂಡು ಬಂದು ಕಾಣಿಕೆಗಳನ್ನು ತೆಗದುಕೊಳ್ಳುತಲಿದ್ದರು. ಈಗ ಲೋಕಾಚಾರ್ಯ ಮಠದ ಪೀಠಕ್ಕೆ ಸೇರಿದ ಯತೀಶ್ವರರೊಬ್ಬರು ಬಂದು ಶಿಷ್ಯರಿಗೆಲ್ಲ ಪತ್ರಿಕೆಗಳನ್ನು ಕಳುಹಿಸುತಲಿದಾರೆ. ಗ್ರಹಸ್ಥಾಶ್ರಮದವರಲ್ಲಿ ಆಶ್ರಯಿಸುವದಕ್ಕಿಂತಲೂ ಯತ್ಯಾಶ್ರಮದ ಗುರುಗಳಲ್ಲಿ ಆಶ್ರಯಿಸುವದು ಅನುಗತ ಶಿಷ್ಯರಿಗೆಲ್ಲ ಶ್ರೇಯಸ್ಕರವಾಗಿಯೂ ಗೌರವವಾಗಿಯೂ ಯಿರುವದು.

ಶ್ರೀ ಶಿವಗಂಗೆ ಸ್ವಾಮಿಗಳವರು ನಿನ್ನೆಯ ಪ್ರಾತಃಕಾಲ ೮ ಘಂಟೆಗೆ ಊರಿಗೆ ದಯಮಾಡಿದರು. ಅವರ ಪ್ರತ್ಯುದ್ಗಮನಕ್ಕೆ ಸೇರಿದವರೆಲ್ಲರು ಹಲಸೂರು ಬಾಗಲಿಗೆ ಹೋಗಿ ಕಾದಿದ್ದು ಉಚಿತ ಮರ್ಯಾದೆಯೊಡನೆ ಬರಮಾಡಿಕೊಂಡು ಬಂದು ಪೂರ್ಣಯ್ಯನವರ ಸತ್ರದಲ್ಲಿ ಇಳಿಸಿರುತ್ತಾರೆ. ಶ್ರೀ ಸ್ವಾಮಿಗಳವರನ್ನು ಎದುರ್ಗೊಂಡು ಕರೆತರುವದಕ್ಕೆ ಈ ಸಂಸ್ಥಾನದ ದಿವಾನರವರು, ಪೋಲೀಸ ಇನ್ಸ್‌ಪೆಕ್ಟರ್ ಜನರಲ ವಿ. ಪಿ. ಮಾಧವರಾಯರವರೂ, ಡಿಸ್ಟ್ರಿಕ್ಟ್ [illegible]ವರ ಎ. ಎ. ನರಸಿಂಹಯ್ಯಂಗಾರ್ಯರವರೂ, ಅಮಲ್ದಾರರವರೂ ಮೊದಲಾದ ದೊಡ್ಡ ಮನುಷ್ಯರು ಹೋಗಿದ್ದದಲ್ಲದೆ ಸವಾರ ಸೇನೆಯ ಪೈಕಿ ೪ ಜನ ಸವಾರರು ಪೋಲೀಸ ಇನ್ಸ್‌ಪೆಕ್ಟರ್ ವಗೈರೇರು ಸ್ವಾಮಿಗಳಸ್ವಾರಿಜೊತೆಯಲ್ಲಿ ಬಂದಿದ್ದರು. ಇವರು ಈ ಊರಲ್ಲಿ ಕೆಲವು ದಿವಸಗಳಿದ್ದು ಚಾತುರ್ಮಾಸ್ಯ ಸಂಕಲ್ಪಕ್ಕೆ ಕರ್ಣಕಾನ ಹಳ್ಳಿಗೆ ದಯಮಾಡುವರೆಂದು ತಿಳಿಯಬರುತಿದೆ.

ಕಳೆದ ಶುಕ್ರವಾರದದಿನ ಈ ಪೇಟೆಯಲ್ಲಿರುವ ಸರ್ಕಾರದ ಸತ್ರದಲ್ಲಿ ಇಲ್ಲಿನ ಪೋಲೀಸಿನವರಿಗೆಲ್ಲ ಜೂಬಿಲಿ ಔತಣ ನಡೆಯಿತು. ಇದರ ಸಕಲ ಯಾಜಮಾನ್ಯವಹಿಸಿದ್ದವರು ಲಾಡುಗಳು ಮೊದಲಾಗಿ ವಿಶೇಷ ಪದಾರ್ಥಗಳನ್ನು ಮಾಡಿಸಿ ಪೋಲೀಸ ಫೌಜಿಗೆ ಸೇರಿದ ವಿಶಿಷ್ಟರಿಗೂ ತೃಪ್ತಿಕರವಾಗಿ ಎಲ್ಲವೂ ನಡೆಸಿದರೆಂದು ಕೇಳಿದೆವು. ಈ ಸಮಯದಲ್ಲಿ ಕೆಲವು ಹುಡುಗರು ಭೋಜನಕ್ಕೆ ಬಂದದ್ದಾಗಿಯೂ ಅವರುಗಳನ್ನು ಯಾರೋ ತಳ್ಳಿಸಿಬಿಟ್ಟತೆಯೂ ಕೇಳಿ ಬಹಳ ವ್ಯಸನವಾಯಿತು. ಬಂದ ಹುಡುಗರಿಗೆಹೊಟ್ಟೆ ತುಂಬ ಭೋಜನ ಮಾಡಿಸದೆ ಹೋದಾಗ್ಯೂ ತಲಾಗೆ ಒಂದೊಂದು ಲಾಡು ಕೊಟ್ಟುಕಳುಹಿಸಿದ್ದರೆ ಹುಡುಗರು ಎಷ್ಟೋ ಸಂತೋಷದಿಂದ ಹೋಗುತಿದ್ದರು. ಹಾಗಿಲ್ಲದೆ ಆ ಬಾಲಕರ ವಿಷಯದಲ್ಲಿ ಇದ್ದ ಕ್ರೌರ್ಯವನ್ನು ತೋರಿಸಿದ್ದಕ್ಕಾಗಿ ವ್ಯಥೆಪಡುತ್ತೇವೆ.

ಈ ಪೇಟೆಯಲ್ಲಿ ಕೆಲವು ಸಂವತ್ಸರಗಳ ಹಿಂದೆ ಮೆ॥ ಹಾರ್ಡೆ ಎಂಬ ಒಬ್ಬ ಯುರೋಪಿಯನ್ ಗೃಹಸ್ಥನು ನಾನಾವಿಧವಾದ ಸಬ್ಬುಗಳು ತಯಾರುಮಾಡುವದರಲ್ಲಿ ತಾನು ಪ್ರವೀಣನಾದ್ದರಿಂದ ಮೈಸೂರು ಸರ್ಕಾರದವರು ದ್ರವ್ಯಸಹಾಯ ಮಾಡಿದರೆ ತಾನು ಸದರೀ ಕಾರ್ಖಾನೆಯನ್ನು ಸ್ಥಾಪಿಸಿ ಬಂದ ಲಾಭದಲ್ಲಿ ಕೊಟ್ಟಸಾಲವನ್ನು ತೀರಿಸುವದಾಗಿ ಹೇಳಿ ಸರ್ಕಾರದಿಂದ ಸುಮಾರು ೧೦,೦೦೦ ರೂಪಾಯಿಗಳು ತೆಗದುಕೊಂಡು ಹಿಂದೆರಡು ವರ್ಷಗಳು ಸೋಪ್ ತಯಾರುಮಾಡಿ ಮಾರಾಟಕ್ಕೆ ಹಚ್ಚಿದಂತೆ ಮಾಡಿ ಕೊನೆಗೆ ಫರಾರಿಯಾಗಿ ಹೋಗಿ ಅದರಮೇಲೆ ಬದುಕಿದ್ದರೂ ಕಸಿಗೆ ಮುಂದಕ್ಕೆ ತೊಂದರೆ ತಪ್ಪಿದ್ದಲ್ಲವೆಂದು ಯೋಚಿಸಿ ವಿಷತೆಗದುಕೊಂಡು ಪ್ರಾಣಬಿಟ್ಟನೆಂದು ತಿಳಿಯುತ್ತೇವೆ. ಇದರಿಂದ ಮೈಸೂರು ಸರ್ಕಾರವೂ ಇತರರೂ ಬಹಳ ನಷ್ಟಹೊಂದಿದಂತಾಯಿತು.

ಇದುವರೆಗೂ ಶಿವಭಕ್ತರ ಕೈಯಲ್ಲಿ ಶೂದ್ರಾದಿಗಳು ಭೋಜನ ಮಾಡುತ್ತಿದ್ದರಷ್ಟೆ. ಅವರ ಆಚಾರವು ವಿರೋಧವಾದದ್ದರಿಂದಲೂ ಅವರು ನಿವೇದನ ಮಾಡುವ ಅನ್ನವು ಶುದ್ಧ ಶಿವನಿರ್ಮಾಲ್ಯವಾಗುವದರಿಂದ ಅದು ಇತರರ ಪರಿಗ್ರಹಕ್ಕೆ ಅಗ್ರಾಹ್ಯವೆಂತಲೂ, ಅವರಲ್ಲಿ ಭೋಜನ ಮಾಡುವದು ನಿಷಿದ್ಧವೆಂದು ಅಲ್ಲಲ್ಲಿ ಕೆಲವು ಮಂದಿ ಒಕ್ಕಲಮಕ್ಕಳು ಆಕ್ಷೇಪಿಸುತ್ತ ತಮ್ಮವರನ್ನು ನಿರೋಧಪಡಿಸುತಲಿದ್ದಾರೆಯಂತೆ. ಈ ಕಾರ್ಯವು ಅಸಾಧುವೆಂದು ಹೇಳುವಣವು ಅಸಾಧುವಾಗಿರುವುದು.

ಡೈಮಂಡ್ ಜೂಬಿಲೀ ಉತ್ಸವವು ಇತರಕಡೆಗಳಲ್ಲಿ ನಡೆಯುವದಕ್ಕಿಂತಲೂ ನಮ್ಮ ಸಂಸ್ಥಾನದಲ್ಲಿ ಕೋಲಾಹಲದೊಡನೆ ನಡೆಯಿತು. ಬಡ, ದುತ್ತ ಬಚೆಲ್‌ಮಾಡಿ ಕಬ್ಬನ್‌ಪಾರ್ಕಿನಲ್ಲಿ ಬಹು ತಮಾಷೆಗಳನ್ನೆಲ್ಲಾ ಮಾಡಿದ್ದರು. ಮೂವತ್ತುಮೂರು ಹೋಮವನ್ನು ಮಿಂಗಡಿ ಸಕಲರಿಗೂ ಸಂತರ್ಪಣೆ ಮಾಡಿಸಿದರು. ದೇವಾಲಯಗಳಲ್ಲಿ ದೇವತಾಸೇವೆಯನ್ನು ನಡಿಸಿ ಮಹಾರಾಣಿಯವರಿಗೆ ಆಶೀರ್ವಾದಗಳು ಮಾಡಿಸಿದರು ಬಡಜನರಿಗೆಲ್ಲ ಬಟ್ಟೆಯನ್ನು ಕೊಟ್ಟರು. ಜ್ಯೂಬಿಲೀಮಹೋತ್ಸವದ ಜ್ಞಾಪಕಾರ್ಥವಾಗಿ ಬೆಂಗಳೂರು ಸೆಂಟ್ರಲ್ ಜೈಲಿನಿಂದ ೯೦ ಜನ ಕ್ರಿಮಿನಲ್ ಖೈದಿಗಳನ್ನೂ, ಒಬ್ಬನು ಸಿವಿಲ್ ಖೈದಿಯನ್ನು ಬಿಟ್ಟದ್ದಲ್ಲದೆ ಒಂದು ಆಸ್ಪತ್ರೆಯನ್ನು ಸಹ ಮಹಾರಾಜ್ಞೀ ಚಕ್ರವರ್ತಿನೀಯವರ ಹೆಸರಿನಲ್ಲಿ ಕಟ್ಟಿಸುವಹಾಗೆ ಯೋಚನೆಯಾಗಿರುತ್ತದೆ.

SUMMARY OF NEWS.
ವೃತ್ತಾಂತ ಸಂಗ್ರಹವು.

ಕಳೆದವಾರ ಬೊಂಬಾಯಿನಲ್ಲಿ ವಿಪರೀತ ಮಳೆ ಸುರಿದು ಕೆಡ್ಲು ಅನೇಕ ಒಡೆದವು ಕೆಲವು ಮನೆಗಳೆಲ್ಲ ಬಿದ್ದುಹೋದವಂತಲೂ ೪—೫ ಜನರಿಗೆ ಪ್ರಾಣನಷ್ಟವಾಯಿತೆಂತಲೂ ತಿಳಿದುಬಂದಿದೆ.

ಪೋರ್ಟ್‌ನಿಕೋಲಸ್ಕೆ ಸೇರಿದ ಖಾಬರೋವ್ ಎಂಬ ಪಟ್ಟಣದಲ್ಲಿ ಭಯಂಕರವಾದ ಜಲಪ್ರಳಯವಾಗಿ ಸಾವಿರಾರು ಮನೆಗಳು ಕೊಚ್ಚಿಕೊಂಡುಹೋದವು. ಪ್ರಜೆಗಳು ಮನೆಯಿಲ್ಲದೆ ಅಲೆಯುತಲಿದ್ದಾರೆ, ಭಾರಿಭಾರಿ ಕಾರ್ಖಾನೆಗಳು ಮುರಿದು ಬಿದ್ದುಹೋದವು

ವಿಲಾಯತಿಯಲ್ಲಿ ನಡೆದ ಡೈಮಂಡ್ ಜ್ಯೂಬಿಲಿ ಉತ್ಸವಗಳನ್ನು ನೋಡುವದಕ್ಕೆ ಭೂಮಿಯಮೇಲೆ ಸ್ಥಳವಿಲ್ಲದೆ ಅಂತರಿಕ್ಷದಲ್ಲಿ ನಿಂತು ನೋಡುವದಕ್ಕಾಗಿ ಅನೇಕ ವಿಮಾನಗಳು ಸಿದ್ಧಪಡಿಸಿದ್ದರಂತೆ. ಈ ಉತ್ಸವವು ಇನ್ನೆಂತಾದ್ದಿರಬಹುದು? ಶ್ರೀಮತಿ ಇಂಡಿಯಾ ಚಕ್ರವರ್ತಿನಿಯವರಾದ ವಿಕ್ಟೋರಿಯಾರಾಣಿಯವರ ಭಾಗ್ಯವೇ ಭಾಗ್ಯ.

ಲಂಡನಿನಲ್ಲಿ ವಾಸಿಸುವ ಹಿಂದೂ ಜನರು ಸಭೆ ಸೇರಿ, ಮಹಾರಾಣೀಯವರಿಗೆ ಬಹುಮಾನಪೂರ್ವಕವಾಗಿ ಮಾನಪತ್ರ ಕೊಟ್ಟರು. ಆ ಮಾನಪತ್ರದಲ್ಲಿ ಸನ್ ೧೮೫೮ನೇ ವರ್ಷದ ಜಾಹೀರ್‌ನಾಮೆಯಲ್ಲಿ ಕೊಟ್ಟ ಅಭಿವಚನಗಳನ್ನು ಕೊನೆಗಾಣಿಸಬೇಕೆಂತಲೂ, ಬೇರೆ ಕೆಲವು ವರದಾನಗಳನ್ನು ಕೊಡಬೇಕೆಂತಲೂ ಬೇಡಿಕೊಂಡಿದ್ದಾರೆ. ಮದರಾಸ್ ಮಹಾಜನ ಸಭೆಯವರು ಕಳುಹಿಸಿದ ಮಾನಪತ್ರದಲ್ಲಿಯೂ ಇದೇ ಪ್ರಕಾರವಾದ ಪ್ರಾರ್ಥನೆಗಳುಂಟು.

ವಿಕ್ಟೋರಿಯಾ ಮಹಾರಾಜ್ಞೀ ಚಕ್ರವರ್ತಿನೀಯವರು ಧರಿಸಿಕೊಳ್ಳುವ ಒಂದು ಕಿರೀಟದಲ್ಲಿ ೨,೮೪೨ ವಜ್ರಗಳು, ೨೭೭ ಮುತ್ತುಗಳು, ೧೭ ಪಚ್ಚೆಗಳು, ೧೧ ಗೋಮೇಧಿಕಗಳು, ೫ ಕೆಂಪುಗಳು ಕೆತ್ತಲ್ಪಟ್ಟಿವೆ. ಆ ಕಿರೀಟಕ್ಕೆ ಸುಮಾರು ೧೯ ಲಕ್ಷ ರೂಪಾಯಿ ಖರ್ಚಾಗುತ್ತದೆ. ಇದಲ್ಲದೆ ಆ ಕಿರೀಟದಲ್ಲಿ ಸರ್ವಶ್ರೇಷ್ಠವಾದಂತೆ ಒಂದು ಭಾರೀ ಕೆಂಪು ಸಿಕ್ಕಿದೆ. ಇದರ ಖರೀದಿಯನ್ನು ಅಂದಾಜು ಮಾಡುವದಕ್ಕಾಗುವದಿಲ್ಲವಂತೆ.

ಕೊಲ್ಹಾಪುರದಲ್ಲಿ ಮೊನ್ನೆ ಮೊನ್ನೆ ಮುಂಬಯಿ ಕಡೆಯ ಮೂವರು ವ್ಯಾಪಾರಸ್ಥರು (ಒಬ್ಬ ಮುಸಲ್ಮಾನ, ಇಬ್ಬರು ಬ್ರಾಹ್ಮಣರು) ೨—೩ ಲಕ್ಷದ ಜವಾಹೀರುಗಳನ್ನು ವ್ಯಾಪಾರ ಮಾಡುವದಕ್ಕಾಗಿ ಅಲ್ಲಿಗೆ ಬಂದು ಮಹಾರಾಜರವರಿಗೆ ತೋರಿಸಲು ಅವರಿಗೂ ಮಹಾರಾಜರವರಿಗೂ ವ್ಯಾಪಾರ ಬಗೆ ಹರಿಯದಿದ್ದದರಿಂದ ಅವರು ಮರಳಿ ತಾವಿಳಿದ ಸ್ಥಳಕ್ಕೆ ಹೋಗುತಿರಲು ಮಾರ್ಗದಲ್ಲಿ ಪಳೆಂಬ ಜನರು ಆ ವ್ಯಾಪಾರಿಗಳಿಗೆ ಕೂಡಿ ಅವರ ಯಾವತ್ತು ಪದಾರ್ಥಗಳನ್ನು ಕಸಕೊಂಡು ಅವರಿಗೆ ಬುದ್ಧಿ ಹೇಳಿದರು. ಈ ವರ್ತಮಾನವು ಮಹಾರಾಜರವರಿಗೆ ತಿಳಿದ ಕೂಡಲೆ ಅವರು ಯಾವತ್ತು ಜನರೊಡನೆ ತಪಾಸಣೆಗೆ ಬರಲು ಕಳ್ಳರು ಸಿಕ್ಕಿಲ್ಲ ಮಾಲಿನಪತ್ತೆ ಎಲ್ಲಿಯೂ ಆಗಲಿಲ್ಲ. ಈಗ್ಗೆ ಆ ವ್ಯಾಪಾರಸ್ಥರು ಕಳತುಕೊಂಡು ಬಂದ ವರ್ತಮಾನವನ್ನು ಹಿಡಿದು ಕೂಡಿಸಿದಾರೆ. ಮುಂದೇನೇನು ವಿಚಾರಣೆ ನಡೆಯುವದೋ ನೋಡಬೇಕಾಗಿದೆ.

EXTRACT.

ಈ ತಿಂಗಳ ೧೨ನೇ ತಾರೀಖು ಶನಿವಾರ ಸಾಯಂಕಾಲ ಕಲ್ಕತ್ತಾ ಪ್ರಾಂತದಲ್ಲಿ ಉಂಟಾದ ಭೂಕಂಪದ ವರ್ತಮಾನವನ್ನು ಹಿಂದಿನ ವಾರದ ಪತ್ರಿಕೆಯಲ್ಲಿ ಸ್ವಲ್ಪಮಟ್ಟಿಗೆ ಸೂಚಿಸಿದ್ದೆವಷ್ಟೆ. ಈಚೆಗೆ ಈ ಭೂಕಂಪದಿಂದ ಉಂಟಾದ ಭಯಂಕರವಾದ ಫಲಿತಾಂಶಗಳು ಹೆಚ್ಚಾಗಿ ತಿಳಿದು ಬಂದಿರುವದರಿಂದ ಈಗ ಅವುಗಳನ್ನೆಲ್ಲ ತಕ್ಕಮಟ್ಟಿಗೆ ವಿಸ್ತಾರವಾಗಿ ವಿವರಿಸುತ್ತೇವೆ:—

ಆದಿನ ಸಾಯಂಕಾಲ ೫½ ಘಂಟೆ ಹೊತ್ತಿಗೆ ಸ್ವಲ್ಪವಾಗಿ ನೆಲ ನಡುಗುವದಕ್ಕೆ ಪ್ರಾರಂಭವಾಯಿತು. ಭೂಕಂಪವಾಗುವದೆಂಬ ಸೂಚನೆಗಳು ಒಂದುವರೂ ಮೊದಲು ಕಂಡುಬರಲಿಲ್ಲ. ಹವಾ ಸಾಧಾರಣವಾಗಿಯೇ ಇತ್ತು. ಮನೆಗಳಲ್ಲಿದ್ದ ಜನರು ಆದಿವಸ ಭೂಮಿ ನಡಗುವದನ್ನು ನೋಡಿ, ಬೀದಿಯಲ್ಲಿ ಗಾಡಿಗಳು ವಿಶೇಷವಾಗಿ ತಿರುಗುತ್ತಿರಬಹುದೆಂದು ನೆನಸಿ, ತಮ್ಮ ಕೆಲಸಗಳನ್ನು ಮಾಡುತಲಿದ್ದರು. ಆದರೆ ಅವರ ಊಹೆಯೆಲ್ಲ ಸುಳ್ಳಾಗಿ ಮೊದಲು ಮನೆಗಳ ಬಾಗಲುಗಳೂ, ಕಂಭಗಳೂ, ಕಿಟಕಿ ಕದಗಳೂ ಎಲ್ಲ ಶಬ್ದಮಾಡುತ ಅಲ್ಲಾಡುವದಕ್ಕೆ ಪ್ರಾರಂಭವಾಯಿತು. ಅಷ್ಟಕ್ಕೆ ಕೆಲವು ಹಳೇ ಮನೆಗಳು ಟಲಾಡಿ ಬಿದ್ದುಹೋದವು. ತರುವಾಯ ಭೂಮಿ ನಡುಗುವದು ಹೆಚ್ಚಾಯಿತು ಭಾರಿಭಾರಿ ಮನೆಗಳೆಲ್ಲ ಹಿಂದಕ್ಕೂ ಮುಂದಕ್ಕೂ ಅಲ್ಲಾಡಿದವು. ಕೆಲವು ಗೋಡೆಗಳು ಸೀಳುಬಿದ್ದು, ನೆಲಸಮವಾದವು. ಐದು ನಿಮಿಷದ ಹೊತ್ತು ಭೂಮಿ ನಡುಗುತಲಿರಬೇಕಾದರೆ ಯಾವ ಕಟ್ಟಡಗಳುತಾನೇ ಬೀಳದೆ ಇದ್ದಾವು? ಸೂರ್ಯಾಸ್ತಮಯ ಕಾಲದಲ್ಲಿ ಇಂತಾ ಭಯಂಕರ ಸ್ಥಿತಿಯು ಪ್ರಾಪ್ತವಾಯಿತಾದ್ದರಿಂದ, ಅನೇಕ ಹಿಂದುಗಳೂ, ಯೂರೋಪಿಯನ್ನರೂ, ಚಟ್ಟೀಗಾರರೂ ತಮ್ಮ ತಮ್ಮ ಮನೆ ಮಠಗಳನ್ನು ಕಳಕೊಂಡು, ಉಟ್ಟ ಹೊದ್ದ ಬಟ್ಟೆಗಳಲ್ಲಿ ಪ್ರಾಣ ಉಳಿದರೆ ಸಾಕಪ್ಪಾ ಎಂದು ಬೀದಿಗಳಿಗೆ ಬಂದು ನಿಂತುಕೊಳ್ಳಬೇಕಾಯಿತು. ಅವರೆಲ್ಲ ಆರಾತ್ರಿಯನ್ನು ಹ್ಯಾಗೆ ಕಳೆದರೋ ವಿವರಿಸುವದಕ್ಕಾಗದು. ಗೋಪುರಗಳಂತೆ ಕಟ್ಟಿದ್ದ ದೇವಸ್ಥಾನಗಳೂ, ಸರ್ಕಾರಿ ಬಂಗಲೆಗಳೂ, ನಾಲ್ಕಾರು ಅಂತಸ್ತುಗಳುಳ್ಳ ಮನೆಗಳೂ ಬಿದ್ದುಹೋದವು ಗೋಪುರಗಳು ಬಿದ್ದು ಸೀಳುಬಿಟ್ಟವು. ಜನರಿಗೆ ಮಲಗುವದಕ್ಕೆ ಸ್ಥಳ ದೊರೆಯದೆ ಹೋದಕಾರಣ ತಮ್ಮ ಬಿದ್ದುಹೋದ ಮನೆಗಳ ಮುಂದೆ ಸಾಮಾನುಗಳನ್ನು ಕಾಯುತ ರಾತ್ರಿಯಲ್ಲ ಜಾಗರಣೆ ಮಾಡಿದರು. ಕಲ್ಕತ್ತಾ ಪಟ್ಟಣದ ಪ್ರತಿಯೊಂದು ಬೀದಿಯಲ್ಲೂ ಮನೆಗಳು ಬಿದ್ದುಹೋಗದೇ ಇಲ್ಲ. ಎಷ್ಟೋ ಸಾಮಾನು ನಷ್ಟವಾಯಿತೋ ಯಾರುತಾನೇ ಹೇಳಬಲ್ಲರು? ಕೋಟೆಯೊಳಗಿದ್ದ ಇಂಗ್ಲಿಷ್ ಶಿಪಾಯಿಗಳು ಸುಮಾರು ೬೦೦ ಜನ ಸೇರಿ ಬಂದು ಭಾರೀ ಕಟ್ಟಡವನ್ನು ಆಗ ಕಾಯುತಲಿದ್ದರು. ಆ ಕಟ್ಟಡವೆಲ್ಲ ತೂಗಾಡುವದಕ್ಕೆ ಪ್ರಾರಂಭಿಸಿದ ಕೂಡಲೆ ಬೊಂಬಿನಾಗಿ ಶಬ್ದವಿಟ್ಟು ಎಲ್ಲಾ ಶಿಪಾಯಿಗಳೂ ಮೂರನೇ ಅಂತಸ್ತಿನಿಂದ ಇಳಿಯುವಷ್ಟರಲ್ಲಿ ಆ ಕಟ್ಟಡವು ಅಲ್ಲಾಡಿ ಬಿರುಕುಬಿಟ್ಟುಹೋಯಿತು. ಯಾರೂ ಒಳಕ್ಕೆ ಹೋಗಕೂಡದೆಂದು ಗೊತ್ತುಮಾಡಿದ್ದರೆ ಮೂರನೇ ಅಂತಸ್ತಿನಲ್ಲಿದ್ದ ಒಬ್ಬ ಲೇಡಿಯು ಭಯದಿಂದ ಆ ಕಟ್ಟಡಕ್ಕೆ ಸಿಡಿಲು ಬಡಿಯದಂತೆ ಸರ್ಕಾರದವರು ನಡಿಸಿದ್ದ ಲೋಹದ ಸಲಾಕಿಯನ್ನು ಹಿಡಿದು, ೧೨೦ ಅಡಿ ಮೇಲಿನಿಂದ ಜಾರಿಕೊಂಡು ನೆಲದ ಮೇಲೆ ಬಂದುಬಿದ್ದು ಪ್ರಜ್ಞೆ ತಪ್ಪಿಹೋಗಿ, ತರುವಾಯ ಸ್ವಸ್ಥಳಾದಳು. ವರ್ತಮಾನ ಪತ್ರಿಕೆಗಳು ಪ್ರಕಟವಾಗುತಲಿದ್ದ ಭಾರಿ ಕಾರ್ಖಾನೆಗಳು ಮುರಿದು ಹೋದವು. ಕಲ್ಕತ್ತಾ ಪಟ್ಟಣದಲ್ಲೇ ಮನೆಗಳ ಕೆಳಗೆ ಸಿಕ್ಕಿ ೨೫—೩೦ ಮಂದಿ ಸತ್ತುಹೋಗಿದ್ದಾರೆಂತಲೂ, ಅನೇಕರಿಗೆ ನಾನಾವಿಧ ಘಾಯಗಳಾದವೆಂತಲೂ ವರ್ತಮಾನ ಬಂದಿದೆ. ಬೀದಿಗಳಲ್ಲಿ ಕಟ್ಟಿದ್ದ ಭಾರಿ ಭಾರಿ ಗಡಿಯಾರಗಳೆಲ್ಲ ನಡೆಯದೆ ನಿಂತುಹೋದವು. ಆ ಪಟ್ಟಣಕ್ಕೆ "ಅರಮನೆಗಳ ಪಟ್ಟಣ" ಎಂಬ ಹೆಸರಿತ್ತು. ಅಂತಾ ಭಾರೀ ಮನೆಗಳೆಲ್ಲ ಬಿದ್ದುಹೋದವು, ಇಲ್ಲವೇ ಗೋಡೆಗಳು ಬಿರುಕುಬಿಟ್ಟು ವಾಸಕ್ಕೆ ಅಯೋಗ್ಯವಾದವು, ದಂಡಿನ ಶಿಪಾಯಿಗಳು ಇರುತ್ತಿದ್ದ ಬಾರಕ್ಸ ಎಂಬ ಮನೆಗಳ ಲೈನ್ ಬಿದ್ದು ನೆಲಸಮವಾಯಿತು. ಸಿರಾಂಪುರದಲ್ಲಿಯೂ ಭೂಮಿಯು ಬಹಳವಾಗಿ ನಡುಗಿದ್ದರಿಂದ ಮನೆಗಳೆಲ್ಲ ಬಿದ್ದುಹೋದವು. ಅಸ್ಸಾಂ, ಬಂಗಾಳಾ ರೈಲ್ವೆ ರಸ್ತೆ ಕೆಟ್ಟುಹೋಗಿ ಕಂಬಿಗಳೆಲ್ಲ ಮುರಿದುಹೋದವು. ಕೆಲವು ಕಡೆ ಸೇತುವೆಗಳು ಮುರಿದು ನದಿಯ ಪಾಲಾದವು. ಅಗರ್ಪಾರಾ ಎಂಬ ಅರಮನೆ ತಿಪ್ಪೆರಾ ಮಹಾರಾಜರ ಅರಮನೆ ಮುಂತಾದ ಅನೇಕಾನೇಕ ಕಟ್ಟಡಗಳನ್ನು ವಾಸಕ್ಕೆ ಅನುಪಯೋಗವೆಂದು ಬಿಡಬೇಕಾಯಿತು. ಢಾಕಾ ಪಟ್ಟಣದಲ್ಲಿ ಮನೆಗಳು ಬಿದ್ದುಹೋದವಲ್ಲದೆ, ಜನರು ಸತ್ತದ್ದೂ ವಿವರಿಸಲಶಕ್ಯವಾಗಿದೆ. ಪೂರ್ಣಿಯಾದಲ್ಲಿ ಭೂಕಂಪವು ಮನೆಗಳನ್ನು ಕೆಡವಿ ಜನವನ್ನು ಕೊಂದುಹಾಕಿದ್ದು ಭಯಂಕರವಾಗಿದೆ. ಅಲ್ಲಿ ಭೂಮಿಯು ನಡುಗಿ ೩ ಅಂಗುಲದ ಅಗಲ ೩ ಮೈಲಿದೂರ ಬಿರುಕುಬಿಟ್ಟು ಇದೆ. ಈ ಬಿರುಕಿನಿಂದ ನೀರೂ, ಮಣ್ಣೂ ಮೇಲಕ್ಕೆ ವಿಪರೀತವಾಗಿ ಎಸೆಯಲ್ಪಟ್ಟವು. ಕೆಲವರು ಈ ಬಿರುಕಿನೊಳಗೆ ಬಿದ್ದು ಪ್ರಾಣ ಕಳಕೊಂಡರು, ಅವರು ಎಲ್ಲಿಗೆ ಹೋದರೋ ಗೊತ್ತೇ ಇಲ್ಲ. ಚಿತ್ತಗೊಂಗದಲ್ಲಿ ಈ ಭೂಕಂಪದ ಹಾವಳಿಯನ್ನು ಏನೆಂದು ಹೇಳೋಣ! ಅಲ್ಲಿನ ಪೋಸ್ಟಾಫೀಸ ಮುಂತಾದ ಕಟ್ಟಡಗಳೆಲ್ಲ ಭೂಮಿಯೊಳಕ್ಕೆ ಸೇರಿ ಹೋದವು. ಕಲ್ಕತ್ತೆಯಿಂದ ಡಾರ್ಜಿಲಿಂಗಿಗೆ ೪—೫ ದಿನಗಳವರೆಗೆ ರೈಲುಗಾಡಿಗಳನ್ನು ಬಿಡದೆ ನಿಲ್ಲಿಸಬೇಕಾಯಿತು. ಹೈಕೋರ್ಟ ಕಟ್ಟಡವೂ ಸೀಳಿಹೋಗಿರುವದರಿಂದ ಕೆಲವು ದಿನಗಳವರೆಗೆ ಜಡ್ಜಿಗಳು ಕೆಲಸ ಮಾಡುವದನ್ನು ನಿಲ್ಲಿಸಿದ್ದರು. ಡಾರ್ಜಿಲಿಂಗ ಪ್ರಾಂತದಲ್ಲಿ ಟೀ ಸೊಪ್ಪು ಬೆಳೆಯುವ ಅನೇಕ ತೋಟಗಳೆಲ್ಲ ಹಾಳಾದವು. ಇದರಿಂದ ಪ್ಲಾಂಟರುಗಳಿಗೆ ಉಂಟಾದ ನಷ್ಟವು ಅಷ್ಟಿಷ್ಟೆಂದು ಹೇಳಲಾರೆವು.

ಮಾರನೇ ದಿನವೆಲ್ಲ ವಿಪರೀತ ಮಳೆ ಸುರಿಯಿತು. ಬಿದ್ದುಹೋಗದೆ ನಿಂತುಕೊಂಡಿದ್ದ ಮನೆಗಳೆಲ್ಲ ಮಳೆಯಿಂದ ನೆನದು ಕುಸಿದುಹೋದವು. ಕಟಕ್, ಅಸ್ಸಾಂ, ಕೂಚಬಿಹಾರ್, ಡೋವರ್ಸ್, ಸಿಲ್‌ಹಟ್ ಮುಂತಾದ ಕಡೆಗಳಲ್ಲಿ ಬಂಗಲೆಗಳೂ, ಟೀ ತೋಟಗಳೂ ನಿರ್ನಾಮವಾದವು. ಕಳೆದ ೧೮೬೯ನೇ ಇಸವಿಯಲ್ಲಿ ಕಲ್ಕತ್ತೆಗೆ ಪ್ರಾಪ್ತವಾದ ಭಾರೀ ಭೂಕಂಪದಲ್ಲಿ ಉಳಕೊಂಡಿದ್ದ ಬಹು ಬಲವಾದ ಸುಂಕದಕಟ್ಟೆಯೂ, ಪೋಸ್ಟು, ಟೆಲಿಗ್ರಾಫ ಕಟ್ಟಡಗಳೂ ಮ್ಯಾಜಿಸ್ಟ್ರೇಟ್‌ಕೋರ್ಟ ಎಲ್ಲವೂ ಈಗ ಬಿರುಕುಬಿಟ್ಟಿವೆ. ಶಿಪಾಯಿಗಳೆಲ್ಲ ಡೇರೆಗಳಲ್ಲಿ ಇರಬೇಕಾಗಿದೆ. ಬೆಟ್ಟಪ್ರಾಂತಗಳಲ್ಲಿ (ಸ್ಯಾಟ್‌ಂಗನಲ್ಲಿ) ಭೂಕಂಪದ ಕಲ್ಲು ಬಂಡೆಗಳು ಒಡೆದು ಕೆಳಗೆ ಉರುಳಿ ಹಳ್ಳಿಗಳನ್ನು ನಾಶನ ಮಾಡಿದವು. ಅಸ್ಸಾಂನಲ್ಲಿ ಗವರ್ನಮೆಂಟ ಹೌಸ್, ಸೆಕ್ರೆಟೆರಿಯೇಟ್, ದೇವಾಲಯ, ಜೈಲ್‌ಖಾನೆ, ಕೋರ್ಟು, ಕಚೇರಿ ಕಟ್ಟಡಗಳು, ಅನೇಕ ಪ್ರಜೆಗಳ ಮನೆಗಳು ಎಲ್ಲ ನೆಲಸಮವಾದವು. ಸರ್ಕಾರಿ ಅಚ್ಚಿನಕಾರ್ಖಾನೆ ಬಿದ್ದದ್ದರಿಂದ ಅದರೊಳಗಿದ್ದವರೆಲ್ಲ ಹತರಾದರು. ಮೆಕ್ಕೇ ಎಂಬ ಮುದ್ದೇದಾರರೂ ತಮ್ಮ ಮನೆಯೊಳಗೆ ಸಿಕ್ಕಿ ಸತ್ತುಹೋದರು. ಇವರು ಹೋದದ್ದರಿಂದ ಗವರ್ನಮೆಂಟಿಗೆ ಬಹಳ ನಷ್ಟವಾಯಿತೆಂದು ಅಲ್ಲಿನ ಚೀಫ್ ಕಮಿಷನರ್ ವೈಸರಾಯವರಿಗೆ ತಿಳಿಸಿರುತ್ತಾರೆ. ಷಿಲಾಂಗ್, ಗೌಹಟ್ಟಿ, ಗೋಲ್ಪಾರಾ, ಸಿಲ್‌ಹಟ್ ಪ್ರಾಂತಗಳಲ್ಲಿ ಪ್ರಜೆಗಳ ಗೋಳನ್ನು ಕೇಳುವರಿಲ್ಲ[illegible]ಶ್ಯವಾಗಿದೆ ಮನೆಗಳೆಲ್ಲ ಬಿದ್ದುಹೋದವು. ರೈಲುರಸ್ತೆ ಕಂಬಿಗಳು, ಟೆಲಿಗ್ರಾಫ್ ತಂತಿಗಳು ಕೂಡ ಕಿತ್ತುಹೋದವು. ಬ್ರಹ್ಮಪುತ್ರಾ ನದಿಯು ಹರಿಯುವ ಪ್ರದೇಶದಲ್ಲೆಲ್ಲ ಉದ್ದಕ್ಕೂ ಅಲ್ಲಲ್ಲಿ ಭೂಮಿಯು ಬಾಯಿಬಿಟ್ಟಿದೆ. ನೀರು ವಿಪರೀತವಾಗಿ ಉಕ್ಕಿತು. ಗ್ರಾಮಗಳೂ, ಮನೆಗಳೂ ಮುಳುಗಿಹೋದವು. ಗೋಲ್ಪಾರಾದಲ್ಲಿ ಬಜಾರ್ ಕೆಟ್ಟುಹೋದ್ದರಿಂದ ಅರವತ್ತು ಜನರು ಸತ್ತುಹೋದರು. ಸಿಲ್‌ಹಟ್ಟಿನಲ್ಲಿ ಪಟ್ಟಣಕ್ಕೆ ಪಟ್ಟಣವೇ ನಾಶವಾಗಿದೆ. ಛಟಕ್‌ನಲ್ಲಿ ಮನೆಗಳೆಲ್ಲ ನೀರಿನಲ್ಲಿ ಮುಳುಗಿಹೋದವು. ಅನೇಕ ಕಡೆಗಳಲ್ಲಿ ನೆಲವು ಬಿರಿದುಹೋಗಿದೆ. ನೀರು ವಿಪರೀತವಾಗಿ ಕೆಳಗಿನಿಂದ ಉಕ್ಕುತಿದೆ. ಮುಕ್ತಾಗಾಚಾ ಆಗಿದ್ದ ಅರಮನೆ ಕೆಟ್ಟುಹೋಯಿತು. ಚಿರಾಪುಂಜಿ ಎಂಬಲ್ಲಿ ಆಕಾಶವು ತೂತುಬಿದ್ದಿದೆಯೋ ಎಂಬಹಾಗೆ ಮಳೆಯು ಸಾರೋದ್ಧವಾಗಿ ಸುರಿಯುತಲಿದೆ. ಇದರಿಂದಲೂ ಅನೇಕವಾದ ನಷ್ಟ ಉಂಟಾಯಿತು. ಪ್ರತಿಯೊಂದು ಹಳ್ಳಿ, ಗ್ರಾಮ, ಊರು, ಪಟ್ಟಣಗಳಲ್ಲಿ ಎಷ್ಟೆಷ್ಟು ಜನರು ಸತ್ತುಹೋಗಿದಾರೋ ಇನ್ನೂ ಗೊತ್ತಾಗಲಿಲ್ಲ. ಆದರೂ ಇವೆಲ್ಲ ಹೀಗೆ ಹಾಳಾಗಿರಬೇಕಾದರೆ, ಎಷ್ಟು ಪ್ರಾಣಸಂಖ್ಯ ನಷ್ಟವಾಗಿರಬೇಕೋ ವಾಚಕರೇ ಊಹಿಸಿಕೊಳ್ಳಬಹುದು. ಸಾಮಾನುಗಳೂ, ಬೆಂಡಿಗೆಯೂ, ವಸ್ತ್ರಪದಾರ್ಥಗಳೂ ಲೆಕ್ಕವಿಲ್ಲದಂತೆ ನಾಶವಾದವು. ಇದರಿಂದ ಎಷ್ಟು ಜನ ನಿರ್ಗತಿಕರಾದರೋ ಎಷ್ಟು ಸಾಹುಕಾರರು ಹೀನಸ್ಥಿತಿಗೆ ಬಂದರು ಎಂಬೀ ವಿಷಯಗಳು ಮುಂದೆ ಗೊತ್ತಾಗಬೇಕಾಗಿದೆ.

V. AYANOR'S
PREPARATIONS.
ವಿ. ಅಯನಾರ್ ಎಂಬವರಿಂದ ತಯಾರ್ಮಾಡಲ್ಪಟ್ಟ ಪ್ರಸಿದ್ಧ ಔಷಧಗಳು.

ಕಾರ್ಮಿನೇಟಿವ್ ಮಿಕ್ಸ್ಚರ್ — ಇದು ಹೊಟ್ಟೆಶೂಲೆ, ಅಜೀರ್ಣ, ಕರುಳು ನೋವು, ವಾಂತಿಭೇದಿ, ಅಜೀರ್ಣಭೇದಿ, ಬೇಳುಕಗತ, ಕೆಮ್ಮು, ಮೂತ್ರಕೃಚ್ಛ್ರ, ಬಾಯಿಹುಣ್ಣು, ರಕ್ತಸ್ರಾವ, ಆರ್ತವ ದೋಷಜನ್ಯಗಳಾದ ಸ್ತ್ರೀಯರ ಉದರ ವ್ಯಾಧಿಗಳು, ತಲೆನೋವು, ದಂತಶೂಲೆ, ಧಾತು ಮೊದಲಾದ ರೋಗಗಳಿಗೆ ಬಹಳ ಉಪಯುಕ್ತವಾದದ್ದು. ಇದರ ಕ್ರಯ ದೊಡ್ಡಶೀಸೆ ೧ಕ್ಕೆ ೧ ರೂ ಸಣ್ಣಶೀಸೆ ೧ಕ್ಕೆ ೮ ಆಣೆ.

ಪೇನ್‌ಕ್ಯೂರ್ ತೈಲ — ದೀರ್ಘಕಾಲಿಕ ನೋವು, ಪಕ್ಕಶೂಲೆ, ಬೆನ್ನುನೋವು, ತಲೆಶೂಲೆ ಇವು ಪರಿಹಾರವಾಗುವವು. ಇದರ ಕ್ರಯ ದೊಡ್ಡಶೀಸೆ ೧ಕ್ಕೆ ೧ ರೂ ಸಣ್ಣಶೀಸೆ ೧ಕ್ಕೆ ೮ ಆಣೆ.

ಜ್ವರದ ಭೃತಿ — ಇದು ಎಂತಾ ಜ್ವರವನ್ನಾದರೂ ಎಳತು ದಿನಗಳೊಳಗಾಗಿ ನಿವೃತ್ತಿ ಮಾಡತಕ್ಕದ್ದು. ದೊಡ್ಡಶೀಸೆ ೧ಕ್ಕೆ ೧ ರೂ ಸಣ್ಣಶೀಸೆ ೧ಕ್ಕೆ ೮ ಆಣೆ

ಡಿಸೆಂಟ್ರಿ ಚೂರ್ಣ — ಇದು ಶೀತಭೇದಿ, ರಕ್ತಭೇದಿ [illegible] ಉಬ್ಬಸ, ಎದೆನೋವು, [illegible] ಇದರ ಕ್ರಯ ದೊಡ್ಡಶೀಸೆ ೧ಕ್ಕೆ ೧೦ ಸಣ್ಣಶೀಸೆ ೧ಕ್ಕೆ ೪ ಆಣೆ,

ಮೇಹಹರ ವಟಿ — ಇದು ಮೇಹವಾಯುವಿನಿಂದ [illegible] ಇದರ ಕ್ರಯ ದೊಡ್ಡಶೀಸೆ ೧ಕ್ಕೆ ೧ ರೂ. ಸಣ್ಣಶೀಸೆ ೧ಕ್ಕೆ ೮ ಆಣೆ

ವಾತಹರ ತೈಲವು — ಇದು ಸಡುವು ನೋವು, ಕೀಲುನೋವು, [illegible] ಇವುಗಳಿಗೆ ಪ್ರಸಿದ್ಧವಾದ ತೈಲವು ದೊಡ್ಡ ಡಬ್ಬಿ ೧ಕ್ಕೆ ೧ ರೂ. ಸಣ್ಣ ಡಬ್ಬಿ ೧ಕ್ಕೆ ೮ ಆಣೆ

ಶ್ವೇತಕುಷ್ಠೌಷಧ — ಇದು ಸಕಲವಾದ ಕುಷ್ಠರೋಗಗಳಿಂದ [illegible] ಇದರ ಕ್ರಯ ಶೀಸೆ ೧ಕ್ಕೆ ೧ ರೂ. ೮ ಆಣೆ

ಕೂದಲು ಬೆಳೆಯುವಿಕೆಗೆ ಔಷಧ — ಈ ತೈಲವು [illegible] ಕೂದಲು ಬೆಳೆಯುವದು [illegible] ಇದರ ಕ್ರಯ ಶೀಸೆ ೧ಕ್ಕೆ ೧ ರೂ.

ಬೇಕಾದವರು ಬಳ್ಳಾರಿ ಬ್ರೂಸ್‌ಪೇಟೆಯಲ್ಲಿರುವ ವಿ. ಅಯನಾರ್ ಔಷಧಾಲಯಕ್ಕೆ ಬರೆದು ತರಿಸಿಕೊಳ್ಳಬಹುದು.

V GOPALAKRISHNA IYER,
Proprietor
MR V IYANAR & Co.
Bellary

ಈ ಕಂಪೆನಿಯು ಸನ್ ೧೮೯೬ನೇ ಇಸವಿಯಲ್ಲಿ ಸ್ಥಾಪಿತವಾಯಿತು.

ಜನ್ಮದ ಲಾಭವು.

ವಜ್ರಾಂಗ ಖಜೂರವು.

ಬಲಾರೋಗ್ಯ, ಪುಷ್ಟಿಗಳನ್ನು ಬೆಳೆಸತಕ್ಕ ಉತ್ಕೃಷ್ಟಯು.

ಅತ್ಯಾಶ್ಚರ್ಯಕರವಾದ ಖಜೂರಗಳಿಂದ ತಯಾರಿಸಿದ ಈ ಉತ್ತಮಗಳು ಗೋಕರ್ಣಪ್ರಾಂತದ ಅನೇಕ ವನಸ್ಪತಿಗಳ ಸಾರಗಳ ಪುಟಗಳನ್ನು ಕೊಟ್ಟು, ತುಪ್ಪದೊಳಗೆ ಮಾಗಿಸಿ, ಒಳ್ಳೇ ಜೇನಿನ ತರಗತಿಯ ಸಕ್ಕರೆಯ ಪಾಕದಲ್ಲಿ ಸಿದ್ಧ ಮಾಡಿರುತ್ತೇವೆ. ಈ ಉತ್ತಮಗಳು ಮಹಾ ಔಷಧಗಳಿದ್ದು, ಒಳ್ಳೇ ರುಚಿಯುಳ್ಳವು. ಇವುಗಳ ಸೇವನೆಯಿಂದ ಕಫ, ವಾತ, ಪಿತ್ತ ಈ ತ್ರಿದೋಷಗಳಿಂದಾಗತಕ್ಕ ಯಾವತ್ತು ಬಗೆಯ ವ್ಯಾಧಿಗಳೂ ಹೋಗುತ್ತವೆ. ೬೦ ವರ್ಷಗಳ ಪ್ರಾಯವುಳ್ಳ ಮನುಷ್ಯರು ಕಾಮವಿಕಾರವಾದರೂ ಹರೆಯದ ಗಂಡಸರಂತೆ ಪ್ರಜ್ವಲಿತರಾಗುತ್ತಾರೆ. ಜನನೇಂದ್ರಿಯದಲ್ಲಿ ಬಲ ಉಂಟಾಗಿ ನಪುಂಸಕತ್ವವು ಇಲ್ಲದಂತಾಗುತ್ತದೆ. ಲಘ್ವಿಯು ಮುಂಚೆ ಅಥವಾ ಹಿಂದೆ ಸರಿದುಹೋಗುವ ಧಾತು ನಿಲ್ಲುತ್ತದೆ. ಸ್ವಪ್ನಾವಸ್ಥೆಯಾಗುವದಿಲ್ಲ. ವೀರ್ಯವು ಬೆಳೆದು ಮೈ ಬಣ್ಣವು ಸುಧಾರಿಸುತ್ತದೆ. ಪರಮ ಹಾಗೂ ಉಪದಂಶಸಂಬಂಧಿಕ ರೋಗಗಳ ಕಸರ ಇಲ್ಲದಂತಾಗಿ ಧಾತು ಪುಷ್ಟವಾಗುತ್ತದೆ. ಮೂರು ಹೊತ್ತಿಂದರೂ ಅನ್ನ ಪಚನವಾಗಿ ಒಳ್ಳೇ ಹಸಿವೆಯಾಗುತ್ತದೆ. ತಿನ್ನುವದೊಂದೆ ತಡ ಕೂಡಲೇ ಸ್ವಚ್ಛ ಸೌಚವಾಗುತ್ತದೆ. ಕ್ಷಯ, ಉದರ, ದಮ್ಮು ಈ ರೋಗಗಳು ನಾಶ ಹೊಂದುತ್ತವೆ. ರೋಗ ಬೇನೆ ಇದ್ದಲ್ಲಿ ೧೧ ದಿವಸಗಳ ವರೆಗೆ ಸಾಲುವ ಒಂದೇ ಡಬ್ಬಿಯಿಂದ ಗುಣವುಂಟಾಗುತ್ತದೆ. ಮತ್ತು ಸಶಕ್ತಿಯುಳ್ಳವರಿಗೆ ೬ ದಿವಸಗಳ ಮೇಲೆ [illegible] ೧೧ ದಿವಸಗಳ ವರೆಗೆ ಸಾಲತಕ್ಕ ೧ ಡಬ್ಬಿಗೆ ೧—೮—೦ ರೂ|| ಒಂದೇವ್ಯಕ್ತಿಗೆ ೩ ಡಬ್ಬಿಗಳು ತೆಗೆದುಕೊಳ್ಳತಕ್ಕವರಿಗೆ ಒಂದು ಡಬ್ಬಿಯು ಉಚಿತವಾಗಿ ಸಿಕ್ಕೀತು. ಈ ಉತ್ತಮವಿಂದ ಹೆಂಗಸರು ಸತೇಜರಾಗುತ್ತಾರೆ. ಕರುಗಿನ ಹಾಗೂ ಮುಟ್ಟಿನ ಬೇನೆಗಳು ವಾಸಿಯಾಗುತ್ತವೆ. ಎಲ್ಲರನ್ನೂ ಸರಿಯಾಗಿ ಬೇನೆ ಇಲ್ಲದವರನ್ನಾಗಿ ಮಾಡಿ ಬಲಾರೋಗ್ಯ ಪುಷ್ಟಿಗಳನ್ನು ಬೆಳೆಸುತ್ತವೆ. ಸಾಹೇಬ ಜನರಲ್ಲಿ ಬಹಳ ಡಬ್ಬಿಗಳು ಖರ್ಚಾಗುತ್ತವೆ. ಈ ಔಷಧವು ಈ ಕಂಪೆನಿಯ ಹೊರ್ತು ಬೇರೆ ಸ್ಥಳದಲ್ಲಿ ಆಗುವದಿಲ್ಲ. ಯಾವತ್ತು ದೇಶಗಳಲ್ಲಿಯೂ [illegible] ಬರೆದು ಬಂದು ಕೂಡಲೆ ಈ ಕಂಪೆನಿಯು ಕೇಳಿಕೊಂಡವರಿಗೆ ಈ ಡಬ್ಬಿಗಳ ಕಳುಹಿಸಿಕೊಡುತ್ತೇವೆ. ಅಂಚೆಯ ಹಾಗೂ ವ್ಯಾಲ್ಯೂಪೇಯಬಲ್ ವೆಚ್ಚ ಬೇರೆ ಕೊಡಬೇಕು (ಉಚಿತ ಡಬ್ಬಿ ಸಹ ೪ ಡಬ್ಬಿಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬಿಯಲ್ಲಿ ಎಲ್ಲಾ ಖಜೂರ ಪಾಕ ರವಾನಿಸುವೆವು, ಹೀಗೆ ಕಳುಹಿಸಿದರೆ ಟಪ್ಪಾಲ್ ಖರ್ಚು ಕಡಮೆ ಬೀಳುವದು.)

ಮೇಲ್ವಿಚಾರ—ಪಿ. ಎಲ್. ಎ. ಬ್ರದರ್ಸ್ ಮತ್ತು ಕಂಪೆನಿ,

ವಸ್ತ್ರ ಇಂಗ್ಲಿಷ್ ಬ್ರ್ಯಾಂಚ್ ಆಫೀಸ್, ದಿಸ್ಪೆನ್ಸರಿ ಬೆಳಗಾಂವ.

ಪೋಸ್ಟ್—ಬೆಳಗಾಂವ. Post BELGAUM.

BANGALORE.—Printed and Published at the KARNATAKA PRESS, No. 40, HOSPITAL ROAD, CITY,—1897.

THE

Karnataka Prakasika.

ಕರ್ಣಾಟಕ ಪ್ರಕಾಶಿಕಾ.

Published Every Monday Morning

ಸಾಲ್ 1 ಕ್ಕೆ 3 0 0	ಸಾಲ್ 1 ಕ್ಕೆ . . 4 0 0
6 ತಿಂಗಳಿಗೆ . . 2 0 0	6 ತಿಂಗಳಿಗೆ . . 2 8 0
3 ತಿಂಗಳಿಗೆ . 1 4 0	3 ತಿಂಗಳಿಗೆ · 1 8 0

VOL. XXIV. BANGALORE:—MONDAY, JULY 5, 1897. No. 27.

Southern Mahratta Railway Company, (Ld)

District Traffic Superintendent's Office, Bangalore 30 6 1897

NOTICE

It is hereby notified to the public that 48 bags of ... lying undelivered at S M Ry goods shed at Pasch... will be sold by public auction under section 56 (2) of the Indian Railway Act IX of 1890 at Pasch... Railway Station on Monday 19th July 1897 at 8 30 a m unless claimed in the interval and charges paid by the claimant

D R LINDSAY,
District Traffic Superintendent

Select Telegrams

London, 29th June —The United States Government, in reply to Japan, in regard to Hawaii, is guarded and diplomatic, and calculated to protract negotiations

London, 28th June —As the Queen is unable to acknowledge individually the great number of telegrams from all parts of the Empire, Her Majesty expresses, through the press her sincere thanks for these touching proofs of loyalty and affection

The Financial Commission appointed by the Ambassadors at Constantinople reports that the indemnity that ... Greece can only be four millions at the utmost

London 1st July —The Jubilee festivities are gradually drawing to a close, and the foreign princes and envoys are all departing from London

Mr Andrew Clarke, Hon..., Assistant Commissioner of the Metropolitan Police, has been Knighted

A group of Cingalese ladies and gentlemen were presented to the Queen at a garden party at Buckingham Palace

THE

Karnataka Prakasika.

MONDAY JULY 5, 1897

THE MEDICAL DEPARTMENT OF MYSORE

It may truly be said that the City of Bangalore will soon be well provided with medical institutions On Jubilee day, the 22nd of last month, was laid the foundation stone of the Victoria Hospital by the Maharani Regent This will be a splendid institution, and will supply all the wants not only of the city but also of the province It will be to Mysore what the General Hospital is to Madras Such an institution has long been a felt want in the province Dr. Benson gave a very interesting account of the medical institutions of the place in the past and the present There is in the Civil and Military Station the Bowring Civil Hospital, which will soon be improved, and through the generosity of a Native gentleman, a Maternity will soon be built, while through the generosity of two more Hindu gentlemen two more wards will be added to the Bowring Hospital It cannot with truth be said that this institution has always been well managed in the past There have at times been many complaints, but matters are going on better now The City Dispensary is doing good work, but it is not extensive enough, and so it has been determined to erect a larger building the foundation stone of which was laid on Jubilee day St Martha's Hospital has fallen somewhat out of favour since it ceased to have any connection with the Mysore Government and we fancy it will be still less resorted to when the new Hospital is finished Then the Maternity is very useful, and is taken advantage of by many poor women It is of an inestimable blessing to them, and is highly appreciated Hundreds, perhaps thousands, are ... within its walls during the course of a year and it would be difficult to say how all these poor people would get on if such an institution did not exist With the Maternity at one end of the place and the Victoria Hospital at the other, the City will be able to get along splendidly from a medical point of view. There is also the Hospital for diseases of the eye which is so ably presided over by Dr Rimasswamingar, a specialist in this respect This hospital is every day becoming more popular, and people are coming to have their eyes attended to from all parts of the province In time, a hospital will have to be built to accommodate all the patients who may wish to be attended to It is scarcely big enough for those who now put in an appearance However, the change will come in time Perhaps also some other special institutions will be brought into existence But in one respect the Medical department of Mysore is in need of improvement The men belonging to the department are not so well paid as they ought to be We have from time to time received many complaints on this head The Government builds hospitals, it encourages patients to enter them, but it pays little attention to those who carry on the work in these institutions This is a great pity, and it is to be hoped that an improvement will be brought about in this respect If the servants of Government are underpaid and neglected they cannot work with any heart The heart is taken out of them, and they are liable to go through their duties in a perfunctory sort of way It is well known that the members of the Medical profession are not so well treated as the servants in other departments of the State—the Revenue for instance Their work is harder it is far more responsible, for the lives of men are committed to their care It is very wrong, therefore, that they should not be treated as the other members of Government are treated, and it is to be hoped that the authorities will make the required changes It is quite right to build hospitals, but the weak point in the Medical department of Mysore seems to be that when they are built the authorities do not always do their duty by those who look after them

THE VISITORS TO ENGLAND

REUTER tells us that the Jubilee visitors are fast leaving London for their homes, and among them the Indian Princes and troops These troops went to England to be present at the Jubilee, and they formed part of the escort of Her Majesty as she went in procession through London With them were joined the officers and men who came from the different colonies of the empire Thus the men who guarded Her Majesty came from all parts of the world, and it was thus seen to what an extent of territory the empire covered, and what a variety of people it contained The men there came not only from India, but from Australia, Canada, Hongkong, Ceylon, the Cape, the West Indies and other places They all met in the capital of the empire and were heartily welcomed by all classes of the community We feel certain the Indian soldiers will come back to their homes with happy memories of the way they were received in England It will make them still more loyal—if this is possible—than they were before they went to the capital of the empire They saw what England was like, what it contained, and the welcome received will be certain to make them feel thankful that they belong to the empire over which Her Majesty rules The sight of London with all its splendour, and its large population must have been quite a revelation to these men, and they will feel thankful that they were sent where they could see and learn so much They will have much to tell their friends on their return to India of the wonderful things they saw, and all the kindness they met with while they were away It would be well, we think, to send small parties of Indians now and then to England to see the country, and its people, to learn the power of the empire at its head quarters, and to understand how the people appreciate the loyalty of the inhabitants of this land Perhaps this may be done now that the trip of the troops has proved such a thorough success

News and Notes.

A sudden flood of the river Moosy has drowned eight persons near Secunderabad

THE Cochin Sircar appears to have decided to issue two pies cards and quarter anna stamps

AN inflammatory placard has been posted up in Secunderabad in the city abusing the Minister for employing *Kafirs*, and warning the Nizim

WE are informed that Mr Oakley's proposal to provide bicycles to carry postal bags and parcels, &c, from Calicut to Mangalore has been approved

WE are glad to learn that Government has appointed Mr N Subramaniam to act for Mr H G Wedderburn as Administrator General during the term of his leave.

WE are glad to learn from a telegram received to day from Bombay that the Hon'ble Pherozeshah M Mehta successfully underwent a surgical operation in London and that he is doing very well

PRISONERS RELEASED —The number of prisoners released throughout India before the expiry of the term of their imprisonment, in honour of the Diamond Jubilee, we learn, was 27,001 —D M

A TRULY Oriental address is to be sent to the Queen by the Pandits of Nuddea They have resolved to send a congratulatory letter to the Queen-Empress, in orthodox style, viz, it is to be written in the Sanskrit language and on palmyra leaves

A correspondent writes —One B Ramanujah, Police Inspector of Gudiatham, intends to celebrate the marriage of his widowed daughter, Alamelu Mangammah, aged about 15 years, to one Rajagopalal, of Arni, to day, at Sathan Baskariah's house, Tuppatur, Salem District

FAMINE RELIEF —The following figures are taken from a Simla bulletin issued on the 25th June last, for the week ended 19th idem —Persons employed on relief works 3,029,651 on gratuitous relief 1,137,493 grand total 4,167,411, against 4,224,199 for the previous week.

At the Calcutta High Court on Monday the Judges resolved to suspend business for two days, owing to the absence of witnesses. It was stated in Court that the verandahs of the building had been rendered unsafe by the earthquake Evidently witnesses are more careful about their lives than their Lordships

THE post office of Shastaganj in the Chittagong is reported to have sunk as it stood, and was buried with all its fittings, furniture, cash chest, etc There was no one at work at the time, and the house was empty In several places the earth has cracked and water is seen rising from the ground Quite a panic seized the town.

One of the Calcutta daily papers, *The Indian Daily News*, has been turned out of house and home by the earthquake, the office premises having been pronounced unsafe for further occupation and therefore until they get into new premises the paper has to appear in a reduced form This (observes the editor) is a unique experience in the annals of Indian journalism "

THE King of Siam on June 4, went to the Pantheon in Rome, and laid a wreath on the tomb of Victor Emmanuel In the afternoon His Majesty visited the Pope. His Majesty, who afterwards visited on June 7 the Galleries of the Vatican, and ascended the dome of St Peter's, left Rome for Florence, whence he will proceed to Vienna

LORD Sandhurst is doing everything possible for the comfort of Mr Rand, and has sent his own cook to the hospital His Excellency despatches a telegram daily to the Secretary of State, who passes it on to the patient's father and mother, who were on a visit to him at Mahableshwar the year before last. Mrs Rand is on her way out She must have started a few hours after hearing the news

BY pure accident we (*Hindu*) overlooked the name of Mr P Krishna Moorthi, Member of the Mysore State Council, in the Jubilee Honors List We cannot say how we happened not to notice the C I E conferred on him. We are glad to join the people of Mysore in congratulating the distinguished descendant of the great Mysore Minister, Poorniah, on the honour conferred on him Mr. Krishna Moorthy first attracted attention as a Judge of the Mysore Chief Court in which position he displayed great judicial capacity His judgment in the Conversion case was a model one, and displayed the true instinct of a jurist in several places He is considered to be one of

the best officials of the Mysore State Service; and the Companionship of the Indian Empire that he has now got reflects the just appreciation on the part of Her Majesty's Government of his merits and claims

Local and Provincial.

THE SREENEVASSA MANDIRAM LOTTERY.—Came off on the afternoon of Thursday last in the Library of the institution.

ARRACK.—From the first of this month the price of arrack in the Civil and Military Station was raised from one anna eight pies to two annas a drachm.

THE ORPHANAGES—We are given to understand that about Rs. 10,000 will be realised from the Fancy fair, and the drawing of the Luckey bag to be given to the orphanages of the Civil and Military Station.

RETURN FROM LEAVE—We hear that Mr. T. Narahari Rao will return to his duty on the 8th instant Mr. Cress will return to Mysore as District Judge, thus necessitating Mr. Tirumala Char's reversion to Shimoga.—M H.

THE WEATHER—We had very high winds last week, but no rain worth noticing. A few drops fell on Friday, but nothing more. Rain is very much needed, as it is time the ground was ploughed and the grain put in. It is to be hoped the rain will soon come down.

A STRONG RUMOUR—Is current to the effect that Mr. Rangaswami Iyengar, the Deputy Commissioner of the Kolar District, will succeed Mr. Narasimaiengar, as the Deputy Commissioner of the Bangalore District, when the latter goes to Mysore, as the Palace Controller—E M

THE SOUTHERN MAHRATTA RAILWAY CHANGES.—The following changes in time in the arrival and departure of Trains at Mysore, from and to Bangalore will come into force from 1st July next The 1st, 2nd and 3rd Trains arrive at Mysore at 6 A. M.; 11-20 Noon; and 18 20 P. M, and depart at 7 35 A. M.; 12 15. A M and 21 40 P M. respectively.—M. H.

REMOVING THE RESIDENT'S TREASURY.—We are given to understand that the British Resident in Mysore is arranging to remove the Resident's Treasury from the Second Magistrate's Court to the Madras Bank It is said that the present Resident conceived this idea when he was the First Assistant to the British Resident here some years ago

The Mysore Gazette.

Bangalore, Thursday, 1st July 1897.

NOTIFICATIONS BY THE GOVERNMENT OF MYSORE

GENERAL AND REVENUE

No 13759—*J.* 1668, *dated* 25*th June* 1897.

The transfer of Mr T. J Vanderlowen Munsiff, from Bangalore to Mysore, ordered in Notification No. 1159—J. 117, dated 21st July 1896, is hereby cancelled

Mr B Srinivasa Rao, Munsiff of Bangalore, to be Additional Munsiff of Bangalore, *vice* Mr. A Subramanya Iyer, Assistant Commissioner, who will revert to the Revenue Department, To join on relief by Mr. T. J. Vanderlowen

Mr. S. Varadaraja Iengar, Acting Munsiff of Mysore, is transferred as Munsiff of Chikballapur. To join immediately.

Mr. A Ananda Rao, Munsiff of Chikballapur, is transferred as Munsiff of Mysore To join on relief

No 11353—*R F* 142 95, *dated*, 25*th June* 97

Under Article 188 of the Mysore Service Regulations, Sira Mohadin Ali, Deputy Amildar of the Hosdurga sub-taluk, Chitaldrug district, is granted privilege leave of absence for fifteen days, with effect from such date as he may avail himself of the same, the Amildar of the Holalkere taluk being in charge of the Hosdurga sub taluk, in addition to his own duties, during the absence of the Deputy Amildar on leave or until further orders.

No 11464—*R F.* 165 96, *dated* 23*th June* 97

Under Article 172 of the Mysore Service Regulations, Mr. Hema Hanumantaiya, Extra Assistant Commissioner, Chitaldrug district, is granted casual leave of absence for fifteen days, with effect from the 23rd June 1897 or such other date as he may avail himself of the same

No 11473—*R* 3810, *dated*, 23*th June* 1897,

M Krishnaswamiengar, B A, Deputy Amildar, is appointed to act, until further orders, as *sub pro tem* Amildar and 3rd Class Magistrate of the newly constituted taluk of Srinivasapur.

PUBLIC WORKS

Notification No 414—2702, *dated* 24*th June* 97

Sub Assistant Engineer Mr H D Rao, attached to the Kadur Division, is granted privilege leave of absence for one month and fifteen days, with effect from the 14th May 1897

Extracts.

THE CIVIL LIST OF KINGS AND EMPERORS

The offer of the King of Greece to forego a portion of his by no means excessive civil list suggests that payment by merit, or even by result, finds no application in the case of rulers. Unquestionably the richest of European sovereigns is the Tsar, who has the whole resources of Russia to draw upon, though his actual civil list does not exceed a million sterling His private fortune, however, must amount to at least four times that amount The Sultan enjoys also a large personal revenue in addition to the £800 000 which he nominally draws from the Treasury. He disposes of two millions annually at the very least. The German Emperor is allowed something under a million, and is by no means possessed of large private means He is not so rich as the Austrian Emperor, whose State revenue reaches a higher amount Italy cannot afford to pay King Humbert more than £100,000, and every year the privy purse has to make up for large deficiencies From his own subjects the King of Greece receives £40,000 per annum, and £12 000 more are guaranteed by England, France, and Russia The incomes of the King of Portugal and the French President do not exceed £50,000 a year, and President McKinley gets but £10,000, whilst the Swiss Legislature provides but £500 for its chief—*Daily Chronicle*

LETTERS TO THE EDITOR

MANDIRAM LIBRARY

DEAR SIR—From an item in the local columns of the "Evening Mail" of the 26th instant I learn that the Srinivasa Mandiram Library is to be closed to the public for 7 days from the 27th instant

It is not known under whose orders this fiat was issued, and what right they had to issue it

It is well known that the public who pay for the up-keep of the Library have not the slightest interest in the so called Lottery, and hence it is unjust and high-handed to deprive them of the use of the Reading Room and Library for 7 long days.

If the place were required for holding the so-called Lottery in the Reading Room and Library it was the duty of those concerned to find accommodation for the reading public elsewhere which they have not done

If the public from whose money the "Reading Room with Library" is maintained are to be treated in this shabby manner, they cannot of course, be blamed if they carry their just grievance to higher authorities, the result of which may not be very pleasant to those concerned in closing the Library on and off at their whim and pleasure

PUBLIC

[We quite agree with the writer If it was necessary to close the Library other arrangements should have been made for the reading public. But surely some other place could have been found in which to carry out the lottery. It is a breach of trust to shut up a public institution—ED *E. M*]

ಕರ್ಣಾಟಕ ಪ್ರಕಾಶಿಕಾ.

೧೮೯೭ನೇ ಇಸವಿ ಜುಲೈ ತಾ ೫ನೇ ಸೋಮವಾರ.

ಶ್ರೀಮನ್ಮಹಾರಾಜ್ಞೀ ವಿಕ್ಟೋರಿಯಾ ಚಕ್ರವರ್ತಿನೀಯವರ ಜ್ಯೂಬಿಲಿ ಮಹೋತ್ಸವವು.

ಶ್ರೀಮನ್ಮಹಾರಾಜ್ಞೀ ವಿಕ್ಟೋರಿಯಾ ಚಕ್ರವರ್ತಿನೀಯವರ ದೀರ್ಘಕಾಲಿಕ ಅಂದರೆ ಷಷ್ಟಿತಮಾಬ್ದ ಸುಖ ಪರಿಪಾಲನಾ ಜ್ಞಾಪಕಾರ್ಥವಾಗಿ ಕಳೆದ ತಿಂಗಳ ೨೨ನೇ ತಾರೀಖು ಮಂಗಳವಾರದಿನ, ಈ ಇಂಡ್ಯಾದೇಶದೊಳು ಸರ್ವತ್ರ, ಜಾತಿಮತ ತಾರತಮ್ಯವಿಲ್ಲದೆ ಸಕಲರಿಂದನುಷ್ಠಿಸಲ್ಪಟ್ಟ ಜ್ಯೂಬಿಲಿ ಮಹೋತ್ಸವದ ವೈಖರಿಯು ಪ್ರತಿಮಾನವ್ಯಕ್ತಿಗೂ ಅನುಭವಗೋಚರವಾಗಿರುವದರಿಂದ ತದ್ವಿಷಯಕವಾದ ನಮ್ಮ ವಿವರಣವು ಅನಾವಶ್ಯಕವೆಂದು ಭಾವಿಸಲ್ಪಡಬಹುದು. ಪ್ರಸಕ್ತ ಜ್ಯೂಬಿಲೀ ಮಹೋತ್ಸವಾರ್ಥ, ದೇಶದ ತಾತ್ಕಾಲಿಕ ಸ್ಥಿತಿಯು ಪರಿಧಿ ನಿಸಿ [illegible] ವಸತ್ತಿಗಳಂ ವಿಸಾರಿ ಒಬ್ಬರಿಗೆ [illegible] ದಬೇಕಾದ ಆವಶ್ಯಕವಿಲ್ಲವೆಂಕಲು, ಪರಂತು ಪ್ರಜೆಗಳು ತಮಗೆ ಸ್ವಾಭಾವಿಕಗಳಾದ ರಾಜಭಕ್ತಿಗೌರವ ಪ್ರದರ್ಶನಾರ್ಥ ಅಪ್ಪೀರಿಸಬೇಕೆಂದು, [illegible] ವ ಶುಭಸಂತೋಷಗಳೇ ಸಾರ್ವತ್ರಿಕವೆಂಬುದೂ ಗವರ್ನಮೆಂಟಿನವರು ಆ ಭಾಗದಲ್ಲೇ ಪ್ರಕಟಿಸಿದ್ದರು. ಪರಂತು ಇಂಗ್ಲೆಂಡಿನ ಪ್ರಜೆಗಳು, ತತ್ಸಂಬಂಧ ನೇಟಿವ್ ಸಂಸ್ಥಾನಾಧಿಪತಿಗಳು, ಈ ಜ್ಯೂಬಿಲೀ ಮಹೋತ್ಸವವನ್ನು [illegible] ಮಾಪ ಪ್ರಜೆಯೂ ಅತಿಶಯವಾಗಿ ಭಾವಿಸಿ ತದರ್ಥ ಅನೇಕ ಲಕ್ಷ ರೂಪಾಯಿಗಳಂ ವ್ಯಯಮಾಡಿ ಕೀರ್ತಿಕಾರ್ಯಗಳನ್ನು ನಡಸಿದರು. ಪಡೆದ ಅಂದವು ವೃತ್ತಾಂತ ಪತ್ರಿಕೆಗಳ ಮೂಲಕ ಪ್ರಕಟವಾಗದೆ ಹೋಗಲಾರದು. ೧೮೮೭ನೇ ಇಸವಿಯಲ್ಲಿ ಪಂಚಾಶದ್ವರ್ಷೋತ್ಸವಾರ್ಥವಾಗಿ ಗೋಲ್ಡನ್ ಜ್ಯೂಬಿಲಿಯೆಂಬ ಸಭ್ಯರ ಕೆಲಸ ನಡೆಸಲ್ಪಟ್ಟಿತು, ಗೋಲ್ಡನ್ ಅಂದರೆ ಸುವರ್ಣಸಂಬಂಧಕವಾದುದೆಂದು ಭಾವವು. ಬಂಗಾರವು ಸ್ವಾಭಾವಿಕವಾಗಿ ನಿರ್ಮಲವೂ ಕಾಂತಿಯುಕ್ತವಾದುದೂ ಆಗಿ ತೋರುವಂತೆ ಆ ಕಾಲದಲ್ಲಿ ಜನರೊಳು ಜಾತಿಮತ ಪ್ರಯುಕ್ತಗಳಾದ ರಾಗದ್ವೇಷಾಸೂಯೆಗಳುಳ್ಳವಿನದೆ ಎಲ್ಲರೂ ಮಾರ್ಗವಹೃದಯರಾಗಿ ಅನ್ಯೋನ್ಯಸ್ನೇಹ ಕ್ಷೇಮಾಭಿಲಾಷಿಗಳಾಗಿ ವರ್ತಿಸುತಲಿದ್ದರು. ಪ್ರಸಕ್ತ ಜ್ಯೂಬಿಲಿ ಉತ್ಸವಕ್ಕೆ ಡೈಮಂಡ್ ಜ್ಯೂಬಿಲಿ ಎಂಬ ವ್ಯವಹಾರ ಪ್ರಚುರಗಿರುತದೆ. ಡೈಮಂಡ್ ಅಂದರೆ ವಜ್ರವು—ವಜ್ರವು ಸುವರ್ಣಕ್ಕಿಂತಲೂ ಅನರ್ಘವಾದುದಾಗಿದ್ದರೂ ಸ್ವಭಾವತಃ ಪಾಷಾಣವಾಗಿಯೂ, ಕಾಠಿಣ್ಯವುಳ್ಳದ್ದಾಗಿಯೂ, ಪ್ರಾಣಾಪಹಾರಕವಾದುದಾಗಿಯೂ ಇರುತಿದೆ. ತದ್ವತ್ ಗತ ದಶವರ್ಷಗಳ ಕಾಲದಿಂದೀಚೆಗೆ ಪ್ರಜೆಗಳಲ್ಲಿಯೂ, ತತ್ಪಾಲಕರಾದ ಪ್ರಭುಗಳಲ್ಲಿಯೂ, ಕಾಲಗತಿಯಲ್ಲೂ ಅನೇಕ ವೈಪರೀತ್ಯಗಳುದ್ಭವಿಸಿ ಬಹುಪ್ರಭೇದಗಳಿಂದವು ಪ್ರಾಚುರ್ಯವನ್ನೈದುತ ಬಂದವು. ಪ್ರಜೆಗಳು ವಿವೇಕಿಗಳೆನಿಸಿ ಉತ್ತಮಸ್ವಭಾವವುಳ್ಳವರಾಗಿದ್ದರೂ ಪರಸ್ಪರ ಸೌಹಾರ್ದವೂ, ವಿಶ್ವಾಸವೂ ಶೂನ್ಯವಾಗಿ ಕಾಪಟ್ಯವೂ, ಸ್ವಪ್ರಯೋಜನಪರತೆಯೂ, ಸ್ವಾತಂತ್ರ್ಯಲಂಪಟಜ್ಞಾನವೂ ಅಧಿಕವಾಗುತ ಬಂದವು. ಪ್ರಜಾಪಾಲಕರಾದ ಅರಸರಿಗೂ ಪ್ರಜೆಗಳಿಗೂ ನೆಲಗೊಂಡಿರುವ ಸಂಬಂಧವು ಬಾಹ್ಯಕ್ಕೆ ಮನೋಹರವಾಗಿಯೂ, ಶಬ್ದಕ್ಕೆ ಅತಿಶ್ರಾವ್ಯವಾಗಿಯೂ ಇದ್ದಾಗ್ಯೂ ಗವರ್ನಮೆಂಟಿನವರ ಪ್ರಜೆಗಳವಿಷಯದಲ್ಲಿ ನಡೆದಿರುವ ಭಾವವು ಅಕುಟಿಲವಾದುದಾಗಿಯೂ, ನಿರಾಘಾತವಾದ ಪ್ರಾಮಾಣಿಕತೆಯುಳ್ಳದ್ದಾಗಿಯೂ ಇರುವುದೆಂದೂಹಿಸಲ್ಪಡಲಿಕ್ಕೆ ಸಾಧನಗಳು ದೃಷ್ಟಿಗೋಚರಗಳಾಗವಿಲ್ಲವು. ಅದಕ್ಕನುಸಾರವಾಗಿಯೇ ಕಾಲಗತಿಯೂ ವ್ಯತ್ಯಸ್ತವಾಗಿ ಕ್ಷಾಮಡಾಮರಗಳೂ, ಪ್ರಜಾಕ್ಷೋಭೆಯೂ ಅಧಿಕವಾಗಿ ಸಂಕಟವು ಹೆಚ್ಚುತ ಬಂದವು. ಪ್ರಜೆಗಳ ಸ್ಥಿತಿಯಂ ಕುರಿತು ಚಿಂತಿಸಿದರೇನೋ ಅದೂ ನಿರುತ್ಸಾಹಕರವಾಗಿರುತಿದೆ, ಹ್ಯಾಗೆಂದರೆ—ಕ್ಷಾಮ ಕ್ಷೋಭೆಯಿಂದ ಬೇರೆ ಜೀವನೋಪಾಯವಿಲ್ಲದೆ ಕೇವಲ ಉತ್ಪನ್ನಭಿಕ್ಷುಕರಾಗಿ ಕೂಲಿಯಿಂದ ಜೀವಿಸಿ ಪ್ರಾಣಧಾರಣವಂ ಮಾಡುತಲಿರುವಂತವರು ಅನೇಕರು. ಸಾಲಗಾರರಾಗಿ ಸರ್ವಸ್ವವಂ ಕಳೆದುಕೊಂಡು ಕೇವಲ ಸಾಲ ಕೊಟ್ಟವರ ಕೃಪೆಗೆ ಪಾತ್ರರಾಗಿ ಸ್ಥಾನಾಂತರಗಳಿಗೆ ತೆರಳದೆ ಇರುವವರನೇಕರು. ನಿರಾಧಾರಿಗಳಾಗಿ ಶಿಬಿರಗಳನ್ನೇ ಆಶ್ರಯಿಸಿಕೊಂಡು ಪ್ರಾಣಗಳಂ ತೊರೆಯಲಾರದೆ ಕ್ಲೇಶ ಪಡುತಲಿರುವಂತವರು ಬಹುಮಂದಿ. ಮಾನಸಂರಕ್ಷಣಾರ್ಥ ತಮ್ಮ ಪ್ರಾಣಗಳಂ ಸಹ ಲಕ್ಷ್ಯಗೊಳ್ಳದೆ ಪ್ರಾಯೋಪವೇಶವಂ ಮಾಡುತ [illegible] ಮಕ್ಕಳನ್ನು ಸಹ ತೊರೆದು ದೇಶಭ್ರಷ್ಟರಾಗಿ ತತ್ರವೃತ್ತಾಂತವನ್ನು ಸಹ ಅನ್ಯರಿಗೆ ತಿಳಿಸದೆ ಹೋದವರು ಅಪಾರವಾಗಿರುತ್ತಾರೆ. ಇದರಿಂದಲೇ ಪ್ರಜೆಗಳ ಸ್ಥಿತಿಯ ನಷ್ಟ ಉಪಪತ್ತಿಯನ್ನೂ ಎಲ್ಲರೂ ಊಹಿಸಿ ಅರಿತುಕೊಳ್ಳಬಹುದು. ಇಂತಾ ದುರ್ದಶೆಯನ್ನನುಭವಿಸುತಲಿರುವ ದೇಶದಲ್ಲಿ ಕ್ಷಣಿಕ ಉಲ್ಲಾಸಾರ್ಥವಾಗಿಯೂ, ಆತ್ಮತೃಪ್ತಿಗಾಗಿಯೂ, ಅಪರಿಮಿತವಾದ ದ್ರವ್ಯವು ವ್ಯಯವಾಗಲ್ಪಟ್ಟವು. ಪರಂತು ಅದರಲ್ಲಿ ಬಹುಭಾಗವು ಅನುತ್ಪಾದಕವಾದುದಾಗಿಯೂ, ದೃಢತರ ಪ್ರಯೋಜನವನ್ನುಂಟುಮಾಡತಕ್ಕದ್ದಲ್ಲವಾದುದಾಗಿಯೂ ಇರುತಿದೆ. ಆದಾಗ್ಯೂ ಪ್ರಜೆಗಳು ಸ್ವಪ್ರಯೋಜನ ಲಾಭನಷ್ಟಗಳಂ ಸಹ ಲೇಶವೂ ಚಿಂತಿಸದೆ ಶ್ರೀಮನ್ಮಹಾರಾಜ್ಞೀ ಇಂಡ್ಯಾ ಚಕ್ರವರ್ತಿನೀಯವರಲ್ಲಿ ತಾವು ಪಡೆದಿರುವಂತ ನಿರತಿಶಯವಾದ ರಾಜಭಕ್ತಿ ಪ್ರೀತಿ ಗೌರವ ಪ್ರದರ್ಶನಾರ್ಥ ವ್ಯಕ್ತಗೊಳಿಸಿದ ಉತ್ಸಾಹವು ಪ್ರಶಂಸನೀಯವಲ್ಲದೆ ಹೇಳಲರಿಯದು. ಪ್ರಜೆಗಳ ರಾಜಭಕ್ತಿ ಕೃತಜ್ಞತಾದಿ ಭಾವಗಳನ್ನು ಶ್ರೀಮನ್ಮಹಾರಾಜ್ಞೀಯವರು ತಮ್ಮ ಪ್ರತಿನಿಧಿಗಳ ಮುಖೇನ ತಿಳಿದು ಅಭಿನಂದಿಸಿ ಅವರ ವಿಭವಾಭಿವೃದ್ಧಿಯನ್ನೇ ಉತ್ತರೋತ್ತರ ತಾವು ಬಯಸುತಲಿರುವಂತೆ ಆಜ್ಞಾಪಿಸಿದರು. ಇಂತ ಮಹೋತ್ಸವಂತೋಷ ಕಾಲದಲ್ಲಿ ಕೇವಲ [illegible] ಶೀಲರಾದ ಇಂಡ್ಯಾ ದೇಶೀಯರಿಗೆ ಸ್ವರೂಪತಃ ಮಾಡಿದ ಉಪಕಾರವತ್ತು ಚಿರಸ್ಮರಣೀಯವಾದುದರಿಂದ ಅದನ್ನರಿಯುವ ಕುತೂಹಲವು ಸರ್ವಜನ ಸಾಮಾನ್ಯವಾದುದಾಗಿರುತಿದೆ. ಈ ಜ್ಯೂಬಿಲೀ ಉತ್ಸವವು ಚಿರಸ್ಮರಣೀಯವಾಗಿರುವಂತ ಕಾರ್ಯಗಳ್ಯಾವವೂ ನಡೆಯಲ್ಪಡಲಿಲ್ಲವು. ಜನರಿಗೆ ದುರ್ಭರವಾದ ಸುಂಕ ಸಿದ್ಧಾಯಗಳೇನೂ ತಗ್ಗಿಸಲ್ಪಡಲಿಲ್ಲವು. ನೂತನವಾಗಿ ರಿಯಾಯಿತಿಗಳೊಂದೂ ಅವರಿಗೆ ಪ್ರಚುರಮಾಡಲ್ಪಡಲಿಲ್ಲವು. ಅವರ ಭೂತಗಳಿಂದ ಅಧಿಕ ಸ್ವಾತಂತ್ರ್ಯಗಳ್ಯಾವವೂ ಅವರಿಗೆ ಕಲ್ಪಿಸಲ್ಪಡಲಿಲ್ಲವು. ಅಪರಾಧಿಗಳಾದ ಆವ ಕೈದಿಗಳ್ಯಾವವೂ ತೋರಿಸಲ್ಪಡಲಿಲ್ಲವು. ಇಂತವು ಯಾವದಾದರೊಂದು ನಡೆಸಲ್ಪಟ್ಟಿದ್ದರೆ ಪ್ರಜೆಗಳ ಸಂತೋಷಕ್ಕೆ ಪಾರವಿಲ್ಲದಿರುವುದು. ಆದರೆ ಜನಗಳು ಈಗ ಸಂತೋಷ ರಹಿತರೆಂದು ನಾವು ತಿಳಿಸಲು ಪ್ರಯತ್ನಿಸಿದವರಲ್ಲವು. ಈಗಿನ ಸಂತೋಷವೆಲ್ಲವು ತತ್ತದ್ವ್ಯಕ್ತಿ ನಿಷ್ಠವಾದುದಾಗಿಯೂ ಕ್ಷಣಿಕವಾದ ವಿನೋದಾನಂದರೂಪವಾದುದಾಗಿಯೂ ಇದ್ದವೇ ಹೊರತು ದೀರ್ಘಕಾಲಿಕವಾಗಿಯೂ, ಸಾರ್ವದೇಶಿಕವಾದುದಾಗಿಯೂ, ಸಾರ್ವಜನೀನವಾದುದಾಗಿಯೂ, ಅನವರತ ಸ್ಮರಣಾರ್ಹವಾದುದಾಗಿಯೂ ಇರುವಂತ ವ್ಯಾವರ್ತಕಗಳಾದ ವ್ಯಾಪಾರಗಳೊಂದೂ ನಡೆಸಲ್ಪಡದೆ, ಕೇವಲ ದೊಂಬಿ ದಾಸರಿಗಳು, ಗಾರುಡಿಗರು, ಸೂಳೆಯರು. ಇವರ ಆಟಪಾಟ ವಿನೋದಗಳಿಂದ ಜ್ಯೂಬಿಲಿಯು ಪರಿಸಮಾಪ್ತವಾದ ಅಂಶವು ವಿಶೇಷ ಸಂತೃಪ್ತಿಕರವಾಗಿರುವದೆಂದು ನಾವು ಭಾವಿಸಲಾರೆವು.

ಈ ಸಂಸ್ಥಾನದ ರಾಜಕೀಯ ಚರಿತ್ರೆಯೊಳು ಪ್ರಬಲರಾಗಿದ್ದು, ಒಂದು ಕಾಲವಿಶೇಷದಲ್ಲಿ ಅನಿಯತ ಚಕ್ರದೊಳಿದ್ದ ಈ ರಾಜ್ಯವನ್ನು ರಾಜಪ್ರತಿನಿಧಿಯಾಗಿ ಪಾಲಿಸುತಲಿದ್ದು ಗತಿಸಿದ ದಿವಾನ್ ಪೂರ್ಣಯ್ಯನವರ ಪ್ರಪೌತ್ರರಾದ ಮಿ॥ ಕೃಷ್ಣಮೂರ್ತಿಯವರು ಸುಪಾತ್ರಭವ ವೈಭವಾಧಿಕಾರ ವಿದ್ಯಾವಿನಯ ಗಾಂಭೀರ್ಯಾದಿಗುಣಗಳಿಂದ ತಮ್ಮ ವಂಶ ಗೌರವವನ್ನು ಪೋಷಿಸುತ ತಾತ್ಕಾಲಿಕ ರಾಜ್ಯಾಡಳಿತದಲ್ಲಿ ಜವಾಬ್ದಾರಿಯುಳ್ಳ ಉನ್ನತಾಧಿಕಾರವನ್ನು ಕೈಗೊಂಡು ಪ್ರಶಸ್ತ್ಯವಂ ಪಡೆದಿರುವುದು ಸಕಲರಿಗೂ ತಿಳಿದಿರುವ ವಿಷಯವಷ್ಟೆ. ಈ ದೊಡ್ಡಮನುಷ್ಯರಿಗೆ ಆಜನ್ಮಸಿದ್ಧವಾಗಿರುವ ವಂಶ ಕೀರ್ತಿ ಪ್ರತಿಷ್ಠೆಗಳೇ ಅನ್ಯೋನ್ಯಗಳಾಗಿರುವದರಿಂದ ವ್ಯಾವ

ರ್ಶಕಗಳಾದ ಅಪೇಕ್ಷಿತ ಪ್ರಾಶಸ್ತ್ಯಗಳು ಅವರಿಗೆ ಇದುವರಿಗೆ ಅಭಿಲಬ್ಧಕವಾಗಿರಲಿಲ್ಲವು. ಏಕೆಂದರೆ ಇಂಡ್ಯಾ ಗವರ್ನಮೆಂಟಿನವರು ಗುಣಗ್ರಾಹಕ ಚಾತುರ್ಯ ದುರೀಣರಾದುದರಿಂದಲೂ, ಉಪಯೋಗಾರ್ಹಗಳಾದ ವಸ್ತುಗಳನ್ನುಚಿತರೀತಿಯಿಂದ ಗೌರವಿಸಿ ಸತ್ಕರಿಸುವ ಸ್ವಭಾವವುಳ್ಳವರಾದುದರಿಂದಲೂ, ಈ ಜ್ಯೂಬಿಲಿ ಮಹೋತ್ಸವಾಂಗಭೂತವಾಗಿ ಮೆ॥ ಕೃಷ್ಣಮೂರ್ತಿಯವರಿಗೆ ಸಿ ಐ ಇ ಎಂಬ ತ್ರ್ಯಕ್ಷರ ಘುಟಿಕೆಯಿಂದ ಪ್ರಶಸ್ತಿಯಂ ದಯಪಾಲಿಸಿದ ಸ್ವಾಭಿಪ್ರಾಯವನ್ನು ಗತವಾರದ ಪತ್ರಿಕೆಯಲ್ಲಿ ಪ್ರಕಟಿಸಿ ಏತದ್ದೇಶೀಯರ ಪ್ರತಿನಿಧಿತ್ವೇನ ನಮ್ಮ ಸಂತೋಷದ ಪ್ರದರ್ಶನವಾದ ಆವಾವನವಂ ಮಾಡಿದ್ದೆವಷ್ಟೆ. ಇದೇ ವಿಷಯದಲ್ಲಿ ಈ ತಿಂಗಳ ೨ನೇ ತಾರೀಖಿನ ಮದರಾಸ್ ಹಿಂದೂ ಪತ್ರಿಕೆಯು ಪ್ರಕಟಿಸಿರುವ ಸ್ವಾಭಿಪ್ರಾಯವನ್ನು ಇಲ್ಲಿ ಭಾಷಾಂತರಿಸಿ ಪ್ರಕಟಿಸುತ್ತೇವಾಗಿ ನಮ್ಮ ಪತ್ರಿಕೆಯ ವಾಚಕರಿಗೆ ನಿವೇದಿಸುತ್ತೇವೆ —

ಜ್ಯೂಬಿಲಿ ಮಹೋತ್ಸವಾಂಗವಾಗಿ ದಯಪಾಲಿಸಲ್ಪಟ್ಟ ಪ್ರಶಸ್ತಿ ಪತ್ರ ದಾನದಲ್ಲಿ ಮೈಸೂರು ಸಂಸ್ಥಾನದ ದಿವಾನ್ ಸಿ ವಿ ಶೇಷಾದ್ರಿ ಅಯ್ಯರ್ ಕೆ ಸಿ ಎಸ್ ಐ ... ಕೇವಲ ಸ್ವಯೋಗ್ಯತೆ ... ವಿಷಯವಾಗಿ ... ಕಾರಣವು ... ವಾಗಿರುತ್ತದೆ. ಮೈಸೂರಿನ ... ಪ್ರಸಿದ್ಧರಾದ ... ಕೃಷ್ಣಮೂರ್ತಿಯವರ ... ಮೈಸೂರು ದಿವಾನರವರ ... ಕೃಷ್ಣಮೂರ್ತಿಯವರು ಮೈಸೂರಿನ ಚೀಫ್ ಜಡ್ಜಿಯವರಾಗಿದ್ದು ಸದರೀ ಅಧಿಕಾರದಲ್ಲಿ ಅವರು ವ್ಯಕ್ತಿಗೊಳಿಸಿದ ನ್ಯಾಯ ಪರಿಶೀಲನ ಚಾತುರ್ಯವು ಪ್ರಭುಗಳ ಆದಾನಕ್ಕೆ ಪ್ರಧಾನತಃ ವಿಷಯರಾದವರು. ... ಜಾತಿ ಸಂಪ್ರದಾಯ ... ವಿಶೇಷವಾಗಿ ಅವರು ಮಾಡಿದ ತೀರ್ಮಾನವು ... ಅನೇಕ ಪ್ರಕರಣಗಳ ನ್ಯಾಯ ಸೂಕ್ಷ್ಮವನ್ನು ನಿರೂಪಿಸತಕ್ಕದ್ದಾಗಿಯೂ ಇದ್ದು ಮೈಸೂರು ಸಂಸ್ಥಾನದ ನೌಕರಿಯಲ್ಲಿರುವ ಉತ್ಕೃಷ್ಟರಾದವರಿಗಾಗಿ ಏರ್ಪಡಿಸಲ್ಪಟ್ಟಿರುತ್ತದೆ. ಈ ದೊಡ್ಡ ಸಂದರ್ಭದಲ್ಲಿ ಈಗ ಒದಗಿಸಿದ ಇಂಡ್ಯಾ ... ಪ್ರಶಸ್ತಿ ... ಶ್ರೀಮನ್ಮಹಾರಾಣೀ ಸರ್ಕಾರದವರು ಅವರ ನೈಜವಾದ ಯೋಗ್ಯತೆಯನ್ನೂ ರಾಜ್ಯದಾಯಿಯನ್ನೂ ನ್ಯಾಯವಾಗಿ ಪುರಸ್ಕರಿಸಿದ್ದು ಕೆಲವು ಸ್ವತಿಸ್ತಂಭವಾಗಿರುತ್ತದೆಂದು ಭಾವಿಸತಕ್ಕದ್ದಾಗಿರುತ್ತದೆ" ಎಂಬದು

ಕಳೆದ ತಿಂಗಳ ೨೪ನೇ ತಾರೀಖು ಸೋಮವಾರದ ದಿನ ಬೆಳಗ್ಗೆ ೧೧ ಘಂಟೆಗೆ ವಿಜಯನಗರದ ಮಹಾರಾಜರವರ ಕಾಲೇಜಿನಲ್ಲಿ ಒಟ್ಟು ವಿದ್ಯಾರ್ಥಿಗಳೂ ಪಂಡಿತರೂ ಸಭೆ ಸೇರಿ, ಪರಮ ನವಪ್ರಾಪ್ತರಾದ ವಿಜಯನಗರದ ಮಹಾರಾಜರವರ ಅನಿರೀಕ್ಷಿತ ಆಕಾಲಿಕ ಮರಣಪ್ರಯುಕ್ತವಾದ ತಮ್ಮ ಖೇದವನ್ನು ವ್ಯಕ್ತಪಡಿಸಿ ಕೊಂಡು ಮಹಾರಾಣಿಯವರಿಗೂ, ರಾಜ ವಂಶಜರಿಗೂ ಉಚಿತರೀತಿಯಿಂದ ವ್ಯಕ್ತಪಡಿಸಿ ದುಃಖಸ್ವಾಂತನ ರೂಪವಾದ ವಿಜ್ಞಾಪನಾ ಪತ್ರಿಕೆಯಂ ಅವರಿಗೆ ಕಳುಹಿಸಬೇಕೆಂದು ತೀರ್ಮಾನಿಸಿದರು. ತತ್ಕಾಲದಲ್ಲಿ ಆ ಕಾಲೇಜ್ ಪ್ರಿನ್ಸಿಪಾಲರವರು ಅಗ್ರಾಸನವಂ ವಹಿಸಿ ಇವರಡಿ ಕಂಡಂತೆ ತೀರ್ಮಾನಗಳನ್ನು ಮಾಡಿದರು. ಈ ಶಿಷ್ಟ ಪ್ರಭುಗಳು ಪ್ರಾಮಾಣಿಕರಾಗಿಯೂ, 'ಶ್ರೇಷ್ಠಪೋಷಕರಾಗಿಯೂ' ಇದ್ದ ಘನವನ್ನು ಹೊಂದಿದ ಗತಿಸಿದ ಮಹಾರಾಜರವರ ಅನಿರೀಕ್ಷಿತಾಕಸ್ಮಿಕ ಮರಣಪ್ರಯುಕ್ತ ಸಂಭವಿಸಿರುವ ದುಸ್ಸಹವಾದ ಖೇದವನ್ನು ಈ ಕಾಲೇಜ್ ಪಂಡಿತರೂ ವಿದ್ಯಾರ್ಥಿಗಳೂ ಅನುಭವಿಸುತಲಿರುವದರಿಂದ ಅಂತ ತಮ್ಮ ಖೇದವನ್ನು ವೃದ್ಧ ಮಹಾರಾಣಿಯವರ ಮತ್ತು ರೀವಾ ಮಹಾರಾಣಿಯವರ, ಇತರ ರಾಜವಂಶಜರ ಸನ್ನಿಧಿಗಳಲ್ಲಿ ಸತಮುಖಸ್ವಾಂತನಾ ಪತ್ರಿಕಾ ಮೂಲಕ ಕೇವಲ ನಮ್ರ ಭಾವದೊಡನೆ ವಿಜ್ಞಾಪಿಸಿಕೊಳ್ಳುವದಕ್ಕೆ ಅವಕಾಶವಂ ದಯಪಾಲಿಸಬೇಕೆಂದು ಅವರಂ ಪ್ರಾರ್ಥಿಸತಕ್ಕದ್ದು. ಕಳೆದ ತಿಂಗಳ ೨೪ನೇ ತಾರೀಖು ಆಗಾಯಿತು ಒಂದು ತಿಂಗಳ ಕಾಲ ಕಾಲೇಜ್ ವಿದ್ಯಾರ್ಥಿಗಳೂ ಪಂಡಿತರೂ ದುಃಖಪ್ರದರ್ಶಕವಾಗಿ ಆಶೌಚವನ್ನು ಕೊಂಡಾಡತಕ್ಕದ್ದು. ಮಹಾರಾಜರವರ ಪ್ರತಿಕೃತಿಯುಳ್ಳ ಒಂದು ತಸ್ವೀರನ್ನು ತಯಾರ್ಮಾಡಿಸಿ ಕಾಲೇಜ್ ಹಾಲ್‌ನಲ್ಲಿಡಿಸಲಿಕ್ಕೆ ತಕ್ಕ ಏರ್ಪಾಡುಗಳಂ ಮಾಡತಕ್ಕದ್ದು. ವಿಕದರ್ಭ ಕಾಲೇಜ್ ಪಂಡಿತರಿಂದಲೂ, ಇತರ ಉಪಾಧ್ಯಾಯರಿಂದಲೂ, ಹಿಂದೆ ವಿದ್ಯಾಭ್ಯಾಸ ಮಾಡಿದಂತ ಮತ್ತು ಈಗ ವಿದ್ಯಾಭ್ಯಾಸ ಮಾಡುತಲಿರುವಂತ ವಿದ್ಯಾರ್ಥಿಗಳಿಂದಲೂ ಚಂದಾ ... ದನ ಸಹಾಯವಂ ಪಡೆದು ಮೇಲೆ ತಿಳಿಸಲ್ಪಟ್ಟ ಉದ್ದೇಶವನ್ನು ನೆರವೇರಿಸತಕ್ಕದ್ದೆಂದು ನಿರ್ಣಯವಾಗಿ ... ಹಿಂದೂ ಪತ್ರಿಕೆ ತಿಳಿಸುತ್ತದೆ.

Occasional Notes
ನೈಮಿತ್ತಿಕವಿಷಯನ್ಯಾಸ

ಕೊಂಚ್ಬಿ ಸಂಸ್ಥಾನದವರು, ಎರಡ ಕಾಸಿನ ಕಡ್ಡಿಗಳು ಮತ್ತು ಮೂರ ಕಾಸಿನ ಲಕೋಟೆ ಅಂಚೆ ಕಲೆಟಿಗಳು ... ದೇಶ ... ನಿರ್ಣಯಿಸಿರುವಂತೆ ತಿಳಿಯಬರುತ್ತದೆ

ಹೈದರಾಬಾದ್ ಸಂಸ್ಥಾನದ ... ಜನರನ್ನು ಸರ್ಕಾರಿ ನೌಕರಿಯಲ್ಲಿಟ್ಟ ಬಗ್ಗೆ ಅಲ್ಲಿನ ... ವರನ್ನು ... ಈ ರೀತಿ ... ಪ್ರಮಾಣಗಳ ... ಸಿಪಾಯಿಗಳನ್ನು ಎಚ್ಚರಿಸಿ ... ನೋಟೀಸು ... ತಿಳಿಸುತ್ತದೆ.

ನವದ್ವೀಪದ ಪಂಡಿತರೆಲ್ಲರು ಸೇರಿ ಪ್ರಾಚ್ಯ ದೇಶದ ಪುರಾತನ ಸಂಪ್ರದಾಯವನ್ನನುಸರಿಸಿ, ಮಹಾರಾಜ್ಞೀ ಇಂಡಿಯಾ ಚಕ್ರವರ್ತಿನೀಯವರಿಗೆ ... ಸಂಸ್ಕೃತಭಾಷೆಯಲ್ಲಿ ... ಒಂದು ವಿಜ್ಞಾಪನಾ ಪತ್ರಿಕೆಯಂ ಬರೆದು ಕಳುಹಿಸಿಕೊಡಬೇಕೆಂದು ನಿಷ್ಕರ್ಷಿಸಿರುವಂತೆ ತಿಳಿಯಬರುತ್ತದೆ.

ಬಂಗಾಳ ದೇಶಕ್ಕೆ ಸೇರಿದ ಚಿಟಗಾಂಗ್ ಎಂಬ ಪಟ್ಟಣದಲ್ಲಿ ಒಂದುಕಡೆ ಒಂದು ಪೋಸ್ಟಾಫೀಸು, ಅದರೊಳಗಿದ್ದ ಖುರ್ಚಿ, ಮೇಜು, ಹಣದ ಪೆಟ್ಟಿಗೆ ಮೊದಲಾದವುಗಳೊಡನೆ ಇದ್ದದ್ದು ಇದ್ದಂತೆ ಭೂಮಿಯಲ್ಲಿ ಮುಳುಗಿಹೋಯಿತೆಂತಲೂ, ... ಕಟ್ಟಡವಿದ್ದ ಜಾಗದಲ್ಲಿ ... ಅಲ್ಲಿ ಅನೇಕ ... ಬಿರುಕುಬಿಟ್ಟು ಒಳಗಿನಿಂದ ಮೇಲಕ್ಕೆ ನೀರು ಬರುತಲಿದೆಯೆಂತಲೂ, ಸದರೀ ಪಟ್ಟಣ ನಿವಾಸಿಗಳು ಕೇವಲ ಭಯಾಕ್ರಾಂತಚಿತ್ತರಾಗಿರುತ್ತಾರೆಂತಲೂ ಉತ್ತರ ದೇಶದ ಪತ್ರಿಕೆಯೊಂದು ತಿಳಿಸುತ್ತದೆ

ಈಗ್ಗೆ ಸುಮಾರು ಇಪ್ಪತ್ತೈದು ದಿನಗಳ ಹಿಂದೆ ಕಲ್ಕತ್ತೆಯಲ್ಲಿ ಸಂಭವಿಸಿದ ಕೇವಲ ಭಯಂಕರವಾದ ಭೂಕಂಪದ ಮೂಲಕ ಅನೇಕ ಕಟ್ಟಡಗಳು ನಾಶವಾದ ಸಂಗತಿಯನ್ನು ಹಿಂದಿನ ಪತ್ರಿಕೆಯ ಮೂಲಕ ತಿಳಿಸಿರುತ್ತೇವೆಯಷ್ಟೆ. ಅಲ್ಲಿನ ಇಂದಿಯನ್ ಡೈಲಿ ನ್ಯೂಸ್ ಎಂಬ ವೃತ್ತಾಂತ ಪತ್ರಿಕೆಯ ಆಫೀಸು ಕಟ್ಟಡವೂ ಅಪಾಯಸ್ಥಿತಿಯಲ್ಲಿರುವದರಿಂದ ಬೇರೆಯೊಂದು ಕಟ್ಟಡಕ್ಕೆ ಆಫೀಸು ಸಾಗಿಸಲ್ಪಡುವ ತನಕ ಸದರೀ ಪತ್ರಿಕೆಯು ಸಣ್ಣದಾಗಿ ಛಾಪಿಸಲ್ಪಡುವದೆಂದು ಸದರೀ ಪತ್ರಿಕಾಧಿಪರು ವ್ಯಕ್ತಪಡಿಸುತ್ತಾರೆ

ಕಳೆದ ತಿಂಗಳ ೧೯ನೇ ತಾರೀಖಿಗೆ ಕೈದಾದ ವಾರದಲ್ಲಿ ಕ್ಷಾಮನಿವಾರಕ ಕಾಮಗಾರಿಗಳಲ್ಲಿ ಕೂಲಿ ಮಾಡುವವರ ಮೂಲಕ ... ಮಂದಿ, ದಮ್ಮರ್ಥ ಸ್ಥಾಪಿಸಲ್ಪಟ್ಟಿರುವ ಅನ್ನಸತ್ರಗಳ ಮೂಲಕ ೧೧,೩೩,೮೯೩ ಮಂದಿ, ಒಟ್ಟು ೮೧,೬೩,೮೪೦ ಮಂದಿ ಜೀವಿಸುತಲಿದ್ದರು. ಅದಕ್ಕೆ ಹಿಂದಿನ ವಾರದಲ್ಲಿ ಮೇಲೆ ತಿಳಿಸಲ್ಪಟ್ಟಿರುವ ಎರಡು ಮಾರ್ಗಗಳಿಂದ ಜೀವಿಸಿದವರು ... ಮಂದಿ ಇದರಿಂದ ಹಿಂದಿನ ವಾರಕ್ಕಿಂತಲೂ ಈ ವಾರದಲ್ಲಿ ... ಮಂದಿಕಡಿಮೆಯಾಗಿರುವಂತೆಸ್ಪಷ್ಟವಾಗುತ್ತದೆ

LOCAL AND PROVINCIAL NEWS.
ಒಳದೇಶಮತ್ತುತಾಲ್ಲೂಕುಜಾತವೃತ್ತಾಂತಗಳು

ಈ ತಿಂಗಳ ಗುರ್‍ರೀ ತಾರೀಖು ಬೃಹಸ್ಪತಿವಾರದದಿನ ಇಲ್ಲಿನ ಶ್ರೀನಿವಾಸಮಂದಿರ ಲೈಬ್ರರಿಯಲ್ಲಿ ನಡೆದ ಲಾಟರಿಯ ಫಲಿತಾಂಶವು ಕಾಲಾತೀತವಾಗಿ ನಮಗೆ ಕಳುಹಿಸಲ್ಪಟ್ಟದರಿಂದ ಅದನ್ನು ಮುಂದಿನವಾರದಲ್ಲಿ ಪ್ರಕಟಿಸುವೆವು

ಮೈಸೂರ್ ಶೀಮೆಯ ರಿಜಿಸ್ಟ್ರೇಷನ್ ಇನ್ಸ್ಪೆಕ್ಟರ್ ಜನರಲ್ಲವರ ಆಫೀಸ್ ಮ್ಯಾನೇಜರ್ ಮೆ॥ ಶೇಷಗಿರಿರಾಯರವರು ಈ ತಿಂಗಳ ಗುರ್‍ರೀ ತಾರೀಖು ಆಗಾಯಿತು ಮಾಹೆಯಾನಾ ... ರೂಪಾಯಿಗಳ ಪೆನ್ಶನ್ ಮೇಲೆ ಕೆಲಸದಿಂದ ನಿವೃತ್ತರಾದುಂತೆಯೂ, ಅವರ ಗ್ರೇಡ್ ೧೦೦ ರೂಪಾಯಿಗಳಿಗೆ ತಗ್ಗಿಸಲ್ಪಟ್ಟು ಆ ಕೆಲಸವು ಸದರೀ ಆಫೀಸ್ ಹೆಡ್‌ಕ್ಲರ್ಕ್ ಮೆ॥ ಗುಂಡಪ್ಪನವರಿಗೆ ಕೊಡಲ್ಪಟ್ಟಂತೆಯೂ, ... ರೂಪಾಯಿಗಳು ಆಫೀಸ್ ನೌಕರ್ಯನವರಿಗೆ ... ರೂಪಾಯಿಗಳ ಪ್ರಕಾರ ... ದಾಳವಾಗಿ ಕೊಡಲ್ಪಟ್ಟಿತೆಂತಲೂ ತಿಳಿಯಬಂದಿದೆ. ಮೆ॥ ಶೇಷಗಿರಿರಾಯರವರು ದೀರ್ಘಕಾಲ ಸದರೀ ಇಲಾಖೆಯಲ್ಲಿ ನೌಕರಿ ಮಾಡಿ ವಿಶೇಷ ಅನುಭವವುಳ್ಳ ನವ ಘನರಾದ ಮ್ಯಾನೇಜರೆನಿಸಿ ಹಿಂದಿನ ಅನೇಕ ಇನ್ಸ್ಪೆಕ್ಟರ್ ಜನರಲ್‌ಗಳ ನಂಬಿಕೆ ವಿಶ್ವಾಸಗಳಿಗೆ ಪಾತ್ರರೆನಿಸಿದ್ದರು. ಇಂತಾ ಅನುಭವಶಾಲಿಯಾದ ಉದ್ಯೋಗಸ್ಥರ ಸಂಬಂಧ ನಿವೃತ್ತಿಯಿಂದ ಆ ಇಲಾಖೆಯ ಕೆಲಸಗಳ ನಿರ್ವಹಣೆಯ ವಿಷಯದಲ್ಲಿ ಸುಸ್ಥಿತಿಯೂ ಅಭಾಗರಾಶಿಕತೆಯೂ ... ಸ್ವಾಭಾವಿಕವಾಗಿ ರುತ್ತದೆ. ಮೆ॥ ಶೇಷಗಿರಿರಾಯರವರು ಚಿರಕಾಲ ಬಹಳ ಶ್ರದ್ಧೆಯೊಡನೆ ಮಾಡಿದ ನೌಕರಿಯ ಪ್ರತಿಫಲವನ್ನು ಆರೋಗ್ಯದೃಢಗಾತ್ರರಾಗಿ ಅವರುಬಹುಕಾಲ ಅನುಭವಿಸುವಂತೆ ಭಗವದನುಗ್ರಹವಾಗಬೇಕೆಂದು ಕೋರುತ್ತೇವೆ

ಶ್ರೀ ಶಿವಾಭಿನವ ಸಚ್ಚಿದಾನಂದ ಶ್ರೀ ಸುಬ್ರಹ್ಮಣ್ಯ ಭಾರತೀ ಸ್ವಾಮಿಗಳವರು ಶಿಷ್ಯಾನುಗ್ರಹಾರ್ಥ ಈ ಪ್ಯಾಟೆಗೆ ಬಿಜಮಾಡಿ ಇಲ್ಲಿನ ಸರ್ಕಾರಿ ಛತ್ರದಲ್ಲಿ ದಯಮಾಡಿದಾರೆಂದು ಗತವಾರದಲ್ಲಿ ತಿಳಿಸಿದ್ದೆವಷ್ಟೆ. ತದಾರಭ್ಯ ಶ್ರೀಗಳವರಿಗೆ ಪ್ರತಿನಿತ್ಯವೂ ಭಿಕ್ಷೆ ಪಾದಪೂಜೆಗಳೂ, ಶ್ರೀಚಂದ್ರಮೌಳೀಶ್ವರರ ಆರಾಧನವೂ, ವಿಪ್ರಭೋಜನವೂ ಯಥಾಯೋಗ್ಯವಾಗಿ ಜರುಗುತಲಿವೆ. ಶ್ರೀಮಠಕ್ಕೆ ಸೇರಿದ ಶಿಷ್ಯರೆಲ್ಲಾ ಬರುವರು ಪ್ರತಿನಿತ್ಯವು ಸ್ವಾಮಿಗಳ ಸಂದರ್ಶನಕ್ಕಾಗಿ ನಿರವಕಾಶನಾಗಿ ಬರುತಲಿದಾರೆ. ಇದರಿಂದ ಶ್ರೀಗಳವರಿಗೆ ವ್ಯವಧಾನವು ದುರ್ಲಭವಾಗಿರುತ್ತದೆ. ಈ ವಾರವೆಲ್ಲವು ಶ್ರೀಸ್ವಾಮಿಗಳವರು ಈ ಪ್ಯಾಟೆಯಲ್ಲೇ ಬಿಜಮಾಡಿದ್ದು ಮುಂದೆ ... ದಯಮಾಡುವ ಸಂಭವ ಕಂಡುಬರುತಿದೆ. ಶ್ರೀಮನ್ಮಹಾರಾಣೀ ದಿವಾನರವರು ಅಲ್ಲೀ ದಯಮಾಡಿರುವದರಿಂದ ಅವರು ನಿನ್ನೆಯ ದಿನ ಈ ಯತಿವರ್ಯರಿಗೆ ಭಿಕ್ಷೆ ಪಾದಪೂಜೆಗಳಂ ಮಾಡಿಸಿದರೆಂದು ಕೇಳಿ ಸಂತೋಷಿಸುತ್ತೇವೆ. ದಿವಾನರು ಮೊದಲಾದವರ ಪಾದಪೂಜೆಯು ಬಹುಶಃ ನಡೆಯುವದೆಂದು ಕಾಣುತಿದೆ.

ಈಗಲೇ ಸರ್ಕಾರೀ ಸಾರ್ ಉಪಕ್ರಮವಾದುದರಿಂದ ಈ ರಾಜ್ಯಭಾರದಲ್ಲಿ ಅನೇಕ ರಾಜಕೀಯ ಏರ್ಪಾಡುಗಳು ನಡೆಸಲು ಆಲೋಚಿಸಲ್ಪಟ್ಟಿರುವಂತೆಯೂ, ಡೆಪ್ಯುಟಿ ಕಮಿಷನರುಗಳು, ಡಿಸ್ಟ್ರಿಕ್ಟ್ ಜಡ್ಜಿಗಳು, ಅಸಿಸ್ಟೆಂಟ್ ಕಮಿಷನರುಗಳು, ಅಮಲ್ದಾರರುಗಳು ವಗೈರೆ ಕಾರ್ಯಾಧಿಕಾರಿಗಳೂ, ಪೆನ್ಶನ್ ಮೇಲೆ ನಿವೃತ್ತಿಯೂ, ಕೆಲವು ದೊಡ್ಡ ಮಾರ್ಪಾಟುಗಳು, ... ದಲ್ಲಿ ನಡೆಯುವದಾಗಿಯೆಂತಲೂ ಪರಂತು ಅವರವರ ಇಷ್ಟಾನಿಷ್ಟಗಳ ಮೇಲೆ ರಾಜ್ಯಭಾರ ನಡೆಯುತಲಿರುವದರಿಂದ ಡೆಮ್ಮಿ ಆಫಿಷಿಯಲ್ ಕಾಗದಗಳು ಗೂಢವಾಗಿಯೂ ವಿಶೇಷವಾಗಿಯೂ ಸೂಚಿಸಿನುತಲಿರುವುದೆಂತೆಯೂ ಕೇಳುತ್ತೇವೆ. ಈ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಕೆಲಸಕ್ಕೆ ನಿಯಮಿಸಲ್ಪಡಬೇಕಾದವರ ಇಸಂ ಜಮಾವಣೆ ವಿಷಯದಲ್ಲಿ ಪ್ರಮಾದವು ಬಹುಮುಖವಾಗಿ ಅದ್ಯಾಪಿ ನಿಷ್ಕೃಷ್ಟವಿಲ್ಲದೆ ಯಿದ್ದೆ, ಆದರೆ ಮೆ॥ ನರಸಿಂಹಯ್ಯಂಗಾರ್ರವರು ಈ ತಿಂಗಳ ೧೫ನೇ ತಾರೀಖಿನಲ್ಲಿ ತಮ್ಮಕೆಲಸದ ಚಾರ್ಜನ್ನು ಒಪ್ಪಿಸಿ ಮೈಸೂರಿಗೆದಯಮಾಡುವರೆಂದು ಕೇಳುತ್ತೇವೆ. ಕೋಲಾರ ಡೆಪ್ಯುಟಿಕಮಿಷನರ್ ಮೆ॥ ರಂಗಸ್ವಾಮಯ್ಯಂಗಾರ್ರವರು ಇಲ್ಲಿಗೆನಿಯಮಿತರಾಗಿ ಬರುವರೆಂದು ಅರಿತೆವು ಇದರ ನಿಜಸ್ಥಿತಿ ಇನ್ನೂ ಅವ್ಯಕ್ತವಾಗಿದೆ.

ಮೈಸೂರು ಸ್ಟೇಟ್ ರೈಯಿಲ್‌ವೇಯಲ್ಲಿ ಈ ತಿಂಗಳ ಗುರ್‍ರ ತಾರೀಖು ಮೊದಲು ಗಾಡಿಗಳ ಸಂಚಾರ ಕಾಲದಲ್ಲಿ ಇದರಡಿ ತಿಳಿಸುವ ಬದಲಾವಣೆಗಳು ಜಾರಿಯೊಳು ತರಲ್ಪಟ್ಟಿವೆ —

ಮೈಸೂರಿಂದ ಬೆಂಗಳೂರಿಗೆ,

ಹೊರಡುವದು	ಘಂಟೆ	ನಿಮಿಷ	ತಲಪುವದು	ಘಂಟೆ	ನಿಮಿಷ
ಬೆಳಗ್ಗೆ	೭	೩೫	ಮ॥	೧	೫೫
,,	೧೦	೧೫	ಸಾ॥	೭	೧೫
ರಾತ್ರಿ	೯	೪೦	ಬೆ॥	೩	೧೩

ಬೆಂಗಳೂರಿಂದ ಮೈಸೂರಿಗೆ,

ಬೆಳಗ್ಗೆ	೭	೪೦	ಮ॥	೧	೩೩
,,	೧೧	೬೫	ಸಾ॥	೬	೨೯
ರಾತ್ರಿ	೯	೨೫	ಬೆ॥	೩	,,

ಬೆಂಗಳೂರಿ ದಹೊರಡುವದು			ತುಮಕೂರಿಂದ ಬರುವದು		
ರಾತ್ರಿ	೮	೪೦	ಬೆ॥	೬	೩೦
ಬೆಳಗ್ಗೆ	೩	೪೦	ಸಾ॥	೪	೩೦

ಬೆಂಗಳೂರಿಂದ ಹೊರಡುವದು			ಹಿಂದೂಪುರದಿಂದ ಬರುವದು		
ಬೆಳಗ್ಗೆ	೬	೫೦	ಸಾ॥	೭	೫೩
ರಾತ್ರಿ	೯	,,	ಬೆ॥	೬	೫

ಮೈಸೂರು ರಾಜಧಾನಿಯಲ್ಲಿ ಹಿರಿದೇವತೆ ಗುಡಿಯ ಬಳಿಯಲ್ಲಿರುವ ಮೆ॥ ಯಲ್ಲಪ್ಪ ಜೋಯಿಸರ ಮಕ್ಕಳು ಸುಮಾರು ೫೦ ವರುಷದ ವಯಸ್ಸುಳ್ಳ ಸುಬ್ರಾಯ ಜೋಯಿಸರೆಂಬವರು ಈ ಪೂರು ಹಳೇ ಅಗ್ರಹಾರದಲ್ಲಿ ಪೂರ್ಣಯ್ಯನವರ ಸತ್ರದ ಬೀದಿಯಲ್ಲಿರುವ ಮೆ॥ ಕುಪ್ಪಯ್ಯರ ಮಗಳು ಸುಮಾರು ೨೦ ವರುಷ ವಯಸ್ಸುಳ್ಳ ಯೌವನಸ್ಥಳಾದ ... ಸೀತಮ್ಮನೆಂಬವಳನ್ನು ಉತ್ತನಹಳ್ಳಿ ಬೆಟ್ಟದಮೇಲಿರುವ ಅಮ್ಮನವರ ದೇವಸ್ಥಾನದಲ್ಲಿ ಕಳೆದ ಜ್ಯೇಷ್ಠ ಬಹುಳ ತದಿಗೆ ಗುರುವಾರದದಿನ ಪ್ರೀತಿಪೂರ್ವಕವಾಗಿ ಆತ್ಮಾದರದೊಡನೆ ಶಾಸ್ತ್ರ ವಿಧಿಯನ್ನು ಅನುಸರಿಸಿ ವಿವಾಹ ಪಾಣಿಗ್ರಹಣವನ್ನು ಮಾಡಿಕೊಂಡರು. ಈ ವರನಿಗೆ ಒಬ್ಬ ಅಣ್ಣನೂ ಒಬ್ಬ ತಮ್ಮನೂ ಇದಾರೆ. ಅವರ ಪೈಕಿ ಹಿರಿಯಂ ರಾಮಣ್ಣ ಎಂಬವರಿಗೆ ಹಾಸನ ಡಿಸ್ಟ್ರಿಕ್ಟಿನಲ್ಲಿ ನೌಕರಿ ಇದೆ. ಇವರ ತಮ್ಮಂದಿರಾದ ಪುಟ್ಟಣ್ಣ ಎಂಬವರಿಗೆ ಮೆ॥ ... ಸಾಹೇಬ ವರ ಆಫೀಸಿನಲ್ಲಿ ಕೆಲಸವಿದೆ. ಪೂರ್ವದಲ್ಲಿ ಶೃಂಗೇರಿ ಸ್ವಾಮಿಗಳವರು ಮೈಸೂರಿಗೆ ದಯಮಾಡಿಸಿದ್ದಾಗ ವೇಲ್ಲಂಡ ಕುಪ್ಪಂಭಟ್ಟರೆಂಬವರಿಗೆ ಈ ಕನ್ಯೆಗೆ ಏಳು ವರುಷ ವಿವಾಹ ಇರುವದರಿಂದ ... ಮದುವೆ ಮಾಡಬೇಕೆಂಬದಾಗಿ ಅಪ್ಪಣೆ ಕೊಟ್ಟಿದ್ದಾಗ್ಯೂ ಈ ವಧುವಿನ ತಂದೆತಾಯಿಗಳು ಸ್ವಾಮಿಗಳವರ ಅಪ್ಪಣೆಯನ್ನು ಲಕ್ಷ್ಯೀಕರಿಸದೆ ಇಲ್ಲಿಯವರೆಗೂ ... ಲಗ್ನವಾಗದೆ ಸುಮ್ಮನೆ ಇರಿಸಿಕೊಂಡಿದ್ದು ಮೃತರಾದರು. ಈಗ ಆಕನ್ಯೆಯ ಅಣ್ಣಂದಿರಾದ ಶ್ಯಾಮಣ್ಣ ಉರಫ್ ಬಾಪೂ ಎಂಬುವರು ಮೇಲ್ಕಂಡ ಕನ್ಯೆಗೆ ಯುಗಧರ್ಮಾನುಸಾರವಾಗಿ ಸಂತೋಷದಿಂದ ವಿವಾಹದ ಮಹೋತ್ಸವವನ್ನು ನೆರವೇರಿಸಿದರು —ವೃ ಪ

ನಮಗೂ, ನಮ್ಮವರಿಗೂ, ನಮ್ಮ ದೇಶದವರಿಗೂ ಗುರುಹಿರಿಯರಿಗೂ ಸಹ ಜರ್ಮನ್ ದೇಶದ ... ಸಂಪರ್ಕವು ಉಂಟಾಗಿರಲಿಲ್ಲ. ಈಗ ಅದಕ್ಕೆ ಚೆನ್ನಾಗಿ ಆಕರವಾಗಿದೆ. ಮತ್ತು ನಮಗೀಗ ವಿಚಿತ್ರವಾದ ವಿದ್ಯಾವ್ಯಾಸಂಗವು ನಡೆಯುತಲಿರುವದರಿಂದ ಬರೆಯುವ ಸಮಯದಲ್ಲಿ ಕಾಗದದ ಮೇಲೆ ಅಕ್ಷರಗಳು ಚೆನ್ನಾಗಿ ಹತ್ತಿರದೆ ತಂಟೆ ... ಸೀಸದ ಕಡ್ಡಿಗಳನ್ನು ತಮ್ಮ ... ಸಂಸ್ಕರಿಸುವದರಿಂದ ಅವುಗಳಿಗೆ ಜಲಸಂಪರ್ಕವಿಲ್ಲದೆ ತಯಾರಿಸುವ ಸರಿಯಾದ ಸೌಕರ್ಯವನ್ನು ಹೊಂದಿ ಆವೇಳೆ ಆದೀ ನಮ್ಮ ... ಒಂದು ಅವರ ಅಜ್ಞಾನುಸಾರವಾಗಿ ನಮ್ಮ ... ಸಂಸ್ಕಾರವನ್ನು ಹೊಂದ ಬರೆಯುವ ವರ್ಣಗಳನ್ನು ಸ್ಪುಟಗೊಳಿಸತಕ್ಕ ಉಪಕರಿಸುತಲಿವೆ ... ಒಗೆ ... ವಿಶೇಷವಾಗಿ ಉಂಟಾಗುವದಕ್ಕೆ ಆಕರವಾಗಿದೆ. ... ಉಪಾಧ್ಯಾಯರುಗಳು ಕೆಲವರು ... ಅವರುಗಳ ಸ್ಪರ್ಶವು ನಮಗಳಿಗುಂಟಾಗುವದಿಲ್ಲ. ಈ ... ಬೇರೆ ಮಾರ್ಗಗಳಿಂದ ... ಮತ್ತೂ ಅನುಕೂಲ್ಯವುಂಟಾಗಿದೆ ... ನಮ್ಮ ದೇಹಭಾವ ... ಕೇವಲ ಬಂಟ್ವವಸ್ಥೆಯುಳ್ಳದು ... ದರಿಂದ ನಮ್ಮ ... ಅಕಾರವಾದ ಸೌಕರ್ಯವೂ ನಮ್ಮ ತೋರುವದು ... ಆದಿತ್ಯವಾರದ ... ನಮಗೆ ದೊರೆಯುತವೆಂತೋ ಪ್ಯಾಗೋ ... ಆಗಲಿ ... ನಮ್ಮ ... ಎಂದು ಅನೇಕರು ಹೇಳುತ್ತಾರೆ ... ಇದರ ನಿಜವನ್ನು ... ನಮ್ಮ ... ವನ್ನು ಪ್ರಕಟಿಸುವೆವು. —ವೃ ಪ

ಜ್ಯುಬಿಲಿ ವೃತ್ತಾಂತ.

ತಾ|| ೨೨ನೇ ಜೂನ್ ೧೮೯೭.

It is now clear and admitted on all hands that the Government of Lord Sandhurst has "climbed down" in the matter of the punitive police imposed on the city of Poona But, it will be remembered, that in these columns was noted the first symptom of this descending process on the part of that Government It was when Mr. Lamb replied to the Deccan Sabha Mr Lamb who at the Durbar had not half a word to throw at the astounded and humiliated C I E s, Sirdars and the rest of them ranged round him on that remarkable occasion, rambled in his reply to the Sabha into explanations, and we know at once that the man was paving the way for the Government to go back The climbing down is now complete or very near being so We pointed out the other day that the levying of the punitive police was illegal and Lord Sandhurst s Government seems to have found it to be so rather late

"The Government of Lord Elgin, we are very much gratified to see," says the *Amrita Bazar Patrika*, "has at last been moved to interfere with and take the Poona matter out of the hands of the Bombay Government It has deputed Sir John Woodburn to that city If the Imperial Government had taken this step earlier, we dare say, the Bombay Government would have been saved from the disagreeable situation in which it now finds itself placed. We do not mean to pass any reflections upon the Government of Bombay, when we say that it is not the properest party to take a clear and dispassionate view of the affair The deputation of such an able and high-minded statesman as Sir John Woodburn will, we hope, lead to excellent results" This is what we (Hindu) have been asking for all along But as a fact his deputation has resulted, as a first step in the arrest of Mr. Tilak

A "Bombay Government Gazette" (extraordinary) issued on Saturday publishes the following notification by the Judicial Department —

BOMBAY CASTLE, 24th July 1897

RUPEES 20 000 REWARD AND A FREE PARDON

No 5100 —Whereas a Proclamation was issued on 25th June, 1897, by the District Magistrate of Poona offering a reward of Rs 20,000 for information leading to the detection of the perpetrators and instigators of the murder of Lieutenant C. L Ayerst and of the murderous assault on Mr W C Rand, I C S, and whereas Mr Rand has subsequently died of the injuries received by him, further notice is hereby given, by order of His Excellency the Governor-in Council, that a Free Pardon is offered to any person directly or indirectly concerned in, or privy to, either of the abovementioned murders, not being an actual perpetrator or an instigator thereof, on condition of making such full and true disclosure of the whole of the circumstances within his knowledge relative to the said murders, and also to every other person concerned, whether as principal or abettor, in the commission thereof as will enable the authorities to obtain the conviction of such person, provided, however, that no part of the aforesaid reward shall be claimable by any Police officer

By order of His Excellency the Right Honourable the Governor in Council

Local and Provincial

THE RACES —Commence on Thursday next, the 5th instant, when there is expected to be good sport.

THE LATE COLONEL MACINTIRE —It is in contemplation to put up a monument to the memory of this gentleman, in St Bartholomew's Church, Mysore, and subscriptions to that end are now being called for.

THE HORTICULTURAL SHOW —Comes off to morrow in the Lal Bagh For some time it was doubtful whether there would be one this year, as the rains held off But the showers we have had lately have improved matters, and so the show will be held as usual

MEMBERS FOR THE ASSEMBLY —At the last meeting of the Municipal Commissioners City, the following gentlemen were elected to represent the Board at the Representative Assembly in October next —Messrs D Venkatramaiya, Gangu l, Krishna Murti and Somasundra Moodaliar

REPORT OF THE CITY EYE INFIRMARY —Dr Ramaswami Iyengar, M B C M, L R C P, F S L, &c, &c Assistant Surgeon, in charge of the City Eye Infirmary, submitted the annual report of the institution to the Government of Mysore, through the Senior Surgeon and Sanitary Commissioner to the Government of Mysore, a few days ago The Durbar we learn, is quite satisfied with the report, inasmuch as the popularity of the institution has been on the increase day by day —D. P

The Mysore Gazette.

Bangalore, Thursday, 29th July 1897

NOTIFICATIONS BY THE GOVERNMENT OF MYSORE

GENERAL AND REVENUE

No 1538—*J* 161, *dated, 27th July* 1897

Under Section 12 of the Code of Criminal Procedure, Mr P F Bowring, Assistant Commissioner and 2nd Class Magistrate, Hassan district, is appointed a Magistrate of the 1st Class, and under Section 357 he is directed to take down the evidence of witnesses in cases tried by him with his own hand in the English language

No 1545—J 165, *dated 27th July* 97

Under Section 12 of the Code of Criminal Procedure, Mr K Srinivasa Row, Assistant Commissioner, Bangalore district, is appointed a Magistrate of the 1st Class

No. 870—*R P* 109 96, *dated, 20th July* 1897,

Under Article 173, of the Mysore Service Regulations, T Chokkanna, Amildar of the Bowringpet taluk, Kolar district is granted casual leave for fifteen days, with effect from the 12th instant

2 Surnaramappa, Taluk Sheristadar, will be in charge of the taluk with the powers of a Magistrate of the 3rd Class during the absence of T Chokkanna on leave or until further orders

No 1010—*R* 337, *dated 23rd July* 1897

B Shama Rao, Police Inspector, Tiptur, is as a temporary measure and pending other arrangements, appointed to act as Amildar and 3rd Class Magistrate of the Tiptur taluk, *vice* D. Sitaramaiya, deceased

PUBLIC WORKS

Notification No 495—3288, *dated 21st July* 97

Assistant Engineer Mr J Bhore, attached to the Kadur Division, is granted privilege leave absence for thirty days from date of departure

Notification No 503—3363, *dated 23rd July* 97

Mr. R. T. Scaldwell, Superintending Engineer, is posted to the charge of the Kora Hill Works at Ootacamund, with effect from 13th July 1897

NOTICE

ಕಳೆದ ತಿಂಗಳ ೨೩ನೇ ತಾರೀಖಿನಲ್ಲಿ ನಮ್ಮ ಚಂದಾದಾರರನೇಕರಿಗೆ ತಪಾಲ್ ಮೂಲಕ ನಾವು ತಿಳಿಸಿದ ಪ್ರಾರ್ಥನೆಗೆ ಇಬ್ಬರು ಮೂವರು ವಿನಾ ಮಿಕ್ಕವರೆಲ್ಲರು ಇದುವರೆಗೆ ಅವಧಾನ ಕೊಡದೆ ಇರುವದಂ ಆಲೋಚಿಸಿ ನಮಗುಂಟಾದ ಆಶ್ಚರ್ಯಕ್ಕೆ ಪಾರವೇ ಇಲ್ಲವಾಯಿತು. ಇಂತ ಔದಾಸೀನ್ಯವು ಉಚಿತವಾಗಿ ಕಾಣಾರದೆಂದು ನಮ್ರತೆಯಿಂದ ತಮ್ಮ ಪರಿ ಸೂಚಿಸುತ್ತೇವೆ

ಪ್ರೊಪ್ರೈಟರ್

ಕರ್ನಾಟಕ ಪ್ರಕಾಶಿಕಾ.

೧೮೯೭ನೇ ಇಸವಿ ಆಗಸ್ಟ್ ತಾ|| ೨ನೇ ಸೋಮವಾರ

ಆನರೆಬಲ್ ತಿಲಕ್ ಯವರ ದಸ್ತಗಿರಿ.

ಮುಂಬೈ ಗವರ್ನರು ರವರ ನ್ಯಾಯವಿಧಾಯಕ ಸಭೆಯಲ್ಲಿ ಒಬ್ಬ ಮೆಂಬರಾಗಿಯೂ, ಪುನೆಯಲ್ಲಿ ಪ್ರಕಟಿಸಲ್ಪಡುವ ಮರಾಟಾ ಎಂಬ ಇಂಗ್ಲಿಷ್ ಮತ್ತು ಕೇಸರಿ ಎಂಬ ಮರಾಟಾ ಪತ್ರಿಕೆಗಳ ಎಡಿಟರಾಗಿಯೂ ಇರುವ ಆನರೆಬಲ್ ಬಾಲಗಂಗಾಧರ ತಿಳಕ್‌ಎಂಬವರು ಮುಂಬೈ ಗವರ್ನಮೆಂಟಿನ ಹುಕುಮಿನ ಮೇರೆ ಕಳೆದ ಮಂಗಳವಾರದ ದಿನ ರಾತ್ರಿ ೧೧ ಘಂಟೆಗೆ ಇಂಡಿಯನ್ ಪಿನಲ್ ಕೋಡ್ ೧೨೪ ನೆಂ A ಸೆಕ್ಷನ್ ಅನುಸರಿಸಿ ಮುಂಬೈಯಲ್ಲಿ ಅಲ್ಲಿನ ಪೋಲೀಸಿನವರಿಂದ ದಸ್ತಗಿರಿ ಮಾಡಲ್ಪಟ್ಟರೆಂಬದಾಗಿ ಬಂದ ತಂತಿ ವೃತ್ತಾಂತವು ಸಾಮಾನ್ಯವಾಗಿ ಯೆಲ್ಲರಿಗೂ ಆಶ್ಚರ್ಯವನ್ನುಂಟುಮಾಡುತಲಿದೆ. ಈ ದೊಡ್ಡ ಮನುಷ್ಯರನ್ನು ದಸ್ತಗಿರಿ ಮಾಡಿಸುವದರಲ್ಲಿ ಮುಂಬೈ ಗವರ್ನಮೆಂಟಿಗೆ ಉಂಟಾದ ಉದ್ದೇಶವು ಫಲ ನವೇದು ಸ್ಪಷ್ಟವಾಗದೆ ಹೋದಾಗ್ಯೂ ಪುನೆಯ ನೇಟಿವ್ ವೃತ್ತಾಂತ ಪತ್ರಿಕೆಗಳಲ್ಲಿನ ಮನಸ್ಸಿ ಲೇಖನಗಳಿಂದ ಪ್ರೇರಿತರಾಗಿ ಅಲ್ಲಿನ ಜನರು ಮಹಾರಾಣಿಯವರ ಜುಬಿಲೀ ಮಹೋತ್ಸವದ ದಿನ ರಾತ್ರಿ ಮಿ ರಾಂಡ್ ಮತ್ತು ಲೆಫ್ಟಿನೆಂಟ್ ಐರೆಸ್ಟ್ ಎಂಬವರನ್ನು ಗೋಲಿಯಿಂದ ಹೊಡೆದು ಖೂನ್ ಮಾಡಿಸಿರಬಹುದೆಂದು ಗವರ್ನಮೆಂಟಿಗೆ ಉಂಟಾಗಿದ್ದ ಸಂಶಯವು ಇದಕ್ಕೆ ಬಹಳ ಮಟ್ಟಿಗೆ ಮೇಲಿನ ಹೇತು ಕೊಟ್ಟಿರುವಂತೆ ಕಾಣುತಿದೆ ಇದಕ್ಕೆ ತಕ್ಕಂತೆ ಮಿ|| ತಿಲಕ್ ಯವರು ಬಹಳ ವೃತ್ತಾಂತ ಪತ್ರಿಕಾ ಲೇಖಕರಲ್ಲಿ ಪ್ರಮುಖರಾಗಿರುವದರಿಂದ ಕಲಹಪ್ರೇರಕಗಳಾದ ಇವರ ಲೇಖನಗಳಿಂದ ಅಲ್ಲಿನ ಪ್ರಜೆಗಳು ಲೇಖ ಮೇಲಿನ ದುಷ್ಕೃತ್ಯಕ್ಕೆ ಹಾಕಿಸಿರಬಹುದೆಂದು ಸಹ ಊಹಿಸಿರುವಂತೆ ಕಾಣುತಿದೆ. ಇದಕ್ಕೆ ಪ್ರೋತ್ಸಹಕವಾಗಿ ಗವರ್ನಮೆಂಟಿಗೆ ಏನು ರುಜುವಾತು ಕಂಡುಬಂದಿದೆಯೊ ತಿಳಿಯಲಿಲ್ಲವು ಪ್ಲೇಗ್ ರೋಗಪೀಡಿತರಾದವರ ವಿಷಯದಲ್ಲಿ ಅದರ ನಿವಾರಣೆಯ ಬಗ್ಗೆ ಯೋಜನೆಗಾಗಿದ್ದ ಕಮಿಟಿಗೆ ಸೇರಿದ ಆಫಿಸರ್‌ಗಳು ಕೆಲವರು ನಡೆಸಿದ ದುಷ್ಕೃತ್ಯಗಳಬಗ್ಗೆ ಹಗೆ ತೀರಿಸಿಕೊಳ್ಳಬೇಕೆಂಬ ದುರಾಲೋಚನೆಯಿಂದ ಯಾರೊ ಒಬ್ಬರಿಬ್ಬರು ದುರಾತ್ಮರು ನಡೆಸಿದ ದುಷ್ಕಾರ್ಯವಲ್ಲದೆ ಅನ್ಯಥಾ ನಡೆದಿರುವದೆಂಬದಕ್ಕೆ ಸುತರಾಂ ರುಜುವಾತು ಇಲ್ಲವೆಂಬುವುದು ಸಾಮಾನ್ಯವಾಗಿ ಯೆಲ್ಲರ ಅಭಿಪ್ರಾಯವಾಗಿರುತಿದೆ ಇದರ ಸತ್ಯಾಸತ್ಯ ವಿಷಯದಲ್ಲಿ ಗವರ್ನಮೆಂಟಿನವರು ಅಂತರಂಗದಲ್ಲಿ ನಡೆಸುತಲಿರುವ ವಿಚಾರಣೆಯು ಇನ್ನು ಪೂರ್ತಿಯನ್ನೈದಲಿಲ್ಲವು ಪರಂತು ತಮ್ಮ ಊಹೆಯು ನಿಜವಾಗಿರಬೇಕೆಂದು ಆರೋಪಿಸಿಕೊಂಡು ಪ್ರಬಲ ಕಾರ್ಯಗಳಿಗೆ ಪ್ರಾರಂಭಿಸಿರುತ್ತಾರೆ ಮಿ|| ತಿಲಕ್ ಯವರು ದಸ್ತಗಿರಿಯಿಂದ ಮ್ಯಾಜಿಸ್ಟ್ರೇಟರ ಮುಂದೆ ಹಾಜರ್ಮಾಡಲ್ಪಟ್ಟ ಕಾಲದಲ್ಲಿ ಜಾಮೀನ್ ಕೊಡುವದಾಗಿ ಹೇಳಿದರೂ ಅದಕ್ಕೆ ಮ್ಯಾಜಿಸ್ಟ್ರೇಟರು ಒಪ್ಪದೆ ಹೋದರು. ಈಗಿನ ವಿದ್ಯಮಾನವಂ ಕುರಿತು ಆಲೋಚಿಸಲಾಗಿ ಈ ಮೊಕದ್ದಮೆಯು ಹೀಗೆಯೇ ಪರ್ಯವಸಾನವಂ ಹೊಂದುವದೆಂದು ಹೇಳುವದಕ್ಕೆ ಸಾಧ್ಯವಲ್ಲವು ಈ ಮೊಕದ್ದಮೆಯು ದರ್ಯಾಪ್ತಿಯಬಗ್ಗೆ ಸರ್ ಜಾನ್ ವುಡ್‌ಬರ್ನ್ ಎಂಬ ಒಬ್ಬ ದೊಡ್ಡ ಆಫಿಸರು ಇಂಡ್ಯ ಗವರ್ನಮೆಂಟಿನವರಿಂದ ನಿಯಮಿತರಾಗಿ ಪುನೆಗೆ ಕಳುಹಿಸಲ್ಪಟ್ಟಿರುವಂತೆ ತಿಳಿಯಬರುತಿದೆ. ಇದರೊಳಗೆ ಮುಂಬೈ ಗವರ್ನಮೆಂಟಿನವರು ಸ್ವಾತಂತ್ರ್ಯವಂವಹಿಸಿ ಮಿ|| ತಿಲಕ್ ಯವರನ್ನು ದಸ್ತಗಿರಿ ಮಾಡಿಸಿರುತ್ತಾರೆ. ಸರ್ ಜಾನ್ ವುಡ್‌ಬರ್ನ್ ಯವರು ಬಂದಮೇಲೆ ಯಾತಕ್ರಮವನ್ನವಲಂಬಿಸುವರೊ ಮುಂದೆ ತಿಳಿಯಬರಬೇಕಾಗಿದೆ.

ಇದು ಹೀಗಿರುವಲ್ಲಿ ಕಳೆದ ತಿಂಗಳ ೨೮ನೇ ತಾರೀಖಿನ ಬೆಳಗ್ಗೆ ಪುನೇಯ ಒಂದು ದೊಡ್ಡ ಘರಾಣೆಗೆ ಸೇರಿದ ಶ್ರೀಮಂತ್ ಬಾಲಾಸಾಹೆಬರೂ ಮತ್ತು ತಾತ್ಯಾಸಾಹೆಬ್ ನಾಟು ಎಂಬವರೂ ದಸ್ತಗಿರಿ ಮಾಡಲ್ಪಟ್ಟು ವಿಲಿಟರಿ ಪಹರೆಯೊಡನೆ ಬಲ ಸ ಹೆಬರವರು ಅಹಮದಾಬಾದಿಗೆ ಒಯ್ಯಲ್ಪಟ್ಟರು. ಅವರ ಮನೆಯ ಸುತ್ತಲು ದಾಹರೆ ಇಟ್ಟಿರುತ್ತಾ ಮಾತುವಲ್ಲಿ ಅವರೇ ಇಳು ಸಿಕ್ಕಿದ ಕೆಲವು ಕ್ರೂರ್ಸ್ವರೂಪದ ಆಯುಧಗಳನ್ನು ಜಪ್ತಿ ಮಾಡಿ ತೆಗದುಕೊಂಡು ಹೋದದ್ದು ಮಾತ್ರವಲ್ಲದೆ ಅವರ ಮನೆ, ಅದರೊಳಗಿದ್ದ ವಿಶಿಷ್ಟ ಪದಾರ್ಥಗಳು, ಜಾಸ್ತಿ ಮೊದಲಾದವುಗಳು ಗವರ್ನಮೆಂಟಿನಿಂದ ಜಪ್ತಿ ಮಾಡಲ್ಪಟ್ಟವು. ಮಿ|| ತಿಲಕ್ ಯವರು ತಮ್ಮ ಪತ್ರಿಕೆಗಳು ಬರೆಯುತಲಿದ್ದ ಅತ್ಯಭಿಮಾನ ಭರಿತ ಹಾನಿಯ ಕಾಗದಪತ್ರಗಳೆಲ್ಲವಂ ಝಡ್ತಿ ಮಾಡಿ ನೋಡುತಲಿದಾರೆ ಅದರ ಮ್ಯಾನೇಜರಾದ ಕೇಶವ ಮಹಾದೇವ ಬಾಲ್ ಯೆಂಬುವರು ಸಹ ದಸ್ತಗಿರಿ ಮಾಡಲ್ಪಟ್ಟರು ಪುನೆ ವೈಭವ ಎಂಬ ದೇಶಭಾಷಾ ಪತ್ರಿಕೆಯ ಎಡಿಟರಾದ ಶಂಕರ ವಿಶ್ವನಾಥ್ ಎಂಬವರು ಪುನೇಯಿಂದ ಮುಂಬೈಗೆ ಹೋಗುವ ಮಾರ್ಗದಲ್ಲಿ ದಸ್ತಗಿರಿ ಮಾಡಲ್ಪಟ್ಟರು, ಎಂಬದಾಗಿ ಕಳೆದ ತಿಂಗಳ ೨೯ನೇ ತಾರೀಖಿನಲ್ಲಿ ತಂತಿವೃತ್ತಾಂತ ಬಂದಿರುತಿದೆ

ಪುನೆ ಬಾಜೀರಾವ್ ಪೇಷ್ವೆಯ ದರಿಗೂ ಬ್ರಿಟಿಷ್ ಗವರ್ನಮೆಂಟಿಗೂ ಕಲಹ ಪ್ರಾರಂಭದ ಕಾಲದಲ್ಲಿ ಈಗ ದಸ್ತಗಿರಿ ಮಾಡಲ್ಪಟ್ಟಿರುವ ಬಾಲಾಸಾಹೆಬರವರ ಪೂರ್ವಿಕರು ಬ್ರಿಟಿಷ್ ಗವರ್ನಮೆಂಟಿಗೆ ಮಾಡಿದ ಸಹಾಯದ ಅವರ ವಂಶದವರಿಗೆ ಅವರು ಕೊಟ್ಟ ಸನ್ಮಾನದ ಇನಾಮುಗಳ ಮೂಲಕ ಇವರು ಇದುವರೆಗೆ ಶ್ರೀಮಂತರಾಗಿ ಎಲ್ಲಾ ವಿಷಯದಲ್ಲೂ ಪುನೆ ಪ್ರಜೆಗಳ ಗೌರವ ಪುರಸ್ಕಾರಗಳಿಗೆ ಪಾತ್ರರಾಗಿರುತಲಿದ್ದರು. ಸಾಮಾನ್ಯಪರೀಕ್ಷೆಯ ದೆಸೆಯಿಂದ ಈ ಕುಟುಂಬಕ್ಕೆ ಈಗ ಉಂಟಾದ ದುಸ್ಥಿತಿಯ ಬಗ್ಗೆ ಯೆಷ್ಟು ದುಃಖಪಟ್ಟರೂ ಸಾಲದಾಗಿರುವುದು ಈ ಪಿತೂರಿಗೆ ಸೇರಿದವರೆಂಬ ಊಹೆಯಮೇಲೆ ಇವರನ್ನು ಅನೇಕರು ದಸ್ತಗಿರಿ ಮಾಡಲ್ಪಡಬಹುದು ಭಯವು ಪ್ರಬಲವಾಗಿರುವದರಿಂದ ಯಾರ್ಯಾರಿಗೆ ಏನೇನು ಸಂಕಟಗಳು ಪ್ರಾಪ್ತವಾಗುವುದೊ ತಿಳಿಯದು ಆನರೆಬಲ್ ಮಿ|| ತಿಲಕ್‌ಯವರ ವಿಚಾರಣೆಯು ಕಳೆದ ಶುಕ್ರವಾರದ ದಿನ ಪ್ರಾರಂಭವಾಗಿ ಶನಿವಾರಕ್ಕೆ ಮುಲ್ತವಿ ಆಗಿದೆ ಪುನೆ ಪ್ರಜೆಗಳಿಗೆ ಪೂರ್ವದ ಶಾಂತಿ ಪ್ರಾರಂಭ ... ಮಾದಿವಲ ಪ್ರಸ್ತಾಪದ ಕಷ್ಟನಷ್ಟಗಳಿಗಿಂತಲೂ ಈಗ ಅವಿಚಾರವಾಗಿ ಗವರ್ನಮೆಂಟಿನವರಿಂದುಂಟುಮಾಡಲ್ಪಟ್ಟಿರುವ ಸಂಕಟಗಳು ಅಪರಿಹಾರ್ಯವಾಗಿ ಕುದಿರಿರುವಂತೆ ಕಾಣುತಿವೆ. ನಾಗರಿಕ ಗವರ್ನಮೆಂಟಿನಲ್ಲಿ ಅಪರಾಧಿಗಳೆಂದು ಕಂಡ ಬರುವಂತವರನ್ನು ದಸ್ತಗಿರಿಯಿಂದ ದಸ್ಯಾಪ್ತಿಗೆ ಒಳಪಡಿಸಿ ಅವರಮೇಲೆ ತಪ್ಪುಗಳು ಸ್ಪಷ್ಟತರವಾಗಿ ರುಜುವಾತ್ ಆಗುವ ಸಂಭವವಿಲ್ಲದೆ ಅವರನ್ನು ದಂಡಿಸುವುದು ನ್ಯಾಯ್ಯವಾಗಿಯೂ ವಾಡಿಕೆಯಾಗಿಯೂ ಇರುತಿದೆ ಈಗ ಮುಂಬೈ ಗವರ್ನಮೆಂಟಿನವರು ಅವಲಂಬಿಸಿರುವ ಮಾರ್ಗವಂ ಕುರಿತು ಯೋಚಿಸಿದರೆ, ಅದು ನಾಗರಿಕ ಸಂಸ್ಕಾರದ ವ್ಯವಹಾರವೆಂತಲಾಗಲಿ ನ್ಯಾಯಸಮ್ಮತವಾದುದೆಂತಲಾಗಲಿ ಹೇಳುವದಕ್ಕೆ ಸಾಧ್ಯವಲ್ಲದೆ ಇದೆ

Occasional Notes.

ನೈಮಿತ್ತಿಕವಿಷಯನ್ಯಾಸ.

ಬರೋಡೆ ಮಹಾರಾಜರವರ ಮಾತುಶ್ರೀಯವರಾದ ಘನವಂತರಾದ ಜಮುನಾಬಾಯಿ ಸಾಹೆಬಾವರಿಗೆ ಈಚೆಗೆ ಶರೀರಾಲಸ್ಯವುಂಟಾಗಿತ್ತು. ಈಗ ಬಹಳಮಟ್ಟಿಗೆ ಆರೋಗ್ಯವುಂಟಾಗಿರುವಂತೆ ತಿಳಿದು ಸಂತೋಷಿಸುತ್ತೇವೆ

ಬಂಗಾಳೇ ದೇಶದೊಳು ಬೀಜ ಧಾನ್ಯಗಳಂ ಖರೀದೀ ಮಾಡುವದಕ್ಕಾಗಿಯೇ ಬರ್ಜಿನಬಗ್ಗೆ ಜಮೀನ್ ಆಬಾದ ವಿಷಯದಲ್ಲಿ ಹುಟ್ಟಿರುವ ಕಾನೂನ್ ಅನುಸರಿಸಿ ೧೭,೫೫,೦೦೦ ರೂಪಾಯಿಗಳು ಮುಂಜೂರ್ಮಾಡಿರುತ್ತಾರೆ.

ಪ್ಲೇಗ್ ಎಂಬ ಮಹಾಮಾರಿ ರೋಗವು ಮುಂಬೈಯಲ್ಲಿ ಇನ್ನು ಪೂರ್ಣವಾಗಿ ನಿವೃತ್ತಿಯಾದಂತೆ ತೋರಲಿಲ್ಲವು. ಕಳೆದ ತಿಂಗಳ ೧೯ನೇ ತಾರೀಖ್ ಮೊದಲು ೨೫ನೇ ತಾರೀಖ್ ವರೆಗೆ ೩೬೭ ಜನರು ಮಂದಿಗೆ ತಗಲಿ ಅವರಲ್ಲಿ ೨೮೩ ಮಂದಿ ಮೃತಪಟ್ಟರೆಂದು ತಿಳಿಯಬರುತಿದೆ.

ಕರಾಚಿ ಪ್ರಾಂತದಲ್ಲಿ ಈಚೆಗೆ ಒಳ್ಳೆಯ ವರ್ಷ ಬಿದ್ದು ಪ್ರವಾಹಗಳು ಹರಿದದ್ದು ಮೊದಲು ಅಲ್ಲಿ ವ್ಯಾಪಿಸಿದ್ದ ಮಹಾ ಮಾರೀರೋಗವು ಪ್ರಶಾಂತವಾಗುತ ಬಂದುದರಿಂದ ಸದರಿ ರೋಗ ನಿವಾರಣೆಯಬಗ್ಗೆ ಅಲ್ಲಿ ಮಾಡಲ್ಪಟ್ಟಿದ್ದ ಕಾರ್ಯಗಳೆಲ್ಲವು ಪ್ರಾಯಶಃ ನಿಲ್ಲಿಸಲ್ಪಟ್ಟವೆಂದು ಕೇಳುವದಕ್ಕೆ ಬಹಳ ಸಂತೋಷಪಡುತ್ತೇವೆ.

ಆಸ್ಸಾಂ ದೇಶದಲ್ಲಿ ಪ್ರಾಪ್ತವಾದ ಭೂಕಂಪದ ಮೂಲಕ ಅಲ್ಲಿನ ಆನೆಬೋಂಗಡಿಯ ಕ್ಷಿಪ್ತ ಆನೆಗಳೆಲ್ಲವು ಬಹಳ ದಿಗಿಲು ಹೊಂದಿ ಓಡಿದುದು ಮಾತ್ರವಲ್ಲದೆ ಕಾದಿನಲ್ಲಿ ಹಿಡಿಯಲ್ಪಟ್ಟ ಆನೆಗಳು ಕಟ್ಟಿದ್ದವು ತಪ್ಪಿಸಿಕೊಂಡು ಹೋದ ಆನೆಗಳು ಓಡಿಹೋದವು ಇದುವರೆಗೆ ಸಿಕ್ಕಲಿಲ್ಲವು. ಇದರಿಂದ ಗವರ್ನಮೆಂಟಿಗೆ ಐವತ್ತು ಸಾವಿರ ರೂಪಾಯಿಗಳ ಮೇಲ್ಪಟ್ಟು ನಷ್ಟವಾಯಿತೆಂದು ತಿಳಿಯಬರುತದೆ.

ಇಂಡ್ಯಾ ಗವರ್ನಮೆಂಟಿನವರು ರಾಜಕೀಯ ಕಾರ್ಯಗಳಬಗ್ಗೆ ಸಾಲ ಮಾಡಬೇಕೆಂದು ಮೂರು ಕೋಟಿ ರೂಪಾಯಿಗಳ ಬದಲಾಗಿ ನಾಲ್ಕು ಕೋಟಿ ರೂಪಾಯಿಗಳು ಸಾಲ ತೆಗೆಯಬೇಕೆಂದು ಈಗ್ಗೆ ಕೆಲವು ದಿನಗಳ ಹಿಂದೆ ಗವರ್ನ್ಮೆಂಟ್ ಗೆಜೆಟ್ಟಿನಲ್ಲಿ ಪ್ರಕಟಿಸಿದ್ದರಷ್ಟೆ. ಈ ವಿಷಯದ ಬಗ್ಗೆ ವಿಶೇಷವಾಗಿ ಸಾಲಕೊಡುವವರು ಬಹಳವಾಗಿ ಅಪೇಕ್ಷಿಸಿದ್ದರಿಂದ ಗವರ್ನಮೆಂಟಿನವರು ಸಾಲದ ಮೊಬಲಗನ್ನು ಹೆಚ್ಚಿಸಿಕೊಳ್ಳಬೇಕೆಂದು ಬಹಳ ಮಂದಿ ಧನಿಕರು ಅಪೇಕ್ಷಿಸಿರುವ ಮೇರೆಗೆ ಮಾಡಿರುತ್ತಾರೆ.

ಈಗ್ಗೆ ಮೂರು ತಿಂಗಳ ಹಿಂದೆ ಕಲ್ಕತ್ತೆಯೊಳು ಒಂದು ಮಸೀದಿ ಮೊಕದ್ದಮೆಯು ಜಾರೀ ಕಾಲದಲ್ಲಿ ಅನೇಕ ಸಂಖ್ಯೆಯ ಮಹಮ್ಮದೀಯರು ದೊಂಬಿಯೇರಿ ನಡೆಸಿದ ಪ್ರಾಣಹಾನಿಕರಗಳಾದ ದುಷ್ಕೃತ್ಯಗಳಂ ಹಿಂದಿನ ಪತ್ರಿಕೆಗಳ ಮೂಲಕ ತಿಳಿಸಿರುವೆವಷ್ಟೆ. ಸದರಿ ಕಲಹಕ್ಕೆ ಸೇರಿದವರಲ್ಲಿ ಕೆಲವರು ದಸ್ತಗಿರಿಯಾಗಿ ಅಲಿಪುರದ ಮ್ಯಾಜಿಸ್ಟ್ರೇಟರ ಮುಂದೆ ದರ್ಯಾಪ್ತು ನಡೆಯುತಲಿದೆ. ಅವರ ತರಫ ಮೊಕದ್ದಮೆಯನ್ನು ನಡೆಸುವದಕ್ಕಾಗಿ ಮೂರು ಬ್ಯಾರಿಸ್ಟರ್‌ಗಳನ್ನು ಆ ಬಗ್ಗೆ ಮಹಮ್ಮದೀಯ ಜನರು ನೇಮಕ ಮಾಡಿರುತ್ತಾರೆಂದು ತಿಳಿಯಬರುತದೆ.

ಕಳೆದ ತಿಂಗಳ ೨೮ನೇ ತಾರೀಖಿನಲ್ಲಿ ಮುಂಬೈ ಇಂದುಪ್ರಕಾಶ ಪತ್ರಿಕೆಯ ಎಡಿಟರಾದ ಮಿ॥ ಚಂದಾವರ್ಕರವರು ಒಂದು ಅಪೀಲ್ ಮೊಕದ್ದಮೆಯನ್ನು ನಡೆಸುವದಕ್ಕಾಗಿ ಬರೋಡೆಗೆ ಹೋಗಿದ್ದ ಕಾಲದೊಳು ಅಲ್ಲಿನ ಲಕ್ಷ್ಮೀವಿಲಾಸ ಅರಮನೆಯಲ್ಲಿ ಹಿಂದೂ ಸಮಯಾಚಾರ ಪರಿಷ್ಕರಣ ವಿಷಯವಂ ಕುರಿತು ಒಂದು ಉಪನ್ಯಾಸವನ್ನಾಡಿದರು. ಇದಕ್ಕೆ ಗಾಯಕವಾಡ ಮಹಾರಾಜರವರು ಸಹ ದಯಮಾಡಿದ್ದರು. ಅಲ್ಲಿನ ದಿವಾನ್ ಮಿ॥ ಶ್ರೀನಿವಾಸ ರಾಘವಯ್ಯಂಗಾರ್ಯರವರು ಸಮಾಜಾಚಾರ ಪರಿಷ್ಕರಣ ಪ್ರವರ್ತಕರ ಗೋಷ್ಠಿಯುಳ್ಳ ಅಗ್ರಮಾನ್ಯರಾದುದರಿಂದ ಅವರೇ ಇದಕ್ಕೆ ಪ್ರೋತ್ಸಾಹಕರೆಂದು ನಂಬುತ್ತೇವೆ.

ವಿಜಯನಗರದ ಮಹಾರಾಜರವರು ಕಾಲಗತಿಯನ್ನೈದಿದ ಮೇಲೆಯು ಅವರ ಮಾತೃಶ್ರೀಯವರಾದ ವೃದ್ಧ ಮಹಾರಾಣೀಯವರು ರಾಜ್ಯಾಡಳಿತವಂ ತಮ್ಮ ವಶಕ್ಕೆ ಕೊಡಬೇಕೆಂದು ಗವರ್ನಮೆಂಟಿಗೆ ಬರೆದುಕೊಂಡದ್ದನ್ನು ಅವರು ಲಾಲಿಸಿ ಅದರಂತೆ ನಡೆಸುವಂತೆ ಹುಕುಂ ಕೊಟ್ಟಿರುತ್ತಾರೆಯಷ್ಟೆ. ಮಹಾರಾಣೀಯವರ ಸಹಾಯಾರ್ಥ ಒಬ್ಬ ಯೂರೋಪಿಯನ್ ಆಫಿಸರನ್ನು ನಿಯಮಿಸುವ ವಿಷಯದಲ್ಲಿ ಮಹಾರಾಣಿಯವರಿಗೂ ಗವರ್ನಮೆಂಟಿಗೂ ಕಾಗದ ಪತ್ರಗಳು ನಡೆಯುತಲಿರುವಂತೆಯೂ, ಯೂರೋಪಿಯನ್ ಆಫಿಸರುಗಳನೇಕರು ಸದರೀ ಮ್ಯಾನೇಜರ್ ಕೆಲಸಕ್ಕೆ ಪ್ರಯತ್ನ ಪಡುತಲಿರುವಂತೆಯೂ ತಿಳಿಯಬರುತಿದೆ.

ಆಟೇ ವಾರದಲ್ಲಿ ರಾಯಚೂರಿಂದ ಸೋಲಾಪುರಕ್ಕೆ ರೈಲ್ ಸರುಕುಗಾಡಿ ಹೋಗುತ್ತಿರುವಲ್ಲಿ ಕಳ್ಳರು ಬಂದು ಬಿದ್ದು ೪೦ ಮೂಟೆಗಳನ್ನು ಧಾನ್ಯದ ಗಾಡಿಯಿಂದ ನೆಲದ ಕೆಳಗೆ ಹಾಕಿ ಲೂಟಿ ಮಾಡಿದಂತೆಯೂ, ಗಾಡಿ ನಡೆಸುವವನು ಬಹಳ ವೇಗದೊಡನೆ ಗಾಡಿಯಂ ನಡೆಸಿಕೊಂಡು ಶೋಲಾಪುರಕ್ಕೆ ಹೋಗಿ ಪೋಲೀಸಿನವರಿಗೆ ವರ್ತಮಾನ ಕೊಡಲು ಅವರಲ್ಲಿ ಕೆಲವರು ಆಯುಧಗಳೊಡನೆ ಲೂಟಿಯಾದ ಸ್ಥಳಕ್ಕೆ ಬರಲು ಕಳ್ಳರು ಮೂಟೆಗಳನ್ನು ಸಾಗಿಸುತಲಿದ್ದರು. ಪೋಲೀಸಿನವರನ್ನು ನೋಡಿ ಕಳ್ಳರುಗಳು ಅವರಂ ಹೊಡೆಯಲೆತ್ನಿಸುವಲ್ಲಿ ಪೋಲೀಸಿನವರು ಕಳ್ಳರನ್ನು ಗೋಲಿಯಿಂದ ಹೊಡೆದರು. ಒಬ್ಬನಿಗೆ ಘಾಯವಾಗಿ ಕೊಡಲಿ ಹಿಡಿದವರೆಲ್ಲರು ಪರಾರಿಯಾದರೆಂದು ಒಂದು ಪತ್ರಗಾರರು ಬರೆದಿರುತಿದೆ.

ಗಂಜಾಂ ಮತ್ತು ವಿಜಗಪಟ್ಣಂ ಈ ಎರಡು ಜಿಲ್ಲೆಗಳಲ್ಲಿಯೇ ದೊಡ್ಡದಾದ ಕ್ಷಾಮನಿವಾರಕ ಕೆಲಸಗಳಿರುತ್ತವೆ. ಈ ಎರಡರಲ್ಲಿಯೂ ಜನಗಳು ಅಧಿಕವಾಗಿ ಸೇರುವದು ತಿಳಿದು ಗವರ್ನಮೆಂಟಿನವರು ಗಾಬರಿಪಟ್ಟು ಕ್ಷಾಮನಿವಾರಕ ಕೆಲಸಗಳಲ್ಲಿ ಜನರ ಸಂಖ್ಯೆಯು ಕಡಮೆಮಾಡುವಂತೆ ವಿಶೇಷ ಕಲೆಕ್ಟರ್‌ಗಳಿಗೂ ಆಜ್ಞೆ ಕೊಟ್ಟಿರುವಂತೆ ತಿಳಿಯಬರುತಿದೆ. ಹೀಗೆ ಮಹಾಕಾಮಗಾರಿಗಳಂ ನಿಲ್ಲಿಸುವದರಿಂದ ಬಹುಮಂದಿ ಬಡವರು ನಿರಾಶ್ರಿತರಾಗಿ ಕಷ್ಟಪಡುವದಕ್ಕೆ ಕಾರಣವಾಗುತ್ತದೆ. ಸದರಿ ಜನರಿಗೆ ಜೀವನಕ್ಕೆ ಬೇರೆ ಮಾರ್ಗ ಯಾವದಾದರೂ ಇದ್ದರೆ ರಿಲೀಫ್ ಕೆಲಸಗಳಿಗೆ ಹೋಗಿ ಕನಿಷ್ಠ ಕೂಲಿಗೆ ಕೆಲಸ ಮಾಡುವದಕ್ಕೆ ಅವರು ಒಪ್ಪುತಿದ್ದರು. ಈಗ ರಿಲೀಫ್ ಕಾಮಗಾರಿಗಳಲ್ಲಿ ಬಹುಮಂದಿ ಗುಂಪು ಗೂಡುವದರಿಂದಲೇ ಅವರಿಗೆ ಬಾಳುವದಕ್ಕೆ ಜೀವನವಿಲ್ಲವೆಂಬುದು ಸ್ಪಷ್ಟವಾಗುತಿದೆ. ರಿಲೀಫ್ ಕೆಲಸಗಳಲ್ಲಿ ಸಿಕ್ಕುವ ಅಲ್ಪ ಕೂಲಿಯಾದರೂ ಅವರ ಆಸುಪಾಸು ಗ್ರಾಮಗಳಲ್ಲಾಗಲಿ ಸ್ವಂತ ಗ್ರಾಮಗಳಲ್ಲಾಗಲಿ ಸಿಕ್ಕುವ ಪಕ್ಷಕ್ಕೆ ಅವರು ದೂರ ಪ್ರದೇಶಗಳಿಗೆ ಹೋಗಲಾರರು ಆದುದರಿಂದ ಇಂತ ವಿದ್ಯಮಾನದಲ್ಲಿ ಗವರ್ನಮೆಂಟಿನವರು ಆತುರಪಟ್ಟು ರಿಲೀಫ್ ಕಾಮಗಾರಿಗಳನ್ನು ನಿಲ್ಲಿಸಬಾರದಿತ್ತಲ್ಲವು.

ಪ್ರಸ್ತುತ ಸಂವಾದಗಳು ಇಂಡ್ಯಾ ದೇಶದ ತಾತ್ಕಾಲಿಕ ಸ್ಥಿತಿಯಂ ತಿಳಿಸುವದರಿಂದ ದುರ್ಭಿಕ್ಷ ವಿಷಯದಲ್ಲಿ ಪ್ರಜೆಗಳಿಗುಂಟಾಗಿರುವ ಭೀತಿಯು ಸ್ವಲ್ಪ ಕಮ್ಮಿಯಾಗುವದೆಂದು ಕಾಣುತಿದೆಯಾಗಿ ಅದು ಸಂಗ್ರಹ ರೂಪವಾಗಿ ಇಲ್ಲಿ ತಿಳಿಸುತ್ತೇವೆ — ಉತ್ತರ ವಾಯುವ್ಯ ದೇಶ ಮತ್ತು ಮಧ್ಯ ರಾಷ್ಟ್ರಗಳಲ್ಲಿ ಸರ್ವತ್ರ ಬಲವಾದ ವರ್ಷವಾಗಿರುತಿದೆ. ಪಂಜಾಬ ಪ್ರಾಂತದಲ್ಲಿ ಬಿದ್ದ ವರ್ಷದ ದೆಸೆಯಿಂದ ಅನೇಕ ಲಕ್ಷ ಎಕ್ರೆಗಳ ಜಮೀನುಗಳು ನೀರಿನಲ್ಲಿ ಮುಣಿಗಿ ಹೋಗಿರುತಿವೆ. ರೈತರು ವ್ಯವಸಾಯಕ್ಕುದ್ಯುಕ್ತರಾಗಿ ನೀರಿನಲ್ಲಿ ಕೆಲಸಗಳಂ ಮಾಡುತಲಿದ್ದಾರೆ. ದಕ್ಷಿಣ ಮಹಾರಾಷ್ಟ್ರ ದೇಶದೊಳು ಅನೇಕ ಪ್ರದೇಶಗಳಲ್ಲಿ ಒಳ್ಳೆಯ ಮಳೆ ಬಿತ್ತು. ಕೆಲವು ನದಿಗಳಲ್ಲಿ ಪ್ರವಾಹ ಬಂದಿರುತಿದೆ. ಬೆಳಗಾಂ, ಸತಾರೆ ಮೊದಲಾದ ಪ್ರದೇಶಗಳಲ್ಲೂ ವರ್ಷ ಬಿತ್ತು, ಪುನೆಯಲ್ಲಿ ಇನ್ನು ವರ್ಷ ಬೀಳುತ ನದಿಯಲ್ಲಿ ಪ್ರವಾಹ ಹರಿಯುತಲಿದೆ. ಗಂಜಾಂ ಡಿಸ್ಟ್ರಿಕ್ಟಿನ ದಕ್ಷಿಣ ಭಾಗದಲ್ಲಿ ನಾಲ್ಕಾರು ದಿನಗಳ ಮೊದಲು ಸದಾ ವರ್ಷ ಬೀಳುತಲಿತ್ತು. ಗೋಪಾಲಪುರ, ವಿಜಗಪಟ್ಣಂ, ಕರ್ನೂಲ್, ಬಳ್ಳಾರಿ, ಈ ಡಿಸ್ಟ್ರಿಕ್ಟುಗಳಲ್ಲಿ ಅಲ್ಪವೃಷ್ಟಿ. ಹೈದರಾಬಾದಿನೊಳು ಒಳ್ಳೆಯ ಸಮಯದಲ್ಲಿ ಬಲವಾದ ವರ್ಷ ಬಿದ್ದು ಕ್ಷಾಮ ಭೀತಿಯು ತಪ್ಪಿತೆಂದು ಕಾಣುತಿದೆ. ಕಳೆದ ತಿಂಗಳ ಆದಿಭಾಗದಲ್ಲಿ ಬಂಗಾಳಾ ದೇಶದೊಳು ಸರ್ವತ್ರ ಮಳೆ ಬಿದ್ದು ವ್ಯವಸಾಯ ಕೆಲಸಗಳು ನಡೆಯುವದಕ್ಕೆ ಸ್ವಲ್ಪ ಅವಕಾಶ ದೊರೆಯಿತು. ಈಗ ಬಿದ್ದಿರುವ ವರ್ಷವು ಇನ್ನು ಯೆರಡು ಮೂರು ತವಣೆ ಆದರೇನೆ ಈಗ ಹಾಜರಿರುವ ಫಸಲುಗಳು ಕೈಗೆ ಬರುವದಕ್ಕಾಗಲಿ ಮುಂದೆ ಇನ್ನು ಫಸಲಿರುವದಕ್ಕಾಗಲಿ ಅವಕಾಶ ವುಂಟಾಗುವುದು. ಮದರಾಸ್ ಪ್ರೆಸಿಡೆನ್ಸಿಗೆ ಸೇರಿದ ಡಿಸ್ಟ್ರಿಕ್ಟುಗಳಲ್ಲಿ ಕೆಲವುಕಡೆ ವರ್ಷ ಸಾಲದು, ಕೆಲವು ಪ್ರದೇಶಗಳಲ್ಲಿ ಸುತರಾಂ ವರ್ಷವಿಲ್ಲವು. ಸರ್ವತ್ರ ಜಿನಿಸುಗಳ ಧಾರಣೆಗಳು ಹೆಚ್ಚಿಯೇ ಇವೆ. ಸದ್ಯಕ್ಕೆ ಇಳಿಯುವ ಸೂಚನೆಗಳು ಯಾವವೂ ಕಂಡುಬರಲಿಲ್ಲವು.

LOCAL AND PROVINCIAL NEWS.

ಒಳದೇಶಮತ್ತುತಾಲ್ಲೂಕುಜಾತವೃತ್ತಾಂತಗಳು

ಮುಂದಿನ ಬೃಹಸ್ಪತಿವಾರದದಿನ ಈ ನಗರದಲ್ಲಿ ಕುದುರೆ ಜೂಜಿಗೆ ಪ್ರಾರಂಭವಾಗುವುದು. ಪರಂತು ಈಗಿನ ಕಾಲಸ್ಥಿತಿಯಂ ಯೋಚಿಸಲಾಗಿ ವರ್ಷಾನುಕೂಲವಾದ ನಿಘಾತಗಳಿಲ್ಲದೆ ಸರಿ ನಡೆಯುವದೆಂದು ನಾವು ನಂಬಲಾರೆವು.

ಈಗ್ಗೆ ಮೂವರು ಕಡಿಮೆ ಹತ್ತು ದಿನಗಳ ಮೊದಲು, ಕಳೆದ ಬುಧವಾರದ ದಿನ ಮದ್ರಾಸಿನಲ್ಲಿ ಸಮುದ್ರ ಉಕ್ಕಿ ಸದರೀ ಪಟ್ಟಣವೇ ಕೊಚ್ಚಲ್ಪಟ್ಟು ಹೋಗುವದೆಂದು ಜ್ಯೋತಿಷರು ಕಲ್ಪಿಸಿದ ಒಂದು ಕಥೆಯಂ ಕೇಳಿ ಅವರಿಗಿಂತಲು ಹೆಚ್ಚಾಗಿ ಇಲ್ಲಿನವರು ಮದರಾಸಿನಲ್ಲಿರುವ ಸ್ವಜನರ ವಿಷಯವಾಗಿ ಬಹಳ ಚಿಂತಿಸುತಲಿದ್ದರು. ಈ ವ್ಯಾಖ್ಯಾನವೇನ ಇದು ಕೇವಲ ಕಲ್ಪಿತವಾದುದೆಂದು ಯೋಚಿಸಿ ಎಲ್ಲರಿಗೂ ಸಮ್ಮತಿ ಯುಂಟಾಯಿತು.

ಈಚೆಗೆ ನಡೆದ ಸಿಟಿ ಮ್ಯೂನಿಸಿಪಲ್ ಬೋರ್ಡ್ ಮೀಟಿಂಗಿನಲ್ಲಿ, ಮುಂದಿನ ಅಕ್ಟೋಬರ್ ತಿಂಗಳೊಳು ಮೈಸೂರಲ್ಲಿ ನಡೆಯುವ ದಸರಾ ಸಭೆಗೆ, ಬೋರ್ಡಿನ ತರಫ ಪ್ರತಿನಿಧಿಗಳಾಗಿ ಮೆಸ್ಸರ್ಸ್ ಡಿ. ವೆಂಕಟರಾಮಯ್ಯನವರು, ಗಂಗಯ್ಯನವರು, ಕೃಷ್ಣಮೂರ್ತಿ ಮತ್ತು ಸೋಮಸುಂದರ ಮುದಲಿಯಾರ್‌ರವರು ಚುನಾಯಿಸಲ್ಪಟ್ಟರು.

ಕಳೆದ ತಿಂಗಳ ೨೯ನೇ ತಾರೀಖಿನ ರಾತ್ರಿ ಈ ಪ್ಯಾಟೆಯಲ್ಲಿ ಸುಮಾರು ಒಂದೂ ಕಾಲು ಅಂಗುಲ ವರ್ಷಬಿತ್ತು. ಮರಳಿ ಶುಕ್ರವಾರದದಿನ ಮಧ್ಯಾಹ್ನದ ಸುಮಾರು, ಅರ್ಧ ಅಂಗುಲ ಮಳೆ ಬಿತ್ತು. ಈ ವರ್ಷದ ದೆಸೆಯಿಂದ ಬತ್ತ ಮತ್ತು ರಾಗಿ ಮೊದಲಾದವು ಪೈರಾಗುವದಕ್ಕೂ ಇದುವರೆಗೇನೆ ಆಗಿರುವ ಫಸಲುಗಳು ಉಳಕೊಳ್ಳುವದಕ್ಕು ಬಹಳ ಸಹಾಯಕವಾಯಿತೆಂದು ಹೇಳಬೇಕಾಗಿದೆ. ಆದಾಗ್ಯೂ ಈಗ್ಗೆ ನಾಲ್ಕಾರು ದಿನಗಳ ಮೊದಲು ಅಕ್ಕಿ ಮುದಾರಣೆಯು ಹಿಂದಿನವಾರಕ್ಕಿಂತಲು ಒಂದುರೂಪಾಯಿಯೂ, ರಾಗಿಯುದಾರಣೆ ಗಾಡಿ ಒಂದಕ್ಕೆ ನಾಲ್ಕೈದು ರೂಪಾಯಿಗಳೂ ಹೆಚ್ಚಿರುವಂತೆ ಕೇಳುತ್ತೇವೆ. ಇದಕ್ಕುಂಟಾದ ಕಾರಣವು ಫಲಾನವೆಂದು ವ್ಯಕ್ತವಾಗಲಿಲ್ಲವು.

ಈಚಿನ ದಿವಸದಲ್ಲಿ ನಡೆಯುವ ಮೈಸೂರು ಸಿವಿಲ್ ಸರ್ವೀಸ್ ಪರೀಕ್ಷೆಗೆ ಪ್ರಾರಂಭದಲ್ಲಿ ದರಖಾಸ್ತುಗಳಂ ಕಳುಹಿಸಿ ದಾಖಲಾದ ಒಟ್ಟು ಎಪ್ಪತ್ತೊಂದು ಮಂದಿ ಉಮೇದವಾರರಲ್ಲಿ ಕಳೆದ ಶುಕ್ರವಾರದದಿನ ನಡೆದ ಡಾಕ್ಟರ್ ಪರೀಕ್ಷೆಗೆ ಐವತ್ತಾಲ್ಕು ಮಂದಿಯೇ ಹಾಜರಾದರು. ಇವರೊಳು ಸದರೀ ಪರೀಕ್ಷೆಯಲ್ಲಿ ಹನ್ನೆರಡು ಮಂದಿ ನಾಲಾಯಖ್ ಎಂಬದಾಗಿ ಮೆಡಿಕಲ್ ಬೋರ್ಡಿನವರು ಅಭಿಪ್ರಾಯಪಟ್ಟದರಿಂದ ನಾಲ್ವತ್ತೆರಡು ಮಂದಿಯೇ ಈದಿನ ಪರೀಕ್ಷೆಗೆ ಹಾಜರಾಗಿರುತ್ತಾರೆ. ಮೊದಲು ದಾಖಲಾದ ಎಪ್ಪತ್ತೊಂದುಮಂದಿ ದರಖಾಸ್ತುದಾರರಿಂದ ವಸೂಲಾದ ೩೫೫ ರೂಪಾಯಿಗಳಲ್ಲಿ, ಮೆಡಿಕಲ್ ಪರೀಕ್ಷೆಯೊಳು ನಾಲಾಯಖ್ ಎನ್ನಿಸಿಕೊಂಡ ಹನ್ನೆರಡುಮಂದಿಗೆ ವಾಪಸ್ ಕೊಡಬೇಕಾದ ೬೦ ರೂಪಾಯಿಗಳು ಹೊರತು ಗೈರ್ಹಾಜರಾದ ಹದಿನೇಳುಮಂದಿಯಿಂದ ವಸೂಲಿಬಂದ ೮೫ ರೂಪಾಯಿಗಳು ದಂಡವಾಗಿ ಗವರ್ನಮೆಂಟಿಗೆ ಸೇರಬೇಕಾಯಿತು.

ಈ ಪೂರು ಕೋಮಟಿಗರ ಪೇಟೆಯಲ್ಲಿ ಜವಳಿ ಅಂಗಡಿ ಇಟ್ಟುಕೊಂಡಿರುವ ಲಿಂಗಾಯತ ದೇವಾಂಗದ ಮಿ॥ ಚೊಕ್ಕಣ್ಣನವರ ಬಸಪ್ಪ ಎಂಬವರು ಈ ಸಿಟಿಯ ಮ್ಯುನಿಸಿಪಲ್ ಬೋರ್ಡ್ ಮೆಂಬರ್‌ಗಳಲೊಬ್ಬರಾಗಿರುತ್ತಾರೆ. ಇವರು ಕಳೆದ ಜ್ಯೇಷ್ಠಮಾಸದಲ್ಲಿ ತಮ್ಮ ಮಗನ ವಿವಾಹವಂ ಜರಗಿಸಿದರು. ಈ ಕಬ್ಬಾಗಿ ಈ ಪೂರು ನಗರ್ತರ ಪೇಟೆಯಲ್ಲಿರುವ ಒಬ್ಬ ವೇಶ್ಯೆಯನ್ನು ಹತ್ತು ದಿನಗಳಕಾಲ ತಮ್ಮ ಮನೆಯಲ್ಲಿ ನರ್ತನದ ಬಗ್ಗೆ ೫೦ ರೂಪಾಯಿ ಕೊಡುವದಾಗಿ ನಿಷ್ಕರ್ಷೆಮಾಡಿ ಇಟ್ಟುಕೊಂಡು ಅನಂತರ ಆಯಾ ಕಾಲಗಳಲ್ಲಿ ನೌಕರಿ ಮಾಡಿಸಿಕೊಂಡು ಅವರಿಗೆ ಗೊತ್ತುಮಾಡಿದ್ದ ಹಣವನ್ನು ಕೊಡಬೇಕಾದ ಕಾಲದಲ್ಲಿ ಇಲ್ಲದ ತಕರಾರುಗಳು ತಂದು ಅಷ್ಟು ಭಾರೀ ಮೊಬಲಗು ಕೊಡುವದಾಗಿ ತಾನು ಹೇಳಿದ್ದಿಲ್ಲವೆಂದು ನಿರಾಕರಿಸಿದಂತೆಯೂ, ಅದರಮೇಲೆ ಸದರೀ ವೇಶ್ಯೆಯು ಇಲ್ಲಿನ ಮುನ್ಸಫ್ ಕೋರ್ಟಿನಲ್ಲಿ ಬಸಪ್ಪನವರಮೇಲೆ ಸಿವಿಲ್ ದಾವಾ ದಾಖಲ್ಮಾಡಿರುವಂತೆಯೂ ಕೇಳುತ್ತೇವೆ. ಇದರ ಪರ್ಯವಸಾನವಂ ಮುಂದೆ ತಿಳಿಸುವೆವು.

ನೇಟಿವ್ ವೈದ್ಯ ಚಿಕಿತ್ಸಾ ಕ್ರಮವಂ ಗುರುಮುಖವಾಗಿ ಅಭ್ಯಾಸಿಸಲು ಇಷ್ಟಪಡುವ ವೈದ್ಯರಿಗೆ ಈ ಸಂವತ್ಸರದ ಮೊದಲು ಐದು ಸ್ಕಾಲರ್‌ಷಿಪ್ (ವಿದ್ಯಾರ್ಥಿವೇತನ)ಗಳನ್ನು ಕೊಡಬೇಕೆಂದು ಮೈಸೂರು ಗವರ್ನಮೆಂಟಿನವರು ಆಲೋಚಿಸುತಲಿದಾರೆ. ಮೊದಲನೇ ವರ್ಷದಲ್ಲಿ ಇವುಗಳೊಂದಕ್ಕೆ ತಿಂಗಳೊಂದಕ್ಕೆ ಆರು ರೂಪಾಯಿಗಳು, ಎರಡನೇ ಸಂವತ್ಸರದಲ್ಲಿ ಏಳು ರೂಪಾಯಿಗಳು, ಮೂರನೇ ಸಂವತ್ಸರದಲ್ಲಿ ಎಂಟು ರೂಪಾಯಿಗಳು, ಈಮೇರೆ ಕೊಡಲ್ಪಡುವುವು. ಈಬಗ್ಗೆ ದರಖಾಸ್ತು ಮಾಡಬಹುದಾದ ವಿದ್ಯಾರ್ಥಿಗಳು ಇಂಗ್ಲಿಷ್ ಭಾಷೆಯಲ್ಲಿ ಲೋವರ್ ಸೆಕೆಂಡರಿ ಪರೀಕ್ಷೆಯಂ ಕೊಟ್ಟಿರಬೇಕು. ಇವರಿಗೆ ಮೈಸೂರಲ್ಲಿರುವ ಸ್ವದೇಶ ವೈದ್ಯಶಾಲೆಯಲ್ಲಿ ವಿದ್ಯೆ ಕಲಿಸಲ್ಪಡುವುದು, ಎಂದು ಮೆಗ್ಗೈರೆ ಒಳದೇಶದ ಮಾರ್ನಿಂಗ್ ಮೇಲ್ ಪತ್ರಿಕೆಯ ಮೂಲಕ ತಿಳಿಯಬರುತಿದೆ. ಮೇಲಿನ ವಿಷಯದಲ್ಲಿ ಗವರ್ನಮೆಂಟಿನವರ ಉದ್ದೇಶವು ಶ್ಲಾಘನೀಯವಾದುದೆ, ಪರಂತು ವಿದ್ಯಾರ್ಥಿಗಳಿಗೆ ಉದ್ದಿಷ್ಟವಾಗಿರುವ ವೇತನವು ಕೇವಲ ಲಾಭ್ಯಪ್ರದರ್ಶಕವಾದುದೆಂಬದರಲ್ಲಿ ಸಂಶಯ ಲೇಶವೂ ಇರಲಾರದು. ಏತಕ್ಕೆಂದರೆ, ವಿದ್ಯಾರ್ಥಿಗಳು ಮೈಸೂರು ಷಹರ್ ನಿವಾಸಿಗಳಾಗಿರುವ ಪಕ್ಷದಲ್ಲಿ ವೇತನದ ದರಗಳು ಒಂದುವೇಳೆ ಸಾಕೆಂದು ಎಣಿಸಲ್ಪಟ್ಟಾಗ್ಯೂ ಪರಸ್ಥಳಗಳಿಂದ ಮೈಸೂರಿಗೆ ಹೋಗಿ ಸದರೀ ವಿದ್ಯೆಯಂ ಅಭ್ಯಾಸ ಮಾಡುವಂತವರಿಗೆ ಅದು ಈಕಾಲದಲ್ಲಿ ಎಷ್ಟರಮಟ್ಟಿಗೆ ಸಾಕಾಗಿರುವುದೋ ಅದನ್ನ ಗವರ್ನಮೆಂಟಿನವರು ಚೆನ್ನಾಗಿ ಆಲೋಚಿಸಿರುವರೆಂದು ನಾವು ನಂಬಲಾರೆವು.

THE MYSORE GAZETTE.

ಮೈಸೂರು ಗೆಜೆಟ್.

ಗುರುವಾರ, ೨೯ನೇ ಜುಲೈ ೧೮೯೭.
ಮೈಸೂರ ಗವರ್ನಮೆಂಟಿನವರಿಂದ ಹೊರಡಿಸಲ್ಪಟ್ಟ
ಇಸ್ತಿಹಾರನಾಮೆಗಳು,
ಜನರಲ್ ಮತ್ತು ರೆವಿನ್ಯೂ.

ತಾರೀಖ್ ೨೭ನೇ ಜುಲೈ ೧೮೯೭.

ನಂ॥ ೧೪೪೮—ಜು ೬೧೦—ಕ್ರಿಮಿನಲ್ ಪ್ರೊಸೀಜರ್ ಕೋಡಿನ ೧೬ನೇ ಸೆಕ್ಷನ್ ಅನುಸರಿಸಿ ಹಾಸನ ಡಿಸ್ಟ್ರಿಕ್ಟಿನ ಅಸಿಸ್ಟೆಂಟ್ ಕಮಿಷನರ ವ ೩ನೇ ಕ್ಲಾಸ ಮ್ಯಾಜಿಸ್ಟ್ರೇಟರಾದ ಮಿ॥ ಪಿ. ಎಫ್ ಬೌರಿಂಗರವರು, ೧ನೇ ಕ್ಲಾಸ ಮ್ಯಾಜಿಸ್ಟ್ರೇಟಾಗಿ ನೇಮಕಮಾಡಲ್ಪಟ್ಟಿರುತ್ತಾರೆ. ಮತ್ತು ೩೫೭ನೇ ಸೆಕ್ಷನ್ ಅನುಸರಿಸಿ ಅವರು ತಮ್ಮಿಂದ ವಿಚಾರಿಸಲ್ಪಟ್ಟ ಮೊಕದ್ದಮೆಗಳಲ್ಲಿ ಸಾಕ್ಷಿಗಳ ಸಾಕ್ಷ್ಯವನ್ನು ಇಂಗ್ಲಿಷ ಭಾಷೆಯಲ್ಲಿ ಸ್ವಹಸ್ತದಿಂದ ತೆಗೆದುಕೊಳ್ಳುವದಕ್ಕೆ ಅಪ್ಪಣೆ ಕೊಡಲ್ಪಟ್ಟಿರುತ್ತಾರೆ.

ನಂ॥ ೧೪೫೪—ಜು ೬೧೧—ಕ್ರಿಮಿನಲ್ ಪ್ರೊಸೀಜರ್ ಕೋಡಿನ ೧೬ನೇ ಸೆಕ್ಷನ್ ಅನುಸರಿಸಿ ಬೆಂಗಳೂರು ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ ಮಿ॥ ಕೆ ಶ್ರೀನಿವಾಸರಾಯರು ೧ನೇ ಕ್ಲಾಸ್ ಮ್ಯಾಜಿಸ್ಟ್ರೇಟಾಗಿ ನೇಮಕಮಾಡಲ್ಪಟ್ಟಿರುತ್ತಾರೆ.

ತಾ॥ ೨೮ನೇ ಜುಲೈ ೧೮೯೭.

ನಂ॥ ೪೭೩೦—ರ ಫೈ. ೧೦೯—೯೭—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೩೩ನೇ ಆರ್ಟಿಕಲ್ ಅನುಸಾರ ಕೋಲಾರ ಡಿಸ್ಟ್ರಿಕ್ಟ್ ಬಾಗೇಪಲ್ಲಿ ತಾಲ್ಲೂಕಿನ ಅಮಲ್‌ದಾರ್ ಟಿ ಚೊಕ್ಕಣ್ಣನವರಿಗೆ ಮಾಹೇ ಮಜಕೂರ ೧೬ನೇ ತಾರೀಖುವಾಗಾಯಿತು ಹದಿನೈದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

೨ ತಾಲ್ಲೂಕು ಹೆಡ್‌ಶೇರಸ್ತೇದಾರ್ ಸೂರ್ಯನಾರಾಯಣಪ್ಪನವರು ಸದರೀ ಟಿ ಚೊಕ್ಕಣ್ಣನವರು ರಜಾಮೇಲಿರುವ ಕಾಲದಲ್ಲಿ ಜಾರಿ ಮತ್ತೂ ಯಾ ಹುಕುಂ ಕೊಡುವ ಪರಿಯಂತ ೩ನೇ ಕ್ಲಾಸ ಮ್ಯಾಜಿಸ್ಟ್ರೇಟರ ಅಧಿಕಾರಗಳೊಡನೆ ಸದರೀ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು.

ತಾ॥ ೨೯ನೇ ಜುಲೈ ೧೮೯೭.

ನಂ॥ ೧೦೧೦—ಗ, ೭೩೩—ತಿಪಟೂರು ಪೊಲೀಸ್ ಇನ್ಸ್‌ಪೆಕ್ಟರ್ ಆರ್, ಕಾಮಣ್ಣಯ್ಯನವರು, ರಜಾಮೇಲಿರುವ ಮತ್ತು ಇತರ ವಿಚಾರಣೆಗಳು ನಡೆಯುವ ಪರಿಯಂತ, ಮೃತಪಟ್ಟ ಬಿ. ಸೀತಾರಾಮಯ್ಯನವರಿಗೆ ಬದಲಾಗಿ ತಿಪಟೂರು ತಾಲ್ಲೂಕಿನ ಅಮಲ್ದಾರ್ ವ ೩ನೇ ಕ್ಲಾಸ ಮ್ಯಾಜಿಸ್ಟ್ರೇಟಾಗಿ ಅಫಿಷಿಯೇಟ್ ಮಾಡುವ ಹಾಗೆ ನೇಮಕಮಾಡಲ್ಪಟ್ಟಿರುತ್ತಾರೆ.

ಪಬ್ಲಿಕ್‌ವರ್ಕ್ಸ್.

ತಾ|| ೨೧ ನೇ ಜೂಲೈ ೧೮೯೭,

ನಂ|| ೪೯೫೩-೩೭೮೪—ಕಡೂರು ಡಿವಿಜನಿಗೆ ಸೇರಿದ ಅಸಿಸ್ಟೆಂಟ್ ಇಂಜಿನಿಯರ್ ಮೆ|| ಪಿ. ಥೋರ್ ಯವರಿಗೆ ಅವರು ಹೊರಡುವ ತಾರೀಖು ಲಾಗಾಯಿತು ಮೂವತ್ತು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ತಾ|| ೨೪ನೇ ಜೂಲೈ ೧೮೯೭

ನಂ|| ೫೦೫೮-೩೬೭೭—ಸೂಪರ್ನೆಂಟೆಂಡಿಂಗ್ ಇಂಜಿನಿಯರ್ ಮೆ|| ಆರ್. ಟಿ ಸ್ಟಾಲ್ಡೆನ್‌ರವರು ೧೮೯೭ನೇ ಜೂಲೈ ೧೬ನೇ ತಾರೀಖು ಲಾಗಾಯಿತು ಉದಕಮಂಡಲದಲ್ಲಿ ಫರ್ಲೋ ಕೆಲಸಗಳ ಚಾರ್ಜಿಗೆ ನಿಯಮಿಸಲ್ಪಟ್ಟಿರುತ್ತಾರೆ

SUMMARY OF NEWS.
ವೃತ್ತಾಂತ ಸಂಗ್ರಹವು.

ಫಿಂಲ್ಯಾಂಡಿನೊಳಗೆ ಪ್ರತಿ ವರ್ಷದಲ್ಲೂ ಅನಾಥರಾದ ಮುಪ್ಪಿನವರನ್ನೂ ಹುಡುಗರನ್ನೂ ಹರಾಜ್ ಮಾಡುತ್ತಾರೆ ಮತ್ತು ಅವರಿಂದ ದನಗಳು ಮಾಡುವ ಕೆಲಸಗಳನ್ನು ಮಾಡಿಸಿಕೊಳ್ಳುತ್ತಾರೆ.

ನೈಜಾಂ ಸರ್ಕಾರದವರಿಗೆ ದುಡ್ಡಿನ ಕೊರತೆ ಬಹಳವಾದ್ದರಿಂದ ತಮ್ಮ ಸಂಸ್ಥಾನದ ಆದಾಯವನ್ನು ಹೆಚ್ಚಿಸಿ ಖರ್ಚು ಕಡಮೆ ಮಾಡುವ ವಿಚಾರದಬಗ್ಗೆ ಒಂದು ಕಮಿಟಿಯನ್ನು ನೇಮಿಸಿದರು.

ಫೇಜಿಯಾಬಾದಿನಿಂದ ಮುರುದಾಬಾದಿಗೆ ಆಗುವ ೪೭ ಮೈಲುಗಳ ರೈಲ್ವೆರೋಡಿಯಿಂದ ಕನ್ನನೂರಿಗೂ ರೈಲ್ ರಸ್ತೆಯನ್ನು ಹಾಕಿಸಬೇಕೆಂದು ಇಂಡಿಯಾ ಸ್ಟೇಟ್ ಸೆಕ್ರಟರಿಯವರು ಸಂಪೂರ್ಣ ಮಾಡಿರುತ್ತಾರೆ ಈ ಕಾಮಗಾರಿಗಳು ಮುಂದಿನ ತಿಂಗಳಲ್ಲಿ ಪ್ರಾರಂಭವಾಗುವವು

ಈಗ ಜಬಲ್ಪೋರದಲ್ಲಿರತಕ್ಕ ರತ್ನ ಖಚಿತವಾದ ಕೆತ್ತಿಗ ಳಲ್ಲಿ ಬರೋಡಾ ಗಾಯಕವಾಡಿಯವರಲ್ಲಿರತಕ್ಕದ್ದೆ ಅತ್ಯಂತ ಶ್ರೇಷ್ಠವಾದದ್ದು ಇದರ ಹಿಡಿ ಮುಂತಾದ ಸ್ಥಳಗಳಲ್ಲಿ ವಜ್ರ ಕೆಂಪು ಪಚ್ಚೆಗಳಿಂದ ಕೆತ್ತಲ್ಪಟ್ಟಿದೆ. ಇದಕ್ಕೆ ಅಂದಾಜು ಕ್ರಯ ೬೦,೦೦೦ ಪೌಂಡುಗಳು.

ಪುನಾ ಸಮೀಪದಲ್ಲಿರುವ ಲ್ಯಾನೋಲಿ ಎಂಬ ಸ್ಥಳದಲ್ಲಿ ಪ್ಲೇಗ್‌ರೋಗವು ತಲೆದೋರಿ ವ್ಯಾಪಿಸುತಲಿದೆ. ಪುನಾ ಮತ್ತು ರಾಜಧಾನಿಯಿಂದ ಡಾಕ್ಟರುಗಳೂ ಪುನಾ ಕಲೆಕ್ಟರಾಗಿಯೂ ಹಾವಿ ಪ್ಲೇಗ್ ಕಮಿಷನರಾಗಿಯೂ ಇರುವ ಮೆ|| ಲ್ಯಾಂಬರ್ಟವರೂ ಖುದ್ದು ಹೋಗಿ ನೋಡುವಲ್ಲಿ ಒಂದು ಮನೆಯೊಳು ೧೪ ಜನರಿಗೆ ತಗಲಿತ್ತು. ಬಹು ಹುಷಾರಿನಿಂದ ನೋಡುತಿದಾರೆ. ಈ ರೋಗವು ಇನ್ನೂ ಇಂಡಿಯಾವನ್ನು ಬಿಟ್ಟು ಹೋಗಲಿಲ್ಲವು.

ಶ್ರೀಮನ್ಮಹಾರಾಜ್ಞೀ ಇಂಡಿಯಾ ಚಕ್ರವರ್ತಿನೀಯವರ ಜುಬಿಲಿಯ ಕಾಲದಲ್ಲಿ ತಮ್ಮ ಸಾಮ್ರಾಜ್ಯದೊಳಗಿನ ಪ್ರಜೆಗಳು ತೋರಿಸಿರುವ ಅನಧೃಶವಾದ ಭಕ್ತಿ ವಿಶ್ವಾಸಗಳಿಗಾಗಿ ಸದರೀ ಪ್ರಜೆಗಳನ್ನು ಮನಃಪೂರ್ವಕವಾಗಿ ವಂದಿಸುವ ದಲ್ಲದೆ ಮುಂದೆ ತಮ್ಮ ಜೀವಿತಕಾಲದಲ್ಲಿ ತಮ್ಮ ಪ್ರಜೆಗಳ ಕ್ಷೇಮಾಭ್ಯುದಯಕ್ಕಾಗಿ ತಾವು ಮಾಡಬೇಕಾದ ಕರ್ತವ್ಯವನ್ನು ಮಾಡಿ ಕೃತಾರ್ಥರಾಗುವುದಕ್ಕೆ ಸಹಾಯ ಮಾಡಲು ಭಗವಂತನನ್ನು ಪ್ರಾರ್ಥಿಸುತಿರುವರಾಗಿ ವಾತ್ಸಲ್ಯಪೂರ್ವಕವಾದ ಒಂದು ಪತ್ರವನ್ನು ಮಹಾರಾಜ್ಞೀಯವರು ಬರೆದು ಕಳುಹಿಸಿರುತ್ತಾರೆ.

ಬರದ್ವಾನ್ ಡಿಸ್ಟ್ರಿಕ್ಟಿನಲ್ಲಿ ದಾಮೋದರ ಎಂಬ ನದಿಯಲ್ಲಿ ಪ್ರವಾಹ ವಿಪರೀತವಾಗಿ ಒಂದು ಎಡೆಯಲ್ಲಿ ವಿಶೇಷದ್ದ ಕಟ್ಟೆಯು ೫೦೦ ಅಡಿಗಳು ಕಿತ್ತುಹೋಯಿತು. ಈಗ ನೀರಿನ ಹಾವಳಿಯನ್ನು ಏನೆಂದು ಹೇಳೋಣ. ಆ ಕಟ್ಟೆಯ ಕೆಳಗೆ ಉದ್ದಕ್ಕೂ ಇದ್ದ ಹಳ್ಳಿಗಳು ಸಂಪೂರ್ಣವಾಗಿ ಕೊಚ್ಚಿಹೋದವು ಸುಮಾರು ೫೦೦ ಮನೆಗಳು ಬಿದ್ದು ನಿರ್ನಾಮವಾಗಿವೆ. ಎಷ್ಟು ಜನರು ಸತ್ತುಹೋದರೊ ತಿಳಿಯದು. ಆದರೆ ಗೋಕಾಯಿಗಳೂ ಸಾವಿರಾನುಗಳೂ ನಷ್ಟವಾದದ್ದು ಅಲ್ಪವಲ್ಲವೆಂದು ಹೇಳುವದಕ್ಕಾಗದು. ಅತ್ತಲಾಗಿ ಆ ನದಿಯ ಬಲಿಸಿಕ್ಕವದಲ್ಲಿ ಕಟ್ಟೆಯೊಂದೂ ಇಲ್ಲದಿರುವದ್ದರಿಂದ ನೀರಿನ ಪ್ರವಾಹವು ೨೦ ಮೈಲಿ ಘಾಸಲೆಯವರೆಗೆ ಇದ್ದ ಗ್ರಾಮಗಳೇ ಮುಂತಾದ ಸರ್ವಸ್ವವನ್ನೂ ಕೊಚ್ಚಿಕೊಂಡು ಹೋಗಿದೆ.

ಹೈದರಾಬಾದ್‌ನಲ್ಲಿ ರೈಲ್ ಬಡಾವಣೆ ಮಾಡುವದಕ್ಕೆ ಪೈಜಾಮರವರು ವಿಲಾಯಿತಿಯಲ್ಲಿ ಹಣವನ್ನು ಸಾಲ ತರಬೇಕೆಂದು ಹೊಚಿಸಿಕೊಂಡಿದ್ದರು. ಆದರೆ ಈ ಸಬ್ಸಿಡಿಯನ್ನು ಆಲ್ಲಿನ ನವಾಬರೂ ಜಹಗೀರ್‌ದಾರರೂ ಸೇರಿ ಒಂದು ಸಭೆಯನ್ನು ನಡೆಸಿದರು. ಈಸಭೆಯಲ್ಲಿ ಪೇಷ್ಕಾರ್ ಮಹಾರಾಜಾ ಕಿಷನ್‌ಪ್ರಸಾದ ಯವರು ವಿಲಾಯಿತಿಯಲ್ಲಿ ಸಾಲ ತರುವದರಿಂದ ಹೈದರಾಬಾದ್ ಸಂಸ್ಥಾನಕ್ಕೆ ಬಹಳ ನಷ್ಟವಾಗುತದೆಯೆಲೂ, ಅಲ್ಲಿನ ಜಾಗೀರ್‌ದಾರರೂ ನವಾಬರೂ ಸಾಹುಕಾರರೂ ಸೇರಿ ಸರ್ಕಾರಕ್ಕೆ ೧ ಕೋಟಿ ಹಣ ಸಾಲ ಕೊಟ್ಟರೆ ಸರ್ಕಾರದವರು ಕೊಡುವ ಬಡ್ಡಿಯಲ್ಲಿ ಇವರುಗಳಿಗೆ ಉಳಿಯುವುದೆಂತಲೂ ಹೇಳಿದರು. ಆ ಕೂಡಲೆ ಸಭೆಯಲ್ಲಿದ್ದವರು ಅನೇಕರು ಎದ್ದು ೧೦ ಲಕ್ಷದ ವರೆಗೆ ಕೊಡುತ್ತೇವೆಂದು ತಿಳಿಸಿದರು. ಮತ್ತೊಂದು ಸಭೆ ನಡೆದಾಗ ಸಭಿಕರು ೩೦ ಲಕ್ಷ ರೂಪಾಯಿ ಕೊಡುತ್ತೇವೆಂದು ಒಪ್ಪಿದರು; ಇದು ರೈಲಿಗಾಗಿ ಒಂದುಕೋಟಿ ರೂಪಾಯಿ ಹೈದರಾಬಾದಿನಲ್ಲೇ ಉತ್ಪತ್ತಿಯಾಗುವದೆಂದು ತೋರುತಿದೆ. ಪ್ರಜೆಗಳು ತಮ್ಮ ಪ್ರಭುಗಳಿಗೆ ಹೀಗೆ ದ್ರವ್ಯಸಹಾಯಮಾಡಿದ್ದು ಹಿಂದುಸ್ಥಾನದಲ್ಲಿ ಇದೇ ಮೊದಲನೇದೆಂದು ಊಹಿಸುತ್ತೇವೆ.

ಹೋದತಿಂಗಳ ೩ನೇ ತಾರೀಖಿನಿಂದ ಹೆಚ್ಚು ಪೊಲೀಸ್ ರಾಣಿಯು ಪುನಹ ಇಡಲ್ಪಟ್ಟಿತು. ಸವಾರ್ ಮತ್ತು ಯೂರೋಪಿಯರ್ ಸಿಪಾಯರ ಖರ್ಚುಗಳಾದವು, ಮತ್ತು ನೇಟಿವ್ ಪೋಲೀಸರ ಖರ್ಚಿಯು ಬಹು ಭಾರೀಯಿಂದ ನಡೆದಿರುತಿದೆ. ಜಾಸ್ತೀ ಪೋಲೀಸ್ ಖರ್ಚು ಸರಕಾರದ ಲೆಖ್ಖದ ಪ್ರಕಾರ ಆಗಾವ್ವು ೩೦ ಸಾವಿರ ರೂಪಾಯಿ ಕೊಡುವದೆ ಕಲ್ಕೆಕ್ಟರ ಮೆ|| ಲ್ಯಾಂಬರ್ ಸಾಹೆಬರವರು ಮ್ಯೂನಿಸಿಪಾಲಿಟಿಗೆ ಬರೆದಿರುವರು ಆದರಿಂದ ಹೋದ ಮಂಗಳವಾರದ ದಿವಸ ಮ್ಯೂನಿಸಿಪಾಲಿಟಿಯು ಸಭೆಯಾಗಿ ರಾಯಿಸಲ್ಪಟ್ಟದ್ದೇನೆಂದರೆ, ಶಿಲ್ಕಿನಲ್ಲಿ ಒಟ್ಟಿಗೆ ೧೭ ಸಾವಿರ ರೂಪಾಯಿ ಇರುವವು. ಅವು ಖರ್ಚಿಗೂ ಸಾಕಾಗುವದಿಲ್ಲ ಆದ್ದರಿಂದ ೩೦ ಸಾವಿರ ರೂಪಾಯಿ ಕೊಡುವದಕ್ಕೆ ಮ್ಯೂನಿಸಿಪಾಲಿಟಿಗೆ ಅನುಕೂಲವಿಲ್ಲ ಆದ್ದರಿಂದ ಸರ್ಕಾರದವರು ಮ್ಯೂನಿಸಿಪಾಲಿಟಿಗೆ ಯೆಲ್ಲಾ ರಕಮು ಸಾಲವಾಗಿ ಕೊಡಬೇಕು. ಇಲ್ಲದೆ ಪೋಲೀಸ್ ಪಟ್ಟಿ ವಸೂಲಾಗುವ ವರೆಗೆ ವಾಯಿದೆಯಾದರೂ ಕೊಡಬೇಕು ಇದರಮೇಲಿಂದ ಪುನಯ ಮ್ಯೂನಿಸಿಪಾಲಿಟಿಯ ಸ್ಥಿತಿಯು ತಿಳಿಯಬರುವದು. ಸರ್ಕಾರದವರು ಆರಂಭಕ್ಕೆ ೧೪ ಸಾವಿರ ರೂಪಾಯಿ ಸಾಲವಾಗಿ ಮ್ಯೂನಿಸಿಪಾಲಿಟಿಗೆ ಕೊಡ ಪವಕ್ಕೆ ಕಲೆಕ್ಟರ್ ಸಾಹೆಬರವರು ಸರ್ಕಾರಕ್ಕೆ ವಿನಂತಿ ಮಾಡಿರುವರು, ಮತ್ತು ಮ್ಯೂನಿಸಿಪಾಲಿಟಿಯವರು ಯೆಲ್ಲ ರಕಮಿನಬಗ್ಗೆ ವಿನಂತಿ ಮಾಡಿರುವರು ಮುಂದೇನಾಗುವದೆಂದು ನೋಡುವ.

ಕಳೆದ ಜೂನ್ ತಿಂಗಳ ೧೪ ಅಥವಾ ೧೫ನೇ ತಾರೀಖಿನಲ್ಲಿ ಇಬ್ಬರು ಬಂಗಾಳೀ ಯುವತಿಯರು ಮತ್ತು ಒಬ್ಬ ಜರ್ಮನ್ ದೇಶದ ಯುವತಿಯೂ ರೈಲ್ ಮಾರ್ಗವಾಗಿ ಬೊಂಬಾಯಿಯಿಂದ ಕಲ್ಕತ್ತಾಕ್ಕೆ ಪ್ರಯಾಣ ಮಾಡುತಲಿರುವಾಗ ಖಂಡವಾ ಎಂಬ ಸ್ಟೇಷನ್‌ನ ರೈಲಿನಿಂದ ಇಳಿಯಬೇಕಾಗಿ ಬಂತು ಆ ಪ್ಲೇಗ್ ಇಬ್ಬರು ಯೂರೋಪಿಯರ್‌ರಲ್ಲಿ ಒಬ್ಬ ಪೊಲೀಸ್ ಆಫೀಸರ್ ಕ್ಲೀವೆಲೆಂಡ್‌ಎಂಬವನೂ ಮತ್ತೊಬ್ಬ ಅಸಿಸ್ಟೆಂಟ್ ಸರ್ಜನ್ ಸಾಲ್ಟನವನೂ ಉಪಾಯಾಂತರಗಳಿಂದ ಅವರನ್ನು ಪ್ಲೇಗ್ ಆಸ್ಪತ್ರೆಗೆ ರೆಗದುಕೊಂಡು ಹೋಗಿ ಅವರ ಒಂದು ಗುಡಿಸಿಲಿನಲ್ಲಿಟ್ಟರು. ಪ್ಲೇಗ್ ಆಸ್ಪತ್ರೆಯವರು ಅವರ ಯೋಗಕ್ಷೇಮವನ್ನು ವಿಚಾರಿಸುವದು ಅವಶ್ಯವಾಗಿದ್ದರೂ ಅವರು ಗಮನ ಕೊಡಲಿಲ್ಲವು. ಈ ಸಾಲ್ಟ ಎಂಬವನು ಜರ್ಮನ್ ಯುವತಿಯನ್ನು ಉಪಾಯವಾಗಿ ಬೇರೆ ಕೊಠಡಿಗೆ ಕರೆದುಕೊಂಡುಹೋದನು ಕ್ಲೀವೆಲೆಂಡ್ಎಂಬವನು ಬಂಗಾಳಿ ಯುವತಿಯರನ್ನು ಅತ್ಯಾಚಾರಕ್ಕೆ ಬಲಾತ್ಕರಿಸಲಾಗಿ ಆ ಇಬ್ಬರು ಅಬಲೆಯರೂ ಕೂಗಿಕೊಂಡು ಗದ್ದಲ ಮಾಡಿದರು, ಇದನ್ನು ಕೇಳಿ ಸಮೀಪದಲ್ಲಿ ಹೋಗುತಲಿದ್ದ ಜನರು ಬಂದು ಸೇರಿದರು ಜರ್ಮನ್ ಯುವತಿಯೊಡನೆ ಸಾಲ್ಟನು ಹೊರಕ್ಕೆ ಓಡಿಬಂದನು ಕೂಡಲೆ ಇವರನ್ನು ಬಿಟ್ಟು ಜವಾನಿ ಬುಡೆಯನ್ನು ಗಟ್ಟಿಯಾಗಿ ಅಲಿಂಗಿಸಿಕೊಂಡು ಕ್ಲೀವೆಲೆಂಡನು ಓಡಿಹೋದನು. ಸಾಲ್ಟನು ಬಂಗಾಳಿ ಬಾಲೆಯರನ್ನು ಗದ್ದಲವಾಡಿದರೆ ನಿಮ್ಮನ್ನಿಲ್ಲಿಂದ ಬಿಡುವದೇ ಇಲ್ಲವೆಂದು ಹೆದರಿಸಿದನು ಅಷ್ಟರಲ್ಲಿ ಜನರು ಸೇರಿ ಈ ಇಬ್ಬರಿಗೆ ದೊರೆತ ಪೋಲೀಸಿನವರ ಸಹಾಯದಿಂದ ಸ್ಥಳವನ್ನು ಸೇರಿದರು. ಈ ಇಬ್ಬರು ಕುಟಿಲರೂ ಪ್ಲೇಗ್ ನಿಮಿತ್ತವಾಗಿ ನಿಯಮಿಸಲ್ಪಟ್ಟಿದ್ದರು. ಈ ಹೆಂಗಸರು ಬೊಂಬಾಯಿ ಸರ್ಕಾರಕ್ಕೆ ಅರ್ಜಿಗೆ ಸೇರಿದವರು ಸಹೋದರಿಯರು ಈ ಯುವತಿಯರೂ ಮತ್ತು ಒಬ್ಬ ಯೂರೋಪಿಯನ್ ದೈವೆ ನಾಶಕನೂ ಬಂಗವಾಸಿ ಎಂಬ ಪತ್ರಿಕೆಯ ಎಡಿಟರಿಗೆ ಮುಖತಃ ಹೇಳಿದ ಅಂಶ ಈ ಮೊಕದ್ದಮೆಯನ್ನು ಬರದ್ವಾನ್ ಮ್ಯಾಜಿಸ್ಟ್ರೇಟರು ವಿಚಾರಿಸುತಲಿದಾರೆ.

NOTICE.

—

VAIDYASARA SANGRAHA.

A TREATISE ON THE PRINCIPLES OF

HINDU MEDICINE

Price, including Postage Rs 5-0-0.

ವೈದ್ಯಸಾರಸಂಗ್ರಹ.

ಇದು ಚರಕ, ವಾಗ್ಭಟ, ಸುಶ್ರುತ, ಶಾರ್ಙ್ಗಧರಾದ್ಯನೇಕ ಪೂರ್ವಗ್ರಂಥಗಳ ಸಂಗ್ರಹ ರೂಪವಾಗಿರುತಿದೆ.

ಅದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಹಾಸಲ್ ದಪಾ ಪ್ರತಿ ೧ಕ್ಕೆ ೫—೦—೦

ಬೇಕಾದವರು ಬೆಂಗಳೂರು ಕರ್ನಾಟಕ ಪ್ರೆಸ್ ಪ್ರೊಪ್ರೈಟರವರಿಗೆ ಬರೆದು ತರಿಸಿಕೊಳ್ಳಬಹುದು

V. IYANOR'S
PREPARATIONS.
ವಿ. ಅಯನಾರ್ ಎಂಬವರಿಂದ ತಯಾರುಮಾಡಲ್ಪಟ್ಟ
ಪ್ರಸಿದ್ಧ ಔಷಧಗಳು.

ಕಲಿ ಕಡಿಸ್ಪ್ರಾಯರ್—ಇದು ಹೊಟ್ಟೆನೂರಿ, ಅತೀಸಾರ, ಕರುಳು ನೋವು, ವಾಂತಿಭೇದಿ, ಅಜೀರ್ಣಭೇದಿ, ಮೇಲುಕಡತ, ಕೆಮ್ಮು, ಮೂತ್ರತಡೆ, ಬಾಯಿಹುಣ್ಣು, ರಕ್ತಸ್ರಾವ, ಆರ್ತವ ದೋಷಜನ್ಯಗಳಾದ ಸ್ತ್ರೀಯರ ಉಪಾಧಿಗಳು, ತಲೆನೋವು, ದಂತಶೂಲೆ, ಗಾಯ ಮೊದಲಾದವುಗಳಿಗೆ ಬಹಳ ಉಪಯುಕ್ತವಾದದ್ದು ಇದರ ಕ್ರಯ ದೊಡ್ಡಶೀಷೆ ೧ಕ್ಕೆ ೧ ರೂ ಸಣ್ಣಶೀಷೆ ೧ಕ್ಕೆ ೮ ಆಣೆ.

ವಾತ್ಸ ವಾಯು ತೈಲ—ವಿಷೂಚಕಾಲಿಕ ನೋವು, ಪಕ್ಕಶೂಲೆ, ಗೆಂಟುನೋವು, ತಲೆಶೂಲೆ ಇವು ಪರಿಹಾರವಾಗುವದು, ಇದರ ಕ್ರಯ ದೊಡ್ಡಶೀಷೆ ೧ಕ್ಕೆ ೧ ರೂ ಸಣ್ಣ ಶೀಷೆ ೧ಕ್ಕೆ ೮ ಆಣೆ.

ಜ್ವರದ ಪ್ರತಿ—ಇದು ಎಲ್ಲಾ ಜ್ವರವನ್ನಾದರೂ ಎರಡು ದಿವಸಗಳೊಳಗಾಗಿ ನಿವೃತ್ತಿ ಮಾಡತಕ್ಕದ್ದು ದೊಡ್ಡಶೀಷೆ ೧ಕ್ಕೆ ೧ ರೂ ಸಣ್ಣಶೀಷೆ ೧ಕ್ಕೆ ೮ ಆಣೆ

ಓಮಕರ್ಪೂರ ಕೋರಿ—ಇದು ಶೀತಭೇದಿ, ರಕ್ತಭೇದಿ ರಜಸ್ಸಲೆಯರಿಗುಂಟಾಗುವ ಉಪಾಧಿ, ಎದೆನೋವು, ಹೊಟ್ಟೆನೋವು ಇವುಗಳಿಗೆ ಬಹಳ ಪ್ರಯೋಜನಕರವಾದದ್ದು ಇದರ ಕ್ರಯ ದೊಡ್ಡಶೀಷೆ ೧ಕ್ಕೆ ೧ರೂ ಸಣ್ಣಶೀಷೆ ೧ಕ್ಕೆ ೮ಆಣೆ

ಮೇಹವಾಯು ಎಣ್ಣೆ—ಇದು ಮೇಹವಾಯುವಿನಿಂದ ಶರೀರವು ಉಬ್ಬುವದ, ಚರ್ಮವು ಒಡೆಯುವದು, ಗಂಟಲು ತಲೆನೋವು, ಸ್ರಾಯುಗಳು ಇವುಗಳೆಲ್ಲ ಬಹಳ ಉಪಯುಕ್ತವಾದದ್ದು ಇದರ ಕ್ರಯ ದೊಡ್ಡಶೀಷೆ ೧ಕ್ಕೆ ೧ರೂ. ಸಣ್ಣಶೀಷೆ ೧ಕ್ಕೆ ೮ ಆಣೆ

ಪ್ಯಾರಾಕ್ಸಿಸೊಲಿವು—ಇದು ನರವು ನೋವು, ಕೀಲುನೋವು, ಪಾರ್ಶ್ವನೋವು, ಅರತಲೆನೋವು, ಜಿಡ್ಡುಗಡ್ಡೆ ಇವುಗಳಿಗೆ ಪ್ರಸಿದ್ಧವಾದ ತೈಲವು ದೊಡ್ಡ ಡಬ್ಬಿ ೧ಕ್ಕೆ ೧ ರೂ, ಸಣ್ಣ ಡಬ್ಬಿ ೧ಕ್ಕೆ ೮ ಆಣೆ

ಶ್ವೇತಕುಷ್ಠೌಷಧ—ಇದು ಸಕಲವಿಧ ಚರ್ಮರೋಗಗಳಿಂದ ಜನಿಸುವ ಬಿಳುಪು, ಸುರಾ ಪಕ್ಕೆರೆ ಸ್ತ್ರೀಯರಿಗುಂಟಾದ ದುಷ್ಟಾರ್ತವಗಳಿಗೆಲ್ಲ ಶೀಘ್ರವಾಗಿಯೂ, ಪುನಃ ಎಂದಿಗೂ ಬಾರದಂತೆ ನಿರ್ಮೂಲನೆ ಮಾಡಿಯೂ ಗುಣಪಡಿಸತಕ್ಕಂತಾ ಔಷಧ ಇದರ ಕ್ರಯ ಶೀಷೆ ೧ಕ್ಕೆ ೧ ರೂ ೮ ಆಣೆ.

ಕೂದಲು ನರೆಯದ ಕೇಶ್ಯ ತೈಲೌಷಧ—ಈ ತೈಲವು ನರೆತ ಕೂದಲುಗಳನ್ನು ಕಪ್ಪಾಗಿಮಾಡುವದು. ಕೂದಲು ಬೆಳೆಯದವರ್ಗಳಿಗೆ ಕಟ್ಟಿ ಬೆಳೆಯುವದು ಇದನ್ನು ತಲೆಗೆ ಹಚ್ಚಿಕೊಂಡು ಸ್ನಾನಮಾಡಬಹುದು ಮತ್ತು ಸುವಾಸನೆಯುಳ್ಳದ್ದಾಗಿರುತ್ತದೆ ಇದರಕ್ರಯ ಶೀಷೆ ೧ಕ್ಕೆ ೧ ರೂ

ಕರ್ಣರೋಗಕ್ಕೆ ತೈಲ—ಈ ತೈಲವು ಆಗಾಗ ಕಿವಿಯಲ್ಲಿ ಕೀವು ಸೋರುತ್ತಿದ್ದರೆ, ಕಿವಿಯೊಳಗೆ ಶಬ್ದ ಮೊದಲಾದ ವ್ಯಾಧಿಗಳನ್ನು ಪರಿಹರಿಸುವುದು ಇದರ ಕ್ರಯ ೧ ರೂಪಾಯಿ

ವಿಷಶ್ವಾಸಕ್ಕೆ ಔಷಧ—ಈ ಔಷಧವು ಎಂತ ವ್ಯಾಧಿಯಿಂದ ಬಾಧಿಸಲ್ಪಡುವವರ ಕೆಟ್ಟ ರೋಗಶಮನವನ್ನು ಗಟ್ಟಿ ಮಾಡಿ ದೇಹಕ್ಕೆ ಬಲ ಬರುವಂತೆ ಮಾಡುವದು ಒದ್ದಾಗಿ ಜಲ್ಲದ್ದರಲ್ಲಿ ಹೆಚ್ಚಿನ ಮಿಂಚ ವ್ಯಾಧಿಯನ್ನಾದರು ಪರಿಹರಿಸುವದು. ಇದನ್ನು ಕಟ್ಟುಕೊಳುವ ವಿಧಾನ ದಿನಕ್ಕೆ ಎರಡು ದವೆ ಭೋಜನವಾದನಂತರ ೨೦-೩೦ ಬಿಂದು ನೀರಲ್ಲಿ ಕಲಸಿ ತಿನ್ನಬೇಕು ಇದರ ಕ್ರಯ ರೂ ೧

☞ ವಿಳಾಸ—ಒಳ್ಳಾರಿ ಬಜಾರ್ ಸ್ಟ್ರೀಟ್‌ನಲ್ಲಿರುವ ವಿ ಅಯನಾರ್ ಡಿಸ್ಪೆನ್ಸರಿಗೆ ಬರೆದು ತರಿಸಿಕೊಳ್ಳಬಹುದು.

MESSRS V IYANOR & Co's DISPENSARY,
Bellary

ಈ ಕಂಪನಿಯು ಸನ್ ೧೮೯೪ನೆ ಇಸವಿಯಲ್ಲಿ ಸ್ಥಾಪಿಸಲ್ಪಟ್ಟಿತು.

ಜನ್ಮವೆ ಲಾಭವು.

ವಜ್ರಾಂಗ ಖರ್ಜೂರವು.

ಬಲಾರೋಗ್ಯ, ಪುಷ್ಟಿಗಳನ್ನು ಬೆಳೆಸತಕ್ಕ ಉತ್ಪತ್ತಿಯು.

ಅತ್ಯಾಶ್ಚರ್ಯಕರವಾದ ಬಳ್ಳಿಗಳಿಂದ ತೆಗೆಸಿರಿಸಿದ ಈ ಉತ್ಪತ್ತಿಗಳು ಕೊಂಕಣಪ್ರಾಂತದ ಅನೇಕ ವನಸ್ಪತಿಗಳ ಸಾರಗಳ ಪ್ರಭಗಳನ್ನು ಕೊಟ್ಟು, ದೊಡ್ಡದೊಳಗೆ ಮಾಗಿಸಿ, ಒಳ್ಳೇ ಹೆಚ್ಚಿನ ತರಗತಿಯ ಸಕ್ಕರೆಯ ಪಾಕದಲ್ಲಿ ಸಿದ್ಧ ಮಾಡಿರುತ್ತೇವೆ ಈ ಉತ್ಪತ್ತಿಗಳು ಮಹಾ ರುಚಿಯುಳ್ಳದ್ದು, ಒಳ್ಳೇ ರುಚಿಯುಳ್ಳವಿವುಗಳ ಸೇವನೆಯಿಂದ ಕಫ, ವಾತ, ಪಿತ್ತ ಈ ತ್ರಿದೋಷಗಳಿಂದುಂಟಾಗತಕ್ಕ ಯಾವತ್ತು ಬಗೆಯ ವ್ಯಾಧಿಗಳೂ ಹೋಗುತ್ತವೆ ೩೦ ವರ್ಷಗಳ ಪ್ರಾಯವುಳ್ಳ ಮುದುಕರ ಕಾಮವಿಕಾರವ ದಿಯೂ ತರುಣರಾದ ಗಂಡಸರು ತೆ ಪ್ರಜ್ವಲಿತವಾಗುತ್ತದೆ ಜನನೇಂದ್ರಿಯದಲ ಬಲ ವ್ಯಂಟಾಗಿ ನಪುಂಸಕತ್ವವು ಇಲ್ಲದಂತಾಗುತ್ತದೆ ಲಘ್ವಾಯು ಮುಂಚೆ ಅಥವಾ ಹಿಂದೆ ಜರಿದುಹೋಗುವ ಧಾತು ನಿಲ್ಲುತ್ತದೆ. ಸ್ವಪ್ನಾವಸ್ಥೆಯಾಗುವದಿಲ್ಲ ವೀರ್ಯವು ಬೆಳೆದು ವ್ಯಂ ಬಣ್ಣವು ಸುಧಾರಿಸುತ್ತದೆ ಪರವೂ ಹಾಗೂ ಉಷ್ಣಸಂಬಂಧಿಕ ಬೇನೆಗಳೇನೂ ಇಲ್ಲದಂತಾಗಿ ಧಾತು ಪುಷ್ಟವಾಗುತ್ತದೆ ಮೂರು ಹೊತ್ತುಂತರ ಅನ್ನ ಪಚನವಾಗಿ ಒಳ್ಳೇ ಹಸಿವೆಯಾಗುತ್ತದೆ ಹೋಗುವದೊಂದೆ ತಡ ಕೂಡಲೇ ಸ್ವಚ್ಛ ಸೌಚರ್‍ಯಾಗುತ್ತದೆ ಕ್ಷಯ. ಉದರ, ದಮ್ಮು ಈ ರೋಗಗಳು ನಾಶ ಹೊಂದುತ್ತವೆ. ಹೊಸ ಬೇನೆ ಇದ್ದಲ್ಲಿ ೧೧ ದಿವಸಗಳ ವರೆಗೆ ಸಾಲುವ ಒಂದೇ ಡಬ್ಬಿಯಿಂದ ಗುಣವುಂಟಾಗುತ್ತದೆ ಮತ್ತು ಹಳೆಬಿದ್ದಲ್ಲಿ ೪೦ ದಿನಗಳ ಮೇಲೆ ಗುಣ ಬಂದೀತು ೧೧ ದಿನಗಳ ವರೆಗೆ ಸಾಲತಕ್ಕ ೧ ಡಬ್ಬಿಗೆ ೧-೮-೦ ರೂ|| ಒಂದೇವ್ಯಾಕ್ಯ್ತೆ ೪ ಡಬ್ಬಿಗಳು ತಗೊಳ್ಳತಕ್ಕವರಿಗೆ ಒಂದು ಡಬ್ಬಿಯು ಉಚಿತವಾಗಿ ಸಿಕ್ಕೀತು. ಈ ಉತ್ಪತ್ತಿಯಿಂದ ರೋಗಿಗಳು ಸತೇಜರಾಗುತ್ತಾರೆ. ಕರಗಿನ ಹಾಗೂ ಎಲ್ಲಾಂತೆ ಬೇನೆಗಳು ವಾಸಿಯಾಗುತ್ತವೆ ಎಲ್ಲರನ್ನು ಸರಿಯಾಗಿ ಬೇಕೆ ಇಲ್ಲದವರನ್ನಾಗಿಮಾಡಿ ಬಲಾರೋಗ್ಯ ಪುಷ್ಟಿಗಳನ್ನು ಬೆಳೆಸುತ್ತವೆ. ಸಾಹೆಬ ಜನರಲ್ಲಿ ಬಹಳ ಡಬ್ಬಿಗಳು ಖರ್ಚಾಗುತ್ತವೆ ಈ ಔಷಧವು ಈ ಕಂಪನಿಯಹೊರ್ತು ಬೇರೆ ಸ್ಥಳದಲ್ಲಿ ಆಗುವದಿಲ್ಲ ಯಾವತ್ತು ದೇಶಗಳಲ್ಲಿಯು ವೈದ್ಯಶಾಲೆಗಳಿಗಾಗಿ ಕಳುಹಿಸಲ್ಪಡುತ್ತದೆ ಬರೆದು ಬಂದು ಕೂಡಲೆ ಈ ಕಂಪನಿಯು ಬೇಕಾದವರಿಗೆ ಈ ಡಬ್ಬಿಗಳು ಕಳುಹಿಸಿಕೊಟ್ಟೀತು ಅಂಚೆಯ ಹಾಗೂ ವ್ಯಾಲ್ಯು ಪೇಯಿಬಲ್ ವೆಚ್ಚ ಬೇರೆ ಕೊಡಬೇಕು (ಉಚಿತ ಡಬ್ಬಿ ಸಹ ೫ ಡಬ್ಬಿಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬಿಯಾದ್ದು ಎಲ್ಲಾ ಖರ್ಚಿನ ಹಾಕಿ ರವಾನಿಸುವೆವು, ಹೀಗೆ ಕಳುಹಿಸಿದರೆ ಟಪ್ಪಾಲ್ ಖರ್ಚು ಕಡಮೆ ಬೀಳುವದು)

ಮೇಲ್ವಿಳಾಸ—ಪಿ ಎಚ್ ಎ. ಬ್ರದರ್ಸ್ ಮತ್ತು ಕಂಪೆನಿ,

ಫಸ್ಟ ಇಂಗ್ಲಿಷ್ ಬ್ಯಾಂಕ್ ಆಫೀಸ್, ಡಿಸ್ಟ್ರಿಕ್ಟ್ ಬೆಳಗಾಂವ.

ಪೋಸ್ಟ್—ಬೆಳಗಾಂವ. Post BELGAUM.

ADVERTISEMENT.

ನೋಟೀಸು.

ಸಕರೆ ಪಟ್ಟಣದ ನಿವಾಸಿ ಜಮೀನ್ದಾರ್ ತೋಪೇಗೌಡನಿಂದ—ನನ್ನ ಮಕ್ಕಳು ೫ ಜನಗಳ ಪೈಕಿ ೨ನೇ ಕೆಂಚೆ, ೩ನೇ ಭೂತ ಇವರು ನನ್ನ ಆಜ್ಞೆಯಿಲ್ಲದೆ ಮನೆ ಬಿಟ್ಟು ಹೊರಗೆ ಹೋಗಿದಾರೆ. ಅವರುಗಳು ನನ್ನಬಾಬತು ಸ್ಥಿರ ಚರ ಸ್ವತ್ತನ್ನು ನನ್ನ ಅನುಮತಿ ಇಲ್ಲದೆ ಇತರರಿಗೆ ಕ್ರಯವಿಕ್ರಯ ಮಾಡಿದರೆ ಅವರುಗಳು ಕಳವಿನ ತಕ್ಸೀರಿಗೂ, ತೆಗೆದುಕೊಂಡವರು ಕಳವುಮಾಲ್ ತೆಗೆದುಕೊಂಡ ತಪ್ಪಿತಕ್ಕೂ ಗುರಿಯಾಗಬೇಕು. ಮತ್ತು ನನ್ನಮಕ್ಕಳೆಂಬ ಗೌರವದಮೇಲೆ ನನ್ನ ಅನುಮತಿ ಇಲ್ಲದೆ ಸಾಲಸೋಲ ಕೊಟ್ಟರೆ ಅದಕ್ಕೆ ನಾನಾಗಲಿ, ನನ್ನ ಹಿಂದಿಗಿಯಾಗಲಿ ಜವಾಬ್ದಾರಿ ಆಗುವದಿಲ್ಲ, ಯೆಂದು ಇದರಿಂದ ಸರ್ವರಿಗೂ ಪ್ರಸಿದ್ಧ ಪಡಿಸಿದೇನೆ.

ತೋಪೇಗೌಡ,
ಜಮೀನ್ದಾರ್, ಸಕರೆಪಟ್ಟಣ.

BANGALORE —Printed and Published at the KARNATAKA PRESS, No 40, HOSPITAL ROAD, CITY,—1897

THE

Karnataka Prakasika.

ಪ್ರತಿಸಂಚಿಕೆ ಬೆಲೆ } ಮೊದಲನೆಯದಕ್ಕೆ ಪತ್ರಿಕೆ ಒಂದಕ್ಕೆ 0 2 0
} ಎರಡನೆಯದಕ್ಕೆ ಪತ್ರಿಕೆ ಒಂದಕ್ಕೆ 0 1 0

ಕರ್ನಾಟಕ ಪ್ರಕಾಶಿಕಾ.

Published Every Monday Morning

ಚಂದಾದರಗಳು.—ಸ್ಥಳದವರಿಗೆ ಪರಸ್ಥಳದವರಿಗೆ, ಪೋಸ್ಟೇಜ್ ಸಹ
ವರ್ಷ 1 ಕ್ಕೆ .. 3 0 0 | ವರ್ಷ 1 ಕ್ಕೆ .. 4 0 0
6 ತಿಂಗಳಿಗೆ .. 2 0 0 | 6 ತಿಂಗಳಿಗೆ . 2 8 0
3 ತಿಂಗಳಿಗೆ .. 1 4 0 | 3 ತಿಂಗಳಿಗೆ 1 0 0

Vol. XXIV. BANGALORE:—MONDAY, AUGUST 9, 1897. No. 32.

Southern Mahratta Railway Company, (Ld).

NOTICE

It is hereby notified that 24 bags of coffee bearing private marks 47/ were found amongst property belonging to the Railway Company on the premises of the Gadag Contractor Koosnoor Venkata Rao working in connection with the S. M. Railway at Chikmagalur after he absconded in January last, and that if any person other than the Contractor is entitled to claim these bags he should present to the undersigned an injunction from a competent Court of Law requiring the said bags of coffee to be delivered to him before the 25th instant, failing which the said coffee will be sold on that date by Public Auction at Bangalore and the proceeds held against claims for which the said Koosnoor Venkata Rao may have rendered the Railway liable.

DHARWAR } J. McCROUDIE
3rd August 1897 } Ag. Tfc Manager

Select Telegrams

London 31st July.—The *Times* states that the Ambassadors have been instructed to adhere to the German proposal for foreign control of Greek finances.

London 1st Aug.—Four hundred Welsh Fusiliers have left Malta for Crete.

London 3rd Aug.—Advices from Athens state that the Greek Foreign Minister has declared that King George is prepared to abdicate in the event of the Powers deciding upon European control of the Greek finances.

London 4th Aug.—The Conference at Constantinople has agreed to all the articles of the Treaty of Peace, except the one referring to the evacuation of Thessaly.

The intention of King George to abdicate is denied.

The King of Siam gave audience to Lord Salisbury to-day.

A long private conference took place.

The King of Siam last night paid a visit to Parliament and listened to a debate in the House of Lords, His Majesty sitting in a gilt chair within the railings of the throne.

London 5th Aug.—The King of Siam yesterday witnessed yacht racing at Cowes on board the royal yacht *Alberta* where he was received by the Prince of Wales and the Duke of York, the ships and the forts at the same time saluting.

His Majesty lunched with the Queen at Osborne, and returned to London in the evening.

London, 5th Aug.—The foreign Admirals will forcibly oppose any attempt on the part of the Turkish squadron to enter Cretan waters.

According to the Turkish newspapers the squadron has only gone out for naval evolutions in the Archipelago.

The Emperor William, accompanied by the Empress, Prince Hohenlohe and Count von Bulow has started for Russia.

POONA AFFAIRS

Bombay, 31st July

The trial of Mr. Tilak before the Magistrate is the subject of talk everywhere. Long before 2 P. M. every corner of the premises of the Court house was thronged with spectators. A number of Police Constables were posted in different places to preserve silence. The Hon'ble Mr. Tilak and Mr. Bal, the printer, were brought before the Magistrate. The Magistrate recorded more formal evidence and said that he would commit the case to the Sessions. The case will be taken up again on Monday. When the case was adjourned, Counsel for Mr. Tilak renewed his application for bail and offered 2 lakhs of rupees. The Magistrate refused to grant bail. It is said that the leading Barristers have refused to accept a brief for Mr. Tilak.

The case of Natu brothers is the absorbing subject of talk. Rumours are spread that they have been further removed from Thana and Ahmedabad. It is rumoured that both of them will be removed from the Presidency of Bombay. The Bombay Government has made some provision for the maintenance of the wives and the children of the Natu brothers.

The Hon'ble Mr. Tilak has been removed from the House of Correction to the Common Jail. His legal advisers and friends are allowed access to him, and his food is sent to him by the Hon. Mr. Khare.

Bombay 2nd Aug

The *Times of India's* Calcutta Correspondent states that a Bengal Jagirdar is offering fifty thousand rupees for the defence. A rich Bombay Bhattia is reported to offer five thousand.

Bombay 3rd Aug

Hon'ble Mr. Tilak was committed to the Sessions, his Counsel Mr. Davar reserving the defence.

Bombay 3rd Aug

Yesterday evening Professor Gokhale posted to His Excellency the Governor "a full statement containing his explanation, a full retractation and unqualified apology."

Poona 3rd Aug

Mr. Kelkar was also committed.

Bombay, 4th Aug

Mr. Tilak was bailed. The Court was packed. The motion before the Hon'ble Mr. Justice Budrudin Tyebji began at 3 P. M., and lasted till 5 P. M. Mr. Davar opened the case stating its nature and referred to previous applications. He read Mr. Bhashankar's affidavit, and Tuesday's *Times*. He urged that imprisoning accused prejudiced defence; instructions and communications by the Jailors presence and referred to the *Bangabasi* case wherein accused was released on bail, though that case was stronger than the present one. The evidence against his client was, he said, meagre. The complainant, the Mahomed interpreter, read at this stage the original articles. Counsel urged that the articles were innocent and that the accused repudiated the construction put on them by the prosecution. He said bail was ready for any reasonable amount, not prohibitive, and that Courts always release accused except in cases of murder and treason. The only test in such cases was the probabilities of the appearance of the accused, and the Court must presume accused innocent. His interests, he said, demanded his release as otherwise fair fight was impossible.

Mr. Lang, the Advocate General, opposed the motion saying that English cases were the only guide, the important question being irrelevant as the Jail rules give facilities. The Judge's discretion is limited by the nature of the offence, sentence and probable conviction. He said that ample evidence was there, and it was impossible for defence to produce evidence to show that the articles were not seditious.

Mr. Davar disposed of the cases cited by the other side and insisted that *Bangabasi* case was the only guide.

The Hon'ble Mr. Justice Tyabji then gave a learned judgment on bail law stating that it was intended for securing accused's attendance. Jurisprudence presumes accused's innocence until trial; imprisonment prevents its scarring only non-appearance. He said the accused's appearance was absolutely morally certain. Though the offence charged was serious, punishment was however alternative transportation or three years' imprisonment. In granting bail he gives no positive opinion as that would embarrass the trying Judge and Jury. He opined that the articles complained of were not such as would bring certain conviction. Keeping accused in jail *prima facie* hampers the defence. Releasing on bail will not endanger justice, and he ordered his release on his furnishing Rs 50,000 on his personal cognizance and two sureties of Rs 25,000 each.

THE Karnataka Prakasika.

MONDAY, AUGUST 9, 1897

THE VERNACULAR PRESS.

It has been given out that the Government is intent on passing a law to curb the press, or it may be, only the Vernacular press. There may be no truth in the rumour, but it is also possible that there may be. From the action taken by the authorities in Bombay it would not astonish any one if they thought proper to pass a repressive Act as regards the Vernacular press. Hints have been thrown out that such will be the case, and most certainly events seem to point in that direction. The Government seems to think that something should be done to bring the press in question more under subjection, and a stringent Act may be the outcome. It must be acknowledged that some of the Vernacular papers have gone astray. They have sent forth matter that was objectionable, but still we hold an Act of the kind is not required. The law is sufficient, or if it is not, it might be made so. Change it, strengthen it if it cannot now cope with the difficulties of the situation, but do not pass a special Act to keep it down. Then the innocent would be punished with the guilty. The papers that never gave forth sedition, never wrote anything but what would be for the good of the country, would be punished with those that had sent forth what might be inflammable and evil. Surely this is a policy that ought to be pursued. Surely the Government ought not to be guilty of doing injustice in this way. Besides, such an Act would do far more harm than good. It would cause much disaffection among many classes. Of this we may be certain. It may be remembered that Lord Lytton, when Governor General, passed an Act for the repression of the Vernacular press, and no proceeding of his term of office did him more injury than this. The matter was carried out very quietly, with little or no discussion, and the country knew nothing about it till it had become law. The damage caused to the Viceroy by this proceeding was very great. He never recovered from it, and the mess he made with regard to the war in Afghanistan completely ruined any reputation that might be left to him. It is well known that one of the first acts of Lord Ripon, when he arrived in India was to abolish the measure, and it is needless to say that this added much to his popularity. It showed that he wished to do just ce to the press, and by this to do justice to the people at large. Other good measures followed this, and since that time the Vernacular press has not again been put under repression. The Bombay Branch of the East India Association has taken up the subject of the Vernacular press, and has republished the documents it then sent forth. One is a Memorial to the Viceroy, Lord Lytton, another a letter to Mr. Gladstone, who spoke against the Act in the House of Commons, and also a Memorial to Lord Ripon, which had the effect of getting the obnoxious measure abolished. The Association has done well in sending forth these papers at the present time, for the arguments used in them apply as well now as they did nineteen years ago. We will give a passage from the Memorial to Lord Lytton.—

"2. Your Memorialists would respectfully submit whether, now that the character and bearing of the said enactment are fully perceived, it would not be by far the most salutary course to repeal the Act altogether, or to entirely suspend its operation, until some special occasion may arise for arming the Executive authorities with extraordinary powers. This latter course would be in accordance with the Irish Peace Preservation Act which was avowedly taken as the pattern or remote precedent for the recent Indian Act—a measure passed with extraordinary precipitancy, and in a manner inconsistent with the grave and deliberate methods considered needful to ensure sound legislation. By a total repeal of this harsh and invidious statute and a frank avowal of the misapprehensions under which it was adopted Your Excellency in Council will earn the lively gratitude of people of this country and restore public confidence in the methods and policy of Indian legislation. The removal from the statute book of this retrograde and repressive measure would be a comforting reaffirmation of confidence in the principles which animated those eminent legislators, Metcalfe and Macaulay, and would be in accord with the sage counsel just given by those distinguished and experienced Indian Administrators, Sir Erskine Perry and Sir William Muir, as well as by Col. Yule."

If in the face of this the Government of Lord Elgin should insist on passing a repressive measure it will deserve all the reprobation that can be heaped upon it. It is to be hoped that the Viceroy and his advisers will not do anything so foolish as to pass a proceeding of the kind.

But it ought to be remembered that in a portion of India that is in the portion

over which Political Officers have rule, the press is gagged For instance the press of the Civil and Military Station is not free A license has to be obtained before a paper can be brought into existence, and at any time the Resident, with out giving any reason, can stop it from being printed In order to show that this can be done we herewith give the Notification in question —

Under instructions from the Governor General in Council contained in Foreign Department Notification No 2051-I, dated the 25 h June 1891, the Resident in Mysore has passed the following orders —

1. No newspaper or other printed work, whether periodical, or other, containing public news or comments upon public news, shall, without the written permission for the time being in force of the Resident in Mysore, be edited printed or published after the first day of August, 1891 in the Civil and Military Station of Bangalore.

2 If after the day aforesaid any person shall, without such permission as aforesaid edit, print or publish any such newspaper or other work as aforesaid in the Civil and Military Station of Bangalore the Resident in Mysore may by order in writing,—

(a) require him to leave the Civil and Military Station of Bangalore within seven days from the date of such order, and,

(b) prohibit him from re-entering the Civil and Military Station of Bangalore without the written permission of the Resident in Mysore

3 If any such order as is mentioned in the last foregoing paragraph be disobeyed the offender shall be liable to forcible expulsion from the Civil and Military Station of Bangalore in pursuance of an order to be made in writing by the Resident in Mysore

4 Any written permission granted by the Resident in Mysore for the editing, printing or publishing of any such newspaper or other work as aforesaid may at any time be withdrawn by the Resident in Mysore or any of his successors in office

By Order,

CHAS W RAVENSHAW CASTLIN
Assistant to the Resident in Mysore

Bangalore }
Dated 9th July 1891 }

From this it will be seen that the gag has been placed upon a portion of the press of India, and that without an Act being passed at all The Notification was passed by the Governor General himself, and, as we all know, this has all the force of law The measure was totally uncalled for The press in the several districts was not seditious, it did not set itself against the Government, it was as well conducted as in any other part of the country But while the East India Association of Bombay protests against the enactment of a press law it should also protest against the law now in force in the districts over which Political officers have rule It may be that the Government may extend the regulation now in force in this and other stations to all India if a strong protest is not made, and this should be commenced against the measure now that was enacted six years ago

News and Notes

THE Maharaja of Kolhapore, it is reported has resolved to give Rs 30 000 as ragai to the ryots in his State

WE are glad to learn from our Bombay Correspondent that there is absolutely no foundation for the rumour that European Barristers refuse to take Mr Tilak's brief

IN the House of Commons Mr Wedderburn explained that, in view of Mr Gokhale's withdrawal of his statements, he begged to express his deep regret that he had aided in giving currency to unfounded charges against British soldiers in Poona

THE *Pioneer* doubts whether the Advocate General of Calcutta will consider it quite within the bounds of professional etiquette to give an opinion in the matter of the Governor's Municipal tax after the decided pronouncement of his colleague at Madras

THE king of Siam arrived at Portsmouth at London on 31st July He was received with a royal salute from the warships and was welcomed by the Duke of York on Board the royal yacht

On arrival in London, His Majesty was received by the Duke of Cambridge, and a guard-of-honour was at the station whence he was escorted by troops of Life Guards to Buckingham Palace

The King of Siam yesterday drove to Harrow, and visited his son and nephew

THE Hindu woman's picturesque *sari* says the *Hindu Patriot*, has found at least one appreciative admirer in the highest circles in England At the Duchess of Devonshire's Fancy Dress Ball, Miss Balfour, sister of the Leader of the House of Commons, appeared in the dress of a Hindu lady After this, the triumph of the sari cannot be too far off It is certainly more adapted to set off to the highest advantage the charms of the 'human form divine' than the cumbrous millinery of the West which so effectually serves to conceal the shape of the form

Local and Provincial

THE POLICE SPORTS — Which were to have come off on the 6th have been adjourned to the 18th of this month

THE POLO TOURNAMENT — This annual event begins this afternoon The sport is expected to be very good

THE RACES —Commenced last Thursday, and will be concluded on Thursday next The event has been up to the mark

THE WEATHER —We have not had much rain of late, and the ground is beginning to look very dry More rain is required and it to be hoped it will soon come down

ASSISTANT TUTOR TO H H MAHARAJA —Mr M A Narayanaiengar B A, B L, Munsiff of Yedahally, has been appointed to act for Mr. P Raghavendra Rao, who is now on leave for two months —M H

The one month's leave on private affairs granted to C Rajagopalacharlu, Amildar of the Nelamangala taluk, in Notification No 246—R F 37 96, dated the 8th July 1897, is hereby extended by another month

FIXED FEES FOR ADVOCATES AND PLEADERS —The long wished for Rules, for regulating the fees of Advocates and Pleaders for conducting cases, have, we are informed, been sanctioned by the Government of Mysore —D P

A RUMOUR —A rumour is current in influential quarters that Mr M O Parthasarathy Iyengar M A, M L Judge of the Small Cause Court, Madras, will be taken to the Mysore Chief Court, as one of the puisne judges —M H

MILITARY CHANGES —We understand that the Lieutt Col Desraj Ars will be made Commandant of the Mysore Troops, and that Major R. G Jones, Military Assistant to the Mysore Government Under this proposed arrangement the designation of the Military Secretary will be done away with —M H.

HOSPITAL NURSING SISTERS —The Durbar has recently sanctioned that the pay of three nurses employed in the Mysore Hospital be raised from 40 to 50 rupees per month, and that two who were working gratis for some years be entertained on monthly salary of 40 rupees, owing to the present high price of provisions and cost of living —D P.

Under Article 188 of the Mysore Service Regulations, M Rangunatha Rao, Deputy Amildar of the Harihar sub taluk, Chital drug district, is granted privilege leave of absence for twenty five days, with effect from the 2nd August 1897, or such other date as he may avail himself of the same.

2 B S Venkatesaiya, Head Accountant, Deputy Commissioner's office, Chital drug, is appointed to act as Deputy Amildar and 3rd Class Magistrate of the Harihar sub taluk during the absence of Ranganatha Rao on leave or until further orders

NOTICE

ಕಳೆದ ತಿಂಗಳ ೩೧ನೇ ತಾರೀಖಿನಲ್ಲಿ ನಮ್ಮ ಚಂದಾದಾರರನ್ನೇಕರಿಗೆ ತಪಾಲ್ ಮೂಲಕ ನಾವು ತಿಳಿಸಿದ ಪ್ರಾರ್ಥನೆಗೆ ಇಬ್ಬರು ಮೂವರು ವಿನಾ ಮಿಕ್ಕವರೆಲ್ಲರು ಇದುವರೆಗೆ ಅವಧಾನ ಕೊಡದೆ ಇರುವದಂ ಆಲೋಚಿಸಿ ನಮಗುಂಟಾದ ಆಶ್ಚರ್ಯಕ್ಕೆ ಪಾರವೇ ಇಲ್ಲವಾಯಿತು ಇಂತಪ್ಪಬಿದಾಸೀನ್ಯವು ಉಚಿತವಾಗಿ ಕಾಣಬರದುದುದರಿಂದ ಅದನ್ನು ತಡಮಾಡದೆ ನೆರವೇರಿಸುತ್ತೀವೆ

ಪ್ರೊಪ್ರೈಟರ್

ಕರ್ಣಾಟಕ ಪ್ರಕಾಶಿಕಾ.

೧೮೯೭ನೇ ಇಸವಿ ಆಗಸ್ಟು ತಾ॥ ೯ನೇ ಸೋಮವಾರ

ಜಾಮೀನ್‌ಮೇಲೆ ಆನರೆಬಲ್ ಮ॥ ತಿಲಕ್‌ರವರ ಖುಲಾಸೆ

ಪುಣೆಯಲ್ಲಿ ಪ್ರಕಟಿಸಲ್ಪಡುವ ಮರಾಟ ಮತ್ತು ಕೇಸರಿ ಎಂಬ ಪತ್ರಿಕೆಗಳ ಎಡಿಟರ್ ಮತ್ತು ಪ್ರೊಪ್ರೈಟರಾದ ಆನರೆಬಲ್ ಮಿಸ್ಟರ್ ತಿಲಕ್ ಎಂಬವರ, ಮೇಲಿನ ಪತ್ರಿಕೆಗಳಲ್ಲಿ ಅವರು ಪ್ರಕಟಿಸುತಬಂದ ಲೇಖನಗಳ ಮೂಲಕ ಪ್ರಜೆಗಳಿಗೆ ಗವರ್ನಮೆಂಟಿನವರಲ್ಲ ಇರತಕ್ಕ ರಾಜಭಕ್ತಿ ಗೌರವಗಳಿಗೆ ಹಾನಿಯನ್ನುಂಟುಮಾಡಿ, ಅವರನ್ನು ಕುಪ್ರವರ್ತಕರನ್ನಾಗಿ ಮಾಡಿರುತಬಂದರೆಂಬ ದೋಷವಂ ಅವರಮೇಲೆ ಆರೋಪಿಸಿ, ಮುಂಬೈ ಗವರ್ನಮೆಂಟಿನವರು ಅವರು ದಸ್ತಗಿರಿಯಿಂದ ಟ್ರೈಯಲ್ಗೆ ಬಿಡಿಸಿದ್ದುದನ್ನೂ, ಮ್ಯಾಜಿಸ್ಟ್ರೇಟರು ಜಾಮೀನ್‌ಮೇಲೆ ಅವರನ್ನು ಖುಲಾಸೆ ಮಾಡುವದಕ್ಕಾಗುವದಿಲ್ಲವೆಂದು ಹೇಳಿದ್ದನ್ನೂ ಹಿಂದಿನ ಪತ್ರಿಕೆಯಮೂಲಕ ತಿಳಿಸಿರುತ್ತೇವಷ್ಟೆ ಈ ವಿಷಯವು ಮುಂಬೈ ಹೈಕೋರ್ಟಿನಲ್ಲಿ ಅಪೀಲಾಗಿ ಈ ತಿಂಗಳ ೩ನೇ ತಾರೀಖಿನ ಮಧ್ಯಾಹ್ನ ೩ರ ಮೂರು ಘಂಟೆಗೆ ಹಾನರೆಬಲ್ ಮಿ ಬದ್ರುದ್ದೀನ್ ತಯಾಬ್ಜಿಯವರ ಮುಂದೆ ವಿಚಾರಣೆಗೆ ಪ್ರಾರಂಭವಾಗಿ ಐದು ಘಂಟೆಯವರೆಗೆ ನಡೆಯಿತು ಕೋರ್ಟಿನ ಕಟ್ಟಡದಲ್ಲಿ ಸ್ವಲ್ಪವೂ ಸ್ಥಳವಿಲ್ಲದೆ ಜನಗಳು ತುಂಬಿದ್ದರು ಮ॥ ತಿಲಕ್‌ರವರ ಕಡೆ ಲಾಯರಾದ ಮೆ॥ ದಾವರ್ ಎಂಬವರು ಪ್ರಕೃತ ಮೊಕದ್ದಮೆಯ ಸ್ವರೂಪವನ್ನು ತಿಳಿಸಿ, ಅಪರಾಧಿಯನ್ನು ಟ್ರೈಯಲ್ಗೆ ಬಿಡಿಸಿರುವದರಿಂದ ಅವರ ಪ್ರತಿವಾದಕ್ಕೆ ಆವಶ್ಯಕಗಳಾದ ಅಂಶಗಳಂ ಜ್ಯೂರರ ಸಮಕ್ಷಮದಲ್ಲಿ ತಿಳಿದುಕೊಳ್ಳಬೇಕಾಗಿರುವದರಿಂದ ಅದು ಬಾಧಕವಾಗಿರುವದೆಂತಲೂ, ವಂಗವಾಸಿ ಎಂಬ ಪತ್ರಿಕೆಯ ಎಡಿಟರಮೇಲೆ ತರಲ್ಪಟ್ಟ ಮೊಕದ್ದಮೆಯು ಪ್ರಸಕ್ತ ಮೊಕದ್ದಮೆಗಿಂತಲು ಬಲಿಷ್ಠವಾದುದಾಗಿದ್ದರು ಅದರಲ್ಲಿ ಅಪರಾಧಿಯು ಜಾಮೀನ್‌ಮೇಲೆ ಖುಲಾಸೆ ಮಾಡಲ್ಪಟ್ಟರೆಂತಲೂ, ಪ್ರಸಕ್ತ ಮೊಕದ್ದಮೆಯಲ್ಲಿ ತಮ್ಮ ಕಕ್ಷಿಗಾರರಮೇಲೆ ರುಜುವಾತು ಒಳ್ಳೆ ಜವಾಬುದೆಂತಲೂ ತಿಳಿಸಿದರು. ಏತನ್ಮಧ್ಯೆ ಬಿರ್ದ್ಯಾದಿಯಾದ ಮಹಮ್ಮದ್ ಇಂಟರ್‌ಪ್ರಿಟರು ಮೆ॥ ತಿಲಕ್‌ರವರು ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸಿದ ಲೇಖನಗಳನ್ನು ಓದಿದರು. ಅದನ್ನು ಕೇಳಿ, ಫಿರ್ಯಾದಿಗಳು ಸದರೀ ಲೇಖನಗಳಿಗೆ ಮಾಡುವ ಅರ್ಥವು ಸುತರಾಂ ಸರಿಯಾದುದಲ್ಲವೆಂತಲೂ, ಅವುಗಳಲ್ಲಿ ಅಪರಾಧ ಹೇತುವಾದ ಅಂಶಗಳ್ಯಾವವೂ ಇರುವದಿಲ್ಲವೆಂದು ತಮ್ಮ ಕಕ್ಷಿಗಾರರು ನಿಗ್ರಹಿಸುವದಾಗಿಯೂ ತಿಳಿಸಿ, ಖೂನಿ ಮತ್ತು ರಾಜದ್ರೋಹ, ಈ ಎರಡರಲ್ಲಿ ವಿನಾ ಮಿಕ್ಕ ಮೊಕದ್ದಮೆಗಳಲ್ಲಿ ಕೋರ್ಟಿನವರು ಅಪರಾಧಿಯನ್ನು ಜಾಮೀನ್‌ಮೇಲೆ ಖುಲಾಸೆ ಮಾಡುವದು ವಾಡಿಕೆಯಾಗಿರುವದರಿಂದ, ಕ್ರಮವಾಗಿ ಕೋರ್ಟಿನವರು ವಿಧಿಸುವ ಮೊತ್ತಕ್ಕೆ ಜಾಮೀನ್ ಕೊಡಲು ತಮ್ಮ ಕಕ್ಷಿಗಾರರು ಸಿದ್ಧರಾಗಿರುವದರಿಂದ ಅದನ್ನಂಗೀಕರಿಸಿ ಅವರಂ ಬಿಡುಗಡೆ ಮಾಡಬೇಕೆಂತಲೂ, ಅವರ ಪ್ರಯೋಜನವಂ ಯೋಚಿಸಿ ಹಾಗೆ ಮಾಡದೆ ಹೋದರೆ ನ್ಯಾಯವಾಗಿ ಮೊಕದ್ದಮೆಯನ್ನು ನಡೆಸುವದಕ್ಕಾಗುವದಿಲ್ಲವೆಂತಲೂ ತಿಳಿಸಿದರು. ಅದರಮೇಲೆ ಗವರ್ನಮೆಂಟಿ ತರಫ್ ಅಡ್ವೊಕೇಟ್ ಜನರಲವರು ಎದ್ದುನಿಂತುಕೊಂಡು ಅಪರಾಧಿಯನ್ನು ಖುಲಾಸೆ ಮಾಡಕೂಡದೆಂಬುದಕ್ಕೆ ಸಾಧಕಗಳಾಗಿ ಅವರ ಬುದ್ಧಿಗೆ ತೋರಿಬಂದ ಅನೇಕ ಅಂಶಗಳನ್ನು ಹೇಳಿದರು. ಜಡ್ಜಿಯವರು ಉಭಯವಾದಿಗಳ ವಾದಗಳಂ ಕೇಳಿ ತಿಳಿಸಿದಸ್ವಾಭಿಪ್ರಾಯವೇನೆಂದರೆ- ಜಾಮೀನ್ ವಿಷಯದಲ್ಲಿ ಹುಟ್ಟಿರುವ ಕಾನೂನು, ಅಪರಾಧಿಯನ್ನು ವಿಚಾರಣೆ ಕಾಲದಲ್ಲಿ ಹಾಜರ್ ಪಡಿಸಿಕೊಳ್ಳುವದಕ್ಕಾಗಿ ಉದ್ದೇಶಿಸಲ್ಪಟ್ಟದ್ದು. ವಿಚಾರಣೆ ನಡೆದು ಅಪರಾಧಿಯಮೇಲೆ ತಪ್ಪಿತಸ್ಥಾಪಿತವಾಗುವವರೆಗೆ ಅವನು ನಿರಪರಾಧಿಯೆಂದು ಕ್ರಿಮಿನಲ್ ಜೂರಿಸ್ ಪ್ರುಡೆನ್ಸ್ ಎಂಬ ವ್ಯವಹಾರ ಶಾಸ್ತ್ರದಲ್ಲಿ ತಿಳಿಸಲ್ಪಟ್ಟದೆ ಅಪರಾಧಿಯು ವಿಚಾರಣೆಕಾಲದಲ್ಲಿ ಹಾಜರಾಗುವರೆಂಬ ಮನೋನಿಶ್ಚಯವೇನೆಂಬ ಬಲವತ್ತರವಾಗಿದೆ ಈಗಮಾಡಲ್ಪಟ್ಟಿರುವ ಆಪಾದನೆಯು ಪ್ರಬಲವಾದುದಾಗಿದ್ದರು ಅದಕ್ಕೆ ದಂಡನೆಯು ಯಾವಜ್ಜೀವ ದ್ವೀಪಾಂತರವಾಸ ಅಥವಾ ಮೂರು ವರ್ಷಗಳ ಟ್ರೈಡ್ ಎಂದು ವಿಧಿಸಲ್ಪಟ್ಟದೆ ಈಗ ನಮೂದ್ ಮಾಡಲ್ಪಟ್ಟಿರುವ ಲೇಖನಗಳು ಖಂಡಿತವಾಗಿ ದಂಡನಾರ್ಹವಾದವೆಂದು ನಾನು ಹೇಳಲಾರೆನು ಅಪರಾಧಿಯನ್ನು ಟ್ರೈಯಲ್ಗೆ ಬಿಟ್ಟಿರುವದು ಅತನ ಬಚಾವಿಗೆ ಪ್ರತ್ಯಕ್ಷ ಬಾಧಕವಾಗಿರುತ್ತದೆ ಜಾಮೀನ್‌ಮೇಲೆ ಖುಲಾಸೆ ಮಾಡುವದರಿಂದ ನ್ಯಾಯಕ್ಕೆ ಭಂಗ ಬರಲಾರದು ಆದುದರಿಂದ ಅಪರಾಧಿಯು ಸ್ವಂತದ್ದು ೫೦,೦೦೦ ರೂಪಾಯಿಗಳಿಗೂ, ಶ್ರೀ ಇನ್ನೂ ೨೫,೦೦೦ ರೂಪಾಯಿಗಳಿಗೆ ಬೇರೆ ಇಬ್ಬರಿಂದ ಜಾಮೀನೂ ಹಾಜರಿನ್ನು ಕೊಡುವ ಮೇಲೆ ಖುಲಾಸೇ ಮಾಡಿರುತ್ತೇನೆ, ಎಂಬುದು ಆನರೆಬಲ್ ಬದ್ರುದ್ದೀನ್ ತಯಾಬ್ಜೀಯವರ ನ್ಯಾಯನಿರ್ಣಯ ಮತ್ತು ಸರ್ವಜನ ಸಿದ್ಧ ಸಂತೋಷ ಸದರೀ ತೀರ್ಪನ್ನು ಕೇಳಿದ ಕೂಡಲೇ ಕೋರ್ಟಿನಲ್ಲಿ ನೆರೆದಿದ್ದ ಸರ್ವರೂ ಸಂತುಷ್ಟಮನಸ್ಕರಾಗಿ ಕೋಲಾಹಲಧ್ವನಿ ಮಾಡಿದರು ಮ॥ ತಿಲಕ್‌ರವರು ಹೈಕೋರ್ಟ್ ಸೆಷನ್ ವಿಚಾರಣೆಗೆ ಕಮಿಟ್ ಮಾಡಲ್ಪಟ್ಟರವರಿಂದ ಬರುವ ಸೆಪ್ಟಂಬರ್ ತಿಂಗಳ ಮೊದಲನೇ ವಾರದಲ್ಲಿ ನಡೆಯುವ ಸೆಷನ್ ವಿಚಾರಣೆಯಲ್ಲಿ ಈ ಮೊಕದ್ದಮೆಯು ಪರ್ಯವಸಾನವಂ ಹೊಂದುವದು. ಈ ಅಪೀಲ್‌ಮೊಕದ್ದಮೆಯು ಸದ್ಯಕ್ಕೆ ಮೋಚಿಸುತ ವ್ಯವಸ್ಥೆಯಂ ಹೊಂದಿದಬಗ್ಗೆ ದೇಶಗಳಲ್ಲಿ ಸಂತೋಷ ಪಡದವರು ದುರ್ಲಭರಾಗಿರುವರೆಂದು ನಂಬುತ್ತೇವೆ

ಬರ್ಮಾ ದೇಶಕ್ಕೆ ಪೂರ್ವ ಭಾಗದಲ್ಲಿರುವ ಸೈಯಾಂ ರಾಜ್ಯದ ಅರಸರವರು ಮಹಾರಾಣಿಜ್ಞೀಯವರ ಜೂಬಿಲಿ ಉತ್ಸವಾರ್ಥ ಇಂಗ್ಲಾಂಡಿಗೆ ಹೋಗಿದ್ದರಷ್ಟೆ ಸದರೀ ಅರಸರವರು ರಷ್ಯಾ ಸಂಸ್ಥಾನಕ್ಕೆ ಹೋಗಿದ್ದು ಅಲ್ಲಿನ ಚಕ್ರವರ್ತಿಯವರ ಆತಿಥ್ಯಗಳಂ ಸ್ವೀಕರಿಸಿದ್ದು ರಾಜಕೀಯಗಳಾದ ವಿಷಯಗಳಂ ಕುರಿತು ಮಾತನಾಡಿಕೊಂಡು ಈಗ ಇಂಗ್ಲಾಂಡಿಗೆ ದಯಮಾಡಿರುತ್ತಾರೆ ಇವರು ಸ್ವತಂತ್ರಾಧಿಕಾರವುಳ್ಳವರಾದುದರಿಂದ ಇಂಡ್ಯದೇಶದ ಇತರ ನೇಟಿವ್ ಸಂಸ್ಥಾನಾಧಿಪತಿಗಳನ್ನಪೇಕ್ಷಿಸಿ ವಿಶೇಷ ಗೌರವ ಪುರಸ್ಕಾರಗಳಿಗೆ ಅರ್ಹರಾಗಿರುವದರಿಂದ, ಇವರು ಕಳೆದ ತಿಂಗಳ ೩೦ ನೇ ತಾರೀಖಿನಲ್ಲಿ ಪೋರ್ಟ್ಸ್‌ಮೌತ್ ಎಂಬ ರೇವಿಗೆ ಹೋಗಿ ಸೇರಿದ ಕೂಡಲೆ ಅಲ್ಲಿದ್ದ ಯುದ್ಧನಾವೆಗಳಿಂದ ರಾಜಾರ್ಹವಾದ ತೋಪಿನ ಮರ್ಯಾದೆಯು ನಡೆಸಲ್ಪಟ್ಟದ್ದು ಮಾತ್ರವಲ್ಲದೆ, ಡ್ಯೂಕ್ ಆಫ್ ಯಾರ್ಕ್ ಯವರು ನಾವೆಗೆ ಹೋಗಿ ಸ್ವಾಗತಪೂರ್ವಕ ಅರಸರವರನ್ನು ಬರಮಾಡಿಕೊಂಡರು ಅಲ್ಲಿಂದ ಲಂಡನ್ ಪಟ್ಟಣಕ್ಕೆ ಬಂದಕೂಡಲೆ ಗೌರವಾರ್ಥವಾದ ಪರಿವಾರ ಸೈನ್ಯದೊಡನೆ ಡ್ಯೂಕ್ ಆಫ್ ಕೇಂಬ್ರಿಡ್ಜ್ ರವರು ರೈಲ್ವೆ ಸ್ಟೇಷನ್ನಲ್ಲಿ ಹಾಜರ್ ಅರಸರವರನ್ನು ಬರಮಾಡಿಕೊಂಡು ಉಚಿತ ಮರ್ಯಾದೆಗಳೊಡನೆ ಬಕಿಂಗ್‌ಹಾಂ ಪ್ಯಾಲೆಸ್ ಎಂಬ ಅರಮನೆಗೆ ಕರೆದುಕೊಂಡು ಹೋದರು. ಅದುಮೊದಲು ಅರಸರವರಿಗೆ ರಾಜೋಪಚಾರಗಳು ಕ್ರಮವಾಗಿ ನಡೆಯುತಲಿವೆ ಕಳೆದ ಬುಧವಾರದ ದಿನ ಇಂಗ್ಲಾಂಡ್ ರಾಜ್ಯದ ಪ್ರಧಾನ ಮಂತ್ರಿಯವರಾದ ಲಾರ್ಡ್ ಸಾಲಿಸ್‌ಬರಿ ಸಾಹೇಬರವರಿಗೆ ಭೇಟಿಕೊಟ್ಟು ಬಹಳ ಹೊತ್ತು ಅಂತರಂಗದಲ್ಲಿ ಮಾತನಾಡುತಲಿದ್ದರು ಅದೇದಿನ ರಾತ್ರಿ ಪಾರ್ಲಿಮೆಂಟ್ ಸಭಾಜಕ್ಕೆ ಹೋಗಿ, ಉಚಿತಾಸನದಲ್ಲಿ ಕುಳಿತು ಅಲ್ಲಿ ಒಂದು ವಿಷಯವಂ ಕುರಿತು ನಡೆಯುತಲಿದ್ದ ವಿಚಾರವು ಕೇಳಿಯೂ ಅಲ್ಲಿನ

ಸಂವಿಭಾಗಗಳಂ ವೀಕ್ಷಿಸಿಯೂ ಸಂತುಷ್ಟಮಾನಸ್ಕರಾಗಿ ವಾಪಸಿದಯಮಾಡಿದರು. ಅದೇ ದಿನ ನಾವೆಗಳು ಪರತ್ತನ್ನು ನೋಡುವದಕ್ಕೆ ಹೋಗಿದ್ದಕಾಲದಲ್ಲಿ ಮಹಾರಾಜ್ಞೀಯವರ ಜ್ಯೇಷ್ಠಪುತ್ರರಾದ ಪ್ರಿನ್ಸಾಫ್‌ವೇಲ್ಸರವರಿಂದಲೂ ಡ್ಯೂಕಾಫ್ ಯಾರ್ಕರವರಿಂದಲೂ ರಾಜಾರ್ಹಗಳಾದ ಕೋಫ್ ಮರ್ಯಾದೆಗಳೊಡನೆ ಬರಮಾಡಿಕೊಳ್ಳಲ್ಪಟ್ಟರು. ಆದಿನ ಆಸ್ಬರ್ನ ಅರಮನೆಯೊಳು ರಾಜ್ಞೀಯವರ ಸಜ್ಜೆಯಲ್ಲಿ ಫಲಾಹಾರ ಮಾಡಿಕೊಂಡು ಸಾಯಂಕಾಲ ಲಂಡನ್ ಪಟ್ಟಣಕ್ಕೆ ವಾಪಸ್ ದಯಮಾಡಿದರು.

Occasional Notes.
ನೈಮಿತ್ತಿಕವಿಷಯನ್ಯಾಸ.

ಮೆ॥ ತಿಲಕ್‌ಯವರ ತರಫ ವಕಾಲತ್ತನ್ನಂಗೀಕರಿಸುವದಿಲ್ಲವೆಂದು ಮುಂಬೈಯಲ್ಲಿರುವ ಬ್ಯಾರಿಸ್ಟರ್‌ಗಳೆಲ್ಲರೂ ಏಕಪ್ರಾಗಿ ಹುಟ್ಟಿದ ಬಸ್ತಾಪವನ್ನು ನಿರಾಧಾರವಾದುದೆಂದು ಈವೆಗೆ ತಿಳಿದು ಬಹಳ ಸಂತೋಷಿಸುತ್ತೇವೆ.

ಮೆ॥ ತಿಲಕ್‌ಯವರ ಜಾಮೀನ್ ಘಾಡಿಗೆ ಬಂಗಾಳ ದೇಶದ ಜಹಗೀರದಾರರೊಬ್ಬರು ೫೦,೦೦೦ ರೂಪಾಯಿಗಳೂ, ಮುಂಬೈನಿವಾಸಿಯಾದ ಬಟ್ಟಿಯಾಜಾತಿ ದನಿಕರೊಬ್ಬರು ೫೦,೦೦೦ ರೂಪಾಯಿಗಳೂ ಕೊಡುವದಾಗಿ ಹೇಳಿರುವಂತೆ ಮುಂಬೈ ಟೈಂಸ್ ಪತ್ರಿಕೆ ತಿಳಿಸುತಿದೆ.

ಅದೇ ಬುಧವಾರದ ದಿನ ಮುಂಬೈಯಲ್ಲಿರುವ ವಿಧವಾ ವಿವಾಹ ಸಂಘದವರೊಳು ಇಪ್ಪತ್ತೆರಡು ವರ್ಷಗಳ ವಯಸ್ಸುಳ್ಳ ಪಾಂಚಾಲಜಾತಿ ವಿಧವೆಯೊಬ್ಬಳನ್ನು ಇಪ್ಪತ್ತೆಂಟು ವರ್ಷಗಳ ವಯಸ್ಸುಳ್ಳ ಅದೇ ಜಾತಿಯವನೊಬ್ಬನು ವಿವಾಹ ಮಾಡಿಕೊಂಡನು. ವಿಧವಾ ವಿವಾಹ ಪ್ರೋತ್ಸಾಹಕರಾದ ಕೆಲವರು ಆ ಕಾಲದಲ್ಲಿದ್ದು ಅದು ನೆರವೇರಿಸಿದರು

ಕಲ್ಕತ್ತೆಯಲ್ಲಿ ಬ್ರಹ್ಮಸಮಾಜಕ್ಕೆ ಸೇರಿದ ಹುಡುಗಿಯರಿಬ್ಬರು ಅಲ್ಲಿನ ಯೂನಿವರ್ಸಿಟಿಯ ಪ್ರಥಮ ಪರೀಕ್ಷೆಯಂಕೊಟ್ಟು ತೇರ್ಗಡೆಯಂ ಹೊಂದಲು, ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಅವರು ಮುಂದೆ ವಿದ್ಯಾವ್ಯಾಸಂಗವಂ ನಡೆಸುವದಕ್ಕೆ ಅವಕಾಶ ಕೊಡಲ್ಪಟ್ಟರು. ಹಾಗೆ ಮಾಡುವದರಿಂದ ತಮ್ಮ ಹೆಣ್ಣುಮಕ್ಕಳಿಗೆ ಯುರೋಪಿಯನ್ ಪಂಡಿತರುಗಳಲ್ಲಿ ಓದುವದರಿಂದುಂಟಾಗುವ ಪ್ರಯೋಜನವು ಸಿದ್ಧಿಸುವದೆಂದು ಸದರೀ ಬಂಗಾಳಿ ತಂದೆತಾಯಿಗಳು ಅಭಿಪ್ರಾಯಪಟ್ಟರು.

ಬರ್ಮಾದೇಶದಲ್ಲಿನ ಪ್ರೋಂ ಎಂಬ ಪಟ್ಟಣದಿಂದ ಮುಂಬೈಗೆ ಉತ್ತರ ಸಮುದ್ರ ತೀರದೊಳಿರುವ ಬಾಸೀನ್ ಎಂಬ ಊರಿಗೆ ಒಬ್ಬ ಹೆಂಗಸು ಬಂದಿರುವಂತೆಯೂ, ಅವಳು ಏಳಡಿ ಎತ್ತರವಿರುವಂತೆಯೂ, ಒಂದಾಣೆ ರುಸುಂ ಕೊಟ್ಟು ಅವಳನ್ನು ನೋಡುವದಕ್ಕಾಗಿ ಅನೇಕರು ಬರುತಲಿರುವಂತೆಯೂ, ರಾತ್ರಿ ಕಾಲದೊಳು ಅವಳು ಬೀದಿಯಲ್ಲಿ ಸಂಚರಿಸುವ ಕಾಲದಲ್ಲಿ ಹೊಗೆಸುತ್ತನ್ನು ಮ್ಯೂನಿಸಿಪಲ್ ದೀಪಗಳಿಂದ ಹಚ್ಚಿಕೊಳ್ಳುತ್ತಾಳೆಂತಲೂ ಬರ್ಮಾದೇಶದ ಪತ್ರಿಕೆಯೊಂದು ತಿಳಿಸುತಿದೆ.

ಈಗ ನಡೆಯುತಲಿರುವ ಮದರಾಸು ಹೈಕೋರ್ಟ್ ಸೆಷನ್ ವಿಚಾರಣೆಯಲ್ಲಿ ಚೀಫ್ ಜಸ್ಟಿಸರವರಾದ ಸರ್ ಆರ್ಥರ್ ಕಾಲಿನ್ಸ್ ಸಾಹೇಬರವರು ಕಟಕಟಯಲ್ಲಿ ಖೈದಿಯಾಗಿದ್ದವನ ಕೈಫಿಯತ್ತನ್ನು ನೋಡಬೇಕೆಂದು ಅಪೇಕ್ಷಿಸಿ ಅದನ್ನು ಅವರಕೈಗೆ ಕೊಡಲು ಅದನ್ನು ಅವರು ನೋಡಿ ಅದು ಯಾರಕೈ ಅಕ್ಷರವೆಂದು ಪಬ್ಲಿಕ್ ಪ್ರಾಸಿಕ್ಯೂಟರನ್ನು ಕೇಳಲಾಗಿ, ಟೌನ್ ಪೊಲೀಸ್ ಕೋರ್ಟ ಎರಡನೆಯ ಮ್ಯಾಜಿಸ್ಟ್ರೇಟರಾದ ಮೆ॥ ರಾಜರತ್ನ ಮುದಲಿಯಾರ್‌ರವರದೆಂದು ಹೇಳಿದರು. ಆದರಮೇಲೆ ಜಡ್ಜಿಯವರು ಸದರೀ ಕೈಬರಹದ ವಿಷಯದಲ್ಲಿ ಬಹಳ ಅಸಮಾಧಾನದೊಡನೆ, ಮೆ॥ ಮೊದಲಿಯಾರ್ ಕೈಬರಹ ಪರೀಕ್ಷೆಯನ್ನು ಖಂಡಿತವಾಗಿ ಕೊಡಬೇಕು, ಮತ್ತು ಗವರ್ನಮೆಂಟನವರು ಕೂಡಲೆ ಸದರೀ ಪರೀಕ್ಷೆಯಂ ಕೊಡಬೇಕೆಂದು ಅವರಿಗೆ ತಿಳಿಸಬೇಕು ಎಂದು ಹೇಳಿದರು ಎಂಬದಾಗಿ ಮದರಾಸು ಪತ್ರಿಕೆಯೊಂದು ತಿಳಿಸುತಿದೆ.

ಪುನೆಯಲ್ಲಿ ಮೆ॥ ರ್‍ಯಾಂಡ್ ಎಂಬವರು ಗೋಲಿಯಿಂದ ಹೊಡೆಯಲ್ಪಟ್ಟು ಮೃತಪಟ್ಟ ವಿಷಯದಲ್ಲಿ, ಅಲ್ಲಿನವರಪ್ರೇರಣೆಯಿಂದಲೇ ಸದರೀಕೃತ್ಯವು ನಡೆಸಲ್ಪಟ್ಟಿರಬೇಕೆಂದು ಗವರ್ನಮೆಂಟನವರು ಊಹಿಸಿ ಅವರಿಗೆ ಶಿಕ್ಷಾರೂಪವಾಗಿ ಸಾಲೀಯಾನಾ ಲಕ್ಷಾಂತರ ರೂಪಾಯಿಗಳ ಲಾಗುವದರಿಂದ ಜಾಸ್ತೀ ಪೋಲೀಸ ಡಿಬ್ಬಂದಿಯನ್ನೇರ್ಪಡಿಸಿದ ವಿಷಯದಲ್ಲಿ ಅಲಹಾಬಾದ್ ಪಯೋನಿಯರ್ ಪತ್ರಿಕೆಯ ಪುನೇ ವೃತ್ತಾಂತ ಲೇಖಕರು ತಿಳಿಸುವ ಅಭಿಪ್ರಾಯವೇನೆಂದರೆ—ಪುನೆಯ ಹೊಸ ಪೋಲೀಸ ಡಿಬ್ಬಂದಿಯ ವಿಷಯವು ಸ್ತಬ್ಧವಾಗಿದೆ ಕ್ರಮೇಣ ಸದರೀ ಪ್ರಯತ್ನವು ಕೈಬಿಡಲ್ಪಟ್ಟರೆ ಅದಕ್ಕಾಗಿ ಯಾರೂ ಆಶ್ಚರ್ಯಪಡಲಾರರು. ಇಂಡ್ಯದೇಶದಲ್ಲಿರುವ ಯುರೋಪಿಯನ್ ಜನರ ನಿರ್ಬಂಧದ ಮೂಲಕ ಗವರ್ನಮೆಂಟನವರು ಈ ಏರ್ಪಾಡು ಮಾಡಬೇಕಾದವರಾದರು, ವಿಲಾಯತಿ ಪತ್ರಿಕೆಗಳೂ ಅದಕ್ಕೆ ಪೋಷಕವಾಗಿ ಬರೆದವು ಮುಂಬೈ ಗವರ್ನರಾದ ಲಾರ್ಡ್ ಸ್ಯಾಂಡ್‌ಹರ್ಸ್ಟ ಸಾಹೇಬರವರಿಗೆ ಈಗಿನ ಸ್ಥಿತಿಯ ವಿಷಯದಲ್ಲಿ ಒಂದು ಕ್ರಮವನ್ನನುಸರಿಸಿ ಕಾರ್ಯಗಳಂ ನಡೆಸಬೇಕೆಂಬ ಅಭಿಪ್ರಾಯವೇನೋ ಉಂಟು, ಪರಂತು ಮೂವರು ಕೌನ್ಸಿಲರ್‌ಗಳಲ್ಲಿ ಅವರೊಬ್ಬರು. ಉಳಿದ ಇಬ್ಬರು ಸಿವಿಲಿಯನ್ ಕೌನ್ಸಿಲರ್‌ಗಳು ಒಂದಾದರೆ ಅವರಿಗೆ ಇಷ್ಟಬಂದಂತೆ ಮಾಡಲು ಶಕ್ತರಾಗಿರುವರು ಲಾರ್ಡ್ ವೆನ್ಲಾಕ್ ಸಾಹೇಬರ ಕಾಲದೊಳು ಮದರಾಸಿನಲ್ಲಿ ಅನುಸರಿಸಲ್ಪಟ್ಟ ಮಾರ್ಗವು ಇಲ್ಲಿಯೂ ಆಚರಣೆಯೊಳು ತರಲ್ಪಡುವ ಸಂಭವ ಕಾಣಬರುತಿದೆ, ಎಂಬದು ಮುಂಬೈ ಗವರ್ನರವರು ಇಂಡ್ಯಾ ದೇಶದಲ್ಲಿನ ಇಂಗ್ಲಿಷ್ ವೃತ್ತಾಂತ ಪತ್ರಿಕಾ ಲೇಖಕರ ವ್ಯರ್ಥಾಲಾಪಗಳಿಗೆ ಕಿವಿಕೊಡುವದರ ಮೂಲಕ ತಮಗುಂಟಾದ ಅಪಪ್ರಥೆಯಂ ಶೀಘ್ರದಲ್ಲಿ ತಿಳಿದುಕೊಂಡು, ಪುನೆಯ ಹೊಸ ಪೋಲೀಸ್ ಡಿಬ್ಬಂದಿಯನ್ನು ತೆಗೆದುಹಾಕಿ ನಾಟೂ ಸಹೋದರರನ್ನು ಬಿಡುಗಡೆಮಾಡಿಸಿ, ಅಲ್ಲಿನ ಜನರ ಹೃದಯದಲ್ಲಿ ನೆಮ್ಮದಿಯನ್ನೂ ನಂಬಿಕೆಯನ್ನೂ ಉಂಟುಮಾಡಬೇಕು. ಖೂನಿಗಳಂ ಮಾಡಿದ ದುಷ್ಟ ಜನರನ್ನು ಪತ್ತೇಮಾಡುವ ವಿಷಯದಲ್ಲಿ ಪ್ರಯತ್ನಪಟ್ಟು ತನ್ಮೂಲಕ ತಮಗೆ ತಿಳಿಯಬರುವ ವರ್ತಮಾನಗಳಿಗೆ ಅನುಸಾರವಾಗಿ ಮುಂದಿನ ಕಾರ್ಯವನ್ನು ನಿಷ್ಕರ್ಷಿಸಿಕೊಳ್ಳುವದು ಉಚಿತವಾಗಿರುವದು.

LOCAL AND PROVINCIAL NEWS.
ಒಳದೇಶಮತ್ತು ತಾಲ್ಲೂಕುಜಾತಿ ವೃತ್ತಾಂತಗಳು.

ಇಲ್ಲಿನ ಚೀಫ್‌ಕೋರ್ಟನಲ್ಲಿ ಅಪೀಲ್ ಮೊಕದ್ದಮೆಗಳ ಸಂಖ್ಯೆಯು ಈಚೆಗೆ ಬಹಳ ಹೆಚ್ಚಿಹೋದುದರಿಂದ ಅನೇಕ ಮೊಕದ್ದಮೆಗಳು ವ್ಯವಸ್ಥೆಯಬಗ್ಗೆ ನಂದೀದುರ್ಗ ಡಿವಿಜನ್ ಡಿಸ್ಟ್ರಿಕ್ಟ್ ಕೋರ್ಟಿಗೆ ವರ್ಗಮಾಡಲ್ಪಟ್ಟಂತೆ ಕೇಳುತ್ತೇವೆ.

ಕಳೆದ ಬೃಹಸ್ಪತಿವಾರದದಿನ ಇಲ್ಲಿನ ಕುದುರೆ ಪರತ್ತಿಗೆ ಪ್ರಾರಂಭವಾಗಿ ಶನಿವಾರ ಸಹ ನಡೆಯಿತು. ಇದಂ ನೋಡುವದಕ್ಕಾಗಿ ವೆಂಕಟಗಿರಿ ಮತ್ತು ಪಿಟ್ಟಾಪುರದ ಅರಸರುಗಳು ತಮ್ಮ ಪರಿಜನರೊಡನೆ ಇಲ್ಲಿಗೆ ಬಂದಿರುತ್ತಾರೆ ಇವರು ಇನ್ನೊಂದೆರಡು ವಾರಗಳಕಾಲ ಇಲ್ಲಿರಬಹುದು.

ಮುಂದಿನ ಡಿಸೆಂಬರ್ ತಿಂಗಳ ಆಖೈರಲ್ಲಿ ನಡೆಯುವ ಅಪ್ಪರ್ ಮತ್ತು ಲೋವರ್ ಸೆಕೆಂಡರಿ ಪರೀಕ್ಷೆಗಳಿಗೆ ಹೋಗಲು ಇಷ್ಟವುಳ್ಳ ಉಮೇದ್‌ವಾರರೆಲ್ಲರು ಆಬಗ್ಗೆ ತಮ್ಮ ದರಖಾಸ್ತುಗಳನ್ನು ಈ ತಿಂಗಳ ೩೧ನೇ ತಾರೀಖಿನೊಳಗಾಗಿ ಕಳುಹಿಸಿಕೊಡಬೇಕೆಂದು ಗವರ್ನಮೆಂಟ ಪರೀಕ್ಷೆಗಳ ಕಮಿಷನರವರು ನೋಟೀಸುಕೊಟ್ಟಿರುತ್ತಾರೆ

ಇಲ್ಲಿನ ಮಿಲಿಟರಿ ಸ್ಟೇಷನಿಗೆ ಪ್ರತ್ಯೇಕವಾಗಿ ಮೆಕೆನ್ಸೈಜ್ ಟ್ಯಾಂಕೊಂದನ್ನೇರ್ಪಡಿಸುವದರಿಂದ ಬಹಳ ಕೂದಲೆಯುಂಟಾಗುವದೆಂದು ಸ್ಥಳಾಧಿಕಾರಿಗಳು ಇಂಡ್ಯಾ ಗವರ್ನಮೆಂಟಿನ ಅವಧಾನಕ್ಕೆ ತರಲು, ಈಗಿನ ಏರ್ಪಾಡೇ ಇನ್ನು ಐದು ಸಂವತ್ಸರಕಾಲ ಜಾರೀಯಲ್ಲಿರತಕ್ಕದ್ದೆಂದು ಹುಕುಂ ಕೊಟ್ಟಂತೆ ತಿಳಿಯಬರುತಿದೆ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ಸಹಾಯಕ ಗುರುಗಳಾದ ಮೆ॥ ಪಿ. ರಾಘವೇಂದ್ರ ರಾಯರವರು ಎರಡು ತಿಂಗಳ ರಜಾ ಪಡಕೊಂಡಿರುವದರಿಂದ ಅವರ ಕೆಲಸವನ್ನು ಬದಲೀ ನೋಡುವಂತೆ ಯಡೆಹಳ್ಳಿ ಮುನ್‌ಸಫ್ ಮೆ॥ ಎಂ. ಎ. ನಾರಣಯ್ಯಂಗಾರ್ರವರು ಮೊಕರರ್ಮಾಡಲ್ಪಟ್ಟಿರುವಂತೆ ತಿಳಿಯಬರುತಿದೆ.

ಈಗ್ಗೆ ಒಂದು ವಾರದ ಮೊದಲು ಯಾವಾಗಲು ಬಲವಾಗಿ ಮೋಡವಾಡುತ ದುಸ್ಸಹವಾಗಿ ಗಾಳಿ ಬೀಸುತಲಿದೆ. ವರ್ಷವೆಂಬುದು ಸುತರಾಂ ಇಲ್ಲವು. ಈ ಗಾಳಿಯ ದೆಸೆಯಿಂದ ಕೆರೆ ಕುಂಟೆಗಳಲ್ಲಿ ಈಗ ಹಾಜರಿರುವ ಸ್ವಲ್ಪ ನೀರು ಸಹ ಹೀರಿ ಹೋಗುವಂತೆ ಕಾಣುತಿದೆ. ಜಿನಿಸಿಗಳ ದಾರಣೆಗಳು ಹೆಚ್ಚಿಯೇ ಇವೆ. ಜನಾರೋಗ್ಯವು ಸಾಮಾನ್ಯವಾಗಿದೆ. ಇತರ ವಿಷಯಗಳಲ್ಲಿ ಅಧಿಕಾಂಶ ಯಾವದೂ ಇಲ್ಲವು.

ಈ ದೇಶದ ಸಿವಿಲ್ ಸರ್ವಿಸ ಪರೀಕ್ಷೆಯು ಕಳೆದ ಶುಕ್ರವಾರದಿವಸ ಪೂರ್ತಿಯನ್ನೈದಿತು. ಡಾಕ್ಟರಿ ಪರೀಕ್ಷೆಯಲ್ಲಿ ತೇರ್ಗಡೆಯಂ ಹೊಂದಿ ಪ್ರಥಮದಿನದ ಪರೀಕ್ಷೆಗೆ ಹಾಜರಾದ ಉಮೇದ್‌ವಾರರ ಪೈಕಿ ಇಬ್ಬರು ಮೂವರು ಆ ದಿನದ ಪ್ರಶ್ನಪತ್ರಿಕೆಯಂ ನೋಡಿ ದಿಗಿಲುಹೊಂದಿ ಮರುದಿನದ ಪರೀಕ್ಷೆಗೆ ಹಾಜರಾಗಲಿಲ್ಲವೆಂದು ತಿಳಿಯಬರುತಿದೆ. ಲಿಖಿತಮೂಲಕವಾದ ಪರೀಕ್ಷೆಯಲ್ಲಿ ತೇರ್ಗಡೆಯಂ ಹೊಂದುವ ಉಮೇದ್‌ವಾರರ ವಾಙ್ಮೂಲಕವಾದ ಪರೀಕ್ಷೆಯು ಈ ತಿಂಗಳ ೨೮ ನೇ ತಾರೀಖಿನಲ್ಲಿ ನಡೆಸಲ್ಪಡುವದೆಂದು ಕೇಳುತ್ತೇವೆ.

ಈ ಸಂಸ್ಥಾನದ ಮಿಲಿಟರಿ ಸೆಕ್ರೆಟರಿಯಾಗಿದ್ದ ಕರ್ನಲ್ ಮ್ಯಾಕಿಂಟೈರ್ ಸಾಹೇಬರವರು ಕಾಲಗತಿಯನ್ನೈದಿದ್ದು ಮೊದಲು ಅವರ ಅಧಿಕಾರವಂ ಲೆಫ್ಟಿನೆಂಟ್ ಕರ್ನಲ್ ದೇಶರಾಜೇ ಅರಸಿನವರು ಬದಲೀ ನೋಡುತ್ತ, ಇದುವರೆಗೆ ಕಾಯಂ ಇನ್ನುಂ ಒಬ್ಬರು ಮೊಕರರಾಗದೆ ಇದೆಯಷ್ಟೆ. ಈಗ ಗವರ್ನಮೆಂಟ ಮಿಲಿಟರಿ ಸೆಕ್ರೆಟರಿಯೆಂಬ ಹೆಸರನ್ನು ತೆಗೆದುಹಾಕಿ, ಮೇಜರ್ ಆರ್. ಜಿ. ಜೋನ್ಸ್ ಎಂಬವರನ್ನು ಗವರ್ನಮೆಂಟ ಮಿಲಿಟರಿ ಅಸಿಸ್ಟೆಂಟರೆಂತಲೂ, ಲೆಫ್ಟಿನೆಂಟ್ ಕರ್ನಲ್ ದೇಶರಾಜ ಅರಸಿನವರನ್ನು ಮೈಸೂರ ಸೈನ್ಯದ ಕಮಾಂಡೆಂಟರೆಂತಲೂ ಹೆಸರಿಟ್ಟು ಬಾಲಿ ಅಧಿಕಾರವನ್ನು ವಿಲೇ ಮಾಡಬೇಕೆಂದು ಗವರ್ನಮೆಂಟನವರು ಯೋಚಿಸುತಲಿರುವಂತೆ ಕೇಳುತ್ತೇವೆ.

ಕಳೆದ ವಾರದೊಳು ಇಲ್ಲಿನ ಮಿಲಿಟರಿ ಸ್ಟೇಷನಿಗೆ ಸೇರಿದ ಹಲಸೂರಲ್ಲಿ ವಾಂತಿಭೇದಿ ರೋಗವು ವ್ಯಾಪಿಸಿ ಇಬ್ಬರು ಮೃತಪಟ್ಟಂತೆ ಅಲ್ಲಿನ ಈವನಿಂಗ್ ಮೆಯಿಲ್ ಪತ್ರಿಕೆ ತಿಳಿಸುತಿದೆ ಅಲ್ಲಿನ ಅಧಿಕಾರಿಗಳು ಸದರೀ ರೋಗದ ವ್ಯಾಪಕತೆಯನ್ನಡಗಿಸಬೇಕಾದ ಭಾಗದಲ್ಲಿ ಕೂಡಲೆ ಆವಶ್ಯಕಗಳಾದ ಏರ್ಪಾಡುಗಳಂ ಮಾಡುವರೆಂದು ನಂಬುತ್ತೇವೆ.

ಪ್ಲೇಗಿನವ್ಯಾಧಿಯು ಈವೂರಲ್ಲೂ ವ್ಯಾಪಿಸಿ ಈಗ್ಗೆ ಮೂರುನಾಲ್ಕು ದಿನಗಳ ಹಿಂದೆ ಅಕ್ಕಿಪೇಟೆಯಲ್ಲಿ ಡಿಸ್ಟ್ರಿಕ್ಟ್ ಸರಾಫ್ ವೆಂಕಟಸ್ವಾಮಿಶೆಟ್ಟಿ ಎಂಬಾತನಿಗೆ ತಗಲಿ ಮರುದಿನ ಮೃತಪಟ್ಟಂತೆಯೂ, ಕಳೆದ ಶನಿವಾರದ ದಿನ ಈವೂರು ಗಾಣಿಗರಪೇಟೆಯಲ್ಲಿ ಗಾಣಿಗಜಾತಿ ಹೆಂಗುಸೊಬ್ಬಳಿಗೆ ತಗಲಿ ನಿನ್ನೆಯದಿನ ಬೆಳಗ್ಗೆ ಮೃತಪಟ್ಟಂತೆಯೂ ತಿಳಿಯಬರುತಿದೆ. ಹೀಗಿರುವದರಿಂದ ಇಲ್ಲಿನ ಅಧಿಕಾರಿಗಳು ಮುಂಜಾಗ್ರತೆಯಿಂದ ಸದರೀ ರೋಗ ನಿವಾರಣೆಗೆ ಆವಶ್ಯಕಗಳಾದ ಏರ್ಪಾಡುಗಳನ್ನೆಲ್ಲ ಕೂಡಲೆ ಮಾಡಬೇಕೆಂದು ಕೋರುತ್ತೇವೆ.

ಮದರಾಸ್ ಸ್ಮಾಲ್‌ಕಾಸ್ ಕೋರ್ಟ ಮೂರನೆಯ ಜಡ್ಜಿಯಾಗಿರುವ ಮೆ॥ ಎಂ. ಒ. ಪಾರ್ಥಸಾರಥಯ್ಯಂಗಾರ್ರವರು ಇಲ್ಲಿನ ಚೀಫ್‌ಕೋರ್ಟ ಪ್ಯೂನೀ ಜಡ್ಜಿಗಳಲ್ಲೊಬ್ಬರಾಗಿ ಈ ದೇಶಕ್ಕೆ ಕರೆಯಿಸಲ್ಪಡುವರೆಂದು ಅಧಿಕಾರಸ್ಥಾನಗಳಲ್ಲಿ ಪ್ರಸ್ತಾಪಿಸಲ್ಪಡುತಿರುವಂತೆ ಕಳೆದವಾರದ ಮೈಸೂರು ಹೆರಲ್ಡ ಪತ್ರಿಕೆಯು ತಿಳಿಸುತಿದೆ. ಈ ಪ್ರವಾದ ಹುಟ್ಟುವದಕ್ಕೆ ಕಾರಣವೇನಿರಬಹುದೆಂದು ವಿಚಾರಿಸಲಾಗಿ, ಈ ಸಂಸ್ಥಾನದ ಕೌನ್ಸಿಲ್ ಮೆಂಬರ್‌ಗಳ ವಿಷಯದಲ್ಲಿ ನಿಷ್ಕರ್ಷಿಸಲ್ಪಟ್ಟಿರುವ ಮೂರು ವರ್ಷಗಳ ಕಾಲಾವಧಿಯು ೯೮ ನೇ ಇಸವಿ ಫೆಬ್ರವರಿ ತಿಂಗಳಲ್ಲಿ ಪೂರ್ತಿಯನ್ನೈದುವದರಿಂದ ಆಕಾಲದೊಳು ಕೌನ್ಸಿಲ್ ಮೆಂಬರ್‌ಗಳ ಪೈಕಿ ಒಬ್ಬರು ನಿವೃತ್ತಿಸುಖವಂ ಪಡೆದು ಅವರ ಸ್ಥಾನದಲ್ಲಿ ಚೀಫ್‌ಕೋರ್ಟ ಎರಡನೆಯ ಜಡ್ಜಿಯರಾಗಿರುವ ಮೆ॥ ಎ. ರಾಮಚಂದ್ರಯ್ಯರವರು ನಿಯಮಿತರಾಗಿ ತನ್ಮೂಲಕ ಚೀಫ್‌ಕೋರ್ಟನಲ್ಲಿ ಖಾಲೀಯಾಗುವ ಜಡ್ಜಿ ಕೆಲಸಕ್ಕೆ ಮದರಾಸಿನಿಂದ ಮೆ॥ ಪಾರ್ಥಸಾರಥಿ ಅಯ್ಯಂಗಾರ್ರವರು ಕರೆಯಿಸಲ್ಪಡುವರೆಂದು ತಿಳಿಯಬರುತಿದೆ. ಇದು ಯಷ್ಟರಮಟ್ಟಿಗೆ ನಿಜವಾಗಿರುವುದೊ ನಾವರಿಯೆವು.

ಮೈಸೂರು ಪತ್ರಿಕೆಗಳಿಂದ.

ಬೆಂಗಳೂರು ಗವರ್ನಮೆಂಟ ಪ್ರೆಸ್ ಸೂಪರಿಂಟೆಂಡೆಂಟರಾದ ಮೆ॥ ಸ್ಪಾರ್ಕ್ಸ್ ಸಾಹೇಬರು ಮೂರು ತಿಂಗಳ ರಜಾ ಪಡೆದು ಸೀಮೆಗೆ ಹೋಗುತ್ತಾರೆಂತಲೂ ಹುಜೂರು ಶಿರಸ್ತೇದಾರ್ ಮೆ॥ ರಾಮರಾಯರು ಬದಲೀ ನೋಡಬಹುದೆಂತಲೂ ವರ್ತಮಾನವಿದೆ. ಇದಲ್ಲದೆ ಮೈಸೂರು ಪೊಲೀಸ್ ಸೂಪರಿಂಟೆಂಡೆಂಟ ಮೆ॥ಹಾರ್ಡಿ ಸಾಹೇಬರು ೩ ತಿಂಗಳ ರಜಾ ಪಡಕೊಳ್ಳುವಂತೆ ಕೇಳುತ್ತೇವೆ.

ಕಳೆದ ಗುರುವಾರ ರಾತ್ರಿ ೧೧ ಘಂಟೆಗೆ ಬೆಂಗಳೂರಿಂದ ಹೊರಟ ರೈಲ್‌ಗಾಡಿಯಲ್ಲಿ ಬೆಂಗಳೂರಿಂದ ಮೈಸೂರಿಗೆ ಕಳುಹಿಸಲ್ಪಟ್ಟಿದ್ದ ೩,೮೦೦ ರೂಪಾಯಿಗಳ ಬೆಳ್ಳಿ ಗಟ್ಟಿಯನ್ನು ಮುನಿಸ್ವಾಮಿ ಮೊದಲಿಯಾರ್ರೆಂಬವನು ಗಾರ್ಡ್ ಪೆಟ್ಟಿಗೆಯಲ್ಲಿ ಹಾಕಿ ಬೀಗವನ್ನು ಹಾಕಿದೆ ಶ್ರೀರಂಗಪಟ್ಟಣದ ಸ್ಟೇಷನ್‌ನಲ್ಲಿ ನೋಡಲು ಅದು ಇರಲಿಲ್ಲ, ನಂತರ ಆತನ ಗೋಳಾಟವನ್ನು ನೋಡಲು ಆಗಲಿಲ್ಲ.

ಮೆಸ್ಟರ್ ಜೆ. ಜೆ. ವೈಟ್ಲಿ ಸಾಹೇಬರನ್ನು ನಮ್ಮ ಮಹಾರಾಜರಿಗೆ ವಿದ್ಯಾಭ್ಯಾಸ ಮಾಡಿಸುವದಕ್ಕಾಗಿ ನೇಮಿಸಿಕೊಂಡರು ಕಾರಣಾಂತರದಿಂದ ಅವರನ್ನು ಈಚೆಗೆ ಇಲ್ಲಿನ ಚೀಫ್ ಇಂಜನಿಯರಿಗೆ ಅಸಿಸ್ಟೆಂಟರನ್ನಾಗಿ ಮೊಕರರ್ ಮಾಡಿದರು. ಇವರು ೫ ವರುಷಗಳ ವರಿಗೆ ಮಾತ್ರ ಈ ಸಂಸ್ಥಾನದಲ್ಲಿ ಕೆಲಸಮಾಡುವಂತೆ ಒಪ್ಪಿಕೊಂಡು ಬಂದರು. ಕಳೆದ ತಿಂಗಳಿಗೆ ಈ ಅವಧಿಯು ಪೂರೈಸಿತು. ಮೈಸೂರು ಸರ್ಕಾರದವರು ಇವರನ್ನು ಇನ್ನೂ ೫ ವರುಷಗಳ ವರಿಗೆ ಈ ಸಂಸ್ಥಾನದಲ್ಲೇ ನೇಮಿಸಿಕೊಂಡಿರುತ್ತೇವೆಂದು ಮದರಾಸ್ ಸರ್ಕಾರದವರಿಗೆ ಬರೆದು ಅವರ ಅನುಮತಿಯನ್ನು ಪಡೆದುಕೊಂಡಿದ್ದಾರೆ.

SUMMARY OF NEWS.
ವೃತ್ತಾಂತ ಸಂಗ್ರಹವು.

ಮಧ್ಯಪ್ರಾಂತದಲ್ಲಿ ಹೊಟ್ಟೆಗಾಗಿ ಜನರು ಮನುಷ್ಯರನ್ನೂ ನಾಯಿಗಳನ್ನೂ ಹರಿದು ತಿನ್ನುತ್ತಿದ್ದಾರೆ!

ಕಳೆದ ಜೂನ್ ತಿಂಗಳೊಳು ಕಲ್ಕತ್ತಾದಲ್ಲಿ ನಡೆಯುತ್ತಿದ್ದ ವ್ಯಾಪಾರದಲ್ಲಿ ೫೩ ಲಕ್ಷ ರೂಪಾಯಿಗಳ ವ್ಯಾಪಾರವೇ ಕಡಮೆಯಾಯಿತು.

ನಿಜಾಂ ಸರಕಾರದವರು ಡೈಯಮಂಡ ಜ್ಯೂಬಿಲಿ ನಿಮಿತ್ತ ೩೬೩ ಕೈದಿ ಜನರ ಬಂಧ ಮುಕ್ತಮಾಡಿದ್ದಲ್ಲದೆ ೧೭೯೮ ಕೈದೀಜನರ ಶಿಕ್ಷೆ ಕಡಿಮೆಮಾಡಿದರು.

ಕಳೆದವಾರ ವಸಯಿ ಹತ್ತರ ಸಮುದ್ರದಲ್ಲಿ ೩೦ ಅಡಿ ಉದ್ದ ಅದಕ್ಕೆ ತಕ್ಕ ದಪ್ಪವಾದ ಒಂದು ಹಾವು ದೃಷ್ಟಿಗೆ ಬಿತ್ತು. ಇದರ ವರ್ಣವು ನೀಲ ಪೀತ ಮಿಶ್ರಿತವಾಗಿದ್ದು ಅದಕ್ಕೆ ೩ ಕೊಂಬುಗಳಿದ್ದವು.

ಖಾನ್‌ಪೂರ್ ತಾಲ್ಲೂಕಿನ ಹೊಂದು ಹಳ್ಳಿಯಲ್ಲಿ ಸ್ಫಟಿಕದ ಹರಳು ಭೂಮಿಯೊಳಗೆ ದೊರೆಯುತ್ತವೆಯೆಂದು ಇಲ್ಲಿನ ಶೋಧಕರೊಬ್ಬರು ಶೋಧ ಹಚ್ಚಿದ್ದಾರೆ. ಈ ಹರಳುಗಳು ಲೋಲಕದ ಆಕಾರವಾಗಿ ವಜ್ರದಂತೆ ಮಿಂಚುತ್ತವೆ.

ಮದ್ರಾಸ್ ಬ್ಯಾಂಕ್ ಡೈರೆಕ್ಟರುಗಳು ಕಳೆದ ೩೧ ನೇ ತಾರೀಖಿನಲ್ಲಿ ಒಂದು ಮೀಟಿಂಗು ನಡೆಸಿ ಇನ್ನುಮೇಲೆ ನೂರಕ್ಕೆ ಒಂದು ರೂಪಾಯಿ ಬಡ್ಡಿಯನ್ನು ಇಳಿಸತಕ್ಕದ್ದೆಂದು ನಿಶ್ಚಯಿಸಿದರು. ಈಗ ಬಡ್ಡಿಯು ನೂರಕ್ಕೆ ೫ ರಂತೆ ಗೊತ್ತುಮಾಡಿರುವರು.

ಭೂಕಂಪದಿಂದ ಬಂಗಾಳ ಮತ್ತು ಅಸ್ಸಾಂ ಪ್ರಾಂತಗಳಲ್ಲಿ ಟಪ್ಪಾಲ್‌ಗಳ ಮೂಲಕವೂ ವರ್ತಮಾನ ತಿಳಿಯುವದಕ್ಕೆ ಬಹಳ ತೊಂದರೆಯಾಗುತ್ತಿದೆ. ಪೋಸ್ಟಲ್ ಇಲಾಖೆಯವರು ಈಗ ಬಹಳ ಏರ್ಪಾಟುಗಳನ್ನು ನಡೆಸಿ ಬಹು ತ್ವರೆಯಿಂದ ಕ್ರಮಕ್ಕೆ ತಂದಿರುವರು.

ಸಮುದ್ರದ ಕಳ್ಳರು ಶೀಗಾ ಎಂಬ ಜಹಜಿನೊಳಗೆ ನುಗ್ಗಿ ಅದರ ಅಧಿಕಾರಿಯನ್ನೂ, ಇನ್ನೂ ೪ ಜನರನ್ನೂ ಕೊಂದುಹಾಕಿ ೧೩ ಜನರಿಗೆ ನಾನಾವಿಧ ಗಾಯಗಳನ್ನು ಮಾಡಿಸಿ ಜಹಜಿನಲ್ಲಿದ್ದ ಬೆಲೆಯುಳ್ಳ ಸಾಮಾನುಗಳನ್ನೆಲ್ಲ ದೋಚಿಕೊಂಡು ಹೋದರು.

ಕೊಚ್ಚಿ ರಾಜರ ಅರಮನೆಗೂ, ದಿವಾನರವರ ಮನೆಗೂ ಕಳ್ಳರುಬಿದ್ದು, ಅರಮನೆಯಲ್ಲಿ ೩೦೦೦ ರೂಪಾಯಿನ ನಗಗಳನ್ನೂ ದಿವಾನರ ಮನೆಯಲ್ಲಿ ೧೫೦ ರೂಪಾಯಿಗಳನ್ನೂ ಕದ್ದುಬಿಟ್ಟರು ಆದರೆ ದಿವಾನರ ಮನೆಯಲ್ಲಿ ಕದ್ದವರು ಸಿಕ್ಕಿದರು, ಅರಮನೆಯಲ್ಲಿ ಕದ್ದವರನ್ನು ಸರ್ಕಾರದವರು ಪತ್ತೇ ಮಾಡುತ್ತಿದ್ದಾರೆ

ಹೈದರಾಬಾದ್ ರೈಲ್ವೇ ಸ್ಟೇಷನ್ನಲ್ಲಿ ಜನಾನಾ ಹೆಂಗಸರು ರೈಲು ಹತ್ತುವದೂ ಇಳಿಯುವದೂ ಬಹಳವಾಗಿ ಹೆಚ್ಚಿದ್ದರಿಂದ ಅಲ್ಲಿ ಟಿಕೀಟು ವಸೂಲು ಮಾಡುವದಕ್ಕೆ ಇಬ್ಬರು ಹೆಂಗಸರನ್ನೇ ನೇಮಿಸಿರುತ್ತಾರೆಂದು ತಿಳಿದುಬಂದಿದೆ. ಹಿಂದುಸ್ಥಾನದಲ್ಲಿ ಹೆಂಗಸರನ್ನು ರೈಲ್ವೆ ಕಂಪೆನಿಯವರು ಈ ಕೆಲಸಕ್ಕೆ ನೇಮಿಸಿಕೊಂಡದ್ದು ಇದೇ ಮೊದಲು

ಪೂನಾ ಹತ್ತಿರ ಉರೂಳಿ ಎಂಬ ರೈಲ್ವೇ ಸ್ಟೇಷನಿಗೆ ಸ್ವಲ್ಪ ದೂರದಲ್ಲಿ ಯಾರೋ ರೈಲು ರಸ್ತೆಯಮೇಲೆ ದೊಡ್ಡ ದೊಡ್ಡ ತೊಲೆ ತುಂಡುಗಳನ್ನು ತಂದು ಹಾಕಿದ್ದರು ರೈಲು ಗಾಡಿಗಳು ಈ ಅಡ್ಡಿಯನ್ನು ಕಾಣದೆ ಅಲ್ಲಿ ರಸ್ತೆ ತಪ್ಪಿ ಸ್ವಲ್ಪದೂರ ನೆಲದಮೇಲೆ ಹೋದಕಾರಣ ೧--೨ ಗಾಡಿಗಳಿಗೆ ಸ್ವಲ್ಪ ಅಪಾಯವಾಯಿತು

ಕಲ್ಕತ್ತೆಯ ಬಳಿ ಸಮುದ್ರತೀರದಲ್ಲಿ ಸಂಚಾರ ಮಾಡುತ್ತಿದ್ದ ಒಂದು ಜಹಜಿಗೆ ಸುಮಾರು ೧೨೦ ಜನ ಕಳ್ಳರು ನುಗ್ಗಿ ಅದರಲ್ಲಿದ್ದ ಸಾವಿರಾರು ರೂಪಾಯಿನ ಸಾಮಾನುಗಳನ್ನೆಲ್ಲಾ ಕದ್ದುಕೊಂಡು ಹೋದರು ಆ ಬಳಿಕ ೫೩ ಜನರನ್ನು ಸರ್ಕಾರದವರು ಹಿಡಿಸಿ ಮ್ಯಾಜಿಸ್ಟ್ರೇಟಿಯಿಂದ ಸಜಾ ಬಲ್ಯದ ಶಿಕ್ಷೆಗಳನ್ನು ಕೊಡಿಸಿದರು.

ಕಾಬೂಲಿನ ಅಮೀರರು ತಮ್ಮ ಮಗನಿಗೆ ರಾಜಧಾನಿಯಲ್ಲಿ ಸರ್ಕಾರಿ ಕೆಲಸಗಳ ಮೇಲ್ವಿಚಾರಣೆಯನ್ನು ತಪ್ಪಿಸಿ ಅವನನ್ನು ಕಾಬೂಲು ಘುಜ್ನಿ ಗಾರ್ಡನ್ ಈ ಪಟ್ಟಣಗಳಲ್ಲಿ ಇಟ್ಟಿರುವ ಮದ್ದು ಗುಂಡ ತುಪಾಕಿ ಮುಂತಾದ ಯುದ್ಧದ ಸಾಮಾನುಗಳನ್ನು ತನಿಖೆ ಮಾಡಿಕೊಂಡು ಬರಬೇಕೆಂದು ಹೇಳಿ ಕಳುಹಿಸಿರುತ್ತಾರೆ

ಇಂಡಿಯಾ ದೇಶದ ಕ್ಷಾಮದ ವಿಷಯದಲ್ಲಿ ಇಂಗ್ಲೆಂಡಿನ ಹೌಸಾಫ್ ಕಾಮನ್ಸ್ ಎಂಬ ಪಾರ್ಲಿಮೆಂಟ್ ಸಭೆಯ ಕೆಲವು ಜನ ಮೆಂಬರುಗಳು ಸೇರಿ ಇಂಡಿಯದಲ್ಲಿ ಕ್ಷಾಮವನ್ನು ತಡೆಯುವದಕ್ಕೆ ಭೂಮ್ಯವಸಾಯವು ವೃದ್ಧಿಯಾಗುವ ಹಾಗೆ ನಾಲಾ ವಗೈರೆ ನೀರಿನ ಕಾಮಗಾರಿಯನ್ನು ಅಭಿವೃದ್ಧಿಪಡಿಸಬೇಕೆಂದು ಬರೆದು ತಮ್ಮ ರುಜುಗಳ ನಿಸಿ ಸ್ಟೇಟ್ ಸೆಕ್ರೆಟರಿಯವರಿಗೆ ಒಪ್ಪಿಸಿರುತ್ತಾರೆ

ಮಾಯಿಮ್ಮ ಮೇರೆಯಲ್ಲಿ ಸ್ವಾತಂತ್ರ್ಯದ ಮಜೇರಿಯೆಂಬ ಮುಸಲ್ಮಾನರು ೧೬೦ ಜನರು ಕೂಡಿ ೨೩ ನೇ ತಾರೀಖಿನ ರಾತ್ರಿಯಲ್ಲಿ ಪೋಲೀಸಿನವರ ಮೇಲೆ ಬಿದ್ದು ಒಬ್ಬ ಯುರೋಪಿಯನ್ ಅಮಲ್ದಾರನನ್ನು ಕೊಂದು ಆರುಜನ ಅಮಲ್ದಾರರಿಗೆ ಬಹಳ ಗಾಯಮಾಡಿದರು ಆದ್ದರಿಂದ ಆ ಜನರನ್ನು ಶಿಕ್ಷಿಸಲಿಕ್ಕೆ ಯೋಚನೆ ನಡೆಯುತ್ತಿದೆ

ಕಲ್ಕತ್ತಾ ಪಟ್ಟಣದಲ್ಲಿ ಒಬ್ಬ ಚಿಲ್ಲರೆ ವರ್ತಕನು ಹೀಚಿದ ಕಡ್ಡಿಗಳನ್ನು ಬಾಂಗಿಮಾಡಿ ಪೋಸ್ಟಾಫೀಸಿನ ಮೂಲಕ ರವಾನೆ ಮಾಡಿದನು ಪೋಸ್ಟಾಫೀಸಿನಲ್ಲಿ ಆ ಬಾಂಗಿಯನ್ನು ಎಳೆಯುವಾಗ ಬೆಂಕಿ ಹತ್ತಿಕೊಂಡು ಜನರಿಗೆ ಭಯವನ್ನುಂಟುಮಾಡಿತು ತರುವಾಯ ಸರ್ಕಾರದವರು ಆ ವರ್ತಕನನ್ನು ಹಿಡಿದು ದ್ರ್ಯಾಪ್ಟ ಮಾಡಿ ೨ ರೂಪಾಯಿ ಜುರ್ಮಾನೆ ಹಾಕಿಸಿದರು ಅವನ ಅಪರಾಧಕ್ಕೆ ತಕ್ಕಷ್ಟು ಜುರ್ಮಾನೆ ಹಾಕದೆ ಹೋದದ್ದು ಆಶ್ಚರ್ಯವಾಗಿದೆ

ಕೆಲ್ಮತ್ತಿಯಲ್ಲಿಯ ಮುಸಲ್ಮಾನ್ ಮತ್ತು ಯೂರೋಪಿಯನ್ ಜನರ ನಡುವಿನ ಕಲಹವು ಶಾಂತವಾಗುವಷ್ಟರಲ್ಲಿ ಮದ್ರಾಸದ ಕಡೆಗೆ ಗೋದಾವರೀ ಜಿಲ್ಲೆಯಲ್ಲಿ ಹೊಟ್ಟೆಗೆ ಇಲ್ಲದೆ ಉದರವ್ಯಥೆಯಿಂದ ಪೀಡಿತರಾದ ನಿಜಾಮ್ ರಾಜ್ಯದೊಳಗಿನ ನೂರಾರು ಜನರು ಸಣ್ಣಸಣ್ಣ ಹಳ್ಳಿಗಳನ್ನು ಲೂಟಿ ಮಾಡಲಿಕ್ಕೆ ಹತ್ತಿದರೆಂಬ ಸುದ್ದಿಯು ಬಂದು ತಲಪಿತು. ಈ ಜನರ ಪೈಕಿ ನೂರು ನೂರೈವತ್ತು ಜನರನ್ನು ಪೋಲೀಸರು ಹಿಡಿದು ಯೋಗ್ಯ ಜಾಮೀನಿನ ಮೇಲೆ ಬಿಟ್ಟಿರುತ್ತಾರೆ ಆ ಜನರು ಹೊಟ್ಟೆಗೆ ಕೊಳ್ಳದೆ ಆದ ವ್ಯಥೆಯನ್ನು ಸಹಿಸಲಾರದೆ ಇಂಥ ಕ್ರೂರಕೃತ್ಯವನ್ನು ನಡೆಸಿದ್ದಕ್ಕೆ ಹೊರತು ಇತರ ಯಾವ ಕಾರಣದಿಂದಲೂ ಅಲ್ಲ; ಅಂದಮೇಲೆ ಅವರು ಎಷ್ಟು ಮಾತ್ರ ದೋಷಕ್ಕೆ ಪಾತ್ರರಲ್ಲವೆಂದು ನಾವು ತಿಳಿಯುತ್ತೇವೆ.

ಶ್ರೀ ಕ್ಷೇತ್ರಕಾಶಿಯಲ್ಲಿ ಓಂಕಾರೇಶ್ವರ ದೇವಸ್ಥಾನದ ಹತ್ತಿರ ಇರುವ ಮಹಾಸ್ಮಶಾನದಲ್ಲಿ ಹೆಣ ಸುಡುವದರ ಸಂಬಂಧ ಪಕ್ಕ ಅಲ್ಲಿಯ ಡೊಂಬಜಾತಿ ಜನರ ನಿಯಮಿತ ಮನನದವನಂದಿದ್ದು ಮತ್ತು ಅವರು ಈ ಹೊತ್ತಿನವರೆಗೆ ತಮ್ಮ ಮನಸಿಗೆ ಬಂದಂತೆ ಪ್ರತಿ ಹೆಣ ಸುಡಿಸುವದಕ್ಕಾಗಿ ತೆರಿಗೆ ತೆಗೆದುಕೊಳ್ಳುತ್ತಿದ್ದರು ಈತೆರದ ಅನಿಯಮಿತ ವರ್ತನವು ಅಲ್ಲಿಯ ಕೆಲವು ಜನರಿಗೆ ಬಹಳ ಅಸಹ್ಯವಾಗಹತ್ತಿದ್ದು, ಇದರ ವಿಷಯವಾಗಿ ಅಲ್ಲಿಯ ಮ್ಯುನಿಸಿಪಾಲಿಟಿಯವರು ಯೋಗ್ಯ ವಿಚಾರಮಾಡಿ ಪ್ರತಿ ಪ್ರೇತದಹನಕ್ಕೆ ೨ ಆಣೆಯನ್ನು ತೆಗೆದುಕೊಳ್ಳಬೇಕೆಂದು ಕಟ್ಟಳೆ ಮಾಡಿದ್ದಾರೆ ಈ ಕಟ್ಟಳೆಯನ್ನು ಯೋಗ್ಯರೀತಿಯಿಂದ ಅಮಲಿನಲ್ಲಿ ತರುವದಕ್ಕಾಗಿ ಸ್ಮಶಾನದಲ್ಲಿ ಒಬ್ಬ ಶಿಪಾಯಿಯನ್ನು ಕೊಡಿಸಿರುವರು.

ಬೆಳಗಾವಿಯಲ್ಲಿ ಒಬ್ಬ ಸಾಹುಕಾರನು ಸವದತ್ತಿ ತಾಲ್ಲೂಕು ಸಂತಗಟ್ಟಿಗೆ ತನ್ನ ಆಸಾಮಿಯ ಕಡೆಯಿಂದ ಹಣ ವಸೂಲ್ಮಾಡಲಿಕ್ಕೆ ಹೋಗಿದ್ದನು. ಆದರೆ ಆ ಸಾಲಗಾರನು ತನ್ನ ನಾಲ್ಕು ಜನ ಸ್ನೇಹಿತರಕೂಡ ಈತನನ್ನು ನಿನ್ನ ಸಾಲಗಾರನು ಹೊಲದಲ್ಲಿದ್ದಾನೆ ಅಲ್ಲಿಗೆ ಬಂದರೆ ಆತನನ್ನು ತೋರಿಸುತ್ತೇವೆ, ಬಾ ಎಂದು ಕರೆದುಕೊಂಡು ಹೋಗಿ ಎಲ್ಲರೂ ಆತನ ಕುತ್ತಿಗೆ ಹಿಸುಕುವದೂ, ಬಾಯೊಳಗೆ ಮಣ್ಣು ತುರುಕುವದೂ ಮಾಡಲಾರಂಭಿಸಿದರು ಆ ಸಾಹುಕಾರನು ಬದುಕುವ ಲಕ್ಷಣ ಉಳಿಯಲಿಲ್ಲವೆಂದು ಸಂಪೂರ್ಣವಾಗಿ ತಿಳಿದು ತನಗೆ ಜೀವದಾನ ಕೊಟ್ಟರೆ ತನ್ನಲ್ಲಿರುವ ೩೦೦ ರೂಪಾಯಿ ಕೊಡುವೆನೆಂದು ಹೇಳಿದನು ಅವರು ರೂಪಾಯಿಗಳನ್ನು ತೆಗೆದುಕೊಂಡು ಸಾಹುಕಾರನನ್ನು ಬಿಟ್ಟುಕೊಟ್ಟರು ಕೂಡಲೆ ಇವನು ಬೆಳಗಾವಿಗೆ ಹೋಗಿ ಎಲ್ಲ ವರ್ತಮಾನವನ್ನು ಪೋಲೀಸಿನವರಿಗೆ ಹೇಳಲು, ಅವರು ತಕ್ಷಣವೇ ಆ ನೀಚರನ್ನು ಪತ್ತೆ ಹಚ್ಚಿ ಹಣ ಸಹಿತ ಹಿಡಿದು ವಿಚಾರಣೆಗಾಗಿ ಮ್ಯಾಜಿಸ್ಟ್ರೇಟರಮುಂದೆ ನಿಲಿಸಿದ್ದಾರೆಂದು ತಿಳಿಯಬರುತ್ತದೆ

ಬಂಗಾಳೆಯ ಸಿವಿಲಿಯನ್ ಜನರ ಸಾಬೂನಿನ ಕಥೆಗಳನ್ನು ಎಷ್ಟು ಹೇಳಿದರೂ ತೀರುವದಿಲ್ಲ. ಇತ್ತೀಚಿನ ಅಂತಹ ಒಂದೊಂದು ಪ್ರಕಾರದ್ದಿರುತ್ತವೆ ಕಾಮರೂಪ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟನಾದ ಕಪ್ತಾನ ಗಾರ್ಡನ್ ಎಂಬ ಸಾಹೇಬನಿಗೆ ತನ್ನೆದುರಿಗೆ ದೇಶೀ ಮನುಷ್ಯನು ಕುದುರೆಯಮೇಲೆ ಹೋದದ್ದು ಸಹಿಸಲಾಗಲಿಲ್ಲ, ಕುದುರೆಯಮೇಲೆ ಕುಳಿತ ದೇಶೀ ಮನುಷ್ಯನನ್ನು ಇವನು ಕಂಡನೆಂದರೆ, ಅವನು ಎಷ್ಟು ದೊಡ್ಡ ಮನುಷ್ಯನಿದ್ದರೂ ತಕ್ಷಣವೇ ಚಬಕದಿಂದ ಹೊಡೆಯುವನು ಅಂಗಡಿಕಾರರು ಒಬ್ಬ ಮನುಷ್ಯನಿಗೆ ಒಂದು ನಿಗದಿತ ಬೆಲೆಗಾಗಿ ಮಾರಕೂಡದೆಂದು ಇವನು ಹುಕುಂ ಮಾಡಿದ್ದಾನೆ ಹೆಚ್ಚು ಮಾಡಿದವರನ್ನು ಅಲ್ಲಿಂದಲ್ಲೇ ಚಬಕದಿಂದ ಬಡಿದು ನೆತ್ತರು ತೆಗೆಯುವನು ಗೋಪಿಯ ಎಂಬ ದೊಡ್ಡ ಸಾಹುಕಾರನ ಮನೆಯಲ್ಲಿ ಎರಡು ಆನೆಗಳಿರುತ್ತವೆ. ಅವನ್ನು ಕಪ್ತಾನನು ಯಾವುದೋ ಕೆಲಸಕ್ಕೆ ಬೇಡಲು, ಅವನು ಕೊಡಲಿಲ್ಲವಾದ್ದರಿಂದ ಆ ಸಾಹುಕಾರನ ಬೆನ್ನಿನಮೇಲೆ ೩೦ ಚಬಕಗಳನ್ನು ಹೊಡೆಯುವ ಹುಕುಂ ಮಾಡಿದನು ಆದರೆ ಸಾಹುಕಾರನು ಅದೇ ಕ್ಷಣಕ್ಕೆ ಚೀಫ್ ಕಮಿಶನರಿಗೆ ತಂತಿಯನ್ನು ಕಳುಹಿಸಿದ್ದರಿಂದ ಬದುಕಿಕೊಂಡನು.

EXTRACT

ಅಧಿಕಾರಿಗಳ ಚಾತುರ್ಯ

ಭಾರಿಭಾರಿ ಹುದ್ದೆಗಳನ್ನು ನಡೆಸುವ ಮಹಾಧಿಕಾರಿಗಳು ತಮ್ಮ ಅಧಿಕಾರದಲ್ಲಿ ನಿಷ್ಪಕ್ಷಪಾತವನ್ನು ತೋರಿಸದಿದ್ದರೆ ತಮ್ಮ ಮೇಲ್ಪಟ್ಟ ಅಧಿಕಾರಿಗಳಲ್ಲಿ ಒಳ್ಳೆ ಹೆಸರು ಬರುವದಿಲ್ಲ, ಮತ್ತು ತಮಗೆ ಇನ್ನೂ ಬಡತಿಯೂ ಆಗುವದಿಲ್ಲ, ಲೋಕದಲ್ಲಿ ದೌರ್ಜನ್ಯವೂ ತಪ್ಪುವದಿಲ್ಲ, ಹೀಗಿರುವಲ್ಲಿ ಇಂತಹ ಅಧಿಕಾರಿಗಳು ಹುಂಬರಾಗಿರುವ ತಮ್ಮ ಅನುಬಂಧಿಗಳಿಗೂ, ಅಥವಾ ಅವರ ಆಧಾರಸಿಂದ ಬಂದ ಬಂಧುಗಳಿಗೂ, ಇಂತವರಿಗೆಲ್ಲ ಕೆಲಸ ಮಾಡಿಕೊಟ್ಟರೆ ತಮ್ಮ ಬಳಗ ಉಳಿಸಿಕೊಂಡಂತಾಗುವದೆಂಬ ತಾತ್ಪರ್ಯದಿಂದ ಹೊಸದಾಗಿ ಒಂದು ಏರ್ಪಾಡು ಮಾಡಿಕೊಂಡಿದ್ದಾರೆ ಅದೇನೆಂದರೆ--ಮೈಸೂರು ತುಮಕೂರಲ್ಲಿರುವ ಒಬ್ಬ ದೊಡ್ಡ ಮನುಷ್ಯರು ತಮ್ಮ ಸಮೀಪ ಬಂಧುವಾಗಿರುವ ವಜ್ರಕಂಠನೊಬ್ಬನಿಗೆ ಕೆಲಸಮಾಡಿಸಿ ಕೊಡಬೇಕಾಗಿ ಬಂದರೆ ಬೆಂಗಳೂರಲ್ಲಿರುವ ಒಬ್ಬ ಮಹಾಂತರಸ್ಥರಾದ ದೊಡ್ಡ ಸ್ವತಂತ್ರಾಧಿಕಾರಿಗೆ ತಮ್ಮ ಕಡೆಯ ಮನುಷ್ಯನನ್ನು ಕಳುಹಿಸಿದರೆ ಇಲ್ಲಿ ನಾನು ಕೆಲಸವನ್ನು ವಿಲೆ ಮಾಡುತ್ತೇನೆ ನಮ್ಮವನೊಬ್ಬನಿಗೆ ನೀವಲ್ಲಿ ವಿಲೇಮಾಡಬೇಕೆಂದು ಗುಟ್ಟಾಗಿ ಒಂದು ಕಾಗದವನ್ನು ಬರೆಯುವದು, ತರುವಾಯ ಈ ಕೆಲಸವು ಇಬ್ಬರಿಗೂ ಸಹಾಯವಾಗಿರುವುದರಿಂದ ಕಾರಣ ಇಬ್ಬರೂ ಸರಸವಾಗಿ ಕೆಲಸಗಳನ್ನು ಮಾಡಿಕೊಟ್ಟು ಬೇರೆ ಜಂಕದಿಂದ ಸಂದೇಹವಿಲ್ಲದಂತೆ ಕೆಲಸದ ನಿಷ್ಪಕ್ಷಪಾತವನ್ನು ತೋರಿಸುತ ಅಧಿಕಾರವನ್ನು ಜಾಗಿಸಿಕೊಂಡು ಹೋಗುವುದು ಹೀಗೆ ಮಾಡುವುದರಿಂದ ಕಷ್ಟಪಟ್ಟು ಸಾಲಸೋಲಗಳನ್ನು ಮಾಡಿ ಓದಿಕೊಂಡು ವ್ಯಾಸಂಗಮಾಡಿದವರು, ಮತ್ತು ಪರೀಕ್ಷೆ ಇಲ್ಲದಿದ್ದರೂ ಉತ್ತಮವಾದ ಯೋಗ್ಯತೆಯನ್ನು ಸಂಪಾದಿಸಿಕೊಂಡಿರುವವರು ಸಹ ಕೆಲಸಗಳು ಬಾಕಿಯಿದ್ದ ಸಮಯದಲ್ಲಿ ನಮಗೆ ಮಾಡಿಕೊಟ್ಟಾರು, ತನಗೆ ದಯಮಾಡಿ ವಿಲೆಮಾಡಿಯಾರು, ಎಂಬದಾಗಿ ಬಕಪಕ್ಷಿಗಳಂತೆ ಬಾಯಿಬಿಟ್ಟು ಕಣ್ಣು ಬಿಟ್ಟುಕೊಂಡು ಕಾದಿದ್ದರೆ, ಕೆರೆಗೆ ಅರಿಯುವಂತೆ ಹೊಳೆಬಿದ್ದ ನೀರು ಬರಿದಾಗುವಂತೆ, ಅವರ ಕೆಲಸಗಳು ಅಲ್ಲಿಯೇ ವಿಲಯವಾಗುವುದು, [ಹೀಗಾಗುತಲಿದೆ. ಇದೊಂದು ಹೊಸದಾರಿಯು ನೆಗಳಿಕೊಂಡಿತು. ದೊಡ್ಡಮನುಷ್ಯರೆಲ್ಲ ಇಂತಹ ದಾರಿಯಲ್ಲಿ ತಿರುಗುವುದಕ್ಕೆ ಮೊದಲು ಮಾಡಿದರೆ ಇತರರ ಗತಿಯೇನಾಗಬೇಕೋ ದೈವವೇ ಬಲ್ಲುದು. --ವೃ ಟಂ.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price, including Postage Rs 5-0-0

ವೈದ್ಯಸಾರಸಂಗ್ರಹ.

ಇದು ಚರಕ, ಬಾಹಟ, ಸುಶ್ರುತ, ಶಾಙ್ಗ೯ಧರಾದ್ಯನೇಕ ಪೂರ್ವಗ್ರಂಥಗಳ ಸಂಗ್ರಹ ರೂಪವಾಗಿರುವಿದೆ

ಇದರ ಕ್ರಯ--ಪ್ಯಾಕಿಂಗ್ ಮತ್ತು ಅಂಚೆ ಹಾಸಲ್ ದೇಖೀಲ್ ಪ್ರತಿ ೧ಕ್ಕೆ ೫--೦--೦

ಬೇಕಾದವರು ಬೆಂಗಳೂರು ಕರ್ನಾಟಕ ಪ್ರೆಸ್ ಪ್ರೊಪ್ರೈಟರವರಿಗೆ ಬರೆದು ತರಿಸಿಕೊಳ್ಳಬಹುದು

V. IYANOR'S
PREPARATIONS

ವಿ ಅಯನಾರ್ ಎಂಬವರಿಂದ ತಯಾರುಮಾಡಲ್ಪಟ್ಟ

ಪ್ರಸಿದ್ಧ ಔಷಧಗಳು.

ಕಿಯಿ ರತಿಸೆಲ್ಪಾನಾರ್ --ಇದು ಹೊಟ್ಟೆಶೂಲೆ, ಅಜೀರ್ಣ, ಕರುಳು ನೋವು, ವಾಂತಿಭೇದಿ ಅಜೀರ್ಣಭೇದಿ, ಬೇಳುಕಡತ, ಕೆಮ್ಮು, ಮೂತ್ರತಡೆ, ಬಾಯಿಹುಣ್ಣು, ರಕ್ತಸ್ರಾವ, ಹೆರಿಗೆಯ ದೋಷಜನ್ಯಗಳಾದ ಸ್ತ್ರೀಯರ ಉದರ ರೋಗಗಳು, ತಲೆನೋವು, ದಂತಶೂಲೆ, ಧಾತು ಮೊದಲಾದವುಗಳಿಗೆ ಬಹಳ ಉಪಯುಕ್ತವಾದದ್ದು ಇದರ ಕ್ರಯ ದೊಡ್ಡಶೀಷೆ ೧ಕ್ಕೆ ೧ ರೂ ಸಣ್ಣಶೀಷೆ ೧ಕ್ಕೆ ೮ ಆಣೆ

ವಾತ್ಸವಾಯು ತೈಲ --ದೀರ್ಘಕಾಲಿಕ ನೋವು, ಪಕ್ಕಶೂಲೆ, ಸಂಧಿನೋವು, ತಲೆಶೂಲೆ ಇವು ಪರಿಹಾರವಾಗುವದು, ಇದರ ಕ್ರಯ ದೊಡ್ಡಶೀಷೆ ೧ಕ್ಕೆ ೧ ರೂ ಸಣ್ಣ ಶೀಷೆ ೧ಕ್ಕೆ ೮ ಆಣೆ

ಜ್ವರದ ನಿವೃತ್ತಿ--ಇದು ಎಲ್ಲಾ ಜ್ವರವನ್ನಾದರು ಎರಡು ದಿನಗಳಲ್ಲಾಗಿ ನಿವೃತ್ತಿ ಮಾಡತಕ್ಕದ್ದು ದೊಡ್ಡ ಶೀಷೆ ೧ಕ್ಕೆ ೧ ರೂ ಸಣ್ಣಶೀಷೆ ೧ಕ್ಕೆ ೮ ಆಣೆ

ಓಮ ಕರ್ಪೂರ ತೈಲ --ಇದು ಶೀತಭೇದಿ, ರಕ್ತಭೇದಿ, ಅಜೀರ್ಣದಿಂದ ಬರುವ ಉಬ್ಬಸ, ಎದೆನೋವು, ಹೊಟ್ಟೆನೋವು ಇವುಗಳಿಗೆ ಬಹಳ ಪ್ರಯೋಜನಕರವಾದದ್ದು ಇದರ ಕ್ರಯ ದೊಡ್ಡಶೀಷೆ ೧ಕ್ಕೆ ೧ರೂ ಸಣ್ಣಶೀಷೆ ೧ಕ್ಕೆ ೮ಆಣೆ

ಮೋಕವಾಯು ಎಣ್ಣೆ --ಇದು ಗಾಯಕವಾಯುವಿನಿಂದ ಸಕೀಲ್ಯ ಮೈಸ್ವಾಸ, ಚರ್ಮವು ಒಡೆಯುವದು, ಮೈನೋವು, ಗ್ರಂಥಿಗಳ ಊತಗಳಿಗೆ ಬಹಳ ಉಪಯುಕ್ತವಾದದ್ದು ಇದರ ಕ್ರಯ ದೊಡ್ಡ ಶೀಷೆ ೧ಕ್ಕೆ ೧ರೂ ಸಣ್ಣಶೀಷೆ ೧ಕ್ಕೆ ೮ ಆಣೆ

ವ್ಯಾಘ್ರಸ್ಕಂದ --ಇದು ಗಡವು ನೋವು, ಕೀಲುನೋವು, ಮೊಣಕಾಲುನೋವು, ಅರಣಿನೋವು, ಬಿಸಿಗೆತ್ತು ಇವುಗಳಿಗೆ ಪ್ರಸಿದ್ಧವಾದ ತೈಲ ದೊಡ್ಡ ಗಡ್ಡಿ ೧ಕ್ಕೆ ೧ ರೂ, ಸಣ್ಣ ಡಬ್ಬಿ ೧ಕ್ಕೆ ೮ ಆಣೆ

ಶ್ವೇತಕುಷ್ಠೌಷಧ --ಇದು ಸಕಲ ಚರ್ಮರೋಗಗಳಿಂದ ಜನಿಸುವಬಿಳುಪು, ಹಸರು ಮಚ್ಚೆ ಸಿಬ್ಬಿ ಮುಂತಾದವುಗಳಿಗೆ ಶೀಘ್ರವಾಗಿಯೂ, ಯಾವ ಎಂದಿಗೂ ಬಾರದಂತೆ ನಿಶ್ಶೇಷವಾಗಿಯೂ ಗುಣಪಡಿಸತಕ್ಕಂತಹ ಔಷಧ ಇದರ ಕ್ರಯ ಶೀಷೆ ೧ಕ್ಕೆ ೧ ರೂ ೮ ಆಣೆ

ಕೂದಲು ನರೆಯದೆ ಕಪ್ಪಾಗಿ ಬೆಳೆಯಲಿಕ್ಕೆ ಔಷಧ --ಈ ತೈಲವು ಸರಿತ ಕೂದಲುಗಳನ್ನು ಕಪ್ಪಾಗ ಮಾಡುವದು ಕೂದಲು ಬೆಳೆಯದಿರುವ ಸ್ಥಳಗಳಲ್ಲಿ ಹುಟ್ಟಿ ಬೆಳೆಯುವದು ಇದನ್ನು ತಲೆಗೆ ಹಚ್ಚಿಕೊಂಡು ಸ್ನಾನಮಾಡಬಹುದು ಮತ್ತು ಸುವಾಸನೆಯುಳ್ಳದ್ದಾಗಿರುವದು ಇದರ ಕ್ರಯ ಶೀಷೆ ೧ಕ್ಕೆ ೧ ರೂ

ಕರ್ಣರೋಗಕ್ಕೆ ತೈಲ --ಈ ತೈಲವನ್ನು ೮ ದಿವಸಗಳ ಕಾಲ ಕಿವಿಯಲ್ಲಿ ಕೆಲವು ಬೊಟ್ಟುಗಳು ಬಿಡುತ್ತಬಂದರೆ, ಕಿವಿಯಲ್ಲಿನ ಕಟ್ಟ ಮೊದಲಾದ ವ್ಯಾಧಿಗಳನ್ನು ಪರಿಹರಿಸುವದು ಇದರ ಕ್ರಯ ೧ ರೂಪಾಯಿ

ವೀರ್ಯವೃದ್ಧಿಗೆ ಔಷಧ --ಈ ಔಷಧವು ಯಂತ ವ್ಯಾಧಿಯಿಂದಲಾದರು ಕೆಟ್ಟುಹೋಗಿರುವ ಇಂದ್ರಿಯವನ್ನು ಶಕ್ತಿ ಮಾಡಿ ದೇಹಕ್ಕೆ ಬಲ ಉಂಟು ಮಾಡುವುದು. ಇದಲ್ಲದೆ ಜಲದೋಷದಲ್ಲಿ ಹುಟ್ಟುವ ಯಂತ ವ್ಯಾಧಿಯನ್ನಾದರು ಪರಿಹರಿಸುವುದು ಇದನ್ನು ಪ್ರಯೋಗಿಸುವ ವಿಧಾನ--ದಿವಸಕ್ಕೆ ಎರಡಾವರ್ತಿ ಭೋಜನವಾದಮೇಲೆ ೩--೪ ಬೊಟ್ಟು ನೀರಿನಲ್ಲಿ ಕಲಸಿ ತೆಗೆದುಕೊಳ್ಳಬೇಕು ಇದರ ಕ್ರಯ ರೂ ೧

☞ ವಿಳಾಸ-- ಬಳ್ಳಾರಿ ಬಜಾರ್ ಬೀದಿಯಲ್ಲಿರುವ ವಿ ಅಯನಾರ್ ಡಿಸ್ಪೆನ್ಸರಿಗೆ ಬರೆದು ತರಿಸಿಕೊಳ್ಳಬಹುದು

MESSRS V IYANOR & CO'S DISPENSARY,

Bellary

ಈ ಕಂಪನಿಯು ೧೮೮೩ನೇ ಇಸವಿಯಲ್ಲಿ ಸ್ಥಾಪಿತವಾಯಿತು

ಜನ್ಮದ ಲಾಭವು

ವಜ್ರಾಂಗ ಖರ್ಜೂರವು.

ಬಲಾರೋಗ್ಯ ಪುಷ್ಟಿಗಳನ್ನು ಬೆಳೆಸತಕ್ಕ ಉತ್ಪತ್ತಿಯು.

ಅತ್ಯುತ್ಕೃಷ್ಟವಾದ ಖರ್ಜೂರದಿಂದ ತಯಾರಿಸಿದ ಈ ಉತ್ಪತ್ತಿಗಳು ಕೊಂಕಣ ಪ್ರಾಂತದ ಅನೇಕ ವನಸ್ಪತಿಗಳ ಸಾರಗಳ ಪುಟಗಳನ್ನು ಕೊಟ್ಟು, ತುಪ್ಪದೊಳಗೆ ನೆನೆಸಿ, ಒಳ್ಳೇ ಬೆಳ್ಳನ ತರಗತಿಯ ಸಕ್ಕರೆಯ ಪಾಕದಲ್ಲಿ ಸಿದ್ಧಮಾಡಿರುತ್ತೇವೆ ಈ ಉತ್ಪತ್ತಿಗಳು ಮಹೌಷಧಗಳಿದ್ದು, ಒಳ್ಳೇ ರುಚಿಯುಳ್ಳವಿವೆ ಇವುಗಳ ಸೇವನೆಯಿಂದ ಕಫ, ವಾತ, ಪಿತ್ತ ಈ ತ್ರಿದೋಷಗಳಿಂದುಂಟಾಗತಕ್ಕ ಹತವತ್ತು ಬಗೆಯ ವ್ಯಾಧಿಗಳು ಹೋಗುತ್ತವೆ ೪೦ ವರ್ಷಗಳ ಮೇಲ್ಪಟ್ಟವರಿಗೆ ಹಾಗೆ ಪ್ರಯೋಜನಕಾರಿ ಹರೆಯದವರಿಗೆ ಪ್ರಸ್ಫುರಿತವಾಗುತ್ತದೆ ಜನನೇಂದ್ರಿಯದ ಬಲವು ಹೆಚ್ಚಿ ನಪುಂಸಕತ್ವವು ಇಲ್ಲದಂತಾಗುತ್ತದೆ ಲಸ್ವಿಯು ಮುಂಚೆ ಅಥವಾ ಹಿಂದೆ ಹರಿದುಹೋಗುವ ಭಯವು ನಿಲ್ಲುತ್ತದೆ ಸ್ವಪ್ನ ಸ್ಖಲನವು ನಿಲ್ಲುವ ವೀರ್ಯವು ಬೆಳೆದು ಮೈ ಬಣ್ಣವು ಸುಧಾರಿಸುತ್ತದೆ ಎಲ್ಲ ರೋಗಗಳ ಉತ್ಪನ್ನಕಾರಕ ಬೇನೆಗಳು ಇಲ್ಲದ ಹಾಗೆ ಧಾತು ಪುಷ್ಟವಾಗುತ್ತದೆ ಮೂರು ಹೊತ್ತೂ ಊಟ ಸರಿಯಾಗಿ ಒಳ್ಳೇ ಹಸಿವೆಯಾಗುತ್ತದೆ ಹೊಟ್ಟೆ ನೋವು ಮೊದಲಾದ ರೋಗಗಳು ನಿವಾರಣೆಯಾಗುತ್ತದೆ ಕ್ಷಯ, ಉದರ, ದಮ್ಮು ಈ ರೋಗಗಳು ನಾಶ ಹೊಂದುತ್ತವೆ ಹೊಸ ಜ್ವರ ಇದ್ದಲ್ಲಿ ೧೧ ದಿವಸಗಳ ವರೆಗೆ ಸಾಲದ ಉಪಯೋಗದಿಂದ ಗುಣವುಂಟಾಗುತ್ತದೆ ಮತ್ತು ಹಳೆಯದ್ದಕ್ಕೆ ೪ ವಾರ ಸೇವಿಸಬೇಕು ೧೧ ದಿನಗಳ ವರೆಗೆ ಸಾಲುವಂತೆ ೧ ಡಬ್ಬಿಗೆ ೧--೮--೦ ರೂ|| ಒಂದೇಸಾರಿ ೬ ಡಬ್ಬಿಗಳು ತರಿಸಿಕೊಂಡರೆ ಒಂದು ಡಬ್ಬಿಯು ಉಚಿತವಾಗಿ ಸಿಕ್ಕುತ್ತದೆ ಈ ಉತ್ಪತ್ತಿಯಿಂದ ಅನೇಕರು ಗುಣವಾಗಿದ್ದಾರೆ ಶರೀರದ ಪ್ರಾಕೃತ ಶಾಂತಿ ಬೇನೆಗಳು ಪಾರಾಗುತ್ತವೆ ಎಲ್ಲರನ್ನೂ ಸರಿಯಾಗಿ ಬೇರೆ ಇಲ್ಲದವರನ್ನು ಆರೋಗ್ಯ ಪುಷ್ಟಿಗಳನ್ನು ಬೆಳೆಸುತ್ತವೆ ಸಾಹೇಬ ಜನರಲ್ಲಿ ಬಹಳ ಡಬ್ಬಿಗಳು ಖರ್ಚಾಗುತ್ತವೆ ಈ ಔಷಧವು ಈ ಕಂಪೆನಿಯ ಹೊರ್ತು ಬೇರೆ ಸ್ಥಳದಲ್ಲಿ ಆಗುವದಿಲ್ಲ ಯಾವತ್ತು ದೇಶಗಳಲ್ಲಿಯೂ ವೈದ್ಯಶಾಲೆಗಳಿಗಾಗಿ ಕಳುಹಿಸಲ್ಪಡುತ್ತದೆ ಬರೆದು ಬಂದು ಕೊಡಲಿ ಈ ಕಂಪೆನಿಯು ವ್ಹಿ ಪಿ ಪೋಸ್ಟಿನಿಂದ ಈ ಡಬ್ಬಿಗಳನ್ನು ಕಳುಹಿಸಿಕೊಡುತ್ತದೆ ಅಂಚೆಯ ಹಾಗೂ ವ್ಹಿ ಪಿ ಮೊದಲಾದ ವೆಚ್ಚ ಬೇರೆ ಕೊಡಬೇಕು (ಉಚಿತ ಡಬ್ಬಿ ಸಹ ೭ ಡಬ್ಬಿಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬಾದಲ್ಲಿ ಎಲ್ಲಾ ಖರ್ಚಿನ ಹಾಕಿ ರವಾನಿಸುತ್ತೇವೆ, ಹೀಗೆ ಕಳುಹಿಸಿದರೆ ಟಪಾಲ ಖರ್ಚು ಕಡಮೆ ಬೀಳುವದು)

ಮಾಲೀಕರು--ಪಿ ಎಸ್ ಎ ಬ್ರದರ್ಸ್ ಮತ್ತು ಕಂಪೆನಿ,

ಸನ್ಮ ಇಂಗ್ಲಿಷ್ ಬ್ರ್ಯಾಂಚ್ ಆಫೀಸ್, ಡಿಸ್ಟ್ರಿಕ್ಟ ಬೆಳಗಾಂವ

ಪೋಸ್ಟ--ಬೆಳಗಾಂವ. Post BELGAUM.

BANGALORE --Printed and Published at the KARNATAKA PRESS, No 10, HOSPITAL ROAD, CITY,--1897

THE

Karnataka Prakasika.

ಪ್ರಕಟನೆಯ ರಿವಾಜ್ { ಮೊದಲನೆಯುದಕ್ಕೆ ಪಙ್ತಿ ಒಂದಕ್ಕೆ 0 2 0 / ಎರಡನೆಯು ವಕ್ಕೆ ಪಙ್ತಿ ಒಂದಕ್ಕೆ 0 1 0
[ಹತ್ತು ಸಲಕ್ಕಿಂತ ಜಾಸ್ತಿಯಾಗಿ ಪ್ರಕಟಿಸಬೇಕಾಗಿದ್ದರೆ ಪಙ್ತಿ ಒಂದಕ್ಕೆ ... ವಸೂಲ್ಮಾಡುವದು.]

ಕರ್ಣಾಟಕ ಪ್ರಕಾಶಿಕಾ.

Published Every Monday Morning

ಚಂದಾದರಗಳು.—ಸ್ಥಳದವರಿಗೆ, ಪರಸ್ಥಳದವರಿಗೆ, ಪೋಸ್ಟೇಜ್ ಸಹ

ಸಾಲ್ 1 ಕ್ಕೆ ... 3 0 0	ಸಾಲ್ 1 ಕ್ಕೆ ... 4 0 0
6 ತಿಂಗಳಿಗೆ, ... 2 0 0	6 ತಿಂಗಳಿಗೆ .. 2 8 0
3 ತಿಂಗಳಿಗೆ, 1 1 0	3 ತಿಂಗಳಿಗೆ ... 1 8 0

ಪ್ರಕಾಶಮವಿವಿಧಪ್ರವೃತ್ತ್ಯುಪಗತಸಾರ್ಥ ಕರ್ಣಾಟಕಪ್ರಕಾಶಿಕಾ ... || ... ||

VOL. XXIV. BANGALORE:—MONDAY, AUGUST 16, 1897. No. 33.

Southern Mahratta Railway Company, (Ld)

NOTICE

It is hereby notified that 21 bags of Coffee bearing private marks 17 were found amongst property belonging to the Railway Company on the premises of the late Ou[t]agency Contractor, Koosnoor Vencata Rao working in connection with the S M Railway at Chikmagalur after he absconded in January last, and that if any person other than the Contractor is entitled to claim those bags he should present to the undersigned an injunction from a competent Court of Law requiring the said bags of coffee to be delivered to him before the 25th instant, failing which the said coffee will be sold on that date by Public Auction at Bangalore and the proceeds held as against claims for which the said Koosnoor Vencata Rao may have rendered the Railway liable.

DHARWAR, 3rd August 1897 } J J McCutcheon, Ag The Manager

Select Telegrams.

London, 7th Aug—Sir M Hicks-Beach, replying to the American proposals for a Bimetallic Conference says that such an important subject requires consideration, and that moreover he must consult the Indian Government

A Greek circular to the Powers proposes a new loan for the payment of the indemnity to Turkey, to be safeguarded by a Commission appointed by various financial houses, thus obviating the necessity of international control of Greek finances

London 7th Aug—The Emperor and Empress of Germany, on board the royal yacht have arrived at Peterhof, where they were received by the Czar and Czarina and met with a most cordial popular reception

London, 8th Aug—The Czar has appointed the Emperor William Honorary Admiral of the Russian Navy

Madrid 7th Aug—Senor Canovas, the Spanish Premier, was assassinated to-day at Santa Gueda, a hydropathic establishment to the north east of Vittoria.

The assassin who is a Neapolitan, named Golli and an anarchist, fired three shots at his victim with a revolver, which struck him in the head and chest

Senor Canovas then fell at his wife's feet and expired within an hour

London, 9th Aug—At a banquet given at Peterhof in honour of Emperor William toasts were drunk dwelling on the peaceful aims of the two nations

Emperor William said that he would employ his whole strength in aiding the Tsar to maintain peace, or against any disturbers thereof.

London, 10th Aug—It is authoritatively stated that the Greek proposals regarding the new loan are not likely to satisfy the financiers, and that Greece will be unable to raise funds to procure the evacuation of Thessaly until she accepts the proposals of the Powers for the establishment of an efficient financial control

THE

Karnataka Prakasika.

MONDAY AUGUST 16, 1897

WANT OF INTEREST IN INDIA

It has often been said and the statement is very true, that the people of England do not fully appreciate the possession of India When a few troops go over from this land to England to take part in a celebration they may make much of them They may parade them before the public, they may show to the world what splendid fighting material there is in this land. But there is no steady interest taken by those at home in the affairs of India If anything of an unusual character occurs the attention of England is drawn to it If famine takes place the people are willing to contribute to relieve the sufferings of the stricken Should war break out they are interested till it is over, then their interest dies away, and the spirit of lethargy, of utter carelessness comes over them. This is very strange, we may say very unaccountable, and it must strike foreign nations as something phenomenal. A better instance of the utter disregard of England towards India could not be given than the introduction of the Budget into the House of Commons It is brought in at the end of the Session when many members have left London, and when those who remain are weary and wish to get away. There is no real discussion on the statement put before the members There is no time for this. A few who are really interested in India, who desire it should be well administered, attend, and speak on the matters brought forward They do their best to give a reality to the proceedings, but it is to be feared they do not succeed They may have to bring forward subjects that require to be thoroughly discussed, and for this there is no time, and with some present, no inclination The sum of money involved in the Indian Budget is very great In amount it ranks next to the revenue of Russia, and more than that of the Austrian empire. But in spite of this the whole matter is passed with far less consideration than the smallest concern connected with the British Isles The House will occupy days over some trifling affair connected with Ireland while it grudges every minute devoted to India This is not a consummation to be proud of it is one that ought not to be possible When the Budget was delivered in the House of Commons a short time ago there were only about a hundred members present, and in former years there were not so many, if we remember right In fact, the whole affair is a farce, and this fact reflects but little credit upon the people of England But the worst of it is that this neglect of their interests has a very bad effect upon the people of India They feel they are neglected They feel that any matter is taken up rather than the affairs of India, and even at this critical time when there is so much trouble in the land the people feel they are not properly dealt by We have famine and plague among us A short time ago there was a dreadful earthquake in Calcutta and other parts, and there were the murders in Poona Surely all these ought to be sufficient to make the people take an interest in the land and its people But they are not The Budget statement, as we have said, was not discussed in the proper sense of the term It was delivered in a formal manner, a few remarks were made by some of the members present, and then the whole matter was dropped. This was all, and this was all the attention the members of the House of Commons could give to the matter. There is something radically wrong about the view the people at home look upon India, and it is to be hoped an improvement will soon be made. The country must be roused to a sense of its responsibility. It must be made to know what a splendid possession it has in India, and with a knowledge of the value of this possession, it must also learn its duty towards it

MYSORE NOT REPRESENTED.

IN reading the accounts of the reception of the Indian princes and troops in England during the commemoration of the Diamond Jubilee one cannot but regret that Mysore was not represented. It is the second Native State in the country. It is highly advanced in every way. It is far before most, if not all, of the other states in everything that denotes real progress—in education and the enlightenment of its people It has set an example to these states in many respects, more especially with regard to the Representative Assembly. Such being the case it is a great pity one of the princes of the Royal House was not present at the Jubilee celebrations There were other princes present of far less note than one of the Mysore family, and they were honoured in a befitting manner. So would a prince from Mysore have been honoured had he put in an appearance Then again, a few of the Mysore Imperial Service troops might have gone to England to be present on the celebrations on the 22nd of June They would have been as much admired as any of the other troops present They have been well drilled, they look well on parade, and go through all military movements with the greatest precision. Why then did not a few proceed to England when the same class of men was sent from other places These men received a hearty welcome wherever they went, and will soon come back to tell their countrymen the kind treatment they met with at the hands of everybody. We believe it was at first proposed that Colonel Desaraj Urs should proceed to England to represent Mysore at the Jubilee, and it is a pity the original programme was not carried out We cannot tell why it was abandoned, but whatever it was it is to be regretted Such an opportunity will never occur again. There may not be another Jubilee during the next two hundred years, so that this province has lost a chance, and this is much to be regretted

News and Notes.

THE Famine Fund total on the 10th is Rs 14,149,881

MAHARAJA Sir Fateh Singh, of Meywar, has been granted two additional guns to his salute of nineteen guns

IN consequence of the operations on the frontier, some of the medical officers on leave have been ordered to return to duty

MR JACKSON of the Calcutta bar, it is said, will defend the Hon'ble Mr Tilak at the next Sessions of the Bombay High Court

HER Highness the Maharani of Kolhapore gave birth to a son and heir on Friday evening There is unprecedented rejoicing at Kolhapore, as this is the first direct heir for several generations

THE *Englishman* condemns the Government circular announcing minimum rate of the new loan It has resulted in heavy drop in Government paper here It is rumoured that the loan will be taken up largely from Home

THE *Dnyan Prakash* states that Pandita Ramabai says that she still thinks her letter to the *Bombay Guardian* contains an account which is perfectly true, and that she will not retract a syllable of what she has said under any circumstances.

IN the campaigns of the Tochi Valley expedition it is stated that 5 days back 130 camels were stolen and robbed away by a band of 400 men in broad daylight How daring and reckless must the barbarians be! Perhaps this is the sign of the conquering forces.

IN its last issue, the *Bombay Guardian* insists that the Pandita Ramabai was *not* wrong, as Lord Sandhurst said in reply to a question at the last meeting of the Bombay Legislative Council, in her statement regarding what happened to a protege of hers in the Poona Plague Hospital.

IT is notified for general information that the rate of rupees 97 and 8 annas for every hundred rupees has been fixed as the minimum rate at which tenders will be accepted for the three and a half per cent. loan of 3 crores announced in the notification of the 19th July 1897

MR Wheeler, Magistrate, delivered a lengthy judgment on the 31st ultimo, at Alipore, re the five rioters charged with attempting to murder the European inmates of the Tallah Waterworks Chudu, the ringleader, was sentenced to two years', and his four accomplices to eighteen months' rigorous imprisonment

OUR Allahabad correspondent telegraphs —The District Magistrate of Lucknow called together, on Saturday morning, at his residence the editors of certain native papers, and warned them not to refer to or reprint seditious articles likely to agitate and excite the public mind This wise precaution against the propagation of mischievous articles culled from outside newspapers met with the approval of the native editors present

THE apparatus for lighting the Arkonam Junction Station with electricity will shortly be received from England. The Agent and

Manager of the Madras has submitted to Government an estimate for Rs 6,200 to construct a power-house for the engines and other works The cost of the whole project amounts to Rs 17,230, which the Government has sanctioned

---

WRITES the *Lahore Tribune* —" How do the Vernacular papers of Madras and the North-west Provinces keep clear of sedition ? Because Sir Arthur Havelock and Sir Antony MacDonnell are wise and sympathetic rulers and there is no bitterness against them It is inconceivable that any intelligent and patriotic Indian newspaper would excite resistance to the lawful authority of the Government

---

AT the thirteenth annual meeting of the share-holders of the Bank of Bombay, held on Thursday afternoon, the directors reported that the net profits for the year amounted to Rs 11,84,922 6 5, out of which a dividend of 10 per cent was declared, Rs 3,00,000 was carried to the reserve fund, which now stands at Rs 65,00,000, Rs 1,00,000 was set apart for a bonus at the rate of 2 per cent per annum in addition to dividend and Rs 2,09,922 6 5 was carried forward, the directors having the satisfaction to report that no bad debts had been incurred during the half year

---

Srimant Sir Baba Maharaj a leading citizen and Municipal Commissioner, Jaghirdar and First Class Sardar of the Deccan, died of cholera on the 7th instant Great sympathy is felt for the deceased who was the only male representative of his branch of the family He was the Vice President of the Sarvajanika Sabha He was only thirty four He took great interest in public movements His death deprives the city of a young, enthusiastic and rising leader from the Deccan Aristocracy His family has the right of being spiritual advisers to the Maharajah of Kolhapur, and as such he was entitled to the second seat amongst Deccan Sardars

---

THE *Amrita Bazar Patrika* says that there is no truth in the statement that a Bengal Zemindar has offered Rs 50 000 for Mr Tilak's defence " People just now, writes our contemporary, " are in a state of consternation, and as yet not a pice has been raised in Calcutta There is no doubt, however, that the feeling aroused in the country by the unusual and harsh procedure of the Bombay Government, is of the intensest kind possible, and we have never seen the like of it in our journalistic experience extending over thirty years If the Government has any cause of offence, its methods, however, have procured for it a bad name, and deprived it of the sympathy that is legitimately due to it "

A Lawyer writes to the *Bombay Gazette* — In the course of a conversation with me, the late lamented Mr Justice Telang casually remarked that of all the Judges that ever presided to his knowledge at the High Court Sessions in Bombay no one excelled the present Chief Justice, who was then a Puisne Judge in the art of summing up the evidence for the jury It is, therefore, no wonder that the Bombay public are anxious that he should preside at the next Sessions in which the sedition cases are to be tried Seeing that Sir Comer Petheram, the Chief Justice of Calcutta, specially presided over the Sessions Court which tried the " Bangabasi" case, I have great hopes that the expectation of the public would be fulfilled

Local and Provincial

THE RACES.—Came to an end on Saturday last. The sport was good throughout

---

THE MAHARANI REGENT —Accompanied by the Maharajah will leave for Mysore towards the end of this month

---

THE POLICE SPORTS —Will come off on Friday the 20th near the Fort. They are expected to be very good this year.

THE POLO TOURNAMENT — Will be finished to day It has been placed on the Parade ground in the Civil and Military Station.

KHEDDA DEPARTMENT ABOLISHED —We understand that the Khedda Department which was so successfully managed by Mr Shamiengar has been abolished from the 1st of this month —M H

THE WEATHER.—Is not satisfactory at the present time There are often high winds, and these blow away the rain A few slight showers have fallen, but this is all, and much more is required Unless rain comes down soon matters will be serious

---

A NEW SUB DIVISION —We understand that it is under contemplation to form a new Sub Division in the Mysore District and locate it at Chamarajnagar The new Sub Division will, it is said, embrace four Taluks, Chamarajnagar, Gundlupett, T Narasipur and Nanjangude —M H

THE MYSORE CIVIL SERVICE EXAMINATION —Among the several optional subjects two candidates who have taken up Biology and Chemistry respectively, will be sent to Madras, within three weeks, by the Durbar of Mysore, to undergo the practical test in the subjects referred to above —E M

A RECOMMENDATION —A strong rumour is current to the effect that Mr Bourne, Professor of Biology, Presidency College Madras, has recommended a graduate of the College, to the Government of Mysore, to favor him with a state scholarship for studying medicine We are anxious to know whether he is a son of the soil or not —E M

AN ANOMALY —In the Mathematical branch of the Mysore Civil Service Examination of previous years the rule in vogue was that if a candidate answered 2 3 of the questions he would get the maximum number of marks, and there used to be a foot note to this fact in the question paper This year, this foot note was not given in the question paper The questions, this year, were decidedly more difficult than those of previous years The number of questions were the same, that is, there were twenty questions in mixed Mathematics, and also in pure Mathematics In the absence of the foot note referred to above, the candidates are in suspense, whether or not the same rule would be observed this year We are at a loss to know as to who should be held responsible for this —E M

The Mysore Gazette.

Bangalore, Thursday, 12th August 1897

NOTIFICATIONS BY THE GOVERNMENT OF MYSORE

GENERAL AND REVENUE

No 1963—Mis 309 dated 5th Aug 97

The following transfers of Assistant and Sub Assistant Surgeons are ordered —

1 Mr J A Coelho, L M & S, Sub-Assistant Surgeon, doing duty at the General Hospital, Mysore, to Local Fund Dispensary Hunsur.

2 Mr T V Kuppusami Mudaliar L M & S, Acting Assistant Surgeon doing duty in the Victoria Institute, Bangalore, to do duty at the General Hospital, Mysore

No 2096—J 212, dated, 7th Aug 1897

Under Section 12 of the Code of Criminal Procedure, V Kanthiravachar, Amildar, Kankanhalli taluk, and B Srinivasa Rao, Amildar Anekal taluk, are appointed Magistrates of the 2nd Class

No 1551—R. 507, dated 6th Aug 1897

B Vasudeva Rao Deputy Amildar of the Koratagere sub taluk, now Acting Amildar of the Maddagiri taluk, is appointed to act as Amildar and 3rd Class Magistrate of the Tiptur taluk, until further orders (to join on relief by Amildar Chowda ya)

Nagesware Iyer, Police Inspector, Tumkur taluk, will continue to act as Deputy Amildar and 3rd Class Magistrate of the Koratagere sub-taluk during the employment of Deputy Amildar B Vasudeva Rao on other duty, or until further orders.

ಕರ್ನಾಟಕ ಪ್ರಕಾಶಿಕೆ.

೧೮೯೭ನೇ ಇಸವಿ ಆಗಸ್ಟು ತಾ| ೧೬ನೇ ಸೋಮವಾರ

ನೇಟಿವ್ ವೃತ್ತಾಂತ ಪತ್ರಿಕೆಗಳ ವಾಗ್ಬಂಧನ ಪ್ರಯತ್ನವು

ಈಗ ಇಂಡಿಯಾ ದೇಶದೊಳು ಪ್ರಕಟಿಸಲ್ಪಡುತಿರುವ ವೃತ್ತಾಂತ ಪತ್ರಿಕೆಗಳಲ್ಲಿ, ಇಂಗ್ಲಿಷ್ ಜನರಿಂದ ಪ್ರಕಟಿಸಲ್ಪಡುವ ಇಂಗ್ಲಿಷ್ ಭಾಷಾ ನಿಬದ್ಧವಾದವು ಒಂದು, ನೇಟಿವ್‌ಗಳಿಂದ ಪ್ರಕಟಿಸಲ್ಪಡುವ ಇಂಗ್ಲಿಷ್ ಮತ್ತು ದೇಶಭಾಷಾ ಪತ್ರಿಕೆಗಳೊಂದು, ಈ ರೀತಿ ಎರಡು ವಿಧಗಳಾಗಿರತಕ್ಕವು ಇವುಗಳಲ್ಲಿ ಮೊದಲನೆಯ ತರಗತಿಗೆ ಸೇರಿದ ಪತ್ರಿಕೆಗಳು ನಮ್ಮ ಪಾಲಕರಾದವರ ದೇಶ ಮತ್ತು ಜಾತಿ ಮತಗಳಿಗೆ ಸೇರಿದವರಿಂದಲೂ, ಎರಡನೆಯ ತರಗತಿ ಪತ್ರಿಕೆಗಳು ಪಾಲಿತರಾದವರಿಂದಲೂ ಪ್ರಚಾರ ಪಡಿಸಲ್ಪಡುತಲಿವೆ ಇದರಿಂದ ಮೊದಲನೆಯ ತರಗತಿ ವೃತ್ತಾಂತ ಪತ್ರಿಕಾ ಲೇಖಕರು ವಿಶೇಷ ಸ್ವಾತಂತ್ರ್ಯವಂ ತಮ್ಮಲ್ಲಿ ಆರೋಪಿಸಿಕೊಂಡು, ಗೌರವಿಸಲ್ಪಡುವ ತಮಗೆ ಮಾತ್ರವೇ ಸ್ವಾತಂತ್ರ್ಯ ಪ್ರಯೋಜನವೂ, ತಮ್ಮಲ್ಲಿನ ಹಕ್ಕುಗಳಂ ಜೊತೆಪಡಿಸಲಿಕ್ಕೆ ನೇಟಿವ್ ಪತ್ರಿಕಾ ಲೇಖಕರಿಗೆ ಸ್ವಾತಂತ್ರ್ಯವಿಲ್ಲವೆಂಬದಾಗಿಯೂ ಭ್ರಾಂತಿಗೊಂಡು ನೇಟಿವ್ ಪತ್ರಿಕೆಗಳ ದೂಷಣ ತಿರಸ್ಕಾರಗಳಿಗೆ ಎಳಸಿರುವದು ಮಾತ್ರವಲ್ಲದೆ, ಸದರೀ ಪತ್ರಿಕೆಗಳಲ್ಲಿ ಕಂಡ ಅಂಶಗಳು ಎಷ್ಟು ಮಾತ್ರ ನ್ಯಾಯವಾಗಿಯೂ ನ್ಯಾಯ್ಯವಾಗಿಯೂ ಇದ್ದಾಗ್ಯೂ ಕೆಟ್ಟ ಅರ್ಥ ಕಲ್ಪನೆ ಮಾಡಿ, ಅವುಗಳ ಮೇಲೆ ಇಲ್ಲದ ದೋಷಗಳನ್ನಾರೋಪಿಸಿ, ತನ್ಮೂಲಕ ನೇಟಿವ್ ಪತ್ರಿಕೆಗಳ ಲೇಖನಗಳಲ್ಲಿ ಗವರ್ನ್‌ಮೆಂಟಿನವರಿಗೆ ವಿಶ್ವಾಸವನ್ನೂ ಅನಾದರವನ್ನೂ ಉಂಟುಮಾಡುವ ಗುಣವು ತನಗೆ ಕಲ್ಪನೆಯೆಂದು ಭಾವಿಸಿರುವಂತೆ ಅವರ ಲೇಖನಗಳಿಂದ ವ್ಯಕ್ತವಾಗದೆ ಹೋಗಲಿಲ್ಲವು ರಾಜ್ಯಕಾರ್ಯ ನಿರ್ವಹಣೆಯ ವಿಷಯದಲ್ಲಿ ಗವರ್ನ್‌ಮೆಂಟಿನವರ ಮೇಲೆ ನೇಟಿವ್ ಪತ್ರಿಕೆಗಳಿಗೆ ಹೇಳಿಕೊಳ್ಳ ಅವಕಾಶವಿಲ್ಲದಂತೆ ಆಗಂ ಮಾಡಿ ಮಾಡುವ ಪ್ರೋತ್ಸಾಹಿಸುವದರಲ್ಲಿ ಬದ್ಧಾದರವುಳ್ಳ ಇಂಗ್ಲಿಷ್ ಪತ್ರಿಕೆಗಳು ಸ್ವಪ್ರಯೋಜನ ಭಂಗವುಂಟಾಗಬಹುದಾದ ಕಾಲಗಳಲ್ಲಿ ಸಂಪೂರ್ಣವಾದ ಸ್ವಾತಂತ್ರ್ಯದೊಡನೆ ಗವರ್ನ್‌ಮೆಂಟಿನವರ ಮೇಲೆ ಆಕ್ಷೇಪಿಸದೆ ಬಿಡುವದಿಲ್ಲವು. ಪರಂತು ನೇಟಿವ್‌ಗಳ ಕ್ಷೇಮ ಲಾಭಗಳಿಗೆ ಭಂಗಕರಗಳಾದ ಆಜ್ಞೆಗಳು ಯಾವದಾದರು ನಡೆಸಲ್ಪಟ್ಟು, ಅವುಗಳಂ ನೇಟಿವ್ ಪತ್ರಿಕೆಗಳು ಗವರ್ನ್‌ಮೆಂಟಿನ ಅವಧಾನಕ್ಕೆ ತರುವ ಸಂದರ್ಭಗಳಲ್ಲಿ, ಸದರೀ ಪತ್ರಿಕೆಗಳು ಪ್ರಜೆಗಳಿಗೆ ಪಾಲಕರಲ್ಲಿರಬೇಕಾದ ರಾಜಭಕ್ತಿ ವಿಶ್ವಾಸಗಳು ಸಡಲಿಹೋಗುವಂಥ, ಕಲಹಪ್ರೇರಕಗಳಾದ ಲೇಖನಗಳಂ ಪ್ರಕಟಿಸುತಿವೆಯೆಂದು ನಿಷ್ಕಾರಣವಾಗಿ ದೂಷಿಸದೆ ಇರುವದಿಲ್ಲವು ಇಂಥ ಅವಿಚಾರಿತ ರಮಣೀಯ್ಯಗಳಾದ ಲೇಖನಗಳಿಂದಲೇ ಗವರ್ನ್‌ಮೆಂಟಿನವರಿಗೆ ನೇಟಿವ್ ಪತ್ರಿಕೆಗಳ ವಿಷಯದಲ್ಲಿ ವಿರುದ್ಧಭಾವ ಪ್ರುಟ್ಟಾಗಿ, ಅವುಗಳ ವಾಗ್ಬಂಧನವು ಅವರ ಬುದ್ಧ್ಯಾ ಕೇವಲ ಆವಶ್ಯಕತ್ವೇನ ತೋರಿ, ಅದಕ್ಕೆ ಈಗ ಜಾರೀಯಲ್ಲಿರುವ ಇಂಡಿಯನ್ ಪೀನಲ್‌ಕೋಡೆ ಸಾಲದೆಂದು ಯೋಚಿಸಿ ತದಪೇಕ್ಷೆಯಾ ಕಠಿಣವಾದ ಒಂದು ಕಾನೂನನ್ನು ನೂತನವಾಗಿ ರಚಿಸಿ ಜಾರಿಯೊಳು ತರಬೇಕೆಂದು ಗವರ್ನ್‌ಮೆಂಟಿನವರು ಯೋಚಿಸುತಲಿರುವಂತೆ ಕಾಣುತಿದೆ ಸಾಮಾನ್ಯವಾಗಿ ಇಂಡ್ಯ ಗವರ್ನ್‌ಮೆಂಟಿಗೆ, ವಿಶೇಷತಃ ಮುಂಬೈ ಗವರ್ನ್‌ಮೆಂಟಿಗೆ ನೇಟಿವ್ ಪತ್ರಿಕೆಗಳ ವಿಷಯದಲ್ಲಿ ಇಷ್ಟು ವಿದ್ವೇಷ ಪ್ರುಟ್ಟಾಗುವದಕ್ಕೆ ಈ ದೇಶದೊಳು ಇಂಗ್ಲಿಷ್ ಜನರಿಂದ ಪ್ರಕಟಿಸಲ್ಪಡುವ ಪತ್ರಿಕೆಗಳೇ ಮುಖ್ಯ ಕಾರಣವೆಂದು ಹೇಳುವವರಲ್ಲಿ ನಮ್ಮ ಬುದ್ಧ್ಯಾ ಯಾವ ಬಾಧಕವೂ ಕಂಡು ಬರುವದಿಲ್ಲವು ಪುನೆಯ ಕೇಸರೀ ಯೆಂಬ ಪತ್ರಿಕೆಯ ಎಡಿಟರಾದ ಮೆ| ತಿಲಕ್ ಎಂಬವರ ಲೇಖನಗಳಿಗೆ ಮುಂಬೈ ಪೋಲೀಸ್ ಅಧಿಕಾರಿಗಳು ಮ್ಯಾಜಿಸ್ಟ್ರೇಟರ ಮುಂದೆ ಹಾಜರ್ ಮಾಡಿದ ಇಂಗ್ಲಿಷ್ ತರ್ಜುಮೆಯು, ಹೈಕೋರ್ಟ್ ಸೆಷನ್ ವಿಚಾರಣೆಯಲ್ಲಿ ಪ್ರಾಧಾನ್ಯೇನ ವಿಚಾರಕ್ಕೆ ಬರುವುದಾಗಿ ಆ ಕಾಲದಲ್ಲಿ ಅದರ ಪಾಶ್ಚಾತ್ಯಾಂಶವು ಹೊರಪಡದೆ ಹೋಗಲಾರದು. ಮೆ| ತಿಲಕ್‌ಯವರ ವಿಷಯದೊಳು ಪ್ರಾರಂಭದಲ್ಲಿ ತಾವು ಅವಲಂಬಿಸಿದ ಮಾರ್ಗವು ಮುಂದೆ ತಮಗೆ ಪ್ರಬಲ ಅಪಾಯವೆಯಂ ತರದೆ ಹೋಗಲಾರದೆಂಬ ಶಂಕೆಯು ಈಚೆಗೆ ಮುಂಬೈ ಗವರ್ನ್‌ಮೆಂಟಿಗೆ ಉಂಟಾಗಿಯೇ ಅವರು ಈಗ ಸ್ವಲ್ಪಮಟ್ಟಿಗೆ ಸಹನೆಯಂ ತಾಳ್ದಿರುವಂತೆ ತೋರುತಿದೆ, ಇಲ್ಲವಾದರೆ ಇಂಗ್ಲಿಷ್‌ಜನರ ಪತ್ರಿಕೆಗಳ ಆಧಾರಶೂನ್ಯಗಳಾದ ಲೇಖನಗಳ ಮೇಲಿನ ಭರವಸೆಯಿಂದ ಸದರೀ ಗವರ್ನ್‌ಮೆಂಟಿನವರು ಇನ್ನು ಕಠಿಣಗಳಾದ ಅನೇಕ ಕಾರ್ಯಗಳಂ ನಡೆಸಿರುವರು, ಪರಂತು ಸದ್ಯಕ್ಕೆ ಅಷ್ಟು ಅವರಾಜ ತಪ್ಪಿರುವುದು ಅಷ್ಟನೆ ಭಾಗ್ಯವಿಶೇಷವೆಂತಲೇ ಎಣಿಸಬೇಕಾಗಿದೆ ಈ ರೀತಿ ಆಂಗ್ಲೋ ಇಂಡಿಯನ್ ಪತ್ರಿಕೆಗಳು ಮತ್ಸರ ದ್ವೇಷಯುತರನ್ನುಳ್ಳವರ ಪತ್ರಿಕೆಗಳನ್ನು ಮನಸ್ಸಿಗೆ ಬಂದಂತೆ ಉಗ್ರವಾಡುತ್ತ, ಅವರ ದೇಶಭಾಷಾ ಮತ್ತು ಇಂಗ್ಲಿಷ್ ವೃತ್ತಾಂತ ಪತ್ರಿಕೆಗಳ ವಾಗ್ಬಂಧನವಾಗಬೇಕೆಂದು ಉಪದೇಶಿಸುವದು ಎಷ್ಟು ಪ್ರಾಮಾಣಿಕವಾದ ಕೃತ್ಯವೋ ನೀವರಿಯಿರಿ ಎತಿನ ಕ್ರೀಡಾನನ್ನದಾದ ... ದಿಗಂತ ವಿಶ್ರಾಂತವಾದ ಮತ್ತು ಆಳುವವರ ಪ್ರಜೆಗಳೆಲ್ಲರು ಸಮಾನವಾದ ಸಂತೋಷ ನ ಬವಿಸಬೇಕಾದ ಈ ಕಾಲದಲ್ಲಿ ಆಂಗ್ಲೋ ಇಂಡಿಯನ್ ಪತ್ರಿಕಾಲೇಖಕರ ವ್ಯರ್ಥ ಕಲ್ಪನೆಗಳನ್ನು ನೇಟಿವ್ ಪತ್ರಿಕಾ ಲೇಖಕರ ವಿಷಯದಲ್ಲಿ ಕಠಿಣಗಳಾದ ಇಲ್ಲದ ನಿರ್ಬಂಧಗಳನ್ನು ಮಾಡಿ ತನ್ಮೂಲಕ ಅವರ ಮನಸ್ಸಿನೊಳು ನೋವನ್ನು ಅಸಮಾಧಾನಕರವಾದ ಪಶ್ಚಾತ್ತಾಪವಂತ ಕಾರ್ಯವೆಸಗಿಸಿಕೊಳ್ಳದೆ ಹೋಗಲಿರೆಂದು ಬೇಡುತ್ತೇವೆ

Occasional Notes
ನೈಮಿತ್ತಿಕ ಪ್ರಸಂಗಗಳು

ಮಂಡ್ಯ ದೇಶದ ಕ್ಷಾಮದ ಬಗ್ಗೆ ಯೇರ್ಪಡಿಸಲ್ಪಟ್ಟಿರುವ ಫಂಡಿಗೆ ಈ ತಿಂಗಳ ೧೦ನೇ ತಾರೀಖು ವರೆಗೆ ೧,೭೦ ಕೋ ,೩೪೯ ರೂಪಾಯಿಗಳು ಜಮಾ ಯಾದರುತಿದೆ

ವಿಜಾವಾರ್ ಸಂಸ್ಥಾನದ ಮಹಾರಾಜಾ ಸರ್ ಛತ್ರಸಿಂಗ್ ಯವರಿಗೆ ಮರ್ಯಾದ ಫರ್ ಇರುವರೆಗೆ ಉಂಟಾಗಿದ್ದ ಹದಿನೈದು ತೋಪುಗಳು ಈಚೆಗೆ ಇಪ್ಪತ್ತೊಂದಕ್ಕೆ ಹೆಚ್ಚಿಸಲ್ಪಟ್ಟವು.

ಆದೇ ಶುಕ್ರವಾರದ ದಿನ ಸಾಯಂಕಾಲ ಕೊಲ್ಹಾಪುರ ಸಂಸ್ಥಾನದ ಮಹಾರಾಜರವರಿಗೆ ಪುತ್ರೋತ್ಸವವಾಯಿತೆಂತಲೂ ಬಹುಕಾಲ ಪರ್ಯಂತರ ಔರಸ ಸಂತತಿ ಇಲ್ಲದಿದ್ದು ಈಗ ಭಾಗ್ಯವಶಾತ್ ಅದು ಪ್ರಾಪ್ತವಾದುದರಿಂದ, ಅದಬಗ್ಗೆ ಅಲ್ಲಿ ವಿಶೇಷ ಉತ್ಸವಗಳು ಆಚರಿಸಲ್ಪಡುತಿರುವಂತೆಯೂ ಕೇಳಿ ಬಹಳ ಸಂತೋಷಿಸುತ್ತೇವೆ.

ಕಳೆದ ಜೂನ್ ತಿಂಗಳಲ್ಲಿ ಕಲ್ಕತ್ತೆಯೊಳು ಮುಸಲ್ಮಾನ್ ಜನರಿಂದ ನಡೆಸಲ್ಪಟ್ಟ ಪ್ರಲಾಪದಲ್ಲಿ ಮುಖ್ಯಪ್ರವರ್ತಕರಾದ ಐವರ ವಿಚಾರಣೆಯು ಪ್ರಾರ್ಮಿಯನ್ನೈದಿ ಈಚೆಗೆ ಅಲಿಪುರದ ಮ್ಯಾಜಿಸ್ಟ್ರೇಟರು ಅವರಲ್ಲಿ ಒಬ್ಬನಿಗೆ ಯೆರಡು ಸಂವತ್ಸರಗಳು, ಮಿಕ್ಕ ನಾಲ್ವರಿಗೆ ಹದಿನಾರು ತಿಂಗಳು, ಈ ಮೇರೆ ಕಠಿಣ ಸಜಾ ವಿಧಿಸಿದರು. ಉಳಿದವರ ವಿಚಾರಣೆಯು ನಡೆಯುತಲಿದೆ

ದಕ್ಷಿಣ ದೇಶದಲ್ಲಿ ಅವ್ವಲ್ ತರಗತಿ ಸರ್ದಾರರಾಗಿಯೂ, ದೊಡ್ಡ ಜಹಗೀರ್‌ದಾರರಾಗಿಯೂ ಇದ್ದ ಶ್ರೀಮಂತ ಶ್ರೀ ಬಾಬಾ ಮಹಾರಾಜರವರಿಗೆ ವಾಂತಿ ಭೇದಿ ರೋಗ ತಗಲಿ ಈ ತಿಂಗಳ ೭ನೇ ತಾರೀಖಿನ ಬೆಳಗ್ಗೆ ಪುನೆಯಲ್ಲಿ ಮೃತಪಟ್ಟರೆಂದು ಕೇಳಲು ಬಹಳ ವಿಷಾದಿಸುತ್ತೇವೆ. ಮರಣ ಕಾಲದಲ್ಲಿ ಇವರಿಗೆ ವಯಸ್ಸು ಮೂವತ್ತನಾಲ್ಕು ವರ್ಷಗಳು.

ಪುಣೇಯಲ್ಲಿ ವ್ಯಾಪಿಸಿದ್ದ ಮಹಾಮಾರೀ ರೋಗ ಪೀಡಿತರಾದವರಿಗಾಗಿ ಅಲ್ಲಿ ಸ್ಥಾಪಿಸಲ್ಪಟ್ಟ ಆಸ್ಪತ್ರೆಗಳಲ್ಲಿ ಹೆಂಗಸರಿಗೆ ಮಾನಚ್ಯುತಿಕರಗಳಾದ ಕಾರ್ಯಗಳು ನಡೆಸಲ್ಪಟ್ಟುವೆಂದು ಪಂಡಿತ ರಮಾಬಾಯಿ ಯವರು ಹೇಳಿದ್ದು ತಪ್ಪೆಂದು ಮುಂಬೈ ಗವರ್ನರವರು ಈಚೆಗೆ ತಮ್ಮ ಮಂತ್ರಾಲೋಚನ ಸಭೆಯಲ್ಲಿ ತಿಳಿಸಿದ್ದು ಸರಿಯಾದ್ದಲ್ಲವು, ಪರಂತು ರಮಾಬಾಯಿಯವರು ಹೇಳಿದ ಮಾತು ನಿಜವಾದುದೆಂದು ಮುಂಬೈ ಗಾರ್ಡಿಯನ್ ಎಂಬ ಪತ್ರಿಕೆಯು ಮುಕ್ತಕಂಠವಾಗಿ ಹೇಳುತದೆ

ಪುಣೇ ಪ್ಲೇಗ್ ಆಸ್ಪತ್ರೆಯಲ್ಲಿ ಚಿಕಿತ್ಸೆಯಬಗ್ಗೆ ಕಳುಹಿಸಲ್ಪಟ್ಟ ಹೆಂಗುಸರವಿಷಯದಲ್ಲಿ ಅಲ್ಲಿ ಅವಲಂಬಿಸಲ್ಪಟ್ಟ ಮಾರ್ಗವನ್ನು ಕುರಿತು ಹಿಂದೆ ತಾನು ಮುಂಬೈಗಾರ್ಡಿಯನ್ ಪತ್ರಿಕೆಗೆ ಬರೆದ ಲೇಖನದಲ್ಲಿ ತಿಳಿಸಲ್ಪಟ್ಟದ್ದು ಸ್ವಲ್ಪವಾದರೂ ಅಸತ್ಯವಾದುದೆಂದು ತಿಳಿಸಬಹುದಾಗಿಯೂ, ಯಾವಸಂದರ್ಭದಲ್ಲಿಯೂ ತಾನು ಹಿಂದೆ ಬರೆದಿರುವದರಲ್ಲಿ ಒಂದು ಅಕ್ಷರವನ್ನಾದರೂ ನಿರಾಕರಿಸುವದಿಲ್ಲವೆಂತಲೂ ಪಂಡಿತೆ ರಮಾಬಾಯಿಯವರು ಹೇಳುವದಾಗಿ ಜ್ಞಾನಪ್ರಕಾಶವೆಂಬ ಪತ್ರಿಕೆ ತಿಳಿಸುತದೆ.

ಇಂಡ್ಯಾದೇಶದ ಸರಹದ್ದು ಪ್ರಾಂತ್ಯಗಳ ಬೆಟ್ಟಗುಡ್ಡಗಳಲ್ಲಿ ವಾಸ್ಯಗಳ ಮಾಡಿಕೊಂಡಿರುವ ಜಾತಿ ಜನರ ಬಂಡಾಯವು ಈವೇಗ ಹೆಚ್ಚುತಬಹುದುದರಿಂದ ಸದರೀ ಜನರ ಪ್ರಾಂತವನ್ನು ಆಗಿಸಿ, ಅವರಂ ತಹಬಂದಿಸ್ಥಿತಿಗೆ ತರವೇಕಾದ್ದಾವಶ್ಯಕವಾಗಿ ಕಾಣಬಹುದು ಆದ್ದರಿಂದ ಬ್ರಿಟಿಷ್ ಸೈನ್ಯಗಳು ಅಲ್ಲಿಗೆ ಕಳುಹಿಸಲ್ಪಟ್ಟ ಯುದ್ಧ ನಡೆಯುವ ಕಾಲವಾಗಿರವದರಿಂದ, ಈಗ ರಜೆಯಲ್ಲಿರುವ ಮಿಲಿಟರಿ ಆಫೀಸರುಗಳೆಲ್ಲರು ಅವರವರ ನೌಕರಿಗಳಿಗೆ ವಾಪಸು ಬರತಕ್ಕದ್ದೆಂದು ಗವರ್ನಮೆಂಟಿನಿಂದ ಹುಕುಂ ಕೊಡಲ್ಪಟ್ಟಿರತದೆ

ಜರ್ಮನಿ ದೇಶದ ಚಕ್ರವರ್ತಿಯವರು ತಮ್ಮ ಭಾರ್ಯೆಯವರೊಡನೆ ಈಗ ರಷ್ಯಾದೇಶಕ್ಕೆ ಹೋಗಿರುತ್ತಾರೆ ಅವರು ಹೋಗಿ ಸೇರಿದ ಕೂಡಲೆ ರಷ್ಯಾ ಚಕ್ರವರ್ತಿಯವರು ತಮ್ಮ ಭಾರ್ಯೆಯವರೊಡನೆ ಅಲ್ಲಿಗೆ ಬಂದು ಕಾದಿದ್ದು ವಿಶೇಷ ಮರ್ಯಾದೆಗಳೊಡನೆ ಬರಮಾಡಿಕೊಂಡು ಸಕಲ ವಿಧಗಳೊಡನೆ ತಮ್ಮ ಅರಮನೆಗೆ ಕರೆದುಕೊಂಡು ಹೋದರು. ಜರ್ಮನೀ ಚಕ್ರವರ್ತಿಯವರು ರಷ್ಯಾ ಸಂಸ್ಥಾನಕ್ಕೆ ಹೋಗುವದಕ್ಕೆ ಉಂಟಾದ ರಾಜಕೀಯಗಳಾದ ಉದ್ದೇಶಗಳು ಫಲಿಸಿದವೆಂದು ಸ್ಪಷ್ಟವಾಗಲಿಲ್ಲವು ಕಾಲಕ್ರಮೇಣ ತಿಳಿಯಬರಬೇಕು.

ಈಚೆಗೆ ಲಕ್ನೋದ ಟೌನ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಅಲ್ಲಿನ ದೇಶಭಾಷಾ ವೃತ್ತಾಂತ ಪತ್ರಿಕೆಗಳ ಎಡಿಟರುಗಳನ್ನೆಲ್ಲ ತಮ್ಮ ಬಂಗ್ಲೆಗೆ ಕರೆಯಿಸಿ, ಕಲಹಪ್ರೇರಕಗಳಾಗಿ ಅಥವಾ ಜನರ ಹೃದಯಗಳಲ್ಲಿ ಕ್ರೋಧೋದ್ರೇಕವನ್ನುಂಟುಮಾಡುವ ಸ್ವಭಾವನ್ನುಳ್ಳ ಲೇಖನಗಳಂ ಕುರಿತು ಪ್ರಸ್ತಾಪಿಸುವ ಅಥವಾ ಸದರೀ ಲೇಖನಗಳಂ ಸಂಗ್ರಹಿಸಿ ನಿಮ್ಮ ಪತ್ರಿಕೆಗಳಲ್ಲಿ ಪ್ರಕಟಿಸುವ ವಾಡಿಕೆಯಂ ನೀವೆಲ್ಲರು ಖಂಡಿತವಾಗಿ ಬಿಡತಕ್ಕದ್ದೆಂದು ಅವರೆಲ್ಲರಿಗೂ ಬುದ್ಧಿವಾದ ರೂಪವಾಗಿ ಹೆಚ್ಚರಿಸಿದರು. ಅದಂ ಕೇಳಿ ಅಲ್ಲಿಗೆ ಬಂದಿದ್ದ ಎಡಿಟರಗಳೆಲ್ಲರು ತೃಪ್ತರಾಗಿ ಹೊರಟು ಹೋದರು.

ಮದರಾಸ ರೆಯಿಲ್ವೆ ಕಂಪೆನ್ನಿ ಸ್ಟೇಷನ್ನಲ್ಲಿ ಇಲೆಕ್ಟ್ರಿಕ್ ಲೈಟ ಎಂಬ ವಿದ್ಯುಚ್ಛಕ್ತಿ ಮೂಲಕವಾದ ದೀಪಗಳನ್ನಿಡಿಸಬೇಕೆಂದು ಸದರೀ ಕಂಪೆನಿಯ ಅಧಿಕಾರಿಗಳು ಯೋಚಿಸಿ ಅದಕ್ಕೆ ಬೇಕಾದ ಉಪಕರಣಗಳಬಗ್ಗೆ ವಿಲಾಯಿತಿಗೆ ಬರೆದಿದ್ದರಾಗಿ ಅವೆಲ್ಲವು ಕ್ಷಿಪ್ರದಲ್ಲಿ ಬಂದು ಸೇರುವವೆಂತಲೂ, ಈಬಗ್ಗೆ ಇದಕ್ಕೆ ಸಂಬಂಧಪಟ್ಟ ಇತರಕಾರ್ಯಗಳಿಗಾಗಿಯೂ ಒಟ್ಟು ಹದಿನೆಳುಸಾವಿರ ಚಿಲ್ಲರೆ ರೂಪಾಯಿಗಳು ಖರ್ಚಾಗಬಹುದೆಂದು ಅಂದಾಜಮಾಡಿ ಸದರೀ ಕಂಪೆನಿಯ ಏಜಂಟರವರು ಗವರ್ನಮೆಂಟಿಗೆ ಬರೆದು ಅವರು ಅದಂ ಮಂಜೂರ್ಮಾಡಿರುವಂತೆ ಕೇಳುತ್ತೇವೆ

ಪುಣೆಯಲ್ಲಿ ಛಾಪಿಸಲ್ಪಡುವ ಕೇಸರಿ ಎಂಬ ಪತ್ರಿಕೆಯ ಎಡಿಟರ ಪ್ರೊಫೆಸರ ಮಿ|| ತಿಲಕ್ ಎಂಬವರು ಸೆಷನ್ ಕಮ್ಮಿಟಿ ಮಾಡಲ್ಪಟ್ಟಿರುತ್ತಾರೆಯಷ್ಟೆ. ಸದರೀ ಪತ್ರಿಕೆಯನ್ನು ಛಾಪಿಸುವ ಮಿ|| ಹರಿಪಂತ್ ಗೋಖಲೆ ಎಂಬವರ ದಸ್ತಗಿರಿಯಬಗ್ಗೆ ವಾರಂಟು ಹುಟ್ಟಿದ್ದರಿಂದ ಅವರು ಈಚೆಗೆ ಮುಂಬೈ ಮ್ಯಾಜಿಸ್ಟ್ರೇಟರ ಮುಂದೆ ತಾನಾಗಿ ಹಾಜರಾಗಿ ತನ್ನ ವಿಷಯವನ್ನೆಲ್ಲ ಹೇಳಿಕೊಂಡರು ಫಿರ್ಯಾದಿಗಳು ಅವರ ಮೇಲೆ ಯಾವವಿಧತಕ್ಸೀರನ್ನು ರುಜುವಾತ್ಮಾಡಲಿಲ್ಲವಾಗಿ ಮ್ಯಾಜಿಸ್ಟ್ರೇಟರು ಅವರನ್ನು ಖುಲಾಸೆ ಮಾಡಿಬಿಟ್ಟರು

ದೇಶಭಾಷಾ ವೃತ್ತಾಂತ ಪತ್ರಿಕೆಗಳ ಲೇಖನ ವಿಷಯದಲ್ಲಿ ಲಾಹೂರ್ ಟ್ರಿಬ್ಯೂನ್ ಎಂಬ ಪತ್ರಿಕೆ ತಿಳಿಸುವ ಅಭಿಪ್ರಾಯವೇನೆಂದರೆ —ಮದರಾಸ ಮತ್ತು ವಾಯುವ್ಯ ದೇಶಗಳ ವೃತ್ತಾಂತ ಪತ್ರಿಕೆಗಳಲ್ಲಿ ಕಲಹಪ್ರೇರಕಗಳಾದ ಲೇಖನಗಳು ಏತಕ್ಕೆ ಇರುವದಿಲ್ಲವು? ಮದರಾಸ ಗವರ್ನರವರಾದ ಸರ್ ಆರ್ಥರ ಹ್ಯಾವಲಾಕ ಸಾಹೇಬರವರೂ, ವಾಯುವ್ಯದೇಶದ ಲೆಫ್ಟಿನೆಂಟ ಗವರ್ನರವರಾದ ಸರ್ ಆಂಟನಿ ಮೆಗ್ಡೊನೆಲ್ ಸಾಹೇಬರವರೂ ವಿವೇಕಿಗಳಾಗಿಯೂ ಪ್ರಜೆಗಳಲ್ಲಿ ಅನುರಾಗ ಶ್ರದ್ಧಾಪೂರ್ವಕ ರಾಜ್ಯವನ್ನಾಳತಕ್ಕವರಾಗಿಯೂ ಇರುವದರಿಂದ ಅವರ ವಿಷಯದಲ್ಲಿ ಯಾರಿಗೂ ದ್ವೇಷಾಸೂಯೆಗಳಿಲ್ಲವು, ಎಂಬುದು

ಮಿ|| ತಿಲಕ್ ಯವರ ಬಚಾವಿಗೆ ಬೇಕಾದ ಖರ್ಚುಗಳ ಬಗ್ಗೆ ಯೇರ್ಪಡಿಸಲ್ಪಟ್ಟ ಫಂಡಿಗೆ ಬಂಗಾಳದೇಶದಜಮೀನ್ದಾರರೊಬ್ಬರು ೫೦೦ ರೂಪಾಯಿಗಳು ಕೊಟ್ಟದ್ದಾಗಿ ಹುಟ್ಟಿದ ವರ್ತಮಾನವು ಸುಳ್ಳೆಂತಲೂ, ಅಲ್ಲಿನ ಜನರು ಈಗ ಬಹಳ ಪೀಡಿತರಾಗಿರುವಂತೆಯೂ, ಇದುವರೆಗೆ ಒಂದು ಕಾಸು ಸಹ ವಸೂಲಾಗಲಿಲ್ಲವೆಂತಲೂ ಗವರ್ನಮೆಂಟಿನ ವಿಷಯದಲ್ಲಿ ಅಪರಾಧ ನಡೆಸಲ್ಪಟ್ಟಿತೆಂದು ಅವರು ಎಣಿಸುವದಕ್ಕೆ ಏನಾದರ ಕಾರಣವಿದ್ದಾಗ್ಗ್ಯೂ ಅವರು ಈಗ ಅವಲಂಬಿಸಿರುವ ಮಾರ್ಗವು ಅವರಿಗೆ ಕೆಟ್ಟ ಹೆಸರನ್ನುಂಟುಮಾಡಿರುವದು ಮಾತ್ರವಲ್ಲದೆ ನ್ಯಾಯ್ಯವಾಗಿ ಅವರಲ್ಲಿ ಪ್ರಜೆಗಳಿಗುಂಟಾಗಿರಬೇಕಾದ ಅನುರಾಗವು ಹೋಗಲಾಡಿಸಿರುವದೆಂತಲೂ ಕಲ್ಕತ್ತೆಯ ಅಮೃತಬಜಾರ್ಪತ್ರಿಕೆಯು ತಿಳಿಸುತಿದೆ.

ಬರ್ಹಾಂಪುರದಲ್ಲಿ ಈಗ್ಗೆ ಕೆಲವು ದಿನಗಳ ಹಿಂದೆ ಪ್ರಾಪ್ತವಾದ ಅಗ್ನಿಯ ದೆಸೆಯಿಂದ ಮನೆಗಳಂ ಹೋಗಲಾಡಿಸಿಕೊಂಡು ಸಂಕಟ ಪಡುತಲಿರುವ ಬಡಜನರ ಸಹಾಯಾರ್ಥ, ಮುಂಬೈಯಲ್ಲಿ ಪ್ರಸಿದ್ಧ ಕೋಟೀದಾರರಾಗಿರುವ ಸರ್ ದಿನ್ಷಾ ಮಾಣಿಕ್ಜಿ ಪೇಟಿಟ್ ಯವರೂ ಅವರ ಕುಟುಂಬಕ್ಕೆ ಸೇರಿದವರೂ, ಮುಂಬೈಯಲ್ಲಿರುವ ಇತರ ದೊಡ್ಡಮನುಷ್ಯರೂ ಸೇರಿ ೪,೯೦೦ ರೂಪಾಯಿಗಳು ಕೊಟ್ಟರಾಗಿ ಮಧ್ಯಪ್ರಾಂತ್ಯದ ಚೀಫ್ ಕಮಿಷನರವರು ಮೇಲೆ ತಿಳಿಸಲ್ಪಟ್ಟ ದೊಡ್ಡ ಮನುಷ್ಯರ ಔದಾರ್ಯವಂ ಪ್ರಶಂಸಿಸಿ ಪ್ರಕಟಿಸಿರುತ್ತಾರೆ. ಪೂರ್ವಜನ್ಮಾರ್ಜಿತ ಸುಕೃತ ಬಲದಿಂದ ಈ ಜನ್ಮದಲ್ಲಿ ಲಕ್ಷ್ಮೀಕಟಾಕ್ಷಕ್ಕೆ ಪಾತ್ರರಾಗಿರುವ ಪುಣ್ಯಶಾಲಿಗಳಿಗೆ ಅವಶ್ಯಕರ್ತವ್ಯವಾಗಿರುವ ಪರೋಪಕಾರ ಚಿಂತೆಯು ಮುಂಬೈ ಸಾಹುಕಾರ್ ಜನರಲ್ಲಿ ಸಂಪೂರ್ಣವಾಗಿ ನೆಲೆಸಿರುತಿದೆ

ಆಚೆ ವಾರದಲ್ಲಿ ಮುಂಬೈ ಬ್ಯಾಂಕ್ ಷೇರ್ ಹೋಲ್ಡರಗಳು ಚೆಷ್ಮಾಹೆ ಮೀಟಿಂಗ ಸೇರಿದ್ದರು ಕಳೆದಷಷ್ಮಾಹೆಯಲ್ಲಿಒಟ್ಟು ೧೧,೪೮,೯೦೦ ರೂಪಾಯಿಗಳು ನಿವಳ ನಫೆ ಕಂಡುಬಂದು, ಸಾಲೀಯಾನಾ ಸೇಕಡ ೧೦ ರೂಪಾಯಿಗಳಂತೆ ಹಿಸ್ಸೇದಾರರಿಗೆ ನಫೆ ಬಟವಾಡೆಮಾಡಿ ೩,೦೦,೦೦೦ ರೂಪಾಯಿಗಳು ರಿಜರ್ವ ಫಂಡಿಗೆ ಕೊಟ್ಟರುವದಲ್ಲದೆಯೂ, ಹಿಸ್ಸೇದಾರರಿಗೆ ನಫೆಯಲ್ಲದೆ ಜಾಸ್ತೀಯಾಗಿ ಸೇಕಡ ಎರಡು ರೂಪಾಯಿಗಳಂತೆ ಬಟವಾಡೆ ಮಾಡತಕ್ಕಬಗ್ಗೆ ೧,೦೦,೨೦೦ ರೂ(ಪ್ರ)ತ್ಯೇಕ ತೆಗದಿಟ್ಟು ೨,೦೦,೦೦೦ ಚಿಲ್ಲರೆ ರೂಪಾಯಿಗಳು ಮುಂದಿನ ಸಾಲಿನ ಲೆಕ್ಕಕ್ಕೆ ಸೇರಿಸಲ್ಪಟ್ಟಿರುವದಾಗಿಯೂ ಡೈರೆಕ್ಟರಗಳು ತಮ್ಮ ರಿಪೋರ್ಟನ್ನು ಓದಿದರು. ಹಿಸ್ಸೇದಾರರೆಲ್ಲರು ಅದಂ ಕೇಳಿ ಬ್ಯಾಂಕನ್ನು ಬಹಳ ವರ್ಧಮಾನಸ್ಥಿತಿಯಲ್ಲಿಟ್ಟುಕೊಂಡಿರುವಬಗ್ಗೆ ಅದರ ವಿಚಾರಣಾಧಿಕಾರಗಳಿಗೆ ತಮ್ಮ ವಂದನೆಯಂ ತಿಳಿಸಿ ಸಂತುಷ್ಟಮನಸ್ಕರಾಗಿ ತೆರಳಿದರು.

ಮದರಾಸ್ಬ್ಯಾಂಕ್ ಸಾಬಕ ಕ್ಯಾಷಕೀಪರಾಗಿದ್ದು ಗತಿಸಿದ ಮಿ|| ಮನ್ನಿ ಶಿಂಗ್ರಾಚಾರ್ಯರ ಸ್ವೀಕೃತ ಪುತ್ರರಾದ ಮಿ|| ಎಂ. ತಿರುಮಲಾಚಾರ್ಯರು ಈಗ್ಗೆ ಎರಡು ವರ್ಷಗಳಕಾಲದಮೊದಲು ಈ ಶ್ರಾವಣಮಾಸದಲ್ಲಿ, ಹತ್ತು ದಿನಗಳಕಾಲ ಪ್ರತಿದಿನರಾತ್ರಿ ತಿರುವಲ್ಲಿಕ್ಕೇಣಿಯೊಳಿರುವ ತಮ್ಮ ವಾಸಗೃಹದಲ್ಲಿ ಸಂಗೀತ ವಿದ್ವತ್ಸಭೆಯೊಂದಂ ಸೇರಿಸಿ, ಕರ್ನಾಟಕ ಮತ್ತು ಹಿಂದುಸ್ತಾನೀ ಗಾಯಕರಂ ಕರೆಯಿಸಿ, ಶಾಸ್ತ್ರಾನುಸಾರ ಸದರೀ ವಿದ್ಯೆಯನ್ನಭ್ಯಸಿಸಿ ಗಾನಪೂರ್ವಕ ತಮ್ಮ ಯೋಗ್ಯತೆಯಂ ಪ್ರಕಟಪಡಿಸುವಂತವರಿಗೆಲ್ಲ ಅವರವರ ಯೋಗ್ಯತಾನುಗುಣವಾಗಿ ಸನ್ಮಾನಗಳಂ ಮಾಡುತಲಿದರೆ ಈ ಸಂವತ್ಸರದಲ್ಲೂ [illegible] ಮೊದಲು ಸದರೀ ಸಭೆಯು ನಡೆಸಲ್ಪಡುವದೆಂದು ಪ್ರಕಟಿಸಿರುತ್ತಾರೆ ಈ ಕಾಲದಲ್ಲಿ, ಮೆಲ್ಲನೆ ಕ್ಷೀಣದಶೆಗೆ ಅಶಾಸ್ತ್ರೀಯವಾದ ಗಿರಿಗಿರಿ ಸಂಗೀತವೇ ಪ್ರಬಲಿಸಿ ಶಾಸ್ತ್ರಾಭ್ಯಾಸವು ಮಾಡತಕ್ಕವರು ವಿರಳರಾಗಿರುತ್ತಾರೆ. ಮಿ| ತಿರುಮಲಾಚಾರ್ಯರ ಉದ್ದೇಶಪ್ರಯತ್ನಗಳೇನೋ ಶ್ಲಾಘನಾರ್ಹವಾದವೆ, ಪರಂತು ಅವು ಹ್ಯಾಗೆ ಈಡೇರುವುವೊ ಮುಂದೆ ನೋಡಬೇಕು

LOCAL AND PROVINCIAL NEWS.

ಒಳದೇಶಮತ್ತುತಾಲ್ಲೂಕ್ ಜಿಲ್ಲಾವೃತ್ತಾಂತಗಳು.

ಕಳೆದಜುಲೈತಿಂಗಳಲ್ಲಿ ಮೈಸೂರ್ ನಿಖಿಲರೋಗಹಾರಿ ದರ್ಮಾರ್ಥ ಜೆನರಲ್ ವೈದ್ಯಶಾಲೆಯಲ್ಲಿ ೩,೭೫೪ ಜನರು ಔಷಧ ಪಡೆದು ಗುಣಹೊಂದಿದರೆಂದು ಸದರೀ ಶಾಲಾ ಸ್ಥಾಪಕರಾದ ಪಂಡಿತಕೃಷ್ಣಜಟ್ಟಪ್ಪನವರು ತಿಳಿಸಿರುತ್ತಾರೆ

ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಚಾಮರಾಜನಗರ, ಗುಂಡಲಪೇಟೆ, ತಿರುಮಕೂಡ್ಲು ನರಸೀಪುರ, ನಂಜನಗೂಡು, ಈ ನಾಲ್ಕು ತಾಲ್ಲೂಕುಗಳಂ ಸೇರಿಸಿ ಒಂದು ಸಬ್ ಡಿವಿಜನಾಗಿ ಮಾಡಬೇಕೆಂದು ಗವರ್ನಮೆಂಟಿನವರು ಯೋಚಿಸುತಲಿರುವಂತೆ ಮೈಸೂರು ಪತ್ರಿಕೆಯೊಂದು ತಿಳಿಸುತಿದೆ

ಈದೇಶದ ಆನೆಬಂಗಡಿ ಇಲಾಖೆಯು ಈತಿಂಗಳ ೧ನೇ ತಾರೀಖಿನ ಮೊದಲು ವಜಾ ಮಾಡಲ್ಪಟ್ಟಿರುವಂತೆ ಮೈಸೂರು ಪತ್ರಿಕೆಗಳು ತಿಳಿಸುತಿವೆ ಈಚೆಗೆ ಆನೆಗಳು ಅಧಿಕವಾಗಿ ಹಿಡಿಯಲ್ಪಟ್ಟು ಅವುಗಳ ಪೋಷಣೆಯು ಗವರ್ನಮೆಂಟಿಗೆ ಭಾರವಾಗಿ ಯೇರ್ಪಟ್ಟಿರುವದರಿಂದ ಸದರೀ ಇಲಾಖೆಯು ಅನಾವಶ್ಯಕತ್ವೇನ ಭಾವಿಸಿರಬಹುದೆಂದು ತೋರುತದೆ.

ಕಳೆದ ಶನಿವಾರದಿನ ಕುದುರೆ ಜೂಜು ನಡೆಯಿತು. ಅದು ಕಡೇದಿನವಾದುದರಿಂದ ಪರತ್ತಿನ್ನೆಯ ಸುತ್ತಲು ಅನೇಕ ಸಹಸ್ರ ಜನ ಗುಂಪುಗೂಡಿದ್ದರು ಈಗಿನ ಕಾಲಸ್ಥಿತಿಯಂ ಯೋಚಿಸಿ ಈತಡವೆ ಕುದುರೆ ಜೂಜು ವರ್ಷದಿಂದ ಬಾಧಿತವಾಗುವದೆಂದು ಯೆಣಿಸಿದ್ದೆವು, ಪರಂತು ಯಾವವಿಧ ಬಾಧೆಯೂ ಇಲ್ಲದೆ ಕ್ರಮವಾಗಿ ಪರತ್ತು ನೆರವೇರಿತು.

ಸರ್ಕಾರದವರು ಈ ಸೀಮೆಯ ಕೆಲವು ಕಡೆಗಳಲ್ಲಿ ಹೊಸದಾಗಿ ಬೀಜ ಹಾಕಿಸಿ ಈಚಲುಗಿಡಗಳನ್ನು ಬೆಳೆಸಬೇಕೆಂದು ಹುಕುಂಕೊಟ್ಟು ಮಾಡಿಸಿದ್ದರು, ಆದರೆ ಅದು ಚೆನ್ನಾಗಿ ಬೆಳೆಯುವದಿಲ್ಲವೆಂತಲೂ ಅದಕ್ಕಾಗಿ ಬಹಳಶ್ರಮಪಡಬೇಕೆಂತಲೂ ಕಂಡ ಬಂದದ್ದರಿಂದ ಈಚೆಗೆ ಆ ಪದ್ಧತಿಯನ್ನು ನಿಲ್ಲಿಸತಕ್ಕದ್ದೆಂದು ಅಪ್ಪಣೆ ಕೊಟ್ಟಿರುತ್ತಾರೆ

ಈದೇಶದೊಳು ಇದುವರೆಗೆ ಅನೇಕ ತಾಲ್ಲೂಕುಗಳಲ್ಲಿ ಸ್ಪೆಷಲ್ ಸಬರಿಜಿಸ್ಟ್ರ ಆಫೀಸಗಳು ಸ್ಥಾಪಿಸಲ್ಪಟ್ಟಿವೆಯಷ್ಟೆ ಮರಳಿ ಇಪ್ಪತ್ತು ಸಬ್ ರಿಜಿಸ್ಟ್ರ ಆಫೀಸಗಳನ್ನು ಅಜಮಾಯಿಷೀ ತರೀಖ್ ಸ್ಥಾಪಿಸಬೇಕೆಂದು ರಿಜಿಸ್ಟ್ರಾರ್ ಜನರಲವರು ಗವರ್ನಮೆಂಟಿಗೆ ಶಿಫಾರಸ್ಮಾಡಿ ಮಂಜೂರಾಗಿರುವಂತೆ ಕೇಳುತ್ತೇವೆ ಒಂದು ಕಡೆ ಸಬರಿಜಿಸ್ಟ್ರೀ ಆಫೀಸಗಳೂ ಮತ್ತೊಂದುಕಡೆ ವ್ಯವಸಾಯ ಬ್ಯಾಂಕಗಳೂ ಏರ್ಪಡಾಗುವದರ ಫಲವು ಈಗಲೇಸ್ಪಷ್ಟವಾಗಿ ಕಂಡುಬಂದೇಇದೆ.

ಈ ಪುರದಲ್ಲಿ ವಾಂತಿ ಭೇದಿ ರೋಗ ತಲೆದೋರಿ ತನ್ಮೂಲಕ ಇಬ್ಬರು ಮೃತಪಟ್ಟರೆಂದು ಹಿಂದಿನ ವಾರದ ಪತ್ರಿಕೆಯ ಮೂಲಕ ತಿಳಿಸಿದ್ದೆವಷ್ಟೆ ಅದರಿಂದೀಚೆಗೆ ಸದರೀ ರೋಗಮೂಲಕವಾದ ಪ್ರಾಣಹಾನಿಗಳು ಯಾವದೂ ಇಲ್ಲವೆಂದು ತಿಳಿದು ಸಂತೋಷಿಸುತ್ತೇವೆ ಹಿಂದೂಪುರ ಮತ್ತು ಗೋರೀಬಿದನೂರು ಪ್ರಾಂತಗಳಲ್ಲಿ ಮೇಲಿನ ರೋಗವು ವ್ಯಾಪಿಸಿರುವಂತೆ ಈಚೆಗೆ ನಮ್ಮ ಕೇಳ್ವಿಕೆಗೆ ಬಂತು, ಪರಂತು ಅದರ ವಾಸ್ತವ್ಯಂಶವು ಇನ್ನು ಚೆನ್ನಾಗಿ ತಿಳಿಯಬರಲಿಲ್ಲವು.

ಕಲರಾರೋಗಕ್ಕೆ ಔಷಧಿ—ಶ್ರೀರಂಗಪಟ್ಟಣದ ರಂಗನಾಥ ವೈದ್ಯಶಾಲೆಯ ಪಂಡಿತರಾದ ನ| ಅಳಸಿಂಗರ ಪಂಡಿತರು ಈ ರೋಗಕ್ಕೆ ತಕ್ಕ ಔಷದಿಯನ್ನು ಕಂಡುಹಿಡಿದು ಇದುವರೆಗೆ ಆ ಊರಿನಲ್ಲಿ ಅನೇಕರನ್ನು ಬದುಕಿಸಿರುತ್ತಾರೆ, ಅನೇಕ ಅಧಿಕಾರಿಗಳು ಕೆಲವು ಸಂದರ್ಭಗಳಲ್ಲಿ ಇದಕ್ಕಾಗಿಯೇ ಅವರಿಗೆ ಇನಾಮುಗಳನ್ನು ಕೊಟ್ಟಿದ್ದಾರೆ, ಆದಕಾರಣ ಎಲ್ಲರೂ ಈ ಪಂಡಿತರಿಗೆ ಬರೆದು ಅವರಿಂದ ಔಷಧಿಯನ್ನು ತರಿಸಿಟ್ಟುಕೊಳ್ಳಬೇಕೆಂದು ಅಲ್ಲಿನ ಬಾತ್ಮೀದಾರರು ಬರೆದಿರುತ್ತಾರೆ.

ಫ್ರೆಂಚ್‌ರಾಕ್ಸ ಸಬಡಿವಿಜನಿಗೆ ಸೇರಿದ [illegible]ಗ್ರಾಮದಲ್ಲಿರುವ ಒಬ್ಬ ಸ್ಮಾರ್ತಬ್ರಾಹ್ಮಣನು ಯೆರಡಾವರ್ತಿ ಕಾಶೀಯಾತ್ರೆಮಾಡಿ ಗಂಗೆಯನ್ನು ತಂದು ತನ್ನ ಮನೆಯಲ್ಲಿಟ್ಟುಕೊಂಡು ಪೂಜೆ ಮಾಡುತಲಿದ್ದಾನೆ ಈತನಿಗೆ ಬಾಲವಿಧವೆಯಾದ ಸೊಸೆಯೊಬ್ಬಳಿರುತ್ತಾಳೆ ಈತನ ಹೆಂಡತಿ ಪರಸ್ಥಳಕ್ಕೆ ಹೋಗಿದ್ದ ಕಾಲದಲ್ಲಿ ಈ ರಾವಣ ಸನ್ಯಾಸಿಯು ಸೊಸೆಯಂ ಬಲಾತ್ಕಾರದಿಂದ ಕೆಡಿಸಲು ಅವಳು ಗರ್ಭಿಣಿಯಾಗಿ ಪ್ರಸವಕಾಲ ಪ್ರಾಪ್ತವಾಗಲು ಈ ಸಂದರ್ಭ ಯಾವಮಾರ್ಗದಿಂದಲೊ ಸರ್ಕಾರಕ್ಕೆ ತಿಳಿಯಬಂದು ಸಬ್ ಡಿವಿಜನ್ ಆಫೀಸರವರು ಆಕೆಯ ಪ್ರಸವಕ್ಕೆ ಅಲ್ಲಿನ ಸತ್ರದೊಳು ಸ್ಥಳಮಾಡಿ ಅದಕ್ಕೆ ಆವಶ್ಯಕಗಳಾದ ಇತರಯೇರ್ಪಾಡುಗಳನ್ನೆಲ್ಲ ಮಾಡಿಸಿದರು ಆಕೆಯನ್ನು ಕರೆಯಿಸಿ ವಿಚಾರಿಸುವಲ್ಲಿ ತನ್ನ ಮಾವನೇ ತನ್ನನ್ನು ಕೆಡಿಸಿದ್ದಾಗಿ ಹೇಳಿ ಆ ಘಾತುಕನೂ ತಾನುಮಾಡಿದ್ದುಂಟೆಂದು ಒಪ್ಪಿಕೊಂಡದರಿಂದ ಅಧಿಕಾರಿಗಳು ಆಕೆಯ ಪ್ರಸವ ಖರ್ಚುಗಳನ್ನೆಲ್ಲ ಆತನಕೈಯಿಂದಲೇ ಕೊಡಿಸಿದರು ಈಚೆಗೆ ಆಕೆಯು ಪ್ರಸವಿಸಿದಳೆಂದು ಸಹ ತಿಳಿಯಬರುತಿದೆ. ಈ ಮಹಾಪಾಪಿಯ ದುಷ್ಕೃತ್ಯವನ್ನು ಶ್ರೀ ಶೃಂಗೇರಿ ಶ್ರೀ ಸ್ವಾಮಿಗಳವರು ವಿಚಾರಿಸಿ ಆತನಿಗೆ ತಕ್ಕಶಿಕ್ಷೆಯಂ ವಿಧಿಸುವರೆಂದು ನಂಬುತ್ತೇವೆ.

ಕಾಲಸ್ಥಿತಿಯು ಕೇವಲ ಚಿಂತನೀಯವಾಗಿದೆ. ವರ್ಷವೆಂಬುದು ಸುತರಾಂ ಇಲ್ಲವು, ಈತಿಂಗಳ ೭ನೇ ತಾರೀಖಿಗೆ ಮುಗಿದ ವಾರದ ಬಾಬತು ಸರ್ಕಾರಿ ರಿಪೋರ್ಟನ್ನು ನೋಡಲಾಗ ಸದರೀ ವಾರದಲ್ಲಿ ಬೆಂಗಳೂರು, ಕೋಲಾರ, ತುಮಕೂರು, ಮೈಸೂರು, ಚಿತ್ರದುರ್ಗ, ಈ ಡಿಸ್ಟ್ರಿಕ್ಟುಗಳಲ್ಲಿ ಸುತರಾಂ ವರ್ಷವಿಲ್ಲವೆಂದು ತಿಳಿಯಬರುತಿದೆ. ಕಾಲ ವರ್ಷವಿಲ್ಲದೆ ಹೋದುದರಿಂದಲೂ ಮುಂದೆಯಾದರು ಮಳೆ ಬರುವ ನಂಬಿಕೆ ಇಲ್ಲದೆ ಹೋದುದರಿಂದಲೂ ಅಲ್ಲಿಯಲ್ಲಿ ಅಲ್ಪಸ್ವಲ್ಪ ಸಾಗುವಳಿಯಾಗಿರುವಂತೆ ಕಾಣುತಿದೆಯೇ ಹೊರತು ಯಲ್ಲಿಯೂ ಪೂರಾ ಸಾಗುವಳಿಯಾಗಿರುವಂತೆ ತೋರಲಿಲ್ಲವು ಈಗಿನ ಸ್ಥಿತಿಯಂ ನೋಡಲಾಗಿ ನೆಲದಲ್ಲಿ ಬಿದ್ದ ಬೀಜಗಳು ಮೇಲಕ್ಕೆ ಯೇಳುವ ಸಂಭವ ಕಂಡುಬರಲಿಲ್ಲವು ಈ ದೇಶದ ಸ್ಥಿತಿ ಹೀಗಿರುವಲ್ಲಿ ಇದಕ್ಕೆ ಸಮೀಪದಲ್ಲಿರುವ ಮದರಾಸ ಪ್ರೆಸಿಡೆನ್ಸಿಗೆ ಸೇರಿದ ಕೆಲವು ಡಿಸ್ಟ್ರಿಕ್ಟುಗಳ ತಾತ್ಕಾಲಿಕ ಸ್ಥಿತಿಯು ಮತ್ತಷ್ಟು ಭೀತಿಯನ್ನುಂಟುಮಾಡದೆ ಹೋಗಲಿಲ್ಲವು. ಕಾವೇರೀ ನದಿಯ ಆಸರೆಯುಳ್ಳ ತಿರುಚನಾಪಲ್ಲಿ ತಂಜಾವೂರು ಡಿಸ್ಟ್ರಿಕ್ಟುಗಳಲ್ಲಿಮಾತ್ರ ಪೂರಾ ಸಾಗುವಳಿ ಆಗುತಲಿರುವಂತೆಯೂ ಅನ್ಯತ್ರ ಅದಕ್ಕೆಸುತರಾಂ ಅವಕಾಶವಿಲ್ಲದೆರೈತಾಬೀಜನರು ರಿಲೀಫ್ ಕೆಲಸಗಳ ಪ್ರಾರಂಭವಂ ಆತುರದೊಡನೆ ನಿರೀಕ್ಷಿಸುತಲಿರುವಂತೆಯೂ ತಿಳಿಯಬರುತಿದೆ

THE MYSORE GAZETTE.
ಮೈಸೂರು ಗೆಜೆಟ್.

ಗುರುವಾರ, ೫ನೇ ಆಗಸ್ಟ್ ೧೮೯೭.

ಮೈಸೂರ ಗವರ್ನಮೆಂಟಿನವರಿಂದ ಕೊಡೋಣಾದ
ಅಸ್ತಿ ಹುಕೂಮುಗಳು,
ಜನರಲ್ ಮತ್ತು ರೆವಿನ್ಯೂ.

ತಾರೀಖ್ ೫ನೇ ಆಗಸ್ಟ್ ೧೮೯೭.

ನಂ|| ೧೮೯೩೩-ಎ, ೩೦೭—ಅಸಿಸ್ಟೆಂಟ್ ವ ಸಬ್ ಅಸಿಸ್ಟೆಂಟ್ ಸರ್ಜನಗಳ ಈ ಕೆಳಗೆ ಕಂಡ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತವೆ :—

೧. ಮೈಸೂರು ಜನರಲ್ ಆಸ್ಪತ್ರೆಯಲ್ಲಿ ಕೆಲಸ ನೋಡುತಲಿರುವ ಸಬ ಅಸಿಸ್ಟೆಂಟ್ ಸರ್ಜನ ಮೆ|| ಜಿ. ಎ. ಕೊಯಿಲ್ಹೊ, ಎಲ್. ಎಂ. ವ ಎಸ್. ರವರು ತುಮಕೂರು ಲೋಕಲ್ ಫಂಡ್ ವೈದ್ಯ ಶಾಲೆಯಲ್ಲಿ ಕೆಲಸ ನೋಡತಕ್ಕದ್ದು.

೨. ಬೆಂಗಳೂರು ಸಿಡುಬಿನ ಶಾಲೆಯಲ್ಲಿ ಕೆಲಸ ನೋಡುತಲಿರುವ ಆಕ್ಟಿಂಗ್ ಅಸಿಸ್ಟೆಂಟ್ ಸರ್ಜನ ಮೆ||ಟಿ. ಎ. ಕುಪ್ಪುಸ್ವಾಮಿ ಮುದಲಿಯಾರ್, ಎಲ್. ಎಂ. ವ ಎಸ್, ರವರು ಮೈಸೂರು ಜನರಲ್ ಆಸ್ಪತ್ರೆಯಲ್ಲಿ ಕೆಲಸ ನೋಡತಕ್ಕದ್ದು.

ತಾ|| ೩ನೇ ಆಗಸ್ಟ್ ೧೮೯೭.

ನಂ|| ೨೮೯೩-ಡಿ. ೨೧೨—ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ ೧೨ನೇ ಸೆಕ್ಷನ್ ಅನುಸಾರ ಕಾರ್ಯಾನಹಳ್ಳಿ ತಾಲ್ಲೂಕು ಅಮಲ್‌ದಾರ್ ಪಿ. ಶ್ರೀನಿವಾಸಾಚಾರ್ಯ ಮತ್ತು ಅನೆಕಲ್ ತಾಲ್ಲೂಕು ಅಮಲ್‌ದಾರ್ ಬಿ. ಶ್ರೀನಿವಾಸರಾಯರು ೨ನೇ ಕ್ಲಾಸಿನ ಮಾಜಿಸ್ಟ್ರೇಟುಗಳಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾ|| ೩ನೇ ಆಗಸ್ಟ್ ೧೮೯೭.

ನಂ||೧೫೪೫೦-೭. ೫೦೩—ಪಾಲಿ ಮಧ್ಯಗಿರಿ ತಾಲ್ಲೂಕಿನ ಆಕ್ಟಿಂಗ್ ಅಮಲ್‌ದಾರ್ರಾಗಿರುವ ಕೊರಟಗೆರೆ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್‌ದಾರ್ ಬಿ. ವಾಸುದೇವರಾಯರು ಮತ್ತೊಂದು ಹುಕುಂ ಕೊಡುವ ಪರಿಯಂತ ತಿಪಟೂರು ತಾಲ್ಲೂಕಿನ ಅಮಲ್‌ದಾರ್ ವ ೩ನೇ ಕ್ಲಾಸ ಮಾಜಿಸ್ಟ್ರೇಟಾಗಿ ಆಕ್ಟಿಂಗ್ ತರೀಕ ಮೊಕರರ್ ಮಾಡಲ್ಪಟ್ಟಿರುತ್ತಾರೆ. ಅಮಲ್‌ದಾರ್ ಬಾಸ ಯ್ಯನವರಿಗೆ ಚಾರ್ಜ್ ಒಪ್ಪಿಸಿದ ತರುವಾಯ ಕೆಲಸದಮೇಲೆ ಹೋಗಿ ಸೇರತಕ್ಕದ್ದು.

ತುಮಕೂರು ತಾಲ್ಲೂಕು ಪೋಲೀಸ ಇನ್ಸ್‌ಪೆಕ್ಟರ್ ನಾಗೇಶ್ವರಯ್ಯರವರು ಸದರೀ ಡೆಪ್ಯುಟಿ ಅಮಲ್‌ದಾರ್ ಬಿ. ವಾಸುದೇವರಾಯರು ಬೇರೆ ಕೆಲಸದಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಕೊರಟಗೆರೆ ಸಬ್‌ತಾಲ್ಲೂಕಿನ ಡೆಪ್ಯುಟಿ ಅಮಲ್‌ದಾರ್ ವ ೩ನೇ ಕ್ಲಾಸ ಮಾಜಿಸ್ಟ್ರೇಟಾಗಿ ಆಕ್ಟಿಂಗ್ ತರೀಕ ಇರತಕ್ಕದ್ದು.

SUMMARY OF NEWS.
ವೃತ್ತಾಂತ ಸಂಗ್ರಹವು.

ಮುಂಬೈಯಲ್ಲಿ ಪ್ರಸಿದ್ಧರಾದ ದಿನ್‌ಷಾ ಅರ್ದೇಶಾಜಿ ಎಂಬಾತನು ಧರ್ಮ ಕೆಲಸಗಳಿಗಾಗಿ ತಮ್ಮ ಆಸ್ತಿಯಿಂದ ೮೦,೦೦೦ ರೂಪಾಯಿಗಳನ್ನು ತೆಗದಿಟ್ಟಿದಾರೆ.

ಲಖನೋದಲ್ಲಿ ಒಬ್ಬ ಮುಸಲ್ಮಾನನು ಸಭೆಯಲ್ಲಿ ಸರ್ಕಾರದ ವಿರುದ್ಧ ಭಾಷಣ ಮಾಡಿದ್ದರಿಂದ ಆವನಿಗೆ ೧ವರ್ಷ ಸಾಧಾರಣ ಖೈದಿನ ಶಿಕ್ಷೆ ಕೊಡಲ್ಪಟ್ಟಿತು.

ಕ್ಷಾಮ ಪ್ರಾಪ್ತವಾದಕಾರಣ ಹಿಂದುಸ್ಥಾನದ ಉತ್ಪತ್ತಿಯಲ್ಲಿ ೧೨||ಕೋಟಿ ರೂಪಾಯಿನಷ್ಟು ಇಂಡ್ಯಾಗವರ್ನಮೆಂಟಿನವರಿಗೆ ನಷ್ಟವಾಗಿದೆ ಎಂಬದಾಗಿ ಸ್ಟೇಟ್ ಸೆಕ್ರೆಟರಿಯವರು ಹೇಳಿರುತ್ತಾರೆ.

ಒಂದೇವೇಳೆ ನಾಲ್ಕು ಮಕ್ಕಳು—ಲಾಹೂರಲ್ಲಿ ದೆಹಲೀ ಬಾಗಲ ಹತ್ತರ ಇರುವ ಒಬ್ಬ ಹೆಂಗಸಿಗೆ ಒಂದರಹಿಂದೊಂದು ನಾಲ್ಕು ಮಕ್ಕಳು ಆದವೆಂದು ಜಾಡ್ ಅಕಬರ್ ಪತ್ರದಲ್ಲಿ ಪ್ರಕಟಿಸಲ್ಪಟ್ಟಿದೆ.

ಕಲ್ಕತ್ತೆಯಲ್ಲೂ ಆಸ್ಸಾಮಿನಲ್ಲೂ ಇನ್ನೂ ಭೂಕಂಪಗಳು ಸಣ್ಣದಾಗಿ ಆಗಾಗ್ಗೆ ಆಗುತಲೇ ಇವೆ. ಕೆಲವು ವೇಳೆ ೧—೨ ನಿಮಿಷಗಳ ವರಿಗೂ ಭೂಮಿ ನಡುಗುತಲಿರುವದೇತ್ತ, ಆದರೆ ಹಿಂದೆ ಆದಂತಾ ಅನಾಹುತವೇನೂ ಆಗಲಿಲ್ಲ.

ರಾಮನಾಮದ ರೂಪಾಯಿಗಳು—ಇವು ರಾವಲ್‌ಪಿಂಡಿ ಜಿಲ್ಲೆಯಲ್ಲಿ ಬಾಬಾರಲಾಲ ಕಾರತಿ ಎಂಬವರಲ್ಲಿ ಒಂದು ಹಳ್ಳದೊಳು ತೆಗೆದ ಮಣ್ಣಿಯಲ್ಲಿ ಸಿಕ್ಕುತಿವೆ. ಒಬ್ಬ ಸ್ತ್ರೀಯಳಿಗೆ ಇವುಗಳ ಗಣೆಯು ಸಿಕ್ಕದ್ದರಿಂದ ಅವಳು ತಾಗ್ಗೆ ಸರ್ಕಾರದವರ ವಶದಲ್ಲಿ ಇಡಲ್ಪಟ್ಟಿದಾಳೆ.

ಪುಂಗನೂರು ಜಮೀನ್ದಾರರಾದ ರಾಜಾ ಶಂಕರರಾಯಲು ಮುಕೋವೆಂತ ಬಹದೂರ್ ಸಿ. ಐ ಇ, ಯವರು ಕಳೆದತಿಂಗಳ ೨೩ನೇ ತಾರೀಖ್ ಮಧ್ಯಾಹ್ನ ಮರಣವನ್ನು ಹೊಂದಿದರು. ಅವರ ಜ್ಯೇಷ್ಠ ಪುತ್ರರು ಹಂಪೆಯ ಹತ್ತರ ಇರಲಿಲ್ಲವು, ಲಿಂಗಾಯಿತರ ಪದ್ಧತಿ ಪ್ರಕಾರ ಶವವನ್ನು ಸಮಾಧಿ ಮಾಡಿ ಬಡವರಿಗೆಲ್ಲ ಭತ್ತದಾಗಿಯನ್ನು ಕೊಟ್ಟರು.

ಜಲಪ್ರಳಯ—ಆಚೆ ಅಕವಣಿಯಲ್ಲಿ ಕಲ್ಕತ್ತೆ ಯಾಕಷೆ (ಎರಡ್ವೆ) ಎಂಬದರಲ್ಲಿ ಕೆಲವುಪ್ರಳಯವಾಗಿ ೫—೬೧ ಮೈಲು ನೆಲವು ನೀರನಲ್ಲಿ ಮುಳುಗಿಹೋಗಿರುತಿದೆ, ಈಗಲೂ ಅದರ ಪತ್ತೇ ಇಲ್ಲವು ದುಷ್ಕಾಳವೂ, ಧರಣೀ ಕಂಪವೂ, ಅಗ್ನಿಪ್ರಳಯವೂ, ಅಂಟುರೋಗವೂ ಮತ್ತು ಜಲಪ್ರಳಯವೂ ಇಷ್ಟು ಸಾಮಗ್ರಿಯು ಕೂಡಿದಮೇಲೆ ಜನರ ಅವಸ್ಥೆಯು ಏನಾದೀತು:? ಇದರಬಗ್ಗೆ ವಿಚಾರ ಮಾಡಲಿಕ್ಕೇ ಬೇಡ,

ಸುರತದ ಕಲೆಕ್ಟರ್ ಮೆಕ್ ಮೂರ್ ಎಂಬವರಿಗೆ ಒಂದು ನಿನಾವಿ ಪತ್ರ ಬಂದಿತ್ತು. ಅದರಲ್ಲಿ ನಾನು ರ್‍ಯಾಂಡನನ್ನು ಕೊಂದು ಅಹಮದಾಬಾದಿಗೆ ಹೊರಟಿವೇನೆ, ಪ್ರಸಂಗ ಬಂದರೆ ನಿನ್ನನ್ನೂ ಹೊಡೆಯುವೆನು. ಆದ್ದರಿಂದ ಎಚ್ಚರದಿಂದಿರಬೇಕು, ಎಂಬದಾಗಿ ಬರೆಯಲ್ಪಟ್ಟಿತಂತೆ, ಆದ್ದರಿಂದ ಮೆ|ಮೂರ್ ಎಂಬವರನ್ನು ಮುಂಬೈಗೆ ನೇಮಿಸಿದರೆಂದು ಗುಜರಾತಿ ಪತ್ರವು ತಿಳಿಸುತಿದೆ.

ಹಿಂದುಸ್ಥಾನದ ಉತ್ತರದಿಕ್ಕಿನ ಎಲ್ಲೆಯ ಹತ್ತರ ಬೆಟ್ಟಗುಡ್ಡಗಳ ಸರಹದ್ದುಗಳಲ್ಲಿ ವಾಸ ಮಾಡುವ ಜಂಗಿಕೋರರಾದ ಮಹಮ್ಮದೀಯರು ಈಗ ಇಂಗ್ಲಿಷನವರಮೇಲೆ ಯುದ್ಧಮಾಡುತಲಿದಾರೆ. ಈ ಯುದ್ಧಗಳಲ್ಲಿ ಕಳೆದವಾರ ಇಂಗ್ಲಿಷನವರ ಕಡೆ ೩೦ ಮಂದಿ ಸತ್ತರು, ೧೨೦ಜನರಿಗೆ ಘಾಯಗಳಾದವು, ಆದರೆ ಮಹಮ್ಮದೀಯರಲ್ಲಿ ಇದುವರೆಗೆ ೨,೦೦೦ ಜನರ ತನಕ ಸತ್ತುಹೋದರು, ಆದರೂ ಅವರು ಸ್ವಸ್ಥವಾಗಿರದೆ ಇನ್ನೂ ತೊಂದರ ಕೊಡುತಲಿದಾರೆ.

ಹಿಂದುಸ್ಥಾನದ ಕೆಲವು ಭಾಗಗಳಲ್ಲಿ ಕ್ಷಾಮವು ದಿನೇದಿನೇ ಹೆಚ್ಚುತಲೇ ಇದೆ, ಕೆಲವು ಕಡೆಗಳಲ್ಲಿ ಮಾತ್ರ ಉಳಮುಖವಾಗಿದೆ. ವಾಯುವ್ಯ ಪ್ರಾಂತಗಳಲ್ಲಿ ೧೯,೦೦೦ ಜನರು ಬಳೀಫ್ ಕಾಮಗಾರಿಗಳಿಗೆ ಹೋಗದೆ ಉಳಿದ ಕೆಲಸದಲ್ಲಿದಾರೆ, ಆದರೆ ಮಧ್ಯಪ್ರಾಂತಗಳಲ್ಲೂ ದಕ್ಷಿಣದೇಶದಲ್ಲೂ ಮಳೆ ಸುರಿಯದೆ ಇನ್ನೂ ಬಹು ಭೀತಿಯನ್ನುಂಟುಮಾಡಿದೆ. ಕ್ಷಾಮಪೀಡಿತರ ಸಂಖ್ಯೆಗೆ ಮಧ್ಯಪ್ರಾಂತದಲ್ಲಿ ೩೧,೦೦೦ ಜನರು ಹೆಚ್ಚಿದರು, ಒಟ್ಟು ಹಿಂದುಸ್ಥಾನದಲ್ಲೆಲ್ಲ ಕಳೆದವಾರ ೩೧,೩೩,೦೦೦ ಪ್ರಜೆಗಳು ರಿಲೀಫ್ ಕಾಮಗಾರಿಗಳಿಂದ ಜೀವನ ಮಾಡುತಿದ್ದರು.

ಬೇರಾರ್ ಡಿಸ್ಟ್ರಿಕ್ಟಿಗೆ ಸೇರಿದ ಪಾರಾಜ ಎಂಬ ಊರಲ್ಲಿ ಒಬ್ಬ ಹೆಂಗಸು ತನ್ನ ೩ ದಿನದ ಎಳೇ ಕೂಸನ್ನು ಮಂಚದ ಮೇಲೆ ಮಲಗಿಸಿ ಮನೆಯೊಳಗೆ ಏನೋ ಕೆಲಸ ಮಾಡುವದಕ್ಕಾಗಿ ಹೋದಳು, ಅವಳು ಹೊರಕ್ಕೆ ಬರುವದರೊಳಗಾಗಿ ಒಂದು ದೊಡ್ಡ ಕೋತಿಯು ಆ ಮಗುವನ್ನು ಎತ್ತಿಕೊಂಡು ಮರದಮೇಲಕ್ಕೆ ಹಾರಿಹೋಗಿ ಕೂತುಕೊಂಡಿತು. ಅವಳು ಮಗುವನ್ನು ಹುಡುಕುತ ಹೊರಗೆ ಬಂದಳು, ಮಗುವನ್ನು ಕೋತಿ ಎತ್ತಿಕೊಂಡಿರುವದನ್ನು ನೋಡಿ ಬಿಡಿಸಿಕೊಳ್ಳಬೇಕೆಂದು ಏನೇನೂ ಉಪಾಯ ನಾಡಿದಳು, ಅದು ಮಗುವನ್ನು ಬಿಡದೆ ತನ್ನ ಹೊಟ್ಟೆಯಲ್ಲಿ ಸೇರಿಸಿಕೊಂಡು ಮರಗಳಮೇಲೆ ಹಾರುತ ಮನೆಯಿಂದ ಮನೆಗೆ ಹಾರುತ ಕೊನೆಗೆ ಅದೃಷ್ಟವಶಾತ್ ಮಗುವನ್ನು ತಂದು ಅದೇ ಮಂಚದಮೇಲೆ ಮಲಗಿಸಿ ಓಡಿಹೋಯಿತು. ಈಗ ಆ ಮಗು ಆರೋಗ್ಯವಾಗಿ ಬೆಳೆಯುತಲಿದೆ ಎಂದು ಪತ್ರಿಕೆ ತಿಳಿಸುತಿದೆ.

ರಂಗಪುರದ ದಿಕ್ ಪ್ರಕಾಶವೆಂಬ ಪತ್ರಿಕೆಯು ಹೀಗೆ ಬರೆಯುವದು :—ಕಳೆದ ಜ್ಯೇಷ್ಠಬಹುಳ ತ್ರಯೋದಶಿ ಭಾನುವಾರ ಅಂದರೆ ಕಳೆದ ಜೂನ್ ೨೭ನೇ ತಾರೀಖಿನದಿನ ರಾಜವಂಶ ಎಂಬ ಪಂಗಡಕ್ಕೆ ಸೇರಿದ ಬುಧು ರಾಮದಾಸ ಎಂಬಾತನೊಬ್ಬನು ಬಾಲೆಪೊರ ಎಂಬ ಗ್ರಾಮದಲ್ಲಿ ಮೃತನಾದನು ಈ ವರ್ತಮಾನವನ್ನು ಕೇಳಿದ ಆತನ ಸತಿಯು ತನ್ನ ಪತಿಯು ಮೃತಪಟ್ಟಿದ್ದ ಸ್ಥಳಕ್ಕೆ ನಡೆಗುತ್ತಲೂ ವಿವರ್ಣವೆಳ್ಳಮುಖದಿಂದಲೂ ಕೂಡಿ ಹೋಗುತ್ತಿದ್ದದ್ದನ್ನು ನೋಡಿ ಸಮೀಪದಲ್ಲಿದ್ದವರು ಎಷ್ಟು ತಡೆದರೂ ಕೇಳದೆ ತನ್ನ ಪ್ರಾಣನಾಥನ ದೇಹವು ಇದ್ದ ಹಾಸಿಗೆಯಮೇಲೆ ಹೋಗಿ ಮಲಗಿದಳು ಈ ವೀರಪತಿವ್ರತೆಯು ಸ್ವಲ್ಪಹೊತ್ತಿನಲ್ಲಿಯೇ ಪತಿಸಾಯುಜ್ಯವನ್ನೇ ಹೊಂದಿದಳು ಈ ಸುದ್ದಿಯನ್ನು ತಿಳಿದು ಎಂದ ಅಸಂಖ್ಯಾಕವಾದ ಜನರಗುಂಪು ಬಂದು ಜಾತ್ರೆಗೆ ಹೋಗುವಂತೆ ಹರಿಬೋಲ್ ಹರಿಬೋಲ್ ಎಂಬದಾಗಿ ಜಯಧ್ವನಿಯೊಡನೆ ಬರುತ್ತಿತ್ತು, ಅಸಾಧಾರಣವಾದ ಈ ಮಹಾಪತಿವ್ರತೆಯು ಮತ್ತು ಆಕೆಯ ಪತಿಯು ದೇಹಗಳಿಗೆ ಕ್ರಮಪ್ರಕಾರ ಸಂಸ್ಕಾರಾದಿಗಳು ನಡೆದವು.

ಬೃಂದಾವನದಲ್ಲಿ ಕೆಲವು ದಿನಗಳ ಕೆಳಗೆ ಒಂದು ದೊಡ್ಡ ಉತ್ಸವವು ನಡೆಯಿತು. ಈ ಉತ್ಸವಕ್ಕೆ ಸಾವಿರಾರು ಪ್ರಜೆಗಳು ನಾನಾಕಡೆಗಳಿಂದಲೂ ಬರುವದರಿಂತಲೂ ಆದರೆ ಆರಸ್ತೆಯಲ್ಲಿ ಕಳ್ಳರಕಾಟವು ಹೆಚ್ಚಾಗಿದೆಯೆಂತಲೂ ಸರ್ಕಾರದವರು ಮೊದಲೇ ಹೋಚಿಸಿ ಆ ರಸ್ತೆಯಲ್ಲಿ ೨೦೦—೩೦೦ ಗಜಗಳಿಗೆ ಒಂದೊಂದು ಸ್ಥಳದಲ್ಲಿ ಪ್ರಯಾಣಿಕರಿಗೆ ಯಾವದೊಂದು ಅಪಾಯವೂ ಸಂಭವಿಸದಂತೆ ನೋಡಿಕೊಳ್ಳಬೇಕೆಂದು ಇಬ್ಬಿಬ್ಬರು ಪೋಲೀಸಿನವರನ್ನು ನೇಮಿಸಿದರು. ನನ್ನುವಾ, ಭುಂಡಾ ಎಂಬಿಬ್ಬರು ಒಂದು ಮಜಲಿನಲ್ಲಿ ಪಹರೆ ಕೊಡುವ ಪೋಲೀಸನವರಾಗಿದ್ದರು. ಕೆಲವು ಹೆಂಗಸರು ಆ ರಸ್ತೆಯಲ್ಲಿ ಒಂಟಿಯಾಗಿ ಹೋಗುತಿರುವದನ್ನು ಕಂಡು ಇವರಿಬ್ಬರೂ ಸೇರಿ ಆ ವರನ್ನು ಹಿಡಿದು ಹೊಡೆದು ಅವರ ಹತ್ತಿರವಿದ್ದ ನಗ ನಾಣ್ಯಗಳನ್ನು ಕದ್ದುಕೊಂಡರು. ಈ ಜಗಳದಲ್ಲಿ ಒಬ್ಬ ಹೆಂಗಸು ಒಬ್ಬ ಪೋಲೀಸನವನ ಕೈ ಬೆರಳುಗಳನ್ನು ಕಡಿದುಬಿಟ್ಟಳು. ಮತ್ತೊಬ್ಬಳು ಎರಡನೇ ಪೋಲೀಸನವನಕೈಯಲ್ಲಿದ್ದ ದೊಣ್ಣೆಯನ್ನು ಕಿತ್ತುಕೊಂಡಳು, ಅವರಿಬ್ಬರೂ ತಲೆ ತಪ್ಪಿಸಿಕೊಂಡು ಓಡಿಹೋದರು. ಆದರೆ ಆ ಹೆಂಗಸರು ಹೋಗಿ ತಮಗೆ ದಾರಿಯಲ್ಲಿ ಸಂಭವಿಸಿದ ಸಂಗತಿಯನ್ನು ಸರ್ಕಾರದವರಿಗೆ ತಿಳಿಸಿದರು. ಸರ್ಕಾರದವರು ಕಳ್ಳರನ್ನು ಪತ್ತೇಮಾಡುವದಕ್ಕೆ ಕಳುಹಿಸಿದಾಗ ತಾವು ನೇಮಿಸಿದ್ದ ಪೋಲೀಸನವರೇ ದಾರಿಯಲ್ಲಿ ಕಳ್ಳತನ ಮಾಡಿದರೆಂದು ತಿಳಿದವರಾಗಿ ಸುತ್ತಮುತ್ತಲಿದ್ದ ಹಳ್ಳಿ ಕಾಡುಗಳಲ್ಲಿ ಅವರನ್ನು ಹುಡುಕಿಸಿದರು. ಕೊನೆಗೆ ಆಕೈ ಮುರುಕೊಂಡವನೂ ದೊಣ್ಣೆ ಕಳಕೊಂಡವನೂ ಸಿಕ್ಕಿದರು. ದರ್ಯಾಪ್ತಿಯಲ್ಲಿ ನಿಜಾಂಶವೆಲ್ಲ ಹೊರಗಾಯಿತು, ಈಗ ಸೆಷನ್ ಜಡ್ಜಿಯವರು ಅವರಿಬ್ಬರಿಗೂ ಬಂಕೋಲೆ ಶಿಕ್ಷೆಯನ್ನು ವಿಧಿಸಿದರು, ಹೈಕೋರ್ಟಿನವರೂ ಕೂಡ ಅದೇ ಶಿಕ್ಷೆಯನ್ನು ಕಾಯಂಮಾಡಿದರು,

NOTICE.

VAIDYASARA SANGRAHA.

A TREATISE ON THE PRINCIPLES OF

HINDU MEDICINE

Price, including Postage Rs. 5—0—0.

ವೈದ್ಯಸಾರಸಂಗ್ರಹ.

ಇದು ಚರಕ, ವಾಗ್ಭಟ, ಸುಶ್ರುತ, ಶಾರ್ಙ್ಗಧರಾದ್ಯನೇಕ ಪೂರ್ವಗ್ರಂಥಗಳ ಸಂಗ್ರಹ ರೂಪವಾಗಿರುತಿದೆ,
ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಹಾಸಲ್ ದೇಖೀಲ್ ಪ್ರತಿ ೧ಕ್ಕೆ ೫—೦—೦
ಬೇಕಾದವರು ಬೆಂಗಳೂರು ಕರ್ನಾಟಕ ಪ್ರೆಸ್ ಪ್ರೊಪ್ರೈಟರವರಿಗೆ ಬರೆದು ತರಿಸಿಕೊಳ್ಳಬಹುದು.

V. IYANOR'S
PREPARATIONS.
ವಿ. ಅಯನಾರ್ ಎಂಬವರಿಂದ ತಯಾರು ಮಾಡಲ್ಪಟ್ಟ
ಪ್ರಸಿದ್ಧ ಔಷಧಗಳು.

ಕಯಿಕಡಿನ್ಸ್ಯಾರ್.—ಇದು ಹೊಟ್ಟೆಶೂಲೆ, ಅಜೀರ್ಣ, ಕರುಳು ನೋವು, ವಾಂತಿಭೇದಿ, ಅಜೀರ್ಣಭೇದಿ, ದೇಹಶಕ್ತಿ, ಕೆಮ್ಮು, ಮೂತ್ರಕಟ್ಟು, ಬಾಯಿಹುಣ್ಣು, ರಕ್ತಸ್ರಾವ, ಆರ್ತವ ದೋಷಜನ್ಯಗಳಾದ ಸ್ತ್ರೀಯರ ಉಪಾಧಿಗಳು, ತಲೆನೋವು, ದಂತಶೂಲೆ, ಘಾಯ ಮೊದಲಾದವುಗಳಿಗೆ ಬಹಳ ಉಪಯುಕ್ತವಾದದ್ದು. ಇದರ ಕ್ರಯ ದೊಡ್ಡಸೀಸೆ ೧ಕ್ಕೆ ೧ ರೂ. ಸಣ್ಣಸೀಸೆ ೧ಕ್ಕೆ ೮ ಆಣೆ.

ಮಹಾಕರ್ಪೂರ ತೈಲ.—ಸೀರ್ಘಕಾಲಿಕ ನೋವು, ಪಕ್ಕಶೂಲೆ, ಕೊಂಡನೋವು, ತಲೆಶೂಲೆ ಇವು ಪರಿಹಾರವಾಗುವದು. ಇದರ ಕ್ರಯ ದೊಡ್ಡಸೀಸೆ ೧ಕ್ಕೆ ೧ ರೂ. ಸಣ್ಣ ಸೀಸೆ ೧ಕ್ಕೆ ೮ ಆಣೆ.

ಜ್ವರದ ಧೃತಿ.—ಇದು ಎಂತಾ ಜ್ವರವನ್ನಾದರು ಎರಡು ದಿನಗಳೊಳಗಾಗಿ ನಿವೃತ್ತಿ ಮಾಡತಕ್ಕದ್ದು. ದೊಡ್ಡ ಸೀಸೆ ೧ಕ್ಕೆ ೧ ರೂ. ಸಣ್ಣಸೀಸೆ ೧ಕ್ಕೆ ೮ ಆಣೆ.

ಓಮಕರ್ಪೂರ ಕಷಾಯ.—ಇದು ಶೀತಭೇದಿ, ರಕ್ತಭೇದಿ, ರಜಸ್ವಲೆಯರಿಗುಂಟಾಗುವ ಉಪಾಧಿ, ಎದೆನೋವು, ಹೊಕ್ಕಳನೋವು ಇವುಗಳಿಗೆ ಬಹಳ ಪ್ರಯೋಜನಕರವಾದದ್ದು ಇದರ ಕ್ರಯ ದೊಡ್ಡಸೀಸೆ ೧ಕ್ಕೆ ೧ರೂ. ಸಣ್ಣಸೀಸೆ ೧ಕ್ಕೆ ೮ಆಣೆ

ಮೋಹನವಾಯು ಎಣ್ಣೆ.—ಇದು ಸೋಹನಾಯುವಿನಿಂದ ಶರೀರವು ಉಬ್ಬುವದು, ಚರ್ಮವು ಒಡೆಯುವದು, ಶಿರಃಶೂಲೆ ತಲೆನೋವು, ಗ್ರಂಥಿಗಳು ಇವುಗಳಿಗೆಲ್ಲ ಬಹಳ ಉಪಯುಕ್ತವಾದದ್ದು. ಇದರ ಕ್ರಯ ದೊಡ್ಡಸೀಸೆ ೧ಕ್ಕೆ ೧ರೂ ಸಣ್ಣಸೀಸೆ ೧ಕ್ಕೆ ೮ ಆಣೆ.

ವ್ಯಾಘ್ರತೈಲವು.—ಇದು ನಡುವು ನೋವು, ಕೀಲುನೋವು, ಪಾರ್ಶ್ವನೋವು, ಅರತಲೆನೋವು, ಬಿಚ್ಚಿಗತ್ತೆ ಇವುಗಳಿಗೆ ಪ್ರಸಿದ್ಧವಾದ ತೈಲವು. ದೊಡ್ಡ ಡಬ್ಬಿ ೧ಕ್ಕೆ ೧ ರೂ, ಸಣ್ಣ ಡಬ್ಬಿ ೧ಕ್ಕೆ ೮ ಆಣೆ

ಶ್ವೇತಕ್ಕೆ ಔಷಧ.—ಇದು ಸಕಲವಿಧ ಮೇಹರೋಗಗಳಿಂದ ಜನಿಸುವ ಬಿಳುಪು, ಹಸಿರು ಹಳದಿ ಸ್ತ್ರೀವಿಷಯಕ ರ ರೋಗಾದಿಗಳಿಗೆಲ್ಲಕ್ಕೂ ಶೀಘ್ರವಾಗಿಯೂ, ಮರಳಿ ಎಂದಿಗೂ ಬಾರದಂತೆ ನಿಶ್ಶೇಷವಾಗಿಯೂ ಗುಣಪಡಿಸತಕ್ಕಂತಾ ಔಷಧ. ಇದರ ಕ್ರಯ ಸೀಸೆ ೧ಕ್ಕೆ ೧ ರೂ. ೮ ಆಣೆ.

ಕೂದಲು ನರೆಯದೆ ಕಪ್ಪಾಗಿ ಬೆಳೆಯಲಿಕ್ಕೆ ಔಷಧ—ಈ ತೈಲವು ನರೆತ ಕೂದಲುಗಳನ್ನು ಕಪ್ಪಾಗಮಾಡುವದು, ಕೂದಲು ಬೆಳೆಯದಿರುವಸ್ಥಳಗಳಲ್ಲಿ ಹುಟ್ಟಿ ಬೆಳೆಯುವದು ಇದನ್ನು ತಲೆಗೆ ಹಚ್ಚಿಕೊಂಡು ಸ್ನಾನಮಾಡಬಹುದು ಮತ್ತು ಸುವಾಸನೆಯುಳ್ಳದ್ದಾಗಿರುತಿದೆ. ಇದರಕ್ರಯ ಸೀಸೆ ೧ಕ್ಕೆ ೧ ರೂ.

ಕರ್ಣರೋಗಕ್ಕೆ ತೈಲ—ಈ ತೈಲವನ್ನು ೮ ದಿವಸಗಳ ಕಾಲ ಕಿವಿಯಲ್ಲಿ ಕೆಲವು ತೊಟ್ಟುಗಳು ಬಿಡುತಬಂದರೆ, ಕಿವಿಯಲ್ಲಿನ ಕಷ್ಟ ಮೊದಲಾದ ವ್ಯಾಧಿಗಳನ್ನು ಪರಿಹರಿಸುವದು ಇದರ ಕ್ರಯ ೧ ರೂಪಾಯಿ.

ವೀರ್ಯವೃದ್ಧಿಗೆ ಔಷಧ—ಈ ಔಷಧವು ಯಾವ ವ್ಯಾಧಿಯಿಂದಲಾದರು ಕೆಟ್ಟುಹೋಗಿರುವ ಇಂದ್ರಿಯವನ್ನು ಗಟ್ಟಿ ಮಾಡಿ ದೇಹಕ್ಕೆ ಬಲ ಬರುವಂತೆ ಮಾಡುವದು. ಇದಲ್ಲದೆ ಬಾಲ್ಯದಲ್ಲಿ ಹಸ್ತಕ್ರಿಯೆ ಮೊದಲಾದ ವ್ಯಾಧಿಯನ್ನಾದರು ಪರಿಹರಿಸುವದು. ಇದನ್ನು ಉಪಯೋಗಿಸುವ ವಿಧಾನ—ದಿನಕ್ಕೆ ಎರಡಾವರ್ತಿ ಭೋಜನವಾದಮೇಲೆ ೩೦—೩೫ ಬಿಂದು ನೀರಲ್ಲಿ ಕಲೆಸಿ ತೆಗೆದುಕೊಳ್ಳಬೇಕು. ಇದರ ಕ್ರಯ ರೂ. ೧

☞ ವಿಳಾಸ— ಬಳ್ಳಾರಿ ಬಜಾರ್ ಬೀದಿಯಲ್ಲಿರುವ ವಿ. ಅಯನಾರ್ ಡಿಸ್ಪೆನ್ಸರಿಗೆ ಬರೆದು ತರಿಸಿಕೊಳ್ಳಬಹುದು

Messrs. V. Iyanor & Co's. Dispensary
Bellary

ಈ ಕಂಪೆನಿಯು ಸನ್ ೧೮೯೩ನೇ ಇಸವಿಯಲ್ಲಿ ಸ್ಥಾಪಿತವಾಯಿತು.

ಜನ್ಮದ ಲಾಭವು.

ವಜ್ರಾಂಗ ಖರ್ಜೂರವು.

ಬಲಾರೋಗ್ಯ, ಪುಷ್ಟಿಗಳನ್ನು ಬೆಳಸತಕ್ಕ ಉತ್ತಮವಾದ ಉತ್ಪತ್ತಿಯು.

ಅತ್ಯುತ್ಕೃಷ್ಟಕರವಾದ ಖರ್ಜೂರಗಳಿಂದ ತಯಾರಿಸಿದ ಈ ಉತ್ಪತ್ತಿಗಳು ಲೋಕಪ್ರಸಿದ್ಧವಾದ ಅನೇಕ ವನಸ್ಪತಿಗಳ ಸಾರಗಳ ಪುಟಗಳನ್ನು ಕೊಟ್ಟು, ತುಪ್ಪದೊಳಗೆ ಮಾಗಿಸಿ, ಒಳ್ಳೇ ಜೇನಿನ ತರಗತಿಯ ಸಕ್ಕರೆಯ ಪಾಕದಲ್ಲಿ ಸಿದ್ಧ ಮಾಡಿರುತ್ತೇವೆ. ಈ ಉತ್ಪತ್ತಿಗಳು ಮಹೌಷಧಗಳಾದದ್ದು, ಒಳ್ಳೇ ರುಚಿಯುಳ್ಳವವು ಇವುಗಳ ಸೇವನೆಯಿಂದ ಕಫ, ವಾತ, ಪಿತ್ತ ಈ ತ್ರಿದೋಷಗಳುಂಟಾಗತಕ್ಕ ಯಾವತ್ತು ಬಗೆಯ ವ್ಯಾಧಿಗಳೂ ಹೋಗುತ್ತವೆ. ೬೦ ವರ್ಷಗಳ ಪ್ರಾಯದವರು ಸಹ ... ಪೂರ್ಣ ತರುಣರಂತೆ ಪ್ರಜ್ವಲಿತವಾಗುತ್ತದೆ. ... ಬಲ ಹೆಂಟಿಗ ನಪುಂಸಕತ್ವವು ಇಲ್ಲದಂತಾಗುತ್ತದೆ ಅಥವಾ ಮುಂಚೆ ಅಥವಾ ಹಿಂಚೆ ... ಧಾತು ನಿಲ್ಲುತ್ತದೆ. ಸ್ವಪ್ನದೋಷವು ಆಗುವದಿಲ್ಲ ವೀರ್ಯವು ಬೆಳೆದು ಅದರ ಬಣ್ಣವು ಸುಧಾರಿಸುತ್ತದೆ ನಿರವಾ ... ಉಪಸಂಬಂಧಿಕ ರೋಗಗಳೆಲ್ಲ ಇಲ್ಲದಂತಾಗಿ ಧಾತು ಪುಷ್ಟವಾಗುತ್ತದೆ. ಮೂರು ಹೊತ್ತಿಂದಲೂ ಅನ್ನ ಪಚನವಾಗಿ ಒಳ್ಳೇ ಹಸಿವೆಯಾಗುತ್ತದೆ. ತೋರುವದೊಂದೆ ತರ ಕೊಡಲೇ ಸ್ವಚ್ಛ ಶೌಚವಾಗುತ್ತದೆ. ಕ್ಷಯ, ಉದರ, ದಮ್ಮು ರೋಗಗಳು ನಾಶ ಹೊಂದುತ್ತವೆ. ಹೋಸ ಬೇನೆ ಇದ್ದಲ್ಲಿ ೧೧ ದಿವಸಗಳ ವರಿಗೆ ತಿಂದರೆ ಒಂದೇ ಡಬಿಯಿಂದ ಗುಣವುಂಟಾಗುತ್ತದೆ. ಮತ್ತು ಹಳದಿದ್ದಲ್ಲಿ ೪೦ ದಿನಗಳ ಮೇಲೆ ಗುಣ ಬಂದೀತು. ೧೧ ದಿನಗಳವರಿಗೆ ಸಾಲತಕ್ಕ ೧ ಡಬ್ಬಿಗೆ ೧-೮-೦ ರೂ||ಹಿಂದೆನ್ನಾಕೃತ್ಯ ೪ ಡಬ್ಬಿಗಳು ತಕ್ಕೊಳ್ಳತಕ್ಕವರಿಗೆ ಒಂದು ಡಬ್ಬಿಯು ಉಚಿತವಾಗಿ ಸಿಕ್ಕೀತು. ಈ ಉತ್ಪತ್ತಿಯಿಂದ ಹೆಂಗಸರು ಸತೇಜರಾಗುತ್ತಾರೆ. ಶರಗಿನ ರೋಗೂ ಜಾಣಂತಿ ರೋಗಳು ವಾಸಿಯಾಗುತ್ತವೆ. ಎಲ್ಲರನ್ನೂ ಸರಿಯಾಗಿ ರೋಗ ಇಲ್ಲದವರನ್ನಾಗಿ ಮಾಡಿ ಆರೋಗ್ಯ ಪುಷ್ಟಿಗಳನ್ನು ಬೆಳೆಸುತ್ತವೆ. ಸಾವಿರಾರು ಜನರಲ್ಲಿ ಬಹಳ ಡಬ್ಬಿಗಳು ಖರ್ಚಾಗುತ್ತವೆ ಈ ಔಷಧವು ಈ ಕಂಪೆನಿಯಹೊರ್ತು ಬೇರೆ ಸ್ಥಳದಲ್ಲಿ ಆಗುವದಿಲ್ಲ. ಯಾವತ್ತು ದೇಶಗಳಲ್ಲಿಯು ವೈದ್ಯಶಾಲೆಗಳಿಗಾಗಿ ಕಳುಹಿಸಲ್ಪಡುತ್ತದೆ. ಬರೆದು ಒಂದು ಕೊಡಲೆ ಈ ಕಂಪೆನಿಯು ಬೇಕಾದವರಿಗೆ ಈ ಡಬ್ಬಿಗಳು ಕಳುಹಿಸಿಕೊಟ್ಟೀತು. ಅಂಚೆಯ ಹಾಗೂ ವ್ಯಾಲ್ಯು ಪೇಯಬಲ್ ವೆಚ್ಚ ಬೇರೆ ಕೊಡಬೇಕು (ಉಚಿತ ಡಬ್ಬಿ ಸಹ ೮ ಡಬ್ಬಿಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬಾಕಾದ್ದೂ ಎಲ್ಲಾ ಖರ್ಚಿನ ಹಾಕಿ ರವಾನಿಸುವೆವು, ಹೀಗೆ ಕಳುಹಿಸಿದರೆ ಪಾರ್ಸಲ್ ಖರ್ಚು ಕಡಿಮೆ ಬೀಳುವದು.)

ಮೋಲ್ಕಿಳಾಸ—ಸಿ. ಎಲ್ ಎ. ಬ್ರದರ್ಸ್ ಮತ್ತು ಕಂಪೆನಿ,

ಫಸ್ಟ ಇಂಗ್ಲಿಷ ಬ್ರ್ಯಾಂಚ್ ಆಫೀಸ್, ಡಿಸ್ಟ್ರಿಕ್ಟ ಬೆಳಗಾಂವ.

ಪೋಸ್ಟ—ಬೆಳಗಾಂವ. Post BELGAUM.

BANGALORE :—Printed and Published at the KARNATAKA PRESS, No. 40, HOSPITAL ROAD, CITY,—1897.

THE

Karnataka Prakasika.

ಪ್ರಕಟನೆಯ ದರಖಾಸ್ತು. } ಮೊದಲನೆಯ ದಫೆ ಪಙ್ಕ್ತಿ ಒಂದಕ್ಕೆ 0 2 0
ಎರಡನೆಯ ದಫೆ ಪಙ್ಕ್ತಿ ಒಂದಕ್ಕೆ 0 1 0
[ಮೂರು ದಫೆಗಿಂತ ಜಾಸ್ತಿಯಾಗಿ ಎಷ್ಟು ದಫೆ ಮುದ್ರಿಸಿದರೂ ಪಙ್ಕ್ತಿ ಒಂದಕ್ಕೆ ಅರೆಯಾಣೆಯಂತೆ ಲೆಕ್ಕ ಮಾಡಲ್ಪಡುವದು.]

ಕರ್ಣಾಟಕ ಪ್ರಕಾಶಿಕಾ.

Published Every Monday Morning

ಚಂದಾದರಗಳು — ಸ್ಥಳದವರಿಗೆ, ಪರಸ್ಥಳದವರಿಗೆ, ಪೋಸ್ಟೇಜ್ ಸೇರಿ
ಸಾಲ್ 1 ಕ್ಕೆ ... 3 0 0 | ಸಾಲ್ 1 ಕ್ಕೆ ... 4 0 0
6 ತಿಂಗಳಿಗೆ, ... 2 0 0 | 6 ತಿಂಗಳಿಗೆ .. 2 8 0
3 ತಿಂಗಳಿಗೆ, 1 4 0 | 3 ತಿಂಗಳಿಗೆ ... 1 8 0

ಪ್ರಕಾಮವಿವಿಧಪ್ರವೃತ್ತ್ಯುಪಗಮಾರ್ಹ ಕರ್ಣಾಟಕಪ್ರಕಾಶನಪರಾಭಿಧಾಪ್ರಥಿತಸಾಹಿತೀಶೋಭಿತಾ ॥ ನೃಗಾಂತಹಿತವಾಸರನಿಹಿತಮುದ್ರಣಾಸಜ್ಜನೈರ್ದಿಶಾಸುಪರಿಘೋಷಿತಾ ಚಿರತಿವಮನನಸಂವದಾ ॥

Vol. XXIV. BANGALORE:—MONDAY, AUGUST 23, 1897. No. 34.

Select Telegrams

London, 13th Aug —All anarchists are being expelled from France and Spain, and are taking refuge in London

Simla, 15th Aug —Although the Amir cannot be charged with any openly hostile acts towards us, yet there is little reason to doubt that even if he has had no hand in directly promoting disturbances, yet his sympathies are strongly in favour of the risings, and the tribes are doubtless assured of his tacit acquiescence

It is believed that a letter has been written to the Amir by the Government of India conveying a warning note Such a letter has supported by the news of our movements of troops of Rawal Pindi, cannot but have a useful effect There is no truth in the rumour that the Amir has lately withdrawn his agent from Simla

London, 16th Aug The murderer of Lord Canovas has been sentenced by Court Martial to death

The *Times* states that Lord Elgin has addressed a severe remonstrance to the Amir regarding the participation of Afghan tribesmen in the recent fighting

Elaborate preparations are being made at St Petersburg to entertain President Faure on a magnificent scale, and many Russian towns are sending deputations to him with gifts.

London 18th Aug —The hitch in the peace negotiations is owing to Great Britain alone objecting to the proposal to allow Turkey to hold a portion of Thessaly, only gradually withdrawing until the whole indemnity is paid

London, 19th Aug —Advices from Constantinople states that an explosion took place yesterday below the Grand Vizier's department at the Porte, and that one person was killed and several injured

A simultaneous abortive attempt was made at Galata

Several arrests have been made.

Constantinople, 19th Aug — All three of those arrested here for being concerned in the Bomb outrages yesterday are Armenians The police are actively searching for accomplices in the outrage Great excitement prevails in the city, and the streets are patrolled

London, 19th Aug —The Duke and Duchess of York met with the heartiest reception at Dublin

THE

Karnataka Prakasika.

MONDAY, AUGUST 23, 1897.

CLOUDS IN THE NORTH.

Affairs on the north-west frontier of India are assuming a threatening attitude. The Government, it is believed, is keeping matters as secret as possible, but still enough has leaked out to make the public feel that something of importance is occurring on the frontier. Troops have been despatched to the north in hot haste. These have been sent fully equipped for war. They have taken with them everything that may be required for a campaign, and the authorities must be of opinion that such an event may occur or they would not send the soldiers so fully prepared. There is a fight now going on at Malakhand, and the work has been very warm. The British have lost a number of men, and it has caused much surprise that the enemy was able to muster in such large numbers The population in that part of the country is very scanty, but yet the fighting men showed up in many thousands and gave much trouble It seems now pretty clear how this was brought about The best Afghan General with a large army is near the scene of action, and it is known that he allowed his men to join the Mahomands, as the men now fighting against the British are called. Not only this but the Ameer has supplied the tribesmen with arms, hence the loss that has been sustained The facts of the case are well known to the authorities at Simla, and hence they are sending troops to be ready for any emergency If the Ameer of Afghanistan continues to act in this unfriendly manner the end of it will be war. Of this there can be no doubt. The Government of this land cannot allow its power to be set at defiance, and if the Ameer is inclined to go wrong he will be proceeded against. For sometime past his conduct has been rather suspicious. He called together a large number of moulvis, and it is believed they recommended him to commence a *jihad* This, to say the least, is very likely, for these men are generally in favour of war. Then the Ameer has written a book on *jihad*, and this must have had an effect upon the people over whom he rules In the next place he sent a special envoy to congratulate the Sultan of Turkey on the victories he gained over the Greeks, and it is thought that the two have entered into some sort of alliance, and that they may try to do mischief. An envoy from the Sultan lately visited Afghanistan Of course the Ameer may be able to give proper explanations, and if so, matters will go on in the future as they have in the past But if he cannot there will be war, and it may be very severe The troops of Afghanistan are far better drilled and armed than they were when they last fought against us, and the contest would be so much the harder The Ameer has been heavily subsidised by the British, and should there be war the British would have provided the money for their enemy to proceed against them The outlook is anything but bright, and it is to be hoped that the clouds will blow over without war The country has been afflicted sufficiently of late We have had famine, plague, earthquakes, and now if we have war on the top of all this, our condition will be very bad indeed. The victories the Sultan has gained in Greece has caused a flutter throughout the Mohamedan world, these people think they are equal to anything, and so it would not be surprising if the Ameer thought he was strong enough to fight against this country, or if his people who are fearfully fanatical, forced him into war. We may not have long to wait before we see the turn matters will take.

A WRONG STEP.

The Municipal Commissioners of the Civil and Military Station have been for sometime past revising the new rules that are shortly to come in force. A good many changes have been made, and though some of the changes will be beneficial others will be just the opposite By the new laws the Commissioners will be able to appoint a Vice President, or two if they like These should be chosen from the body of the Commissioners. The persons selected should not be officials But in the Civil and Military Station an official is to be the Vice President. The Secretary to the President is first to be made a Commissioner, and then he will become Vice-President. We hold that this is in direct contravention of the rules, of the spirit, if not of the very letter We believe it was the President of the Municipality who made this proposal, and he most certainly ought to have known better But probably the spirit of officialism is so strong in him, that he could not resist desiring to have another official to assist him in the discharge of his duties The elected Commissioners must have no power whatever, and the worst of it is that the Sub-Committee appointed to revise the rules agreed with the President. It now remains to be seen whether the President will agree to the arrangement, and it is sincerely hoped that he will not. The Commissioners of the Station have much to learn about Local self-Government.

News and Notes.

The Bombay Police arrested two men on Monday night in connection with the Poona murders but were released afterwards.

The Calcutta Committee of the Poona Prosecution Fund will shortly remit, we understand, Rs 10 000

His Highness the Cooch Behar Maharajah's offer to serve in the Malakhand expedition has been accepted by Government. He will serve under Brigadier General Yeatman-Biggs.

It is understood that communications are now passing between the Government of India and the Amir of Afghanistan regarding the participation of Afghans in the recent raids upon Shabkadr Fort and in the Tochi Valley.

The *Bombay Gazette* learns that Mr. Justice Starcley presides at the Sessions on Wednesday, the first September. Minor cases will be tried on the first three days. The Hon'ble Mr. Tilak's case will be taken on September sixth.

The Simla correspondent of the *Statesman* wires the terms imposed on the Madda Khels which include the surrender of the ringleaders in the Maizar affair and payment of fines, Rs. 11,200 in cash or arms, and forfeiture of subsidy.

The Madras Government has lent the services of Mr. S Swaminatha Iyer, Deputy Collector, Calicut, to the Rajah of Cochin for a period of one year to overhaul the accounts of the State which are said to be in a confused condition The Sirkar wanted to get Mr Swaminatha Iyer on a monthly salary of Rs. 500, but as he refused to go for anything less than Rs 700 a month, the Rajah's Government has eventually agreed to his terms

A Duel is impending between the Revenue Secretariat and the Collector of Malabar in regard to famine. Mr Dance has observed the existence of famine in his District, while the Revenue Secretariat has a theory that there can be no famine in Malabar It is significant, however, that during the week ending with the 7th instant, the number of reported deaths in Malabar from cholera alone is 1,661. Mr. Gabriel Stokes will never yield without a struggle, however unholy it may be

What will the High Court do with the Hon'ble Mr. Tilak? That is a difficult question to answer It is even difficult to speculate about Why, even the Judge who presides at the Sessions in which the Hon'ble Mr Tilak is to be tried, cannot answer that question The jury will have to decide it one way or the other At the time of admitting the Hon'ble Mr Tilak to bail, the Hon'ble Mr Justice Tyabjee is reported to have said that the evidence then on record was not so overwhelming as to have made a commitment absolutely necessary. This is one view of the question.

A Monghyr correspondent sends us the particulars of a case of abduction and assault by a European; but as the records are not before us, we suppress the names for the present. It is said that a European carried off the wife of a Mahomedan and was trying to deport her from Lakhmiserai to Calcutta. On the station, it is alleged, the injured husband dared to protest against the conduct of the sahib who replied by assaulting him There was a case, which came to be heard by a senior Deputy Magistrate of Monghyr, who convicted the accused and sentenced him to pay a fine of rupees 20 only

Reuter's special correspondent wired the following to the English papers on the 29th ultimo. "During the prevalence of the plague the older Natu was taken to the Poona segregation camp, much to his displeasure, and also very much to the surprise of his neighbours, who found it difficult to understand how such a leader in Israel, a wealthy sirdar of the Deccan to boot, could be treated like common folk. So great a commotion did his segregation cause that people were heard to say "You will see what will happen when Natu comes out." It is evidently on such hearsay that Government have deported the Natu brothers.

The Special Magistrate trying the Talla rioters convicted sixty nine out of the seventy-four accused, sentencing sixty-six to one year's rigorous imprisonment and three on consideration of youth to six months A large number of the prisoner's friends gathered in the Court compound where special Police arrangements were made. Some prisoners wept loudly, while others on leaving called out to their friends: "for the sake of Imam we have done this. Brothers, now look after our family" The Magistrate's judgment says that there must have been a certain amount of organisation about the disturbance is clear, but there is no evidence as to the organisers but the accused who took part in the riot.

Mr C Kelly, who stood charged with causing the death of a *syce*, has been let off with a fine of Rs. 50 by the District Magistrate of Lahore Several witnesses deposed to

the fact that they had seen the accused giving a push to the deceased, who fell down on the ground. His skull was fractured and the bleeding inside the head caused his death And all this was considered as the result of a simple hurt on the part of Mr Kelly by the District Magistrate! The Police Inspector, who conducted the case insisted on the Magistrate to frame a charge under section 325 of the Indian Penal Code but he was not listened to The matter ought to draw the attention of the Punjab Government For, violent deaths of 'natives' at the hands of Europeans are getting too frequent and the practice should be put a stop to by exemplary punishments

THE latest unearthed of the achievements of the Chinese, says the *Pioneer*, is the discovery of America many, many centuries before Columbus was heard of Yet the fact is almost completely beyond doubt Recent discoveries have revealed the fact that there are Chinese inscriptions in Mexico which are estimated to be at least two thousand years old Those inscriptions were found on antique monuments in the Magdelena district of the State of Sonora, Mexico, the State which adjoins Arizona It would appear that there is a Chinese tradition to the effect that thousands of years ago an exploring party from China landed on the coast of Mexico and divided into eighteen parties When these interesting inscriptions have been fully translated it is expected that much information will be forthcoming

In Travancore just now there is widespread famine and cholera The people are suffering very much, but the Maharajah's Government does not seem to have as yet recognised the gravity of the situation This delay and hesitation to grapple with the evil will reflect on the good name of the administration, and a Native Government can ill afford to be charged with neglect of its famine-stricken population The recent excessive rain has, we are informed, completely destroyed this year's crops, and there is no chance for the Kanni crops at all The prices have all gone up very high From Muvatupuzha and other places reports reach us that people are dying of starvation It is high time that the Dewan took steps to give relief to the poor in distress and misery.

SIR M Bhownaggree's attack on Sir William Wedderburn has called forth indignant remarks from Indian newspapers of all shades of opinion The *Hindu Patriot* observes "We are not surprised at the performance of Sir M Bhownaggree Now that Sir William Wedderburn has withdrawn the charges against the Bombay administration, even Sir M Bhownaggree has the audacity to kick at the temporarily prostrate lion Well, Sir William Wedderburn had no personal interest to serve in accusing the Plague authorities of Poona of having been guilty of oppression But can the same be said of his Parsee opponent in regard to his desperate efforts at white-washing the Bombay Government? Sir William's object was to expose tyranny and oppression May we ask what was the object of Sir M Bhownaggree in making such a petulant attack upon a high minded, and we may almost say chivalrous, English man the laclets of whose shoes he is unworthy to unloose? Perhaps some day the people of India will raise a statue to Sir William Wedderburn They may yet burn his opponent in effigy"

Local and Provincial

THE MAHARANI REGENT —Will leave for the capital about the 28th of this month in time to celebrate the Gowrie and Ganesha festival

THE PLAN OF THE PALACE —The Plan of the Mysore Palace is still in course of preparation in Ooty, consuming, it is said, a sum of rupees two hundred every month

THE DASARA DURBAR —Arrangements are being made for holding the Dasara Durbar in the Jagan Mohan Palace this year A temporary spacious verandah will be put up for the purpose.

MR. T. T LEONARD —We are given to understand that this gentleman, the President of the City Municipality, who left for England some months ago, left Scotland for Bangalore, on the 7th instant.

THE WEATHER —On Wednesday night we had a good shower of rain, and again on Thursday night there was a slight shower. This rain has done good to the crops and it is believed there is no fear of scarcity.

THE PARSEE THEATRE —Is now performing to crowded houses in a pandal in the compound of the Hindu Club The acting is very good, and it is not to be wondered at the people attending should be so many The Company will remain here for some time.

THE MYSORE POLICE SPORTS —Came off on the 18th evening on the plain opposite the Office of the City Municipality There were present the Maharani Regent, the Maharajah of Mysore, the British Resident, the Dewan, many European ladies and gentlemen

INSPECTOR GENERAL OF EDUCATION —By a ruling of the Mysore Durbar it is notified that the Government has been pleased to confer on the Inspector General of Education the power exercised by the late Education Secretary of granting to a stipendiary normal scholar if he belongs to the provincial local or municipal service, a portion not exceeding one half of the pay of his substantive appointment, in addition to his stipend, provided there is no extra cost to Government in making temporary arrangement for his work

The Mysore Gazette

Bangalore, Thursday, 19th August 1897

NOTIFICATIONS BY THE GOVERNMENT OF MYSORE

GENERAL AND REVENUE

No 2363—*J* 2o8, *dated, 16th Aug* 1897

Under the provisions of Section 197 of the Code of Criminal Procedure, Mr T Paramasiva Iyer, B A 1st Class Magistrate and General Assistant Commissioner, Hassan district, is directed to take down the evidence of witnesses in cases tried by him with his own hand in the English language

No 1682—*R* 543 *dated* 10*th Aug* 1897

Under Article 172 of the Mysore Service Regulations, H Gundappa, Amildar of the Honnali taluk, Shimoga district is granted casual leave of absence for fifteen days, with effect from the 16th August 1897, the Taluk Sheristadar being in charge of the current duties of the taluk during the absence of the Amildar on leave or until further orders

No 1725—*R F* 1?1-96 *dated* 11*th Aug* 97

Under Article 168 of the Mysore Service Regulations, C Venkat Rao, B A, Amildar of the Nanjangud taluk, Mysore district, is granted privilege leave of absence for two months with effect from the 5th August 1897 or such other date as he may avail himself of the same

2 Gopalakrishna engar, B A B L, Acting Deputy Amildar, French Rocks is appointed to act as Amildar and 3rd Class Magistrate of the Nanjangud taluk during the absence of Venkat Rao on leave, or until further orders K Srinivasa Rao B A, Revenue Probationer will act as Deputy Amildar and 3rd Class Magistrate of French Rocks during the absence of Gopalakrishna engar on other duty

No 1781—*R* 585, *dated* 11*th Aug* 97

Under Article 188 of the Mysore Service Regulations, G R Srinivasaiengar, Amildar of the Davangere taluk, Chitaldrug district, is granted privilege leave of absence for three months, with effect from such date as he may avail himself of the same

2 M Ranganatha Rao, Deputy Amildar of the Harihar sub-taluk is appointed to act as Amildar and 3rd Class Magistrate of the Davangere taluk during the absence of G R Srinivasaiengar on leave or until further orders, and B S Venkatesaiya, Head Accountant, Chitaldrug District Office, to act as Deputy Amildar and 3rd Class Magistrate of the Harihar sub taluk during the absence of Ranganatha Rao on other duty or until further orders.

ಕರ್ನಾಟಕ ಪ್ರಕಾಶಿಕಾ.

೧೮೯೭ನೇ ಇಸವಿ ಆಗಸ್ಟ ತಾ॥ ೨೩ನೇ ಸೋಮವಾರ

ಇಂಡ್ಯದೇಶದ ಸರಹದ್ದು ಪ್ರಾಂತದ ಸ್ಥಿತಿ

ಈಗ ಇಂಡ್ಯರಾಜ್ಯದ ವಾಯುವ್ಯಪ್ರಾಂತದ ಸ್ಥಿತಿಯು ಭಯಂಕರವಾಗಿದೆ. ಗವರ್ನಮೆಂಟಿನವರು ಅಲ್ಲಿನ ವರ್ತಮಾನಗಳಂ ರಾಜಕೀಯಗಳಾದ ಆಲೋಚನೆಯಿಂದ ಸರ್ವ ಅಂತರಂಗದಲ್ಲಿಟ್ಟುಕೊಂಡಿದ್ದಾಗ್ಯೂ ಸರಹದ್ದು ಪ್ರಾಂತದಲ್ಲಿ ಪ್ರಬಲ ಕಾರ್ಯಗಳೇನೋ ನಡೆಯುತಲಿವೆ ಯೆಂದು ಜನಗಳಿಗೆ ತಿಳಿಯಬರುವದಕ್ಕೆ ಸಾಕಾದಷ್ಟು ವರ್ತಮಾನಗಳು ಹೊರಗೆ ಬಂದಿವೆ. ಕೇವಲ ಆತುರದೊಡನೆ ಸರಹದ್ದು ಪ್ರಾಂತಕ್ಕೆ ಸೈನ್ಯಗಳು ರವಾನೆ ಆಗಿಯೂ, ಆಗುತಲೂ ಇವೆ. ಸದರೀ ಸೈನ್ಯಗಳಾದರೆ ಯುದ್ಧಕ್ಕೆ ಆವಶ್ಯಕಗಳಾದ ಸಕಲ ಸನ್ನಾಹಗಳೊಡನೆ ಹೊರಟುಹೋಗುತಲಿವೆ. ಯುದ್ಧಪ್ರಸಕ್ತಿ ಇಲ್ಲದಪಕ್ಷದಲ್ಲಿ ಗವರ್ನಮೆಂಟಿನವರು ಇಷ್ಟು ಸನ್ನಾಹಗಳೊಡನೆ ಸೈನ್ಯಗಳಂ ಕಳುಹಿಸುವದಕ್ಕೆ ಕಾರಣವಿರುತಿರಲಿಲ್ಲವು. ಮಾಲಕುಂಡವೆಂಬ ಪ್ರದೇಶದಲ್ಲಿ ಯುದ್ಧನಡೆಯುತ ಬ್ರಿಟಿಷ ಸೈನ್ಯದಲ್ಲಿ ಕೆಲವರು ಅವರಲ್ಲಿ ಪ್ರಾಣಗಳಂ ಕಳಕೊಂಡಿರುವ ಶತ್ರುಸೇನೆಯು ಇಷ್ಟು ಬಲಿಷ್ಠವಾಗಿ ಗುಂಪುಗೂಡಿದಬಗ್ಗೆ ಯೆಲ್ಲರಿಗೂ ಆಶ್ಚರ್ಯವನ್ನುಂಟುಮಾಡದೆ ಹೋಗಲಿಲ್ಲವು. ಈಗ ಯುದ್ಧ ನಡೆಯುವ ಪ್ರದೇಶದಲ್ಲಿ ವಾಸಮಾಡುವ ಜನರಸಂಖ್ಯೆಯು ಕೇವಲ ಅಲ್ಪವಾಗಿದ್ದಾಗ್ಯೂ ಅನೇಕ ಸಂಪ್ರದಾಯದ ಗುಂಪುಗಳು ಯುದ್ಧಕ್ಕೆ ಬಂದು ತೊಂದರೆ ಕೊಡುತಲಿದಾರೆ. ಅಫಘಾನಿಸ್ಥಾನದೇಶಕ್ಕೆ ಸೇರಿದ ಸಮರ್ಥನಾದ ಒಬ್ಬ ಸೇನಾಪತಿಯವನು ಪ್ರಬಲಸೈನ್ಯದೊಡನೆ ಯುದ್ಧರಂಗಕ್ಕೆ ಸಮೀಪದಲ್ಲಿರುತ್ತಾನೆ, ಪರಂತು ಈಗ ಬ್ರಿಟಿಷನವರಮೇಲೆ ಯುದ್ಧಮಾಡುತಲಿರುವ ಮಹಮ್ಮದೀಯ ಜನರೊಡನೆ ಸೇರುವಂತೆ ತನ್ನ ಸೇನೆಗೆ ಅವಕಾಶ ಕೊಟ್ಟಿರುತ್ತಾನೆಂಬ ಅಂಶ ತಿಳಿಯಬರಲಿಲ್ಲವು. ಇದುಮಾತ್ರವಲ್ಲದೆ, ಕಾಬೂಲ್ ಅಮೀರರವರು ಯುದ್ಧಪ್ರವರ್ತಕರಾದ ಜಾತಿಜನರಿಗೆ ಆಯುಧಗಳಂ ಸರಬರಾಯಿ ಮಾಡಿರುವದರಿಂದ ಈಗಪ್ರಾಪ್ತವಾದ ನಷ್ಟಗಳಿಗೆ ಕಾರಣವುಂಟಾಯಿತು. ಈಸಂಗತಿ ಬ್ರಿಟಿಷಗವರ್ನಮೆಂಟಿಗೆ ತಿಳಿದು ಅವರು ಸೈನ್ಯಗಳಂ ಕಳುಹಿಸುತಲಿದಾರೆ. ಅಫಘಾನಿಸ್ಥಾನ ಅಮೀರರವರು ಈರೀತಿ ಶತ್ರುತ್ವವಂ ವ್ಯಕ್ತಪಡಿಸುವಪಕ್ಷದಲ್ಲಿ ಯುದ್ಧಪ್ರಾಪ್ತವಾಗುವುದರೊಳು ಸಂಶಯವಿರಲಾರದು. ಇಂಡ್ಯಗವರ್ನಮೆಂಟಿನವರು ತಮ್ಮ ಅಧಿಕಾರವನ್ನು ಅನ್ಯರು ಅಲಕ್ಷ್ಯಮಾಡುವದಕ್ಕೆ ಅವಕಾಶಕೊಡಲಾರರು. ಮತ್ತು ಅಮೀರರವರು ದುರ್ಮಾರ್ಗದಲ್ಲಿ ಪ್ರವರ್ತಿಸುವಪಕ್ಷದೊಳು ಅವರನ್ನು ಸನ್ಮಾರ್ಗಕ್ಕೆ ತರಬೇಕಾದ ವಿಷಯದಲ್ಲಿ ಪ್ರಯತ್ನಗಳಂ ನಡೆಸಲ್ಪಡುವವು. ಈಗ್ಗೆ ಕೆಲವುದಿನಗಳಿಂದೀಚೆಗೆ ಅಮೀರರವರ ನಡತೆಯು ಕೇವಲ ಸಂಶಯಾಸ್ಪದವಾಗಿರುತಿದೆ. ಇವರು ಮೌಲ್ವಿಸ್ ಎಂಬ ಮತಬೋಧಕಜನರನ್ನು ಕರೆಯಿಸಿ ಆಲೋಚಿಸಿದರು. ಅವರು ಸಾಮಾನ್ಯವಾಗಿ ಯುದ್ಧಪಕ್ಷಿಗಳಾದುದರಿಂದ ಮತಸಂರಕ್ಷಣಾರ್ಥ ಯುದ್ಧಮಾಡಬೇಕೆಂದು ಶಿಫಾರಸುಮಾಡಿದರಾಗಿ ಅಮೀರರವರು ಸದರೀವಿಷಯವಾಗಿ ಕುರಿತು ಒಂದು ಗ್ರಂಥವಂ ಬರೆದು ಪ್ರಚುರಪಡಿಸಲು ಅವರ ಪ್ರಜೆಗಳೆಲ್ಲರು ಅದರಿಂದ ಪ್ರೇರಿತರಾಗಿ ಜಗಳಕ್ಕೆ ಪ್ರಾರಂಭಿಸಿದರು. ಇದಲ್ಲದೆ ತುರ್ಕಿಯವರು ಗ್ರೀಕ್‌ರಾಜ್ಯದೊಡನೆ ಮಾಡಿದ ಯುದ್ಧದಲ್ಲಿ ಸುಲ್ತಾನರವರಿಗೆ ಉಂಟಾದ ಜಯದಬಗ್ಗೆ ಅವರಿಗೆ ಶುಭಭಾವನೆ ಮಾಡುವದಕ್ಕಾಗಿ ಅಮೀರರವರು ತಮ್ಮಕಡೆ ರಾಯಬಾರಿಯನ್ನು ತುರ್ಕಿಸಂಸ್ಥಾನಕ್ಕೆ ಕಳುಹಿಸಿದ್ದರು. ಈಸಂದರ್ಭದೊಳು ಸುಲ್ತಾನರಿಗೂ ಅಮೀರರವರಿಗೂ ಪರಸ್ಪರ ಸಹಾಯ ವಿಷಯದಲ್ಲಿ ಒಂದುವಿಧ ಕರಾರುಂಟಾಗಿ ಈರೀತಿ ದುರ್ಮಾರ್ಗದಲ್ಲಿ ಪ್ರವರ್ತಿಸಿರಬಹುದೆಂದು ತೋರುತಿದೆ. ಈಚೆಗೆ ತುರ್ಕಿ ಸುಲ್ತಾನರವರಕಡೆ ರಾಯಬಾರಿಯೊಬ್ಬನು ಅಫಘಾನಿಸ್ತಾನಿಗೆ ಹೋಗಿದ್ದನು, ಇಂತಹದಶೆಗಳಿಗೆ ಅಮೀರರವರು ತಕ್ಕ ಸಮಾಧಾನವು ಕೊಡುವಪಕ್ಷಕ್ಕೆ ಇದುವರೆಗೆ ಇದ್ದಂತೆಯೇ ಯೆಲ್ಲ ಕಾರ್ಯಗಳೂ ಮುಂದೆಯೂ ನಡೆಯುವವು, ಪರಂತು ಅವರು ಆರೀತಿಮಾಡದೆ ಹೋದರೆ ಅವರೊಡನೆ ಪ್ರಬಲ ಯುದ್ಧಪ್ರಾಪ್ತವಾಗುವುದು. ಅಫಘಾನಿಸ್ಥಾನ ಸೈನ್ಯವು ಹಿಂದೆ ಬ್ರಿಟಿಷನವರೊಡನೆ ಯುದ್ಧಮಾಡಿದಕಾಲದಲ್ಲಿದ್ದುದಕ್ಕಿಂತಲೂ ಈಗ ಚೆನ್ನಾಗಿ ತಯಾರಾಗಿರುವದರಿಂದ ಈಗಿನ ಯುದ್ಧವು ಬಹಳಘೋರವಾಗಿರುವುದು. ಬ್ರಿಟಿಷನವರು ಅಮೀರರವರಿಗೆ ಬಹಳ ಧನಸಹಾಯಮಾಡುತಲಿದಾರೆ, ಈಗ ಅವರೊಡನೆ ಯುದ್ಧಪ್ರಾಪ್ತವಾಗುವ ಪಕ್ಷದಲ್ಲಿ ತಮ್ಮ ಶತ್ರುವಿಗೆ ಸಹಾಯ ಮಾಡಿದಂತವರಾಗುವರು. ಸರಹದ್ದುಪ್ರಾಂತದ ಈಗಿನಸ್ಥಿತಿಯು ಪ್ರೋತ್ಸಾಹಕರವಾಗಿಲ್ಲವು. ಪರಂತು ಯುದ್ಧವಿಲ್ಲದೇನೇ ಸಂಶಯಗಳು ನಿವೃತ್ತಿಯಾಗುವವೆಂದು ಕೋರುವೆವು. ಈಗ ದೇಶವು ಕ್ಷಾಮ ಪ್ಲೇಗ ಎಂಬ ರೋಗ, ಭೂಕಂಪ ಮೊದಲಾದವುಗಳಿಂದ ಬಹಳ ಸಂಕಟವನ್ನನುಭವಿಸುತಲಿದೆ. ಇದರಮೇಲೆ ಯುದ್ಧ ಪ್ರಾಪ್ತವಾದರೆ ನಾವು ಪ್ರಬಲ ಕಷ್ಟಕ್ಕೆ ಗುರಿಯಾಗಬೇಕಾಗಿರುವುದು. ತುರ್ಕಿ ಸುಲ್ತಾನರವರಿಗೆ ಗ್ರೀಕ ರಾಜ್ಯದಲ್ಲಿ ಉಂಟಾದ ಜಯದ ದೆಸೆಯಿಂದ ಮಹಮ್ಮದೀಯ ಜನರಿಗೆಲ್ಲ ಆವೇಶ ಉಂಟಾಗಿ ಯಾವ ಕಾರ್ಯವನ್ನಾದರೂ ಮಾಡುವದಕ್ಕೆ ತಾವು ಶಕ್ತರೆಂಬ ಭ್ರಾಂತಿಯುಂಟಾಗಿರುವದರಿಂದ ಈ ದೇಶದಮೇಲೆ ಯುದ್ಧ ಮಾಡುವದಕ್ಕೆ ತಮಗೆ ಶಕ್ತಿ ಇರುತ್ತಿದೆಂದು ಅಮೀರರು ನಂಬಬಹುದು, ಅಥವಾ ಮತಾಭಿಮಾನ ಪ್ರೇರಿತರಾದ ಅವರ ಪ್ರಜೆಗಳು ಅವರನ್ನು ಯುದ್ಧಕ್ಕೆ ಬಲಾತ್ಕರಿಸಬಹುದು. ಇದರ ಫಲವನ್ನರಿಯುವದಕ್ಕೆ ನಾವು ದೀರ್ಘಕಾಲ ಕಾಯಬೇಕಾಗಿರಲಾರದು. ಬ್ರಿಟಿಷ ಗವರ್ನಮೆಂಟಿನವರ ಜಯವನ್ನು ಯಾವಾಗ್ಗೂ ನಾವು ಪ್ರಾರ್ಥಿಸಬೇಕಾದವರಾಗಿದಾಗ್ಯೂ ಆಗುದಾಗ್ಗೆ ಅನಾವಶ್ಯಕಗಳಾದ ಯುದ್ಧಗಳು ಪ್ರಾಪ್ತವಾಗಿ ಅವೆಲ್ಲವು ಧನನಾಶರೂಪವಾಗಿ ಬಡ ಪ್ರಜೆಗಳಮೇಲೆ ಹೊರಿಸಲ್ಪಡುವದು ವಿಶೇಷವಾಗಿ ಆಗ್ಗಾಗ್ಗೆ ಯೆಷ್ಟುಮಿದಪಿಂ ದುಃಖಿಸುವದಕ್ಕೆ ಕಾರಣವಾಗಿರುವುದು. ಈಗಿನ ಕಾಲವೈಪರೀತ್ಯವಂ ಕುರಿತು ಯೋಚಿಸಲಾಗಿ ಎಲ್ಲ ಭಾಗದಲ್ಲೂ ಇಂಡ್ಯ ದೇಶಕ್ಕೆ ಪ್ರಬಲ ಕಷ್ಟಗಳುಂಟಾಗಿಯೂ ಉಂಟಾಗುತಲೂ ಇವೆಯೆಂದು ಹೇಳಬೇಕಾಗಿದೆ.

Occasional Notes
ನೈಮಿತ್ತಿಕವಿಷಯನ್ಯಾಸ

ಮುಂಬೈ ಪ್ರೆಸಿಡೆನ್ಸಿಯಲ್ಲಿ ಅರೆಸ್ಟಾದ ಮ॥ ತಿಲಕ್ ಮುಂತಾದ ಸರ್ವವಿಚಾರಣೆಯು ಮುಂದಿನ ತಿಂಗಳ ಗುತ್ತೇತಾರೀಖಿನಲ್ಲಿ ವೆ॥ ಜಸ್ಟಿಸ್ ಸ್ಟ್ರಾಚೀಯವರಿಂದ ನಡೆಸಲ್ಪಡುವದೆಂದು ಒಬ್ಬ ಸಮ್ಮಂಧ ಪತ್ರಿಕೆ ತಿಳಿಸುತ್ತದೆ

ಅರೆಸ್ಟಾದ ಮ॥ ತಿಲಕರವರ ಬೇಲ್ ಮೋಷನ್ ಬಗ್ಗೆ ಕಲ್ಕತ್ತೆ ಕಡೆ ಬಯಸಿದವರು ಅಪೇಕ್ಷಿಸಿದ್ದ ಹತ್ತುಸಾವಿರ ರೂಪಾಯಿಗಳು ಕಳುಹಿಸುವರೆಂದು ಮಾದರಾಸ್ ಹಿಂದೂಪತ್ರಿಕೆಯು ಕಲ್ಕತ್ತಾ ವೃತ್ತಾಂತದೊಬ್ಬರು ಬರೆದಿರುತ್ತಾರೆ.

ಸರ್ಕಾರ್ ಕಂದಾಯವನ್ನು ಬಾಕಿಯುಳ್ಳಿಟ್ಟು ಕೊಂಡಿರುವಾತನಿಗೆ, ವ್ಯವಸಾಯಾರ್ಥ ಸಾಲ ಕೊಡಕೂಡದೆಂದು ಹುಟ್ಟಿರುವ ನಿಬಂಧನೆಯನ್ನು ಪ್ರಕೃತ ದುರ್ಭಿಕ್ಷಸ್ಥಿತಿಯಲ್ಲಿ ನಿಲ್ಲಿಸಬೇಕೆಂದು ಮದರಾಸ್ ರೆವಿನ್ಯೂಬೋರ್ಡಿನವರು ಮಾಡಿದ ಶಿಫಾರಸ್ಸನ್ನು ಗವರ್ನಮೆಂಟಿನವರು ಮಂಜೂರ್ಮಾಡಿರುತ್ತಾರೆ.

ಬ್ರಿಟಿಷ ಸೈನ್ಯದಲ್ಲಿ ಆನರರಿ ಲೆಫ್ಟಿನೆಂಟ ಕರ್ನಲಾಗಿರುವ ಕೂಚಬಿಹಾರ ಸಂಸ್ಥಾನದ ಮಹಾರಾಜರವರು ಮಾಲಕುಂಡಯುದ್ಧ ನೌಕರಿಯಲ್ಲಿ ಸೇರುವದಕ್ಕೆ ಇಂಡ್ಯ ಗವರ್ನಮೆಂಟಿನವರ ಮಂಜೂರಾತಿಯಂ ಪಡೆದು ಶಿಮ್ಲಾದಲ್ಲಿ ರಾವಲ್‌ಪಿಂಡಿಯಿಂದ ಯುದ್ಧಕ್ಕೆ ಹೊರಡುವ ನಿರೀಕ್ಷಣೆಯೊಳಿರುವ ಜನರಲ್ ಬಿಗ್ಸ್ ಎಂಬವರ ಹುಕುಮತಿನಲ್ಲಿಡಲ್ಪಟ್ಟಿರುತ್ತಾರೆಂದು ತಿಳಿಯಬರುತಿದೆ

ಪೂನೆಯಲ್ಲಿ ಈಚೆಗೆ ಒಬ್ಬ ಸ್ಕೂಲ್‌ಮಾಸ್ಟರನು, ಒಬ್ಬ ಉಪನ್ಯಾಸಕನು ಈ ಮೇಲೆ ಇ

ಬ್ಬರು ಬ್ರಾಹ್ಮಣರನ್ನು ಪೋಲೀಸಿನವರು ದಸ್ತಗಿರಿಮಾಡಿ ಮೈಸೂರಿಗೆ ತಂದಿರುತ್ತಾರೆ. ಅವರಿಬ್ಬರೂ ಅಲ್ಲಿನ ಸಿಟಿ ಮ್ಯಾಜಿಸ್ಟ್ರೇಟರವರಿಂದ ಯಾವದೋ ಕೆಲವು ವಿಷಯಗಳನ್ನು ಒಪ್ಪಿಕೊಂಡರು, ಪರಂತು ಮೈಸೂರಿನಲ್ಲಿ ಈಚೆಗೆ ನಡೆದ ಖೂನಿಗಳಿಗೆ ಸಂಬಂಧಪಟ್ಟದ್ದು ಯಾವದೂ ಅಲ್ಲವು. ಅವರಿಬ್ಬರ ಕಬೂಲಾತಿ ವಿಷಯದಲ್ಲಿ ಪೋಲೀಸಿನವರು ಗೋಪ್ಯವಾಗಿದಾರೆ, ಎಂದು ಮೈಸೂರಿಂದ ಮುಂಬೈಪತ್ರಿಕೆಯೊಂದಕ್ಕೆ ತಂತಿವರ್ತಮಾನ ಬಂದಿರುತದೆ.

ಕೊಚ್ಚಿ ಸಂಸ್ಥಾನದ ಲೆಕ್ಕಗಳೆಲ್ಲವು ಬಹಳ ಗಲಾಟೆಯಲ್ಲಿರುವದರಿಂದ ಅವುಗಳನ್ನೆಲ್ಲ ಸರಿಮಾಡಬೇಕಾದ ಕೆಲಸಕ್ಕಾಗಿ ಕಲ್ಲಿಕೋಟೆಯಲ್ಲಿ ಡೆಪ್ಯುಟಿ ಕಲೆಕ್ಟರಾಗಿರುವ ಮಿ॥ ಎಸ್. ಸಾಮಿನಾಥ ಅಯ್ಯರವರ ನೌಕರಿಯನ್ನು ಮೂರು ವರ್ಷಗಳಿಗೋಸ್ಕರ ಮದರಾಸ್ ಗವರ್ನಮೆಂಟಿನವರು ಸದರೀ ಸಂಸ್ಥಾನಕ್ಕೆ ಕೊಟ್ಟಿರುತ್ತಾರೆ. ಮಾಹೆಯಾನಾ ಐನೂರು ರೂಪಾಯಿಗಳ ಸಂಬಳವನ್ನು ಮೆ॥ ಸಾಮಿನಾಥ ಅಯ್ಯರವರು ಒಪ್ಪದೆ ಏಳ್ನೂರು ರೂಪಾಯಿಗಳು ಕೊಡಬೇಕೆಂದು ಅಪೇಕ್ಷಿಸಲು ಅದಕ್ಕೆ ಕೊಚ್ಚಿ ಸರ್ಕಾರದವರು ಒಪ್ಪಿಕೊಂಡಿರುತ್ತಾರೆ.

ಈಚೆಗೆ ಕೆಲವು ತಿಂಗಳಿಂದ ದೆ, ವೈಸ್‌ರಾಯ್ ಸಾಹೇಬರವರ ಮುತ್ಸದ್ದಿತನ ಬೇರೆ ಸಹಿಸಲಸಾಧ್ಯವೆಂಬಂತಾದ ಅನೇಕ ಅನುಭವಶಾಲಿಗಳು, ಐಂಗ್ಲೋಇಂಡಿಯನ್ ದಿವಾನರುಗಳು, ಮತ್ತು ದೇಶದ ವರ್ತಮಾನಪತ್ರಿಕೆಗಳ ಅಧಿಪತಿಗಳನ್ನು ಹಿಡುಕ್ರೂರರೆಂದು ತೆಗೆದುಕೊಂಡು ಹಿಂಸೆ ಮಾಡುವ ಉದ್ದೇಶದೊಡನೆ ರಚಿಸಿ ವೈಸ್‌ರಾಯ್‌ರವರ ಮಂತ್ರಾಲೋಚಕಸಭೆಯ ಮುಂದೆ ಇಟ್ಟ ಮಸೂದಾ ಆಕ್ಟಿನ ವಿಷಯದಲ್ಲಿ, ಕಾಲಿನೊಳಗಿನ ಸುದ್ದಿಪತ್ರಿಕೆಗಳೂ, ಸಮಸ್ತಜನಗಳೂ ಕಳೆದ ವಾರದಲ್ಲಿ ಹಿಂದುದೇಶದ ಸರಕಾರದವರಿಗೆ, ಸದರೀ ಸಮಿತಿಯ ಕಾನೂನು ಪಾಸಾಗುವಾಗ ಸರ್ವರು ಐಕಮತ್ಯದಲ್ಲಿ ಅದರಿಂದ ಪತ್ರಿಕೆಗಳಿಗೂ ಸಾಧಾರಣಜನರಿಗೂ ಬಹಳ ಕೆಡುಕುಂಟಾಗುವದಾಗಿ ಅದನ್ನು ಜಾರಿಯೊಳು ತರಕೂಡದೆಂದು ಬಹುಮಾನಪೂರ್ವಕವಾಗಿ ತಿಳಿಸಿದರೆಂದು ತಿಳಿಯ ಬಂದಿವೆ.

LOCAL AND PROVINCIAL NEWS.
ಒಳದೇಶವು ಮತ್ತು ಪ್ರಾಂತಗಳ ವರ್ತಮಾನಗಳು.

ಶ್ರೀಮನ್ಮಹಾರಾಜರವರ ಬೀಡಾರದವರೂ ಶ್ರೀಮನ್ಮಹಾರಾಣಿಯವರೂ ಈತಿಂಗಳ ೨೪ ನೇ ತಾರೀಖು ಶನಿವಾರದಿವಸ ಇಲ್ಲಿಂದ ರಾಜಧಾನಿಗೆ ದಯಮಾಡುವರೆಂದು ಕೇಳುತ್ತೇವೆ.

ಮೈಸೂರಲ್ಲಿ ಕಟ್ಟಿಸಬೇಕಾದ ಅರಮನೆಯ ನಕಷೆಯು ಉಪಕರಣಗಳ ಪಟ್ಟಿಗಳನ್ನು ತಯಾರಾಗುತ್ತಿರುವಂತೆಯೂ, ಅದಕ್ಕೆ ಮಾಹೇಯಾನಾ ೫೦೦ ರೂಪಾಯಿಗಳು ಖರ್ಚಾಗುತಲಿರುವದಾಗಿಯೂ ಅಲ್ಲಿನ ವರ್ತಮಾನ ಪತ್ರಿಕೆಯು ತಿಳಿಸುತಿದೆ ಕೆಲವಂತವರೊಬ್ಬರು ಸಿಕ್ಕಿದರೆ ತಿಂಬುವಂತವರಿಗೆ ಕಷ್ಟವೆ ?

ಈಸಲದ ದಸರಾ ದರ್ಬಾರನ್ನು ಜಗನ್ಮೋಹನ ಬಂಗ್ಲೆಯಲ್ಲಿ ನಡೆಸಬೇಕೆಂದು ಯೋಚಿಸಲ್ಪಟ್ಟು ಅದಕ್ಕೆ ಆವಶ್ಯಕಗಳಾದ ಸನ್ನಿಧಾನಗಳೆಲ್ಲವು ನಡೆಸಲ್ಪಡುತಿರುವಂತೆ ಕೇಳುತ್ತೇವೆ ಈವರ್ಷವೂ ಮಾತ್ರವಲ್ಲದೆ ಇನ್ನು ಒಂದೆರಡು ವರ್ಷಗಳವರೆಗೆ ಸದರೀ ಬಂಗ್ಲೆಯಲ್ಲೇ ನಡೆಸಬೇಕಾಗಿರುವದೆಂದು ನಂಬುತ್ತೇವೆ.

ಈಸಭಾ ಮ್ಯುನಿಸಿಪಲ್ ಪ್ರೆಸಿಡೆಂಟರಾದ ವೆ.ಟಿ. ಟಿ. ಲೇನಾರ್ದರಯವರು ಮೂರುತಿಂಗಳ ರಜಾಮೇಲೆ ಇಂಗ್ಲಂಡಿಗೆ ಹೋಗಿರುತ್ತಾರೆಯು ವೈ ಸದರೀಯವರು ಈ ತಿಂಗಳ ೭ ನೇ ತಾರೀಖಿನಲ್ಲಿ ಇಲ್ಲಿಗವಾಪಸ್‌ಬರುವದಕ್ಕಾಗಿ ಹೊರಟರೆಂದು ಅರಿತವು.

ಕಳೆದ ಬುಧವಾರದದಿನ ಇಲ್ಲಿನ ಕೋಟೆಮೊಳರುವ ಮ್ಯುನಿಸಿಪಲ್ ಆಫೀಸ್ ಮುಂದುಗಡೆ ಪೋಲೀಸ್ ಸೈನ್ಯದ ಆಟಗಳುನಡೆಸು ಅದಕ್ಕೆ ಶ್ರೀಮನ್ಮಹಾರಾಣೀ ರೀಜಂಟರವರು, ಶ್ರೀಮನ್ಮಹಾರಾಜ ರಾಜಾಸಾಹೇಬರವರು, ದಿವಾನರವರು, ಬ್ರಿಟಿಷ್ ರೆಸಿಡೆಂಟರವರು, ಇನ್ನು ಅನೇಕರು ಯೂರೋಪಿಯನ್ ಸರ್ದಾರರೂ ಲೇಡಿಗಳೂ ಇದ್ದು ಸದರೀ ಆಟವನ್ನು ನೋಡಿ ಬಹಳ ಸಂತೋಷಪಟ್ಟರು.

ಕಳೆದ ಬುಧವಾರದದಿನ ರಾತ್ರಿ ಈಪ್ರಾಂತಲ್ಲಿ ಒಳ್ಳೆಯ ವರ್ಷಬಿತ್ತು, ಮರಳ ಬೃಹಸ್ಪತಿವಾರದದಿನ ರಾತ್ರಿ ಸ್ವಲ್ಪಬಿತ್ತು. ಇದರಿಂದ ಒಣಗುತಲಿದ್ದ ಫಸಲಿಗಳಿಗೆ ಪ್ರಾಣಾಧಾರ ವುಂಟಾಯಿತೆಂದು ಹೇಳಬಹುದಾಗಿದೆ. ಡಿಸ್ಟ್ರಿಕ್ಟ್ ಜಾತ ಸರ್ಕಾರೀ ಕಾಲಸ್ಥಿತಿ ರಿಪೋರ್ಟನ್ನು ನೋಡಲಾಗಿ ಈ ತಿಂಗಳ ೧೪ನೇ ತಾರೀಖಿನವರೆಗೆ ಹಾಸನ, ಶಿವಮೊಗ್ಗ, ಕಡೂರು, ಈ ಮೂರು ಡಿಸ್ಟ್ರಿಕ್ಟುಗಳಲ್ಲೂ, ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲೂ ಮಾತ್ರ ಒಳ್ಳೆಯಮಳೆ ಬಿದ್ದಿರುವಂತೆಯೂ, ಅನ್ಯತ್ರ ವರ್ಷವಿಲ್ಲವೆಂತಲೂ, ಅಥವಾ ಕೇವಲ ಅಲ್ಪವೆಂತಲೂ ಕಾಣುತಿದೆ ಮೇಲಿನ ತಾರೀಖಿನಿಂದೀಚೆಗೆ ವರ್ಷವನ್ನು ಕುರಿತ ವರ್ತಮಾನವು ಇನ್ನು ತಿಳಿಯಬರಲಿಲ್ಲವು. ಜಿನಿಸಿಗಳದರಗಳು ಪ್ರಾಯಶಃ ಒಂದೇವಿಧವಾಗಿವೆ. ಜನಾರೋಗ್ಯವು ಸಾಮಾನ್ಯವಾಗಿದೆ. ದನಗಳಿಗೆ ಮೇವೂ ನೀರೂ ಸದ್ಯಃ ಸಿಕ್ಕುತಿವೆ.

THE MYSORE GAZETTE.
ಮೈಸೂರು ಗೆಜೆಟು.

ಗುರುವಾರ, ತಾ॥ ೧೯ನೇ ಆಗಸ್ಟ್ ೧೮೯೭.

ಮೈಸೂರು ಗವರ್ನಮೆಂಟಿನವರಿಂದ ಹೊರಡಿಸಿದ ಇಸ್ತಿಹಾರುನಾಮೆಗಳು.

ಜನರಲ್ ಮತ್ತು ರೆವಿನ್ಯು.

ತಾರೀಖ್ ೧೬ನೇ ಆಗಸ್ಟ್ ೧೮೯೭

ನಂ, ೨೪೬೩ ಜ ೩೫೧—ಕ್ರಿಮಿನಲ್ ಪ್ರೊಸೀಜರ್ ಕೋಡ್ ೩೫೭ನೇ ಸೆಕ್ಷನಿನನಿಯಮಗಳನ್ನನುಸರಿಸಿ ಹಾಸನ ಡಿಸ್ಟ್ರಿಕ್ಟಿನ ೧ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ವ ಜನರಲ್ ಅಸಿಸ್ಟೆಂಟ್ ಕಮಿಷನರಾದ ಮೆ॥ ಟಿ ಪರಮಶಿವಯ್ಯರ್, ಬಿ. ಎ ಯವರಿಗೆ ತಮ್ಮಿಂದ ಡ್ಯೂಟಿ ಮಾಡಲ್ಪಟ್ಟ ಮೊಕದ್ದಮೆಗಳಲ್ಲಿ ಸಾಕ್ಷಿಗಳ ಸಾಕ್ಷ್ಯವನ್ನು ಇಂಗ್ಲಿಷ್ ಭಾಷೆಯಲ್ಲಿ ಸ್ವದಸ್ತೂರಿ ತೆಗೆದುಕೊಳ್ಳುವಬಗ್ಗೆ ಅಪ್ಪಣೆ ಕೊಡಲ್ಪಟ್ಟಿರುತ್ತೆ.

ತಾ॥ ೭ನೇ ಆಗಸ್ಟ್ ೧೮೯೭

ನ ॥೧೭೬೫—ರೆ ಫೈ. ೧೪೭—೯೭—ಮೈಸೂರು ಸರ್ವಿಸ್ ರೆಗ್ಯುಲೇಷನ್ಗಳ ೧೯೯ನೇ ಆರ್ಟಿಕಲ್ ಅನುಸರಿಸಿ ಮೈಸೂರ ಡಿಸ್ಟ್ರಿಕ್ಟ್ ನಂಜನಗೂಡು ತಾಲ್ಲೂಕು ಅಮಲ್ದಾರ್ ಸಿ ವೆಂಕಟಪ್ಪ, ಬಿ. ಎ. ಯವರಿಗೆ ೧೮೯೭ನೇ ಆಗಸ್ಟ್ ೫ನೇ ತಾರೀಖ್ ಮೊದಲ್ಗೊಂಡು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನವರೆಗೆ ಎರಡು ತಿಂಗಳುಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

೨ ಪ್ರೊಬೇಷನ್ನಿನ ಆಕ್ಟಿಂಗ್ ಡೆಪ್ಯುಟಿ ಅಮಲ್ದಾರ್ ಗೋಪಾಲಕೃಷ್ಣಯ್ಯಂಗಾರ್ ಬಿ. ಎ ಬಿ. ಎಲ್. ಯವರು ಸದರೀ ವೆಂಕಟರಾಯರು ರಜಾಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರ್ಯಂತ ನಂಜನಗೂಡು ತಾಲ್ಲೂಕಿನ ಅಮಲ್ದಾರ್ ವ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟಾಗಿ ಆಕ್ಟಿಂಗ್ ಹಾಕಿ ಮಾಡಲ್ಪಟ್ಟಿದ್ದಾರೆ ರೆವಿನ್ಯೂ ಪ್ರೊಬೇಷನರ್ ಕೃಷ್ಣಸ್ವಾಮಿರಾವ್, ಬಿ ಎ ಯವರು ಸದರೀ ಗೋಪಾಲ ಕೃಷ್ಣಯ್ಯಂಗಾರ್ ಜೊತೆ ಕೆಲಸಮಾಡುತಿರುವವರು ಅದಲ್ಲಿ ಪ್ರೊಬೇಷನ್ನಿನ ಡೆಪ್ಯುಟಿ ಅಮಲ್ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟಾಗಿ ಆಕ್ಟ್ ಮಾಡತಕ್ಕದ್ದು.

ತಾ॥ ೯ನೇ ಆಗಸ್ಟ್ ೧೮೯೭

ನಂ। ೧೬೮೯—ರೆ. ೩೬೪—ಮೈಸೂರು ಸರ್ವಿಸ್ ರೆಗ್ಯುಲೇಷನ್ಗಳ ೧೭೩ನೇ ಆರ್ಟಿಕಲ್ ಅನುಸರಿಸಿ ಶಿವಮೊಗ್ಗ ಡಿಸ್ಟ್ರಿಕ್ಟ್ ಹೊನ್ನಾಳಿ ತಾಲ್ಲೂಕು ಅಮಲ್ದಾರ್ ಎಚ್ ಗುಂಡಪ್ಪನವರಿಗೆ ೧೮೯೭ನೇ ಆಗಸ್ಟ್ ೧೬ನೇ ತಾರೀಖ್ ಮೊದಲ್ಗೊಂಡು ಹದಿನೈದು ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ. ತಾಲ್ಲೂಕು ಶಿರಸ್ತೇದಾರರು ಸದರೀ ಅಮಲ್ದಾರರು ರಜಾಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರ್ಯಂತ ಸದರೀ ತಾಲ್ಲೂಕಿನ ಚಾಲ್ತಿ ಕೆಲಸಗಳ ಚಾರ್ಜನ್ನಿರತಕ್ಕದ್ದು.

ತಾ॥ ೧೧ನೇ ಆಗಸ್ಟ್ ೧೮೯೭

ನಂ॥೧೭೪೧ ರೆ. ೫೪೫—ಮೈಸೂರು ಸರ್ವಿಸ್ ರೆಗ್ಯುಲೇಷನ್ಗಳ ೧೯೯ನೇ ಆರ್ಟಿಕಲ್ ಅನುಸರಿಸಿ ಚಿತ್ರದುರ್ಗ ಡಿಸ್ಟ್ರಿಕ್ಟ್ ದಾವಣಗೆರೆ ತಾಲ್ಲೂಕಿನ ಅಮಲ್ದಾರ್ ಜಿ ಆರ್ ಶ್ರೀನಿವಾಸಯ್ಯಂಗಾರ್ರಿಗೆ ಅವರುಪಯೋಗಿಸಿಕೊಳ್ಳುವ ತಾರೀಖಿನಾರಭ್ಯ ನಾಲ್ಕು ತಿಂಗಳುಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

೨ ಪಾವಗಡ ಸಬ್‌ತಾಲ್ಲೂಕು ಡೆಪ್ಯುಟಿ ಅಮಲ್ದಾರ್ ಎಂ. ರಂಗನಾಥರಾಯರು ಸದರೀ ಜಿ ಆರ್ ಶ್ರೀನಿವಾಸಯ್ಯಂಗಾರ್ರು ರಜಾಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರ್ಯಂತ ದಾವಣಗೆರೆ ತಾಲ್ಲೂಕಿನ ಅಮಲ್ದಾರ್ ವ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟಾಗಿ ಆಕ್ಟಿಂಗ್ ಹಾಕಿ ಮಾಡಲ್ಪಟ್ಟಿರುತ್ತಾರೆ, ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟ್ ಆಫೀಸಿನ ಹೆಡ್ ಅಕೌಂಟೆಂಟ್ ಬಿ ಎಸ್ ವೆಂಕಟೇಶಯ್ಯನವರು ಸದರೀ ರಂಗನಾಥರಾಯರು ಬೇರೆ ಕೆಲಸದಮೇಲಿರುವಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರ್ಯಂತ ಪಾವಗಡ ಸಬ್‌ತಾಲ್ಲೂಕಿನ ಡೆಪ್ಯುಟಿ ಅಮಲ್ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟಾಗಿ ಆಕ್ಟಿಂಗ್ ಹಾಕಿ ಇರತಕ್ಕದ್ದು.

SUMMARY OF NEWS.
ವೃತ್ತಾಂತ ಸಂಗ್ರಹವು.

ಶ್ರೀಮದಿಂಡಿಯಾ ಚಕ್ರವರ್ತಿನೀಯವರ ಅರಿಯಂದರು ಇಂಡಿಯಾ ಸಂಬಂಧವಾದ ಸೈನ್ಯಾಧಿಪತಿಗಳಾಗಿ ವರ್ತಮಾನದಲ್ಲಿ ವರ್ತಮಾನವಿವೆ

ಲಾಹೋರಿನ ಎಂಬ ಸ್ಥಳದಲ್ಲಿ ಬಂಡು ಎದ್ದಿದ್ದ ೬೦ ಲೂಟಿಗಳುದವು, ದೊಣ್ಣಿ ಟ್ರೆಜರಿಯನ್ನು ಲೂಟಿ ಮಾಡಿದರು, ಮತ್ತು ಗಡಿಯಲ್ಲಿ ಅಧಿಕಾರಿಯನ್ನು ಹಿಡಿದರು, ಊರನ್ನು ಸುಟ್ಟರು, ಪೋಲೀಸಿನವರನ್ನು ಹೊಡೆದರು.

ರಾವಲ್ ಪಿಂಡಿಯ ಹತ್ತರ ಸೋಠ ಆಫ್ರಿದಿ ಜನರು ಪುನಃ ಯುದ್ಧಾಪೇಕ್ಷಿತರಾಗಿ, ಮಸ್ತ ಗುಂಡಿನ ಭರ್ತಿ ಮಾಡಿಕೊಂಡು ಬರಲಿಕ್ಕೆ ಹೋಗಿರುತ್ತಾರೆಂದು ತಿಳಿಸಬಂದಿವೆ ಇವರ ದಂಡು ೧೬ ಸಾವಿರವಿರುತಿದೆ.

ನವಲಗುಂದ ತಾಲ್ಲೂಕು ಸುಸ್ವಿ ಹಳ್ಳಿಯಲ್ಲಿ ಒಬ್ಬ ಹೆಂಗಸು ಆರುವರ್ಷದ ಸಣ್ಣ ಚಿಕ್ಕ ಮಗನಿಗೆ ಹಂಬಿಟ್ಟಿನಲ್ಲಿ ವಿಷಹಾಕಿ ಕೊಂದಳೆಂತಲೂ ಅವಳು ಮಾಡಿದ ತಪ್ಪು ಒಪ್ಪಿಕೊಂಡಿರುತ್ತಾಳೆಂತಲೂ ಕೇಳುತ್ತೇವೆ.

ಕಚ್ಛದಲ್ಲಿ ಮುಂಬೈ ಒಣಿತೆಯು ಬಹಳ ಭಯಂಕರವಾದ ಸ್ವರೂಪಧಾರಣ ಮಾಡಿದೆ ಒಂದೇ ತಿಂಗಳಲ್ಲಿ ೩೦೦ ಜನರು ಇದಕ್ಕೆ ತುತ್ತಾದರು ಅಲ್ಲಿನ ತಾಲ್ಲೂಕು ಕಚೇರಿಯು ೮೫೦೦ ಸ್ವಚ್ಛ ಮಾಡುವಾಗ್ಗೆ ೬೦೦ ಇಲಿಗಳು ಈ ರೋಗದಿಂದ ಸತ್ತಂತೆ ಕಂಡುಬಂದಿವೆ.

ಇಂಗ್ಲಂಡ್, ಸ್ಕಾಟ್ಲಂಡ್, ಐರ್ಲಂಡಗಳಲ್ಲಿ ಮನೆಮನೆಗೆ ಒಂದೊಂದು ಸಣ್ಣ ಪುಸ್ತಕಗಳನ್ನು ಹಂಚಿದರು ಆ ಪುಸ್ತಕದ ಹೆಸರು ಇಂಗ್ಲಿಷ್ ಸರ್ಕಾರದವರು ಹಿಂದುಸ್ಥಾನದವರಮೇಲೆ ತಂದ ಸಂಕಟ, ಎಂಬದಾಗಿ ಇರುತದೆಂದು ಪಯೋನಿಯರ್ ಪತ್ರವು ತಿಳಿಸುತದೆ

ರಷ್ಯದೇಶದಲ್ಲಿ ಹೊಸ ಪ್ರಾಸ್ತಾಣದ ರಾಜದ್ರೋಹಿಗಳು ದರು, ಜನಕಾಸಕೆ, ಒಡೆಸ ಎಂಬಲ್ಲಿನ ಒಂದು ಪತ್ರದಲ್ಲಿ ಮುಸಲ್ಮಾನರೂ ಬ್ರಾಹ್ಮಣರೂ ಕೂಡಿ ಇಂಗ್ಲಿಷ್ ಸರ್ಕಾರದವರನ್ನು ಹಿಂದುಸ್ಥಾನದ ಹೊರಗೆ ಹಾಕಲುದ್ಯುಕ್ತರಾಗಿದಾರೆಂದು ಬರೆಯಲ್ಪಟ್ಟಿದೆ.

ಕಾಬೂಲ್ ಅಮೀರ ಸಾಹೇಬರವರು ತಮ್ಮ ರಾಜ್ಯದೊಳಗಿನ ಮುಲ್ಲಾ ಮುಲ್ಲಾ ಜನರನ್ನು ಕರೆಸಿದ್ದು, ಅವರ ಅನುಮತಿಯ ಪ್ರಕಾರ ಧರ್ಮ ಯುದ್ಧವನ್ನು—ಬಹಳವಾಗಿ ಕ್ರಿಸ್ತರ ವಿರುದ್ಧ ಸಾಧಕಕ್ಕೆವರಿಬಾರ. ಯುದ್ಧ ಮಾಡುವದು ಗೊತ್ತಾದರೆ ಅಮೀರ ಸಾಹೇಬರವರು ತಮ್ಮ ದೇಶದೊಳಗಿನ ಎಲ್ಲ ಜನರಿಗೆ ಆ ಎಲ್ಲ ಸಾಮಗ್ರಿಯನ್ನು ಒದಗಿಸಿಕೊಡುವರು

ವಿಲ್ಸಾ ಎಂಬ ಸ್ಥಳದಲ್ಲಿ ಒಬ್ಬ ಕಾಡುದೆ ಹೊಲಿ ಯಾತ್ರಿ ಕನು ತನ್ನ ಸಾರೋಟಿಗೆ ನಾಲ್ಕು ಸಣ್ಣ ಜಾತಿ ಪೋನಿಗಳ ನ್ನಿಟ್ಟುಕೊಂಡಿರುವನು ಒಂದೊಂದು ಕುದುರೆಯು ೨೨ ಅಂಗುಲ ಎತ್ತರವಿರುವದು. ಈ ನಾಲ್ಕು ಕುದುರೆಗೂ ದಿನಕ್ಕೆ ನಾಲ್ಕು ಸೇರಿಗಿಂತ ಹೆಚ್ಚಾಗಿ ಖರ್ಚಾಗುವದಿಲ್ಲವು. ಕೆಲಸವಾತ್ರ ದೊಡ್ಡ ಕುದುರೆಗಳಿಗಿಂತ ಹೆಚ್ಚಿನ ಕೆಲಸವನ್ನು ಮಾಡುತಲಿವೆ.

ನಾಮಧಾರಿ ಶಿಲಕನವರಿಗೆ ಮುಂಬೈಯಲ್ಲಿ ವಸ್ತಗಿರಿಮಾಡಿದ ಪೂರ್ವದಲ್ಲಿ ಹಿರಿದು ದಿನದ ಲಕ್ನೋ ಪಟ್ಟಣದಲ್ಲಿ ಇವೆ ಅಪವಾದಕ್ಕಾಗಿ ಮೌಲ್ವಿ ಹಜರತ್ ರಸೂಲ ಎಂಬವರನ್ನು ಸರ್ಕಾರದವರು ದಸ್ತಗಿರಿ ಮಾಡಿದರೆಂಬ ಸುದ್ದಿಯು ಅವ್ಧ ಅಖಬಾರ್ ಪತ್ರಿಕೆಯು ತಿಳಿಸುತ್ತಿದೆ. ಮೌ॥ರಸೂಲರವರನ್ನು ತುರ್ಕಿಸ್ಥಾನದ ಬಾದಶಹನು ಗ್ರೀಸ್ ದೇಶದವರಕೂಡ ಯುದ್ಧಮಾಡಿ ಜಯಪ್ರಾಪ್ತಿ ಪಡೆದ ವಿಷಯದಲ್ಲಿ ಆನಂದಪ್ರದರ್ಶನಾರ್ಥ ಸಭೆ ಗೂಡಿಸಿ ಅದರಲ್ಲಿ ಮಾತನಾಡುವಾಗ್ಗೆ ಈ ಕೆಳಗೆ ಬರೆದ ವಾಕ್ಯಗಳನ್ನು ಮಾತನಾಡಿದರೇನೆಂದರೆ. ಟರ್ಕಿ ಸುಲ್ತಾನನಾದ ನಮ್ಮ ಅರಸನು ಗ್ರೀಕ ಜನರ ಕೂಡ ಯುದ್ಧಮಾಡಿ ಜಯ ಹೊಂದಿರುತ್ತಾನೆ. ಗ್ರೀಕದೇಶದ ಜನರು ಹಠಾತ್ತಾಗಿ ಯುದ್ಧಕ್ಕೆ ಸಿದ್ಧರಾದರೂ ಮಣ್ಣು ಮುಕ್ಕಿ ಹೋದರು ಹಿಂದು ಮತ್ತು ಮುಸಲ್ಮಾನ ಜಾತಿಯವರು ಒಗ್ಗಟ್ಟಾಗಿ ಅನ್ಯರಕೂಡ ಸಂಗ್ರಾಮ ಮಾಡತಿರಲು "ಮುಪ್ಪಿನ ಮುದುಕಿಯು" ಅವರಲ್ಲಿ ಸೇರಿದ ಪಕ್ಷದಲ್ಲಿ ೬ ಕೆಲ ಎಬುತ್ತಗಳು ವೃದ್ಧಿಯಾಗಿ ಟೊಂಕ ಮುರಿದು ಹೋಗುವದು, ಎಂಬುವು. ಮೇಲಿನ ಭಾಷಣದಲ್ಲಿ ಮುಪ್ಪಿನ ಮುದುಕಿಯು, ಅಂದರೆ ಮಹಾರಾಣಿ ವಿಕ್ಟೋರಿಯಾ ಎಂಬ ಅರ್ಥಮಾಡಿ ಮೌ॥ರಸೂಲರವರಮೇಲೆ ಖಟ್ಲೆ ಯಾಯಿತು.—ರಸಿಕರಂಜನಿ

ತಂತಿವೃತ್ತಾಂತ.

ಕಟ್ಟಕಡೆಗೆ ಕಾಬೂಲದ ಅಮೀರನು ಸರಹದ್ದಿನಮೇಲೆ ನಡೆದಿರುವ ಯುದ್ಧಕ್ಕೆ ಸೂತ್ರಧಾರನಿದ್ದಾನೆಂದು ಹೇಳುವಲಿಕ್ಕೆ ಬಲವಾದ ಒಂದರಮೇಲೊಂದು ಸುದ್ದಿಗಳು ಬರಲಾರಂಭಿಸಿವೆ. ಅಮೀರನು ಕಲಕತ್ತಾ, ಮುಂಬೈ, ಕರಾಚಿ, ಸಿಮಲಾದಲ್ಲಿಯ ತನ್ನ ವಕೀಲರನ್ನು ತಾನಿದ್ದ ಸ್ವದೇಶಕ್ಕೆ ಕರೆಸಿಕೊಂಡಿರುತ್ತಾನೆಂದು ಹಿಂದುಸ್ಥಾನದ ಸರ್ಕಾರದವರಿಗೆ ಸುದ್ದಿಹತ್ತಿ ಅವರು ವಿಚಾರಮಾಡಲಾಗಿ, ಮುಂಬೈಯ ವಕೀಲನು ಎಲ್ಲ ಜಂಗಮಜಿಸ್ತಿಯನ್ನು ಮಾರಿ, ಎಡಿನ್ಬರ್ ಎಂಬವನ ಧ್ವನಿಗ್ರಾಹಕ ಯಂತ್ರವನ್ನು, ನಾನಾತರದ ರೀಷ್ಮೆವಸ್ತ್ರಗಳನ್ನೂ ಕೊಂಡುಕೊಂಡು ಕಾಬೂಲಿಗೆ ಸನ್ನದ್ಧನಾಗಿ ಹೋದನೆಂದು ಸುದ್ದಿಯಾಗಿರುತ್ತಾನೆಂತಲೂ ಉಳಿದ ಕಡೆಯ ಪ್ರತಿನಿಧಿಗಳೂ ಹಿಂದುಸ್ಥಾನಕ್ಕೆ ಮರಳುವದು ಎಷ್ಟೋದಿವಸಗಳಾದವೆಂದು ಕಂಡುಬಂದು. ಅಮೀರನು ತನ್ನ ರಾಜ್ಯದೊಳಗಿಂದ ಹದ್ದು ಮೀರುವಮಾಡಿದ ಜನರನ್ನು ಸಹ ಕರೆಸಿಕೊಂಡಿರುತ್ತಾನೆ.

ಗತಿಸಿದ ಶ್ರೀಮನ್ಮಹಾರಾಜಾ ಕೃಷ್ಣರಾಜ ಒಡೆಯರ್ ಬಹದೂರರವರ ಕಾಲದಲ್ಲಿ ದಾಮೋದರದಾಸ್ ಎಂಬ ಗುಜರಾತಿ ವರ್ತಕರೊಬ್ಬರು ಈ ದೇಶಕ್ಕೆ ಬಂದು ಕೆಲವು ಕಾಲದ ವರೆಗೆ ಸಾಧಾರಣವಾಗಿ ವ್ಯಾಪಾರ ಮಾಡುತಲಿದ್ದು, ಕಾಲಕ್ರಮೇಣ ಅವರ ವ್ಯಾಪಾರವು ವೃದ್ಧಿಯಂ ಹೊಂದಿ ಇಲ್ಲಿನ ಪ್ರಜೆಗಳ ನಂಬಿಕೆಗೂ ಪ್ರೀತಿ ಗೌರವಗಳಿಗೂ ಪಾತ್ರರಾಗಿ ಅರಮನೆಗೆ ಬೇಕಾದ ಜವಾಹಿರಿಗಳು ಬಟ್ಟೆಗಳು ಮೊದಲಾದ ಪದಾರ್ಥಗಳಂ ಸರಬರಾಯಿ ಮಾಡುತ್ತ, ಶ್ರೀಮನ್ಮಹಾರಾಜಾ ಕೃಷ್ಣರಾಜ ಒಡೆಯರವರ ಪ್ರೀತಿ ವಿಶ್ವಾಸಗಳಿಗೆ ವಿಷಯರಾಗಿ ತಮ್ಮ ವ್ಯಾಪಾರದ ಮೂಲಕ ಅನೇಕ ಲಕ್ಷ ರೂಪಾಯಿಗಳನ್ನು ಆರ್ಜಿಸಿದರು. ಮೊದಲು ಒಂದು ತಡವೆ ಅರಮನೆಯ ಸಾಲಗಳನ್ನೆಲ್ಲ ತೀರಿಸುವಂತೆ ಇಂಡ್ಯ ಗವರ್ನಮೆಂಟನಿಂದ ಬಂದ ಹುಕುಂ ಅನುಸರಿಸಿ ಅದಕ್ಕಾಗಿ ಯೋಜಿಸ್ಪ ತಾಧಗ್ರಂಥಿ ಕಚ್ಚೇರಿ ಎಂಬ ಕೋರ್ಟಿನವರು ಕೊಟ್ಟ ಫೈಸಲನ್ನನುಸರಿಸಿ, ಅರಮನೆ ಬಾಕೀದಾರರೆಲ್ಲರಿಗೂ ಬಾಕೀ ಹಣಗಳಂ ಕೊಟ್ಟು ವ್ಯವಸ್ಥೆ ಮಾಡಿದಂತೆ, ಆ ಕಾಲದಲ್ಲಿ ದಾಮೋದರದಾಸ ಶೆಟ್ಟರವರಿಗೆ ಲೆಕ್ಕದಮೇರೆಗೆ ಅರಮನೆಯಿಂದ ಬರಬೇಕಿದ್ದ ಲಕ್ಷಾಂತರ ರೂಪಾಯಿಗಳು ಜಪ್ತೀ ಮಾಡಲ್ಪಟ್ಟವು. ಆ ತರುವಾಯ ಅರಮನೆಗೂ ಶೆಟ್ಟರವರಿಗೂ ನಡೆಯುತಬಂದ ಲೇವಾದೇವಿಯಲ್ಲಿ ಅನೇಕ ಲಕ್ಷ ರೂಪಾಯಿಗಳು ಬಾಕಿಯಾಗಿ, ಆ ವಿಷಯದಲ್ಲಿ ಅರಮನೆಗೂ ಶೆಟ್ಟರವರಿಗೂ ನಡೆಯುತಬಂದ ವ್ಯಾಜ್ಯಸ್ಥದ ಮೂಲಕ ಯಾವದೂ ವ್ಯವಸ್ಥೆಯಂ ಹೊಂದದೆ ಹೋದದರಿಂದ ಶೆಟ್ಟರವರು ಅರಮನೆಯಿಂದ ತಮಗೆ ಸಲ್ಲಬೇಕಾದ ಅಸಲು ಬಡ್ಡಿ ಹದಿನಾಲ್ಕು ಲಕ್ಷ ಚಿಲ್ಲರೆಗೆ ಹುಜೂರು ಅದಾಲತ್ ಕೋರ್ಟಿನಲ್ಲಿ ದಾವೇ ಮಾಡಿದರು. ಅದರ ತರುವಾಯ ಆಫೀಸಿನಲ್ಲಿ ಫೈಸಲ್ಮಾಡಿಕೊಳ್ಳಬೇಕೆಂದು ಅನೇಕ ಸಂವತ್ಸರಗಳ ಕಾಲ ನಿರೀಕ್ಷಿಸಿದಾಗ್ಯೂ ಆರೀತಿ ಫೈಸಲಾಗದೆ ಹೋಗಿ ಕಡೆಗೆ ಶೆಟ್ಟರವರು ಕಾಲಗತಿಯನ್ನೈದಿದರು. ಮರಳಿ ಮಹಾರಾಜರವರ ಸಾಲಗಳನ್ನೆಲ್ಲ ಕೊಟ್ಟು ವ್ಯವಸ್ಥೆ ಮಾಡುವಂತೆ ಎರಡನೇ ದಫಾ ಇಂಡ್ಯ ಗವರ್ನಮೆಂಟಿನವರಿಂದ ಬಂದ ಹುಕುಂ ಅನುಸರಿಸಿ ಲೋಕಲ್ ಗವರ್ನಮೆಂಟಿನವರು ಕರ್ನಲ್ ಎಲಿಯೆಟ್ ಸಾಹೆಬರನ್ನೂ ಆ ಕಾಲದಲ್ಲಿ ಇಲ್ಲಿನ ಅದಾಲತ್ ಕೋರ್ಟ್ ಜಡ್ಜಿಯವರಾಗಿದ್ದ ಮ|| ನುಬೂರಿ ಕೃಷ್ಣಯ್ಯನವರನ್ನೂ ಜಡ್ಜಿಗಳಾಗಿ ಮೊಕರರ್ಮಾಡಿದರು. ಅವರು ಅರಮನೆಯ ಲೆಕ್ಕಗಳನ್ನೆಲ್ಲ ನೋಡಿ ಸಾಲಗಾರರಿಗೆಲ್ಲ ತಮಗೆ ಯುಕ್ತ ತೋರಿದಂತೆ ಸಾಲಗಳಂ ಫೈಸಲ್ಮಾಡಿದ್ದರಲ್ಲಿ ದಾಮೋದರದಾಸ್ ಶೆಟ್ಟರವರಿಗೆ ಐದುಲಕ್ಷ ಅರವತ್ತೇಳುಸಾವಿರ ರೂಪಾಯಿಗಳು ನ್ಯಾಯ್ಯವಾಗಿ ಸಲ್ಲಬೇಕೆಂದು ಫೈಸಲ್ಮಾಡಿದರು, ಪರಂತು ಶೆಟ್ಟರವರ ತಮ್ಮಂದರ ಮಕ್ಕಳಾದ ಬ್ರಿಜಲಾಲ್‌ದಾಸ್ ಯವರು ತಮ್ಮ ತಂದೆಯ ದಾವೆಯಲ್ಲಿ ಕಂಡ ಮೊಬಲಗಿಗೆ ಬಡ್ಡಿ ಸೇರಿಸಿ ದನದ್ವಿಗುಣ ಪಡೆಯುವದಕ್ಕೆ ತಮಗೆ ಹಕ್ಕಿರುವದರಿಂದ ಆ ಪ್ರಕಾರ ಕೊಡಿಸಿದ ಹೊರ್ತು ತಾವು ಒಪ್ಪುವದಿಲ್ಲವೆಂದು ಪುರಸ್ಕರ ಹಿಡಿದು ತಾವು ಈ ಫೈಸಲಿನ ಮೇಲೆ ಇಂಡಿಯಾ ಗವರ್ನಮೆಂಟಿಗೆ ಅಪೀಲ್ ಮಾಡಿಕೊಳ್ಳಬೇಕೆಂದು ಯೋಚಿಸಿರುವದರಿಂದ ಅದಕ್ಕೆ ಅಪ್ಪಣೆ ಆಗಬೇಕೆಂದು ಆ ಕಾಲದೊಳು ಇಲ್ಲಿನ ಚೀಫ್‌ಕಮಿಷನರಾಗಿದ್ದ ಮ|| ಬವರಿಂಗ್ ಸಾಹೆಬರವರಿಗೆ ಅರ್ಜಿಕೊಟ್ಟು ಶ್ರೀರಂಗಪಟ್ಟಣದ ಮೊಕ್ಕಾಂನಲ್ಲಿ ಖುದ್ದು ನೋಡಿ ತಮ್ಮ ಅಹವಾಲಿಗಳನ್ನೆಲ್ಲ ಹೇಳಿಕೊಂಡ ಕಾಲದಲ್ಲಿ ಸ್ಪೆಷಲ್ ಕೋರ್ಟಿನವರು ಕೊಟ್ಟ ಫೈಸಲಿನಲ್ಲಿ ಪ್ರವೇಶಿಸುವದಕ್ಕೆ ಯಾರಿಗೂ ಅಧಿಕಾರವಿಲ್ಲವಾಗಿ ಡಿಕ್ರಿ ಮೊಬಲಗನ್ನು ಪಡಕೊಂಡು ದಾಮೋದರದಾಸ್ ಶೆಟ್ಟರವರು ಈ ದೇಶವೊಳ್ಳು ಶಾಶ್ವತವಾಗಿ ನೆಲಗೊಳ್ಳುವಂತೆ, ಕಾವೇರೀ ನದಿಯಿಂದ ನಾಲಾ ಮೂಲಕ ಮೈಸೂರು ಶಹರಿಗೆ ಜಲವಸತಿಯಂ ಕಲ್ಪಿಸುವುದುಚಿತವಾದ ಕಾರ್ಯವಾಗಿರುವದೆಂದು ಬ್ರಿಜಲಾಲ್‌ದಾಸ್ ಯವರಿಗೆ ಹೇಳಿದರು. ಅದಕ್ಕೆ ತಮ್ಮ ಹಿರಿಯರು ಮಾಡಿದ ಸಾಲಗಳನ್ನು ತೀರಿಸುವದಕ್ಕೆ ಸಹ ಈಗಿನ ಡಿಕ್ರಿ ಮೊಬಲಗು ಸಾಲದ್ದಾಗಿರುವುದರಿಂದ ತಮಗೆ ಸಲ್ಲಬೇಕಾದ ಸುಮಾರು ಮೂವತ್ತು ಲಕ್ಷ ರೂಪಾಯಿಗಳನ್ನು ಪೂರಾ ಕೊಡಿಸಿದರೆ ಸಾಲಗಳನ್ನೆಲ್ಲ ತೀರಿಸಿ ಉಳಿದ ಮೊಬಲಗಿನಲ್ಲಿ ಧರ್ಮಕಾರ್ಯಗಳಂ ಮಾಡುವದಾಗಿ ಬ್ರಿಜಲಾಲ್‌ದಾಸರವರು ಜವಾಬ್ ಕೊಟ್ಟರು. ಅದರಮೇಲೆ ಲೋಕಲ್ ಗವರ್ನಮೆಂಟಿನವರು, ಇಲ್ಲಿನ ವಿದ್ಯಮಾನಗಳಂ ಇಂಡ್ಯ ಗವರ್ನಮೆಂಟಿನವರಿಗೆ ರಿಪೋರ್ಟ್ ಮಾಡಲು, ಮೂರು ತಿಂಗಳೊಳಗಾಗಿ ಬ್ರಿಜಲಾಲ್‌ದಾಸರು ಡಿಕ್ರಿ ಮೊಬಲಗನ್ನು ಪಡಕೊಳ್ಳದೆ ಹೋದರೆ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳತಕ್ಕದ್ದೆಂದು ಹುಕುಂ ಕೊಟ್ಟ ಆ ವಾಯಿದೆಯೊಳಗೆ ಬ್ರಿಜಲಾಲ್‌ದಾಸರು ಹಣವಂ ಪಡಕೊಳ್ಳದೆ ವಿಲಾಯತಿ ಸರ್ಕಾರಕ್ಕೆ ಅಪೀಲ್ ಮಾಡಿಕೊಂಡರು. ಅಲ್ಲಿ ವ್ಯವಸ್ಥೆಯಾಗುವದರೊಳಗಾಗಿಯೇ ಬ್ರಿಜಲಾಲ್‌ದಾಸರವರು ಮದರಾಸಿನಲ್ಲಿ ಕಾಲಗತಿಯಂ ಹೊಂದಿದರು. ಈಚೆಗೆ ಸುಮಾರು ಮೂರು ವರ್ಷಗಳ ಹಿಂದೆ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಈ ಮೊಕದ್ದಮೆಗೆ ಸಂಬಂದಪಟ್ಟ ಕಾಗದ ಪತ್ರಗಳಂ ನೋಡಿ, ಮೇಲಿನ ಡಿಕ್ರೀ ಮೊಬಲಗನ್ನು ದಾಮೋದರ ದಾಸರವರ ವಾರಸುದಾರರಿಗೆ ಪಾವತಿ ಮಾಡುವ ದುಚಿತವೆಂದು ತಿಳಿಸಿದ ಅಭಿಪ್ರಾಯಾನುಗುಣವಾಗಿ ಇಂಡ್ಯ ಗವರ್ನಮೆಂಟಿನವರು ಮೈಸೂರು ಸರ್ಕಾರಕ್ಕೆ ಕೊಟ್ಟ ಹುಕುಂ ಅನುಸರಿಸಿ ಕಳೆದ ಸಂವತ್ಸರದಲ್ಲಿ ಲೋಕಲ್ ಗವರ್ನಮೆಂಟಿನವರಿಂದ ಏರ್ಪಡಿಸಲ್ಪಟ್ಟ ಸ್ಪೆಷಲ್ ಕೋರ್ಟಿನಲ್ಲಿ ನಡೆದ ವಿಚಾರಣೆಯೊಳು ಗತಿಸಿದ ಬ್ರಿಜಲಾಲ್‌ದಾಸರವರಿಗೆ ಹಿಂದೂ ದರ್ಮಶಾಸ್ತ್ರಾನುಸಾರವಾಗಿ ಡಿಕ್ರಿ ಮೊಬಲಗನ್ನು ಹೊಂದುವದಕ್ಕೆ ತಕ್ಕ ಬಾದ್ಯಸ್ಥರು ಯಾರೂ ಹೊರ್ಪಡಲಿಲ್ಲವೆಂದು ವ್ಯವಸ್ಥೆಯಾದುದರಿಂದ ಸದರೀ ಮೊಬಲಗು ಮೈಸೂರು ಸರ್ಕಾರಕ್ಕೇನೆ ಸೇರಿಹೋದಂತಾಯಿತು. ಆದರೆ ಕೇವಲ ಉದಾರ ಮನಸ್ಕರಾದ ಶ್ರೀಮನ್ಮಹಾರಾಣೀ ರೀಜೆಂಟರವರು ದೀರ್ಘಾಲೋಚನೆಯೊನೆ, ಸದರೀ ಹಣವನ್ನು ಸರ್ಕಾರಕ್ಕೆ ಸೇರಿಸಿಕೊಳ್ಳುವದರಲ್ಲಿ ತಮಗೆ ಸುತರಾಂ ಇಷ್ಟವಿಲ್ಲವೆಂತಲೂ, ಅದನ್ನು ಗತಿಸಿದ ದಾಮೋದರದಾಸ್ ಶೆಟ್ಟರವರ ಹೆಸರಿನಲ್ಲಿ ದರ್ಮಕಾರ್ಯಗಳಂ ಮಾಡಿಸುವುದುಚಿತವೆಂತಲೂ ಅಭಿಪ್ರಾಯ ಪಟ್ಟದರಿಂದ ಮುಂದೆ ಅದರ ವಿನಿಯೋಗವು ಶ್ರೀಮನ್ಮಹಾರಾಜಾ ಸರ್ಕಾರದವರ ಅಧೀನಕ್ಕೆ ಬಂದಂತಾಯಿತು. ಈಗ ಸದರೀ ದ್ರವ್ಯವನ್ನು ದರ್ಮಕಾರ್ಯಗಳಿಗೆ ವಿನಿಯೋಗಿಸುವದರಲ್ಲಿ ಗವರ್ನಮೆಂಟಿನವರ ಅಭಿಪ್ರಾಯವೂ ಉದ್ದೇಶಪ್ರಯತ್ನಗಳೂ ಅದ್ಯಾಪಿ ಹೊರಗಾಗಲಿಲ್ಲವು, ಪರಂತು ಸದರೀ ವಿಷಯದಲ್ಲಿ ಈ ದೇಶದ ಪ್ರಜೆಗಳ ಅಭಿಪ್ರಾಯಗಳು ಭಿನ್ನಭಿನ್ನಗಳಾಗಿರುವಂತೆ ತೋರಬರುತಲಿದೆ.

ಈ ಸಂದರ್ಭದೊಳು ನಾವು ಗವರ್ನಮೆಂಟಿನ ಅವಗಾಹನಕ್ಕೆ ತರಬೇಕಾದ ಮುಖ್ಯ ವಿಷಯಗಳಲ್ಲಿ—ಗತಿಸಿದ ದಾಮೋದರದಾಸ್ ಶೆಟ್ಟರು ಮತ್ತು ಬ್ರಿಜಲಾಲ್‌ದಾಸ್ ಯವರಿಂದ ತಮಗೆ ಬಾಕೀಗಳು ಬರಬೇಕೆಂದು ಈಚೆಗೆ ಗವರ್ನಮೆಂಟಿಗೆ ಅರ್ಜಿಗಳಂ ಕೊಟ್ಟು ಆ ಬಗ್ಗೆ ಹಾಜರ್ಮಾಡಿದ ದಸ್ತಾವೇಜುಗಳಲ್ಲಿ ಅನೇಕವಾಗಿ ಬನಾವಣಿ ಯೆಂಬುವದರಲ್ಲಿ ಸಂಶಯವಿಲ್ಲವು, ಪರಂತು ಸುಮಾರು ಐವತ್ತುಸಾವಿರ ರೂಪಾಯಿಗಳ ವರೆಗೆ ಸಾಲವಿದ್ದು ಅದಕ್ಕಾಗಿ ಸಾಲಗಾರರು ಅವರನ್ನು ತಗಾದೆ ಮಾಡುತಲಿದ್ದದ್ದೂ, ಅಂತೆ ಸಾಲಗಾರರೆಲ್ಲ ಅವರ ಅಳಿಯಂದಿರಾದ ಗೋಕುಲದಾಸರವರು ಅವರ ಜೀವಿತಕಾಲದವರೆಗೆ ಬಡ್ಡಿ ಕೊಡುತ್ತ ಸಮಾಧಾನ ಹೇಳುತಲಿದ್ದದ್ದೂ ನಿಜ. ಆದುದರಿಂದ ಮೈಸೂರು ಗವರ್ನಮೆಂಟಿನವರು 'ಸದರೀ ಸಾಲಗಾರರನ್ನು ಕರೆಯಿಸಿ ಅವರಿಗೆ ಸಲ್ಲಬೇಕಾದ ಬಾಕಿಯಲ್ಲಿ ಯಥೋಚಿತ ಕೊಟ್ಟು ಸಮಾಧಾನ ಪಡಿಸಿ ಗತಿಸಿದ ದಾಮೋದರ ದಾಸರನ್ನೂ ಬ್ರಿಜಲಾಲ್ ದಾಸರನ್ನೂ ಋಣವಿಮುಕ್ತರನ್ನಾಗಿ ಮಾಡಬೇ

ಕಾದುದು ಮೊದಲನೆಯದು. ದಾಮೋದರ ದಾಸರವರು ಕಂಚಿ, ಶ್ರೀರಂಗ, ಗದ್ವಾನಾಳ ಮೊದಲಾದ ಕೆಲವು ಪುಣ್ಯಕ್ಷೇತ್ರಗಳಲ್ಲಿ ಯೇರ್ಪಡಿಸಿದ್ದ ಧರ್ಮಕಾರ್ಯಗಳು ಉಜ್ಜೀವಿಸುವಂತೆ ತಕ್ಕ ಯೇರ್ಪಾಡುಗಳಂ ಮಾಡಬೇಕಾದುದು ಎರಡನೆಯದು. ಗತಿಸಿದ ದಾಮೋದರ ದಾಸರವರು ಸಂಪಾದಿಸಿದ ದ್ರವ್ಯವೆಲ್ಲವು ಈ ಮೈಸೂರು ದೇಶದಲ್ಲಾದುದರಿಂದ ಅದನ್ನು ಈ ದೇಶದಲ್ಲಿ ಪ್ರಜೆಗಳಿಗೆ ಉಪಯುಕ್ತವಾಗಿಯೂ, ಅವರ ಪುರೋಭಿವೃದ್ಧಿಗೆ ಸಹಕಾರಿಯಾಗಿಯೂ ಇರುವ ಕಾರ್ಯಗಳಲ್ಲಿ ವಿನಿಯೋಗಿಸುವುದು ಗವರ್ನಮೆಂಟಿನವರಿಗೆ ಅವಶ್ಯ ಕರ್ತವ್ಯವಾದುದು. ಐದಾರು ಲಕ್ಷ ರೂಪಾಯಿಗಳ ಧರ್ಮದ್ರವ್ಯವು ವಿನಿಯೋಗಿಸಲ್ಪಡಬೇಕಾದ ಈ ಕಾಲದಲ್ಲಿ ಅನೇಕರು ನಾನಾವಿಧ ಕಾರಣಗಳಂ ನಮೂದಿಸಿ, ಸದರೀ ದ್ರವ್ಯದಲ್ಲಿ ಭಾಗಗಳಿಗಾಗಿ ಪಡೆಕ್ಕೆ ಪ್ರಯತ್ನ ಪಡಬಹುದು, ಪರಂತು ಗವರ್ನಮೆಂಟಿನವರು ಅವುಗಳೆಲ್ಲ ಅವಮಾನಮಂಕೊಡದೆ, ಮೇಲೆ ಹೇಳಿರುವಂತೆ ನಾಂಗಳಂ ತೀರಿಸಿ, ಬಹುಕಾಲದ ಮೊದಲು ನಡೆಯುತ್ತಬಂದ ಧರ್ಮಕಾರ್ಯಗಳಂ ಸ್ಥಿರಪಡಿಸಿ, ಉಳಿಯುವ ಹಣದಲ್ಲಿ, ಮೈಸೂರಿನಲ್ಲಿ ಸರ್ಕಾರದಿಂದ ಸ್ಥಾಪಿಸಲ್ಪಟ್ಟು ನಡೆಯುತ್ತಿರುವ ಕಸಬುದಾರಿ ವಿದ್ಯೆಯಂ ಕಲಿಸುವ ಪಾಠಶಾಲೆಯಂತೆ ಗತಿಸಿದ ದಾಮೋದರದಾಸರಯವರ ಹೆಸರಿನಲ್ಲಿ ಊರ್ಜಿತವಾಗಿ ಒಂದು ಪಾಠಶಾಲೆಯನ್ನೇರ್ಪಡಿಸುವುದು ಉತ್ತಮ ಕಾರ್ಯವಾಗಿರುವುದು. ಅದರಮೇಲೆ ಅನುಕೂಲ ಕಂಡುಬರುವ ಪಕ್ಷದಲ್ಲಿ ವಿದ್ಯಾಸಂಗ್ರಹಾರ್ಥ ಪರಸ್ಥಳಗಳಿಂದ ಈ ಪ್ರಾಂತಿಗೆ ಬಂದು ಅನ್ನ ವಸ್ತ್ರಗಳಿಗೆ ಸಹಾಯ ಗೊತ್ತುಮಾಡಿಕೊಳ್ಳಲಾಗದೆ ಕಷ್ಟಪಡುತ್ತಿರುವ ಬಡ ವಿದ್ಯಾರ್ಥಿಗಳಿಗೆ ಸಹಾಯಕವಾಗಿರುವಂತೆ ಸ್ಟೂಡೆಂಟ್ಸ್ ಹೋಂ ಎಂಬ ವಿದ್ಯಾರ್ಥಿನಿಲಯ ಒಂದಂ ಹಿರಿದಾಗಿ ಸ್ಥಾಪಿಸುವುದು ಉಚಿತವಾಗಿರುವುದು. ಈ ಕಾಲದೊಳು ಮೇಲಿನ ಎರಡು ಕಾರ್ಯಗಳಿಗಿಂತಲೂ ಯೋಗ್ಯವಾದ ಧರ್ಮಕಾರ್ಯವು ಬೇರೆ ಇಂದಿರದೆಂದು ತೋರುತಿದೆ.

ಇದೇ ವಿಷಯದಲ್ಲಿ ಈಚೆಗೆ ತಿಳಿಯಬರುವುದರೊಳು ಈ ವ್ಯವಹಾರವು ಸ್ಪೆಷಲ್‌ಕೋರ್ಟಿನಲ್ಲಿ ವಿಚಾರಣೆಯಾದ ಕಾಲದಲ್ಲಿ ಜಮುನಾಬಾಯಿ ಎಂಬವರಿಂದ ಬರೆಸಿದಪ್ಪಣೆ ಉಯಿಲ್ ಸಿಕ್ಕದೆ ಹೋದುದರಿಂದ ಅವರು ಕೊಟ್ಟ ಸ್ಟೇಟ್ಮೆಂಟಿಗಿಂತ ಅನ್ಯಥಾ ಮಾಡುವುದಕ್ಕೆ ಸದರೀ ಕೋರ್ಟಿನವರಿಗೆ ಸಾಧ್ಯವಲ್ಲವೆ ಹೋದಂತೆಯೂ, ಈಚೆಗೆ ಸದರೀ ಉಯಿಲ್ ಸಿಕ್ಕಿ ಅದರ ಆಧಾರದಮೇಲೆ ವಾರಸುದಾರರು ಮೈಸೂರು ಗವರ್ನಮೆಂಟಿಗೆ ಮರಳಿ ಪಿಟಿಷನ್ ಕೊಟ್ಟು ಅದು ಅವರ ಆಲೋಚನೆಯಲ್ಲಿರುವಂತೆಯೂ ಕೇಳುತ್ತೇವೆ.

Occasional Notes.
ನೈಮಿತ್ತಿಕವಿಷಯನ್ಯಾಸ.

ಇಂಡ್ಯ ದೇಶದ ಕ್ಷಾಮ ನಿವಾರಣಾರ್ಥ ಸ್ಥಾಪಿಸಲ್ಪಟ್ಟಿರುವ ಧರ್ಮ ಫಂಡಿಗೆ ಇದುವರೆಗೆ, ೧,೩೯,೩೦,೫೬೦ ರೂಪಾಯಿಗಳು ಜಮಾ ಬಂದಿರುತಿದೆ.

ಬಾಲಿಟಾ ಸಂಸ್ಥಾನದ ಶ್ರೀಕೃಷ್ಣ ಬಾಬು ರವರು ಜನ್ಮಭೂಮಿ ಮತ್ತು ಸ್ವರ್ಗಲೋಕ ಎರಡಕ್ಕೂ ಕ್ರಮವಾಗಿ ಅಂತರಿಸಿದಂತೆ ಕೇಳುವದಕ್ಕೆ ಬಹಳ ವಿಷಾದಿಸುತ್ತೇವೆ.

ಪುನೆ ವೈಭವವೆಂಬ ಪತ್ರಿಕೆಯ ಎಡಿಟರವರಾದ ಮೆ|| ಕಲಿಕರೆಂಬವರು ದಸ್ತಗಿರಿ ಮಾಡಲ್ಪಟ್ಟಿದ್ದರಷ್ಟೆ. ಸದರೀಯವರ ಮೇಲೆ ಯಾವವಿಧ ಚಾರ್ಜ್ ಸ್ಥಿರಪಡಲಾರದೆ ಹೈಕೋರ್ಟಿನವರಿಂದ ಈಚೆಗೆ ಬಿಡುಗಡೆ ಹೊಂದಿದಂತೆ ಕೇಳಸಂತೋಷಿಸುತ್ತೇವೆ.

ಈ ತಿಂಗಳ ಗುರುವಾರ ತಾರೀಖಿನ ಮಧ್ಯಾಹ್ನ ಸುಮಾರು ಒಂದು ಘಂಟೆಗೆ ಮದರಾಸಿನಲ್ಲಿ ಬಲವಾದ ವರ್ಷಕ್ಕೆ ಪ್ರಾರಂಭವಾಗಿ ರಾತ್ರಿ ಸುಮಾರು ಏಳು ಘಂಟೆಯುತನಕ ಬೀಳುತಲಿದ್ದಂತೆಯೂ ಸದರೀ ದಿನ ಮಧ್ಯಾಹ್ನ ಹನ್ನೆರಡು ಘಂಟೆಯ ಮೇಲೆ ಟ್ರಾಂವೆ ಗಾಡಿಗಳ ಸಂಚಾರ ನಿಂತು ಹೋದಂತೆಯೂ ತಿಳಿಯಬರುತಿದೆ.

ಸತಾರಾ ಡಿಸ್ಟ್ರಿಕ್ಟಿನಲ್ಲಿ ಪ್ರಕಟಿಸಲ್ಪಡುತಿರುವ ಮೋದಾವೃತ್ತ ಲಹರಿ ಎಂಬ ಪತ್ರಿಕೆಯ ಎಡಿಟರಾದ ಮೆ|| ಕಾಶೀನಾಥ ವಾಮನ್ ಎಂಬವರು ಇಂಡಿಯನ್ ಪೀನಲ್‌ಕೋಡ್ ೧೨೪ A. ಸೆಕ್ಷನ್ ಪ್ರಕಾರ ದಸ್ತಗಿರಿ ಮಾಡಲ್ಪಟ್ಟು ಸತಾರೆಗೆ ಕಳುಹಿಸಲ್ಪಟ್ಟಿರುವಂತೆ ತಂತಿವರ್ತಮಾನ ಬಂದಿರುತಿದೆ.

ಪಂಜಾಬ ದೇಶದಲ್ಲಿ ಪ್ರಾಯಶಃ ಸರ್ವತ್ರ ಬಲವಾದ ವರ್ಷಬಿದ್ದು ಸಿಂದು ನದಿಯ ಐದು ಶಾಖೆಗಳಲ್ಲೂ ಪೂರ್ಣ ಪ್ರವಾಹ ಹರಿಯುತ್ತ, ಸದರೀ ದೇಶಕ್ಕೆ ಈಸಲ ಎಷ್ಟು ನೀರು ಆವಶ್ಯಕವೋ ಅಷ್ಟು ನೀರಿನ ಸಮೃದ್ಧಿ ಯುಂಟಾಗಿರುವಂತೆ ತಿಳಿಯ ಬಂದಿರುವುದರಿಂದ ಆ ಪ್ರಾಂತದಲ್ಲಿನ ಕ್ಷಾಮಬಾಧೆಯು ಶೀಘ್ರದಲ್ಲೇ ನಿವೃತ್ತಿಯಾಗಬಹುದೆಂದು ತೋರುತಿದೆ.

ವಿಜಯನಗರದ ಸ್ಪೆಕ್ಟೇಟರ್ ಎಂಬ ಪತ್ರಿಕೆಯಮೇಲೆ ತರಲ್ಪಟ್ಟ ಮಾನನಷ್ಟ ಮೊಕದ್ದಮೆಯಲ್ಲಿ ಸದರೀ ಪತ್ರಿಕೆಯನ್ನು ಅಚ್ಚು ಹಾಕಿದವರಿಗೆ ೧೫೦, ಪ್ರಕಟಿಸಿದವರಿಗೆ ೩೦೦ ರೂಪಾಯಿಗಳ ಜುಲ್ಮಾನೆ ವಿಧಿಸಲ್ಪಟ್ಟಂತೆಯೂ, ಅಪರಾಧಿಗಳು ಕೂಡಲೆ ಅಪೀಲ್ ಮಾಡುವವರಾಗಿರುತ್ತಾರೆಂತಲೂ ಕೇಳುತ್ತೇವೆ.

ಮೆ|| ತಿಲಕ್‌ರವರ ಮೇಲೆ ತರಲ್ಪಟ್ಟಿರುವ ಮೊಕದ್ದಮೆಯ ಸರ್ಷನ್ ವಿಚಾರಣೆಯಲ್ಲಿ ಕಲ್ಕತ್ತೆಯಲ್ಲಿರುವ ಮಿಸ್ಟರ್ ಪಗ್ ಎಂಬವರು ಅಪರಾಧಿ ಪಕ್ಷದ ವಕೀಲರಾಗಿ ಕೋರಲ್ಪಟ್ಟು ಅವರು ಒಪ್ಪಿಕೊಂಡಿರುವಂತೆಯೂ, ಅವರಿಗೆ ಸಹಾಯವಾಗಿ ಮಿ ಗಾರ್ಥ್ ಎಂಬವರನ್ನು ಕಳುಹಿಸಬೇಕೆಂದು ಕಲ್ಕತ್ತೆಯಲ್ಲಿರುವ ಮೆ|| ತಿಲಕ್‌ಯವರ ಮಿತ್ರರೆಲ್ಲರು ಯೋಚಿಸುತಲಿರುವಂತೆಯೂ ತಿಳಿಯಬರುತಿದೆ.

ಸ್ವೆಯಾಂ ದೇಶದ ಅರಸರವರು ಜರ್ಮನೀ ದೇಶಕ್ಕೆ ಹೋಗಿರುವದಾಗಿ ಹಿಂದಿನವಾರದ ಪತ್ರಿಕೆಯ ಮೂಲಕ ತಿಳಿಸಿದ್ದೆವಷ್ಟೆ. ಸದರೀ ಅರಸರವರನ್ನು ಅಲ್ಲಿನ ಚಕ್ರವರ್ತಿಯವರಾದ ವಿಲ್ಲಿಯಂ ಯವರು ಉಚಿತ ಮರ್ಯಾದೆಗಳೊಡನೆ ಬರಮಾಡಿಕೊಂಡು ಕಳೆದ ತಿಂಗಳ ೨೯ನೇ ತಾರೀಖಿನಲ್ಲಿ ತಮ್ಮ ಅರಮನೆಯೊಳು ಔತಣ ಮಾಡಿಸಿದರು. ಇಂತ ವಿಶೇಷ ಸಂದರ್ಭಗಳಲ್ಲಿ ನಡೆಸಲ್ಪಡಬೇಕಾದ ಮರ್ಯಾದೆಗಳಲ್ಲಿ ಲೋಪ ಲೇಶವೂ ಇಲ್ಲದೆ ನಡೆಯುತಲಿವೆ.

ತಿರುವಾಂಕೂರು ಸಂಸ್ಥಾನದ ಉತ್ತರಭಾಗದಲ್ಲಿ ಕ್ಷಾಮವು ಅತಿ ಪ್ರಬಲಗೊಂಡು ಅಲ್ಲಿನ ಜನರು ಪೀಡಿಸುತಲಿರುವಂತೆಯೂ, ಆ ಪ್ರಾಂತದ ದುಃಸ್ಥಿತಿಯಂ ಖುದ್ದು ನೋಡಿ ತನ್ನಿವಾರಣೆಯಬಗ್ಗೆ ಆವಶ್ಯಕಗಳಾದ ಯೋಜನೆಗಳಂ ಮಾಡುವದಕ್ಕಾಗಿ ಅಲ್ಲಿನ ದಿವಾನರವರು ಹೊರಟಿರುವಂತೆಯೂ, ರಿಲೀಫ್‌ಕಾಮಗಾರಿಗಳಂ ಪ್ರಾರಂಭಿಸತಕ್ಕಬಗ್ಗೆ ಮಹಾರಾಜಾ ಸರ್ಕಾರದವರು ೩೪,೦೦೦ ರೂಪಾಯಿಗಳು ಮಂಜೂರ್ಮಾಡಿರುವಂತೆಯೂ ಕೇಳುತ್ತೇವೆ.

ಇಂಡಿಯನ್ ನ್ಯಾಷನಲ್ ಕಾಂಗ್ರೆಸ ಸಭೆಯವರ ಪೋಷಣೆಯಲ್ಲಿ ಲಂಡನ್ ಪಟ್ಟಣದೊಳು ಪ್ರಕಟಿಸಲ್ಪಡುತಲಿರುವ "ಇಂಡಿಯ" ಎಂಬ ಮಾಸಪತ್ರಿಕೆಯು ೧೮೯೮ನೇ ಇಸವಿ ಜನವರಿ ತಿಂಗಳೊದಲು ವಾರ ಪತ್ರಿಕೆಯಾಗಿ ಪ್ರಕಟಿಸಲ್ಪಡುವುದು ಮಾತ್ರವಲ್ಲದೆ ಇದುವರೆಗೆ ಇದ್ದಂತೆಯೇ ಮುಂದೆಯೂ ಇಂಡ್ಯ ದೇಶದ ಚಂದಾದಾರರಿಗೆ ಟಪಾಲ್ ಹಾಸಲ್ ಸೇರಿ ವರ್ಷ ಒಂದಕ್ಕೆ ಆರು ರೂಪಾಯಿಗಳಿಗೆ ಕೊಡಲ್ಪಡುವುದೆಂದು ಕಳೆದ ತಿಂಗಳ ಬಾಬತು ಸದರೀ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುತಿದೆ.

ಪುನೆಯ ಕೇಸರಿ ಎಂಬ ಮಹಾರಾಷ್ಟ್ರ ಭಾಷಾ ಪತ್ರಿಕೆಯ ಎಡಿಟರಾದ ಮೆ|| ತಿಲಕ್ ಯವರನ್ನು ದಸ್ತಗಿರಿಯಿಂದ ನಿರ್ಷ ಕಮ್ಮಿಟ ಮಾಡಿದ್ದ ನಂತರದಲು ಸದರೀ ಪತ್ರಿಕೆಯ ಚಂದಾದಾರರಸಂಖ್ಯೆಯು ಮತ್ತೂ ಮೂರು ಸಾವಿರಕ್ಕೆ ಹೆಚ್ಚಿತೆಂತಲೂ, ಇದರಿಂದ ಸದರೀ ಪತ್ರಿಕೆಯವಿಷಯದಲ್ಲೂ ಅದರ ಎಡಿಟರಾದ ಮೆ|| ತಿಲಕ್‌ಯವರ ವಿಷಯದಲ್ಲೂ ಅಲ್ಲಿನ ಪ್ರಜೆಗಳಿಗುಂಟಾಗಿರುವ ಪ್ರೀತಿ ಗೌರವಗಳು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೊರಗಾದುವೆಂತಲೂ ಪುನೇ ಇಂದುಪ್ರಕಾಶ ಪತ್ರಿಕೆ ತಿಳಿಸುತಿದೆ.

ದರ್ಭಂಗಾ ಸಂಸ್ಥಾನದ ಮಹಾರಾಜರವರು, ತಮ್ಮ ಸಂಸ್ಥಾನದ ಕಾರ್ಯ ನಿರ್ವಹಣೆಯಬಗ್ಗೆ ಇದುವರೆಗೆ ಯೂರೋಪಿಯನ್ ಮ್ಯಾನೇಜರೊಬ್ಬರನ್ನಿಟ್ಟುಕೊಂಡಿದ್ದರಷ್ಟೆ. ಈಚೆಗೆ ಸದರೀ ಅಧಿಕಾರಿಯನ್ನು ಕೆಲಸದಿಂದ ನಿವೃತ್ತಿ ಮಾಡಿಬಿಟ್ಟು, ಅಸಿಸ್ಟೆಂಟ್‌ಮ್ಯಾನೇಜರಾಗಿದ್ದ ಬಾಬು ಚಂದ್ರಶೇಖರ ಘೋಸ್ ಎಂಬವರ ಸಹಾಯದೊಡನೆ ರಾಜ್ಯಕಾರ್ಯಗಳನ್ನೆಲ್ಲ ತಾವೇ ನಿರ್ವಹಿಸುತ ಬರುತಿರುವದಾಗಿಯೂ ಬಂಗಾಳೇ ದೇಶದ ದೇಶಭಾಷಾವೃತ್ತಾಂತ ಪತ್ರಿಕೆಯೊಂದು ತಿಳಿಸುತಿದೆ ಇದು ವಾಸ್ತವ್ಯವಾಗಿರುವ ಪಕ್ಷದಲ್ಲಿ ಉಚಿತವಾದ ಏರ್ಪಾಡೆಂದು ಭಾವಿಸುವೆವು.

ಲಕ್ನೋ ಪಟ್ಟಣದಲ್ಲಿ ಪ್ರಕಟಿಸಲ್ಪಡುವ ಅಡ್ವೊಕೇಟ್ ಎಂಬ ಪತ್ರಿಕೆಯು ಅಲ್ಲಿನ ಬಾಜಾರಿನಲ್ಲಿ ಪ್ರಚಾರಗೊಂಡಿರುವ ಒಂದು ವಿಚಿತ್ರ ವರ್ತಮಾನವನ್ನು ಪ್ರಕಟಿಸಿರುತಿದೆಯೆಂದರೆ:—ಪರ್ಟ್ ಜನರಿಗೂ ಇಂಗ್ಲಿಷ್ ಸೋಲ್ಜರುಗಳಿಗೂ ನಡೆದ ಪ್ರಬಲ ಯುದ್ಧದಲ್ಲಿ ಪಠಾಣರು ಇಂಗ್ಲಿಷಿನವರನ್ನು ಸೋಲಿಸಿದರು, ಪರಂತು ಸೆಣ್ಣುವರೆಸ್ಸಿಸುವರಾದ ಸದರೀ ಸೋಲ್ಜರುಗಳಮೇಲೆ ಕನಿಕರದಿಂದ ಅವರನ್ನು ಕೊಂದುಹಾಕದೆ ಅವರ ಮೂಗುಗಳನ್ನೆಲ್ಲ ಕುಯಿದುಹಾಕಿಬಿಟ್ಟರು. ಮಿಲಿಟರಿ ಅಧಿಕಾರಿಗಳು ಅವರನ್ನೆಲ್ಲ ಇಂಗ್ಲಂಡಿಗೆ ಕಳುಹಿಸಿಬಿಟ್ಟರು, ಎಂದು ಅನೇಕಪದರಿಗಳಲ್ಲಿ ಪ್ರನ್ನಾ ಪಿಸಲ್ಪಡುತ ಅದನ್ನು ಪಾಮರಜನರು ನಂಬುತಾರೆ.

ಸ ೩ತ್ಯ ಮೊದಲು ಉತ್ತರ ದೇಶದೊಳು ಈಚೆಗ ನೇಟಿವ್ ವೃತ್ತಾಂತ ಪತ್ರಿಕೆಗಳಿಗಂ ಟುಮಾಡಲ್ಪಡುತಿರುವ ಸಂಕಟಗಳು ಕೇವಲ ಚಿಂತನೀಯವಾಗಿರುತಿವೆ. ಈಚೆಗೆ ಲಾಹೂರ್ ಪ್ರಾಂತದಲ್ಲಿ ಸುದಾರ್ ಎಂಬ ಪಾಪವಾರೆಯ ಪ್ರೊಪ್ರೈಟರು ಒಂದು ಪ್ರಕಟನೆಯನ್ನು ಬರೆದು ತಮ್ಮ ಪ್ರೆಸಿನಲ್ಲಿ ಅಚ್ಚಿಸಿದ ಬಗ್ಗೆ ಲಾಹೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಅವರನ್ನು ಸಮ್ಮನ್ಸ್‌ಮೂಲಕ ಕರೆಯಿಸಿ ಅವರಿಂದ ಒಂದು ವರ್ಷ ಕಾಲಕ್ಕೆ ಮುಚ್ಚಳಿಕೆ ಬರೆಯಿಸಿಕೊಂಡರು. ಅದರಮೇಲೆ ಸದರೀ ಪ್ರೊಪ್ರೈಟರು ಪಂಜಾಬ ಚೀಫ್‌ಕೋರ್ಟಿನಲ್ಲಿ ಅಪೀಲ್ ಮಾಡಲು ಸದರೀ ಮುಚ್ಚಳಿಕೆಯನ್ನು ಏತಕ್ಕೆ ರದ್ದುಮಾಡಕೂಡದೆಂಬ ವಿಷಯ ವ್ಯವಸ್ಥೆಯಬಗ್ಗೆ ಮುಂದಿನ ನವಂಬರ್ ತಿಂಗಳ ೯ನೇ ತಾರೀಖ್ ಗೊತ್ತುಮಾಡಲ್ಪಟ್ಟಿದೆ.

ಮುರದಾಬಾದಿನಲ್ಲಿ ಪ್ರಕಟಿಸಲ್ಪಡುತಿದ್ದ ಜಾಮ್ಯುಲ್‌ಉಲೂಂ ಎಂಬ ಪತ್ರಿಕೆಯಲ್ಲಿ ಕಲಹಪ್ರೇರಕಗಳಾದ ಮತ್ತು ಗವರ್ನಮೆಂಟಿನವರಲ್ಲಿ ಪ್ರಜೆಗಳಿಗೆ ಅಪ್ರೀತಿಯನ್ನುಂಟುಮಾಡುವಂತೆ ಲೇಖನಗಳು ಕೆಲವು ಪ್ರಕಟಿಸಲ್ಪಟ್ಟಿದ್ದುದು ಅಲ್ಲಿನ ಪೊಲೀಸ್ ಅಧಿಕಾರಿಗಳಿಗೆ ತಿಳಿಯಬಂದು ಕೂಡಲೆ ಅವರು ಸದರೀ ಪತ್ರಿಕೆಯ ಕಾರ್ಖಾನೆಯಲ್ಲಿ ಪ್ರವೇಶಿಸಿ ಅಲ್ಲಿ ಸಿಕ್ಕಿದ ಕಾಗದಗಳನ್ನೆಲ್ಲ ಜಪ್ತಿಮಾಡಿಸಿ, ಅದರಮೇಲೆ ಪೊಲೀಸ್ ಪಹರೆ ಇಟ್ಟಿರುವಂತೆಯೂ, ಸದರೀ ಪತ್ರಿಕೆಯ ಎಡಿಟರ್ ವ ಪ್ರೊಪ್ರೈಟರಾದ ಅಂಬಾ ಪ್ರಸಾದ್ ಎಂಬವರು ಪರಾರೀಯಾಗಿರುತ್ತಾರೆಂತಲೂ, ಅವರನ್ನು ಪತ್ತೆ ಮಾಡಿಕೊಟ್ಟವರಿಗೆ ಐನೂರು ರೂಪಾಯಿಗಳು ಇನಾಂ ಕೊಡುವದಾಗಿ ಪೊಲೀಸ್ ಅಧಿಕಾರಿಗಳು ಪ್ರಕಟ ಪಡಿಸಿರುವಂತೆಯೂ ಕಳೆದ ಶನಿವಾರದವಿನ ಕಲ್ಕತ್ತೆಯಿಂದ ತಂತಿ ವರ್ತಮಾನ ಬಂತು. ಈಗಿರುವಿದ್ಯಮಾನದಲ್ಲಿ ಮುಂಬೈ ಮೊದಲು ಕಲ್ಕತ್ತೆಯವರೆಗೆ ಅಲ್ಲಿಯಲ್ಲಿ ಪ್ರಕಟಿಸಲ್ಪಡುವ ದೇಶಭಾಷಾ ವೃತ್ತಾಂತ ಪತ್ರಿಕೆಗಳಲ್ಲಿ ಪ್ರಾಯಶಃ ಒಂದಾದರು ಉಜ್ಜೀವಿಸುವ ಸಂಭವವು ಕಂಡುಬರಲಿಲ್ಲವು.

ಉತ್ತ ... ಜಾಬ್ ಪ್ರಾಂತದಲ್ಲಿ ಮಾಪ್ಳೆಗಳಂ ಬಲ... ...ರು ಕಾಡುಗಳಲ್ಲಿ ಸೇರಿಕೊಂಡು ಆಗಿಂದ ...ನಾಸ್ ಗ್ರಾಮಗಳಮೇಲೆ ಬಂದುಬಿದ್ದು ಲೂಟಿಗಳು ಮಾಡುತಲೂ, ದಾರಿ ಕಟ್ಟಿ ಹೋದವರಂತಲೂ, ಖೂನಗಳು ಮಾಡುತಲೂ ಇರುವುದು ಪ್ರಸಿದ್ಧವಿಷಯವಾಗಿದೆಯಷ್ಟೆ. ಈ ಜನರ ಪುಂಡನ್ನಡಗಿಸುವ ವಿಷಯದಲ್ಲಿ ಬ್ರಿಟಿಷ್ ಸರ್ಕಾರದವರು ಬಹುವಿಧ ಪ್ರಯತ್ನಗಳಂ ಮಾಡಿಯೂ ಮಾಡುತಲೂ ಇರುತ್ತಾರೆ, ಆದಾಗ್ಯೂ ಸದರೀ ಜನರು ತಮ್ಮ ದುಷ್ಟ ವೃತ್ತಿಯಂ ಬಿಡಲಿಲ್ಲವು. ಈಚೆಗೆ ಮಂಜೇರಿ ಎಂಬ ಪ್ರದೇಶದಲ್ಲಿರುವ ಜೆಯಿಲಿನಲ್ಲಿಡಲ್ಪಟ್ಟಿದ್ದ ಸದರೀ ಜಾತಿಯ ಕೆಲವರು ಬೀಡಿಗಳಂ ಕತ್ತರಿಸಿಬಿಟ್ಟು, ಅಲ್ಲಿನ ಪೋಲೀಸ್ ಪಹರೆಯವರನ್ನು ಹೆದರಿಸಿ ಅವರಲ್ಲಿದ್ದ ರೈಫಲ್ ಬಂದೂಖಗಳನ್ನೂ ನೂರು ಕೋಟಾಗಳನ್ನೂ ಕಿತ್ತುಕೊಂಡು ಮನಸ್ಸಿಗೆ ಗೋಲಿಗಳಂ ಹಾರಿಸುತ ಹೊರಟರು. ಈ ವರ್ತಮಾನವು ಅಲ್ಲಿನ ಅಧಿಕಾರಿಗಳಿಗೆ ತಿಳಿದು ಅವರ ಬಂದೋಬಸ್ತಿಯಬಗ್ಗೆ ಬ್ರಿಟಿಷ್ ಸೇನೆಗಳಿರುವ ಸ್ಥಳಗಳಿಗೆ ವರ್ತಮಾನ ಕೊಟ್ಟು ಸೈನ್ಯಗಳು ಅಲ್ಲಿಗೆ ಹೊರಟುಹೋಗುತಲಿವೆ. ಇದರ ಪರ್ಯವಸಾನವು ಮುಂದೆ ತಿಳಿಯಬರಬೇಕು.

LOCAL AND PROVINCIAL NEWS.
ಪುರದೇಶವರ್ತಮಾನ ತಾಲ್ಲೂಕುಜಿಲ್ಲಾ ವೃತ್ತಾಂತಗಳು.

ಈ ಸಿಟಿ ಮ್ಯುನಿಸಿಪಾಲಿಟಿಯ ಪ್ರೆಸಿಡೆಂಟರಾದ ಮೆ|| ಟಿ. ಟಿ ಲಿನಾಡಯವರು ಮೂರು ತಿಂಗಳ ಪ್ರಿವಿಲೀಜ್ ರಜಾ ಮೇಲೆ ಇಂಗ್ಲಂಡಿಗೆ ಹೋಗಿದ್ದರಷ್ಟೆ. ಸದರೀ ಯವರು ಕಳೆದ ತಿಂಗಳ ಆದಿಭಾಗದಲ್ಲಿ ಇಲ್ಲಿಗೆ ವಾಪಸು ಬಂದು ತಮ್ಮ ಅಧಿಕಾರವಂ ಮರಳಿ ವಹಿಸಿದರು.

ಈ ಪುರದ ರಾಣೀಸಿಂಗನ ಕೋಟೆಯಲ್ಲಿ ಪ್ಲಾಂ ತಿಭೇದಿ ರೋಗ ತಲೆ ಹಾಕಿರುವಂತೆ ಕೇಳುತ್ತೇವೆ. ಯಾಗಿ ಮ್ಯುನಿಸಿಪಾಲಿಟಿಯವರು ಕೂಡಲೇ ತಕ್ಕ ಪ್ರಯತ್ನದ ಮೂಲಕ ಸದರೀ ರೋಗದ ವ್ಯಾಪಕತೆಗೆ ಅವಕಾಶವಿಲ್ಲದಂತೆ ಮಾಡುವರೆಂದು ನಂಬುತ್ತೇವೆ.

ಪುನೆ ಕೇಸರಿ ಪತ್ರಿಕೆಯ ಎಡಿಟರಾದ ಮೆ|| ತಿಲಕ್‌ಯವರ ಡಿಫೆನ್ಸಿಗೆ ಸಹಾಯಾರ್ಥವಾಗಿ ಮದರಾಸ್ ಮಹಾಜನರು ಚಂದಾಮೂಲಕ ೩೦೦ ರೂಪಾಯಿಗಳು ಜಮಾಯಿಸಿ ಕಳೆದ ಶನಿವಾರದ ದಿನ ಅಲ್ಲಿಗೆ ರವಾನಿಸಿದರೆಂದು ತಿಳಿಯಬರುತಿದೆ. ಇಲ್ಲಿನ ಕಂದಾಯದಾರರ ಸಭಾಜನರು ಕೂಡಲೆ ಒಂದು ಮೀಟಿಂಗ್ ಸೇರಿ ಉಪವನ್ಯಾಸವಂ ಪ್ರೇರಿಸಿ, ಚಂದಾ ಮೂಲಕ ಸಾಧ್ಯವಾದಷ್ಟು ಗೆ ಜಮಾ ಮಾಡಿ ಕಳುಹಿಸುವುದು ಈ ದೇಶೀಯರಿಗೆ ಭೂಷಣವಾಗಿರುವದೆಂದು ಸೂಚಿಸುವೆವು.

ಕಾಲಸ್ಥಿತಿ:—ಈಗ್ಗೆ ಒಂದು ವಾರಕ್ಕೆ ಮೇಲ್ಪಟ್ಟು ಪ್ರತಿದಿನದಲ್ಲೂ ಆಗಿಂದಾಗ್ಗೆ ವರ್ಷ ಬೀಳುತ ಹಳೇಮನೆಗಳು ಕೂಲಿಹೋಗುತಲಿವೆ. ಕೆರೆಕುಂಟೆಗಳಿಗೆ ಒಂದೆರಡು ತಿಂಗಳ ನೀರು ಬಂದಿರುತಿದೆ. ಹೀಗೆಯೇ ದೈವಾನುಗ್ರಹದಿಂದ ಬೆಳೆಕಾಲಗಳಲ್ಲಿ ಪಕ್ವಪಟ್ಟು ವರ್ಷಬೀಳುತಲಿದ್ದರೆ ಈಗ ಬೆಳೆಯಲ್ಲಿರುವ ಪಸಲ್ಗಳು ಪೂರಾ ಕೈಗೆ ಬರುವವು. ಪರಂತು ಪರಸ್ಥಳಗಳ ಗಾಡಿಗಳು ತಪ್ಪುವತನಕ ಧಾರಣೆಗಳು ಇಳಿಯುವದೆಂದು ತೋರಲಿಲ್ಲವು. ರಾಗಿಯ ಧಾರಣೆಯಲ್ಲಿ ಈಗ್ಗೆ ಹದಿನೈದು ದಿನಗಳ ಹಿಂದೆ ಹೆಚ್ಚಿದ ಭಾಗ ಮಾತ್ರ ಮರಳಿ ಇಳಿದಿದೆ. ಮೆಣಸಿನಕಾಯಿಯ ಈಗಿನ ಧಾರಣೆಯನ್ನು ಹಿಂದೆ ನಾವು ಯಾವ ಕಾಲದಲ್ಲೂ ಕೇಳಲಿಲ್ಲವು, ಪ್ರಾಯಶಃ ಮುಂದೆಯೂ ಕೇಳಲಾರೆವು. ಈಗ ಮಣ ೧ಕ್ಕೆ ಎಂಟು ರೂಪಾಯಿಗಳ ವರೆಗೆ ಮಾರುತಲಿರುವಂತೆ ಕೇಳುತ್ತೇವೆ. ಇತರ ವಿಷಯಗಳಲ್ಲಿ ಹಿಂದಿನವಾರದೊಳು ತಿಳಿಸಿರುವದಕ್ಕಿಂತಲು ಅಧಿಕಾಂಶ ಯಾವವೂ ಇಲ್ಲವು.

ಕಳೆದ ವಾರದ ಬಾಬತು ಸರ್ಕಾರೀ ಕಾಲಸ್ಥಿತಿ ರಿಪೋರ್ಟನ್ನು ನೋಡಲಾಗಿ, ಬೆಂಗಳೂರು, ಕೋಲಾರ, ತುಮಕೂರು, ಮೈಸೂರು, ಈ ನಾಲ್ಕು ಡಿಸ್ಟ್ರಿಕ್ಟುಗಳಲ್ಲಿ ಪ್ರಾಯಶಃ ಪ್ರತಿ ಒಂದು ತಾಲ್ಲೂಕಿನಲ್ಲೂ ಒಂದರಿಂದ ಆರು ಇಂಚುಗಳ ವರೆಗೆ ವರ್ಷ ಬಿದ್ದಂತೆಯೂ, ಹಾಸನ ಡಿಸ್ಟ್ರಿಕ್ಟಿನಲ್ಲಿ ಆರು ತಾಲ್ಲೂಕುಗಳಲ್ಲೂ, ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಎರಡು ತಾಲ್ಲೂಕುಗಳಲ್ಲೂ, ಕಡೂರು ಡಿಸ್ಟ್ರಿಕ್ಟಿನಲ್ಲಿ ಎರಡು ತಾಲ್ಲೂಕುಗಳಲ್ಲೂ, ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ನಾಲ್ಕು ತಾಲ್ಲೂಕುಗಳಲ್ಲೂ ಒಂದರಿಂದ ಮೂರು ಇಂಚುಗಳ ವರೆಗೆ ವರ್ಷ ಬಿದ್ದಿರುವಂತೆಯೂ ಕಾಣುತಿದೆ, ಪರಂತು ಯಲ್ಲಿಯೂ ಕೆರೆಗಳು ತುಂಬಿರುವಂತೆ ತಿಳಿಯಬರಲಿಲ್ಲವು. ಸರ್ವತ್ರ ಬೆಳೆಗಳು ಚೆನ್ನಾಗಿರುವಂತೆಯೂ ಕೂಡಿದ ಮಟ್ಟಿಗೆ ಜಲಸಮೃದ್ಧಿ ಯುಂಟಾಗಿರುವಂತೆಯೂ ತಿಳಿದು ಸಂತೋಷಿಸುತ್ತೇವೆ.

-vantage, were quite out of place" This from the conservative organ must damp the ardour of Sir M. M Bhownuggree who seemed to imagine himself the rising hope of conservative politicians and of anti-Indian Anglo Indians. Despised by Indians and ridiculed by those for whom he abuses his own countrymen, the ambitious Indian member is doomed to sore disappointment

---

The recent Bhavanagari show in the House of Commons has not been much appreciated by anybody in India, and the *Indian Spectator* which, like ourselves, has been extremely generous to Mr Bhavanagari does not like it either Referring to his attack on Sir William Wedderburn and Professor Gokhale, our contemporary says "We never knew that Parliamentary life could tench so much discourtesy and abuse' It looked at first as though Mr Bhavanagari was going to smash India from his heights, but he has talked himself down early enough, and there is no fear that he will hereafter be able to do any effective mischief

---

Referring to the proceedings taken against Mr. Tilak, the *Indian Daily News* remarks —"Lord Harris's letter to the *Times* seems to show that he has viewed these proceedings very much in the same light as we have done, namely, as a grave mistake This will be a great blow to the *Times of India*, which is the sole registered proprietor of the Bombay scare, and has surpassed Sergeant Buzfuz in the state of moral elevation it has lashed itself into on this subject" The failure of the prosecution will mean a prosecution to the *Times of India*, not as "the registered proprietor of the Bombay scare" but as the probable accused in a libel action by Mr. Tilak

---

We predicted that the result of the prosecution would be to increase the popularity of Mr Tilak

A convincing proof of the fact is to be found in the increased circulation of the *Kesari* We believe at one jump the circulation has increased by nearly three thousand copies We told Government that the prosecution gives them no advantage in either case while it increases the reputation of Mr Tilak among the classes over whom he already exercises great influence Government have no idea how unanimous and widespread is the sympathy felt for Mr Tilak in this matter. Had a compromise been effected on the lines suggested by us and actively taken up by the *Amrita Bazar Patrika*, Government would have gained immense popularity and preserved their prestige as well —*Indu Prakash*

A story comes from the Bombay side which throws a lurid light on the barbarism of the peasants in the Nizam's Dominions. It appears that recently two men, father and son, visited a little village called Kamaireli, where cholera was at its height, and claiming to be sorcerers, gave out that they would drive away the cholera fiend—for a consideration Days passed however, and the cholera did not abate The men of the village then held a meeting at which the conclusion was come to that the two sorcerers themselves were responsible for the disease, which would not cease till they had been offered up as a sacrifice to the local devi The assemblage then dragged the unhappy magicians to the temple where they were clubbed to death, after the village blacksmith had extracted or broken off every tooth in their heads

---

We (*Hindu*) should like to know, says a contemporary, if the Government is going to deport Pandit Ramabai under the Act of 1827 She has made statements regarding the plague operations just as grave as Professor Gokhale's, and yet has not even been called upon for an apology Is the cause of the Bombay Government's indifference that the Pandita has offered to call witnesses and a public enquiry of any kind is the last thing desired? In this connection we may mention another matter which has apparently been beneath the notice of our Bombay contemporaries It is, we believe, a fact that a native woman in Poona did commit suicide on the same occasion on which a dead child was found in what has been called a cigar box. This was undoubtedly the foundation for the graver statement made by Professor Gokhale. But exaggeration when there is some foundation for the statement is a very different thing from pure fabrication

---

It is understood that Mr R Sivasankara Pandiaji is a claimant on behalf of the Hindu Theological College to a portion of a considerable sum of money left by one Damodar Dass, a wealthy Marwadi Sowcar, who died intestate. The deceased was one of the creditors of the late Maharajah of Mysore, and all his near relatives having died, the money is in the Mysore Treasury practically unclaimed Her Highness the Maharani-Regent not being anxious that the money should be confiscated, Mr. Pandyaji has put in a request that a portion of the deceased's property be given towards the up keep and improvement of the Hindu Theological College and the maintenance of similar charitable institutions Mr Pandyaji is being backed up in his appeal by a large section of the Guzerati and Marwadi communities of Sowcarpet and but lately returned from a visit to Bangalore where he had an interview with the Dewan, Sir K Seshadri Iyer, anent his proposals Mr Pandiaji is evidently hopeful of success in his efforts —*Hindu*

Local and Provincial

Mysore Elephants —Recently that two elephants belonging to the Mysore Kheddah department were sent to the Austro Hungarian Government who paid the Durbar about Rs. 3,000 as conveyance and other charges.

New Bridge —The Mysore Durbar has decided to construct a new plate girder bridge of 11 spans over the Bhadra river, at Benkipur on the Birur Shimoga railway, and instead of the original proposal to take the new line over the existing road bridge

---

Clock Wanted —The Pettah Market had some years ago a clock put up, but it has been removed The growing importance of this market needs a public clock As Mr T P Leonard, the energetic President of the City Municipality, has returned we trust that he will see his way to supply the want.

The Otharadhi Mutt Appeals —We hear that the Chief Court delivered Judgments in all the 12 suits against the Otharadhi Mutt in which the Mutt servants sought for a declaration of their hereditary right to the various offices in the Mutt and for the recovery of the emoluments attached to such offices The Sub Judge of Mysore decreed all the suits and the Chief Court, in appeal has confirmed the same

---

The Mysore Gazette

Bangalore, Thursday, 2nd September 1897

Notifications by the Government of Mysore

GENERAL AND REVENUE

No 2679—*J 334, dated 27th Aug* 1897

Under Section 12 of the Code of Criminal Procedure, R Shama Rao, Acting Deputy Amildar, Turuvekere sub taluk, is appointed a Magistrate of the 3rd Class for the period during which he holds the acting appointment of Deputy Amildar

No 2173—*R F* 52 96, *dated, 25th Aug* 1897

Under Article 188 of the Mysore Service Regulations S Venkatramaniya, Deputy Amildar, Alur sub taluk, is granted privilege leave for three months, with effect from the 13th July 1897, preparatory to his retirement from the public service

No 2176—*R* 705, *dated 25th Aug* 18

Under Article 188 of the Mysore S Regulations, Muhammad Ali Khan, Dy Amildar of the Turuvekere sub-tal granted privilege leave for three months effect from the 1st August 1897, preparatory to his retirement from the public service already ordered in Government Proceedings No 475—R 154 dated 10th July 1897, and which shall take effect from date of expiry of the leave sanctioned

No 2306—*R* 731, *dated 27th Aug* 1897

Under Article 188 of the Mysore Service Regulations, Mr B Coopuswami Naidu, Extra Assistant Commissioner, Bangalore district, is granted privilege leave of absence for twenty days from such date as she may avail himself of the same

---

ಕರ್ಣಾಟಕ ಪ್ರಕಾಶಿಕಾ.

೧೮೯೭ನೇ ಇಸವಿ ಸೆಪ್ಟಂಬರ್ ತಾ|| ೬ನೇ ಸೋಮವಾರ

ಗತಿಸಿದ ದಾಮೋದರ ದಾಸರ ಧರ್ಮದ್ರವ್ಯದ ವಿನಿಯೋಗವು

ಗತಿಸಿದ ಶ್ರೀಮನ್ಮಹಾರಾಜಾ ಕೃಷ್ಣರಾಜ ಒಡೆಯರ್ ಬಹದೂರವರ ಕಾಲದಲ್ಲಿ ದಾಮೋದರ ದಾಸ್ ಎಂಬ ಗುಜರಾತಿ ವರ್ತಕರೊಬ್ಬರು ಈ ದೇಶಕ್ಕೆ ಬಂದು ಕೆಲವು ಕಾಲದ ವರೆಗೆ ಸಾಧಾರಣವಾಗಿ ವ್ಯಾಪಾರ ಮಾಡುತಲಿದ್ದು, ಕಾಲಕ್ರಮೇಣ ಅವರ ವ್ಯಾಪಾರವು ವೃದ್ಧಿಯಾಗುತ್ತಾ ಬಂದು ಇಲ್ಲಿನ ಪ್ರಜೆಗಳ ನಂಬಿಕೆಗೂ ಪ್ರೀತಿ ಗೌರವಗಳಿಗೂ ಪಾತ್ರರಾಗಿ ಅರಮನೆಗೆ ಬೇಕಾದ ಜವಾಹಿರಿಗಳು ಬಟ್ಟೆಗಳು ಮೊದಲಾದ ಪದಾರ್ಥಗಳು ಸರಬರಾಯಿ ಮಾಡುತ್ತ, ಶ್ರೀಮನ್ಮಹಾರಾಜಾ ಕೃಷ್ಣರಾಜ ಒಡೆಯರವರ ಪ್ರೀತಿ ವಿಶ್ವಾಸಗಳಿಗೆ ವಿಷಯರಾಗಿ ತಮ್ಮ ವ್ಯಾಪಾರದ ಮೂಲಕ ಅನೇಕ ಲಕ್ಷ ರೂಪಾಯಿಗಳನ್ನು ಆರ್ಜಿಸಿದರು. ಮೊದಲು ಒಂದು ದಫೆ ಅರಮನೆಯ ಸಾಲಗಳನ್ನೆಲ್ಲ ತೀರಿಸುವಂತೆ ಇಂಡ್ಯ ಗವರ್ನಮೆಂಟಿನಿಂದ ಬಂದ ಹುಕುಂ ಅನುಸರಿಸಿ ಅದಕ್ಕಾಗಿ ಯೋಗ್ಯರಾದ ಗ್ರಾಂಟ್ ಕಮ್ಮಿಟಿ ಎಂಬ ಕೋರ್ಟಿನವರು ಕೊಟ್ಟ ಪೈಸಲನ್ನನುಸರಿಸಿ, ಅರಮನೆ ಬಾಕೀದಾರರೆಲ್ಲರಿಗೂ ಬಾಕೀ ಹಣಗಳು ಕೊಟ್ಟು ವ್ಯವಸ್ಥೆ ಮಾಡಿದಂತೆ, ಆ ಕಾಲದಲ್ಲಿ ದಾಮೋದರ ದಾಸ್ ಶೆಟ್ಟರವರಿಗೆ ಲೆಕ್ಕದ ಮೇರೆಗೆ ಅವರವರಿಗೆ ಬಾಕೀ ಇದ್ದ ಲಕ್ಷಾಂತರ ರೂಪಾಯಿಗಳು ಪಾವತೀ ಮಾಡಲ್ಪಟ್ಟವು ಆ ತರುವಾಯ ಅರಮನೆಗೂ ಶೆಟ್ಟರವರಿಗೂ ನಡೆಯುತಬಂದ ಲೇವಾದೇವಿಯಲ್ಲಿ ಅನೇಕ ಲಕ್ಷ ರೂಪಾಯಿಗಳು ಬಾಕಿಯಾಗಿ, ಆ ವಿಷಯದಲ್ಲಿ ಅರಮನೆಗೂ ಶೆಟ್ಟರವರಿಗೂ ನಡೆಯುತಬಂದ ವಾಗ್ವ್ಯಸ್ತದ ಮೂಲಕ ಯಾವದೂ ವ್ಯವಸ್ಥೆಯು ಆಗದೆ ಹೋದುದರಿಂದ ಶೆಟ್ಟರವರು ಅರಮನೆಯಿಂದ ತಮಗೆ ಸಲ್ಲಬೇಕಾದ ಅಸಲು ಬಡ್ಡಿ ಹದಿನಾಲ್ಕು ಲಕ್ಷ ಚಿಲ್ಲರೆಗೆ ಹುಜೂರು ಅದಾಲತ್ ಕೋರ್ಟಿನಲ್ಲಿ ದಾವೇ ಮಾಡಿದರು. ಅದರ ತರುವಾಯ ಆಫೀಲಿನಲ್ಲಿ ಫೈಸಲ್ಮಾಡಿಕೊಳ್ಳಬೇಕೆಂದು ಅನೇಕ ಸಂವತ್ಸರಗಳ ಕಾಲ ನಿರೀಕ್ಷಿಸಿದಾಗ್ಯೂ ಆರೀತಿ ಫೈಸಲಾಗದೆ ಹೋಗಿ ಕಡೆಗೆ ಶೆಟ್ಟರವರು ಕಾಲಗತಿಯನ್ನೈದಿದರು. ಮರಳಿ ಮಹಾರಾಜರವರ ಸಾಲಗಳನ್ನೆಲ್ಲ ಕೊಟ್ಟು ವ್ಯವಸ್ಥೆ ಮಾಡುವಂತೆ ಎರಡನೆ ದಫೆ ಇಂಡ್ಯ ಗವರ್ನಮೆಂಟಿನವರಿಂದ ಬಂದ ಹುಕುಂ ಅನುಸರಿಸಿ ಲೋಕಲ್ ಗವರ್ನಮೆಂಟಿನವರು ಕರ್ನಲ್ ಎಲಿಯೆಟ್ ಸಾಹೇಬರನ್ನೂ ಆ ಕಾಲದಲ್ಲಿ ಇಲ್ಲಿನ ಅದಾಲತ್ ಕೋರ್ಟ ಜಡ್ಜಿಯಾಗಿದ್ದ ಮೆ|| ನುಬಂಗಿರಿ ಕೃಷ್ಣಯ್ಯಂಗಾರವರನ್ನೂ ಜಡ್ಜಿಗಳಾಗಿ ಮೊಕರರ್ಮಾಡಿದರು. ಅವರು ಅರಮನೆಯ ಲೆಕ್ಕಗಳನ್ನೆಲ್ಲ ನೋಡಿ ಸಾಲಗಾರರಿಗೆಲ್ಲ ತಮಗೆ ಯುಕ್ತ ತೋರಿದಂತೆ ಸಾಲಗಳು ಫೈಸಲ್ಮಾಡಿದ್ದರಲ್ಲಿ ದಾಮೋದರದಾಸ್ ಶೆಟ್ಟರವರಿಗೆ ಐದುಲಕ್ಷ ಅರವತ್ತೇಳುಸಾವಿರ ರೂಪಾಯಿಗಳು ನ್ಯಾಯ್ಯವಾಗಿ ಸಲ್ಲಬೇಕೆಂದು ಫೈಸಲ್ಮಾಡಿದರು, ಪರಂತು ಶೆಟ್ಟರವರ ತಮ್ಮಂದಿರ ಮಕ್ಕಳಾದ ಬೃಜಲಾಲ್ದಾಸ್ ಯವರು ತಮ್ಮ ತಂದೆಯ ದಾವೆಯಲ್ಲಿ ಕಂಡ ಮೊಬಲಗಿಗೆ ಬಡ್ಡಿ ಸೇರಿಸಿ ದನ ದ್ವಿಗುಣ ಪಡೆಯುವದಕ್ಕೆ ತಮಗೆ ಹಕ್ಕಿರುವದರಿಂದ ಆ ಪ್ರಕಾರ ಕೊಡಿಸಿದ ಹೊರ್ತು ತಾವು ಒಪ್ಪುವದಿಲ್ಲವೆಂದು ಮುಷ್ಕರ ಹಿಡಿದು ತಾವು ಈ ಫೈಸಲಿನ ಮೇಲೆ ಇಂಡಿಯಾ ಗವರ್ನಮೆಂಟಿಗೆ ಅಪೀಲ್ ಮಾಡಿಕೊಳ್ಳಬೇಕೆಂದು ಯೋಚಿಸಿರುವದರಿಂದ ಅದಕ್ಕೆ ಅಪ್ಪಣೆ ಆಗಬೇಕೆಂದು ಆ ಕಾಲದೊಳು ಇಲ್ಲಿನ ಚೀಫ್ ಕಮಿಷನರಾಗಿದ್ದ ಮೆ|| ಬವರಿಂಗ್ ಸಾಹೇಬರವರಿಗೆ ಅರ್ಜಿಕೊಟ್ಟು ಶ್ರೀರಂಗಪಟ್ಟಣದ ಮೊಕ್ಕಾಂನಲ್ಲಿ ಖುದ್ದು ನೋಡಿ ತಮ್ಮ ಅಹವಾಲಗಳನ್ನೆಲ್ಲ ಹೇಳಿಕೊಂಡ ಕಾಲದಲ್ಲಿ ಸ್ಪೆಷಲ್ ಕೋರ್ಟಿನವರು ಕೊಟ್ಟ ಫೈಸಲಿನಲ್ಲಿ ಪ್ರವೇಶಿಸುವದಕ್ಕೆ ಯಾರಿಗೂ ಅಧಿಕಾರವಿಲ್ಲವಾಗಿ ಡಿಕ್ರಿ ಮೊಬಲಗನ್ನು ಪಡಕೊಂಡು ದಾಮೋದರದಾಸ್ ಶೆಟ್ಟರ ಹೆಸರು ಆದೇಶವೊಳ್ಳ ಶಾಶ್ವತವಾಗಿ ನೆಲಗೊಳ್ಳುವಂತೆ, ಕಾವೇರೀ ನದಿಯಿಂದ ನಾಲೆ ಮೂಲಕ ಮೈಸೂರು ಶಹರಿಗೆ ಜಲವಸತಿಯು ಕಲ್ಪಿಸುವುದು ಉಚಿತವಾದ ಕಾರ್ಯವಾಗಿರುವುದೆಂದು ಬೃಜಲಾಲ್ದಾಸ್ ಯವರಿಗೆ ಹೇಳಿದರು. ಅದಕ್ಕೆ ತಮ್ಮ ಹಿರಿಯರು ಮಾಡಿದ ಸಾಲಗಳನ್ನು ತೀರಿಸುವದಕ್ಕೆ ಸಹ ಈಗಿನ ಡಿಕ್ರಿ ಮೊಬಲಗು ಸಾಲದ್ದಾಗಿರುವುದರಿಂದ ತಮಗೆ ಸಲ್ಲಬೇಕಾದ ಸುಮಾರು ಮೂವತ್ತು ಲಕ್ಷ ರೂಪಾಯಿಗಳನ್ನು ಪೂರಾ ಕೊಡಿಸಿದರೆ ಸಾಲಗಳನ್ನೆಲ್ಲ ತೀರಿಸಿ ಉಳಿದ ಮೊಬಲಗಿನಲ್ಲಿ ಧರ್ಮಕಾರ್ಯಗಳು ಮಾಡುವದಾಗಿ ಬೃಜಲಾಲ್ದಾಸ್ರವರು ಜವಾಬ್ ಕೊಟ್ಟರು ಅದರಮೇಲೆ ಲೋಕಲ್ ಗವರ್ನಮೆಂಟಿನವರು, ಇಲ್ಲಿನ ವಿದ್ಯಮಾನಗಳು ಇಂಡ್ಯ ಗವರ್ನಮೆಂಟಿನವರಿಗೆ ರಿಪೋರ್ಟ ಮಾಡಲು, ಮೂರು ತಿಂಗಳೊಳಗಾಗಿ ಬೃಜಲಾಲ್ದಾಸರು ಡಿಕ್ರಿ ಮೊಬಲಗನ್ನು ಪಡಕೊಳ್ಳದೆ ಹೋದರೆ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳತಕ್ಕದ್ದೆಂದು ಹುಕುಂ ಕೊಟ್ಟು ಆ ಮಿಯಾದಿನೊಳಗೆ ಬೃಜಲಾಲ್ದಾಸರು ಹಣವು ಪಡಕೊಳ್ಳದೆ ವಿಲಾಯತಿ ಸರ್ಕಾರಕ್ಕೆ ಅಪೀಲ್ ಮಾಡಿಕೊಂಡರು. ಅಲ್ಲಿ ವ್ಯವಸ್ಥೆಯಾಗುವದರೊಳಗಾಗಿಯೇ ಬೃಜಲಾಲ್ದಾಸರವರು ಮದರಾಸಿನಲ್ಲಿ ಕಾಲಗತಿಯು ಹೊಂದಿದರು ಈಚೆಗೆ ಸುಮಾರು ಮೂರು ವರ್ಷಗಳ ಹಿಂದೆ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಈ ಮೊಕದ್ದಮೆಗೆ ಸಂಬಂಧಪಟ್ಟ ಕಾಗದ ಪತ್ರಗಳು ನೋಡಿ, ಮೇಲಿನ ಡಿಕ್ರೀ ಮೊಬಲಗನ್ನು ದಾಮೋದರ ದಾಸರವರ ವಾರಿಸುದಾರರಿಗೆ ಪಾವತಿ ಮಾಡುವದು ಉಚಿತವೆಂದು ತಿಳಿಸಿದ ಅಭಿಪ್ರಾಯಾನುಗುಣವಾಗಿ ಇಂಡ್ಯ ಗವರ್ನಮೆಂಟಿನವರು ಮೈಸೂರು ಸರ್ಕಾರಕ್ಕೆ ಕೊಟ್ಟ ಹುಕುಂ ಅನುಸರಿಸಿ ಕಳೆದ ಸಂವತ್ಸರದಲ್ಲಿ ಲೋಕಲ್ ಗವರ್ನಮೆಂಟಿನವರಿಂದ ನಿರ್ಧರಿಸಲ್ಪಟ್ಟ ಸ್ಪೆಷಲ್ ಕೋರ್ಟಿನಲ್ಲಿ ನಡೆದ ವಿಚಾರಣೆಯೊಳು, ಗತಿಸಿದ ಬೃಜಲಾಲ್ದಾಸರವರಿಗೆ ಹಿಂದೂ ಧರ್ಮಶಾಸ್ತ್ರಾನುಸಾರವಾಗಿ ಡಿಕ್ರಿ ಮೊಬಲಗನ್ನು ಹೊಂದುವದಕ್ಕೆ ತಕ್ಕ ಬಾಧ್ಯಸ್ಥರು ಯಾರೂ ಯೋಗ್ಯರಾಗಲಿಲ್ಲವೆಂದು ವ್ಯವಸ್ಥೆಯಾದುದರಿಂದ ಸದರೀ ಮೊಬಲಗು ಮೈಸೂರು ಸರ್ಕಾರಕ್ಕೇನೆ ಸೇರಿಹೋದಂತಾಯಿತು. ಆದರೆ ಕೇವಲ ಉದಾರ ಮನಸ್ಕರಾದ ಶ್ರೀಮನ್ಮಹಾರಾಣೀ ರೀಜಂಟರವರು ದೀರ್ಘಾಲೋಚನೆಯಿಂದ, ಸದರೀ ಹಣವನ್ನು ಸರ್ಕಾರಕ್ಕೆ ಸೇರಿಸಿಕೊಳ್ಳುವದರಲ್ಲಿ ತಮಗೆ ಸುತರಾಂ ಇಷ್ಟವಿಲ್ಲವೆಂತಲೂ, ಅದನ್ನು ಗತಿಸಿದ ದಾಮೋದರದಾಸ್ ಶೆಟ್ಟರವರ ಹೆಸರಿನಲ್ಲಿ ಧರ್ಮಕಾರ್ಯಗಳು ಮಾಡಿಸುವದು ಉಚಿತವೆಂತಲೂ ಅಭಿಪ್ರಾಯಪಟ್ಟದರಿಂದ ಮುಂದೆ ಅದರ ವಿನಿಯೋಗವು ಶ್ರೀಮನ್ಮಹಾರಾಜಾ ಸರ್ಕಾರದವರ ಅಧೀನಕ್ಕೆ ಬಂದಂತಾಯಿತು ಈಗ ಸದರೀ ದ್ರವ್ಯವನ್ನು ಧರ್ಮಕಾರ್ಯಗಳಿಗೆ ವಿನಿಯೋಗಿಸುವದರಲ್ಲಿ ಗವರ್ನಮೆಂಟಿನವರ ಅಭಿಪ್ರಾಯವೂ ಉದ್ದೇಶವೂ ಯತ್ನಗಳೂ ಅದ್ಯಾಪಿ ಹೊರಗಾಗಲಿಲ್ಲವು, ಪರಂತು ಸದರೀ ವಿಷಯದಲ್ಲಿ ಈ ದೇಶದ ಪ್ರಜೆಗಳ ಅಭಿಪ್ರಾಯಗಳು ಭಿನ್ನ ಭಿನ್ನಗಳಾಗಿರುವಂತೆ ತೋರಬರುತಲಿದೆ.

ಈ ಸಂದರ್ಭದೊಳು ನಾವು ಗವರ್ನಮೆಂಟಿನ ಅವಧಾನಕ್ಕೆ ತರಬೇಕಾದ ಮುಖ್ಯ ವಿಷಯಗಳಲ್ಲಿ—ಗತಿಸಿದ ದಾಮೋದರದಾಸ್ ಶೆಟ್ಟರು ಮತ್ತು ಬೃಜಲಾಲ್ದಾಸ್ ಯವರಿಂದ ತಮಗೆ ಬಾಕೀಗಳು ಬರಬೇಕೆಂದು ಈಚೆಗೆ ಗವರ್ನಮೆಂಟಿಗೆ ಅರ್ಜಿಗಳು ಕೊಟ್ಟು ಆವಗ್ಗೆ ಹಾಜರ್ಮಾಡಿದ ದಸ್ತಾವೇಜುಗಳಲ್ಲಿ ಅನೇಕವಾಗಿ ಬನಾವಣೆ ಯೆಂಬುವದರಲ್ಲಿ ಸಂಶಯವಿಲ್ಲವು, ಪರಂತು ಸುಮಾರು ಐವತ್ತು ಸಾವಿರ ರೂಪಾಯಿಗಳ ವರೆಗೆ ಸಾಲವಿದ್ದು ಅದಕ್ಕಾಗಿ ಸಾಲಗಾರರು ಅವರನ್ನು ತಗಾದೆ ಮಾಡುತಲಿದ್ದದ್ದೂ, ಅಂತೆ ಸಾಲಗಾರರಿಗೆಲ್ಲ ಅವರ ಅಳಿಯಂದರಾದ ಗೋಕುಲದಾಸರವರು ಅವರ ಜೀವಿತ ಕಾಲದವರೆಗೆ ಬಡ್ಡಿ ಕೊಡುತ ಸಮಾಧಾನ ಹೇಳುತಲಿದ್ದದ್ದೂ ನಿಜ ಆದುದರಿಂದ ಮೈಸೂರು ಗವರ್ನಮೆಂಟಿನವರು ಸದರೀ ಸಾಲಗಾರರನ್ನು ಕರೆಯಿಸಿ ಅವರಿಗೆ ಸಲ್ಲಬೇಕಾದ ಬಾಕಿಯಲ್ಲಿ ಯಥೋಚಿತ ಕೊಟ್ಟು ಸಮಾಧಾನ ಪಡಿಸಿ ಗತಿಸಿದ ದಾಮೋದರ ದಾಸರನ್ನೂ ಬೃಜಲಾಲ್ ದಾಸರನ್ನೂ ಋಣವಿಮುಕ್ತರನ್ನಾಗಿ ಮಾಡಬೇ

ಕಾದುದು ಮೊದಲನೆಯದು. ದಾಮೋದರ ದಾಸರವರು ಕಂಚಿ, ಶ್ರೀರಂಗ, ಗದ್ವಾಲ್ ಮೊದಲಾದ ಕೆಲವು ಪುಣ್ಯಕ್ಷೇತ್ರಗಳಲ್ಲಿ ಏರ್ಪಡಿಸಿದ್ದ ಧರ್ಮಕಾರ್ಯಗಳು ಉಜ್ಜೀವಿಸುವಂತೆ ಪಕ್ಕಾ ಏರ್ಪಾಡುಗಳಂ ಮಾಡಬೇಕಾದುದು ಎರಡನೆಯದು. ಗತಿಸಿದ ದಾಮೋದರ ದಾಸರವರು ಸಂಪಾದಿಸಿದ ದ್ರವ್ಯವೆಲ್ಲವು ಈ ಮೈಸೂರು ದೇಶದಲ್ಲಾದುದರಿಂದ ಅದನ್ನು ಈ ದೇಶದಲ್ಲಿ ಪ್ರಜೆಗಳಿಗೆ ಉಪಯುಕ್ತವಾಗಿಯೂ, ಅವರ ಪುರೋಭಿವೃದ್ಧಿಗೆ ಸಹಕಾರಿಯಾಗಿಯೂ ಇರುವ ಕಾರ್ಯಗಳಲ್ಲಿ ವಿನಿಯೋಗಿಸುವದು ಗವರ್ನಮೆಂಟಿನವರಿಗೆ ಅವಶ್ಯಕರ್ತವ್ಯವಾದುದು. ಐದಾರು ಲಕ್ಷ ರೂಪಾಯಿಗಳ ಧರ್ಮದ್ರವ್ಯವು ವಿನಿಯೋಗಿಸಲ್ಪಡಬೇಕಾದ ಈ ಕಾಲದಲ್ಲಿ ಅನೇಕರು ನಾನಾವಿಧ ಕಾರಣಗಳಂ ನಮೂದಿಸಿ, ಸದರೀ ದ್ರವ್ಯದಲ್ಲಿ ಭಾಗಿಗಳಾಗುವದಕ್ಕೆ ಪ್ರಯತ್ನ ಪಡಬಹುದು, ಪರಂತು ಗವರ್ನಮೆಂಟಿನವರು ಅವುಗಳಿಗೆಲ್ಲ ಅವಧಾನವಂ ಕೊಡದೆ, ಮೇಲೆ ಹೇಳಿರುವಂತೆ ನಿಯಮಗಳಂ ತೀರಿಸಿ, ಬಹುಕಾಲದ ಮೊದಲು ನಡೆಯುತ್ತಬಂದ ಧರ್ಮಕಾರ್ಯಗಳಂ ಸ್ಥಿರಪಡಿಸಿ, ಉಳಿಯುವ ಹಣದಲ್ಲಿ; ಮೈಸೂರೊಳು ಸರ್ಕಾರದಿಂದ ಸ್ಥಾಪಿಸಲ್ಪಟ್ಟು ನಡೆಯುತ್ತಬರುವ ಸಂಸ್ಕೃತ ವಿದ್ಯೆಯಂ ಕಲಿಸುವ ಪಾಠಶಾಲೆಯಂತೆ ಗತಿಸಿದ ದಾಮೋದರದಾಸ್‌ಯವರ ಹೆಸರಿನಲ್ಲಿ ಈ ಪುರದೊಳೊಂದು ಪಾಠಶಾಲೆಯನ್ನೇರ್ಪಡಿಸುವದು ಉತ್ತಮ ಕಾರ್ಯವಾಗಿರುವುದು. ಅದರಮೇಲೆ ಅನುಕೂಲ ಕಂಡುಬರುವ ಪಕ್ಷದಲ್ಲಿ ವಿದ್ಯಾಸಂಗ್ರಹಣಾರ್ಥ ಪರಸ್ಥಳಗಳಿಂದ ಈ ಪುರಕ್ಕೆ ಬಂದು ಅನ್ನ ವಸ್ತ್ರಗಳಿಗೆ ಸಹಾಯ ದೊರೆಯದಂತೆ ಕಷ್ಟಪಡುತಿರುವ ಬಡ ವಿದ್ಯಾರ್ಥಿಗಳಿಗೆ ಸಹಾಯಕವಾಗಿರುವಂತೆ ಸ್ಟೂಡೆಂಟ್ಸ್ ಹೋಂ ಎಂಬ ವಿದ್ಯಾರ್ಥಿನಿಲಯ ಒಂದಂ ತುರ್ತಾಗಿ ಸ್ಥಾಪಿಸುವುದು ಉಚಿತವಾಗಿರುವುದು. ಈ ಕಾಲದೊಳು ಮೇಲಿನ ಎರಡು ಕಾರ್ಯಗಳಿಗಿಂತಲೂ ಯೋಗ್ಯವಾದ ಧರ್ಮಕಾರ್ಯವು ಬೇರೊಂದಿರಲಾರದೆಂದು ತೋರುತಿದೆ.

ಇದೇ ವಿಷಯದಲ್ಲಿ ಈಚೆಗೆ ತಿಳಿಯಬರುವದರೊಳು ಈ ವ್ಯವಹಾರವು ಸ್ಪೆಷಲ್‌ಕೋರ್ಟಿನಲ್ಲಿ ವಿಚಾರಣೆಯಾದ ಕಾಲದಲ್ಲಿ ಜಮುನಾಬಾಯಿ ಎಂಬವರಿಂದ ಬರೆದಿದ್ದಷ್ಟು ಉಯಿಲು ಸಿಕ್ಕದೆ ಹೋದುದರಿಂದ ಅವರು ಕೊಟ್ಟ ಸ್ಪೆಸಲಿಗಿಂತ ಅನ್ಯಥಾ ಮಾಡುವದಕ್ಕೆ ಸದರೀ ಕೋರ್ಟಿನವರಿಗೆ ಸಾಧ್ಯವಲ್ಲದೆ ಹೋದಂತೆಯೂ, ಈಚೆಗೆ ಸದರೀ ಉಯಿಲು ಸಿಕ್ಕಿ ಅದರ ಆಧಾರದಮೇಲೆ ವಾರಸುದಾರರು ಮೈಸೂರು ಗವರ್ನಮೆಂಟಿಗೆ ಮರಳಿ ಪಿಟಿಷನ್ ಕೊಟ್ಟು ಅದು ಅವರ ಆಲೋಚನೆಯಲ್ಲಿರುವಂತೆಯೂ ಕೇಳುತ್ತೇವೆ.

Occasional Notes.
ನೈಮಿತ್ತಿಕವಿಷಯನ್ಯಾಸ.

ಇಂಡ್ಯಾ ದೇಶದ ಕ್ಷಾಮ ನಿವಾರಣಾರ್ಥ ಸ್ಥಾಪಿಸಲ್ಪಟ್ಟಿರುವ ಧರ್ಮ ಫಂಡಿಗೆ ಇದುವರೆಗೆ, ೧,೫೯,೩೧,೫೬೧ ರೂಪಾಯಿಗಳು ಜಮಾ ಬಂದಿರುತಿದೆ.

ಪಾಲಿಟಾನಾ ಸಂಸ್ಥಾನದ ಠಾಕೂರ್ ಸಾಹೆಬರವರು ಜನ್ನುಫಣಿ ಮತ್ತು ಜ್ವರರೋಗ ಎಂಬಿವರಿಂದಾಗಿ ಕ್ರಮವಡಾಗಲಿಸುವಂತೆ ಕೇಳುವದಕ್ಕೆ ಬಹಳ ವಿಷಾದಿಸುತ್ತೇವೆ.

ಪುನೆ ವೈಭವವೆಂಬ ಪತ್ರಿಕೆಯ ಎಡಿಟರವರಾದ ಮೆ|| ಕೆಲಕರೆಂಬವರು ದಸ್ತಗಿರಿ ಮಾಡಲ್ಪಟ್ಟಿದ್ದರಷ್ಟೆ. ಸದರೀಯವರ ಮೇಲೆ ಯಾವವಿಧ ಚಾರ್ಜ್ ಸ್ಥಿರಪಡಲಾರದೆ ಹೈಕೋರ್ಟಿನವರಿಂದ ಈಚೆಗೆ ಬಿಡುಗಡೆ ಹೊಂದಿದಂತೆ ಕೇಳ ಸಂತೋಷಿಸುತ್ತೇವೆ.

ಈ ತಿಂಗಳ ಗುರ್ರೇ ತಾರೀಖಿನ ಮಧ್ಯಾಹ್ನ ಒಂದು ಘಂಟೆಗೆ ಮದರಾಸಿನಲ್ಲಿ ಬಲವಾದ ವರ್ಷಕ್ಕೆ ಪ್ರಾರಂಭವಾಗಿ ರಾತ್ರಿ ಮುನ್ನೂರು ಏಳು ಘಂಟೆಯತನಕ ಬೀಳುತಲಿದ್ದಂತೆಯೂ ಸದರೀ ದಿನ ಮಧ್ಯಾಹ್ನ ಹನ್ನೆರಡು ಘಂಟೆಯ ಮೇಲೆ ಟ್ರಾಂವೆ ಗಾಡಿಗಳ ಸಂಚಾರ ನಿಂತು ಹೋದಂತೆಯೂ ತಿಳಿಯಬರುತಿದೆ.

ಸತಾರಾ ಡಿಸ್ಟ್ರಿಕ್ಟಿನಲ್ಲಿ ಪ್ರಕಟಿಸಲ್ಪಡುತಿರುವ ಮೋದಾವೃತ್ತ ಅತ್ವಾಯಿ ಎಂಬ ಪತ್ರಿಕೆಯ ಎಡಿಟರಾದ ಮೆ|| ಕಾಶೀನಾಥ ಪಾಮರ್ ಎಂಬವರು ಇಂಡಿಯನ್ ಪೀನಲ್‌ಕೋಡ್ ೧೨೪ A. ಸೆಕ್ಷನ್ ಪ್ರಕಾರ ದಸ್ತಗಿರಿ ಮಾಡಲ್ಪಟ್ಟು ಸತಾರೆಗೆ ಕಳುಹಿಸಲ್ಪಟ್ಟಿರುವಂತೆ ತಂತಿವರ್ತಮಾನ ಬಂದಿರುತಿದೆ.

ಪಂಜಾಬ್ ದೇಶದಲ್ಲಿ ಪ್ರಾಯಶಃ ಸರ್ವತ್ರ ಬಲವಾದ ವರ್ಷಬಿದ್ದು ಸಿಂಧು ನದಿಯ ಐದು ಶಾಖೆಗಳಲ್ಲೂ ಪೂರ್ಣ ಪ್ರವಾಹ ಹರಿಯುತ್ತ, ಸದರೀ ದೇಶಕ್ಕೆ ಈಸಲ ಎಷ್ಟು ನೀರು ಆವಶ್ಯಕವೋ ಅಷ್ಟು ನೀರಿನ ಸಮೃದ್ಧಿ ಯುಂಟಾಗಿರುವಂತೆ ತಿಳಿಯ ಬಂದಿರುದದರಿಂದ ಆ ಪ್ರಾಂತದಲ್ಲಿನ ಕ್ಷಾಮಬಾಧೆಯು ಕ್ಷಿಪ್ರದಲ್ಲೇ ನಿವೃತ್ತಿಯಾಗಬಹುದೆಂದು ತೋರುತಿದೆ.

ವಿಜಯನಗರದ ಸ್ಪೆಕ್ಟೇಟರ್ ಎಂಬ ಪತ್ರಿಕೆಯಮೇಲೆ ತರಲ್ಪಟ್ಟ ಮಾನನಷ್ಟ ಮೊಕದ್ದಮೆಯಲ್ಲಿ ಸದರೀ ಪತ್ರಿಕೆಯನ್ನು ಅಚ್ಚು ಹಾಕಿದವರಿಗೆ ೧೫೦, ಪ್ರಕಟಿಸಿದವರಿಗೆ ೩೦೦ ರೂಪಾಯಿಗಳ ಜುರ್ಮಾನೆ ನಿಧಿಸಲ್ಪಟ್ಟಂತೆಯೂ, ಅಪರಾಧಿಗಳು ಕೂಡಲೆ ಅಪೀಲ್ ಮಾಡುವವರಾಗಿರುತ್ತಾರೆಂತಲೂ ಕೇಳುತ್ತೇವೆ.

ಮೆ|| ತಿಲಕರವರ ಮೇಲೆ ತರಲ್ಪಟ್ಟಿರುವ ಮೊಕದ್ದಮೆಯ ಸೆಷನ್ ವಿಚಾರಣೆಯಲ್ಲಿ ಕಲ್ಕತ್ತೆಯಲ್ಲಿರುವ ಮೆಸ್ಟರ್ ಪಗ್ ಎಂಬವರು ಅಪರಾಧಿಯ ಕಡೆ ವಕೀಲರಾಗಿ ಕೋರಲ್ಪಟ್ಟು ಅವರು ಒಪ್ಪಿಕೊಂಡಿರುವಂತೆಯೂ, ಅವರಿಗೆ ಸಹಾಯವಾಗಿ ಮೆ. ಗಾರ್ಥ್ ಎಂಬವರನ್ನು ಕಳುಹಿಸಬೇಕೆಂದು ಕಲ್ಕತ್ತೆಯಲ್ಲಿರುವ ಮೆ|| ತಿಲಕರವರ ಮಿತ್ರರೆಲ್ಲರು ಯೋಚಿಸುತಲಿರುವಂತೆಯೂ ತಿಳಿಯಬರುತಿದೆ.

ಸೈಯಾಂ ದೇಶದ ಅರಸರವರು ಜರ್ಮನೀ ದೇಶಕ್ಕೆ ಹೋಗಿರುವದಾಗಿ ಹಿಂದಿನವಾರದ ಪತ್ರಿಕೆಯ ಮೂಲಕ ತಿಳಿಸಿದ್ದೆವಷ್ಟೆ. ಸದರೀ ಅರಸರವರನ್ನು ಅಲ್ಲಿನ ಚಕ್ರವರ್ತಿಯವರಾದ ವಿಲ್ಲಿಯಂ ಯವರು ಉಚಿತ ಮರ್ಯಾದೆಗಳೊಡನೆ ಬರಮಾಡಿಕೊಂಡು ಕಳೆದ ತಿಂಗಳ ೨೪ನೇ ತಾರೀಖಿನಲ್ಲಿ ತಮ್ಮ ಅರಮನೆಯೊಳು ಔತನ ಮಾಡಿಸಿದರು. ಇಂತ ವಿಶೇಷ ಸಂದರ್ಭಗಳಲ್ಲಿ ನಡೆಸಲ್ಪಡಬೇಕಾದ ಮರ್ಯಾದೆಗಳಲ್ಲಿ ಲೋಪ ಲೇಶವೂ ಇಲ್ಲದೆ ನಡೆಯುತಲಿವೆ.

ತಿರುವಾಂಕೂರು ಸಂಸ್ಥಾನದ ಉತ್ತರಭಾಗದಲ್ಲಿ ಕ್ಷಾಮವು ಅತಿ ಪ್ರಬಲಗೊಂಡು ಅಲ್ಲಿನ ಜನರಂ ಪೀಡಿಸುತಲಿರುವಂತೆಯೂ, ಆ ಪ್ರಾಂತದ ಪ್ರಕೃತಸ್ಥಿತಿಯಂ ಖುದ್ದು ನೋಡಿ ತನ್ನಿವಾರಣೆಯಬಗ್ಗೆ ಆವಶ್ಯಕಗಳಾದ ಏರ್ಪಾಡುಗಳಂ ಮಾಡುವದಕ್ಕಾಗಿ ಅಲ್ಲಿನ ದಿವಾನರವರು ಹೊರಟಿರುವಂತೆಯೂ, ರಿಲೀಫ್‌ಕಾಮಗಾರಿಗಳಂ ಪ್ರಾರಂಭಿಸತಕ್ಕಬಗ್ಗೆ ಮಹಾರಾಜಾ ಸರ್ಕಾರದವರು ೩೫,೦೦೦ ರೂಪಾಯಿಗಳು ಮಂಜೂರ್ಮಾಡಿರುವಂತೆಯೂ ಕೇಳುತ್ತೇವೆ.

ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸಭೆಯವರ ಪ್ರೋಪಣೆಯಲ್ಲಿ ಲಂಡನ್ ಪಟ್ಟಣದೊಳು ಪ್ರಕಟಿಸಲ್ಪಡುತಲಿರುವ "ಇಂಡಿಯ" ಎಂಬ ಮಾಸಪತ್ರಿಕೆಯು ೧೮೯೮ನೇ ಇಸವಿ ಜನವರಿ ತಿಂಗಳ ಮೊದಲು ವಾರ ಪತ್ರಿಕೆಯಾಗಿ ಪ್ರಕಟಿಸಲ್ಪಡುವುದು ಮಾತ್ರವಲ್ಲದೆ ಇದುವರೆಗೆ ಇದ್ದಂತೆಯೇ ಮುಂದೆಯೂ ಇಂಡ್ಯಾ ದೇಶದ ಚಂದಾದಾರರಿಗೆ ಟಪಾಲ್ ಹಾಸಲ್ ಸೇರಿ ವರ್ಷ ಒಂದಕ್ಕೆ ಆರು ರೂಪಾಯಿಗಳಿಗೆ ಕೊಡಲ್ಪಡುವುದೆಂದು ಕಳೆದ ತಿಂಗಳ ಬಾಬತು ಸದರೀ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುತಿದೆ.

ಪುನೆಯ ಕೇಸರಿ ಎಂಬ ಮಹಾರಾಷ್ಟ್ರ ಭಾಷಾ ಪತ್ರಿಕೆಯ ಎಡಿಟರಾದ ಮಿ|| ತಿಲಕ್ ಯವರನ್ನು ದಸ್ತಗಿರಿಯಿಂದ ಸೆರ್ವ ಕಮಿಟಿ ಮಾಡಿದ್ದು ಮೊದಲು ಸದರೀ ಪತ್ರಿಕೆಯ ಚಂದಾದಾರರಸಂಖ್ಯೆಯು ಮತ್ತೂ ಮೂರು ಸಾವಿರಕ್ಕೆ ಹೆಚ್ಚಿತೆಂತಲೂ, ಇದರಿಂದ ಸದರೀ ಪತ್ರಿಕೆಯವಿಷಯದಲ್ಲೂ ಅದರ ಎಡಿಟರಾದ ಮೆ|| ತಿಲಕ್‌ಯವರ ವಿಷಯದಲ್ಲೂ ಅಲ್ಲಿನ ಪ್ರಜೆಗಳಿಗುಂಟಾಗಿರುವ ಪ್ರೀತಿ ಗೌರವಗಳು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೊರಗಾದುವೆಂತಲೂ ಪುನೇ ಇಂದುಪ್ರಕಾಶ ಪತ್ರಿಕೆ ತಿಳಿಸುತಿದೆ.

ದರ್ಭಂಗಾ ಸಂಸ್ಥಾನದ ಮಹಾರಾಜರವರು, ತಮ್ಮ ಸಂಸ್ಥಾನದ ಕಾರ್ಯ ನಿರ್ವಹಣೆಯಬಗ್ಗೆ ಇದುವರೆಗೆ ಯೂರೋಪಿಯನ್ ಮ್ಯಾನೇಜರೊಬ್ಬರನ್ನಿಟ್ಟುಕೊಂಡಿದ್ದರಷ್ಟೆ. ಈಚೆಗೆ ಸದರೀ ಅಧಿಕಾರಿಯನ್ನು ಕೆಲಸದಿಂದ ನಿವೃತ್ತಿ ಮಾಡಿಬಿಟ್ಟು, ಅಸಿಸ್ಟೆಂಟಿಮ್ಯಾನೇಜರಾಗಿದ್ದ ಬಾಬು ಚಂದ್ರಶೇಖರ ಘೋಸ್ ಎಂಬವರ ಸಹಾಯದೊಡನೆ ರಾಜ್ಯಕಾರ್ಯಗಳನ್ನೆಲ್ಲ ತಾವೇ ನಿರ್ವಹಿಸುತ ಬರುತಿರುವದಾಗಿಯೂ ಬಂಗಾಳೇ ದೇಶದ ದೇಶಭಾಷಾವೃತ್ತಾಂತ ಪತ್ರಿಕೆಯೊಂದು ತಿಳಿಸುತಿದೆ ಇದು ಪ್ರಾಸ್ತವ್ಯವಾಗಿರುವ ಪಕ್ಷದಲ್ಲಿ ಉಚಿತವಾದ ಏರ್ಪಾಡೆಂದು ಭಾವಿಸುವೆವು.

ಲಕ್ನೋ ಪಟ್ಟಣದಲ್ಲಿ ಪ್ರಕಟಿಸಲ್ಪಡುವ ಅಡ್ವೋಕೇಟ್ ಎಂಬ ಪತ್ರಿಕೆಯು ಅಲ್ಲಿನ ಬಜಾರಿನಲ್ಲಿ ಪ್ರಚಾರಗೊಂಡಿರುವ ಒಂದು ವಿಚಿತ್ರ ವರ್ತಮಾನವನ್ನು ಪ್ರಕಟಿಸಿರುತಿದೇನೆಂದರೆ :—ವಜೀರ್ ಜನರಿಗೂ ಇಂಗ್ಲಿಷ್ ಸೋಲ್ಜರ್‌ಗಳಿಗೂ ನಡೆದ ಪ್ರಬಲ ಯುದ್ಧದಲ್ಲಿ ಪಠಾಣರು ಇಂಗ್ಲಿಷ್ ಜನರನ್ನು ಸೋಲಿಸಿದರು, ಪರಂತು ಸಣ್ಣವಯಸ್ಸಿನವರಾದ ಸದರೀ ಸೋಲ್ಜರ್‌ಗಳಮೇಲೆ ಕನಿಕರದಿಂದ ಅವರನ್ನು ಕೊಂದುಹಾಕದೆ ಅವರ ಮೂಗುಗಳನ್ನೆಲ್ಲ ಕುಯಿದುಹಾಕಿಬಿಟ್ಟರು. ಮಿಲಿಟರಿ ಅಧಿಕಾರಿಗಳು ಅವರನ್ನೆಲ್ಲ ಇಂಗ್ಲಂಡಿಗೆ ಕಳುಹಿಸಿಬಿಟ್ಟರು, ಎಂದು ಅನೇಕಪಟ್ಟಣಗಳಲ್ಲಿ ಪ್ರಸ್ತಾಪಿಸಲ್ಪಡುತ ಅದನ್ನು ಪಾಮರಜನರು ನಂಬುತಾರೆ.

ಪಶ್ಚಿಮೋತ್ತರ ಉತ್ತರ ದೇಶದೊಳು ಈಚೆಗೆ ನೇಟಿವ್ ವೃತ್ತಾಂತ ಪತ್ರಿಕೆಗಳಿಗುಂಟುಮಾಡಲ್ಪಡುತಿರುವ ಸಂಕಟಗಳು ಕೇವಲ ಚಿಂತನೀಯವಾಗಿರುತಿವೆ. ಈಚೆಗೆ ಲಾಹೋರ್ ಪ್ರಾಂತದಲ್ಲಿ ಸುಧಾರ್ ಎಂಬ ಭಾಷಾಪತ್ರಿಕೆಯ ಪ್ರೊಪ್ರೈಟರು ಒಂದು ಪ್ರಕಟನೆಯನ್ನು ಬರೆದು ತಮ್ಮ ಪ್ರೆಸಿನಲ್ಲಿ ಛಾಪಿಸಿದ ಬಗ್ಗೆ ಲಾಹೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಅವರನ್ನು ಸಮ್ಮನ್ಸ್‌ಮೂಲಕ ಕರೆಯಿಸಿ ಅವರಿಂದ ಒಂದು ವರ್ಷ ಕಾಲಕ್ಕೆ ಮುಚ್ಚಳಿಕೆ ಬರೆಯಿಸಿಕೊಂಡರು. ಅದರಮೇಲೆ ಸದರೀ ಪ್ರೊಪ್ರೈಟರು ಪಂಜಾಬ ಚೀಫ್‌ಕೋರ್ಟಿನಲ್ಲಿ ಅಪೀಲ್ ಮಾಡಲು ಸದರೀ ಮುಚ್ಚಳಿಕೆಯನ್ನು ಏತಕ್ಕೆ ರದ್ದುಪಡಿಸತಕೂಡದೆಂಬ ವಿಷಯ ವ್ಯವಸ್ಥೆಯಬಗ್ಗೆ ಮುಂದಿನ ನವಂಬರ್ ತಿಂಗಳ ೯ನೇ ತಾರೀಖ್ ಗೊತ್ತುಮಾಡಲ್ಪಟ್ಟಿದೆ.

ಮುರದಾಬಾದಿನಲ್ಲಿ ಪ್ರಕಟಿಸಲ್ಪಡುತಿದ್ದ ಜಾಮ್‌ಉಲ್-ಉಲಂ ಎಂಬ ಪತ್ರಿಕೆಯಲ್ಲಿ ಕಲಹಪ್ರೇರಕಗಳಾದ ಮತ್ತು ಗವರ್ನಮೆಂಟಿನವರಲ್ಲಿ ಪ್ರಜೆಗಳಿಗೆ ಅಪ್ರೀತಿಯನ್ನುಂಟುಮಾಡುವಂತ ಲೇಖನಗಳು ಕೆಲವು ಪ್ರಕಟಿಸಲ್ಪಟ್ಟಿದ್ದುದು ಅಲ್ಲಿನ ಪೋಲೀಸ್ ಅಧಿಕಾರಿಗಳಿಗೆ ತಿಳಿಯಬಂದು ಕೂಡಲೆ ಅವರು ಸದರೀ ಪತ್ರಿಕೆಯ ಕಾರ್ಖಾನೆಯಲ್ಲಿ ಪ್ರವೇಶಿಸಿ ಅಲ್ಲಿ ಸಿಕ್ಕಿದ ಕಾಗದಗಳನ್ನೆಲ್ಲ ಜಪ್ತುಮಾಡಿಸಿ, ಅದರಮೇಲೆ ಪೋಲೀಸ್ ಪಹರೆ ಇಟ್ಟಿರುವಂತೆಯೂ, ಸದರೀ ಪತ್ರಿಕೆಯ ಎಡಿಟರ್ ವ ಪ್ರೊಪ್ರೈಟರಾದ ಅಂಬಾ ಪ್ರಸಾದ್ ಎಂಬವರು ಪರಾರೀಯಾಗಿರುತ್ತಾರೆಂತಲೂ, ಅವರನ್ನು ಪತ್ತೆ ಮಾಡಿಕೊಟ್ಟವರಿಗೆ ಐನೂರು ರೂಪಾಯಿಗಳು ಇನಾಂ ಕೊಡುವದಾಗಿ ಪೋಲೀಸ್ ಅಧಿಕಾರಿಗಳು ಪ್ರಕಟ ಪಡಿಸಿರುವಂತೆಯೂ ಕಳೆದ ಶನಿವಾರದದಿನ ಕಲ್ಕತ್ತೆಯಿಂದ ತಂತಿ ವರ್ತಮಾನ ಬಂತು. ಈಗಿನವಿದ್ಯಮಾನದಲ್ಲಿ ಮುಂಬೈ ಮೊದಲು ಕಲ್ಕತ್ತೆಯವರೆಗೆ ಅಲ್ಲಿಯಲ್ಲಿ ಪ್ರಕಟಿಸಲ್ಪಡುವ ದೇಶಭಾಷಾ ವೃತ್ತಾಂತ ಪತ್ರಿಕೆಗಳಲ್ಲಿ ಪ್ರಾಯಶಃ ಒಂದಾದರು ಉಜ್ಜೀವಿಸುವ ಸಂಭವವು ಕಂಡುಬರಲಿಲ್ಲವು.

ಉತ್ತರ ...ಬಾರ್ ಪ್ರಾಂತದಲ್ಲಿ ಸೈನ್ಯಗಳಂ ಬಲಪ್ಪಿಸಿ ...ರು ಕಾಡುಗಳಲ್ಲಿ ಸೇರಿಕೊಂಡು ಆಗಿಂದ ... ಗ್ರಾಮಗಳಮೇಲೆ ಬಂದು ಬಿದ್ದು ಲೂಟಿಗಳು ನಡಸುತಲೂ, ದಾರಿ ಕಟ್ಟಹೊಡೆಯುತಲೂ, ಖೂನಿಗಳು ಮಾಡುತಲೂ ಇರುವುದು ಪ್ರಸಿದ್ಧವಿಷಯವಾಗಿದೆಯಷ್ಟೆ. ಈ ಜನರ ಪುಂಡನ್ನಡಗಿಸುವ ವಿಷಯದಲ್ಲಿ ಬ್ರಿಟಿಷ್ ಸರ್ಕಾರದವರು ಬಹುವಿಧ ಪ್ರಯತ್ನಗಳಂ ಮಾಡಿಯೂ ಮಾಡುತಲೂ ಇರುತ್ತಾರೆ, ಆದಾಗ್ಯೂ ಸದರೀ ಜನರು ತಮ್ಮ ದುಷ್ಟ ವೃತ್ತಿಯಂ ಬಿಡಲಿಲ್ಲವು. ಈಚೆಗೆ ಮಂಜೇರಿ ಎಂಬ ಪ್ರದೇಶದಲ್ಲಿರುವ ಜೆಯಿಲಿನಲ್ಲಿಡಲ್ಪಟ್ಟಿದ್ದ ಸದರೀ ಜನರು ಕೆಲವರು ಬೇಡಿಗಳಂ ಕತ್ತರಿಸಿಬಿಟ್ಟು, ಅಲ್ಲಿನ ಪೋಲೀಸ್ ಪಹರೆಯವರನ್ನು ಹೆದರಿಸಿ ಅವರಲ್ಲಿದ್ದ ರೈಫಲ್ ಬಂದೂಖ್‌ಗಳನ್ನೂ ನೂರು ತೋಟಾಗಳನ್ನೂ ಕಿತ್ತುಕೊಂಡು ಮನಸ್ಸಿಗೆ ಗೋಲಿಗಳಂ ಹಾರಿಸುತ ಹೊರಟರು. ಈ ವರ್ತಮಾನವು ಅಲ್ಲಿನ ಅಧಿಕಾರಿಗಳಿಗೆ ತಿಳಿದು ಅವರ ಬಂದೋಬಸ್ತಿಯಬಗ್ಗೆ ಬ್ರಿಟಿಷ್ ಸೇನೆಗಳಿರುವ ಸ್ಥಳಗಳಿಗೆ ವರ್ತಮಾನ ಕೊಟ್ಟು ಸೈನ್ಯಗಳು ಅಲ್ಲಿಗೆ ಹೊರಟುಹೋಗುತಲಿವೆ. ಇದರ ಪರ್ಯವಸಾನವು ಮುಂದೆ ತಿಳಿಯಬರಬೇಕು.

LOCAL AND PROVINCIAL NEWS.
ಒಳದೇಶಮತ್ತುತಾಲ್ಲೂಕುಜಾತಿವೃತ್ತಾಂತಗಳು.

ಈ ಸಿಟಿ ಮ್ಯುನಿಸಿಪಾಲಿಟಿಯ ಪ್ರೆಸಿಡೆಂಟರಾದ ಮೆ|| ಟಿ. ಟಿ. ಜನಾರ್ದನಯವರು ಮೂರು ತಿಂಗಳ ಪ್ರಿವಿಲೀಜ್ ರಜಾ ಮೇಲೆ ಇಂಗ್ಲಂಡಿಗೆ ಹೋಗಿದ್ದರಷ್ಟೆ. ಸದರೀ ಯವರು ಕಳೆದ ತಿಂಗಳ ಆದಿಭಾಗದಲ್ಲಿ ಇಲ್ಲಿಗೆ ವಾಪಸು ಬಂದು ತಮ್ಮ ಅಧಿಕಾರವಂ ಮರಳಿ ವಹಿಸಿದರು.

ಈ ಪುರದ ರಾಣೀಸಿಂಗನ ಕೋಟೆಯಲ್ಲಿ ಪಾಂಟಿಭೇದಿ ರೋಗ ತಲೆ ಹಾಕಿರುವಂತೆ ಕೇಳುತ್ತೇವೆಯಾಗಿ ಮ್ಯುನಿಸಿಪಾಲಿಟಿಯವರು ಕೂಡಲೇ ತಕ್ಕ ಪ್ರಯತ್ನದ ಮೂಲಕ ಸದರೀ ರೋಗದ ವ್ಯಾಪಕತೆಗೆ ಅವಕಾಶವಿಲ್ಲದಂತೆ ಮಾಡುವರೆಂದು ನಂಬುತ್ತೇವೆ.

ಪುನೆ ಕೇಸರಿ ಪತ್ರಿಕೆಯ ಎಡಿಟರಾದ ಮೆ|| ತಿಲಕ್‌ಯವರ ಡಿಫೆನ್ಸಿಗೆ ಸಹಾಯಾರ್ಥವಾಗಿ ಮದರಾಸ್ ಮಹಾಜನರು ಚಂದಾಮೂಲಕ ೫೦೦ ರೂಪಾಯಿಗಳು ಜಮಾಯಿಸಿ ಕಳೆದ ಶನಿವಾರದ ದಿನ ಅಲ್ಲಿಗೆ ರವಾನಿಸಿದರೆಂದು ತಿಳಿಯಬರುತಿದೆ. ಇಲ್ಲಿನ ಕಂದಾಯದಾರರ ಸಮಾಜದವರು ಕೂಡಲೆ ಒಂದು ಮೀಟಿಂಗ ಸೇರಿ ಉಪನ್ಯಾಸವರಂ ಪ್ರೇರಿಸಿ, ಚಂದಾ ಮೂಲಕ ಸಾಧ್ಯವಾದಷ್ಟಿಗೆ ಜಮಾ ಮಾಡಿ ಕಳುಹಿಸುವುದು ಈ ದೇಶೀಯರಿಗೆಭೂಷಣವಾಗಿರುವದೆಂದುಸೂಚಿಸುವೆವು.

ಕಾಲಸ್ಥಿತಿ:—ಈಗ್ಗೆ ಒಂದು ವಾರಕ್ಕೆ ಮೇಲ್ಪಟ್ಟು ಪ್ರತಿದಿನದಲ್ಲೂ ಆಗಿಂದಾಗ್ಗೆ ವರ್ಷ ಬೀಳುತ ಹಳೇಮನೆಗಳು ಕುಸಿದುಹೋಗುತಲಿವೆ. ಕೆರೆಕುಂಟೆಗಳಿಗೆ ಒಂದೆರಡು ತಿಂಗಳ ನೀರು ಬಂದಿರುತಿದೆ. ಹೀಗೆಯೇ ದೈವಾನುಗ್ರಹದಿಂದ ಉಚಿತಕಾಲಗಳಲ್ಲಿ ತಕ್ಕಷ್ಟು ವರ್ಷಬೀಳುತಬಂದರೆ ಈಗ ಬೆಳೆಯಲ್ಲಿರುವ ಫಸಲ್ಗಳು ಪೂರಾ ಕೈಗೆ ಬರುವವು. ಪರಂತು ಪರಸ್ಥಳಗಳ ಗಿರಾಕಿಗಳು ತಪ್ಪುವತನಕ ಧಾರಣೆಗಳು ಇಳಿಯುವವೆಂದು ತೋರಲಿಲ್ಲವು. ರಾಗಿಯ ಧಾರಣೆಯಂ ಲ್ಲಿ ಈಗ್ಗೆ ಹದಿನೈದು ದಿನಗಳ ಹಿಂದೆ ಹೆಚ್ಚಿದ ಭಾಗ ಮಾತ್ರ ಮರಳಿ ಇಳಿದಿದೆ. ಮೆಣಸಿನಕಾಯಿಯ ಈಗಿನ ಧಾರಣೆಯನ್ನು ಹಿಂದೆ ನಾವು ಯಾವ ಕಾಲದಲ್ಲೂ ಕೇಳಿದ್ದಿಲ್ಲವು, ಪ್ರಾಯಶಃ ಮುಂದೆಯೂ ಕೇಳಲಾರೆವು. ಈಗ ಮಣ ೧ಕ್ಕೆ ಎಂಟು ರೂಪಾಯಿಗಳ ವರೆಗೆ ಮಾರುತಲಿರುವಂತೆ ಕೇಳುತ್ತೇವೆ. ಇತರ ವಿಷಯಗಳಲ್ಲಿ ಹಿಂದಿನವಾರದೊಳು ತಿಳಿಸಿರುವದಕ್ಕಿಂತಲು ಅಧಿಕಾಂಶ ಯಾವದೂ ಇಲ್ಲವು.

ಕಳೆದ ವಾರದ ಬಾಬತು ಸರ್ಕಾರೀ ಕಾಲಸ್ಥಿತಿ ರಿಪೋರ್ಟನ್ನು ನೋಡಲಾಗಿ, ಬೆಂಗಳೂರು, ಕೋಲಾರ, ತುಮಕೂರು, ಮೈಸೂರು, ಈ ನಾಲ್ಕು ಡಿಸ್ಟ್ರಿಕ್ಟುಗಳಲ್ಲಿ ಪ್ರಾಯಶಃ ಪ್ರತಿಒಂದು ತಾಲ್ಲೂಕಿನಲ್ಲೂ ಒಂದರಿಂದ ಆರು ಇಂಚುಗಳ ವರೆಗೆ ವರ್ಷ ಬಿದ್ದಂತೆಯೂ, ಹಾಸನಡಿಸ್ಟ್ರಿಕ್ಟಿನಲ್ಲಿ ಐದು ತಾಲ್ಲೂಕುಗಳಲ್ಲೂ, ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಎರಡು ತಾಲ್ಲೂಕುಗಳಲ್ಲೂ, ಕಡೂರು ಡಿಸ್ಟ್ರಿಕ್ಟಿನಲ್ಲಿ ಎರಡು ತಾಲ್ಲೂಕುಗಳಲ್ಲೂ, ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ನಾಲ್ಕು ತಾಲ್ಲೂಕುಗಳಲ್ಲೂ ಒಂದರಿಂದ ಮೂರು ಇಂಚುಗಳ ವರೆಗೆ ವರ್ಷ ಬಿದ್ದಿರುವಂತೆಯೂ ಕಾಣುತಿದೆ, ಪರಂತು ಎಲ್ಲಿಯೂ ಕೆರೆಗಳು ತುಂಬಿದಂತೆ ತಿಳಿಯಬರಲಿಲ್ಲವು. ಸರ್ವತ್ರ ಬೆಳೆಗಳು ಚೆನ್ನಾಗಿರುವಂತೆಯೂ ಕೂಡಿದ ಮಟ್ಟಿಗೆ ಜಲಸಮೃದ್ಧಿ ಯುಂಟಾಗಿರುವಂತೆಯೂ ತಿಳಿದು ಸಂತೋಷಿಸುತ್ತೇವೆ.

THE MYSORE GAZETTE.
ಮೈಸೂರು ಗೆಜೆಟ್.

ಗುರುವಾರ, ತಾ|| ೨ನೇ ಸೆಪ್ಟಂಬರ್ ೧೮೯೭.
ಮೈಸೂರ್ ಗವರ್ನಮೆಂಟಿನವರಿಂದ ಕೊಡೋಣಾದ
ಅಪ್ಪಣೆಪತ್ರಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖ್ ೨೫ನೇ ಆಗಸ್ಟು ೧೮೯೭

ನಂ||೧೮೬೮-ಡಾ ೩೦೫—ಶ್ರಿಮಿನಲ್ ಪ್ರೊಸಿಜರ್ ಕೋಡಿನ ೧೨ನೇ ಸೆಕ್ಷನ್ ಅನುಸರಿಸಿ ತುಮಕೂರಿನ ಸಬ್ ತಾಲ್ಲೂಕಿನ ಆಕ್ಟಿಂಗ್ ಡೆಪ್ಯುಟಿ ಅಮಲ್‌ದಾರ್ ಆರ್ ಶಾಮರಾಯರು ಅವರು ಡೆಪ್ಯುಟಿ ಅಮಲ್‌ದಾರಿ ಕೆಲಸವನ್ನು ಆಕ್ಟಿಂಗ್‌ತಲ್ಲಿ ನೋಡುತಲಿರುವ ಕಾಲದಲ್ಲಿ ೩ನೇ ಕ್ಲಾಸ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುತ್ತಾರೆ

ತಾ|| ೨೫ನೇ ಆಗಸ್ಟು ೧೮೯೭.

ನಂ||೨೧೩೪-ರೆ ಕೈ ೫೭—೯೭—ಮೈಸೂರು ಸರ್ವಿಸ ರೆಗ್ಯುಲೇಷನ್ನುಗಳ ೧೮೮ನೇ ಆರ್ಟಿಕಲ್ ಅನುಸರಿಸಿ ಅಬೂರು ಸಬ್‌ತಾಲ್ಲೂಕು ಡೆಪ್ಯುಟ ಅಮಲ್‌ದಾರ್ ಎಸ್ ವೆಂಕಟರಮಣಯ್ಯನವರಿಗೆ ೧೮೯೭ನೇ ಜುಲೈ ೧೬ನೇ ತಾರೀಖ್ ಲಾಗಾಯಿತು, ಅವರು ಸರ್ಕಾರ ನೌಕರಿಯಿಂದ ಪೆನ್ಷನ್‌ಮೇಲೆ ನಿವೃತ್ತರಾಗುವದಕ್ಕೆ ಪೂರ್ವ ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ

ನಂ||೨೧೩೬-ರೆ ೬೦೫—ಮೈಸೂರು ಸರ್ವಿಸ ರೆಗ್ಯುಲೇಷನ್ನುಗಳ ೧೮೮ನೇ ಆರ್ಟಿಕಲ್ ಅನುಸರಿಸಿ ತುಮಕೂರಿನ ಸಬ್ ತಾಲ್ಲೂಕಿನ ಡೆಪ್ಯುಟ ಅಮಲ್‌ದಾರ್ ಮಹಮ್ಮದಲ್ಲಿಖಾನರಿಗೆ ೧೮೯೭ನೇ ಆಗಸ್ಟು ಗುರ್ರೇ ಲಾಗಾಯಿತು, ೧೮೯೭ನೇ ಜುಲೈ ೧ನೇ ಮಾರ್ಚ್ ೩೩೫-ರೆ, ೧೩೪ನೇ ನಂಬರ ಗವರ್ನಮೆಂಟ್ ಪ್ರೊಸೀಡಿಂಗ್ಸ್‌ನಲ್ಲಿ ಮೊದಲೇ ಹುಕುಂ ಆಗಿರುವ ಪ್ರಕಾರ ಅವರು ಸರ್ಕಾರ ನೌಕರಿಯಿಂದ ಪೆನ್ಷನ್‌ಮೇಲೆ ನಿವೃತ್ತರಾಗುವದಕ್ಕೆ ಪೂರ್ವ, ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ ಹಾಲಿ ಮಂಜೂರಾಗಿರುವ ರಜಾ ಪೂರೈಸಿದ ತಾರೀಖು ಲಾಗಾಯಿತು ಸದರೀ ಹುಕುಂ ಅಮಲಿಗೆ ಬರತಕ್ಕದ್ದು

ತಾ||೨೬ನೇ ಆಗಸ್ಟು ೧೮೯೭

ನಂ|| ೨೧೪೬-೩೪೧—ಮೈಸೂರು ಸರ್ವಿಸ್ ರೆಗ್ಯುಲೇಷನ್ನುಗಳ ೧೮೮ನೇ ಆರ್ಟಿಕಲ್ ಅನುಸರಿಸಿ ಬೆಂಗಳೂರು ಡಿಸ್ಟ್ರಿಕ್ಟಿನ ಎಕಸ್ಟ್ರಾ ಅಸಿಸ್ಟೆಂಟ್ ಕಮಿಷನರ ಮೆ||ಬಿ. ಕುಪ್ಪಸ್ವಾಮಿ ನಾಯುಡು ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯಿತು ಇಪ್ಪತ್ತು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ

SUMMARY OF NEWS.
ವೃತ್ತಾಂತ ಸಂಗ್ರಹವು.

ದುಷ್ಕಾಲ ಪೀಡಿತರಾದ ಹತ್ತುಸಾವಿರ ಜನರು ಕೂಡಿ ಇಂದೂರು ಪೇಟೆಯನ್ನು ಲೂಟಿ ಮಾಡಿದರು ಈ ಲೂಟಿಯ ಕೆಲಸವು ಮೂರು ತಾಸಿನ ವರೆಗೆ ಒಳ್ಳೆ ಧಿಮಾಕಿಯಿಂದ ನಡೆಯಿತಂತೆ.

ಡೆನ್ಮಾರ್ಕ ದೇಶದಲ್ಲಿ ನಿಷಾಮಾಡಿ ಬೀದಿಯಲ್ಲಿ ಮತ್ತರಾಗಿ ತಿರುಗಾಡುವವರನ್ನು ಬಾಡಿಗೆ ಗಾಡಿಯಲ್ಲಿ ಕೂಡಿಸಿ ಅವರ ಮನೆಗೆ ಕರೆದುಕೊಂಡು ಹೋಗಬೇಕು ಆ ಬಾಡಿಗೆ ಖರ್ಚನ್ನು ಅವರಿಗೆ ನಿಷಾ ಪದಾರ್ಥವನ್ನು ಮಾರಿದವರು ಕೊಡಬೇಕಂತೆ

ವಿಲಾಯಿತಿಯಲ್ಲಿ ಬೈಸಿಕಲ್ ಎಂಬ ಎರಡುಚಕ್ರದ ಗಾಡಿಯಮೇಲೆ ಮೆ||ಪೆಪ್ಸ್ ಎಂಬಾತನು ಸವಾರಿ ಮಾಡುತ ೬೦ ನಿಮಿಷಗಳಲ್ಲಿ ೩೩ ಮೈಲಿ ದೂರ ಹೋಗಿರುತ್ತಾನೆಂದು ವರ್ತಮಾನ ಬಂದಿರುತಿದೆ.

ಅಮೇರಿಕಾ ಖಂಡದ ಉತ್ತರ ಭಾಗದಲ್ಲಿ ೩ ಲಕ್ಷವೂ ೫೦ ಸಾವಿರ ಚದರಮೈಲಿ ಹೊಸಭೂಮಿಯಲ್ಲಿ ಬಂಗಾರ ದೊರೆಯುವ ಪೈರ್ಧಿ ದೊರತಿದೆ ಹೀಗೆ ಒಂದೇ ಸ್ಥಳದಲ್ಲಿ ಚಿನ್ನ ದೊರೆಯುವ ಜಾಗ ಯಾವಾಗಲೂ ದೊರೆತಿರಲಿಲ್ಲವು

ಯೂರೋಪ್ ಖಂಡದಲ್ಲಿ ಒಬ್ಬನು ಒಂದು ತರಹ ಮಣ್ಣಿನಿಂದ ಬತ್ತಿಯನ್ನು ಮಾಡಿರುತ್ತಾರೆ ಇದನ್ನು ಲಾಂದ್ರಗಳಿಗೆ ಹಾಕಿ ಹಚ್ಚಿದರೆ ಎಣ್ಣೆ ಖರ್ಚು ಹೆಚ್ಚಾಗುವದಿಲ್ಲವು ಅದನ್ನು ಕತ್ತರಿಸಬೇಕಾದ್ದಿಲ್ಲ, ಪ್ರಕಾಶವು ಹೆಚ್ಚಾಗುತಿದೆ, ಧೂಮ್ರಪಾನ ಬಿಡಿಯುವದಿಲ್ಲವು

ಕೊಚ್ಚಿ ಸಂಸ್ಥಾನಕ್ಕೆ ಸೇರಿದ ಪರಪ್ಪೂರು ಇರಿಂಗಲಕೊಂಡೆ ಎಂಬ ಊರುಗಳ ನಡುವೆ ಹರಿಯುವ ನದಿಯಲ್ಲಿ ವಿಪರೀತದ ಪ್ರವಾಹ ಬಂದು ನೂರಾರು ಮನೆಗಳು ಕೊಚ್ಚಿಹೋದವು ಅನೇಕಜನರು ತಮ್ಮ ಪ್ರಾಣಗಳನ್ನು ಉಳಿಸಿಕೊಳ್ಳುವದೇ ಕಷ್ಟವಾಯಿತು.

ಚಿಕಾಗೊ ಪಟ್ಟಣದ ಮೆ|| ಲೂಯಿ ಗಾರ್ಥಮನ್ ಎಂಬಾತನು ಒಂದು ಹೊಸ ತರಹ ಟೆಲಿಸ್ಕೋಪ್ (ದೂರದಲ್ಲಿರುವ ವಸ್ತುಗಳನ್ನು ನೋಡತಕ್ಕ ಯಂತ್ರ) ತಯಾರ್ಮಾಡುತಿರುವನು. ಇದರಿಂದ ಚಂದ್ರನ ಅಥವಾ ಶುಕ್ರನ ವಾಸಮಾಡಿಕೊಂಡಿರುವ ಸ್ತ್ರೀ ಪುರುಷರನ್ನು ಧಾರಾಳವಾಗಿ ನೋಡಬಹುದಂತೆ

ರಷ್ಯಾದೇಶಕ್ಕೆ ಸೇರಿದ ಪಟ್ಟಣದಲ್ಲಿ ಸ್ತ್ರೀಯರು ಸ್ನಾನ ಮಾಡುವದಕ್ಕಾಗಿ ಒಂದು ದೊಡ್ಡ ಕೊಳವೂ ಅದರ ಬಳಿಯಲ್ಲಿ ಬಂದು ಮಂದಿ ಹೆಂಗಸರೂ ಇದ್ದರು ಆ ಕೊಳಕ್ಕೆ ಹೊಳೆಯಿಂದ ಕಾಲುವೆಯನ್ನು ತಂದುಬಿಟ್ಟಿದ್ದರು ಆ ನದಿಯಲ್ಲಿ ವಿಪರೀತ ಪ್ರವಾಹ ಬಂದು ಕೊಳವೆಲ್ಲ ಮುಚ್ಚಿಹೋಯಿತು, ಆಗ ಅಲ್ಲಿದ್ದ ೨೦೦ ಮಂದಿ ಹೆಂಗಸರು ನೀರಿನಲ್ಲಿ ಕೊಚ್ಚಿಹೋದರು ಒಬ್ಬರೂ ಸಿಕ್ಕಲಿಲ್ಲವು.

ವಿಲಾಯಿತಿಯ ಒಬ್ಬ ಶ್ರೀಮಂತ ಸ್ತ್ರೀಯು ಬಾಲ್ ಎಂಬ ಒಂದು ವಿನೋದವಾದ ಕುಣಿತವನ್ನು ಏರ್ಪಡಿಸಿದ್ದಾಗ ಅಲ್ಲಿಗೆ ಹೋಗತಕ್ಕ ಸ್ತ್ರೀಯರೆಲ್ಲರು ವಿಚಿತ್ರವಾಗಿ ಅಲಂಕಾರಗಳನ್ನು ಮಾಡಿಕೊಂಡು ಬಂದಿದ್ದರು ಅದೈಕಿ ಹೌಸ್ ಆಫ್ ಕಾಮನ್ಸ ಎಂಬ ಪಾರ್ಲಿಮೆಂಟ್ ಸಭೆಯ ಒಬ್ಬ ಮೆಂಬರರ ಪುತ್ರಿಯು ಹಿಂದು ಸ್ತ್ರೀಯರಂತೆ ಸೀರೆಯನ್ನುಟ್ಟು ಅಲಂಕೃತಳಾಗಿ ಬಂದಿದ್ದಳು ಇದು ಅಲ್ಲಿನವರಿಗೆಲ್ಲ ಬಹು ವಿನೋದವಾಗಿತ್ತು

ಕೊಚ್ಚಿ ಸಂಸ್ಥಾನದಲ್ಲಿ ಕಳೆದ ವರುಷದ ಜಮಾಖರ್ಚಿನ ಲೆಕ್ಕಪತ್ರಗಳನ್ನು ಅಲ್ಲಿನ ದಿವಾನ್ ಮೆ|| ಬಿ.ಎಸ್. ಗೋಪಾಲಾಚಾರ್ಯರು ಪ್ರಕಟಿಸಿರುತ್ತಾರೆ ಅದನ್ನು ನೋಡಲಾಗಿ ಆಟ ದಾಳಿ ವಗೈರೆ ತೀರಿಹೋದಾಗ ಬುತ್ತರಸ್ತೆಯಾದಿಗಳನ್ನು ಮಾಡುವದಕ್ಕೆ ೬೧,೯೮೦ ರೂಪಾಯಿಗಳೂ, ಇವಲ್ಲದೆ ಇತರ ಧರ್ಮಕಾರ್ಯಗಳಿಗಾಗಿ ೫೭,೭೨೪ ರೂಪಾಯಿಗಳೂ ಖರ್ಚಾದುವೆಂದು ತಿಳಿಯಬರುವದು ಆ ಸಂಸ್ಥಾನದ ಒಟ್ಟು ಆದಾಯವು ಸ್ವಲ್ಪವಾಗಿದ್ದಾಗ್ಯೂ ಅದರಲ್ಲಿ ೧| ಲಕ್ಷ ರೂಪಾಯಿಗಳನ್ನು ಧರ್ಮಕ್ಕೆ ಮಾಡಿರುತ್ತಾರೆಂದು ತಿಳಿಯಬರುತಿದೆ

ಸ್ಪೇನ್ ರಾಜ್ಯದಲ್ಲಿ ಪೋಲೀಸಿನವರು ಅಪರಾಧಿಗಳಿಗೆ ಕೊಡುವ ಹಿಂಸೆಯನ್ನು ಒಬ್ಬನು ವಿವರಿಸುತ್ತಾನೆ ಮೊದಲು ಕಂಭಕ್ಕೆ ಕಟ್ಟಿ ಹೊಡೆಯುವದು, ಕೈಗಳನ್ನು ಎತ್ತಿ ಮೇಲಕ್ಕೆ ಕಟ್ಟಿ ಕಾಲು ಬೆರಳು ನೆಲಕ್ಕೆ ಸೋಕದಂತೆ ಮಾಡುವದು, ಉಗುರುಗಳನ್ನು ಚಿಮಟಿಗೆಯಿಂದ ಹಿಡಿದು ಪರಪರನೆ ಎಳೆಯುವದು, ಆಹಾರ ಕೊಡದೆ ಸುಮ್ಮನೆ ಇರಿಸಿ ಇಡುವದು, ನಿಂತರೆ ಬಡಿಗೆಯಿಂದ ಹೊಡೆಯುವದು, ಇಂಥ ಹಿಂಸೆಗಳನ್ನು ಮಾಡಿದರೆ ಇಲ್ಲದದ್ದು ಉ ಟೆಂದು ಒಪ್ಪಿಕೊಳ್ಳಬೇಕಾಗುತದೆ

ಮಧ್ಯಪ್ರಾಂತಗಳಲ್ಲಿ ಒಂದು ತಾಲ್ಲೂಕಿನ ಅಧಿಕಾರಿಯು ಅಲ್ಲಿನ ಕ್ಷಾಮ ನಿವಾರಣೆಗಾಗಿ ಒಂದು ಉಪಾಯವನ್ನು ಮಾಡಿರುತ್ತಾನೆ ತನ್ನ ತಾಲ್ಲೂಕಿನಲ್ಲಿರುವ ಪುಷ್ಟರಾದ ರೈತರ ಹೆಸರುಗಳನ್ನೆಲ್ಲ ಗುರುತು ಮಾಡಿಕೊಂಡು ಅವರ ಹತ್ತಿರ ಗುಣಿಗಳಲ್ಲಿ ತುಂಬಿಟ್ಟುಕೊಂಡಿರುವ ದವಸ ಧಾನ್ಯಗಳು ಇಷ್ಟಿರಬಹುದೆಂದು ವರ್ತಮಾನ ತರಿಸಿಕೊಂಡು ಇಂತವರನ್ನೆಲ್ಲ ಒಂದು ಕಡೆಗೆ ಸೇರಿಸಿ ನಿಮ್ಮ ಸೀಮೆಯಲ್ಲಿರುವ ಬಡಜನರಿಗೆಲ್ಲ ರೂಪಾಯಿಗೆ ೧೦ ಸೇರಿನಂತೆ ದವಸವನ್ನು ಮಾರಿ ಧರ್ಮ ಕಟ್ಟಿಕೊಳ್ಳಿ ಎಂದು ಅವರಿಗೆ ಬುದ್ಧಿ ಹೇಳಿದನು ಅವರು ಹಾಗೆ ಮಾಡಿದರು, ತರುವಾಯ ಒಬ್ಬ ಒಡೆಯನ ಉಳುವ ಎತ್ತುಗಳು ಸತ್ತುಹೋದವೆಂದು ಕೇಳಿದ ಕೂಡಲೆ ತಪ್ಪಾಗಿ ಎತ್ತುಗಳನ್ನು ಕಟ್ಟಿಕೊಂಡಿರುವ ರೈತನನ್ನು ಕರಿಯಿಸಿ ಅವನಿಗೆ ಬೋಧನೆಮಾಡಿ ಅವನಿಂದ ಬೇರೆ ಎತ್ತುಗಳನ್ನು ಸಾಲವಾಗಿ ಆ ಬಡರೈತನಿಗೆ ಕೊಡಿಸುತ ಬಂದನು, ಕ್ಷಾಮಕ್ಕಾಗಿ ಕಳವು ಲೂಟಿ ಮಾಡುವಂತ ಅಪರಾಧಿಗಳನ್ನು ಬಹಳ ಹಿಂಸೆ ಪಡಿಸಬೇಡಿರೆಂದು ಪೋಲಿಸಿನವರಿಗೆ ಬುದ್ಧಿ ಹೇಳಿದನು ಈ ವರ್ತಮಾನಗಳೆಲ್ಲ ಸರ್ಕಾರದವರಿಗೆ ತಿಳಿದವು, ಅವರು ಬಹಳ ಸಂತೋಷಪಟ್ಟು ಆ ಅಧಿಕಾರಿಯನ್ನು ಹೊಗಳುತ್ತಾರೆ ಈ ಏರ್ಪಾಡಿನಿಂದ ಆ ತಾಲ್ಲೂಕಿನಲ್ಲಿ ಕ್ಷಾಮದ ಹಿಂಸೆಯು ಕಡಮೆಯಾಯಿತು ಮತ್ತು ಜಮೀನುಗಳಲ್ಲಿ ತಕ್ಕಷ್ಟುಗೆ ರೈತರು ಬೆಳೆ ಮಾಡಿಕೊಂಡಿದಾರೆ.

ಅಮೆರಿಕಾ ಖಂಡವು ಯೂರೋಪಿನವರ ಪ್ರ ... ಗೋಚರವಾದದ್ದು ಸುಮಾರು ೫ ಶತಮಾನಗಳ ಕೆ ... ಅದರಿಂದಲೆ ಅನೇಕರಿಗೆ ಹೊಸ ಪ್ರಪಂಚವೆಂದೂ ... ದುವದಾಡಿಕೆಯುಂಟು ಅದರೆ ಚೀನಾ ಭಾಷೆಯಲ್ಲಿ ಬರೆದ ಶಾಸನಗಳು ಮೆಕ್ಸಿಕೋಗೆ ಸೇರಿದ ಸೋನೆರಾ ಪ್ರಾಂತ ಮ್ಯಾಗಡಲೀನಾ ಡಿಸ್ಟ್ರಿಕ್ಟಿನಲ್ಲಿ ಕೆಲವುಕಡೆ ದೊರತಿವೆ ಈ ಶಾಸನಗಳು ಮೂರು ೦ ಸಾವಿರ ವರ್ಷಗಳ ಹಿಂದಿನವಾಗಿ ಗೊತ್ತಾಗುವದು ಇದನ್ನು ಸ್ಥಿರಪಡಿಸತಕ್ಕ ಒಂದು ಕಥೆಯು ಚೀನಾ ರಾಜ್ಯದಲ್ಲಿ ಈಗ ಕೇಳಿಕೆಯಲ್ಲಿ ಇರುವುದು ಅದೇನೆಂದರೆ — ಪೂರ್ವದಲ್ಲಿ ಮೆಕ್ಸಿಕೊ ಎಂಬ ದೇಶಕ್ಕೆ ತಮ್ಮ ಜನರು ಹೋಗಿ ಆ ರಾಜ್ಯವನ್ನು ಜಯಿಸಿ ತಮ್ಮಲ್ಲಿಯೇ ೧೮ ಭಾಗಗಳಾಗಿ ಮಾಡಿಕೊಂಡು ಆಳುತಿದ್ದರೆಂದು ಹೇಳಿಕೊಳ್ಳುತಲಿರುವರು ಮೇಲ್ಕಂಡ ಶಾಸನಗಳನ್ನೆಲ್ಲ ಚೆನ್ನಾಗಿ ಶೋಧಿಸಿ ಭಾಷಾಂತರವನ್ನು ಮಾಡಿದನಂತರ ಅವುಗಳಿಂದ ಅನೇಕ ವಿಷಯಗಳು ಚರಿತ್ರಕರ್ತರಿಗೆ ದೊರೆಯಬಹುದು ಇಷ್ಟೇ ಅಲ್ಲದೆ ಪ್ರುನ್ನಸಾಗರ ಅಂದರೆ ಪೆಸಿಫಿಕ ಸಾಗರದಲ್ಲಿರುವ ಆಸ್ಟ್ರೇಲಿಯದಲ್ಲಿ ಅನೇಕ ಶತಮಾನಗಳ ಹಿಂದೆ ಚೀನಾ ಜನರು ಇದ್ದರೆಂಬುವದಕ್ಕೆ ರುಜುವಾತುಗಳು ದೊರೆತಿವೆ ಹೀಗೆಯೇ ಕೆಲವುಕಾಲದ ಹಿಂದೆ ಭೂಮಿಯಲ್ಲಿ ಹೂತುಹೋಗಿದ್ದ ಹಿಂದೂಜನರ ದೇವಾಲಯಗಳು ಮತ್ತು ಇವರು ಆರಾಧಿಸುವ ಮೂರ್ತಿಗಳೂ ಯೂರೋಪ್, ಆಫ್ರಿಕಾ, ಅಮೆರಿಕಾ, ಆಸ್ಟ್ರೇಲಿಯಾ ಮತ್ತು ಚತುಸ್ಸಮುದ್ರ ಮಧ್ಯೆ ಇರುವ ದ್ವೀಪಗಳಲ್ಲಿಯೂ ಸಿಕ್ಕಿವೆ ಭೂಗರ್ಭ ಶೋಧಕರ ಸಾಹಸದಿಂದ ಹಿಂದೂಗಳು ಅನಾದಿಯಾಗಿ ಭೂಲೋಕದಲ್ಲೆಲ್ಲ ವ್ಯಾಪಿಸಿಕೊಂಡಿದ್ದರೆಂಬ ಅಂಶವು ಸ್ಥಿರೀಕರಣವಾಗುತಿದೆ

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price, including Postage Rs 5—0—0.

ವೈದ್ಯಸಾರಸಂಗ್ರಹ.

ಇದು ಚರಕ, ಬುಹಟ, ಸುಶ್ರುತ, ವಾಗ್ಭಟ ಥರಾದ್ಯನೇಕ ಪೂರ್ವಗ್ರಂಥಗಳ ಸಂಗ್ರಹ ರೂಪವಾಗಿರುತಿದೆ

ಇದರ ಕ್ರಯ—ಪೈಕಿಂಗ ಮತ್ತು ಅಂಚೆ ಹಾಸಲ್ ದೇಖೀಲ್ ಪ್ರತಿ ೧ಕ್ಕೆ ೫—೦—೦

ಬೇಕಾದವರು ಬೆಂಗಳೂರು ಕರ್ನಾಟಕ ಪ್ರೆಸ ಪ್ರೊಪ್ರೈಟರವರಿಗೆ ಬರೆದು ತರಿಸಿಕೊಳ್ಳಬಹುದು

V. IYANOR'S
PREPARATIONS
ವಿ. ಅಯನೂರ್ ಎಂಬವರಿಂದ ತಯಾರ್ಮಾಡಲ್ಪಟ್ಟ
ಪ್ರಸಿದ್ಧ ಔಷಧಗಳು.

ಕೆಯೀನ್ ಡಿಸ್ಪೆಪ್ಸಿಯಾ ಕ್ಯುರ್ —ಇದು ಹೊಟ್ಟೆಶೂಲೆ, ಅಜೀರ್ಣ, ಕರುಳು ನೋವು, ವಾಂತಿಭೇದಿ, ಅಜೀರ್ಣಭೇದಿ, ಜೀರ್ಣಕಾರದ, ಕೆಮ್ಮು, ಮೂತ್ರಪಡೆ, ವಾಯುಕುಣ್ಣ, ರಕ್ತಸ್ರಾವ, ಆರ್ತವ ದೋಷಜನ್ಯಗಳಿಂದ ಸ್ತ್ರೀಯರ ಉದರಬೇನೆ, ತಲೆನೋವು, ದಂತಶೂಲೆ, ಧಾತು ಮೊದಲಾದವುಗಳಿಗೆ ಬಹಳ ಉಪಯುಕ್ತವಾದದ್ದು. ಇದರ ಕ್ರಯ ದೊಡ್ಡ ಶೀಸೆ ೧ಕ್ಕೆ ೧ ರೂ ಸಣ್ಣಶೀಸೆ ೧ಕ್ಕೆ ೮ ಆಣೆ

ಔಷಧಿ ವಾಯು ತೈಲ—ವಿಕೃತವಾದ ನೋವು, ಪಕ್ಕಶೂಲೆ, ಸೊಂಟನೋವು, ತಲೆಶೂಲೆ ಇವು ಪರಿಹಾರವಾಗುವದು, ಇದರ ಕ್ರಯ ದೊಡ್ಡಶೀಸೆ ೧ಕ್ಕೆ ೧ ರೂ ಸಣ್ಣ ಶೀಸೆ ೧ಕ್ಕೆ ೮ ಆಣೆ

ಜ್ವರದ ಧೃತಿ —ಇದು ಎಂತಾ ಜ್ವರವನ್ನಾದರು ಎರಡು ದಿನಗಳೊಳಗಾಗಿ ನಿವೃತ್ತಿ ಮಾಡತಕ್ಕದ್ದು ದೊಡ್ಡ ಶೀಸೆ ೧ಕ್ಕೆ ೧ ರೂ ಸಣ್ಣಶೀಸೆ ೧ಕ್ಕೆ ೮ ಆಣೆ

ವಿ ಮಕರಪೂರ್ಣರ ಕ್ರೀಂ —ಇದು ಶೀತಭೇದಿ, ರಕ್ತಾತಿಸಾರ ರಕ್ತಸ್ರಾವದಿಂದುಂಟಾಗುವ ಉಪಾಧಿ, ಎದೆನೋವು, ಬೂಕನೋವು ಇವುಗಳಿಗೆ ಬಹು ಪ್ರಯೋಜನಕರವಾದದ್ದು ಇದರ ಕ್ರಯ ದೊಡ್ಡಶೀಸೆ ೧ಕ್ಕೆ ೧ರೂ ಸಣ್ಣಶೀಸೆ ೧ಕ್ಕೆ ೮ಆಣೆ

ಮೇಹವಾಯು ಎಣ್ಣೆ —ಇದು ಮೇಹವಾಯುವಿನಿಂದ ಶರೀರವು ಉಬ್ಬುವದು, ಚರ್ಮವು ಒಡೆಯುವದು, ಬೆನ್ನು ನೋವು, ಗ್ರಂಥಿಗಳ ಇವುಗಳಿಗೆಲ್ಲ ಬಹು ಉಪಯುಕ್ತವಾದದ್ದು ಇದರ ಕ್ರಯ ದೊಡ್ಡಶೀಸೆ ೧ಕ್ಕೆ ೧ರೂ ಸಣ್ಣಶೀಸೆ ೧ಕ್ಕೆ ೮ ಆಣೆ

ವ್ಯಾಕ್ಸುಲೈನ್ —ಇದು ನರದ ನೋವು, ಕೀಲುನೋವು, ಬೆನ್ನುನೋವು, ಅರೆತಲೆನೋವು, ಎದೆ ಇವುಗಳಿಗೆ ಪ್ರಸಿದ್ಧವಾದ ತೈಲವು ದೊಡ್ಡ ಡಬ್ಬಿ ೧ಕ್ಕೆ ೧ ರೂ, ಸಣ್ಣ ಡಬ್ಬಿ ೧ಕ್ಕೆ ೮ ಆಣೆ

ಶ್ವೇತಕುಷ್ಟ ಔಷಧ —ಇದು ಸಕಲವಿಧ ಚರ್ಮರೋಗಗಳಿಂದ ಬರುವ ಬಿಳುಪು, ಹುರು ಮೊದಲಾದ ಸಿಂಧೂರ ಇವುಗಳೆಲ್ಲಕ್ಕೂ ಶೀಘ್ರವಾಗಿಯೂ ಮರಳಿ ಎಂದಿಗೂ ಬಾರದಂತೆ ನಿಶ್ಶೇಷವಾಗಿಯೂ ಗುಣಪಡಿಸತಕ್ಕಂಥ ಔಷಧ ಇದರ ಕ್ರಯ ಶೀಸೆ ೧ಕ್ಕೆ ೧ ರೂ ೮ ಆಣೆ

ಕೂದಲು ಸರಿಯದೆ ಕಪ್ಪಾಗಿ ಬೆಳೆಯುವಿಕೆ ಔಷಧ —ಈ ತೈಲವು ಸರತ ಕೂದಲುಗಳನ್ನು ಕಪ್ಪಾಗಿಸಿ ಬೆಳೆಯುವದು ಕೂದಲು ಬೆಳೆಯದಿರುವ ಸ್ಥಳಗಳಲ್ಲಿ ಹುಟ್ಟಿ ಬೆಳೆಯುವದು ಇದನ್ನು ತಲೆಗೆ ಹಚ್ಚಿಕೊಂಡು ಸ್ನಾನಮಾಡಬಹುದು ಮತ್ತು ಸುವಾಸನೆಯುಳ್ಳದ್ದಾಗಿರುವದು ಇದರ ಕ್ರಯ ಶೀಸೆ ೧ಕ್ಕೆ ೧ ರೂ

ಕರ್ಣರೋಗಕ್ಕೆ ತೈಲ—ಈ ತೈಲವನ್ನು ೮ ದಿನಗಳ ಕಾಲ ಕಿವಿಯಲ್ಲಿ ಕೆಲವು ತೊಟ್ಟುಗಳು ಬಿಡುತಬಂದರೆ, ಕಿವಿಯಲ್ಲಿನ ಸೋರಿಕೆ ಮೊದಲಾದ ವ್ಯಾಧಿಗಳನ್ನು ಪರಿಹರಿಸುವುದು ಇದರ ಕ್ರಯ ೧ ರೂಪಾಯಿ

ವೀರ್ಯವೃದ್ಧಿಗೆ ಔಷಧಿ—ಈ ಔಷಧವು ಎಂಥ ವ್ಯಾಧಿಯಿಂದಲಾದರು ಕೆಟ್ಟುಹೋಗಿರುವ ಇಂದ್ರಿಯವನ್ನು ಗಟ್ಟಿಮಾಡಿ ದೇಹಕ್ಕೆ ಬಲ ಬರುವಂತೆ ಮಾಡುವುದು ಇದಲ್ಲದೆ ಜಲಗ್ರಾಹದಲ್ಲಿ ಹುಟ್ಟುವ ಎಂಥ ವ್ಯಾಧಿಯನ್ನಾದರು ಪರಿಹರಿಸುವುದು ಇದನ್ನು ಉಪಯೋಗಿಸುವ ವಿಧಾನ —ದಿನಕ್ಕೆ ಎರಡಾವರ್ತಿ ಭೋಜನವಾದಮೇಲೆ ೩೦—೪೫ ತೊಟ್ಟು ನೀರಿನಲ್ಲಿ ಕಲಸಿ ತೆಗೆದುಕೊಳ್ಳಬೇಕು ಇದರ ಕ್ರಯ ರೂ ೧

☞ ವಿಳಾಸ— ಬಳ್ಳಾರಿ ಬಜ್ಹಾರ್ ಪೇಟೆಯಲ್ಲಿರುವ ವಿ ಅಯನೂರ್ ಡಿಸ್ಪೆನ್ಸರಿಗೆ ಬರೆದು ತರಿಸಿಕೊಳ್ಳಬಹುದು

MESSRS V IYANOR & CO'S DISPENSARY,
Bellary

ಈ ಕಂಪನಿಯು ೧೮೯೦ನೇ ಇಸವಿಯಲ್ಲಿ ಸ್ಥಾಪಿತವಾಯಿತು.

ಜನ್ಮದ ಲಾಭವು.

ವಜ್ರಾಂಗ ಖರ್ಜೂರವು.

ಬಲಾರೋಗ್ಯ, ಪುಷ್ಟಿಗಳನ್ನು ಬೆಳೆಸತಕ್ಕ ಉತ್ಪತ್ತಿಯು.

ಅತ್ಯಾಶ್ಚರ್ಯಕರವಾದ ಶಾಸ್ತ್ರದಿಂದ ತಯಾರಿಸಿದ ಈ ಉತ್ಪತ್ತಿಗಳು ಕೊಂಕಣಪ್ರಾಂತದ ಅನೇಕ ವನಸ್ಪತಿಗಳ ಸಾರಗಳ ಪುಟಗಳನ್ನು ಕೊಟ್ಟು, ದ್ರವ್ಯಯೋಗ ಮಾಡಿ, ಒಳ್ಳೇ ರೀತಿಯ ಸಂಸ್ಕಾರ ಸಕ್ಕರೆಯ ಪಾಕದಲ್ಲಿ ಸಿದ್ಧ ಮಾಡಿರುತ್ತೇವೆ ಈ ಉತ್ಪತ್ತಿಗಳು ಮಹೌಷಧಗಳಿದ್ದು, ಒಳ್ಳೇ ರುಚಿಯುಳ್ಳವವಿ ಇವುಗಳ ಸೇವನೆಯಿಂದ ಕಫ, ವಾತ, ಪಿತ್ತ ಈ ತ್ರಿದೋಷಗಳಿಂದುಂಟಾಗತಕ್ಕ ಯಾವತ್ತು ಬಗೆಯ ವ್ಯಾಧಿ ಸಹ ಹೋಗುತ್ತವೆ ೬೦ ವರ್ಷಗಳ ಮುದುಕರು ಮತ್ತು ದುಃಖ ಶಾರೀರಿಕ ವಿಕಾರವುಳ್ಳವರೂ ಪರಿಪೂರ್ಣವಾದ ಗಂಡಸರಂತೆ ಪ್ರಾಪ್ತಿಕರಾಗುತ್ತಾರೆ ಪಂಚೇಂದ್ರಿಯಗಳು ಬಹು ಶೀಘ್ರವಾಗಿ ತೇಜಃಸಂಪನ್ನವಾಗುವುವು ಇಲ್ಲದಂತಾಗುತ್ತದೆ ಲಘ್ವಾಯು ಸಂಚಿತ ಅಥವಾ ಹಿಂದೆ ನಡೆದ ರೋಗದ ಧಾತು ನಿಶ್ಶಕ್ತಿ ಸ್ವಪ್ನಾವಸ್ಥೆಯಾಗುವದಿಲ್ಲ ವೀರ್ಯವು ಬೆಳೆದು ತೈಬಣ್ಣವು ಸಂಪಾದಿಸುತ್ತದೆ ಪರಮಾಯು ಹೆಚ್ಚಿ ಬುದ್ಧಿ ಹೆಚ್ಚಿ ಸಂಬಂಧಿಕ ರೋಗಗಳಿಲ್ಲದಂತಾಗಿ ಧಾತು ಪುಷ್ಟವಾಗುತ್ತದೆ ಮನುಷ್ಯರು ಹೊತ್ತೊಂದರೂ ಅನ್ನ ಪಚನವಾಗಿ ಒಳ್ಳೇ ಹಸಿವಾಗುತ್ತದೆ ಹೋಗುವದೊಂದೇ ತಡ ಕೂಡಲೆ ಸ್ಪಷ್ಟ ಗೌರವವಾಗುತ್ತದೆ ಕ್ಷಯ, ಉದರ, ದಮ್ಮು ಈ ರೋಗಗಳು ನಾಶ ಹೊಂದುತ್ತವೆ ಹೊಸ ರೋಗಿಗಳು ೧೧ ದಿವಸಗಳ ವರೆಗೆ ಸೇವಿಸಿದರೆ ಒಂದೇ ಡಬ್ಬಿಯಿಂದ ಗುಣವುಂಟಾಗುತ್ತದೆ ಮತ್ತು ಹಳೆಬಿದ್ದಲ್ಲಿ ೪೦ ದಿನಗಳ ಮೇಲೆ ಗುಣ ಕಾಣಿಸುವದು ೬೦ ದಿನಗಳವರಿಗೆ ಸಾಲತಕ್ಕ ೧ ಡಬ್ಬಿಗೆ ೧—೮—೦ ರೂ||ಒಂದೇಸಾರಿ ೪ ಡಬ್ಬಿಗಳು ತೆಗೆದುಕೊಳ್ಳತಕ್ಕವರಿಗೆ ಒಂದು ಡಬ್ಬಿಯು ಉಚಿತವಾಗಿ ಸಿಕ್ಕೀತು. ಈ ಉತ್ಪತ್ತಿಯಿಂದ ಹೆಂಗಸರು ಸತೇಜರಾಗುತ್ತಾರೆ ಕರಗಿನ ಹಾಗೂ ಬಾಳಂತಿ ಬೇನೆಗಳು ವಾಸಿಯಾಗುತ್ತವೆ. ಎಲ್ಲರನ್ನೂ ಸರಿಯಾಗಿ ಬೇನೆ ಇಲ್ಲದವರನ್ನಾಗಿಮಾಡಿ ಬಲಾರೋಗ್ಯ ಪುಷ್ಟಿಗಳನ್ನು ಬೆಳಸುತ್ತವೆ. ಶಿಶುಗಳ ಜನರಲ್ಲಿ ಬಹಳ ಡಬ್ಬಿಗಳು ಖರ್ಚಾಗುತ್ತವೆ ಈ ಔಷಧವು ಈ ಕಂಪನಿಯ ಹೊರ್ತು ಬೇರೆ ಸ್ಥಳದಲ್ಲಿ ಸಿಗುವದಿಲ್ಲ ಯಾವತ್ತು ದೇಶಗಳಲ್ಲಿಯು ವೈದ್ಯ ಶಾಲೆಗಳಿಗಾಗಿ ಕಳುಹಿಸಲ್ಪಡುತ್ತದೆ ಬರೆದು ಬಂದು ಕೂಡಲೆ ಈ ಕಂಪನಿಯು ಬೇಕಾದವರಿಗೆ ಈ ಡಬ್ಬಿಗಳು ಕಳುಹಿಸಿಕೊಟ್ಟೀತು ಅಂಚೆಯು ಹಾಗೂ ವ್ಯಾಲ್ಯು ಪೇಯಬಲ್ ಮಚ್ಚ ಬೇರೆ ಕೊಡಬೇಕು (ಉಚಿತ ಡಬ್ಬಿ ಸಹ ೪ ಡಬ್ಬಿಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬಾದಲ್ಲಿ ಎಲ್ಲಾ ಖರ್ಜೂರ ಹಾಕಿ ರವಾನಿಸುವೆವು, ಹೀಗೆ ಕಳುಹಿಸಿದರೆ ಪಾರ್ಸಲ್ ಖರ್ಚು ಕಡಮೆ ಬೀಳುವದು)

ಮೋಲ್ವಿಬಾಸೆ—ಪಿ ಎಲ್ ಎ. ಬ್ರದರ್ಸ ಮತ್ತು ಕಂಪನಿ,

ಗಸ್ತ ಇಂಗ್ಲಿಷ್ ಟ್ರಾವೆಲರ್ಸ್ ಬಂಗ್ಲಾ ಡಿಸ್ಟ್ರಿಕ್ಟ ಬೆಳಗಾಂವ

ಪೋಸ್ಟ—ಬೆಳಗಾಂವ. Post BELGAUM.

BANGALORE —Printed and Published at the KARNATAKA PRESS, No 40, HOSPITAL ROAD, CITY,—1897

THE

Karnataka Prakasika.

ಕರ್ನಾಟಕ ಪ್ರಕಾಶಿಕಾ.

Published Every Monday Morning

Vol. XXIV. BANGALORE:—MONDAY, SEPTEMBER 13, 1897. No. 37.

Select Telegrams

London, 4th Sept.—Prince Bismarck, in an interview with a press correspondent, said that he was not disposed to attach too much importance to the Franco-Russian alliance, but the French part was now moved nearer to the fire and would more easily boil over.

Egypt.—Armenians concerned in the recent bomb outrages at Constantinople have been sentenced to death.

The King of Siam is visiting Essen, and is the guest of Herr Krupp.

London, 6th Sept.—The Porte has addressed a note to the Ambassadors of the Powers requiring that the Governor of Crete shall be Ottoman, and that the Turkish garrison there shall be retained. The Ambassadors have postponed the consideration of this note pending the conclusion of peace negotiations.

Paris, 5th Sept.—The *Temps* in a leading article regarding the Anglo-Egyptian advance in the Soudan warns England that if she forgets her engagements she will at the end be obliged to admit that she is not the only one interested in the future of the Soudan.

London, 6th Sept.—The *Times* Alexandria correspondent telegraphs that there is some uneasiness in Egypt owing to the fermentation of the natives against Christians, and adds that the absence of any British warships at Alexandria for the past five months is much commented upon.

London, 8th Sept.—Varying reports are current regarding the purport of the Franco-Russian alliance. One says that either Power is bound to assist the other whenever attacked but not if it declares war.

The *Times* Paris correspondent states that the leading subject discussed at Peterhof was how to paralyse the action of Great Britain if the latter joined the Triple Alliance.

THE

Karnataka Prakasika.

MONDAY, SEPTEMBER 13, 1897.

THE NEW MUNICIPAL RULES.

ಈಗ ಬಳ್ಳಾರಿ ಪ್ರಾಂತದಲ್ಲಿ ವ್ಯಾಪಿಸಿರುವ ದುರ್ಭಿಕ್ಷದ ಬೆಳ್ಬಣ್ಯವಂ ಕುರಿತು ಅಲ್ಲಿನ ಕಲೆಕ್ಟರವರು ಈಚೆಗೆ ಮಾಡಿದ ರಿಪೋರ್ಟಿನಲ್ಲಿ ತಿಳಿಸಿರುವದೇನೆಂದರೆ:—ಸಾಮಾನ್ಯವಾಗಿ ಉಪಪನ್ನರೆನ್ನಿಸಿಕೊಂಡಿರತಕ್ಕವರು ಸಹ ಈಗಿನ ಕ್ಷಾಮಕ್ಕೆ ಗುರಿಯಾಗಿರುತ್ತಾರೆಂಬುವದಕ್ಕೆ ನಿದರ್ಶನವಾಗಿ ಒಬ್ಬ ಬ್ರಾಹ್ಮಣನು, ಅವನ ಮೂರು ಗಂಡು ಮಕ್ಕಳು, ಒಬ್ಬ ಮಗಳು, ಈ ಐದು ಮಂದಿಯೂ ಇತರ ಕೂಲಿಜನರೊಡನೆಕೂಡಿ ರಸ್ತೆಗಳಲ್ಲಿ ಗ್ರಾವಲ್ ಕಲ್ಲುಗಳಂ ಒಡೆಯುತಲಿದ್ದರು. ಗುರುಪೀಠಕ್ಕೆ ಸೇರಿದ ಇನ್ನೊಬ್ಬ ಬ್ರಾಹ್ಮಣನು ರಿಲೀಫ್ ಕಾಮಗಾರಿಯಲ್ಲಿ ಕೂಲಿ ಮಾಡುತಲಿದ್ದನು. ಈತ ಮನುಷ್ಯನು ಸ್ವಲ್ಪ ದಿನಗಳ ಹಿಂದೆ ದಾನಧರ್ಮಗಳಂಮಾಡುತ ತನ್ನ ಸ್ವಂತ ಆರ್ಜನೆಯಲ್ಲಿ ಧರ್ಮಾರ್ಥ ಅನ್ನಸತ್ರವನ್ನಿಟ್ಟದ್ದನು. ಈರೀತಿ ಮಾಡುತ ಬಂದವರಲ್ಲಿ ಆತನ ಜಿಂದಿಗಿಯೆಲ್ಲ ಕರಗಿ ಹೋಗಲು, ಧರ್ಮಕಾರ್ಯಗಳಿಗೆ ಅವಕಾಶ ತಪ್ಪಿ ತಾನೇ ರಿಲೀಫ್ ಕೆಲಸಕ್ಕೆ ಹೋಗಿ ಸೇರಿದನು. ಇಂತ ಕೃತ್ಯಗಳಿಗೆ ಯಾವ ಕಾಲದಲ್ಲೂ ಒಪ್ಪಂಬದ ಬ್ರಾಹ್ಮಣರೇ ತಮ್ಮ ಮುಖ್ಯಸ್ವಭಾವಗಳನ್ನೆಲ್ಲಬಿಟ್ಟು ಹೊಲಮಾದಿಗರ ಗುಂಪಿನಲ್ಲಿ ಸೇರಿ ರಸ್ತೆಗಳಲ್ಲಿ ಕೆಲಸ ಮಾಡುವದಕ್ಕೆ ಪ್ರಾರಂಭಿಸಿದ್ದರಿಂದ ಈಗಿನ ದುರ್ಭಿಕ್ಷವು ಕೇವಲ ಕಠಿಣವಾದುದೆಂದು ಸ್ಪಷ್ಟವಾಗುತಿದೆ, ಎಂಬುದು.

ಕೆಲವು ತಿಂಗಳ ಹಿಂದೆ ಮದರಾಸ್ ಮ್ಯುನಿಸಿಪಾಲಿಟಿಯವರು ಅಲ್ಲಿನ ಗವರ್ನರವರಿಂದ ಕಸಬ್‌ದಾರಿ ತೆರಿಗೆಯಂ ಪಸೂಲ್ಮಾಡುವದಕ್ಕೆ ಪ್ರಯತ್ನಿಸಿ, ಅವರು ತಾನು ಕೊಡುವದಕ್ಕೆ ನ್ಯಾಯವಿಲ್ಲವೆಂದು ನಿರಾಕರಿಸಿದರು. ಆ ವಿಷಯದಲ್ಲಿ ಮದರಾಸ್ ಗವರ್ನಮೆಂಟ ಅಡ್ವೊಕೇಟ ಜನರಲವರ ಅಭಿಪ್ರಾಯವಂ ಕೇಳಲು, ಈಗ ಸದರೀ ಅಧಿಕಾರವಂ ಬದಲೀ ನೋಡುತಲಿರುವ ಆನರಬಲ್ ಮೆ| ಭಾಷ್ಯಮಯ್ಯಂಗಾರ್ರವರು ಗವರ್ನರವರು ಸದರೀ ಕಂದಾಯವನ್ನು ಕೊಡುವದಕ್ಕೆ ಗುರಿಯಾಗುವದಿಲ್ಲವೆಂದು ಅಭಿಪ್ರಾಯ ಕೊಟ್ಟಾಗ್ಯೂ ಮ್ಯುನಿಸಿಪಾಲಿಟಿಯವರು ಅದರಿಂದ ತೃಪ್ತರಾಗದೆ ಅದೇ ವಿಷಯದಲ್ಲಿ ಕಲ್ಕತ್ತೆ ಅಡ್ವೊಕೇಟ ಜನರಲವರ ಅಭಿಪ್ರಾಯವಂ ಕೇಳದರು, ಅವರೂ ಮೆ|ಭಾಷ್ಯಮಯ್ಯಂಗಾರ್ರವರಂತೆಯೇ ಅಭಿಪ್ರಾಯ ಕೊಟ್ಟರು. ಈ ವಿಷಯದಲ್ಲಿ ಮದರಾಸ್ ಅಡ್ವೊಕೇಟ ಜನರಲವರು ಕೊಟ್ಟ ಅಭಿಪ್ರಾಯದಂತೆ ನಡೆಸುವುದು ನ್ಯಾಯ್ಯವಾಗಿದ್ದಾಗ್ಯೂ ಪ್ರಮುಖ ನೇಟವ್ ಅಡ್ವೊಕೇಟ ಜನರಲವರ ಅಭಿಪ್ರಾಯಕ್ಕೆ ಅಷ್ಟು ಪ್ರಾಮುಖ್ಯತೆಯಂ ಕೊಡಬಾರದೆಂದು ಮ್ಯುನಿಸಿಪಾಲಿಟಿಯ ಪ್ರೆಸಿಡೆಂಟರೂ ಕೆಲವರು ಬ್ಯಾರಿಸ್ಟರ್ ಕಮಿಷನರಗಳೂ ಯೋಚಿಸಿ ಕಲ್ಕತ್ತೆಗೆ ಬರೆದು ಅಲ್ಲಿನ ಅಡ್ವೊಕೇಟ ಜನರಲವರ ಅಭಿಪ್ರಾಯವಂ ತರಿಸಿದರು. ಇದರಿಂದ ಮ್ಯುನಿಸಿಪಾಲಿಟಿಗೆ ಬೇರೆ ಯಾವವಿಧ ಪ್ರಯೋಜನವೂ ಇಲ್ಲದೆ ಹೋದಾಗ್ಯೂ ಕಲ್ಕತ್ತೆ ಅಡ್ವೊಕೇಟ ಜನರಲವರಿಗೆ ಒಂದುಸಾವಿರ ರೂಪಾಯಿಗಳಿಗೆ ಕಡಮೆ ಇಲ್ಲದೆ ರುಸುಂ ಕೊಡಬೇಕಾದುದು ಪ್ರಾಪ್ತವಾಯಿತು. ಕಂದಾಯದಾರರಿಂದ ಅವರ ಪ್ರತಿನಿಧಿಗಳಾಗಿ ಚುನಾಯಿಸಲ್ಪಡುವ ಮ್ಯುನಿಸಿಪಲ್ ಮೆಂಬರಗಳಿಂದ ಅರ್ಥವ್ಯಯದ ವಿಷಯದಲ್ಲಿ ನಡೆಸಲ್ಪಡುವ ಅಕ್ರಮಗಳನ್ನು ತಡೆಮಾಡುವದಕ್ಕೆ ಪ್ರಜೆಗಳಿಗೆ ಸ್ವಾತಂತ್ರ್ಯವಿಲ್ಲದೆಯೂ, ಗವರ್ನಮೆಂಟಿಗೆ ಅಕ್ಕರೆ ಇಲ್ಲದೆಯೂ ಹೋಗಿದೆ.

LOCAL AND PROVINCIAL NEWS.

ಒಳದೇಶಮತ್ತುತಾಲ್ಲೂಕಜಾತಿವೃತ್ತಾಂತಗಳು.

ಮೈಸೂರು ಗವರ್ನಮೆಂಟನವರು ಜಮೀನ ಅಭಿವೃದ್ಧಿ ಸಾಲವನ್ನು ಕುರಿತು ಹುಟ್ಟಿರುವ ರೆಗ್ಯುಲೇಷನ್ ಅನುಸರಿಸಿ, ಈ ಸಂಸ್ಥಾನದಲ್ಲಿ ಕಡೂರು ಡಿಸ್ಟ್ರಿಕ್ಟು ವಿನಾ ಇತರ ಡಿಸ್ಟ್ರಿಕ್ಟುಗಳಿಗೆಲ್ಲ ಅಡ್ವಾನ್ಸ್ ಕೊಡುವಂತೆ ೨೫,೦೦೦ ರೂಪಾಯಿಗಳು ಮಂಜೂರ್ಮಾಡಿರುತ್ತಾರೆ.

ಮೈಸೂರು ನಿಖಿಲರೋಗಹಾರಿ ಧರ್ಮಾರ್ಥ ಕರ್ನಾಟಕ ವೈದ್ಯಶಾಲೆಯೊಳು ಕಳೆದ ಆಗಸ್ಟ್ ತಿಂಗಳಲ್ಲಿ ನಾನಾವಿಧ ರೋಗಪೀಡಿತರಾದವರು ೩,೪೫೫ ಮಂದಿ ಔಷದ ಸೇವನೆಮಾಡಿ ರೋಗನಿವೃತ್ತಿಯಂ ಪಡೆದರೆಂದು ಸದರೀ ಶಾಲಾ ಪ್ರತಿಷ್ಠಾಪಕರಾದ ಕೃಷ್ಣಾಜಪ್ಪನವರು ತಿಳಿಸಿರುತ್ತಾರೆ.

ಈಗ್ಗೆ ನಾಲ್ಕೈದು ದಿನಗಳ ಮೊದಲು ಮಳೆ ನಿಂತು ಸ್ವಲ್ಪ ಬಿಸಿಲು ಕಾಯುತಲಿದೆ. ಇದು ಫಸಲ್‌ಗಳಿಗೆ ಬಹಳ ಅನುಕೂಲವಾದುದೆಂದು ನಂಬುತ್ತೇವೆ. ಇನ್ನು ಯೆಂಟು ದಿನಗಳು ಬಿಟ್ಟುಕೊಂಡು ಮರಳಿ ಹದಮಳೆ ಯಾದರೆ ಬಹಳ ಒಳ್ಳೆಯದು. ದೈವಾಜ್ಞೆ ಹ್ಯಾಗಿರುವುದೋ ತಿಳಿಯದು. ಇತರ ವಿಷಯಗಳಲ್ಲಿ ಅಧಿಕಾಂಶ ಯಾವದೂ ಇಲ್ಲವು.

ಬೆಂಗಳೂರು ಡಿಸ್ಟ್ರಿಕ್ಟು ಆಫಿಸ್ ಹೆಡ್‌ಕ್ಲಾರ್ಕ್ ರಾಗಿದ್ದ ಮೆ|| ನಾಗಭೂಷಣ ನಾಯುಡರವರು ಸದರೀ ಡಿಸ್ಟ್ರಿಕ್ಟು ಶಿರಸ್ತೇದಾರರಾಗಿ ನೇಮಕ ಮಾಡಲ್ಪಟ್ಟು ಈ ಡಿಸ್ಟ್ರಿಕ್ಟು ಶಿರಸ್ತೇದಾರರಾದ ಮೆ||ಗುರುರಾಯರವರು ಕೋಲಾರ ಡಿಸ್ಟ್ರಿಕ್ಟು ಶಿರಸ್ತೇದಾರರಾಗಿಯೂ, ಸದರೀ ಡಿಸ್ಟ್ರಿಕ್ಟು ಶಿರಸ್ತೇದಾರ್ ಮೆ|| ಶ್ರೀನಿವಾಸರಾಯರು ಮೈಸೂರು ಡಿಸ್ಟ್ರಿಕ್ಟು ಶಿರಸ್ತೇದಾರರಾಗಿಯೂ ವರ್ಗ ಮಾಡಲ್ಪಟ್ಟಿರುತ್ತಾರೆ.

ಡಾಕ್ಟರ್ ಎಸ್. ವಿ ರಾಮಸ್ವಾಮಯ್ಯಂಗಾರ್ರವರು ಈಗ ಒಂದೂವರೆ ತಿಂಗಳ ರಜಾ ಪಡೆದುಕೊಂಡಿರುತ್ತಾರೆಯಷ್ಟೆ. ಅವರು ಕಲ್ಕತ್ತೆಯಲ್ಲಿ ಗೌರವ್ಯವಾದ ಒಂದು ಕುಟುಂಬಕ್ಕೆ ಸೇರಿದ ವಿದ್ಯಾವಂತೆಯಾದ ಮಿಸ್. ದಾಸ್ ಎಂಬ ಯುವತಿಯನ್ನು ವಿವಾಹ ಮಾಡಿಕೊಳ್ಳುವ ಉದ್ದೇಶದೊಡನೆ ಕಲ್ಕತ್ತೆಗೆ ಪ್ರಯಾಣ ಮಾಡಿದರೆಂದು ಒಳದೇಶದ ದೆಯಿಲಿಪೋಸ್ಟ್ ಪತ್ರಿಕೆ ತಿಳಿಸುತಿದೆ.

ಕಳೆದ ಶುಕ್ರವಾರದದಿನ ಹಗಲು ೧೧-೪೫ ನಿಮಿಷಗಳಿಗೆ ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರು ತಮ್ಮ ಪರಿಜನ ಪರಿಚಾರಕರೊಡನೆ ರಾಜಧಾನಿಗೆ ದಯಮಾಡಿದರು. ಆ ಕಾಲದಲ್ಲಿ ಸಂಸ್ಥಾನದ ದಿವಾನರು ಮೊದಲಾದ ದೊಡ್ಡ ಅಧಿಕಾರಿಗಳೂ ಮ್ಯುನಿಸಿಪಲ್ ಮೆಂಬರಗಳೂ ಸ್ಟೇಷನ್ ಪ್ಲಾಟ್‌ಫಾರಂನಲ್ಲಿ ಹಾಜರಿದ್ದು ಮಹಾರಾಜರವರನ್ನು ಸಾಗು ಕಳುಹಿಸಿದರು. ಮಾಮೂಲ್ ಮರ್ಯಾದೆಗಳು ನಡೆಸಲ್ಪಟ್ಟವು.

ಈಗ ನಡೆಯುತಲಿರುವ ಸರ್ವಾಗ್ ಸಾಟ್ ಮೊದಲು ಈ ದೇಶದೊಳು ಸರ್ವತ್ರ ಮೊಹತರ್ಫಾ ಮಗ್ಗದ ತೆರಿಗೆಯನ್ನು ವಜಾ ಮಾಡತಕ್ಕದ್ದೆಂತಲೂ, ಪರಂತು ಯಾವದಾದರೊಂದು ಮ್ಯುನಿಸಿಪಾಲಿಟಿಯವರು ತಮ್ಮ ಕೆಲಸಗಳಿಗೆ ಹಣ ಸಾಲದೆಂಬ ಕಾರಣದಿಂದ ಪಟ್ಟಿಯಮೇಲೆ ಪಸರ್ ಅಥವಾ ಆಕ್ಟ್ರಾಯಿ ತೆರಿಗೆಯನ್ನು ಠರಾಯಿಸಬೇಕಾದ್ದಾವಶ್ಯಕವೆಂದು ಯೋಚಿಸುವ ಪಕ್ಷದಲ್ಲಿ ಸರಕುಗಳು ತಯಾರಾಗುವ ಸ್ಥಳ ತಾರತಮ್ಯವಿಲ್ಲದೆ ಒಂದೇವಿಧವಾದ ದರ ಠರಾವ್ ಮಾಡಲ್ಪಡತಕ್ಕದ್ದೆಂತಲೂ ಮೈಸೂರು ಗವರ್ನಮೆಂಟನವರು ಹುಕುಂ ಮಾಡಿರುತ್ತಾರೆ.

THE MYSORE GAZETTE.
ಮೈಸೂರು ಗೆಜೆಟ್.

ಗುರುವಾರ, ತಾ|| ೯ನೇ ಸೆಪ್ಟಂಬರ್ ೧೮೯೭.

ಮೈಸೂರ ಗವರ್ನಮೆಂಟಿನವರಿಂದ ಹೊರಡಿಸಿದ ಇಸ್ತಿಹಾರನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾ|| ೫ ನೇ ಸೆಪ್ಟಂಬರ್ ೧೮೯೭.

ನಂ|| ೩೧೪೩-ಮಿ. ೫೨೮—ಸೆಪ್ಟಂಬರ್ ೧೮೯೭ನೇ ಇಸವಿ ಫೆಬ್ರವರಿ ೨ನೇ ತಾರೀಖು ೮೭೯೯-ಮಿ. ೧೮೯ನೇ ನಂಬರ್ ಇಸ್ತಿಹಾರ್‌ನಾಮೆ ಅನುಸಾರ ನಡೆಸಲ್ಪಟ್ಟ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಅವರವರ ಯೋಗ್ಯತಾನುಗುಣ್ಯವಾಗಿ ಕ್ರಮಪಡಿಸಿ ತೇರ್ಗಡೆಯಾಗಿರುವ ಉಮೇದುವಾರರುಗಳು ಇದರಡಿ ಕಂಡ ಪಟ್ಟಿಯು ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಘೋಷಿಸಲ್ಪಟ್ಟಿರುತ್ತೆ :—

೧ ಕೋಯಮುತ್ತೂರು ಎಸ್. ಬಾಲಸುಂದರಂ ಬಿ. ಎ.
೨ ಕಾರ್ಲೆ ಮತ್ತಾರ್ ಬಿ. ಎ.
೩ ಜಿ ಅರಾವಮುದು ಅಯ್ಯಂಗಾರ್, ಬಿ. ಎ. ಬಿ. ಎಲ್.
೪ ಬೆಳವಾಡಿ ರಾಮಸ್ವಾಮಯ್ಯ ಬಿ ಎ
೫ ಸಿ. ಎಸ್ ಮಹದೇವ ಅಯ್ಯರ್ ಬಿ ಎ.
೬ ಬಿ. ಕಸ್ತೂರಿ ರಂಗಯ್ಯಂಗಾರ್ ಎಂ. ಎ.
೭ ಕಡಪ್ಪನತ್ತಂ ಶ್ರೀನಿವಾಸರಾವ್ ಬಿ. ಎ.
೮ ಟಿ. ವಿಜಯರಾಘವ ಬಿ. ಎ.
೯ ಮೈಸೂರು ಎಂ. ಕೃಷ್ಣರಾವ್ ಬಿ ಎ.

ತಾರೀಖ್ ೬ನೇ ಸೆಪ್ಟಂಬರ್ ೧೮೯೭.

ನಂ|| ೩೧೮೧-ಮಿ. ೫೩೮—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೮೮ನೇ ಆರ್ಟಿಕಲ್ ಅನುಸರಿಸಿ ಬೆಂಗಳೂರು ಸರ್ಕಾರ ನೇತ್ರ ಚಿಕಿತ್ಸಾ ಶಾಲೆಯ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಸರ್ಜನ್ ಮ|| ಎಸ್. ವಿ. ರಾಮಸ್ವಾಮಯ್ಯಂಗಾರ್ (ಎಡಿಂಬರೊ) ಎಂ, ಬಿ ಸಿ. ಎಂ. ಎಲ್ ಆರ್. ಸಿ. ಪಿ. ವ ಎಸ್., (ಗ್ಲಾಸ್ಗೊ) ಎಲ್. ಎಫ್. ಪಿ ವ ಎಸ್, ಯವರಿಗೆ ಅವರುಪಯೋಗಿಸಿಕೊಳ್ಳುವ ತಾರೀಖ್ ಲಾಗಾಯಿತು ಒಂದು ತಿಂಗಳು ಇಪ್ಪತ್ತುನಾಲ್ಕು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ.

ನಂ|| ೩೧೮೬-ಮ. ೫೬—ಕ್ರಿಮಿನಲ್ ಪ್ರೊಸಿಜರ್ ಕೋಡಿನ ೩೬ನೇ ಸೆಕ್ಷನ್ ಅನುಸರಿಸಿ ಶಿವಮೊಗ್ಗೆಯ ಸ್ಪೆಷಲ್ ಅಸಿಸ್ಟೆಂಟ್ ಕಮಿಷನರ್ ವ ೧ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮ|| ಸಿ. ಬಿ. ಶೇಷಗಿರಿರಾಯರಿಗೆ ಸದರೀ ಕ್ಲಾಸಿನ ಮ್ಯಾಜಿಸ್ಟ್ರೇಟರಿಗೆ ಗವರ್ನಮೆಂಟಿನವರು ಕೊಡಬಹುದಾದ ೬ನೇ ಷೆಡ್ಯೂಲಿನಲ್ಲಿ ಜಾಸ್ತೀ ಅಧಿಕಾರವಾಗಿ ವಿವರಿಸಿರುವ ಈ ಕೆಳಗೆ ಕಂಡ ಅಧಿಕಾರವು ಕೊಡಲ್ಪಟ್ಟಿರುತ್ತೆ.

೨ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರುಗಳಿಂದ ಸಜಾ ವಿಧಿಸಲ್ಪಟ್ಟದ್ದರ ಮೇಲೆ ಬರುವ ಅಪೀಲುಗಳನ್ನು ದರ್ಯಾಫ್ತು ಮಾಡಲಿಕ್ಕೆ ಅಧಿಕಾರ, ಸೆಕ್ಷನ್ ೪೦೭.

ತಾ|| ೮ನೇ ಸೆಪ್ಟಂಬರ್ ೧೮೯೭

ನಂ|| ೩೨೮೦-ರೆ. ಫೈ. ೩೭-೯೬—ನೆಲಮಂಗಲ ತಾಲ್ಲೂಕಿನ ಅಮಲ್ದಾರ್ ಸಿ. ರಾಜಗೋಪಾಲಚಾರ್ಲು ಯವರಿಗೆ ೧೮೯೭ನೇ ಇಸವಿ ಜುಲೈ ೮ನೇ ತಾರೀಖು ೨೫೬-ರೆ. ಫೈ. ೩೭-೯೬ನೇ ನಂಬರ್ ಮತ್ತು ೧೮೯೭ನೇ ಜುಲೈ ೨೦ನೇ ತಾರೀಖು ೧೫೭೬-ರೆ. ಫೈ. ೩೭-೯೬ನೇ ನಂಬರ್ ಇಸ್ತಿಹಾರ್ ನಾಮೆಗಳಲ್ಲಿ ಸ್ವಂತ ಕೆಲಸಗಳಮೇಲೆ ಕೊಟ್ಟಿದ್ದ ರಜಾವನ್ನು ಇನ್ನೂ ಒಂದು ತಿಂಗಳ ವರೆಗೆ ಜಾಸ್ತೀಮಾಡಿರುತ್ತೆ

ಪಬ್ಲಿಕ್‌ವರ್ಕ್ಸ್.
ಇಸ್ತಿಹಾರನಾಮೆ.

ತಾ|| ೨ನೇ ಸೆಪ್ಟಂಬರ್ ೧೮೯೭.

ನಂ|| ೫೭೬-೬೨೧—ಕಡೂರು ಡಿವಿಜನಿನ ಅಫಿಷಿಯೇಟಿಂಗ್ ಎಗ್ಸಿಕ್ಯೂಟಿವ್ ಇಂಜನಿಯರ್ ಮ|| ಡಿ ರಂಗರಾಯರಿಗೆ ಅವರು ಹೊರಡುವ ತಾರೀಖ್ ಲಾಗಾಯಿತು ಒಂದು ವರ್ಷದ ಫರ್ಲೋ ರಜಾ ಕೊಡಲ್ಪಟ್ಟಿರುತ್ತೆ.

ತಾ|| ೬ನೇ ಸೆಪ್ಟಂಬರ್ ೧೮೯೭.

ನಂ|| ೫೯೩-೩೩೪೩-ಮೈಸೂರ್ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ "ಅಡಿಷನಲ್ ವರ್ಕ್" ಮೇಲೆ ಕರೆಯಲ್ಪಟ್ಟ ಇದರಡಿ ಕಂಡ ಸಬ್ ಅಸಿಸ್ಟೆಂಟ್ ಇಂಜನಿಯರ್‌ಗಳು ಅವರವರ ಉದ್ಯೋಗಗಳಲ್ಲಿ ಕಾಯಂ ಮಾಡಲ್ಪಟ್ಟಿರುತ್ತಾರೆ:—

೧ನೇ ಕ್ಲಾಸ್ ಸಬ್ ಅಸಿಸ್ಟೆಂಟ್ ಇಂಜನಿಯರ್.

ಮ|| ಜೆ. ಆರ್. ಇ. ಎಫ್ ಡೇವಿಯವರು
" ಎಸ್. ಎಂ. ದುಗ್ಗಪ್ಪಯ್ಯ ಬಿ. ಎ. ಎಲ್. ಸಿ. ಈ., ಯವರು.
" ಎಚ್. ಡಿ. ರೈಸ್ ಯವರು.

೩ನೇ ಕ್ಲಾಸ್ ಸಬ್ ಅಸಿಸ್ಟೆಂಟ್ ಇಂಜನಿಯರ್,

" ಈ. ಟಿ. ಕ್ಯಾಂಬಲ್‌ಯವರು.
" ಬಿ ಗರುಡಾಚಾರ್ಯ, ಎಲ್. ಸಿ. ಈ, ಯವರು.
" ಎ. ಪುಟ್ಟಸುಬ್ಬಯ್ಯ, ಬಿ. ಎ. ವ ಎಲ್. ಸಿ. ಈ. ಯವರು.
" ಟಿ. ಎಸ್. ರಾಘವಾಚಾರ್, ಎಲ್. ಸಿ. ಈ. ಯವರು.
" ಬಿ. ಸಿ. ಶ್ರೀನಿವಾಸಯ್ಯಂಗಾರ್, ಬಿ. ಎ. ವ ಎಲ್. ಸಿ. ಈ. ಯವರು.
" ಎಂ. ರಾಮರಾವ್, ಬಿ. ಎ. ವ ಎಲ್. ಸಿ. ಈ ಯವರು.

SUMMARY OF NEWS.
ವೃತ್ತಾಂತ ಸಂಗ್ರಹವು.

ಗಯೆಯಲ್ಲಿ ಹುಟ್ಟಿ ೧೦೫ ವರ್ಷದ ಮನುಷ್ಯನು ಜೀವಂತನಿದ್ದು ಅವನ ಎಲ್ಲಹಲ್ಲುಗಳು ಮುಪ್ಪಿನಿಂದ ಬಿದ್ದಹೋಗಿ, ನಂತರ ಈಗ ಅವನಿಗೆ ಪುನಃ ಹಲ್ಲುಗಳು ಹುಟ್ಟುತಲಿವೆ.

ತುರ್ಕಿ ಸುಲ್ತಾನರ ಪಜೀರನ ಮನೆಯನ್ನು ಸುರಂಗ ಹಚ್ಚಿ ಹಾರಿಸಿಬಿಟ್ಟರು, ವಿಶೇಷ ಅಪಘಾತವಾಗಲಿಲ್ಲ. ಈ ಉದ್ಯೋಗವನ್ನು ಅರ್ಮೇನಿಯರು ಮಾಡಿರಬಹುದೆಂದು ಅವರಮೇಲೆ ಸಂಶಯ ಪಡಲಾಗಿದೆ.

ಪಟ್ಟಿಯಾ ಸಂಸ್ಥಾನದ ಮಹಾರಾಣೀ ಜಾನಕಿ ಕುವರ್ ಯವರು ಚಂಪಾರಣ್ ಡಿಸ್ಟ್ರಿಕ್ಟಿನಲ್ಲಿ ಕ್ಷಾಮನಿವಾರಣೆಗಾಗಿ ೨೦ ಸಾವಿರ ರೂಪಾಯಿಗಳನ್ನು ಕೊಟ್ಟದ್ದಲ್ಲದೆ ೬ ಸಾವಿರ ರೂಪಾಯಿನ ದಿವಸವನ್ನು ಕೊಂಡು ಅಲ್ಲಿನ ಜನರಿಗೆ ಆಳಿಯುವಂತೆ ಕಳುಹಿಸಿರುತ್ತಾರೆ.

ಕಲ್ಕತ್ತೆಯಲ್ಲಿ ಜವಾಹಿರಿ ವ್ಯಾಪಾರಸ್ಥನಾದ ಒಬ್ಬ ಮಾರ್ವಾಡಿಯ ಮನೆಗೆ ಕಳವಿನಾ ಒಬ್ಬ ಪಠಾಣ ಕಳ್ಳನು ನುಗ್ಗಿ ಸುಮಾರು ೨೫,೦೦೦ ರೂಪಾಯಿ ನಗನಾಣ್ಯ ನೋಟುಗಳನ್ನು ಕದ್ದುಕೊಂಡು ಓಡಿಹೋದನು. ಆದರೆ ಪೋಲೀಸಿನವರು ಅವನನ್ನು ಕಾಶಿಯಲ್ಲಿ ಹಿಡಿದರು. ಅವನ ಹತ್ತಿರ ಕದ್ದ ನಗಗಳೆಲ್ಲ ಸಿಕ್ಕಿದವು. ಅವನ ಜೊತೆಗಾರನೊಬ್ಬನು ಅದರಲ್ಲಿ ಒಂದು ಪಾಲು ಪಡೆದು ಬಾರಿಲಿ ಕಡೆಗೆ ಓಡಿಹೋದನಂತೆ, ಅವನನ್ನು ಹುಡುಕುತಲಿದ್ದಾರೆ.

ಮುಹಮ್ಮದ್ ಹುಸ್ಸೇನ್ ಎಂಬೊಬ್ಬ ಮುಸಲ್ಮಾನನು ಮೋಸಕರವಾದ ರೈಲ್ವೆ ಟಿಕೇಟುಗಳನ್ನು ಇಟ್ಟುಕೊಂಡು ೨—೩ ವರುಷಗಳಿಂದಲೂ ರೈಲಿನಲ್ಲಿ ಕೂತು ಪ್ರಯಾಣಮಾಡುತ್ತಿದ್ದನು. ರೈಲ್ವೆ ಪೋಲೀಸಿನವರು ಅವನನ್ನು ಭೂಪಾಲ್ ಸ್ಟೇಷನಿನಲ್ಲಿ ಕಂಡು ಹಿಡಿದಿರುತ್ತಾರೆ. ಅವನು ತಕ್ಕಮಟ್ಟಿಗೆ ವಿದ್ಯಾವಂತನಾಗಿದ್ದಾನೆಂತಲೂ, ಇಂಗ್ಲಿಷನ್ನು ಚೆನ್ನಾಗಿ ಮಾತನಾಡುತ್ತಾನೆಂತಲೂ ತಿಳಿದು ಬಂದಿದೆ, ಇದುವರೆಗೆ ರೈಲ್ವೆ ಕಂಪೆನಿಗಳಿಗೆ ಎಷ್ಟು ರೂಪಾಯಿಗೆ ಟೋಪಿ ಹಾಕಿದಾನೋ ಮುಂದೆ ತಿಳಿಯಬೇಕಾಗಿದೆ.

ಮಾಡಗ್ರಾಸನಲ್ಲಿ ರಲಿಫ್ ಕಾಮಗಾರಿ ಮಾಡಿ ಹೊಟ್ಟೆ ಹೊರೆಕೊಳ್ಳುತಿದ್ದ ಸುಂದರಿ ಎಂಬ ಒಬ್ಬ ಹುಡುಗಿಯನ್ನು ಹೀರು ಎಂಬವನು ಕರೆದುಕೊಂಡುಹೋಗಿ ಮುಂಬೈಯಲ್ಲಿ ಅಮೀನ ಎಂಬ ಹೆಂಗಸಿಗೆ ಒಪ್ಪಿಸಿ ಅವಳಿಂದ ೨೦ ರೂಪಾಯಿ ತೆಗೆದುಕೊಂಡನು, ಆ ಅಮೀನ ಎಂಬವಳು ಸುಂದರಿಯನ್ನು ಕೆಲವು ದಿನಗಳ ವರೆಗೆ ಕೋಣೆಯಲ್ಲಿ ಬೀಗಹಾಕಿ ಬಚ್ಚಿಟ್ಟದ್ದು ತರುವಾಯ ಅವಳ ದೇಹವಿಕ್ರಯಮಾಡಿ ಜೀವನಮಾಡುವದಕ್ಕೆ ಹಿಂಬಿಸಿದಳು. ಇದು ಈಗ ಸರ್ಕಾರಕ್ಕೆ ತಿಳಿದು ಆ ದೊಂಬವನನ್ನೂ ಕೊಂಡುಕೊಂಡವಳನ್ನೂ ಹಿಡಿದು ಸೆಷನ್ ವಿಚಾರಣೆಗೆ ಗುರಿಮಾಡಿರುತ್ತಾರೆ.

ಗೋದಾವರಿ ಡಿಸ್ಟ್ರಿಕ್ಟು ಅಮಲಾಪುರಂ ತಾಲ್ಲೂಕು ವೀರೂರು ಅಗ್ರಹಾರದ ವಾಸಸ್ಥನಾದ ಲಕ್ಷ್ಮೀ ನರಸಿಮ್ಹನೆಂಬ ಬ್ರಾಹ್ಮಣನು ವಿಜಯ ನಗರದಲ್ಲಿ ಬಿ. ಎ. ಪರೀಕ್ಷೆ ಪಾಸಾಗಿ ವಿಜಯನಗರದ ಮಹಾರಾಜರ ಪ್ರೋತ್ಸಾಹದ್ರವ್ಯದಿಂದ ಮದರಾಸ್ ಸಿವಿಲ್ ಇಂಜನಿಯರಿಂಗ್ ಕಾಲೇಜಿನಲ್ಲಿ ಬಿ. ಸಿ. ಇ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಬರೋಡೆ ಸಂಸ್ಥಾನದಲ್ಲಿ ೧೫೦ ರೂಪಾಯಿ ಕೆಲಸದಲ್ಲಿದ್ದು ಈಗ ಬರೋಡೆ ಮಹಾರಾಜರ ಪ್ರೋತ್ಸಾಹದಮೇಲೆ ಅಮೇರಿಕಾ ದೇಶಕ್ಕೆ ಹೋಗಿ ಮೆಕಾನಿಕಲ್ ಇಂಜನಿಯರಿಂಗ್ ವಿದ್ಯಾಭ್ಯಾಸ ಮಾಡಿಕೊಂಡು ಬರುವ ಪ್ರಯತ್ನ ನಡೆಸುತಿದ್ದಾರೆ, ಇವರು ತಮ್ಮ ಹೆಂಡತಿಯಾದ, ಸಂಸ್ಕೃತವನ್ನು ಅಭ್ಯಾಸಮಾಡಿ ತೆಗೆದುಕೊಂಡು ಇಂಗ್ಲಿಷ ಪರೀಕ್ಷೆ ಕೊಟ್ಟಿರುವ ಸುಮಾರು ೨೦ ವರ್ಷ ವಯಸ್ಸಿನ ಶಾರದೆ ಎಂಬಾಕೆಯೊಡನೆ ಹೋಗಿ ಬರುವದಾಗಿದಾರೆ ಇವರ ಸಾಹಸವು ಶ್ಲಾಘನೀಯವಾದದ್ದು

ADVERTISEMENT.

ದಕ್ಷಿಣ ಮಹರಾಷ್ಟ್ರ ರೈಲ್ವೆ ಕಂಪನಿ.

ಡಿಸ್ಟ್ರಿಕ್ಟ್ ಟ್ರಾಫಿಕ್ ಸೂಪರ್ಇಂಟೆಂಡೆಂಟರ ಆಫೀಸ್,
ಬೆಂಗಳೂರು, 7ನೇ ಸೆಪ್ಟಂಬರ್ 1897.

ನೋಟಿಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ :—

1897ನೇ ಇಸವಿ ಜುಲೈ 11ನೇ ತಾರೀಖುಳ್ಳ ೩ನೇ ನಂಬರ್ ಇನ್‌ವಾಯಿಸಿನಲ್ಲಿ ಕಂಡಂತೆ, ರಾಜಾನಕುಂಟೆಯಿಂದ ಗೋರಿಬಿದನೂರಿಗೆ ಕಳುಹಿಸಲ್ಪಟ್ಟ ಒಂದು ವಾರ್ಗನ್ ಸೌದೆಯನ್ನು, ವಿಳಾಸದಾರನು ಈ ಮಧ್ಯೆ ಸಾಜಾಗಿ ವಿಶಿಷ್ಟ ಖರ್ಚುಗಳನ್ನು ಕೊಟ್ಟು ಪಡೆದುಕೊಳ್ಳದೆ ಹೋದರೆ, ಇಂಡಿಯನ್ ರೆಯಿಲ್ವೆ ಆಕ್ಟು 56ನೇ ಸೆಕ್ಷನ್ ಪ್ರಕಾರ 1897ನೇ ಇಸವಿ ಸೆಪ್ಟಂಬರ್ 28ನೇ ತಾರೀಖ್ ಮಂಗಳವಾರದ ದಿನ ಮಧ್ಯಾಹ್ನ 12ಘಂಟೆಗೆ ಗೋರಿಬಿದನೂರು ರೆಯಿಲ್ವೆ ಸ್ಟೇಷನ್‌ನಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವುದು.

D. H. Lindsay,
Dist. Traffic Superintendent

NOTICE.

VAIDYASARA SANGRAHA.

A TREATISE ON THE PRINCIPLES OF
HINDU MEDICINE.

Price, including Postage Rs. 5-0-0.

ವೈದ್ಯಸಾರಸಂಗ್ರಹ.

ಇದು ಚರಕ, ವಾಗ್ಭಟ, ಸುಶ್ರುತ, ಶಾರ್ಙ್ಗಧರಾದ್ಯನೇಕ ಪೂರ್ವಗ್ರಂಥಗಳ ಸಂಗ್ರಹ ರೂಪವಾಗಿರುತ್ತದೆ.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಹಾಸಲ್ ಸಹಿತ ಪ್ರತಿ ೧ಕ್ಕೆ ೫—೦—೦

ಬೇಕಾದವರು ಬೆಂಗಳೂರು ಕರ್ನಾಟಕ ಪ್ರೆಸ್ ಪ್ರೊಪ್ರೈಟರವರಿಗೆ ಬರೆದು ತರಿಸಿಕೊಳ್ಳಬಹುದು

V. IYANOR'S
PREPARATIONS.
ವಿ. ಅಯನೋರ್ ಎಂಬವರಿಂದ ತಯಾರು ಮಾಡಲ್ಪಟ್ಟ ಪ್ರಸಿದ್ಧ ಔಷಧಗಳು.

ಪೆಯಿನ್‌ಕಿಲ್ಲರ್.—ಇದು ಹೊಟ್ಟೆಶೂಲೆ, ಅಜೀರ್ಣ, ಕರುಳು ನೋವು, ವಾಂತಿಭೇದಿ, ಅಜೀರ್ಣಭೇದಿ, ಬೇಳುಕಡತ, ಕೆಮ್ಮು, ಮೂತ್ರತಡೆ, ಬಾಯಿಹುಣ್ಣು, ರಕ್ತಸ್ರಾವ, ಆರ್ತವ ದೋಷಜನ್ಯವಾದ ಸ್ತ್ರೀಯರ ಉಬ್ಬಸಗಳು, ತಲೆನೋವು, ದಂತಶೂಲೆ, ಧಾಯಿ ಮೊದಲಾದವುಗಳಿಗೆ ಬಹಳ ಉಪಯುಕ್ತವಾದದ್ದು. ಇದರ ಕ್ರಯ ದೊಡ್ಡಸೀಸೆ ೧ಕ್ಕೆ ೧ ರೂ. ಸಣ್ಣಸೀಸೆ ೧ಕ್ಕೆ ೮ ಆಣೆ.

ವಾತಹರವಾದ ತೈಲ—ಬಹುಕಾಲಿಕ ನೋವು, ಪಕ್ಕಶೂಲೆ, ಸೊಂಟನೋವು, ತಲೆಶೂಲೆ ಇವು ಪರಿಹಾರವಾಗುವದು. ಇದರ ಕ್ರಯ ದೊಡ್ಡಸೀಸೆ ೧ಕ್ಕೆ ೧ ರೂ ಸಣ್ಣ ಸೀಸೆ ೧ಕ್ಕೆ ೮ ಆಣೆ.

ಜ್ವರದ ಗೃತಿ—ಇದು ಎಂತಾ ಜ್ವರವನ್ನಾದರು ಎರಡು ದಿನಗಳೊಳಗಾಗಿ ನಿವೃತ್ತಿ ಮಾಡತಕ್ಕದ್ದು ದೊಡ್ಡ ಸೀಸೆ ೧ಕ್ಕೆ ೧ ರೂ. ಸಣ್ಣಸೀಸೆ ೧ಕ್ಕೆ ೮ ಆಣೆ

ಓಮಕರ್ಪೂರದ ಶೊಂಠಿ.—ಇದು ಸೀತಭೇದಿ, ರಕ್ತಭೇದಿ, ರಜಸ್ಸು ಸರಿಯಾಗಿ ಬಾರದಿರುವ ಉಪಾಧಿ, ಎದೆನೋವು, ಟೊಂಕನೋವು ಇವುಗಳಿಗೆ ಬಹಳ ಪ್ರಯೋಜನಕರವಾದದ್ದು ಇದರ ಕ್ರಯ ದೊಡ್ಡಸೀಸೆ ೧ಕ್ಕೆ ೧ರೂ. ಸಣ್ಣಸೀಸೆ ೧ಕ್ಕೆ ೮ಆಣೆ.

ಮೇಹವಾಯು ಎಣ್ಣೆ—ಇದು ಮೇಹವಾಯುವಿನಿಂದ ಶರೀರವು ಉಬ್ಬುವದು, ಬರ್ಕವು ಒಡೆಯುವದು, ಪಾರ್ಶ್ವತಲೆನೋವು, ಗ್ರಂಥಿಗಳು ಇವೆಲ್ಲಕ್ಕೆ ಬಹಳ ಉಪಯುಕ್ತವಾದದ್ದು ಇದರ ಕ್ರಯ ದೊಡ್ಡಸೀಸೆ ೧ಕ್ಕೆ ೧ರೂ ಸಣ್ಣಸೀಸೆ ೧ಕ್ಕೆ ೮ ಆಣೆ.

ವ್ಯಾಘ್ರಸ್ನೇಹ—ಇದು ಸಂಧುವು ನೋವು, ಕೀಲುನೋವು, ಪಾರ್ಶ್ವನೋವು, ಅರ್ಧತಲೆನೋವು, ಬೆನ್ನಿನ ನೋವು ಇವುಗಳಿಗೆ ಪ್ರಸಿದ್ಧವಾದ ತೈಲವು. ದೊಡ್ಡ ಡಬ್ಬಿ ೧ಕ್ಕೆ ೧ ರೂ, ಸಣ್ಣ ಡಬ್ಬಿ ೧ಕ್ಕೆ ೮ ಆಣೆ

ಶ್ವೇತಕುಷ್ಠೌಷಧ.—ಇದು ಸಕಲವಿಧ ಮೇಹರೋಗಗಳಿಂದ ಜನಿಸುವ ಬಿಳುಪು, ಹಸರು ಮತ್ತಿರ ಸ್ತ್ರೀವಿಷಯಕ ವ್ಯಾಧಿಗಳೆಲ್ಲಕ್ಕೂ ಶೀಘ್ರವಾಗಿಯೂ, ಮರಳಿ ಎಂದಿಗೂ ಬಾರದಂತೆ ನಿಶ್ಶೇಷವಾಗಿಯೂ ಗುಣಪಡಿಸತಕ್ಕಂತಾ ಔಷಧ ಇದರ ಕ್ರಯ ಸೀಸೆ ೧ಕ್ಕೆ ೧ ರೂ. ೮ ಆಣೆ.

ಕೂದಲು ನರೆಯದೆ ಸೊಂಪಾಗಿ ಬೆಳೆಯುವಿಕೆಗೆ ಔಷಧ—ಈ ತೈಲವು ನರೆತ ಕೂದಲುಗಳನ್ನು ಕಪ್ಪಾಗಿ ಮಾಡುವದು, ಕೂದಲು ಬೆಳೆಯದಿರುವಸ್ಥಳಗಳಲ್ಲಿ ಹುಟ್ಟಿ ಬೆಳೆಯುವದು ಇದನ್ನು ತಲೆಗೆ ಹಚ್ಚಿಕೊಂಡು ಸ್ನಾನಮಾಡಬಹುದು ಮತ್ತು ಸುವಾಸನೆಯುಳ್ಳದ್ದಾಗಿರುತಿದೆ. ಇದರ ಕ್ರಯ ಸೀಸೆ ೧ಕ್ಕೆ ೧ ರೂ.

ಕರ್ಣರೋಗಕ್ಕೆ ತೈಲ—ಈ ತೈಲವನ್ನು ೮ ದಿವಸಗಳವರೆಗೆ ಕಿವಿಯಲ್ಲಿ ಕೆಲವು ಬೊಟ್ಟುಗಳು ಬಿಡುತಬಂದರೆ, ಕಿವಿಯಲ್ಲಿನ ಕಟ್ಟು ಮೊದಲಾದ ವ್ಯಾಧಿಗಳನ್ನು ಪರಿಹರಿಸುವದು ಇದರ ಕ್ರಯ ೧ ರೂಪಾಯಿ.

ವೀರ್ಯವೃದ್ಧಿಗೆ ಔಷಧ—ಈ ಔಷಧವು ಯೆಂತ ವ್ಯಾಧಿಯಿಂದಲಾದರು ಕೆಟ್ಟುಹೋಗಿರುವ ಇಂದ್ರಿಯವನ್ನು ಸರಿಮಾಡಿ ದೇಹಕ್ಕೆ ಬಲ ಬರುವಂತೆ ಮಾಡುವದು ಇದಲ್ಲದೆ ಪಿತ್ತವಿಕಾರದಿಂದ ಹುಟ್ಟುವ ಯೆಂತ ವ್ಯಾಧಿಯನ್ನಾದರು ಪರಿಹರಿಸುವುದು. ಇದನ್ನು ಉಪಯೋಗಿಸುವ ವಿಧಾನ—ದಿವಸಕ್ಕೆ ಎರಡಾವರ್ತಿ ಭೋಜನವಾದಮೇಲೆ ೩-೪ ಬೆಂಬು ಹಾಲು ಕಲಸಿ ತೆಗೆದುಕೊಳ್ಳಬೇಕು. ಇದರ ಕ್ರಯ ರೂ ೧.

☞ ವಿಳಾಸ—ಬಳ್ಳಾರಿ ಬಜಾರ್ ಸ್ಟ್ರೀಟಿನಲ್ಲಿರುವ ವಿ. ಅಯನೋರ್ ಡಿಸ್ಪೆನ್ಸರಿಗೆ ಬರೆದು ತರಿಸಿಕೊಳ್ಳಬಹುದು

Messrs. V. Iyanor & Co's. Dispensary,
Bellary

ಈ ಕಂಪನಿಯು ಸನ್ ೧೮೯೨ನೇ ಇಸವಿಯಲ್ಲಿ ಸ್ಥಾಪಿತವಾಯಿತು.

ಜನ್ಮದ ಲಾಭವು.

ವಜ್ರಾಂಗ ಖರ್ಜೂರವು.

ಬಲಾರೋಗ್ಯ, ಪುಷ್ಟಿಗಳನ್ನು ಬೆಳೆಸತಕ್ಕ ಉತ್ಪತ್ತಿಯು.

ಅತ್ಯಾಶ್ಚರ್ಯಕರವಾದ ಬಿಟ್ಟಳಿಂದ ತಯಾರಿಸಿದ ಈ ಉತ್ಪತ್ತಿಗಳು ಕೊಂಕಣಪ್ರಾಂತದ ಅನೇಕ ವನಸ್ಪತಿಗಳ ಸಾರಗಳ ಪುಟಗಳನ್ನು ಕೊಟ್ಟು, ಸ್ವಾದೋಳಗೆ ಮಾಗಿಸಿ. ಒಳ್ಳೇ ರಚ್ಚೆನ ತರಗತಿಯು ಸಕ್ಕರೆಯ ಪಾಕದಲ್ಲಿ ಸಿದ್ಧ ಮಾಡಿರುತ್ತೇವೆ. ಈ ಉತ್ಪತ್ತಿಗಳು ಮಹೌಷಧಿಗಳಿದ್ದು, ಒಳ್ಳೇ ರುಚಿಯುಳ್ಳವಾದವುಗಳ ಸೇವನೆಯಿಂದ ಕಫ, ವಾತ, ಪಿತ್ತ ಈ ತ್ರಿದೋಷಗಳುಂಟಾಗತಕ್ಕ ನಾನಾತ್ತ ಬಗೆಯ ವ್ಯಾಧಿಗಳು ಹೋಗುತ್ತವೆ. ೫೦ ವರ್ಷಗಳ ಪ್ರಾಯದಲ್ಲಿ ಮುದುಕರ ಕಾಮವಿಕಾರವಾದರೂ ತರುಣರ ಗಂಡಗರಂತೆ ಪ್ರಾಪ್ತಿಯಾಗುತ್ತದೆ. ಜನನೇಂದ್ರಿಯದಲ್ಲಿ ಬಲ ಘಂಟಾಗಿ ನಪುಂಸಕತ್ವವು ಇಲ್ಲದಂತಾಗುತ್ತದೆ ಲೀಥ್ಯಾಯು ಮುಂಚೆ ಅಥವಾ ಹಿಂಚೆ ಹರಿದುಹೋಗುವ ಧಾತು ನಿಲ್ಲುತ್ತದೆ. ಸ್ವಪ್ನಾವಸ್ಥೆಯಾಗುವದಿಲ್ಲ ವೀರ್ಯವು ಬೆಳೆದು ಮೈ ಬಣ್ಣವು ಉಜ್ವಲಿಸುತ್ತದೆ ಪರಮಾ ಮತ್ತೂ ಉಪಸ್ವನಸಂಬಂಧಿ ದೋಷಗಳೆಲ್ಲ ಇಲ್ಲದಂತಾಗಿ ಧಾತು ಪುಷ್ಟವಾಗುತ್ತದೆ. ಮೂರು ಹೊತ್ತಿಂದಲೂ ಅನ್ನ ಪಚನವಾಗಿ ಒಳ್ಳೇ ಹಸಿವೆಯಾಗುತ್ತದೆ. ಹೋಗುವದೆಸಂದೆ ತಡ ಕೂಡಲೇ ಸ್ವಚ್ಛ ಶೌಚವಾಗುತ್ತದೆ ಕ್ಷಯ, ಉದರ, ದಮ್ಮು ಈ ರೋಗಗಳು ನಾಶ ಹೊಂದುತ್ತವೆ ಬೂಸ ಜೇನೆ ಇದ್ದಲ್ಲಿ ೧೧ ದಿವಸಗಳ ವರೆಗೆ ಸಾಲುವ ಒಂದೇ ಡಬ್ಬಿಯಿಂದ ಗುಣವುಂಟಾಗುತ್ತದೆ. ಮತ್ತು ಹಳದಿದ್ದಲ್ಲಿ ೪೦ ದಿವಸಗಳ ಮೇಲೆ ಗುಣ ಬಂದೀತು. ೧೧ ದಿವಸಗಳ ವರಿಗೆ ಸಾಲತಕ್ಕ ೧ ಡಬ್ಬಿಗೆ ೧-೮-೦ ರೂ|| ಒಂದೇವ್ಯಕ್ತಿಗೆ ೪ ಡಬ್ಬಿಗಳು ತೆಗೆದುಕೊಳ್ಳತಕ್ಕದಾದರೆ ಒಂದು ಡಬ್ಬಿಯು ಉಚಿತವಾಗಿ ಸಿಕ್ಕೀತು. ಈ ಉತ್ಪತ್ತಿಯಿಂದ ಹೆಂಗಸರು ಸತೇಜರಾಗುತ್ತಾರೆ. ಶರಗಿನ ರೋಗವೂ ಎಷ್ಟೊಂತ ಬೇನೆಗಳು ವಾಸಿಯಾಗುತ್ತವೆ. ಎಲ್ಲರನ್ನೂ ಸರಿಯಾಗಿ ಬೇನೆ ಇಲ್ಲದವರನ್ನಾಗಿ ಮಾಡಿ ಬಲಾರೋಗ್ಯ ಪುಷ್ಟಿಗಳನ್ನು ಬೆಳಸುತ್ತವೆ. ಸಾಹೇಬ ಜನರಲ್ಲಿ ಬಹಳ ಡಬ್ಬಿಗಳು ಖರ್ಚಾಗುತವೆ ಈ ಔಷಧವು ಈ ಕಂಪನಿಯ ಹೊರತು ಬೇರೆ ಸ್ಥಳದಲ್ಲಿ ಸಿಗುವದಿಲ್ಲ ಯಾವತ್ತು ದೇಶಗಳಲ್ಲಿಯೂ ವೈದ್ಯಶಾಲೆಗಳಿಗಾಗಿ ಕಳುಹಿಸಲ್ಪಡುತ್ತದೆ. ಬರೆದು ಬಂದು ಕೂಡಲೆ ಈ ಕಂಪನಿಯು ಬೇಕಾದವರಿಗೆ ಈ ಡಬ್ಬಿಗಳು ಕಳುಹಿಸಿಕೊಟ್ಟೀತು. ಅಂಚೆಯ ಹಾಗೂ ವ್ಯಾಲ್ಯು ಪೆಯಬಲ್ ಪಡ್ಡ ಬೇರೆ ಕೊಡಬೇಕು (ಉಚಿತ ಡಬ್ಬಿ ಸಹ ೪ ಡಬ್ಬಿಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬಿಯಾದ್ದಲ್ಲ ಎಲ್ಲಾ ಪಾರ್ಸಲ ಸಾಕಿರವಾನಿಸುವೆವು, ಹೀಗೆ ಕಳುಹಿಸಿದರೆ ಅಪ್ಪಾಲ್ ಖರ್ಚು ಕಡಿಮೆ ಬೀಳುವದು)

ಮೇಲ್ವಿಳಾಸ—ಪಿ. ಎಲ್. ಎ. ಬ್ರದರ್ಸ್ ಮತ್ತು ಕಂಪನಿ,

ಫಸ್ಟ್ ಇಂಗ್ಲಿಷ್ ಬ್ರ್ಯಾಂಚ್ ಆಫೀಸ್, ಡಿಸ್ಟ್ರಿಕ್ಟ್ ಬೆಳಗಾಂವ.

ಪೋಸ್ಟ್—ಬೆಳಗಾಂವ. Post Belgaum.

Bangalore :—Printed and Published at the Karnataka Press, No. 40, Hospital Road, City,—1897.

THE

Karnataka Prakasika.

ಜಾಹೀರಾತು ದರ. } ಮೊದಲನೆಯ ದಫೆ ಪಙ್ಕ್ತಿ ಒಂದಕ್ಕೆ 0 2 0
ಎರಡನೆಯ ದಫೆ ಪಙ್ಕ್ತಿ ಒಂದಕ್ಕೆ 0 1 0
[ಸೂಚನಾ.—ಇದಕ್ಕಿಂತ ಜಾಸ್ತಿಯಾಗಿ ಎಷ್ಟು ದಫೆ ಹಾಕಿಸಿದರೂ ಪಙ್ಕ್ತಿ ಒಂದಕ್ಕೆ ಆಣೆ ಒಂದರ ಲೆಕ್ಕ ಮಾಡಲ್ಪಡುವದು]

ಕರ್ಣಾಟಕ ಪ್ರಕಾಶಿಕಾ.

Published Every Monday Morning

ಚಂದಾ ದರಗಳು.—ಸ್ಥಳದವರಿಗೆ, ಪರಸ್ಥಳದವರಿಗೆ, ಪೋಸ್ಟೇಜ್ ಸೇರಿ

ಸ್ಥಳದವರಿಗೆ		ಪರಸ್ಥಳದವರಿಗೆ	
ಸಾಲ್ 1 ಕ್ಕೆ	3 0 0	ಸಾಲ್ 1 ಕ್ಕೆ	4 0 0
6 ತಿಂಗಳಿಗೆ	2 0 0	6 ತಿಂಗಳಿಗೆ	2 8 0
3 ತಿಂಗಳಿಗೆ	1 4 0	3 ತಿಂಗಳಿಗೆ	1 8 0

ಪ್ರಕಾಶವುವಿವಿಧಪ್ರವೃತ್ತ್ಯುಪಗಮಾರ್ಥ ಕರ್ಣಾಟಕಪ್ರಕಾಶಕನಾಮಾಭಿಧಾಪ್ರಥಿತಸಾಹಿತ್ಯೇಕ್ಷಿತಾ || ವ್ಯಾಂಗಸಹಿತವಾಸರನಿಹಿತವುದ್ರಾಸಜ್ಜಸ್ವೇಚ್ಛಾಸುಪರಿಪೋಷಿತವಿರಿತನಸಂಸಂಪಾದಂ ||

Vol. XXIV. BANGALORE:—MONDAY, SEPTEMBER 20, 1897. No. 38.

Select Telegrams.

London, 11th Sept.—The Congress of Orientalists have appointed an international Committee to organise an India Exploration Fund similar to the Egyptian Fund.

The King of Siam has arrived at Paris President Faure and the Ministers met his Majesty at the station, and cordially greeted him and accompanied him to his hotel

London 13th Sept.—The Emperor William has arrived at Pesth in Hungary to attend the Hungarian manoeuvres. The Emperor Francis warmly welcomed him

The King of Siam banqueted the Cabinet Ministers at the Siamese Legation at Paris yesterday.

London, 13th Sep.—The King of Siam had a cordial interview with Mons. Meline, the Premier, yesterday, and affirmed his friendship for France His Majesty conferred on President Faure the Crown Order with the yellow cordon, which is reserved as a rule for princes.

London, 15th Sept.—The London Press generally accepts the verdict in the Tilak case as justified and well considered. The *Daily Chronicle*, however, disapproves of it, and describes the utterances of the *Kesari* as mischievous rubbish but scarcely real sedition

The King of Siam, with President Faure, reviewed 60,000 French troops yesterday, the Parisians receiving His Majesty in a most friendly manner.

London, 16th Sept.—The Powers have accepted Greek proposals to resume commercial relations with Turkey.

London, 17th Sept.—The Maharaja of Kapurthala has arrived at Constantinople

The Ambassadors of the Powers at Constantinople have finally initialled the new clauses in the Draft Treaty of Peace between Greece and Turkey

THE

Karnataka Prakasika.

MONDAY, SEPTEMBER 20, 1897.

THE FRONTIER.

Affairs on the frontier are not going on so successfully as might have been expected. The tribes fight stubbornly, and there is much work to be done by the troops sent to put down the rising The attack on the rear guard of the army near Hangu was a serious affair, and though it was splendidly repulsed, much loss was caused and evidently the tribesmen are better disciplined than they were when they last met the British troops in the field, hence the hard fighting there has been. It seems clear that the soldiers have a good deal more work before them ere they can return to their homes, but we may be certain that the tribes will be thoroughly subdued before the troops on the frontier are allowed to come away. It is generally believed that there has been bad management somewhere, the tribes might not now be at war if a little tact had been used. It is considered very desirable that a change should be brought about in our frontier policy; the tribesmen should be taught to place confidence in the Government instead of looking upon it with distrust as they too often do now. The object of the Government should be to conciliate the tribesmen, not to irritate them, as, it is to be feared, is done sometimes now. We would recommend that the whole North-West frontier should be placed under one official who thoroughly understands the nature of the work entrusted to him, and is capable of performing it As matters now stand the charge of the frontier is committed to a number of officials, each of whom may have a different policy. The result is that wars break out that cost a great deal of money, land is annexed or some thing resembling it, and the tribesmen become dissatisfied. Then troops ar sent, with the result that we see now Sir Robert Sandeman, when Commissioner of Beluchistan, carried out the policy we are advocating in *the districts where he was placed, and* with the best effect. He conciliated all the chiefs of the country, and they are now on the best of terms with the Government. Then again, Colonel Warburton, when he was in political charge of the Khyber Pass kept the wild tribes in its vicinity in order, and they were contented to live under the rule of the British. But when he retired his policy was not followed, with the result we now see. Such a man as the Colonel should be placed in charge of the whole frontier, and the lines on which he should work should be laid down. Nothing should be left to his own whim or fancy. The officer in charge should be instructed how to act, and he should act accordingly. The war on the frontier has already cost many lives, and it will, in all probability, cost many more The tribesmen are better drilled than they were on former occasions of the kind It is also suspected that there are some sepoys who formerly belonged to the British army in the ranks of the Afridis and other tribes They learnt their drill in India, then used it against the power that drilled them. This is to be regretted, and shows that a change of system is required, and it is to be hoped will soon be made.

THE TILAK CASE

The Tilak case, as we all know, was *brought to a close last Tuesday, when the* accused was found guilty by six to three of the jury, and a sentence of eighteen months' imprisonment was passed upon him. The sentence is a very severe one, and is believed to be so by all sorts of people, those who believe he is very culpable, and those who believe he is not. To a man in his position such a sentence is very sad and he must feel it very much. That the trial and its result have caused great pain in India, there cannot be the shadow of a doubt. Mr. Tilak for a long time past has been a leading spirit in the West of India He has been well known to the people; his name has so long been before the public that the news of his arrest caused quite a shock in every part of the land. Whether the writings complained of were seditious or not, we think the Government would have been wise in refraining from placing Mr. Tilak on his trial It might have censured him in other ways; it might have told him what the consequences would be if he did not moderate the exuberance of his style, and this might have been quite sufficient to make him change his course, and prevent him from touching upon dangerous matters. Now the prisoner will be looked upon as a kind of martyr, and the Government will be considered as having persecuted him. We do not think this is the case. It must be acknowledged that some of his writings and speeches are of a very bad kind; that they touch upon, if they do not exactly reach sedition. Such being the case, the Government believed it was bound to take notice of these writings, and so brought the trial. There is no reason to assign sinister motives to the authorities, as some of the papers have done They, in all probability, acted conscientiously, there is no reason to suppose they did not, though they may have acted under a *mistake, a misapprehension of the real facts* of the case That the result of the trial may cause a good deal of discontent is probable, and this is very sad to contemplate. However the matter is over, and the best must be made of it. The worst part of the business is that it will probably cause a wider breach between the rulers and the ruled than is the case at present.

News and Notes.

H. H. The Maharaja of Patiala has contributed Rs 1,000 to the Queen's Statue Fund in the Punjab.

Sir Pertap Singh of Jodhpur with 32 men and three officers has joined General Lilas' Staff at Shabkadar The Maharaja of Patiala with a fairly large following has also joined the same staff.

A telegram has been received from the Hon'ble Dr. Miller, C. I. E., from Scotland, announcing his good health and conveying his good wishes to his colleagues and students in Madras.

It seems that the Agent to the Governor General at Baroda has forbidden the procession of Ganapati Melas in the city of Baroda, This is very strange. To do so, authorised by whom it is difficult to conjecture, against the social custom of the citizens of a Native Capital, is very curious and astounding It is believed that the Ruler, the Gaikwar, will not fail to take notice of this.

The year 1897 promises to be a record year. We are not yet out of the biggest famine of the country, and we are fairly in for "the biggest job" on the frontiers We had the plague which has not yet left India, and the earthquake in Bengal and Assam working havoc and the Press prosecutions which are totally demoralising officials and non officials alike The cup of misery is full to the brim.

The attempt of the proprietors and publishers of Poona papers—about a dozen of them we are told—to get their names removed from the registered declaration and to substitute the names of "straw," is an ignominious and cowardly one. The news, however, comes from a tainted source, and we may well refuse to believe a thing so derogatory to the self-respect of our brother journalists in Poona.

Mr Bal Gangadhar Tilak, says the *Bombay Gazette*, after his conviction on Tuesday, was removed to the Common Jail at Dongri. Next morning after the visit of the medical officer he was set to work Having regard to his recent illness and present weakness in consequence, the medical officer ordered him light labour only to begin with. During the day he addressed Government desiring that he might have his meals prepared by a Brahmin cook.

We are glad that Mr Romesh Chandar Dutt, C. I. E., has a new book in preparation, entitled "England and India" He endeavours therein to give a picture of Indian progress from the year 1785 to 1885 He recognises the great benefits which England has conferred on India, but he does not think British administration wholly flawless He writes of course from the point of view of the Indian people, whose views he tries to indicate in his book.

The trial of the Poona *Vaibhav* case has ended in a fiasco, The Jury were divided as five to four and the verdict consequently cannot be accepted We think it may be presumed that the excitement and irritation caused by the plague operations seemed to the Jury to justify what there was of violence of language in the articles put before them from the *Vaibhav*. Meanwhile we hope the Government will see its way to withdraw from the prosecution.

Judgment was delivered by His Lordship Mr. Justice Shephard (Mr Justice Davies concurring) in the appeal of the Tanjore Devastanam committee, against the decision of the Subordinate Judge of Tanjore restoring the Tanjore Devastanams to the management of Her Highness Umamba Bayasahiba, the surviving Senior Ranee. The appeal was dismissed, and the decree and judgment of the Sub-Judge confirmed, their Lordships holding that the plaintiff (respondent) had a heritable right to the management of the temples, her predecessor being the late Senior Ranee Kamatchee Bawee Sahib.

The massacre of the small garrison at Saragadhi has been promptly avenged. Fort Lockhart has been relieved after Saragadhi which was strongly occupied by the enemy had been carried by General Yeatman Biggs inflicting heavy loss on the enemy. Gulistan on the Samana range is being hard pressed. The enemy were found in force on Gogra Hill which was stormed by the Ghurkas with very little loss. The small loss is attributed to the covering fire of the guns and the long range volleys of the Lee Metfords. The two brigades of the Mohmand expedition were to advance, Yesterday a column of the Tochi force surprised a village and brought back 200 cattle and 10 prisoners. Sir William Lockhart goes straight to Simla from Bombay to take his instructions about the Afridi expedition

Speaking against Mr. Macneill's amendment to the Budget Resolution to extend the liberties of the British Constitution to British India, Lord George Hamilton said: "The liberties of the British Constitution did not apply, for instance, to criminal lunatics; and in India, almost without warning, an apparently peaceful population might suddenly become as dangerous as criminal lunatics, with but one object before them—to murder the class above them " What evidence is there, asks the Lahore *Tribune*, to show that the people of India in general and those of Poona particularly have become criminal

lunatics? Well, it is a very pertinent question, but a more pertinent one it will be to ask Lord George how he reconciles it to conscience to drawing £5,000 a year from the slender resources of those "criminal lunatics?"

Dean Farrar publishes a letter he received from Lord Lytton in 1890 in which he says "Morally and mentally, though not physically, thank God, I have certainly suffered much during the last four years and a half in India, but I cannot help feeling I have done permanent benefit to India Though my work has been broken off prematurely in an incomplete condition, possibly the true character of it may be fairly judged a hundred years hence but truth is both a slow and a desultory traveller, and posthumous justice is the most uncertain thing in the world" His Lordship's warmest admirers should be mightily satisfied if by that time His Lordship's name is mercifully forgotten in this country Many people do immense present mischief in the hope of benefiting posterity It would be well for all of us to remember that it is as much as many a man can do if he keeps his hand from mischief

Should Mr Tilak apologise? "No," say his intimate friends And why? First, no sedition was actually committed, and it is impossible for an honest jury to convict

Secondly Those who dabble in politics have to run such risks And Mr Tilak is determined to show that, if needs be, he is prepared to sacrifice himself for his country

Thirdly Examples of sacrifice are necessary for the regeneration of the country

In short, it is better that Mr. Tilak should be in the Andamans than that he should humiliate himself to remain in Maharashtra

The reasons why he should apologise are

(a) Innocence is no safety

(b) Apology is no humiliation, for, the fight is unequal

(c) A victory over the Government is not expedient, for, it is all-powerful Eventually it must secure a victory for itself

(d) If Mr Tilak is found guilty and punished, the whole press will be demoralized.—A B P

Local and Provincial.

The Resident —Returned from his tours to the Sivasamudram Falls and Mysore on Thursday last.

Distribution of Prizes —At Mr Arcot Narrainswamy's High School took place last Friday evening when the British Resident presided

Retirement —We hear that Messrs Rama Krishnappa, Sama Rao Khajana Narasimiah, and Ramaswamiah, four of the old and well tried servants of the Palace will shortly be made to retire on pension M. H

The S I R A Meeting —Commenced last Monday, but on account of so many troops having proceeded to the front there is a very poor show this year The proceedings are very tame, and very few visitors put in an appearance

A Tremendous Loot —Information reached here that very valuable properties worth thousands of rupees were looted last week in Subbramanyam, a place of pilgrimage in South Canara The properties looted belonged to the Temple Mutt and Chattram of the place.—M. H.

A Warning to Mr Ananda Rao —The *Mysore Standard* has thought it fit to administer a warning to Mr A Ananda Rao, our permanent Munsiff, of course with the "*best of intentions*" upon a ground more fancied than real, and apparently hints that he must either get himself transferred to some other place or see a few intimate friends of his sent out of Mysore somehow He is pleased to observe that a number of cases are being transferred from his court to that of the additional Munsiff on the ground that Mr Ananda Rao's intimate friends were concerned therein The public will thank the Editor to publish a list of such cases transferred with their numbers and the names of the parties and lawyers &c. to show that his statement is not far away from truth —M H

A Wife Murder by a Brahmin —One of the cases tried by the Sessions Judge at Hassan during the present Sessions was the most unfortunate one of a wife murder by a Brahmin, rather learned in Sanskrit The prisoner while confessing his guilt interested the Judge to pass on him the extreme penalty of the law as nothing short of that would save him from the effects of the dreadful sin he committed It would appear the prisoner would not give out the full motive for murder for fear that he might escape sentence of death The popular belief is that the poor woman who was advanced 6 months in pregnancy was never wanting in fidelity to the husband and the cause of the murder was a slight disobedience and impudence on her part —M H.

The Mysore Gazette.

Bangalore, Thursday, 2th September 1897

Notifications by the Government of Mysore

GENERAL AND REVENUE

No 3208—G F 92 92, dated 9th Sep 1897

Under Article 172 of the Mysore Service Regulations, Mr D A Choksi, L M & S Civil Surgeon, Bangalore, is granted casual leave of absence for fifteen days, with effect from such date as he may avail himself of the same

No 3283—J 471, dated 10th Sept, 1897

The leave without allowances granted to Mr D Devaraj Arus, Superintendent of Police, Bangalore district in Government Notification No 1341—J 1510, dated 15th June 1897, is further extended by three months, with effect from the 1st September 1897

No 3323—Mis F 151 92, dated 11th Sept 97

The privilege leave of absence for one month granted to Miss R Govindarajulu, Assistant Surgeon, in Notification No 2809—Mis F 153 92 dated the 25th August 1897, is hereby extended by seven days

No 3322—Mis 607 dated, 11th Sept 1897

Under Article 188 of the Mysore Service Regulations, Mr H H Sparks, Superintendent Central Jail, Government Press and Stationery, is granted three months privilege leave of absence from 6th October 1897 or from such other date as he may avail himself of the same

Mr D. A Choksi, Civil Surgeon, Bangalore, is appointed to act as Superintendent of the Central Jail in addition to his own duties during Mr Sparkes' absence on leave or until further orders

No 2751—H F 27 95, dated 10th Sep 1897

Mr Y. Sitaramaiya, Assistant Conservator of Forests, on Special Duty, Kadur district is temporarily transferred to the Shimoga district, for Special Duty under the immediate orders of the Deputy Commissioner

Extracts.

ANGLO INDIAN JOURNALS AND INDIAN WITNESSES BEFORE THE WELBY COMMISSION

Whether the accounts given by our Anglo Indian contemporaries of the evidence of the native witnesses before the Welby Commission were fair and accurate or not, is now an old question which we should have gladly allowed to sleep, but for the extremely untoward manner in which one contemporary has thought it within its province to speak of a gentleman of Dr. Bhalchandra's standing in the ..... But, probably these are times when ordinary courtesy is at discount in certain quarters Our contemporaries indeed have a ground for complaint against those who charged them with "garbling" the reports, and they may by a dilemma call them idiots who called them by an innuendo dishonest But, they are certainly not such saints as they take credit for being We have now the official reports of the evidences of the Indian witnesses of which not even an Anglo Indian journalist can doubt the accuracy Even an "idiot" could compare them with the reports which with commendable enterprise our Anglo Indian contemporaries treated their readers with, and safely come to the unavoidable conclusion that the latter were imperfect and mutilated enough to be called unfair. Now, who is to blame for this? There was a process of selection at the hands of the reporters, let us admit ungrudgingly We should like to know who laid down the principles of the selection, in pursuance of which only those portions of the evidences were given which showed the witnesses to disadvantage? Whoever was responsible for this cutting and pruning process, and certainly it was, and legally and morally the burden of the omission on the head of the journals that gave publicity to it We will leave it to them to find proper appellation by dilemma or otherwise, for this Meanwhile, our greatest regret is that in matters of importance like this Indian journalism should be dependent only on correspondents of European papers.—*Indian Spectator.*

NOTICE.

ಇದರಿಂದ ಸಮಸ್ತ ಜನರಿಗೂ ತಿಳಿಸುವದೇ ನೆಂದರೆ

೧೮೯೭ನೇ ಇಸವಿ ಆಗಸ್ಟ ೨೭ ನೇ ತಾರೀಖಿನ ರಾತ್ರಿ, ಜಹಾಗೀರ ತಾಲ್ಲೂಕು ಶೃಂಗೇರಿಯಲ್ಲಿ ಪೆಟ್ಟಿಗೆಯಲ್ಲಿಟ್ಟಿದ್ದ ಕೆಲವು ನಗದು ಮೊಬಲಗು ಮತ್ತು ಇದರ ಕೆಳಸಲ್ಪಡುವ ನಂಬರಿಗಳುಳ್ಳ ದರ ನೂರು ರೂಪಾಯಿಗಳ ಬಾಬತು ಮದರಾಸ ಸರ್ಕಾರ ಕರೆನ್ಸಿ ನೋಟುಗಳು ಐದು ಸಹ ಕಳವಾಗಿರುವದರಿಂದ ಅವುಗಳನ್ನು ಪತ್ತೆ ಮಾಡಿ ಕೊಟ್ಟವರಿಗೆ ಸಂಸ್ಥಾನದಿಂದ ಒಂದು ನೂರು ರೂಪಾಯಿಗಳ ಇನಾಂ ಕೊಡಲ್ಪಡುವುದು

ನೋಟುಗಳ ನಂಬರಿಗಳು.— 00100—01073—12164—12160—12159.

ಶ್ರೀಕಂಠಶಾಸ್ತ್ರಿ,
ಏಜಂಟ

ಕರ್ನಾಟಕ ಪ್ರಕಾಶಿಕಾ.

೧೮೯೭ನೇ ಇಸವಿ ಸೆಪ್ಟಂಬರ ತಾ॥ ೨೦ನೇ ಸೋಮವಾರ

ಮೆ॥ ತಿಲಕಯವರ ದಂಡನೆ.

ಪುನೆಯ ಮರಾಟಾ ಮತ್ತು ಕೇಸರಿ ಎಂಬ ಪತ್ರಿಕೆಗಳ ಎಡಿಟರ ಮತ್ತು ಪ್ರೊಪ್ರೈಟರಾದ ಮೆ॥ ತಿಲಕ ಎಂಬವರು, ಪ್ರಜೆಗಳಿಗೆ ಗವರ್ನಮೆಂಟಿನವರಲ್ಲಿ ಅಪ್ರೀತಿಯುಂಟಾಗಿ, ಅವರಲ್ಲಿ ರಾಜಭಕ್ತಿಯೂ, ನಂಬಿಕೆಯೂ ಸಡಲಿ ಹೋಗುವದಕ್ಕೆ ಕಾರಣಭೂತಗಳಾದ ಲೇಖನಗಳು ಮೃ ಪತ್ರಿಕೆಗಳಲ್ಲಿ ಪದೇಪದೇ ಪ್ರಕಟಿಸುತ ಬಂದರೆಂಬದಾಗಿ ಗವರ್ನಮೆಂಟ ಹುಕುಂ ಅನುಸರಿಸಿ ಪೋಲೀಸಿನವರಿಂದ ಆಪಾದಿಸಲ್ಪಟ್ಟು ಮ್ಯಾಜಿಸ್ಟ್ರೇಟರ ಮುಂದೆ ಪ್ರಥಮ ವಿಚಾರಣೆ ನಡೆದು ಮುಂಬೈ ಹೈಕೋರ್ಟ ಸೆಷನ ವಿಚಾರಣೆಯಬಗ್ಗೆ ಕಮಿಟ ಮಾಡಲ್ಪಟ್ಟಿದ್ದರಷ್ಟೆ ಸದರೀ ವಿಚಾರಣೆಯು ನಿಷ್ಕೃಷ್ಟವಾದ ಕಾಲದಲ್ಲಿ ಪ್ರಾರಂಭವಾಗಿ ಉಭಯಪಕ್ಷಗಳ ತರಫ ಸಾಕ್ಷಿಗಳ ವಿಚಾರಣೆಯೂ, ಅವರವರ ಕಕ್ಷಿಗಳಿಗೆ ಪೋಷಕಗಳಾದ ಕಾಗದ ಪತ್ರಗಳ ವಿಮರ್ಶೆಯೂ, ಅವುಗಳಲ್ಲಿ ಪ್ರಯೋಗಿಸಲ್ಪಟ್ಟಿರುವ ಶಬ್ದಗಳ ಮತ್ತು ವಾಕ್ಯಗಳ ಅರ್ಥಗಳಂ ಕುರಿತ ವಿಚಾರವೂ, ಇವುಗಳ ಆಧಾರದ ಮೇಲೆ ಗವರ್ನಮೆಂಟ ತರಫ ಅಡ್ವೋಕೇಟ ಜನರಲವರೂ, ಅಪರಾಧಿಯಕಡೆ ಲಾಯರೂ ಜೂರಿಗಳನ್ನುದ್ದೇಶಿಸಿ ಈ ಮೊಕದ್ದಮೆಯ ತಾತ್ವಿಕ ಸ್ವಭಾವವಂ ಕುರಿತು ಮಾಡಿದ ವಿಸ್ತಾರವಾದ ಉಪನ್ಯಾಸವೂ ಈ ತಿಂಗಳ ೧೩ನೇ ತಾರೀಖಿನಲ್ಲಿ ಪೂರೈಸಿಯಾಗಿ, ಜೂರಿಗೆ ನಿವೇದಿಸಲ್ಪಟ್ಟಿದ್ದ ಒಂಬತ್ತುಮಂದಿ ಜೂರಿ, ಅಂದರೆ ಸಭ್ಯರಲ್ಲಿ ಆರುಮಂದಿ ಮೆ॥ ತಿಲಕಯವರಮೇಲೆ ಆಪಾದಿಸಲ್ಪಟ್ಟ ರಾಜದ್ರೋಹಾಪರಾಧಕ್ಕೆ ಅವರು ಪಾತ್ರರೆಂದು ಕೊಟ್ಟ ಅಭಿಪ್ರಾಯವಂ ಜಡ್ಜಿಯವರು ಅಂಗೀಕರಿಸಿ ಮೆ॥ ತಿಲಕರವರಿಗೆ ಹದಿನೆಂಟು ತಿಂಗಳ ಕಠಿಣ ಸಜಾ ವಿಧಿಸಿ, ಎರಡನೆಯ ಅಪರಾಧಿಯಾದ ಬಾಲ ಎಂಬವರನ್ನು ಖುಲಾಸೆ ಮಾಡಿದರು. ಈ ಮೊಕದ್ದಮೆಯ ಫಲಿತಾಂಶವನ್ನು ತಿಳಿದುಕೊಳ್ಳುವದಕ್ಕಾಗಿ ಕೋರ್ಟನಲ್ಲೂ ಅದರ ಆವರಣದೊಳಗೂ, ಅಲ್ಲಿಯೂ ಸ್ಥಳ ಸಂಕೋಚದಿಂದ ಅದರ ಹೊರಗಡೆಯಲ್ಲೂ ಕೇವಲ ಚಿಂತೆಯೊಡನೆ ಕಾದಿದ್ದ ಅನೇಕ ಸಹಸ್ರ ನೇಟಿವ ಜನರು, ಮೆ॥ ತಿಲಕಯವರು ದಂಡಿಸಲ್ಪಟ್ಟರೆಂಬ ವಾರ್ತೆಯಂ ಕೇಳಿದ ಕೂಡಲೆ, ಕಾಲವೈಪರೀತ್ಯದಮೂಲಕ ಅವರಿಗೆ ಪ್ರಾಪ್ತವಾದ ದುರ್ದಶೆಯಂ ಕುರಿತು ಚಿಂತಿಸಿ ಕಣ್ಣೀರು ಸುರಿಯುತ ಹೊರಟುಹೋದರು ಯೂರೋಪಿಯರ್ ಮಂಡಲಿಗೆ ಸೇರಿದವರೆಲ್ಲರು ಸಂತೋಷ ಪಾರವಶ್ಯತೆಯಿಂದ ಕರತಾಳನದೊಡನೆ ಜಡ್ಜಿಯವರ ನ್ಯಾಯನಿರ್ಣಯಶಕ್ತಿಯ ಪ್ರಶಂಸಾ ಪೂರ್ವಕ ತೆರಳಿದರು. ಅದೇದಿನ ರಾತ್ರಿ ತಂತಿ ಮೂಲಕ ಈ ವರ್ತಮಾನವು ಪುನೆಗೆ ತಿಳಿದುಬಂದ ಕೂಡಲೆ ಅಲ್ಲಿನ ಜನರಲ್ಲಿ ಬಾಲವೃದ್ಧರು ತಮ್ಮ ಸರ್ವಸ್ವವಂ ಕಳೆದುಕೊಂಡಂತೆ ದುಃಖಿಸುವದಕ್ಕೆ ಪ್ರಾರಂಭಿಸಿದರು. ಅಲ್ಲಿಮಾತ್ರವಲ್ಲದೆ ಈ ಇಂಡ್ಯಾದೇಶದೊಳು ಆಸೇತು ಹಿಮಾಚಲದ ವರೆಗೆ ನೇಟಿವ ಪ್ರಜಾ ಸಮುದಾಯದಲ್ಲಿ ಈಬಗ್ಗೆ ಸಂಕಟ ಪಡದೆ ಇರುವ ಪ್ರಾಣಿಯೇ ಇಲ್ಲವೆಂದು ಧಾರಾಳವಾಗಿ ಹೇಳಬಹುದಾಗಿದೆ

ಈ ಮೊಕದ್ದಮೆಯ ಪ್ರಾರಂಭದ ಮೊದಲು ಅದರ ಪರ್ಯವಸಾನ ವಿಷಯದಲ್ಲಿ ನಮಗುಂಟಾಗಿದ್ದ ಅಭಿಪ್ರಾಯವನ್ನು ಸೂಕ್ಷ್ಮವಾಗಿ ಹಿಂದಿನ ಪತ್ರಿಕೆಯ ಮೂಲಕ ತಿಳಿಸಿದ್ದೆವು ಅದು ಈಗ ಕಾರ್ಯತಃ ಯೆಲ್ಲರ ಅನುಭವ ಗೋಚರವಾಗದೆ ಹೋಗಲಿಲ್ಲವು. ಪ್ಲೇಗ ಆಫಸರಗಳಾಗಿದ್ದ ಮಿ॥ ರಾಂಡ ಮತ್ತು ಲೆಫ್ಟಿನೆಂಟ ಐರಿಸ್ಟ ಎಂಬವರು ಪುನೆಯಲ್ಲಿ ಬಂದೂಕಿನಿಂದ ಹೊಡೆಯಲ್ಪಟ್ಟದ್ದು ಮೊದಲು ಸಾಮಾನ್ಯವಾಗಿ ನೇಟಿವಜನರ, ವಿಶೇಷತಃ ಪುನೆ ನೇಟಿವ ಜನರ ವಿಷಯದಲ್ಲಿ ಯೂರೋಪಿಯರ್ ಜನರಿಗುಂಟಾದ ಅಂತರವಾದ ದ್ವೇಷದ ಮೂಲಕ, ಇಂಡಿಯಾ ಸ್ಟೇಟ ಸೆಕ್ರಿಟರಿಯ ಮೊದಲು ಮುಂಬೈ ಮತ್ತು ಇಂಡ್ಯಾಗವರ್ನಮೆಂಟನವರಿಗೆ ದೊಡ್ಡ ದೊಡ್ಡ ಅಧಿಕಾರಿಗಳೆಲ್ಲರು ಸೇರಿ ಪೂರ್ವಭಾವಿಯಾಗಿ ಯೋಚಿಸಿ, ಬದ್ಧ ಸಂಕಲ್ಪ ಪೂರ್ವಕ ಪ್ರಾರಂಭಿಸಿದ ಪ್ರಸಕ್ತ ಮೊಕದ್ದಮೆಯಲ್ಲಿ ಅಧಿಕಾರಿಗಳು ಅವಲಂಬಿಸಿದ ಕ್ರಮಕ್ಕಿಂತಲು ಅನ್ಯಥಾ ನಾವು ನಿರೀಕ್ಷಿಸುವದಕ್ಕೆ ನಮಗೆ ಹ್ಯಾಗೆ ಸಾಧ್ಯವಾಗಿತು? ಇದಕ್ಕೆ ನಿದರ್ಶನ ರೂಪವಾಗಿ ಇಲ್ಲಿ ಅಪೀಲಿಗೆ ಅವಕಾಶವಿಲ್ಲದಂತೆ ಈ ಮೊಕದ್ದಮೆಯನ್ನು ಹೈಕೋರ್ಟ ಸೆಷನ ವಿಚಾರಣೆಗೆ ಗುರಿಮಾಡಿದ್ದೊಂದು, ಒಂಬತ್ತುಮಂದಿ ಜೂರಿಗಳಲ್ಲಿ ಆರುಮಂದಿ ಯೂರೋಪಿಯರ್‌ರನ್ನು ಚುನಾಯಿಸಿದ್ದೊಂದು, ಮೆ॥ ತಿಲಕಯವರ ಲೇಖನದಲ್ಲಿ ಪ್ರಯೋಗಿಸಲ್ಪಟ್ಟಿರುವ ಶಬ್ದಗಳಿಗೆ ಗ್ರಂಥಾಪರ ಸಂಪ್ರದಾಯಾನುಸಾರ ಅರ್ಥ ಹೇಳುವದಕ್ಕೆ ಶಕ್ತರಾದ ಮಹಾರಾಷ್ಟ್ರ ಭಾಷಾಜ್ಞಾನವುಳ್ಳ ಪಂಡಿತರುಗಳನ್ನು ಕರೆಯಿಸಿ ವಿಚಾರಿಸಿ ಮಾಡುವದಕ್ಕೆ ಅವಕಾಶ ಕೊಡದೆ ಹೋದದ್ದೊಂದು, ಇತ್ಯಾದಿ ಬಹುವಿಧ ಕಾರಣಗಳ ದೆಸೆಯಿಂದ ಈ ಮೊಕದ್ದಮೆಯ ವಿಷಯದಲ್ಲಿ ಗವರ್ನಮೆಂಟಿನವರ ಅಂತರವಾದ ಉದ್ದೇಶವು ಈ ವಿವಾದವೆಂದು ವ್ಯಕ್ತವಾಗದೆ ಹೋಗಲಿಲ್ಲವು. ಮಿಸ್ಟರ ತಿಲಕಯವರು ವಿದ್ಯಾವಂತರು, ಅನೇಕ ಸಂವತ್ಸರಗಳ ಕಾಲದ ಮೊದಲು ಒಂದಕ್ಕೆರಡು ಪತ್ರಿಕೆಗಳಂ ಪ್ರಕಟಿಸುತ ಅದರಲ್ಲಿ ಪೂರ್ಣವಾದ ಜ್ಞಾನ ಮತ್ತು ಅನುಭವ ವೃದ್ಧಿಹೊಂದಿದವರಲ್ಲಿ ಸಂಶಯ ಲೇಶವೂ ಇರಲಾರದು ಅನೇಕ ಸಂವತ್ಸರಗಳ ಹಿಂದೆ ಮೊದಲು ಪ್ರಕಟಿಸಲ್ಪಡುತಿರುವ ಅವರ ಪತ್ರಿಕೆಗಳ ಲೇಖನದಲ್ಲಿ ಪೋಷ್ಯಕ್ಕೆ ಗವರ್ನಮೆಂಟಿಗೆ ಇದುವರೆಗೆ ಇಲ್ಲದ ಅವಶ್ಯಕತೆ ಮತ್ತು ಕಾರಣ ಈಗೆನಾಯಿತೊ ಮೆ॥ ತಿಲಕಯವರ ಲೇಖನದಲ್ಲಿ ಗವರ್ನಮೆಂಟಿನವರು ಹೇಳುವ ದೋಷವು ಒಂದು ಭಾಗದಲ್ಲಿ ದೋಷ ಕಂಡುಬಂದಿರಬಹುದೆಂದು ನಂಬಿದಾಗ್ಯೂ ಇಂಡ್ಯಾ ಗವರ್ನಮೆಂಟಿನವರು ಇಂಗ್ಲಿಷ ಜನರ ಪ್ರಯೋಜನಕ್ಕೆ ಎಷ್ಟೊಂದು ಬಾಧಕಾರಿಯಾದ ಕ್ರೂರವಾದ ಕಾರ್ಯವಂ ಮಾಡಿರುವ ಸಂದರ್ಭಗಳಲ್ಲೆಲ್ಲ ಅವರ ವಿಷಯದಲ್ಲಿ ಸದರೀ ಜನರಿಂದ ಈ ದೇಶದೊಳು ಪ್ರಕಟಸಲ್ಪಡುವ ಪತ್ರಿಕೆಗಳಲ್ಲಿ ಪ್ರಯೋಗಿಸುವ ಅವಾಚ್ಯಗಳಾದ ಶಬ್ದಗಳಿಗಿಂತಲು ಕಠಿಣಗಳಾದ ಶಬ್ದಗಳನ್ನು ಮೆ॥ ತಿಲಕಯವರು ತಮ್ಮ ಲೇಖನದಲ್ಲಿ ಪ್ರಯೋಗಿಸಿರುವರೆಂದು ನಾವು ನಂಬಲಾರೆವು, ಕೆಲವು ನೇಟಿವ ವೃತ್ತಾಂತ ಪತ್ರಿಕೆಗಳ ಲೇಖನಗಳಲ್ಲಿ ದೋಷಗಳಿಲ್ಲವೆಂದು ನಾವು ಹೇಳಲಾರೆವು, ಆದರೂ ಅಂತ ದೋಷಗಳಂ ಒಂದೆರಡು ಸಂದರ್ಭಗಳಲ್ಲಿ ಅವರಿಗೆ ತೋರಿಸಿ ಮುಂದೆ ಕ್ರಮವಹಿಸಿಕೊಳ್ಳುವಂತೆ ಅವರನ್ನೆಚ್ಚರಿಸಿ, ಅದರಮೇಲೂ ಅವರು ಉಚಿತಮಾರ್ಗವನ್ನವಲಂಬಿಸದೆ ಹೋಗುವ ಪಕ್ಷದಲ್ಲಿ ಗವರ್ನಮೆಂಟನವರು ಅಂತವರಂ ದಂಡಿಸುವ ವಿಷಯದಲ್ಲಿ ಯಾರ ಆಕ್ಷೇಪಣೆಯೂ ಇರಲಾರದು. ಇಂತ ಉಚಿತ ಮಾರ್ಗವಂ ಬಿಟ್ಟು ನೇಟಿವ ವೃತ್ತಾಂತ ಪತ್ರಿಕಾ ಲೇಖಕರನ್ನು ಬೊಬ್ಬರನ್ನಾಗಿ ಹಿಡದರಿಸಿ ಒಂದೆರಡು ದಿನಗಳಲ್ಲಿ ನಾಮಮಾತ್ರಕ್ಕೆ ಅವರ ಬರ್ಯಾಸ್ತಿಯಂ ಪ್ರೂತಿಮಾಡಿ ಮನಸ್ಸೀ ಅವರನ್ನೆಲ್ಲ ದಂಡಿಸುವದಕ್ಕೆ ಪ್ರಾರಂಭಿಸಿದಮೇಲೆ ಇನ್ನು ಸ್ವಲ್ಪ ದಿನಗಳಲ್ಲಿ ಸಾಮಾನ್ಯವಾಗಿ ನೇಟಿವ ವೃತ್ತಾಂತಪತ್ರಿಕೆಗಳು ಮುಖ್ಯವಾಗಿ ದೇಶಭಾಷಾ ವೃತ್ತಾಂತ ಪತ್ರಿಕೆಗಳು ನಾಮಮಾತ್ರಾವಶಿಷ್ಟವಾಗುವದರಲ್ಲಿ ಸ್ವಲ್ಪವೂ ಸಂದೇಹವಿರಲಾರದು.

ಈ ವೆಸ್ಟ್ ಮಿನಿಸ್ಟರ್ ಇಂಡಿಯನ್ ನ್ಯಾಶನಲ್ ಕಾಂಗ್ರೆಸ್ ಎಂಬ ಸಂಸ್ಥೆ. ಇಂದು ಯೋಗ್ಯವಾಗಿಯ್ಯ ಪ್ರತಿ ಸಂವತ್ಸರದಲ್ಲೂ ಅವರು ಒಂದೊಂದು ಕಡೆ ಸಭೆ ಸೇರಿ, ಇಂಗ್ಲೀಷ್ ಜನರಿಗೆ ಸಮಾನವಾಗಿ ತಮಗೂ ಅಧಿಕಾರಗಳಂ ಕೊಡಬೇಕು, ಅವರಿಗಿರುವ ಸ್ವಾತಂತ್ರ್ಯಗಳನ್ನೆಲ್ಲ ತಮಗೂ ಉಂಟುಮಾಡಬೇಕೆಂದು ರೆಪ್ರೆಸೆಂಟೇಷನ್‌ಗಳಂ ಮಾಡಿ ಗವರ್ನಮೆಂಟಿಗೆ ಕಳುಹಿಸುವದಕ್ಕೆ ಪ್ರಾರಂಭಿಸಿದ್ದು ಮೊದಲು ಇಂಗ್ಲೀಷ್ ಜನರಲ್ಲಿ ಕೇವಲ ಉದಾರಮನಸ್ಕರಾದ ಕೆಲವರಿಗೆ ವಿನಾ ಮಿಕ್ಕವರಿಗೆಲ್ಲ ನೇಟಿವ್ ಜನರಮೇಲೆ ಅಂತರವಾದ ಅಸೂಯೆ ಉಂಟಾಗಿ, ಸರ್ವ ವಿಷಯದಲ್ಲೂ ಅವರ ಪ್ರಯೋಜನಕ್ಕೆ ಭಂಜಕಗಳಾದ ಕಾರ್ಯಗಳಂ ಮಾಡುವದರಲ್ಲಿ ಬದ್ಧ ಸಂಕಲ್ಪ ವುಳ್ಳವರಾಗಿರುತ್ತಾರೆಂಬುವದಕ್ಕೆ ನಿದರ್ಶನಗಳು ಆಗಿಂದಾಗ್ಯೆ ಉಂಟಾಗುವದು ಯೋಗ್ಯವಾದ ಸಂಗತಿ.

Occasional Notes
ನೈಮಿತ್ತಿಕವಿಷಯನ್ಯಾಸ

ಕಪ್ತೂರ್ತಲಾ ಮಹಾರಾಜರವರು ತಮ್ಮ ಕೀರ್ತಿ ರಾಜಧಾನಿಯಾದ ಕಪೂರ್ತಲಾಪಟ್ಟಣಕ್ಕೆ ಹಿಂತಿರುಗಿ ಹೋಗಿ ಸೇರಿರುತ್ತಾರೆ.

ಧಾರ್ವಾಡದ (ವೈಭವ) ವೆಂಬ ಪತ್ರಿಕೆಯ ಕಾರ್ಯವನ್ನು ೩೮ ಕುಳ್ಳಿನ ರದಿನಿಂದ ಪ್ರೋಲೀಸಿನವರು ರಕ್ಷಣೆಯಿಂದ ಒಯ್ದು ನಿಶ್ಚಿತ ಕೇಳಿ ಬುಕ್ಕು ಮುಂತಾದವುಗಳನ್ನು ಜಪ್ತು ಮಾಡಿ ತೆಗೆದುಕೊಂಡು ಹೋದಂತೆ ತಿಳಿಯುಬರುತ್ತದೆ.

ಜೋಧಪುರದ ಮಹಾರಾಜರವರಾದ ಸರ್ ಪ್ರತಾಪಸಿಂಗರವರ ಮತ್ತು ಮಹಾರಾಜರವರೂ ಕೆಲವರು ಸೈನಿಕರೊಡನೆ ಯುದ್ಧರಂಗದಲ್ಲಿ ಜನರಲ್ ಎಲ್ಲೆಸ್ ಯವರ ಸೇನೆಯು ಸೇರಿದರೆಂದು ತಂತಿವರ್ತಮಾನ ಬಂದಿರುತ್ತದೆ.

ದಕ್ಷಿಣಕನಡಾ ದೇಶಕ್ಕೆ ಸೇರಿದ ಸುಬ್ರಹ್ಮಣ್ಯವೆಂಬ ಸ್ಥಳದ ದೇವಸ್ಥಾನದಲ್ಲಿ ಒಬ್ಬರು ಅನೇಕ ಸಹಸ್ರ ರೂಪಾಯಿ ಗಳ ಕ್ರಯ ಬಾಳುವ ಹಾದಾದ ಪದಾರ್ಥಗಳು ಕಳುವಾಗಿ ಹೋದಂತೆ ವರ್ತಮಾನ ಬಂದಿರುತ್ತದೆ.

ಮೆ॥ ಬಾಲಗಂಗಾಧರ ತಿಲಕರವರು ದಂಡನ ಕ್ಕೆ ಪಟ್ಟು ವೆಮಿಲಿಗೆ ಕಳುಹಿಸಿ ಪ್ರತ್ಯರ್ಥಿ ಯ ಸಭೆಯವರು ಬ್ರಾಹ್ಮಣರಿಂದ ಅಧಿಕ ಮಾಡಿ ಕರೆನಕ್ಕೊಳ್ಳುವದಕ್ಕೆ ಒಪ್ಪಿಕೆ ಆಗಬೇಕೆಂದು ಗವರ್ನಮೆಂಟಿಗೆ ( ) ಬರೆದುಕೊಂಡಿರುತ್ತಾರೆ.

ದಕ್ಷಿಣ ಆಫ್ರಿಕದ ಕೇಪ್ ಕಾಲನಿ ಎಂಬ ಸೀಮೆಯಲ್ಲಿ ನೇಟಿವ್ (ಇಂಡಿಯನ್) ವರ್ತಕರು ತಮ್ಮ ಸಾಮಾನುಗಳನ್ನು ಮಾರುವದಕ್ಕೆ ಪ್ರತಿಬಂಧ ಕಗಳು ವಿಧಿಸಲಾಗುವವು ಎಂದು ಕೇಳುತ್ತೇವೆ. ಸದರೀ ಸ್ಥಳದ ಜನರ ಸ್ನೇಹದಿಂದ ಅಲ್ಲಿ ಮೇಲೆ ಹೇಳಲ್ಪಟ್ಟ ಪ್ರತಿಬಂಧಕಗಳು ಉಪಯುಕ್ತವಾಗಿರುವವು.

ಈಗ್ಗೆ ಕೆಲವು ದಿನಗಳ ಕೆಳಗೆ ಮದರಾಸು ಮುಂಬೈ ಬಂಗಾಳ ಪ್ರೆಸಿಡೆನ್ಸಿಗಳಿಗೆ ಸೇರಿದ ಸೀಮೆ ಪ್ರದೇಶಗಳಲ್ಲಿ ಸಮೃದ್ಧಿಯಾಗಿ ವರ್ಷ ಬಿದ್ದುದರಿಂದ ಎರಡನೇ ರಿಲೀಫ್ ಕಾಮಗಾರಿಗಳಲ್ಲಿ ಕೂಲಿಮಾಡಿ ಜೀವಿಸುತ್ತಿದ್ದ ಕ್ಷಾಮಪೀಡಿತ ಜನರು ತಮ್ಮ ಜೀವಯಾತ್ರೆ ಕೆಲಸಗಳಿಗೆ ಹೋದ ಕಾರಣ ಸದರೀ ಕಾಮಗಾರಿಗಳಲ್ಲಿ ೩,೦೦,೦೦೦ ಮಂದಿ ಕಡಿಮೆಯಾದರು.

ಪುನೆ ವೈಭವ ಪತ್ರಿಕೆಯ ಎಡಿಟರ ವ ಪ್ರೊಪ್ರೈಟರು ದಸ್ತಗಿರಿ ಮಾಡಲ್ಪಟ್ಟು ಪ್ರಥಮ ವಿಚಾರಣೆ ನಡೆದಮೇಲೆ ಮುಂಬೈ ಹೈಕೋರ್ಟಿನ ಕೇಸ್ ಕಮಿಟ್ಟು ಮಾಡಲ್ಪಟ್ಟಿದ್ದರಷ್ಟೆ. ಸದರೀ ವಿಚಾರಣೆಯು ಕಳೆದ ವಾರದಲ್ಲಿ ಪ್ರಾರಂಭವಾಗಿ ಆ ಬಗ್ಗೆ ಯೋಗ್ಯವಾಗಿದ್ದ ಜ್ಯೂರಿ, ಅಂದರೆ ಪಂಚಾಯತದ ಸಭೆಯ ಮೆಂಬರುಗಳಲ್ಲಿ ಐದರು ಒಂದುವಿಧ ಅಭಿಪ್ರಾಯವನ್ನೂ ನಾಲ್ವರು ಒಂದುವಿಧ ಅಭಿಪ್ರಾಯವನ್ನೂ ಕೊಟ್ಟರಾಗಿ, ಅದರಮೇಲೆ ಜೈಸ್ತಿಸ್ ಕೊಡುವದಕ್ಕೆ ಕಾನೂನು ಅನುಸರಿಸಿ ಅವಕಾಶವಿಲ್ಲದೆ ಹೋಗಲು ಮರಳಿ ಬೇರೆ ಪಂಚಾಯತ ಸಭೆಯಂಮೂಲಕ ರಮ್ಮಣಿ ಮೊಕದ್ದಮೆಯನ್ನು ಪುನರ್ವಿಚಾರಣೆ ಮಾಡಬೇಕಾಯಿತು.

ಮೆ॥ ತಿಲಕರವರಮೇಲೆ ಹರಲ್ಪಟ್ಟಿರುವ ಮೊಕದ್ದಮೆಯ ವ್ಯಾಪ್ತಿಯು ಪುನೆಯಿಂದ ಕ್ರಮಕ್ರಮವಾಗಿ ಧಾರ್ವಾಡದ ವರೆಗೆ ವ್ಯಾಪಿಸಿದಂತೆ ಕಾಣುತ್ತದೆ. ಧಾರ್ವಾಡದಲ್ಲಿರುವ ಮೆ॥ ಕೃಷ್ಣಾಜಿ ಆಬಾಜಿ ಗುರೂಜಿ ಎಂಬವರ ಕೈಬರಹದ ಕಾಗದ ಒಂದು ಪುನೆಯಲ್ಲಿ ಮೆ॥ ತಿಲಕರವರ ಮನೆಯಲ್ಲಿ ಸಿಕ್ಕಿದ್ದರಿಂದ ಅವರಿಗೂ ಇವರಿಗೂ ಕಾಗದಪತ್ರಗಳು ವಿಶೇಷವಾಗಿ ನಡೆಯುತ್ತಿರಬಹುದೆಂದು ಊಹಿಸಿ ಅದರಮೇಲೆ ಮೆ॥ ಕೃಷ್ಣಾಜಿ ಆಬಾಜಿ ಎಂಬವರ ಮನೆಯನ್ನು ಪೋಲೀಸಿನವರು ಈಚಿಗೆ ಝಡತಿ ಮಾಡಿದರು, ಪರಂತು ಅಲ್ಲಿ ಯಾವದೂ ಸಿಕ್ಕದೆಹೋದುದರಿಂದ ಪೋಲೀಸಿನವರು ಭಗ್ನಮನಸ್ಕರಾಗಿ ಹೊರಟುಹೋದರೆಂದು ತಿಳಿಯುಬರುತ್ತದೆ.

ರಾಮಪುರದ ಸಂಸ್ಥಾನಕ್ಕೆ ಸೇರಿದ ದೇವಸ್ಥಾನಗಳ ವಿಚಾರಣಾಧಿಕಾರದ ವಿಷಯದಲ್ಲಿ ಈ ಗಜಿ ವಿಸಿರುವ ಪ್ರಶ್ನೆ ಮಹಾರಾಣಿಯವರ ಗವರ್ನರ ಜನರಲ್ಲಿನ ಕಮಿಟಿಯವರಿಗೂ ಕಳಿಸಲ್ಪಟ್ಟಿದ್ದರೆಂದು ಕನಿಂಬಿಯವರಿಂದ ಬಂದಿಯವರು ಅಲ್ಲಿನ ಸಬಾರ್ಡಿನೇಟ ಕೋರ್ಟಿನಲ್ಲಿ ಫಿರ್ಯಾದು ಮಾಡಿ ಅಲ್ಲಿ ಅವರ ಪರ ಸನ್ನಿಸಲಾಯಿತು ಅದರ ಮೇಲೆ ಕಮಿಟಿಯವರು ಮದರಾಸು ಹೈಕೋರ್ಟಿನಲ್ಲಿ ಅಪೀಲು ಮಾಡಿದ್ದರು. ಸದರೀ ಮೊಕದ್ದಮೆಯು ಆಚೀಚಾರದಲ್ಲಿ ವಿಚಾರಣೆಯಾಗಿ, ಜಡ್ಜಿ ರವರು ಪಂಚಾಯತವರ್ಗವಾಗಿ ದೇವಸ್ಥಾನಗಳ ವಿಚಾರಣಾಧಿಕಾರಕ್ಕೆ ಬಾಧ್ಯಸ್ಥರೆಂಬದಾಗಿ ಜಡ್ಜಿಗಳು ಅಭಿಪ್ರಾಯಪಟ್ಟು ಕೆಳಕೋರ್ಟಿನವರ ಫೈಸಲನ್ನು ಕಾಯಂಮಾಡಿ ಅಪೀಲನ್ನು ವಜಾ ಮಾಡಿದರು.

ಸೈಯಾಂ ದೇಶದ ಅರಸರವರು ಫ್ರೆಂಚ್ ದೇಶದ ರಾಜಧಾನಿಯಾದ ಪೇರಿಸ್ ಪಟ್ಟಣಕ್ಕೆ ಹೋದರು. ಅಲ್ಲಿನ ರಾಜ್ಯಾಡಳಿತವ ನಡೆಸುವದಕ್ಕಾಗಿ ಯೋಗ್ಯವಾಗಿರುವ ಸಭೆಯ ಪ್ರಸಿಡೆಂಟರವರೂ ಮಂತ್ರಿಮಂಡಲಿಯವರೂ ರೆಮಿಲ್ವೆ ಸ್ಟೇಷನ್ನಿನಲ್ಲಿ ಹಾಜರಿದ್ದು ಅರಸರವರನ್ನು ಉಚಿತ ಮರ್ಯಾದೆಗಳೊಡನೆ ಬರಮಾಡಿಕೊಂಡು ಅವರಿಗಾಗಿ ನಿರ್ದಿಷ್ಟವಾಗಿದ್ದ ಬೋಟ್ಯಾಲಿಗೆ ಕರೆದುಕೊಂಡು ಹೋದರು. ಮರುದಿನ ತಮ್ಮ ಕಡೆ ಯಿಂದ ಸಮಾನ ಮಂದಾಗಿ ಪರರ ಸಮಾರಂಭ ಮಾಡಿ ಕನ್ನಡ ದೇಶದ ಪ್ರಧಾನ ಮಂತ್ರಿ ಮುಂತಾದವರ ಸೇರಿ ಮುಂದೆ ದರ್ಬಾರು ಮಾಡಿದರು. ಈರಮೆಯು ಪ್ರೆಸಿಡೆಂಟ್ ಫ್ರೀ ಎಂಬುವರಿಗೆ ರಾಜೋಚಿತವಾದ ಒಂದು ಆಭರಣವನ್ನು ಕೊಟ್ಟರು. ಈ ತಿಂಗಳ ೧೯ನೇ ತಾರೀಖಿನಲ್ಲಿ ಒಂದು ಸಭೆ ಸ್ವರ್ಣರ ಅರಮನೆಯಲ್ಲಿ ಸೇರಬಹುದೆಂದು ವರ್ತಮಾನ.

ಈ ಯುದ್ಧ ವಿಷಯ ಸಹನೆಯು ಪ್ರಾಂತದಲ್ಲಿ ಆಫ್ರಿದಿ ಜನರೂ ಬ್ರಿಟಿಷ್ ಸೈನ್ಯಕ್ಕೂ ಆಗಾಗ್ಗೆ ಯುದ್ಧ ನಡೆಯುತ್ತಲಿದೆ. ಬ್ರಿಟಿಷ್ ಸೈನ್ಯದಲ್ಲಿ ಕೆಲವರೂ ಶತ್ರು ಸೇನೆಯಲ್ಲಿ ಅನೇಕರೂ ಮೃತರಾದರು. ಬ್ರಿಟಿಷ್ ಸೇನೆಯು ಮುಂದಕ್ಕೆ ಗಮಿಸುತ್ತಿದೆ. ಈ ಯುದ್ಧದಲ್ಲಿ ಬ್ರಿಟಿಷ್ ಸೇನೆಗೆ ಜಯ ವುಂಟಾಗುವದು ಖಂಡಿತವಾಗಿದ್ದಾಗ್ಯೂ ಸದರೀ ಗುಡ್ಡ ಜನರ ಬಂಡಾಯ ದಿನ್ನೂ ತಪ್ಪಿಲ್ಲ. ಸದರೀ ಜನರು ಸ್ವಾಧೀನರಾಗುವರೆಂದು ಯೋಚಿಸುವದಕ್ಕೂ ಗುರುತಿಲ್ಲವು. ಸದ್ಯ ಅನಿವಾರ್ಯವಾದ ಅರ್ಥ ಹಾನಿಯೂ ಪ್ರಾಣಹಾನಿಗಳೂ ಉಂಟಾಗುತಿರುವವು. ಈ ಯುದ್ಧದಿಂದ ಇಂಡಿಯಾದೇಶಕ್ಕೆ ಒಂದು ಪ್ರಯೋಜನ ವುಂಟೆಂದು ನಾವು ಯೋಚಿಸಲಾರೆವು. ಇದು ಕೇವಲ ಭುಜಬಲ ಪ್ರದರ್ಶನವೇ ಹೊರತು ಬೇರೆಯಲ್ಲವು.

ಇಂಪೀರಿಯಲ್ ಸರ್ವಿಸ್ ಸೈನ್ಯಗಳು ಸರಹದ್ದು ಪ್ರಾಂತದಲ್ಲಿ ನಡೆಯುವ ಯುದ್ಧಕ್ಕೆ ಹೋಗುವದಕ್ಕೆ ಗವರ್ನಮೆಂಟಿನವರು ಒಪ್ಪಿಕೊಂಡದ್ದನ್ನು ಕೇಳಿ ಪತ್ರಿಯಾಲ ಸಂಸ್ಥಾನದವರಿಗೆ ಬಹಳ ಸಂತೋಷ ವುಂಟಾಯಿತು. ಈತಿಂಗಳ ೭ನೇ ತಾರೀಖಿನಲ್ಲಿ ಸದರೀ ಸಂಸ್ಥಾನದ ಒಂದನೇ ನಂಬರ ಪಾರ ಸೇನೆಯೂ, ಅದಕ್ಕೆ ಸೇರಿದ ಸರಂಜಾಮುಗಳೊಡನೆ ಯೆರಡು ಸ್ಪೆಷಲ್ ಟ್ರೈನುಗಳಲ್ಲಿ ಸರಹದ್ದು ಪ್ರಾಂತಕ್ಕೆ ಹೊರಟಿತು. ಆ ಕಾಲದಲ್ಲಿ ಸದರೀ ಸಂಸ್ಥಾನದ ಪ್ರಧಾನ ಮಂತ್ರಿಯವರಾದ ಜನರಲ್ ಗುರುದತ್ತಸಿಂಗರವರು, ಸೈನಿಕರನ್ನುದ್ದೇಶಿಸಿ ಇಂಡ್ಯಾ ಗವರ್ನಮೆಂಟಿನವರು ಕೊಟ್ಟ ಗೌರವದ ದೆಸೆಯಿಂದ ಮಹಾರಾಜರ ವರಿಗುಂಟಾದ ಸಂತೋಷವನ್ನು ಸ್ಪಷ್ಟಪಡಿಸಿ, ತಮ್ಮ ಸೈನಿಕರು ಅವರ ಧೈರ್ಯ ಸಾಹಸಗಳನ್ನು ಬ್ರಿಟಿಷ್‌ಗವರ್ನಮೆಂಟಿನವರಲ್ಲಿ ರಾಜಭಕ್ತಿಯನ್ನು ವ್ಯಕ್ತಪಡಿಸುವರೆಂದು ತಾತ್ಪರ್ಯವಾಗಿ ನುಡಿದರು ವಂತೆ ತಿಳಿಸಿದರು.

ಈಚಿಗೆ ಗುತ್ತಿ ದಿವಿಜನ್ನಲ್ಲಿ ಬಲವಾದ ಮಳೆ ಬಿದ್ದು ಕೆರೆ ಕುಂಟೆಗಳಿಗೆ ನೀರು ಬಂದಿರುವುದು ಮಾತ್ರವಲ್ಲದೆ ಕೆಲವು ಕಡೆ ಬೆಳೆಯುತ್ತಿರುವ ಫಸಲಿಗಳಿಗೆ ಕೇಡು ಬಂದಂತೆ ನದಿ ತಿಳಿಯಬರುತ್ತದೆ, ಇದರಿಂದ ಇಷ್ಟರಲ್ಲಿ ಹೋಗುವಲ್ಲಿ ಕಾಲಸ್ಥಿತಿಯು ಬದಲಾಯಿಸಿ ಮುಂದೆ ಕ್ಷಾಮದ ಭೀತಿಯು ತಪ್ಪಬಹುದೆಂದು ಪ್ರತ್ಯಕ್ಷವಾಗಿ ಅವಕಾಶ ವುಂಟಾಯಿತು. ಈ ವರ್ಷದ ದೆಸೆಯಿಂದ ಪ್ರಾಯ ನಿವಾರಕ ಕಾಮಗಾರಿಗಳಲ್ಲಿ ಕೂಲಿಮಾಡಿ ಜೀವಿಸುತಲಿದ್ದ ಜನರ ಸಂಖ್ಯೆಯು ಬಹಳಮಟ್ಟಿಗೆ ಕಡಿಮೆಯಾಯಿತು, ಅಂದರೆ ಜಾಗಾದಾರ ವುಂಟಾದುದರಿಂದ ಕ್ಷಾಮ ಜನರು ಬಹುಮಂದಿ ಅನವರತ ಸ್ವಂತ ಸಾಯ ಕೆಲಸಗಳಿಗೆ ಪಾವನ ಯೋಗ್ಯರಾದರು ಅವಾಗ್ಯೂ ಈಗಿನ ಫಸಲಿಗಳು ಕೈಗೆ ಬರುವವರೆಗೆ ಗವರ್ನಮೆಂಟಿನವರು ಕ್ಷೇಮ ನಿರ್ವಾಹಕ್ಕಾಗಿ ಒದಗಿಸಿದ ಸಹಾಯಾರ್ಥ ರಿಲೀಫ್ ಕಾಮಗಾರಿಗಳನ್ನು ನಡೆಸುತ್ತ ಬರುವುದು ಉಚಿತವಾಗಿರುವುದು.

೧೮೯೬ನೇ ಇಸವಿಯಲ್ಲಿ ಇಂಡ್ಯಾದೇಶದ ರೈಲು ರಸ್ತೆಗಳ ವಿಸ್ತೀರ್ಣ ಮತ್ತು ಅದರ ಆದಾಯದ ಹಿಚ್ಚರ ವಗೈರೆಯನ್ನು ಕುರಿತು ಈಚಿಗೆ ಬಂದ ಲೆಕ್ಕ ವಿವರಿಸಲು ಇದರಡಿ ಪ್ರಕಟಿಸುತ್ತೇವೆ:—

	ಮೈಲಿಗಳು.
ಸಂಚಾರಯೋಗ್ಯವಾದ ರಸ್ತೆಯ ವಿಸ್ತೀರ್ಣ	೨೦,೫೨೮¾
ವ್ಯಾಪಾರಕ್ಕೆ ಉಪಯೋಗಿಸಲ್ಪಡುವ ರಸ್ತೆಯು	20,390½
ವ್ಯಾಪಾರದಮೂಲದ ರಸ್ತೆ ಗಟ್ಟಿಬಂಡವಾಳ	25,36,60,000
ಒಟ್ಟು ಹುಟ್ಟುವಳಿ ..	2,51,66,000
ಒಟ್ಟು ವೆಚ್ಚ	12,19,80,0 0
ಆದಾಯಲಭ್ಯ ...	1 31,68,000
ದೊಡ್ಡ ಅಗಲ ರಸ್ತೆ	11,736½ ಮೈಲಿ
ಸಣ್ಣ ಅಗಲ ರಸ್ತೆ	8 [illegible]
ಬೇರೆ ಒಂದು ಮಟ್ಟು ಅಗಲ ರಸ್ತೆ	248½
ಈ ರಸ್ತೆಗಳಲ್ಲಿ ಪ್ರಯಾಣಮಾಡಿದ ಜನರ ಸಂಖ್ಯೆ	16,00,00,000
ಸಾಗಿಸಲ್ಪಟ್ಟ ಸರಕುಗಳ ತೂಕ (ಟನ್ನು)	1,25,0[illegible]

LOCAL AND PROVINCIAL NEWS.
ಸ್ವದೇಶದ ಮತ್ತು ಹತ್ತಿರದ ಪ್ರದೇಶಗಳ ವರ್ತಮಾನಗಳು

ತುಮಕೂರು ಡಿಸ್ಟ್ರಿಕ್ಟ ಮದ್ದಗಿರಿ ತಾಲ್ಲೂಕಿನಲ್ಲಿ ಕೆಲವು ಗ್ರಾಮಗಳಲ್ಲಿ ಪಾಂಡುರೋಗ ವ್ಯಾಪಿಸಿ ಕೆಲವು ಪ್ರಾಣ ಹಾನಿಗಳು ಸಂಭವಿಸಿದಂತೆ ತಿಳಿಯಬರುತ್ತದೆ.

ಈಚಿಗೆ ಶ್ರೀ ನಂಜನಗೂಡು ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದಲ್ಲಿ ಒಂದುಸಾವಿರದಷ್ಟು ರೂಪಾಯಿಗಳ ಕ್ರಯ ಬಾಳುವಷ್ಟು ಬಂಗಾರಬೆಳ್ಳಿ ಒಡವೆಗಳು ಕಳವಾದಂತೆ ವರ್ತಮಾನ ಬಂದಿರುತ್ತದೆ.

ಈ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರವರು ಶಿವನ ಸಮುದ್ರದಲ್ಲಿ ಕಾವೇರೀ ನದಿಯ ಜಲಪಾತವನ್ನು ನೋಡುವುದಕ್ಕೆಂದು ಅಲ್ಲಿಂದ ಮೈಸೂರಿಗೆ ವಾಪಸಾಗಿ ಕಳೆದ ಬೃಹಸ್ಪತಿವಾರದ ದಿವಸ ರಾತ್ರಿ ವಾಪಸು ಬಂದು ಸೇರಿದರು.

ಕೋಲಾರ್ ಗೋಲ್ಡ್ ಫೀಲ್ಡ್ಸ್‌ಗೆ ೧೧ ಮೈಲಿ ಫಾಸಲೆಯಲ್ಲಿ ಕೊತ್ತನೂರೆಂಬ ಗ್ರಾಮದಲ್ಲಿ ಚಾಲ್ತಿ ತಿಂಗಳ ೩ನೇ ತಾರೀಖು ಸಾಯಂಕಾಲ ಒಬ್ಬ ಹುಡುಗನು ಮೃತಪಟ್ಟನು. ಆ ಮರುದಿನ ೧೦ ಘಂಟೆಗೆ ಪತ್ತೆಮಾಡುವ ಸ್ಥಾನಕ್ಕೆ ತೆಗೆದುಕೊಂಡು ಹೋಗಲು ಅವನಮೇಲೆ ವಸ್ತ್ರ ಹೊದಿಸಿತ್ತು, ಅಲ್ಲಿದ್ದ ಜನರು ಮರುದಿನವೂ ನೋಡುವಾಗ್ಯೆ ಪ್ರೇತವು ಬದುಕಿತು. ಗಂಜಿ ಕುಡಿಸಿದರು, ಈಗ ಸುರಕ್ಷಿತವಾಗಿರುವಂತೆ ಕೇಳಿದ್ದೇವೆ.

ಕಳೆದ ಶುಕ್ರವಾರದ ದಿವಸ ರಾತ್ರಿ ಹತ್ತು ಗಂಟೆಗೆ ಮೋಡ ಮುಸುಕಿ ಗರ್ಜನೆಗೆ ಪ್ರಾರಂಭವಾಗಿ ರಾತ್ರಿ ನಾಲ್ಕು ಘಂಟೆಯ ವರೆಗೆ ನೆನೆಮಳೆ ಬೀಳುತಲಿತ್ತು. ಮರಳಿ ಶನಿವಾರದ ದಿನದಿಂದ ವರ್ಷಕ್ಕೆ ಪ್ರಾರಂಭವಾಗಿ ಬಹಳ ಹೊತ್ತು ಹನಿ ಬಿತ್ತು. ಈ ಸಲ ಕೊಂಚದಮಟ್ಟಿಗೆ ಕಾಲದಲ್ಲಿ ಮಳೆ ಬೀಳುತ್ತಿದೆ. ಮುಂದೆಯೂ ಅವಶ್ಯಕವಾದ ಕಾಲದಲ್ಲಿ ವರ್ಷ ಬೀಳುತಲಿದ್ದರೆ ಕ್ಷಾಮದ ಭೀತಿಗೆ ಅವಕಾಶ ವಿರಲಾರದು. ಜಿನಸಿಗಳ ಧಾರಣೆಗಳು ಪ್ರಾಯಶಃ ಒಂದೇ ವಿಧವಾಗಿವೆ ಜನಾರೋಗ್ಯವು ಸಾಮಾನ್ಯವಾಗಿದೆ.

ಈ ತಿಂಗಳ ೧೧ನೇ ತಾರೀಖಿನಲ್ಲಿ ಚಾಂಪಿಯನ್ ರೀಫ್ ಭಂಗಾರದ ಗಣಿಯಲ್ಲಿ ಸಂಬಳ ಕೊಡುವ ದಿವಸವಾಗಿದ್ದುದರಿಂದ, ಕೆಲಸಗಾರರು ೫೦೦ ಅಡಿ ಆಳದಿಂದ ಭೂಮಿಯೊಳಗಿಂದ ಮೇಲಕ್ಕೆ ಸಾಲು ಸಾಲಾಗಿ ಒಬ್ಬರ ಹಿಂದೆ ಒಬ್ಬರು ಏಣಿಯಮೇಲೆ ಬರುವಾಗ್ಗೆ ಮೇಲೆ ಏರಿದ್ದವರೆಲ್ಲ ಬರುವ ಸ್ಥಳದಲ್ಲಿ ವಾರ್ಪ್ ಇನ್ನು ನಮಯವಾಗುತ್ತಲಿದ್ದೆವೆಂದು ಕೊಂಡರೆ ಮಾಡಿದ್ದರಿಂದ, ಜಯ ಹಿಂದ ಹೋದಲನೆಯವನು ಏಣಿಯನ್ನು ಬಿಟ್ಟು ಬಿಟ್ಟದ್ದರಿಂದ ಒಬ್ಬರಮೇಲೊಬ್ಬರು ಕೆಳಗೆ ಬಿದ್ದು ೮೮ ಮಂದಿಯವರಿಗೆ ಪೆಟ್ಟಾದ್ದರು. ಇನ್ನು ಕದಗಳು ಗಣಿ ಒಳಗೆ ಉಂಟೋ ಇಲ್ಲವೋ ಎಂದು ಗಣಿಯಮ್ಯಾನೇಜರವರು ೧೩ನೇ ತಾರೀಖಿನಲ್ಲಿ ಪರೀಕ್ಷಿಸಿ ಇಲ್ಲವೆಂದು ಕಂಡರು. ಸದರೀ ಕದಗಳನ್ನು ವಾರಸುದಾರರುಗಳಿಗೆ ದರ್ಶನಮಾಡಿದರು. ಅಂದರೆ ಜನರು ಇನ್ನೂ ಬಹಳ ಮಂದಿ ಮೃತರಾದ್ದರೆಂಬುವುದು ಸುಳ್ಳು ಆವುದು ವಿರ್ಣ ಜಾಮೀನ ಅಥವಾ ಲಾಲಚನ್ನದಾನು ?

THE MYSORE GAZETTE.
ಮೈಸೂರು ಗಜೆಟು

ಗುರುವಾರ, ತಾ॥ ೧೬ನೇ ಸೆಪ್ಟೆಂಬರ ೧೮೯೭.
ಮೈಸೂರ ಗವರ್ನಮೆಂಟಿನವರಿಂದ ಕೂಡಲ್ಪಡುವ ಆಜ್ಞಾಪನೆಗಳು.
ಜನರಲ್ ಮತ್ತು ರೆವಿನ್ಯೂ

ತಾ॥ ೯ನೇ ಸೆಪ್ಟೆಂಬರ ೧೮೯೭

ನಂ॥ [illegible] ಜ ಸೈ [illegible]—ಮೈಸೂರು ಸ ರ್ವಿಸ ರಗ್ಯುಲೇಷನ್ಸ [illegible] ಆರ್ಟಿಕಲ್ ಅನುಸರಿಸಿ, [illegible] ಸಿವಿಲ ಸರ್ಜನರ ಮೆ॥ ಡಿ. ಎ. ಚೌಕ್ಸಿ, ಎಲ್ ಎಂ ವ ಎಸ್ ರವರಿಗೆ ಅವರು ಉಪಯೋಗಿಸಿಕೊಳ್ಳದ ಒಟ್ಟು ರಜೆಯೊಳಗೆ ಇಪ್ಪತ್ತು ದಿನಗಳ [illegible] ರಜ ಕೊಡಲ್ಪಟ್ಟಿರುತ್ತೆ.

ತಾ॥ ೧೧ನೇ ಸೆಪ್ಟೆಂಬರ ೧೮೯೭

ನಂ॥ [illegible] ಜ [illegible]—ದೇವಿಗೆ [illegible] ಪೋಲೀಸ [illegible] ಮೆ॥ ಸಿ. ವೆಂಕಟ[illegible] ಅವರಿಗೆ ೧೮೯೭ನೇ ಜನವರಿ ೧೫ನೇ ತಾರೀಖಿನಿಂದ [illegible] ಸಂಸ್ಥಾನ ಗವರ್ನಮೆಂಟ ನೋಟಿಫಿಕೇಷನ್ [illegible] ಕೊಟ್ಟಿದ್ದ ಕೆಲವಳ ರಜವನ್ನು ೧೮೯೭ನೇ ಸೆಪ್ಟೆಂಬರ ಗುರ್ತಿನ ವರೆಗೂ ಪುನಃ ಮೂರು ತಿಂಗಳು ವಿಸ್ತರಿಸ ಲ್ಪಟ್ಟಿದೆ.

ತಾ॥ ೧೧ನೇ ಸೆಪ್ಟೆಂಬರ ೧೮೯೭

ನಂ॥ [illegible]—ಅಸಿಸ್ಟೆಂಟ ಸರ್ಜನ ವಿ. ಎಸ್. ಆರ್. ಗೋವಿಂದಾಚಾರ್ಲು ಯವರಿಗೆ ೯೭ನೇ [illegible] ೧೮೯೭ನೇ ಮೈ ೧೯ [illegible] ನೋಟಿಫಿಕೇಷನ್‌ನಲ್ಲಿ ಕೊಟ್ಟಿದ್ದ ಒಂದು ತಿಂಗಳ ಪ್ರಿವಿಲೇಜ್ ರಜವನ್ನು ಇನ್ನೂ ವಿಸ್ತರಿಸಲ್ಪಟ್ಟಿದೆ.

ತಾ॥ ೧೨ನೇ ಸೆಪ್ಟೆಂಬರ ೧೮೯೭

ನಂ॥ [illegible]—ಮೈಸೂರು ಸರ್ವಿಸ ರೆಗ್ಯುಲೇಷನ್ಸ ೧೮೯೦ನೇ ಆರ್ಟಿಕಲ್ ಅನುಸರಿಸಿ ಸಂಸ್ಥಾನ ಗವರ್ನಮೆಂಟ್ ಪ್ರೆಸ್ಸ ನ ಸ್ಟೋರ ಕೀಪರ ಮೆ॥ ಹೆಚ್. ಎಸ್. ಸ್ವಾಮಿ ರವರಿಗೆ ೧೮೯೭ನೇ ಅಕ್ಟೋಬರ ೧ನೇ ತಾರೀಖಿನ ಮೊದಲಾಗಿ [illegible] ಅವರು ಪಡೆಯಬಹುದಾದ [illegible] ಮೂರು ತಿಂಗಳ ಪ್ರಿವಿಲೇಜ ರಜಾ ಕೊಡಲ್ಪಟ್ಟಿರುತ್ತೆ.

ಮೆ॥ ಸ್ವಾಮಿ ರವರು ರಜದಲ್ಲಿರುವ ಕಾಲದಲ್ಲಿ ಅದೇ ಡಿಪಾರ್ಟ್‌ಮೆಂಟ [illegible] ಮೆ॥ ಬಿ. ಎ. ಗೋವಿಂದರಾಜು ತಮ್ಮ ಕೆಲಸಗಳಲ್ಲದೆ ಸದರೀ ಕೆಲಸವನ್ನು ನಡೆಸತಕ್ಕದ್ದು ಲ್ಪಡುವರು.

ತಾ॥ ೧೩ನೇ ಸೆಪ್ಟೆಂಬರ ೧೮೯೭

ನಂ॥ [illegible]—ಕಡೂರು [illegible] ಫಸ್ಟ್ ಕ್ಲಾಸ ಸಬ ಡಿವಿಜನ ಆಫೀಸರ ಅಸಿಸ್ಟೆಂಟ [illegible] ಮೆ॥ ಎಸ್. ವೆಂಕಟ[illegible] ರವರು [illegible] ಕೊಟ್ಟಿರುವ [illegible] ವರ್ಗ [illegible] ಟ್ಟಿರುವುದು.

SUMMARY OF NEWS.
ವೃತ್ತಾಂತ ಸಂಗ್ರಹವು.

ಲೈಪ್‌ಜಿಗ್ ಪಟ್ಟಣದ ಒಬ್ಬ ವೈದ್ಯ ಪಂಡಿತರು ನಾವು ಬರೆಯುವದಕ್ಕೆ ಉಪಯೋಗಿಸುವ ೩೭ ವಿಧ ಶಾಯಿಗಳನ್ನು ಪರೀಕ್ಷೆಮಾಡಿ ಅವುಗಳಲ್ಲೆಲ್ಲಾ ಮರಣಕರವಾದ ಒಂದು ತರಹ ಕ್ರಿಮಿಗಳು ಉತ್ಪತ್ತಿಯಾಗುತ್ತವೆಂತಲೂ ಬರೆಯುವಕಾಲದಲ್ಲಿ ವಿಷ ಉಳ್ಳ ಕಾಲದಲ್ಲೆಲ್ಲಾ ಶಾಯಿ ಇರುವ ಕುಡಿಕೆ ಸೀಸೆಗಳನ್ನು ಭದ್ರವಾಗಿ ಮುಚ್ಚಿರಬೇಕೆಂತಲೂ ತಿಳಿಸಿರುತ್ತಾರೆ.

ಲಂಡನ್ ಪಟ್ಟಣದಲ್ಲಿ ಕೆಲವುಜನರು ಫಂಡು ಹಾಕಿ ಒಂದು ಜಟ್ಕಾ ಗಾಡಿಗಳ ಕಂಪೆನಿಯನ್ನು ಇಟ್ಟಿದಾರೆ. ಈ ಕಂಪೆನಿಯಲ್ಲಿ ೧೧,೦೦೦ ಬಾಡಿಗೆ ಗಾಡಿಗಳೂ, ೧೫,೭೪೦ ಕುದುರೆಗಳೂ ಇರುವವು. ಈ ವರುಷ ಕಳೆದ ಆರು ತಿಂಗಳಲ್ಲಿ ಸುಮಾರು ೪೦ ಲಕ್ಷ ರೂಪಾಯಿಗಳನ್ನು ಉತ್ಪತ್ತಿ ಮಾಡಿದರು. ಅಂದರೆ ದಿನ ೧ಕ್ಕೆ ಒಂದೊಂದು ಗಾಡಿಗೆ ೬೫ರೂಪಾಯಿನಂತೆ ಸಿಕ್ಕಿದ ಹಾಗಾಯಿತು, ಮತ್ತು ಫಂಡಿಗೆ ಹಣ ಹಾಕಿದವರಿಗೆ ಕೇಕಡ ವರ್ಷಕ್ಕೆ ೧೦ ರೂಪಾಯಿನಂತೆ ಬಡ್ಡಿ ಕಾಟ್ಟುವಹಾಗಾಯಿತು.

ಇದರಡಿ ತಿಳಿಸಲ್ಪಡುವ ತಂತಿ ವೃತ್ತಾಂತವು ಇಂಡಿಯಾ ಡೆಯಿಲೀ ನ್ಯೂಸ್ ಎಂಬ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿದೆ.—

ನತಾಪಾ ಸರ್ದಾರ ಜಸ್ಟಿಯವರಿಂದ ಯಾವಜ್ಜೀವಪರ್ಯಂತರ ವಾಸಮಾಡುವ ದಂಡನೆಯೂ, ವಿಂಶ ವರ್ಷಗಳ ಕಠಿಣ ಶಿಕ್ಷೆಯ ಸಜಾ ಅನುಭವಿಸುವ ಶಿಕ್ಷೆಯೂ ವಿಧಿಸಲ್ಪಟ್ಟ ಪ್ರತೋದ ಪತ್ರಿಕೆಯ ಎಡಿಟರೂ ಪ್ರೊಪ್ರೈಟರೂ ಆಗಿಂಗ್ಲ ೭ನೇ ತಾರೀಖಿನ ರಾತ್ರಿ ಯರೋಡಾ ಎಂಬ ಸ್ಥಳದಲ್ಲಿನ ಸೆಂಟ್ರಲ್ ಜೆಯಿಲಿನಲ್ಲಿಡಲ್ಪಡುವದಕ್ಕಾಗಿ ಪೂನಾದಿಂದ ಪುನಃ ತರಲ್ಪಟ್ಟ ಕಾಲದಲ್ಲಿ ಸದರೀ ಇಬ್ಬರಿಗೂ ಕೈಕಾಲುಗಳಿಗೆ ಬಲವಾದ ಬೇಡಿಗಳು ಹಾಕಲ್ಪಟ್ಟಿದ್ದವು. ಅವರನ್ನು ಸತಾರದಿಂದ ಪುನಃ ಈ ಸ್ಥಿತಿಯಲ್ಲಿ ತಂದರು. ಈ ವಿಷಯದಲ್ಲಿ ಅಮೃತಬಜಾರ ಪತ್ರಿಕೆಯು ತಿಳಿಸುವದೇನೆಂದರೆ, ಬ್ರಿಟಿಷ್ ರಾಜ್ಯವನ್ನು ವ್ಯಕ್ತಪಡಿಸುವದಕ್ಕೆ ನಿರ್ಭಾಗ್ಯರಾದ ಸದರೀ ಜನರ ವಿಷಯದಲ್ಲಿ ಇಷ್ಟು ಕ್ರೂರವಾಗಿ ನಡೆಸಬೇಕಾದ್ದಾವ ಕಾರಣವಾಗಿತ್ತು? ಅವರು ಮಾಡಿದ ಅಪರಾಧವೇನು? ಅವರು ಕೊಲೆ ಮಾಡಿದರೆ, ಕತ್ತಿಗೆ ಗುಯಿದರೆ, ಕೊಂದುಹಾಕಿದರೆ, ಅಥವಾ ಮೋಸಮಾಡಿದರೇ? ಸದರೀ ಇಬ್ಬರಲ್ಲೊಬ್ಬ ತನು ತನ್ನ ದೇಶೀಯರ ಪ್ರಯೋಜನಾರ್ಥ ತನ್ನ ಪತ್ರಿಕೆಯಲ್ಲಿ ನಾಲ್ಕಾರು ಪಙ್ತಿಗಳನ್ನು ಬರೆದನು, ಇನ್ನೊಬ್ಬಾತನು ಸದರಿ ಪತ್ರಿಕೆಯ ಪ್ರೊಪ್ರೈಟರು, ಸದರೀ ಲೇಖನದ ವಿಷಯದಲ್ಲಿ ಆತನಿಗೆ ಯಾವ ಸಂಬಂಧವೂ ಇಲ್ಲವು, ಮತ್ತು ೫೫ ವರ್ಷಗಳ ಮುದುಕನು, ಕಣ್ಣುಗಳು ಕಾಣಿಸುವದಿಲ್ಲವು, ಕುಂಟನು. ಇವರಿಗೆ ವಿಧಿಸಲ್ಪಟ್ಟ ದಂಡನೆಯ ಮೇಲೆ ಹೈಕೋರ್ಟಿನಲ್ಲಿ ಅಪೀಲಾಗಿದೆ, ಇನ್ನು ವಿಚಾರಣೆಯಾಗಿಲ್ಲದೆ. ಅವರಿಗೆ ವಿಧಿಸಲ್ಪಟ್ಟ ಕೇವಲ ಕಠಿಣವಾದ ದಂಡನೆಯನ್ನು ಕೇಳಿ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಹೃದಯ ಸಹ ಕದಲಿಹೋಯಿತು. ಮುಖ್ಯ ಅಧಿಕಾರಿಗಳ ಅವಿಚಾರದ ದೆಸೆಯಿಂದ ಪ್ರಜೆಗಳ ಹೃದಯಗಳಲ್ಲುಂಟುಮಾಡಲ್ಪಟ್ಟಿರುವ ಸಂಕಟವನ್ನು ಇಷ್ಟೆಂದು ಹೇಳುವದಕ್ಕೆ ಸಾಧ್ಯವಲ್ಲವು. ಇಂಡಿಯನ್ ಅಸೋಸಿಯೇಷನ್ ಸಮಾಜದವರು ಕೂಡಲೆ ಈ ವಿಶೇಷ ಪರ್ವವಾದವನ್ನು ತಂತಿ ಮೂಲಕ ಲಂಡನ್ ಡೆಯಿಲೀ ನ್ಯೂಸ್ ಪತ್ರಿಕೆಗೆ ತಿಳಿಸಬೇಕು, ಎಂಬುದು

BANGALORE CITY MUNICIPALITY.
ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.
ನೋಟೀಸ್.

ತಾರೀಖ್ ೧೩ನೇ ಸೆಪ್ಟಂಬರ್ ೧೮೯೭.

ಸನ್ ೧೮೯೭ನೇ ಇಸವಿ ಸೆಪ್ಟಂಬರ್ ೨೩ನೇ ತಾರೀಖ್ ಬೃಹಸ್ಪತಿವಾರದ ದಿನ ಬೆಳಗ್ಗೆ ೭|| ಘಂಟೆಗೆ ಬೆಂಗಳೂರು ಸಿಟಿ ಮ್ಯುನಿಸಿಪಲ್ ಕಮಿಷನರುಗಳು, ತಮ್ಮ ಆಫೀಸ ಕಟ್ಟಡದಲ್ಲಿ ಸಾಮಾನ್ಯ ಸಭೆಸೇರುವಾಗ ಇದರಡಿ ತಿಳಿಸಿರುವ ಕೆಲಸಗಳು ನಡೆಸಲ್ಪಡುವವು:—

೧ ಸನ್ ೧೮೯೭ನೇ ಇಸವಿ ಆಗಸ್ಟ್ ತಿಂಗಳ ನಗದು ಜಮಾಖರ್ಚು ಲೆಕ್ಕ, ಮರಣಲೆಕ್ಕ, ಮನೆಗಳಿಗೆ ಹೋಗಿ ಚಿಕಿತ್ಸೆಮಾಡುವ ಮೆಡಿಕಲ್ ಆಫೀಸರರಲೆಕ್ಕ, ತಗಾದೆ, ವಸೂಲಿ ಮತ್ತು ಬಾಕಿ ಪಟ್ಟಿ, ಕಾಮಗಾರಿಗಳ ಅಭಿವೃದ್ಧಿಯನ್ನು ಕುರಿತ ರಿಪೋರ್ಟ್, ಶ್ರೀನಿವಾಸ ಮಂದಿರದ ಲೈಬ್ರರಿಗೆ ಹೋಗಿದ್ದ ಜನರನ್ನು ಕುರಿತ ಯಾದಿ, ಸಿಟಿ ಮ್ಯುನಿಸಿಪಲ್ ಇಂಗ್ಲಿಷ್ ಮತ್ತು ಕನ್ನಡ ಸ್ಕೂಲುಗಳ ಲೆಕ್ಕಗಳು, ಸೂಲಗಿತ್ತಿಯರು ಚಿಕಿತ್ಸೆ ಮಾಡಿದವರ ಲೆಕ್ಕ, ದೀಪಗಳನ್ನು ಕುರಿತ ಒಪ್ಪೋಯಿನ ಸಂಗ್ರಹ, ಪ್ರಸವಾಸ್ಪತ್ರೆಯ ಲೆಕ್ಕ, ಅನಾಥಶಾಲೆಯ ಲೆಕ್ಕ, ಧರ್ಮಶಾಲೆ ಲೆಕ್ಕ, ಮತ್ತು ನಾಯಿಗಳನ್ನು ಕೊಲ್ಲುವದಕ್ಕೆ ಕೊಡಲ್ಪಟ್ಟ ಇನಾಂಗಳ ಲೆಕ್ಕ ವಗೈರೆ.

೨. ಸಿಟಿ ಮ್ಯುನಿಸಿಪಲ್ ಸ್ಕೂಲುಗಳ ಕಮಿಟಿಯ ಆನರರಿ ಸೆಕ್ರೆಟರಿಯವರು, ಚಾಮರಾಜೇಂದ್ರ ಪೇಟೆಯಲ್ಲಿರುವ ಕನ್ನಡ ಹುಡುಗರ ಶಾಲೆಯನ್ನು ಸಿಟಿ ಮ್ಯುನಿಸಿಪಲ್ ಇಂಗ್ಲಿಷ್ ಸ್ಕೂಲಿನ ಒಂದು ಶಾಖೆಯಾಗಿ ಮಾಡುವದಕ್ಕೆ ಸದರೀ ಕಮಿಟಿಯವರಿಗೆ ಇಷ್ಟವಿಲ್ಲವೆಂತಲೂ, ಸದರೀ ಕನ್ನಡ ಹುಡುಗರ ಶಾಲೆಯನ್ನು ಮ್ಯುನಿಸಿಪಾಲಿಟಿಯವರು ಸ್ವಾಧೀನ ಮಾಡಿಕೊಂಡು ಆಂಗ್ಲೋ ವರ್ನಾಕ್ಯುಲರ್ ಶಾಲೆಗೆ ಸೇರಿಸಿಕೊಂಡು ಪೋಷಿಸಬೇಕೆಂದು ಸೂಚಿಸಿಯೂ ೧೮೯೭ನೇ ಇಸವಿ ಆಗಸ್ಟ್ ೨೧ನೇ ತಾರೀಖಿನಲ್ಲಿ ಬರೆದ ೧೬ನೇ ನಂಬರ್ ಲೆಟರ್.

೩ ಬಸಾಯಿ ದೊಡ್ಡಿಯನ್ನೂ ಮಟನ್ ಮಾರ್ಕೆಟ್ಟನ್ನೂ ಈಗಿನ ಸ್ಥಳದಿಂದ ಬೇರೆಯೊಂದು ಅನುಕೂಲವಾದ ಸ್ಥಳಕ್ಕೆ ವರ್ಗ ಮಾಡುವ ವಿಷಯದಲ್ಲಿ ಸಬ್ ಕಮಿಟಿಯವರ ರಿಪೋರ್ಟ್.

೪. ಇದರಡಿ ತಿಳಿಸಲ್ಪಡುವ ಶಾಲೆಗಳಿಗೆ ಸಹಾಯದ್ರವ್ಯ ಕೊಡುವ ವಿಷಯದಲ್ಲಿ ವಿದ್ಯಾಭ್ಯಾಸದ ಇಲಾಖೆ ಇನ್‌ಸ್ಪೆಕ್ಟರ್ ಜನರಲವರೊಡನೆಯೂ, ಸಿಟಿ ಮ್ಯುನಿಸಿಪಲ್ ಸ್ಕೂಲುಗಳ ಕಮಿಟಿಯ ಆನರರಿ ಸೆಕ್ರೆಟರಿಯವರೊಡನೆಯೂ ನಡೆಸಲ್ಪಟ್ಟ ಕಾಗದ ಪತ್ರಗಳು:—

(೧) ಮಾವಳ್ಳಿಯಲ್ಲಿ ಲಕ್ಷ್ಮಯ್ಯ ನಾಯುಡರವರಿಂದ ಇಡಲ್ಪಟ್ಟಿರುವ ಆಂಗ್ಲೋ ವರ್ನಾಕ್ಯುಲರ್ ಸ್ಕೂಲ್

(೨) ಸುಣ್ಣಕಲ್ ಪೇಟೆಯಲ್ಲಿ ನಂಜುಂಡಯ್ಯನೆಂಬವರಿಟ್ಟಿರುವ ಬೀದಿ ಪಾಠಶಾಲೆ

(೩) ರಾಣೀಸಿಂಗ್ ಪೇಟೆಯಲ್ಲಿ ಸೀತಾರಾಮಯ್ಯನೆಂಬುವರಿಟ್ಟಿರುವ ಬೀದಿ ಪಾಠಶಾಲೆ

(೪) ಬಳೆಪೇಟೆಯಲ್ಲಿ ಎಲ್ಲೋಜಿ ಯೆಂಬವರು ಇಟ್ಟಿರುವ ಮಹಾರಾಷ್ಟ್ರ ಪಾಠಶಾಲೆಗೆ ಕೊಡಲ್ಪಡುವ ಸಹಾಯದ್ರವ್ಯವನ್ನು ಜಾಸ್ತೀ ಮಾಡುವದು.

೫ ಈಗ ರಾಗಿಯ ಧಾರಣೆ ಹೆಚ್ಚಿಹೋಗಿ, ವಾರ ಒಂದಕ್ಕೆ ತಮಗೆ ಕೊಡಲ್ಪಡುವ ಆಹಾರವು ತಮ್ಮ ಪೋಷಣೆಗೆ ಸುತರಾಂ ಸಾಲದೆ ಇರುವದರಿಂದ, ಅದನ್ನಾದರು ಜಾಸ್ತೀ ಮಾಡಬೇಕು, ಅಥವಾ ಧಾನ್ಯವನ್ನಾದರು ಕೊಡಿಸಬೇಕೆಂದು ಪ್ರಾರ್ಥಿಸಿ ಲಂಗರ್ ಖಾನೆಯ ಮೂಲಕ ಜೀವಿಸುವ ಜನರು ಬರೆದುಕೊಂಡ ಅರ್ಜಿ.

೬. ಮ್ಯುನಿಸಿಪಲ್ ಸರಹದ್ದಿನೊಳಗೆ ಇಡಲ್ಪಟ್ಟಿರುವ ಟ್ರಾನ್ಸಿಟ್ ಕಂಪೆನಿಗಳ ಗಾಡಿ ಹೊಡೆಯುವವರು ಲೈಸೆನ್ಸ್ ಪಡೆಯದೆ ಇದ್ದ ಬಗ್ಗೆ ಚಾರ್ಜ್ ಮಾಡಲ್ಪಟ್ಟ ಮೂರು ಮೊಕದ್ದಮೆಗಳನ್ನು ಸಿಟಿ ಮ್ಯಾಜಿಸ್ಟ್ರೇಟರು ತಳ್ಳಿಹಾಕಿ ಬಿಟ್ಟಿರುವದರಿಂದಲೂ, ಬಾಡಿಗೆ ಗಾಡಿಗಳನ್ನು ಕುರಿತ ಕಾನೂನ್ ಮತ್ತು ನಿಬಂಧನೆಗಳು ಮ್ಯುನಿಸಿಪಲ್ ಸರಹದ್ದಿನ ಹೊರಗಡೆ ಇಡಲ್ಪಟ್ಟಿರುವ ಟ್ರಾನ್ಸಿಟ್ ಕಂಪೆನಿಗಳ ಸ್ವಂತಗಾರರ ವಿಷಯದಲ್ಲಿ ಅನ್ವಯಿಸುವದಿಲ್ಲವೆಂದು ಚೀಫ್‌ಕೋರ್ಟಿನವರು ಕೊಟ್ಟ ಫೈಸಲನ್ನು ಮ್ಯಾಜಿಸ್ಟ್ರೇಟರು ನಂಬಿ ಮೇಲಿನಂತೆ ಮಾಡಿದರೆಂತಲೂ ನಮೂದಿಸಿ ೧೮೯೭ನೇ ಇಸವಿ ಸೆಪ್ಟಂಬರ್ ೬ನೇ ತಾರೀಖಿನಲ್ಲಿ ಬಾಡಿಗೆ ಗಾಡಿ ಇನ್‌ಸ್ಪೆಕ್ಟರವರು ಬರೆದ ರಿಪೋರ್ಟ್.

೭. ಬೆಂಗಳೂರು ಸಿಟಿಯಲ್ಲಿ ಪಾಯಿಖಾನೆಗಳನ್ನು ಗುಡಿಸುವದಕ್ಕೆ ಕಂಟ್ರಾಕ್ಟ್ ಮೊಕರರ್ ಮಾಡುವ ಮತ್ತು ಹಲಾಲ್ ಖೋರರು ಹೋಗುವದಕ್ಕೆ ಸಂದು ದಾರಿಗಳು ಮಾಡುವ ವಿಷಯದಲ್ಲಿ ೧೮೯೭ನೇ ಇಸವಿ ಆಗಸ್ಟ್ ೨೬ನೇ ತಾರೀಖಿನಲ್ಲಿ ಬೋರ್ಡಿನವರು ಮಾಡಿದ ೬ನೇ ನಂಬರ್ ನಿರ್ಣಯವನ್ನನುಸರಿಸಿ ಮೊಕರರ್ ಮಾಡಲ್ಪಟ್ಟ ಸಬ್ ಕಮಿಟಿಯವರು ಮಾಡಿದ ಪ್ರೊಸೀಡಿಂಗ್ಸ್.

೮. ಹೊಸ ತಿಗಳರ ಪೇಟೆಯಲ್ಲಿರುವ ಕೆಲವರು ತಿಗಳರು ಪ್ರತಿ ದಿನವಲ್ಲೂ ತಮ್ಮ ಮನೆಗಳಲ್ಲಿನ ಪಾಯಖಾನೆಗಳನ್ನು ಶುಚಿ ಮಾಡಿಸುವ ಬಾಡಿಗೆಯಿಂದ ತಮ್ಮನ್ನು ವಿನಾಯಿಸಬೇಕೆಂತಲೂ, ಅನೇಕ ಸಂವತ್ಸರಗಳ ಕಾಲದ ಮೊದಲು ತಾವು ಮಾಡಿಕೊಂಡಿರುವ ಪಾಯಖಾನೆಯ ಗುಣಿಗಳನ್ನೇ ಮುಂದೆಯೂ ಇಟ್ಟುಕೊಳ್ಳುವದಕ್ಕೆ ತಮಗೆ ಅಪ್ಪಣೆ ಕೊಡಬೇಕೆಂತಲೂ ಬರೆದುಕೊಂಡ ಅರ್ಜಿ.

೯. ಸಾಬಕ್ ಮ್ಯುನಿಸಿಪಲ್ ಓವರ್‌ಸಿಯರಾದ ಎಂ. ರಘುನಾಥರಾಯರು ೧೮೯೭ನೇ ಇಸವಿ ಜುಲೈ ೨೦ನೇ ತಾರೀಖಿನ ವರೆಗೆ ತಮ್ಮನ್ನು ಬಿಡುಗಡೆ ಮಾಡಲಿಲ್ಲವೆಂತಲೂ, ಹಾಗೆಂತು ೧೭ನೇ ತಾರೀಖಿನ ವರೆಗೇನೆ ತಮಗೆ ತಲಬು ರಜವೂ ಹೂಮತಿಯಾಗಿದೆಯೆಂತಲೂ, ಅದೇ ತಿಂಗಳ ೧೮ನೇ ತಾರೀಖ್ ಮೊದಲು ೨೦ನೇ ತಾರೀಖ್ ವರೆಗೆ ಉಳಿಯ ದಿನಗಳೂ ಸಹ ತಮಗೆ ತಲಬೂ ಕುದುರೆಯ ರಜವೂ ಸ್ಪೆಷಲ್ ರಜವೂ ಸಲ್ಲಬೇಕೆಂತಲೂ ಬರೆದುಕೊಂಡ ಅರ್ಜಿ.

೧೦. ಮ್ಯುನಿಸಿಪಲ್ ಸ್ಥಳವಿಸ್ತೀರ್ಣ ತಿಯಂಕಟುತ ಖಾನೇಷುಮಾರಿ ಲೆಕ್ಕವನ್ನು ತಯಾರುಮಾಡುವ ವಿಷಯದೊಳು ೧೮೯೭ನೇ ಇಸವಿ ಜುಲೈ ೧೯ನೇ ತಾರೀಖಿನಲ್ಲಿ ಗವರ್ನಮೆಂಟಿನವರು ಮಾಡಿದ $\frac{5\ 0\text{–}9}{\text{R}\ 187}$ ನೇ ನಂಬರ್ ಪ್ರೊಸೀಡಿಂಗ್ಸ್, ಮತ್ತು ಮ್ಯುನಿಸಿಪಲ್ ಕಂದಾಯದ ಕಲೆಕ್ಟರವರು ಸದರೀ ಕೆಲಸಕ್ಕೆ ಹಂಗಾಮಿ ರಾಯ್ ಜಾಸ್ತೀ ಸಿಬ್ಬಂದಿಯು ಕೊಡಿಸಬೇಕೆಂದು ೧೮೯೭ನೇ ಇಸವಿ ಸೆಪ್ಟಂಬರ್ ೧೪ನೇ ತಾರೀಖಿನಲ್ಲಿ ಬರೆದ ೧೨೦ನೇ ನಂಬರ್ ಯಾದಿ.

T T LEONARD,
President,
City Municipal Commission

NOTICE.

VAIDYASARA SANGRAHA.

A TREATISE ON THE PRINCIPLES OF

HINDU MEDICINE

Price, including Postage Rs. 5-0-0.

ವೈದ್ಯಸಾರಸಂಗ್ರಹ.

ಇದು ಚರಕ, ವಾಹಟ, ಸುಶ್ರುತ, ಶಾರ್ಙ್ಗಧರಾದ್ಯನೇಕ ಪೂರ್ವಗ್ರಂಥಗಳ ಸಂಗ್ರಹ ರೂಪವಾಗಿರುತ್ತೆ,

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಹಾಸಲ್ ಸೇರಿಲ ಪ್ರತಿ ೧ಕ್ಕೆ ೫—೦—೦

ಬೇಕಾದವರು ಬೆಂಗಳೂರು ಕರ್ನಾಟಕ ಪ್ರೆಸ್ ಪ್ರೊಪ್ರೈಟರವರಿಗೆ ಬರೆದು ತರಿಸಿಕೊಳ್ಳಬಹುದು.

V. IYANOR'S
PREPARATIONS.
ವಿ. ಅಯನಾರ್ ಎಂಬವರಿಂದ ತಯಾರುಮಾಡಲ್ಪಟ್ಟ ಪ್ರಸಿದ್ಧ ಔಷದಗಳು.

ಪೆಯಿನ್‌ಕ್ಯೂರ್.—ಇದು ಹೊಟ್ಟೆಶೂಲೆ, ಅಜೀರ್ಣ, ಕರುಳು ನೋವು, ವಾಂತಿಭೇದಿ, ಅಜೀರ್ಣಭೇದಿ, ಬೇಳುಕದಡು, ಕೆಮ್ಮು, ಮೂತ್ರತಡೆ, ಬಾಯಿಹುಣ್ಣು, ರಕ್ತಸ್ರಾವ, ಆರ್ತವ ದೋಷಜನ್ಯಗಳಾದ ಸ್ತ್ರೀಯರ ಉಪಾಧಿಗಳು, ತಲೆನೋವು, ದಂತಶೂಲೆ, ಛಳಿಯ ಜ್ವರ ಮೊದಲಾದವುಗಳಿಗೆ ಬಹಳ ಉಪಯುಕ್ತವಾದದ್ದು. ಇದರ ಕ್ರಯ ದೊಡ್ಡಸೀಸೆ ೧ಕ್ಕೆ ೧ ರೂ. ಸಣ್ಣಸೀಸೆ ೧ಕ್ಕೆ ೮ ಆಣೆ.

ವಿಷ್ಣುವಾಯು ತೈಲ—ದೀರ್ಘಕಾಲಿಕ ನೋವು, ಪಕ್ಕಶೂಲೆ, ಸೊಂಟನೋವು, ತಲೆಶೂಲೆ ಇವು ಪರಿಹಾರವಾಗುವದು. ಇದರ ಕ್ರಯ ದೊಡ್ಡಸೀಸೆ ೧ಕ್ಕೆ ೧ ರೂ ಸಣ್ಣ ಸೀಸೆ ೧ಕ್ಕೆ ೮ ಆಣೆ.

ಜ್ವರದ ವೈರಿ—ಇದು ಎ ತಾ ಜ್ವರವಾದ್ದಾದರು ಎರಡು ದಿನಗಳೊಳಗಾಗಿ ನಿವೃತ್ತಿ ಮಾಡತಕ್ಕದ್ದು. ದೊಡ್ಡ ಸೀಸೆ ೧ಕ್ಕೆ ೧ ರೂ ಸಣ್ಣಸೀಸೆ ೧ಕ್ಕೆ ೮ ಆಣೆ.

ಓಮಕರ್ಪೂರದ ಕೊರ್ಡಿಯಲ್—ಇದು ಶೀತಭೇದಿ, ರಕ್ತಭೇದಿ, ರಕ್ತಸ್ರಾವ, ಅಜೀರ್ಣ, ವಾಂತಿ, ಎದೆನೋವು, ಕೆಮ್ಮು ಇವುಗಳಿಗೆ ಬಹಳ ಪ್ರಯೋಜನಕರವಾದದ್ದು ಇದರ ಕ್ರಯ ದೊಡ್ಡಸೀಸೆ ೧ಕ್ಕೆ ೧ರೂ. ಸಣ್ಣಸೀಸೆ ೧ಕ್ಕೆ ೮ಆಣೆ.

ಮೋಕಾಶಾಗಸು ಎಣ್ಣೆ—ಇದು ಸೋರಿಯಾಸಿಸ್‌ನಿಂದ ಗಜಕರ್ಣ ಉಬ್ಬುವದು, ಚರ್ಮವು ಒಡೆಯುವದು, ಹಾಸ್ಟರ್ ಇತ್ಯಾದಿಗಳು, ಗ್ರಂಥಿಗಳು ಎಲ್ಲಾಗಳಲ್ಲಿ ಬಹಳ ಉಪಯುಕ್ತವಾದದ್ದು. ಇದರ ಕ್ರಯ ದೊಡ್ಡಸೀಸೆ ೧ಕ್ಕೆ ೧ರೂ ಸಣ್ಣಸೀಸೆ ೧ಕ್ಕೆ ೮ಆಣೆ

ಪ್ಲಾಸ್ಟರ್ ತೈಲವು—ಇದು ನಡುವು ನೋವು, ಕೀಲುನೋವು, ಬೆನ್ನುನೋವು, ಅರತಲೆನೋವು, ಬಿಸಿಲ್ಗೆ ಹೊಡೆತ ಇವುಗಳಿಗೆ ಪ್ರಸಿದ್ಧವಾದ ತೈಲವು. ದೊಡ್ಡ ಡಬ್ಬಿ ೧ಕ್ಕೆ ೧ ರೂ, ಸಣ್ಣ ಡಬ್ಬಿ ೧ಕ್ಕೆ ೮ ಆಣೆ

ಸ್ತ್ರೀಶಕ್ತಿವರ್ಧನ—ಇದು ಸಕಲವಿಧ ಮೇಹರೋಗಗಳಿಂದ ಜನಿಸುವಬಿಳುಪು, ಹಳದಿ ವರ್ಣದ ಸ್ರಾವವು, ಗರ್ಭದ ರೋಗಗಳಿಗೆಲ್ಲಕ್ಕೂ ದಿವ್ಯವಾಗಿಯೂ, ಮತ್ತು ಎಂದಿಗೂ ಬಾರದಂತೆ ನಿರ್ಮೂಲವಾಗಿಯೂ ಗುಣಪಡಿಸತಕ್ಕಂತಹ ಔಷಧ. ಇದರ ಕ್ರಯ ಸೀಸೆ ೧ಕ್ಕೆ ೧ ರೂ. ೮ ಆಣೆ

ಕೂದಲು ನೆರೆಯದೆ ಕಪ್ಪಾಗಿ ಬೆಳೆಯುವಿಕೆ ಔಷಧ—ಈ ತೈಲವು ನರೆತ ಕೂದಲುಗಳನ್ನು ಕಪ್ಪಾಗಿಮಾಡುವದು. ಕೂದಲು ಬೆಳೆಯದಿರುವ ಸ್ಥಳಗಳಲ್ಲಿ ಹುಟ್ಟಿ ಬೆಳೆಯುವದು. ಇದನ್ನು ತಲೆಗೆ ಹಚ್ಚಿಕೊಂಡು ಸ್ನಾನಮಾಡಬಹುದು ಮತ್ತು ಸುವಾಸನೆಯುಳ್ಳದ್ದಾಗಿರುತ್ತದೆ. ಇದರಕ್ರಯ ಸೀಸೆ ೧ಕ್ಕೆ ೧ ರೂ

ಕರ್ಣರೋಗದ ತೈಲ—ಈ ತೈಲವನ್ನು ೮ ದಿನಗಳವರೆಗೆ ಕಿವಿಯಲ್ಲಿ ಕೆಲವು ತೊಟ್ಟುಗಳು ಬಿಡುತಬಂದರೆ, ಕಿವಿಯಲ್ಲಿನ ಸಕಲ ಹೊಸಹಳೆ ವ್ಯಾಧಿಗಳನ್ನು ಪರಿಹರಿಸುವದು. ಇದರ ಕ್ರಯ ೧ ರೂಪಾಯಿ

ನೆಗಡಿಯ ಔಷಧ—ಈ ಔಷಧವು ಎಂಥ ಹಳೆಯದಾದ ನೆಗಡಿಯಾದರು ಕೆಟ್ಟುಹೋಗಿರುವ ಮೂಗಿನ ರಸವನ್ನು ಹೊರಟುಹೋಗುವಂತೆ ಮಾಡುವದು. ಇದಲ್ಲದೆ ಜಲದೋಷದಿಂದ ಹುಟ್ಟುವ ಎಂಥ ವ್ಯಾಧಿಯನ್ನಾದರು ಪರಿಹರಿಸುವದು. ಇದನ್ನು ಉಪಯೋಗಿಸುವ ವಿಧಾನ—ದಿನಕ್ಕೆ ಎರಡುಸಾರಿ ಭೋಜನವಾದ ಮೇಲೆ ಸ್ವಲ್ಪ ನೀರಿನಲ್ಲಿ ಕಲೆಸಿ ತೆಗೆದುಕೊಳ್ಳಬೇಕು. ಇದರ ಕ್ರಯ ರೂ. ೧.

☞ ವಿಳಾಸ—ಬಳ್ಳಾರಿ ಬ್ರೂಸ್ ಪೇಟೆಯಲ್ಲಿರುವ ವಿ. ಅಯನಾರ್ ಡಿಸ್ಪೆನ್ಸರಿಗೆ ಬರೆದು ತರಿಸಿಕೊಳ್ಳಬಹುದು

MESSRS V IYANOR & Co's. DISPENSARY,
Bellary

ಈ ಕಂಪೆನಿಯು ಸನ್ ೧೮೯೩ನೇ ಇಸವಿಯಲ್ಲಿ ಸ್ಥಾಪಿತವಾಯಿತು.

ಜನ್ಮದ ಲಾಭವು.

ವಜ್ರಾಂಗ ಖರ್ಜೂರವು.

ಬಲಾರೋಗ್ಯ, ಪುಷ್ಟಿಗಳನ್ನು ಬೆಳಸತಕ್ಕ ಉತ್ತಮೌಷಧಿಯು.

ಅತ್ಯಾಶ್ಚರ್ಯಕರವಾದ ಬಳ್ಳಿಗಳಿಂದ ತಯಾರಿಸಿದ ಈ ಉತ್ತಮೌಷಧಿಗಳು ಕೊಂಕಣಪ್ರಾಂತದ ಅನೇಕ ವನಸ್ಪತಿಗಳ ಸಾರಗಳ ಪುಟಗಳನ್ನು ಕೊಟ್ಟು, ದುಷ್ಪದೊಳಗೆ ಹಾಕಿಸಿ, ಒಳ್ಳೇ ಜೇನಿನ ತರಗತಿಯ ಸಕ್ಕರೆಯ ಪಾಕದಲ್ಲಿ ಸಿದ್ಧ ಮಾಡಿರುತ್ತೇವೆ. ಈ ಉತ್ತಮೌಷಧಿಗಳು ಮಹೌಷಧಿಗಳಿದ್ದು, ಒಳ್ಳೇ ರುಚಿಯುಳ್ಳವು. ಇವುಗಳ ಸೇವನೆಯಿಂದ ಕಫ, ವಾತ, ಪಿತ್ತ ಈ ತ್ರಿದೋಷಗಳಿಂದುಂಟಾಗತಕ್ಕ ಯಾವತ್ತು ಬಗೆಯ ವ್ಯಾಧಿಗಳೂ ಹೋಗುತ್ತವೆ. ೬೦ ವರ್ಷಗಳ ಪ್ರಾಯವುಳ್ಳ ಮುದುಕರ ಶರೀರ ವಿಕಾರವಾದರೂ ಪರಿಯಾದ ಗಂಡಸರಂತೆ ಪ್ರಜ್ವಲಿತವಾಗುತ್ತದೆ. ಜನನೇಂದ್ರಿಯದಲ್ಲಿ ಬಲ ಹುಟ್ಟಿ ನಪುಂಸಕತ್ವವು ಇಲ್ಲದಂತಾಗುತ್ತದೆ. ಲೋಳೆಯ ಮಂಟೆ ಅಥವಾ ಹಿಂಡಿ ಹರಿದುಹೋಗುವ ಧಾತು ನಿಲ್ಲುತ್ತದೆ. ಸ್ವಪ್ನಾವಸ್ಥೆಯಾಗುವದಿಲ್ಲ. ವೀರ್ಯವು ಬೆಳೆದು ಮೈ ಬಣ್ಣವು ಸುಧಾರಿಸುತ್ತದೆ. ಜರಾವ ಹಾಗೂ ಉಷ್ಣಸಂಬಂಧಿಕ ಬೇನೆಗಳಿಗೆ ಸರಿ ಇಲ್ಲದಂತಾಗಿ ಧಾತು ಪುಷ್ಟವಾಗುತ್ತದೆ. ಮೂರು ಹೊತ್ತಿಂದಲೂ ಅನ್ನ ಪಚನವಾಗಿ ಒಳ್ಳೇ ಹಸಿವೆಯಾಗುತ್ತದೆ. ಹೋಗುವದೊಂದೆ ತಡ ಕೂಡಲೇ ಸ್ಪಷ್ಟ ಸೌಚವಾಗುತ್ತದೆ. ಕ್ಷಯ, ಉದರ, ದಮ್ಮು ಈ ರೋಗಗಳು ನಾಶ ಹೊಂದುತ್ತವೆ. ಹೊಸ ಬೇನೆ ಇದ್ದಲ್ಲಿ ೧೧ ದಿವಸ . ಹಳೆ ಸಾಲುವ ಒಂದೇ ಡಬಿಯಿಂದ ಗುಣವುಂಟಾಗುತ್ತದೆ. ಮತ್ತು ಹಳೆಯದ್ದಲ್ಲಿ ೪೦ ದಿನದ ಮೇಲೆ ಗುಣ ಬಂದೀತು. ೧೧ ದಿನಗಳವರೆಗೆ ಸಾಲತಕ್ಕ ೧ ಡಬ್ಬಿಗೆ ೧—೪—೦ ರೂ|| ಒಂದೇಸಾರಿ ೪ ಡಬ್ಬಿಗಳು ತಕ್ಕೊಳ್ಳತಕ್ಕವರಿಗೆ ಒಂದು ಡಬ್ಬಿ ಮೊ. ಉಚಿತವಾಗಿ ಸಿಕ್ಕೀತು. ಈ ಉತ್ತಮೌಷಧಿಯಿಂದ ಹೆಂಗಸರು ಸಶಕ್ತರಾಗುತ್ತಾರೆ. ಕರಗಿನ ಶಾಶಗೂ ಬಾಣಂತಿ ಬೇನೆಗಳು ವಾಸಿಯಾಗುತ್ತವೆ. ಎಲ್ಲರನ್ನು ಸರಿಯಾಗಿ ಬೇರೆ ಇಲ್ಲದವರನ್ನಾಗಿಮಾಡಿ ಬಲಾರೋಗ್ಯ ಪುಷ್ಟಿಗಳನ್ನು ಬೆಳಸುತ್ತವೆ. ಸಾಹೇಬ್ ಜನರಲ್ಲಿ ಬಹಳ ಡಬ್ಬಿಗಳು ಖಚಾಗುತ್ತವೆ. ಈ ಔಷಧವು ಈ ಕಂಪೆನಿಯಹೊರ್ತು ಬೇರೆ ಸ್ಥಳದಲ್ಲಿ ಸಿಗುವದಿಲ್ಲ. ಯಾವತ್ತು ದೇಶಗಳಲ್ಲಿಯು ವೈದ್ಯಶಾಲೆಗಳಿಗಾಗಿ ಕಳುಹಿಸಲ್ಪಡುತ್ತದೆ. ಬರೆದು ಒಂದು ಕಾಗದ ಈ ಕಂಪೆನಿಯು ಬೇಕಾದವರಿಗೆ ಈ ಡಬ್ಬಿಗಳು ಕಳುಹಿಸಿಕೊಟ್ಟೀತು. ಅಂಚೆಯ ಹಾಗೂ ವ್ಯಾಲ್ಯು ಪೆಯಿಬಲ್ ಖರ್ಚು ಬೇರೆ ಕೊಡಬೇಕು. (ಉಚಿತ ಡಬ್ಬಿ ಸಹ ೪ ಡಬ್ಬಿಗಳು ಬೇಕಾದವರಿಗೆ ಒಂದೇ ದೊಡ್ಡ ಡಬ್ಬಿಯಾದ್ದರಿಂದ ಎಲ್ಲಾ ಖರ್ಜೂರದ ಸಾಕಿ ದೂರನಿಸುವವು, ಹೀಗೆ ಕಳುಹಿಸಿದರೆ ಪೋಸ್ಟಲ್ ಖರ್ಚು ಕಡಮೆ ಬೀಳುವದು.)

ಮೋಕ್ಷಿಳಾಸ—ಪಿ. ಎಲ್. ಎ. ಬ್ರದರ್ಸ್ ಮತ್ತು ಕಂಪೆನಿ,

ಫಸ್ಟ ಇಂಗ್ಲಿಷ್ ಅಸಿಸ್ಟಂಟ್ ಆಫೀಸ್, ಡಿಸ್ಟ್ರಿಕ್ಟ್ ಬೆಳಗಾಂವ.

ಪೋಸ್ಟ—ಬೆಳಗಾಂವ. Post BELGUAM.

BANGALORE—Printed and Published at the KARNATAKA PRESS, No. 40, HOSPITAL ROAD, CITY,—1897.

THE

Karnataka Prakasika.

ವ ಕಟನೆಯ ರವಾಜ } ಮೊದಲನೆಯವಧೆ ಪಜ್ತಿ ಬಂದಕ್ಕೆ 0 2 0
} ಎರಡನೆಯ ದಥೆ ಪಜ್ತಿ ಬಂದಕ್ಕೆ 0 1 0
ಕ್ಷೌರವರು ಎರಡಾವರ್ತಿಗಿಂತ ಹೆಸ್ತ್ರೀಯಾಗಿ ಎಷ್ಟುತಹವಪೆಲಯಿಷ್ಷವರು ದಿವಾಗ್ಯ ಪಜ್ತಿಬಂದಕ್ಕೆ ಉಲೆಸಯಂತೆಯೇ ಲೆಕ್ಕ ಮಾಡಲ್ಪಡುವದು]

ಕರ್ಣಾಟಕ ಪ್ರಕಾಶಿಕಾ.

Published Every Monday Morning

ಚಂದಾವರಗಳು —ಸ್ಥಳವವರಿಗೆ, ಪರಸ್ಥಳದವರಿಗೆ, ಪೋಸ್ಟೇಜ್ ಸೇರಿ
ಸಂಪ 1 ಕ್ಕೆ . 5 0 0 | ಸಂಪ 1 ಕ್ಕೆ . . 4 0 0
6 ತಿಂಗಳಿಗೆ, . . 2 0 0 | 6 ತಿಂಗಳಿಗೆ . . 2 8 0
3 ತಿಂಗಳಿಗೆ, . 1 4 0 | 3 ತಿಂಗಳಿಗೆ · · 1 8 0

ಪ್ರಕಾಮವಿವಿಧಗ್ರಂಥತತ್ತ್ವನಗವಮಾರ್ಗ ಕರ್ಣಾಟಕಸ್ಯಕ.ಜನಪದ.ಫಿಧಾಪ್ರಥಿತಸ.ಹಿತೀಲೋಚಿತಾ || ಪ್ರಾಗಂಕಹಿತವಾಸುರನಿಹಿತವಮುದ್ರಾಜಸಜ್ಜನ್ಸೈರ್ಕಿಶಾಸುಜನೋಷಿತ.ದಿತಿಷಮಾನಸಂಪಂಮದಂ ||

Vol. XXIV. BANGALORE:—MONDAY, SEPTEMBER 27, 1897. No. 39.

Select Telegrams

London 17th Sept—The treaty of peace as finally agreed upon by the Ambassadors, provides for the evacuation of Thessaly one month after the International Control of the Assigned Revenues is established

London 19th Sept—The treaty of peace between Turkey and Greece was signed at Pera yesterday

The Greek Chamber will meet immediately to consider the Treaty of Peace which the Government declares to be onerous especially regarding the foreign control of finances

It is officially announced that General Lockhart succeeds General White as Commander in Chief in India

The King of Siam is returning to London. Before leaving Paris his Majesty had a long conference with M Hanotaux regarding prevention of frontier incidents. President Faure bade a cordial farewell to the King at Havre

The King of Siam has returned to England and is at present staying at Taplow

The Paris *Figaro* says that Mons Hanotaux is much gratified with the results of the King of Siam's visit

Now that the King of Siam has left France the majority of the French press have renewed their attacks upon him, and declare him openly hostile to France and a tool in the hands of England

It is announced at St Petersburg that the Khabarovska Vladivostock line of railway will be completed shortly, and open for traffic

Athens 20th September—M Ralli, the Greek Premier, in an interview with a press correspondent, declared that the attitude of the Powers towards Greece was harsh as it was unexpected. He described the foreign financial control as an infernal machine devised for the benefit of creditors

The Ambassadors at Constantinople, having finished the peace negotiations are leaving on a holiday

London, 20th Sept—A Cairo telegram states that a detachment of British troops who were at a hotel in the Egyptian village of Qalioub were yesterday stoned by the people there

Poona 25th Sept—Half a dozen cases of death from plague in the city occur every day and more in suburbs and in the district. His Excellency the Governor called forty leading gentlemen of the place to see him. The interview lasted from 10 A M to 1 P M. In batches of five they were called to propose measures. More authorities for native volunteers was unanimously asked. One British and two native soldiers with one lady doctor and one volunteer gentleman it was suggested, should form search party

THE

Karnataka Prakasika.

MONDAY SEPTEMBER 27, 1897

THE MYSORE POLICE REPORT

We have received a copy of the Report of the working of the Police Administration in this province for the year 1895 96, and we cannot help wondering why it was not sent out a year earlier. As far as we can remember this long delay in sending forth public documents is peculiar to Mysore. In other parts of the country they are sent out soon after the end of the year about which they treat. But such expedition is too much for this province. The authorities believe there is no hurry, and so they send forth reports and such like works one year after the time they would have been published elsewhere. We cannot say who is responsible for this delay, whether those who draw up the reports or the press where they are printed. Wherever the blame lies it should be brought to the notice of the responsible officers and corrected. The report is so good that it might well have been given to the world earlier. It shows that the police force is a body is improving, that many changes have been introduced, and that other changes are contemplated. There is a slight change for the better as regards crime, though not much. Still the province compared well in this particular with other parts of India, and the individual members of the force are as good as they are elsewhere. The book itself is well got up, and is very exhaustive. There are maps in it explaining the different phases of crime in the province, and these are very useful. The statistics at the end of the work must have taken a long time in compilation. Mr Madhava Rao has done his work well, and is consequently to be congratulated. The pity is as we have said, that it should have come out so late. In these days of railways, telegraphs and telephones such slow work is very much out of date. We are told that during the year under report the number of cases reported to the police fell by 258, or 4·9 per cent on the preceding year. During the year the number was 5,169. The report tells us that crime was on the increase during the year in the districts of Kolar, Shimoga, French Rocks, and in the Bangalore City, and that it decreased in all the other districts. As regards the increase in Bangalore it is said that a good many of these were only nuisances. The report tells us that comparing the figures under report with those of the previous year it will be seen that there was an increase of crime under murder, dacoity and thefts, and a decrease under the head of cattle stealing. It is satisfactory to find that detection was better than in the previous year. The percentage under the head of dacoity was 28 6, the highest on record since 1873. It is a difficult crime to detect, and so the result of the year must be considered good. We find there is a marked decrease of nineteen under the head of grievous hurt, murder, kidnapping and six under administering stupifying drugs. In every civilised country there must be a certain proportion of police to population, and this ought to be greater where crime most prevails. We find that the proportion is highest in the Bangalore district and lowest in the French Rocks sub division. As regards the proportion of police to investigated crime, Hassan has the smallest proportion with Kolar next to it. Kadur and French Rocks are the next in order, while Mysore, Chitaldrug and the Railway have the largest proportion of police to investigated crime. The total number of cases taken up by the Magistrates direct during the year under report was 977. It will be seen from the figures given in the report that among the districts Kadur, Mysore and Tumkur contribute the largest figures, and that Kolar and Chitaldrug contribute the least. The percentage of direct cases to the total number reported was 15 75 against 13 6 in the year before. Of the 977 mentioned, we find that 359 ended in conviction, 396 in acquittal or discharge, 138 were dismissed, and the remaining 184 were pending before the courts at the end of the year. The percentage of convictions to direct cases decided was 47 5 against 75 06 for cases reported to the police. From tabular statements given it will be seen that the year generally shows some improvement on the one that went before. Cases reported to the Magistrates direct and disposed of by them without the intervention of the police were begun to be shown in the police returns only from the year before, and so the percentage of cases investigated by the police to the total number reported could not be given for the first three years. The percentage of property recovered to that reported to be stolen rose by eleven percent, and this is a noteworthy advance. Upon the whole we find that the percentage of convictions to cases decided for the year under report compared very favourably with the percentages of the previous four years. We must now take leave of this report, and it must be acknowledged that the condition of police affairs is as good in Mysore as anywhere else in India, and that the province may congratulate itself on this fact

News and Notes

Most of the European sovereigns congratulated the Sultan on the conclusion of peace with Greece

IRELAND is threatened with a severe famine the potato crop having failed, and it is feared that 1845 will recur again

The Governor of Crete has protested on behalf of the Porte regarding the establishment of an International Police

THE Government of India has ruled that the British Raj has the right to permit any to use a saloon carriage on the North Western line on payment of first class fares

WORKING PARTIES have been organised in America, similar to those started in England by Mrs Hauser, for clothing the destitute women of India in the Famine

QUEEN VICTORIA has strong objections to any one smoking in her neighbourhood. There are however, some very fine Havannah cigars specially made for her which she evidently uses for gifts to guests

THE steamer, the *Polyhymnia* bound from Colombo for London, has been wrecked in Jeboll in the Red Sea. All the crew have been lost except 27. Assistance has been sent from Perim

MAJOR RAJKUMAR BIR DIKRAM SINGH, second son of the Maharaja of Sirmoor, has proceeded to Kohat in the command of the Sirmoor Sappers. He is the first native chief who has gone on active service in command of his troops

THE Government of India have prohibited the sales of Buddhist sculptures hitherto going on in Rawalpindi. It appears that the district abounds in these antiquities, and they were hitherto improperly acquired and sold to the public

THE Postal authorities of London recently referred to the Indian authorities the question of extending the Express delivery system to India. After due consideration, the Indian authorities have replied that at present no necessity exists for the extension. This is to be regretted

THE local *Paisa Akhbar* reports that the other day the Collector Magistrate of the District of Shahjehanpur leapt down from a train, moving at great speed, into the Gara (?) river to save a boy whom he had seen fall from the bridge into the stream as the train approached

AT the International Labour Congress held at Zurich last month, a resolution was passed condemning the employment of children under 15 years on any kind of productive work and the employment of persons of between 15 and 18 years of age for more than eight hours a day. This is humane.

The *Daily News* correspondent at Rome says that an understanding exists between Russia, Germany, France and Austria about the Levant in view of an eventual division of spoils, and adds that efforts are being made to induce Italy to join the league

MR Woolford, the newly appointed United States Minister at Madrid had a long interview yesterday with the Spanish Foreign Minister, and it is understood that he told him, courteously, but firmly, that if war in Cuba was not brought to a close by the end of October, the Government of the United States would consider themselves justified in taking measures for securing the independence of Cuba

A NUMBER of editors and printers of newspapers in Poona have announced the severance of their connection with the Press, and have asked the District Magistrate to remove their names from the declarations annually furnished and to take down the names of men who have been substituted in their place. It is suspected that most of these are men of no position whatever, and the District Magistrate has asked the Police to enquire and report upon their respective worth and standing in Society

SIR DEEB SHUMSHEER, the Prime Minister of Nepal, is credited with a sudden fit of profound loyalty towards the British Government which has taken the form of a *jehad* prohibiting the entry into the country of certain seditious Indian newspapers. This act of the Prime Minister has drawn the *Pioneer's* praise and that journal holds it out, as an excellent example for Ministers of Model Native States to follow. This might save the proscribing of the *Pioneer* when Sir Deeb ernest sets about considering the prohibition of newspapers who are systematic abusers of the Natives

EVANGELINA CISNEROS, a Cuban girl, niece of the President of the Cuban Republic, has been sentenced to 20 years' imprisonment on a charge of rebellion. A very great deal of interest is shown in her behalf in America. She is young and attractive, and refused to yield

to the Governor of the Isle of Pines, whom she is accused of having decoyed to her house for assassination. About 20,000 American women, including the wife of the President of the United States and every other distinguished woman, have addressed a petition to the Queen of Spain praying for her liberation

PROFESSOR FRASER, F R S has recently demonstrated by experiments that snake venom has no ill effects when introduced into the stomach of an animal, even when the dose would kill 1,000 such animals if injected under the skin The reason of this immunity lies in the bile Moreover, Professor Fraser, shows that when the bile of the serpent is mixed with its venom, the latter loses its virulence and a deadly dose fails to produce death The bile of other animals also has this antitoxic power in a lower degree It is possible, then, that bile may yet be employed as a cure for snake bite.

WRITING on what he describes as the "Currency muddle" in the *Statesman*, Mr Forbes Mitchell says —The Government of India are standing on a mine which only requires the match to be applied to shake the British Empire to its foundations If Russia ever intends to invade India, now is her time With silver at twenty three pence per ounce, let her coin and scatter a few lakhs—she need not go up to crores—in Central Asia, Afghanistan, and the North-West Frontier, with a few thousands amongst the Moplahs of Malabar, and the hands of Government will be full enough to divert them from the study of their exchange compensation for the cold season

Plague has again made its appearance in Surat, and cases are occurring there every day The medical authorities, under Surgeon Major Nariman, have commenced house-to-house visitation, and many a times they have succeeded in detecting patients, and removing them to the segregation shed Mr Moore the Collector, invited the editors of the papers published in that city, and warned them not to write anything against the plague measures, but to communicate privately with him and with Surgeon Major Nariman if they found any measure objectionable

Local and Provincial.

CLOSING —The Resident's Treasury was closed on the 25th instant, being the last Saturday in the month, and will be closed to day on account of the commencement of Dasara

A BRAHMIN MURDERER.—Last week we reported that a Brahmin was tried in the Hassan Sessions for the murder of his wife We further learn that he was convicted and sentenced to 5 years rigorous imprisonment.—M. H.

DASARA DURBAR ACCOMMODATION —The compound wall of the Jagan Mohan Palace has been knocked down to include roads around the building Several Brahmin houses adjoining it have been bought up to make room for the temporary pavilions under construction. Her Highness personally supervises the improvements in progress

H. H THE MAHARAJAH —His Highness is developing into a true and fine gentleman It has been noticed with pleasure that he never fails to return the salutation of the humblest of his subjects. When he does it he does it with such grace and charm that speak volumes for his training. He is punctual and systematic It is not understood why the Yuva Raj is not allowed to participate with his Royal brother in the benefits of this excellent training.

THEATRICAL COMPANY —The Parsee Theatrical Company have found favor with Her Highness the Maharanee who has given orders for the performance of two of their best operas in the Royal Palace during the Dussera The language will be no bar to the appreciation of the performances as the Royal Family is conversant with Hindustani. Her Highness and the Princesses are no mean linguists They are now studying Mahrathi and Parsi with a talented Parsi Lady, the daughter of Mr Framjee of Mysore In addition to the Palace performance the Company will perform for the public in the Town Hall, Mysore, from 25th instant.

THEFT OF A RAILWAY PARCEL —Thefts in Railways have become quite common Two months ago a parcel containing 32000 Rs was sent to a Marvarie by some man from Hindupur The parcel had not been delivered to the Marvarie for a long time, and hence he informed the matter to the Railway authorities, who instituted enquiries, and ultimately reported the loss to the police Inspector Hanumantha Row investigated the case, and found out that a brakesman of the S M R, named Susinathen, had made away with the parcel The latter was forthwith arrested, and on his house being searched, property of the value of about Rupees 1600 were found in cash, in clothes, and in jewels The police have not yet finished their investigation As soon as the investigation comes to a close, Suthinathan will have to stand his trial, before the Second Magistrate

The Mysore Gazette

Bangalore, Thursday, 23rd September 1897

NOTIFICATIONS BY THE GOVERNMENT OF MYSORE

No 3613—J 418, dated 18th Sep 1897

Mr M A Narayanaiengar Munsiff of Yelahalli, having availed himself of only twenty-eight days (26th June to 23rd July 1897) out of the two months' leave without allowances granted to him in Government Notification No 15583—J 1515, dated 19th June 1897, the unexpired portion of the said leave is hereby cancelled,

2 Mr Narayanaiengar's services are transferred for duty under the Tutor and Governor of His Highness the Maharaja for a period of two months from the 24th July 1897

3 Mr Ananda Rao Sira Acting Munsiff of Yedahalli, will continue to act as Munsiff in the last Class *Sub pro tem* during the employment of Mr Narayanaiengar on other duty or until further orders

No 3647—J 422, dated 18th Sep 1897

Under the provisions of Section 12 of the Code of Criminal Procedure, Mr S Seshagiri Rao, Munsiff and 3rd Class Magistrate of Sagar, is appointed a Magistrate of the 2nd Class

No 3781—Mis F 718 dated 22nd Sept, 1897

Mr Coimbatore S Balasundaram, B A, Mr Kuriyan Mathai, F A, Mr G Aravamudu Iyengar, B A and B L, and Mr Balavadi Ramaswamaiya, B A are appointed Probationary Assistant Commissioners.

No 2813—R 907, dated 14th Sept 1897

N Subba Rao, Amildar of the Tarikere taluk, who had been appointed as acting Assistant Superintendent of Police, Shimoga district, having reverted to his appointment as Amildar, C V K Sheshagiri Rao, Acting Amildar, 4th Class *Sub pro tem* who had been posted to the Tarikere taluk with the powers of a Magistrate of the 3rd Class, is transferred to the Chikkanayakanahalli taluk

No 3029—R F 137 96, dated, 16th Sept 1897

Under Article 188 of the Mysore Service Regulations, T Bava Rao Amildar of the Hoskote taluk, Bangalore district, is granted privilege leave of absence for one month, with effect from such date as he may avail himself of the same

2 H Narasingahbhan, Head Accountant, Office of the Inspector of Agricultural Banks is appointed to act as Amildar and 3rd Class Magistrate of the Hoskote taluk, during the absence of Amildar T Bava Rao, on leave or until further orders

MYSORE GEOLOGICAL DEPARTMENT

Notification No 110—1897-98, dated 21st September 1897.

Mr George Lavalle, Prospector, Geological Department, is granted four months' further leave without allowances in continuation of that sanctioned in Notification No. 102, dated 2nd April 1897

NOTICE.

ಇದರಿಂದ ಸಮಸ್ತ ಜನರಿಗೂ ತಿಳಿಸುವದೇನೆಂದರೆ

೧೮೯೭ನೇ ಇಸವಿ ಆಗಸ್ಟ್ ೨೭ನೇ ತಾರೀಖಿನ ರಾತ್ರಿ, ಜಹಗೀರ್ ತಾಲ್ಲೂಕು ಶೃಂಗೇರಿಯಲ್ಲಿ ಪೆಟ್ಟಿಗೆಯಲ್ಲಿಟ್ಟಿದ್ದ ಕೆಲವು ನಗದು ವೊಬಲಗು ಮತ್ತು ಇವರು ತಿಳಿಸಲ್ಪಡುವ ನಂಬರ್‌ಗಳುಳ್ಳ ಧರ ನೂರು ರೂಪಾಯಿಗಳ ಬಾಬತು ಮದರಾಸ್ ಸರ್ಕಲ್ ಕರೆನ್ಸಿ ನೋಟುಗಳು ಐದು ಸಹ ಕಳವಾಗಿರುವದರಿಂದ ಅವುಗಳನ್ನು ಪತ್ತೆ ಮಾಡಿ ಕೊಟ್ಟವರಿಗೆ ಸಂಸ್ಥಾನದಿಂದ ಒಂದು ನೂರು ರೂಪಾಯಿಗಳ ಇನಾಂ ಕೊಡಲ್ಪಡುವದು

ನೋಟುಗಳ ನಂಬರ್‌ಗಳು — 00100—01073—12161-12160-12159

ಶ್ರೀಕಂಠಶಾಸ್ತ್ರಿ,
ಏಜಂಟ್

ಕರ್ಣಾಟಕ ಪ್ರಕಾಶಿಕಾ.

೧೮೯೭ನೇ ಇಸವಿ ಸೆಪ್ಟಂಬರ್ ತಾ|| ೨೭ನೇ ಸೋಮವಾರ

ಭಗವನ್ನಿಗ್ರಹೇಚ್ಛೆಗೆ ವಿಷಯವಾಗಿರುವ ಇಂಡ್ಯಾದೇಶದ ತಾತ್ಕಾಲಿಕ ಮಹಾ ಕೆಯಂ ಕುರಿತು

ಲೋಕದಲ್ಲಿ ಪುರುಷನ ಸಂಪತ್ಪ್ರಭವಗಳೂ ಸುಖದುಃಖಗಳೂ ಅಸ್ಥಿರಗಳೆಂಬುವದಕ್ಕೆ ಈಇಂಡ್ಯಾದೇಶೀಯರ ಪ್ರಕೃತಸ್ಥಿತಿಯೇ ನಿಃಶಾದ ನಿದರ್ಶನವಾಗಿರುತ್ತದೆ. ಏತದ್ದೇಶೀಯರ ದೌರ್ಭಾಗ್ಯವೆಂಬುವದು ವಿಧಿವಿಪರ್ಯಯದಿಂದ ನಾನಾಪ್ರಕಾರೇಣ ಪರಿಣಮಿಸಿ ಪ್ರಾಣ ಮಾನ ಧನ ಹಾನಿರೂಪವಾಗಿ ಏರ್ಪಟ್ಟ ನಿರಂತರವಾದ ದುಃಖಕ್ಕೆ ಅವರಂ ಗುರಿಮಾಡಿರುವಂತೆ ತೋರುತ್ತದೆ ಎಂತವನಿಗಾದರೂ ವರ್ತಮಾನ ಸ್ಥಿತಿಯು ದುರ್ಭರವಾಗಿ ತೋರುವಂತೆ ಭೂತಭವಿಷ್ಯಸ್ಥಿತಿಯು ಚಿಂತನೀಯವಾಗಿರಲಾರದು. ಪೂರ್ವದಲ್ಲಿ ಅನೇಕವಿಧ ದುರ್ದಶೆಗಳಿಗೆ ಈ ದೇಶವು ಪಾತ್ರವಾಗಿದ್ದರೂ ಕಾಲಗತಿಯಿಂದ ಅವೆಲ್ಲವು ಮರೆಯಲ್ಪಟ್ಟವು, ಪರಂತು ಈಗಿನ ಸ್ಥಿತಿಯಂ ಚಿಂತಿಸಿ ನೋಡುವಲ್ಲಿ ಭಗವದನುಗ್ರಹಕ್ಕೆ ಈ ದೇಶೀಯರೇ ಮುಖ್ಯವಾಗಿ ಪಾತ್ರರಾಗಿರುವಂತೆ ಭಾವಿಸಬೇಕಾಗಿದೆ. ೧೮೯೬ನೇ ಇಸವಿ ಏಪ್ರಿಲ್ ಲಾಗಾಯಿತು ಈವರೆಗೂ ನಡೆದ ವರ್ತಮಾನಗಳ ಕಾಲದೊಳಗೆ ಇಲ್ಲಿನ ವಿದ್ಯಮಾನಗಳು ಪ್ರತಿ ಮನುಷ್ಯನಿಗೂ ಭೀತಿಯನ್ನುಂಟುಮಾಡತಕ್ಕವಾಗಿವೆ ಮೊದಲು ಪಶ್ಚಿಮ ದೇಶದಲ್ಲಿ ಅತ್ಯಪೂರ್ವವಾದ ಮಹಾ ಸಂಕ್ರಾಮಿಕರೋಗವಾದ ಪ್ಲೇಗೆಂಬುವದೊಂದು ದೋಷ ಕೇಡುನಿಂದದಿ ತಲೆದೋರಿ ಅನೇಕ ಸಹಸ್ರ ಪ್ರಜೆಗಳನ್ನು ಅನಿರೀಕ್ಷಿತ ಮರಣಕ್ಕೆ ಗುರಿಮಾಡಿತು. ಇದರಿಂದ ಪ್ರಾಪ್ತವಾದ ನಷ್ಟವು ಊಹಿಸಲಸಾಧ್ಯವು. ಸಾರ್ವದೇಶಿಕವಾದ ಕ್ಷಾಮವು ಪ್ರಾಪ್ತವಾಗಿ ಅನೇಕಲಕ್ಷ ಪ್ರಜೆಗಳು ಅನನ್ಯಗತಿಕರಾಗಿ ತಮ್ಮ ಪ್ರಾಣ ಮಾನಗಳನ್ನು ಸಹ ತೃಣವಾಗಿ ಭಾವಿಸಿ ದೇಶಭ್ರಷ್ಟರಾಗುವಂತೆ ಪರಿಣಮಿಸಿರು. ಕಲ್ಕತ್ತೆ ಮುಂಬೈ ಪಗೈರೆ ಅನೇಕ ಪ್ರದೇಶಗಳಲ್ಲಿ ಭೂಕಂಪಗಳೂ ಅಗ್ನಿಪತನವೂ ಕ್ರಮವಾಗಿ ಉಂಟಾಗಿ ಅನೇಕ ಪ್ರಾಣಹಾನಿಯೂ ದ್ರವ್ಯಹಾನಿಯೂ ಪ್ರಾಪ್ತವಾದವು. ಬ್ರಿಟಿಷ್‌ಗವರ್ನ್‌ಮೆಂಟಿನವರ ಚಿತ್ತ ಸ್ವಾಸ್ಥ್ಯತೆಯನ್ನು ಹೋಗಲಾಡಿಸಿ ಕಳವಳ ಪಡಿಸಲಿಕ್ಕೆ ಅನುಕೂಲವಾದ ಸಾಮಗ್ರಿಗಳು, ಅಂದರೆ ಸ್ವದೇಶಾನ್ಯದೇಶಗಳ ಆಡಳಿತಗಳು ಅವ್ಯವಸ್ಥಿತವಾಗಿ ವಾಯವ್ಯದೇಶ ಪರ್ವತಪ್ರಾಂತದವರು ಯುದ್ಧಕಾಂಕ್ಷಿಗಳಾಗಿ ಕಲಹಿಸುತ ಅಸ್ವಾಧೀನವಾಗಿರುತಲಿರುದರಿಂದ ಇದುವರೆಗೆ ಅನೇಕ ಬ್ರಿಟಿಷ್ ಆಫೀಸರ್‌ಗಳೂ ಸೈನಿಕರೂ ಹತರಾದರು, ಇನ್ನೂ ಯುದ್ಧಸನ್ನಾಹಗಳು ಪ್ರಬಲವಾಗಿ ಜರುಗುತಲಿರುವದಲ್ಲದೆ ಮುಂದೆ ಈ ಯುದ್ಧವು ಯಾವರೂಪವಾಗಿ ಪರಿಣಮಿಸಿ ಯೆಷ್ಟರ ಹಾನಿಯನ್ನೂ ಸಂಕಟವನ್ನೂ ಉಂಟುಮಾಡುವದೊ ಎಂಬಭೀತಿಯು ಪ್ರತಿಮನುಷ್ಯನ ಹೃದಯದಲ್ಲಿ ನಿರೂಢವಾದುದಾಗಿರುತದೆ. ಇದರಿಂದ ಇಂಡ್ಯಾಗವರ್ನ್‌ಮೆಂಟಿನವರಿಗೀಗ ಉಂಟಾಗಿರುವ ಮಹತ್ತರವಾದ ಚಿಂತೆಯು, ಅವರಂ ಅಕಾರಣ ವೈರ ದೂಷಿತ ಹೃದಯರನ್ನಾಗಿಮಾಡದಲ್ಲದೆತ, ಅದಂ ಪ್ರಜೆಗಳ ಮೇಲೆ ಅವರು ನಾನಾವಿಧದಿಂ ತೋರ್ಪಡಿಸಿ, ಧರ್ಮ ನ್ಯಾಯ ನೀತಿಗಳನ್ನು ಸಹ ಮರೆತಿರುವವರಂತೆ ವರ್ತಿಸಲಾರಂಭಿಸಿದಾರೆ. "ಅಗಸನಿಗೆ ಅಗಸಗಿತ್ತಿಯ ಮೇಲೆ, ಅಗಸಗಿತ್ತಿಗೆ ಅವಳ ಕತ್ತೆಯ ಮೇಲೆ" ಎಂಬ ಲೋಕೋಕ್ತಿಯಂತೆ ಶತ್ರುಕೃತವಾದ ಆಗ್ರಹ ಪ್ರದರ್ಶನಕ್ಕೆ ಸ್ಥಾನವು ದೇಶಭಾಷಾ ವೃತ್ತಾಂತಪತ್ರಿಕಾ ಲೇಖಕರೆಂದು ಭಾವಿಸಿ, ಅವರನ್ನು ಕಾರ್ಯತಃ ಪಟಸದೆಯೇ ಪ್ರಕಾರಾಂತರಗಳಿಂದ ಅವರ ರಟಿ ಯೆತ್ತದಂತೆ ಸರ್ವಪ್ರಯತ್ನಗಳನ್ನೂ ನಡೆಸುತಲಿರುವದರಿಂದ ಜನಗಳಿಗೆ ಸಕಲವಿಷಯದಲ್ಲೂ ನಿರುತ್ಸಾಹವೂ, ಭೀತಿಯೂ ಚಿಂತೆಯೂ ವೃದ್ಧಿಯನ್ನೈದಲಾರಂಭಿಸಿವೆ

ಇನ್ನು ಮೈಸೂರು ಸಂಸ್ಥಾನದ ಸ್ಥಿತಿಯಂ ಕುರಿತು ಪರ್ಯಾಲೋಚಿಸಿದರೆ ಅದು ಸಹ ಯಾವ ವಿಧದಿಂದಲೂ ಪ್ರೋತ್ಸಾಹಕರವಾಗಿ ಕಂಡುಬರುವದಿಲ್ಲವು. ಪುರಾತನವಾದ ರಾಜ ಮಂದಿರಕ್ಕೆ ಅಕಸ್ಮಾತ್ತಾಗಿ ಬೆಂಕಿ ಬಿದ್ದು ತನ್ಮೂಲಕ ಅನೇಕ ಲಕ್ಷರೂಪಾಯಿಗಳು ನಷ್ಟವಾದದ್ದು ಸಾಕಾದ ಅಶುಭಸೂಚಕವಾಗಿರುತ್ತೆ. ಇದುವರೆಗೆ ಕ್ಷಾಮಭೀತಿಯು ನೆಲೆಗೊಂಡಿದ್ದು ಈಗ ಅದು ತಪ್ಪಿ ಅತಿವೃಷ್ಟಿಯಿಂದ ಅಲ್ಲಿಯಲ್ಲಿ ಪ್ರಾಣಾಗಾರ ರೂಪ ಅಪಾಯಗಳುಂ ಕೇಳ ಪ್ರಜೆಗಳು ಬಯಪಡುವಂತೆ ಪರಿಣಮಿಸಿವೆ. ಈಗ್ಗೆ ನಾಲ್ಕೈದು ವರುಷಗಳ ಹಿಂದೆ ಬೆಂಗಳೂರು ಮೈಸೂರು ಮಾರ್ಗದಲ್ಲಿ ಯೆಲಿಯೂರು ಸ್ಟೇಷನ ಬಳಿ ರೈಲ್ವೆ ರಸ್ತೆಯಲ್ಲುಂಟಾದ ಹಾನಿಯು ಎಲ್ಲರ ಜ್ಞಾಪಕದಲ್ಲಿರಬಹುದಷ್ಟೆ ಏತದಪೇಕ್ಷೆಯಾ ಪ್ರಬಲವಾದುದಾಗಿಯೂ, ಅನೇಕ ಪ್ರಾಣಹಾನಿ ಕರವಾದುದಾಗಿಯೂ ಇರುವ ರೈಲ್ವೇ ಅಪಾಯ ಒಂದು ಈ ತಿಂಗಳ ೨೨ನೇ ತಾರೀಖಿನ ರಾತ್ರಿ, ಚೆನ್ನಪಟ್ಟಣಕ್ಕೂ ಮದ್ದೂರಿಗೂ ಮಧ್ಯೆ ಪ್ರಾಪ್ತವಾಗಿ ತನ್ಮೂಲಕ ಏರ್ಪಟ್ಟ ನಷ್ಟವು ಎಷ್ಟರದೆಂದು ಅದ್ಯಾಪಿ ನಿಷ್ಕೃಷ್ಟವಾಗಿ ತಿಳಿಯಬರಲಿಲ್ಲವು. ಆದಿವಸ ರಾತ್ರಿ ೯-೨೫ ನಿಮಿಷಗಳಿಗೆ ಈ ಪ್ರಾಂತದ ಕಡೆಯ ಮೇಲ್ ಟ್ರೈನ್ ೧ ಘಂಟೆಯ ಸಮಯದಲ್ಲಿ ಚೆನ್ನಪಟ್ಟಣ ಮತ್ತು ಮದ್ದೂರಿಗೆ ಮಧ್ಯಮಾರ್ಗದಲ್ಲಿರುವ ಮಳೂರು ಟೊಳೆಯ ಸೇತುವೆಯ ಮೇಲೆ ಹೋಗುತಲಿರುವಲ್ಲಿ ಪ್ರವಾಹ ವೇಗದಿಂದ ಸೇತುವೆಯು ಕೊಚ್ಚಲ್ಪಟ್ಟಿದ್ದದನ್ನು ತಿಳಿಯದೆ ಗಾಡಿ ನಡೆಸಲ್ಪಡಲು, ಎಂಜಿನ್‌ಗಾಡಿಯೂ ೧, ಎರಡನೇಯ ಕ್ಲಾಸ್ ಗಾಡಿಯೂ, ೮ ಮೂರನೆಯ ಕ್ಲಾಸ್ ಗಾಡಿಗಳೂ ಕುಸಿದುಬಿದ್ದು ನೀರಿನಲ್ಲಿ ಮುಳಗಿಹೋದವು. ಇವುಗಳಲ್ಲಿ ಪ್ರಯಾಣಸ್ಥರು ಭರ್ತಿಯಾಗಿದ್ದರು. ಎಂಜಿನ್ ಡ್ರೈವರ್, ಆತನ ತಮ್ಮನು ಮಗನು ಸಹ ಮೃತಪಟ್ಟರು ಮೂರನೆಯ ತರಗತಿ ಗಾಡಿಯಲ್ಲಿದ್ದವರ ಪತ್ತೆಯೇ ಆಗಲಿಲ್ಲತ್ರ. ಸದರೀ ಗಾಡಿಯಲ್ಲಿ ನೂತನವಾಗಿ ವಿವಾಹಿತರಾದ ದಂಪತಿಗಳು ಮೈಸೂರಿಗೆ ಹೋಗುವವಕ್ಕಾಗಿ ಪ್ರಯಾಣ ಮಾಡಿದವರ ಸೆಲೆಯೇ ಸಿಕ್ಕಲಿಲ್ಲವು ಯೆಷ್ಟು ಜನ ಹತರಾದರೋ ಯೆಷ್ಟುಮಂದಿಗೆ ಘಾಯಗಳಾದವೋ ಇನ್ನೂ ಗೊತ್ತಾಗಿ ತಿಳಿಯಲಿಲ್ಲವು ಬೃಹಸ್ಪತಿ ವಾರದ ದಿನ ಬೆಳಗ್ಗೆ ಸ್ಪೆಷಿಯಲ್ ಟ್ರೈನಿನಲ್ಲಿ ರೈಲ್ವೇ ಏಜಂಟರೂ, ಟ್ರಾಫಿಕ್ ಮ್ಯಾನೇಜರವರೂ ಚೀಫ್ ಇಂಜನಿಯರವರೂ, ಸದರೀ ಅಪಾಯ ಜರಿಗಿದ ಸ್ಥಳಕ್ಕೆ ಹೊರಟುಹೋಗಿ ಗಾಡಿಗಳನ್ನೂ ಮೃತಪಟ್ಟವರ ಮುರ್ದೆಗಳನ್ನೂ ಹೊರಗೆ ತಗೆಯಿಸಿ ರಸ್ತೆ ರಿಪೇರಿ ಮಾಡುವದಕ್ಕೆ ಪ್ರಯತ್ನಪಟ್ಟು ಕೆಲಸ ಜರಿಗಿಸುತಲಿದಾರೆ. ಸದರೀ ಅಪಾಯದಿಂದ ನಷ್ಟರಾದವರನ್ನು ತಿಳಿದುಕೊಳ್ಳುವದಕ್ಕಾಗಿ ಅವರವರಿಗೆ ಸಂಬಂಧಪಟ್ಟವರಿದ್ದರೆ ಶವಗಳನ್ನು ಸ್ವಾಧೀನ ಪಡಿಸಿಕೊಳ್ಳತಕ್ಕದ್ದೆಂದು ದುಡೋರೆ ಮೂಲಕ ಜನಗಳಿಗೆ ತಿಳಿಸಿರುತ್ತಾರೆ. ಅನೇಕರ ಶವಗಳನ್ನೂ ದೊರೆಯಲಿಲ್ಲವೆಂದು ತಿಳಿಯಬರುತಿದೆ ಈ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರು ವಗೈರೆ ಅಧಿಕಾರಿಗಳು ಅದ್ಯಾಪಿ ಅಲ್ಲಿಯೇ ಇದಾರೆ. ಇದರ ತಪಸೀಲನ್ನು ಮುಂದೆ ವಿವರವಾಗಿ ತಿಳಿಸುವೆವು. ಇದರ ಹಿಂದಿನರಾತ್ರಿ ಕ್ಲೋಸಪೇಟೆಗೂ ಚೆನ್ನಪಟ್ಟಣಕ್ಕೂ ಮಧ್ಯೆ ಅದೇ ರಸ್ತೆಯಲ್ಲಿ ಗಾಡಿಗಳಿಗೆ ಅಪಾಯ ಪ್ರಾಂ

ಭಾಗಿರುವಲ್ಲಿ ಮುಂಜಾಗ್ರತೆ ಪಡುವದಕ್ಕೆ ಬದಲು ಅಧಿಕಾರಿಗಳು ಉದಾಸೀನರಾಗಿದ್ದುದಕ್ಕಾಗಿ ಬಹಳ ಆಶ್ಚರ್ಯ ಪಡಬೇಕಾಗಿದೆ. ಇಂಥಾ ಉಪೇಕ್ಷೆಯಿಂದ ಪ್ರುಂಟಾದ ನಷ್ಟಕ್ಕೆ ರೆಯಿಲ್ವೆ ಅಧಿಕಾರಿಗಳ ಅಶ್ರದ್ಧೆಯು ಕಾರಣವಾಗಿ ಭಾವಿಸಲ್ಪಡದೆ ಹೋಗಲಾರದು. ಹಿಂದೆ ಪ್ರಾಪ್ತವಾದ ಎಲಿಯೂರ ರೆಯಿಲ್ವೇ ಅಪಾಯ ಕಾಲದಲ್ಲಿ ಮೈಸೂರು ಸರಕಾರಕ್ಕೂ ದಕ್ಷಿಣ ಮಹರಾಷ್ಟ್ರ ರೆಯಿಲ್ವೆ ಕಂಪೆನಿಯವರಿಗೂ ನಡೆದ ಕರಾರ್ ಅನುಸರಿಸಿ ಕೊಡಲ್ಪಟ್ಟಿದ್ದ ಒಟ್ಟು ವಾಯಿದೆಯಲ್ಲಿ ೧೦ ವರುಗಳಷ್ಟುಕಾಲ ಇಂಡ್ಯಗವರ್ನಮೆಂಟಿನವರ ಮಂಜೂರಾತಿಯ ಮೇಲೆ ವಜಾ ಮಾಡಲ್ಪಟ್ಟಿಂತೆ ಕೇಳುತ್ತೇವೆ. ಪ್ರಸಕ್ತ ಅಪಾಯವು ಅದಕ್ಕಿಂತಲೂ ಅಧಿಕವಾದುದಾಗಿಯೂ ವಿಶೇಷ ನಷ್ಟಕಾರಿಯಾಗಿಯೂ ಇರುವದರಿಂದ ಗವರ್ನಮೆಂಟಿನವರು ರೆಯಿಲ್ವೆಯನ್ನು ಕೂಡಲೆ ಸ್ವಾಧೀನ ಪಡಿಸಿಕೊಂಡು ಮುಂದೆ ಸರಿಯಾದ ಏರ್ಪಾಡುಗಳನ್ನುಮಾಡಿ ಪ್ರಜೆಗಳಿಗೆ ರೆಯಿಲ್ವೆ ಪ್ರಯಾಣದಲ್ಲಿರುವ ಅಪಾಯ ಶಂಕೆಯನ್ನು ಹೋಗಲಾಡಿಸಲು ಪ್ರಯತ್ನ ಪಡಬೇಕೆಂದು ಕೋರುವೆವು.

Occasional Notes.
ನೈಮಿತ್ತಿಕವಿಷಯನ್ಯಾಸ.

ಮೋದವೃತ್ತ ಎಂಬ ಪತ್ರಿಕೆಯ ಎಡಿಟರು ಖಾಹಿಲೆಯವರಾಗಿರುವದರಿಂದ ಅವರ ಮೊಕದ್ದಮೆಯ ವಿಚಾರಣೆಯು ಮುಂದಿನ ಸೆಷನ್ಸಿಗೆ ನಿಲ್ಲಿಸಲ್ಪಟ್ಟಿತು.

ತುರ್ಕೀ ಸುಲ್ತಾನರಿಗೂ ಗ್ರೀಕ್ ಸಂಸ್ಥಾನಕ್ಕೂ ನಡೆದ ಸಮಾಧಾನದ ಒಡಂಬಡಿಕೆಯ ಕೊನೆ ಕಾ ಭಾಗಕ್ಕೆ ತುರ್ಕಿ ಸುಲ್ತಾನರವರು ರುಜು ಮಾಡಿದರು.

ಐರ್ಲಾಂಡ್ ದ್ವೀಪಕ್ಕೆ ಮುಖ್ಯಾಧಾರವಾಗಿರುವ ಉರಳಗಡ್ಡೆ ಫಸಲ್ ಈಸಂವತ್ಸರದಲ್ಲಿ ಕೆಟ್ಟುಹೋದುದರಿಂದ, ೧೮೪೭ನೆಯ ಇಸಿವಿಯಲ್ಲಿ ಸದರೀ ದ್ವೀಪದೊಳು ಪ್ರಾಪ್ತವಾದ ಘೋರ ಕ್ಷಾಮದಂತೆ ಮರಳಿ ಪ್ರಾಪ್ತವಾಗಬಹುದೆಂಬ ಭೀತಿಯುಂಟಾಗಿರುವಂತೆ ತಿಳಿಯಬರುತಿದೆ.

ಪ್ರತೋದವೆಂಬ ಪತ್ರಿಕೆಯ ಎಡಿಟರು ಯಾವಜ್ಜೀವ ದ್ವೀಪಾಂತರ ವಾಸವಾದುವ ದಂಡನೆ ವಿಧಿಸಲ್ಪಟ್ಟರಷ್ಟೆ. ಸದರೀಯವರು ಮುಂಬೈ ಹೈಕೋರ್ಟಿನಲ್ಲಿ ಮಾಡಿರುವ ಅಪೀಲ್ ವಿಚಾರಣೆಯನ್ನು ಅಲ್ಲಿನ ಜಡ್ಜಿಗಳೆಲ್ಲರು ಸೇರಿ ನಡೆಸುವರೆಂದು ತಿಳಿಯಲಾದೆನು.

ಅಫ್ರಿಡಿ ಜನರು ಬಾರಾ ಎಂಬ ಸ್ಥಳದಲ್ಲಿ ಗುಂಪುಗೂಡಿ ಪೆಷಾವರ್ ಎಂಬ ಪಟ್ಟಣದಮೇಲೆ ಬಂದು ಬೀಳಬೇಕೆಂದು ಯೋಚಿಸುತಲಿರುವದಾಗಿ ಮರಳಿ ವರ್ತಮಾನ ಬಂದುದರಿಂದ ಅವರೊಡನೆ ಯುದ್ಧಕ್ಕೆ ಸಿದ್ಧವಾಗಿರುವಂತೆ ಬ್ರಿಟಿಷ್ ಸೇನೆಯಲ್ಲಿ ಒಂದುಕಡೆಗೆ ಹುಕುಂ ಆಗಿದೆ.

ಪುನೆ ವೈಭವವೆಂಬ ಪತ್ರಿಕೆಯ ಎಡಿಟರು ದಸ್ತಗಿರಿಯಿಂದ ಕ್ರಿಮಿನಲ್ ವಿಚಾರಣೆಗೆ ಗುರಿಮಾಡಲ್ಪಟ್ಟಿರುತ್ತಾರೆಯಷ್ಟೆ. ಗವರ್ನಮೆಂಟಿನವರು ಅವರಮೇಲೆ ಮಾಡಿರುವ ಮೊಕದ್ದಮೆಯನ್ನು ವಾಪಸ್ ತೆಗದುಕೊಳ್ಳುವ ಆಲೋಚನೆಯಲ್ಲಿರುವದಾಗಿ ಮುಂಬೈಯಿಂದ ತಂತಿ ವರ್ತಮಾನ ಬಂದಿರುತಿದೆ.

ಹೈದರಾಬಾದ್ ನಿಜಾಮರವರು ಬ್ರಿಟಿಷ್ ಸರ್ಕಾರದಲ್ಲಿ ತಮಗಿರುವ ರಾಜಭಕ್ತಿಗೆ ನಿದರ್ಶನ ರೂಪವಾಗಿ ಸರಹದ್ದು ಪ್ರಾಂತದ ಯುದ್ಧ ನೌಕರಿಯಬಗ್ಗೆ ಇಂಪೀರಿಯಲ್‌ಸರ್ವಿಸ್ ಸೇನೆಯಲ್ಲಿ ಎರಡು ರಿಜಿಮೆಂಟ್ ಭರ್ತಿಯವರನ್ನು ಕಳುಹಿಸಿಕೊಡುವನಾಗಿ ಗವರ್ನಮೆಂಟಿಗೆ ತಿಳಿಸಿರುತ್ತಾರೆ.

ಜನರಲ್ ಲಾಕ್ ಹಾರ್ಟ್ಂಬವರು ಇಂಡಿಯಾ ದೇಶದ ಕಮಾಂಡರ್ ಇನ್‌ಚೀಫರವರಾಗಿ ಮೊಕರರ್ ಮಾಡಲ್ಪಟ್ಟಿರುವಂತೆ ಸರ್ಕಾರೀಯಾಗಿ ಪ್ರಕಟಿಸಲ್ಪರುವಂತೆ ಸರ್ಕಾರೀಯಾಗಿ ಪ್ರಕಟಿಸಲ್ಪಟ್ಟಿದೆ. ಈ ಮಿಲಿಟರಿ ಅಧಿಕಾರಿಯು ಇಂಡ್ಯ ದೇಶಕ್ಕೆ ಬಂದ ಕೂಡಲೆ ಸರಹದ್ದು ಪ್ರಾಂತದ ಯುದ್ಧಕ್ಕೆ ಹೊರಡುವರು.

ಮುಂಬೈಯಲ್ಲಿ ಆಚೆ ಆದಿತ್ಯವಾರದದಿನ ಘಾಂಜಿ ಪೇಟ ಟಿಂಬರ್ ಕಾರ್ಖಾನೆಯು ಹೋಗಿ ಬಿಟ್ಟದ್ದರಿಂದ ಐದುಲಕ್ಷ ರೂಪಾಯಿಗಳು ನಷ್ಟವಾದಂತೆ ಅಂದಾಜ್ ಮಾಡಲ್ಪಟ್ಟದೆ. ಸದರೀ ಕಾರ್ಖಾನೆಯು ಅನೇಕ ಕಂಪನಿಗಳಿಗೆ ಇನ್ಷ್ಯೂರ್ ಮಾಡಲ್ಪಟ್ಟಿರುವ ನಷ್ಟದ್ರವ್ಯವು ಸುಲಭವಾಗಿ ವಸೂಲ್ ಬರತಕ್ಕದ್ದು.

ಈಗ ಇಂಡ್ಯದೇಶದೊಳು ಪ್ರಾಯಶಃ ಸರ್ವತ್ರ ಮಳೆ ಬಿದ್ದು ಕಾಲ ಸೂಚನೆಗಳು ಅನುಕೂಲವಾಗಿರುವಂತೆ ತಿಳಿಯಬರುವದರಿಂದ ಕ್ಷಾಮ ಪೀಡಿತರಾದವರ ಸಹಾಯಾರ್ಥ ಲಂಡನ್ ಪಟ್ಟಣದಲ್ಲಿ ಸ್ಥಾಪಿಸಲ್ಪಟ್ಟಿರುವ ಫಂಡಿಗಾಗಿ ವಸೂಲಿಯನ್ನು ಇನ್ನುಮುಂದೆ ನಿಲ್ಲಿಸಿಬಿಡಬಹುದೆಂದು ಸ್ಟೇಟ್‌ಸೆಕ್ರೆಟರಿಯವರು ಅಲ್ಲಿನ ಲಾರ್ಡ್ ಮೇಯರಿಗೆ ಬರೆದಿರುವಂತೆ ವರ್ತಮಾನ ಬಂದಿರುತಿದೆ.

ಮಿ॥ ತಿಲಕರವರು ತಮಗೆ ವಿಧಿಸಲ್ಪಟ್ಟ ದಂಡನೆಯಮೇಲೆ ಇಂಗ್ಲಾಂಡಿನಲ್ಲಿರುವ ಪ್ರಿವಿ ಕೌನ್ಸಲಿಗೆ ಅಪೀಲ್ ಮಾಡಿಕೊಳ್ಳುವದಕ್ಕೆ ತಮಗೆ ಅಪ್ಪಣೆ ಕೊಡಬೇಕೆಂದು ಮುಂಬೈ ಹೈಕೋರ್ಟಿನಲ್ಲಿ ಕೊಟ್ಟಿದ್ದ ಅರ್ಜಿಯು ಕಳೆದ ವಾರದಲ್ಲಿ ವಿಚಾರಣೆಗೆ ಬಂದು ಜಡ್ಜಿಗಳೆಲ್ಲರು ಅರ್ಜಿದಾರನ ಪ್ರಾರ್ಥನೆಯಂತೆ ಅಪ್ಪಣೆ ಕೊಡುವದಕ್ಕಾಗುವದಿಲ್ಲವೆಂದು ಹುಕುಂ ಮಾಡಿದರು.

ಈ ತಿಂಗಳ ಆರು ಮತ್ತು ಏಳನೇ ತಾರೀಖ್‌ಗಳಲ್ಲಿ ಕಾಬೂಲ್ ಪಟ್ಟಣದ ಅಂಗಡಿಬೀದಿಗೆ ಬೆಂಕಿಬಿದ್ದು ೧೫೦ ಅಂಗಡಿಗಳು ಸುಟ್ಟುಹೋದದ್ದು ಮಾತ್ರವಲ್ಲದೆ ನಾಲ್ವರಿಗೆ ಅದರಲ್ಲಿ ಪ್ರಾಣಹಾನಿ ಯುಂಟಾದಂತೆಯೂ ಅನೇಕ ಲಕ್ಷ ರೂಪಾಯಿಗಳ ಕ್ರಯಬಾಳುವಷ್ಟು ಪದಾರ್ಥಗಳು ನಾಶವಾದಂತೆಯೂ, ಕಲ್ಕತ್ತೆಯ ಇಂಗ್ಲಿಷ್‌ಮ್ಯಾನ್ ಪತ್ರಿಕೆಯು ತಿಳಿಸುತಿದೆ.

ಪತ್ತಿಯಾಲಾ ಮಹಾರಾಜರವರು ವಾಯುವ್ಯ ದೇಶದ ಸರಹದ್ದು ಪ್ರಾಂತದಲ್ಲಿ ನಡೆಯುತಲಿರುವ ಯುದ್ಧದಲ್ಲಿ ಬ್ರಿಟಿಷರವರ ಸಹಾಯಾರ್ಥ ಅಲ್ಲಿಗೆ ಪ್ರಯಾಣಮಾಡಿದರೆಂದು ಹಿಂದಿನಪತ್ರಿಕೆಯಮೂಲಕ ತಿಳಿಸಿದ್ದೆವಷ್ಟೆ. ಸದರೀ ಮಹಾರಾಜರವರು ಜಾಸ್ತಿಯಾಗಿ ಪರಿಜನರನ್ನು ತಮ್ಮಸಂಗಡ ಕರೆದುಕೊಂಡುಹೋಗಲು, ಅದ್ದಷ್ಟ ಜನರು ದುಬಾರೆಯೆಂದು ಅಲ್ಲಿನ ಮಿಲಿಟರಿ ಅಧಿಕಾರಿಗಳಿಂದ ತಿಳಿಸಲ್ಪಟ್ಟಮೇಲೆ ಒಬ್ಬ ಏಡೀಕಾಂಗನ್ನುಮಾತ್ರ ತಮ್ಮ ಸಂಗಡ ಇಟ್ಟುಕೊಂಡು ಉಳಿದವರನ್ನೆಲ್ಲ ಪಟಿಯಾಲಕ್ಕೆ ವಾಪಸ್ ಕಳುಹಿಸಬೇಕಾದವರಾದರು.

ತಿರುಚನಾಪಳ್ಳಿಯಲ್ಲಿ ರೆವರೆಂಡ್ ಜೆ. ಕೇಂಬರ್ ಎಂಬ ಪಾದ್ರಿ ಸಾಹೆಬರೊಬ್ಬರು ಒಂದುಸಂದರ್ಭದಲ್ಲಿ ಪ್ರಸ್ತಾಪ ವಶಾತ್ ತಮ್ಮ ಜನರಿಗೆ ತಿಳಿಸಿದ ಅಭಿಪ್ರಾಯವೇನೆಂದರೆ, ಯೂರೋಪ್‌ಮೊದಲಾದ ಪಶ್ಚಿಮ ದೇಶಗಳೊಳು ಈಗಿನ ನಾಗರಿಕತೆಗೆ ಅನುಗುಣವಾಗಿ ಹೆಂಗುಸರಿಗೆ ಅತಿ ಸ್ವಾತಂತ್ರ್ಯವನ್ನುಂಟುಮಾಡಿರುತ್ತಾರೆ ಹಿಂದೂದೇಶದ ಘೋಷಾ ಪದ್ಧತಿಯು ಸ್ತ್ರೀಯರ ಪಾತಿವ್ರತ್ಯ ರಕ್ಷಣೆಗೂ ಜನಸಮುದಾಯದಲ್ಲಿ ಮಾನ ಮರ್ಯಾದೆಗಳಿಗೂ ಉಪಯುಕ್ತವಾದುದು, ಎಂಬುದು. ಇದನ್ನು ಕೇಳಿ ತಿರುಚನಾಪಳ್ಳಿಯಲ್ಲಿರುವ ಯೂರೋಪಿಯನ್ ಜನರು ಸ್ವಬ್ಧರಾಗಿ ಮುಂದಿನ ಕರ್ತವ್ಯ ವಿಷಯದಲ್ಲಿ ಕಳವಳಗೊಂಡಿರುತ್ತಾರೆಂದು ಒಂದು ಪತ್ರಿಕೆ ತಿಳಿಸುತಿದೆ.

ಸೈಯಾಂದೇಶದ ಅರಸರವರು ಫ್ರೆಂಚ್‌ರಾಜ್ಯಕ್ಕೆ ಹೋಗಿದ್ದರಷ್ಟೆ. ಅಲ್ಲಿಂದ ಈಗ ಮರಳಿ ಲಂಡನ್ ಪಟ್ಟಣಕ್ಕೆ ಬಂದಿರುತ್ತಾರೆ. ಈ ಅರಸಿನವರ ವಿಷಯದಲ್ಲಿ ಫ್ರೆಂಚ್‌ದೇಶದ ಅಧಿಕಾರಿಗಳು ಬಹಳ ಪ್ರೀತಿ ಗೌರವಗಳೊಡನೆ ನಡೆಸಿದ್ದಾಗ್ಯೂ ಇವರು ಅಲ್ಲಿಂದ ಹೊರಟುಬಂದಮೇಲೆ, ಇವರು ಇಂಗ್ಲಾಂಡ್ ದೇಶೀಯರ ಕೈಗೆ ಸಿಕ್ಕಿಕೊಂಡು ತಮ್ಮ ದೇಶಕ್ಕೆ ವಿರೋಧಿಯಾಗಿರುವಂತೆ ಅಲ್ಲಿನ ಪತ್ರಿಕೆಗಳು ಕೆಲವು ದೂಷಿಸುವದಕ್ಕೆ ಪ್ರಾರಂಭಿಸಿರುತವೆಂದು ಕೇಳುತ್ತೇವೆ. ಈ ಅರಸರವರು ಈ ತಿಂಗಳ ೨೦ನೇ ತಾರೀಖ್‌ನಲ್ಲಿ ತಮ್ಮ ವರ್ಷ ವರ್ಧಂತಿ ಉತ್ಸವವನ್ನು ಲಂಡನ್ ಪಟ್ಟಣದಲ್ಲಿ ಜೆಳಸಿದರಾಗಿ ಈ ಶುಭ ಸಂದರ್ಭದಲ್ಲಿ ಮಹಾರಾಜ್ಞೀಯವರೂ, ರಷ್ಯಾ ಚಕ್ರವರ್ತಿಯವರೂ, ಫ್ರೆಂಚ್ ದೇಶದ ಪ್ರೆಸಿಡೆಂಟರವರೂ ತಮ್ಮ ಶುಭವಾದನಗಳಂ ಅರಸರವರಿಗೆ ತಿಳಿಸಿದರು.

ಮದರಾಸ್ ಪೋಲೀಸ್‌ಸಬ್‌ಇನ್ಸ್‌ಪೆಕ್ಟರಾದ ಮುದ್ದುಕೃಷ್ಣಮನಾಯುಡು ಎಂಬಾತನಮೇಲೂ, ಇನ್ನು ಕೆಲವರು ಪೋಲೀಸ್ ಶಿಬ್ಬಂದಿಗಳಮೇಲೂ ಅಲ್ಲಿನ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ತರಲ್ಪಟ್ಟ ಕ್ರಿಮಿನಲ್ ಮೊಕದ್ದಮೆಯಲ್ಲಿ ಸದರೀ ಸಬ್‌ಇನ್ಸ್‌ಪೆಕ್ಟರು ದಂಡಿಸಲ್ಪಟ್ಟರಾಗಿ ಫಿರ್ಯಾದಿಯಾದ ಮೆ॥ಸೋಲಾಮುನಿಸಾಮಿಶೆಟ್ಟಿಗೆಯುಂಟಾದ ಜಯದಬಗ್ಗೆ ಕೋರ್ಟಿನಲ್ಲಿ ಅವರಿಗೆ ಹುವ್ವಿನಹಾರ ಹಾಕಿ ನಾಯಕಾರ್ ಪೇಟೆಯ ಮಾರ್ಗವಾಗಿ ಮೆರವಣಿಗೆ ಮಾಡಿಸಿಕೊಂಡು ಅವರನ್ನು ಕರೆದುಕೊಂಡು ಹೋದರೆಂದು ಮದರಾಸ್ ಹಿಂದೂ ಪತ್ರಿಕೆ ತಿಳಿಸುವದನ್ನು ಕುರಿತು ಯೋಚಿಸಲಾಗಿ, ಸದರೀ ಪೋಲೀಸ್ ಸಬ್‌ಇನ್ಸ್‌ಪೆಕ್ಟರು ಲೋಕಕಂಟಕನಾಗಿರುತಲಿದ್ದು ಅಲ್ಲಿನ ಪ್ರಜೆಗಳಿಗೆ ಬಹಳ ತೊಂದರೆಯಂ ಕೊಡುತಬಂದುದರಿಂದಲೇ ಅವನನ್ನು ಪಳ್ಳದಲ್ಲಿ ಕೆಡುವದಕ್ಕೆ ತಕ್ಕ ಸಮಯವಂ ನಿರೀಕ್ಷಿಸುತಲಿದ್ದು ಈಗ ತಮ್ಮ ಉದ್ದೇಶ ಪೂರ್ತಿಯಂಮಾಡಿಕೊಂಡಂತೆಸ್ಪಷ್ಟವಾಗುತಿದೆ.

ಮದರಾಸ್ ಪ್ರೆಸಿಡೆನ್ಸಿ ಡಿಸ್ಟ್ರಿಕ್ಟುಗಳ ಕ್ಷಾಮ ನಿವಾರಕ ಕಾಮಗಾರಿಗಳಲ್ಲಿ ಈ ತಿಂಗಳ ೧೮ ನೇ ತಾರೀಖಿಗೆ ಪೂರ್ತಿಯಾದ ವಾರದೊಳು ಅದರ ಹಿಂದಿನ ವಾರದಲ್ಲಿದ್ದುದಕ್ಕಿಂತಲು ಸುಮಾರು ಎಪ್ಪತ್ತೆರಡುಸಾವಿರ ಮಂದಿ ಕಡಮೆಯಾಗಿರುತ್ತಾರೆ. ಬಳ್ಳಾರಿ ಡಿಸ್ಟ್ರಿಕ್ಟಿನಲ್ಲಿ ಸಮೃದ್ಧಿಯಾಗಿ ವರ್ಷ ಬಿದ್ದುದರಿಂದ ಅಲ್ಲಿನ ಕಾಮಗಾರಿಗಳಲ್ಲೀ ಜನಗಳು ಕಡಮೆಯಾದರು. ಅಲ್ಲಿ ಬೆಳೆಗಳೂ ಚೆನ್ನಾಗಿವೆ. ಈಗ ಮದರಾಸ್ ಪ್ರೆಸಿಡೆನ್ಸಿಯ ಉತ್ತರಭಾಗದಲ್ಲಿರುವ ಡಿಸ್ಟ್ರಿಕ್ಟುಗಳಿಂದ ಕ್ಷಾಮಮೂಲಕವಾದ ಅಪಾಯಗಳು ದಕ್ಷಿಣಭಾಗದ ಡಿಸ್ಟ್ರಿಕ್ಟುಗಳಿಗೆ ವರ್ಗವಾದಂತೆ ಕಾಣುತಿದೆ. ನೆಲ್ಲೂರು, ಪುದುಕೋಟೆ, ಮಧುರೆ, ತಿರುನಲ್ವೇಲಿ, ತಂಜಾವೂರು ಡಿಸ್ಟ್ರಿಕ್ಟುಗಳ ನದೀನೀರಿನ ಆಸರೆ ಇಲ್ಲದ ಭಾಗ, ಇವುಗಳಲ್ಲಿ ಜಲಕಷ್ಟ ತಪ್ಪಲಿಲ್ಲವೆಂತ ಕೂಗಾಟ ಅಧಿಕವಾಗಿದೆ. ಜನಗಳಿಗೆ ಮೇವಿಲ್ಲವು. ಈ ಡಿಸ್ಟ್ರಿಕ್ಟುಗಳ ತಾತ್ಕಾಲಿಕ ಸ್ಥಿತಿಯನ್ನಾಲೋಚಿಸಿ ಜರೂರು ಕಂಡುಬರುವ ಸಂದರ್ಭದಲ್ಲಿ ಕೂಡಲೆ ರಿಲೀಫ್ ಕೆಲಸಗಳಿಗೆ ಪ್ರಾರಂಭಿಸುವದಕ್ಕೆ ಗವರ್ನಮೆಂಟಿನವರು ಸರ್ವ ಸನ್ನಾಹಗಳಂ ಮಾಡಿಕೊಂಡಿರುತ್ತಾರೆಂದು ತಿಳಿಯಬರುತಿದೆ. ಈಗ ಉತ್ತರ ದೇಶದೊಳು ಪ್ರಾಪ್ತವಾಗಿರುವ ಯುದ್ಧಕ್ಕೆ ಯಾವ ಹಣವೂ ಸಾಲದ್ದಾಗಿರುವದರಿಂದ ಕ್ಷಾಮ ಪೀಡಿತರಾದವರ ಸಂರಕ್ಷಣೆಯ ವಿಷಯದಲ್ಲಿ ಗವರ್ನಮೆಂಟಿನವರು ಅಶ್ರದ್ಧೆಯಂ ವ್ಯಕ್ತಪಡಿಸುವರೋ ಎಂಬ ಭೀತಿಯು ಪ್ರಜೆಗಳಿಗೆ ತಪ್ಪಲಿಲ್ಲವು. ಇವರ ಪುಣ್ಯವಶಾತದಿಂದ ಯುದ್ಧವು ಕೂಡಲೆ ತಪ್ಪಬೇಕು.

ವಾಯುವ್ಯ ದೇಶದ ಸರಹದ್ದು ಪ್ರಾಂತದಲ್ಲಿ ನಡೆಯುತಲಿರುವ ಯುದ್ಧವನ್ನು ಕುರಿತು ಈ ತಿಂಗಳ ೨೦ನೇ ತಾರೀಖ್‌ನಲ್ಲಿ ಬಂದ ತಂತಿ ವರ್ತಮಾನದ ಮೂಲಕ ತಿಳಿಯಬರುವದೇನೆಂದರೆ.— ಜನರಲ್ ಜಫ್ರೀಯವರ ಅಧಿಕಾರಕ್ಕೆ ಒಳಪಟ್ಟ ಮಹಮಂಡ್ ಸೇನೆಯ ಒಂದು ಭಾಗಕ್ಕೆ ಪ್ರಬಲ ಹಾನಿಯುಂಟಾಯಿತು, ಪರಂತು ಅದರ ವಿವರದ ವರ್ತಮಾನ ಇದುವರೆಗೆ ಬರಲಿಲ್ಲವು. ರಾಂಬತ್ ಘಾಟಿಯಲ್ಲಿ ಇಬ್ಬರು ಬ್ರಿಟಿಷ್ ಆಫಿಸರಿಗಳಿಗೆ ಪ್ರಾಣಹಾನಿಯೂ ಇನ್ನೊಬ್ಬರಿಗೆ ಗಾಯವೂ ಇದ್ದಮೇಲೆ ಜನರಲ್ ಜಫ್ರೀಯವರು ಶತ್ರುಗುಂಪಿನವರನ್ನು ದಂಡಿಸುವದಕ್ಕಾಗಿ ಮುಂದಕ್ಕೆ ಹೊರಟರು. ಸದರೀ ಜನರಲ್ಲಿ ಇಪ್ಪತ್ತೊಂದುಮಂದಿಯನ್ನು ಸವಾರರು ಈಟಿಗಳಿಂದ ತಿವಿದು ಕೊಂದುಹಾಕಿದರು. ತರುವಾಯ ಜನರಲ್ ಜಫ್ರೀಯವರು ಉಳಿದವರನ್ನು ಚನ್ನಟ್ಟಹೋಗಿ ಕೆಲವು ಗ್ರಾಮಗಳಿಗೆ ಬೆಂಕಿ ಹಚ್ಚಿಸಿಬಿಟ್ಟರು. ಕತ್ತಲೆಯಾಗಿ ತಮ್ಮ ಡೇರೆಗೆ ವಾಪಸ್ ಬರುತಿರುವಲ್ಲಿ ತಮ್ಮ ಸೇನೆಯು ಹೋಗುವ ದಾರಿ ತಪ್ಪಿಹೋಗಿ ಒಂದು ಗ್ರಾಮದ ಕೋಟೆಯೊಳಗೆ ಹೋಗಲು ಅಲ್ಲಿನ ಜನರಿಗೂ ಜನರಲ್ ಯವರಿಗೂ ಕೈ ಕಲಹವಾಯಿತು. ಇವರ ಸೇನೆಯನ್ನು ಸಹ ಶತ್ರುಜನರು ಬಂದು ಮುತ್ತಿಕೊಂಡು ನಡೆದ ಯುದ್ಧದಲ್ಲಿ ಜನರಲ್ ಜಫ್ರೀಯವರು ಸೇರಿ ಹತ್ತುಮಂದಿ ಬ್ರಿಟಿಷ್ ಆಫಿಸರಿಗಳಿಗೆ ಘಾಯಗಳೂ ಪ್ರಾಣಹಾನಿಗಳೂ ಉಂಟಾಯಿತು. ಜನರಲ್‌ಯವರಿಗೆ ಸ್ವಲ್ಪ ಘಾಯ ತಗಲಿತು. ಇವರ ಸೈನಿಕರಲ್ಲಿ ೧೩೫ ಮಂದಿ ಕೊಲ್ಲಲ್ಪಟ್ಟರು ಮತ್ತು ಘಾಯಪಟ್ಟರು. ಈ ತಿಂಗಳ ೧೭ನೇ ತಾರೀಖ್‌ನಲ್ಲಿ ಬಂದ ವರ್ತಮಾನದ ಮೂಲಕ ಪೆಷಾವರ್ ಕೋಟೆಯ ಮೇಲೆ ಬಂದುಬಿದ್ದು ಹೊಡೆಯಬೇಕೆಂದು ಅಫ್ರಿಡಿ ಜನರು ಬಾರಾ ಎಂಬ ಸ್ಥಳದಲ್ಲಿ ಗುಂಪುಗೂಡುತಲಿರುವಂತೆ ತಿಳಿಯಬಂದುದರಿಂದ ಒಂದು ತುಕಡಿ ಸೇನೆಯು ಅದಕ್ಕೆ ಸಿದ್ಧವಾಗಿರುವಂತೆ ಹುಕುಂ ಆಯಿತು. ಸಿಕ್‌ಫೌಜಿನ ಲಡಿಗೆಯವರು ಕೆಲವರು ಒಂದುಕಡೆ ಸಾದೆ ಶೋಧಹಾಕುತ್ತಿರುವಲ್ಲಿ ಕಲಹಿ ಜನರು ಬಂದು ಅವರನ್ನೆಲ್ಲ ಕೈ ಕಾಲುಗಳಂ ಕಟ್ಟಬಿಟ್ಟು ಬೆಂಕಿಹಚ್ಚಿ ಸುಟ್ಟುಹಾಕಿದ್ದರಿಂದ ಅವರ ಮುರ್ದೆಗಳು ಕಂಡುಬಂತು, ಎಂಬುದು.

LOCAL AND PROVINCIAL NEWS.
ಒಳದೇಶ ಮತ್ತುತಾಲ್ಲೂಕುಜಾತಿವೃತ್ತಾಂತಗಳು.

ಕೆಲವು ಡೆಪ್ಯುಟಿ ಕಮಿಶನರಿಗಳ ಬದಲಾವಣೆಗಳು ಕ್ಷಿಪ್ರದಲ್ಲಿ ನಡೆಯುವವೆಂತಲೂ, ಕೆಲವರು ಶಿರಸ್ತೇದಾರರು ಪೆನ್ಷನ್‌ಮೇಲೆ ನಿವೃತ್ತರಾಗುವರೆಂತಲೂ ತಿಳಿಯಬರುತಿದೆ.

ಈ ಸಂವತ್ಸರದ ಪ್ರಜಾ ಪ್ರತಿನಿಧಿ ಸಭೆಯು ಬರುವ ತಿಂಗಳ ೪ನೇ ತಾರೀಖಿನಲ್ಲಿ ಪ್ರಾರಂಭವಾಗುವದಾಗಿಯೂ, ಮೈಸೂರು ಜಗನ್ಮೋಹನ ಬಂಗ್ಲೆಯಲ್ಲಿ ನವರಾತ್ರಿ ಉತ್ಸವಕ್ಕಾಗಿ ಬೇಕಾದ ಏರ್ಪಾಡು ನಡೆಸಲ್ಪಡುತಿವೆಯೆಂತಲೂ ತಿಳಿಯಬರುತಿದೆ.

ಈದಿನದ ಮೊದಲು ನವರಾತ್ರಿ ಪ್ರಾರಂಭವಾಗಿ ಮುಂದಿನ ಮಂಗಳವಾರದ ತನಕ ಸರ್ಕಾರಿ ಇಲಾಖೆಗಳಿಗೆಲ್ಲ ರಜಾ ಕೊಡಲ್ಪಟ್ಟಿರುತಿದೆ ಈ ಸಲ ನವರಾತ್ರಿ ಉತ್ಸವಕ್ಕೆ ಪ್ರಾಸಂಗವಾಗಿ ರೆಯಿಲ್ವೆ ಅಪಾಯವೊಂದು ಪ್ರಾಪ್ತವಾದಕಾರಣ ಜನಗಳ ಆಮದ್ ರಫ್ತ್ ವಿಷಯದಲ್ಲಿ ರೆಯಿಲ್ವೆ ಅಧಿಕಾರಿಗಳು ಪೂರಾ ನಿಗೆ ಕೊಡಬೇಕಾದ್ದು ಆವಶ್ಯಕವಾಗಿರುತಿದೆ.

ಈ ಸಂಸ್ಥಾನದ ಪೋಲೀಸ್ ಶಿಬ್ಬಂದಿಯಲ್ಲಿ ೪ ಜನ ಬಿ. ಎ. ಗಳೂ, ೮ ಜನ ಎಫ್. ಎ. ಗಳೂ, ೧೭ಜನ ಮೆಟ್ರಿಕ್ಯುಲೇಷನ್ ಪರೀಕ್ಷೆ ಕೊಟ್ಟವರೂ ನೌಕರಿಯಲ್ಲಿರುವಂತೆ ಈ ಸಂವತ್ಸರದ ಸದರೀ ಇಲಾಖಾ ರಿಪೋರ್ಟಿನಿಂದ ಸ್ಪಷ್ಟವಾಗುತಿದೆ. ೫೧೨ ಜನ ಆಫಿಸರ್‌ಗಳೂ, ೪೬೦೨ ಜನ ಜವಾನರೂ ಪ್ರತ್ತಿ ಪೋಲೀಸ್ ಸೇನೆಯಲ್ಲಿ ವಿದ್ಯಾವಂತರಾದವರ ಸಂಖ್ಯೆಯು ಅಲ್ಪವಾಗಿರುವದನ್ನು ನೋಡಿದರೆ ಪೋಲೀಸ್ ಇಲಾಖಾ ನೌಕರಿಯು ವಿದ್ಯಾ ವಂತರ ಯೋಗ್ಯತಾ ಪ್ರದರ್ಶನಕ್ಕೆ ಅನುಗುಣವಾದದಲ್ಲವೆಂದು ಭಾವಿಸಲ್ಪಟ್ಟರುವಂತೆ ತೋರುತಿದೆ.

ಈ ಸಂಸ್ಥಾನದಲ್ಲಿ ಆಯಾ ಇಲಾಖಾ ಮುಖ್ಯಾಧಿಕಾರಿಗಳಿಗೆಲ್ಲ ಒಂದು ವಿಜಾತೀಯವಾದ ಅಭಿರುಚಿ ಪ್ರವೃತ್ತಿ ಯುಂಟಾಗಿರುವದನ್ನರಿತು ಬಹಳ ಆಶ್ಚರ್ಯ ಪಡಬೇಕಾಗಿರುತಿದೇನೆಂದರೆ— ತಮ್ಮಿಂದ ಯಾವದಾವದು ಹೊಸ ಏರ್ಪಾಡು ಮಾಡಲ್ಪಟ್ಟಿತೆನ್ನುವ ಪ್ರಶಸ್ತಿಯನ್ನು ಪಡೆಯಬೇಕೆಂಬ ಕೋರಿಕೆಯೂ, ಜಾಸ್ತೀ ಹುದ್ದೆಗಳ ಮೊಕರರಾತಿ, ಮತ್ತು ಇಜಾಪೆ ಮುಂತಾದವನ್ನು ಮಂಜೂರ್ಮಾಡಿಸಿಕೊಂಡರೆ ತನ್ನಿಮಿತ್ತದಿಂದ ಅನೇಕರು ತಮ್ಮನ್ನು ಆಶ್ರಯಿಸುವರೆಂಬ ದುರಿಷ್ಟೆಯೂ ಇಲಾಖಾ ಮೊಖ್ಯನರುಗಳ ಹೆಚ್ಚಿರುವಂತೆ ಕಾಣುತಿದೆ. ಪ್ರತಿ ಇಲಾಖೆಗಳಲ್ಲಿಯೂ ಹೊಸ ಏರ್ಪಾಡುಗಳೂ ಸಂಬಳ ಜಾಸ್ತಿಯೂ ಕೊಡಲ್ಪಡುತಿರುವದಲ್ಲದೆ ಎಕ್ಸೈಜ್ ಮತ್ತು ಡಿಕಲ್ ಇಲಾಖಾ ಸ್ಕೀಂಗಳನ್ನು ಗವರ್ನಮೆಂಟಿನವರು ಮಂಜೂರ್ಮಾಡಿರುತ್ತಾರೆಂತಲೂ ಇದರಪ್ರಕಾರ ಮುಂದೆ ಆಬ್ಕಾರಿ ಸ್ಯೂಪರ್‌ವೈಜರ್‌ಗಳಿಗೂ ಸಬ್ ಅಸಿಸ್ಟೆಂಟ್ ಸರ್ಜನ್‌ಗಳ ದರ್ಜೆಗೆ ಮೇಲ್ಪಟ್ಟ ಆಫಿಸರ್‌ಗಳಿಗೂ ಸಂಬಳ ಇಜಾಫೆಯಾಗಬಹುದೆಂದು ಕಾಣುತಿದೆ.

THE MYSORE GAZETTE.
ಮೈಸೂರು ಗಜೆಟ್.

ಗುರುವಾರ, ತಾ|| ೨೩ನೇ ಸೆಪ್ಟಂಬರ್ ೧೮೯೭.
ಮೈಸೂರ್ ಗವರ್ನಮೆಂಟಿನವರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾ|| ೧೬ನೇ ಸೆಪ್ಟಂಬರ್ ೧೮೯೭.

ನಂ|| ೩೫೧೦೫-ಜ. ೪೦೭—ಕ್ರಿಮಿನಲ್ ಪ್ರೊಸೀಜರ್ ಕೋಡಿನ ೩೭ನೇ ಸೆಕ್ಷನ್ ಅನುಸರಿಸಿ ಚಿತ್ರದುರ್ಗದ ಅಸಿಸ್ಟೆಂಟ್ ಕಮಿಷನರ್ ವ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟಾದ ಮೆಸ್ಸರ್ಸ್ ಕೆ. ದಾಸ ಹನುಮಂತಯ್ಯನವರಿಗೆ ಸದರೀ ಕ್ಲಾಸಿನ ಮ್ಯಾಜಿಸ್ಟ್ರೇಟರಿಗೆ ಗವರ್ನಮೆಂಟಿನವರು ಕೊಡಬಹುದಾದ ೩ನೇ ಷೆಡ್ಯೂಲ್‌ನಲ್ಲಿ ಜಾಸ್ತೀ ಅಧಿಕಾರವಾಗಿ ವಿವರಿಸುವ ಇದರಡಿ ಕಂಡ ಅಧಿಕಾರವು ಕೊಡಲ್ಪಟ್ಟಿರುತ್ತೆ :—

ಕೊಡತಕ್ಕ ಸಜಾಗಳನ್ನು ವಿಧಿಸುವದಕ್ಕೆ ಅಧಿಕಾರ ನಂ|| ೩೦

ತಾ|| ೧೮ನೇ ಸೆಪ್ಟಂಬರ್ ೧೮೯೭.

ನಂ|| ೩೬೮೩-ಜ. ೪೧೮—ಎಡೆಹಳ್ಳಿಯ ಮುನ್ಸಿಫ್ ಮೆ|| ಎಂ. ಎ. ನಾರಾಯಣ ಅಯ್ಯಂಗಾರ್ರಿಗೆ ೧೮೯೭ನೇ ಜೂನ್ ೧೮ನೇ ಮಾರ್ಚಿ ೧೫೫೮೯ಜ. ೧೫೪೫ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ ಎರಡು ತಿಂಗಳ ತಲಬಿಲ್ಲದ ರಜಾ ಪೈಕಿ ೨೮ ದಿವಸಗಳ ವರ್ಗಿಗೆ (೧೮೯೭ನೇ ಜೂನ್ ೨೮ ರ ವರವಿಗೆ) ಉಪಯೋಗಿಸಿಕೊಂಡಿರುವದರಿಂದ ಉಪಯೋಗಿಸಿಕೊಳ್ಳದ ಸದರೀ ರಜಾ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

೨. ಮೈ|| ನಾರಾಯಣ ಅಯ್ಯಂಗಾರ್ರವರು ೧೮ನೇ ಜುಲೈ ೨೩ನೇ ತಾರೀಖು ಆಗಾಯಿತು ಎರಡು ತಿಂಗಳ ಕಾಲದ ಮಧೀ ರಜೆಯನ್ನು ಹೊಂದಿದ ಕ್ರಿಯವನ್ನು ಪರಿಶೀಲಿಸಿ ಚಿಕ್ಕರು ಮತ್ತು ಕಾರ್ಯಗಳಲ್ಲಿ ಕೆಲಸ ಮಾಡುವದಕ್ಕೆ ವರ್ಗಮಾಡಲ್ಪಟ್ಟಿರುತ್ತೆ.

೩. ಎಡೆಹಳ್ಳಿಯ ಅಸ್ಟಂಟ್ ಮುನ್ಸಿಫ್ ಮೆ|| ಅನಂತರಾವ್ ಸಿರಸಿಯವರು ಸದರೀ ಮೆ|| ನಾರಾಯಣ ಅಯ್ಯಂಗಾರ್ರು ಬೇರೆ ಕೆಲಸದಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಏರ್ಪಾಡು ಮಾಡುವ ಪರಿಯಂತ ನನ್ನ ಪ್ರತ್ಯೇಕವಾಗಿ ಕರ್ತವ್ಯದಲ್ಲಿ ಮುನ್ಸಿಫರಾಗಿ ಆಕ್ಟಿಂಗ್ ತರ್ಪೆ ಕರತಕ್ಕದ್ದು.

ನಂ|| ೩೬೭೪-ಜ. ೪೨೦—ಕ್ರಿಮಿನಲ್ ಪ್ರೊಸೀಜರ್ ಕೋಡಿನ ೧೨ನೇ ಸೆಕ್ಷನ್ ನಿಯಮಗಳನುಸರಿಸಿ ಸಾಗರದ ಮುನ್ಸಿಫ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮೆ|| ಎಸ್. ಕೇಶವ ಗಿರಿರಾಯರು ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ನೇಮಕರು ಮಾಡಲ್ಪಟ್ಟಿರುತ್ತಾರೆ.

ತಾರೀಖು ೨೦ನೇ ಸೆಪ್ಟಂಬರ್ ೧೮೯೭.

ನಂ|| ೩೭೧೦-ಮಿ. ಪ್ರೈ. ೪೧೮—ಮೆ|| ಕೋಯಮುತ್ತೂರು ಎಸ್. ಬಾಲಸುಂದರಂ ಬಿ. ಎ., ಮೈಸೂರ್ಶ್ವರ ಮತ್ತು ಬಿ. ಎ., ಮೆ|| ಜೆ. ಆರಾವಮು ಅಯ್ಯಂಗಾರ್ ಬಿ. ಎ., ವ ಬಿ. ಎಲ್., ಮತ್ತು ಬೆಳವಾಡಿ ರಾಮಸ್ವಾಮಯ್ಯ, ಬಿ. ಎ., ಇವರುಗಳು ಪ್ರೊಬೆಷನರ್ ಅಸಿಸ್ಟೆಂಟ್ ಕಮಿಷನರುಗಳಾಗಿ ನೇಮಕರನ್ನಾಗಿ ಮಾಡಲ್ಪಟ್ಟಿರುತ್ತಾರೆ.

ತಾ|| ೨೧ನೇ ಸೆಪ್ಟಂಬರ್ ೧೮೯೭.

ನಂ ೨೮೪೨-ರೆ. ೯೦೩—ಶಿವಮೊಗ್ಗ ಡಿಸ್ಟ್ರಿಕ್ಟಿನ ಪೋಲೀಸ್ ಆಕ್ಟಿಂಗ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟಾಗಿ ನೇಮಕರಾಗಿದ್ದ ತೀರ್ಥಹಳ್ಳಿ ತಾಲ್ಲೂಕಿನ ಅಮಲ್ದಾರ್ ಎಸ್. ಸುಬ್ಬರಾಯರು ತಮ್ಮ ಅಮಲ್ದಾರಿ ಕೆಲಸಕ್ಕೆ ವಾಪಸ್ ಬಂದನಂತರ ೩ನೇ ಕ್ಲಾಸಿನ ಮ್ಯಾಜಿಸ್ಟ್ರೇಟಿನ ಅಧಿಕಾರಗಳೊಡನೆ ತರೀಕೆರೆ ತಾಲ್ಲೂಕಿಗೆ ನಿಯಮಿಸಲ್ಪಟ್ಟಿದ್ದ ಸುಪರ್ನ್ಯೂಮರರಿ ಇನ್ಸ್‌ಪೆಕ್ಟರ್ ಆಕ್ಟಿಂಗ್ ಅಮಲ್ದಾರ್ ಎ. ವಿ. ಕೃಷ್ಣಸ್ವಾಮಿರಾಯರು ಚಿಕ್ಕನಾಯಕನಹಳ್ಳಿ ತಾಲ್ಲೂಕಿಗೆ ವರ್ಗಮಾಡಲ್ಪಟ್ಟಿರುತ್ತಾರೆ.

ತಾ|| ೧೮ನೇ ಸೆಪ್ಟಂಬರ್ ೧೮೯೭.

ನಂ|| ೨೦೮೫-ರೆ. ಪ್ರೈ. ೧೫೬—ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್‌ಗಳ ೧೮೯ನೇ ಆರ್ಟಿಕಲ್ ಅನುಸರಿಸಿ ಬೆಂಗಳೂರು ಡಿಸ್ಟ್ರಿಕ್ಟ್ ಚೆನ್ನಪಟ್ಟಣ ತಾಲ್ಲೂಕಿನ ಅಮಲ್ದಾರ್ ಟಿ. ಬಾಬಾರಾಯರಿಗೆ ಅವರುಪಯೋಗಿಸಿಕೊಳ್ಳುವ ತಾರೀಖ್ ಆಗಾಯಿತು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

೨. ವ್ಯವಸಾಯ ಸಂಬಂಧವಾದ ಬ್ಯಾಂಕುಗಳ ಇನ್ಸ್‌ಪೆಕ್ಟರವರ ಆಫೀಸಿನ ಹೆಡ್‌ಕ್ಲಾರ್ಕ್ ಎಸ್. ಶ್ರೀನಿವಾಸ ಅಯ್ಯಂಗಾರ್ರವರು ಸದರೀ ಅಮಲ್ದಾರ್ ಟಿ. ಬಾಬಾರಾಯರು ರಜಾಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಏರ್ಪಾಡು ಮಾಡುವ ಪರಿಯಂತ ಹೊಸಕೋಟೆ ತಾಲ್ಲೂಕಿನ ಅಮಲ್ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರ್ಪೆ ನೇಮಕರನ್ನಾಗಿ ಮಾಡಲ್ಪಟ್ಟಿರುತ್ತಾರೆ.

SUMMARY OF NEWS.
ವೃತ್ತಾಂತ ಸಂಗ್ರಹವು.

ಕೊಲ್ಲಾಪುರದಲ್ಲಿರುವ ಬಂಗಾರದ ಒಂದು ಗಣಿಯಲ್ಲಿ ಅಪಘಾತವಾಗಿ ೬೩ ಜನರು ಮೃತರಾದರು.

ಕಾಬೂಲ್ ದೇಶದಲ್ಲಿನ ಮುಲ್ಲಾಗಳು "ಜೆಹಾದ್" ಯುದ್ಧಕ್ಕೆ ಸೇರಬೇಕೆಂದು ಮುಸಲ್ಮಾನರಿಗೆ ಬೋಧಿಸುತ್ತಲಿರುವರು.

ನಾವಿಗಡರ್ ಗವರ್ನರ್ ಸಾಹೇಬರವರು ಅಹಮದಾಬಾದಿಗೆ ಹೋದಾಗ ಅಲ್ಲಿ ದುಸಾನೆಯಲ್ಲಿರುವ ಹತ್ಯಾಸಾಲೆ ನಾವು ಇವರನ್ನು ನೋಡಲಿಕ್ಕೆ ಹೋಗಿದ್ದರೆಂದು ತಿಳಿದಿದೆ, ಉದ್ದೇಶ ಏನೆಂದು ತಿಳಿಯಲಿಲ್ಲವು.

ಆಸ್ಟ್ರೇಲಿಯ ದ್ವೀಪದಿಂದ ಲಂಡನ್ನಿಗೆ ಮಾವಿನ ಹಣ್ಣುಗಳು ಹೋಗಿ ಬಹಳ ಮಾರಾಟವಾಗುತದೆ. ಆದರೆ ನಮ್ಮ ದೇಶದ ಹಣ್ಣುಗಳನ್ನು ಲಂಡನ್ನಿಗೆ ಕಳುಹಿಸುವ ಪ್ರಯತ್ನವನ್ನು ಯಾರಾದರು ಮಾಡಿದರೆ ಬಹಳ ಹಣ ದೊರೆಯುವ ದಾಗಿದೆಯೆಂದು ಪತ್ರಿಕೆ ಗತ್ತೆವು ಸೂಚಿಸುತಿದೆ.

ಪೇರಿಸ್ ಪಟ್ಟಣದಲ್ಲಿ ಕೂಡಿರುವ "ಸೌತ್ಸ್ರೇಟಿಕ ಸಂಘ" ಎಂಬ ವಿದ್ಯಾಂಸರ ಸಭೆಯವರು ಹಿಂದುಸ್ಥಾನದಲ್ಲಿ ಹೊಸ ಶೋಧನೆಗಳನ್ನು ಮಾಡುವದಕ್ಕೆ ದೊಡ್ಡ ಧನ ಕೂಡಿಸುತಲಿವರೆ. ಬರ್ಮಾ, ಇಸ್ಸಾಕ್ಷಿಯ, ಐತಿಹಾಸಿಕ ಮೊದಲಾದ ವಿಷಯಗಳ ಶೋಧನವನ್ನು ನಮ್ಮ ದೇಶದಲ್ಲಿ ಆ ಪಂಡಿತರ ಸಹಾಯದಿಂದ ಮಾಡತಕ್ಕವರಿದ್ದಾರೆಂದು ದೊರೆಯುತಿದೆ.

ಹಿಂದುಸ್ಥಾನದ ಮುಖ್ಯ ಮುಖ್ಯ ಬಿಜಾಪನಗಳಲ್ಲಿ ಸದರ್ ಮತ್ತು ಪಾಠ ಸಾವರ್ಜ ಎಂಬ ಇಂಗ್ಲೆಂಡಿನ ಚಿನ್ನದ ನಾಣ್ಯಗಳನ್ನು ತೆಗೆದುಕೊಳ್ಳಬಹುದೆಂದು ಸರ್ಕಾರದವರು ಹುಕುಂ ಮಾಡಿರುತ್ತಾರೆ. ಸಾವರಿನ್ನಿನ ಬೆಲೆಯು ೧೫ ರೂಪಾಯಿಯೆಂತಲೂ, ಹಾಫ್ ಸಾವರಿನ್ನಿನ ಬೆಲೆ ೭|| ರೂಪಾಯಿಯೆಂತಲೂ ಗೊತ್ತು ಮಾಡಲ್ಪಟ್ಟಿದೆ. ಈನಾಣ್ಯಗಳು ಇನ್ನು ಮುಂದೆ ವ್ಯವಹಾರದಲ್ಲಿ ಸಹ ಬರಬಹುದು.

ಮುಂಬೈಯಲ್ಲಿ ಯೂರೋಪಿಯರಿಂದ ತೆಗೆಯಲ್ಪಡುತಿರುವ ಅಡ್ವೊಕೇಟ್ ಆಫ್ ಇಂಡಿಯಾ ಎಂಬ ಚೆಸಿನ ಒಂದು ಪ್ರತ್ಯಾಹಿಕ ಪತ್ರವಿದೆ. ಈ ಪತ್ರಿಕರ್ತರು ಕಳದ ಬಕ್ರ ವಾರದ ತಮ್ಮ ಸಂಚಿಕೆಯ ಸಂಗತಿ ನಾಮದ ಅಂಕಿ ಇದರ ಚಿತ್ರಗಳನ್ನು ತಮ್ಮ ಪಾಠಕರಿಗೆ ಕಾಣಿಕೆಯಾಗಿ ಕೊಟ್ಟಿದ್ದರಿಂದ ಎರಡು ದಿವಸಗಳಲ್ಲಿ ನಾಮದಿ ಅಂಕಿತದವರ ಇಪ್ಪತ್ತುಸಾವಿರ ಪತ್ರಿಕೆಗಳು ಖರ್ಚಾದವೆಂದು ತಿಳಿಯುತ್ತಿವೆ.

ಹೈದರಾಬಾದ್‌ನಲ್ಲಿ ಕ್ಷಾಮ ಹಿಂದೆ ಇನ್ನೂ ಕಡಿಮೆಯಾಗಲಿಲ್ಲ. ಸಾವಿರಾರು ಜನರು ಬೀದಿಗಳಲ್ಲಿ ಸತ್ತು ಹೋಗುತಿದ್ದಾರೆ. ಅಂಗಡಿಯಲ್ಲಿ ಆಹಾರ ಜಿನಸಿಗಳು ಸಿಕ್ಕುವದಿಲ್ಲ, ಧಾರಣೆ ಬಹಳ ಹೆಚ್ಚು. ಸರ್ಕಾರದವರು ತರಿಸಿಕೊಡುತಿದ್ದ ಧಾನ್ಯಗಳೂ ಮುಗಿದಿಯಿತು, ಪುನಃ ತರಿಸುವ ಏರ್ಪಾಡು ಮಾಡುತ್ತಲಿದ್ದಾರೆ.

ಮುಂಬೈಯಿಂದ ಪುನ ದರಿಗೂ ಸುಮಾರು ೭೦ ಜನರು ಗ್ರಾಮಗಳಲ್ಲಿ ಪ್ಲೇಗು ಉಪದ್ರವವು ಇನ್ನು ಕಡಿಮೆಯಾಗಲಿಲ್ಲ. ದಿನಕ್ಕೆ ಪ್ರತಿ ಊರಿನಲ್ಲಿಯೂ ೪—೬ ಜನರಿಗೆ ತಗಲುತಿದೆ. ಆಸ್ಪತ್ರೆಗಳಲ್ಲಿ ನೂರಾರು ಜನರು ಬಿದ್ದಿದಾರೆ. ಒಟ್ಟು ದಿನಕ್ಕೆ ೫೦ ಜನಕ್ಕೆ ಕಡಮೆ ಇಲ್ಲದೆ ಮೃತರಾಗುತ್ತಲಿರುತ್ತಾರೆ. ಪುನಃ ಸರ್ಕಾರದವರು ಆಸ್ಪತ್ರೆಗಳಿಗೆಲ್ಲಾ ವೈದ್ಯರನ್ನು ಕಳುಹಿಸಿ ಔಷಧಗಳನ್ನು ಕೊಡಿಸುತಲಿದ್ದಾರೆ.

ಕಲ್ಕತ್ತೆಯಲ್ಲಿ ಒಬ್ಬ ಬಂಗಾಳಿ ಮುಸಲ್ಮಾನನು ತನ್ನ ೧೬ ವರುಷದ ಹೆಂಡತಿಯು ವ್ಯಭಿಚಾರ ಮಾಡುತ್ತಾಳೆಂದು ತಿಳಿದು ಅಂಗಡಿಯಿಂದ ಅಫೀಮನ್ನು ಕೊಂಡು ತಂದು ತಾ ಪಿನ್ನಿ ರೂಪಾಯಿಗೆ ಸಲ ಸತ್ತುಹೋಗಬೇಕೆಂದು ನನಗಿನ ನಾಕ್ಕೊಂಡು ಇಬ್ಬರೂ ಅಫೀಮನ್ನು ತಿಂದರು. ಹೆಂಡತಿಯು ಸತ್ತುಹೋದಳು, ಗಂಡ ಬದುಕಿಕೊಂಡನು. ಅವನನ್ನು ಪೋಲೀಸಿನವರು ಹಿಡಿದು ಈಗ ವಿಚಾರಣೆ ಮಾಡಿಸುತಲಿದ್ದಾರೆ.

ಹಿಂದುಸ್ಥಾನದ ವಾಯುವ್ಯ ಸರಹದ್ದುಗಳಲ್ಲಿ ನಡೆಯುವ ಯುದ್ಧಗಳು ಇನ್ನು ಮುಗಿಯಲಿಲ್ಲವು. ಕಳೆದವಾರ ಇಂಗ್ಲಿಷರಿಗೂ ಆಫ್ರಿದರಿಗೂ ಬಲವಾದ ಸಣ್ಣ ಸಣ್ಣ ಯುದ್ಧ ನಡೆದು ಇಂಗ್ಲಿಷರ ಕಡೆ ೨೦—೩೦ ಜನ ಸಿಪಾಯಿಗಳು ಆಫ್ರಿದರಲ್ಲಿ ನೂರಾರು ಜನರೂ ಮೃತಪಟ್ಟರು ಮತ್ತು ಈ ಯುದ್ಧಕ್ಕಾಗಿ ವಿಲಾಯತಿಯಿಂದ ಒಂದು ಐದಸಾವಿರ ಸಿಪಾಯಿಗಳು ಬರುತ್ತಲಿದ್ದಾರೆ.

ಮುರದಾಬಾದಿನಲ್ಲಿರುವ ಜಮೀನ್ದಾರ ಎಂಬ ಪೇಪರು ಕ್ಕೆ ವರ್ತಮಾನ ಪತ್ರಕರ್ತರಾದ ಮಹಮ್ಮದ್ ಸಾದ್ ಇವರ ಮೇಲೆ ಸಿದಿಷನ್ ಕೇಸು ೧೨೪ನೇ ಸೆಕ್ಷನಿನ ಪ್ರಕಾರ ಜರಗಿ ಮೊನ್ನೆ ದಿನ ಕೋರ್ಟಿನವರಕ್ಕಂತ ಲೇಖನವನ್ನು ಬರೆದವರಿಗೆ ಅಲ್ಲಿನ ಸರ್ಕಾರ ಮುಕದ್ದಮೆ ಮ್ಯಾಜಿಸ್ಟ್ರೇಟರ ಕಡೆಯಿಂದ ಫಿರ್ಯಾದು ಮಾಡಲ್ಪಟ್ಟಿತು. ಆದರೆ ಆರೋಪಿಯು ಕ್ಷಮೆ ಬೇಡಿದ್ದರಿಂದ ಮಾಡಿದ್ದರಿಂದ ಅವನ ಅಸ್ತಿಯಾದ ತ್ಯು ದಿಸ್ಮಿಸ್ ಮಾಡಿ ಅವನನ್ನು ಪತ್ರಿಕೆ ನಡೆಸಲು ಕೊಟ್ಟಿದ್ದಾರೆ. ೫೦೦ ರೂಪಾಯಿ ಜಾಮೀನು ಕೊಡುವಂತೆ ಗೊತ್ತಾಗಿರುವದು.

ಅಜೀಮುದ್ದೀನ ಅಮಿನುದ್ದೀನ ಎಂಬ ಮುಸಲ್ಮಾನ್ ದಿವಾನರು ಎರಡು ವರುಷಗಳ ಕೆಳಗೆ ಮುಂಬೈಗೆ ಹೋಗಿ ಕೆಲವು ಮರ ಸುವಾಸನೆಗಳನ್ನು ವಿಕ್ರಯ ಮಾಡುತಿದ್ದ ರವರಿಯು ೧ ವರುಷದಿಂದ ಮುಸಲ್ಮಾನ ಡೆಕನ್ ಎಂಬ ವರ್ತಮಾನ ಪತ್ರಿಕೆಯ ಎಡಿಟರಾಗಿ ನಿಂತು ಆ ಪತ್ರಿಕೆಯಲ್ಲಿ ಇಂಗ್ಲಿಷ್ ಗವರ್ನ್ಮೆಂಟಿನವರೊಡನೆ ಹೈದರಾಬಾದ್ ನೈಜಾಮರವರ ಸರ್ಕಾರದ ಇವರ ವಿಷಯದಲ್ಲೂ ಬಹಳ ಕಠಿಣವಾಗಿ ದೂಷಿಸಿ ವರ್ತಮಾನವನ್ನು ಪ್ರಕಟಿಸುತಲಿದ್ದನು. ಕಳೆದ ಬುಧವಾರ ಮುಂಬೈ ಗವರ್ನ್ಮೆಂಟಿನವರು ಒಂದು ವಾರಂಟನ್ನು ಕೊಟ್ಟು ಆ ಎಡಿಟರು ೨೪ ಘಂಟೆಯೊಳಗಾಗಿ ಬ್ರಿಟಿಷ್ ಸರಹದ್ದನ್ನು ಬಿಟ್ಟು ಹೊರಗೆ ಹೋಗಬೇಕೆಂದು ಅಪ್ಪಣೆ ಮಾಡಿದರು.

NOTICE.

VAIDYASARA SANGRAHA.

A TREATISE ON THE PRINCIPLES OF

HINDU MEDICINE.

Price, including Postage Rs. 5-0-0.

ವೈದ್ಯಸಾರಸಂಗ್ರಹ.

ಇದು ಚರಕ, ಬಾಹಟ, ಸುಶ್ರುತ, ಶಾರ್ಙ್ಗಧರಾದ್ಯನೇಕ ವೈದ್ಯಗ್ರಂಥಗಳ ಸಂಗ್ರಹ ರೂಪವಾಗಿರುತ್ತಿದೆ. ಇದರ ಕ್ರಯ—ಪೋಸ್ಟೇಜ್ ಮತ್ತು ಅಂಚೆ ಹಾಸಲ್ ವೆಚ್ಚವೂ ಪ್ರತಿ ಒಕ್ಕೆ ೫—೦—೦

ಬೇಕಾದವರು ಬೆಂಗಳೂರು ಕರ್ನಾಟಕ ಪ್ರೆಸ್ ಪ್ರೊಪ್ರೈಟರವರಿಗೆ ಬರೆದು ತರಿಸಿಕೊಳ್ಳಬಹುದು.

V. IYANOR'S
PREPARATIONS.

ವಿ. ಅಯನಾರ್ ಎಂಬವರಿಂದ ತಯಾರು ಮಾಡಲ್ಪಟ್ಟ ಪ್ರಸಿದ್ಧ ಔಷಧಗಳು.

ಪೆರಿಗಾರಿಸ್ಟ್ರೈಯರ್.—ಇದು ಹೊಟ್ಟೆನುಲಿ, ಅಜೀರ್ಣ, ಕರುಳು ನೋವು, ವಾಂತಿಭೇದಿ, ಅಜೀರ್ಣಭೇದಿ, ಚೋಟು ಕತ, ಕೆಮ್ಮು, ಮೂತ್ರಕಟ್ಟೆ, ಬಾಯಿಹುಣ್ಣು, ರಕ್ತಸ್ರಾವ, ಅತಿಸಾರ ದೋಷಜನ್ಯಗಳಾದ ಸ್ತ್ರೀಯರ ರೋಗಗಳು, ತಲೆನೋವು, ದಂತಶೂಲೆ, ಬಾಯಿ ಮಾರಿದಾರಿದವರ್ಗಾಗಿ ಬಹಳ ಉಪಯುಕ್ತವಾದದ್ದು. ಇದರ ಕ್ರಯ ದೊಡ್ಡಸೀಸೆ ಒಕ್ಕೆ ೧ ರೂ ಸಣ್ಣಸೀಸೆ ಒಕ್ಕೆ ೪ ಆಣೆ.

ನಾರ್ಭರನಾಯು ತೈಲ—ಶೀರ್ಷಕಪಾಲ ನೋವು, ಪಕ್ಕೆಶೂಲೆ, ಸೊಂಟನೋವು, ತಲೆಶೂಲೆ ಇವು ಪರಿಹಾರವಾಗುವದು. ಇದರ ಕ್ರಯ ದೊಡ್ಡಸೀಸೆ ಒಕ್ಕೆ ೧ ರೂ ಸಣ್ಣ ಸೀಸೆ ಒಕ್ಕೆ ೪ ಆಣೆ.

ಜ್ವರದ ವೃತ್ತಿ—ಇದು ಎ ತಾ ಜ್ವರವನ್ನಾದರು ಎರಡು ದಿನಗಳೊಳಗಾಗಿ ನಿಸ್ಸಕ್ತಿ ಮಾಡತಕ್ಕದ್ದು. ದೊಡ್ಡ ಸೀಸೆ ಒಕ್ಕೆ ೧ ರೂ. ಸಣ್ಣಸೀಸೆ ಒಕ್ಕೆ ೪ ಆಣೆ

ಓಮಕರ್ಪೂರ ತೈಲ—ಇದು ಶೀತಭೇದಿ, ರಕ್ತಭೇದಿ, ರಜಸ್ಸಿಗೆಯರಿಗುಂಟಾಗುವ ಉಬ್ಬರ, ಎದೆನೋವು, ಟೊಂಕನೋವು ಇವುಗಳಿಗೆ ಬಹಳ ಪ್ರಯೋಜನಕರವಾದದ್ದು ಇದರ ಕ್ರಯ ದೊಡ್ಡಸೀಸೆ ಒಕ್ಕೆ ೧ರೂ. ಸಣ್ಣ ಸೀಸೆ ಒಕ್ಕೆ ೪ಆಣೆ.

ಮೇಹನಾಶಕ ಎಣ್ಣೆ—ಇದು ಮೇಹರೋಗದಿಂದ ಶರೀರವು ಉಬ್ಬುವದು, ಚರ್ಮವು ಒಡೆಯುವದು, ಹುಣ್ಣು ತೊಡೆಸ್ತು, ಗ್ರಂಥಿಗಳು ಇವುಗಳಿಗೆಲ್ಲಾ ಬಹಳ ಉಪಯುಕ್ತವಾದದ್ದು. ಇದರ ಕ್ರಯ ದೊಡ್ಡಸೀಸೆ ಒಕ್ಕೆ ೧ರೂ ಸಣ್ಣಸೀಸೆ ಒಕ್ಕೆ ೪ ಆಣೆ

